
# ಸಮಗ್ರ ನಾಟಕ



ವಿ.ಸೀ.

# ಸಮಗ್ರ ನಾಟಕ

ವಿ. ಸೀ.

ವಿ. ಸೀ. ಸಂಪದ
(ವಿ.ಸೀ. ಸಂಸ್ಮರಣ ವೇದಿಕೆ)
ಅಶೋಕನಗರ : ಬೆಂಗಳೂರು–560 050

SAMAGRA NATAKA: Complete Plays by V. Si. (V. Sitaramiah, 1899—1983), Published by 'V. Si. Sampada', V. Si. Samsmarana Vedike, No. 903/B, 'Ashraya', 7th Cross, Ashoknagar, Bangalore-560 050.

Pp. 536 + xxxx

First Edition: 1993 — Copy Right Reserved

ಬೆಲೆ : Rs 150

ವಿ.ಸೀ. ಸಂಪದ, (ವಿ.ಸೀ. ಸಂಸ್ಮರಣ ವೇದಿಕೆ), ನಂ. 903/ಬಿ, 'ಆಶ್ರಯ', ಏಳನೇ ತಿರುವು, ಅಶೋಕನಗರ, ಬೆಂಗಳೂರು–560 050

ಅಧ್ಯಕ್ಷರು : ಪಿ. ವಿ. ಜೋಶಿ, ಕಾರ್ಯದರ್ಶಿ : ಎಂ. ವಿ. ಸತ್ಯನಾರಾಯಣ, ಕೋಶಾಧಿಕಾರಿ : ಕೆ. ಬಿ. ಷಣ್ಮುಖಪ್ಪ, ಸದಸ್ಯರು : ಮತ್ತೂರು ಕೃಷ್ಣಮೂರ್ತಿ (ಲಂಡನ್), ಎಂ. ಮಲ್ಲಿಕಾರ್ಜುನಯ್ಯ, ವಿ. ಎಸ್. ಕೃಷ್ಣಮೂರ್ತಿ, ಎಚ್. ವಿ. ವೆಂಕಟಸುಬ್ಬಯ್ಯ, ಕೆ. ಎಸ್. ಕಲ್ಲಾಪುರ, ಅ. ಬಾ. ಶೆಟ್ಟಿ ಪೊಳಲಿ (ಮಣಿಪಾಲ), ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಎಸ್. ಸತ್ಯನಾರಾಯಣ, ಶ್ರೀಮತಿ ಮೀನಾ ವಾಂಗೀಕರ್ (ಪುಣೆ), ಶ್ರೀಮತಿ ಅಂದನೂರು ಶೋಭ, ಮುನಿಧರ್ಮಯ್ಯ, ಎಂ. ವಿ. ವಿ. ಮೂರ್ತಿ

ಮುದ್ರಣ :

ನೇತ್ರಾ ಪ್ರಿಂಟರ್ಸ್
ಚಾಮರಾಜಪೇಟೆ, ಬೆಂಗಳೂರು–560 018

# ಸಮಗ್ರ ನಾಟಕ

"A first reading of his plays is often disappointing. It even seems that there is nothing to say about them after they are read. The plot and the subject can be summed up in a few words. Roles? There are many good ones, but there are none that would attract the actor who plays only effective roles (there are actors like that). The other roles are little ones; they can be written on a single sheet of paper. One remembers a few words, a few scenes. Strange though, the more rein one gives to one's memory, the more one wants to think about the play. The inner force of some places compels one to think of other, still better ones. You read the whole play again and again, and every time you make new discoveries... He cannot be performed, his plays must be *lived...*"

**-K. Stanislavsky on Chekhov's Plays.**

# ಪರಿವಿಡಿ


ಪ್ರಸ್ತಾವನೆ v
ಮೊದಲ ಮಾತು xxxv
ಅರಿಕೆ xxxvii


## ನಾಟಕಗಳು


ಆಗ್ರಹ 1
ಸೊಹ್ರಾಬ್ – ರುಸ್ತುಂ 39
ಶ್ರೀ ಶೈಲ ಶಿಖರ 85
ಚ್ಯವನ 125
ಪಟ್ಟಬಂಧ 163
ಪಿಗ್‌ಮೇಲಿಯನ್ 227
ಮೇಜರ್ ಬಾರ್ಬರ 335


## ಅನುಬಂಧ


1. ಮುನ್ನುಡಿಗಳು 461
2. 'ಶ್ರೀ ಶೈಲ ಶಿಖರ' ನಾಟಕಕ್ಕೆ 531
3. 'ಚ್ಯವನ' ನಾಟಕಕ್ಕೆ 533

# ಪ್ರಸ್ತಾವನೆ

'ಬಾಳನು ಶೋಧಿಸಿ ಶುಚಿಯನು ಬೆಳೆದರೆ

ಇಹವೇ ಅರಳದೆ ಪರವಾಗಿ—?, ಇದು ವಿ.ಸೀ.ಯವರ ಶುಭ್ರಜೀವನದ ಸತ್ವ ; ಇದೇ ಅವರ ಸಾಹಿತ್ಯ ವೈಪುಲ್ಯದ ಜೀವದ್ರವ್ಯ. ಒಂದನ್ನುಳಿದು ಒಂದಿಲ್ಲ. ಅದರಿಂದಾಗಿ ಒಂದಾದ ಈ ಎರಡರ ಅವಲೋಕನವೂ ಅಗತ್ಯ.

'ವಿ.ಸೀ.' ಎಂಬ ಎರಡಕ್ಷರ ಕೇಳಿದೊಡನೆ ಅತ್ಯಂತ ಮಧುರವಾದ ವ್ಯಕ್ತಿಚಿತ್ರ ಮನಸ್ಸನ್ನು ತುಂಬಿಕೊಳ್ಳುತ್ತದೆ. ಶುಚಿ–ರುಚಿ–ಸುಸಂಸ್ಕೃತಿಗಳ ಸಂಕೀರ್ಣಚಿತ್ರ ಅದು. ಮೈಸೂರಿನ ಶಾರದಾವಿಲಾಸ ಪ್ರೌಢಶಾಲೆಯಲ್ಲಿ ಉಪಾಧ್ಯಾಯರಾಗಿದ್ದ ವಿ.ಸೀ. (1920–28), ಅವರ ಆತ್ಮೀಯಮಿತ್ರರಾದ ಎಸ್. ವಿ. ಶ್ರೀನಿವಾಸರಾಯರು ಮತ್ತು ಕೆ. ವಿ. ನಾರಾಯಣ್, ಒಪ್ಪಂದವೆಂಬಂತೆ ಉಡುತ್ತಿದ್ದ ಲಂಕಾಷೈರ್ 1703ನೆಯ ಜಾತಿಯ ಮಲ್‌ಪಂಚೆ, ತೊಡುತ್ತಿದ್ದ ಒರಟುರೇಷ್ಮೆ ಮುಚ್ಚುಕೋಟು, ಧರಿಸುತ್ತಿದ್ದ ಬಿಳಿಗಿಂತ ಬಿಳಿದಾದ ಲೇಸಿಲ್ಲದ ಪೇಟ, ಮೆಟ್ಟುತ್ತಿದ್ದ ಕಾಲುಂಗುರದ ಕಪ್ಪು ಪಾದರಕ್ಷೆ ಇವು ಮೈಸೂರಿನ ಮನೆಮಾತು. ಹೆಂಗರುಳಿನ ಈ ಮೂವರೂ ಗಂಡಸರು ಮಹಾಪ್ರತಿಭಾವಂತರು. ಅದಕ್ಕಿಂತ ಮಿಗಿಲಾಗಿ ಅತ್ಯಂತ ಪರಿಶುದ್ಧವಾದ ತಮ್ಮ ನಡೆನುಡಿಗಳಿಂದ ಸುಸಂಸ್ಕೃತ ಜೀವನದ ಪ್ರತೀಕವೆನಿಸಿ ಬಳಿಗೆ ಬಂದವರ ಮೇಲೆ ಮಾಸದಂತಹ ಪ್ರಭಾವ ಬೀರಿದವರು. ಎಸ್. ವಿ. ಎಸ್ ಅಥವಾ ಕೆ. ವಿ. ಎನ್. ಒಮ್ಮೊಮ್ಮೆ ಕಾಣುವಂತೆ ಕೋಪಗೊಂಡಾರು ; ಉಡುಗೆ–ತೊಡುಗೆಗಳಲ್ಲಿ ಒಂದು ಗೆರೆ ಓರೆಕೋರೆ ಸಹಿಸಿಯಾರು; ಆದರೆ ವಿ. ಸೀ. ಹಟಕಟ್ಟಿ ತಮ್ಮನ್ನು ತಾವೇ ನೇರ್ಪಡಿಸಿಕೊಳ್ಳುವವರು. ಅಂತರಂಗ ಶುದ್ಧಿಯ ಸಾಕಾರ—ಅವರ ಬಾಹ್ಯರೂಪ. ಅ. ನ. ಕೃ ಹೇಳಿದಂತೆ 'ಅಚ್ಚ ಮೈಸೂರುತನದ ದ್ಯೋತಕ'.

ಸಾಹಿತಿ ಮುಖ್ಯನೋ ಆತನ ಸಾಹಿತ್ಯ ಮುಖ್ಯವೋ ಎಂಬ ಮಾತು ಎಲ್ಲ ಕಾಲಕ್ಕೂ ಎಲ್ಲ ಕಡೆಯೂ ಇರುವ ಜಿಜ್ಞಾಸೆಯೇ! 'ಎರಡೂ ಮುಖ್ಯ' ಎಂದು ಅಡ್ಡಗೋಡೆಯ ಮೇಲೆ ಕುಳಿತುಬಿಡಬಹುದು. ಆದರೆ ಈ ಮಾತಿನ ಮಥನ ಹಿಂದಿನಿಂದ ಇಂದಿನವರೆಗೂ ಬಂದಿದೆ. 'ಸಾಹಿತಿ ಹೇಗಿದ್ದರೇನು–ಆತನ ಸಾಹಿತ್ಯದಲ್ಲಿನ ಸತ್ವ–ಸೌಷ್ಠವ ಮುಖ್ಯ' ಎಂಬುದು ಹಳೆಯ ಕಾಲದಿಂದ ಬಂದ 'ಆಧುನಿಕ' ಪಂಥ. 'ಸಾಹಿತ್ಯಕ್ಕಿಂತ ಅದನ್ನು ಸೃಷ್ಟಿಸಿದ ಸಾಹಿತಿಯೇ ದೊಡ್ಡವನು. ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಜನಜೀವನವನ್ನು ತಿದ್ದುತ್ತ ಲೋಕಗುರುವಾಗುವ ಆತನ ವೈಯಕ್ತಿಕ ಜೀವನದ

ಶುಚಿ, ರುಚಿ ನಿಲವು ನಡೆಗಳು ಬಹುಮುಖಿ ಎಂಬುದು 'ಆರ್ಷೇಯ' ಪಂಥ. ಇಲ್ಲಿನ ನಡುಗೆರೆ ತೆಳುವು. ಆದರೂ 'ಶೀಲದಂತೆ ಶೈಲಿ' ಎಂಬ ಮಾತಿಗೆ ಸಾಕ್ಷಿಯೆನಿಸಿ, ನುಡಿದಂತೆಯೇ ನಡೆಯಬೇಕೆಂಬ ನಿಷ್ಠೆಯಲ್ಲಿ ನಿಂದು, ಎಂದೆಂದಿಗೂ ಹಸಿರಾಗಿ ನಿಲ್ಲುವ ಹೆಸರಿನ ಸಾಹಿತಿಗಳ ಪರಂಪರೆಯಲ್ಲಿ ಬೆಳೆದು ಬಂದವರು–ವಿ. ಸೀ. ತಮಗೆ ತಿಳಿಯದೆಯೇ, ತಮ್ಮ ಸಾಹಿತ್ಯದ ಹಾಸು–ಹರವು, ಎತ್ತರ ಬಿತ್ತರಗಳಿಗಿಂತ ನಿಜಜೀವನದಲ್ಲಿ ಬೃಹತ್ತಾಗಿ ಬೆಳೆದವರು. ಆ ಕಾರಣ, ಅವರ ನಾಟಕಾಂತ ಸಾಹಿತ್ಯದ ಸ್ಥೂಲ ಪರಿಚಯಕ್ಕೆ ಅವರ ಜೀವನ ಸೌಂದರ್ಯ ಬೆಳಕು ತೋರುತ್ತದೆ.

"ವಿ.ಸೀ. ಅವರ ಕಾವ್ಯಕ್ಕಿಂತ ಅವರ ವ್ಯಕ್ತಿತ್ವ ಬಹು ದೊಡ್ಡದು". ಹೀಗಾಗಿ, ಅವರ ಕಾವ್ಯ, ವಿಮರ್ಶೆ, ನಾಟಕ, ಸಾಹಿತ್ಯವನ್ನು ಕುರಿತು ಬರೆವವರಿಗಿಂತ ಅವರನ್ನೇ ಕುರಿತು ಬರೆವವರು ಹೆಚ್ಚು. ಅವರ ವ್ಯಕ್ತಿತ್ವಕ್ಕೆ, ಅವರ ಭಾಷಣಕ್ಕೆ, ಅವರ ಬೋಧನ ಕ್ರಮಕ್ಕೆ, ಅವರ ನಿತ್ಯನೂತನ ವಿಚಾರ ವಾಹಿನಿಗೆ, ಅವರ ಲೋಕಸಂಗ್ರಹಕ್ಕೆ, ಅವರ ದಯಾರ್ದ್ರ ಹೃದಯಕ್ಕೆ, ಅವರ ಭಾವ ಶ್ರೀಮಂತಿಕೆಗೆ, ಅವರ ನಿಷ್ಠೆಗೆ, ನೀತಿಗೆ, ಮಾತಿಗೆ, ರೀತಿಗೆ ಮಾರುವೋಗಿ, 'ಇದ್ದರೆ ಹೀಗಿರಬೇಕು' ಎಂದುಕೊಂಡವರ ಸಂಖ್ಯೆಯೂ ಸಣ್ಣದಲ್ಲ. ಹೀಗಾಗಿ, ವಿ. ಸೀ. ಬಳಗ ಕನ್ನಡದ ಸೀಮಾರೇಖೆಯನ್ನೂ ನುಡಿಯ ಗಡಿಯನ್ನೂ ದಾಟಿ ರಾಷ್ಟ್ರವ್ಯಂತ ಹಬ್ಬಿ ನಿಂತದ್ದು.

ವಿ.ಸೀ. ಅವರ ಓದಿನ ವೈಶಾಲ್ಯ, ವೈಶಿಷ್ಟ್ಯಗಳನ್ನೂ ಲೋಕಸಂಗ್ರಹಕ್ಕಾಗಿ ಅವರು ಹಗಲಿರುಳೂ ಚಡಪಡಿಸುತ್ತಿದ್ದ ರೀತಿಯನ್ನೂ ನಂಬಲಾರದ ಕತೆಯಂತೆ ಬರೆಯಬಹುದಾಗಿದೆ. "ಮನೆಯಲ್ಲಿ ಅಕ್ಕಿಬೇಳೆಗೆ ಪರದಾಟವಾದರೂ ಲಂಡನ್ನಿನಿಂದ 'ಇಕಾನಮಿಸ್ಟ್' ಪತ್ರಿಕೆಯ ಏರ್‌ಮೇಲ್ ಆವೃತ್ತಿ ತರಿಸುವುದನ್ನು ವಿ.ಸೀ. ನಿಲ್ಲಿಸರು. ಭಾರತೀಯ ಪತ್ರಿಕೆಗಳ ಜೊತೆಗೆ ಲಿಸ್ನರ್, ಟೈಂಸ್ ಲಿಟರರಿ ಸಪ್ಲಿಮೆಂಟ್, ನ್ಯೂ ಸ್ಟೇಟ್ಸ್‌ಮನ್ ಇವೆಲ್ಲ ವಿ.ಸೀ.ಯವರಿಗೆ ಉಚ್ಛ್ವಾಸ ನಿಶ್ವಾಸಗಳಂತೆ ಪರಮಾಗತ್ಯಗಳು" (ಎಸ್. ಆರ್. ರಾಮಸ್ವಾಮಿ).

ನಿಜವಾದ ಅರ್ಥದಲ್ಲಿ ವಿ.ಸೀ. ಜ್ಞಾನನಿಧಿ. ತಾವು ಓದಿ ಚೆಲುವು ಕಂಡುದನ್ನು ತಮ್ಮಲ್ಲಿಗೆ ಬಂದವರಿಗೆ, ತಮ್ಮ ವಿದ್ಯಾರ್ಥಿಗಳಿಗೆ ಹೇಳಲೇಬೇಕು. ನಿರಾಡಂಬರದ ಅವರ ಮನೆಯ ಮುಂದಿನ ದೊಡ್ಡ ಕೊಠಡಿಯನ್ನು ಚಿಕ್ಕದನ್ನಾಗಿ ಮಾಡಿದ ಪುಸ್ತಕ ಕಪಾಟುಗಳು—ಅವುಗಳಲ್ಲಿ ಸಂಸ್ಕೃತ, ಕನ್ನಡ, ಇಂಗ್ಲಿಷ್, ಬಂಗಾಳಿ ಭಾಷೆಗಳಲ್ಲಿನ ಸಾಹಿತ್ಯಕೃತಿಗಳು, ಅರ್ಥಶಾಸ್ತ್ರ. ರಾಜನೀತಿಶಾಸ್ತ್ರ, ತತ್ವಶಾಸ್ತ್ರ, ಚರಿತ್ರೆ, ಸಂಗೀತ, ನಾಟಕ, ಚಲನಚಿತ್ರ ಹೀಗೆ ಹತ್ತು ಹಲವು ವಿಷಯಗಳಿಗೆ ಸಂಬಂಧಪಟ್ಟ ಗ್ರಂಥಗಳು, ಪತ್ರಿಕೆಗಳು, ನಿಯತಕಾಲಿಕೆಗಳು ಒಂದನ್ನೊಂದು ಒತ್ತಿ ನಿಂತಿರುತ್ತಿದ್ದವು. ಇಂಥ ಪುಸ್ತಕ ಪ್ರಪಂಚದ ನಡುವೆ ಹಾಸಿಗೆಯ ಸುರುಳಿಗೆ ಒರಗಿ ಈ ಘನ ವಿದ್ವಾಂಸ, ವಿದ್ಯಾರ್ಥಿ

ಗಳನ್ನೊಳಗೊಂಡು ಬಳಿಗೆ ಬಂದವರನ್ನೆಲ್ಲ ಅಂತಃಕರಣದ ಆತಿಥ್ಯದಿಂದ ಆದರಿಸಿ, ಅವರಿಗೆ ಬಳಲಿಕೆಯಾಗದೆ, ತುಂಬಿ ತಣಿಯುವಂತೆ, ಏನೆಂಥ ವಿಷಯಗಳ ಎಳೆಸೆಳಕುಗಳನ್ನು ದೃಷ್ಟಾಂತ, ಸಾಮತಿ, ವೇದ, ವಿನೋದಗಳೊಂದಿಗೆ ತಿಳಿಯ ಹೇಳುವ ರೀತಿ, ಓದಿ ತೋರಿಸುವ ಮೋಡಿ—ಒಂದು ಅಪರೂಪದ ಅನುಭವ. ನಿಂತಲ್ಲಿ, ಕುಳಿತಲ್ಲಿ, ನಡೆದಲ್ಲಿ ಅವರ ಸಾನ್ನಿಧ್ಯ-ಸಹವಾಸವೆಂದರೆ ಸತ್ಯಾರ್ಥದ ಗುರುಕುಲ. ಇದು ಅನುಭವದ ಮಾತು.

ವಿ.ಸೀ. ನಿತ್ಯವಿದ್ಯಾರ್ಥಿಗಳು. ಅದರಿಂದಾಗಿ ಅವರು ಅಂಥ ವರ್ಚಸ್ವೀ ಯಶಸ್ವೀ ಅಧ್ಯಾಪಕರು. 'ಕನ್ನಡವನ್ನು ಇಂಗ್ಲಿಷಲ್ಲಿಯೇ ಹೇಳಿಕೊಡುತ್ತಾರೆ' ಎಂಬ ವಿನೋದದವರೆಗೆ ಅವರ ಭಾಷಾಮೋಹ ; ಭಾಷಾಪ್ರಭುತ್ವ. ತಾವು ಕಂಡು, ಕೇಳಿ, ನೋಡಿ, ಓದಿ ಸುಖಿಸಿದ ಸಂತೋಷವನ್ನು ಎಲ್ಲರಿಗೂ ತಿಳಿಸಬೇಕೆಂಬ ನಿಸ್ವಾರ್ಥದ ಆತುರ. "ಅನುಭವದಲ್ಲಿಯೂ ಅಧ್ಯಯನದಲ್ಲಿಯೂ ತನಗೆ ಬೆಲೆಯುಳ್ಳದೆಂದು ತೋರಿದ ಎಲ್ಲವನ್ನೂ ತನ್ನವರಿಗೆ ತೋರಿಸಬೇಕೆಂಬ ಆತುರ. ಹಾಗೆ ತೋರಿಸುವಲ್ಲಿನ ಅವರ ತಾದಾತ್ಮ್ಯ ಅವರ ಅಧ್ಯಾಪನಕ್ರಮದ ವಿಶಿಷ್ಟವಾದ ಆಕರ್ಷಣವಾಗಿತ್ತು. ಆ ವಾಗ್ವೈಭವ ಅವರ ಶಿಷ್ಯರಿಗೆ ಆನಂದವನ್ನು ನೀಡುತ್ತಿದ್ದಂತೆಯೇ ಅವರ ಜಿಜ್ಞಾಸೆಯ ಕ್ಷಿತಿಜಗಳನ್ನೂ ವಿಸ್ತರಿಸುತ್ತಿತ್ತು..." ಅಂಥ ಆತುರದಲ್ಲಿಯೂ ವಿ. ಸೀ. ಯುಕ್ತಾಯುಕ್ತ ವಿವೇಚನೆಯನ್ನು ಎಂದಿಗೂ ಕಳೆದುಕೊಂಡವರಲ್ಲ. ತರಗತಿಯ ಪಾಠಪ್ರವಚನಗಳಲ್ಲಿ, ಸಭೆ ಸಮಾರಂಭ ಸಮಾರೋಹಗಳಲ್ಲಿ, ಅನೌಪಚಾರಿಕ ಹರಟೆಗೋಷ್ಠಿಗಳಲ್ಲಿ, ಔಪಚಾರಿಕ ಸಮಿತಿ ಸಭೆಗಳಲ್ಲಿ, ಆಕಾಶವಾಣಿಯ ಕಾರ್ಯಕ್ರಮ ನಿರ್ವಹಣೆಯ ಸಂಪುಟದಲ್ಲಿ, ವಿ.ಸೀ. ಯವರ ವಿಷಯ ಪ್ರತಿಪಾದನೆಯ ರೀತಿ, ಮಿಂಚಿನ ಹರಳುಗಳಂಥ ಮಾತು, ಆ ಒಂದೊಂದು ಮಾತನ್ನೂ ತೂಕಮಾಡಿ, ತಿದ್ದಿ, ಅರ್ಥೈಸಿ, ಹಾವಭಾವ, ವಿನೋದ ವಿಲಾಸಗಳಿಂದ ಸಿಂಗರಿಸುತ್ತಿದ್ದ ಆ ಮಾಟ—ಅದೆಲ್ಲ ವಿ. ಸೀ.ಯವರದೇ ವೈಶಿಷ್ಟ್ಯ.

ವಿ. ಸೀ. ಅವರದು ಉತ್ಕೃಷ್ಟವಾದ ಸೌಂದರ್ಯದೃಷ್ಟಿ, ಸೌಂದರ್ಯಸೃಷ್ಟಿ. ಏನೇ ಮಾಡಿದರೂ ಪಥಸೂಚಿಯಾಗಬೇಕೆಂಬ ಧ್ಯೇಯ. ಕಾವ್ಯ ನಿರ್ಮಿತಿಯಂತೆ ಕಾವ್ಯ ಪ್ರಕಟನೆಯೂ ಒಂದು ಕಲೆ ಎಂದು ನಂಬಿದವರು ಅವರು. ಅವರ 'ಗೀತೆಗಳು' ಕವನಸಂಗ್ರಹದ ಮೊದಲ ಆವೃತ್ತಿಯನ್ನು (1931) ನೋಡಬೇಕು. ವೆಂಕಟಪ್ಪನವರ ರೇಖಾಚಿತ್ರದ ಸಿಂಗಾರ. ಅಂದಿಗೂ ಇಂದಿಗೂ ಅಪರೂಪವಾದ ಫೆದರ್‌ವೈಟ್ ಕಾಗದ. ಪುಟಗಳನ್ನು ಬಿಡಿಸಿದರೆ ಹಕ್ಕಿಯ ಪಕ್ಕಗಳನ್ನು ನೇವರಿಸಿದ ಅನುಭವ. ಕಲಸಿಹೋಗದ–ಬಿಡಿಬಿಡಿಯೂ ಆಗದ ಮಾಟವಾದ ಅಕ್ಷರ ಸಂಯೋಜನೆ. ಪದ್ಯದ ಶೀರ್ಷಿಕೆಗೆ ಮಾತ್ರ ಕಿತ್ತಿಲೆಬಣ್ಣ. ಪುಸ್ತಕ ಹಿಡಿದು ಪುಟ ತೆರೆದು ಕಣ್ಣಾಡಿಸುವುದೇ ಒಂದು ಆನಂದಾನುಭವ. ಪುಸ್ತಕವನ್ನು ಹೀಗೆ ಅಣಿಮಾಡುವಲ್ಲಿ, ವಿ.ಸೀ.ಯವರ ನಿರ್ದೇಶನದಲ್ಲಿ ಅದೆಷ್ಟು ಜನ

ದುಡಿದರೋ, ಅದೆಷ್ಟುಬಾರಿ ಬದಲಿಸಿ ತಿದ್ದಬೇಕಾಯಿತೊ ಕಾಣೆವು ; ಅದಕ್ಕೆಷ್ಟು ಖರ್ಚುವೆಚ್ಚವಾಯಿತೋ ತಿಳಿಯೆವು. ಅಂಥ ಚೆಲುವನ್ನು ಸಾಧಿಸುವಲ್ಲಿ ವಿ.ಸೀ. ದಣಿವನ್ನು ಅರಿಯರು ; ಹಣವನ್ನು ಎಣಿಸರು.

ತಮಗಿಂತ ಕಿರಿಯರಾದ ಕವಿ, ಸಾಹಿತಿ, ನಾಟಕಕಾರರಿಗೆ ವಿ.ಸೀ. ಕೊಡುತ್ತಿದ್ದ ಉತ್ತೇಜನ ಬಹುಮುಖವಾದದ್ದು. ತಮ್ಮದೇ ಕಾವ್ಯ ಮಹಾಪೂರವಾಗುತ್ತಿದ್ದ ಆ ಪರ್ವಕಾಲದಲ್ಲಿ, ಹೋದಹೋದಲ್ಲಿ ಇತರ ಕವಿಗಳ ಕೃತಿಗಳನ್ನು ಹಾಡಿ ಹೊಗಳಿ ಅರ್ಥೈಸಿದವರು ಅವರು. ಕೆ.ಎಸ್.ನ. ಅವರ ಹೆಸರು ಅಷ್ಟು ಬೇಗನೆ ಕನ್ನಡನಾಡಿನ ಉದ್ದಗಲದ ಮನೆಮಾತು ಆಗುವಲ್ಲಿ ವಿ.ಸೀ. ಅವರ ಕೊಡುಗೆ ಸಣ್ಣದಲ್ಲ. ವಿ.ಸೀ. "ಸಮಕಾಲೀನ ಸಾಹಿತ್ಯ ಕೃತಿಗಳನ್ನು ಅವಲೋಕಿಸಬೇಕಾಗಿಬಂದಾಗ ಕಟುವಾಗಿ ವಿಮರ್ಶಿಸದೆ, ಗುಣ ಗ್ರಹಣ ದೃಷ್ಟಿಯುಳ್ಳವರಾಗಿ ನಾಲ್ಕು ಒಳ್ಳೆಯ ಮಾತನ್ನು ಬರೆದು ಉತ್ತೇಜಿಸಿದ್ದಾರೆ. ಹಲವರ ಕೃತಿಗಳನ್ನು ಅಚ್ಚಿಗೆ ಅಣಿಮಾಡಿಕೊಟ್ಟಿದ್ದಾರೆ. ಪ್ರಕಟಿಸಲು ಪ್ರಕಟನಕಾರರಿಗೆ ಪರಿಚಯಿಸಿದ್ದಾರೆ. ಪ್ರೂಫ್ ತಿದ್ದಿಕೊಟ್ಟಿದ್ದಾರೆ. (ಹಾಗೆ ತಿದ್ದಿದ್ದನ್ನು ಹಿಂತಿರುಗಿ ಕಳುಹಿಸಲು ಕೈಯಿಂದ ತೆತ್ತಿರುವ ಅಂಚೆ ವೆಚ್ಚ ಸಣ್ಣ ಮೊತ್ತದ್ದೇನಲ್ಲ). ಉತ್ತಮವಾದದ್ದನ್ನು ಇಂಗ್ಲಿಷಿಗೆ ಭಾಷಾಂತರಿಸಿ ಹೊರನಾಡವರಿಗೆ ಪರಿಚಯ ಮಾಡಿಕೊಟ್ಟಿದ್ದಾರೆ. ಅನೇಕ ವೇದಿಕೆಗಳಲ್ಲಿ ಅವನ್ನು ಮೆಚ್ಚಿ ನುಡಿದಿದ್ದಾರೆ–ಬರೆದಿದ್ದಾರೆ. ಬಹುಮಾನ ಪುರಸ್ಕಾರಗಳಿಗೆ, ವಿಶ್ರಾಂತಿವೇತನ ನೀಡಿಕೆಗೆ, ಸಂಘ, ಸಂಸ್ಥೆ, ಅಕಾಡಮಿ, ಸರ್ಕಾರಗಳಿಗೆ ಶಿಫಾರಸು ಮಾಡಿದ್ದಾರೆ. ಸತ್ಕಾರ, ಗೌರವಾರ್ಪಣೆ ಇತ್ಯಾದಿ ನಡೆಸಲು ಪ್ರೋತ್ಸಾಹಿಸಿದ್ದಾರೆ. ಇದು ಸಾಮಾನ್ಯ ಉಪಕಾರವಲ್ಲ" (ಎಂ. ವಿ. ಪ್ರೇಮಕುಮಾರ್).

ನನ್ನ ಅನುಭವ ಬೇರೆಯಲ್ಲ. ನನ್ನದೊಂದು ರಂಗನಾಟಕ 'ಜಾಗೃತ ಭಾರತಿ'ಯ ಪ್ರದರ್ಶನದ ಆದ್ಯಂತ ಪ್ರೇಕ್ಷಕ ಗೃಹದಲ್ಲಿ ಕುಳಿತವರಲ್ಲಿ ವಿ.ಸೀ. ಹಾಗೂ ಕೆ. ವಿ. ಅಯ್ಯರ್ ಅವರನ್ನು ಹೆಸರಿಸಬೇಕು. ಅಂದಿನ ಪ್ರದರ್ಶನ—ಮೊದಲ ಪ್ರದರ್ಶನ—ಕಳೆಗಟ್ಟಲಿಲ್ಲ. ಇಂಥವರು ಪ್ರೇಕ್ಷಕರಾಗಿ ಬಂದುಬಿಟ್ಟರಲ್ಲ ಎಂದು ಅಳುಕಳುಕಿ ತಲೆಮರೆಸಿಕೊಂಡವನನ್ನು ಪ್ರದರ್ಶನದ ನಂತರ ಹುಡುಕಿಕೊಂಡು ಇಬ್ಬರೂ ರಂಗದ ಒಳಕ್ಕೆ ಬಂದರು. ಹತ್ತು ನಿಮಿಷ ಕಾಲ ನಿಂತು ನಾಟಕದ ಗಟ್ಟಿ ಭಾಗಗಳನ್ನು ಬಾಯಿತುಂಬ ಹೊಗಳಿದರು. ಒಂದೆರಡು "ಸಣ್ಣಪುಟ್ಟ" ಸೂಚನೆಗಳನ್ನು ಕೊಟ್ಟರು. ಮುಂದಿನ ಪ್ರದರ್ಶನಗಳಿಗೆ ಕರೆಯಲೇಬೇಕೆಂದರು. ಈ ಹಿರಿಮೆಗೆ ಶಿರ ಬಾಗಿತು ; ನನ್ನ ಅಳುಕು ಕಳೆಯಿತು. ಮತ್ತೊಂದು, ಸಂಕಟದ ಸಂದರ್ಭ : ಕೆ. ವಿ. ಅಯ್ಯರ್ ಮಡಿದ ದಿನ. 'ಪ್ರಜಾವಾಣಿ'ಯ ಕೋರಿಕೆಯಂತೆ ಅವರನ್ನು ಕುರಿತಾದ ಒಂದು ದೀರ್ಘ ಲೇಖನ ಬರೆದಿದ್ದೆ. ಅದರಲ್ಲಿ "ಅವರ ಕಾಯ–ಅದೊಂದು ಕಾವ್ಯ" ಎಂಬ ವಾಕ್ಯವಿತ್ತು. ಮಾರನೆಯ ದಿನವೇ ಬಂದ ವಿ.ಸೀ.ಯವರ ಪತ್ರ ಆ ವಾಕ್ಯವನ್ನು ಎತ್ತಿತ್ತಿ ಮೆಚ್ಚಿ,

ಅದರ ಅರ್ಥವನ್ನು ತಮ್ಮದೇ ನಿಟ್ಟು ನಿಲವುಗಳಿಂದ ವಿವೇಚಿಸಿ ಬೆನ್ನು ತಟ್ಟಿದ ರೀತಿ ದಿಗ್ಭ್ರಮೆ ಹಿಡಿಸಿತು. ಆಗ ವಿ.ಸೀ. ಅನಾರೋಗ್ಯದಿಂದಾಗಿ ಮೇಲೇಳಲೂ ಸಾಧ್ಯವಿಲ್ಲದ ಸ್ಥಿತಿಯಲ್ಲಿದ್ದರು. ಆದರೂ ಕುಳಿತು ಸ್ವಹಸ್ತದಿಂದ ಬರೆದ ಅವರ ಆ ಪತ್ರ ನನ್ನ ಸಂಪತ್ತು ಆಯಿತು. ಅದು ಅವರ ಜಾಯಮಾನ. ಎಲ್ಲಿ, ಯಾರಲ್ಲಿ ಮೆಚ್ಚುವಂಥ ಏನೊಂದು ಸಣ್ಣದು ಕಂಡರೂ ದೊಡ್ಡದು ಮಾಡಿ ಅಂಥ ಆತ್ಮೀಯತೆ, ಔದಾರ್ಯಗಳಿಂದ ಆದರಿಸಿ ಎತ್ತಿ ಆಡುತ್ತಿದ್ದುದು ವಿ.ಸೀ. ವೈಶಿಷ್ಟ್ಯ.

೨

ವಿ.ಸೀ. ನಿರ್ಮಿಸಿದ ಸಾಹಿತ್ಯ ಸೌಧಕ್ಕೆ ಗಟ್ಟಿನೆಲೆ ಎಂದರೆ ಅವರ ಕಾವ್ಯಸಂಪದ. ಅಲ್ಲಿನ ವಸ್ತುವೈವಿಧ್ಯ, ಛಂದೋ ವೈವಿಧ್ಯ, ಭಾವ ವೈವಿಧ್ಯಗಳನ್ನು ಕುರಿತು ವಿದ್ವಾಂಸರು ವಿಮರ್ಶಕರು ವಿಸ್ತರಿಸಿ ಬರೆದಿದ್ದಾರೆ. ವಿ.ಸೀ. ಕಾವ್ಯವನ್ನು ಅವರ ಕಾವ್ಯಗುರು 'ಶ್ರೀ'ಯವರೇ ಸೂಕ್ಷ್ಮವಾಗಿ ಸಮೀಕ್ಷಿಸಿದ್ದುಂಟು. ಶುಚಿಜೀವನ ದರ್ಶನ ಮಾಡಿಸುವ ಅವರ ಕಾವ್ಯರಾಶಿಯನ್ನು ಪರತತ್ವ ಚಿಂತನ, ಆತ್ಮಸಾಂತ್ವನ, ಪ್ರೇಮಾರಾಧನ, ರಾಷ್ಟ್ರಾಭಿಮಾನ ಎಂದು ವಿಂಗಡಿಸಿ, ಅಲ್ಲಿನ ಸೂಕ್ಷ್ಮ ಸೌಂದರ್ಯಲಹರಿ, ಉತ್ತೇಜಕಶಕ್ತಿ, ಇಹಪರ ಸಂಬಂಧದ ಸಂವೇದನೆಗಳನ್ನು ವಿಮರ್ಶಕರು ವಿಶ್ಲೇಷಿಸಿದ್ದಾರೆ. "ಕಾವ್ಯದಲ್ಲಿ ಅವರಂತೆ ಜೀವನಸಮೃದ್ಧಿಯನ್ನು, ಅದರ ಸಹಜವಾದ ಭಾಗ್ಯದ ಮೂಲಗಳನ್ನು, ಸ್ನೇಹಪ್ರೇಮಗಳ ಶ್ರೀಮಂತಿಕೆಯನ್ನು, ಬಾಳು ಮರುಭೂಮಿಯೆಂದು ಕಂಡಾಗಲೂ ಅವು ತರಬಲ್ಲ ತಂಪನ್ನು ನಮ್ಮ ಅನುಭವಕ್ಕೆ ತರಬಲ್ಲ ಕವಿಗಳು ವಿರಳ... ವಿ.ಸೀ. ಬದುಕಿನ ಬಗೆಗೆ ಪ್ರೀತಿ, ಕೃತಜ್ಞತೆ ಉಕ್ಕಿಸುವ ಕವಿ" (ಎಲ್. ಎಸ್. ಶೇಷಗಿರಿ ರಾವ್). ಆರ್ಷೇಯ ಭಾರತ ಸಂಸ್ಕೃತಿಯ ಕಾವನ್ನು ಉಣಿಸುವ ಅವರ ಕವಿವಾಣಿ ಅದೆಷ್ಟೋ ತಪ್ತ ಹೃದಯಗಳನ್ನು ಸಾಂತ್ವನಗೊಳಿಸಿದೆ. ಜೀವನದ ಸಂಕಷ್ಟಗಳನ್ನು ಮೂಳೆಮುಟ್ಟುವವರೆಗೆ ಅನುಭವಿಸಿದವರಿಗೆ ಮಾತ್ರ ಇಂಥ ಮಾತು, ಗೀತೆಗಳನ್ನು ಹೇಳುವ ಅರ್ಹತೆ ಬರುತ್ತದೆ. ಜೀವನದುದ್ದಕ್ಕೂ ವಿ. ಸೀ. ಹತ್ತು ಹಲವು ಬಗೆಯ ಸಂಕಷ್ಟಗಳನ್ನು ಸುಖದೊಂದಿಗೆಯೇ ಅನುಭವಿಸಿದ್ದವರು. ಕೆಲವೊಂದು ಸಂದರ್ಭಗಳಂತೂ ದಾರುಣ. ಆದರೆ ಧೃತಿಗೆಡದೆ ಆಡಿದುದನ್ನು ಮಾಡಿತೋರಿದರು. ಅವರದೇ ಮಾತುಗಳಲ್ಲಿ ಅವರ 'ಜೀವನದರ್ಶನ' ಇದು : "ನನಗೆ ಇಷ್ಟು ನಿಜ. ಬದುಕಿನಲ್ಲಿ ದುಃಖವಿರುವಂತೆ ಸಂತೋಷವೂ ಇದೆ. ಹಗೆಯಿರುವಂತೆ ಕೆಳೆ ಇದೆ. ನಿಷ್ಠುರತೆ, ವಂಚನೆ ಇರುವಂತೆ ನಯ, ಪ್ರಾಮಾಣಿಕತೆ ಇದೆ. ಕಷ್ಟದಲ್ಲಿರುವಾಗ ಯಾರೋ ಒಬ್ಬರಾಡಿದ ಮಾತು ಅಮೃತಸತ್ವವಾಗಬಲ್ಲದು. ಕೋಟಿ ಕರ್ಕಶ ಕೊಲ್ಲುತ್ತಿರುವಾಗ ಮೌನದಲ್ಲಿ, ಮರೆಯಲ್ಲಿ ನಮಗಾಗಿ ಚಾಚಿ ಹಿಡಿವ ಕೈಕೆಳೆ, ಕೊಡುವ ಧೈರ್ಯ,

ನುಡಿವ ತುಟಿಯ ಒಂದು ಅಲುಗು, ಮಾತು, ಕಣ್ಣಿನ ಒಂದು ಸ್ನೇಹದ ಮಿನುಗು ಸಾಕು—ತಾರಣೆಗೆ, ಉಳಿಸುವುದಕ್ಕೆ, ಬದುಕಿನಲ್ಲಿ ನಂಬಿಕೆ ಸ್ಥಾಪಿಸುವುದಕ್ಕೆ. ಈ ಲಕ್ಷಣ ಮಾನವತೆಯ ಪರಮ ಲಕ್ಷಣವಾಗಿದೆ. ಇದು ಸೌಭಾಗ್ಯ...ಲೋಕ ಕ್ಷಣಿಕವೇನು? ಆಗಲಿ. ಈ ಸೌಂದರ್ಯ—ಮೈತ್ರಿ ನಶ್ವರವೇ ಆಗಲಿ. ಪ್ರೀತಿ ನನಗೆ ದಿವ್ಯ ; ಬಾಳಿಗೆ ನಾನು ಕೃತಜ್ಞ...ಆ ಸುಖೋಷ್ಣತೆ...ಆ ಕರುಳಕರುಣೆ ನನಗೂ ಸಾಕು....ಲೋಕವೆಲ್ಲ ನಿರ್ಘೃಣವಾಗಿ ಕೈಬಿಟ್ಟ ಕಾಲದಲ್ಲಿ ಎಲ್ಲಿನದೋ ಒಂದು ಪ್ರೀತಿ, ಧೈರ್ಯ ಕಂಡಾಗ, ಮಾನವನ ಬದುಕು ಸಾರ್ಥಕವಾದಂತೆ ಕಾಣುತ್ತದೆ. ಹತ್ತು ಯುಗಗಳ ಕಷ್ಟವನ್ನು ದಾಟಬಲ್ಲೆನೆಂಬ ದೃಢಸ್ಫೂರ್ತಿ ಬರುತ್ತದೆ. ರಾಜ್ಯ-ಸಾಮ್ರಾಜ್ಯಗಳ ದರ್ಪವನ್ನು ಪ್ರತಿಭಟಿಸಬಲ್ಲೆನೆಂಬ ನಿಶ್ಚಯ, ಸಾಹಸ ಉಂಟಾಗುತ್ತದೆ. ಈ ನಂಬಿಕೆ ಸಾಕು." ಇಂಥ ನಂಬಿಕೆಯ ಹತ್ತು ಹಲವು ಬಗೆಯ ಬಣ್ಣ, ಪರಿಪುಳಗಳ ಸಾಕ್ಷಾತ್ಕಾರ ವಿ.ಸೀ. ಕವಿತೆಗಳಲ್ಲಿ ಮೈತುಂಬಿಕೊಂಡಿವೆ. 'ಸ್ನೇಹ-ವಿಶ್ವಾಸ'ದಲ್ಲಿ ಮುನ್ನೂರಕ್ಕೂ ಮಿಕ್ಕಿದ ವಿ.ಸೀ. ಬಿಡಿಗವನಗಳಲ್ಲಿ, ಒಂದೊಂದನ್ನೂ ಒಂದೊಂದು ಸಂಜೆಯ ಸಾರ್ಥಕತೆಗಾಗಿ ಓದಿ, ಅರ್ಥ, ಒಳಅರ್ಥಗಳನ್ನು ಮೈಮನಸ್ಸುಗಳಲ್ಲಿ ತುಂಬಿಕೊಳ್ಳಲು ಸಾಧ್ಯ ; ಅದರಿಂದ ಜೀವನೋತ್ಸಾಹವನ್ನು ಬೆಳಸಿಕೊಳ್ಳುವುದು ಸಾಧ್ಯ. ಅವರ ಕವಿತೆಗಳಲ್ಲಿನ ಕೆಲವೊಂದು ಪಂಕ್ತಿಗಳಂತೂ ಕಾಲದ ಕಟ್ಟನ್ನು ಮುರಿದು ಮೇಲೆದ್ದು ವಿಜೃಂಭಿಸುವಂಥವು.

ವಿ.ಸೀ. "ಕೇವಲ ತಮ್ಮ ಸಂತೋಷಕ್ಕೆಂದು ಬರೆದವು ಕವಿತೆಗಳು ಮಾತ್ರ ಎಂದು ತೋರುತ್ತದೆ" ಎಂದು ಪಿ. ವಿ. ಜೋಶಿ ಅಭಿಪ್ರಾಯಪಟ್ಟಿದ್ದಾರೆ. ಕವಿತೆಗಳೊಂದಿಗೆ ನಾಟಕಗಳನ್ನೂ ಈ ಪಟ್ಟಿಯಲ್ಲಿ ಸೇರಿಸಬಹುದೆಂದು ತೋರುತ್ತದೆ. ಅಲ್ಲದೆ ತಮ್ಮ ಹಾಗೂ ಇತರರ ಸಂತೋಷ ಮತ್ತು ಸಮಾಜದ ಲಾಭಕ್ಕಾಗಿ ವಿ.ಸೀ. ಆಶ್ಚರ್ಯವೆನಿಸುವ ಸಾರಸ್ವತ ಪ್ರಪಂಚವನ್ನೇ ನಿರ್ಮಿಸಿದರು. ತಲಸ್ಪರ್ಶಿಯಾದ ಅಧ್ಯಯನ, ವಿವೇಚನೆಗಳ ಕಾರಣ ಅವರು ರಚಿಸಿದ ಗದ್ಯಸಾಹಿತ್ಯದ ಬೇರೆ ಬೇರೆ ಪ್ರಕಾರಗಳು ಆ ಆ ಪ್ರಕಾರಗಳಲ್ಲಿ ಅನ್ವರ್ಥವಾಗಿ ಕೈದೀವಿಗೆಗಳಾದವು. ಅದೆಷ್ಟು ಬಗೆಯ ಸಾಹಿತ್ಯ ಪ್ರಕಾರಗಳಲ್ಲಿ ಅವರು ಕೃಷಿಮಾಡಿ ಜನಕ್ಕೆ ಫಲ ಕೊಟ್ಟರು ! ಆ ಮೊತ್ತವನ್ನು ನೋಡಿದಾಗ, ಅದರ ಹಿಂದಿನ ಓದು, ವಿವೇಚನೆ ಅದೆಷ್ಟು ದೊಡ್ಡದು ಎಂಬುದು ಆಶ್ಚರ್ಯಗೊಳಿಸುತ್ತದೆ. ಒಂದಿಗೇ, ರಾಷ್ಟ್ರದ ಉದ್ದಗಲಗಳಲ್ಲಿ ಓಡಾಟ, ಬೋಧನ, ಭಾಷಣ. ಹೀಗಾಗಿ "ಬರಹಗಾರ ವಿ.ಸೀ.ಯನ್ನು ಧ್ರುವಪ್ರದೇಶಗಳಲ್ಲಿ ಹರಿಯುವ ಹಿಮಪ್ರವಾಹದಲ್ಲಿ ತೇಲುವ ಮಂಜುಗಡ್ಡೆಗಳಿಗೆ ಹೋಲಿಸಬಹುದು. Tip of the Iceberg. ಕಂಡುತೇಲುವ ಭಾಗಕ್ಕಿಂತ ಕಾಣದೆ ಮುಳುಗಿರುವ ಭಾಗ ಹೆಚ್ಚು. ಅವರ ಜೀವನದ ಮಹಾವ್ಯಾಪಾರದಲ್ಲಿ ಬರಹ ಒಂದು ಭಾಗ ಅಷ್ಟೆ." ಎಂದೇ "Much of V.Si. consists in what he has not written''ಎಂಬ ಮಾತು.

ಕಾವ್ಯದಲ್ಲಿ ಹೇಗೊ ಹಾಗೆ ವಿ.ಸೀ. ಗದ್ಯ ಸಾಹಿತ್ಯದ ಹರಹೂ ದೊಡ್ಡದು. ಅಲ್ಲಿನ

ವಿಷಯ ವೈವಿಧ್ಯಕ್ಕೆ ತಕ್ಕಂತೆ ಭಾಷೆಯ ಬಳಕೆ. 'ವಿ.ಸೀ.ಯವರ ಶಾಸ್ತ್ರೀಯಪಾಂಡಿತ್ಯಕ್ಕೆ ಶಾಶ್ವತ ಕುರುಹಾಗಿರುವ' ಅವರ 'ಹಣಪ್ರಪಂಚ' ಅಪರೂಪದ ಪುಸ್ತಕ. "ಅತಿ ತೊಡಕಿನ ವಸ್ತುವನ್ನು ಆಯ್ದುಕೊಂಡು, ವಸ್ತು, ಭಾಷೆ, ಪರಿಭಾಷೆ, ಪದಗಳ ಕ್ಲಿಷ್ಟತೆ, ಕೊರತೆಗಳೆಲ್ಲವನ್ನೂ ಸರಿದೂಗಿಸಿಕೊಂಡು, ಹಣದ ವಿವಿಧ ಕಾರ್ಯಕಲಾಪ, ರೂಪರೇಷೆ ಮತ್ತು ಅದರ ಪ್ರಭಾವಗಳನ್ನು ಕುರಿತು ವಿದ್ವತ್ಪೂರ್ಣವಾದ ಶೈಲಿಯಲ್ಲಿ ಅತಿಸಮರ್ಪಕವಾಗಿ ರಚಿಸಿದ ಕೃತಿ. ಬಹುಶಃ ನಮ್ಮ ದೇಶಭಾಷೆಯಲ್ಲಿ ಹಣವನ್ನು ಕುರಿತಂತೆ ಪ್ರಕಟವಾದ ಮೊದಲ ಶಾಸ್ತ್ರೀಯ ಕೃತಿ ಅದಿರಬೇಕು. ಅಲ್ಲಿನ ಭಾಷೆಯ ಸೊಬಗು ಕನ್ನಡಗದ್ಯಕ್ಕೆ ಗೌರವ ತರುವಂಥದು." ಅದನ್ನು ವಿಮರ್ಶಿಸುತ್ತ ಕು. ಶಿ. ಹರಿದಾಸಭಟ್ಟರು (ಅವರಾದರೂ ಹಣ ಪ್ರಪಂಚದ ವಿದ್ವಾಂಸರು) "ಅರ್ಥಶಾಸ್ತ್ರವನ್ನು ಬರಡು ವಿಜ್ಞಾನವೆಂದು ಕಾರ್ಲೈಲ್ ಎಂದೊ ಕರೆದಿದ್ದಾನೆ. ವಿ.ಸೀ.ಯವರ ಕೈಯಲ್ಲಿ ಆರ್ಥಿಕ ವಿಚಾರಗಳು ಚಿಗುರೆಲೆ ಹೂಬಿಟ್ಟು ಕಾವ್ಯವಾಗುತ್ತದೆ" ಎಂದರು.

'ಹಣ ಪ್ರಪಂಚ'ದಂತಹ ಶಾಸ್ತ್ರೀಯ ವಿಷಯ ವಿ.ಸೀ.ಯವರ ಮೋಡಿಗೈಯಲ್ಲಿ ಕಾವ್ಯವಾದರೆ ಇನ್ನುಳಿದ ಸಾಮಾಜಿಕ, ಸಾಹಿತ್ಯಕ ವಿಷಯಗಳಂತೂ 'ಸುಗಂಧಿಸುವ ಹೂಗಳಾಗಿ' ಅರಳುವುದು ಸ್ವಾಭಾವಿಕ. ಅವರ 'ಮೈಸೂರು ರುಮಾಲು' 'ಕಾಯಿಲೆಗಳು' 'ಮಳೆ' 'ಮಾವು' 'ನೆನಪು' 'ನಮ್ಮ ಅಜ್ಜಿಯ ಅಡಿಗೆ' ಮೊದಲಾದ ವಿನೋದದಂತೆ ವಿಚಾರಪೂರ್ಣವೂ ಆದ ಲಲಿತ ಪ್ರಬಂಧವನ್ನು 'ಒಮ್ಮೆ ಓದಿದವರು ಅವನ್ನು ಮರೆಯುವಂತಿಲ್ಲ. ಸಂಖ್ಯಾಬಲದಿಂದಲ್ಲದಿದ್ದರೂ ಗುಣಾಧಿಕ್ಯದಿಂದ ಅವರ ಲಲಿತ ಪ್ರಬಂಧಗಳು ಅವರ ಭಾವಗೀತೆಗಳ ಮಟ್ಟಕ್ಕೇರುವಂಥವು' (ದೇಜಗೌ). ಹಾಗೆಯೇ ಅವರ ವಸ್ತುನಿಷ್ಠ ಪ್ರೌಢ ವಿಮರ್ಶನ ಕೃತಿಗಳು ಆ ದಿಶೆಯಲ್ಲಿ ಮೇಲುಪಂಕ್ತಿಯಾಗಿರುವ ಬರಹಗಳು. 'ಕರ್ನಾಟಕ ಕಾದಂಬರಿ' 'ಅಭಿಜ್ಞಾನ ಶಾಕುಂತಲ ವಿಮರ್ಶೆ' 'ಅಶ್ವತ್ಥಾಮನ್'—ಇವಂತೂ ಸುಹೃದ ಮನಸ್ಸಿನ ವಿಮರ್ಶಕನ ನಿಷ್ಕೃಷ್ಟವಾದ ಮೌಲ್ಯಮಾಪಕಗಳೆಂದು ಹೊಗಳಿಸಿಕೊಂಡಿವೆ. 'ಬಹುಗ್ರಂಥ ಪರಿಚಯವೂ ತೀಕ್ಷ್ಣಧೀಶಕ್ತಿಯೂ ಸಹೃದಯತೆಯೂ ವಿಮರ್ಶೆಗೆ ಅಗತ್ಯ'. ಇಂಥ ವಿದ್ವತ್ ವಿಮರ್ಶೆಗೆ ಸಾಕ್ಷಿನಿಂತವೆಂದರೆ ವಿ.ಸೀ.ಯವರ "ಸಾಹಿತ್ಯ ವಿಮರ್ಶೆಗಳಲ್ಲಿ ಅರ್ಥ ಮತ್ತು ಮೌಲ್ಯ", "ಸಾಹಿತ್ಯ : ಸಂಪ್ರದಾಯ ಮತ್ತು ಹೊಸಮಾರ್ಗ", "ಸಾಹಿತ್ಯಾಲೋಕನ", "ವಾಲ್ಮೀಕಿ ರಾಮಾಯಣ" ಮತ್ತು ಪಂಪ ಮಹಾಕವಿಯ ಮೇಲೆ ವಿ.ಸೀ. ಬರೆದ ವಿಮರ್ಶಾತ್ಮಕ ಗ್ರಂಥಗಳು. ಅವು ಪಂಡಿತ–ಪಾಮರರ ಮನ್ನಣೆ ಗಳಿಸಿದೆ.

ವಿ.ಸೀ.ಯವರ ಮೃದು–ಮನೋಹರ ವಿನೋದಪ್ರವೃತ್ತಿಗೆ, ಪ್ರವಾಸಕಥನದ ಮೇಲಿನ ಹಿಡಿತಕ್ಕೆ ಹಾಗೂ ಅವರಿಗೆಂದೂ ಒದಗಿಬಂದ ಭಾಷಾಸಮೃದ್ಧಿಗೆ ಸಂಕೇತವೆನಿಸಿದೆ, ಆರು ದಶಕಗಳಿಗೂ ಮಿಕ್ಕಿ ಕನ್ನಡಜನವನ್ನು ಸುಹೃದಗೊಳಿಸುತ್ತಿರುವ "ಪಂಪಾಯಾತ್ರೆ".ಅದು ಕನ್ನಡ ಪ್ರವಾಸ ಸಾಹಿತ್ಯದಲ್ಲಿನ ಮೊದಲ ಮೈಲುಗಲ್ಲು. ತರಾಸು

ಬರೆದಂತೆ "ಹಸಿರು ಹುಲ್ಲಿನ ಮೇಲೆ ಕುಣಿಯುವ ಹರಿಣಿಯಂತೆ ವಿ.ಸೀ.ಯವರ ಗದ್ಯ. ಅದರಲ್ಲಿಯೂ ಅವರ 'ಪಂಪಾಯಾತ್ರೆ'—ಕನ್ನಡ ಸಾಹಿತ್ಯದಲ್ಲಿ ಅಪರೂಪವಾದ ಪ್ರವಾಸ ಸಾಹಿತ್ಯದ ಕೊರಗನ್ನು ತುಂಬಿಕೊಟ್ಟದ್ದೊಂದೇ ಅಲ್ಲ, ಆ ಬಗೆಯ ಬರವಣಿಗೆಗೇ ಮಾದರಿಯಾಗಿ ನಿಂತಿದೆ...ಕುಶಲ ಬೇಟೆಗಾರನು ಗುರಿ ಇಟ್ಟ ಬಾಣದಂತೆ ಆ ಕೃತಿ ನೇರವಾಗಿ, ನಿಸ್ಸಂಶಯವಾಗಿ ಲಕ್ಷ್ಯ ಭೇದನ ಮಾಡುತ್ತದೆ. ಈ ಕೃತಿಯನ್ನು ಓದುವುದು ಬರೀ ಓದುವಿಕೆಯಷ್ಟೇ ಅಲ್ಲ, ಅದೊಂದು ಜೀವಂತ ರಸಾನುಭವ." ಇನ್ನು ಅವರ Magnum opus ಎನ್ನಬಹುದಾದ 'ಕಾಲೇಜ್ ದಿನಗಳು', 'ಮಹನೀಯರು' ಮತ್ತು 'ಹಿರಿಯರು-ಗೆಳೆಯರು' ವ್ಯಕ್ತಿಚಿತ್ರ ಸಂಪುಟಗಳನ್ನು ಕುರಿತು ಹೇಳಹೊರಟರೊ ಕೊನೆ ಮೊದಲಿಲ್ಲವಾಗುತ್ತದೆ. ವಿ.ಸೀ. ಅವರ ಹೆಸರನ್ನು ಕನ್ನಡ ಗದ್ಯಸಾಹಿತ್ಯದಲ್ಲಿ ಚಿರ ಸ್ಥಾಯಿಯನ್ನಾಗಿಸಲು ಅವು ಸಮರ್ಥವಾಗಿವೆ.

ಯಾರೇ ಕೇಳಲಿ, ವಿ.ಸೀ. ನಿರ್ವಂಚನೆಯಿಂದ ಬರೆದು ಕೊಟ್ಟಿದ್ದಾರೆ. ಧರ್ಮ ಶಾಸ್ತ್ರವನ್ನು ಕುರಿತು ವಯಸ್ಕರ ಶಿಕ್ಷಣಕ್ಕೆಂದು ರಚಿಸಿದ ಮೂವತ್ತಾರು ಪುಟಗಳ ಪುಟ್ಟ ಪುಸ್ತಿಕೆಯಲ್ಲಿ ಎಷ್ಟು ಹೇಳಬಹುದು ? ಹಾಗೆಂದು ಅವರಿಗೆ ತಾತ್ಸಾರವಿಲ್ಲ. ಕೇವಲ ಅಕ್ಷರಸ್ಥರಾದವರೂ ಅವರ ವಾಕ್ಯಗಳಲ್ಲಿ ಒಂದನ್ನೂ ಬಿಡುವುದಾಗಲಿ, ಆಕ್ಷೇಪಿಸುವುದಾಗಲಿ, ಶಕ್ಯವಿಲ್ಲ. ಒಂದೊಂದೂ ಒಂದೊಂದು ಸೂತ್ರ. ಈ ಪುಸ್ತಕಗಳಿಗೆ ಸರಿದೂಗಬಲ್ಲ 'ಕಾನೂನು' 'ನ್ಯಾಯ' ಎಂಬ ಇನ್ನೆರಡು ಪುಸ್ತಕಗಳನ್ನೂ ವಿ.ಸೀ. ಅದೇ ಅಕ್ಷರ ಕಲಿಯುವ ವಯಸ್ಕರಿಗಾಗಿ ಬರೆದು ಕೊಟ್ಟಿದ್ದಾರೆ. ಇತ್ತೀಚೆಗೆ ಪ್ರಕಟಗೊಂಡಿರುವ ಅವರ "ಸಂವಿಧಾನ ಮತ್ತು ಕಾನೂನು" ಕೃತಿ, ನ್ಯಾಯಮೂರ್ತಿ ಇ. ಎಸ್. ವೆಂಕಟ ರಾಮಯ್ಯನವರೆಂದಿರುವಂತೆ, "ಅರಿಸ್ಟಾಟಲನ 'ದಿ ಪಾಲಿಟಿಕ್ಸ್' ಶೈಲಿಯಲ್ಲಿ ರಚಿತವಾಗಿರುವ ಒಂದು ಪ್ರಕರಣಗ್ರಂಥ." ಅಂತಹ ವಿದ್ವತ್ಪೂರ್ಣ ಗ್ರಂಥಗಳನ್ನೂ ತಿಳಿಯಾದ ಸರಳವಾದ ಕನ್ನಡದಲ್ಲಿ ರಚಿಸಬಹುದೆಂಬುದನ್ನು ವಿ.ಸೀ. ಬರೆದು ಸಾಧಿಸಿದ್ದಾರೆ.

ತನ್ನ ಅಳವಿನೊಳಗೆ ಬರುವಷ್ಟು ಜ್ಞಾನಭಂಡಾರವನ್ನು ಸೂರೆಮಾಡಿ ಕೇಳಿದವರಿಗೆಲ್ಲ ಕೊಡುಗೈಯಿಂದ ನೀಡುವುದು ವಿ.ಸೀ. ಅವರ ಧರ್ಮ. "ತಾನು ಕಂಡು ಸುಖಿಸಿದ್ದನ್ನು ತನಗೆ ಪ್ರೀತಿಪಾತ್ರರಾದವರಿಗೆ ತೋರಿಸಬೇಕು. ತಾನು ತಿಳಿದದ್ದನ್ನೆಲ್ಲ ತನ್ನವರಿಗೆ ತಿಳಿಸಬೇಕು. ತನ್ನವರ, ತನ್ನ ನಾಡವರ ಬಾಳು ಸಮೃದ್ಧವಾಗಬೇಕು, ಸುಸಂಸ್ಕೃತವಾಗಬೇಕು, ಶುಚಿಯಾಗಬೇಕು, ಸುಖಿಯಾಗಬೇಕು ಎಂಬ ಹಂಬಲವನ್ನು ಮಾತಿನಿಂದ ಕೃತಿಗಿಳಿಸಿದ ಇಂತಹ ಇನ್ನೊಬ್ಬರನ್ನು ನಾನು ಕಂಡಿಲ್ಲ" (ಪಿ.ವಿ. ಜೋಶಿ).

೩

ತಮ್ಮ ನಾಟಕಗಳ ಬಗೆಗೆ ತಮ್ಮ ನಿಲವನ್ನು ದೀರ್ಘವಾದ ಮುನ್ನುಡಿಗಳಲ್ಲಿ

ವಿ.ಸೀ.ಯವರೇ ಸ್ಪಷ್ಟಗೊಳಿಸಿದ್ದಾರೆ. ಆದ್ದರಿಂದ, ಅವರ ನಾಟಕಗಳಲ್ಲಿನ ಮಾತುಗಾರಿಕೆ ಹಾಗೂ ರಂಗಸಾಧ್ಯತೆಗಳನ್ನು ಕುರಿತು ಈ ನಾಲ್ಕು ಮಾತು.

ಬರ್ನಾರ್ಡ್‌ಷಾ ಅವರ ಎರಡು ನಾಟಕಗಳ ಅನುವಾದಗಳನ್ನೊಳಗೊಂಡು ವಿ.ಸೀ. ರಚಿಸಿದ್ದು ಒಟ್ಟು ಏಳು ನಾಟಕಗಳು. ಅವರ ಐದು ಸ್ವತಂತ್ರ ನಾಟಕಗಳಲ್ಲಿ ಆಗ್ರಹ, ಚ್ಯವನ, ಪಟ್ಟಬಂಧ ಇವು ಪೌರಾಣಿಕ ಕಥಾದ್ರವ್ಯವನ್ನು ಬಳಸಿಕೊಂಡಂಥವು. 'ಶ್ರೀ ಶೈಲ ಶಿಖರ', ತಾವು ಕೇಳಿದ ದಂತಕತೆಯನ್ನು ಕುರಿತು ಕಟ್ಟಿದ್ದು. ಅವರ 'ಸೊಹ್ರಾಬ್ ರುಸ್ತುಂ' ರುದ್ರಮನೋಹರ ನಾಟಕ, ಫಿರ್ದೂಸಿ ಕವಿಯ 'ಷಾಹನಾಮಾ' ಮಹಾಕಾವ್ಯ ದಲ್ಲಿನ ದುರಂತ ವಿನ್ಯಾಸದ ಮೇಲೆ ಮ್ಯಾಥ್ಯೂ ಆರ್ನಾಲ್ಡ್ ರಚಿಸಿದ 'ಸೊಹ್ರಾಬ್ ಅಂಡ್ ರುಸ್ತುಂ' ಎಂಬ ಕವನದಿಂದ ಸ್ಫೂರ್ತಿಗೊಂಡು ನಾಟಕವಾಗಿ ಕನ್ನಡಕ್ಕೆ ಇಳಿದದ್ದು. ಓದುಗರ, ರೇಡಿಯೋ ಶ್ರೋತೃಗಳ ಮತ್ತು ರಂಗದ ಮೇಲೆ ಅಪರೂಪವಾಗಿ ಬಂದಾಗ (ಮೈಸೂರು ಮಹಾರಾಜಾ ಕಾಲೇಜಿನ ಕಲಾವಿದರಿಂದ) ಪ್ರೇಕ್ಷಕರ ಕಣ್ಣೀರ ಕಾಣಿಕೆ ಯನ್ನು ಬಿಡದೆ ಪಡೆದುಕೊಂಡಿದೆ. ವಿ.ಸೀ.ಯವರ ರಂಗಕೌಶಲದ ಪ್ರತಿನಿಧಿಕೃತಿ ಇದು. ವಿ.ಸೀ.ಯವರ ಮೊದಲ ಕವನಸಂಕಲನ 'ಗೀತೆಗಳು' ಜೊತೆ ಜೊತೆಯಲ್ಲಿ ಅವರ 'ಆಗ್ರಹ' ಪ್ರಕಟವಾಯಿತು. ಮಹಾಭಾರತದ ಅತ್ಯಂತ ಶೋಚನೀಯ ದುರಂತ ಪಾತ್ರವಾದ ಅಶ್ವತ್ಥಾಮನನ್ನು ಕುರಿತು ಬರೆದ ನಾಟಕ ಇದು. ತಮ್ಮ ಸಾಹಿತ್ಯಾಚಾರ್ಯರಾದ ಬಿ.ಎಂ. ಶ್ರೀ.ಯವರು ಗ್ರೀಕ್ ದುರಂತ ನಾಟಕದ ಜಾಡಿನಲ್ಲಿ ರಚಿಸಿದ 'ಅಶ್ವತ್ಥಾಮನ್' ಕೃತಿಗಿಂತ, ಭಾಷಾಬಂಧದಲ್ಲಿಯೂ ದುರಂತತೆಯ ತೀವ್ರತೆಯಲ್ಲಿಯೂ ಬೇರೆಯೇ ಆದ ನಾಟಕ ಇದು. ಆ ತರುವಾಯ ಸುಮಾರು ಮೂವತ್ತು ವರುಷ ಕಾಲ ವಿ.ಸೀ.ಯವರ ಯಾವ ನಾಟಕವೂ ಪ್ರಕಟವಾಗಲಿಲ್ಲ. ಆ ಅವಧಿಯಲ್ಲಿ ಕವಿತಾ ಸಂಕಲನಗಳೂ ('ಹಣ ಪ್ರಪಂಚ'ವನ್ನು ಒಳಗೊಂಡು) ಗದ್ಯಗ್ರಂಥಗಳೂ ವಿಸ್ತೃತ ವಿಮರ್ಶೆಗಳೂ ಪ್ರಕಟ ಗೊಂಡವು. ನಾಟಕಕಾರ ವಿ.ಸೀ. ಇನ್ನು ತೋರಿಕೊಳ್ಳಲಾರರು ಎನಿಸುವಷ್ಟರಲ್ಲಿ, ಬೆಂಗಳೂರು ಆಕಾಶವಾಣಿಯಲ್ಲಿ ಸಾಹಿತ್ಯಕ ಕಾರ್ಯಕ್ರಮಗಳ ನಿರ್ಮಾಪಕರಾಗಿ(1956–58) ಪ್ರಸಾರ ತಂತ್ರವನ್ನು ಅರ್ಥಮಾಡಿ ಅರಗಿಸಿಕೊಂಡಿದ್ದ ಅವರು, ಬಾನುಲಿ ನಾಟಕ ಹೇಗಿರಬೇಕು ಎಂಬುದನ್ನು ತೋರಿಸುವ ಸಲುವಾಗಿಯೇ ಎಂಬಂತೆ 'ಶ್ರೀಶೈಲ ಶಿಖರ'ವನ್ನು 1960ರಲ್ಲಿ ರಚಿಸಿದರು. ಮುಗ್ಧಭಕ್ತಿಯ ಕಾರಣ ಜೀವನಸಿದ್ಧಿಯನ್ನು ಕಂಡುಕೊಂಡ ಬೆಲೆವೆಣ್ಣಿನ ದಂತಕತೆಯ ಹಂದರದ ಮೇಲೆ ವಿ.ಸೀ. ರಚಿಸಿದ ಪುಷ್ಪಮಂಟಪ ಅದು. ಮತ್ತೆ ಮೂರು ವರುಷ ನಂತರ 'ಪಿಗ್ಮೇಲಿಯನ್' (1963), ಅಲ್ಲಿಂದ ಐದು ವರುಷ ಕಳೆಯುವುದರಲ್ಲಿ 'ಮೇಜರ್ ಬಾರ್ಬರ' ರಂಗ ನಾಟಕಗಳನ್ನು ಕನ್ನಡಕ್ಕೆ ತಂದರು. 1970ರಲ್ಲಿ 'ಚ್ಯವನ' ಎಂಬ ಮತ್ತೊಂದು ಸ್ವತಂತ್ರ ನಾಟಕ ಪ್ರಕಟವಾಯಿತು. ಮಹಾಭಾರತದಲ್ಲಿನ ಚ್ಯವನ–ಸುಕನ್ಯೆಯರ ಪ್ರೇಮ ಪ್ರಸಂಗವನ್ನು ಕುರಿತು ರಚಿಸಿದ ಈ ಪುಟ್ಟ ನಾಟಕದಲ್ಲಿ ಪಾತ್ರಗಳ ಮನಸ್ಸನ್ನು ಹೊಕ್ಕು ಒಳಚಿತ್ರ ತೆಗೆದು

ತೋರಿಸುವ ವಿ.ಸೀ.ಯವರ ಚಿತ್ರಕಲೆ ಸಮೃದ್ಧವಾಗಿ ತೋರಿಕೊಂಡಿತು. ಅವರು ಬರೆದ ಕಡೆಯ ನಾಟಕ 'ಪಟ್ಟಬಂಧ' : ನಿಸ್ವಾರ್ಥದ ಅಗ್ನಿಯಲ್ಲಿ ಪುಟವಿಟ್ಟು ಪಾವನವಾದ ಭರತನ ಪಾತ್ರವನ್ನು ವಿಶ್ಲೇಷಿಸಿದ ಕೃತಿ. ಕೈಲಾಸಂ ಇಂಗ್ಲಿಷಿನಲ್ಲಿ ರಚಿಸಿ ವಿಜೃಂಭಿಸಿದ 'The Burden' ಎಂಬ ಪುಟ್ಟನಾಟಕದಂತೆಯೇ ಕರುಳು ಮಿಡಿಯುವ ಕೃತಿ. ಇಷ್ಟಕ್ಕೇ ವಿ.ಸೀ. ನಾಟಕ ಪ್ರಪಂಚ ಸೀಮಿತ.

೪

ವಿ.ಸೀ.ಯವರ 'ಸೊಹ್ರಾಬ್ ರುಸ್ತುಂ' – ಹತ್ತು ನೋಟಗಳ ರಂಗನಾಟಕ. ಫಿರ್ದೂಸಿಯ ಕತೆಗೆ ಕಾಯಕಲ್ಪಮಾಡಿ ಸೊಹ್ರಾಬನ ತಾಯಿ ತಾಹಮಿನೆಯನ್ನು ರಂಗಕ್ಕೆ ತಂದು ಕಟ್ಟಕಡೆಯ ಕ್ಷಣದಲ್ಲಿ, ಮಗನನ್ನು ಇರಿದುಕೊಂಡ ಪತಿ ರುಸ್ತುಮನೆದುರು ಮುಖಾಮುಖಿಯಾಗಿ ನಿಲ್ಲಿಸಿದ್ದು ನಾಟಕಕಾರರ ರಂಗಪ್ರತಿಭೆಗೆ ಸಾಕ್ಷಿ. ರಣಗಲಿಯಾದ ತನ್ನ ಗಂಡ ತನಗೆ ಗಂಡುಹುಟ್ಟಿತೆಂದು ತಿಳಿದರೆ ಅದನ್ನಲ್ಲಿ ಕೊಂಡೊಯ್ದು "ಯುದ್ಧಕ್ಕೆ ತರಬಿಯತ್ತು ಮಾಡಿ ತಮ್ಮಂತೆಯೇ ರಣವಿದ್ಯೆಯಲ್ಲಿ ತೊಡಗಿಸುವರೋ" ಎಂದು ಹೆದರಿ, ಮಗನನ್ನು ತನ್ನಲ್ಲಿಯೇ ಉಳಿಸಿಕೊಳ್ಳಬೇಕೆಂದು ಹಂಬಲಿಸಿ 'ಹೆಣ್ಣು ಹುಟ್ಟಿತು' ಎಂದು ಯುದ್ಧಭೂಮಿಯಲ್ಲಿದ್ದ ರುಸ್ತುಮನಿಗೆ ಬೇಹು ಕಳುಹಿಸಿದಳು. ತನ್ನ ಶಿಶು ಗಂಡಾಗಲಿಲ್ಲವೆಂಬ ಬೇಸರದಿಂದ, ರುಸ್ತುಮ ಮನೆಯ ಮುಖವನ್ನೇ ನೋಡಲೊಪ್ಪದೆ ಯುದ್ಧದಲ್ಲಿಯೇ ಆಸಕ್ತನಾಗಿಬಿಟ್ಟ. ಹುಡುಗ ದಷ್ಟಪುಷ್ಟನಾಗಿ ಬೆಳೆದು ಮಹಾ ಯೋಧನಾದ. ಬೆಳೆದ ಮಗನ ಮನಸ್ಸು ತನ್ನ ತಂದೆ ಯಾರು ಎಂದು ತುಡುಕಿತು. ತಾಯಿ ಹೇಳಲೇಬೇಕಾಯಿತು. ಹುಡುಗನಿಗಾದ ಆಘಾತ ದೊಡ್ಡದು. ಜಗದೇಕವೀರನಾದ ತಂದೆಯನ್ನು "ಎಲ್ಲಿದ್ದರೂ ಹುಡುಕಿ ಎಲ್ಲವನ್ನೂ ತಿಳಿಸಿ, ನಂಬಿಸಿ, ಮೂರು ತಿಂಗಳ ಅವಧಿಯೊಳಗಾಗಿ ಕರೆದೇ ತರುತ್ತೇನೆ" ಎಂದು ಆತನಿಂದ ಶಪಥ ಮಾಡಿಸಿ, ವಿ.ಸೀ. ನಾಟಕದ ಓಟಕ್ಕೆ ತೀವ್ರತೆ ಕೊಟ್ಟರು. ಇದು 'ಮೊದಲ ನೋಟ'ದಲ್ಲಿಯೇ ನಡೆದು ಪ್ರೇಕ್ಷಕರ ಪ್ರತೀಕ್ಷೆ—ಕಾತರಗಳಿಗೆ ಕಾವು ಬರುತ್ತದೆ. ಮುಂದಿನ ಮೂರು ನೋಟಗಳಲ್ಲಿ ನಾಟಕಕಾರರು ಸೃಷ್ಟಿಸಿದ ಸುಲೇಮಾನ್, ಸುಲ್ತಾನ್, ಅಫ್ರಾಸಿಯಾಬ್ ಪಾತ್ರಗಳ ಕಾರಣ, ಸೊಹ್ರಾಬನಲ್ಲಿ ಬೆಂಕಿ ಇಟ್ಟಂಥ ಒಳಸಂಕಟ, ಅವನ ತೋಳ್ಬಲದ ಹಿರಿಮೆ, ತನ್ನಿಂದಾಗಿ ಒಡೆದ ಸಂಸಾರ ಮತ್ತೆ ಒಂದುಗೂಡುವ ಸಲುವಾಗಿ ತಳೆದ ಶಪಥಗಳ ವಿವರಗಳು ಪಾತ್ರದೊಡನೆ ಪ್ರೇಕ್ಷಕನ ಸಂಬಂಧ ಅನನ್ಯವಾಗುವಂತೆ ಮಾಡುತ್ತವೆ. ಕ್ಷಣಕಾಲ ನಿಲ್ಲದೆ, ಕೂಡದೆ, ನಿದ್ರಿಸದ, ಎಲ್ಲಿ ಕಾಳಗವೋ, ಎಲ್ಲಿ ಯೋಧಾಟ್ಟಹಾಸವೋ, ಎಲ್ಲಿ ಸಾಹಸವೋ ಅಲ್ಲಿಗೆ ಧಾವಿಸಿ ಎಲ್ಲಿಯೂ ತಂದೆಯನ್ನು ಕಾಣದೆ ಹಪಹಪಿಸುತ್ತಿದ್ದ ಸೊಹ್ರಾಬನಿಗೆ ತಾಯಿ ಕಳುಹಿಸಿದ ನಿರೂಪ 'ಎರಡು ತಿಂಗಳು ಕಳೆದುಹೋಯಿತು'

ಎಂದು ಎಚ್ಚರಿಸುತ್ತದೆ. 'ನನ್ನ ಬಾಳಿಗೆ ಕತ್ತಲು ಕವಿಸಬೇಡ, ಕಂದಾ. ಹೊರಟು ಬಾ. ನಿಮಿಷ ಯುಗವಾಗಿದೆ' ಎಂದು ತಾಯಿಕರುಳು ರೋದಿಸುತ್ತಿದೆ. ಐದನೆಯ ನೋಟದ ವೇಳೆಗೆ ತಾನಿಟ್ಟುಕೊಂಡ ಅವಧಿಯಲ್ಲಿ ಮತ್ತೂ ಮೂರು ವಾರಗಳು ಸರಿದುಹೋಗಿವೆ. ಹುಡುಗ ತಾಳ್ಮೆಗೆಟ್ಟಿದ್ದಾನೆ. ಕಡೆಯದೊಂದು ವಿಶ್ವಪ್ರಯತ್ನ ಮಾಡಿಬಿಡಬೇಕು. ಇರಾನಿನ ಮೇಲೆ ದಾಳಿಮಾಡಿ ಆ ಸೈನ್ಯವನ್ನು ತರಿದೊಟ್ಟಿಬಿಟ್ಟರೆ, ಹಿಂದೊಮ್ಮೆ ಅದರ ಸಿಂಹನೇತಾರರಾಗಿದ್ದ ತಂದೆ ಕನಲಿ, ಎಲ್ಲಿದ್ದರೂ ತನ್ನೊಡನೆ ಸೆಣಸಲು ಬಂದೇ ಬರುತ್ತಾರೆ. ಇದು ಸೊಹ್ರಾಬನ ನೆಚ್ಚು. "ಬೇಡಪ್ಪ, ತಂದೆಯನ್ನು ಕಾಣಬೇಕಾದರೆ ಕ್ಷೇಮದಲ್ಲಿ ಕಾಣು. ಹುಟ್ಟಿದಂದಿನಿಂದ ಈವರೆಗೂ ನೀನು ನಿಮ್ಮ ತಂದೆಯನ್ನು ನೋಡಿಲ್ಲ. ಎದುರಿಗೇ ನಿಂತಿದ್ದರೂ ಗುರುತಿಸಬಲ್ಲವನಲ್ಲ. ನೀನು ಮಗನೆಂದು ಅವರರಿಯರು. ಎರಡೂ ಕಡೆಯಲ್ಲಿ ಅಜ್ಞಾನವಿರುವಾಗ ದುಡುಕುವುದು ಅವಿವೇಕ" ಎಂಬ ಹಿರಿಯರ ಮಾತನ್ನು, ಗಡುವಿನ ಒತ್ತಡದ ಕಾರಣ ನಿರ್ವಾಹವಿಲ್ಲದೆ ಕಡೆಗಣಿಸಿ, ತನ್ನ ಅದೃಷ್ಟದಲ್ಲಿ ಸೀಮೆಕಾಣದ ನಂಬಿಕೆಯನ್ನಿಟ್ಟು, ಕಣಕ್ಕೆ ಕಳುಹಲೇಬೇಕೆಂದು ದುಂಬಾಲು ಬಿದ್ದು ಸೇನಾನಾಯಕನಾಗಿ ಹೊರಟುಬಿಡುತ್ತಾನೆ. ಮುಂದಿನ ನೋಟದಲ್ಲಿ ಇರಾನಿನ ಸೈನ್ಯವನ್ನು ತರಿದೊಟ್ಟಿದ ಬಾಲಯೋಧ, ಒಂದು ದಿನದ ಬಿಡುವನ್ನು ಬೇಡಿದಾಗ ಒಪ್ಪಿ. ಅಂದು ತನ್ನೊಂದಿಗೆ ಏಕಾಂಗಿಯಾಗಿ ಕಾಳಗಮಾಡಲು ಇರಾನಿನ ಯೋಧರಿಗೆ ವೀರಾಹ್ವಾನ ಕಳುಹಿಸುತ್ತಾನೆ. ಒಂದು ರಾಷ್ಟ್ರದ ಮಾನಾಪಮಾನದ ವಿಷಘಟ್ಟ ಇದು. ಇಂಥವನ ವೀರವೈಭವದೆದುರು ಇರಾನಿನ ಪರವಾಗಿ ಸೆಟೆದು ನಿಂತು ಸೆಣಸಿ ಸದೆಬಡಿಯಲು ಹಿಂದೆ ತಮ್ಮ ರಾಷ್ಟ್ರದ ಸೈನ್ಯನಾಯಕನಾಗಿದ್ದ ವೀರರುಸ್ತುಮ ರೊಬ್ಬರಿಗೇ ಸಾಧ್ಯವೆಂದು ಗಣಿಸಿದ ಇರಾನಿನ ಪ್ರಭುತ್ವ, ಆತನ ಮನವೊಲಿಸುವ ಚುಚ್ಚುಗೆಲಸವನ್ನು ಏಳನೆಯ ನೋಟದಲ್ಲಿ ಮಾಡುತ್ತದೆ. ಕೆಣಕಿದ ಫಣಿಯಂತೆ ಜಗದ್ವಿಖ್ಯಾತನಾದ ವೀರಗಲಿ ಸಿಡಿದೆದ್ದು ನಿಲ್ಲುತ್ತಾನೆ. ರಣಕಹಳೆ ಉಬ್ಬೇಳುತ್ತದೆ. ಎಂಟನೆಯ ನೋಟ, ನಾಟಕದ ರಸಘಟ್ಟ. ಸೊಹ್ರಾಬನ ಮಹದಾಳ್ತನವನ್ನು ಕಂಡ ರುಸ್ತುಂ ಬೆರಗಾಗಿ, ಕಣ್ಣರಿಯದಿದ್ದರೂ ಕರುಳರಿತಂತೆ, ಆತನ ಮೈಮುಟ್ಟಿ, ಬೆನ್ನು ತಟ್ಟಿ, "ಯುದ್ಧಬಿಡು, ನನ್ನೆದುರು ನಿಂತವನು ಬದುಕಿ ಮೇಲೇಳಲಿಲ್ಲ. ನಿನ್ನ ಕಂಡರೆ ನನಗೇಕೋ ಪ್ರೀತಿ ಉಕ್ಕುತ್ತಿದೆ, ಬಾ. ನಿನ್ನನ್ನು ಮಗನಂತೆ ಸಾಕಿಕೊಳ್ಳುತ್ತೇನೆ" ಎಂದಾಗ ಸೊಹ್ರಾಬನ ಮನಸ್ಸಿನಲ್ಲಿ ಸಂದೇಹ ಸಂಭ್ರಮಗಳು ಉಬ್ಬೇಳುತ್ತವೆ. "ನೀನೇ ರುಸ್ತುಮನಲ್ಲವೆ ? ಹೇಳು, ನಿನ್ನ ತಂದೆ ತಾಯಿಗಳ ಆಣೆ, ನಿನ್ನಾತ್ಮದಾಣೆ" ಎಂದು ಗಿಂಜಿದ ಬಾಲಯೋಧನ ಆರ್ತತೆಯನ್ನು 'ಇದು ಪಲಾಯನ ಸೂತ್ರ' ಎಂದು ತಪ್ಪರ್ಥ ಮಾಡಿಕೊಂಡ ರುಸ್ತುಂ, ಹೀಗಳಿಸಿ ನಿರಾಕರಿಸಿದಾಗ, ಪರಸ್ಪರ ಅರಿಯದ ತಂದೆ ಮಕ್ಕಳಲ್ಲಿ ಭೀಷಣ ಕಾಳಗ ಸಮನಿಸುತ್ತದೆ. ಅಂಥ ಸಮ ಸಮ ಸಮರ ಪ್ರೇಕ್ಷಕನ ಕಣ್ಣಿಗೆ ನಂಬಿಕೆ ತೃಪ್ತಿ ತರುತ್ತದೋ ಇಲ್ಲವೋ ಎಂಬ ಅಳಕೆಯಿಂದ ವಿ.ಸೀ. ವಿವರಗಳನ್ನು ನಾಲ್ಕು

ಪಾತ್ರಗಳಿಂದ ರನಿಂಗ್ ಕಾಮೆಂಟರಿ ಕೊಡಿಸಿದ್ದಾರೆ. ಕಡೆಗೆ ಶಿರಸ್ತ್ರಾಣ ಕಡಿದು, ತಲೆ ಮುಕ್ಕಾಗುವಂತೆ ಏಟುತಿಂದ ರುಸ್ತುಂ ಭೀಮರೌದ್ರವನ್ನು ನಖಶಿಖಾಂತ ಆವಿರ್ಭವಿಸಿ ಕೊಂಡು, ತನ್ನ ಹೆಸರನ್ನೇ ಸಿಂಹನಾದಮಾಡಿ, ಅದನ್ನು ಕೇಳಿ ಮುಂಗಾಣದೆ ಸ್ತಂಭಿತ ನಾಗಿ ನಿಂತ ಸೊಹ್ರಾಬನ ಹೊಟ್ಟೆಗೆ ಭಲ್ಲೆಯನ್ನು ನೆಟ್ಟು ವಿಜೃಂಭಿಸುತ್ತಾನೆ. ಮುಸುಕಿದ್ದ ಪರದೆ ಮೇಲೆತ್ತಿದಂತಾಗಿ ಮುಂದಿನದೆಲ್ಲ ಶೋಕಸಂಕಟದ ಹೆಪ್ಪು. ಈ ಎರಡೂ ದೃಶ್ಯಗಳಲ್ಲಿ ವಿ.ಸೀ.ಯವರಿಗೆ ಒದಗಿಬಂದ ಮಾತುಗಾರಿಕೆಗೆ ತಲೆಬಾಗುವಂತಾಗುತ್ತದೆ. ಅಷ್ಟರಲ್ಲಿ ಮಗನನ್ನು ಹುಡುಕಿಕೊಂಡು ಸುಲೇಮಾನನ ನೆರವಿನಿಂದ ಅಲ್ಲಿಗೆ ಬಂದ ತಾಯಿ ತಾಹಮಿನೆ ತಾನೆ ಅಪ್ರತ್ಯಕ್ಷವಾಗಿ ಆಗಮಾಡಿದ ಈ ಮಹಾದುರಂತಕ್ಕೆ ಸಾಕ್ಷಿನಿಲ್ಲುತ್ತಾಳೆ. ಕರುಳು ಕರಗಿಸುವ ಹತ್ತನೆಯ ನೋಟದಲ್ಲಿನ ಶೋಕಸಂಕಟ, ದುಃಖರೋದನ, ತಪ್ಪೊಪ್ಪಿಗೆಗಳು ರಂಗದಲ್ಲಿ ಅತಿರೇಕವಾದೀತೇನೋ ಎನ್ನಿಸಿದರೂ ಆಧುನಿಕ ಕನ್ನಡ ನಾಟಕ ಸಾಹಿತ್ಯದಲ್ಲಿನ ಒಂದು ಅತ್ಯಂತ ಹೃದಯ ವಿದ್ರಾವಕ ನೋಟವೆನಿಸುತ್ತದೆ. ಬಿಡದೆ ಕಾಡಿದ ವಿಧಿಯ ಕೈತವದಿಂದಾಗಿ ಅತ್ಯಂತ ಆತ್ಮೀಯನಾಗಿಬಿಟ್ಟ ವೀರಸುಂದರ ಯೋಧ ಬಾಲಕನನ್ನು ಕಳೆದುಕೊಂಡ ಅನುಭವ ಪ್ರೇಕ್ಷಕನಿಗೆ ಆಗುತ್ತದೆ. ಕಡೆಯ ಎರಡು ದೃಶ್ಯ ಗಳನ್ನು ಬರೆಯುವಾಗ, ಹೆಂಗರುಳಿನ ವಿ.ಸೀ.ಯವರ ಮನಸ್ಸು ಅದೆಷ್ಟು ಮರುಗಿತೋ ಹೇಳಲುಬಾರದು. ಅದರ ಪಾಲಿನಷ್ಟನ್ನಾದರೂ ಪ್ರೇಕ್ಷಕ/ಶ್ರೋತೃ ಅನುಭವಿಸುವಂತೆ ಮಾಡಿದ್ದು ನಾಟಕಕಾರರ ದಿವ್ಯಸಾಧನೆ.

ನಾಟಕದ ಮೊದಲ ಆವೃತ್ತಿಯ ಮುನ್ನುಡಿಯಲ್ಲಿ ವಿ.ಸೀ., ತಾವು ಮೂಲದಿಂದ ಮಾಡಿಕೊಂಡ ಮೂರು ಬದಲಾವಣೆಯ ಮಾತನ್ನೆತ್ತಿ ಬರೆದಿದ್ದಾರೆ. ತಾಹಮಿನೆಯನ್ನು ನಾಟಕದ ಕಡೆಯಲ್ಲಿ ರಂಗಕ್ಕೆ ತಂದದ್ದು ಇದರಲ್ಲಿ ಮುಖ್ಯವಾದದ್ದು. "ತಮ್ಮ ಪ್ರೀತಿ ಅಜ್ಞಾನಗಳ ಫಲವಾಗಿ, ವಿಧಿ ನಿಯಮದಂತೆ ಮಗನನ್ನು ಕೊಂದ–ಅಹುದು ಕೊಂದ–ತಂದೆತಾಯಿಗಳು ಕೈಮೀರಿ ಹೋದ ಮೇಲೆ ಮೃತನಾದ ಮಗನ ಇರ್ಕೆಡೆಗಳಲ್ಲಿಯೂ ನಿಂತುನೋಡುತ್ತಿರುವಂತೆ ಚಿತ್ರವೊಂದು ಕಣ್ಣೆದುರಿಗೆ ನಿಂತು"ದರ ಕಾರಣ ಈ ಬದ ಲಾವಣೆ ಆಯಿತು ಎಂದಿದ್ದಾರೆ. ಫಿರ್ದೂಸಿಯ ತಾಹಮಿನೆಯ ದುರಂತ ಎದೆಯೊಡೆ ಯುವಂಥದ್ದು. ಆಕೆಯ ದಾರುಣವನ್ನು ಅನುಬಂಧದಲ್ಲಿ ಮೂಲದಿಂದ ಹೀಗೆ ಅನು ವಾದ ಮಾಡಿದೆ : "ವೀರ ಸೊಹ್ರಾಬ್ ಸತ್ತ. ತಂದೆಯ ಖಡ್ಗ ಅವನನ್ನು ಇರಿದು ಕೊಂದಿತು ಎಂಬ ಸುದ್ದಿಯನ್ನು ಕೇಳಿದಾಗ, ಆಕೆ, ತಾನು ಧರಿಸಿದ್ದ ವಸ್ತ್ರವನ್ನು ಚಿಂದಿ ಚಿಂದಿಯಾಗಿ ಹರಿದಳು. ವಜ್ರದಂತಹ ಆಕೆಯ ಆಕೃತಿ ಹೊಳೆದು ಕಾಣಿಸಿತು. ಎಷ್ಟು ದುಃಖ, ಎಷ್ಟುರೋದನ, ಎಷ್ಟುಸಲ ಅವಳ ಮೂರ್ಛೆ! ತನ್ನ ಬೆರಳುಗಳ ಸುತ್ತ ಪಾಶ ಗಳಂತೆ ತನ್ನ ತಲೆಗೂದಲನ್ನು ಸುತ್ತಿ ತಿರುಚಿ ಅದನ್ನು ಕತ್ತರಿಸಿದಳು. ಮುಖದಿಂದ ರಕ್ತ ಹರಿಯಿತು. ಎಷ್ಟೋ ಸಲ ಮೂರ್ಛೆಬಿದ್ದು ಕಪ್ಪುಮಣ್ಣಿನ ಧೂಳನ್ನು ತನ್ನ ತಲೆಯ ಮೇಲೆ ಎರಚಿಕೊಂಡಳು. ತನ್ನ ತೋಳನ್ನು ಕಡಿದು ಚೂರು ಮಾಡಿದಳು. ತಲೆಯ

ಮೇಲೆ ಬೆಂಕಿ ಹಾಕಿಕೊಂಡು ಕಪ್ಪುಗೂದಲನ್ನು ಸುಟ್ಟುಕೊಂಡಳು... 'ಮಗನೇ ಖಡ್ಗದಿಂದ ಆತನು ನಿನ್ನ ಪಿತ್ತಕೋಶವನ್ನು ಹೇಗೆ ತಿವಿದ ? ಆ ನಿನ್ನ ಮುಖವನ್ನು ಕಂಡು ನಿನ್ನ ಆಕಾರ, ರೂಪ, ತೋಳು ನೋಡಿ, ಅವನಿಗೆ ಕರುಣೆ ಬರಲಿಲ್ಲವೆ ? ಓ, ನನ್ನ ಮಗನ ಒಡಲನ್ನು ಹಗಲ ಬೆಳಕಿನಲ್ಲಿ, ಬೇಸರದ ರಾತ್ರಿಗಳಲ್ಲಿ ಹೇಗೆ ಪೋಷಿಸಿದೆ–ಬೆಳೆಸಿದೆ !...ಯಾರನ್ನು ಇನ್ನು ಮುಂದೆ ಎದೆಗವಚಿಕೊಳ್ಳಲಿ ? ನನ್ನ ದುಃಖವನ್ನು ನಿವಾರಿಸುವವರು ಯಾರು ?...ಕಠಾರಿಯನ್ನೆಳೆದು ನಿನ್ನ ತಂದೆ ನಿನ್ನ ಪಕ್ಕವನ್ನು ಸೀಳುವಾಗ ನಾನು ಕೊಟ್ಟಿದ್ದ ಕುರುಹನ್ನು ಏಕೆ ತೋರಿಸಲಿಲ್ಲ ? ನೀನು ಇಂಥವನೆಂದು ಏಕೆ ಹೇಳಲಿಲ್ಲ ? ನಿನ್ನೊಡನೆ ನಾನೇ ಏಕೆ ಹೋಗಲಿಲ್ಲ...? ಎಷ್ಟು ದೂರದಿಂದಲಾದರೂ ರುಸ್ತುಮನು ನನ್ನನ್ನು ಗುರುತಿಸುತ್ತಿದ್ದ. ಇಬ್ಬರನ್ನೂ ಸ್ವಾಗತಿಸುತ್ತಿದ್ದ...ಖಡ್ಗವನ್ನು ಬಿಸಾಡುತ್ತಿದ್ದ. ನಿನ್ನ ಪಕ್ಕವನ್ನು ಬಗೆಯುತ್ತಿರಲಿಲ್ಲ...ಕಂದಾ, ನೀನಿಲ್ಲದೆ, ದುಃಖ, ನೋವು, ಯಾತನೆ, ನಿಟ್ಟುಸಿರು ನಿನ್ನ ತಾಯ ಬಾಳಾಯಿತು..." ಹೀಗೆನ್ನುತ್ತಾ ಮೈ ಪರಚಿಕೊಂಡಳು. ಕೂದಲನ್ನು ಕಿತ್ತಳು. ಸುಂದರವಾದ ತನ್ನ ಮುಖವನ್ನು ತನ್ನ ಅಂಗೈಗಳಿಂದ ಚಚ್ಚಿ ಹಿಡಿದುಕೊಂಡಳು. ಪುನಃಪುನಃ ಪ್ರಜ್ಞೆ ತಪ್ಪಿ ಬೀಳುತ್ತಿದ್ದಳು. ಅವನು ಬಳಸುವ ಅವನ ಗುರುತಿನ ಸಾಮಾನನ್ನೆಲ್ಲ ಪ್ರೀತಿಯಿಂದ ಸವರಿ ನೇವರಿಸಿದಳು, ತಬ್ಬಿಕೊಂಡಳು. ಅವನ ಕುದುರೆಯನ್ನು ತಂದು ಅದರ ಮುಖವನ್ನು ಮುದ್ದಾಡಿದಳು. ಅವನ ನಿಲುವಂಗಿಯನ್ನು ತಂದು ಅದೇ ತನ್ನ ಮಗನೆಂಬಂತೆ ಅಪ್ಪಿಕೊಂಡಳು. ಆತನಿಗೆ ಸಂಬಂಧಿಸಿದ ಚಿನ್ನ ಬೆಳ್ಳಿ ಎಲ್ಲ ಸಾಮಾನನ್ನು ಬಡವರಿಗೆ ದಾನ ಮಾಡಿದಳು. ಅನ್ನ ವಸ್ತ್ರ ಯಾವುದರಲ್ಲೂ ಆಕೆಗೆ ಮನಸ್ಸಿರಲಿಲ್ಲ. ರಕ್ತಸಿಕ್ತಳಾಗಿ, ಕಣ್ಣೀರು ಸುರಿಸುತ್ತ, ಒಂದು ವರ್ಷದೊಳಗಾಗಿ ಎದೆ ಬಿರಿದು ತನ್ನ ಮಗನನ್ನು ಸೇರಿಕೊಂಡಳು" ಇಂಥ ದುರ್ಭರ ಶೋಕವನ್ನು ಒಂಟಿ ಒಬ್ಬಂಟಿಗಳಾಗಿ ಅನುಭವಿಸುತ್ತ ಆ ತಾಯಿ ಇಟ್ಟ ಹುಯಿಲು ವಿ.ಸೀ.ಯವರ ಅಂತಃಕರಣವನ್ನು ಬೇರು ಸಹಿತ ಕಲಕಿ ಆಕೆಗೊಂದು ಆಸರೆ ಕಲ್ಪಿಸಬೇಕೆಂದು ಬಯಸಿ, ಆಕೆಯನ್ನು ಕಾಳಗದ ಕಣಕ್ಕೆ ಕರೆತಂದು ಗಂಡನ ಎದುರು ನಿಲ್ಲಿಸಿ ಆ ಶೋಕವನ್ನು ಮತ್ತೂ ಉಕ್ಕಿಸಿ ಇಬ್ಬರಲ್ಲಿಯೂ ಹಂಚಿಸಿತು. ರಂಗ ಪ್ರಯೋಗದ ನಿಟ್ಟಿನಿಂದ ಇದು ರುದ್ರವೂ ರಮಣೀಯವೂ ಆದ ನೆಲೆಗಳನ್ನು ನಾಟಕದಲ್ಲಿ ನಿರ್ಮಿಸಿತು. ಮಗನ 'ಹುಟ್ಟಿನ ಕಾರಣ' ಸಿಡಿದು ಒಡೆದಿದ್ದ ಪತಿಪತ್ನಿಯರು ಅದೇ ಮಗನ ಮರಣದಲ್ಲಿ ಒಂದಾದರು. ಇನ್ನು ಬದುಕಿರುವಷ್ಟು ಕಾಲ ಒಬ್ಬರು ಇನ್ನೊಬ್ಬರ ತಪ್ಪುಗಳನ್ನೊಪ್ಪಿಕೊಂಡು ಹಲುಬುತ್ತ, ಅಂಥ ವೀರಗುವರ ಬದುಕಿ ಉಳಿದಿದ್ದರೆ ತಾವು ಹೇಗಿರಬಹುದಾಗಿತ್ತು ಎಂಬ ಕನಸುಗಳನ್ನು ಕಾಣುತ್ತ, ಆಗಿ ಹೋದುದನ್ನು ಅಳಿಸಲಾರದ ಭೀಷಣ ಸಂಕಟದಲ್ಲಿ ತೊಳಲಬೇಕಾಯಿತು.

ವಿ.ಸೀ. ಹೇಳಿದ ಎರಡನೆಯ ಮಾತು ನಾಟಕದಲ್ಲಿ ತಾವು ಬಳಸಿದ ಭಾಷೆಯನ್ನು ಕುರಿತದ್ದು. ಬಳಕೆಯಲ್ಲಿದ್ದ "ಸರಳರಗಳೆ ಪದ್ಯಗಳಲ್ಲಿಯೂ ಗದ್ಯಪದ್ಯ ಸಮ್ಮಿಶ್ರವಾದ

ಸಾಂಪ್ರದಾಯಿಕ ರೀತಿಯಲ್ಲಿಯೂ ಬರೆಯದೆ ನಮ್ಮ ನಾಡಿನ ದಿನಚರಿಯ ಭಾಷೆಯಲ್ಲಿಯೇ ಇದನ್ನು ಬರೆಯುವ ಪ್ರಯತ್ನ ಮಾಡಿದ್ದೇನೆ...ಕೇವಲ ಬಳಕೆಯ ಭಾಷೆಯಲ್ಲಿಯೇ ಭಾವದ ಓಟ, ಮನಸ್ಸಿನ ಉದ್ದೇಶ, ಕಾರ್ಯಗಳ ತೀವ್ರತೆ ಮುಂತಾದುವನ್ನು ತರಲು ಸಾಧ್ಯವೆ ಎಂಬ ಪ್ರಶ್ನೆಯು ಈ ಪರೀಕ್ಷಾ ಪ್ರಯತ್ನಗಳ ಪ್ರೇರಕವಾಯಿತು" ಎಂದಿದ್ದಾರೆ. ಈ ಪರೀಕ್ಷಾ ಪ್ರಯತ್ನ ನಾಟಕದಲ್ಲಿ ಸಂಪೂರ್ಣ ಸಾಫಲ್ಯ ಕಂಡಿದೆ ಎಂಬುದರಲ್ಲಿ ಸಂಶಯ ಕಾಣದು. ಬಿ.ಎಂ.ಶ್ರೀ.ಯವರ 'ಅಶ್ವತ್ಥಾಮನ್' ನಾಟಕದಿಂದ ಹಿಡಿದು ಆವರೆಗೆ ಹಾಗೂ ಆನಂತರ ಬಂದ ನಾಟಕಗಳು—ಮಾಸ್ತಿ, ಕುವೆಂಪು, ಎಂ.ಆರ್.ಶ್ರೀ., ಸಂಸ, ಪು.ತಿ.ನ ಅವರ ಕೃತಿಗಳನ್ನೊಳಗೊಂಡು—ಅಂದಿಗೆ ಫ್ಯಾಷನಬಲ್ ಆಗಿದ್ದ ಸರಳರಗಳೆಯಲ್ಲಿ ಅಥವಾ ಗೀತೆಯಲ್ಲಿ ರಚನೆಗೊಂಡವು. ಮೊದಲಿಗೆ ನಾಟಕದ ಭಾಷೆಯನ್ನು ಅರ್ಥಮಾಡಿಕೊಂಡ ನಂತರ ಪ್ರೇಕ್ಷಕನ ಮನಸ್ಸು ನಾಟಕದ ಆಳಕ್ಕೆ ಇಳಿದು ಅಗಲಕ್ಕೆ ಹಬ್ಬಿಕೊಳ್ಳಬೇಕಾಗಿತ್ತು. ನಾಟಕದ ಮಾತು ಸುಲಭವಾಗಿ ಅರ್ಥವಾಗಿಬಿಟ್ಟರೆ ಪ್ರೇಕ್ಷಕನ ಅರ್ಥ ಸಮಸ್ಯೆ ಬಗೆಹರಿದಂತೆ ತಾನೇ. ಇದನ್ನೇ ವಿ.ಸೀ. ಸಾಧಿಸಿದ್ದು. ನಾಟಕಕಾರ ಬಳಸಿದ ಭಾಷೆ ಪಾತ್ರಗಳು ಸಹಜವಾಗಿದ್ದು, ಸತ್ವವುಳ್ಳದ್ದಾದರೆ, ಅದು ಉಳಿದೆಲ್ಲ ವೇಷಭೂಷಣ, ಪಾತ್ರಾಲಂಕಾರ, ರಂಗಪರಿಕರಗಳನ್ನು ಮೆಟ್ಟಿ ಮೇಲೆದ್ದು ವಿಜೃಂಭಿಸುತ್ತದೆ. ಇದನ್ನೇ ಪಾಶ್ಚಾತ್ಯರು 'The Power of the Word' ಎಂದದ್ದು. ಷೇಕ್ಸ್‌ಪಿಯರ್ ಕಂಪನಿಯ ಹೆರಾಲ್ಡ್ ಲ್ಯಾಂಗ್ ಎಂಬ ನಿರ್ದೇಶಕ, ಪಾತ್ರಧಾರಿಗಳನ್ನು ಅವರ ಅನುದಿನದ ಉಡುಗೆ ತೊಡುಗೆಯಲ್ಲಿಯೇ ರಂಗದ ಮೇಲೆ ತಂದು ಹ್ಯಾಮ್ಲೆಟ್ ನಾಟಕದ ಮಾತುಗಳನ್ನು ಹಾವಭಾವ ಬೆರೆಸಿ ಅತ್ಯಂತ ವರ್ಚಸ್ವಿಯಾಗಿ ಆಡಿಸಿ ಒಟ್ಟು ನಾಟಕದ ಸಂಪೂರ್ಣ ಒತ್ತಡ ಅನುಭವಗಳನ್ನು ಪ್ರೇಕ್ಷಕರಲ್ಲಿ ಮೂಡಿಸುವಲ್ಲಿ ಯಶಸ್ವಿಯಾಗಿದ್ದಾನೆ. ನಾಟಕದಲ್ಲಿ ಸತ್ವವಿದ್ದು ಸಹಜ ಸಂಭಾಷಣೆಯಲ್ಲಿ ಹುರಿ ಬಿಗಿ ಇದ್ದಾಗ ಘಟ್ಟದ ಕೆಳಗಿನ 'ತಾಳಮದ್ದಳೆ' ಅಥವ 'ಪ್ರಸಂಗ'ದಲ್ಲಿನಂತೆ ಪ್ರೇಕ್ಷಕನಿಗೆ ಆತ ಕಣ್ಣುಮುಚ್ಚಿ ಕುಳಿತರೂ ನಾಟಕದ ರಸಾನುಭವವಾಗುತ್ತದೆ. ಇದೇ ರೇಡಿಯೋ ನಾಟಕದ ಪ್ರಸಾದಗುಣ. ಧಾರವಾಡ ಆಕಾಶವಾಣಿಯಿಂದ 'ಸೊಹ್ರಾಬ್-ರುಸ್ತುಂ' ನಾಟಕವನ್ನು ಪ್ರಯೋಗಿಸಿದಾಗ ಶ್ರೋತೃಗಳಲ್ಲಿ ಇಂಥ ರಸಾನುಭವ ದಟ್ಟವಾಯಿತು. ಮಳಿಯೆ ಗೋವರ್ಧನರಾಯರ ರುಸ್ತುಂ, ಲಕ್ಷ್ಮಣ ಜೋಷಿಯವರ ಸೊಹ್ರಾಬ್ ಹಾಗೂ ಲೀಲಾಕೇಸರಿಯವರು ನಿರ್ವಹಿಸಿದ ತಾಹಮಿನಾ ಭೂಮಿಕೆಗಳಲ್ಲಿ ಕಲಾವಿದರು ತಮ್ಮ ಧ್ವನಿಗಳ ವಿಶಿಷ್ಟ ಸ್ತರಗಳನ್ನು ಬಳಸಿಕೊಂಡು ಪಾತ್ರಸಹಜವಾದ ಆಡುಮಾತುಗಳನ್ನು ತೂಗಿ ಬಿಂಬಿಸಿದ ಕಾರಣ ವಿ.ಸೀ.ಯವರ ಸೊಹ್ರಾಬ್-ರುಸ್ತುಂ, ಪ್ರಸಾರದಲ್ಲಿ ಅಪೂರ್ವವಾದ ಯಶಸ್ಸನ್ನು ಗಳಿಸಿತು. ಅಲ್ಲದೆ, ಮುಂದಿನ ನಾಟಕಗಳಲ್ಲಿ ಆಡುಮಾತಿನ ಬಳಕೆಗೆ ವಿ.ಸೀ.ಯವರ ಈ ಗಟ್ಟಿ ನಾಟಕ ನಾಂದಿ ಹಾಡಿದಂತೆ ಆಯಿತು.

ಮೂಲದಲ್ಲಿಲ್ಲದ ಮತ್ತೊಂದು ಮಹತ್ತಾದ ಮಾರ್ಪಾಡನ್ನು ವಿ.ಸೀ. ತಮ್ಮ

ನಾಟಕದಲ್ಲಿ ಮಾಡಿದರು. ಮೂರು ತಿಂಗಳ ಅವಧಿಯೊಳಗಾಗಿ ಏನೇ ಆದರೂ ತನ್ನ ತಂದೆಯನ್ನು ಹುಡುಕಿ ತಂದೇ ತರುವುದಾಗಿ, ಆಕೆ ಕೇಳದಿದ್ದರೂ, ಸೊಹ್ರಾಬ್ ತನ್ನ ತಾಯಿಗೆ ಕೊಟ್ಟ ಆಣೆ ಮಾತು ಅದು. ಈ ಮಾರ್ಪಾಡಿನಿಂದಾಗಿ ನಾಟಕದ ಕ್ರಿಯೆಗೆ ತೀವ್ರ ಚಾಲನೆಯೊದಗಿ ನಾಟಕದ ಮೂರು ಮುಖ್ಯ ಪಾತ್ರಗಳು ದುರಂತಕ್ಕೆ ಧಾವಿಸು ವಂತಾಯಿತು. ಅಲ್ಲದೆ, ಮಗನ ಶಪಥ ಕಥೆಗೆ ಕಾಲದ ಕಟ್ಟನ್ನು ಹಾಕಿ ನಾಟಕಕ್ಕೆ ಒಪ್ಪುವಂಥ ಗ್ರೀಕ್ ಚೌಕಟ್ಟನ್ನು ಒದಗಿಸಿತು.

* *

ಮಹಾಭಾರತದ ಅಶ್ವತ್ಥಾಮನನ್ನು ಕೇಂದ್ರ ಪಾತ್ರವಾಗಿಟ್ಟು ವಿ.ಸೀ. ರಚಿಸಿದ 'ಆಗ್ರಹ' ಒಂದೂವರೆ ತಾಸು ಅವಧಿಯ, ಇಪ್ಪತ್ತನಾಲ್ಕು ಪಾತ್ರಗಳ ಆಡುಮಾತಿನ—ರಂಗಕ್ಕೂ ರೇಡಿಯೋಗೂ ಅಳವಡುವ—ನಾಟಕ.

ಮಹಾಭಾರತದ ದುರಂತ ಪಾತ್ರಗಳಲ್ಲಿ ಅಶ್ವತ್ಥಾಮ ಚಿರಂಜೀವಿ. ಹುಟ್ಟಿನಿಂದಲೇ ವಿಧಿ ಅವನನ್ನು ವಂಚಿಸುತ್ತ ಬಂತು. ಹಸುಳೆಯಾಗಿದ್ದಾಗ ಹಾಲಿಗೆ ಬದಲಾಗಿ ಪಿಷ್ಟೋದಕವನ್ನು ಆತ ಕುಡಿಯಬೇಕಾಯಿತಂತೆ. ಹುಟ್ಟುತ್ತಲೇ ಕುದುರೆಯ ಹಾಗೆ ಕೆನೆದ. ಆ ಕಾರಣ, ಅಶರೀರವಾಣಿಯ ಆದೇಶದಂತೆ ಅವನಿಗೆ ಅಶ್ವತ್ಥಾಮ ಎಂದು ಹೆಸರಿಟ್ಟರು. ಮುಂದೆ ತಂದೆಯಲ್ಲಿ ಬಿಲ್ಲುಗಾರಿಕೆ ಕಲಿತ. ಆದರೆ ಅಲ್ಲಿಂದ ಉದ್ದಕ್ಕೂ ಸೋಲಿನ ಕತೆ ಆತನದು. ತನ್ನನ್ನು ಯಃಕಶ್ಚಿತನಾಗಿ ಕಂಡು ಹೀಗಳೆದರೂ ದುರ್ಯೋಧನನ ಬಗೆಗೆ ಆತನಿಗೆ ತೀರದಂಥ ಅನುಕಂಪ. ತನ್ನ ಪ್ರಭು, ಭೀಮಸೇನನಿಂದ ಪರಾಭವ ಗೊಂಡು ತೊಡೆಮುರಿದು ಕೀರಿಟಭಗ್ನನಾಗಿ ತಡೆಯಲಾರದಂಥ ದೈಹಿಕ ಮಾನಸಿಕ ಯಾತನೆಯಲ್ಲಿ ಬೇಯುತ್ತ ರಕ್ತದ ಮಡುವಿನಲ್ಲಿ ಕನವರಿಸುತ್ತ ಇದ್ದುದನ್ನು ಕಂಡು ಕನಿಕರವುಕ್ಕಿದ ಅಶ್ವತ್ಥಾಮ, ಪಾಂಡವರನ್ನು ತರಿದೊಟ್ಟಿ ಬರುವುದಾಗಿ ಪಣತೊಟ್ಟು, ಮಾತುಕೊಟ್ಟು ಸೇನಾಧಿಪತ್ಯವನ್ನು ಪಡೆದ. ಮಾರ್ಗಮಧ್ಯದಲ್ಲಿ, ಆ ರಾತ್ರಿ ನಿದ್ರೆ ಮಾಡುತ್ತಿದ್ದ ಅನೇಕ ಕಾಗೆಗಳನ್ನು ಗೂಬೆಯೊಂದು ಕಡಿದು ಕೊಂದುದನ್ನು ಕಂಡು ಉತ್ತೇಜನಗೊಂಡ. ಕೃಪ ಕೃತವರ್ಮರು ಬೇಡಬೇಡವೆಂದು ಅಡ್ಡನಿಂತರೂ ತಳ್ಳಿ ಕೊಂಡು ಧರ್ಮ-ಅಧರ್ಮ ಎಂಬುದನ್ನು ಗಣಿಸದೆ ನಡುರಾತ್ರಿಯಲ್ಲಿ ಪಾಂಡವ ಪಾಳೆಯಕ್ಕೆ ನುಗ್ಗಿ, ಧೃಷ್ಟದ್ಯುಮ್ನ, ಶಿಖಂಡಿ ಹಾಗೂ ಎಳೆವಯಸ್ಸಿನ ಉಪ ಪಾಂಡವರನ್ನು ಕಡಿದು ಕೆಡಹಿ ಉನ್ಮತ್ತನಾಗಿ ವಿಜೃಂಭಿಸಿದ. ಕೃಷ್ಣನ ನೆರವಿನಿಂದ ಆತನ ಸುಳಿವು ಹಿಡಿದು ಭೀಮಾರ್ಜುನರು ಮೇಲೆರಗಿ ಬಂದಾಗ, ಶತ್ರುವನ್ನೂ ತನ್ನನ್ನೂ ಒಳಗೊಂಡು ಮೂರು ಲೋಕಗಳನ್ನೇ ದಹಿಸಿಬಿಡುವ ಕಸುವುಳ್ಳ ಐಷಿಕಾಸ್ತ್ರವನ್ನು (ವಿ.ಸೀ. ಇದನ್ನು ಇಂದಿನ ಅಣ್ವಸ್ತ್ರ—ಜಲಜನಕ ಸ್ಫೋಟಗಳೆಂದೇ ಕರೆದಿದ್ದಾರೆ) ಹೂಡಿಬಿಟ್ಟ. ಕೃಷ್ಣನ ಆದೇಶದಂತೆ ಅದನ್ನೆದುರಿಸಲು ಅರ್ಜುನ ಗಾಂಡೀವಕ್ಕೆ ಬ್ರಹ್ಮಾಸ್ತ್ರ

ವನ್ನು ತೊಡಿಸುವಲ್ಲಿ ಅಲ್ಲಿಗೆ ಬಂದ ವ್ಯಾಸ, ನಾರದರು ಏನೆಷ್ಟು ತಿಳಿಯ ಹೇಳಿದರೂ ಕೇಳದ ಅಶ್ವತ್ಥಾಮ ತನ್ನ ಮಹಾಸ್ತ್ರವನ್ನು ಉಪಸಂಹರಿಸಲಾಗದೆ, ಆದರಿಂದ ಉತ್ತರೆಯ ಗರ್ಭವನ್ನು ಸುಟ್ಟು ಭಸ್ಮಮಾಡುವುದಾಗಿ ಸಡ್ಡು ಹೊಡೆದು ನಿಂತಾಗ, ಕೆರಳಿದ ಕೃಷ್ಣ, ತಾಯ ಹರಕೆ ಹಾಗೂ ದೈವಾನುಗ್ರಹದ ಫಲವಾಗಿ ಆತನ ಹಣೆಯಲ್ಲಿದ್ದ ಮಣಿಯನ್ನು ಭೀಮನಿಂದ ಪರಚಿ ಕೀಳಿಸಿದ್ದಲ್ಲದೆ, "ಮೂರು ಸಾವಿರ ವರ್ಷಗಳ ಕಾಲ ಕಾಡು ಮೇಡುಗಳಲ್ಲಿ ಜನರಿಂದ ದೂಷ್ಯನಾಗಿ, ಎಲ್ಲ ನೆನಪುಗಳೂ ಅಳಿಸಿಹೋಗಿ ತಲೆಯ ರಕ್ತ ಹರಿಯುತ್ತಲೇ ಇರಲು ನಿಂತಲ್ಲಿ ನಿಲ್ಲದೆ ಅಲೆಯುತ್ತಿರು ಹೋಗು" ಎಂದು ಅತಿ ಘೋರವಾದ ಶಾಪವನ್ನು ಕೊಟ್ಟು, ತನ್ನ ತಪಸ್ಸಿನ ಫಲವನ್ನು ಧಾರೆಯೆರೆದು ಉತ್ತರೆಯ ಗರ್ಭವನ್ನು ರಕ್ಷಿಸಿದ. ಇದು ನಾಟಕದ ಕತೆ. ಇದಿಷ್ಟನ್ನೂ ಒಳಗೊಳಿಸಿ ಅಚ್ಚುಕಟ್ಟಾಗಿ ನಾಟಕದ ಕಟ್ಟಡದಲ್ಲಿ ವಿ.ಸೀ. ಹೊಂದಿಸಿದ್ದಾರೆ.

ನಾಟಕವನ್ನು ರಚಿಸಿದ ಕಾರಣವನ್ನು ಹೀಗೆ ಹೇಳಿದ್ದಾರೆ: "ಕೃಷ್ಣನ ಕೋಪವನ್ನು ಹೊತ್ತಿಸಿ, ಮೂರು ಸಾವಿರ ವರ್ಷಗಳ ಕಾಲ ಅನುಭವಿಸಬೇಕಾದ ಶಾಪವನ್ನು ಹೊತ್ತ ಅಶ್ವತ್ಥಾಮನ ಗತಿಯನ್ನು ಕಂಡು ಕನಿಕರಪಟ್ಟು ನಾನಂತೂ ಭಯದಿಂದ ನಡುಗಿದ್ದೇನೆ. ಹಾಗೆಯೇ ಅದನ್ನು ನೋಡುತ್ತ ನೋಡುತ್ತ ಯಾವ ದೇವರ ದಯೆಯಿಂದಲಾದರೂ ಮಾನವನ ಮನೋದೌರ್ಬಲ್ಯಗಳು ಅವನನ್ನು ಮುಳುಗಿಸದಂತೆ ಅವನ ಬದುಕು ನೇರವಾಗಿ ಮಂಗಳಕ್ಕೆ ತಿರುಗಲಿ ಎಂದು ಬಯಸಿದ್ದೇನೆ. ಯಾರು ಎಷ್ಟು ಬಯಸಿದರೆ ಏನು? ಸಾತ್ವಿಕಕ್ಕೆ ತಿರುಗಬೇಕಾದ ಪ್ರವೃತ್ತಿಗಳೆಲ್ಲ ರಾಗದ್ವೇಷಗಳ ದಾಳಿಯಲ್ಲಿ ತಾಮಸಕ್ಕೆ ಸೆಳೆಯುವುವು. ಬುದ್ಧಿಯ ಹದ ಕೆಡುವುದು. ದುರ್ಬಲ ಮನುಷ್ಯನ ಆತ್ಮನಾಶ ಆಗುತ್ತಲೇ ಇರುವುದು. ಇಂತಹ ದೃಶ್ಯವೊಂದು ಈ ನಾಟಕದಲ್ಲಿ ಕಣ್ಣಿಗೆ ಕಾಣಿಸಬಹುದೆಂದು ನನ್ನ ನಂಬಿಕೆ."

ಶ್ರೀಯವರ ದುರಂತ ನಾಟಕ 'ಅಶ್ವತ್ಥಾಮನ್', ಸೊಫೊಕ್ಲಿಸನ 'ಆಯಾಸ್' ಗ್ರೀಕ್ ರುದ್ರನಾಟಕವನ್ನು ಅನುಸರಿಸಿ ರಚನೆಗೊಂಡದ್ದು. ಇದಕ್ಕೆ ಮೇಳವನ್ನೊಳಗೊಂಡು ಗ್ರೀಸಿನ ದುರಂತ ನಾಟಕಗಳ ಮೇಲು ಹೊದಿಕೆ. ಒಳಗಿನ ಹೂರಣ, ಗದಾ ಸೌಪ್ತಿಕ ಪರ್ವದಲ್ಲಿನ ಕಥಾದ್ರವ್ಯ. ಶ್ರೀಯವರ ಅಶ್ವತ್ಥಾಮನ್ ಗ್ರೀಕ್ ನಾಟಕಗಳಲ್ಲಿನ ವೀರೋಚಿತ ರೀತಿಯಲ್ಲಿ ತನ್ನ ಖಡ್ಗದ ಮೇಲೆ ತಾನೇ ಬಿದ್ದು ಮಡಿಯುತ್ತಾನೆ. ವಿ.ಸೀ.ಯವರ ಅಶ್ವತ್ಥಾಮ ಬೇರೆಯೇ. "ನನ್ನ ಅಶ್ವತ್ಥಾಮ ಶ್ರೀಯವರ ಅಶ್ವತ್ಥಾಮನಿಗಿಂತ ಬಹುಕೀಳ. ಆಗ್ರಹ ಅಶ್ವತ್ಥಾಮನ ಆಗ್ರಹವಲ್ಲ. ಸಂಯಮವಿಲ್ಲದೆ ಕೆಡುಕನ್ನೇ ಮಾಡಲು ಹೊರಟ ಮೂರ್ಖ ಅಶ್ವತ್ಥಾಮನ ಮೇಲೆ ಕೃಷ್ಣನ ಆಗ್ರಹ".

ನಾಟಕದ ಹತ್ತನೆಯ ನೋಟ ಕೃತಿಯ ಕಿರೀಟ. ಮೊದಲ ಎರಡು ನೋಟಗಳು ನಾಟಕದ ಕ್ರಿಯೆಗೆ ಹಿನ್ನೆಲೆ ಕಲ್ಪಿಸುತ್ತವೆ. ನಾಲ್ಕನೆಯ ನೋಟದಲ್ಲಿ ಧೃತರಾಷ್ಟ್ರ ಗಾಂಧಾರಿಯರ ಒಲವನ್ನು ಗೆಲ್ಲುವ ನೆಲೆಯನ್ನು ನಿರ್ಮಿಸುತ್ತದೆ. ಇದನ್ನು ಬಿಟ್ಟು

ಕೊಟ್ಟಿದ್ದರೂ ನಾಟಕಕ್ಕೆ ಅಂಥ ನಷ್ಟ ಆಗುತ್ತಿರಲಿಲ್ಲವೇನೊ. ಐದನೆಯ ನೋಟದಿಂದ ಮಾತ್ರ ನಾಟಕದ ಕ್ರಿಯೆ ನಿಟ್ಟೋಟದಲ್ಲಿ ಧಾವಿಸಿ ಅಶ್ವತ್ಥಾಮನನ್ನು ಮಹಾದುರಂತಕ್ಕೆ ಅಟ್ಟಿ ನೂಕುತ್ತದೆ. ಈ ಐದೂ ನೋಟಗಳಲ್ಲಿನ ಮಾತಿನ ಬಂಧ ಬಲು ಬಿಗಿ. ಯಾವ ಮಾತನ್ನೂ ತೆಗೆಯಲುಬಾರದು : ಸೇರಿಸಲು ಸಾಧ್ಯವಿಲ್ಲ. ವಿ.ಸೀ. ನಾಟಕಗಳ ಜೀವಗುಣ ಇದು. ಬರೆದ ಮಾತಿಗೆ ನಟನನ್ನು ಕಟ್ಟಿ ಬಂಧಿಸುವ ಗುಣ. ಬೇಡವೆನಿಸಿದುದನ್ನು ಬಿಟ್ಟು ಬೇಕೆನಿಸಿದುದನ್ನು ಸೇರಿಸುವ ಸ್ವಾತಂತ್ರ್ಯ ಇಲ್ಲಿ ನಟನಿಗೆ ಸಿಕ್ಕುವುದಿಲ್ಲ. ಪ್ರದರ್ಶನದಲ್ಲಿ ಆತನ ಸಮಯ ಸ್ಫೂರ್ತಿಗೆ ಎಡೆಯೇ ಇಲ್ಲ.

ಈ ನಾಟಕವನ್ನು ಪ್ರದರ್ಶಿಸುವ ಮೊದಲ ಪ್ರಯತ್ನ 1933ರಲ್ಲಿಯೇ ನಡೆಯಿತೆಂದು ವಿ.ಸೀ. ಬರೆದಿದ್ದಾರೆ. ಅಮೆರಿಕೆಯ ನೀಲ ನಾಗಿಣಿದೇವಿ ಪ್ರದರ್ಶನ ತಂತ್ರಗಳ ಹೊಣೆ ಹೊತ್ತಿದ್ದರಂತೆ. ಅದನ್ನು ನವೀನವಾಗಿಸಬೇಕೆಂದು ಆಕೆ ಶ್ರಮಪಟ್ಟಿದ್ದರು. ಸೆಂಟ್ರಲ್ ಕಾಲೇಜು ಯೂನಿಯನ್ನಿನ ಉತ್ಸವದ ಸಂದರ್ಭ. "ಗೆಳೆಯರು ಆಡಿದರು. ಆದರೆ ಸಮಯಕ್ಕೆ ಸರಿಯಾಗಿ ಬೇಕಾದಷ್ಟು ದೀಪಗಳು ಒದಗಲಿಲ್ಲ. ಒದಗಿದ ಒಂದೆರಡು ಸ್ಪಾಟ್ ಲೈಟ್ಸ್ ಎಂಬ ಬಗೆಯ ದೀವಿಗೆಯ ಬೆಳಕನ್ನು ಉದ್ದಿಷ್ಟರೀತಿ ಬಳಸಲು ಸಾಕಷ್ಟು ಅಭ್ಯಾಸ ಅನುಭವ ಇಲ್ಲವಾಯಿತು. ನಾಟಕ ಕೆಟ್ಟುಹೋಯಿತು...ಇದ್ದುದರಲ್ಲಿ ಬೆಡಗು ತೋರಿಸಬಹುದೆಂದು ಮಾಡಿದ ಪ್ರಯತ್ನ ಪ್ರೇಕ್ಷಕರ ಸಹಜವಾದ ಅಸಹನೆಯಿಂದ ಮುರಿದುಬಿತ್ತು..." ಕನ್ನಡರಂಗದಲ್ಲಿ ಅಂದಿನಿಂದ ಇಂದಿನವರೆಗೆ ಬೇರೆಬೇರೆ ಕಾರಣಗಳಿಂದಾಗಿ ಪ್ರೇಕ್ಷಕರ ಅಸಹನೆ ಬೆಳೆಯುತ್ತ ಬಂದಿದೆ. ಅದನ್ನು ಕಡೆಗಣಿಸಲು ಬಾರದು ನಿಜ. ಆದರೆ ಅಂಥ ಅಸಹನೆಯ ಕಾರಣ ಕನ್ನಡರಂಗದ ಅನೇಕ ಪರೀಕ್ಷಾ ಪ್ರಯತ್ನಗಳು ಸೋತದ್ದು ಶೋಚನೀಯ.

"ಅಗ್ರಹ" ಸತ್ವಯುಕ್ತವಾದ ನಾಟಕ. ತುಂಬು ಜೀವದ ಲವಲವಿಕೆಯಿಂದ ಪುಟಿಯುವ ಅಲ್ಲಿನ ಸಂಭಾಷಣೆ, ಇಂದಿಗೂ ನಾಟಕವಾಚನದಲ್ಲಿ ರಂಗದ ಸಂಕುಚಿತತೆಗಳನ್ನು ಮುರಿದು, ಶ್ರೋತೃವಿನ ಮನೋರಂಗದಲ್ಲಿ ಮಹತ್ತಾದ ದೃಶ್ಯಗಳನ್ನು ರಚಿಸಿ ಬೆಳೆಯಿಸಬಲ್ಲುದು. ಈ ದೃಷ್ಟಿಯಿಂದ 'ಅಗ್ರಹ' ತುಂಬ ಪ್ರಭಾವಶಾಲಿಯಾದ ಪ್ರಸಾರ ನಾಟಕವೂ ಹೌದು.

* *

ವಿ.ಸೀ.ಯವರು ಬೆಂಗಳೂರು ಆಕಾಶವಾಣಿಯಲ್ಲಿ ಸಾಹಿತ್ಯ ಕಾರ್ಯಕ್ರಮಗಳ ನಿರ್ಮಾಪಕರೆಂದು ಎರಡು ವರುಷ ದುಡಿದು ಆ ಪ್ರಕಾರದ ಕಾರ್ಯಕ್ರಮಕ್ಕೆ ಹಿರಿಮೆ ತಂದರಷ್ಟೆ. ಆ ಅವಧಿಯಲ್ಲಿ ಪ್ರಸಾರನಾಟಕದ ನಿಷ್ಕೃಷ್ಟ ಗುಣಗಳನ್ನೂ ರೇಡಿಯೋಗೆ ಮಾತ್ರ ಅಳವಡುವ ಕಥಾದ್ರವ್ಯ ಹಾಗೂ ಪ್ರಯೋಗ ತಂತ್ರಗಳನ್ನೂ ಕುರಿತು ವಿವೇಚಿಸಿದ ಫಲ ಎಂಬಂತೆ 1960ರಲ್ಲಿ ಅವರಿಂದ "ಶ್ರೀಶೈಲ ಶಿಖರ" ಎಂಬ ಶೀರ್ಷಿಕೆಯ ಅಪ್ಪಟ

ನಾಟಕ ರಚನೆಗೊಂಡಿತು. ನಾಟಕ ರಂಗದ ಎಲ್ಲೆಗಳನ್ನು ಎಲ್ಲ ನಿಟ್ಟಿನಿಂದಲೂ ಮುರಿದು ಮೇಲೆದ್ದ ಈ ಕೃತಿ 'ಪಾಪ ಪುಣ್ಯ' ಎಂಬ ಹೆಸರಿನಿಂದ ರಜತಪರದೆಯನ್ನು ಕಂಡದ್ದೂ ಉಂಟು. ಆದರೆ ಪ್ರಸಾರದಲ್ಲಿಯೇ ಅದರ ಫಲ. ಅದನ್ನು ಪ್ರಯೋಗಿಸಿದಾಗ ಬೆಂಗಳೂರು ನಿಲಯಕ್ಕೆ ಅದು ಕೋಡು ಮೂಡಿಸಿತು.

ನಾಟಕದ ಹರಹನ್ನು ಕವಿ ಕೆ.ಎಸ್.ನ. ಹೀಗೆ ಸಂಗ್ರಹಿಸಿದ್ದಾರೆ :

"ಒಂದನೆಯ ಅಂಕದಲ್ಲಿ ಶಿವಗೌರಿಯರು, ಶ್ರೀ ಶೈಲವನ್ನು ಸಂದರ್ಶಿಸುವ ನಿರ್ಧಾರವನ್ನು ಮಾಡುತ್ತಾರೆ. ಲೋಕದ ಜನರಿಗೆ ಮುಕ್ತಿ ಎಷ್ಟು ಸುಲಭವೆಂಬುದನ್ನು ಗೌರಿಗೆ ಕಾಣಿಸುವುದು ಶಿವನ ಉದ್ದೇಶ.

ಎರಡನೆಯ ಅಂಕದಲ್ಲಿ, ಶಿವಗೌರಿಯರು ಮುದುಕ ಮುದುಕಿಯರ ವೇಷ ಧರಿಸಿ, ಶಿವರಾತ್ರಿ ಉತ್ಸವಕ್ಕಾಗಿ ಶ್ರೀಶೈಲಕ್ಕೆ ಹೋಗುತ್ತಿರುವವರ ಗುಂಪಿನಲ್ಲಿ ಸೇರಿಕೊಳ್ಳುತ್ತಾರೆ. ತಾವು ಯಾರೆಂಬುದನ್ನರಿಯದ ಜನ ತಮ್ಮ ತಮ್ಮೊಳಗೆ ಆಡಿಕೊಳ್ಳುವ ಮಾತುಗಳನ್ನು ಇವರು ಕೇಳುತ್ತಾರೆ.

ಮೂರನೆಯ ಅಂಕದಲ್ಲಿ, ದೇವಸ್ಥಾನದ ಹತ್ತಿರದ ಪುಷ್ಕರಿಣಿಯಲ್ಲಿ ಪುಣ್ಯ ಸ್ನಾನಕ್ಕಾಗಿ ಅಸಾಧ್ಯ ಜನಸಂದಣಿ. ಈ ವೃದ್ಧ ದಂಪತಿಗಳೂ ಅಲ್ಲಿ ಸೇರಿದ್ದಾರೆ. ಸುತ್ತಲೂ ಜನ ಕನ್ನಡದಲ್ಲಿ ತೆಲುಗಿನಲ್ಲಿ ತಮಗೆ ತೋರಿದಂತೆ ಮಾತಾಡುತ್ತಿದ್ದಾರೆ. ಮುದುಕಿ ಸ್ನಾನಮಾಡಿ ಬಂದು ಮೆಟ್ಟಲ ಮೇಲೆ ಕುಳಿತಿದ್ದಾಳೆ. ಮುದುಕ ನೀರಿಗಿಳಿದಿದ್ದಾನೆ. ಮೆಟ್ಟಲು ಸವೆದಿದೆ ಎಂದು ಪಕ್ಕದವರು ಎಚ್ಚರಿಕೆ ಕೊಡುತ್ತಿದ್ದಾರೆ. ಇವರು ಯಾರು ಎಂದು ಜನ ಕೇಳುತ್ತಿದ್ದಾರೆ. ಮುದುಕಿ ಮಾತನಾಡುತ್ತಿದ್ದಾಳೆ. ಹೀಗಿರುವಲ್ಲಿ, ಈಜುತ್ತಿದ್ದ ಮುದುಕ ಕಾಲು ಸೋತು ಮುಳುಗಿ ಹೋಗುತ್ತಿರುವುದು ಕಾಣುತ್ತದೆ. 'ಅಯ್ಯೋ ! ಅವರನ್ನು ಉಳಿಸಿ' ಎಂದು ಮುದುಕಿ ಎಲ್ಲರನ್ನೂ ಕೇಳಿಕೊಳ್ಳುತ್ತಾಳೆ. ಪಾಪಲೇಪವಿದ್ದವರಿಗೆ ತನ್ನ ಗಂಡನ ಮೈ ಸಿಕ್ಕುವುದಿಲ್ಲವೆಂದೂ, ನೀರಿಗಿಳಿದು ಅವನನ್ನು ಉಳಿಸುವವರು ಮೊದಲು ತಾನು ಕೊಡುವ ಚಂದನವನ್ನು ಹಚ್ಚಿಕೊಳ್ಳಬೇಕೆಂದೂ, ಹಾಗೆ ಮಾಡದೆ ಮುಟ್ಟಬಾರದೆಂದೂ ಅವಳು ಎಲ್ಲರಿಗೂ ತಿಳಿಸುತ್ತಾಳೆ.

ಅಲ್ಲಿ ಸೇರಿದ್ದ ನರಸರೆಡ್ಡಿ, ವೀರಭದ್ರರಾವ್, ಶೇಷಶಾಸ್ತ್ರಿ ಚಂದನವನ್ನು ಸ್ವೀಕರಿಸಿ ಹಣೆಗಿಟ್ಟುಕೊಂಡು ನೀರಿಗಿಳಿಯುತ್ತಾರೆ. ಮುದುಕಿ ಕೂಗುತ್ತಲೇ ಇರುತ್ತಾಳೆ.

ಈ ಮಜಲಿನಲ್ಲಿ ೬ ಒಳದೃಶ್ಯಗಳು ಒಂದಾದ ಮೇಲೊಂದರಂತೆ ಬರುತ್ತವೆ ; ಅವುಗಳಲ್ಲಿ ಮೂರು ಪ್ರಸಂಗಗಳು ಬೆಳೆಯುತ್ತವೆ. ರೆಡ್ಡಿ, ರಾವ್, ಶಾಸ್ತ್ರಿ ಈ ಮೂವರೂ ಆ ವೃದ್ಧ ದಂಪತಿಗಳಲ್ಲಿ ಒಂದು ಅಲೌಕಿಕ ಪ್ರಭೆಯನ್ನು ಕಾಣುತ್ತಾರಾದರೂ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಪ್ರತಿಕ್ರಿಯೆ ತೋರಿಸುತ್ತಾರೆ... ನೀರಿಗಿಳಿಯದೆ ಮೂವರೂ ಕೊಟ್ಟಿರುವ ಅವರವರ ಉತ್ತರಗಳು, ಅವರವರ ನಡತೆಗೆ, ಸ್ವಭಾವಕ್ಕೆ ಅನುಸಾರವಾಗಿಯೇ ಇವೆ. ರೆಡ್ಡಿಯಲ್ಲಿ ಮಾನವತೆಯ ಸುಳಿವಿಲ್ಲ ; ರಾವು

ಸ್ವಾರ್ಥಿಯಾದರೂ ಅವನಲ್ಲಿ ಕಷ್ಟಕಾರ್ಪಣ್ಯ ಭೂಯಿಷ್ಠವಾದ ಮಾನವ ಸಂಪರ್ಕ ಸ್ವಲ್ಪವಾದರೂ ಇದೆ. ಶಾಸ್ತ್ರಿಯ ಮನಸ್ಸು ವಿಷಾದಪಟ್ಟಿದೆ ; ಪಶ್ಚಾತ್ತಾಪಕ್ಕೆ ತಿರುಗ ಬಲ್ಲದು, ಆದರೆ ಇನ್ನೂ ಚಂಚಲ.

ನಾಲ್ಕನೆಯ ಅಂಕದಲ್ಲಿ ಕರ್ನೂಲಿನ ಚೆಲುವೆ ಕಮಲಾಸಾನಿ ತನ್ನ ಸೇವಕ ಜೊತೆ ಗಾತಿಯರೊಂದಿಗೆ, ದೇವಸ್ಥಾನದಿಂದ ಪೂಜೆ ಮಾಡಿಸಿ, ತಂದ ಹೂ ಹಣ್ಣು ಕಾಯಿ ಗಳೊಂದಿಗೆ ಪ್ರವೇಶಿಸುತ್ತಾಳೆ. ಜನದ ಕುಹಕ, ಕೇಕೆ. ಅವಳನ್ನು ಕಂಡ ನರಸರೆಡ್ಡಿಯ ಕಣ್ಣಿಗೆ ಸಂತೋಷವಾಗದೆ ಏನಾದೀತು ! ಅವಳೊಂದಿಗೆ ಮಾತನಾಡುತ್ತ, ನೀರಿಗೆ ಬಿದ್ದ ಮುದುಕನ ವಿಷಯವನ್ನು ತಿಳಿಸಿ, ಮುದುಕಿ ಅಲ್ಲೇ ಇರುವುದನ್ನು ತೋರಿಸುತ್ತಾನೆ. 'ಬೇಕಾದರೆ ಹೋಗಿ ಆ ಮುದುಕನನ್ನು ಎಳೆದುಕೊಂಡು ಬಾ' ಎನ್ನುತ್ತಾನೆ. ಕಮಲ ಕುತೂಹಲದಿಂದ ಮುದುಕಿಯ ಬಳಿಗೆ ಹೋಗಿ ಮಾತಾಡಿಸಿ, ತಾನು ಕೀಳು ಹೆಣ್ಣೆಂದೂ, ಮುಟ್ಟುವ ಯೋಗ್ಯತೆ ತನಗಿಲ್ಲವಾದರೂ, ಅಪ್ಪಣೆಕೊಟ್ಟರೆ ತಾನು ಹೋಗಿ ಅವರನ್ನು ದಡಕ್ಕೆ ತರುವುದಾಗಿಯೂ ತಿಳಿಸುತ್ತಾಳೆ. ತಾನು ಮಾಡಿದ ಪಾಪವನ್ನು ಒಪ್ಪಿಕೊಂಡು, ತನ್ನ ಮನಸ್ಸು ಒಪ್ಪದಿದ್ದರೂ ಹೆರವರ ಬಲಾತ್ಕಾರಕ್ಕೆ ಮಣಿದು ತನ್ನ ಹೊಟ್ಟೆಪಾಡಿಗಾಗಿ ಹಾಗೆ ಮಾಡಿದ್ದಾಯ್ತೆಂದು ಹೃದಯವನ್ನು ಬಿಚ್ಚಿ ತೋರುತ್ತಾಳೆ. ಮುದುಕಿ "ಶಕ್ತಿ ಯಿದ್ದರೆ ಬೇಗ ಹೋಗಮ್ಮ...ಆದರೆ ತಾಳು, ಈ ಕುಂಕುಮ ಇಟ್ಟುಕೊಂಡು ಹೋಗು... ಇಲ್ಲದಿದ್ದರೆ ನೀನು ಅವರನ್ನು ಮುಟ್ಟಲಾರೆ. ಅವರು ಮುಳುಗಿ ಹೋಗುತ್ತಾರೆ" ಎನ್ನುತ್ತಾಳೆ. ಆ ಸಮಯದಲ್ಲಿ ಕಮಲ ಮುದುಕಿಯ ಕೊರಳಲ್ಲಿದ್ದ ಮುತ್ತಿನ ಸರವನ್ನು ಕಂಡು 'ಇದನ್ನು ಎಲ್ಲಿ ಮಾಡಿಸಿದಿರಿ, ತಾಯಿ' ಎನ್ನುತ್ತಾಳೆ. 'ಕಾಣುತ್ತೆಯೆ ನಿನಗೆ ಅದು ? ನೀನು ಪುಣ್ಯಶಾಲಿ,' ಎಂದು ಮುದುಕಿಯ ಉತ್ತರ. ಬಳಿಕ ಧೀರೆ ಕಮಲ "ಇದು ಶಿವ ಕಾರ್ಯ ; ಶಿವ ನಡೆಸಿಕೊಡಲಿ" ಎಂದು ನೀರಿಗೆ ಕೈಮುಗಿದು ನೀರಿಗೆ ಧುಮುಕುತ್ತಾಳೆ. ಮೆಟ್ಟಲ ಮೇಲೆ ನಿಂತಿದ್ದ ಜನ ಬೆರಗಾಗಿ ನೋಡುತ್ತಿದ್ದಂತೆ, ಮುದುಕನನ್ನು ಎಳೆದುಕೊಂಡು ಬಂದು ಘಟ್ಟವನ್ನು ಸೇರುತ್ತಾಳೆ.

ಮುದುಕಿ ಮುದುಕನಿಗೆ ಕಮಲಳ ಪರಿಚಯವನ್ನು ಮಾಡಿಕೊಡುತ್ತಾಳೆ. ಮುದುಕ "ನೀನು ಪುಣ್ಯಾತ್ಮಳು ಕಮಲಮ್ಮ" ಎನ್ನುತ್ತಾನೆ. ರಾವೂ, ರೆಡ್ಡಿಯೂ 'ಇವಳು ಮಾಡದ ಪಾಪವೇ ಇಲ್ಲ' ಎಂದು ಮುಂದೆ ನುಗ್ಗುತ್ತಾರೆ. ರಾವ್ ಕೇಳುತ್ತಾನೆ, "ತಮ್ಮನ್ನು ಮುಟ್ಟುವ ಧೈರ್ಯ ಇವಳಿಗೆ ಹೇಗೆ ಬಂತು ?" ಎಂದು. ಶಾಸ್ತ್ರಿಯೋ ತಾವು ಹಿಮ್ಮೆಟ್ಟಿದ್ದನ್ನು ಒಪ್ಪಿಕೊಳ್ಳುತ್ತಾನೆ. (ಇವರು ಮೂವರ ಇಲ್ಲಿನ ವರ್ತನೆಯಲ್ಲೂ ವ್ಯಂಗ್ಯ, ಸಂಶಯ, ಅರೆಮನಸ್ಸಿನ ನಂಬಿಕೆಗಳ ಮೂರು ಮೆಟ್ಟಲುಗಳಿವೆ.) ಮುದುಕ ಇವರ ಅಸಭ್ಯತೆ ಮುಂಬರಿಯದಂತೆ ಕಣ್ಣಿಂದಲೇ ತಡೆಯುತ್ತಾನೆ. ಆಮೇಲೆ ಹಂತ ಹಂತವಾಗಿ ಕಮಲಾಸಾನಿಯ ಶುದ್ಧಾಂತಃಕರಣವೂ, ಅವಳ ಆತ್ಮದ ಪವಿತ್ರತೆಯೂ ಸ್ಫುಟಗೊಳ್ಳುತ್ತವೆ. ಮುದುಕಿಯ ಕೊರಳ ಮುತ್ತಿನ ಸರದಲ್ಲಿ ನೀನು ಕಂಡದ್ದೇನು

ಎಂದು ಮುದುಕ ಕೇಳಿದ್ದಕ್ಕೆ ಕಮಲ "ಒಂದೊಂದರಲ್ಲೂ ಶಿವನನ್ನು ಕಂಡಂತಾಯಿತು, ತಂದೆ" ಎನ್ನುತ್ತಾಳೆ. ಎಲ್ಲರಿಗೂ ಮೊದಲು ಈ ಮುದುಕ ಮುದುಕಿಯರೆ ಶಿವ ಗೌರಿಯರೆನ್ನುವುದು ಆಕೆಗೆ ತಿಳಿಯುತ್ತದೆ. ಅವರೊಂದಿಗೆ ಕೈಲಾಸಕ್ಕೆ ನಡೆದು ಹೋಗುತ್ತಾಳೆ. ದೊಡ್ಡ ಪವಾಡವನ್ನು ಕಂಡ ಜನ ಅವಳಿಗಲ್ಲೊಂದು ಸ್ಮಾರಕ ಏರ್ಪಡಿಸುತ್ತಾರೆ.

ರೆಡ್ಡಿ, ರಾವ್, ಶಾಸ್ತ್ರಿ ಈ ಮೂವರೂ ತಮ್ಮ ತಮ್ಮ ರೀತಿಯಲ್ಲಿ ದುಷ್ಟರು, ನಡತೆಗೆಟ್ಟವರು. ತಾವು ಮಾಡಿದ ಪಾಪವನ್ನು ಮುಚ್ಚಿಕೊಳ್ಳಲು ಯತ್ನಿಸುವವರು. ವೇಶ್ಯಾವೃತ್ತಿಗಿಳಿದ ಕಮಲಾಸಾನಿಯೂ ಪಾಪಮಾಡಿದವಳೇ ; ಆದರೆ 'ಇವರ ಪ್ರೋತ್ಸಾಹದಿಂದ ಜೀವನ ಮಾಡಿರುವವಳು ನಾನು. ಈ ಮೈ ಇವರ ಎಂಜಲು. ತಂದೆ, ಕೊಳೆ, ಹೇಸಿಗೆ ಮಾಡಿಕೊಂಡಿದ್ದೆ ಈವರೆಗೂ. ಇಂದು ಪರಿವರ್ತನೆ ಹೊಂದಿದ್ದೇನೆ. ಇನ್ನೆಂದೂ ಆ ಬದುಕಿಗೆ ಹಿಂತಿರುಗಿ ಹೋಗುವುದಿಲ್ಲ. ನಿಮ್ಮ ಅನುಗ್ರಹವೊಂದಿರಲಿ, ತಂದೆ' ಎಂದು ಶಿವನಲ್ಲಿ ತಪ್ಪೊಪ್ಪಿಕೊಂಡು ಶರಣಾಗುತ್ತಾಳೆ. 'ನೀವಿಟ್ಟಲ್ಲಿ ಕೈಲಾಸ ನನಗೆ' ಎನ್ನುವ ದೃಢಭಕ್ತಿ ಅವಳದು. ಆದ್ದರಿಂದ ಅವಳಿಗೆ–ಲಕ್ಷದಲ್ಲಿ ಒಂದು ಜೀವಕ್ಕೆ–ಮುಕ್ತಿ ಲಭಿಸಿತು, ಶ್ರೀಶೈಲ ಶಿಖರದ ದರ್ಶನವಾಯಿತು.

ಮುದುಕಿ ಆ ಮೂವರಿಗೂ ನೀರಿಗಿಳಿಯುವ ಮುನ್ನ ಚಂದನವನ್ನೇಕೆ ಕೊಟ್ಟಳು ?—ಕಮಲಾಸಾನಿಗೆ ಅದರ ಬದಲು ಕುಂಕುಮವನ್ನೇಕೆ ಕೊಟ್ಟಳು? ನಾಟಕದ ಮುಗಿವಿನ ಹೊತ್ತಿಗೆ ತಿಳಿಯುತ್ತದೆ. ಚಂದನ ಮೈ ಸೋಕಿದರೆ ಅವರವರ ಪಾಪಗಳ ನೆನಪುಗಳು ಮರುಕಳಿಸುವುವಂತೆ, ಕರ್ಮಸ್ಮೃತಿ ಬರುವುದಂತೆ; ನೀರಿಗಿಳಿದು ಹಿಮ್ಮೆಟ್ಟಿದ ಆ ಮೂವರೂ ಚಂದನವನ್ನು ಲೇಪಿಸಿಕೊಂಡೊಡನೆಯೆ ಅದರ ಪ್ರಭಾವಕ್ಕೊಳಗಾಗುತ್ತಾರೆ. ಒಳ ದೃಶ್ಯಗಳು ತೆರೆಯುತ್ತವೆ ; ತಾವು ಮಾಡಿದ ಕರ್ಮವನ್ನು ಕಾಣುತ್ತಾರೆ. ಮುದುಕಿ ಅದನ್ನು ಕೊಡದೆ ಕಮಲಳಿಗೆ ಕುಂಕುಮವನ್ನು ಕೊಡುತ್ತಾಳೆ—ತಾಯಿ ಮಗಳಿಗೆ ಕುಂಕುಮವನ್ನು ಕೊಟ್ಟಂತೆ. ಇದಕ್ಕೆ ಕಾರಣ : ಮುದುಕಿಯ ವೇಷದಲ್ಲಿದ್ದ ಲೋಕಜನನಿಗೆ 'ಕಮಲಾಸಾನಿ, ಹಿಂದೆ ಪಾಪದಲ್ಲಿ ಭಾಗಿಯಾಗಿದ್ದರೂ ಈಗ ಪರಿಶುದ್ಧಳು, ದೃಢ ಭಕ್ತಿಯುಳ್ಳವಳು' ಎಂಬುದು ಆ ಹೊತ್ತಿಗಾಗಲೆ ತಿಳಿದು ಹೋಗಿರುವುದು. ಪಶ್ಚಾತ್ತಾಪದಿಂದ ಪರಿಶುದ್ಧಳಾದ ಕಮಲಳ ಕಣ್ಣಿಗೆ ಮಾತ್ರ ಮುದುಕಿಯು ಕೊರಳಿನಲ್ಲಿದ್ದ ಏಕಾವಳಿ (ಮುತ್ತಿನಸರ) ಕಾಣಿಸುವುದೂ, ಅಲ್ಲಿನ ಒಂದೊಂದು ಮುತ್ತಿನಲ್ಲೂ ಶಿವನೇ ಹೊಳೆಯುತ್ತಿರುವಂತೆ ಅವಳಿಗೆ ಭಾಸವಾಗುವುದೂ ಸಮರ್ಥನೀಯವಾದುದು. ಹೇಗಿದ್ದವಳು ಯಾವ ಬೆಲೆಗೇರಿದಳು ಎನ್ನುವುದನ್ನು ತೋರಿಸುವುದೇ ಈ ನಾಟಕದ ಉದ್ದೇಶ".

ನಾಟಕದೊಳಗಿನ ಮೂರು ಪಾತ್ರಗಳ ಮನೋರಂಗದ flash-back ದೃಶ್ಯಗಳು, ಪುಷ್ಕರಣಿಯ ಸ್ನಾನಕ್ಕಾಗಿ ನೆರೆದ ಜನಸಮ್ಮರ್ದದ ಹತ್ತು ಹಲವು ಧ್ವನಿ ವಿಶೇಷಗಳು,

ಅವುಗಳ ಮೇಲೆದ್ದು ಕೇಳಿಸುವ ಮುದುಕನ ಉಮ್ಮಳ, ಏದು, ಕೆಮ್ಮು, ದೇವರ ಮಂಗಳವಾದ್ಯದ ಮೆರೆವಣಿಗೆಯ ಧ್ವನಿವಿಶೇಷ ಇವು ನಿಷ್ಕೃಷ್ಟ ಪ್ರಸಾರ ನಾಟಕದ ಗುಣ ; ನೋಟಕ್ಕಿಂತ ಕೇಳ್ಮೆಯಲ್ಲಿ ಫಲಕೊಡುವ ಗುಣ. ರಂಗದ ಸಾಧ್ಯತೆಗಳನ್ನು ಮೀರಿದ ಕೃತಿ 'ಶ್ರೀ ಶೈಲ ಶಿಖರ'.

* *

ವಿ.ಸೀ.ಯವರ ಮುಂದಿನ ಎರಡು ನಾಟಕಗಳು ಸ್ವತಂತ್ರಕೃತಿಗಳಲ್ಲ ನಿಜ. ಆದರೆ ಅವು ಸ್ವತಂತ್ರಕೃತಿಗಳಿಗೆ ಕಡಿಮೆಯವಲ್ಲ. ಬರ್ನಾರ್ಡ್ ಷಾ ಅವರ 'ಪಿಗ್‌ಮೇಲಿಯನ್' ಮತ್ತು 'ಮೇಜರ್ ಬಾರ್ಬರ' ಎಂಬ ಜಗತ್ಪ್ರಸಿದ್ಧ ರಂಗನಾಟಕಗಳ ಕನ್ನಡ ರೂಪಾಂತರಗಳು. ಈ ಎರಡೂ ನಾಟಕಗಳಿಗೆ ವಿ.ಸೀ. ಬರೆದ ದೀರ್ಘವಾದ ಮುನ್ನುಡಿಗಳ ಬೆಲೆ ದೊಡ್ಡದು.

'ಪಿಗ್‌ಮೇಲಿಯನ್' ಷಾ ಅವರಿಗೆ ಅಪಾರವಾದ ಕೀರ್ತಿ ತಂದ ನಾಟಕ. ಅದನ್ನು ಆಧರಿಸಿದ ಎರಡು ಮೂರು ರಂಗ, ರೇಡಿಯೋ ಹಾಗೂ ಟೆಲಿವಿಷನ್ ರೂಪಗಳೂ, ಅದನ್ನು ಅವಲಂಬಿಸಿ ರಚನೆಗೊಂಡ 'ಮೈ ಫೇರ್ ಲೇಡಿ' ಎಂಬ ಗೀತನಾಟಕ ಹಾಗೂ ಚಲನಚಿತ್ರಗಳೂ ಜಗತ್ತಿನ ಜನಮನವನ್ನು ಗೆದ್ದುಕೊಂಡವು. ಈಗ ಅದರ ಕತೆ ಎಲ್ಲರಿಗೂ ಪರಿಚಯವಾದದ್ದು. ತುಂಬ ಚೆಲುವೆಯಾದ 'ಕಾಡುಹುಡುಗಿ'ಯೊಬ್ಬಳನ್ನು ಮಾತು, ರೀತಿ, ನಯ, ನಾಜೂಕುಗಳಲ್ಲಿ ಅತ್ಯಂತ ನಾಗರಿಕಳೆನಿಸಿಕೊಳ್ಳಬಲ್ಲ 'ನಾಡ ಹುಡುಗಿ'ಯನ್ನಾಗಿ ಪರಿವರ್ತಿಸಲು ಪಂಥ ಕಟ್ಟಿದ ಭಾಷಾವಿದ್ವಾಂಸ; ತನ್ನ ತಾಳ್ಮೆ ವಿಶ್ವಾಸಗಳಿಂದಾಗಿ ಗೆದ್ದು ಕಡೆಗೆ ತಾನು ನೇಯ್ದ ಬಲೆಯೊಳಗೆ ತಾನೇ ಸಿಕ್ಕಿಕೊಂಡು, ಅಂತೂ ಆಕೆಯ 'ದಯೆ'ಯಿಂದ ಬಿಡಿಸಿಕೊಂಡ ಮನಮೋಹಕ ಕಥಾದ್ರವ್ಯದ ನಾಟಕ. ಹುಟ್ಟಿಗಿಂತ ಶಿಕ್ಷಣ ದೊಡ್ಡದು ಎಂಬ ತತ್ತ್ವದ ಪ್ರತಿಪಾದನೆ ಇಲ್ಲಿದೆ. ಇದರ ರಂಗರಚನೆಯಲ್ಲಿ ಷಾ ತಮ್ಮ ಕಲೆಯನ್ನೆಲ್ಲ ಧಾರೆಯೆರೆದಿದ್ದಾರೆ. ಈ ಶತಮಾನದ ಅತ್ಯಂತ ಪ್ರತಿಭಾನ್ವಿತ ನಾಟಕಕಾರರಲ್ಲಿ ಒಬ್ಬರಾದ ಷಾ ಅವರ ರಂಗಕೃತಿಗಳು ಕನ್ನಡಕ್ಕೆ ಇಳಿದು ಬರಬೇಕೆಂಬುದು ವಿ.ಸೀ.ಯವರ ಹಂಬಲ. ಜಗತ್ತಿನ ಬೇರೆಬೇರೆ ರಂಗಭೂಮಿಗಳಲ್ಲಿ ಏನೆಂಥ ನಾಟಕ, ಏನೆಂಥ ಪ್ರದರ್ಶನಗಳು ಬೆಳೆದುಬಂದಿವೆ ಎಂಬುದು ನಮ್ಮ ಜನಕ್ಕೂ ತಿಳಿಯಬೇಕು ; ನಮ್ಮ ನಾಟಕಕಾರರು ಜಗದ್ರಂಗದಲ್ಲಿ ನಡೆಯುತ್ತಿರುವ ಬದಲಾವಣೆಗಳನ್ನು ಗಮನಿಸಿ, ಸ್ಫೂರ್ತಿಗೊಂಡು ಹೊಸರೀತಿಯ ಕೃತಿಗಳನ್ನು ರಚಿಸಬೇಕು ಎಂಬುದು ಅವರ ಆಸೆ. ಅವರು ಈ ಆಸೆಗೆ ನಾಟಕದ ಮುನ್ನುಡಿಯಲ್ಲಿ ಮಾತು ಕೊಟ್ಟಿದ್ದಾರೆ. "ನಲವತ್ತಕ್ಕೂ ಹೆಚ್ಚು ನಾಟಕಗಳನ್ನು ಬರೆದು ಕೀರ್ತಿಪಡೆದವರು ಷಾ. 'ಅವನ್ನು ಆಡುವುದು ಅಶಕ್ಯ, ಅಷ್ಟು ಮಾತನಾಡಬೇಕಾದರೆ ನಟರು ಸತ್ತುಹೋಗುತ್ತಾರೆ, ಪ್ರೇಕ್ಷಕ ವರ್ಗವೂ ಬೇಸತ್ತು ಹೋಗುತ್ತದೆ ಖಂಡಿತ' ಎಂದು ಪ್ರತಿಜ್ಞೆ ಮಾಡುತ್ತಿದ್ದ

ವಿಮರ್ಶಕರ ನಿರೀಕ್ಷೆ ಪ್ರತಿಸಲವೂ ಮುರಿದು ಬಿದ್ದು ಆ ನಾಟಕಗಳು ಎಲ್ಲೆಲ್ಲಿಯೂ ಜನಪ್ರಿಯವಾದವು. ಷಾ ನಾಟಕದಲ್ಲಿ ಕಾಣಿಸುವ ಮನೋವಿಲಾಸದ ಜೊತೆಗೆ ಅಲ್ಲಿನ ಹಾಸ್ಯಗರ್ಭ ಅದ್ಭುತವಾದದ್ದು. ಅವರ ನಗೆಯ ಬಗೆ ಅವರಿಗೇ ವಿಶಿಷ್ಟ...ಇಷ್ಟು ಕೀರ್ತಿ ಇರುವ ಒಂದು ನಾಟಕವೂ ಕನ್ನಡಕ್ಕೆ ಬಂದಿಲ್ಲ...ಆತನನ್ನು ಮುಟ್ಟುವ ಧಾರ್ಷ್ಟ್ಯ ಅವಿವೇಕಿಯ ಸಾಹಸ. ಅಂತಹ ಅವಿವೇಕ ಸಾಹಸವೊಂದನ್ನು ನಾನು ಈ ಭಾಷಾಂತರದಲ್ಲಿ ಮಾಡಿದ್ದೇನೆ. ಮೂಲದ ಜೀವಗುಣವನ್ನೂ ಅರ್ಥವನ್ನೂ ಕನ್ನಡಕ್ಕೆ ಪೂರ್ತಿ ತರುವುದು ಶಕ್ಯವಾಗಿಲ್ಲ. ಆನೆ ನಡೆದು ಹೋದ ಜಾಡು ಇದು ಎಂದು ಕಾಣಿಸಲು ಅದು ನೆರವಾಗುವುದಾದರೆ ನಾನು ಕೃತಾರ್ಥ." ವಿ.ಸೀ. ನಮ್ರತೆಯ ಈ ಮಾತು ಅವರ ಕನ್ನಡ ಕೃತಿಗೆ ಸ್ವಲ್ಪ ಅಪಚಾರವನ್ನೇ ಮಾಡುತ್ತದೋ ಏನೋ. ಮೂಲವನ್ನು ಮುಕ್ಕು ಮಾಡುವಂತಹ ಯಾವ ಚಿಕಿತ್ಸೆಯನ್ನೂ ವಿ.ಸೀ. ಮಾಡಿಲ್ಲ ಎಂಬುದು, ಮೂಲವನ್ನೂ ಕನ್ನಡ ರೂಪವನ್ನೂ ಹಿಡಿದು ತಾಳೆ ನೋಡಿದವರಿಗೆ ವೇದ್ಯವಾಗುತ್ತದೆ. ಒಂದು ಮಾತು ನಿಜ. ಕೈಲಾಸಂ ಅಥವ ರಾಜರತ್ನಂ ಅವರಂತೆ ಕಾಡುಹುಟ್ಟುಗಳ ಆಡುಮಾತಿನ ಒರಟು ವೈಭವವನ್ನು ವಿ.ಸೀ. ಮೈಯುಣಿಸಿ ಕೊಂಡವರಲ್ಲ. ಅದರಿಂದಾಗಿ ನಾಟಕದಲ್ಲಿನ ಹೂವಿನ ಹುಡುಗಿಯ ಆಡುಮಾತು, ದೇವರಾಜ ಮಾರ್ಕೆಟ್ಟಿನಲ್ಲಿ ವಿಳ್ಯೇದೆಲೆ ಮಾರುವ ರತ್ನಿಯ ಮಾತಿನಲ್ಲಿನ ಸೊಗಡನ್ನು ಕಳೆದುಕೊಂಡುಬಿಡುತ್ತದೆ. ಮಾತಿನ ಏರಿಳಿತಗಳು ಬೇರೆಯೇ. ಆದರೆ ಈ ಕೊರತೆಯನ್ನು ವಿ.ಸೀ. ಅವರೂ ಗಮನಿಸದೆ ಇಲ್ಲ :

"ಅನಿವಾರ್ಯವಾದಾಗ, ಮಾತಿನ ಉಚ್ಚಾರ, ನಮ್ಮ ಮಾತುಗಳ ಉಚ್ಚಾರಗಳಿಗೆ ಹತ್ತಿರವಿರುವಂತೆ ಮಾತ್ರ ಮಾರ್ಪಡಿಸಲು ಯತ್ನಿಸಿದ್ದೇನೆ ...ಇಲ್ಲಿನ ವಾಕ್ ಸರಣಿ ಬರವಣಿಗೆಯ ಪ್ರಕಾರದ್ದಾದರೂ, ಇದನ್ನು ಆಡುವ ಯೋಗ ಉಂಟಾದರೆ, ಅದನ್ನು ಆಡುವವರ ಉಚ್ಚಾರಗಟ್ಟಿನಂತೆ ಜಾಳಿಸಿ ನುಣುಪು ಮಾಡಿಕೊಳ್ಳಬಹುದು. ಉದಾ : ಮಾಡುವ ಹಾಗೆ ಎಂದು ಬರೆದಿರುವಾಗ ಮಾಡೋ ಹಾಗೆ, ಮಾಡು ಹಾಗೆ, ಮಾಡೋ ಹಾಂಗೆ–ಹಾಂಗ ಮುಂತಾಗಿ ಮಾರ್ಪಡಿಸಿಕೊಳ್ಳುವ ಅವಕಾಶವುಂಟು. ಬರವಣಿಗೆಯ ಭಾಷೆಯನ್ನು ಕುರಿತು ಷಾ ಅವರೇ ಒಂದು ಮುನ್ನುಡಿಯಲ್ಲಿ ಹೇಳಿದಂತೆ, yes ಎನ್ನುವ 50 ದಾರಿಗಳುಂಟು, no ಎಂಬ 500 ಬಗೆಗಳುಂಟು. ಆದರೆ ಅದನ್ನು ಬರೆಯುಲು ಇರುವುದು ಒಂದೇ ಬಗೆ'. ಎಲ್ಲ ಭಾಷೆಗಳಲ್ಲಿಯೂ ಹಾಗೆಯೇ. ಓದುವವರೂ ನಟರೂ ಇದನ್ನು ಹೊಂದಿಸಿಕೊಳ್ಳಬೇಕು." ರಂಗವನ್ನು ದುಡಿಸಿಕೊಳ್ಳುವಂಥ ನಾಟಕಗಳೇ ಕನ್ನಡದಲ್ಲಿ ಇಲ್ಲ ಎಂಬ ಹುಯಿಲಿಗೆ ಸವಾಲು ಒಡ್ಡಿ ನಿಂತಿರುವ ವಿ.ಸೀ. ಯವರ ಈ ಕನ್ನಡಾನುವಾದ ಈ ಮೂವತ್ತು ವರುಷಗಳಲ್ಲಿ ನಮ್ಮ ರಂಗ ಪ್ರವರ್ತಕರ ಗಮನಕ್ಕೆ ಬಂದಿಲ್ಲವೆಂಬುದು ಆಶ್ಚರ್ಯದ ಮಾತು : ಕೃತಿಗೆ ಅಪಚಾರದ ಮಾತೂ ಹೌದು.

* *

'ಮೇಜರ್ ಬಾರ್ಬರ' ರಂಗ ನಾಟಕವನ್ನು ಷಾ 1905ರಲ್ಲಿ ರಚಿಸಿದರು. (ಅದನ್ನು ವಿ.ಸೀ. ಕನ್ನಡಕ್ಕೆ ತಂದದ್ದು ಅರವತ್ತು ವರುಷಗಳ ನಂತರ). "ಬಡತನಕ್ಕಿಂತ ಕೀಳಾದ ಪಾಪವೇ ಇಲ್ಲ. ಅದರ ನಿರ್ನಾಮವೇ ಸಮಾಜದ ಏಕೈಕ ಧ್ಯೇಯ" ಎಂಬ ತತ್ವವನ್ನು ಎರಡು ನಿಟ್ಟುಗಳಿಂದ ವಿಶ್ಲೇಷಿಸಿದ ನಾಟಕ ಇದು. ಅಂಥ ಪಾಪದ ನಿವಾರಣೆ ಮದ್ದು ಗುಂಡುಗಳ ಕಾರ್ಖಾನೆಗಳನ್ನು ನಡಸಿಯಾದರೂ ಶ್ರೀಮಂತಿಕೆಯನ್ನು ಗಳಿಸಿ, ಕಾರ್ಮಿಕ ಪಡೆಯನ್ನು ಹಸಿವು ನೀರಡಿಕೆಯ ಗೆರೆಯಿಂದ ಮೇಲೆತ್ತುವುದರಿಂದ ಮಾತ್ರ ಸಾಧ್ಯ ಎಂದು ನಂಬಿ, ಹಾಗೆಯೇ ಸಾಧಿಸಿ ಸಡ್ಡು ಹೊಡೆದು ನಿಂತವ ನಾಟಕದ ನಿಜನಾಯಕ ಆ್ಯಂಡ್ರೂ ಅಂಡರ್‌ಷಾಫ್ಟ್; ಅಂಥ ಪಾಪಕ್ಕೆ ಸಿಕ್ಕಿ ಪರಿತಪಿಸುತ್ತಿರುವವರ ಉದ್ಧಾರ 'ಸಾಲ್ವೇಷನ್ ಆರ್ಮಿ' ಯಿಂದ ಮಾತ್ರ ಸಾಧ್ಯ ಎಂದು ನಂಬಿ ಅದರಲ್ಲಿ ಮೇಜರ್ ಆಗಿ ದುಡಿಯುತ್ತಿರುವ ಮಗಳು ಬಾರ್ಬರಾ. ಈ ಇಬ್ಬರ ನಡುವಿನ ಸಂಘರ್ಷ ನಾಟಕದ ಕಥಾದ್ರವ್ಯ. ಹೆಂಡತಿ ಮಕ್ಕಳ ಏಳಿಗೆಗಾಗಿ ತುಂಬುಗೈಯಿಂದ ಅರ್ಥವ್ಯವಸ್ಥೆ ಮಾಡಿದ್ದರೂ ಇಪ್ಪತ್ತು ವರುಷಗಳಿಂದ ಮನೆಗೆ ಬಾರದೆ ಕಾಣೆಯಾಗಿದ್ದ ಆ್ಯಂಡ್ರೂ, ತನ್ನ ಸಮರ ಸಾಮಗ್ರಿಯ ಕಾರಣ ಅಪಾರವಾದ ಸಂಪತ್ತನ್ನು ಗಳಿಸಿದ್ದವನು, ನಾಟಕೀಯವಾಗಿ ಮನೆಗೆ ಹಿಂದಿರುಗಿದಂದಿನಿಂದ ನಾಟಕ ಸುರುಳಿ ಸುರುಳಿಯಾಗಿ ಬಿಚ್ಚಿಕೊಂಡು ತತ್ವಮಂಥನ ಮಾಡುವಲ್ಲಿ, ಆ ತತ್ವದ ಮರೆಹೊಕ್ಕ ಸ್ವಾರ್ಥಿ, ಮೋಸಗಾರರನ್ನು, ಅದನ್ನೇ ನೆರೆನಂಬಿ, ಲೋಕೋದ್ಧಾರದ ಕಾರ್ಯದಲ್ಲಿ ಮುಳುಗಿದ ಅಪ್ಪಟ ಮನುಷ್ಯರನ್ನು ತೋರುತ್ತ ತೋರುತ್ತ ಹಣದ ಕಾರಣ ಎಂಥಾ ತತ್ವವೂ ಕಡೆಗೊಮ್ಮೆ ಆ್ಯಂಡ್ರೂ ಕಡೆಗೇ ವಾಲಿಕೊಳ್ಳುವುದನ್ನು ತೋರುವ ಅರ್ಥಪೂರ್ಣವಾದ, ಸಾಮಾಜಿಕ ಕ್ರಾಂತಿ ಗರ್ಭದ ನಾಟಕ. ಷಾ ಅವರ ಎರಡಲುಗಿನ ಕತ್ತಿಯ ಝಳಪಿನಂತಹ ಕಿಡಿಮಿಂಚಿನ ಮಾತುಗಾರಿಕೆಗೆ ಅಡ್ಡವಿಲ್ಲದ ಅವಕಾಶ ಈ ನಾಟಕದಲ್ಲಿ. ಆದರೆ ಎಲ್ಲ ಪಾತ್ರಸೂತ್ರಗಳನ್ನು ಹಿಡಿಯಲ್ಲಿಟ್ಟುಕೊಂಡು ಬೆರಗುಗೊಳಿಸುವಂತಹ ಬೊಂಬೆಯಾಟವನ್ನಾಡಿಸುವುದು ನಾಟಕಕಾರನ ಜಾಣ್ಮೆ. ಪಾಶ್ಚಾತ್ಯ ರಂಗಭೂಮಿಗಳಲ್ಲಿ ವರ್ಷಾನುಕಾಲ ವಿಜೃಂಭಿಸಿ, ಪ್ರೇಕ್ಷಕರನ್ನು ಭವಿಷ್ಯದ ಚಿಂತನೆಗೆ ಹಚ್ಚಿದ ಈ ನಾಟಕ 1941 ರಲ್ಲಿ ಷಾ ಅವರ ನೆರವಿನಿಂದಲೇ ಚಲನಚಿತ್ರವೂ ಆಯಿತು. ನಾಟಕವನ್ನು ವಿಮರ್ಶಕರು 'The Divine Comedy of Shaw' ಎಂದು ಶ್ಲಾಘಿಸಿದರು. ಇದೊಂದು Classic ಎಂದರು. ಅಂದಿಗೂ ಇಂದಿಗೂ ಮೇಜರ್ ಬಾರ್ಬರಾ ಮಹತ್ತಾದ ಒಂದು ರಂಗಾಕರ್ಷಣೆ ಪಾಶ್ಚಾತ್ಯರಲ್ಲಿ.

ಇದನ್ನು ಕನ್ನಡಕ್ಕೆ ಅನುವಾದಗೊಳಿಸಿದ ಕಾರಣವನ್ನು ವಿ.ಸೀ. ನಾಟಕದ ಮುನ್ನುಡಿಯಲ್ಲಿ ವಿಸ್ತರಿಸಿದ್ದಾರೆ. "ಇಂಥ ಕೃತಿಗೆ ಅಗತ್ಯವಿದೆಯೋ ಇಲ್ಲವೋ ನಮ್ಮ ನಾಡಿನಲ್ಲಿ. ನನಗಂತೂ ಅಗತ್ಯ ತೋರಿದೆ. ಪ್ರಸಿದ್ಧರಾದ 20–25 ಮಂದಿ ಇಬ್ಸೆನ್ ತರುವಾಯದ ನಾಟಕ ಕರ್ತೃಗಳ ಕೃತಿಗಳನ್ನು ನಮ್ಮ ಭಾಷೆಗಳಿಗೆಲ್ಲ ಪರಿವರ್ತಿಸಿಕೊಂಡಿ

ದ್ದರೆ ಆಧುನಿಕ ವಸ್ತು, ದೃಷ್ಟಿ, ರಚನೆ, ಕ್ರಿಯಾವಿಧಾನಗಳ ಪರಿಚಯ ನಮ್ಮ ಜನಕ್ಕೆ—ಸಾಹಿತಿಗಳಿಗಾದರೂ—ಆದೀತು. ಎಂಥ ವಿಷಯಗಳನ್ನು ಅವರು ಆಯುತ್ತಾರೆ, ರಂಗರಚನೆಗೆ ಅಳವಡಿಸಿಕೊಳ್ಳುತ್ತಾರೆ, ಅದಕ್ಕೆ ಕೀರ್ತಿ, ಶಕ್ತಿ ಹೇಗೆ ಬಂದಿವೆ ಎಂಬುದು ಗೊತ್ತಾಗುತ್ತದೆ. ನಮ್ಮ ಲೇಖಕರಿಗೆ ದಿಗ್ದರ್ಶನವಾಗಬಲ್ಲದು ಕೂಡ...ಷಾ ನಗೆಯಲ್ಲಿ ತಿಳಿ ಉಂಟು, ಚುರುಕುಂಟು, ಭಯವುಂಟು. ಎದುರು ನಿಂತವರಿಗೆ ಆ ಸಮಯಕ್ಕೆ ಸ್ವಾಸ್ಥ್ಯ ತಪ್ಪಿಹೋಗುತ್ತದೆ. ಅದರ ಪ್ರಭಾವಕ್ಕೆ ಮನಸ್ಸು ಬಂದಿಯಾಗುತ್ತದೆ.... ಷಾ ಮಾಡಿದಷ್ಟು ಆಕ್ಷೇಪಣೆ, ತೀವ್ರ ಅವಹೇಳನ, ನೇರವಾದ ಇರಿತ, ಲೇವಡಿ ಇನ್ನೊಬ್ಬರಲ್ಲಿ ಸಿಕ್ಕವು. ಆದರೆ ಅವರು ಹೇಳುವ ರೀತಿ, ಬಳಸುವ ಮಾತು, ಕಟ್ಟುವ ವಾಕ್ಯಗಳ ಚಿತ್ರಶ್ರೇಣಿ, ನಿಂತಂತೆ ನಮ್ಮನ್ನು ಆಕ್ರಮಿಸುತ್ತವೆ; ಮುಳುಗಿಸುತ್ತವೆ. ಅವರ ಜೊತೆಯಲ್ಲಿ ನಾವೂ ನಕ್ಕ ಆಮೇಲೆ, ನಮ್ಮ ಅವಿವೇಕ ಎಷ್ಟು ಎಂದು ನಾವೇ ಅಚ್ಚರಿಪಡುವಂತಾಗುತ್ತದೆ....ಒಂದೇಟಿಗೆ ಲೋಕದಲ್ಲಿ ಬಡತನವಿಲ್ಲದಂತೆಮಾಡಿ, ನ್ಯಾಯವೂ ಧರ್ಮವೂ ಯುಕ್ತಪ್ರತಿಷ್ಠೆಯ ಸ್ಥಾನದಲ್ಲಿ ಪೀಠಸ್ಥವಾಗುವಂತೆ ಮಾಡಬೇಕು ಎಂದರು ಷಾ (ತಮ್ಮ ಮೇಜರ್ ಬಾರ್ಬರಾ ನಾಟಕದಲ್ಲಿ). ಷಾ ಮನಸ್ಸಿನಲ್ಲಿ ಈ ಕರುಣೆ, ಈ ಮಾನವತೆ, ಈ ಸೋದರಿಕೆ ಇವೆ. ಅನ್ಯಾಯವನ್ನು ಕಂಡು ಅಸಹನೆ ಇದೆ. ಸತ್ಯವನ್ನು ಅರಿಯುವ ಕಣ್ಣಿದೆ. ಅದನ್ನು ಸಾಧಿಸಬೇಕೆಂಬ ಹಟವಿದೆ. ಅನ್ಯಾಯ, ಅರೆ ತಿಳಿವು, ಅಪ್ರಬುದ್ಧರ ಅಟ್ಟಹಾಸ ಇವನ್ನು ಕಂಡು ಅವರಿಗೆ ಕೋಪ. ಅವನ್ನು ನಿವಾರಿಸಬೇಕೆಂಬುದು ಅವರ ಜೀವನದ ಮುಖ್ಯ ಉದ್ದೇಶ. ಇದಕ್ಕಾಗಿ ಅವರು ಬಳಸಿದುದು—ತಮ್ಮ ನಾಟಕಗಳನ್ನು..." ನಮ್ಮ ಕಲ್ಪನೆಗೆ ಹೊರತಾದ ಸಾಮಾಜಿಕ ಕಥಾದ್ರವ್ಯ, ಮಿಂಚು ಮಾತಿನ ಮಹಾಪೂರ, ಗಾಯನವಿಲ್ಲದ ಪ್ರದರ್ಶನ, ಕಣ್ಣು ಕೋರೈಸದಂಥ ರಂಗಸಜ್ಜಿಕೆ. ಇನ್ನೂ ಏನೇನು ಕಾರಣವೊ! ಮುಖ್ಯವಾಗಿ ರಂಗ ನಿರ್ದೇಶಕರ ಹಾಗೂ ಕನ್ನಡ ಪ್ರೇಕ್ಷಕರ ದಿವ್ಯವಾದ ಅನಾಸಕ್ತಿ—ಅಂತೂ ವಿ.ಸೀ. ಯವರ ಕನ್ನಡ ಮೇಜರ್ ಬಾರ್ಬರಾ ಇನ್ನೂವರೆಗೆ ಕನ್ನಡ ರಂಗವನ್ನು ಕಾಣಲೇ ಇಲ್ಲ.

* *

ವಿ.ಸೀ.ಯವರು 1970ರಲ್ಲಿ ರಚಿಸಿದ ನಾಟಕ "ಚ್ಯವನ". ಇಂಥದೊಂದು ಪೌರಾಣಿಕ ನಾಟಕದಲ್ಲಿ ಸಮಾಜ ಕ್ರಾಂತಿಯ ಸೆಳಕುಗಳನ್ನು ಕಡೆಯ ದೃಶ್ಯದಲ್ಲಿ ಒಳಗೊಳಿಸಿದ್ದು ವೈಶಿಷ್ಟ್ಯ. ನಾಟಕದುದ್ದಕ್ಕೂ ತೇಜಃಪುಂಜವಾದ ಅರಳು ಹುರಿದಂಥ ಮಾತು. ಒಂದೆರಡು ಸುಂದರ ಗೀತಗಳು. ಆರೆಂಟು ಪಾತ್ರಗಳು. ನಾಲ್ಕು ನೆಲೆಗಳು. ಒಂದು ತಾಸು ಅವಧಿಯ ವರ್ಚಸ್ವೀ ನಾಟಕ.

ಮೊದಲ ನೆಲೆಯಲ್ಲಿ ಮಡಿಯುಟ್ಟು ಆಶ್ರಮಕ್ಕೆ ಹೊರಟ ಋಷಿಪತ್ನಿ ಸುಕನ್ಯೆಯ ದಿವ್ಯರೂಪಕಂಡು 'ಕಣ್ಣಿನ ಸೋಲು ಹೃದಯದ ಸೋಲಾಗಿ' ನಿಂತ ಅಶ್ವಿನಿ ದೇವತೆಗಳು

ಒಲ್ಲದ ಆಕೆಯನ್ನು ತಡವಿ ಅಂತಹ ಯುವತಿ ರೂಪಸಿ ವೃದ್ಧನಾದ ಚ್ಯವನ ಋಷಿಯ ಪತ್ನಿಯಾದ ಕತೆ ಕೇಳುತ್ತಾರೆ. ಎರಡನೆಯ ನೆಲೆಯಲ್ಲಿ, ಕಾಲ ಹಿಂದಕ್ಕೆ ಸರಿದು, ರಾಜಕನ್ಯೆ ಸುಕನ್ಯೆ, ಸಖಿಯರೊಂದಿಗೆ ಆಡಾಡುತ್ತ ಹುತ್ತದಿಂದ ಹೊಮ್ಮಿದ ಬೆಳಕನ್ನು ಕಂಡು, ಕೆಣಕಿ ಕೆದಕಿ, ಒಳಗಿನ ಧ್ವನಿಗೆ ಬೆದರಿ ಓಡುತ್ತಾಳೆ. ನಿಮಿಷಾರ್ಧದಲ್ಲಿ ರಾಜ್ಯದ ಸೇನೆ ಉಸಿರು ಕಟ್ಟಿ ಬಳಲುತ್ತದೆ. "ಇದ್ದಕ್ಕಿದ್ದಂತೆ ಜನ ಕುಸಿದು ಬೀಳುತ್ತಿದ್ದಾರೆ." ಇದನ್ನು ಕೇಳಿದ ಶರ್ಯಾತಿರಾಜ ಮಂತ್ರಿಗಳೊಂದಿಗೆ ಸಮಾಲೋಚಿಸಿ "ಯಾರೋ ಮಹಾತ್ಮರಿಗೆ ಅಪಚಾರವಾಗಿರಬೇಕು" ಎಂದು ತಿಳಿದು ವಿಚಾರಿಸಿದಾಗ ಬೆದರಿದ ಹುಲ್ಲೆಯಾದ ಸುಕನ್ಯೆ ನಡೆದದ್ದನ್ನು ಹೇಳುತ್ತಾಳೆ. ಪರಿವಾರದೊಂದಿಗೆ ದೊರೆ ಹುತ್ತದ ಬಳಿಗೆ ನಡೆದು ಕೈಮುಗಿದು ಕ್ಷಮೆ ಕೇಳಿದಾಗ "ನಿಮ್ಮ ಮಗಳು ಇಲ್ಲೆ ಉಳಿದು ನಮಗೆ ಸೇವೆ ಮಾಡಿಕೊಂಡು ಇರಲಿ" ಎನ್ನುತ್ತಾನೆ ವೃದ್ಧಋಷಿ. ಉಳಿದವರ ಒಳಿತಿಗಾಗಿ, ತಾನೇ ಮುಂದಾಗಿ ಸುಕನ್ಯೆ ಋಷಿಪತ್ನಿಯಾಗುತ್ತಾಳೆ. ಈಗ ರಂಗಕ್ರಿಯೆ ಮುನ್ನೆಲೆಗೆ ಬರುತ್ತದೆ. ಇಲ್ಲಿ ಬರುವ ಅಶ್ವಿನಿ–ಸುಕನ್ಯೆಯರ ಸಂವಾದ, ನಾಟಕದ ಒಂದು ರಸಸ್ಥಾನ. 'ಋಷಿಗೆ ಯೌವನ ಕೊಡುತ್ತೇವೆ. ಅನಂತರ ಆತನನ್ನೊಳಗೊಂಡು ನಾವು ಮೂವರೊಳಗೆ ನೀನು ಒಬ್ಬನನ್ನು ವರಿಸಬೇಕು. ಒಪ್ಪಿದರೆ ವಾರ ಕಳೆದು ಮತ್ತೆ ಸರೋವರಕ್ಕೆ ಬರಬೇಕು" ಎನ್ನುತ್ತಾರೆ. "ಸುಕನ್ಯೆಯನ್ನು ಬಯಸಿ ನಿರ್ಬಂಧಗೊಳಿಸಿ ಮದುವೆಯಾದೆ" ಎಂಬ ಒಳನೋವಿನಿಂದ ಬೇಯುತ್ತಿದ್ದ ಋಷಿ ಇಂಥದೊಂದು ಸಂದರ್ಭ ಬಂದುದಕ್ಕಾಗಿ ಒಪ್ಪಿ, ಬಲು ಬಲವಂತದಿಂದ ಆಕೆಯನ್ನು ಒಪ್ಪಿಸುತ್ತಾನೆ. ಮುಂದಿನ ದೃಶ್ಯದಲ್ಲಿ ಮೂವರೂ ನೀರಲ್ಲಿ ಮುಳುಗಿ ಎಳೆಯಷ್ಟು ವ್ಯತ್ಯಾಸವಿಲ್ಲದೆ ಒಬ್ಬರು ಇನ್ನೊಬ್ಬರೇ ಎಂದು ಭ್ರಮಿಸುವಂತೆ ಮೇಲೇಳುತ್ತಾರೆ. ತನ್ನ ಧರ್ಮ ದೇವತೆಯನ್ನು ಪ್ರಾರ್ಥಿಸಿ ಒಲಿಸಿ ಸುಕನ್ಯೆ ವಿಜಯಿಯಾಗುತ್ತಾಳೆ. ಚ್ಯವನರು ನವಯೌವನದಿಂದ ಹೊಳೆ ಹೊಳೆಯುತ್ತಿದ್ದಾರೆ. ದೇವ ದುಂದುಭಿ ಮೊಳಗುತ್ತದೆ.

ನ್ಯಾಯವಾಗಿ, ಇಲ್ಲಿಗೆ ನಾಟಕ ಮುಗಿಯಬಹುದಾಗಿತ್ತು. ಆದರೆ ಇದಕ್ಕೆ ಸಾಮಾಜಿಕವಾದ ಅರ್ಥವನ್ನು ಪೌರಾಣಿಕ ಸಂಕೇತಗಳ ಮೂಲಕ ಕೊಟ್ಟು ಕ್ಷಾತ್ರದರ್ಪಕ್ಕಿಂತ ನೈತಿಕ ಬಲ ದೊಡ್ಡದು ಎಂಬ ವಿಶ್ವಾಮಿತ್ರ ಮಂತ್ರವನ್ನು ಮತ್ತೆ ತಿಳಿಸಲೋ ಎಂಬಂತೆ ವಿ.ಸೀ. ನಾಲ್ಕನೆಯ ಸಂಘರ್ಷ ದೃಶ್ಯವನ್ನು ನೇಯ್ದಿದ್ದಾರೆ. 'ತಮಗೆ ಸುಮನಸ್ಸಿನಿಂದ ಸಹಾಯಮಾಡಿದ ಅಶ್ವಿನಿಗಳಿಗೆ ಕೃತಜ್ಞತೆಯ ಕುರುಹಾಗಿ ಸೋಮಪಾನ ಮಾಡಿಸಬೇಕೆಂದು' ಚ್ಯವನರೇ "ಸರ್ವಾರ್ಥಸಿದ್ಧಿಯಾಗ"ಕ್ಕೆ ದೇವೇಂದ್ರನನ್ನು ಆಹ್ವಾನಿಸಿ, ಅಶ್ವಿನಿಗಳೊಂದಿಗೆ ಆತನ ಸೋಮಪಾನ ಸಮಪಾನವಾಗಬೇಕೆಂದು ಬೇಡುತ್ತಾರೆ. ಮದದಿಂದ ಸೊಕ್ಕಿದ ದೇವೇಂದ್ರ 'ಅವರು ಸಮಪಂಕ್ತಿಯವರಲ್ಲ' ಎಂದು ಹೀಗಳೆದು ವರ್ಗವ್ಯತ್ಯಾಸದ ಸಂಕೇತವಾಗಿ ನಿಲ್ಲುತ್ತಾನೆ. ಈವರೆಗೆ ಆತನ ಕಣ್ಣಿನ ಅಂಕೆಯಲ್ಲಿ ದುಡಿಯುತ್ತಿದ್ದ ಅಶ್ವಿನಿಗಳು ಇಂದು ಚ್ಯವನರ ನೆರಳಿನಲ್ಲಿ ದೇವೇಂದ್ರನ ಎದುರು ಸಡ್ಡು

ಹೊಡೆದು ನಿಲ್ಲುತ್ತಾರೆ. ಇಂದ್ರ ವಜ್ರಾಯುಧವನ್ನು ತಡಕುತ್ತಾನೆ. ಚ್ಯವನರು ಅದನ್ನು ಸ್ತಂಭನಗೊಳಿಸಿ, ಮಂತ್ರಾಸ್ತ್ರಗಳಿಂದ ಇಂದ್ರನನ್ನು ಬಂಧಿಸಿ, ಮಹಾಕ್ರೂರಿಯಾದ ಮದಾಸುರನನ್ನು ಸೃಷ್ಟಿಸಿ ಇಂದ್ರನೆದುರು ಬಿಡುತ್ತಾರೆ. ಇಂದ್ರಪದವಿಯೂ ಅಧ್ರುವ. ದೇವತೆಗಳು ಸುಮನಸರಾದಾಗಲೇ ಅವರ ಶಕ್ತಿ. ಆ ಶಕ್ತಿ ಕೇಳದೆಯೇ ಉಪಕಾರದಲ್ಲಿ ತೊಡಗಬೇಕು. "ಶಕ್ತರು ಕೊಡಬೇಕು–ದುರ್ಬಲರು ಕೇಳಬಾರದು ; ಇದು ಸದ್ಗತಿಯ ಧರ್ಮ, ಪ್ರಗತಿಯ ಬೀಜ ತಂತ್ರ... ಸೇವಕ ಕೇಳಬಾರದು ; ಒಡೆಯ ಕೊಡಬೇಕು. ಬಡವನಿಂದ ಕೇಳಿಸಿಕೊಳ್ಳಬಾರದು: ಧನಿ ಕೊಡಬೇಕು. ಧರ್ಮದಲ್ಲಿ ಇದು ನಯ" ಎಂದು ಹೇಳಿ ಇಂದ್ರನಿಗೆ ಬುದ್ಧಿಗಲಿಸಿ,ನಮ್ಮಲ್ಲಿನಂತೆ ಸ್ವರ್ಗದಲ್ಲಿಯೂ ಇದ್ದ ವರ್ಗ ವ್ಯತ್ಯಾಸವನ್ನು ತೊಡೆದು ಹಾಕುತ್ತಾರೆ.

ಪೌರಾಣಿಕ ವೇಷಭೂಷಣ, ಪಾತ್ರಾಲಂಕಾರ, ಪ್ರಜ್ವಲಿಸುವ ಸಂಭಾಷಣೆಗಳು, ಮಧ್ಯೆ ಭಾವಾವೇಶದಿಂದ ತಾನೇತಾನಾಗಿ ಒಡೆದು ಹೊಮ್ಮುವ ಹಾಡುಗಳು, ವರ್ಣಾಶ್ರಮ, ಸರೋವರ, ಯಜ್ಞಶಾಲೆಯಂತಹ ದೃಶ್ಯ ನಿರ್ಮಿಸಿ, Flash back ದೃಶ್ಯಗಳ ಟ್ರಿಕ್ ಸೀನುಗಳು—ಹೀಗೆ ಎಲ್ಲ ಮೇಳವಾಗಿ ರಂಜಿಸುವ ದಲಿತೋದ್ಧಾರ ಧ್ಯೇಯದ ನಾಟಕ ಇದು. ಸುಬ್ಬಯ್ಯನಾಯ್ಡು ಅಂತಹ ಮಹಾನಟ ನಿರ್ಮಾಪಕರಿಗೆ ಇಂಥ ನಾಟಕ ರಸಗವಳ. ಆದರೆ ವೃತ್ತಿರಂಗಕ್ಕೆ ನಾಟಕದ ಕಾಲಾವಧಿ ತುಂಬ ಕಡಿಮೆ, ವಿಲಾಸೀರಂಗಕ್ಕೆ ಇದು ಪುರಾಣಶ್ರವಣ ! ಅದಾಗಿ, ವಿ.ಸೀ.ಯವರ 'ಚ್ಯವನ' ಶ್ರವ್ಯ ನಾಟಕವಾಗಿಯೇ ಉಳಿದು ಬಿಟ್ಟಿತು.

* *

1979ರಲ್ಲಿ ಪ್ರಕಟವಾದ 'ಪಟ್ಟಬಂಧ' ನಾಟಕದ ಮುನ್ನುಡಿಯಲ್ಲಿ ವಿ.ಸೀ. ಸಂದರ್ಭವನ್ನು ವಿವರಿಸುತ್ತ 'ಭರತನು ಅಯೋಧ್ಯೆಗೆ ಬಂದು ತಂದೆ ತೀರಿಕೊಂಡುದನ್ನು ಕೇಳಿ, ರಾಜ್ಯವನ್ನು ಸ್ವೀಕರಿಸದೆ ರಾಮನನ್ನು ಹುಡುಕಿಕೊಂಡು—ತಾಯಿಯೂ ತನ್ನನ್ನು ಹಿಂಬಾಲಿಸುತ್ತಿರಲು—ಚಿತ್ರಕೂಟದವರೆಗೂ ಹೋದ... ಲಕ್ಷ್ಮಣನ ಸಮಕ್ಕೆ ಭರತನೂ ಸ್ವಾರ್ಥವನ್ನು ಕೈಬಿಟ್ಟು (ನಾಟಕದ ಉದ್ದಕ್ಕೂ ವಸಿಷ್ಠ, ಸುಮಂತ್ರ, ಗಯ, ಲಕ್ಷ್ಮಣ, ರಾಮನಲ್ಲಿ ಕೂಡ ಈ ಮಾತು ಧ್ವನಿಗೊಳ್ಳುತ್ತದೆ.) ಒಂದು ತಪಶ್ಚರ್ಯೆ ಎಂಬಂತೆ ಕೈಗೊಂಡು ಕೃತಾರ್ಥನಾದವನು' ಎಂದಿದ್ದಾರೆ. ಈ ಸಂಗತಿ ಎರಡು ಅಂಕಗಳ ಒಂಬತ್ತುದೃಶ್ಯಗಳಲ್ಲಿ ಅರಳಿಕೊಂಡಿದೆ—ಹನ್ನೆರಡು ಮುಖ್ಯಪಾತ್ರಗಳ 'ಪಟ್ಟಬಂಧ'ದಲ್ಲಿ.

ಒಂದನೆಯ ಅಂಕದ ಮೊದಲ ದೃಶ್ಯದಲ್ಲಿ, ಕೌಸಲ್ಯೆಯ ಅಂತಃಪುರದಲ್ಲಿನ ಸಂಭ್ರಮದಿಂದಾಗಿ ಶ್ರೀರಾಮಪಟ್ಟಾಭಿಷೇಕದ ಸುದ್ದಿ ತಿಳಿದ ಮಂಥರೆ ಕೈಕೆಯ ಅಂತಃಪುರಕ್ಕೆ ಬಂದು ರಾಣಿಯ ಮನಸ್ಸಿನಲ್ಲಿ ಸಂದೇಹಗಳನ್ನು ಬಿತ್ತಿ ಹಟಕ್ಕೆ ಹಚ್ಚುತ್ತಾಳೆ. ಎರಡನೆಯ ದೃಶ್ಯದಲ್ಲಿ ದಶರಥ ರಾಣಿಯ ನಾಟಕಾಭಿನಯ ನೋಡಿ

ನಂಬಿ ದಿಗ್ಭ್ರಾಂತನಾದಾಗ, ಭರತನ ಹಕ್ಕು, ತನಗೆ ಆದ ಮೋಸವನ್ನೆತ್ತಿ ಆಡಿ ವರಗಳಿಗಾಗಿ ಆಕೆ ಹಟ ಮಾಡಿದಾಗ ರಾಜ ಕೆಡೆದುಬೀಳುತ್ತಾನೆ. ಆ ಸಮಯಕ್ಕೆ ಬಂದ ರಾಮ ಸಂಗತಿ ತಿಳಿದು ಯಾವ ಬಗೆಯ ಮನೋವಿಕಾರವೂ ಇಲ್ಲದೆಯೆ ಕಾಡಿಗೆ ಹೊರಟುಬಿಡುತ್ತಾನೆ. ದಶರಥನ ಹುಯಿಲು ಮಾತಿಗೆ ಮೀರಿದ್ದು. ಮೂರನೆಯ ದೃಶ್ಯದ ಕೌಸಲ್ಯೆಯ ಅಂತಃಪುರದಲ್ಲಿ ರೊಚ್ಚಿಗೆದ್ದ ಲಕ್ಷ್ಮಣನನ್ನು ಸಮಾಧಾಸಿಸಲಾಗದೆ ತನ್ನೊಡನೆ ಕಾನನಕ್ಕೆ ತೆರಳಲು ರಾಮ ಒಪ್ಪಲೇಬೇಕಾಗುತ್ತದೆ. ನಾಲ್ಕನೆಯ ದೃಶ್ಯದಲ್ಲಿ ಸೀತಾರಾಮ ಸಂವಾದ. ತನ್ನ ಮೇಲೆ ಕೋಪಮಾಡಿಕೊಂಡ ಪತಿಯನ್ನು ಒಲಿಸಿ ಸೀತೆಯೂ ಅವನೊಡನೆ ಹೊರಡುತ್ತಾಳೆ. ಐದನೆಯ ದೃಶ್ಯದಲ್ಲಿ ನೆಲೆ ಬದಲಾಗಿ, 'ಬೇಗಬನ್ನಿ' ಎಂಬ ಶೀಘ್ರಾಜ್ಞೆಗೆ ಮಣಿದು ಭರತನೂ ಲಕ್ಷ್ಮಣನೂ ಅಳುಕಿನಿಂದ ಅಯೋಧ್ಯೆಗೆ ಧಾವಿಸುತ್ತಿದ್ದಾರೆ. ರಾಜ್ಯದ ಗಡಿಯಲ್ಲಿ ಅಧಿಕಾರಿಗಳು ಭರತನನ್ನು 'ಮಹಾಸ್ವಾಮಿ' ಎಂದು ಸಂಬೋಧಿಸಿದಾಗ ಭರತನ ಎದೆಯಲ್ಲಿ ಸಂಶಯ ಕಳವಳಗಳು ಬೆಳೆದು ಕೊಳ್ಳುತ್ತವೆ. ಸಾವಿನ ಮನೆಯಂತಿದ್ದ ಅಯೋಧ್ಯೆಯನ್ನು ತಲುಪಿ ತಾಯಿ ಕೈಕೆಯಿಂದ ತಂದೆ ದಶರಥನ ಸಾವನ್ನೂ ಅಣ್ಣ ಅತ್ತಿಗೆಯರ ವನವಾಸದ ಸುದ್ದಿಯನ್ನೂ ತಿಳಿದು ಭರತನು ತಾಯಿಯನ್ನು ದೂಷಿಸುತ್ತಾನೆ. ತನ್ನ ಆಸೆ ಆಕಾಂಕ್ಷೆಗಳೆಲ್ಲ ಹೀಗೆ ಮುರಿದು ಬಿದ್ದು, ದುಃಖದಿಂದ ಕೈಕೆಯ ಎದೆಬಿರಿಯುವುದರೊಂದಿಗೆ ಆರನೆಯ ದೃಶ್ಯ ಮುಗಿಯುತ್ತದೆ. ಮೊದಲನೆಯ ಅಂಕ ಹೀಗೆ ನಾಟಕಕ್ರಿಯೆಗೆ 'ಪೂರ್ವರಂಗ' ವಾಗುತ್ತದೆ.

ಎರಡನೆಯ ಅಂಕದ ಮೊದಲ ದೃಶ್ಯದಲ್ಲಿ ರಾಜಸಭೆ ಕೂಡಿದೆ. ದಶರಥ ಮಡಿದು ಹದಿನಾಲ್ಕು ದಿನಗಳಾಗಿವೆ. ನಡೆದ ವಿದ್ಯಮಾನದ ವಿವರಗಳು ಭರತನಿಗೆ ತಿಳಿದಿವೆ. ವಸಿಷ್ಠರಾದಿಯಾಗಿ ಯಾರೆಲ್ಲ ಏನೆಷ್ಟು ಹೇಳಿದರೂ ಒಪ್ಪದೆ ಭರತ, ರಾಮನನ್ನು ಅಯೋಧ್ಯೆಗೆ ಹಿಂದಿರುಗಿ ಕರೆತರಲು ನಿರ್ಧರಿಸುತ್ತಾನೆ. ಎರಡನೆಯ ದೃಶ್ಯದಲ್ಲಿ ರಾಣಿಯೂ ಮಂತ್ರಿ ಮಹೋದಯರೂ ಪ್ರಜೆಗಳ ಪರಿವಾರವೂ ಕೂಡಿ ಹತ್ತು ಸಾವಿರ ಸಂಖ್ಯೆಯ ಅಯೋಧ್ಯೆ ನಿವಾಸಿಗಳು ಭರತನ ನೇತೃತ್ವದಲ್ಲಿ ಚಿತ್ರಕೂಟಕ್ಕೆ ಹೊರಟು ಬಿಟ್ಟಿದ್ದಾರೆ. ಗುಹನ ಸಂಶಯ ಶಂಕೆಗಳನ್ನು ನಿವಾರಿಸಿ ಶ್ರೀರಾಮ ಅಲ್ಲಿ ನಡೆದ ನುಡಿದ ಮಾತಿನ ವಿವರಗಳನ್ನು ಭರತ ಕೇಳಿಕೊಳ್ಳುತ್ತಾನೆ. ನಾಟಕದ ಕಡೆಯ ದೃಶ್ಯ—ಭರತ ರಾಮರ ಸಮಾಗಮ—ನಾಟಕದ ರಸಸ್ಥಾನ. ಲಕ್ಷ್ಮಣನ ಸಂದೇಹ, ಭರತನಿಂದ ರಾಮನ ಪಾದಗಳಿಗೆ ಕಂಬನಿಯ ಅಭಿಷೇಕ. 'ನಿನಗೆ ಬದಲಾಗಿ ನಾನು ಕಾಡಿನಲ್ಲಿ ಉಳಿಯುತ್ತೇನೆ' ಎಂದು ಅದೆಷ್ಟು ದುಂಬಾಲು ಬಿದ್ದರೂ, ಕೈಕೆ ಗೋಗರೆದರೂ ಸೊಪ್ಪು ಹಾಕದ ಶ್ರೀರಾಮ. ಕಡೆಗೆ, ತಾನು ಅಯೋಧ್ಯೆಯಿಂದ ತಂದಿದ್ದ ರನ್ನಪಾದುಕೆಗಳನ್ನು ಶ್ರೀರಾಮನ ಪಾದುಕೆ ಗಳಿಗೆ ಸೋಕಿಸಿ, ಆತನ ಪ್ರತಿನಿಧಿಯಾಗಿ ಭರತ, ಪಾದುಕಾಪೂಜೆಮಾಡಿ ಪಲ್ಲಕ್ಕಿಯಲ್ಲಿಟ್ಟು ಅಯೋಧ್ಯೆಗೆ ಹೊರಡುತ್ತಾನೆ.

ಹೀಗೆ 'ಪಟ್ಟಬಂಧ' ರಾಮನ ಪಟ್ಟಾಭಿಷೇಕದ ಮಾತಿನಿಂದ ಹಿಡಿದು, ಭರತ ಆತನ ಪಾದುಕೆಗಳನ್ನು ಹಿಡಿದು ಹಿಂದಿರುಗುವವರೆಗೆ ಯಾವ ಸಂಗತಿಯನ್ನೂ ಬಿಡದೆ ರಾಮಾಯಣದ ಕತೆಯನ್ನು ಹೆಜ್ಜೆ ಹೆಜ್ಜೆಯಾಗಿ ಹೆಣೆದಿದೆ. (ರಾಮ ಕವಿಯಾಗಿ ನಿಸರ್ಗವನ್ನು ವರ್ಣಿಸುವಂಥ) ಅನೇಕ ಸುಂದರ ಭಾವನೆಗಳೂ, ತೇಜಸ್ವೀ ಮಾತುಗಳೂ, ಭವ್ಯವಾದ ಚಿತ್ರಗಳೂ, ನಾಟ್ಯಶಾಸ್ತ್ರ, ನೀತಿಶಾಸ್ತ್ರಗಳಿಂದ ಆಯ್ದ ಕುಟುಂಬ ನೀತಿಯ ವಿಷಯಗಳೂ ತುಂಬಿದ್ದರೂ ಕನ್ನಡರಂಗದ ದೃಷ್ಟಿಯಿಂದ ನಾಟಕ ಪೇಲವವಾಗುತ್ತದೆ. ಸಾಲದೆಂಬಂತೆ ಪಾತ್ರಗಳು ಪುಟಗಟ್ಟಲೆ ಮಾತನಾಡಿಬಿಡುತ್ತವೆ ; ಹಳೆಯ ಕತೆಯನ್ನೆಲ್ಲ ಹರಡಿಕೊಳ್ಳುತ್ತವೆ. ಇದಲ್ಲದೆ, ಓದಿದಾಗ ಮನಸ್ಸಿನಲ್ಲಿ ಮಹಾಚಿತ್ರಗಳನ್ನು ಕಲ್ಪಿಸುವ ರಾಜಸಭೆ, ಸಮ್ರಾಟ ಸಂಕೇತಗಳನ್ನು ಹೊತ್ತ ಪಟ್ಟದಾನೆ, ಕುದುರೆ, ಮಂತ್ರಿ, ಸಾಮಂತ, ಪರಿವಾರದ ಪ್ರಯಾಣ, ಭರತ ರಾಮರ ಮಿಲನದ ಮಹಾನ್ ದೃಶ್ಯ ಮೊದಲಾಗಿ, ನಮ್ಮ ರಂಗ ಮಂಚದ ಸಾಧ್ಯತೆಗಳನ್ನು ಮೀರಿದ ಬೆಳವಣಿಗೆ. ಹಾಳು ಸುರಿಯುತ್ತಿರುವ ಅಯೋಧ್ಯೆಗೆ ಭರತನ ಆಗಮನ ನ್ಯಾಯವಾಗಿ ನಾಟಕದ ಮೊದಲ ನೆಲೆಯಾಗಬೇಕು. ಭಾಸನ ಪ್ರತಿಮಾ ನಾಟಕವನ್ನು, ಅದರಿಂದ ಸ್ಫೂರ್ತಿಗೊಂಡು ಕೈಲಾಸಂ ರಚಿಸಿದ 'The Burden' ಎಂಬ ಪುಟ್ಟ ಪ್ರಭಾವಶಾಲೀ ಏಕಾಂಕವನ್ನು, 'ಪಟ್ಟಬಂಧ'ದ ಕಥಾ ದ್ರವ್ಯವನ್ನು ಕುರಿತು ಗರುಡ ಸದಾಶಿವರಾಯರು ರಚಿಸಿ, ಕನ್ನಡ ನಾಡಿನ ಉದ್ದಗಲದಲ್ಲಿ ಜಯಭೇರಿಯನ್ನು ಹೊಡೆದ 'ಪಾದುಕಾ' ರಂಗನಾಟಕವನ್ನು ವಿ.ಸೀ. ನಿಚ್ಚಳವಾಗಿ ಬಲ್ಲರು. ಅವುಗಳ ಮುಂದೆ, 'ಪಟ್ಟಬಂಧ' ಕನ್ನಡರಂಗದಲ್ಲಿ ನಿಲ್ಲಲು ಸಾಧ್ಯವೆ ಎನ್ನಿಸುತ್ತದೆ. ಏನೆಲ್ಲದರಲ್ಲಿಯೂ ತಮ್ಮ ಸ್ವಂತಿಕೆಯನ್ನು ಕಾಣಿಸಿರುವ ವಿ.ಸೀ. ಇಂಥ ನಾಟಕವನ್ನೇಕೆ ಬರೆದರು ?

ಉತ್ತರ ಅವರ 'ಮೊದಲ ಮಾತಿನಲ್ಲಿ' ಇದೆ. ಇದನ್ನು ಅವರು ಮೊದಲು ಬರೆದದ್ದು ಇಂಗ್ಲಿಷಿನಲ್ಲಿ ; ಲಂಡನ್ನಿನ ರಂಗಮಂಚಕ್ಕಾಗಿ. 'ಈ ನಾಟಕವನ್ನು ಮೊದಲು ಲಂಡನ್ನಿನ ಭಾರತೀಯ ವಿದ್ಯಾಭವನದವರು ಆಡಿಸುವುದಕ್ಕಾಗಿ ಇಂಗ್ಲಿಷಿನಲ್ಲಿ ತಕ್ಷಣದಲ್ಲಿ ಬೇಕೆಂದು ಬರೆಸಿದರು. ಆದರೆ ಅದು ನಡೆಯಲಿಲ್ಲ. ಯಾವುದಕ್ಕೂ ಪ್ರಯೋಜನವಿಲ್ಲದಂತಾಗಬಾರದೆಂದು ಕನ್ನಡಿಸಿದೆ.' ಈ ನಿಟ್ಟಿನಿಂದ ನೋಡಿದಾಗ ನಾಟಕದ ಬೆಲೆ ದೊಡ್ಡದು. ರಾಮ ಭರತರ ಕತೆ ಹೇಳುತ್ತ ಹೇಳುತ್ತಾ ಪರೋಕ್ಷವಾಗಿ ಭಾರತದ ಸಂಸ್ಕೃತಿಯ ಮುಖಗಳಾದ ಧರ್ಮತತ್ತ್ವ, ನೆಲೆಬೆಲೆಗಳ ಸ್ಥೂಲ ಪರಿಚಯವಾದರೂ ಆ ಹೊರಗಿನ ಜನಕ್ಕೆ ಆಗಬೇಕೆಂಬ ನಾಟಕಕಾರರ ಕಳಕಳಿ ಅರ್ಥವಾಗುತ್ತದೆ. ಲಂಡನ್ ರಂಗ ಸಾಧಿಸೀತೆಂಬ ಆಶೆಯಿಂದ ಅಂಥ ಮಹಾನ್ ದೃಶ್ಯಗಳನ್ನು ನಾಟಕದಲ್ಲಿ ವಿ.ಸೀ. ಒಳಕೊಳಿಸಿದರು; ಕತೆ ಮಾತ್ರವಲ್ಲ, ಭಾರತೀಯ ವಿದ್ಯೆಯ ಸೂಕ್ಷ್ಮತೆಗಳೂ ಅಲ್ಲಿನವರಿಗೆ ತಿಳಿಯಲೆಂದು, ಇಲ್ಲಿ ನಮಗೆ ಅನವಶ್ಯಕವೆಂದು ತೋರಬಹುದಾದ ಸಂಗತಿಗಳನ್ನೂ ವಿಸ್ತರಿಸಿದರು. ಇಲ್ಲಿಯಾದರೂ, ಇನ್ನೊಮ್ಮೆ ವಿ.ಸೀ. ತಕ್ಕಡಿಯಲ್ಲಿಯೇ ನಾಟಕ

ವನ್ನಿಟ್ಟು ಕಡಿಮೆಯಾದುದನ್ನು ತುಂಬಿ, ಹೆಚ್ಚಿನಿಸಿದುದನ್ನು ಬಿಟ್ಟುಕೊಟ್ಟು ನೇರ್ಪಡಿಸಿದಾಗ 'ಪಟ್ಟಬಂಧ' ಪ್ರಸಾರದಲ್ಲಿಯಂತೂ, ಸಾರ್ಥಕತೆಯನ್ನು ಕಂಡು ಕೊಳ್ಳುತ್ತದೆ.

೫

ಎಲ್ಲೋ ಅಲ್ಲಿ–ಇಲ್ಲಿ ಆಗ–ಈಗ ಪ್ರಯೋಗಾರ್ಥವಾಗಿ ಅಲ್ಲದೆ ವಿ.ಸೀ. ನಾಟಕಗಳು ಕನ್ನಡ ರಂಗವನ್ನು ತುಂಬಲಿಲ್ಲ. ಶ್ರೀಯವರು, ಮಾಸ್ತಿ, ಕುವೆಂಪು, ಎಂ. ಆರ್. ಶ್ರೀ, ಪುತಿನ ಅವರ ಕೃತಿಗಳನ್ನೊಳಗೊಂಡು ಅವರ ಸಮಕಾಲೀನ ಸಾಹಿತಿಗಳ ನಾಟಕಗಳಾದರೂ ಅಷ್ಟೇ. ಈ ಮಾತಿಗೆ ಅಪವಾದವೆಂದರೆ 'ಸಾವಿನ ಸಮಸ್ಯೆ' ಯ ವೆಂಬಾರರು, 'ವಿಗಡ ವಿಕ್ರಮರಾಯ'ದ ಸಂಸ, 'ಆಷಾಢಭೂತಿ'ಯ ಮೂರ್ತಿರಾಯರು, ಹಲವು ನಾಟಕಗಳ ಕೈಲಾಸಂ ಮತ್ತು ಶ್ರೀರಂಗ, 'ನರಕದ ನ್ಯಾಯ'ದ ರಾಜರತ್ನಂ–ಹೀಗೆ ಕೆಲವರೇ. ವೃತ್ತಿರಂಗವಂತೂ ಇಂತಹ "ಸಾಹಿತ್ಯಕ ಮಡಿನಾಟಕ" ಗಳನ್ನು ಮೂಸಿಯೂ ನೋಡಲಿಲ್ಲ. ವೇಷ–ಭೂಷಣ, ಪಾತ್ರಾಲಂಕಾರ, ನೃತ್ಯ, ಸಂಗೀತ, ಸಮರ, ಹಾಸ್ಯ ಇವನ್ನು ಒಳಗೊಂಡ Formula ನಾಟಕಗಳಿಗೆ ಮಾತ್ರ ವೃತ್ತಿರಂಗದಲ್ಲಿ ಸ್ಥಾನ. ಮುಂಡಾಜೆ ರಂಗನಾಥ ಭಟ್ಟರೂ, ವೀರಣ್ಣನವರೂ ಶ್ರೀರಂಗರ ಮತ್ತು ಕಾರಂತರ ನಾಟಕಗಳನ್ನು "ಇವು ವೃತ್ತಿರಂಗಕ್ಕೆ ತುಂಬಿ ಬರುವುದಿಲ್ಲ" ಎಂಬ ಮಾತನ್ನು ಮುಂದು ಮಾಡಿ ಕೈಬಿಟ್ಟದ್ದುಂಟು. ವಿಲಾಸೀರಂಗದ ಕಲಾವಿದ ತಂಡಗಳಿಗೂ ಇವು ಪೌರಾಣಿಕ ಕಥಾವಸ್ತುವಿನ "ಗೊಡ್ಡು" ನಾಟಕಗಳು ! ಸಮಕಾಲೀನ ಜನಜೀವನದ ಏರುಪೇರುಗಳನ್ನು ಚಿಕಿತ್ಸಕ ದೃಷ್ಟಿಯಿಂದ ಕಾಣದ ಸಾಮಾಜಿಕ ವಿಡಂಬನೆಗಳಲ್ಲ. ಇನ್ನೂ ಮುಖ್ಯವಾದ ಮಾತೆಂದರೆ, ವಿ.ಸೀ. ನಾಟಕಗಳನ್ನು ಅಭಿನಯಿಸಿ ಸಿದ್ಧಿ ಕಾಣಬೇಕಾದರೆ ತಕ್ಕ ಸಾಧನೆಬೇಕು. ಇದಕ್ಕಾಗಿ ಹಟಕಟ್ಟಿ ನಿಲ್ಲುವ ಕಲಾವಿದರ ತಂಡ ಆಗಿ ಬರಬೇಕು. ಕಾಲಗುಣಕ್ಕೆ ತಕ್ಕಂತೆ, ಹೆಚ್ಚು ಕಷ್ಟಪಡಲು ಆಗದೆ ಹಗುರವಾದ ನಾಟಕಗಳನ್ನು ಅಭಿನಯಿಸುವ ಇಂದಿನ ಜಾಯಮಾನಕ್ಕೆ ವಿ.ಸೀ. ನಾಟಕಗಳು ಮಣಿಯುವುದಿಲ್ಲ.

ರಂಗವನ್ನು ಕಾಣಲಿಲ್ಲವೆಂದು ವಿ.ಸೀ. ನಾಟಕಗಳನ್ನು ಕಡೆಗಣಿಸಿ ಬಿಡುವಂತಿಲ್ಲ. ಹತ್ತು ಜನರ ಸಮ್ಮುಖದಲ್ಲಿ ನಾಲ್ಕು ಮಂದಿ ನಟ ನಟಿಯರು ಸಾಲಂಕೃತರಾಗದಿದ್ದರೂ ಸಾಭಿನಯವಾಗಿ ನಾಟಕ ವಾಚನ ಮಾಡಿದರೆ ನಿರೀಕ್ಷೆಗಿಂತ ಹೆಚ್ಚಿನ ಲಾಭವಾಗುತ್ತದೆ. ಕೇಳಿಯೇ ಇಲ್ಲದ ಕನ್ನಡ ನುಡಿಗಳೂ ನುಡಿಗಟ್ಟುಗಳೂ ಹೊಳೆದು ಭಾಷೆಯನ್ನು ಶ್ರೀಮಂತಗೊಳಿಸಿದ ರೀತಿ ಸಂತೋಷ ಕೊಡುತ್ತದೆ. 'ಪಿಗ್‌ಮೇಲಿಯನ್' ಮತ್ತು 'ಮೇಜರ್ ಬಾರ್ಬರಾ', ಅನುವಾದಕರಿಗೆ ಸ್ಫೂರ್ತಿ ಕೊಡುತ್ತವೆ. 'ಆಗ್ರಹ' ಮತ್ತೂ 'ಚ್ಯವನ' ಕೃತಿಗಳಲ್ಲಿನ ಭಾವೋದ್ವೇಗವೂ 'ಶ್ರೀಶೈಲ ಶಿಖರ'ದ ಪ್ರಸಾರ ಗುಣವೂ

'ಪಟ್ಟಬಂಧ'ದ ಭವ್ಯ ಚಿತ್ರಣಗಳೂ ಇಂದಿನ ಮುಂದಿನ ನಾಟಕಕಾರರನ್ನು ಹುರಿದುಂಬಿಸುತ್ತವೆ. 'ಸೊಹ್ರಾಬ್ ರುಸ್ತುಂ' ಕನ್ನಡದ ಒಂದು ಶ್ರೇಷ್ಠ ರಂಗನಾಟಕವಾಗಿ ಮತ್ತೆ ವಿಜೃಂಭಿಸುತ್ತದೆ. ವಿ.ಸೀ. ನಾಟಕಗಳ ಪ್ರಸಾದ ಗುಣ ಅಂಥದು. ಅವುಗಳ ಪ್ರದರ್ಶನ, ವಾಚನಗಳಿಂದಾಗಿ ಪ್ರೇಕ್ಷಕ, ಶ್ರೋತೃಗಳ ಭಾಷೆ ಒಪ್ಪಗೊಳ್ಳುತ್ತದೆ ; ಭಾವ ಹದವಾಗುತ್ತದೆ ; ಬಾಳನ್ನು ಹಸನುಗೊಳಿಸುವಂತಹ ಚೆಲುವುಗೊಳಿಸುವಂತಹ ಅನೇಕ ಅರ್ಥಗಳು ತೋರಿಕೊಳ್ಳುತ್ತವೆ.

–ಡಾ. ಎಚ್. ಕೆ. ರಂಗನಾಥ್

# ಮೊದಲ ಮಾತು

ವಿ.ಸೀ. ಸಮಗ್ರ ಸಾಹಿತ್ಯ ಸಂಪುಟಗಳನ್ನು ಸಂಕಲಿಸಿ ಪ್ರಕಟಿಸಬೇಕೆಂಬ ನಮ್ಮ ಸಾಹಸದಲ್ಲಿ ನಾವು ಮುಂದುವರಿಯುತ್ತಿದ್ದೇವೆ ಎಂಬುದನ್ನು ಓದುಗರಿಗೆ ನಿವೇದಿಸುವಲ್ಲಿ ತುಂಬ ಸಂತೋಷಿಸುತ್ತೇವೆ. ಇಲ್ಲಿ ನಾವು ಅರ್ಪಿಸುತ್ತಿರುವದು ವಿ.ಸೀ. ಅವರ ನಾಟಕ ಸಂಪುಟ. ವಿ.ಸೀ. ಅವರನ್ನು ಬೇರೆ ಲೇಖಕರಂತೆ, ಮುಖ್ಯವಾಗಿ ಕವಿಗಳು, ಕಾದಂಬರಿಕಾರರು, ವಿಮರ್ಶಕರು ಎಂದು ನಿರ್ದೇಶಿಸುವಂತಿಲ್ಲ. ಮುಖ್ಯವಾಗಿ ಅವರು ಅಧ್ಯಾಪಕರು. ಒಂದೊಂದು ಸಾಹಿತ್ಯ ಪ್ರಕಾರದಲ್ಲಿಯ ಸಾಧ್ಯತೆಗಳನ್ನು ಸೂಚಿಸಿದರೆ ತಮ್ಮ ಕೆಲಸವಾಯಿತು ಎಂದುಕೊಂಡು ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿಯೂ ಅವರು ಕೈಯಾಡಿಸಿದರು.

ಈ ನಾಟ್ಯ ಸಂಪುಟವೂ ಅಷ್ಟೇ. ಅದರಲ್ಲಿರುವವು ಕೇವಲ ಐದು ಸಣ್ಣ ನಾಟಕಗಳು, ಎರಡು ಭಾಷಾಂತರಗಳು. ಈ ಸಂಪುಟಕ್ಕೆ ಪ್ರಸ್ತಾವನೆಯನ್ನು ಬರೆಯುವುದಕ್ಕೆ ಡಾ. ರಂಗನಾಥರವರಂತಹ ವಿದ್ವಾಂಸರು ಒಪ್ಪಿದ್ದು ನಮ್ಮ ಭಾಗ್ಯ. ಏಕೆಂದರೆ ಆಕಾಶವಾಣಿಯಲ್ಲಿ, ಭಾರತ ಸರ್ಕಾರದ ಸಂಗೀತ ನಾಟ್ಯ ವಿಭಾಗದಲ್ಲಿ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಾಟಕಗಳನ್ನು ಆಡಿ, ಆಡಿಸಿ, ಪಾಠ ಹೇಳಿ ಬಹುಮುಖವಾದ ಅನುಭವ ಪಡೆದವರು ಅವರು. ವಿ.ಸೀ. ಅವರ ನಾಟಕಗಳಲ್ಲಿ ಯಾವವು ಯಾವ ಮಾಧ್ಯಮಕ್ಕೆ ಒದಗುತ್ತವೆ ಎಂಬ ಅವರ ನಿರೂಪಣೆಯಲ್ಲಿ ಇದು ಸ್ಪಷ್ಟವಾಗಿ ಕಾಣುವಂತಿದೆ.

ಜೀವನವನ್ನು ಸಮೃದ್ಧಗೊಳಿಸಬಲ್ಲ ಸುಂದರವಾಗಿಸಬಲ್ಲ ಗುಣಗಳನ್ನು ವಿ.ಸೀ. ಅವರು ಮೌಲ್ಯಗಳೆನ್ನುತ್ತಿದ್ದರು. ಅಂತಹ ಮೌಲ್ಯಗಳನ್ನು ಕುರಿತು ಅವರು ಸತತವಾಗಿ ಚಿಂತಿಸುತ್ತಿದ್ದರು. ಅವುಗಳಲ್ಲಿ ರುಚಿ, ಶುಚಿ, ಕಾರುಣ್ಯ, ಪ್ರೀತಿ ಎಂಬವು ಬಹುಮುಖ್ಯವೆಂದು ಅವರು ನಂಬಿದ್ದರು. ಆ ನಂಬಿಕೆ ಇಲ್ಲಿಯ ನಾಟಕಗಳ ವಸ್ತುಗಳನ್ನು ಆಯುವುದರಲ್ಲಿ ಹೇಗೆ ಕಂಡು ಬರುತ್ತದೆ ಎಂಬುದನ್ನು ಡಾ. ರಂಗನಾಥರು ಸೊಗಸಾಗಿ ವಿವರಿಸಿದ್ದಾರೆ.

ವಿ.ಸೀ. ಅವರು ಬರೆದದ್ದು ಐದು ನಾಟಕಗಳಾದರೂ ನೋಡಿದ ನಾಟಕಗಳು ಅಸಂಖ್ಯ. ವಿದೇಶೀಯ ನಾಟಕ ಕಂಪನಿಗಳು ಭಾರತದಲ್ಲಿ ಸಂಚರಿಸುತ್ತಿದ್ದಾಗ ಅವರ ನಾಟಕಗಳನ್ನು ನೋಡುವದಕ್ಕೆಂದು ಅವರು ಊರಿಂದೂರಿಗೆ ಹೋಗಿದ್ದ ಸಂದರ್ಭಗಳು ಅನೇಕ. ಆದ್ದರಿಂದ ಅವರಿಗೆ ಎಲ್ಲ ವಿಧದ ನಾಟಕಗಳ ಆಳವಾದ ಪರಿಜ್ಞಾನವಿದ್ದಿತು.

ನಾಟಕ ಲೇಖಕರಲ್ಲಿ ಅನೇಕರು, ರಂಗ ನಿರ್ದೇಶಕರಾಗಲಿ ನಟರಾಗಲಿ, ತಾವು ಬರೆದ ಮಾತುಗಳನ್ನು ಮತ್ತು ನಿರ್ದೇಶಗಳನ್ನು ಚ ತು ತಪ್ಪದೆ ಅನುಸರಿಸಬೇಕೆಂದು ಹಟದಿಂದ ವಾದಿಸುತ್ತಾರೆ. ಆದರೆ ಇದು ಅಸಾಧ್ಯವೆನ್ನುವದು ನಾಟಕಗಳನ್ನು ಆಡಿ ಆಡಿಸಿದವರೆಲ್ಲರಿಗೂ ಗೊತ್ತು. ಪ್ರೇಕ್ಷಕರ ಮುಂದೆ ಒಂದು ನಾಟಕವು ಕಲಾಕೃತಿಯಾಗಿ

ನಿಲ್ಲಬೇಕಾದರೆ ಅದಕ್ಕೆ ಲೇಖಕ, ನಿರ್ದೇಶಕ, ನಟರು, ಇನ್ನೂ ಅನೇಕ ರಂಗಕರ್ಮಿಗಳ ಸಹಕಾರ ಅವಶ್ಯವಾಗಿರುತ್ತದೆ. ಇಂದು ನಮ್ಮ ರಂಗಭೂಮಿಯಲ್ಲಿ ಕನ್ನಡದಲ್ಲೇ ಬರೆದ ನಾಟಕಗಳಿಗಿಂತ ಹೆಚ್ಚಾಗಿ ಬೇರೆ ಭಾಷೆಗಳಿಂದ ಭಾಷಾಂತರಿಸಿದ ಇಲ್ಲವೆ ರೂಪಾಂತರಿಸಿದ ಕೃತಿಗಳನ್ನು ಕತೆ–ಕಾದಂಬರಿಗಳನ್ನು ನಿರ್ದೇಶಕರೇ ನಾಟಕಗಳಾಗಿ ಪರಿವರ್ತಿಸಿದ ಕೃತಿಗಳನ್ನು ಹೆಚ್ಚಾಗಿ ನೋಡುತ್ತಿರುವದಕ್ಕೆ ನಾಟಕಲೇಖಕರ ಇಂತಹ ಅವಾಸ್ತವ ಹಟವೇ ಕಾರಣವೆಂದು ತೋರುತ್ತದೆ.

ಭಾಸ ಕಾಳಿದಾಸ ಭವಭೂತಿಗಳ ಕಾಲದಲ್ಲಿ ನಮ್ಮ ರಂಗಭೂಮಿಯ ಸೌಕರ್ಯಗಳೇನಿದ್ದವು, ನಟರು ಯಾರಿದ್ದರು ಎಂಬಂತಹ ವಿವರಗಳು ನಮಗೆ ಲಭ್ಯವಿಲ್ಲದಿದ್ದರೂ ಇಂಗ್ಲೆಂಡಿನಲ್ಲಿ ಶೇಕ್ಸಪಿಯರನ ಕಾಲದಿಂದ ಇಂತಹ ವಿವರಗಳು ವಿಪುಲವಾಗಿ ದೊರೆಯುತ್ತವೆ. ಅವುಗಳನ್ನು ನೋಡಿದರೆ ನಟ ನಿರ್ದೇಶಕರಿಗೆ ಎಷ್ಟು ಸ್ವಾತಂತ್ರ್ಯ ಇರುತ್ತಿತ್ತು ಎಂಬುದು ತಿಳಿಯುವಂತಿದೆ. ಕೆಲವು ನಾಟಕಗಳನ್ನಂತೂ ಇಂತಿಂತಹ ನಟ ನಟಿಯರಿಗಾಗಿಯೇ ಬರೆಯಲಾಯಿತೆಂಬುದು ಕೂಡ ಪ್ರಸಿದ್ಧವಾಗಿದೆ. ಇದು ಅನಿವಾರ್ಯ. ನಮ್ಮ ಸಂಸ್ಕೃತ ನಾಟಕಗಳ ಪ್ರಾಚೀನ ಕಾಲದಲ್ಲಿ ಕೂಡ ವಾಸವದತ್ತ, ಮಾಲವಿಕಾಗ್ನಿಮಿತ್ರ, ಮೃಚ್ಛಕಟಿಕದಂತಹ ನಾಟಕಗಳನ್ನು ಆಗ ತಮ್ಮೆದುರಿಗಿದ್ದ ನಟ ನಟಿಯರನ್ನು ಗಮನದಲ್ಲಿಟ್ಟುಕೊಂಡೇ ಭಾಸ ಕಾಳಿದಾಸ ಶೂದ್ರಕರು ತಮ್ಮ ನಾಟಕಗಳನ್ನು ಬರೆದರೆಂದು ಊಹಿಸಬಹುದು.

ಆದ್ದರಿಂದ ವಿ.ಸೀ ಅವರ ನಾಟಕಗಳಲ್ಲಿಯ ರಂಗ ನಿರ್ದೇಶನಗಳನ್ನೂ ಸಂಭಾಷಣೆಗಳನ್ನೂ ವಿವರವಾದ ವಿಮರ್ಶೆಗೆ ಒಳಪಡಿಸುವುದು ಇಲ್ಲಿ ಅಪ್ರಸ್ತುತವೆನ್ನಿಸಬಹುದು. ತಾನು ಮಹಾಭಾರತ ಕಾಲದಿಂದ ಇಂದಿನ ಕಾಲದವರೆಗೆ ಓದಿದ ಕೇಳಿದ ಕತೆಗಳಲ್ಲಿ ಈ ಸನ್ನಿವೇಶಗಳು ತುಂಬಾ ನಾಟಕೀಯವೆಂದು ನನಗೆ ತೋರಿವೆ ; ರಂಗದಲ್ಲಿ ಅವುಗಳ ಪ್ರದರ್ಶನ ರೀತಿ, ನಟ ನಟಿಯರು ಆಡುವ ಮಾತುಗಳು, ಸುಮಾರಾಗಿ ಈ ರೀತಿಯಾಗಿದ್ದರಾದೀತು, ಎಂಬುದಷ್ಟೇ ಅವರ ಆಶಯವೆಂದು ನನಗೆ ತೋರುತ್ತದೆ. ಈ ಕೃತಿಗಳು ಹೆಚ್ಚಾಗಿ ಪ್ರಯೋಗಗಳನ್ನು ಕಂಡಿಲ್ಲ. ಈ ಮೇಲೆ ನಾನು ಹೇಳಿದಂತೆ ನಟ ನಿರ್ದೇಶಕರು ಸ್ವಾತಂತ್ರ್ಯವಹಿಸುವದು ಲೇಖಕರಿಗೆ ಅಪಚಾರವಾಗದು ಎಂಬುದನ್ನು ತಿಳಿದ ಮೇಲಾದರೂ ನಾಟಕಾಸಕ್ತರು ಅವುಗಳನ್ನು ಪ್ರಯೋಗಕ್ಕೂ ಎತ್ತಿಕೊಳ್ಳಬಹುದು ಎಂದು ಭಾವಿಸಿದ್ದೇನೆ.

ಈ ಸಂಪುಟ ಸಾಹಿತ್ಯಾಸಕ್ತರಿಗೆ, ನಾಟಕಾಸಕ್ತರಿಗೆ ಮೆಚ್ಚಿಕೆಯಾಗುವುದೆಂಬ ನಂಬಿಕೆ ನಮ್ಮದು.

**ಪಿ. ವಿ. ಜೋಶಿ**
ಅಧ್ಯಕ್ಷ, ವಿ. ಸೀ. ಸಂಪದ

# ಅರಿಕೆ

ವಿ.ಸೀ. ಸಾಹಿತ್ಯ ಸಮಸ್ತವನ್ನೂ ಹತ್ತು ಸಂಪುಟಗಳಲ್ಲಿ ದೊರಕಿಸಿಕೊಡಬೇಕೆಂದು ಸಂಕಲ್ಪಿಸಿರುವ ವೇದಿಕೆ ಆ ದಿಕ್ಕಿನಲ್ಲಿ ಯಥಾಶಕ್ತಿ ಮುಂದುವರಿಯುತ್ತಿರುವುದು ಸರ್ವವಿದಿತ. ಮೊದಲ ಸಂಪುಟವಾಗಿ ಸಮಗ್ರ ಕಾವ್ಯ ("ಸ್ನೇಹ ವಿಶ್ವಾಸ", 1991) ವನ್ನೂ ಎರಡನೆಯದಾಗಿ ಸಮಗ್ರ "ಲಲಿತ ಪ್ರಬಂಧ ಸಂಪುಟ" (1992)ವನ್ನೂ ವೇದಿಕೆ ಈಗಾಗಲೇ ಪ್ರಕಟಿಸಿದೆ. ಹೆಚ್ಚಿನ ಲಾಭದೃಷ್ಟಿಯನ್ನಿಟ್ಟುಕೊಳ್ಳದೆ ಉತ್ತಮ ಕಾಗದ ಮುದ್ರಣ ವಿನ್ಯಾಸದೊಂದಿಗೆ, ಕಡಮೆ ಬೆಲೆಗೆ ಅವನ್ನು ದೊರಕಿಸಿದ್ದರೂ ಪ್ರತಿಗಳ ಮಾರಾಟ ತುಂಬಾ ನಿರಾಶಾದಾಯಕವಾಗಿದ್ದು, ನಿರೀಕ್ಷಿಸಿದ್ದ ಉತ್ತೇಜನ ದೊರೆಯದೆ ಹೋಗಿರುವುದು ಖೇದದ ಸಂಗತಿ. ಆದಾಗ್ಯೂ ಮೊದಲೆರಡು ಸಂಪುಟಗಳನ್ನು ಪ್ರಕಟಿಸುವಲ್ಲಿ ಸ್ನೇಹಿತರು, ಅಭಿಮಾನಿಗಳು ನೀಡಿದ ನೆರವು, ಒತ್ತಾಸೆ ನಿಗದಿತ ಯೋಜನೆಯಲ್ಲಿ ಮುಂದುವರಿಯುವಂತೆ ಪ್ರೇರೇಪಿಸಿದೆ. ಅದಕ್ಕಾಗಿ ಆ ಎಲ್ಲರಿಗೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತ, ವಿ.ಸೀ. ಸಾಹಿತ್ಯದ ಮೂರನೆಯ ಸಂಪುಟವಾಗಿ ಅವರ 'ಸಮಗ್ರ ನಾಟಕ'ಗಳನ್ನು ಇಲ್ಲಿ ಸಂಕಲಿಸಿ ಪ್ರಕಟಿಸಿದ್ದೇವೆ. ಸಹೃದಯರು ಇದನ್ನು ವಿಶ್ವಾಸದಿಂದ ಸ್ವಾಗತಿಸುವರೆಂದು ನಂಬಿದ್ದೇವೆ.

ಎರಡು ಅಂಶಗಳನ್ನು ಇಲ್ಲಿ ಉಲ್ಲೇಖಿಸಬೇಕು. ಒಂದು : ಇಬ್ಸೆನ್ ತರುವಾಯದ ಖ್ಯಾತ ನಾಟಕಕಾರರು 15–20 ಮಂದಿಯ 40–50 ಶ್ರೇಷ್ಠ ನಾಟಕಗಳನ್ನು ಕನ್ನಡದಲ್ಲಿ ಪರಿವರ್ತಿಸಿಕೊಂಡರೆ 'ಆಧುನಿಕ ವಸ್ತು, ದೃಷ್ಟಿ ರಚನೆ, ಕ್ರಿಯಾವಿಧಾನಗಳ ಪರಿಚಯು' ನಮಗೆ ಆಗುವುದೆಂದೂ ಜೊತೆಗೆ 'ಎಂಥ ವಿಷಯಗಳನ್ನು ಅವರು ಆಯುತ್ತಾರೆ, ರಂಗರಚನೆಗೆ ಅಳವಡಿಸುತ್ತಾರೆ, ಅವಕ್ಕೆ ಕೀರ್ತಿ ಶಕ್ತಿ ಹೇಗೆ ಬಂದಿವೆ' ಎಂಬುದು ಗೊತ್ತಾಗುವುದೆಂದೂ ಅವರು ನಂಬಿದ್ದರು. ಪ್ರಕಟಿಸುವವರಿದ್ದರೆ ಎರಡು ತಿಂಗಳಿಗೆ ಒಂದೊಂದರಂತೆ 15–20 ನಾಟಕಗಳನ್ನು ತಾವೇ ಭಾಷಾಂತರಿಸಲೂ ಸಿದ್ಧವಿದ್ದರು. ಆ ಉದ್ದೇಶದಿಂದಲೇ ಷಾ ಅವರ ನಾಟಕಗಳನ್ನು ಅವರು ಕನ್ನಡಿಸಿದ್ದು. ಆದರೆ ಆರೆಂಟು ವರ್ಷವಾದರೂ ಪ್ರಕಟವಾಗದೆ ಅವು ಹಸ್ತಪ್ರತಿ ರೂಪದಲ್ಲಿಯೇ ಉಳಿದುಕೊಂಡುದು ಅವರನ್ನು ನಿರುತ್ಸಾಹಗೊಳಿಸಿತು. ಪರಿಣಾಮವಾಗಿ, ಮಾಡುತ್ತಿದ್ದ ನೊಯೆಲ್ ಕವರ್ಡ್‌ರ 'ಕ್ಯಾವಲ್‌ಕೇಡ್' ಭಾಷಾಂತರವನ್ನು ಅರ್ಧಕ್ಕೇ ನಿಲ್ಲಿಸಿಬಿಟ್ಟರು. ಇನ್ನೊಂದು ಅಂಶ : ನಾಟಕಗಳ ರಂಗಸಾಧ್ಯತೆಗೆ ಸಂಬಂಧಿಸಿದ್ದು. ಒಂದು ಮುನ್ನುಡಿಯಲ್ಲಿಯೂ ಅವರು ಅದನ್ನು ನುಡಿದಿದ್ದಾರೆ. ವಿಮರ್ಶಕರು Drama ಮತ್ತು Play ಇವೆರಡಕ್ಕೂ ಇರುವ ವ್ಯತ್ಯಾಸವನ್ನು ವಿಶದಗೊಳಿಸಬೇಕೆಂಬುದು. 'Drama as a literary form' ಎಂಬುದೊಂದು ಉಂಟು ; ರಂಗದಲ್ಲಿ ಪ್ರದರ್ಶನಗೊಳ್ಳದಿದ್ದರೂ ಒಂದು ನಾಟಕ 'Drama' ಆಗಬಲ್ಲದು ; Play ಆಗದೆ ಇರಬಹುದು ಎಂಬ ಅಭಿಪ್ರಾಯ ಅವರದಾಗಿತ್ತು. ಹಾಗೆ

ರಂಗದ ಮೇಲೆ ಪ್ರದರ್ಶನಗೊಳ್ಳದೆ ಹೋದಾಗ್ಯೂ Drama ಓದುಗರಿಗೆ 'ಸ್ವಸಂಪೂರ್ಣವಾದ ಒಂದು ಅಖಂಡ ಅನುಭವವನ್ನು ದೊರಕಿಸುವುದು ಸಾಧ್ಯ'; ಆಗ ಅದು 'ಮಾನಸಿಕ ಪ್ರಯೋಗ' (mental performance) ವಾಗುತ್ತದೆ ಎನ್ನುತ್ತಿದ್ದರು. ಇದು ಪರ್ಯಾಲೋಚ್ಯ.

ವಿ.ಸೀ. ತಮ್ಮ ನಾಟಕಗಳಲ್ಲಿ ಅಚ್ಚು ಮಾಡಿಸಿದ್ದ ಛಾಯಾಚಿತ್ರಗಳನ್ನು ಈ ಸಂಪುಟದಲ್ಲಿ ಅಳವಡಿಸಲಾಗಿಲ್ಲ. ಹಾಗೇ 'ಸೊಹ್ರಾಬ್–ರುಸ್ತುಂ' ನಾಟಕ ವಸ್ತುವಿಗೆ ಆಧಾರವಾಗಿರುವ ಫಿರ್ದೌಸಿಯ ಷಾಹನಾಮಾ ಕಾವ್ಯದಲ್ಲಿ ಬರುವ ಕಥಾಸ್ವರೂಪವನ್ನು ಸಂಗ್ರಹಿಸಿ ಮುದ್ರಿಸಿದ್ದ 'ಪರಿಶಿಷ್ಟ' ಭಾಗವನ್ನೂ ಇಲ್ಲಿ ಸೇರಿಸಿಲ್ಲ. ಈ ಕೊರತೆಯನ್ನು ದಯವಿಟ್ಟು ಮನ್ನಿಸಬೇಕು.

ಈ ಸಂಪುಟವನ್ನು ಸಂಕಲಿಸಿ ಪ್ರಕಟಿಸಲು ವೇದಿಕೆಗೆ ಅನುಮತಿ ನೀಡಿ ಸಹಕರಿಸಿರುವ ವಿ.ಸೀ. ಅವರ ಮಕ್ಕಳೆಲ್ಲರಿಗೂ, ನಮ್ಮನ್ನು ಉತ್ತೇಜಿಸುತ್ತಿರುವ ಅವರ ಬಂಧುವರ್ಗಕ್ಕೂ ನಮ್ಮ ವಿಶೇಷ ಕೃತಜ್ಞತೆಗಳು...ನಮ್ಮ ಕೋರಿಕೆಯನ್ನು ಪುರಸ್ಕರಿಸಿ ವಿಮರ್ಶಾತ್ಮಕ ಪ್ರಸ್ತಾವನೆಯನ್ನು ಬರೆದುಕೊಟ್ಟು ಕೃತಿಯ ಮೌಲಿಕತೆಯನ್ನು ಹೆಚ್ಚಿಸಿರುವ ಡಾ. ಎಚ್. ಕೆ. ರಂಗನಾಥ್ ಅವರ ಉಪಕಾರ ದೊಡ್ಡದು ; ಅವರಿಗೆ ನಾವು ಆಭಾರಿಯಾಗಿದ್ದೇವೆ. ಅವರು ಆಶಿಸಿರುವಂತೆ ರಂಗನಿರ್ದೇಶಕರು ಮತ್ತು ನಾಟಕಾಸಕ್ತರ ಗಮನ ವಿ.ಸೀ. ನಾಟಕಗಳತ್ತ ಹರಿದು ಅವು ರಂಗಪ್ರದರ್ಶನಗಳನ್ನು ಕಾಣುವಂತಾಗಲಿ ಎಂಬುದೇ ನಮ್ಮ ಅಂತರಂಗದ ಹಾರೈಕೆಯೂ ಆಗಿದೆ...ಇದರ ಪ್ರಕಟಣೆಗೆ ಉದಾರ ನೆರವು ನೀಡಿದ ಸನ್ಮಿತ್ರ ಶ್ರೀ ಎಸ್. ಗೋಪಾಲ್ ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇವೆ ; ಅಂಥವರ 'ಸಂತತಿ ಸಾವಿರವಾಗಲಿ.' ಎಂದಿನಂತೆ ಗ್ರಂಥವನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿರುವ ಶ್ರೀ ಮುನಿಧರ್ಮಯ್ಯ–ಶ್ರೀ ರಾಜು ಬಂಧುಗಳಿಗೆ, 'ನೇತ್ರಾ ಪ್ರಿಂಟರ್ಸ್'ನ ತರುಣ ಮಿತ್ರರಿಗೆ, ಮುಖಪುಟದ ವಿನ್ಯಾಸಕ್ಕಾಗಿ ಶ್ರೀ ನಾಗೇಂದ್ರ ಕುಮಾರ್ ಅವರಿಗೆ ನಮ್ಮ ವಂದನೆಗಳು.

ಈ ಪ್ರಕಟನ ಸಾಹಸಕ್ಕೆ ಬೆಂಬಲವಾಗಿ ನಿಂತ 'ಸಂಪದ'ದ ಅಧ್ಯಕ್ಷರು ಶ್ರೀ ಪಿ. ವಿ. ಜೋಶಿ, ಕಾರ್ಯಕಾರಿ ಸಮಿತಿಯ ಮಾನ್ಯರಿಗೆ ಮತ್ತು ವೇದಿಕೆಯ ಎಲ್ಲ ಮಾನ್ಯ ಪೋಷಕ ಸದಸ್ಯರಿಗೆ ನಮ್ಮ ಕೃತಜ್ಞತೆಗಳು.

ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದು ತಮ್ಮ ಸಹಕಾರವನ್ನು ನೀಡುತ್ತಿದ್ದ ಶ್ರೀಯುತ ಗುಂಡ್ಮಿ ರಾಮಕೃಷ್ಣ ಐತಾಳರು ಈಚೆಗೆ ಕಾಲವಶರಾದ್ದು ಅವರ ಮಿತ್ರರೆಲ್ಲರಿಗೂ ಒದಗಿದ ಆಘಾತವಾಗಿದೆ ; ಅವರ ಸ್ಮರಣೆಗೆ ನಮ್ಮ ಗೌರವಪೂರ್ವಕ ಶ್ರದ್ಧಾಂಜಲಿ.

ನವೆಂಬರ್ 10, 1993 — ಎಂ. ವಿ. ವೆಂಕಟೇಶಮೂರ್ತಿ, 'ಸುಮನಾ'

ಬೆಂಗಳೂರು

# ಆಗ್ರಹ

ತ್ಯಜೇತ್ ಕುಲಾರ್ಥೇ ಪುರುಷಂ
ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್
ಗ್ರಾಮಂ ಜನಪದಸ್ಯಾರ್ಥೇ
ಆತ್ಮಾರ್ಥೇ ಪೃಥಿವೀಂ ತ್ಯಜೇತ್

—ಉದ್ಯೋಗಪರ್ವ

# ಪಾತ್ರಗಳು

| | |
|---|---|
| ಕೃಷ್ಣ | ಕೃಪ |
| ಯುಧಿಷ್ಠಿರ | ಕೃತವರ್ಮ |
| ಭೀಮ | ಅಶ್ವತ್ಥಾಮ |
| ಅರ್ಜುನ | ಧೃತರಾಷ್ಟ್ರ |
| ನಕುಲ | ದುರ್ಯೋಧನ |
| ಸಾತ್ಯಕಿ | ಯುಯುತ್ಸು |
| ದಾರುಕ | |

| | |
|---|---|
| ವ್ಯಾಸ | ಗಾಂಧಾರಿ |
| ನಾರದ | ದ್ರೌಪದಿ |

ಧೃಷ್ಟದ್ಯುಮ್ನ, ಶಿಖಂಡಿ, ಉಪಪಾಂಡವರು, ಸಾರಥಿ, ಪಾಳೆಯದಲ್ಲಿ ನಿದ್ರಿಸುವ ಇತರರು

# ನೋಟ ೧

[ಕುರುಕ್ಷೇತ್ರ. ಯುದ್ಧರಂಗದ ಒಂದು ಪಕ್ಕದಲ್ಲಿ ಭೀಮ, ಅರ್ಜುನ, ಕೃಷ್ಣ ಬರುತ್ತಿದ್ದಾರೆ. ಗದೆಯುನ್ನು ಭುಜದ ಮೇಲೆ ಹೊತ್ತು ಭೀಮನು ಅಸಮಾಧಾನದಿಂದ ನಡೆಯುತ್ತಿದ್ದಾನೆ.]

ಅರ್ಜುನ : ಬಲರಾಮನಿಗೆ ಬಹಳ ಕೋಪ ಬಂದಿದೆ, ಕೃಷ್ಣ. ನೋಡಿದೆಯೊ ಇಲ್ಲವೊ ಆತನು ಹಲಾಯುಧವನ್ನು ಝಳಪಿಸಿ ಯುದ್ಧಕ್ಕೆ ನುಗ್ಗಿದುದನ್ನು ?

ಕೃಷ್ಣ : ಮೊದಲೇ ಕೋಪಿಷ್ಠ. ಕೌರವನನ್ನು ಕಂಡರೆ ಮೊದಲಿಂದ ಆತನಿಗೆ ಪಕ್ಷಪಾತ. ಯುದ್ಧದಲ್ಲಿಯೂ ಅನ್ಯಾಯವಾಯಿತು.

ಅರ್ಜುನ : ಎಂದಿದ್ದರೂ ಹೀಗೆಯೇ ಆಗಬೇಕಾಗಿತ್ತಲ್ಲವೆ ?

ಕೃಷ್ಣ : ನಿಮ್ಮ ಜಯಾಭಿಲಾಷೆ ಪೂರ್ಣವಾಗಬೇಕಾಗಿದ್ದರೆ ಹೀಗೆಯೇ ನಡೆಯುಬೇಕಾಗಿತ್ತು. ಭೀಮ, ನೀನು ಅಧರ್ಮ ಮಾಡಿದೆಯಯ್ಯ.

ಭೀಮ : ಅವರು ಮಾಡಿದುದೆಲ್ಲವೂ ಧರ್ಮವೇಯೊ ? ಹುಟ್ಟಿದಂದಿನಿಂದ ನಮಗೆ ಅವರು ಮಾಡಿದ ದ್ರೋಹವನ್ನೆಲ್ಲ ತಿಳಿದ ನೀನೂ ಹೀಗೆಯೇ ಹೇಳುತ್ತಿರುವೆಯಲ್ಲ ?

ಕೃಷ್ಣ : ಅಧರ್ಮಕ್ಕೆ ಪ್ರತಿಯಾಗಿ ಅಧರ್ಮ ಮಾಡಿದರೆ ಧರ್ಮವಾದೀತೊ ? ಯುದ್ಧದಲ್ಲಿ ವೀರವರ್ತನೆಯೊಂದಿದೆಯೊ ಇಲ್ಲವೊ ? ಮೊದಲೇ ಆ ಸ್ಥಿತಿಯಲ್ಲಿ ನಾವು ಅವನನ್ನು ಯುದ್ಧಕ್ಕೆ ಕರೆಯಬಾರದಿತ್ತು.

ಅರ್ಜುನ : ಕರೆಯದಿದ್ದರೆ ಅವನನ್ನು ಗೆಲ್ಲುವ ಬಗೆ ಹೇಗೆ ಮತ್ತೆ ? ಇಲ್ಲಿಂದ ತಪ್ಪಿಸಿಕೊಂಡು ಹೋಗಿ ನಾಳೆ ಇನ್ನೊಂದು ಮಹಾಭಾರತಕ್ಕೆ ಪ್ರಾರಂಭ ಮಾಡುತ್ತಿದ್ದ.

ಕೃಷ್ಣ : ಕೊಳವನ್ನು ಸೇರುವ ಮುಂಚಿತವಾಗಿ ಅವನನ್ನು ಕಂಡುಹಿಡಿದು ರಣರಂಗದಲ್ಲಿಯೇ ಕೆಡಹಿರೆಂದು ನಾನು ಎಷ್ಟೋ ಬಗೆಯಾಗಿ ಹೇಳಿದೆ. ನೀವು ಪ್ರಯತ್ನಪಡಲಿಲ್ಲ.

ಭೀಮ : ಪಡಲಿಲ್ಲವೇನು—ಅವನು ಓಡಿಹೋಗಿ ಅವಿತುಕೊಂಡ.

ಕೃಷ್ಣ : ತಡೆಯಬಹುದಾಗಿತ್ತು.

ಭೀಮ : ಎದುರಿಗಿದ್ದ ಕೌರವ ಸೈನ್ಯದೊಡನೆ ಕಾದಿ ಅದನ್ನು ಸೋಲಿಸಿದಲ್ಲದೆ ದೂರದಲ್ಲಿ ಕುದುರೆಯ ದಳದ ಮಧ್ಯೆ ಇದ್ದ ಅವನನ್ನು ಸೇರುವ ಬಗೆ ಹೇಗೆ ?

ಕೃಷ್ಣ : ನೀನೂ ಅರ್ಜುನನೂ ಮನಸ್ಸು ಮಾಡಿದ್ದರೆ ಅದೆಷ್ಟರ ಕೆಲಸ ?

ಅರ್ಜುನ : ನಾವು ಮನಸ್ಸು ಮಾಡಲಿಲ್ಲವೆನ್ನುವೆಯೇನು ?

ಕೃಷ್ಣ : ಸಾಕಷ್ಟು ಪ್ರಯತ್ನ ಪಡಲಿಲ್ಲ.—ಅದು ಹಾಗಿರಲಿ. ನೀನು ದುರ್ಯೋಧನನ ಮಕುಟಭಂಗಮಾಡಿದ್ದು ಅಕ್ಷಮ್ಯ, ಭೀಮ; ಆತನು ಮೂರ್ಧಾಭಿಷಿಕ್ತನಾಗಿದ್ದ.

ಭೀಮ : ಕ್ಷಮ್ಯವೋ ಅಕ್ಷಮ್ಯವೊ—ನನಗೆ ತೋರಿದುದನ್ನು ಮಾಡಿದೆ. ನಿಮ್ಮ ನಯ ನನಗೆಲ್ಲಿ ಬರಬೇಕು ? ನನಗೆ ದ್ವೇಷ, ಪ್ರೀತಿ ಎರಡೇ. ನಿಮ್ಮ ಸೂಕ್ಷ್ಮಗಳು ಅರ್ಥವಾಗುವುದಿಲ್ಲ.

ಕೃಷ್ಣ : ಅಯ್ಯ, ಕೋಪಿಸಿಕೊಳ್ಳಬೇಡ. ಬಲರಾಮನ ಕೋಪದ ಪ್ರಸಂಗ ಬಂದು ನಾನು ಈ ಮಾತನ್ನು ನುಡಿದೆ. ಆದುದು ಆಗಿಹೋಯಿತು. ಯುಧಿಷ್ಠಿರನು ಕಾದಿರುತ್ತಾನೆ ಹೋಗು. ಆತನ ಮನಸ್ಸನ್ನು ಸಮಾಧಾನ ಮಾಡು.

ಭೀಮ : ಅಂತು, ಯಾರು ಹೇಗೆ ಮಾಡಿದರೂ ಆಕ್ಷೇಪಣೆಯಿಲ್ಲ. ಅವನು ಬದುಕಿರುವಷ್ಟು ದಿನವೂ ನಮ್ಮನ್ನು ಮೆಟ್ಟಿ ತುಳಿದು ಅಪಮಾನಮಾಡಿ ಮೆರೆದ ; ಸುಖಪಟ್ಟು ಸತ್ತ. ನಮ್ಮ ಪರವಾಗಿ ದ್ರೋಹವನ್ನೆಣಿಸದ ಒಂದು ದಿನವಿಲ್ಲ. ಕೊನೆಗೆ ಅವನದೇ ಸರಿಯಾಯಿತು. ಅಷ್ಟನ್ನೂ ಅನುಭವಿಸಿ ಕೊನೆಗೆ ಆವೇಶದ ಭರದಲ್ಲಿ ಒಂದು ಸಣ್ಣ ತಪ್ಪು ಮಾಡಿದುದಕ್ಕೆ ನನಗೇ ಅಪಕೀರ್ತಿ. ಬಂದರೆ ಬರಲೇಳು. ನನ್ನ ಪಾಪಗಳು ನನ್ನನ್ನು ತಿಂದಾವು ತಾನೆ !

– ಹೋಗುವನು –

ಕೃಷ್ಣ : ಪಾಪ, ಭೀಮನು ಬಹಳ ನೊಂದುಕೊಂಡಿದ್ದಾನೆ.

ಅರ್ಜುನ : ಅವನು ಏನು ಮಾಡಿಯಾನು ಕೃಷ್ಣ ? ನಮ್ಮಲ್ಲಿ ಯಾರೂ ಅವನಷ್ಟು ಕೌರವನಿಂದ ಹಿಂಸೆಪಟ್ಟಿಲ್ಲ. ಅವನ ಮೇಲೆಯೇ ದುರ್ಯೋಧನನಿಗೆ ಹೆಚ್ಚು ಕ್ರೋಧ. ಪರಸ್ಪರ ದ್ವೇಷಕ್ಕಾಗಿಯೇ ವಿಧಿ ಅವರಿಬ್ಬರನ್ನೂ ನಿರ್ಮಾಣ ಮಾಡಿದ್ದಂತೆ ಬೆಳೆದರು. ಅವನ ವಧೆಯೂ ಭೀಮನಿಂದಲೇ ಆಗಬೇಕಾಯಿತು. ಇಬ್ಬರೂ ಗದೆಯ ಸಾಧನೆ ಮಾಡಿದರು ; ಅವರಿಗೇ ಜೊತೆ ಬಿತ್ತು.

ಕೃಷ್ಣ : ನಿಮ್ಮ ಇತರರ ಅದೃಷ್ಟ.

ಅರ್ಜುನ : ನಿನಗೆ ತಿಳಿದಿರುವಷ್ಟು ನನಗೆ ತಿಳಿಯದು !

ಕೃಷ್ಣ : ಹೌದು, ಅರ್ಜುನ ; ದುರ್ಯೋಧನನ ಇದಿರಿಗೆ ಗದಾಯುದ್ಧದಲ್ಲಿ ನೀವಾರು ನಿಲ್ಲುತ್ತಿದ್ದಿರಿ ? ಭೀಮನು ತಾನೆ ಎಷ್ಟರವನು ? ಅವನಿಗಿಂತ ಇವನು ಬಲಾಢ್ಯನು ನಿಜ. ಕೇವಲ ಬಲದಿಂದ ಏನು ಪ್ರಯೋಜನ ? ಉಪಾಯದಲ್ಲಿಯೂ ಚಟುವಟಿಕೆಯಲ್ಲಿಯೂ ದುರ್ಯೋಧನನೇ ಮೀರಿದವನು. ನಿಯಮಗಳನ್ನನುಸರಿಸಿ ಯುದ್ಧಮಾಡಿದ್ದರೆ ಭೀಮನಿಗೆ ಗೆಲವಾಗುತ್ತಿತ್ತೆ—ನೀನೇ ಯುದ್ಧವನ್ನು ನೋಡುತ್ತಿದ್ದೆಯಲ್ಲ ?

ಅರ್ಜುನ : ನೋಡುತ್ತಿದ್ದೆ. ನನಗಂತೂ ಹೇಗೊ ಏನೊ ಎಂಬ ಹೆದರಿಕೆ ಇತ್ತು.

ನೀನು ಆತನ ಪ್ರತಿಜ್ಞೆಯ ಮಾತನ್ನೆತ್ತದಿದ್ದರೆ ನಾನು ಅವನಿಗೆ ಸಂಜ್ಞೆ ಮಾಡುವುದಕ್ಕಾಗುತ್ತಿರಲಿಲ್ಲ. ಭೀಮನ ಆಸೆಯೇ ನಮಗಿಲ್ಲದಿರುತ್ತಿತ್ತು.

ಕೃಷ್ಣ : ಯುಧಿಷ್ಠಿರನ ಮಾತಿನಂತೆ ಕೌರವನು ಪುನಃ ರಾಜನಾಗುತ್ತಿದ್ದನು. ಜರಾಸಂಧನನ್ನು ಸಾಧಿಸಿದ ಭೀಮನು ಹಾಗೆ ಪೆಟ್ಟು ತಿನ್ನುವನೆಂದು ನನಗೂ ತಿಳಿದಿರಲಿಲ್ಲ.

ಅರ್ಜುನ : ದುರ್ಯೋಧನನಿಗಿದ್ದುದು ಅದೇ ಕಡೆಯ ಅವಕಾಶ. ನಾವು ಕೆಣಕಿದುದೂ ಹೆಚ್ಚಾಯಿತು. ಕ್ರೋಧವನ್ನೆಲ್ಲ ತೀರಿಸಿಕೊಳ್ಳುವಂತೆ ಅದ್ಭುತವಾಗಿ ಕಾದಿದ.

ಕೃಷ್ಣ : ದಿವ್ಯವಾಗಿ ಕಾದಿದ. ಆದರೂ ಅವನ ದುರಹಂಕಾರವೂ ಮಾಯಾವಿಗುಣವೂ ಸ್ವಲ್ಪವೂ ಕಡಮೆಯಾಗಲಿಲ್ಲ ನೋಡು.

ಅರ್ಜುನ : ಜನ್ಮಕ್ಕೆ ಅಂಟಿಬಂದುದು ಹೇಗೆ ಕಡಮೆಯಾಗುವುದು ?—ಯುಧಿಷ್ಠಿರನು ಬಹಳ ವಿಷಾದಗೊಂಡಿದ್ದಾನೆ, ಕೃಷ್ಣ. ಪರಿಣಾಮವೇನಾಗುವುದೊ ಹೇಳುವುದು ಕಷ್ಟ.

ಕೃಷ್ಣ : ಆತನನ್ನು ಸಮಾಧಾನಮಾಡೋಣ ಬಾ. ಎಲೊ, ಯಾರೊ ಅಲ್ಲಿ !

– ಭಟನ ಪ್ರವೇಶ –

ಭಟ : ಸ್ವಾಮಿೂ,

ಕೃಷ್ಣ : ಯುದ್ಧಪರಿಹಾರ ವಾದ್ಯಗಳನ್ನು ಮೊಳಗಿಸುವಂತೆ ಹೇಳು.

– ಅವನು ಹೋಗುವನು –

ಅರ್ಜುನ, ಯುದ್ಧಶ್ರಮವನ್ನು ಕಳೆದುಕೊಂಡು ಇಂದಾದರೂ ಎಲ್ಲರೂ ಸುಖವಾಗಿ ನಿದ್ರೆಮಾಡಲಿ. ನೀನೂ ಸ್ವಲ್ಪ ವಿಶ್ರಮಿಸಿಕೊ ಹೋಗು.

ಅರ್ಜುನ : ನೀನು ?

ಕೃಷ್ಣ : ನಾನೂ ಬರುತ್ತೇನೆ.

– ಸಾತ್ಯಕಿಯ ಪ್ರವೇಶ –

(ಆತನ ಬಳಿಗೆ ಹೋಗಿ) ಅವರೇ ತಾನೆ, ಸಾತ್ಯಕಿ ?

ಸಾತ್ಯಕಿ : ಅವರೇ ಕೃಷ್ಣ ; ಮೂವರೂ ಇದ್ದರು.

ಕೃಷ್ಣ : ಆಡಿದ ಮಾತುಗಳೇನಾದರೂ ಕೇಳಿಸಿದವೆ ?

ಸಾತ್ಯಕಿ : ಇಲ್ಲ. ಕೃಪ ಕೃತವರ್ಮರು ಒಂದು ಬಗೆಯಲ್ಲಿ ಸುಮ್ಮನಿದ್ದರೆನ್ನಬಹುದು. ಅಶ್ವತ್ಥಾಮನು ಮಾತ್ರ ಹುಚ್ಚುಹುಚ್ಚಾಗಿ ಗೊಣಗಾಡುತ್ತ, ಹಲ್ಲು ಮಸೆ ಕಡಿಯುತ್ತ, ನಿಟ್ಟುಸಿರುಬಿಡುತ್ತ, ಎದ್ದೆದ್ದು ನೆಲವನ್ನೊದೆಯುತ್ತ ಬಿರುನುಡಿಗಳನ್ನು ನುಡಿಯುತ್ತಿದ್ದನು.

ಕೃಷ್ಣ : ಹಾಗಿದ್ದರೆ ಅಪಾಯವಿದೆ. ಶತ್ರುನಾಶವು ಇನ್ನೂ ಸಂಪೂರ್ಣವಾಗಿ ಆಗಿಲ್ಲ.

ಜಾಗ್ರತೆಯಿಂದಿರಬೇಕು. ಸುತ್ತಲೂ ಕಣ್ಣಿಟ್ಟಿರು, ಮಗು. ನಿನಗೆ ಬಹಳ ಆಯಾಸವಾಗುತ್ತಿರಬೇಕಪ್ಪ.

ಸಾತ್ಯಕಿ : ಇಂತಹ ಕೆಲಸದ ಮುಂದೆ ಆಯಾಸವೆಂದರೇನು ?

– ಸಾತ್ಯಕಿ ಹೋಗುವನು -

ಅರ್ಜುನ : (ಮುಂದೆ ಬಂದು) ಇದೇನು, ಕೃಷ್ಣ — ಸಾತ್ಯಕಿಯೊಡನೆ ಇಷ್ಟು ಗುಟ್ಟಿನ ಮಾತು ? ನಾನು ಕೇಳುವಂತಹುದಲ್ಲವೇನು ?

ಕೃಷ್ಣ : ಸ್ಪಷ್ಟವಾಗಿ ಯಾವುದೊಂದೂ ಗೊತ್ತಾಗಿಲ್ಲ. ನಿಶ್ಶೇಷವಾಗಿ ಶತ್ರುನಾಶವಾಗಿಲ್ಲ ಅರ್ಜುನ.

ಅರ್ಜುನ : ಹಾಗೆಂದರೇನು—ಮುಖ್ಯಶತ್ರು ಮಡಿದನು ; ಅವನ ಸೈನ್ಯವೆಲ್ಲ ನಾಶವಾಗಿದೆ. ಇನ್ನಾವ ಶತ್ರುಗಳು ಉಳಿದಿದ್ದಾರೆ ?

ಕೃಷ್ಣ : ಅವನ ಸೇನಾಧಿಪತಿಗಳಲ್ಲಿ ಇನ್ನೂ ಮೂವರು ಉಳಿದಿದ್ದಾರೆ ?

ಅರ್ಜುನ : ಅವರು ನಮ್ಮವರು : ಕೃಪನು ಆಚಾರ್ಯ, ಧರ್ಮಿಷ್ಠ. ಕೃತವರ್ಮನು ನಿನ್ನವನು. ನಮಗೂ ಅವನಿಗೂ ವೈರವಿಲ್ಲ. ಉಳಿದವನು ಗುರುಪುತ್ರ ; ನಮ್ಮ ಸಹಪಾಠಿ. ಒಡೆಯನು ಬದುಕಿರುವವರೆಗೂ ಇವರು ಅವನಿಗಾಗಿ ಕಾದಿದರು. ತಲೆ ಕಡಿದುಬಿದ್ದ ಮೇಲೆ ಕೈಕಾಲು ಏನು ಮಾಡಿಯಾವು ?

ಕೃಷ್ಣ : ಕೃಪ ಕೃತವರ್ಮರಿಂದ ಯಾವ ಭಯವೂ ಇಲ್ಲವೆನ್ನು.

ಅರ್ಜುನ : ಬಿಡು, ಕೃಷ್ಣ, ಅಶ್ವತ್ಥಾಮನ ಸ್ವಭಾವವನ್ನು ನಾನು ಚೆನ್ನಾಗಿ ಬಲ್ಲೆ ; ಸ್ವಲ್ಪ ದುಡುಕು, ಮುಂಗೋಪ, ಅಷ್ಟೇ ; ದುರಾತ್ಮನಲ್ಲ.

ಕೃಷ್ಣ : ಇರಬಹುದು. ಆದರೆ ಕಾಲಸ್ಥಿತಿ ಚೆನ್ನಾಗಿಲ್ಲ. ಯಾವಯಾವುದು ಹೇಗೆ ಹೇಗೆ ಆಗುವುದೊ ನೋಡಬೇಕು.

– ಇಬ್ಬರೂ ಹೋಗುವರು –

ತೆರೆ

## ನೋಟ ೨

[ಪಾಂಡವ ಪಾಳೆಯ. ಯುಧಿಷ್ಠಿರ, ಭೀಮ ಕುಳಿತಿದ್ದಾರೆ.]

– ಕೃಷ್ಣ ಅರ್ಜುನರ ಪ್ರವೇಶ –

ಇಬ್ಬರೂ : ಜಯವಾಗಲಿ ಮಹಾರಾಜನಿಗೆ !

ಯುಧಿಷ್ಠಿರ : ನೂರು ವರ್ಷ ಸುಖವಾಗಿ ಬಾಳಿ. ಬಾ ಕೃಷ್ಣ, ಬಾ ಅರ್ಜುನ, ಒಳ್ಳೆಯ ಸಮಯಕ್ಕೆ ಬಂದಿರಿ.

ಕೃಷ್ಣ : ಈಗತಾನೇ ಜೊತೆಯಲ್ಲಿದ್ದೆವು—ಇಷ್ಟರಲ್ಲಿಯೇ ಒಳ್ಳೆಯ ಸಮಯವೇನು ಬಂದಿತು ?

ಯುಧಿಷ್ಠಿರ : ಇದ್ದರೇನು—ಮನಸ್ಸಿಗೆ ಒಂದು ಘಳಿಗೆ ಒಂದು ಯುಗವಾಗುವುದು ವಿಶೇಷವೇನು ?

ಕೃಷ್ಣ : ಜಯಶೀಲನಾಗಿ ನಷ್ಟಶತ್ರುವಾಗಿರುವ ನಿನಗೆ ಒಂದು ಯುಗ ಒಂದು ಕ್ಷಣದಂತೆ ಕಾಣುತ್ತಿರಬೇಕು. ಅದು ಬಿಟ್ಟು,—

ಯುಧಿಷ್ಠಿರ : ಏಕೆ ಕೃಷ್ಣ, ನೀನೂ ಹೀಗೆ ಮಾತನಾಡುತ್ತೀಯೆ ? ಜಯದಿಂದ ಏನನ್ನು ಸಂಪಾದಿಸಿದಂತೆ ಆಯಿತು ?

ಕೃಷ್ಣ : ನೀವು ಕಳೆದುಕೊಂಡಿದ್ದ ಕ್ಷಾತ್ರವನ್ನು ; ರಾಜ್ಯವನ್ನು ; ಕೀರ್ತಿಯನ್ನು.

ಯುಧಿಷ್ಠಿರ : ಎಷ್ಟು ವೆಚ್ಚದಿಂದ, ನೋಡು ! ಹದಿನೇಳು ಅಕ್ಷೌಹಿಣಿಗೆ ಮೀರಿದ ಸೈನ್ಯ ಹೋಯಿತು. ಆನೆ, ಕುದುರೆ ಸತ್ತವು ; ಸರ್ವನಾಶವಾಯಿತು. ಗುರು ಹಿರಿಯರು ಮಡಿದರು. ಸಹೋದರರೂ ಬಂಧುಗಳೂ ಇಲ್ಲವಾದರು.

ಕೃಷ್ಣ : ಹೀಗಾಗುವುದೆಂದು ಎಲ್ಲರಿಗೂ ಮೊದಲೇ ತಿಳಿದಿದ್ದಿತಲ್ಲ. ತಿಳಿದೂ ತಿಳಿದೂ ಯುದ್ಧ ಹೂಡಿದಿರಿ.

ಯುಧಿಷ್ಠಿರ : ಹೂಡಿದೆವು. ನಮ್ಮನ್ನು ಸಾಕಿದ ನೆಲವನ್ನು ನೆತ್ತರಲ್ಲಿ ಮೀಯಿಸಿದೆವು. ಈ ಜಯ ಬೇಡ. ಈ ರಾಜ್ಯ ಬೇಡ. ಎಲ್ಲವೂ ಸಾಕಾಗಿದೆ.

ಕೃಷ್ಣ : ಸಂತೋಷ ಕಾಲದಲ್ಲಿ ವ್ಯಸನ ಯೋಗ್ಯವಲ್ಲ. ಯುದ್ಧ ಅನಿವಾರ್ಯವಾಗದಿದ್ದರೆ ನಡೆಯುತ್ತಿದ್ದಿತೇನು ? ಅಧರ್ಮವನ್ನು ನಾಶಮಾಡುವುದು ಕ್ಷತ್ರಿಯ ಕರ್ತವ್ಯವೆಂದು ತಿಳಿದು ಯುದ್ಧ ಮಾಡಿದಿರಿ. ಇತ್ತ ನೀನು ಅರ್ಜುನನನ್ನು ಕಳಿಸಿದೆ ; ಅತ್ತ ದುರ್ಯೋಧನನು ಬಂದನು. ಸಂಧಿಯ ಮಾತಿಗೆ ಮುಂಚೆ ಯುದ್ಧವನ್ನೆತ್ತಿ ಬಂದವರು ಅದರ ಪರಿಣಾಮಗಳನ್ನು ಅರಿತೇ ಇರುವರು. ಅಲ್ಲಿಗೂ ಪ್ರಯತ್ನ ಪಟ್ಟಿರಿ—ಶಾಂತಿಯಿಂದ ಕಾರ್ಯವಾದೀತೇನೊ ಎಂದು. ಸಫಲವಾಗಲಿಲ್ಲ. ಇದಕ್ಕಾಗಿ ವ್ಯಸನಪಟ್ಟು ಫಲವೇನು ? ತಮ್ಮಂದಿರ ಹರುಷವನ್ನೂ ಉತ್ಸಾಹವನ್ನೂ ಮುರಿಯಬೇಡ. ಇದುವರೆಗೂ ಯಾರಿಗೂ ಸಾಧ್ಯವಾಗದಿದ್ದ ಕಾರ್ಯವನ್ನು ಕೈಕೊಂಡು ಸಾಧಿಸಿದ್ದೀಯೆ : ಈಗ ಸಂಭ್ರಮದಿಂದಿರಬೇಕು. ನಿನ್ನ ಧರ್ಮದಿಂದ ಗೆಲವಾಯಿತು.

ಯುಧಿಷ್ಠಿರ : ವೃಥಾ ನನ್ನನ್ನೇಕೆ ಹೊಗಳುವೆ ? ಎಲ್ಲವೂ ನಿನ್ನ ಕೆಲಸ, ನಿನ್ನ ಮಂತ್ರ, ಸಹಾಯ. ನೀನೊಬ್ಬನಿಲ್ಲದಿದ್ದರೆ ನಾವು ಆ ಅಪಾಯಗಳಿಂದ ಹೊರಕ್ಕೆ ಬರುತ್ತಿದ್ದೆವೆ ? ಜಯವಾಗುತ್ತಿತ್ತೆ ? ಅಂದು ಪ್ರಪಂಚವೇ ನಮ್ಮನ್ನು ಮರೆತಿದ್ದಾಗ, ಪಾಂಚಾಲೀ ಸ್ವಯಂವರದಲ್ಲಿ, ರಾತ್ರಿಯ ಕಗ್ಗತ್ತಲಲ್ಲಿ, ನಮ್ಮ ಭಾಗದ ದೇವರು ನಮ್ಮನ್ನು ಹುಡುಕಿಕೊಂಡು ಬರುವಂತೆ ಬಂದೆ ;

ಕ್ಷೇಮವನ್ನು ವಿಚಾರಿಸಿದೆ. ಬಂಧುವಾದೆ, ಮಿತ್ರನಾದೆ, ಮಂತ್ರಿಯಾದೆ, ಅದೃಷ್ಟವಾದೆ. ಈ ಎಲ್ಲ ಭಾಗ್ಯವೂ ನಿನ್ನದು.

ಕೃಷ್ಣ : ಅಯ್ಯ, ನಿನ್ನ ವಿನಯವೇ ನಿನಗೆ ಭೂಷಣ. ಮನುಷ್ಯ ಯತ್ನದಲ್ಲಿದ್ದುದನ್ನು ನಾವು ಮಾಡಿದೆವು. ನಿನ್ನ ಧರ್ಮನಿಷ್ಠೆಯಿಂದ—ಹೋಗಲಿ ಬಿಡು, ಅವರ ಅಧರ್ಮದಿಂದ ಎನ್ನೋಣ—ನಿನಗೆ ಜಯವಾಯಿತು. ಇದೊ, ಜಯಶೀಲನಾದ ತಮ್ಮನನ್ನು ಒಪ್ಪಿಸಿಕೊ. ಅಂದು ಉಪಪ್ಲಾವ್ಯದಲ್ಲಿ ನನಗೆ ಮಧುಪರ್ಕವನ್ನು ಕೊಟ್ಟು ಉಪಚರಿಸಿ ಅರ್ಜುನನನ್ನು ನೀನು ನನ್ನೊಡನೆ ಕಳಿಸಿಕೊಟ್ಟೆ. ಈತನು ನಿನ್ನ ಪ್ರಿಯನು, ಮೈದುನನು, ಎಲ್ಲ ಪ್ರಕಾರದಿಂದಲೂ ಈತನಿಗೆ ಜಯ ದೊರೆಯುವಂತೆ ಮಾಡು ಎಂದು ಕೇಳಿದೆ. ಅತಿಮಾನುಷ ಪರಾಕ್ರಮದಿಂದ ಕಾದಿ ಆತನು ಅನಂತ ಕೀರ್ತಿಯನ್ನು ಸಂಪಾದಿಸಿದ್ದಾನೆ.

ಅರ್ಜುನ : ಸರಿ ಬಿಡು ಕೃಷ್ಣ. ಇನ್ನು ನನ್ನನ್ನು ಹೊಗಳುವುದಕ್ಕೆ ಮೊದಲು ಮಾಡಿದೆ. ನಿನ್ನ ದಿವ್ಯಸಾರಥ್ಯವೂ ಮಾರ್ಗದರ್ಶನವೂ ಇಲ್ಲದಿದ್ದರೆ ನಾವು ಉದ್ಧಾರವಾಗುತ್ತಿದ್ದೆವೆ—ಬದುಕಿರುತ್ತಿದ್ದೆವೆ ?

ಕೃಷ್ಣ : ಇದರಲ್ಲಿ ಹೊಗಳಿಕೆಯೇನಿದೆ ? ಗಾಂಡೀವಧಾರಿಯಾಗಿ ಪಾಶುಪತಾದಿ ಅಸ್ತ್ರಗಳ ಬಲವಿರುವ ನಿನಗೆ ಮೂರು ಲೋಕಗಳಲ್ಲಿ ಸಮಾನರು ಯಾರು ಪಾರ್ಥ ? ಇತರರನ್ನು ಪ್ರಶಂಸೆಮಾಡಿ ತಮ್ಮನ್ನು ತಾವು ಕೀಳುಮಾಡಿಕೊಳ್ಳುವುದು ಸರಿಯಲ್ಲ. ನಿನ್ನ ಪೌರುಷದ ಮೊನೆಯಲ್ಲಿ ಅನೇಕ ಅಕ್ಷೌಹಿಣಿಗಳು ಹತವಾಗಿರುವುದನ್ನು ಜಗತ್ತೇ ಬಲ್ಲುದು. ಅತ್ತ ಭೀಮ, ಇತ್ತ ನೀನು.

ಯುಧಿಷ್ಠಿರ : ನಿನ್ನ ಸ್ನೇಹಕ್ಕೆ ಪ್ರತಿಯಾಗಿ ನಾವೇನು ಕೊಟ್ಟೇವು ಕೃಷ್ಣ ? ಹೆತ್ತ ತಾಯಂತೆ ನಮ್ಮನ್ನು ಕಾಪಾಡಿದ್ದೀಯೆ. ಜಯವೇನೊ ಲಭಿಸಿತು. ಆದರೆ ಇಷ್ಟು ನಾವು ಪಾಪಗಳ ಭಾರ ಎದೆಯಮೇಲೆ ಕುಳಿತು ನನ್ನನ್ನು ಪಾತಾಳಕ್ಕೆ ಅದುಮುತ್ತಿದೆ. ಬಲರಾಮನ ಇದಿರಲ್ಲಿಯೇ ಅನ್ಯಾಯ ನಡೆಯಿತು. ದುರ್ಯೋಧನನ ಮೇಲೆ ಪುಷ್ಪವೃಷ್ಟಿಯಾಯಿತು. ಈ ಅಧರ್ಮಗಳಿಂದ ಹೇಗೆ ಪಾರಾದೇವೊ ತಿಳಿಯದು.

ಕೃಷ್ಣ : ಕ್ಷತ್ರಿಯ ವೃತ್ತಿಯೇ ಹೀಗೆ. ದುಷ್ಟಶತ್ರುಗಳನ್ನು ನಾಶಮಾಡಬೇಕಾದುದು ಕರ್ತವ್ಯ. ಆಮಟ್ಟಿಗೆ ಇತರರಿಗೆ ಅಹಿತ ಆಗಿಯೇ ಆಗುತ್ತದೆ. ದೊಡ್ಡ ಹಿತದ ಸಾಧನೆಗಾಗಿ ಸಣ್ಣ ಹಿತಗಳು ಬಲಿಯಾಗಬೇಕಾಗುವುದು. ಪ್ರಾಜ್ಞನಾದ ನೀನು ವ್ಯಥೆಪಡಬಾರದು. ಬಲರಾಮನಿಗೆ ಕೋಪಬಂದದ್ದು ನ್ಯಾಯವೇ : ಎಷ್ಟು ಘಾತಕನಾಗಿದ್ದರೂ ದುರ್ಯೋಧನನು ತೊಡೆ ಮುರಿದು ನೆಲದ ಮೇಲೆ ಬಿದ್ದಿದ್ದನು. ಅವನನ್ನು ಒದ್ದು ಪರಾಭವ ಮಾಡಬಾರದಾಗಿತ್ತು.

ಯುಧಿಷ್ಠಿರ : ನಡೆದುಹೋದ ಮೇಲೆ ಯಾರೇನು ಮಾಡಲಾದೀತು ? ಭೀಮನು ತಾಳಿಕೊಳ್ಳಲಿಲ್ಲ.

ಭೀಮ : ನೀವೆಲ್ಲರೂ ಒಂದೇ. ನೀನು ಸಾತ್ವಿಕದ ಮೂರ್ತಿ ; ಅಜಾತಶತ್ರು. ಅರ್ಜುನನು ಕೃಷ್ಣನ ಜೀವ ; ಅವನದು ಶುದ್ಧ ಪೌರುಷ. ಯಮಳರು ಹುಡುಗರು. ನನ್ನೊಬ್ಬನಿಂದ ನಿಮ್ಮ ಎಲ್ಲರ ವ್ರತಗಳಿಗೂ ಸೌಜನ್ಯಕ್ಕೂ ಭಂಗ. ದೇವರು ನನ್ನನ್ನು ಮಾಡಿರುವುದು ಹೀಗೆ. ಆ ಪಾಪಿಯೊಬ್ಬನನ್ನು ಕೊಲ್ಲಲು ನನಗೆ ಧರ್ಮಾಧರ್ಮ ವಿವೇಚನೆಯಿಲ್ಲ. ಬರುವ ಪಾಪ ಬಂದು ಹೋಗಲಿ.

ಕೃಷ್ಣ : ಮಕುಟಭಂಗವನ್ನು ನೋಡಿಕೊಂಡು ನೀನೇಕೆ ಸುಮ್ಮನಿದ್ದೆ ಯುಧಿಷ್ಠಿರ ?

ಯುಧಿಷ್ಠಿರ : (ತಲೆ ಬಗ್ಗಿಸಿಕೊಂಡು) ಬೇಡಬೇಡವೆನ್ನುತ್ತಿರುವಾಗಲೆ ಕೆಲಸ ನಡೆದು ಹೋಯಿತು. ಕುರುಕುಲ ಕ್ಷಯದಿಂದ ನನಗೆ ಸ್ವಲ್ಪವೂ ಸಂತೋಷವಿಲ್ಲ, ಕೃಷ್ಣ. ಮೊದಲಿಂದಲೂ ಭೀಮನ ಸಂಕಟವನ್ನು ನೋಡಿ ನೋಡಿ ನನಗೂ ದುಃಖವಾಗಿತ್ತು. ಅನೇಕ ವರ್ಷಗಳ ಕ್ರೋಧ ಅವನ ಒಳಗೇ ಕುದಿಯುತ್ತಿದ್ದುದನ್ನು ಅರಿತಿದ್ದ ನಾನು ಅವನಿಗೆ ತೋರಿದಂತೆ ಮಾಡಿಕೊಳ್ಳಲಿ ಎಂದು ಸುಮ್ಮನಾದೆ. ಅದೂ ಅಲ್ಲದೆ ಆ ಸಮಯದಲ್ಲಿ ಏನೊ ಮಂಕು ಕವಿದು ಮನಸ್ಸಿಗೆ ಜೋಮು ಹಿಡಿದಂತಾಗಿತ್ತು.

ಕೃಷ್ಣ : ಈ ಯುದ್ಧದಲ್ಲಿ ಯಾರ ಕಾಂತಿಯೂ ಶುಭ್ರವಾಗಿ ಬೆಳಗಲಿಲ್ಲ. ಎಲ್ಲರ ಕೀರ್ತಿಯೂ ಮಾಸಿ ಮುಕ್ಕಾಯಿತು. ಭೀಮ, ದ್ವೇಷ ಹಿಂಗುವಂತೆ ಸೇಡು ತೀರಿಸಿಕೊಂಡೆ. ತಾಯ ಋಣ ತೀರಿಸಿದೆ. ಪ್ರತಿಜ್ಞೆ ನೆರವೇರಿಸಿದೆ. ಮುಂದೆ ಆಗುವುದನ್ನು ಅನುಭವಿಸಿಕೊಳ್ಳೋಣ ಬಾ.

ಭೀಮ : ಸಿದ್ಧವಾಗಿದ್ದೇನೆ. ನಮ್ಮನ್ನು ಪಶುಗಳೆಂದು ಯಾರು ಜರೆದು ವಿನೋದಪಟ್ಟರೊ ಅವರನ್ನು ಪಶುಗಳಂತೆ ದಂಡಿಸಿ ನನ್ನ ಕೋಪವನ್ನು ಆರಿಸಿಕೊಂಡೆ. ಸಭೆಯಲ್ಲಿ ನಮ್ಮನ್ನು ಷಂಢತಿಲವೆಂದರು. ಜಳ್ಳು ಯಾರು, ಗಟ್ಟಿ ಯಾರು ಎಂಬುದನ್ನು ಅವರಿಗೆ ತೋರಿಸಿಕೊಟ್ಟೆ. ವಂಚನೆಯಿಂದಲೂ ದ್ಯೂತದಿಂದಲೂ ಜಯಿಸಲಿಲ್ಲ. ಕ್ಷತ್ರಿಯ ಧರ್ಮವನ್ನು ಅನುಸರಿಸಿ ಬಾಹುಬಲದಿಂದ ಅವರನ್ನು ನಿಗ್ರಹಿಸಿದೆವು. ರಜಸ್ವಲೆಯಾಗಿದ್ದ ದ್ರೌಪದಿಯನ್ನು ಸಭೆಗೆ ಎಳೆದು ತರಿಸಿ ನಮ್ಮ ಎದುರಿಗೇ ಅಪಚಾರ ಮಾಡಿದ ಪಾಪಿಗಳು ಎಲ್ಲರೂ ನಿಪಾತವಾದರು. ಇನ್ನು ನನ್ನ ಕಾರ್ಯವಾಯಿತು.

ಕೃಷ್ಣ : ಹೊಕ್ಕಳ ಕೆಳಗೆ ಹೊಡೆದೆ !

ಭೀಮ : ಅವನ ತೊಡೆಗಳನ್ನು ಒಡೆಯುವೆನೆಂದು ಅದೇ ಸಭೆಯಲ್ಲಿಯೇ ತಂದೆಯ ಮೇಲಾಣೆಯಿಟ್ಟು ಪ್ರತಿಜ್ಞೆ ಮಾಡಿರಲಿಲ್ಲವೆ ?

ಕೃಷ್ಣ : ಅವನ ಕಾಲ ಮುಗಿದಿತ್ತು. ಶಾಪಗಳು ಫಲಿಸಿದುವು.

ಭೀಮ : ನಾನು ಕಡೆಯುವರೆಗೂ ತೊಡೆಗೆ ಪೆಟ್ಟಿಕ್ಕಲಿಲ್ಲ. ಗಾಂಧರ್ವ ವಿದ್ಯೆಯಿಂದ ಅವನೇ ಮೇಲಕ್ಕೆ ಏರಿ ಏರಿ ಹೊಡೆಯುತ್ತಿದ್ದನು. ಗದೆಯನ್ನೆತ್ತಿದೆನೆಂದರೆ ಮೇಲಕ್ಕೆಗರುತ್ತಿದ್ದನು ; ಹಾಗೆ ಹೀಗೆ ಅಡ್ಡಾಡುತ್ತಿದ್ದನು.

ಕೃಷ್ಣ : ಹೌದು. ಕ್ಷತ್ರಿಯನಿಗೆ ಪ್ರತಿಜ್ಞಾಪರಿಪಾಲನೆ ಮೊತ್ತಮೊದಲ ಧರ್ಮ. ಕಪಟಿಗಳೆದುರಿಗೆ ಕೇವಲ ಧರ್ಮಯುದ್ಧ ಅಸಾಧ್ಯ. ಧರ್ಮಪುತ್ರ ! ಕೊಳೆಯನ್ನು ತೆಗೆಯಬೇಕಾದರೆ ಕೈ ಕೊಳೆಯಾಗುತ್ತದೆ. ಲೋಕ ವ್ಯವಹಾರವೇ ಹೀಗೆ. ಆ ಮಾತು ಹಾಗಿರಲಿ. ಭೀಮ, ಅರ್ಜುನ, ನೀವು ವಿಶ್ರಮಿಸಿಕೊಳ್ಳಿ.

– ಅವರು ಹೋಗುವರು –

ನಿನ್ನ ಕೆಲಸ ಮುಗಿದಿಲ್ಲ.

ಯುಧಿಷ್ಠಿರ : ಗೊತ್ತಿದೆ. ಮೃತದೇಹಗಳಿಗೆ ಸಂಸ್ಕಾರ ಮಾಡಿಸಬೇಕು. ಈ ಭೂಮಿಯ ನೆತ್ತರನ್ನು ಒಣಗಿಸಿ ಪುನಃ ಅದನ್ನು ಫಲವತ್ತಾಗಿ ಮಾಡಿಸಬೇಕು.

ಕೃಷ್ಣ : ಇರುವವರ ಪರವಾಗಿ ಇನ್ನೂ ಮೊದಲ ಕರ್ತವ್ಯಗಳುಂಟಲ್ಲವೆ ?

ಯುಧಿಷ್ಠಿರ : ಹೌದು ; ದೊಡ್ಡ ತಂದೆಯವರನ್ನೂ ಗಾಂಧಾರೀ ದೇವಿಯನ್ನೂ ಸಮಾಧಾನ ಮಾಡಬೇಕು. ಅವರನ್ನು ಯುದ್ಧಭೂಮಿಗೆ ಕರೆದುತರಬೇಕು.

ಕೃಷ್ಣ : ಉಂ. ಈ ಮಹಾಶ್ಮಶಾನಕ್ಕೆ. ಅವರು ಹೆತ್ತ ನೂರು ಮಕ್ಕಳು ನೂರು ಶೂಲಗಳಾದರು. ದುಃಖದ ಬೇಗೆ ಇಳಿಯುವಂತೆ ಬಹು ನಯವಾಗಿ ಅವರನ್ನು ಆದರಿಸಬೇಕು, ಕಂಡೆಯಾ. ತಂದೆತಾಯಿಗಳಂತೆ ಅವರನ್ನು ಕಾಪಾಡಿಕೊಳ್ಳಬೇಕು. ಮೊದಲು ಅವರನ್ನು ಸಂತೈಸಿ ಬಾ ಹೋಗು.

ಯುಧಿಷ್ಠಿರ : ನಾನೆಂದು ತಾನೆ ಅವರಲ್ಲಿ ಅವಿನಯದಿಂದ ವರ್ತಿಸಿದ್ದೇನೆ ಕೃಷ್ಣ ? ಆದರೆ, ಅವರ ಎಲ್ಲ ಭಾಗ್ಯವನ್ನೂ ಕೊಂಡ ನಾನು ಅವರ ಮುಖವನ್ನು ಹೇಗೆ ನೋಡಲಿ ?

ಕೃಷ್ಣ : ಅಯ್ಯ, ಯುದ್ಧಸಾಧನವನ್ನು ಹೂಡಿ, ಯತ್ನದಿಂದ ಶತ್ರುವನ್ನು ಜಯಿಸಿದ್ದೀಯೆ. ಎಲ್ಲ ರೀತಿಗಳನ್ನೂ ಅರಿತವನು ನೀನೇ ಹೀಗೆಂದಮೇಲೆ ಉಳಿದವರು ಏನು ಮಾಡಿಯಾರು ? ನೀನು ಎಲ್ಲರಿಗೂ ಪ್ರಿಯನು, ಪಾಂಡವರಲ್ಲಿ ಹಿರಿಯನು. ನೀನೇ ಮಾಡತಕ್ಕ ಕಾರ್ಯ ಇದು.

ಯುಧಿಷ್ಠಿರ : ನಿಜ, ಕೃಷ್ಣ. ಆದರೆ ಕಣ್ಣು ಕಾಣದ ಆ ತಂದೆಯನ್ನೂ ಇದ್ದ ನೂರ್ವರು ಮಕ್ಕಳನ್ನೂ ಕಳೆದುಕೊಂಡಿರುವ ಆ ತಾಯನ್ನೂ ನಾನೇ ಮೊದಲು ನೋಡಲಾರೆ ಕೃಷ್ಣ. ನನ್ನಿಂದಾಗದು.

ಕೃಷ್ಣ : ಮತ್ತಾರು ನೋಡಬೇಕೆನ್ನುವೆ ?

ಯುಧಿಷ್ಠಿರ : ಇಷ್ಟು ದಿನ ನಮ್ಮ ಬೆನ್ನಲ್ಲಿ ನಿಂತು ಕಾಪಾಡಿದ್ದೀಯೆ. ನನಗೆ ಸ್ವಲ್ಪ ಅವಕಾಶವನ್ನು ಕೊಡು. ನನಗೆ ಪ್ರತಿಯಾಗಿ ಈ ದಿನ ಆ ಕಾರ್ಯವನ್ನು ನೀನು

ನಡಸಿಕೊಡು. ಅವರು ನಾಳೆ ಪಾಳೆಯಕ್ಕೆ ಬರುವಂತೆ ಏರ್ಪಡಿಸು. ಆ ಹೊತ್ತಿಗೆ ಮನಸ್ಸನ್ನು ಸ್ತಿಮಿತಕ್ಕೆ ತಂದುಕೊಳ್ಳುತ್ತೇನೆ. ನಿನಗೆ ಅಸಾಧ್ಯವಾದುದು ಯಾವುದೂ ಇಲ್ಲ. ಯಾರಿಗೆ ಯಾವ ರೀತಿ ಸಮಾಧಾನ ಹೇಳಬೇಕೊ ಆ ನಯುವನ್ನೆಲ್ಲ ನೀನು ಬಲ್ಲೆ. ನಿನ್ನಲ್ಲಿ ಅವರಿಗೆ ವಿಶ್ವಾಸವಿದೆ.

ಕೃಷ್ಣ : ನಾನು ಮಾತುಕೊಟ್ಟಿದ್ದುದು ಯುದ್ಧವನ್ನು ಗೆಲಿಸಿಕೊಡುತ್ತೇನೆಂದು ಮಾತ್ರ ;—ಇದನ್ನೂ ನನ್ನಿಂದ ಮಾಡಿಸುವುದು ಯಾವ ನ್ಯಾಯ ? ನನ್ನನ್ನು ಕಂಡರೆ ಈ ಎಲ್ಲ ವಿನಾಶಕ್ಕೂ ನಾನೇ ಹೊಣೆಯೆಂದು ತಿಳಿದುಕೊಂಡು ಅವರು ನನ್ನ ಮಾತನ್ನು ಅಂಗೀಕರಿಸದೆ ಹೋಗಬಹುದು. ನನಗೂ ಈ ಕೆಲಸ ಕಷ್ಟವೇ... ಆದರೆ, ಒಂದು ವಿಧದಲ್ಲಿ ಗಾಂಧಾರಿಯ ಎದುರಿಗೆ ನೀವಾರೂ ಹೋಗದಿರುವುದು ಕ್ಷೇಮ.

ಯುಧಿಷ್ಠಿರ : ಹೌದು ಕೃಷ್ಣ. (ಒಂದು ಕ್ಷಣ ಯುಧಿಷ್ಠಿರನ ಮತ್ತು ಕೃಷ್ಣನ ಕಣ್ಣುಗಳು ಬೆರೆದು ಪರಸ್ಪರ ಅರ್ಥ ಮಾಡಿಕೊಳ್ಳುವುವು.) ಸ್ಥಿತಿಯನ್ನು ದಯವಿಟ್ಟು ಅವರಿಗೆ ವರ್ಣಿಸು ; ನಾವು ಅವರಿಗೆ ವಿಧೇಯರೆಂದು ತಿಳಿಸಿ ಬಾ. ಅವರು ಈ ಪಾಳೆಯಕ್ಕೆ ಬಂದಮೇಲೆ ಮುಂದಿನ ಕಾರ್ಯವನ್ನೆಲ್ಲ ನಾನು ಮಾಡಿಕೊಳ್ಳುತ್ತೇನೆ.

ಕೃಷ್ಣ : ನೀನು ಇಂದು ಭಾರತ ಚಕ್ರವರ್ತಿ; ಪ್ರಭುವಿನ ಚಿತ್ತವನ್ನು ನಡಸುವುದು ಪ್ರಜೆಯಾದವನ ಕರ್ತವ್ಯ. ಆಗಲಿ, ಹೋಗಿಬರುತ್ತೇನೆ.

ಯುಧಿಷ್ಠಿರ : ಹೋಗಿ ಬಾ ಕೃಷ್ಣ. ಇದುವರೆಗೂ ದೊರೆತ ಜಯವೇನೂ ಹೆಚ್ಚಲ್ಲ. ಆ ಪತಿವ್ರತೆಯ ದುಃಖದಿಂದ ಉಂಟಾಗಬಹುದಾದ ಕ್ರೋಧವನ್ನು ಪರಿಹರಿಸಲು ನಿನ್ನೊಬ್ಬನಿಂದ ಮಾತ್ರ ಸಾಧ್ಯ. ಅಲ್ಲಿಯೇ ಪಿತಾಮಹರಾದ ವ್ಯಾಸರೂ ಇದ್ದಾರು. ನೀವಿಬ್ಬರು ಸೇರಿ ಅವರನ್ನು ಒಲಿಸಬೇಕು. ಅಲ್ಲಿನವರೆಗೂ ಪಾಂಡವ ಸಂರಕ್ಷಣೆಯಾಗುವುದಿಲ್ಲ.

ಕೃಷ್ಣ : ಸರ್ವಪ್ರಕಾರದಿಂದಲೂ ಪ್ರಯತ್ನಪಡುತ್ತೇನೆ. ಮತ್ತೊಂದು ವಿಷಯ : ನೀವು ಐವರೂ ಈ ರಾತ್ರಿ ಈ ಸ್ಥಳವನ್ನು ಬಿಡಿ ; ಶುಭನಿಮಿತ್ತವಾಗಿ ಶುಚಿಯಾದ ಬೇರೊಂದು ಕಡೆ ಇರುವುದು ಲೇಸು. ಈಗಲೇ ಇಲ್ಲಿಂದ ಹೊರಟು ಓಘವತೀ ತೀರದಲ್ಲಿ ಇಳಿದುಕೊಂಡು ರಾತ್ರಿಯನ್ನು ಕಳೆಯಿರಿ. ಸಾತ್ಯಕಿ ನಿಮ್ಮೊಡನೆ ಬರುತ್ತಾನೆ. ನಾನೂ ಬಂದು ಕೂಡಿಕೊಳ್ಳುತ್ತೇನೆ. ಈಗ ಹಸ್ತಿನಪುರಕ್ಕೆ ಹೋಗಿಬರುತ್ತೇನೆ. ದಾರುಕಾ, ದಾರುಕಾ,

– ದಾರುಕನು ಬರುವನು –

ರಥವನ್ನು ಸಿದ್ಧಪಡಿಸು, ಸುದರ್ಶನವನ್ನೂ ಕೌಮೋದಕಿಯನ್ನೂ ಇರಿಸು.

– ಹೋಗುವನು –

ಯುಧಿಷ್ಠಿರ : ಆಯುಧಗಳೇತಕ್ಕೆ ಕೃಷ್ಣ—ಭಯವೇನು ಬಂದಿತು ?

ಕೃಷ್ಣ : ಭಯವೇನೂ ಇಲ್ಲ. ಅವರವರ ಆಯುಧಗಳು ಅವರವರ ಬಳಿ ಇರುವುದು ಒಳ್ಳೆಯದು.

ಯುಧಿಷ್ಠಿರ : ಇಷ್ಟವಿದ್ದಂತೆ ಮಾಡು. ಹೋಗಿ ಬಾ. ನಿನಗೆ ಶುಭವಾಗಲಿ.

– ಕೃಷ್ಣನು ಹೋಗುವನು –

ತೆರೆ

## ನೋಟ ೩

[ಯುದ್ಧರಂಗ—ಅಶ್ವತ್ಥಾಮ ಕೃತವರ್ಮರು ಹೆಣಗಳ ನಡುವೆ ದುರ್ಯೋಧನನನ್ನು ಹುಡುಕಿಕೊಂಡು ತಿರುಗುತ್ತಿದ್ದಾರೆ.]

ಅಶ್ವತ್ಥಾಮ : ಬಾ ಮಾವ, ಈ ಸ್ಥಿತಿಯಲ್ಲಿ ಸ್ವಾಮಿಯನ್ನು ನೋಡುವೆನೆಂದು ಕನಸಿನಲ್ಲಿಯೂ ಎಣಿಸಿರಲಿಲ್ಲ. ನಾವೆಷ್ಟು ಮಂದಿಯಿದ್ದರೂ ವ್ಯರ್ಥವಾಯಿತು. ಕೃಷ್ಣನ ಮಂತ್ರವೇ ಗೆದ್ದಿತು. ಅವನೊಬ್ಬನಿಲ್ಲವಾಗಿದ್ದಿದ್ದರೆ !

ಕೃಪ : ಇಗೋ ನೋಡು — ಕೌರವೇಶ್ವರನಂತಿದೆ.

(ಗಂಟಲಲ್ಲಿ ನರಳುತ್ತ ಬಿದ್ದಿರುವ ದುರ್ಯೋಧನನ ದೇಹವನ್ನು ನೋಡಿ ಅಶ್ವತ್ಥಾಮನು ಹತ್ತಿರ ಕುಳಿತು ಸೆರಗಿಂದ ಗಾಳಿ ಹಾಕುತ್ತ ರಕ್ತವನ್ನು ಒರಸುತ್ತ ಕಣ್ಣೀರು ಸುರಿಸುತ್ತಾನೆ.)

ಅಶ್ವತ್ಥಾಮ : ಸಮಸ್ತ ಕ್ಷತ್ರಿಯರಿಂದಲೂ ಪ್ರಣಾಮಮಾಡಿಸಿಕೊಳ್ಳುತ್ತ ಅತಿರಥ ಮಹಾರಥರಿಗೆ ಆಜ್ಞೆಗಳನ್ನಿತ್ತ ಚಕ್ರವರ್ತಿಗೆ ಈ ಗತಿಯೆ ? ನವರತ್ನ ವೇದಿಕೆಯಲ್ಲಿ ವೈಭವದಿಂದ ಕುಳಿತು ಮೆರೆಯುತ್ತಿದ್ದವನಿಗೆ ದೂಳಿನಲ್ಲಿ ಹೊರಳುವಂತಾಯಿತೆ ? ಅಯ್ಯೊ ಸುಯೋಧನ, ನಮ್ಮ ಮಾತನ್ನು ಕೇಳದೆ ಹೋದೆ. ಕೊಳದಲ್ಲಿ ಇರುವೆನೆಂದು ಮೂರ್ಖತನ ಮಾಡಿದೆ. ನಾವಿರುವಂತೆಯೇ ಏಕಾಂಗ ಸಾಹಸಕ್ಕೆ ತೊಡಗಿದೆ. ನಿನ್ನನ್ನು ಈ ಸ್ಥಿತಿಯಲ್ಲಿ ನೋಡುವ ನನ್ನ ಕಣ್ಣುಗಳು ಏಕೆ ಇಂಗಿ ಹೋಗುವುದಿಲ್ಲ ! ನಿನ್ನಂತಹವನಿಗೆ ಈ ಗತಿ ಬಂದಮೇಲೆ ಯಾವ ಯಜ್ಞ, ದಾನ, ಸತ್ಕರ್ಮಗಳಿಗೆ ತಾನೆ ಬೆಲೆಯುಂಟು ? ಪೌರುಷದಿಂದ ತಾನೆ ಪ್ರಯೋಜನವೇನು ? ಸುಯೋಧನ, ಸುಯೋಧನ, —

ದುರ್ಯೋಧನ : (ನೋವಿಂದ ಕಣ್ಣು ತೆರೆದು) ಯಾರು ? ಗುರುಪುತ್ರ—ಆಚಾರ್ಯ—ಕೃತವರ್ಮ ? ಬನ್ನಿ ಹೀಗೆ ಕುಳಿತುಕೊಳ್ಳಿ. ಕೃತವರ್ಮ, ಈ ಕವಚವನ್ನು ಸಡಿಲಮಾಡು. ಆ ಆ ಆ ! (ಅಶ್ವತ್ಥಾಮನೂ ಕೃಪನೂ ಗಾಳಿ ಹಾಕುವರು) ನೀವು ದುಃಖಿಸಬೇಡಿ. ದೈವವನ್ನು ಅತಿಕ್ರಮಿಸಲು ಯಾರಿಗೆ ಸಾಧ್ಯ ? ನಿಮ್ಮ ಸಾಮರ್ಥ್ಯವಿದ್ದಷ್ಟು ನೀವೂ ಸಾಹಸ ಮಾಡಿದಿರಿ. ಜಯದೊರೆಯಲಿಲ್ಲ. ಹೋಗಲಿ, ದೈವವಶದಿಂದ ನೀವಾದರೂ ನಮ್ಮವರಾಗಿ ಬದುಕಿಕೊಂಡಿರಲ್ಲ !

ಅಶ್ವತ್ಥಾಮ : (ಕೈ ಕೈ ಮಸೆಯುತ್ತ, ಆವೇಶದಿಂದ) ಸುಯೋಧನ, ನನ್ನ ಪೂಜ್ಯಗುರು —ಹೆತ್ತ ತಂದೆಗೆ ಆ ಗತಿ ಬಂದಾಗ ನನಗೆ ಇಷ್ಟು ಸಂಕಟವಾಗಲಿಲ್ಲ. ಭೀಮಸೇನ ನಿಂದ ನಿನಗೆ ಉಂಟಾದ ಪರಿಭವವನ್ನು ನಾನು ಸಹಿಸಲಾರೆ. ಇದೊ ಕೇಳು— ಸತ್ಯವನ್ನು ನುಡಿಯುತ್ತಿದ್ದೇನೆ: ಇಚ್ಛೆ ಅರುವಂತೆ ನಾನು ಮಾಡಿರುವ ದಾನದ ಮೇಲೂ ಈವರೆಗೆ ನಡಸಿರುವ ಸಮಸ್ತ ಸುಕೃತಗಳ ಮೇಲೂ ಆಣೆಯಿಟ್ಟು ನುಡಿಯುತ್ತೇನೆ; ಈ ದಿನ ರಾತ್ರಿ ಸಮಸ್ತ ಪಾಂಚಾಲರನ್ನೂ ಪಾಂಡವರನ್ನೂ ಕೃಷ್ಣನು ನೋಡುತ್ತಿರುವ ಹಾಗೆಯೇ ಕೊಂದುಬರುತ್ತೇನೆ. ಸತ್ತು ಸ್ವರ್ಗದಲ್ಲಿರುವ ನನ್ನ ತಂದೆಯೇ ಇದಕ್ಕೆ ಸಾಕ್ಷಿ. ನನ್ನ ಆತ್ಮದ ಸದ್ಗತಿಯೇ ಹೊಣೆ.

ದುರ್ಯೋಧನ : ನನ್ನ ಶತ್ರು ನಿಶ್ಶೇಷವಾಗುವುದೆಂದರೇನು ? ಅದೃಷ್ಟ ಅವರ ಭಾಗ್ಯವನ್ನು ನಡೆಯಿಸುತ್ತಿದೆ, ಗುರುಪುತ್ರ ! ನನ್ನ ಮೇಲೆ ದ್ವೇಷಮಸೆದ ದೇವರು ಗಳೆಲ್ಲ ಅವರಿಗೆ ಬೆಂಬಲ. ಕೃಷ್ಣನ ಜೀವವಿರುವವರೆಗೂ ಆ ಪಾಂಡವರಿಗೆ ಚ್ಯುತಿಯಿಲ್ಲ ; ಅವರ ತಲೆಕೂದಲಿನ ಒಂದು ಎಳೆ ಕೊಂಕದು.

ಅಶ್ವತ್ಥಾಮ : ಕೊಂಕುವುದೊ ಇಲ್ಲವೊ ನೋಡುವೆಯಂತೆ— ನನಗೆ ಅಪ್ಪಣೆಕೊಡು. ನಿನ್ನನ್ನು ಈ ಗತಿಗೆ ತಂದವರನ್ನು ಒರಸಿದ ಹೊರತು ನಿನ್ನ ಋಣ ತೀರಿದ ಹಾಗಾಗುವುದಿಲ್ಲ. ನಿನ್ನ ಮೈಮೇಲಿನ ಒಂದೊಂದು ಗಾಯಕ್ಕೆ ಒಂದು ನೂರು ಜೀವಗಳನ್ನು ಬಲಿಗೆಡಹುತ್ತೇನೆ. ನಿನ್ನ ದೇಹದಿಂದ ಸುರಿದಿರುವ ರಕ್ತಕ್ಕೆ ಪ್ರತಿಯಾಗಿ ಅವರೆಲ್ಲರ ರಕ್ತವನ್ನೂ ಕೋಡಿಹರಿಸಿ ನಿನಗೂ ತಂದೆಗೂ ತರ್ಪಣ ಕೊಡುತ್ತೇನೆ.

ದುರ್ಯೋಧನ : ಎಷ್ಟು ಜನ ಭೀಮಸೇನರು ಈ ದೇಹವನ್ನು ಒದ್ದರೆ ಏನಾಯಿತು ? ನಾಳೆ ಬೆಳಗಾಗುವ ಹೊತ್ತಿಗೆ ನಾಯಿ ನರಿ ಹದ್ದು ಮೇಲೆ ಕುಣಿದಾಡಿ ಇದನ್ನು ಕಿತ್ತು ತಿನ್ನುತ್ತವೆ. ವೃಥಾ ದುಃಖ ಬೇಡ.

ಅಶ್ವತ್ಥಾಮ : ನಿನ್ನ ಬಾಯಿಂದ ಇಂತಹ ಮಾತುಗಳನ್ನು ಕೇಳಲಾರೆ, ಮಿತ್ರ. ನಾನು ಇದುವರೆಗೂ ನಿನಗೆ ಯಾವ ಸೇವೆಯನ್ನಾದರೂ ಮಾಡಿರುವೆನೆಂದು ನೀನು ನಂಬಿದ್ದರೆ ಅನುಜ್ಞೆ ಕೊಡು. ಪ್ರಿಯ ವಾರ್ತೆ ತರುತ್ತೇನೆ.

ದುರ್ಯೋಧನ : (ಸಂತುಷ್ಟನಾಗಿ) ಹಾಗಿದ್ದರೆ ಹೋಗಿ ಬಾ. ಕೃತವರ್ಮ, ಕೊಳದಿಂದ ಬೇಗನೆ ಒಂದಷ್ಟು ತೀರ್ಥೋದಕವನ್ನು ತಾ.... (ಅವನು ನೀರು ತರುತ್ತಾನೆ) ಆಚಾರ್ಯ, ಅರಸೆಂದು ಇನ್ನೂ ನನ್ನನ್ನು ಒಪ್ಪಿ, ನನಗೆ ಸಂತೋಷ ಉಂಟು ಮಾಡುತ್ತೇನೆ ಎನ್ನುತ್ತಿರುವ ಈ ದ್ರೋಣಪುತ್ರನಿಗೆ ಸೇನಾಪತ್ಯಾಭಿಷೇಕವನ್ನು ಮಾಡಿ. ಇದು ನಮ್ಮಾಜ್ಞೆ. (ಆತನು ಹಾಗೆ ಮಾಡುವನು). ಈತನ ಬೆಂಬಲವಾಗಿ ನೀವು ನಿಲ್ಲತಕ್ಕದ್ದು. ನಿಮ್ಮ ಕಾರ್ಯಗಳು ಕೈಗೂಡಲಿ.

ಕೃಪ-ಕೃತವರ್ಮ : ಪ್ರಭುವಿನ ಅಪ್ಪಣೆ (ಬಾಗಿ ದುರ್ಯೋಧನನಿಗೂ ಅಶ್ವತ್ಥಾಮನಿಗೂ ಅಭಿವಾದನೆ ಮಾಡುವರು).

ಅಶ್ವತ್ಥಾಮ : ನಾನು ಶುಭವಾರ್ತೆಯನ್ನು ತರುವವರೆಗೂ ಜೀವವನ್ನು ಬಿಗಿಹಿಡಿದಿರು. ಎಲವೋ ಧೃಷ್ಟದ್ಯುಮ್ನ, ಪಾಪಿ ಭೀಮ, ನಿಮ್ಮ ಜೀವವನ್ನು ಹಿಂಡುವುದಕ್ಕೆ ಅಶ್ವತ್ಥಾಮನು ಬದುಕಿದ್ದಾನೆ. ಇಂದು ನನ್ನ ಕೈಯಿಂದ ಪಾರಾಗಲಾರಿರಿ. ಸುಯೋಧನ, ಬೇಗ ಹಿಂದಿರುಗಿ ಬರುತ್ತೇನೆ. ಸಮಾಧಾನದಿಂದ ಪ್ರಾಣ ಬಿಡುವೆಯಂತೆ.

ದುರ್ಯೋಧನ : ನಿನಗೆ ಜಯವಾಗಲಿ. ಈ ಮೊಂಡು ಜೀವವನ್ನು ಆವರೆಗೂ ಏನಾದರೂ ಮಾಡಿ ತಡೆದಿರುತ್ತೇನೆ.

– ಅವರು ಹೋಗುವರು –

ಕೊನೆಯ ದಾಳ ! ಹೇಗೆ ಹೊರಳಿದರೂ ಸರಿಯೆ — ಯಾವ ಗರ ಬಿದ್ದರೂ ಲಾಭವೇ !

ತೆರೆ

## ನೋಟ ೪

[ಹಸ್ತಿನಪುರ. ಅರಮನೆಯ ಬಾಗಿಲಲ್ಲಿ, ಕೃಷ್ಣ ದಾರುಕರ ಪ್ರವೇಶ]

ಕೃಷ್ಣ : ಈ ಅಳಲನ್ನು ಹೇಗೆ ಆರಿಸುವುದು ? ಇವರನ್ನು ಹೇಗೆ ಸಮಾಧಾನ ಮಾಡುವುದು ? ಅದಾರು ಅಲ್ಲಿ ನೋಡು — ಯುಯುತ್ಸುವಲ್ಲವೆ ?

ದಾರುಕ : ಹೌದು, ಯುಯುತ್ಸು.

ಕೃಷ್ಣ : ಯುಯುತ್ಸು, ಯುಯುತ್ಸು, ಬಾ. ಎಲ್ಲವನ್ನೂ ವ್ಯವಸ್ಥೆ ಮಾಡಿದೆಯ ಅಪ್ಪ ? ವಂಶಕ್ಕೆ ನೀನೊಬ್ಬನು ಉಳಿದುಕೊಂಡೆ. ಹೆಂಗಸರು ಮಕ್ಕಳು ಎಲ್ಲರನ್ನೂ ಸುರಕ್ಷಿತವಾಗಿ ಮನೆಗಳಿಗೆ ಸೇರಿಸಿದೆಯ ? ಅವರನ್ನು ಸಂತೈಸಿದೆಯ ?

ಯುಯುತ್ಸು : (ನಮಸ್ಕಾರ ಮಾಡಿ) ನಿಮ್ಮ ಅಪ್ಪಣೆಯಿಂದ ಹೊರಟವನು ಇಲ್ಲಿನ ವರೆಗೂ ಅದೇ ಕೆಲಸವನ್ನು ಮಾಡಿದ್ದೇನೆ. ವಿದುರ ಚಿಕ್ಕಪ್ಪನವರೂ ನೆರವಾದರು. ಎಲ್ಲರನ್ನೂ ಮನೆಗಳಿಗೆ ಸೇರಿಸುವುದು ಸುಲಭವಾಯಿತು. ಆದರೆ ಆ ಗೋಳನ್ನು ನೋಡಲಾಗದು ಕೃಷ್ಣ, ಕೇಳಲಾಗದು.

ಕೃಷ್ಣ : ತಾಳಿಕೊಳ್ಳಬೇಕು. ನೋವು ಬಂದಾಗ ಅನುಭವಿಸಬೇಕು.

ಯುಯುತ್ಸು : ದುರ್ಯೋಧನನು ಬಿದ್ದನೆಂದು ಕೇಳಿ ತಂದೆಯವರೂ ಗಾಂಧಾರಿ ದೇವಿಯವರೂ ಒಬ್ಬರನ್ನೊಬ್ಬರು ಕಟ್ಟಿಕೊಂಡು ಬಹಳವಾಗಿ ಅತ್ತರು.

ಅಡಿಗಡಿಗೂ ಮೂರ್ಛೆಹೋದರು. ಈಗ ಮಾತನಾಡದೆ, ಕಣ್ಣೀರು ಸುರಿಸದೆ ದಿಕ್ಕುಗಳನ್ನು ನೋಡುತ್ತ ಕುಳಿತಿದ್ದಾರೆ. ವಿದುರನೂ ದ್ವೈಪಾಯನರೂ ಹತ್ತಿರ ನಿಂತು ಸಮಾಧಾನ ಹೇಳುತ್ತಿದ್ದಾರೆ.

ಕೃಷ್ಣ : ನಾನು ರಾಯಭಾರಕ್ಕೆ ಬಂದಾಗ ಈ ಊರು ಹೇಗಿತ್ತು, ಯುಯುತ್ಸು: ಎಷ್ಟು ನಗು, ಸಡಗರ! ಎಷ್ಟು ತೋರಣ ಚಪ್ಪರ, ಎಷ್ಟು ಶೃಂಗಾರ! ಗಂಡಸರು ಹೆಂಗಸರು ಮಕ್ಕಳು ಹೇಗೆ ಕಿಕ್ಕಿರಿದು ಶುಭಘೋಷ ಮಾಡುತ್ತಿದ್ದರು! ಎಷ್ಟು ಮುತ್ತೈದೆಯರು ಆರತಿ ಕಳಸ ಕನ್ನಡಿಗಳನ್ನು ಹಿಡಿದು ಬಂದವರು!— ಆ ಆನೆ, ಕುದುರೆ, ಹಸು; ಆ ಸೈನ್ಯ, ಅಟ್ಟಹಾಸ ಅದನ್ನು ನನಗೆ ಕಾಣಿಸ ಬೇಕೆಂದು ದುರ್ಯೋಧನನು ನೆರಸಿದ್ದ. ಈಗ ಅವೆಲ್ಲ ಎಲ್ಲಿ? ಇದೊಂದು ಸಾವಿನ ಮನೆ. ಎಲ್ಲ ಬಾಗಿಲೂ ಬಡಿದಿವೆ. ಯಾರ ಮುಖವೂ ಕಾಣಿಸದು. ರಥದ ಶಬ್ದವನ್ನು ಕೇಳಿ ಜನ ಮನೆ ಬಾಗಿಲುಗಳನ್ನು ಮುಚ್ಚಿಕೊಂಡು ಒಳಕ್ಕೆ ಓಡುತ್ತಿದ್ದಾರೆ. ನಡೆ, ನನ್ನನ್ನು ಅವರಿರುವಲ್ಲಿಗೆ ಕರೆದುಕೊಂಡು ಹೋಗು. ನೀನು ರಥದ ಬಳಿಯಲ್ಲಿಯೇ ಇರು ಹೋಗು, ದಾರುಕ.

—ಅವನು ಹೋಗುವನು; ಇವರು ಅರಮನೆಯೊಳಕ್ಕೆ ಹೋಗುವರು – (ಧೃತರಾಷ್ಟ್ರನ ಪಕ್ಕದಲ್ಲಿ ವ್ಯಾಸರೂ ವಿದುರನೂ ನಿಂತು ಉಪಚಾರ ಮಾಡುತ್ತಿದ್ದಾರೆ. ಕೃಷ್ಣನೂ ಯುಯುತ್ಸುವೂ ಆತನ ಬಳಿಗೆ ಹೋಗಿ ಆತನಿಗೆ ನಮಸ್ಕಾರ ಮಾಡುವರು.)

ಧೃತರಾಷ್ಟ್ರ : ವಿದುರ, ನಿನ್ನ ಮಾತನ್ನು ಕೇಳದೆ ಇಷ್ಟಾಯಿತು. ಪುತ್ರಮೋಹದಿಂದ ಧರ್ಮಾಂಧನೂ ಆದೆ. ಮಕ್ಕಳಿರ, ಗಾಂಧಾರಿ, ಗಾಂಧಾರಿ—ಆಕೆಯನ್ನು ಸಂತೈಸಿ ಹೋಗಿ. ಇದಾರು ಕೃಷ್ಣನಂತಿದೆ! ಕೃಷ್ಣಾ? ಏಳು, ಏಳು. ನೀನೇಕೆ ಹೀಗೆ ಕಣ್ಣೀರು ಸುರಿಸುವೆ? ನೀವಾದರೂ ಬದುಕಿರುವಿರೇನಪ್ಪ? ಬಾ, ಪಾಂಡವರು ಕುಶಲವೆ? ಯುಧಿಷ್ಠಿರನು ಕ್ಷೇಮದಿಂದಿದ್ದಾನೆಯೆ? ಯಾರಾದರೂ ಬದುಕಿರು ವರೆಂದು ಕೇಳಿದರೆ ಸಾಕು. ಬೆಳಗ್ಗಿನಿಂದ ಸಂಜೆಯವರೆಗೂ ಈ ಹದಿನೆಂಟು ದಿನಗಳೂ ಸಾವು ಸಾವು ಸಾವು ಎಂಬ ಮಾತಲ್ಲದೆ ಬೇರೊಂದು ಮಾತಿಲ್ಲ.

ಕೃಷ್ಣ : ನಾನು ಕೃಷ್ಣ. ಪಾಂಡವರು ಬದುಕಿದ್ದಾರೆ. ನಿಮ್ಮ ಸೇವೆಯನ್ನು ಬಯಸಿ ನನ್ನನ್ನು ನಿಮ್ಮಲ್ಲಿಗೆ ಅಟ್ಟಿದ್ದಾರೆ. ತಂದೆಯಂತೆ ಆ ಮಕ್ಕಳನ್ನು ಕಾಪಾಡುವ ಭಾರ ಇನ್ನು ಮೇಲೆ ನಿಮ್ಮದು. ನಿಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ವೃದ್ಧಾಪ್ಯದಲ್ಲಿ ನಿಮಗೆ ಈ ಗತಿ ತಂದರು.

ಧೃತರಾಷ್ಟ್ರ : ಪಾಂಡವರೂ ಮಕ್ಕಳೇ ಕೃಷ್ಣ. ಅಲ್ಲವೆಂದರೆ ಆದೀತೆ? ಗಾಂಧಾರಿ ಯನ್ನು ಕರೆದುಕೊಂಡು ಬನ್ನಿ.

– ಯುಯುತ್ಸು ಹೋಗುವನು –

ಕೃಷ್ಣ : ಭರತವಂಶದಲ್ಲಿ ಹಿರಿಯರು ನೀವು. ನಿಮ್ಮ ಮಾತನ್ನೂ ಆಂಕೆಯನ್ನೂ ಮೀರದೆ ಪಾಂಡವರು ಅರಣ್ಯವಾಸಮಾಡಿದ್ದಾರೆ ; ಬಹುವಾಗಿ ಕ್ಲೇಶಪಟ್ಟಿದ್ದಾರೆ. ನಡೆದುದು ನಡೆದುಹೋಯಿತು. ನ್ಯಾಯದಿಂದಲೂ ಧರ್ಮದಿಂದಲೂ ಭಕ್ತಿಯಿಂದಲೂ ಪಾಂಡವರು ನಿಮ್ಮ ಹರಕೆಯನ್ನು ಬೇಡುತ್ತಿದ್ದಾರೆ. ಅವರಿಗೆ ಒಲಿದು ಕಾಪಾಡಿ.

– ಗಾಂಧಾರಿಯ ಪ್ರವೇಶ –

ವ್ಯಾಸ : ಹೀಗೆ ಬಾ ತಾಯಿ.

ಗಾಂಧಾರಿ : ಇನ್ನೆಲ್ಲಿಯ ತಾಯಿ––ಯಾರ ತಾಯಿ ?

(ಕೃಷ್ಣನು ನಮಸ್ಕರಿಸುವನು)

ನಿನಗೆ ಮಂಗಳವಾಗಲಿ ಕೃಷ್ಣ.

ಕೃಷ್ಣ : ಅಮ್ಮ, ಸಂತೈಸಿಕೊ ಸಂತೈಸಿಕೊ. ಪಾಂಡವರೂ ನಿನ್ನ ಮಕ್ಕಳೇ ; ಅವರ ಸೇವೆಯನ್ನು ಸ್ವೀಕರಿಸು ಬಾ. ಅವರಿಗಾದರೂ ಮುಂದೆ ಶುಭವಾಗಲೆಂದು ಆಶೀರ್ವಾದ ಮಾಡು. ಇಷ್ಟು ಶೋಕಕ್ಕೂ ತಾನೇ ಕಾರಣನೆಂದು ಯಾರೆಷ್ಟು ಹೇಳಿದರೂ ಯುಧಿಷ್ಠಿರನು ಉಪಶಾಂತಿ ಪಡೆಯದೆ ಇದ್ದಾನೆ. ಕುಂತಿ ಬೇರೆ ಅಲ್ಲ, ನೀನು ಬೇರೆ ಅಲ್ಲ ಎಂದು ಪಾಂಡವರೆಲ್ಲರೂ ನಿಮ್ಮನ್ನು ಒಲೈಸಲು ಕಾದಿದ್ದಾರೆ.

ಗಾಂಧಾರಿ : ದುಷ್ಟರಾದರೇನು ಸಜ್ಜನರಾದರೇನು, ಹೆತ್ತವರಿಗೆ ಮಕ್ಕಳು ಮಕ್ಕಳೇ. ಯುಧಿಷ್ಠಿರನ ನಿಷ್ಠೆಯನ್ನು ನಾನು ಬಲ್ಲೆ, ಕೃಷ್ಣ. . . .ಈ ಅರಸನು ಮೊದಲೇ ಅಂಧ, ವೃದ್ಧ ; ಈಗ ಹತಪುತ್ರ, ಅನಾಥ. ಇನ್ನು ಈತನಿಗೆ ನೀವೇ ಗತಿ. ನೀನೂ ಪಾಂಡವರೇ ನಮಗೆ ರಕ್ಷಕರು.

(ಸೀರೆಯ ಸೆರಗಿಂದ ಮುಖವನ್ನು ಮುಚ್ಚಿಕೊಳ್ಳುವಳು.)

ವ್ಯಾಸ : ಗಾಂಧಾರಿ, ಸೈರಿಸಿಕೊ ತಾಯಿ. ನೀನೇ ಹೀಗೆ ತಾಳಿಕೊಳ್ಳದಿದ್ದರೆ ಸೊಸೆಯರಿಗೂ ಇತರ ಹೆಣ್ಣುಮಕ್ಕಳಿಗೂ ಧೈರ್ಯ ಹೇಳುವವರು ಯಾರು ? ಕೃಷ್ಣನ ಮಾತನ್ನು ನಡಸಿಕೊಡು.

ಕೃಷ್ಣ : ಅಮ್ಮಾ, ನಿನ್ನ ಧರ್ಮಬುದ್ಧಿ ಜಗತ್ತಿಗೇ ಗೊತ್ತಿದೆ. ದುರ್ಯೋಧನನ ಅಧರ್ಮವನ್ನು ಖಂಡಿಸಿ ತುಂಬಿದ ಸಭೆಯಲ್ಲಿ ನಿರ್ದಾಕ್ಷಿಣ್ಯವಾಗಿ ನೀನೇ ನುಡಿದೆಯಲ್ಲವೆ ? ತನಗೆ ಜಯವಾಗುವಂತೆ ಅವನು ಹರಸೆನ್ನಲು ಎಲ್ಲಿ ಧರ್ಮವೊ ಅಲ್ಲಿ ಜಯವೆಂದು ನುಡಿಯಲಿಲ್ಲವೆ ? ನೀನು ಕೇವಲ ಕೌರವರ ತಾಯಿಯಲ್ಲ, ಧರ್ಮದ ತಾಯಿ. ನಿನ್ನ ತಪೋಬಲದಿಂದ ಪ್ರಪಂಚವನ್ನೆಲ್ಲ ಸುಡಬಲ್ಲೆ. ಇಂತಹ ನಿನ್ನ ದುಃಖದಿಂದ ಅವರಿಗೆ ಕೇಡಾಗದಂತೆ ಅನುಗ್ರಹಿಸು. ನಮ್ಮೊಡನೆ ಬಂದು ಅವರನ್ನು ಹರಸು.

ವಿದುರ–ವ್ಯಾಸ : ಕೃಷ್ಣನ ಮಾತು ಸತ್ಯವಾದುದು ; ಆ ರೀತಿ ಮಾಡು.

ಗಾಂಧಾರಿ : ನೀನು ನನ್ನ ಮನಸ್ಸನ್ನು ಹೊಕ್ಕು ನುಡಿದಿದ್ದೀಯೆ, ಕೃಷ್ಣ. ಈಗಲೂ ಪುತ್ರಸ್ನೇಹದಿಂದ, ಒಂದು ಕ್ಷಣ ನಿನ್ನನ್ನು ಕೂಡ ಶಪಿಸಬೇಕೆಂದು ಮನಸ್ಸು ನಿಜವಾಗಿ ಚಪಲಗೊಂಡಿತ್ತು. ಆದರೆ ಕ್ರೋಧದಿಂದ ಪ್ರಯೋಜನವೇನು ? ನಮ್ಮ ಹಣೆಯಲ್ಲಿ ಈ ದುಃಖ ಬರೆದಿತ್ತು. ಬದುಕಿರುವ ಆ ಮಕ್ಕಳಾದರೂ ಸುಖವಾಗಿರಲಿ. ಇದ್ದವರೆಲ್ಲರನ್ನೂ ಕಳೆದುಕೊಂಡಿರುವ ನನಗೂ ವೃದ್ಧನಾಗಿ ದುರ್ಬಲನಾಗಿರುವ ಈ ಅರಸನಿಗೂ ನೀವಲ್ಲದೆ ಇನ್ನಾರು ಗತಿ ? ನಿನ್ನಿಚ್ಛೆಯಿದ್ದಂತಾಗಲಿ.

ಕೃಷ್ಣ : ನಿನ್ನಂತಹ ಸಾಧ್ವಿಯಿಂದ ಕುರುಕುಲಕ್ಕೇ ಕೀರ್ತಿ ನಿಂತಿದೆ. ಯುಯುತ್ಸು ವಿದ್ದಾನೆ. ವಿದುರ ದ್ವೈಪಾಯನರಿದ್ದಾರೆ ; ಸರ್ವದಾ ನಿಮ್ಮ ಆಜ್ಞೆಗೆ ಬದ್ಧರಾಗಿ ನಾನೂ ಪಾಂಡವರೂ ಇದ್ದೇವೆ. ದೊಡ್ಡವರಾಗಿ ನಿಂತು ಮುಂದಿನ ಎಲ್ಲ ಕೆಲಸಗಳನ್ನೂ ನೀವು ಆಗುಮಾಡಿಸಬೇಕು. ಯಾವ ಕೊರತೆಯೂ ತೋರದಂತೆ ಎಲ್ಲವನ್ನೂ ನೆರವೇರಿಸಲು ಯುಧಿಷ್ಠಿರನು ನಿಮ್ಮನ್ನು ಎದುರುನೋಡುತ್ತಿದ್ದಾನೆ.

ಧೃತರಾಷ್ಟ್ರ : ಆಗಲಿ ಕೃಷ್ಣ. ನಿನ್ನ ಮಾತಿನ ಮೇಲೆ ಮಾತಿಲ್ಲ. ನಾವು ನಾಳೆಯ ಬೆಳಗ್ಗೆ ಪಾಳೆಯದ ಬಳಿಗೆ ಬರುತ್ತೇವೆ.

ಗಾಂಧಾರಿ : ನಾನು ಹೆಣ್ಣುಮಕ್ಕಳನ್ನೆಲ್ಲ ಕರೆದು ತರುತ್ತೇನೆ. ಅಳಿದವರ ಕಡೆಯ ಮುಖದರ್ಶನ ಮಾಡಿ ಬರುತ್ತೇವೆ.

ಕೃಷ್ಣ : ನಾನೂ ಜೊತೆಗೆ ನಿಲ್ಲುತ್ತಿದ್ದೆ. ಆದರೆ ಅಶ್ವತ್ಥಾಮನಿಗೆ ಪಾಪಬುದ್ಧಿ ಹುಟ್ಟಿರುವಂತೆ ನನ್ನ ಮನಸ್ಸಿಗೆ ಶಂಕೆ ತೋರುತ್ತಿದೆ. ಈ ರಾತ್ರಿ ಪಾಂಡವರ ಕೊಲೆಗೆ ಕೂಡ ಅವನು ಹೇಸುವಂತಿಲ್ಲ. ಏನಾಗುವುದೊ !

ಧೃತರಾಷ್ಟ್ರ : ಅಶ್ವತ್ಥಾಮನೆ ? ಹಾಗಿದ್ದರೆ ತ್ವರೆಮಾಡು ತ್ವರೆಮಾಡು—ಅವರನ್ನು ರಕ್ಷಿಸು ಹೋಗು. ನಿನ್ನ ಕಾವಲು ಹೀಗೆಯೇ ಎಂದೆಂದಿಗೂ ಅವರಿಗೆ ಧರ್ಮಗಾವಲಾಗಲಿ.

ಕೃಷ್ಣ : ಹಿರಿಯರ ಆಶೀರ್ವಾದ ! (ನಮಸ್ಕರಿಸುವನು.)

ಧೃತರಾಷ್ಟ್ರ : ಅದು ಸಂಪೂರ್ಣವಾಗಿದೆ. ಹೋಗಿ ಬಾ. ನಾಳೆ ಪುನಃ ನಿನ್ನ ದರ್ಶನವಾಗುತ್ತದೆ.

– ಕೃಷ್ಣನು ಹೊರಡುವನು –

ತೆರೆ

## ನೋಟ ೫

[ಕಾಡು. ಒಂದು ಆಲದ ಮರದ ಬುಡದಲ್ಲಿ ಕೃಪ ಕೃತವರ್ಮರು ಆಯಾಸಪಟ್ಟು ಮಲಗಿದ್ದಾರೆ. ಅಶ್ವತ್ಥಾಮನು ಬಾಣವೊಂದರ ಮೊನೆಯಿಂದ ನೆಲವನ್ನು ಕೆರೆಯುತ್ತಾ,

ಕೊರೆಯುತ್ತ ನಿಟ್ಟುಸಿರುಬಿಡುತ್ತ ಶತಪದ ತಿರುಗುತ್ತ ಇದ್ದಾನೆ. ಮರದ ಮೇಲೆ ಗದ್ದಲವಾಗಿ ನೆಲಕ್ಕೆ ಏನೊ ಮೇಲೆ ಮೇಲೆ ಬೀಳುವ ಶಬ್ದ ಸೇರುವುದು. ಕೃಪ ಕೃತವರ್ಮರು ಎಚ್ಚರಗೊಳ್ಳುವರು.]

ಕೃಪ : ಅಶ್ವತ್ಥಾಮ, ಅಶ್ವಾ, ಏಕೊ ಹೀಗೆ ನಿಂತಿರುವೆ? ಒಂದು ಘಳಿಗೆ ವಿಶ್ರಮಿಸಿಕೊ ಬಾ. ಇದೇನು ಈ ಗದ್ದಲ — ಹೊತ್ತು ಬಹಳವಾಗಿದೆಯೇನು ?

ಅಶ್ವತ್ಥಾಮ : ಎರಡನೆಯ ಯಾಮ ಆರಂಭವಾಗುತ್ತಿದೆ. ನನಗೆ ವಿಶ್ರಮಿಸಿಕೊಳ್ಳಲು ಸಾಧ್ಯವಿಲ್ಲ. ಮುಂದೇನು ಮಾಡುವುದೆಂದು ಯೋಚಿಸಿದ್ದೀರಿ ?

ಕೃಪ : ಈ ಗದ್ದಲವಾವುದು ?

ಅಶ್ವತ್ಥಾಮ : ಒಂದು ಗೂಬೆ ದೂರದ ಎಲ್ಲಿಂದಲೊ ಹಾರಿಬಂದು ಮರದ ಮೇಲಿದ್ದ ಕಾಗೆಗಳನ್ನೆಲ್ಲ ಕೊಂದುಹೋಯಿತು. ಕಾಗೆಗಳು ಚೂರು ಚೂರಾಗಿ ಸುತ್ತಲೂ ಚೆಲ್ಲಿ ಬಿದ್ದಿವೆ, ನೆಲದ ಮೇಲೆ.

ಕೃತವರ್ಮ : ಅಯ್ಯೋ ಪಾಪ, ನೂರಾರು ಕಾಗೆಗಳು ಸತ್ತು ಬಿದ್ದಿವೆ.

ಕೃಪ : ಆ ಹಾಳು ಗೂಬೆಗೇನು ಕೇಡಿಗಬುದ್ಧಿ ಬಂದಿತ್ತು—ರಾತ್ರಿಯಲ್ಲಿ ಮಲಗಿರುವ ಕಾಗೆಗಳನ್ನು ಕೊಂದುಹೋಗುವುದಕ್ಕೆ ! ಕಾಗೆಗಳಿಗೆ ರಾತ್ರಿಯ ಹೊತ್ತು ಕಣ್ಣು ಕಾಣಿಸದು. ಹೇಡಿ ಗೂಬೆ !

ಅಶ್ವತ್ಥಾಮ : ಅದಕ್ಕೇನು ಕ್ರೋಧವಿದ್ದಿತೋ ಯಾರು ಬಲ್ಲರು ? ಗೂಬೆಗೆ ಹಗಲು ಕಾಣಿಸದು. ಆಗ ಅದು ದುರ್ಬಲವಾಗಿತ್ತು. ಅದರ ಕಾಲ ರಾತ್ರಿ. ತನ್ನ ಅನುಕೂಲ ಕಾಲದಲ್ಲಿ ವೈರವನ್ನು ತೀರಿಸಿಕೊಂಡಿರಬೇಕು.

ಕೃತವರ್ಮ : ನಿನ್ನ ಕಣ್ಣುಗಳು ಪಂಜಿನಂತೆ ಉರಿಯುತ್ತಿವೆ. ಬಾರಯ್ಯ, ಸ್ವಲ್ಪ ಮಲಗಿ ಆಯಾಸ ಹರಿಸಿಕೊ.

ಅಶ್ವತ್ಥಾಮ : ಎಂತಹ ಘಾತಕರು ಆ ಪಾಂಡವರು! ಏಕಾಂಗಿಯಾಗಿ ನಿಸ್ಸಹಾಯನಾಗಿ ಪ್ರಣಬಾಧೆಯಿಂದ ಕಂಗೆಟ್ಟು ನಾಳೆ ವನಾಂತರವನ್ನು ಸೇರಬೇಕೆಂದು ನೀರಲ್ಲಿ ದಣಿವಾರಿಸಿಕೊಳ್ಳುತ್ತಿದ್ದವನನ್ನು ಕೆರಳಿಸಿ ಯುದ್ಧಕ್ಕೆ ಕರೆದರಂತಲ್ಲ ! ಅಧರ್ಮದಿಂದ ಅವನನ್ನು ಕೆಡವಿ, ನೆಲದಲ್ಲಿ ಬಿದ್ದಿರುವ ಮಹಾನುಭಾವನನ್ನು ಆ ಕಡವೆ ಭೀಮನು ಎಡಗಾಲಿಂದ ಒದ್ದನಂತಲ್ಲ ! ಇದು ಉಚಿತವೆ? ಆರ್ಯವೃತ್ತಿಯೆ ?

ಕೃಪ : ಬೆಳಗಾಗಲಿ, ಬೇಕಾದುದನ್ನು ಮಾಡೋಣವಂತೆ. ಈಗ ಏಕೆ ಹೀಗೆ ಕುದಿದು ಕೂಗುವೆ ? ನಡುರಾತ್ರಿಯಲ್ಲಿ ದುಡುಕಿ ಯಾವುದನ್ನೂ ಮಾಡಬಾರದು.

ಅಶ್ವತ್ಥಾಮ : ನನಗೆ ಇದು ನಡುಹಗಲಂತೆ ಇದೆ. ಇತ್ತ ಕಡೆ ನಾವು ಮೂವರು ; ಸಾಯುತ್ತಿರುವ ಆ ಸ್ವಾಮಿ. ಅತ್ತ ಕಡೆ ಅವರು ವಿಜೃಂಭಿಸಿದುದೂ ವಿಜೃಂಭಿಸಿ

ಮುದೇ. ವಾದ್ಯಗಳನ್ನು ಬಾಜಿಸಿದರು ; ನಕ್ಕು, ಕುಣಿಕುಣಿದಾಡಿದರು. ಅವರಿಗೆ ಹೆದರಿಕೊಂಡು ನಾವು ಸಂಜೆಯನ್ನೆಲ್ಲ ಪೊದರುಗಳಲ್ಲಿ ಅವಿತು ಕಳೆದೆವು.

ಕೃಪ : ಅಯ್ಯೊ, ದೈವ ಸಹಾಯವಿಲ್ಲದ ಪೌರುಷ ವ್ಯರ್ಥ. ದುರ್ಯೋಧನನಿಗೆ ನೀನೇ ಇದನ್ನು ಎಷ್ಟೋ ಬಾರಿ ಹೇಳಿರುವೆ. ಅವನನ್ನು ಅನುಸರಿಸಿದ ನಮಗೂ ಈ ಗತಿ ಬಂದಿತು. ಇಹಕ್ಕೆ ಕೀರ್ತಿಯಲ್ಲ ; ಪರಕ್ಕೆ ಸಾಧನವಲ್ಲ.

ಅಶ್ವತ್ಥಾಮ : ಇಹವೊ ಪರವೊ ನಾನೀಗ ಕೆಲಸಮಾಡಬೇಕು.

ಕೃಪ : ಬೇಕಾದರೆ ಈಗಲೆ ಹಸ್ತಿನಾವತಿಗೆ ಹೋಗೋಣ : ಧೃತರಾಷ್ಟ್ರ ಗಾಂಧಾರಿ ಯರನ್ನು ಕಾಣೋಣ ; ಅವರು ಹೇಳಿದಂತೆ ಮಾಡೋಣ. ಏನು ಕೃತವರ್ಮ ?

ಕೃತವರ್ಮ : ಸರಿಯಾದ ಮಾತು.

ಅಶ್ವತ್ಥಾಮ : ಕಾಲವಿಳಂಬದಿಂದ ಪ್ರಯೋಜನವಿಲ್ಲ. ನಾಳೆಯ ಹೊತ್ತಿಗೆ ಪ್ರಭು ಏನಾಗುವನೊ ! ಅದೂ ಅಲ್ಲದೆ ಪಾಂಡವರು ಬಲಾಢ್ಯರು ; ಜಯೋತ್ಸಾಹ ದಲ್ಲಿದ್ದಾರೆ ; ಅಮೋಘ ಶರವುಳ್ಳವರು. ಕೃಷ್ಣನು ಅವರ ಬಳಿಯಲ್ಲಿಯೇ ಇರುತ್ತಾನೆ. ಬೆಳಿಗ್ಗೆಯವರೆಗೂ ಕಾಲಹರಣ ಮಾಡುವುದು ನನಗೆ ಸಮ್ಮತವಲ್ಲ.

ಕೃಪ : ಈ ರಾತ್ರಿಯಲ್ಲಿ ಏನು ಮಾಡಬೇಕೆನ್ನುತ್ತೀಯೆ ?

ಅಶ್ವತ್ಥಾಮ : ಕಪಟದಿಂದ ಹತನಾದ ತಂದೆಯ ಋಣವನ್ನು ತೀರಿಸುತ್ತೇನೆ. ಹಾಗೆ ಮಾಡದೆ ಆತನ ಮಗನಾದ ನಾನು ಸಭೆಗಳಲ್ಲಿ ಹೇಗೆ ಮುಖ ತೋರಿಸಲಿ ? ಆಗದು. ಶತ್ರುಪಾಳೆಯಕ್ಕೆ ಈಗಲೇ ನುಗ್ಗಿ ಧೃಷ್ಟದ್ಯುಮ್ನಾದಿಗಳನ್ನೆಲ್ಲ ಧ್ವಂಸ ಮಾಡುತ್ತೇನೆ.

ಕೃಪ : ರಾಮ ರಾಮ, ಎಲ್ಲಿಯಾದರೂ ಉಂಟೆ ? ವೀರರು ಮಾಡುವ ಕೆಲಸವಲ್ಲ ಅದು.... ಓ, ಗೂಬೆಯ ಕಾರ್ಯವನ್ನು ನೀನು ಮೆಚ್ಚುತ್ತಿದ್ದುದು ಇದಕ್ಕೇಯೊ? ಛೀ, ಬೇಡ. ಯುದ್ಧವೇ ನಿನ್ನ ಯೋಚನೆಯಾದರೆ ಹಾಗೂ ಆಗಲಿ. ನಾಳಿನ ಬೆಳಗ್ಗೆ ರಥಗಳನ್ನೇರಿ ಸೈನ್ಯಸಮೇತರಾದ ಅವರನ್ನು ಇದಿರಿಸಿ ಅವರನ್ನು ನಿಗ್ರಹಿಸೋಣ. ಜಯವಾದರೆ ಪ್ರಯತ್ನ ಹಣ್ಣಾಗುತ್ತದೆ ; ಮಡಿದರೆ ವೀರ ಸ್ವರ್ಗವನ್ನಾದರೂ ಸಂಪಾದಿಸಬಹುದು. ನಿನ್ನ ಯೋಚನೆ ಸರ್ವಥಾ ಯೋಗ್ಯವಲ್ಲ.

ಅಶ್ವತ್ಥಾಮ : ಸ್ವಸ್ಥನಾಗು ! ನಿದ್ರೆ ಮಾಡು !! ನಾನು ಹೇಗೆ ಸ್ವಸ್ಥನಾಗಲಿ ? ಈ ಕಣ್ಣುಗಳಲ್ಲಿ ನರಕಗಳು ಉರಿಯುತ್ತಿವೆ. ಮನಸ್ಸಿನಲ್ಲಿ ವ್ಯಾಧಿಯಿದೆ. ಪಾಂಚಾಲರು ಧೃಷ್ಟದ್ಯುಮ್ನನನ್ನು ಇನ್ನು ಮುಂದೆ ದ್ರೋಣಹಂತ, ದ್ರೋಣ ಹಂತ ಎಂದು ಹೊಗಳುತ್ತಾರೆ. ಅವರ ಬಾಯಿಂದ ಆ ಮಾತು ಬರುವ

ಮುಂಚೆ ಅವರ ಕಟವಾಯ್ಗಳನ್ನು ಹಿಸಿದಲ್ಲದೆ ನನಗೆ ನಿದ್ರೆ ಬಾರದು. ನನ್ನಂತಹ ಮಗನು ಬದುಕಿದ್ದೂ ಅಂತಹ ಅಪಮಾನವನ್ನು ಸಹಿಸಬಹುದೆ? ಅವರ ಸ್ಮರಣೆ ಬಂದರೆ ಆ ಸ್ಮೃತಿಚಿತ್ರವನ್ನೇ ಅಡಿಯಿಂದ ತುದಿವರೆಗೂ ಸೀಳಿ ತೋರಣ ಕಟ್ಟಬೇಕೆನಿಸುತ್ತದೆ. ನಾನು ಅಥವಾ ಧೃಷ್ಟದ್ಯುಮ್ನ—ಇಬ್ಬರಲ್ಲಿ ಒಬ್ಬನು ಮಾತ್ರ ಪ್ರಪಂಚದಲ್ಲಿರಬೇಕು. ಅವನು ಸಾಯದಿದ್ದರೆ ನಾನು ಭೂಮಿಯಲ್ಲಿ ಬದುಕಿರಲಾರೆ. . .ಅಯ್ಯೋ ಸುಯೋಧನಾ ! ಆತನ ಪಾಡನ್ನು ನೋಡಿ : ಮೈಯಿಂದ ಹರಿಯುವ ರಕ್ತ ಕಾಲುವೆಯಾಗಿದೆ. ತನ್ನ ರಕ್ತದ ಕೆಸರಲ್ಲಿ, ಕಣ್ಣು ತುಟಿ ಮೆತ್ತಿಕೊಂಡು, ತಲೆ ಕೂದಲು ತಿರಿಗಟ್ಟಿ, ನರಳುತ್ತ ನರಳುತ್ತ ಬಿದ್ದಿರುವ ಕೌರವ ಸಾರ್ವಭೌಮನನ್ನು ನೋಡಿ ಕಲ್ಲು ಕರಗೀತು ! ಆತನಿಂದ ನಾವೆಲ್ಲರೂ ಎಷ್ಟು ಬಹುಮಾನ ಪಡೆದಿದ್ದೇವೆ. ನಮ್ಮನ್ನು ನಂಬಿ ಆತನು ಯುದ್ಧವನ್ನು ಹೂಡಿದನು ಉಹುಂ.... ನೀವು ಬಂದರೆ ಬನ್ನಿ, ಬಿಟ್ಟರೆ ಬಿಡಿ. ನಿಮ್ಮ ಅಸಮ್ಮತಿ ನನ್ನನ್ನು ತಡೆಯುವ ಹಾಗಿಲ್ಲ.

ಕೃಪ : ಕ್ರೋಧವನ್ನು ಅಡಗಿಸಿಕೊ ಅಶ್ವ. ನಿನ್ನ ತಿಳಿವಳಿಕೆಯೆಲ್ಲ ಎಲ್ಲಿ ಮಾಯವಾಯಿತು ? ಇದುವರೆಗೂ ಕೂಡಿಟ್ಟ ಸುಕೃತವನ್ನೆಲ್ಲ ಅತಲಜಲದಲ್ಲಿ ಈಡಾಡಬೇಡ. ನಿದ್ರೆ ಮಾಡುವವರನ್ನೂ ನಿರಾಯುಧರನ್ನೂ ಸಂಹರಿಸಬಾರದು. ಸೂರ್ಯಚಂದ್ರರಿರುವವರೆಗೂ ಅಪಖ್ಯಾತಿ ಉಳಿಯುತ್ತದೆ. ನಾಳೆ ಧರ್ಮಯುದ್ಧದಲ್ಲಿ ಅವರನ್ನು ಸಂಹರಿಸಿ ಜಯಶೀಲನಾಗು.

ಕೃತವರ್ಮ : ನಿಮ್ಮ ಮಾವನವರ ಮಾತು ಉಚಿತವಾದುದು. ಕೇಳು ಅಶ್ವತ್ಥಾಮ.

ಅಶ್ವತ್ಥಾಮ : ನಿಜವೇ...ಒಪ್ಪಿದೆ. ಆದರೆ ಧರ್ಮದ ಮಾತನ್ನು ಮಾತ್ರ ಎತ್ತಬೇಡಿ. ಆಚಾರ್ಯನು ಶಸ್ತ್ರಸಂನ್ಯಾಸ ಮಾಡಿದ್ದಾಗ ಆ ಹೇಡಿ ಪಾಂಚಾಲನು ಆತನ ತಲೆಯನ್ನು ಕತ್ತರಿಸಿದುದು ಧರ್ಮವೊ ? ಕೆಸರಲ್ಲಿ ರಥದ ಚಕ್ರ ಹೂತಿರಲು ಅದನ್ನು ಮೇಲಕ್ಕೆತ್ತುವಾಗ, ವಾಹನವಿಲ್ಲದೆ ನಿರಾಯುಧನಾಗಿದ್ದ ಕರ್ಣನನ್ನು ಅರ್ಜುನನು ಹೊಡೆದುದು ಧರ್ಮವೊ ? ನಪುಂಸಕನನ್ನು ಮರೆಮಾಡಿಕೊಂಡು ಪುರುಷಸಿಂಹನನ್ನು, ಕೌರವ ಕುಲ ಪಿತಾಮಹನನ್ನು ನೆಲಕ್ಕೆ ಕೆಡವಿದುದು ಧರ್ಮವೊ ? ಪ್ರಾಯೋಪವೇಶ ಮಾಡಿದ್ದ ಪುಣ್ಯಶಾಲಿ ಭೂರಿಶ್ರವನನ್ನು ಎಲ್ಲರ ಅಂಕೆಯನ್ನೂ ಮೀರಿ ಸಾತ್ಯಕಿ ಕೊಂದದ್ದು ಧರ್ಮವೊ ? ಅಥವಾ, ಗದಾಯುದ್ಧಕ್ಕೆ ಅಪವಾದ ತರುವಂತೆ, ವೀರನಂತೆ ಕಾದುತ್ತಿದ್ದ ಸುಯೋಧನನ ತೊಡೆಯನ್ನು ಮುರಿದುದು ಧರ್ಮವೊ ! ಧರ್ಮವಂತೆ ಧರ್ಮ ! ಹಾಗೆ ಅಧರ್ಮವನ್ನು ಮಾಡಿದ ಪಾಂಡವ ಪಾಂಚಾಲರನ್ನು ನಿಂದಿಸದೆ ನನ್ನ ಯೋಚನೆಯ ಗುಣದೋಷಗಳನ್ನು ಎಣಿಸಬಹುದೆ ? ಈಗ ನಾನು ಧರ್ಮಾಧರ್ಮಗಳ ಮೇರೆಯನ್ನು ಮೀರಿಹೋಗಿದ್ದೇನೆ. ರೌರವ ಬರಲಿ, ಕ್ರಿಮಿ

ಕೀಟಗಳ ಕೋಟಿ ಜನ್ಮ ಬರಲಿ, ಚಿಂತೆಯಿಲ್ಲ. ನೀವು ತಡೆದರೆ ಈ ಕಾರ್ಯ ನಿಲ್ಲುವ ಹಾಗಿಲ್ಲ. ನನ್ನ ತಂದೆ ಯಾವ ಸ್ಥಿತಿಯಲ್ಲಿರುವಾಗ ಧೃಷ್ಟದ್ಯುಮ್ನನು ಆತನನ್ನು ಕೊಂದನೊ ಅದೇ ಸ್ಥಿತಿಯಲ್ಲಿ, ಪಶುವನ್ನು ಕಡಿಯುವಂತೆ ಅವನನ್ನು ಕಡಿದು ಬರುತ್ತೇನೆ. ಅವರೆಗೂ ನೀವು ನನಗಾಗಿ ಇಲ್ಲಿಯೇ ಕಾದಿರಿ. ಅಲ್ಲಿಯ ವರೆಗೂ ನನಗೆ ನಿದ್ದೆ ಬಾರದು, ವಿಶ್ರಾಂತಿಯಿಲ್ಲ ; ಮನಸ್ಸಿನ ಈ ಜ್ವರ ಇಳಿಯುವುದಿಲ್ಲ.

– ಹೋಗಲು ಯತ್ನಿಸುವನು –

ಕೃಪ–ಕೃತವರ್ಮ : ತಡೆ, ತಡೆ ಅಶ್ವತ್ಥಾಮ.

ಅಶ್ವತ್ಥಾಮ : ನೀವು ಅಡ್ಡ ಬರುವಿರಾದರೆ ಇಗೊ—ಈ ಸಮಯದಲ್ಲಿ ಮಿತ್ರ ಘಾತಕ್ಕೂ ಹಿಂಜರಿಯುವವನಲ್ಲ—ಅತ್ತ ಸರಿಯಿರಿ....

– ಆವೇಶದಿಂದ ಹೋಗುವನು –

ತೆರೆ

## ನೋಟ ೬

[ಕಾಡುದಾರಿ. ಅಶ್ವತ್ಥಾಮನು ಖಡ್ಗದ ಮೊನೆಯನ್ನು ಪರೀಕ್ಷಿಸುತ್ತ, ಬಾಗಿಸುತ್ತ, ಝಳಪಿಸುತ್ತ, ದಾರಿ ತೆವಳುತ್ತ ಹೋಗುತ್ತಿರುವನು.]

– ಕೃಪ ಕೃತವರ್ಮರ ಪ್ರವೇಶ –

ಕೃತವರ್ಮ : ಅದೊ... ಅವನೇ !...ಅಶ್ವತ್ಥಾಮ, ನಿಲ್ಲು ನಿಲ್ಲು...ನಮ್ಮ ಕೂಗು ಅವನಿಗೆ ಕೇಳಿಸಿಲ್ಲ.

ಕೃಪ : ಕೇಳಿಸಿಲ್ಲವೇನು ? ಅಂತಹ ಹಟ. ಪುನಃ ನಾವೆಲ್ಲಿ ತಡೆದೇವೊ ಎಂದು ಕೇಳಿಯೂ ಕೇಳಿಸದಂತೆ ಹೋಗುತ್ತಿರಬೇಕು. ಅಥವಾ ಕ್ರೋಧಪಿಶಾಚ ಹಿಡಿದಿರುವಾಗ ಬೇರೆ ಯಾವುದೂ ಕಾಣಿಸದು, ಕೇಳಿಸದು...ಅಶ್ವಾ, ಅಶ್ವಾ...

ಅಶ್ವತ್ಥಾಮ : (ತಿರುಗಿ) ಏನು ಪುನಃ ?

ಕೃತವರ್ಮ : ಇದಾವುದು ನಿನ್ನ ಕೈಯಲ್ಲಿನ ಖಡ್ಗ ?

ಅಶ್ವತ್ಥಾಮ : ಆಚಾರ್ಯನು ನನಗೆ ಹರಸಿಕೊಟ್ಟಿದ್ದದ್ದು.

ಕೃಪ : ಇಷ್ಟು ಹೊತ್ತು ಏನು ಮಾಡುತ್ತಿದ್ದೆ ?

ಅಶ್ವತ್ಥಾಮ : ರಥಕ್ಕೆ ಹೋಗಿ ಅದಕ್ಕೆ ಸಾಣೆ ಹಿಡಿಯುತ್ತಿದ್ದೆ. ಅದಕ್ಕೆ ಪೂಜೆ ಮಾಡಿದೆ.

ಕೃಪ : ಇನ್ನು ಪಾಳೆಯದವರು ಯಾರೂ ತಪ್ಪಿಸಿಕೊಂಡು ಉಳಿಯುವ ಆಸೆಯಿಲ್ಲ, ಕೃತವರ್ಮ.

ಅಶ್ವತ್ಥಾಮ : ದಾರಿಯಲ್ಲಿ ಅಪಶಕುನಗಳಾದವು ಮಾವ. ರುದ್ರಪೂಜೆ ಮಾಡಿ ಮನಸ್ಸನ್ನು ಧೈರ್ಯ ಮಾಡಿಕೊಂಡು ಬಂದೆ. ಇನ್ನು ಬಿಡಿ. ನನ್ನ ದಾರಿ ಸ್ಪಷ್ಟವಾಗಿ ಕಾಣುತ್ತಿದೆ.

ಕೃಪ : ಕಗ್ಗತ್ತಲಲ್ಲಿ ಸ್ಪಷ್ಟವಾಗಿಯೇ ಕಾಣುತ್ತಿರಬೇಕು — ಈ ಹೇಡಿ ರಾತ್ರಿಯಲ್ಲಿ !

ಅಶ್ವತ್ಥಾಮ : ಹುಂ. ಪುನಃ ಉಪದೇಶಕ್ಕೆ ಮೊದಲು ಮಾಡಿದಿರೇನು ? ಕಾಲ ಮೀರುತ್ತಿದೆ. ಕಾಡದೆ ಹೊರಟುಹೋಗಿ.

ಕೃಪ : ಕಂಬವನ್ನು ಕಿತ್ತು ಮಾಳಿಗೆಯನ್ನು ಮೇಲೆ ಕೆಡವಿಕೊಳ್ಳುವರೇನೊ ?

ಅಶ್ವತ್ಥಾಮ : (ಕಿವಿ ಮುಚ್ಚಿಕೊಂಡು ಮುಂದೆ ಹೋಗಲು ಪ್ರಯತ್ನಿಸುವನು)

ಕೃತವರ್ಮ : ಅಶ್ವತ್ಥಾಮಾ, ನಿನ್ನಿಷ್ಟ. ನಾವೂ ಬಹಳ ಹೊತ್ತು ಯೋಚಿಸಿ ನಿನ್ನನ್ನು ಹಿಂಬಾಲಿಸಿ ಬಂದೆವು.

ಅಶ್ವತ್ಥಾಮ : ಕಾರ್ಯದಿಂದ ನನ್ನನ್ನು ತಿರುಗಿಸುವ ಉದ್ದೇಶದಿಂದಲಾದರೆ ನಿಮ್ಮ ಶ್ರಮ ವ್ಯರ್ಥ.

ಕೃಪ : ದುರ್ಯೋಧನನ ಇಚ್ಛೆಯಂತೆ ನಿನಗೆ ಅಭಿಷೇಕಮಾಡಿ ನಿನ್ನ ಆಧಿಪತ್ಯವನ್ನು ಒಪ್ಪಿದ್ದೇವೆ. ನಿನ್ನ ಸೈನಿಕರಂತೆ ನಡೆಯದಿದ್ದರೆ ಪ್ರಭುವಿನ ಆಜ್ಞೆಯನ್ನು ಮೀರಿದಂತಾಗುತ್ತದೆ. ಆತನು ಬದುಕಿರುವವರೆಗೂ ಸರಿಯಾಗಲಿ ತಪ್ಪಾಗಲಿ ಆತನ ಆಜ್ಞೆಗೆ ತಲೆಬಾಗಬೇಕು. ಈ ಹಾಳು ಯುದ್ಧದಲ್ಲಿ ಹಿರಿಯರೆಲ್ಲರೂ ಹೀಗೇ ಮಾಡಿ ಧರ್ಮಸಂಕಟದಲ್ಲಿ ಸುಟ್ಟುಹೋದರು.

ಅಶ್ವತ್ಥಾಮ : ಇರಬಹುದುದು. ಆದರೆ ಇಷ್ಟವಲ್ಲದ ಕಾರ್ಯಕ್ಕೆ ನಿಮ್ಮನ್ನು ಸೆಳೆಯುವುದು ನನಗೆ ಸಮ್ಮತವಲ್ಲ. ನಿಮ್ಮ ದಾರಿ ಹಿಡಿದು ನೀವು ಹೋಗಬಹುದು.

ಕೃಪ : ಅಗಡುತನ ಮಾಡಬೇಡ. ಪ್ರಭುವಿಗೆ ಬಂದ ಗತಿಯನ್ನು ಕಂಡುದಾಗಿದೆ.

ಅಶ್ವತ್ಥಾಮ : ಈ ಪಾಪದ ಸೋಂಕು ನಿಮಗೆ ಬೇಡ. ಪಾಳೆಯದ ಹೊರವಳಯದಲ್ಲಿ ನೀವು ನನಗಾಗಿ ಕಾದಿರಿ ; ನಾನೊಬ್ಬನೇ ಕಾರ್ಯವನ್ನು ಮುಗಿಸಿಕೊಂಡು ಬರುತ್ತೇನೆ ; ಆಮೇಲೆ ನೀವು ಹೇಳಿದಂತೆ ಮಾಡುತ್ತೇನೆ. ಈ ದಿನ ಇಲ್ಲಿಂದ ಒಂದು ಪಿಳ್ಳೆ ಜೀವಂತವಾಗಿ ಹೋಗಲಾಗದು.

ಕೃಪ : ಒಳಗೆ ಎಷ್ಟು ಜೀವಿಗಳು ವಿಶ್ರಮಿಸಿವೆಯೊ ಅಷ್ಟು ಪಾಪಗಳು ನಿನ್ನನ್ನು ನರಕಕ್ಕೆ ಸೆಳೆಯುವುವು.

ಅಶ್ವತ್ಥಾಮ : ಸೆಳೆಯಲಿ !

ಕೃತವರ್ಮ : ಶಾಂತಂ ಪಾಪಂ !

— ಹೋಗುವನು —

ಕೃಪ : ಯಾವುದು ಹೇಗೆ ನಡೆಯಬೇಕೊ ಹಾಗೆಯೇ ನಡೆದುಹೋಗಲಿ. ಬಾ ಕೃತವರ್ಮ, ಇಲ್ಲಿ ನಮಗೆ ಸ್ವಾತಂತ್ರ್ಯವಿಲ್ಲ.

(ಇಬ್ಬರೂ ಪಾಳೆಯದ ಬೇರೆ ಬೇರೆ ಕಡೆ ಕಾದು ನಿಲ್ಲುವರು)

ತೆರೆ

## ನೋಟ ೭

[ಪಾಂಡವ ಪಾಂಚಾಲರ ಪಾಳೆಯ. ಒಳಗೆ ಎಲ್ಲರೂ ನಿದ್ರಿಸುತ್ತಿದ್ದಾರೆ. ಅಲ್ಲಲ್ಲಿ ಪಂಜುಗಳೂ ದೀಪಗಳೂ ಮಂಕಾಗಿ ಉರಿಯುತ್ತಿವೆ. ಸಿಕ್ಕಿದುದನ್ನು ಒದ್ದು ಕೊಂಡು ಹುಡುಕುತ್ತ ಅಶ್ವತ್ಥಾಮನು ತಿರುಗುತ್ತಿದ್ದಾನೆ.]

ಅಶ್ವತ್ಥಾಮ : ಕಡೆಗೆ ! ಹಾ...ಇದೇ, ಪಾಂಚಾಲರ ಗುಂಪು. ಇವನು ಯಾರು ? ಸುಕರ್ಮ, (ಏಟಿಕ್ಕುವನು) ; ಇವನು ಆಹಾ ಇವನೇ !—ಎಲವೋ ಗುರು ದ್ರೋಹಿ, ಪಾಂಡವ ಸೇನಾನಿ, ಏಳು, ನಿನ್ನ ಯಮನನ್ನು ಎದುರು ಗೊಳ್ಳೇಳು ! (ಒಂದು ಸಲ ಒದ್ದು ಜುಟ್ಟು ಹಿಡಿದೆಬ್ಬಿಸುವನು. ಕತ್ತಿಯಿಂದ ತಿವಿಯುವನು.)

ಧೃಷ್ಟದ್ಯುಮ್ನ : ಯಾರದು, ರಾಕ್ಷಸಾ, ಯಾರಲ್ಲಿ ನಿದ್ದೆ ಮಾಡುವವರು ? ಏಳಿ ಏಳಿ...ಅಯ್ಯೋ, ಅಶ್ವತ್ಥಾಮಾ—ಹೇಡೀ—ಮಲಗಿ ನಿದ್ರಿಸುವಾಗಲೇ ನಿನ್ನ ಪ್ರತಾಪ ?—ನನ್ನ ಕೈ ಬಿಡು. ಧರ್ಮಯುದ್ಧ ಮಾಡು. ಅಯ್ಯೋ ಏಳಿ ಏಳಿ.

ಅಶ್ವತ್ಥಾಮ : ನೀನು ಬಹಳ ಧರ್ಮವನ್ನು ಕಂಡವನು,—ಪ್ರಪಂಚಕ್ಕೆ ಅತಿ ವಸ್ತು ! ನೇರ ಸ್ವರ್ಗಕ್ಕೆ ಹೋಗುವವನಲ್ಲವೆ ? (ಪೆಟ್ಟಿಕ್ಕುವನು)

ಧೃಷ್ಟದ್ಯುಮ್ನ : ಬೇಡ, ಕುತ್ತಿಗೆ ಹಿಸುಕಬೇಡ, ಹೇಡೀ—

ಅಶ್ವತ್ಥಾಮ : ನಿರಸ್ತ್ರನಾಗಿದ್ದ ಗುರುವನ್ನು ಹೇಗೆಯೊ ಕೊಂದೆ ? ಧರ್ಮಯುದ್ಧ—ನಿನಗೆ ? ಯುದ್ಧರಂಗದಲ್ಲಿ ಸತ್ತಿದ್ದರೆ ಸ್ವರ್ಗ ಬರುತ್ತಿತ್ತು. ನಿನಗೆ ಸ್ವರ್ಗವೆ ?

(ಕೊಂದು ಕೆಡಹುತ್ತಾನೆ)

(ಆಮೇಲೆ ಒಳಗೆ ನುಗ್ಗುವನು. ಕೋಲಾಹಲ – ಸಿಕ್ಕಿದುದು ಬೀಳುವುದು – ಸೈನಿಕರ ಕೂಗು. ಸಿಕ್ಕಿದವರು ಸಿಕ್ಕಿದತ್ತ ಓಡುವ, ಚೀರುವ, ಬೀಳುವ ಶಬ್ದ...ಅಶ್ವತ್ಥಾಮನು ಎಲ್ಲರನ್ನೂ ಅಟ್ಟಿಸಿಕೊಂಡು ಹೋಗಿ ಕೊಲ್ಲುವನು)

. . .ಎಲವೋ ಶಿಖಂಡಿ, ತಿರುಗಿನೋಡು. . .ಇದೇ ನಿನಗೆ ಕೊನೆ (ಯುದ್ಧ. "ಪಿಶಾಚಿ—ಕೊಲೆ—ಹೇಡೀ, ಹೇಡೀ"—ಶಿಖಂಡಿ ಸತ್ತು ಬೀಳುವನು). ಇವರು ಯಾರು ? ಎಲ್ಲಿಗೆ ಹೋಗುವಿರಿ ? ನಿಮ್ಮ ಪಾಂಡವರೂ ಕೃಷ್ಣನೂ ನಿಮ್ಮನ್ನು ರಕ್ಷಿಸಿಕೊಳ್ಳಲಿ, ಕರೆಯಿರಿ. . . (ಪೆಟ್ಟುಗಳಿಕ್ಕುವನು) ನೀವು ಕೂಗದಿದ್ದರೆ ನಾನು ಕೂಗಿ ಕರೆಯುತ್ತೇನೆ. ಪಾರ್ಥಾ, ಭೀಮಾ, ಕೃಷ್ಣಾ, ಎಲ್ಲಡಗಿದ್ದೀರಿ ? ಯಾವ ಗಂಡು ಬರುವಿರೊ ಬನ್ನಿ. ನನ್ನೆದುರಿಗೆ ಈಗ ಬಂದು ನಿಲ್ಲಿ ? ನಾನು ಸತ್ತೆನೆಂದು ಸುಳ್ಳು ಹೇಳಿ ಗುರುವನ್ನು ಕೊಲ್ಲಿಸಿದ ಧರ್ಮಾವತಾರಾ, ಬಾ, ಎಲ್ಲಿರುವೆ ? ಇವರು ಯಾರು ? ಶ್ರುತಸೋಮ—ಉಪಪಾಂಡವರು—ನಿಮ್ಮ ಪರಾಕ್ರಮವೇ ಪರಾಕ್ರಮ. ಒಂದು—ಎರಡು—ಮೂರು—ಐದು ! ಉಂ !

(ಸೇವಕನೊಬ್ಬನು ನುಸುಳಿಕೊಂಡು ಮೆಲ್ಲಗೆ "ನಾಶ, ನಾಶ, ನಮ್ಮಪ್ಪಾ ಸತ್ತೆನಲ್ಲೋ" ಎಂದುಕೊಂಡು ಒಂದು ಮರದ ಮರೆಗೆ ಹೋಗಿ, ಅದನ್ನು ಏರಿ ನಡುಗುತ್ತ ಕುಳಿತು ಕೊಳ್ಳುವನು)

ಪಾಂಡವರೆಲ್ಲಿ—ಎಲ್ಲಿ ? ಇಲ್ಲಿಯೂ ಇಲ್ಲ, ಎಲ್ಲಿಯೂ ಇಲ್ಲ...ಅಯ್ಯೋ ತಪ್ಪಿಸಿಕೊಂಡರು...ಕೃಷ್ಣಾ, ನಿನ್ನ ಮಂತ್ರದ ಮುಂದೆ ಮಂತ್ರವಿಲ್ಲ. ಕೊನೆಗೂ ನಿನ್ನವರನ್ನು ಕಾಪಾಡಿಕೊಂಡೆ. ಇಲ್ಲವಾಗಿದ್ದರೆ ಅವರೆಷ್ಟರವರು ? ಉಗುರಲ್ಲಿ ಚಿವುಟಿ ಹಾಕುತ್ತಿದ್ದೆ ! ಭೀಮನೊಬ್ಬನಾದರೂ ದೊರೆತಿದ್ದಿದ್ದರೆ ?

(ಹೊರಕ್ಕೆ ಬರುತ್ತ ಕೃಪ ಕೃತವರ್ಮರನ್ನು ಕಾಣುವನು)

ಮಾವಾ, ಕೃತವರ್ಮಾ (ಅವರನ್ನು ತಬ್ಬಿಕೊಳ್ಳಲು ಮುಂಬರಿಯುವನು. ಅವರು ಬಿಡಿಸಿಕೊಂಡು ಹೇಸಿ ಹಿಂದಕ್ಕೆ ಸರಿಯುವರು) ನೋಡಿ ! ನೋಡಿ ! ಈ ರಕ್ತ, ಈ ಶವಗಳು, ಎಲ್ಲಾ ನಮ್ಮ ಶತ್ರುಗಳವು, ಹಹ್ಹಹ್ಹಹ್ಹ ! ಎಲ್ಲರನ್ನೂ ಒರಸಿಯಾಯಿತು. ದೊಡ್ಡ ಮೊಲಗಳು ಮಾತ್ರ ತಪ್ಪಿಸಿಕೊಂಡವು ! (ಕೃಪ ಕೃತವರ್ಮರು ಸುಟ್ಟ ಹೃದಯದಿಂದ ಒಂದೇ ಸಮನೆ ನಿಂತು ನೋಡಿ ಸ್ತಬ್ಧರಾಗಿರುವರು) ಇದೋ ದುರ್ಯೋಧನ, ನಿನಗೆ ಸಮಾಧಾನವಾಗಲಿ ! ಆಚಾರ್ಯ, ನಿನ್ನ ಋಣಕ್ಕೆ ಇದನ್ನು ಸಮರ್ಪಿಸುತ್ತಿದ್ದೇನೆ ! (ತರ್ಪಣ ಕೊಡುವನು).

ಕೃಪ-ಕೃತವರ್ಮ : ಪಾಪಿ ! (ಮುಖಗಳನ್ನು ಮುಚ್ಚಿಕೊಂಡು ಬೇರೆ ಕಡೆಗೆ ತಿರುಗುವರು)

ತೆರೆ

# ನೋಟ ೮

[ದುರ್ಯೋಧನನು ಮೇಲುಸಿರಲ್ಲಿ ಮಲಗಿದ್ದಾನೆ. ಹೊರಗಿಂದ ಕೃಪ ಕೃತವರ್ಮ ಅಶ್ವತ್ಥಾಮರು ಬರುವರು.]

ಕೃಪ : ಕೃತವರ್ಮ, ದುರ್ಯೋಧನನನ್ನು ಎಬ್ಬಿಸು.

ಕೃತವರ್ಮ : ದುರ್ಯೋಧನ, ಈ ಕಡೆ ನೋಡು. ಅಶ್ವತ್ಥಾಮನು ಬಂದಿದ್ದಾನೆ. ನಾವು ಮೂವರೂ ಪುನಃ ನಿನ್ನ ಬಳಿಯಲ್ಲಿದ್ದೇವೆ. ನೋಡು.

ಅಶ್ವತ್ಥಾಮ : ಸುಯೋಧನ, ಕಣ್ಣು ತೆರೆ. (ತನ್ನ ಬಳಿಗೆ ಮೆತ್ತಗೆ ಸೆಳೆದುಕೊಂಡು ಅವನ ಕಿವಿಯಲ್ಲಿ) ನಿನ್ನ ಕಾರ್ಯವನ್ನು ಮಾಡಿಕೊಂಡು ಬಂದಿದ್ದೇನೆ. ಸುಯೋಧನ,—ಕಣ್ಣುಗಳು ಮೆತ್ತಿಕೊಂಡಿದೆ. ತುಟಿಗಳಲ್ಲಿ ರಕ್ತ ಹೆಪ್ಪುಗಟ್ಟಿದೆ. ಈ ಹಾಳು ನೊಣಗಳೊ ! ಕೃತವರ್ಮ, ಸ್ವಲ್ಪ ನೀರನ್ನು ತೆಗೆದುಕೊಂಡು ಬಾ. ರಾಜಾಧಿರಾಜನಾದ ನಿನಗೆ ಏನು ಗತಿ ಬಂದಿತು, ಮಿತ್ರ ! ಒಂದು ನಾಯಿ ಒಂದು ಮೊಲ ಒಂದು ಇಲಿ ಜೀವಿಸಿರಬಹುದಂತೆ ! ನೀನು ಇಲ್ಲವಾಗಬಹುದೆ ! ಎಷ್ಟು ಜನ ಪರಿವಾರದವರು ಇರುತ್ತಿದ್ದರು ! ನೀನಿದ್ದಲ್ಲಿ ವೈಭವ, ನಗು. ಈಗ ಎಲ್ಲವೂ ನಾಶವಾಗಿ ಬಳಿಯಲ್ಲಿ ಒಬ್ಬ ಪರಿಚಾರಕನು ಕೂಡ ಇಲ್ಲದಂತಾಯಿತು ! (ಕೃತವರ್ಮನು ನೀರು ತರುವನು. ಮುಖ ತುಟಿಗಳನ್ನು ತೊಳೆದು ತಲೆಗೆ ನೀರು ತಟ್ಟಿ) ಕೋ, ಸುಯೋಧನ, ಏಳು, ಈ ನೀರನ್ನು ಸ್ವಲ್ಪ ಕುಡಿ—ಹೀಗೆ—

ದುರ್ಯೋಧನ : (ಎರಡು ಗುಟುಕು ಕುಡಿದು ಚೇತನ ಬಂದು) ಜಯಶಾಲಿಯಾಗಿ ಬಂದೆಯ ಅಶ್ವತ್ಥಾಮ ? ನಿನ್ನ ಪ್ರತಿಜ್ಞೆ—?

ಅಶ್ವತ್ಥಾಮ : ಸಂತೋಷವಾಗುವ ಹಾಗಿದ್ದರೆ ಕೇಳು. ನಿನ್ನ ಶತ್ರುಗಳು—

ದುರ್ಯೋಧನ : (ಕಣ್ಣಲ್ಲಿ ಕಳೆ ಬಂದು, ಹಿಗ್ಗಿ) ಏನು ಏನು, ಶತ್ರುಗಳು ಮಡಿದರೆ ? (ಅಶ್ವತ್ಥಾಮನ ಬೆನ್ನನ್ನು ಸವರುತ್ತ) ಭಾಪು ಭಾಪು ಗುರುಪುತ್ರ ! ಯಾರೂ ಮಾಡದ ಉಪಕಾರವನ್ನು ನೀನು ಮಾಡಿರುವೆ. ಎಲ್ಲರೂ ? ಭೀಮನು ಸತ್ತನೆ—? ಅರ್ಜುನನನ್ನು ತೀರಿಸಿದೆಯ—? ಕೃಷ್ಣ ? (ಕೃಪ–ಕೃತವರ್ಮರು ನಿಟ್ಟುಸಿರು ಬಿಡುವರು. ಅಶ್ವತ್ಥಾಮನು ತಲೆಬಾಗಿಸಿರುವನು) ಪ್ರತಿಜ್ಞೆ ನೆರವೇರಿಸಿದೆಯೆಂದೆ ? ವೈರಿಗಳು ಮಡಿದರೆಂದು ಹೇಳಿದೆ ?

ಕೃತವರ್ಮ : ಏಳ್ವರ ಹೊರತು ಎಲ್ಲರೂ ಸತ್ತರು.

ದುರ್ಯೋಧನ : ಏಳ್ವರು ?—ಊಂ—ಐವರು ಪಾಂಡವರು ! ಸರಿ,—ಕೃಷ್ಣ. ಏಳನೆಯವನು ?

ಕೃತವರ್ಮ : ಸಾತ್ಯಕಿ.

ದುರ್ಯೋಧನ : ಅವನೋ. . .ಇತ್ತ ಅರ್ಜುನ, ಅತ್ತ ಸಾತ್ಯಕಿ—ಕೃಷ್ಣನಿಗೆ ಏನು ಮೋಹವೋ ಅವರಲ್ಲಿ ?

ಅಶ್ವತ್ಥಾಮ : ಧೃಷ್ಟದ್ಯುಮ್ನ ಶಿಖಂಡಿ ಮೊದಲಾದ ಎಲ್ಲರನ್ನೂ—ಪಾಳೆಯದಲ್ಲಿದ್ದವರನ್ನೆಲ್ಲ ನಿಪಾತಮಾಡಿ ಈ ಖಡ್ಗಕ್ಕೆ ಅವರ ಜೀವವನ್ನು ಕುಡಿಸಿ ತಂದಿದ್ದೇನೆ. ಇದೊ ನೋಡು, ಹಿಡಿಯಿಂದ ಮೊನೆಯವರೆಗೂ ಅವರ ರಕ್ತ ಇದರ ಮೇಲೆ ಹೆಪ್ಪುಕಟ್ಟಿದೆ.

ದುರ್ಯೋಧನ : ಹೋಗಲಿ ಬಿಡು. ಪಾಂಚಾಲ ಧೂರ್ತರೆಲ್ಲ ತೀರಿಹೋದರಲ್ಲ : ಹಿರಿಯರ ಋಣ ಅಮಟ್ಟಿಗಾದರೂ ಹಿಂಗಿತು ! ನನ್ನ ವೈರ ದುರ್ಭರವಾದುದು ಆಚಾರ್ಯ.

ಕೃಪ : ಇನ್ನಾದರೂ ಶಾಂತನಾಗು. ಕಡೆಯ ಘಳಿಗೆಯಲ್ಲಿ ಸ್ವಸ್ಥನಾಗು.

ದುರ್ಯೋಧನ : (ತಲೆಯಲ್ಲಾಡಿಸುತ್ತ) ಶಾಂತಿಯೆಲ್ಲಿ ಬರಬೇಕು—ಊಹುಂ—ವೈರದಲ್ಲಿಯೇ ಬದುಕಿದ್ದು, ವೈರಿಶೇಷವನ್ನು ಉಳಿಸಿ ಸಾಯುವವನಿಗೆ ? ನಾನು ಹೋದಲ್ಲಿ ಭೀಮನಿಗಾಗಿ ಕಾದಿರುತ್ತೇನೆ.

ಕೃಪ : ವೈರಿಗಳು ನಿರ್ಮೂಲವಾದಂತೆಯೇ ದುರ್ಯೋಧನ—ಉಪಪಾಂಡವರೆಲ್ಲ ಸತ್ತರು.

ದುರ್ಯೋಧನ : ಇನ್ನು ಯಾರು ಉಳಿದರೆಷ್ಟು—(ಹೆಚ್ಚು ಹೆಚ್ಚು ದುರ್ಬಲತೆ ಕಾಣುತ್ತದೆ. ಮುಂದೆಲ್ಲ ಹೆಚ್ಚು ನಿಧಾನವಾಗಿ ಮಾತನಾಡುತ್ತಾನೆ) ಯಾರು ಅಳಿದರೆಷ್ಟು ? ನಮ್ಮ ಕಡೆ ನೂರ್ವರು ಕುಮಾರರು ಸತ್ತರು. ತೂಕ ಸರಿ ಹೋಯಿತು. ಊ. . .ಸರಿ ಹೋಯಿತೆ ? (ಪುನಃ ತಲೆ ಅಲ್ಲಾಡಿಸುವನು) ಕೃತವರ್ಮ, ಇನ್ನು ಸ್ವಲ್ಪ ನೀರು ಕುಡಿಸು—ದಾಹ ! (ಕುಡಿಯುವನು)

ಅಶ್ವತ್ಥಾಮ : ಸುಯೋಧನ, ಇನ್ನು ನನಗೆ ಪ್ರಪಂಚದಲ್ಲಿ ಬದುಕು ಹೇಗೆ ? ಮಿತ್ರರಿಲ್ಲ ; ಪ್ರಭು ನೀನು, ಹೀಗೆ ನಿರ್ಯಾಣಹೊಂದುತ್ತಿದ್ದೀಯೆ ; ಹಿಂದಿನ ಪ್ರಪಂಚವೆಲ್ಲ ಮುಳುಗಿಹೋಯಿತು ; ನನ್ನ ಬದುಕಿಗೂ ಮುಂದಕ್ಕೂ ನಡುವೆ ಸುಟ್ಟ ವೈಭವದ ನಿನ್ನ ಪ್ರಪಂಚ ಅಡ್ಡಲಾಗಿ ನಿಂತಿದೆ. ನೀವಾರೂ ಇಲ್ಲದ ಪ್ರಪಂಚದಲ್ಲಿ ಏನು ಸಂತೋಷ ಉಳಿದಿದೆ ? (ಬಿಸುಸುಯ್ದು) ನನ್ನ ಬಾಳಿಗೆ ಹಿರಿಮೆ ಹೋಯಿತು. ವೃಥಾ ನೀಚಹತ್ಯವಾಯಿತು ! ದುಷ್ಕೀರ್ತಿ ಕವಿಯಿತು. ಪಾಂಡವರನ್ನಾದರೂ ತೀರಿಸಿದ್ದಿದ್ದರೆ ಪ್ರಭುವಿಗೆ ಸಂತೋಷವಾದರೂ ಆಗುತ್ತಿತ್ತು.—ಈಗ !

ದುರ್ಯೋಧನ : ಕೊರಗಬೇಡ ಅಶ್ವತ್ಥಾಮ. ನೀನು ಈಗ ಮಾಡಿಕೊಂಡು ಬಂದಿರುವ ಕಾರ್ಯಕ್ಕಿಂತ ಪ್ರಭುಸೇವೆಯುಂಟೆ ? ಪ್ರಿಯಕಾರ್ಯವುಂಟೆ ?

ನನಗೆ ಪಶ್ಚಾತ್ತಾಪವಿಲ್ಲ. ಪುನಃ ಬದುಕನ್ನು ಆರಂಭಮಾಡೆಂದು ನನಗೆ ಈಶ್ವರಾಜ್ಞೆಯಾದರೆ ಪುನಃ ಹೀಗೆಯೇ ಮಾಡಿಯೇನು.

ಅಶ್ವತ್ಥಾಮ : ಸುಯೋಧನ, ಸುಯೋಧನ, ನಿನ್ನಂತಹ ಸ್ನೇಹಿತನೂ ದಣಿಯೂ ನನಗೆಲ್ಲಿ ದೊರೆತಾನು ?

ದುರ್ಯೋಧನ : (ಸ್ವಲ್ಪ ತಲೆ ಎತ್ತಿ, ನಿಧಾನವಾಗಿ) ನನಗೆ ದುಃಖವಿಲ್ಲ. ಮುಕ್ಕಡಲ ಪರ್ಯಂತವಾದ ಭಾರತ ಭೂಮಂಡಲವನ್ನು ಆಳಿದೆ. ವೀರಾಧಿವೀರರಿಂದ ಕಪ್ಪಕಾಣಿಕೆ ತೆಗೆದುಕೊಂಡೆ. ಶತ್ರುಗಳು ವಯಸ್ಸಿನಲ್ಲಿಯೂ ಶಕ್ತಿಯಲ್ಲಿಯೂ ಅಧಿಕರಾಗಿರುವಾಗಲೇ ಅವರ ಅಪಕರ್ಷವನ್ನು ನೋಡಿದೆ. ಹಳಿದವರನ್ನು ಹಳಿದೆ. ಪ್ರಜೆಗಳಿಗೆ ಸಂತೋಷವಾಗುವಂತೆ ಆಳಿದೆ. ಬಂಧು ಮಿತ್ರರಿಗೆ ತೃಪ್ತಿಯಾಗುವಂತೆ ಧನ, ದಾನ ಕೊಟ್ಟೆ. ಎಲ್ಲ ಭೋಗಗಳನ್ನೂ ಅನುಭವಿಸಿ ಶತ್ರುವಿಗೆ ಶರಣಾಗದೆ ರಣರಂಗದಲ್ಲಿ ಧರ್ಮಯುದ್ಧ ಮಾಡಿ ಮಡಿಯುತ್ತಿದ್ದೇನೆ.

ಅಶ್ವತ್ಥಾಮ : ಇನ್ನು ನಿಮ್ಮ ತಂದೆತಾಯಿಗಳ ಮುಖವನ್ನು ಹೇಗೆ ನೋಡುವುದು ? ಅವರಿಗೆ ಬರಬಾರದ ಗತಿ ಬಂದಿತು. ನೀವೆಲ್ಲರೂ ಬದುಕಿದ್ದೂ ಅವನಿಗೆ ಈ ಗತಿ ತಂದಿರಾ ಎಂದು ಆ ಮುದುಕರು ಕೇಳಿದರೆ ಏನೆಂದು ಉತ್ತರ ಹೇಳುವುದು ? ತೀರಿಕೊಳ್ಳುವ ಪುಣ್ಯಶಾಲಿ ನೀನು ತೀರಿಕೊಳ್ಳುವೆ.

ದುರ್ಯೋಧನ : ಆದುದು ಆಗಿಹೋಯಿತು. ಅವರಿಗೆ ಆ ಗತಿ ತಂದುದಕ್ಕೆ ಹೊರತು ಬೇರೊಂದಕ್ಕಾಗಿ ನನಗೆ ಕೊರಗಿಲ್ಲ. ಈ ನಿಸ್ಸಹಾಯತೆಯನ್ನು ತಂದುದಕ್ಕಾಗಿ ಕ್ಷಮೆಬೇಡಿದನೆಂದು ಅವರಿಗೆ ಹೇಳಿ. ನನಗೆ ವೀರಮರಣ ದೊರೆಯಿತೆಂದು ಹೇಳಿ. ಹೀಗೇ ಆಗುವುದೆಂದು ಮುಂದಾಗಿ ಎಲ್ಲವನ್ನೂ ಅರಿತಿದ್ದುದಕ್ಕೆ ಫಲವೇನು ?—ಎಲ್ಲ ಗತಿಗೂ ಸಿದ್ಧರಾಗಿರುವುದು. ನಾನು ಸಿದ್ಧವಾಗಿದ್ದೇನೆ.

ಅಶ್ವತ್ಥಾಮ : ನಿನ್ನಂತಹ ಪ್ರಭುವಿನೊಡನೆ ಸ್ವರ್ಗಕ್ಕೆ ಬಾರದೆ, ಜನದಲ್ಲಿ ನಿಂದೆ ಹೊತ್ತು, ಪುಣ್ಯಲೋಕಗಳು ದೊರೆಯದೆ, ನಿನ್ನ ಸನ್ಮಾನಗಳನ್ನು ನೆನೆಯುತ್ತ ಇನ್ನು ಮೇಲೆ ಹೇಗೆ ಬದುಕಿರುವುದು ?

ಕೃಪ : ಅಶ್ವತ್ಥಾಮ, ಸೈರಿಸಿಕೊ ಸೈರಿಸಿಕೊ.

ಅಶ್ವತ್ಥಾಮ : ಸುಯೋಧನ, ನನ್ನ ವಿಚಾರ—ಇಲ್ಲಿನ ವಿಚಾರ ಹಾಗಿರಲಿ. ನೀನು ಸ್ವರ್ಗಕ್ಕೆ ಹೋಗಿ ಅಲ್ಲಿ ಬಾಹ್ಲಿಕ ಸೋಮದತ್ತರನ್ನೂ ಕರ್ಣ ಸೈಂಧವ ದುಶ್ಶಾಸನರನ್ನೂ ನನಗಾಗಿ ತಬ್ಬಿಕೊಂಡು ಅವರ ಕ್ಷೇಮವನ್ನು ವಿಚಾರಿಸಿದೆನೆಂದು ಹೇಳು. ತಂದೆ ಆಚಾರ್ಯನಿಗೆ ಧೃಷ್ಟದ್ಯುಮ್ನನು ನನ್ನಿಂದ ಹತನಾದನೆಂದು ತಿಳಿಸು.

ದುರ್ಯೋಧನ : ಅದರಿಂದ ಅವರಿಗೆ ಸಂತೋಷವುಂಟಾಗುವಂತಾಗಲಿ ! ಇನ್ನು ನನಗೆ

ಅಪ್ಪಣೆ ಕೊಡಿ. ಸ್ವರ್ಗದಲ್ಲಿ ಪುನಃ ನಿಮ್ಮ ದರ್ಶನ. ಭಾವ—ಆಚಾರ್ಯ—ಗುರುಪುತ್ರ—ನೀವು ಯಾರೂ ಕಾಣಿಸುತ್ತಿಲ್ಲ. . .

(ಅಶ್ವತ್ಥಾಮನು ಆತನ ಶವದ ಮೇಲೆ ಬಾಗಿ ಬಿಕ್ಕಿ ಬಿಕ್ಕಿ ಅಳುವನು)

ಕೃಪ : ಏಳಯ್ಯ ಏಳು. ಇಲ್ಲಿ ಇನ್ನು ನಿಲ್ಲುವುದು ಸರಿಯಲ್ಲ. ಪೂರ್ತಿ ಬೆಳಗಾಗಿ ಹೊತ್ತು ಏರುತ್ತಿದೆ.

ಅಶ್ವತ್ಥಾಮ : ನೀವು ಬೇಕಾದಲ್ಲಿಗೆ ಹೋಗಿ. ನಾನು ಇಲ್ಲೇ ಇದ್ದುಕೊಂಡು ಪ್ರಾಯೋಪವೇಶ ಮಾಡಿ ಪ್ರಭುವಿನೊಡನೆ ಸ್ವರ್ಗಕ್ಕೆ ಹೋಗುತ್ತೇನೆ.

ಕೃಪ : ಮರುಳೆ ! ಇಷ್ಟು ದಿನ ಬದುಕಿದುದು ಸಾರ್ಥಕವಾಯಿತು ! ಇನ್ನಾದರೂ ಪ್ರಾಯಶ್ಚಿತ್ತಮಾಡಿಕೊಳ್ಳೋಣ ಬಾ. ಬಿಟ್ಟಿದ್ದ ಬ್ರಹ್ಮಕರ್ಮವನ್ನು ನೆರವೇರಿಸು. ಇಲ್ಲಿ ಕುಳಿತರೆ ಏನು ಬರುವುದು ? ಪಾಪ ಸಂಪರ್ಕದಿಂದ ಈವರೆಗೂ ಕೊಳೆತುದೇ ಸಾಕು. ವ್ಯಾಸರಲ್ಲಿಗೊ ಪರಶುರಾಮರಲ್ಲಿಗೊ ಹೋಗಿ ಮುಂದಿನ ಕೆಲಸವನ್ನು ನೋಡು. ಕೃತವರ್ಮ, ನೀನಿನ್ನು ದ್ವಾರಕೆಗೆ ಹೊರಡಬಹುದು.

ಕೃತವರ್ಮ : ತಾವು ?

ಕೃಪ : ನಾನು ಹಿಮವತ್ಪರ್ವತಕ್ಕೆ ಹೋಗುತ್ತೇನೆ. ಉಳಿಯುವುದನ್ನಾದರೂ ಉಳಿಸಿಕೊಳ್ಳುತ್ತೇನೆ. ಅಧರ್ಮಪೌರುಷದ ಪಾರವನ್ನು ಕಂಡಾಯಿತು. ಹೋಗು ಅಶ್ವ, ಎದ್ದೇಳು.

(ಎಬ್ಬಿಸುವನು. . .ಅವನು ಎದ್ದು ಹಾಗೆಯೇ ನಿಲ್ಲುವನು ; ಪುನಃ ಹಿಂದಕ್ಕೆ ತಿರುಗಿ ದುರ್ಯೋಧನನ ಮುಖದ ಮೇಲೆ ಹೊದ್ದಿಸುವನು. ಕೃಪನು ಕೃತವರ್ಮನನ್ನು ಆಶೀರ್ವದಿಸುವನು. ಇಬ್ಬರೂ ಬೇರೆ ಬೇರೆ ಕಡೆ ಹೊರಡುವರು.)

ತೆರೆ

## ನೋಟ ೯

[ಓಘವತೀ ತೀರ. ಪಾಂಡವರೂ ಸಾತ್ಯಕಿಯೂ ಪ್ರಾತಃಕಾರ್ಯಗಳನ್ನು ತೀರಿಸಿಕೊಂಡು ಕುಳಿತಿದ್ದಾರೆ. ಧೃಷ್ಟದ್ಯುಮ್ನನ ಸೇವಕನು ಕೈಜೋಡಿಸಿ ನಿಂತಿದ್ದಾನೆ.]

ಸಾತ್ಯಕಿ : ನಿಜವನ್ನು ಪರೀಕ್ಷಿಸೋಣ ಬನ್ನಿ. ಕೃಷ್ಣನಿಗೆ ಹೇಳಿಕಳಿಸೋಣ. ಮಹಾರಾಜ, ಅತಿದೀನನಾಗಿ ಮುಖವನ್ನು ಮುಚ್ಚಿಕೊಂಡು ಹೀಗೆ ಕುಳಿತಿರುವುದು ಸರಿಯಲ್ಲ.

ಯುಧಿಷ್ಠಿರ : ಕೃಷ್ಣನಿಗೆ ಇದು ತಿಳಿಯದೆ ಹೋಯಿತೆ ? ಸಮಯಕ್ಕೆ ನಾವು ಯಾರೂ

ಅವರ ಬಳಿ ಇಲ್ಲದಂತಾಯಿತು. ಇವರು ಹೀಗೆ ಮಾಡುವರೆಂದು ಕನಸಿನಲ್ಲಿಯೂ ಎಣಿಸುವುದಕ್ಕಾಗುತ್ತಿರಲಿಲ್ಲ.

ಸಾತ್ಯಕಿ : ಅನಿರೀಕ್ಷಿತ ಸ್ಥಳದಿಂದಲೇ ಸಿಡಿಲು ಬಡಿಯಬೇಕಾದರೆ.

ಯುಧಿಷ್ಠಿರ : ತೋಳು ಹೊತ್ತುದು ಮಕ್ಕಳನ್ನೂ ಬಾಂಧವರನ್ನೂ ಕಾಪಾಡಿಕೊಳ್ಳ ಬೇಕಾದಾಗ ಸಾರ್ಥಕವಾಗದೆ ಹೋಯಿತು. ಕೃಷ್ಣನೇಕೆ ನಮಗೆ ಸೂಕ್ಷ್ಮವನ್ನು ತಿಳಿಸಬಾರದಾಗಿತ್ತು ?

ಸಾತ್ಯಕಿ : ಅಶುಭವನ್ನು ಶಂಕಿಸುತ್ತಿರುವೆನೆಂದು ಆತನು ಮೊದಲೇ ಹೇಳಿರಲಿಲ್ಲವೆ ?

— ಕೃಷ್ಣನ ಪ್ರವೇಶ —

ಕೃಷ್ಣ : ಇದೇನು ಪ್ರಲಾಪ ಯುಧಿಷ್ಠಿರ ?—ಚೇತರಿಸಿಕೊ. ನೀವೆಲ್ಲರೂ ಸ್ವಸ್ಥರಾಗಿದ್ದೀರಲ್ಲವೆ ?

ಯುಧಿಷ್ಠಿರ : ನೀನು ನಮ್ಮನ್ನು ಇಲ್ಲಿಗೇಕೆ ಕಳಿಸಿದೆ ? ನಾವಿಲ್ಲದ ಇರುಳಲ್ಲಿ ಅಶ್ವತ್ಥಾಮನು ಪಾಳೆಯಕ್ಕೆ ನುಗ್ಗಿ ನಿದ್ರೆಮಾಡುತ್ತಿದ್ದ ಎಲ್ಲರನ್ನೂ ಕೊಂದು ಹೋದನಂತೆ.

ಕೃಷ್ಣ : ಹೇಳಿದವರು ಯಾರು ?

ಯುಧಿಷ್ಠಿರ : ಧೃಷ್ಟದ್ಯುಮ್ನನ ಈ ಸೇವಕ. ಅಲ್ಲಿಯವರಲ್ಲಿ ಉಳಿದಿರುವುದು ಅವನೊಬ್ಬನೇ ಅಂತೆ.

ಸೇವಕ : ನಿಜ ಪ್ರಭು. . . . .ಪಾಂಚಾಲರು, ಮಚ್ಚರು, ಮಕ್ಕಳು, ಎಲ್ಲರೂ !— (ಕಣ್ಣೊರಸಿಕೊಳ್ಳುವನು)

ಕೃಷ್ಣ : ಆ ಪಾಪಿ ಅಶ್ವತ್ಥಾಮನು ನಿಮ್ಮ ಪರವಾಗಿ ದುಸ್ಸಂಕಲ್ಪ ಮಾಡಿರಬಹುದೆಂದು ಊಹಿಸಿಯೇ ನಿಮ್ಮನ್ನು ನಾನು ಉಳಿದ ಸೈನ್ಯದಿಂದ ಬೇರೆಯಾಗುವಂತೆ ಹೇಳಿ ಕಳಿಸಿದೆ. ಇಷ್ಟು ಹೀಗಾಗುವುದೆಂದು ನನಗೂ ತಿಳಿಯಲಿಲ್ಲ. ಯುಧಿಷ್ಠಿರ, ಅಧೀರನಾಗಬೇಡ. ಭೀಮ, ಹಾಗೆ ಮೀಸೆಯನ್ನು ಕಡಿಯುತ್ತ ನಿಂತರೆ ಬರುವುದೇನು ? ಶಾಂತವಾಗಿ ಯೋಚನೆಮಾಡಿ ಕೆಲಸ ಮಾಡೋಣ.

ಯುಧಿಷ್ಠಿರ : ಇದೆಲ್ಲ ಜಯವೆಂದು ವಿಜೃಂಭಿಸಿದುದರ ಫಲ ! ಬಾಂಧವರ ವಧೆಯಿಂದ ಬರುವ ಜಯ ಜಯವಲ್ಲ. ವಧೆಯಿಂದ ಗಳಿಸಿದುದು ಲಾಭವಲ್ಲ. ಈ ರಕ್ತಕ್ಕೆಲ್ಲ ಎಲ್ಲಿ ಪಾರ, ಕೃಷ್ಣ ? ಏನು ಗತಿ ?

ಕೃಷ್ಣ : ಎಲ್ಲವೂ ಅದರದರ ಕಾಲದಲ್ಲಿ ಸರಿಯಾದೀತು. ಸಂತೈಸಿಕೊ ಯುಧಿಷ್ಠಿರ.

ಯುಧಿಷ್ಠಿರ : ಅವರನ್ನು ಕೊಂಡುಹೋದ ವಿಧಿಗೆ ನಮ್ಮ ಮೇಲೆ ಕರುಣೆಯಿಲ್ಲವಾಯಿತು.

ಕೃಷ್ಣ : ನೀವು ಮಾಡಬೇಕಾದ ಕಾರ್ಯಗಳು ಇನ್ನೂ ಇರಬಹುದು. ವಿಧಿಯ ಸಂಕಲ್ಪವನ್ನು ಯಾರು ಬಲ್ಲರು ? ತಿಳಿಯದುದಕ್ಕೆ ಕೈಚಾಚಿ ತೊಳಲಬಾರದು.

ಯುಧಿಷ್ಠಿರ : ನಮ್ಮ ಕಷ್ಟ ಹಾಗಿರಲಿ ಕೃಷ್ಣ. ದ್ರೌಪದಿ ಇದನ್ನು ಕೇಳಿ ಹೇಗೆ ಸಹಿಸಿಯಾಳು ? ಅವಳನ್ನು ಹೇಗೆ ಸಮಾಧಾನಮಾಡುವುದು ? ತಂದೆಯ ಸಾವಿಂದ ಬಾಡಿ ಕಂಗೆಟ್ಟಿದ್ದ ಆಕೆಯನ್ನು ಈ ಹೊಸ ದುಃಖದಲ್ಲಿ ಹೇಗೆ ನೋಡುವುದು ? ಅಣ್ಣ ತಮ್ಮಂದಿರು ಸತ್ತರು. ಹೊಟ್ಟೆಯಲ್ಲಿ ಹುಟ್ಟಿದ ಮುದ್ದು ಕಂದಗಳೆಲ್ಲ-ಹೋದರೆಂದು ಯಾವ ಬಾಯಿಂದ ಆಕೆಗೆ ಹೇಳಲಿ ಕೃಷ್ಣ ? ನಕುಲ, ಹೋಗಿ ಸಮಾಚಾರವನ್ನು ಮೃದುವಾಗಿ ತಿಳಿಸಿ ಆಕೆಯನ್ನು ಕರೆದುಕೊಂಡು ಬಾ.

– ನಕುಲ ಹೋಗುವನು –

ಕೃಷ್ಣ : ಆಕೆಯೂ ಬರಲಿ. ಸಮಾಧಾನಮಾಡೋಣ. ಗಾಂಧಾರಿಯ ನೂರು ಮಕ್ಕಳು ಮಡಿದರಲ್ಲವೆ ? ಯುದ್ಧದಲ್ಲಿ ಸತ್ತವರ ಸಾವಿನ ಫಲ ಯಾರಿಗೆ—ಉಳಿಯುವ ತಂದೆ ತಾಯಿ ಹೆಂಡಿರು ಮಕ್ಕಳಿಗೆ ತಾನೆ ? ನಾನೂ ಪಾಳೆಯದ ಕಡೆ ಹೋಗಿ ಆ ಘೋರವನ್ನು ನೋಡಿಕೊಂಡು ಬರುತ್ತೇನೆ.

– ಹೋಗುವವನು. ಸಾತ್ಯಕಿ ಹಿಂಬಾಲಿಸುವನು –

ಸಾತ್ಯಕಿ : ಅಶ್ವತ್ಥಾಮನಿಗೆ ಇಷ್ಟು ದುರ್ಬುದ್ಧಿ ಬರಬಹುದೆ ? ಕೃಪ ಕೃತವರ್ಮ ಇಬ್ಬರೂ ಜೊತೆಯಲ್ಲಿದ್ದು ಅವನು ಹೀಗೆ ಮಾಡಲು ಒಪ್ಪಬಹುದೆ ?

ಕೃಷ್ಣ : ದುರಾಗ್ರಹ ತಲೆಗೇರಿದಾಗ ಯಾವ ತಡೆಯೂ ತಡೆಯುವುದಿಲ್ಲ. ಈ ಪಾಪಿಗಳ ಕರ್ಮ ಭೂಮಿಯನ್ನು ನಾಶಮಾಡಿದೆ, ಮಗು. ಎಲ್ಲರನ್ನೂ ಉಳಿಸುವುದು ಅಸಾಧ್ಯವಾಗಬಹುದೆಂದೇ ನಾನು ಈ ಐವರಾದರೂ ಬದುಕ ಲೆಂದು ಇಲ್ಲಿಗೆ ಕಳಿಸಿದುದು. ಈಗ ವೃಥಾ ಕಾಲಹರಣ ಮಾಡಲಾಗದು. ಮುಂದೆ ಅನಾಹುತಗಳಾಗದಂತೆ ಇನ್ನೂ ನೋಡಿಕೊಳ್ಳಬೇಕಾಗಿದೆ. ನೀನು ಇಲ್ಲಿಯೇ ಇರು. ಎಷ್ಟು ಮಾಡಿದರೇನು ? ಅಳಿಯುವುದು ಅಳಿದೇ ತೀರೀತು. ಮಾನುಷ ವನ್ನು ಮೀರಿದುದಕ್ಕೆ ವ್ಯಥೆಪಡಬಾರದು. . . .ಒಂದು ಕಡೆ ಸರಿಮಾಡಲು ಹೋದರೆ ಇನ್ನೊಂದು ಕಡೆ ಕಿತ್ತು ಕೈಗೆ ಬರುತ್ತದೆ. ವಿಚಿತ್ರ ಪ್ರಪಂಚ ! ವಿಚಿತ್ರ ಸಂಸಾರ !

– ಸಾತ್ಯಕಿ ಹಿಂದಕ್ಕೆ ಬರುವನು –
– ನಕುಲನ ಹಿಂದೆ ದ್ರೌಪದಿಯ ಪ್ರವೇಶ –

ದ್ರೌಪದಿ : (ಮುಖವನ್ನು ಸೆರಗಿಂದ ಮುಚ್ಚಿಕೊಂಡು ಯುಧಿಷ್ಠಿರನ ಪಾದಗಳ ಮೇಲೆ ಬಿದ್ದು ಹೊರಳುವಳು) ಪ್ರತಿವಿಂಧ್ಯ, ಶ್ರುತಸೋಮ-ಮಕ್ಕಳಿರ, ನಿಮಗೆ ಈ ಗತಿ ಬರಬಹುದೆ ? ಅಪ್ಪ, ಅಣ್ಣ, ಮಕ್ಕಳು ಎಲ್ಲರೂ ನೀವು ಒಂದೇ ಸಲ-ಇಲ್ಲವಾಗ ಬೇಕೆ ? ಯುಧಿಷ್ಠಿರ ನೋಡು, ಇವೆಲ್ಲ ರಾಜರಾದ ನಿಮ್ಮಂತಹವರ ಚಪಲದಿಂದ ಆದವು.

(ಯುಧಿಷ್ಠಿರನು ಆಕೆಯ ಮುಡಿಯನ್ನು ಕರುಣೆಯಿಂದ ಸವರುತ್ತ ಸಮಾಧಾನ ಮಾಡಲು ಯತ್ನಿಸುವನು.)

ಭೀಮ : ಏಳು ಪಾಂಚಾಲಿ. ಇಷ್ಟು ಶೋಕವನ್ನು ಸಹಿಸಿರುವವಳು ಇದನ್ನು ಸಹಿಸುವುದು ಕಷ್ಟವಲ್ಲ. ಸಮಾಧಾನಮಾಡಿಕೊ. ಮುಂದೆ ಮಾಡಬೇಕಾದುದು ಬಹಳವಿದೆ. ನಮ್ಮ ವಂಶಕ್ಕೆ ರಾಹು ಬಡಿದು ಚಂದ್ರನು ಕಣ್ಣಿಗೆ ಕಾಣದ ಹಾಗಾಗಿದ್ದಾನೆ. ಈ ಗ್ರಹಣಕಾಲ ಕಳೆದುಹೋದೀತು. ಚಿಂತಿಸಬೇಡ.

ದ್ರೌಪದಿ : ಜಯದಿಂದ ನಿಮಗೆ ಸಾಮ್ರಾಜ್ಯ ದೊರೆತಿದೆ, ಯುಧಿಷ್ಠಿರ. ಎಲ್ಲ ಐಶ್ವರ್ಯಗಳನ್ನೂ ಅನುಭವಿಸಿಕೊಂಡು ನೀನು ಸುಖವಾಗಿರು. ನನ್ನನ್ನು ನೋಡಿ ನಿನಗೆ ಕರುಣೆಯಿಲ್ಲ. ದುರಾತ್ಮನಾದ ಅಶ್ವತ್ಥಾಮನನ್ನು ಸಂಹರಿಸಿದಲ್ಲದೆ ನನ್ನ ದುಃಖ ಆರುವುದಿಲ್ಲ. ನೀವು ಅವನನ್ನು ಹಿಡಿದು ಕೊಲ್ಲದಿದ್ದರೆ ನಿಮ್ಮ ಐವರ ಎದುರಿಗೆ ನಾನು ಪ್ರಾಯೋಪವೇಶಮಾಡಿ ಪ್ರಾಣಬಿಡುತ್ತೇನೆ. ನನ್ನ ಮಕ್ಕಳಿರುವಲ್ಲಿಗೆ ಹೋಗುತ್ತೇನೆ.

ಯುಧಿಷ್ಠಿರ : ದ್ರೌಪದಿ, ದ್ರೌಪದಿ, ಈ ಚಲದಿಂದ ಏನು ಪ್ರಯೋಜನ ? ಒಬ್ಬನು ಚಲಹಿಡಿದು ಆದ ಗತಿಯನ್ನು ಸಮಗ್ರ ಭರತವರ್ಷವೇ ಅನುಭವಿಸುತ್ತಿದೆ. ಮಕ್ಕಳು ಹೋದ ದುಃಖ ನನಗಿಲ್ಲವೆ ? ಪ್ರತೀಕಾರದಿಂದ, ಹೋದವರು ಹಿಂದಿರುಗಿಯಾರೆ ? ಶೋಕದಲ್ಲಿ ಕುರುಡಾಗಬೇಡ.

ದ್ರೌಪದಿ : ಮಕ್ಕಳು ಹಿಂದಿರುಗದಿದ್ದರೆ ಈ ಒಡಲ ಬೆಂಕಿ ಆರುತ್ತದೆ. ನಿಮ್ಮಂತಹ ಐವರ ಕೈಹಿಡಿದರೂ ಆಜನ್ಮವೂ ಶತ್ರುಗಳಿಂದ ಪೀಡೆಯಾಯಿತು. ಹೆಂಗಸಿನ ಹೊಟ್ಟೆಯ ದುಃಖ ನಿಮಗೆ ಹೇಗೆ ಗೊತ್ತಾದೀತು ?

ಅರ್ಜುನ : ಸಹಿಸಿಕೊ ಪಾಂಚಾಲಿ, ತಾಳಿಕೊ.

ದ್ರೌಪದಿ : ಇಂತಹ ಸಮಯಗಳಲ್ಲಿ ಸಹನೆ ಕೈಯಲ್ಲಾಗದ ಹೇಡಿತನ.

ಯುಧಿಷ್ಠಿರ : ಅಶ್ವತ್ಥಾಮನು ಈಗ ಬಹುದೂರ ಹೊರಟುಹೋಗಿರುತ್ತಾನೆ. ದುರ್ಗಮವಾದ ಯಾವುದೊ ಅರಣ್ಯದಲ್ಲಿ ಅಡಗಿಕೊಳ್ಳುತ್ತಾನೆ. ಅಟ್ಟಿಕೊಂಡು ಹೋಗಿ ಅವನನ್ನು ಸಂಹರಿಸುವುದರಿಂದ ಏನು ಪ್ರಯೋಜನ ?

ದ್ರೌಪದಿ : ಹೋಗಲಿ ಸಂಹರಿಸಬೇಡಿ : ಗುರುಪುತ್ರನ ವಧೆ ಸಲ್ಲದು,—ಬೇಡ. ಅವನ ಕ್ಷಾತ್ರವನ್ನು ಭಂಗಿಸಿ ಬನ್ನಿ, ಅವನ ಕಿರೀಟದ ನಾಯಕರತ್ನವನ್ನು ತೆಗೆದುಕೊಂಡು ಬನ್ನಿ. ಅದು ಶಿವನ ವರದಿಂದ ದೊರೆತುದಂತೆ. ಮುಂದೆ ಅವನಿಂದ ಬೇರೆಯವರಿಗೆ ಕೇಡಾಗದಂತಾದರೂ ಆಗುತ್ತದೆ. ಅವನ ಶಕ್ತಿ ಮುರಿಯುತ್ತದೆ.

ಯುಧಿಷ್ಠಿರ : ಹೆಂಗಸು ! ಹೆಂಗಸು ! ದ್ರೌಪದಿ, ನಿನ್ನಂತಹವಳಿಗೂ ಹೀಗೆ ಮೋಹ ಕವಿದರೆ ಉಳಿದವರ ಪಾಡೇನು ? ಹಟಮಾಡಬೇಡ.

ದ್ರೌಪದಿ : ನಾನು ಹೆಂಗಸೇ. ದ್ರುಪದರಾಯನ ಮಗಳಾಗಿ ಹುಟ್ಟಿದೆ ; ಪಾಂಡವರೈವರಿಗೆ ರಾಣಿಯಾಗಿ ಜೂಜಿನಲ್ಲಿ ಪಣವಾದೆ ; ಕೃಷ್ಣನು ತಂಗಿಯೆಂದು ಕರೆದ ನಾನು ತುಂಬಿದ ಸಭೆಯಲ್ಲಿ ಅಪಮಾನಿತಳಾದೆ; ಗಂಡಂದಿರ ಸಹನೆಯಿಂದ ಹದಿಮೂರು ವರ್ಷ ಕಾಡು ಕಾಡು ಅಲೆದೆ. ಈಗ ತಂದೆ ಸೋದರರು ಮಕ್ಕಳನ್ನು ಕಳೆದುಕೊಂಡು ನಿರ್ಭಾಗ್ಯಳಾಗುತ್ತಿದ್ದೇನೆ.

ಯುಧಿಷ್ಠಿರ : ಹೌದು ದ್ರೌಪದಿ. ಇದೆಲ್ಲ ನನ್ನಿಂದ, ನನ್ನ ದೌರ್ಬಲ್ಯದಿಂದ ಆದುದು; ಸ್ವಲ್ಪ ತಾಳಿಕೊ.

ದ್ರೌಪದಿ : ನಾನು ಸಹಿಸಿಲ್ಲವೆಂದು ಯಾರು ಹೇಳಬಲ್ಲರು ? ಆದರೆ ಈ ದುಃಖವನ್ನೂ ಹೇಗೆ ಸಹಿಸಲಿ ? ಕಡಿದ ಹಾವನ್ನು ಕೊಲ್ಲಹೋಗುವುದು ಅಸ್ವಾಭಾವಿಕವಲ್ಲ. ಭೀಮಸೇನ, (ಆತನ ಕೈಯನ್ನು ಹಿಡಿದುಕೊಂಡು) ನಿಮ್ಮ ಅಣ್ಣನು ಧರ್ಮರಾಜ; ನನ್ನ, ನಿನ್ನ ಸಾಮಾನ್ಯರ ಕಷ್ಟಗಳು ಆತನಿಗೆ ಅರ್ಥವಾಗುವುದಿಲ್ಲ. ಹೇಳಿಕೇಳಿ ನಾನು ಹೆಂಗಸು. ಈ ಲೋಕದಲ್ಲಿ ನಿನ್ನನ್ನು ಮೀರಿಸಿದ ಗಂಡಸಿಲ್ಲ. ಈ ಮಹಾಭಾರತ ನಮ್ಮಿಬ್ಬರಿಗಾಗಿ ನಡೆದುದು. ನಿನಗೆ ನನ್ನಲ್ಲಿ ಪ್ರೀತಿಯಿರುವುದು ನಿಜವಾದರೆ ಆ ಪಾಪಕರ್ಮವನ್ನು ಭಂಗಿಸು. ಅರಗಿನ ಮನೆಯಲ್ಲಿ ಕುಂತಿದೇವಿಯನ್ನೂ ಸೋದರರನ್ನೂ ಕಾಪಾಡಿದೆಯಂತೆ. ಕೀಚಕನ ಹಿಂಸೆಯನ್ನು ನನಗೆ ತಪ್ಪಿಸಿದೆ; ತುರುಬು ಹಿಡಿದು ನನ್ನನ್ನು ಸಭೆಗೆಳೆತಂದ ದುಶ್ಶಾಸನನನ್ನು ಸೀಳಿದೆ; ದುರ್ಯೋಧನನ ತೊಡೆಯನ್ನು ಮುರಿದೆ; ಈಗಲೂ ನೀನೇ ಗತಿ. ನಿನ್ನ ಪರಾಕ್ರಮಕ್ಕೆ ಮಿಂಚಿದ ಸಾಹಸವಿಲ್ಲ.

ಭೀಮ : ಭದ್ರೆ, ನಿನ್ನ ಮಾತು ಸರ್ವಥಾ ನಿಜ. ಮಹಾಭಾರತದಲ್ಲಿ ಕ್ಲೇಶಪಟ್ಟವರು ನಾವು : ಹೆಂಗಸರಲ್ಲಿ ನೀನು ; ಗಂಡಸರಲ್ಲಿ ನಾನು. ಇದೊ ಹೊರಟೆ, ತೃಪ್ತಳಾಗು. ನಿನ್ನ ಇಚ್ಛೆಯನ್ನು ಸಾಧಿಸಿಕೊಂಡು ಬರುತ್ತೇನೆ. ಹರಿಹರಹಿರಣ್ಯಗರ್ಭರು ತಡೆದರೂ ನಿನ್ನ ಪ್ರೇಮದ ಪುಣ್ಯದಿಂದ ಅದನ್ನು ಮಾಡಿಕೊಂಡು ಬರುತ್ತೇನೆ. ನಕುಲ, ರಥವನ್ನು ಸಿದ್ಧಮಾಡು. ಎಲ್ಲಿಗೆ ತಾನೆ ಹೋದಾನು !

– ನಕುಲನು ಹೋಗುವನು –

ಯುಧಿಷ್ಠಿರ : ಅರ್ಜುನ, ಈ ವ್ಯಸನಗಳು ತೀರುವಂತೆಯೇ ಇಲ್ಲ. ಕೃಷ್ಣನಾದರೂ ಈಗ ಬರಬಾರದೆ ? ಭೀಮಾ ಭೀಮಾ, ಕೃಷ್ಣನಿಗೆ ತಿಳಿಸಿ ಯಾವ ಕೆಲಸವನ್ನೂ ಮಾಡೋಣ. ಸ್ವಲ್ಪ ತಡೆ.

ಭೀಮ : (ಕೆಂಡದಂತೆ ಉರಿದು ನೋಡುತ್ತ) ಕೃಷ್ಣನಲ್ಲ, ಕುಂತಿದೇವಿಯೇ ತಡೆದರೂ ನಾನು ನಿಲ್ಲುವಹಾಗಿಲ್ಲ.

– ಹೋಗುವನು –

ತೆರೆ

# ನೋಟ ೧೦

[ವ್ಯಾಸರ ಆಶ್ರಮ. ನದಿಯಲ್ಲಿ ಸ್ನಾನಮಾಡಿ ಅಶ್ವತ್ಥಾಮನು ಗಾಯಗಳಿಗೆ ತುಪ್ಪ ವನ್ನು ಲೇಪಿಸಿಕೊಳ್ಳುತ್ತ ಕುಳಿತಿದ್ದಾನೆ.]

– ಭೀಮ ನಕುಲರ ಪ್ರವೇಶ –

ಭೀಮ : ಆ ನರಾಧಮನು ಅಲ್ಲಿ ಕುಳಿತಿದ್ದಾನೆ ನೋಡು, ನಕುಲ ; ಮಕ್ಕಳನ್ನೂ ಮೂಕಜೀವಿಗಳನ್ನೂ ಮಲಗಿರುವಾಗ ಕೊಂದ ಹೇಡಿ.

ಅಶ್ವತ್ಥಾಮ : (ತಿರುಗದೆಯೆ) ವೃಕೋದರನ ಧ್ವನಿಯಂತಿದೆ ! ಬಂದರೆ ಬರಲಿ, ಏನು ಮಾಡಿಯಾನು ?

ಭೀಮ : ಎಲವೋ ಹೇಡಿ, ರಾತ್ರಿಯಲ್ಲಿ ಆ ರೀತಿ ರೌರವ ಮಾಡಿದುದಕ್ಕೆ ನಾಚಿಕೆ ಯಾಗುವುದಿಲ್ಲವೆ ?

ಅಶ್ವತ್ಥಾಮ : ಅದೃಷ್ಟದಿಂದ ನೀನು ಬದುಕಿಕೊಂಡಿರುವೆ. ಅಲ್ಲಿದ್ದಿದ್ದರೆ ಈ ದಿನ ಪ್ರಪಂಚದಲ್ಲಿ ನಿನ್ನ ಧ್ವನಿ ಕೇಳಿಸುತ್ತಿರಲಿಲ್ಲ.

ಭೀಮ : ಗುರುಪುತ್ರನೆಂದು ಶಿಕ್ಷಿಸದೆ ಬಿಟ್ಟಿದ್ದಕ್ಕೆ ಈ ಬಗೆಯ ಮಾತುಗಳಾಡುವಂತಾ ಯಿತು. ನಿನ್ನನ್ನು ಸಿಗಿದು ದಿಕ್ಕುಗಳಿಗೆ ಬಲಿಕೊಡುತ್ತೇನೆ.

ಅಶ್ವತ್ಥಾಮ : ನೀನೊಂದು ಪಶು—ನಿನ್ನಲ್ಲೇನು ಮಾತು ? ನನ್ನನ್ನು ಕೆಣಕಬೇಡ. ಈಗಾಗಲೇ ನಿಮ್ಮವರ ರಕ್ತದಿಂದ ಈ ಕೈಗಳು ಬಹುವಾಗಿ ಕಲುಷಿತವಾಗಿವೆ. ತೊಲಗಿ ಹೋಗು. (ಭೀಮನು ಗದೆ ಹಿಡಿದು ನುಗ್ಗಿ ಅದರ ಕೊನೆಯಿಂದ ಅವನ ಬೆನ್ನನ್ನು ತಿವಿಯುವನು. ಅಶ್ವತ್ಥಾಮನು ಸರ್ಪದಂತೆ ತಿರುಗಿ) ಹೋಗು ಇಲ್ಲಿಂದ ! ಇಲ್ಲವಾದರೆ ನಿನ್ನ ತಲೆಯನ್ನು ಸಾವಿರ ಹೋಳು ಮಾಡಿ ಮುಗಿಸು ತ್ತೇನೆ. ನಿಮ್ಮ ಕೃಷ್ಣನು ಬದುಕಿರುವವರೆಗೂ ಬದುಕಿಕೊಂಡಿರಿ ಹೋಗಿ. ಮೇಲ್ವಾಯ್ದೀ ಬರುವೆಯ ? ಹಾಗಾದರೆ ತೆಗೆದುಕೊ ತಲೆಗೆ ಸಂಚಕಾರವನ್ನು. (ದರ್ಭೆಯನ್ನು ತಿರಿಕಟ್ಟುತ್ತಿರುವನು)

– ಕೃಷ್ಣ ಯುಧಿಷ್ಠಿರ ಅರ್ಜುನರ ಪ್ರವೇಶ –

ಕೃಷ್ಣ : ತಡೆ, ಭೀಮ, ತಡೆ, ಯುದ್ಧವನ್ನು ನಿಲ್ಲಿಸಿ.

ಭೀಮ : ನೀನು ತಡೆಯಬೇಡ ಕೃಷ್ಣ. ಇವನ ಬಸಿರಿಂದ ನಮ್ಮ ಮಕ್ಕಳನ್ನು ಹೊರಕ್ಕೆ ತೆಗೆಯುತ್ತೇನೆ.

ಕೃಷ್ಣ : ತೆಗೆಯುವೆಯಂತೆ ಸ್ವಲ್ಪ ತಾಳು. ಮಾತಿಗೂ ಬಲ್ಮೆಯುಂಟು.

ಅರ್ಜುನ : ಅಶ್ವತ್ಥಾಮ, ನೀನು ನಮ್ಮ ಸಹಪಾಠಿ. ದುರ್ಯೋಧನನಿಗೆ ನಮ್ಮ ಮೇಲೆ ದ್ವೇಷ. ಅವನು ಸತ್ತ ಮೇಲೂ ನಿನಗೇಕೆ ಈ ಚಲ ?

ಭೀಮ : ಮೃದುನುಡಿಗಳಿಂದ ಈ ಪಾಪಿಯನ್ನು ತಿರುಗಿಸಲಾಗುವುದೇ ಪಾರ್ಥ? ಇವನಂತಹ ರೋಗಗಳಿಗೆ ನನ್ನ ಗದೆಯೇ ಮದ್ದು.

ಅಶ್ವತ್ಥಾಮ : (ಎಲ್ಲರನ್ನೂ ತಿರಸ್ಕಾರದಿಂದ ನೋಡಿ ಕೃಷ್ಣನನ್ನು ಕುರಿತು) ನಿನ್ನ ಮಂತ್ರವಿಲ್ಲದಿದ್ದರೆ ಇವರೆಷ್ಟರವರು, ಕೃಷ್ಣ ? ಯಾರೆಷ್ಟರವರು ? (ಅರ್ಜುನನು ಬಿಲ್ಲನ್ನು ಅಲುಗಿಸಿ ಅಂಬಿನ ಮೊನೆಯನ್ನು ಸರಿನೋಡುವನು) ನಿನ್ನ ಬಿಲ್ಲವಿದ್ಯೆಯನ್ನು ಬಲ್ಲೆ ಪಾರ್ಥ. ನಾವಿಬ್ಬರೂ ಒಂದೇ ಗರುಡಿಯಲ್ಲಿ ಕಲಿತವರು. ಓಹೋ, ಹಾಗಾದರೆ ಆಗಲಿ, ಅಸ್ತ್ರದ ಚುರುಕು ಮುಟ್ಟಲೇಬೇಕೇನೊ ? ಶಾಂತಿಯಿಂದ ನಾನೂ ಬಹುದೂರ ಬಂದುಬಿಟ್ಟಿದ್ದೇನೆ. (ತಿರಿಕಟ್ಟಿದ ದರ್ಭೆಯನ್ನೆಳೆದು ಐಷೀಕವನ್ನು ಅಭಿಮಂತ್ರಿಸುತ್ತಿರುವನು)

ಕೃಷ್ಣ : ಎಲಾ ದುಷ್ಟ, ಕಲಿತ ವಿದ್ಯೆಯನ್ನು ನೀನು ಎಂದಿಗೂ ಬಿಡೆ. ದುರ್ಮಿತ್ರರ ಜತೆಯಲ್ಲಿ ಬೆಳೆದು ನಿನ್ನ ಸ್ವಭಾವ ಕೊಳೆತು ಹೋಗಿದೆ. ನೀನೇನು ಮಾಡೀಯೆ ? ಅರ್ಜುನ, ಸಿದ್ಧನಾಗು.

ಅಶ್ವತ್ಥಾಮ : ಯಾರೇನು ಮಾಡುವಿರೋ ನೋಡೋಣ. ನಿನ್ನೆ ತಪ್ಪಿಸಿಕೊಂಡವರು ಇಂದು ದೈವವಶಾತ್ ಎಲ್ಲರೂ ಸಿಕ್ಕಿದ್ದೀರಿ. ಇಷ್ಟೇ ಪಾಪ ಮಾಡಿದೆನಂತೆ,—ಪೂರ್ತಿ ಕೊನೆ ನೋಡಿಯೇ ಬಿಡುತ್ತೇನೆ. ದುರ್ಯೋಧನನಿಗೆ ತೃಪ್ತಿಯಾಗಲಿ ! ಕರ್ಣ, ದುಶ್ಶಾಸನ ನಿಮಗೆ ತೃಪ್ತಿಯಾಗಲಿ ! ಎಲ್ಲಿ ಪಾರ್ಥ, ನಿನ್ನ ಪರಾಕ್ರಮವನ್ನು ತೋರಿಸು. ತಡೆದುಕೊ. ನಿಷ್ಪಾಂಡವಾಸ್ತು !

(ಬಿಟ್ಟ ಬಾಣ ಸಿಡಿದು ಬೆಂಕಿಯಾಗಿ ಪಾಂಡವರನ್ನು ಆಕ್ರಮಿಸಬರುವುದು)

ಕೃಷ್ಣ : ಪಾರ್ಥ, ನಿನಗೂ ಐಷೀಕಾಸ್ತ್ರ ತಿಳಿದಿದೆ. ಬ್ರಹ್ಮಾಸ್ತ್ರದಿಂದ ಅದನ್ನು ಪರಿಹರಿಸು. ಬೇಗ ಮಾಡು. ಬೇಗ ಮಾಡು. ನಿನ್ನ ಸಹೋದರರನ್ನೂ ನಿನ್ನನ್ನೂ ರಕ್ಷಿಸಿಕೊ. ಇತ್ತ ಬಾ. ಇತ್ತ ಬಾ. ಅದರ ಬಳಿ ಹೋಗಬೇಡ. ಯುಧಿಷ್ಠಿರ ಭೀಮ, ನಕುಲ, ನಾಶವಾಗುವಿರಿ—ಇತ್ತ ಬನ್ನಿ. ಪಾಪಿ ! ಬೇಗ ತೊಡು ಪಾರ್ಥ ! ಪ್ರತಿ ಮಾಡು. (ಅರ್ಜುನನು ಹಿರಿಯರಿಗೆ ಅಭಿವಾದನೆ ಮಾಡಿ ಗಾಂಡೀವಕ್ಕೆ ಬ್ರಹ್ಮಾಸ್ತ್ರವನ್ನು ತೊಡಿಸಿ ಬಿಡುವನು. ಎರಡು ಉರಿಗಳು ಎದ್ದು ಒಂದರ ಮೇಲೊಂದು ಉರಿಯುವುವು)

– ವ್ಯಾಸರೂ ನಾರದರೂ ಅವಸರದಿಂದ ಬರುವರು –

ವ್ಯಾಸ : ಇದೇನು ವಿಪರೀತ ? ಇನ್ನಾರ ನಾಶವನ್ನು ಮಾಡುವುದಕ್ಕೆ ಹೊರಟಿದ್ದೀರಿ ? ಅಶ್ವತ್ಥಾಮಾ, ಏನಿದು ? ಅರ್ಜುನ ! ಪಾಂಡವರು ! ಕೃಷ್ಣ ! ಎದುರಿಗೇ

ನೀನು ಇದ್ದೂ ಇದನ್ನು ನೋಡುತ್ತ ಸುಮ್ಮನಿರುವೆಯಲ್ಲ ? ನಿನ್ನ ತಾಳ್ಮೆಯ ಅರ್ಥ ತಿಳಿಯದು. ಛೀ ಪಾಪಿಗಳಿರ, ನಿಲ್ಲಿಸಿ, ಕೃಷ್ಣಾ, ಹೇಳು ಹೇಳು. ಈ ಬೆಂಕಿ ಪ್ರಪಂಚವನ್ನು ಸುಡುವುದಲ್ಲಾ ! ಇದನ್ನು ಮೊದಲು ಬಿಟ್ಟ ಪಾತಕಿ ಯಾರು ?

ಅರ್ಜುನ : (ಅಶ್ವತ್ಥಾಮನನ್ನು ತೋರಿಸಿ) ಅವನನ್ನು ಕೇಳಿ.

ವ್ಯಾಸ : ನಿನಗೇನು ದುರ್ಬುದ್ಧಿ ಬಂದಿದೆಯೊ. ನಿಮ್ಮ ತಂದೆ ಹೇಳಿರಲಿಲ್ಲವೇನೊ ಈ ಅಸ್ತ್ರವನ್ನು ಮನುಷ್ಯರ ಮೇಲೆ ಪ್ರಯೋಗಿಸಕೂಡದೆಂದು ? ಭೂಮಿಯ ಮೇಲೆ ಇದರ ಕಿಡಿ ಬಿದ್ದಲ್ಲಿ ಹನ್ನೆರಡು ವರ್ಷ ದುರ್ಭಿಕ್ಷವುಂಟಾಗುವುದಲ್ಲೊ ! ನಿನ್ನ ತಂದೆ ನಿನಗೆ ತಿಳಿಸಿರಲಿಲ್ಲವೆ ? ನಿಮ್ಮ ಧರ್ಮ, ನಿಲ್ಲಿಸಿ.

ಅಶ್ವತ್ಥಾಮ : ಇವರು ನನ್ನನ್ನು ಕೊಲ್ಲಲು ಬಂದಿದ್ದಾರೆ. ಶಸ್ತ್ರಸಂನ್ಯಾಸಮಾಡಿ ಪ್ರಾಯಶ್ಚಿತ್ತ ಮಾಡಿಕೊಳ್ಳೋಣವೆಂದು ನಾನು ನಿಮ್ಮಾಶ್ರಮಕ್ಕೆ ಬಂದೆ. ಅದಕ್ಕೆ ಇವರು ಅಡ್ಡಿ ತಂದಿದ್ದಾರೆ. ಅರ್ಜುನನ ಉರುಬನ್ನು ನೀವೇ ನೋಡಿ.

ನಾರದ : ಇಷ್ಟು ಸುಲಭವಾಗಿ ಪ್ರಾಯಶ್ಚಿತ್ತ ಹೇಗಾದೀತಯ್ಯ ? ತಪ್ಪು ನಿನ್ನದಲ್ಲವೇ ಅಲ್ಲ—ಅಲ್ಲವೇ ?

ಅರ್ಜುನ : ನಾನು ಕೆಣಕಲಿಲ್ಲ. ಕೃಷ್ಣನ ಅಪ್ಪಣೆಯ ಮೇರೆಗೆ ನಾನು ಅಸ್ತ್ರವನ್ನು ತೊಟ್ಟು ಇವನ ಅಸ್ತ್ರದಿಂದ ಕೇಡಾಗದಂತೆ ಮಾತ್ರ ತಡೆದಿದ್ದೇನೆ.

(ಉರಿಗಳು ಹರಡಿ ಉರಿಯುತ್ತಿವೆ)

ವ್ಯಾಸ : ಕೃಷ್ಣ, ಇವರನ್ನು ಸಮಾಧಾನಮಾಡು. ಇಷ್ಟು ವರ್ಷ ನಾವು ಮಾಡಿದ ತಪಸ್ಸುಗಳಿಗೆ ಏನು ಫಲ ? ನಿನ್ನ ಧರ್ಮಪ್ರತಿಜ್ಞೆ ಏನಾಯಿತು ?

ಕೃಷ್ಣ : ಇಂತಹ ಹಿಂಸ್ರ ಜಂತುಗಳು ಬಲಿಯುತ್ತಿದ್ದರೆ ಯಾರ ಎಷ್ಟು ತಪಸ್ಸು ತಾನೆ ಫಲಿಸೀತು ? ಅಶ್ವತ್ಥಾಮನನ್ನು ನೀವು ತಿರುಗಿಸಿ...ನಾನು ಅರ್ಜುನನಿಗೆ ಹೇಳುತ್ತೇನೆ. ಅವರಿಗೆ ಅಪಾಯವಾಗದಂತೆ ನೋಡಿಕೊಳ್ಳುತ್ತೇನೆಂದು ವಸುದೇವನ ಹೆಸರಲ್ಲಿ ನಾನು ಆಣೆಯಿಟ್ಟುಕೊಂಡಿದ್ದೇನೆ.

ಅರ್ಜುನ : ಅವನನ್ನು ತಿರುಗಿಸಿ. ಇದೊ, ನನ್ನ ಅಪರಾಧವಿಲ್ಲ. ನಾನು ಧರ್ಮವ್ರತನಾಗಿದ್ದರೆ ನನ್ನ ಅಸ್ತ್ರದಿಂದ ಕೇಡಾಗದಂತೆ ದೇವರುಗಳು ಕರುಣಿಸಲಿ.

(ಅವನ ಕಡೆಯ ಉರಿ ತಗ್ಗಿ ಉರಿಯುತ್ತದೆ)

ವ್ಯಾಸ : ಎಲ್ಲಿ ಅಶ್ವತ್ಥಾಮ, ಶಾಂತನಾಗು. ಅವರ ಭಯವೇನೂ ಇಲ್ಲದಂತೆ ನಾನು ಏರ್ಪಡಿಸುತ್ತೇನೆ.

(ಅಶ್ವತ್ಥಾಮನು ಅಸ್ತ್ರವನ್ನು ಹಿಂದಕ್ಕೆ ತಿರುಗಿಸಲು ಹೋಗಿ ಕೈಯಲ್ಲಾಗದೆ ಮುಖವಿಳಿದು ಇರುವನು)

ನಾರದ : ಹೇಗೆ ತಿರುಗಿಸಿಯಾನು ? ಅವನ ಮನಸ್ಸು ಪೂರ್ತಿ ಅವನ ವಶದಲ್ಲಿಲ್ಲ. ಅವನ ಕ್ರೋಧ ಅವನ ಭೂತ. ಬ್ರಹ್ಮಶಿರೋಸ್ತ್ರವೂ ಐಷೀಕವೂ ಜಿತೇಂದ್ರಿಯರಿಗೆ ಮಾತ್ರ ಸಾಧ್ಯ. ಇತರರು ಯತ್ನಿಸಿದರೆ, ಅವರನ್ನೇ ತಿಂದಾವು, ಹುಂ !

ಅಶ್ವತ್ಥಾಮ : ಆಗದು ! ಆಗದು. ಅಧರ್ಮಯುದ್ಧದಿಂದ ಕೃಷ್ಣನ ಸಾರಥ್ಯದಲ್ಲಿ ಇವರು ಭೀಷ್ಮಾದಿಗಳನ್ನೆಲ್ಲಾ ಕೆಡವಿದ್ದಾರೆ. ಉದಾಸೀನನಾಗಿ ಕೊಳದಲ್ಲಿದ್ದ ದುರ್ಯೋಧನನನ್ನೆಬ್ಬಿಸಿ ತೊಡೆ ಮುರಿದು ಕೊಂದಿದ್ದಾರೆ. ನನ್ನ ಮೇಲಿನ ಕ್ರೋಧದಿಂದ ಇಲ್ಲಿಗೂ ಅಟ್ಟಿಕೊಂಡು ಬಂದಿದ್ದಾರೆ. ಪ್ರಾಣ ರಕ್ಷಣೆಗಾಗಿ ಈ ಅಸ್ತ್ರವನ್ನು ಉಪಯೋಗಿಸಿದ್ದೇನೆ. ಪಾಂಡವರು ಹತರಾಗುವರು. ಇದು ತಿರುಗುವುದಿಲ್ಲ.

ಕೃಷ್ಣ : ಅದು ತಿರುಗುವುದಿಲ್ಲವೇನು ? ನಿನ್ನ ಕ್ರೋಧ ಹಿಂಗಿಲ್ಲ. ನೀನೂ ನಿನ್ನ ಪ್ರಭುವೂ ಧರ್ಮದ ಮೂರ್ತಿಗಳು ! ನಿಮಗೆ ಅನುಕೂಲವೊದಗಿದಾಗ ಧರ್ಮಪ್ರಸಂಗ ; ಅಷ್ಟು ತುಂಬಿದ ಸಭೆಯಲ್ಲಿ ಮನೆಯ ಸೊಸೆಯನ್ನು ಹೊರಕ್ಕೆ ಸೆಳೆದುತಂದಿರೇ, ಆಗ ನಿಮ್ಮ ಧರ್ಮಬುದ್ಧಿ ಎಲ್ಲಿ ಹೋಗಿತ್ತು ? ಆರುವರು ಮಹಾರಥರು ಒಬ್ಬ ಹುಡುಗನನ್ನು ಮುತ್ತಿ ಕಡಿವಾಗ ನಿಮ್ಮ ಕ್ಷತ್ರಧರ್ಮವೆಲ್ಲಿ ಅಡಗಿತ್ತೊ !—ಯುಧಿಷ್ಠಿರ, ಕೇಳು, ಈಗ ಹೇಳುತ್ತೇನೆ. ಈ ಪಾಪಾತ್ಮನು ನೀವು ವನವಾಸದಲ್ಲಿರುವಾಗ ದ್ವಾರಾವತಿಗೆ ಬಂದು ಅರಮನೆಯಲ್ಲಿ ಬೇಕಾದ ಸನ್ಮಾನವನ್ನು ಪಡೆದ. ಸಮುದ್ರದ ಹತ್ತಿರ ನಾನು ಏಕಾಂತದಲ್ಲಿರಲು ಅಲ್ಲಿಗೂ ಬಂದ. ಬಂದ ಕಾರ್ಯವೇನೆಂದು ಕೇಳಲು ನಡೆಯಿಸಿಕೊಡುವ ಹಾಗಿದ್ದರೆ ಹೇಳುವೆನೆಂದ. ಆಗಲಿ ಎನ್ನಲು, ಕೃಷ್ಣ, ನೋಡು, ನನ್ನ ತಂದೆ ನನಗೆ ಬ್ರಹ್ಮಶಿರೋಸ್ತ್ರವನ್ನು ಉಪದೇಶ ಮಾಡಿದ್ದಾನೆ ; ಅದನ್ನು ನಿನಗೆ ಕೊಡುತ್ತೇನೆ ; ಪ್ರತಿಯಾಗಿ ನಿನ್ನ ಚಕ್ರವನ್ನು ನನಗೆ ದಾನ ಮಾಡಬೇಕು ಎಂದು ಕೇಳಿದ. ಅವನ ದುರಭಿಸಂಧಿ ಅರ್ಥವಾಯಿತು. ನನ್ನ ಮಾತಿಗೆ ನಾನು ಕಟ್ಟುಬಿದ್ದು ಅದೋ, ನನ್ನ ಆಯುಧಗಳೆಲ್ಲ ಅಲ್ಲಿವೆ, ನಿನಗೆ ಬೇಕಾದುದನ್ನು ತೆಗೆದುಕೊ ಎಂದೆ—ವಜ್ರನಾಭಿಯಾದ ಸುದರ್ಶನವನ್ನು ಎತ್ತುವುದಕ್ಕೆ ಕೂಡ ಬಾರದೆ, ಆಗದೆ ಏದುತ್ತಿದ್ದ ! . . . . ನಿಜವೊ ಸುಳ್ಳೊ ?

(ಅಶ್ವತ್ಥಾಮನು ಹಲ್ಲು ಕಡಿಯುತ್ತ ತಲೆ ಬಗ್ಗಿಸಿರುವನು)

ಆಮೇಲೆ ಆತನನ್ನು ಕುರಿತು, ಅಯ್ಯ, ನನ್ನ ಪ್ರಾಣಾಪ್ತ ಮಿತ್ರನಾದ ಗಾಂಡೀವಿ ನನ್ನ ಆಯುಧಗಳನ್ನು ಕೇಳಲಿಲ್ಲ ; ಹೊಟ್ಟೆಯಲ್ಲಿ ಹುಟ್ಟಿದ ಪ್ರದ್ಯುಮ್ನ ಬಯಸಲಿಲ್ಲ ; ಸಾಂಬ ಸಾತ್ಯಕಿ ಬಲರಾಮರು ಕೇಳಲಿಲ್ಲ ; ಚಕ್ರವನ್ನು ತೆಗೆದು

ಕೊಂಡು ನೀನೇನು ಮಾಡುತ್ತಿದ್ದೆ? ಎಂದೆ. ಅವನ ಧಾರ್ಷ್ಟ್ಯವೇ ಧಾರ್ಷ್ಟ್ಯ! ಮುಂದೆ ಪಾಂಡವ ಕೌರವರಿಗೆ ಯುದ್ಧವಾಗುತ್ತದೆ ; ಅಜಿತನಾದ ನಿನ್ನ ಮೇಲೆ ಪ್ರಯೋಗಿಸಲು ತಕ್ಕ ಆಯುಧವೊಂದು ಬೇಕೆಂದು ಕೌರವನ ಹಿತಕ್ಕಾಗಿ ಕೇಳಿದೆ ಎಂದ. ಅತಿಥಿ, ಗುರುಪುತ್ರ ಎಂದು ಕ್ಷಮಿಸಿ ನಾನು ಮರ್ಯಾದೆ ಮಾಡಿ ಕಳಿಸಿದೆ. ಇದರಲ್ಲಿ ಒಂದಕ್ಷರ ಸುಳ್ಳಿಲ್ಲ, ಅವನನ್ನೇ ಕೇಳಿ.

(ಅಶ್ವತ್ಥಾಮನು ತಲೆ ತಗ್ಗಿಸಿಯೇ ಇರುವನು)

ನಿನ್ನೆಯ ರಾತ್ರಿ ನಡೆದ ಮಹಾಘೋರದ ವಿವರವನ್ನು ನೀವು ಕೇಳಿಯೇ ಇರಬೇಕು. ನಾನು ಆ ಕೊಲೆಯನ್ನು ಕಣ್ಣಾರ ನೋಡಿ ಬಂದಿದ್ದೇನೆ. ಆ ನೆತ್ತರು ಕಾಲುವೆಗಳನ್ನೂ ಕೊತ್ತಿಬಿದ್ದು, ಕರಡುಗಟ್ಟಿದ ಆ ಮಾಂಸಖಂಡದ ರಾಶಿಗಳನ್ನೂ ನೋಡಿ ನನ್ನ ಹೃದಯ ಬೆಂದು ಹೋಗಿದೆ. ಇವನು ಎರಡು ಧರ್ಮಗಳಿಗೆ ಹೊರಗಾದವನು. ಇವನ ತಲೆಯನ್ನು ತೆಗೆಯುವುದೂ ದೋಷ ವಲ್ಲ. ಭೀಮ, ನಕುಲ, ಹೀಗೆ ಬನ್ನಿ.

ವ್ಯಾಸ : ತಾಳು ಕೃಷ್ಣ, ತಾಳು. ಅಶ್ವತ್ಥಾಮ, ಅರ್ಜುನನ ಲೋಕಹಿತ ಬುದ್ಧಿ ಯನ್ನು ನೀನೇ ನೋಡಿರುವೆ. ನಿನಗೆ ಕೇಡಾಗದಂತೆ ನಾನು ಎಲ್ಲವನ್ನೂ ಸರಿ ಮಾಡುತ್ತೇನೆ. ಭೂಮಂಡಲವನ್ನು ಬಲಿಷ್ಠರು ಕಾಪಾಡಬೇಕು. ಅದನ್ನು ನಾಶಮಾಡಲು ಉದ್ಯೋಗಿಸುವುದು ಪಾತಕ. ಬೇಡ ಮಗುವೆ—ನಿಮ್ಮ ತಂದೆಯ ಸ್ಥಾನದಲ್ಲಿ ನಿಂತು ಬೇಡಿಕೊಳ್ಳುತ್ತೇನೆ. ಪುಣ್ಯಲೋಕಗಳಲ್ಲಿರುವ ಪಿತೃಗಳನ್ನು ನರಕಕ್ಕೆಳೆಯಬೇಡ. ಅಸ್ತ್ರವನ್ನು ಉಪಸಂಹಾರ ಮಾಡು. ಎಲ್ಲರಿಗೂ ಕ್ಷೇಮವಾಗುವುದು. ತಪಸ್ಸಿಗಾಗಿ ನೀನು ಆಶ್ರಮಕ್ಕೆ ಬಂದೆ ಯೆನ್ನುವೆ. ದ್ವೇಷವನ್ನು ತಡೆದಿಡು.

ಯುಧಿಷ್ಠಿರ : ಯಾವ ಹಿಂಸೆಯೂ ಬೇಡ. ಮಹರ್ಷಿಗಳು ಆತನನ್ನು ಒಪ್ಪಿಸಿ ಆತನ ತಲೆಯಲ್ಲಿ ತೊಟ್ಟಿರುವ ರತ್ನವನ್ನು ಕೊಡಿಸಿಕೊಡಿ. ನಾವು ಸಂತೋಷ ದಿಂದ ಹೊರಟು ಹೋಗುತ್ತೇವೆ. ಎಷ್ಟು ಕೇಡಿಗನಾದರೂ ಆತನು ಆಚಾರ್ಯನ ಮಗ.

ವ್ಯಾಸ : ಕೇಳಿದೆಯ ಯುಧಿಷ್ಠಿರನ ಮಾತನ್ನು ? ಹಿಂಸೆಯಿಂದ ಸಮಸ್ತ ಪ್ರಪಂಚ ಬಂದರೂ ಅವನಿಗೆ ಇಷ್ಟವಿಲ್ಲ. ಅವನು ಹೇಳಿದಂತೆ ಮಾಡು.

ಅಶ್ವತ್ಥಾಮ : ಸಾಧ್ಯವಿಲ್ಲ. ಈ ಅಸ್ತ್ರಕ್ಕೆ ಆಹುತಿಯಾಗಲೇಬೇಕು. ಒಂದು ವೇಳೆ ನೀವು ಹೇಳಿದಂತೆ ಈ ಪಾಂಡವರು ಬದುಕಿಕೊಳ್ಳಲಿ. ಅದಕ್ಕೆ ಉತ್ತರೆಯ ಗರ್ಭವನ್ನು ಗುರಿಯಾಗಿಸುವೆನು. ಪಾಂಡವರ ಸಂತತಿ ಮುಗಿ ಯಲಿ. ಆಹುತಿ ಕೊಡಲ್ಲದೆ ಅದು ಉಪಶಾಂತವಾಗದು,

ಕೃಷ್ಣ : ಸರ್ವಥಾ ಕೊಡದು. ಆಕೆಯ ಗರ್ಭವನ್ನು ನಾನೂ ಋಷಿಗಳೂ ಹರಸಿದ್ದೇವೆ. ಅದೊಂದೇ ಪಾಂಡವ ಕುಲವನ್ನು ಉಳಿಸುವ ಮಾರ್ಗ. ಈವರೆಗೂ ನಾನು ಸುಮ್ಮನಿದ್ದೆ. ಈಗ ಈ ಅಸ್ತ್ರದಿಂದ ಉತ್ತರೆಯ ಗರ್ಭಕ್ಕೆ ಅಪಾಯ ತಟ್ಟುವ ಹಾಗಾದರೆ ಅದನ್ನು ರಕ್ಷಿಸಬೇಕಾಗುವುದು.

ಅಶ್ವತ್ಥಾಮ : ಹಹ್ಹ ಹ್ಹಾ ಹ್ಹಾ ! ಐಷೀಕವನ್ನು ತಡೆಯುವನಂತೆ! ಹೇಗೆಯೊ ? ಅದು ಒಂದು ಲಕ್ಷ ಹೋಳಾಗುವುದು !

ಕೃಷ್ಣ : ಸೇರಿಸಿ ಪುನಃ ಒಂದು ಮಾಡುತ್ತೇನೆ.

ಅಶ್ವತ್ಥಾಮ : ಅಸ್ತ್ರದಲ್ಲಿ ಸುಟ್ಟು ಬೂದಿಯಾಗುವುದು.

ಕೃಷ್ಣ : ತಪಸ್ಸನ್ನು ಧಾರೆಯೆರೆದು ಅದಕ್ಕೆ ಜೀವ ತರುತ್ತೇನೆ.

ಅಶ್ವತ್ಥಾಮ : ಹಹ್ಹ ಹ್ಹ ಹ್ಹಾ !

ವ್ಯಾಸ : ಚಪಲವನ್ನು ಬಿಡು ಅಶ್ವತ್ಥಾಮ. ನಾಶವಾಗಬೇಡ.

ನಾರದ : ನಿನಗೇಕೆ ಈ ವಿಪರೀತ ಬುದ್ಧಿ ಬಂದಿತೊ—ಹಾಳಾಗುವೆಯಲ್ಲೊ ?

ಅಶ್ವತ್ಥಾಮ : ಸಾಮರ್ಥ್ಯವಿದ್ದರೆ ಬದುಕಿಸಿಕೊಳ್ಳಲಿ ! ಕೃಷ್ಣ, ನಿನ್ನ ಕಾರ್ಯಗಳು ಮಹತ್ತರವಾದುವೆಂದು ಬಲ್ಲೆ. ಇದನ್ನು ಮಾಡಿಕೊ ನೋಡುವೆನು.

ವ್ಯಾಸ : ತಾಯಿಯಿಲ್ಲದ ಮಗುವೆಂದು ಅತಿಯಾಗಿ ಮುದ್ದು ಮಾಡಿ ಬೆಳಸಿ ನಿಮ್ಮ ತಂದೆ ನಿನ್ನನ್ನು ನಾಶಮಾಡಿದನು.

ಕೃಷ್ಣ : ದೈವೇಚ್ಛೆ ! ಸಹನೆಯ ಮಿತಿ ಮೀರಿತು. ನಿಮ್ಮಂತಹವರಿಗೆ ಕರುಣೆ ತೋರಿಸಬಾರದು. ಮಹರ್ಷಿಗಳೆ, ನೀವಿಬ್ಬರೂ ಸಾಕ್ಷಾತ್ತಾಗಿ ಇಲ್ಲಿ ನಡೆದುದನ್ನೆಲ್ಲ ನೋಡಿದ್ದೀರಿ. ಇವನು ಶಿಶುಘಾತಕ, ನಿದ್ರಿಸುವ ಪ್ರಾಣಿಗಳನ್ನು ಕೊಂದವನು, ಭ್ರೂಣಹತ್ಯೆಗೆ ಹೇಸದಿರುವವನು. ಪಾಪದ ಫಲವನ್ನನು ಭವಿಸಲಿ. ಅವನ ಕೈಗಳನ್ನು ಹಿಡಿದುಕೊ ನಕುಲ (ಅಶ್ವತ್ಥಾಮನು ಕೈ ಬಿಡಿಸಿಕೊಳ್ಳುತ್ತಿರುವನು) ಭೀಮಾ—ಆ ಮಣಿಯನ್ನು ಸೆಳೆ. ಇಲ್ಲವಾದರೆ ದ್ರೌಪದಿ ಪ್ರಾಯೋಪವೇಶ ಮಾಡುತ್ತಾಳೆ, ಜೋಕೆ.

(ಭೀಮನು ಅದನ್ನು ಕೀಳಲು ತಲೆಯಲ್ಲಿ ಕೈ ಇಡುವನು)

ಅಶ್ವತ್ಥಾಮ : ಬೇಡ, ಬೇಡಿ,—ನನ್ನ ಕೈ ಬಿಡಿ—ನನ್ನ ತಲೆಯನ್ನು ಮುಟ್ಟಬೇಡ.

ಕೃಷ್ಣ : ಹೊತ್ತು ಮೀರಿತು, ಭೀಮ.

(ಅಶ್ವತ್ಥಾಮನು ಕೈಹಿಡಿದಿರುವ ಹಾಗೆಯೇ ಭೀಮನು ತಲೆಮಣಿಯನ್ನು ಸೆಳೆಯುವನು. ರಕ್ತ ಹರಿಯುತ್ತ ಮಣಿ ಕೈಗೆ ಬರುವುದು)

ಅಶ್ವತ್ಥಾಮ : ಅಯ್ಯೋ, ನನ್ನ ಪ್ರಾಣವನ್ನೇ ಕಿತ್ತು ಸೆಳೆದರಲ್ಲಾ ! ಅದರಲ್ಲಿ ನನ್ನ

ತಾಯ ಹರಕೆಯಿತ್ತು ; ನನ್ನ ದೇವರ ವರವಿತ್ತು. ನನ್ನನ್ನು ಜೀವಚ್ಛವವಾಗಿ ಮಾಡಿದರಲ್ಲಾ !

ಕೃಷ್ಣ : ಮೃದುವಾಗಿ ಹೇಳಿದಾಗ ಈ ಬುದ್ಧಿ ಎಲ್ಲಿ ಹೋಗಿತ್ತು ? ಹೋಗಲಿ, ಈಗಲಾದರೂ ಅಸ್ತ್ರವನ್ನು ತಿರುಗಿಸುವೆಯಾದರೆ ನೋಡು.

ಅಶ್ವತ್ಥಾಮ : ಆಗಲೇ ಹೇಳಿದೆನಲ್ಲ. ಉಹುಂ ...ನನ್ನಿಂದಾಗದು. ಸರ್ವನಾಶ ವಾಗಲಿ !

ಕೃಷ್ಣ : ಧರ್ಮರಾಜ, ಮಹರ್ಷಿಗಳೆ, ನೀವೇ ಸಾಕ್ಷಿ. ಗತ್ಯಂತರವಿಲ್ಲ. ಇದುವರೆಗೆ ನಾನು ಲೋಕಹಿತಕ್ಕಾಗಿ ಸ್ವಲ್ಪವಾದರೂ ಶ್ರಮಿಸಿರುವುದು ನಿಜವಾದರೆ, ಶಾಂತಿ ಸ್ಥಾಪನೆಗಾಗಿ ಸಂತತವೂ ಪ್ರಯತ್ನಿಸಿರುವುದು ನಿಜವಾದರೆ, ಈ ಪಾಪಿಗೆ ದುಷ್ಕರ್ಮದ ಫಲ ಬರಲಿ ! ಈ ಕ್ಷುದ್ರನು ಇಂದಿನಿಂದ ಮೂರು ಸಾವಿರ ವರ್ಷಗಳ ಕಾಲ,—

ಅಶ್ವತ್ಥಾಮ : ನನಗೆ ವರವಿದೆ ! ಅದರ ಪುಣ್ಯದಿಂದ ಎಲ್ಲ ಪಾಪಗಳನ್ನೂ ತೊಳೆದು ಕೊಳ್ಳುತ್ತೇನೆ—

ಕೃಷ್ಣ : ಕೋಟಿ ವರಗಳ ಪುಣ್ಯವನ್ನು ಈ ಶಾಪ ಮೆಟ್ಟೀತು !—ಮೂರು ಸಾವಿರ ವರ್ಷಗಳ ಕಾಲ ಕಾಡುಮೇಡುಗಳಲ್ಲಿ, ಜನರಿಂದ ದೂಷ್ಯನಾಗಿ, ಎಲ್ಲ ನೆನಪುಗಳೂ ಅಳಿಸಿಹೋಗಿ, ತಲೆಯ ರಕ್ತ ಹರಿಯುತ್ತಲೇ ಇರಲು, ನಿಂತಲ್ಲಿ ನಿಲ್ಲದೆ ಅಲೆಯುತ್ತಿರು ಹೋಗು !

ಅಶ್ವತ್ಥಾಮ : (ಮನಸ್ಸು ಇಷ್ಟು ಹೊತ್ತಿಗೆ ತಿಳಿಯಾಗಿ)—ಅಯ್ಯೋ ! ನಾನು ನಾಶವಾದೆ ಕೃಷ್ಣ ! ಕ್ರೋಧದಿಂದ ನಾನು ನಾಶವಾದೆ ! ಇಷ್ಟು ದಿನ ಬದುಕಿದುದು ವ್ಯರ್ಥವಾಯಿತು !

ಕೃಷ್ಣ : ನಿನ್ನನ್ನಾರು ನಾಶ ಮಾಡಿದವರು ? ನಿನ್ನ ಕರ್ಮ. ಸತ್ಯ ದಾನ ತಪಸ್ಸುಗಳಿಂದ ನಾನು ದೇವ ಮಾನವರನ್ನು ತೃಪ್ತಿಪಡಿಸಿರುವೆನಾದರೆ ಅಶ್ವತ್ಥಾಮನ ಅಸ್ತ್ರ ಉಪಶಾಂತವಾಗಿ ಉತ್ತರೆಯ ಗರ್ಭ ರಕ್ಷಿತವಾಗಲಿ !

ಋಷಿಗಳು : ತಥಾಸ್ತು !

(ಉರಿ ನಂದುವುದು)

ವ್ಯಾಸ : ಈಗ ನಿನ್ನನ್ನು ಯಾರೂ ರಕ್ಷಿಸಲಾರರು ಮಗು. ಅವಧಿಯನ್ನು ಕಳೆದೇ ತೀರಬೇಕು. (ಎಲ್ಲರೂ ಸ್ತಬ್ಧರಾಗಿ ನೋಡುತ್ತಿರುವರು)

ನಾರದ : ಕೃಷ್ಣನ ಸಂಯಮವನ್ನು ಕೆರಳಿಸಿದೆ ; ಸತ್ಯದ ಆಗ್ರಹಕ್ಕೆ ತುತ್ತಾದೆ ; ಅವಧಿಯನ್ನು ಕಳೆ ಹೋಗು.

ಅಶ್ವತ್ಥಾಮ : ಮೂರು ಸಾವಿರ ವರ್ಷಗಳು ! ಅಯ್ಯೋ—ಅಯ್ಯೋ—ಇಹೈವ ಫಲಂ !—ಇಹೈವ ಫಲಂ !! (ಎಂದು ಚೀರಿ ಹೇಳುತ್ತ ತತ್ತರಿಸಿ ತಲೆಯನ್ನು

ಹಿಡಿದುಕೊಂಡು ಹೋಗುತ್ತಾನೆ. ಎಲ್ಲರೂ ಕೃಷ್ಣನನ್ನೇ ನೋಡುತ್ತ ನಿಶ್ಚಲರಾಗಿ ನಿಂತಿರುವರು)

ಕೃಷ್ಣ : (ಶಾಂತನಾಗಿ) ಮಹರ್ಷಿಗಳು ಯುಧಿಷ್ಠಿರನಿಗೆ ಆಶೀರ್ವಾದ ಮಾಡಬೇಕು. ಬಾ ಪಾರ್ಥ, ಬಾ ಭೀಮ, ನಕುಲ, ಋಷಿಗಳಿಗೆ ಅಭಿವಾದನೆ ಮಾಡಿ.

(ಎಲ್ಲರೂ ನಮಸ್ಕರಿಸುವರು)

ಋಷಿಗಳು : ಕಲ್ಯಾಣಮಸ್ತು ! ಧರ್ಮರಕ್ಷಕೋ ಭವ !

ಕೃಷ್ಣ : ಏಳು ಯುಧಿಷ್ಠಿರ, ಹದಿಮೂರು ವರ್ಷಗಳ ಕಿಲುಬು ತೊಡೆದು ಹೋಯಿತು. ಇನ್ನು ನಿಶ್ಶತ್ರುವಾಗಿ ರಾಜ್ಯಭಾರ ಮಾಡು. ಬೇಗನೆ ನಡೆಯಿರಿ. ದ್ರೌಪದಿಯನ್ನು ಸಂತೈಸಿ.

ಯುಧಿಷ್ಠಿರ : ಗಾಂಧಾರಿ ಧೃತರಾಷ್ಟ್ರರನ್ನು ಮೊದಲು ಸಮಾಧಾನ ಮಾಡೋಣ ಬನ್ನಿ. ಮಡಿದ ವೀರರಿಗೆ ಸದ್ಗತಿ ಕಾಣಿಸೋಣ. ಪೂಜ್ಯರು ತಾವು ಎಲ್ಲರೂ ಅಲ್ಲಿ ದಯಮಾಡಿ ನೆರೆದು ನಮಗೆ ಮಾರ್ಗವನ್ನು ತೋರಿಸಬೇಕು.

ಋಷಿಗಳು : ಅಗತ್ಯವಾಗಿ ಬರುತ್ತೇವೆ. ಹೋಗಿ ಬನ್ನಿ.

ವ್ಯಾಸ : ಕೃಷ್ಣಾ, ಹೋಗಿ ಬಾ—ಇಷ್ಟು ನಡೆಯಬೇಕಾಯಿತು !

ಕೃಷ್ಣ : ಇಷ್ಟು ನಾಶವಾಗಬೇಕಾಯಿತು. ದೈವಸಂಕಲ್ಪ ಹೀಗಿದ್ದರೆ ಅದನ್ನು ತಪ್ಪಿಸಬಲ್ಲವರು ಯಾರು ? ಯಾರ ಪ್ರಯತ್ನಗಳೂ ನಡೆಯಲಿಲ್ಲ. ಉಳಿದಿರುವುದಾದರೂ ಸ್ಥಿರವಾಗಿ ನಿಲ್ಲಲಿ. ಇನ್ನಾದರೂ ನಿರ್ಭಯವಾಗಿ ಧರ್ಮ ಬೆಳೆಯಲಿ !

ಋಷಿಗಳು : ತಥಾಸ್ತು.

ತೆರೆ

# ಸೊಹ್ರಾಬ್ - ರುಸ್ತುಂ

## ಪಾತ್ರಗಳು

| | | |
|---|---|---|
| ರುಸ್ತುಂ | .... | ಇರಾನಿನ ಶ್ರೀಮಂತ ವೀರ |
| ಸೊಹ್ರಾಬ್ | .... | ರುಸ್ತುಮನ ಮಗ |
| ಸುಲ್ತಾನ್ | .... | ತಹಮೀನೆಯ ತಂದೆ |
| ಅಫ್ರಾಸಿಯಾಬ್ | .... | ತುರಾನಿನ ಪ್ರಭು |
| ಪೆರಾನ್‌ವೈಸಾ | .... | ತುರಾನಿನ ದಳವಾಯಿ |
| ಸುಲೇಮಾನ್ | .... | ಸೊಹ್ರಾಬನ ಸ್ನೇಹಿತ |
| ಫೆರೂದ್<br>ಗೋದರ್ಸ್<br>ಸೊವಾರಾ<br>ಫೆರಬೂಸ್ | .... | ಇರಾನಿನ ಸರದಾರರು |
| ತಹಮೀನ | .... | ರುಸ್ತುಮನ ಹೆಂಡತಿ ; ಸೊಹ್ರಾಬನ ತಾಯಿ |
| ಮೋತಿ | .... | ದಾಸಿ |

ಇರಾನಿ ತುರಾನಿ ಸೈನಿಕರು

# ನೋಟ ೧

[ಅದೇರ್ ಬೈಜಾನ್. ಅರಮನೆಯ ಅಂತಃಪುರ. ತಹಮಿೂನ ಸುಖಾಸನದ ಮೇಲೆ ಕುಳಿತು ಹೆಣೆಯುತ್ತಿದ್ದವಳು ಅದನ್ನು ತೆಗೆದಿಟ್ಟು ಮಡಿಲಿನೊಳಗಿಂದ ಒಂದು ದಂತದ ಪೆಟ್ಟಿಗೆಯನ್ನು ತೆಗೆದು ನೋಡುತ್ತ, ಮೆಚ್ಚುತ್ತ, ನಿಡುಸುಯ್ಯುತ್ತಿದ್ದಾಳೆ... ಮೋತಿಯು ಷರಬತ್ತನ್ನು ತಂದು ನಿಲ್ಲುವಳು.]

ಮೋತಿ : ಏಕೆ ತಾಯಿ ನಿಟ್ಟುಸಿರು ಬಿಡುತ್ತೀರಿ, ಹೀಗೆ ಚಿಂತಿಸಿ ಏನು ಪ್ರಯೋಜನ ? ಅವರು ಇಲ್ಲಿಗೆ ಬರುವ ಹಾಗಿಲ್ಲ.

ತಹಮಿೂನ : ಅವರು ಇಲ್ಲಿಗೆ ಬರುವ ಹಾಗಿಲ್ಲ. ನಾನು ಅಲ್ಲಿಗೆ ಹೋಗುವ ಹಾಗಿಲ್ಲ. ಅವರು ಈವರೆಗೆ ನನ್ನನ್ನು ಮರೆತೇಹೋಗಿರುವರು.

ಮೋತಿ : ಏನು ಮಾಡುವುದು ತಾಯಿ, ಎಷ್ಟು ವರ್ಷಗಳ ಕಾಲ ಚಿಂತಿಸುವುದು ? ಇರುವ ಸಂತೋಷಕ್ಕಾದರೂ ತೃಪ್ತಿಪಟ್ಟುಕೊಳ್ಳುವುದು ಒಳ್ಳೆಯದು. ಪತಿಯಿಂದ ಅಗಲಿದ್ದರೂ ಮಗನು ಹತ್ತಿರವಿದ್ದಾನೆ. ಆತನನ್ನು ನೋಡಿಕೊಂಡು ಕಾಲ ಹಾಕಬೇಕು.

ತಹಮಿೂನ : ಹೌದು, ಉಳಿದಿರುವುದು ಅದೊಂದೇ ಸಂತೋಷ. ಆದರೂ, ಮೋತಿ, ಆ ಮಗುವಿನ ಚಿಂತೆ ಈ ನಾಲ್ಕೈದು ದಿನಗಳಿಂದ ಅತಿಯಾಗಿದೆ. ಅವನೂ ಎಲ್ಲಿ ಕೈಬಿಟ್ಟು ಹೋಗುವನೊ ಎಂಬ ಶಂಕೆ ಬಲವಾಗಿದೆ. ಮೊದಲಿನಿಂದಲೂ ಭಯವೇ. ಆದರೂ ಈಗ ಮಿತಿಮಿಾರಿ ಕಳವಳ ತೋರುತ್ತಿದೆ. ಏನು ಮಾಡುವುದಕ್ಕೂ ತೋಚದು.

ಮೋತಿ : ಪ್ರೀತಿಯ ಸ್ವಭಾವವೇ ಹೀಗೆ : ಇಲ್ಲದ ಸಲ್ಲದ ಭಯಗಳನ್ನು ಕಲ್ಪಿಸಿಕೊಂಡು ಕಳವಳಪಡುವುದು.

ತಹಮಿೂನ : ಹಾಗಲ್ಲವೇ. ಇಷ್ಟು ದಿನವೂ ಇಲ್ಲದಿದ್ದ ಮೂಕಯಾತನೆಯೊಂದು ಈ ನಾಲ್ಕೈದು ದಿನಗಳಿಂದಲೂ ಆ ಭಯವನ್ನು ಅತಿಯಾಗಿ ಹೆಚ್ಚಿಸಿದೆ.

ಮೋತಿ : ಸುಲ್ತಾನರಿಗೆ ತಿಳಿಸಿ ; ಸೊಹ್ರಾಬರ ಮನಸ್ಸು ಬೇರೆ ಏತರಲ್ಲಾದರೂ ಪ್ರದರ್ಶಿಸುವಂತೆ ಅವರು ಮಾಡಿಯಾರು.

ತಹಮಿೂನ : ಅವರಿಗೆ ಸಾಧ್ಯವಿಲ್ಲ. ಅವರೂ ವ್ಯಸ್ತರಾಗಿದ್ದಾರೆ. ಈ ನಡುವೆ ಅವನಿಗೆ ಪ್ರಪಂಚದಲ್ಲಿನ ಯಾವುದೂ ಬೇಡವಾಗಿದೆ. ಕೊರಗು ಕೊರೆಯುತ್ತಿದೆ. ಯಾರು ಏನು ಹೇಳಿದರೂ ಕೇಳ. ಅವನ ಹಟವನ್ನು ನೀನು ನೋಡಿಯೇ ಇರುವೆಯಲ್ಲ !

ಮೋತಿ : ಮೆಹರುನ್ನೀಸಳಲ್ಲಿ ಆತನಿಗೆ ಆಸಕ್ತಿ ಬರುವಂತೆ ಮಾಡುವುದಕ್ಕಾಗುವುದಿಲ್ಲವೆ ? ಪ್ರೇಮ ಬೆಳೆಯುವಂತಾದರೆ ಹಳೆಯ ಚಿಂತೆಗಳನ್ನು ಬಿಟ್ಟಾರೊ ಏನೊ.

ತಹಮೀನ : ನಿನಗಿನ್ನೂ ಅವನ ಸ್ವಭಾವವು ಅರ್ಥವಾಗಿಲ್ಲ, ಮೋತಿ.

(ಒಳಗಿನಿಂದ 'ಅಮ್ಮಾ, ಅಮ್ಮಾ, ಬಾಗಿಲು' ಎಂಬುದು ಬಾಗಿಲು ತಟ್ಟುವ ಶಬ್ದದೊಡನೆ ಕೇಳಿಸುವುದು)

(ಆಲಿಸಿ) ಯಾರು, ಸೊಹ್ರಾಬ್ ? ಬಾ ಮಗು, ಬೇರೆ ಯಾರು ಇಲ್ಲ,— ಮೋತಿ ; ಮುಂದಿನ ಬಾಗಿಲು ಹಿಡಿದು ನೂಕು. ಒಳಗೆ ಬಾ.

ಸೊಹ್ರಾಬ್ : (ಹೊರಗಿನಿಂದಲೆ) ಒಳಗಡೆ ಅಗಳಿ ಹಾಕಿಲ್ಲವೆ ? ಹಾಕಿದೆ ಎಂದುಕೊಂಡಿದ್ದೆ.

(ಬಾಗಿಲನ್ನು ನೂಕಿ ಒಳಗೆ ಬರುವನು. ಮುಖದಲ್ಲಿ ಅಶಾಂತಿ ಉದ್ವೇಗಗಳೂ ನಿರ್ಧಾರವೂ ಕಾಣುತ್ತಿವೆ)

ಮೋತಿ, ಹೋಗಿ ಇನ್ನೊಂದು ಲೋಟ ಪರಬತ್ತು ತೆಗೆದುಕೊಂಡು ಬಾ, ಹಾಗೆಯೇ ಕುದುರೆಯವನಿಗೆ ಕುದುರೆಯನ್ನು ಸವಾರಿಗೆ ಸಿದ್ಧ ಮಾಡುವಂತೆ ಹೇಳಿ ಬಾ.

(ಮೋತಿಯು ಯಜಮಾನಿಯ ಕಡೆ ನೋಡುತ್ತಾ ಹೋಗುವಳು)

ತಹಮೀನ : ಇದೇನು ಈ ಅವಸರ ಇಷ್ಟು ಹೊತ್ತಿನಲ್ಲಿ ? ಮುಖದಲ್ಲಿ ಈ ಉದ್ವೇಗವೇಕೆ, ಮಗು ? ನನ್ನ ಕೈಯಲ್ಲಿ ಹೇಳಬಾರದೆ ? (ಅವನ ತಲೆ ಕೂದಲನ್ನು ನೇವರಿಸುತ್ತ) ಸ್ವಲ್ಪವೂ ವಿಶ್ರಾಂತಿಯೇ ಬೇಡವೆ, ಕಂದ – ಯಾವಾಗಲೂ ಬೇಟೆ ಕಾಳೆಗಗಳಲ್ಲಿ ಇದ್ದರೆ ಹೇಗೊ ?

ಸೊಹ್ರಾಬ್ : ಅಮ್ಮಾ, ನೀವು ಕೋಪಿಸಿಕೊಳ್ಳದಿದ್ದರೆ ಒಂದು ಮಾತನ್ನು ಕೇಳಬೇಕೆಂದಿದ್ದೇನೆ, ಕೊನೆಯ ಸಾರಿ.

ತಹಮೀನ : (ಬೆಚ್ಚಿ, ಬೆದರಿ) ಏನು ಮಾತು – ಅದು ತಾನೆ ? ಏಕೆ ಮಗು ಹೀಗೆ ಮುಷ್ಕರ ಮಾಡುತ್ತಿ ? ಅದೊಂದು ಬಿಟ್ಟು ಬೇರಾವುದನ್ನು ಬೇಕಾದರೂ ಕೇಳು. ನನ್ನ ಒಡಲನ್ನು ಉರಿಸುತ್ತಿರುವ ರಹಸ್ಯವಪ್ಪ ಅದು. ಬಹು ಭಯದಿಂದ ಕಾಪಾಡಿಕೊಂಡು ಬಂದಿದ್ದೇನೆ.

ಸೊಹ್ರಾಬ್ : ಅಮ್ಮ, ನಿಮಗೆ ರಹಸ್ಯ ; ನನಗೆ ಪ್ರಾಣ ಸಂಕಟ. ತಂದೆ ಯಾರೆಂದು ತಿಳಿಸದಿರುವುದು ಏನು ರಹಸ್ಯ ಹೇಳಿ ; ಇದೇನು ಸಂಚು ನಿಮ್ಮದೆಲ್ಲ ? ನನ್ನ ತಾಯಿಯ ಗೌರವಕ್ಕೆ ಯಾವ ಹಾನಿಯೂ ಇಲ್ಲ ತಾನೆ ?

ತಹಮೀನ : ಕಠಿನ ನುಡಿಯಬೇಡ ಮಗು. ನನ್ನ ಸಂಕಟವು ನಿನಗೆ ತಿಳಿಯ ಬಾರದೆಂದೇ ನಾನದನ್ನು ಮರೆ ಮಾಡಿರುವುದು.

ಸೊಹ್ರಾಬ್ : ನನ್ನ ಸೌಖ್ಯವು ನಿಮಗೆ ಬೇಕಿಲ್ಲವೆ ?

ತಹಮೀನ : ಹಾಗೆಂದರೇನು ? ಒಂದು ನಿಮಿಷ ನೀನು ಕಣ್ಮರೆಯಾದರೆ ಪ್ರಾಣವು ತಲ್ಲಣಿಸುತ್ತದೆ.

ಸೊಹ್ರಾಬ್ : ನನಗೊ ? ನಾನೆಷ್ಟು ಬಾರಿ, ಎಷ್ಟು ವಿಧವಾಗಿ ಬೇಡಿಕೊಂಡಿದ್ದೇನೆ ! ನನ್ನ ವಿಚಾರವಾಗಿ ನಿಮಗೆ ಸ್ವಲ್ಪವೂ ಕರುಣೆ ಬೇಡವೆ ?

ತಹಮೀನ : ಹೇಳುವುದಕ್ಕೆ ನನಗೆ ನನ್ನಲ್ಲಿಯೇ ನಂಬಿಕೆಯಿಲ್ಲ ಸೊಹ್ರಾಬ್. ಅದಕ್ಕಾಗಿ ಹೇಳಲಿಲ್ಲ.

ಸೊಹ್ರಾಬ್ : ನಿಮ್ಮಲ್ಲಿ ನಿಮಗೇ ಏಕೆ ನಂಬಿಕೆಯಿಲ್ಲ ? ನಾನು ಈ ಮಾತನ್ನೆತ್ತಿದೆ ನೆಂದರೆ ಸರಿ, ನಿಮ್ಮ ಕಣ್ಣಿನಲ್ಲಿ ನೀರು ತುಂಬುವುದು. ಏನು ಪ್ರಮಾದ ಹೇಳಬಾರದೆ ? ಹೇಳಿದುದನ್ನು ಅರ್ಥಮಾಡಿಕೊಳ್ಳುವ ಯೋಗ್ಯತೆಯಿಲ್ಲವೆ, ವಯಸ್ಸಿಲ್ಲವೆ ನನಗೆ ? ಇಹಲೋಕದಲ್ಲಿನ ಯಾವ ವಸ್ತುವನ್ನಾದರೂ ತಂದು ಕೊಟ್ಟು ನಿಮ್ಮ ದುಃಖವನ್ನಿಳಿಸಬಲ್ಲೆ, ತಾಯಿ. ಪೌರುಷದಿಂದ ಸಾಧ್ಯವಾಗುವು ದಾದರೆ ಸ್ವರ್ಗವನ್ನೇ ಸೆರೆಹಿಡಿದು ತರುತ್ತೇನೆ. ಈವೊತ್ತು ಕೇಳಿದ ಮಾತು ನಿಜವೆ ?

ತಹಮೀನ : ಏನು, ಏನು ಮಾತು ಮಗು ?

ಸೊಹ್ರಾಬ್ : ನಾನು ರುಸ್ತುಮರ ಮಗನೆಂದು ?

ತಹಮೀನ : ಅಯ್ಯೋ, ನಿನಗೆ ಯಾರು ಹೇಳಿದರು ? ನಾನು ಕೆಟ್ಟೆ.

(ನೆಲದ ಮೇಲೆ ಬೀಳುವಂತಾಗುವಳು)

ಸೊಹ್ರಾಬ್ : (ಬೀಳದಂತೆ ಮೃದುವಾಗಿ ಹಿಡಿದು ಗಾಳಿ ಹಾಕುತ್ತಾ) ಬಾಪರೆ, ಇದು ನಿಜ ! ಇಂಥಾ ಸಂತೋಷದ ವಿಷಯವನ್ನು ಮುಚ್ಚಿಡಬೇಕಾಗಿತ್ತೆ ? ಅಮ್ಮ, ನಿಮ್ಮ ಅಪನಂಬಿಕೆಗೆ ಕಾರಣ ಗೊತ್ತಾಯಿತು. ನಾನು ಈ ಕ್ಷಣವೇ ಹೋಗಿ ಅವರನ್ನು ಕರೆತರುತ್ತೇನೆ, ನೀವು ಚಿಂತಿಸಬೇಡಿ.

ತಹಮೀನ : ಬೇಡ, ಬೇಡ, ಸೊಹ್ರಾಬ್. ಯಾವುದು ಆಗಬಾರದೆಂದು ಇಷ್ಟು ವರ್ಷಗಳಿಂದಲೂ ಪ್ರಯತ್ನಪಟ್ಟೆನೊ ಅದೇ ಆಯಿತು. ಅದಕ್ಕಾಗಿಯೇ ನಿನ್ನ ಜನ್ಮದ ಸಂಗತಿಯನ್ನು ಗೋಪ್ಯವಾಗಿಟ್ಟುಕೊಂಡಿದ್ದೆ. ಮುಂದಿನ್ನೇನು ಗತಿ ?

ಸೊಹ್ರಾಬ್ : ನನ್ನ ಮಾತಿನಲ್ಲಿ ಅಪನಂಬಿಕೆಯೆ ?

ತಹಮೀನ : ಇಲ್ಲ, ನನ್ನ ಶಕ್ತಿಯಲ್ಲಿ.

ಸೊಹ್ರಾಬ್ : ಅದು ಹೇಗೆ ?

ತಹಮೀನ : ಈ ಸಮಾಚಾರವು ನಿನ್ನ ಕಿವಿಗೆ ಮುಟ್ಟಿದ ಕೂಡಲೆ ನಿನ್ನನ್ನು ತಡೆಯುವ ಶಕ್ತಿಯು ನನಗಿಲ್ಲದಾಗುವುದೆಂದು ಮುಂಚಿನಿಂದ ನನಗೆ ಗೊತ್ತು. ಎಲ್ಲ ಸುಖಗಳೂ ಆಸೆಗಳೂ ಹೋಗಿದ್ದರೂ, ಚಿನ್ನ, ನಿನ್ನನ್ನು ನೋಡಿಕೊಂಡು ಬದುಕಿದ್ದೆ ; ಈಗ ನೀನೂ ನನ್ನನ್ನು ಬಿಟ್ಟು ಹೋದರೆ ನನಗೆ ಪ್ರಪಂಚದಲ್ಲಿ ಉಳಿವುದೇನಿದೆ !

ಸೊಹ್ರಾಬ್ : ಅಮ್ಮಾ, ಇದೇಕೆ ಹೀಗೆ ಮಾತನಾಡುತ್ತೀ ? ನಾನು ನಿಮ್ಮನ್ನು ಪ್ರೀತಿಸುವುದಿಲ್ಲವೆ ? ಇದೊ ಹೊರಟೆ. ಅವರೆಲ್ಲಿದ್ದರೂ ಹುಡುಕಿಕೊಂಡು ಬರುತ್ತೇನೆ. . .ಅದೂ ಅಲ್ಲದೆ, ಇಷ್ಟು ದಿನಗಳ ಮಹದಾಸೆಯು ಕೈಗೂಡಿ ದಂತಾಗುವುದು !. . . ಒಮ್ಮೆ ಅವರನ್ನು ನೋಡಿ ಎಲ್ಲವನ್ನೂ ತಿಳಿಸಿ ಅವರನ್ನಿಲ್ಲಿಗೆ ಕರೆತರುವೆನು. ಆಗ ನಿಮ್ಮ ಸೊಹ್ರಾಬನು ನಿಮಗೆ ತಕ್ಕ ಸೇವೆ ಮಾಡಿದಂತಾಗುವುದು. ಇಂಥ ತಾಯಿತಂದೆಯರನ್ನು ಪಡೆದು ಅವರನ್ನು ಸಂತೋಷಗೊಳಿಸದ ಮಗನಿದ್ದರೇನು, ಇಲ್ಲದಿದ್ದರೇನು ? ಆದರೆ ಇನ್ನೊಂದು ಪ್ರಶ್ನೆ – ನನ್ನನ್ನು ನೋಡುವುದಕ್ಕೆ ಕೂಡ ಅವರು ಇಷ್ಟು ದಿನಗಳ ವರೆಗೂ ಬಾರದಿರುವುದೇಕಮ್ಮ ? ನಿಮಗೂ ಅವರಿಗೂ ಮನಸ್ತಾಪ ಬಂದಿತ್ತೆ ?

ತಹಮೀನ : ಮನಸ್ತಾಪವೆ ? ಇಲ್ಲ ಮಗು–ನನ್ನ ಕರ್ಮ.

ಸೊಹ್ರಾಬ್ : ಕರ್ಮವೆಂದರೇನು ? ನೀವೇನು ಮಾಡಿದಿರಿ ?

ತಹಮೀನ : ಅವರ ಮರೆವಿಗೂ ಅನಾದರಕ್ಕೂ ಪಾತ್ರಳಾಗುವುದಕ್ಕೆ ಎಷ್ಟನ್ನು ಮಾಡ ಬಹುದಾಗಿತ್ತೊ ಅಷ್ಟನ್ನೂ ಮಾಡಿದೆ.

ಸೊಹ್ರಾಬ್ : ಎಂದರೆ ?

ತಹಮೀನ : ಮಗನು ಹುಟ್ಟಿದನೆಂದು ಅವರಿಗೆ ತಿಳಿದಿದ್ದರೆ ಅವರು ಹಿಂದಿರುಗಿ ಬರುತ್ತಿದ್ದರು.

ಸೊಹ್ರಾಬ್ : ಮಗನೇ ಹುಟ್ಟಲಿಲ್ಲವೆ ?

ತಹಮೀನ : ನಿಜ. ಗಂಡುಮಗು ಹುಟ್ಟಿತೆಂದು ತಿಳಿಸಿದ್ದರೆ ನಿನ್ನನ್ನು ಕರೆದುಕೊಂಡು ಹೋಗಿ ಯುದ್ಧಕ್ಕೆ ತರಬಿಯತ್ತು ಮಾಡಿ ತಮ್ಮಂತೆಯೇ ರಣವಿದ್ಯೆ ಕಲಿಸುವ ರೆಂದು ಹೆದರಿ—ನಿನ್ನನ್ನು ಕಳೆದುಕೊಳ್ಳುವೆನೆಂದು ಹೆದರಿ—ನನ್ನ ಬಳಿಯೇ ನಿನ್ನನ್ನು ಉಳಿಸಿಕೊಳ್ಳಬೇಕೆಂದು ಆಸೆಪಟ್ಟು, ಹೆಣ್ಣು ಹುಟ್ಟಿತೆಂದು ಅವರಿಗೆ ಸುಳ್ಳು ಸಮಾಚಾರ ಕೊಟ್ಟೆವು. ಬೇಸರದಿಂದ ಅವರು ಇಲ್ಲಿಗೆ ಬರಲಿಲ್ಲ. ಬೇರೇನೂ ಇಲ್ಲ.

ಸೊಹ್ರಾಬ್ : ಮಹಾಪರಾಧ ಮಾಡಿದಿರಿ — ಮಹಾಪರಾಧ ಮಾಡಿದಿರಿ. . . . ಆದರೂ ಮಿಂಚಲಿಲ್ಲ ತಾಯಿ. ಸತ್ಯಾಂಶವನ್ನು ತಿಳಿಸಿ ಅವರನ್ನು ಖಂಡಿತ ವಾಗಿಯೂ ಕರೆತರುವೆನು.

ತಹಮೀನ : ಇಷ್ಟು ದಿನಗಳ ಮೇಲೆ ಅವರು ನಂಬರು ಮಗು; ಕೋಪಿಸಿಕೊಳ್ಳುವರು. ಯಮನ ಕೋಪದಂತೆ ಅವರ ಕೋಪವು ಭಯಂಕರ. ನನ್ನ ಮೇಲೆ ಬಹು ಆಗ್ರಹಗೊಳ್ಳುವರು ; ಬೇಡಪ್ಪ.

ಸೊಹ್ರಾಬ್ : ತ್ಚ್ ! ತ್ಚ್ ! ನಾನೆಲ್ಲವನ್ನೂ ಸರಿಪಡಿಸುವೆನು. ಆಶೀರ್ವಾದ ಮಾಡಿ. ಎಲ್ಲಿಯೂ ನಿಲ್ಲದೆ ಪ್ರಯಾಣಮಾಡಿ ಅವರನ್ನು ಹುಡುಕಿಕೊಂಡು ಬರುವೆನು.

ತಹಮೀನ : (ಅವನ ತಲೆಯ ಮೇಲೆ ಮುಖವಿಟ್ಟು, ಕಣ್ಣೀರಿಂದ) ನನಗೆ ಭಯ ವಾಗುತ್ತಿದೆ, ಸೊಹ್ರಾಬ್. ಈಗ ಬೇಡ, ಕೆಲವು ದಿನ ತಾಳು. ನಿಧಾನದಲ್ಲಿ ಯೋಚಿಸಿ ತೀರ್ಮಾನಮಾಡೋಣ.

ಸೊಹ್ರಾಬ್ : ಶುಭಕ್ಕೆ ನಿಧಾನಮಾಡಬಾರದು. ಇಂದಿನಿಂದ ಮೂರು ತಿಂಗಳು ಕಳೆಯುವುದರೊಳಗಾಗಿ ಎಲ್ಲಿದ್ದರೂ ಅವರೊಡನೆ ಹಿಂದಿರುಗಿ ಬರುವೆನು.

ತಹಮೀನ : ಈವರೆಗೂ ಒಂದು ದಿನ ನಿನ್ನನ್ನು ಬಿಟ್ಟಿರಲಿಲ್ಲ; ಮೂರು ತಿಂಗಳ ಕಾಲವನ್ನು ಹೇಗೆ ಕಳೆಯಲಿ ? ನಾನೂ ನಿನ್ನೊಡನೆ ಬರುತ್ತೇನೆ ನಡೆ.

ಸೊಹ್ರಾಬ್ : ಛೆ, ನೀವೆಂದರೇನು ಬರುವುದೆಂದರೇನು ? ನೀವು ಸ್ವಲ್ಪವೂ ಚಿಂತಿಸ ಕೆಲಸವಿಲ್ಲ. ಇಗೋ ಎನ್ನುವುದರಲ್ಲಿ ಬಂದುಬಿಡುತ್ತೇನೆ.

(ಮೊಳಕಾಲೂರಿ ನಮಸ್ಕಾರ ಮಾಡುವನು)

ತಹಮೀನ : ದೇವರಿಚ್ಛೆ ಹೇಗಿದ್ದರೆ ಹಾಗಾಗಲಿ. ಕಸ್ತೂರಿಯನ್ನು ಮುಚ್ಚಿಟ್ಟು ಗೋಪ್ಯ ಮಾಡುವುದು ಸಾಧ್ಯವೆ ? ಮಾಡುವೆನೆಂಬ ನನ್ನ ಪ್ರಯತ್ನವು ಮರುಳಾಟವಲ್ಲವೆ ? ಇದರಿಂದ ಏನೇನಾಗಬೇಕೊ, ಏನೇನಾಗುವುದೊ ! ಸ್ವಲ್ಪ ತಾಳು, ಸೊಹ್ರಾಬ್, (ಕಿರುಪೆಟ್ಟಿಗೆಯಿಂದ ಒಂದು ತಾಯಿತಿ ತೆಗೆದು ಅವನ ಬಲತೋಳಿಗೆ ಕಟ್ಟಿ ಅದನ್ನು ಮುತ್ತಿಟ್ಟು) ಇದು ನಿನಗೆ ರಕ್ಷಾಬಂಧನ. ನಿಮ್ಮ ತಂದೆಯವರಿಗೆ ಗುರುತೂ ನೆನಪೂ ಆಗುತ್ತವೆ. ಇದನ್ನು ನಿನ್ನ ದೇವರಂತೆ ಕಾಪಾಡಿಕೊ. . . .ಇನ್ನೊಂದು ಮಾತು : ಇನ್ನು ಮುಂದಿನ ಮೂರು ತಿಂಗಳೂ ಮುಳ್ಳಿನ ಮೇಲಿರುವಂತೆ ದಿನಗಳನ್ನೆಣಿಸುತ್ತಿರುತ್ತೇನೆ. ಅವೊಳಗಾಗಿ ನೀನು ಬಾರ ದಿದ್ದರೆ ಆಮೇಲೆ ಒಂದು ಘಳಿಗೆ ಕಾಲ ನಾನು ಪ್ರಾಣವನ್ನಿಟ್ಟುಕೊಂಡಿರುವುದಿಲ್ಲ.

ಸೊಹ್ರಾಬ್ : ಅವರೆಗೂ ನಂಬಿಕೆಯಿಟ್ಟು, ನೀವು ಸೊಹ್ರಾಬನ ವೀರಮಾತೆಯಂತೆ, ರುಸ್ತುಮರ ವೀರಪತ್ನಿಯಂತೆ ನಡೆದುಕೊಳ್ಳಬೇಕು.

ತಹಮೀನ : ಶಕ್ತಿಮೀರಿ ಪ್ರಯತ್ನಿಸುವೆನು. ಆದರೆ ಎಲ್ಲಿಯೇ ಆಗಲಿ, ಯಾವ ಕಾರಣದಿಂದಲೇ ಆಗಲಿ, ನಿಮ್ಮ ತಂದೆಯನ್ನಿದಿರಿಸಿ ಯುದ್ಧ ಮಾಡಬೇಡ.

ಸೊಹ್ರಾಬ್ : ಎಂದಿಗಾದರೂ ಮಾಡಿಯೇನೇ !

ತಹಮೀನ : ಒಳ್ಳೆಯದು ಹೋಗಿ ಬಾ. . . (ಕಣ್ಣೀರು ತುಂಬಿ ಅವನನ್ನು ಕೊಟ್ಟು ಕಳುಹಿಸುವಳು. ಅದೇ ದಾರಿಯಲ್ಲಿ ಒಂದೇ ಸಮನೆ ನೋಡುತ್ತಿದ್ದು, ಕೆಳಗೆ ಕುಸಿದು ಕುಳಿತು, ತಲೆಯ ಮೇಲೆ ಕೈಗಳನ್ನಿಟ್ಟು ಬಿಕ್ಕಿಬಿಕ್ಕಿ ಬರುವ ಅಳುವನ್ನು ತಡೆದು) ಖುದಾ ! ಮಗು ನನ್ನದಲ್ಲ, ನಿನ್ನದು. ಅದನ್ನು ಕಾಪಾಡುವ ಭಾರ ನಿನ್ನ ಮೇಲಿದೆ. ಇಗೊ ನಿನ್ನ ಕೈಗೆ ಒಪ್ಪಿಸಿದ್ದೇನೆ.

ತೆರೆ

## ನೋಟ ೨

[ಅರಮನೆಯ ಹೊರ ಅಂಗಳದಲ್ಲಿ ಕುದುರೆಯನ್ನು ನಿಲ್ಲಿಸಿ ಬಂದು ಕುದುರೆಯುವನು ಸೊಹ್ರಾಬನಿಗೆ ಸಲಾಂ ಮಾಡುವನು]

ಸೊಹ್ರಾಬ್ : ಕುದುರೆಯು ಸಿದ್ಧವಾಯಿತೇನು ?

ಕುದುರೆಯುವನು : ಆಗಿದೆ ಪ್ರಭು. (ಆಚೆಯ ಕಡೆ ಮರ್ಯಾದೆಯಿಂದ ತಲೆಬಾಗಿ, ಸಲಾಂ ಮಾಡಿ) ಸುಲ್ತಾನರು ಜನಾಬ್ !

ಸುಲ್ತಾನ್ : (ಸೊಹ್ರಾಬನ ಹತ್ತಿರ ಬಂದು ಭುಜದ ಮೇಲೆ ಕೈಯಿಟ್ಟು) ನನಗೆ ಸಮಾಚಾರ ತಿಳಿಸದೇ ಹೊರಟುಹೋಗಬಹುದೆ ? ಅನ್ಯಾಯ ಸೊಹ್ರಾಬ್.

ಸೊಹ್ರಾಬ್ : ಇಲ್ಲ, ತಾತ. . . .ಇದೇನು ಮಹಾವಿಚಾರ, ಜಾಗ್ರತೆ ಬಂದು ಬಿಡುತ್ತೇನೆ. ತಮಗೆ ತಿಳಿಸಿರೆಂದು ಅಮ್ಮನಿಗೆ ಹೇಳಿ ಬಂದೆ.

ಸುಲ್ತಾನ್ : ಇನ್ನೆರಡು ದಿನ ತಾಳು. ನಾನೇ ರುಸ್ತುಮರನ್ನು ಹುಡುಕಿಸಿ ಅವರಿಗೆ ಸಮಾಚಾರವನ್ನು ತಿಳಿಸುತ್ತೇನೆ. ಅವರು ಇಲ್ಲಿಗೆ ಬರುವ ಹಾಗೆ ಹೇಳಿ ಕಳುಹಿಸುತ್ತೇನೆ.

ಸೊಹ್ರಾಬ್ : ಆಗದು. ನಾನೇ ಅವರನ್ನು ಹುಡುಕಿ ತರಬೇಕು. ಅಷ್ಟಲ್ಲದೆ ನನಗೆ ಸಂತೋಷವಾಗದು. ಅವರ ವಿಚಾರದಲ್ಲಿ ನಡೆಸಿರುವ ಅಪಚಾರಕ್ಕೆ ತಕ್ಕ ರೀತಿಯಲ್ಲಿ ಕ್ಷಮಾಪಣೆ ಬೇಡಬೇಕಾದವರು ನಾವು.

ಸುಲ್ತಾನ್ : ಎಲ್ಲಿಗೆಂದು ಹೋಗುವೆ ? ಅವರು ಊರಲ್ಲಿಯೇ ಇದ್ದರೆ ಸರಿಯಾಯಿತು. ಇಲ್ಲವಾದರೆ ಎಲ್ಲೆಂದು ಹುಡುಕಿಕೊಂಡು ಹೋಗುವುದು ? ನಿಮ್ಮ ತಾಯಿ

ನಿನ್ನನ್ನಗಲಿರಲಾರಳು. ದಾರಿಯಲ್ಲಿ ಉದ್ದಕ್ಕೂ ನಮಗೆ ಶತ್ರುಗಳು. ಟಾರ್ಟರಿ ಇರಾನುಗಳಿಗೆ ಘೋರವಾದ ಯುದ್ಧ ನಡೆಯುವ ಸಂಭವವೂ ಇದೆಯೆಂದು ಕೇಳಿದ್ದೇನೆ. ಎಲ್ಲೆಲ್ಲೂ ಯುದ್ಧಸನ್ನದ್ಧರಾಗುತ್ತಿದ್ದಾರೆ. ಈ ಸಮಯವು ನಿನ್ನ ಕಾರ್ಯಕ್ಕೆ ಅನುಕೂಲವಾಗಿಲ್ಲ.

ಸೊಹ್ರಾಬ್ : ನಾನು ಇದನ್ನೇ ಅನುಕೂಲ ಮಾಡಿಕೊಳ್ಳಬೇಕೆಂದಿದ್ದೇನೆ, ತಾತ.

ಸುಲ್ತಾನ್ : ಹೇಗೆ ?

ಸೊಹ್ರಾಬ್ : ಹಿಂದಾರೂ ಹುಡುಕದಿರುವ ರೀತಿಯಲ್ಲಿ ನಾನು ತಂದೆಯವರನ್ನು ಹುಡುಕಿಕೊಂಡು ಹೋಗಿ ಅವರನ್ನು ಕಾಣುವೆನು. ರುಸ್ತುಮರ ಮಗನಿಗೆ ಅದೇನೂ ಹೆಚ್ಚಿನದಲ್ಲ.

ಸುಲ್ತಾನ್ : ಮತ್ತೆ ?

ಸೊಹ್ರಾಬ್ : ಯುದ್ಧರಂಗಗಳಲ್ಲಿ, ಹೋರಾಟಗಳ ಮಧ್ಯದಲ್ಲಿ, ರಣಭೇರಿಗಳ ಚೀರುಹೊಯಿಲಿನ ನಡುವೆ, ಹಿಂದಾರೂ ಯುದ್ಧಮಾಡದಿರುವ ರೀತಿಯಲ್ಲಿ ಯುದ್ಧಮಾಡಿ ಕೀರ್ತಿಪಡೆದು, ತಂದೆಯವರು ಎದುರಿಗಿದ್ದರೆ ಅವರು ತಮಗೆ ತಕ್ಕ ಮಗನೆಂದು ನನ್ನನ್ನು ಒಪ್ಪುವಂತೆ, ತಿಳಿದು ಸಂತೋಷದಿಂದ ಹಿಗ್ಗುವಂತೆ ಮಾಡಿ, ಅವರನ್ನು ಒಲಿಸುವೆನು. ಆಮೇಲೆ ವೃತ್ತಾಂತವನ್ನು ಹೇಳುವೆನು.

ಸುಲ್ತಾನ್ : ನೀನು ಶುದ್ಧ ಹುಡುಗ. ಪ್ರಪಂಚ ತಿಳಿಯದವನು. ಯುದ್ಧ ರಂಗದಲ್ಲಿ ತಂದೆಯನ್ನು ಕಾಣುವುದೆಂದರೇನು ? ಅದು ಕ್ಷೇಮವಲ್ಲ, ಬೇಡ. ಅಲ್ಲದೆ ಅಪಾಯವುಂಟು ; ನನ್ನ ಮಾತನ್ನು ಕೇಳು.

ಸೊಹ್ರಾಬ್ : ನಿಮ್ಮೆಲ್ಲರಿಗೂ ಕೀರ್ತಿ ತರುವುದು ನನ್ನ ಕರ್ತವ್ಯ. ತಮ್ಮ ಮಗನು ನಾಡಾಡಿ ಹುಡುಗರಂತಲ್ಲ ಎಂದು ಅವರು ಅರಿಯಬೇಡವೆ ? ಅವರೇ ಅಭಿಮಾನ ದಿಂದ ಹಿಗ್ಗುವಂಥ ಸಾಹಸಗಳನ್ನು ನಾನು ಮಾಡಲಾರೆನಾದರೆ ನಾನು ನಿಮ್ಮ ಮೊಮ್ಮಗನಾದೇನೆ ? ಅವರಿಗೆ ಸರಿಯಾದ ಮಗನಾದೇನೆ ?

ಸುಲ್ತಾನ್ : ನಿನ್ನಿಷ್ಟಬಂದಂತೆ ಮಾಡು. ಆದರೆ ಜೋಕೆಯಿಂದಿರು. ನಿನ್ನನ್ನು ಬಿಟ್ಟು ನಮಗಿನ್ನಾರೂ ಇಲ್ಲ. ನಿನ್ನ ತಾಯಿಯ ಹಂಬಲನ್ನೂ ಪಾಡನ್ನೂ ಮರೆಯ ಬೇಡ. ಜೊತೆಗೆ ಹತ್ತು ಜನರನ್ನು ಕರೆದುಕೊಂಡು ಹೋಗು.

ಸೊಹ್ರಾಬ್ : ಬೇಡ. ನಾನು ಏಕಾಕಿಯಾಗಿ ಹೋಗುವುದು ಉಚಿತ. ಆದರೂ ಸುಲೇಮಾನಿನ ಕಾಟ ಬಹಳವಾಗಿದೆ. ಆತನೊಬ್ಬನನ್ನು ಜೊತೆಯಲ್ಲಿ ಕರೆದು ಕೊಂಡು ಹೋಗುತ್ತೇನೆ. ಬೇರಾರೂ ಬೇಕಾಗಿಲ್ಲ. ತಂದೆಯವರ ಗುರುತನ್ನು ತಿಳಿಸಲು ಇರುತ್ತೇನೆ, ಎನ್ನುತ್ತಾನೆ. ಒಬ್ಬರಿಬ್ಬರಾದರೆ ನಾವು ಹೆಚ್ಚು ಸ್ವತಂತ್ರವಾಗಿರಬಹುದು. ನಿಮಗೆ ವ್ಯಾಕುಲ ಬೇಡಿ. ಜಾಗ್ರತೆಯಾಗಿ ಹಿಂದಿರುಗುವೆನು.

ಸುಲ್ತಾನ್ : ನಿನಗೆ ಜಯವಾಗಲಿ !

— ಸೊಹ್ರಾಬನು ಕುದುರೆ ಹತ್ತಿ ಹೊರಡುವನು —

ತೆರೆ

## ನೋಟ ೩

[ಸಾಮರ್ಕಂಡ್ ; ಸುಲೇಮಾನ್, ಸೊಹ್ರಾಬ್ ; ರಾಜಬೀದಿಯ ಪಕ್ಕದ ಒಂದು ಮೈದಾನದಲ್ಲಿ ; ಸಂಜೆಯ ಸಮಯ]

ಸೊಹ್ರಾಬ್ : ಸುಲೇಮಾನ್ ! ಎಂದೂ ಇಲ್ಲದ ನಿನ್ನ ಮುಖ ಬಾಡಿರುವುದೇಕೆ ? ನನ್ನ ಜೊತೆಯಲ್ಲಿದ್ದು ಸಾಕಾಯಿತೆ ? ತಿರುಗಾಟ ಬಹಳ ; ವಿಶ್ರಾಂತಿಯಿಲ್ಲ.

ಸುಲೇಮಾನ್ : ಇಲ್ಲ, ಇಲ್ಲ.

ಸೊಹ್ರಾಬ್ : ಮತ್ತೇಕೆ ಹೀಗೆ ? ಸರಿಯಾಗಿ ಮಾತನಾಡೆ. ಎಂದಿನಂತೆ ಸರಸವಿಲ್ಲ, ಹಾಸ್ಯವಿಲ್ಲ ; ನನ್ನ ವ್ಯಸನವನ್ನಳಿಸಿ ನಗುತ್ತ ನಗಿಸುತ್ತಿದ್ದ ನೀನು ಆಕಾಶವು ತಲೆಯ ಮೇಲೆ ಕವಿಚಿರುವವನಂತೆ ಇದ್ದೀಯೆ. ನಕ್ಕಾಗ ನನ್ನನ್ನು ಅಸಮಾಧಾನ ಗೊಳಿಸಕೂಡದು ಎಂಬಂತೆ ನಗುವೆ. ಹಿಂದಿನ ಉಲ್ಲಾಸ ಸ್ವಲ್ಪವೂ ಇಲ್ಲ. ಬೇಸರ ವಾಯಿತೆ ?

ಸುಲೇಮಾನ್ : ಇಲ್ಲ. ನಿಮ್ಮ ಜೊತೆಯಲ್ಲಿರುವಾಗ ನನಗೆ ಬೇಸರ ಹೇಗೆ ಬರಬೇಕು ? ನೀವು ಕಣ್ಣು ಸನ್ನೆಮಾಡಿದರೆ ನಿಮ್ಮ ಹಿಂದೆ ನಾನು ಸೈತಾನನ ಲೋಕಕ್ಕಾದರೂ ಸಂತೋಷವಾಗಿ ಬರಬಲ್ಲೆ.

ಸೊಹ್ರಾಬ್ : ಹಾಗಾದರೆ ?

ಸುಲೇಮಾನ್ : ಬೇರೇನೂ ಇಲ್ಲ. ನೀವು ನಿನ್ನೆ ಹೇಳಿದ ವಿಚಾರ.

ಸೊಹ್ರಾಬ್ : ಯಾವ ವಿಚಾರ ? ಓ—ನಾನು ಅಫ್ರಾಸಿಯಾಬರ ದಂಡಿಗೆ ಸೇರುವೆ ನೆಂದದ್ದೇ ?

ಸುಲೇಮಾನ್ : — — —

ಸೊಹ್ರಾಬ್ : ಇನ್ನೇನುಮಾಡಲಿ ಹೇಳು. ಬೇರೆ ದಾರಿ ಇಲ್ಲ. ನೀನು ಕಂಡ ಹಾಗೆ ಊರೂರು ಸುತ್ತಿಯಾಯಿತು. ಪಾಳೆಯ ಪಾಳೆಯವನ್ನೂ ಹುಡುಕಿಯಾಯಿತು. ತಂದೆಯವರು ಸಿಗಲಿಲ್ಲ. ಅವರು ಸೆಯಿಸ್ಥಾನವನ್ನು ಬಿಟ್ಟು ಹದಿನೈದು ದಿನ ಗಳಾದುವಂತೆ. ನಮಗೆ ಸಿಕ್ಕುವ ಬಗೆ ಹೇಗೆ ?

ಸುಲೇಮಾನ್ : ಶತ್ರುಗಳ ದಂಡಿನಲ್ಲಿ ಸೇರಿಕೊಂಡರೆ ಸಿಕ್ಕುವರೆ ?

ಸೊಹ್ರಾಬ್ : ಹೆಚ್ಚು ಸಂಭವವುಂಟು.

ಸುಲೇಮಾನ್ : ಹೆಚ್ಚು ಸಂಭವವುಂಟು ?

ಸೊಹ್ರಾಬ್ : ಉಂಟು. ಸೈನ್ಯಕ್ಕೆ ಬೇರೆ ಬೇರೆ ಪ್ರಾಂತಗಳ ಜನರು ಬರುತ್ತಾರೆ. ಯಾರಿಗಾದರೂ ರುಸ್ತುಮರ ಸಂಚಾರದ ವಿಷಯ ತಿಳಿದಿರುವ ಸಂಭವವುಂಟು.

ಸುಲೇಮಾನ್ : ತುರಾನಿಯವರು ನಿಮ್ಮನ್ನು ನಂಬುವರೆ ? ನೀವು ಇರಾನೀ ಕುಲದವರೆಂದು ಅರಿತರೆ ಅಫ್ರಾಸಿಯಾಬರು ನಿಮಗೆ ಆಶ್ರಯವನ್ನು ಕೊಡುವರೆ ? ಅವರಿಗೂ ಇರಾನಿನವರಿಗೂ ಯುದ್ಧ ; ಮಿತಿಮೀರಿದ ವೈರ. ನೀವು ರುಸ್ತುಮರ ಮಕ್ಕಳೆಂದು ಅವರಿಗೆ ತಿಳಿದರೆ ನಿಮಗೆ ಕ್ಷೇಮವೆ ?

ಸೊಹ್ರಾಬ್ : ನಿನಗೆ ಅಫ್ರಾಸಿಯಾಬರ ಗುಣ ತಿಳಿಯದು. ಅವರು ಉದಾರಿಗಳು —ಸ್ವತಃ ಶೂರರು. ಅವರೊಬ್ಬರಿಗೆ ಮಾತ್ರ ನನ್ನ ರಹಸ್ಯವನ್ನು ತಿಳಿಸುವೆನು. ದೇವರಮೇಲಾಣೆಯಿಡುವೆನು. ನನ್ನ ಉದ್ದೇಶವು ನೆರವೇರುವವರೆಗೂ ಪ್ರಾಣದ ಮೇಲೆ ಆಸೆ ತೊರೆದು ಅವರ ಧ್ವಜದಡಿಯಲ್ಲಿ ಯುದ್ಧಮಾಡಿ ಅವರಿಗೆ ಸೇವೆ ಮಾಡುವೆನು.

ಸುಲೇಮಾನ್ : ಬೆಂಕಿಯೆಂದು ತಿಳಿದು ತಿಳಿದು ಮುಂದೆ ನುಗ್ಗುವರೆ ?

ಸೊಹ್ರಾಬ್ : ಬೆಂಕಿಯೆಂದು ಹೆದರಿ ನಿಂತರೆ ಕೆಲಸವಾದೀತೆ ?

ಸುಲೇಮಾನ್ : ನಿಮ್ಮಷ್ಟು ತಿಳಿದವನು ನಾನಲ್ಲ. ಹಿತವನ್ನು ಬಯಸಿ ಮಾತ್ರ ಮಾತನಾಡಿದೆ.

ಸೊಹ್ರಾಬ್ : ಯೋಚನೆ ಬೇಡ, ಸುಲೇಮಾನ್. ನಿನ್ನೆಯ ಕಾಳಗದಲ್ಲಿ ಅಫ್ರಾಸಿಯಾಬರ ವಿಶ್ವಾಸವು ನನಗೆ ಸಂಪೂರ್ಣವಾಗಿ ದೊರೆತಿದೆ. ನನಗಾಗಿ ಅವರು ಏನು ಬೇಕಾದರೂ ಮಾಡುವೆನೆಂದು ವಾಗ್ದಾನ ಮಾಡಿದ್ದಾರೆ.

ಸುಲೇಮಾನ್ : ನಿಮ್ಮ ಕುಲಗೋತ್ರಗಳ ವಿಚಾರವನ್ನು ಹೇಳಿದಿರೊ ?

ಸೊಹ್ರಾಬ್ : ಆಗ ಏಕೆ ಹೇಳಲಿ ? ಬೇಕಾಗಿಲ್ಲ. ಅವರು ಕಪಟಿಗಳಲ್ಲ. ನಾನು ಬರುವಹಾಗಿದ್ದರೆ ತಮ್ಮ ಸೈನ್ಯದಲ್ಲಿ ಸರ್‌ದಾರ್‌ಗಿರಿ ಕೊಡುವೆನೆಂದು ಹೇಳಿದ್ದಾರೆ.

ಸುಲೇಮಾನ್ : ಹೇಗಾದರೂ ಲಾಭವೇ ಅವರಿಗೆ.

ಸೊಹ್ರಾಬ್ : ಎಂದರೆ ?

ಸುಲೇಮಾನ್ : ನೀವಿಬ್ಬರೂ ಶತ್ರುಪಕ್ಷದವರು ; ಒಬ್ಬರಿಗಿಂತ ಒಬ್ಬರು ಬಲ್ಲಾಳುಗಳು. ಹಗೆಯ ಪಕ್ಷಕ್ಕೆ ನೀವಿಬ್ಬರೂ ಸೇರಿದರೆ ಅವರಿಗೆ ನಷ್ಟವಲ್ಲವೆ ? ಶತ್ರುಬಲ ಹೆಚ್ಚಾಗುವುದಲ್ಲವೆ ? ಯಾರೊಬ್ಬರು ಇಲ್ಲವಾದರೂ ಅಫ್ರಾಸಿಯಾಬರಿಗೆ ಲಾಭವೇ ; ಇಬ್ಬರೂ ಇಲ್ಲವಾದರೆ ಇರಾನಿನ ಬಲ ಅವರಿಗೆ ಯಾವ ಲೆಕ್ಕದ್ದು ?

ಸೊಹ್ರಾಬ್ : ಖಾಸಾ ತಾವು ಬೆಂಗಾವಲಿಗಾಗಿ ನನ್ನನ್ನು ಇರಿಸಿಕೊಳ್ಳುವೆನೆಂದು ಹೇಳಿದ್ದಾರೆ.

ಸುಲೇಮಾನ್ : ನಿಮ್ಮ ಧೈರ್ಯ !

ಸೊಹ್ರಾಬ್ : ಈ ಅಧೈರ್ಯ ನಿನಗೆಲ್ಲಿಂದ ಬಂದಿತು, ಸುಲೇಮಾನ್ ? ಏಕೆ ಹಾಗೆನ್ನುವೆ ?

ಸುಲೇಮಾನ್ : ಏಕೇ ? ತಂದೆಯವರನ್ನು ಹುಡುಕುತ್ತಿರುವವರು—ಎರಡು ತಿಂಗಳ ಕಾಲ ದೇಶದೇಶವೂ ಅಲೆದು ಅವರನ್ನು ಕಾಣದಿರುವವರು—ಇನ್ನೊಂದು ತಿಂಗಳು ಮುಗಿಯುವುದರೊಳಗಾಗಿ ಅವರನ್ನು ಕರೆದುತರುವೆನೆಂದು ತಾಯಿಗೆ ಭಾಷೆ ಕೊಟ್ಟು ಬಂದಿರುವವರು—ರುಸ್ತುಮರ ಶತ್ರುಗಳ ಕಡೆ—ತಂದೆಯ ಜನರ ಪ್ರತಿಪಕ್ಷದಲ್ಲಿ ನಿಂತು, ಬೀಡಿಂದ ಬೀಡಿಗೆ ಅದೃಷ್ಟದಿಂದ ಅದೃಷ್ಟಕ್ಕೆ ಹೋಗುತ್ತಿದ್ದರೆ ನಿಮ್ಮ ಕೆಲಸವಾಗುವುದೆ ? ಯುದ್ಧದಲ್ಲಿ ಸಾವು ಬದುಕುಗಳು ನಮ್ಮಧೀನವಲ್ಲ.

ಸೊಹ್ರಾಬ್ : ಸಾಕು ಸುಲೇಮಾನ್ ! ನಾನೇನೂ ಹೇಡಿಯಲ್ಲ. ಸಾವಿಗೆ ಹೆದರುವನು ರುಸ್ತುಮರ ಹೆಸರನ್ನು ಬಾಯಿಯಲ್ಲಿ ಹೇಳುವುದಕ್ಕೂ ಯೋಗ್ಯನಲ್ಲ. ಆತನ ಮಗನೆಂತಾದಾನು ? ಇಷ್ಟರ ಮೇಲೆ ಅದೃಷ್ಟದಲ್ಲಿದ್ದುದಾಗಲಿ. ಅವರನ್ನು ಕಾಣದೆ ನಾನು ತಾಯಿಯವರ ಬಳಿಗೆ ಹಿಂದಿರುಗಿ ಹೋಗುವುದಿಲ್ಲ.

ಸುಲೇಮಾನ್ : ನಿಮ್ಮಲ್ಲಿ ಪ್ರಾಣವನ್ನಿಟ್ಟುಕೊಂಡು ಆಕೆ ಬದುಕಿದ್ದಾರೆ. ನೀವು ಅವರ ಕೈಬಿಡುವುದೆ ?

ಸೊಹ್ರಾಬ್ : ನನ್ನ ಮನಸ್ಸನ್ನು ಕಲಕಬೇಡ. ಅವರ ದುಃಖವನ್ನು ನಾನರಿಯೆನೆ ? ಅವರಿಗೇನು ಸಂತೋಷವಿದೆ? ನನ್ನಂಥ ಮಗನಿದ್ದು, ರುಸ್ತುಮರಂಥ ಪತಿಯಿದ್ದು, ಈ ಸುಡುವ ದುಃಖವಿರಬೇಕೆ ಅವರಿಗೆ ? ಅದನ್ನು ಹರಿಸದಿರುವ ಮಗನು ನಾನಿದ್ದೇನು ಪ್ರಯೋಜನ, ನೀನೇ ಹೇಳು ? ಒಂದೊಂದು ಸಲ ಅವರು ಬಿಡುವ ನಿಟ್ಟುಸಿರು ನನ್ನ ಎದೆಯನ್ನು ಸೀಳುವುದು. ಅದನ್ನು ನೋಡಿ—ಮಾತನಾಡುತ್ತಾಡುತ್ತ ಅವರ ಕಣ್ಣು ತುಂಬಿ ಗಂಟಲು ಬಿಗಿಯಾಗುವುದನ್ನು ನೋಡಿ—ನಾನು ಹೇಗೆ ಸಹಿಸಿಕೊಂಡಿರಲಿ ? ಇನ್ನೆಷ್ಟು ಕಾಲ ತಡೆದಿರಲಿ ? ಈಗ ಹೇಳು, ನನ್ನ ಸ್ಥಿತಿಯಲ್ಲಿ ನೀನೇ ಇದ್ದಿದ್ದರೆ ಏನು ಮಾಡುತ್ತಿದ್ದೆ ?

ಸುಲೇಮಾನ್ : ಚಿತ್ತ, ಪ್ರಭು—ಕ್ಷಮಿಸಬೇಕು. ಇನ್ನು ಪ್ರಶ್ನೆಮಾಡುವುದಿಲ್ಲ. ದೈವನಿಯಮವಿದ್ದಂತಾಗಲಿ.

ಸೊಹ್ರಾಬ್ : ನಾಳೆ ರಾಜರಲ್ಲಿಗೆ ಹೋಗುವೆನು. ಅವರ ಸೇವೆಯಲ್ಲಿ ಶ್ರಮಿಸುವೆನು. ಅವರ ಸೈನ್ಯದಲ್ಲಿ ಯುದ್ಧ ಮಾಡುವೆನು. ಅವರ ಮೂಲಕ, ಯುದ್ಧದ ಮೂಲಕ

ತಂದೆಯುವರನ್ನು ಕಾಣುವ ಪ್ರಯತ್ನ ಮಾಡಿ ನೋಡುವೆನು. ಅಲ್ಲಿಗೂ ಸಾಧ್ಯವಿಲ್ಲವಾದರೆ ಕಂಡೇ ಇದೆ !

ಸುಲೇಮಾನ್ : ಚಿತ್ತ.

ಸೊಹ್ರಾಬ್ : ಪ್ರಯತ್ನವು ನಮಗೆ ಸೇರಿದುದು ; ಉಳಿದುದು ನಮಗೆ ಸೇರಿದುದಲ್ಲ. ನಾಳೆ ಬೆಳಗ್ಗೆಯ ಹೊತ್ತಿಗೆ ನೀನೂ ಸಿದ್ಧವಾಗಿರು. ಈಗ ವಿಚಾರಿಸಿ ಕೊಂಡು ಬಾ ಹೋಗು ಬೆಳಗ್ಗೆ ರಾಜರು ಎಲ್ಲಿ ದರ್ಬಾರು ಮಾಡುವರೆಂದು.

— ಸುಲೇಮಾನನು ಹೋಗುವನು —

— ಸೊಹ್ರಾಬನು ನಿಟ್ಟುಸಿರು ಬಿಟ್ಟು ಈಚೆಕಡೆ ಹೋಗುವನು —

ತೆರೆ

## ನೋಟ ೪

[ಸಾಮರ್ಕಂಡ್. ಅರಮನೆಯ ಹೂದೋಟ. ಅಫ್ರಾಸಿಯಾಬನು ಸೊಹ್ರಾಬನ ಹೆಗಲ ಮೇಲೆ ಕೈಹಾಕಿಕೊಂಡಿದ್ದಾನೆ. ಇಬ್ಬರೂ ನಡೆದು ಹೋಗುತ್ತಿದ್ದಾರೆ.]

ಅಫ್ರಾಸಿಯಾಬ್ : ನೀನು ವಿಚಿತ್ರದ ಹುಡುಗ, ಸೊಹ್ರಾಬ್ !

ಸೊಹ್ರಾಬ್ : ನಿಮಗೆ ಹಾಗೆ ಕಾಣಿಸುತ್ತಿರಬಹುದು.

ಅಫ್ರಾಸಿಯಾಬ್ : ನೀನು ಬಂದ ಒಂದು ತಿಂಗಳು ಕಾಲದಲ್ಲಿ ನನ್ನ ಪ್ರಾಣದಂತಾಗಿರುವೆ. ನಿನ್ನನ್ನು ಒಂದು ಘಳಿಗೆ ಬಿಟ್ಟಿರಲು ಮನಸ್ಸು ಒಡಂಬಡದು. ಇಲ್ಲಿಷ್ಟು ಸುಖಗಳಿವೆ, ಪದವಿಯಿದೆ, ಸರ್ವಾಧಿಕಾರವಿದೆ; ನನ್ನ ಜೊತೆಯಲ್ಲಿದ್ದು ಕೊಂಡಿರ ಲೊಲ್ಲೆಯೇಕೆ ?

ಸೊಹ್ರಾಬ್ : ಕಾರಣವನ್ನು ಹಿಂದೆಯೇ ಹೇಳಿದ್ದೇನೆ;—ನನಗೆ ಸುಖ ಬೇಕಿಲ್ಲ. ತಮ್ಮ ಪ್ರೀತಿಯ ಯೋಧನಿಂದ ತಾವು ಯುದ್ಧರಂಗದಲ್ಲಿ ಸೇವೆ ತೆಗೆದುಕೊಳ್ಳಬೇಕು.

ಅಫ್ರಾಸಿಯಾಬ್ : ತಿಳಿದೂ ತಿಳಿದೂ ಕಷ್ಟವನ್ನೇಕೆ ಹುಡುಕಿಕೊಂಡು ಹೋಗಬೇಕು ? ಯುದ್ಧದಲ್ಲಿ ನನಗೆ ನೀನು ಅಮಿತವಾದ ಕೀರ್ತಿ ತರುವೆಯೆಂಬುದು ನಿಜ. ಆದರೆ ಅಲ್ಲಿನ ಸೇವೆಗಿಂತ ಇಲ್ಲಿನ ಸಹವಾಸವು ನನಗೆ ಹೆಚ್ಚು ಪ್ರಿಯವಾದುದು. ನನ್ನೊಡನಿರು. ಅದಾಗದಾದರೆ ನಿಮ್ಮ ತಾಯಿಯ ಬಳಿಗೆ ಹೋಗು.

ಸೊಹ್ರಾಬ್ : ಎರಡೂ ಆಗತಕ್ಕದ್ದಲ್ಲ. ತಮ್ಮ ಮಾತಿನ ನಂಬಿಕೆಯ ಮೇಲೆ ಇಲ್ಲಿ

ಈವರೆಗೂ ಇದ್ದೆ. ಈಗ ನನ್ನ ಕಾರ್ಯಗಳಿಗೆ ಅಡ್ಡಿ ತರುವ ಯತ್ನ ಮಾಡಿದರೆ ನಾನು ಈ ಕ್ಷಣವೇ ಇಲ್ಲಿಂದ ಹೊರಡಬೇಕಾಗುವುದು. ಒಬ್ಬನೇ ಏನೇನನ್ನು ಮಾಡಬಹುದೋ ಅದನ್ನೆಲ್ಲಾ ಪುನಃ ಮಾಡಿ ನೋಡುತ್ತೇನೆ.

ಅಫ್ರಾಸಿಯಾಬ್ : ನನ್ನಲ್ಲಿ ನಿನಗೆ ಸ್ವಲ್ಪವೂ ಪ್ರೀತಿಯಿಲ್ಲ, ಸೊಹ್ರಾಬ್. ಇಷ್ಟು ಅಲ್ಪಕಾಲದಲ್ಲಿ ಇಷ್ಟು ಪ್ರೀತಿ ನನಗೆ ಹಿಂದಾವಾಗಲೂ, ಯಾರ ವಿಷಯದಲ್ಲಿಯೂ ತೋರಿಲ್ಲ. ಎಲ್ಲೆಲ್ಲಿಗೂ ಬೇಹುಗಾರರನ್ನಟ್ಟಿದ್ದೇನೆ. ಅವರು ಸಮಾಚಾರವನ್ನು ತರುವವರೆಗೂ ಸ್ವಲ್ಪ ತಾಳು.

ಸೊಹ್ರಾಬ್ : ಅವೊಳಗೆ ನನ್ನ ಮೂರು ತಿಂಗಳ ಗಡುವು ಮೀರಿ ನಮ್ಮ ತಾಯಿಯು ಪ್ರಾಣಬಿಡುತ್ತಾಳೆ. ಆಮೇಲೆ ಯಾರಿಗೋಸ್ಕರ ಸುಖ ? ಯಾರಿಗೋಸ್ಕರ ಜೀವನ ? ಯಾರಿಗೋಸ್ಕರ ಸಂತೋಷ ?

ಅಫ್ರಾಸಿಯಾಬ್ : ನೀನಷ್ಟು ಹಟಮಾಡಿದರೆ ನಾನು ಹೇಳುವುದೇನಿದೆ ? ಇದೊ, ನಿನ್ನಿಷ್ಟದಂತೆ ಸೈನ್ಯದವರೊಡನೆ ಹೋಗು. ನಿನ್ನನ್ನು ಪ್ರೀತಿಸುತ್ತಿರುವ ನಮ್ಮನ್ನೆಲ್ಲ ಹಿಂದುಳಿಸಿ ಹೋಗು. ನಮ್ಮಾಸೆ ಹಿತಾಕಾಂಕ್ಷೆಗಳನ್ನು ಭಂಗಪಡಿಸುವುದಕ್ಕೇ ನೀನು ನಿಶ್ಚಯ ಮಾಡಿರುವಾಗ ನಾವಿನ್ನೇನು ಮಾಡಬಲ್ಲೆವು—ನಿನ್ನ ಮನಸ್ಸು ಕಲ್ಲು.

ಸೊಹ್ರಾಬ್ : ಅಲ್ಲವೆಂದು ನಿಮಗೆ ಗೊತ್ತು. ತಾವು ತೋರಿರುವ ಪ್ರೇಮ ವಿಶ್ವಾಸಗಳು ಸಾಮಾನ್ಯವಾದುವೆ ? ನಾನು ಎಷ್ಟು ಕೃತಜ್ಞನಾಗಿದ್ದರೆ ತಾನೇ ಅವನ್ನು ತೀರಿಸಿಯೇನು ? ಆದರೂ ಮಾಡುವುದೇನು ? ಈಗ ನನ್ನ ಸ್ಥಿತಿ ಹಾಗಿದೆ. ಬೇರಾವ ಭಾವನೆಗೂ, ವೃತ್ತಿಗೂ—ಕೊನೆಗೆ ಉಪಕಾರ ಸ್ಮರಣೆಗೂ—ಸಮಯವಿಲ್ಲ ಹುಜೂರ್ ; ಅವಕಾಶವಿಲ್ಲ. ಅವರನ್ನು ಕಾಣಬೇಕು, ಇಲ್ಲವಾದರೆ ಯುದ್ಧದಲ್ಲಿ ಮಡಿಯಬೇಕು.

ಅಫ್ರಾಸಿಯಾಬ್ : ಮಡಿದುದರಿಂದ ಏನು ಫಲ ? ನಿಮ್ಮ ತಂದೆಯವರನ್ನು ಸೇರಿದ ಹಾಗಾಯಿತೆ ? ನಿಮ್ಮ ತಾಯಿಯ ಮನಸ್ಸನ್ನು ಸಂತೋಷಪಡಿಸಿದ ಹಾಗಾಯಿತೆ ?

ಸೊಹ್ರಾಬ್ : ನನ್ನ ಕರ್ತವ್ಯವನ್ನು ಮಾಡಿದ ಹಾಗಾದರೂ ಆಯಿತು.

ಅಫ್ರಾಸಿಯಾಬ್ : ನಿನಗಾರು ಹೇಳುವವರು ? ನಿನ್ನ ಎದೆಯೂ ಮನಸ್ಸೂ ಏಕಮುಖವಾಗಿವೆ. ನಿನ್ನ ದೃಷ್ಟಿ ಒಂದೇಕಡೆ ಚಲಿಸದೆ, ಬೇರೊಂದನ್ನು ನೋಡದೆ ಇದೆ. ಹೋಗಿ ಬಾ—ಮರೆಯದಿರು ನಿನ್ನ ಸುಖಸಂತೋಷಗಳು ನಮ್ಮವೆಂದು; ನಿನ್ನ ಅಸುಖದಿಂದ ನಮಗೆ ಅಸುಖವೆಂದು.

ಸೊಹ್ರಾಬ್ : ಪರಮಾನುಗ್ರಹ—ಅಪ್ಪಣೆಕೊಡಬೇಕು ;

ಅಫ್ರಾಸಿಯಾಬ್ : ಮತ್ತಿನ್ನೇನು ಹೇಳಲಿ, ಸೊಹ್ರಾಬ್ ! ದೇವರು ನಿನಗೆ ಒಳ್ಳೆಯ

ದನ್ನು ಮಾಡಲಿ. ನಿನ್ನ ಮನಸ್ಸಿಗೆ ಶಾಂತಿ ಸಮಾಧಾನಗಳು ಬೇಗ ಬರಲಿ, ನಿನ್ನಿಷ್ಟ ನೆರವೇರಲಿ. ಆದರೂ ಸೊಹ್ರಾಬ್—

ಸೊಹ್ರಾಬ್ : ಏನು ?

ಅಫ್ರಾಸಿಯಾಬ್ : ನನ್ನ ಮನಸ್ಸು ನಿನ್ನನ್ನು ಸಮಾಧಾನದಿಂದ ಬೀಳ್ಕೊಳ್ಳುತ್ತಿಲ್ಲ.

ಸೊಹ್ರಾಬ್ : ಬಡವನೊಬ್ಬನ ವಿಚಾರದಲ್ಲಿ ತಮಗೇಕಿಷ್ಟು ವ್ಯಥೆ ?

ಅಫ್ರಾಸಿಯಾಬ್ : ಆಪ್ತವಾದ ವಸ್ತುವಿಗೆ ಅಪಾಯ ತಟ್ಟೀತೆಂಬ ಶಂಕೆ ತೋರಿದರೆ ವ್ಯಥೆಯಲ್ಲವೆ ?

ಸೊಹ್ರಾಬ್ : ನೀವು ಯೋಚಿಸಬೇಡಿ. ನನ್ನ ಸ್ವರ್ಗದ ಕಡೆ ನಾನು ಪ್ರಯಾಣ ಮಾಡುತ್ತಿದ್ದೇನೆ. ನನ್ನ ದೇವರನ್ನರಸಿ ಹೋಗುತ್ತಿದ್ದೇನೆ. ನನಗೇನು ಭೀತಿ ? ನಿಮಗೇಕೆ ಶಂಕೆ ? . . . . ದೇವರೇ, ಇಷ್ಟು ಜನರ ಪ್ರೀತಿಗೆ ನನ್ನನ್ನು ಯೋಗ್ಯನನ್ನಾಗಿ ಮಾಡು.

ಅಫ್ರಾಸಿಯಾಬ್ : ಕೃತಾರ್ಥನಾಗು, ಸೊಹ್ರಾಬ್—ಹೋಗಿಬಾ.

– ಮೆಲ್ಲನೆ ಬೀಳ್ಕೊಂಡು ಹೊರಡುವನು –

– ಚಾರನೊಬ್ಬನನ್ನು ಹಿಂದಿರಿಸಿಕೊಂಡು ಸುಲೇಮಾನನ ಪ್ರವೇಶ –

ಸುಲೇಮಾನ್ : ಅದೇರ್‌ಬೈಜಾನಿನಿಂದ ನಿಮಗೆ ವರ್ತಮಾನ ಬಂದಿದೆ.

ಸೊಹ್ರಾಬ್ : ತಂದಿರುವವರು ಯಾರು ?

ಚಾರ : (ನೆಲಮುಟ್ಟಿ ಸಲಾಮುಮಾಡಿ) ನಾನು, ಪಾದದ ಗುಲಾಮ. (ಕಾಗದವನ್ನು ಕೊಡುವನು)

ಸೊಹ್ರಾಬ್ : (ಕಾಗದವನ್ನು ಓದಿಕೊಂಡು ಹಾಗೇ ಮೆಲ್ಲಮೆಲ್ಲಗೆ, ಅರೆಗಟ್ಟಿಯಾಗಿ) 'ಎರಡು ತಿಂಗಳು ಕಾಲ ಆಗಿಹೋಯಿತು' . . . ನಿಜ ಅಮ್ಮ, ಆದರೆ ಮಾಡಿದ ಪ್ರತಿಜ್ಞೆಯು ನೆರವೇರಬೇಕು. ಇನ್ನೂ ಒಂದು ತಿಂಗಳ ಕಾಲ ಉಳಿದಿದೆ. ಅಷ್ಟರ ಅವಧಿಯಲ್ಲಿ ಬೇರೇ ಪ್ರಪಂಚವನ್ನೇ ಸೃಷ್ಟಿಸಬಹುದಲ್ಲವೆ ? ನಿಮ್ಮ ಕೊರಗನ್ನು ಬೇರೆ ಹೇಗೆ ನಿವಾರಿಸಬಲ್ಲೆ ? . . .

'ನನ್ನ ಬಾಳಿಗೆ ಕತ್ತಲು ಕವಿಯಿಸಬೇಡ, ಕಂದ, ಹೊರಟು ಬಾ. ಒಂದು ನಿಮಿಷವನ್ನು ಕಳೆಯುವುದು ಒಂದು ಯುಗವಾಗಿ ಕಾಣುತ್ತಿದೆ' . . . ಅಮ್ಮ, ನನಗೂ ? ಮೊದಲೇ ತಿಳಿಸದಾದಿರೇ ! ವಿಷಯವನ್ನು ಮರೆಮಾಜಿದರೇ! ಚಿಂತೆಯಿಲ್ಲ. ಆದುದಾಗಿ ಹೋಯಿತು, ನಾನು ರುಸ್ತುಮರ ಮಗನು. ನಿಮ್ಮ ಆಶೀರ್ವಾದ ಬಲವಿರುವಾಗ, ಇಷ್ಟು ತೀವ್ರವಾದ ಆಶೆ ಪ್ರೀತಿಗಳು ನನಗಿರುವಾಗ, ನಾನು ತಂದೆಯುವರನ್ನು ಕಾಣದೆ ಹೋದೇನೆ ? ಭಯವೇನು ಬಂತು ?

'ಅವರು ಬಡವಳ ಕೈಬಿಟ್ಟರು. ನೀನಾದರೂ ಹತ್ತಿರವಿರುವೆಯೆಂದು

ನಂಬಿ—ಅಯ್ಯೊ ಮರುಳಾಸೆಯೆ !—ಅವರಿಗೆ ದ್ರೋಹವಾಚರಿಸಿದೆ. ಈಗ ನೀನೂ ಕಣ್ಮರೆಯಾಗಿರುವೆ, ಮಗು'. . . ಎರಡು ದಿನ ತಾಳಿಕೊಂಡಿರಿ, ತಾಯಿ; ಖಂಡಿತವಾಗಿ ಅವರನ್ನು ಕರೆತರುತ್ತೇನೆ, ನಿಮ್ಮ ಪಾದಸೇವೆ ಮಾಡುತ್ತೇನೆ. ಅವರ ಕ್ಷಮಾಪಣೆಯನ್ನು ಪಡೆದು, ನೀವಿಬ್ಬರೂ ಸೇರಿ ಸುಖವಾಗಿರುವುದನ್ನು ಕಣ್ಣುತುಂಬ ನೋಡಿ ಪುನಃ ನಿಮ್ಮ ಪುಣ್ಯಗರ್ಭದಲ್ಲಿ ಹುಟ್ಟಿದಂತೆ ಸುಖಿಸುತ್ತೇನೆ. ಎಂಟು ವಾರಗಳೇ ಕಳೆದುವಂತೆ . . . . (ಚಾರನನ್ನು ಕುರಿತು) ನಾನಿಲ್ಲಿರುವುದು ಅವರಿಗೆ ಹೇಗೆ ತಿಳಿಯಿತು ?

ಚಾರ : ಜನರ ಬಾಯಲ್ಲಿನ ಮಾತು.

ಸೊಹ್ರಾಬ್ : ಅಮ್ಮನವರನ್ನು ನೀನು ಕಂಡಾಗ ಅವರು ಹೇಗಿದ್ದರು ?

ಚಾರ : ನೀವು ಹೋದಾರಭ್ಯ ಅವರು ಊಟ ಉಪಚಾರಗಳನ್ನು ಒಲ್ಲರು. ಯಾರ ಸಮಾಧಾನವನ್ನೂ ಕೇಳರು. ನಿಮ್ಮನ್ನು ಹಿಂಬಾಲಿಸಿ ತಾವೇ ಹೊರಡುವೆವೆಂದು ಮೂರ್ಖತನ ಮಾಡಿದರು. ಸುಲ್ತಾನರು ಬಹುವಾಗಿ ಸಂತೈಸಿ ಈ ಸಮಾಚಾರಕ್ಕೆ ಉತ್ತರ ತರಲೆಂದು ನನ್ನನ್ನು ಕಳುಹಿಸಿದರು, ಸ್ವಾಮಿ. ಅವರು ಬಲು ಬಡವಾಗಿ ಹೋಗಿದ್ದಾರೆ.

ಸೊಹ್ರಾಬ್ : ಸರಿ. ಇನ್ನೇನು ಹೇಳಿದರು ?

ಚಾರ : ಕಂಡತಕ್ಷಣ ಕರೆದುಕೊಂಡು ಬಾ ಎಂದರು. ಎಂದವರು ಒಡನೆಯೇ, ಬೇಡ ಅವನು ಬರುವುದಿಲ್ಲ, ಅವನು ಹೇಗಿದ್ದಾನೆ, ಸುಖವಾಗಿದ್ದಾನೆಯೆ ಇಲ್ಲವೆ ? ಕಾರ್ಯವು ಎಷ್ಟರವರೆಗೆ ನೆರವೇರಿದೆ ? ವಿಚಾರಿಸಿಕೊಂಡು ತಮ್ಮ ಜ್ಞಾಪಕವನ್ನು ಕೊಟ್ಟುಬಾರೆಂದು ಅಪ್ಪಣೆಕೊಡಿಸಿದರು.

ಸೊಹ್ರಾಬ್ : ಇರಲಿ ಹೋಗು. (ಕೈಬೆರಳಿಂದ ಉಂಗುರವನ್ನು ತೆಗೆದು) ಈ ಉಂಗುರವನ್ನು ತೆಗೆದುಕೊಂಡು ಹೋಗಿ ಅವರಿಗೆ ನನ್ನ ನಮಸ್ಕಾರಗಳೊಡನೆ ಕೊಡು . . . . ಬೇಡ ನಿಲ್ಲು. . . . ಸುಲೇಮಾನರೂ ನಿನ್ನೊಡನೆ ಬರುವರು . . . . ಇರುಳೂ ಹಗಲೂ ನನಗೂ ಅವರ ಧ್ಯಾನವೇ ಇದೆಯೆಂದೂ, ಬೇಸಗೆ ಆರಂಭವಾಗುವುದರೊಳಗಾಗಿ ನಾನಲ್ಲಿಗೆ ಹಿಂದಿರುಗಿ ಬರುವೆನೆಂದೂ ಹೇಳು. ಬಾಕಿ ವಿಚಾರಗಳನ್ನು ಸುಲೇಮಾನರು ತಿಳಿಸುವರು.

ಸುಲೇಮಾನ್ : ಇದೇನು ಸೊಹ್ರಾಬ್ ? ನನ್ನನ್ನು ನಿಮ್ಮ ಬಳಿಯಲ್ಲಿ ಇರಗೊಡಿಸ ಕೂಡದೆಂದು ಈ ಹೂಟ ಹೂಡಿದಿರಾ ? ನಾನು ಹೋಗುವುದಿಲ್ಲ.

ಸೊಹ್ರಾಬ್ : ಸುಲೇಮಾನ್, ನನ್ನ ಮಾತನ್ನು ಪೂರ್ತ ಕೇಳು. ತಾಯಿಯವರನ್ನು ಸಂತೈಸುವುದಕ್ಕೆ ಬೇರೆ ಯಾರಿಂದಲೂ ಸಾಧ್ಯವಿಲ್ಲ. ಇನ್ನೊಂದು ತಿಂಗಳು ಮಾತ್ರ ಆಕೆಯ ಹತ್ತಿರವಿದ್ದುಕೊಂಡಿದ್ದು ನನಗಾಗಿ ಆಕೆಗೆ ಧೈರ್ಯ ಹೇಳುತ್ತಿರು. ಅದೃಷ್ಟವಿದ್ದರೆ—ಆ ಶುಭಯೋಗವಿದ್ದರೆ—ಅಷ್ಟರೊಳಗಾಗಿ ತಂದೆಯವರೊಡನೆ

ಊರಿಗೆ ಬರುವೆನು. ಎಲ್ಲವೂ ಸರಿಯಾಗುವುದು. ಸುಖದಿಂದ ಕೊನೆಗೊಳ್ಳುವುದೆಲ್ಲವೂ ಒಳ್ಳೆಯದೆ. ಇಲ್ಲವಾದರೆ . . . ಇನ್ನೇನು ಹೇಳಲಿ ?—ಕೊನೆಯ ಬಾರಿ ನನಗೆ ಉಪಕಾರ ಮಾಡಿದಂತಾಗುವುದು. ಆಕೆಯ ಶುಶ್ರೂಷೆಯನ್ನು ನಿನಗೊಪ್ಪಿಸಿ ಹೋಗುವೆನು. ದಯವಿಟ್ಟು ಇಷ್ಟು ಮಾಡು ಹೋಗು.

– ಸುಲೇಮಾನನು ಕಷ್ಟದಿಂದ ಬೀಳ್ಕೊಂಡು ಹೋಗುವನು. ಚಾರನೂ ಹೋಗುವನು –

- ಅಫ್ರಾಸಿಯಾಬನ ಪುನಃ ಪ್ರವೇಶ –

ಅಫ್ರಾಸಿಯಾಬ್ : ಮರೆತುಬಿಟ್ಟಿದ್ದೆ ಸೊಹ್ರಾಬ್. ಪೆರಾನ್‌ವೈಸಾ ಅವರಿಗೆ ಸೂಕ್ಷ್ಮವಾಗಿ ಎಲ್ಲವನ್ನೂ ತಿಳಿಸಿದ್ದೇನೆ. ಅವರನ್ನು ಕೇಳದೆ ನೀನು ಯಾವುದನ್ನೂ ಮಾಡಬೇಡ. ಅನುಭವದಲ್ಲಿಯೂ ವಯಸ್ಸಿನಲ್ಲಿಯೂ ಅವರು ಹಿರಿಯರು. ನಮ್ಮ ಹಿತಾಕಾಂಕ್ಷಿಗಳು. ಆತನು ಹೇಳುವುದನ್ನು ತಂದೆಯ ಮಾತಿನಂತೆ ಲಾಲಿಸು. ನಿನಗೆ ಮಂಗಳವಾಗಲಿ !

ತೆರೆ

## ನೋಟ ೫

[ಯುದ್ಧರಂಗದಲ್ಲಿ ತುರಾನೀ ಪಾಳೆಯ. ಪೆರಾನ್‌ವೈಸಾ ಅವರ ಡೇರೆ. ಒಳಗೆ ಪೆರಾನ್‌ವೈಸಾ ಮಲಗಿದ್ದಾರೆ. ಸೊಹ್ರಾಬ್ ಹೊರಗಿನಿಂದ ಬಂದು ಮೆಲ್ಲಗೆ ಒಳಕ್ಕೆ ಹೋಗಲು ಯತ್ನಿಸುತ್ತಿರುವನು. ಎಚ್ಚತ್ತ ಪೆರಾನ್‌ವೈಸಾ ಈಚೆ ಕಡೆಗೆ ಹೊರಳಿ,]

ಪೆರಾನ್‌ವೈಸಾ : ಯಾರದು ?

ಸೊಹ್ರಾಬ್ : ನಾನು.

ಪೆರಾನ್‌ವೈಸಾ : ನಾನೆಂದರೆ ?

ಸೊಹ್ರಾಬ್ : ನಾನು ಸೊಹ್ರಾಬ್.

ಪೆರಾನ್‌ವೈಸಾ : ಇದೇನು ಸೊಹ್ರಾಬ್, ಇಷ್ಟು ಹೊತ್ತಿನಲ್ಲಿ ? ಆಗಲೆ ಬೆಳಗಾಗಿ ಹೋಯಿತೆ ? ನಾನು ಕಡೆಯ ಜಾವವೇ ಕಳೆದಿಲ್ಲವೆಂದುಕೊಂಡಿದ್ದೆ.

ಸೊಹ್ರಾಬ್ : ನೀವು ಹೇಳುವುದು ನಿಜ. ಬೆಳಗಾಗುವುದಕ್ಕೆ ಇನ್ನೂ ಹೊತ್ತಿದೆ.

ಪೆರಾನ್‌ವೈಸಾ : ಹಾಗಾದರೆ ಶತ್ರುಗಳು ಸಿದ್ಧರಾಗಿದ್ದಾರೆಯೊ ? ಅಥವಾ ನಮ್ಮನ್ನು ಮುತ್ತುವ ಪ್ರಯತ್ನ ನಡೆಯುತ್ತಿದೆಯೊ ?

ಸೊಹ್ರಾಬ್ : ಎರಡೂ ಇಲ್ಲ. ಎಲ್ಲರೂ ಸುಖವಾಗಿ ನಿದ್ರಿಸುತ್ತಿದ್ದಾರೆ. ನನಗೆ ಮಾತ್ರ ನಿದ್ರೆ ಬರಲಿಲ್ಲ. ರಾತ್ರಿಯೆಲ್ಲಾ ಕಣ್ಣುರೆಪ್ಪೆ ಹೊಡೆಯುವುದಕ್ಕೂ ಆಗಲಿಲ್ಲ. ತಮ್ಮಲ್ಲಿ ಆಲೋಚನೆಗೆ ಬಂದೆ.

ಪೆರಾನ್‌ವೈಸಾ : ಅಂಥ ಆಲೋಚನೆಯೇನು, ಈ ಹೊತ್ತಿನಲ್ಲಿ ? ಬೆಳಗಾದ ಮೇಲೆ ಮಾಡುವುದಕ್ಕೆ ಆಗುತ್ತಿರಲಿಲ್ಲವೆ ? ಕುಳಿತುಕೊ ಬಾ ಸೊಹ್ರಾಬ್, ನಿಂತೇ ಇರುವೆಯಲ್ಲ ;—ನಿನ್ನ ಹುಚ್ಚು ಹೋಗಿಲ್ಲವೆಂದು ಕಾಣುವುದು ?

ಸೊಹ್ರಾಬ್ : ಹೇಗೆ ಹೋದೀತು ಜನಾಬ್ ? ನಿಮಿಷ ನಿಮಿಷವೂ ಹೆಚ್ಚುತ್ತಿದೆ.

ಪೆರಾನ್‌ವೈಸಾ : ಈಗ ಏನುಮಾಡಬೇಕೆಂದಿರುವೆ ? ನನ್ನಿಂದ ನಿನಗೆ ಯಾವ ಸಹಾಯವಾಗಬೇಕು ?

ಸೊಹ್ರಾಬ್ : ನವಾಬರು ಹೇಳಿದ್ದಾರೆ, ಯಾವುದನ್ನೂ ತಮ್ಮನ್ನು ಕೇಳಿಯೇ ಮಾಡಬೇಕೆಂದು. ತಂದೆಯವರಂತೆ ತಮ್ಮ ಮಾತನ್ನು ಲಾಲಿಸಬೇಕೆಂದು.

ಪೆರಾನ್‌ವೈಸಾ : ನನ್ನ ಪ್ರೀತಿಯ ವಿಚಾರದಲ್ಲಿ ನಿನಗೆ ಸಂದೇಹವೆ ಸೊಹ್ರಾಬ್ ? ನಿನ್ನ ಮನಸ್ಸಿನಲ್ಲಿರುವುದೇನು, ಬಾಯಿ ಬಿಟ್ಟು ಹೇಳು.

ಸೊಹ್ರಾಬ್ : ನಿಮಗೆ ಗೊತ್ತಿದೆ ;—ನಿಮ್ಮ ಸೈನ್ಯದಲ್ಲಿ ನಾನು ಸೇರಿಕೊಂಡಂದಿನಿಂದ ರಣಪ್ರಯಾಣದ ಸಮಯದಿಂದ ಹಿಡಿದು ಈವರೆಗೂ ನಾನು ಯಾವ ರೀತಿ ಯುದ್ಧಮಾಡಿ ನಿಮ್ಮ ಧ್ವಜಕ್ಕೆ ಕೀರ್ತಿಯನ್ನೂ ಜಯವನ್ನೂ ತಂದಿರುವೆನೆಂಬುದು. ವಯಸ್ಸಿನಲ್ಲಿ ಹುಡುಗನಾದರೂ, ವಯಸ್ಕನಾದ ಯೋಧನಂತೆ ಹೇಗೆ ಕಾದಿ, ಯುದ್ಧವಾದ ಮೇಲೆ ಯುದ್ಧದಲ್ಲಿ ಇರಾನಿಯವರನ್ನು ಸೋಲಿಸಿ ನಿಮಗೆ ಜಯವನ್ನೂ ಅವರಿಗೆ ಭೀತಿಯನ್ನೂ ಹೇಗೆ ಉಂಟುಮಾಡಿರುವೆನೆಂಬುದು.

ಪೆರಾನ್‌ವೈಸಾ : ಈ ಒಕ್ಕಣೆಯನ್ನೆಲ್ಲ ನನಗೇಕೆ ಹೇಳಬೇಕು, ನಾನರಿಯೆನೆ ? ವಿಷಯವೇನು ?

ಸೊಹ್ರಾಬ್ : ಈ ಸೈನ್ಯಕ್ಕೆ ನಾನೇಕೆ ಸೇರಿಕೊಂಡೆನೆಂಬುದರ ರಹಸ್ಯವನ್ನು ಖಾವಂದಿರು ತಮಗೆ ಹೇಳಿರುವೆನೆಂದು ನನಗೆ ಹೇಳಿದ್ದರು.

ಪೆರಾನ್‌ವೈಸಾ : ಹುಂ.

ಸೊಹ್ರಾಬ್ : ನಾನಿಷ್ಟು ಮಾಡುತ್ತಿರುವುದೂ ನನ್ನ ತಂದೆ ರುಸ್ತುಮರನ್ನು ಕಾಣುವುದಕ್ಕಾಗಿ. ಅವರನ್ನು ಕಂಡು ಮೂರು ತಿಂಗಳೊಳಗಾಗಿ ಅವರನ್ನು ನಮ್ಮ ತಾಯಿಯ ಬಳಿ ಒಯ್ಯುವೆನೆಂದು ಭಾಷೆ ಕೊಟ್ಟು ಬಂದಿದ್ದೇನೆ.

ಪೆರಾನ್‌ವೈಸಾ : ರುಸ್ತುಮರು ಸಿಕ್ಕಿಲ್ಲವಲ್ಲ ?

ಸೊಹ್ರಾಬ್ : ಆದರೆ ಇನ್ನೊಂದು ವಾರದೊಳಗಾಗಿ ನನ್ನ ಅವಧಿ ಮುಗಿದು ಹೋಗುವುದು.

ಪೆರಾನ್‌ವೈಸಾ : ಅಪ್ಪಾ, ರುಸ್ತುಮರು ಹಿಂದಿನಂತಲ್ಲ ; ಹಿಂದೆ ಅವರಿಲ್ಲದ ಯುದ್ಧ ರಂಗವೇ ಇರುತ್ತಿರಲಿಲ್ಲ. ಅವರು ನಿಂತ ಯುದ್ಧದಲ್ಲಿ ಅವರೇ ಮೊದಲಿಗರು. ಆ ಕಾಲ ಹೋಯಿತು. ಈಗ ಅವರನ್ನು ಕಂಡೇ ಎಷ್ಟೋ ವರ್ಷಗಳಾದುವು. ಅವರಿಗೂ ಅವರ ರಾಜರಿಗೂ ಯಾವ ಮನಸ್ತಾಪ ಬಂದಿದೆಯೊ, ಅನಿಷ್ಟವಾದ ಮುಪ್ಪು ತಮ್ಮ ಹತ್ತಿರಕ್ಕೂ ಬರುತ್ತಿರುವುದೆಂಬ ಶಂಕೆಯೊ, ಬೇರಾವ ಕಾರಣ ದಿಂದಲೊ ಅವರು ರಂಗಕ್ಕೆ ಬರುವುದನ್ನೇ ಬಿಟ್ಟಿರುವರು. ಈಗ ಅವರನ್ನು ಎಲ್ಲೆಂದು ಹುಡುಕುವೆ ? ಅವರೇ ಶತ್ರುಗಳ ಕಡೆ ನಿಂತು ಯುದ್ಧಮಾಡುತ್ತಿದ್ದರೆ ನಮಗೆ ಜಯವೆಂದರೇನು ?

ಸೊಹ್ರಾಬ್ : ಅದೆಲ್ಲಾ ಸರಿಯೆ. ನಾನು ರಾತ್ರಿಯೆಲ್ಲಾ ಯೋಚನೆಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದೇನೆ.

ಪೆರಾನ್‌ವೈಸಾ : ಎಂತಹ ತೀರ್ಮಾನ ?

ಸೊಹ್ರಾಬ್ : ಈ ದಿನ ಸೈನ್ಯಗಳಿಗೆ ಸಂಕುಲ ಯುದ್ಧ ಬೇಡ. ತಾವು ಒಪ್ಪುವು ದಾದರೆ, ದಯವಿಟ್ಟು ಅಷ್ಟುಮಾತ್ರ ನಡೆಯಿಸಿಕೊಡುವಿರಾದರೆ, ನನ್ನ ಪರವಾಗಿ ಶತ್ರುಗಳಲ್ಲಿಗೆ ಹೋಗಿ, ನಮ್ಮ—ತುರಾನಿಯವರ—ಪರವಾಗಿ ಒಂದು ಪ್ರಕಟನೆ ಯನ್ನು ಮಾಡಬೇಕು.

ಪೆರಾನ್‌ವೈಸಾ : ಏನೆಂದು—ನೀನು ರುಸ್ತುಮರ ಮಗನೆಂದೊ ? ನಿನಗೆ ಅವರ ಸಮಾಚಾರ ಬೇಕಾಗಿದೆಯೆಂದೊ ?

ಸೊಹ್ರಾಬ್ : ಉಹುಂ—ಹಾಗಲ್ಲ—ಉಭಯ ಸೈನ್ಯಗಳೂ ಇಂದು ವಿಶ್ರಮಿಸಿ ಕೊಳ್ಳಲಿ. ಟಾರ್ಟರಿ ಪರವಾಗಿ ನಾನು ಇರಾನಿ ಯೋಧರಾರು ಬಂದರೂ ಅವರೆದುರಿಗೆ ನಿಂತು ದ್ವಂದ್ವಯುದ್ಧಕ್ಕೆ ಸಿದ್ಧನಾಗಿರುವೆನೆಂದೂ ಕಾಳೆಗಕ್ಕೆ ಅವರಲ್ಲಿನ ವೀರಶ್ರೇಷ್ಠರನ್ನು ಕೂಗಿ ಕರೆಯುತ್ತಿರುವೆನೆಂದೂ, ಯಾವ ಆಯುಧ ದಿಂದ ಬೇಕಾದರೂ ಕಾಳೆಗಮಾಡಲು ಸಿದ್ಧನಿರುವೆನೆಂದೂ, ಅವರ ಪರವಾಗಿ ಎದೆಯಿರುವ ವೀರರಾಳನ್ನು ಆರಿಸಿ ಅವರು ರಂಗಕ್ಕೆ ಕಳುಹಿಸಬಹುದೆಂದೂ, ನೆರೆದಿರುವ ಸೈನ್ಯಗಳೆದುರಿನಲ್ಲಿ ಇಂದೇ ಕಾಳೆಗವು ನಡೆಯುವುದೆಂದೂ ಪ್ರಕಟಿಸ ಬೇಕು.

ಪೆರಾನ್‌ವೈಸಾ : ನಿನ್ನ ಹುಚ್ಚು ಮಿತಿಮೀರಿತು. ಇದೇನು ವಿಪರೀತ ? ಇದರಿಂದ ನಿನಗೆ ಬರುವ ಲಾಭವೇನು ?

ಸೊಹ್ರಾಬ್ : ಎಷ್ಟು ವಿಧದಲ್ಲಿ ಹುಡುಕಿದರೂ ತಂದೆಯವರು ಈವರೆಗೂ ಸಿಗಲಿಲ್ಲ. ಇಂದಿಲ್ಲದಿದ್ದರೆ ನಾಳೆ, ಈ ರಂಗದಲ್ಲಲ್ಲದಿದ್ದರೆ ಬೇರೊಂದರಲ್ಲಿ ಆ ಮಹಾ ಪುರುಷನನ್ನು ಕಾಣುವೆನೆಂದು ತಪಿಸುತ್ತಿದ್ದೇನೆ. ಹೀಗಾದರೂ ಆದೀತೇನೊ ಎಂಬ ಕುರುಡಾಸೆ.

ಪೆರಾನ್‌ವೈಸಾ : ಕುರುಡಾಸೆಯೇ ಸರಿ. ನಾನು ಹೇಳಿದೆನಲ್ಲ ರುಸ್ತುಮರು ಇರಾನಿಯವರ ಕಡೆ ಈಗಿಲ್ಲವೆಂದು. ಅದನ್ನು ಮರೆತುಬಿಟ್ಟೆಯೇನು ?

ಸೊಹ್ರಾಬ್ : ಇಲ್ಲ, ಮರೆಯಲಿಲ್ಲ.

ಪೆರಾನ್‌ವೈಸಾ : ಹಾಗಾದರೆ ಅವರನ್ನು ಈ ರೀತಿ ಹೇಗೆ ಕಾಣಲಾದೀತು ?

ಸೊಹ್ರಾಬ್ : ಅಖಂಡವಾದ ಸೈನ್ಯದಲ್ಲಿ ಸಾವಿರಾರು ಮಂದಿ ಸೇರಿ ಯುದ್ಧ ಮಾಡುವಾಗ ಎಷ್ಟೋ ಜನರು ಪ್ರತಾಪ ತೋರಿಸುವರು ; ಕೀರ್ತಿ ಪಡೆಯುವರು ; ಮಡಿಯುವರು. ಸೈನ್ಯಕ್ಕೆ ಜಯ ಲಭಿಸಿದರೆ ಆ ಜಯಕ್ಕೆ ಅನೇಕರು ಕಾರಣರು, ಭಾಗಿಗಳು. ಆ ಕೀರ್ತಿಯು ಒಬ್ಬನಿಗೆ ಸೇರಿದುದಲ್ಲ. ಎಷ್ಟೋ ಜನರ ಹೆಸರು ಅಲ್ಲಿ ಅಳಿಸಿಹೋಗುವುದು. ಏಕಾಂಗ ಯುದ್ಧದಲ್ಲಿ ಹಾಗಲ್ಲ.

ಪೆರಾನ್‌ವೈಸಾ : ಈಗ ನಿನಗೆ ದೊರೆತಿರುವ ಕೀರ್ತಿ ಸಾಲದೆ ? ನಮ್ಮ ಸೈನ್ಯಕ್ಕೆ ದೇವರಂತಿದ್ದೀಯೆ ! ನಿನ್ನ ಹೆಸರನ್ನು ಕೇಳಿದ ಕೂಡಲೆ ಶತ್ರುಗಳು ಭೀತರಾಗಿ ನಿನ್ನ ಪೌರುಷದೆದುರಿಗೆ ನಿಲ್ಲಲಾರದೆ ಪಲಾಯನವಾಗುತ್ತಿದ್ದಾರೆ ! ಇನ್ನೆಂಥ ಕೀರ್ತಿ ಬೇಕು ನಿನಗೆ ? ರುಸ್ತುಮರಂಥ ಕೀರ್ತಿಯನ್ನು ಇಪ್ಪತ್ತು ದಿನಗಳಲ್ಲಿ ಸಂಪಾದಿಸಿರುವೆ !

ಸೊಹ್ರಾಬ್ : ಹಾಗಲ್ಲ, ದಯವಿಟ್ಟು ಕೇಳಬೇಕು. ನನ್ನ ಕೀರ್ತಿಯಿಂದ ನನಗಷ್ಟು ಸಂತೋಷವಿಲ್ಲ. ಈಗ ಆಸೆಪಡುತ್ತಿರುವ ಕೀರ್ತಿಯಿಂದ ಪ್ರಯೋಜನವಾಗಬೇಕಾಗಿದೆ. ಇಂಥ ಕಾಳೆಗದಲ್ಲಿ ಈ ವೀರರಿಗೆ ಯುದ್ಧವಾಯಿತು, ಇಂಥವರಿಗೇ ಜಯವಾಯಿತು, ಇಂಥವರು ಮಡಿದರು ಎಂಬ ವಿಷಯವು ಸ್ಪಷ್ಟವಾಗುವುದು. ಅದರ ವಾರ್ತೆ ಕೀರ್ತಿಗಳು ಸ್ಪಷ್ಟವಾಗಿ ಎಂಟು ದಿಕ್ಕುಗಳಿಗೂ ಹರಡುವುವು. ಯಾವ ಅನಿಶ್ಚಯವೂ ಉಳಿಯದು.

ಪೆರಾನ್‌ವೈಸಾ : ಉಂ–ಆಮೇಲೆ ?

ಸೊಹ್ರಾಬ್ : ಈ ಕಾಳೆಗದಲ್ಲಿ ನನಗೇ ಜಯವಾದರೆ ಅದರ ಕೀರ್ತಿಯು ಜಗದ್ವಿಖ್ಯಾತವಾಗುವುದು. ನನ್ನ ಮುಂದೆ ಇರಾನ್ ದೇಶದ ಯೋಧನಾವನೂ ನಿಲ್ಲಲಾರದಾಯಿತೆಂದೂ, ಅವರೆಲ್ಲರ ಪೌರುಷಕ್ಕೂ ಹದಿನೈದು ವರ್ಷದ ಹುಡುಗನೊಬ್ಬನಿಂದ ಅಪಮಾನ ಪರಾಭವಗಳಾದುವೆಂದೂ ಖ್ಯಾತಿಯಾಗುವುದು.

ಪೆರಾನ್‌ವೈಸಾ : ಆಯಿತು—ಆಮೇಲೆ ?

ಸೊಹ್ರಾಬ್ : ಅಂಥ ಕೀರ್ತಿಯು ಇರಾನಿನ ಯೋಧಶ್ರೇಷ್ಠರಾದ ನನ್ನ ತಂದೆಯವರ ಕಿವಿಗೂ ಮುಟ್ಟುವುದು. ಅವರೂ ಊರಲ್ಲಿಲ್ಲವಂತೆ. ಇಲ್ಲಿಗೆ ಹತ್ತಿರದ ಪ್ರದೇಶಗಳಲ್ಲಿಯೇ ಏಕೆ ಇರಬಾರದು ? ಇದ್ದರೆ ಜಾಗ್ರತೆಯಾಗಿಯೇ ತಿಳಿದೀತು. ತಿಳಿದರೆ ರಾಜರ ಮೇಲಿನ ಕ್ರೋಧ ಹೋಗಲಿ, ತಮ್ಮ ಜನತೆಗೇ ಆಗಿರುವ

ಅಪಮಾನವನ್ನು ತೊಳೆಯುವ ಉದ್ದೇಶದಿಂದಲಾದರೂ ಕನಲಿ ಈ ಕಡೆ ಬಂದಾರು. ರುಸ್ತುಮರು ನಾನು ಚಿತ್ರಿಸಿಕೊಂಡಿರುವಂಥ ವೀರರೇ ಆಗಿರುವ ಪಕ್ಷದಲ್ಲಿ ಬಂದೇ ಬರುವರು. ಆಗ, . . .

ಪೆರಾನ್‌ವೈಸಾ : ಅಯ್ಯೋ ಮಗುವೆ, ನಿನಗೇನು ಭ್ರಾಂತಿಯೋ ? ಇಷ್ಟು ಜನರು ನಿನ್ನಲ್ಲಿ ಪ್ರಾಣವಿಟ್ಟುಕೊಂಡಿರುವಾಗ, ಎಲ್ಲ ಸರದಾರರಲ್ಲಿಯೂ ಪೂಜ್ಯತೆ ಪಡೆದಿರುವ ನೀನು, ಯುದ್ಧದ ಜಯ ಪರಾಜಯಗಳಲ್ಲಿಯೂ, ಕೀರ್ತಿ ಅಶ್ರೇಯಸ್ಸುಗಳಲ್ಲಿಯೂ ಎಲ್ಲರೊಡನೆ ಇದ್ದು ಭಾಗಿಯಾಗುವುದನ್ನು ಬಿಟ್ಟು, ಪ್ರತಿಯೊಂದು ಸಲವೂ ಪ್ರಾಣಾಪಾಯಗಳನ್ನು ಲೆಕ್ಕಿಸದೆ ಒಬ್ಬನೇ ಮುಂದಕ್ಕೆ ನುಗ್ಗಿ ಹೀಗೇಕೆ ವ್ಯರ್ಥವಾಗಿ ಬಲಿಯಾಗಬೇಕೆನ್ನುವೆ ? ಅದೃಷ್ಟವನ್ನು ಕೆಣಕ ಬಾರದು ಸೊಹ್ರಾಬ್. ನನ್ನ ಮಾತನ್ನು ಕೇಳು. ಯುದ್ಧದ ಮೂಲಕ, ಅಪಾಯಗಳ ಮೂಲಕ ತಂದೆಯನ್ನು ಹುಡುಕುವ ಯತ್ನವನ್ನು ಬಿಡು. ನಿನಗೆ ಬೇಕಾದ ಬೆಂಬಲವನ್ನೂ ಸಹಾಯಗಳನ್ನೂ ಒದಗಿಸುತ್ತೇನೆ. ಇಲ್ಲಿಂದ ಹೊರಟು ಶಾಂತಿಯಲ್ಲಿ ತಂದೆಯನ್ನು ಹುಡುಕು ಹೋಗು. ನೀನು ನಮ್ಮ ಜೊತೆಯಲ್ಲಿಲ್ಲದಿದ್ದರೂ ಚಿಂತೆಯಿಲ್ಲ. ನಮ್ಮ ಪರವಾಗಿ ಯುದ್ಧ ಮಾಡದೆ ಇದ್ದರೂ–ನಮಗೆ ಮುಂದೆ ಆ ಕಾರಣದಿಂದ ಜಯ ದೊರೆಯ ದಿದ್ದರೂ ಚಿಂತೆಯಿಲ್ಲ. ನೀನು ಸುಖವಾಗಿದ್ದರೆ, ಸುಖವಾಗಿರುವೆಯೆಂದು ನಾವು ಕೇಳುತ್ತಿದ್ದರೆ ಸಾಕು. ಈ ಪ್ರಯತ್ನ ಬೇಡ.

ಸೊಹ್ರಾಬ್ : ನೀವು ಪೂಜ್ಯರು. ನನ್ನನ್ನು ತಡೆಯಬೇಡಿ. ಹೀಗೇ ಮಾಡೆಂದು ನನ್ನಾತ್ಮವು ಚೀರಿ ಕೂಗುತ್ತಿದೆ.

ಪೆರಾನ್‌ವೈಸಾ : ಅಲ್ಲ ಸೊಹ್ರಾಬ್, ಸ್ವಲ್ಪ ಯೋಚನೆ ಮಾಡು. ಯುದ್ಧದಲ್ಲಿ ಗೆಲವು ಸೋಲುಗಳು ನಿಶ್ಚಯವಲ್ಲ.

ಸೊಹ್ರಾಬ್ : ನನಗೇ ಸೋಲೂ ಸಾವೂ ಬಂದಾವೆಂದು ನಿಮಗೆ ಶಂಕೆಯೇನು ? ಆದರೆ ಆಗಲೇಳಿ. ಕುದಿಯುತ್ತ ತಳಮಳಗೊಳ್ಳುತ್ತ ಇರುವ ಈ ಅಶಾಂತ ಹೃದಯವು ಶಾಂತವಾಗುವುದು ; ಗೆದ್ದರೆ ಕೀರ್ತಿ ; ಅವಧಿ ತೀರುವುದ ರೊಳಗಾಗಿ ತಂದೆಯವರನ್ನು ಕಾಣುವ ಒಂದೇ ಒಂದು ಸಂಭವ. ಸೋತರೆ –ಸೋತು ಮಡಿದರೆ– (ಆತನ ಮುಖದತ್ತ ಕಣ್ಣೆತ್ತಿ ನೋಡುತ್ತ) ಸತ್ತವರು ಯಾವ ಸಂಬಂಧಿಗಳನ್ನು ಅಪೇಕ್ಷಿಸುವರು ? ಯಾವ ತಂದೆಯನ್ನು ಹುಡುಕಿ ಕೊಂಡು ತಿರುಗಿಯಾರು !

ಪೆರಾನ್‌ವೈಸಾ : ಬೇಡಪ್ಪ. . . ತಂದೆಯನ್ನು ಕಾಣಬೇಕಾದರೆ ಕ್ಷೇಮದಲ್ಲಿ ಕಾಣು. ಇಬ್ಬರೂ ಕ್ಷೇಮದಿಂದಿದ್ದರಲ್ಲವೇ ಸೇರುವಿಕೆಯ ಪ್ರಯೋಜನ ? ವೃಥಾ ಏಕೆ ದುಡುಕುವೆ ? ವಿಧಿಯನ್ನೇಕೆ ವೃಥಾ ಕೆರಳಿಸುವೆ ? ಅಲ್ಲದೆ, ಕೇಳು :

ಹುಟ್ಟಿದಂದಿನಿಂದ ಹಿಡಿದು ಈವರೆಗೂ ನೀನು ನಿಮ್ಮ ತಂದೆಯವರನ್ನು ನೋಡಿಲ್ಲ. ಎದುರಿಗೇ ನಿಂತಿದ್ದರೂ ಅವರನ್ನು ಗುರುತಿಸಬಲ್ಲವನಲ್ಲ. ನೀನು ಮಗನೆಂದು ಅವರರಿಯರು. ಎರಡೂ ಕಡೆಯಲ್ಲಿ ಈ ಅಜ್ಞಾನವಿರುವಾಗ ದುಡುಕುವುದು ಅವಿವೇಕ. ನನಗೆ ಅರವತ್ತು ವರುಷಗಳ ಅನುಭವವಿದೆ. ನೀನು ಅರಿಯದ ಹುಡುಗ. ನನ್ನ ಮಾತನ್ನು ಲಾಲಿಸು. ತಂದೆ ಮಕ್ಕಳು ಸುಖದಲ್ಲಿ ಸೇರಬೇಕು.

ಸೊಹ್ರಾಬ್ : ಸೂಕ್ಷ್ಮ ಯೋಚನೆಗೆ ಈಗ ಕಾಲವಿಲ್ಲ. ಇಷ್ಟು ದಿನ ನಿಮ್ಮೆಲ್ಲರ ಸೇವೆ ಮಾಡಿರುವುದು ನಿಮಗೆ ಸಮರ್ಪಕವಾಗಿದ್ದರೆ, ಈ ಸಣ್ಣ ಪ್ರಾರ್ಥನೆಯನ್ನು ನೆರವೇರಿಸಿಕೊಡಿ. ನನ್ನ ಮೇಲೆ ನಿಮ್ಮೆಲ್ಲರಿಗೂ ಪ್ರೀತಿಯಿರುವುದು ನಿಜವಾದರೆ ಈ ಇಷ್ಟಕ್ಕೆ ತಡೆ ತರಬೇಡಿ.

ಪೆರಾನ್‌ವೈಸಾ : ನಿನ್ನಿಷ್ಟ. ಇದರ ಮೇಲೆ ಹೇಳುವುದೇನಿದೆ ? ಬೇಟೆಗೆ ಬಾಯೊಡ್ಡಿರುವ ಸಿಂಹದ ಮರಿಯನ್ನು ತಡೆಯಬಲ್ಲ ಶಕ್ತರು ಯಾರು ? ರುಸ್ತುಮರ ಮಗನನ್ನು ಅಡ್ಡಿಯೊಡ್ಡಿ ನಿಲ್ಲಿಸಬಲ್ಲ ಧೀರನಾರು ? ನಿನ್ನ ಹಣೆಯಲ್ಲಿ ಬರೆದುದಾಗಲಿ ಸೊಹ್ರಾಬ್ ; (ವ್ಯಸನದಿಂದ ಕೂಡಿದ ಪ್ರೀತಿಯಿಂದ ನೋಡುತ್ತ) ನನಗೇನೋ ಇದು ಸರ್ವಥಾ ಇಷ್ಟವಿಲ್ಲ. ಇದರಿಂದ ಮಂಗಳವಾಗಲಾರದೆಂಬ ಶಂಕೆ ತೋರುತ್ತಿದೆ. ನೋಡು—ಇದನ್ನೂ ಮೀರಿ ನೀನು ಹಟ ಮಾಡಿದರೆ ನಾನು ಬೇರೆಯೇನು ಮಾಡಲಾದೀತು ?

ಸೊಹ್ರಾಬ್ : ಅನುಗೃಹೀತನಾದೆ. (ಹೋಗುವನು)

(ಯುದ್ಧ ಸಿದ್ಧತೆಯ ವಾದ್ಯಗಳು ಮೊಳಗುವುವು)

(ಫಲಾಹಾರವಾದ ಕೂಡಲೇ ಪೆರಾನ್‌ವೈಸಾ ಶಾಂತಿಯ ಉಡುಪನ್ನು ಹಾಕಿಕೊಂಡು ಅಧಿಕಾರ ದಂಡವನ್ನು ಕೈಯಲ್ಲಿ ಹಿಡಿದು ಕಾಲಿಗೆ ಚಡಾವು ಮೆಟ್ಟಿಕೊಂಡು ರಂಗದ ಕಡೆ ಹೊರಡುವನು)

ತೆರೆ

# ನೋಟ ೬

[ಎರಡು ಕಡೆಯ ಸೈನ್ಯಗಳವರೂ ವಿಧವಿಧವಾಗಿ ಕವಾಯತ್ತು ಮಾಡುತ್ತ ವಾದ್ಯಗಳೊಡನೆ ರಣಘೋಷಗಳೊಡನೆ ಗೀತಗಳನ್ನು ಹೇಳಿಕೊಂಡು ರಂಗದೊಳಗೆ ಪ್ರವೇಶ ಮಾಡಿ ಪಡೆಗಳನ್ನು ಸೇರಿ ತಂತಮ್ಮ ಸ್ಥಾನಗಳಲ್ಲಿ ಹೋಗಿ ನಿಲ್ಲುವರು.

ಯುದ್ಧರಂಗದಲ್ಲಿ—ಪೆರಾನ್‌ವೈಸಾ ಶಾಂತಿ ದಂಡವನ್ನು ಮೇಲೆತ್ತಿ ಹಿಡಿದು ತೋರಿಸಿ ಇರಾನೀ ಸೇನಾಧಿಪತಿಯನ್ನು ಸಂಜ್ಞೆ ಮಾಡಿ ಕರೆಯುತ್ತಾನೆ. ಫೆರೂದ್ ಬಂದು, ಪರಸ್ಪರವಾಗಿ ಮರ್ಯಾದೆಗಳು ನಡೆಯುವುವು.]

**ಪೆರಾನ್‌ವೈಸಾ :** ಫೆರೂದ್, ಇರಾನಿ ತುರಾನಿ ಸರದಾರರೆ, ಕೇಳಿ : ಈ ದಿನ ಉಭಯ ಸೈನ್ಯಗಳಿಗೂ ವಿಶ್ರಾಮವಿರಲಿ. ಆದರೆ ನಮ್ಮ ಪರವಾಗಿ ಸರದಾರ್ ಸೊಹ್ರಾಬರು ಏಕಾಂಗಿಯಾಗಿ ನಿಂತು ಕಾಳೆಗ ಮಾಡಲು ಅಪೇಕ್ಷಿಸುತ್ತಾರೆ. ನಿಮ್ಮ ಪರವಾಗಿ ಯೋಧಶ್ರೇಷ್ಠರನ್ನು ಆರಿಸಿ ಅವರ ಮೇಲೆ ದ್ವಂದ್ವಯುದ್ಧಕ್ಕೆ ಒಪ್ಪಿಸಿ ಕಳುಹಿಸತಕ್ಕದ್ದು. ಇದಕ್ಕೆ ನಿಮ್ಮ ಉತ್ತರವನ್ನು ಆಲೋಚನೆ ಮಾಡಿ ನಮಗೆ ಈಗಲೇ ಕೊಡತಕ್ಕದ್ದು.

(ಫೆರೂದನ ಮುಖ ಗಭೀರವಾಗುವುದು)

**ಫೆರೂದ್ :** (ದರ್ಪದಿಂದ ತಲೆಬಾಗಿ) ಎರಡು ನಿಮಿಷಗಳ ಅವಕಾಶವನ್ನು ಕೊಡೋಣವಾದರೆ ಆಗತ್ಯವಾಗಿ ನಮ್ಮ ಇಷ್ಟವನ್ನು ತಿಳಿಸುವೆವು.)

(ತನ್ನ ದಳಪತಿಗಳತ್ತ ಹೊರಡುವನು)

(ಉಭಯ ಪಾರ್ಶ್ವಗಳಲ್ಲಿಯೂ ಗಜಿಬಿಜಿ)

ಇರಾನಿ ಸೈನಿಕರು :

**ಒಂದನೆಯವನು :** ಏನು ? ಸೊಹ್ರಾಬರೊಡನೆ ಕಾಳೆಗವೆ ?

**ಎರಡನೆಯವನು :** ನಮ್ಮಲ್ಲಿ ಅಂಥಾ ಯೋಧರಾರಿದ್ದಾರೆ ?

**ಮೂರನೆಯವನು :** ಆತನೆದುರಿಗೆ ನಮ್ಮವರಿಗೆ ಜಯವೆಲ್ಲಿಂದ ಬರಬೇಕು ?

**ಒಂದನೆಯವನು :** ದೊಡ್ಡ ಅಪಮಾನ ಬರುವಂತಾಯಿತೆ !

**ನಾಲ್ಕನೆಯವನು :** ನೋಡು, ನೋಡು, ಫೆರೂದ್ ಗೋದರ್ಸ್ ಎಲ್ಲರೂ ತೀವ್ರವಾಗಿ ಚರ್ಚೆ ಮಾಡುತ್ತಿದ್ದಾರೆ.

**ಎರಡನೆಯವನು :** ಇನ್ನೇನು, ಯಾರನ್ನು ಕಳುಹಿಸುವುದೆಂದು ?

**ಮೂರನೆಯವನು :** ಒಪ್ಪಿಕೊಂಡರೆ ಕಷ್ಟ—ಒಪ್ಪದಿದ್ದರೆ ನಾಚಿಕೆ ಕೇಡು,

ಒಂದನೆಯವನು : ಫೆರಬೂಸಿನ ಮುಖದ ಮೇಲೆ ನೋಡು.

ಎರಡನೆಯವನು : ಗೋದರ್ಸ್ ಕೆಂಡ ಕೆಂಡವಾಗಿದ್ದಾನೆ.

ಮೂರನೆಯವನು : ಅವರ ಸವಾಲನ್ನು ಒಪ್ಪಲೇಬೇಕು. ಆದರೆ ನಮ್ಮ ಕಡೆ ವೀರರಾರಿದ್ದಾರೆ ? ಬಹು ಕಷ್ಟಕ್ಕೆ ಬಂದಿತೇ ?

ತುರಾನಿ ಸೈನಿಕರು :

ಒಂದನೆಯವನು : ಸೊಹ್ರಾಬ್‌ಜೀಗೂ ಇರಾನೀ ವೀರರಿಗೂ ಕಾಳಗವೆ ?

ಎರಡನೆಯವನು : ಇರಾನಿಗಳೇ ಹುಷಿಯಾರ್ !

ಮೂರನೆಯವನು : ಇವರ ಮೇಲೆ ಕೈಯೆತ್ತಿ ನಿಲ್ಲಬಲ್ಲ ವೀರನಾರು ?

ಒಂದನೆಯವನು : ಅವರ ಕಡೆ ಯುದ್ಧ ಮಾಡಬಲ್ಲವರು ರುಸ್ತುಮರೊಬ್ಬರು.

ನಾಲ್ಕನೆಯವನು : ಈಗ ರುಸ್ತುಮರನ್ನು ಎಲ್ಲಿಂದ ತರಬೇಕು ?

ಎರಡನೆಯವನು : ರುಸ್ತುಮರು ಇನ್ನು ಮೇಲೆ ಶತ್ರುಗಳ ಕಡೆ ಯುದ್ಧಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದಾರಂತೆ.

ಮೂರನೆಯವನು : ಅವರು ಇಲ್ಲಿದ್ದಿದ್ದರೆ ಜೊತೆ ಚೆನ್ನಾಗಿರುತ್ತಿತ್ತು. ಎಂದೂ ಕಾಣದಿದ್ದಂಥ ದೊಡ್ಡ ಕಾಳಗವನ್ನು ನೋಡಬಹುದಾಗಿತ್ತು !

ಎರಡನೆಯವನು : ಭೇಷ್—ನಮಗೇ ಜಯ !

ನಾಲ್ಕನೆಯವನು : ನೋಡತ್ತ, ಆ ಸರದಾರರೂ, ಸೈನಿಕರೂ ಪಿಸಪಿಸ ಮಾತನಾಡಿಕೊಳ್ಳುತ್ತಿದ್ದಾರೆ.

ತುರಾನಿ ಸೈನಿಕರೆಲ್ಲರೂ : ಸರದಾರ್ ಸೊಹ್ರಾಬ್‌ಕಿ ಜೈ !
ಟಾರ್ಟರೀಕಿ ಜೈ !!
ಅಲಂಗೀರ್ ಅಫ್ರಾಸಿಯಾಬ್‌ಕಿ ಜೈ ! ಜೈ !!

ಇನ್ನೊಂದು ಕಡೆ :—

ಫೆರೂದ್ : ಫೆರಬೂಸ್, ಗೋದರ್ಸ್, ಸೊವಾರಾ, ಪೆರಾನ್‌ವೈಸಾ ಅವರ ಮಾತುಗಳನ್ನು ಕೇಳಿದಿರಲ್ಲ ; ಈಗೇನು ಮಾಡುವುದು ? ಸೊಹ್ರಾಬನೊಡನೆ ಕಾಳಗ ಮಾಡಿ ಆತನನ್ನು ಜಯಿಸಬಲ್ಲ ಗಂಡು ನಮ್ಮಲ್ಲಿ ಯಾರಿದ್ದಾರೆ ? ಇರಾನಿಗೆ ಭಯಂಕರವಾದ ಅಪಮಾನವಾಗುವ ಹೊತ್ತು ಬಂದಿತು ! ಶತ್ರುಗಳ ಕಡೆಯ ಭಟನು ಹೀಗೆ ತೋಳು ತಟ್ಟಿ ಕಾಳಗಕ್ಕೆ ಕರೆವಾಗ ಕಾಳಗಕ್ಕೆ ಒಪ್ಪದಿರುವುದು ಹೇಡಿತನ. ಒಲ್ಲೆನೆನ್ನುವುದು ಯೋಧಧರ್ಮವಲ್ಲ. ಒಪ್ಪೋಣವೆಂದರೆ ನಮ್ಮಲ್ಲಾರೂ ಆತನಿಗೆ ಸಮರಿಲ್ಲ. ಆತನೋ ಪರಾಕ್ರಮದಲ್ಲಿ ಸಿಂಹದಂಥವನು. ಚಟುವಟಿಕೆಯಲ್ಲಿ ಕಾಡುಜಿಂಕೆಯಂಥವನು—

ಗೋದರ್ಸ್ : ಫೆರೂದ್, ನನಗೊಂದು ಯೋಚನೆ ಹೊಳೆಯುತ್ತಿದೆ. ನಿರಾಸೆಬೇಡ,

ನಮ್ಮ ಗೌರವ ಉಳಿಯುವ ಸಂಭವವೊಂದಿದೆ. ಆದರೆ ಆತನು ಒಪ್ಪಬೇಕು. ನಿನ್ನೆಯ ರಾತ್ರಿ ರುಸ್ತುಮರು ಪರಿವಾರದೊಡನೆ ಈ ಕಡೆ ಬಂದು ದೂರದಲ್ಲಿ ಗೂಡಾರಗಳನ್ನು ನೆಡಿಸಿಕೊಂಡಿದ್ದಾರಂತೆ. ಬೆಳಗ್ಗೆ ನಮ್ಮ ಬೇಹುಕಾರನೊಬ್ಬನು ಈ ವಿಚಾರವನ್ನು ನನಗೆ ತಿಳಿಸಿದನು. ಮನಸ್ಸಿನಲ್ಲಿ ಆತನಿಗೆ ಖಾವಂದಿರ ಮೇಲೆ ಬಹಳ ಅಸಮಾಧಾನವಿದೆ. ನಮ್ಮ ಜನತೆಗೆ ಬಂದಿರುವ ಈ ಆಪತ್ತನ್ನು ನಿವಾರಿಸಲು ಆತನೊಬ್ಬನಿಂದ ಮಾತ್ರ ಸಾಧ್ಯ. ಬೇರೆ ಉಪಾಯವಿಲ್ಲ.

ಫೆರೂದ್–ಫೆರಬೂಸ್ : ಏನು, ರುಸ್ತುಮರೆ ! ನಮ್ಮ ಕೆಲಸವಾಯಿತು ! ಆದರೆ ಅವರನ್ನು ಒಪ್ಪಿಸುವವರು ಯಾರು ?

ಗೋದರ್ಸ್ : ನಾನು ಹೋಗಿ ಯಾವ ರೀತಿಯಿಂದಲಾದರೂ ಆತನನ್ನು ಒಪ್ಪಿಸುವೆನು. ನೀವು ಹೋಗಿ ಪೆರಾನ್ ವೈಸಾಜೀಯವರಿಗೆ ನಾವು ಅವರ ಸವಾಲನ್ನು ಒಪ್ಪಿದೆವೆಂದೂ, ಕಾಳೆಗಕ್ಕೆ ಅವರು ಸಿದ್ಧಪಡಿಸಬಹುದೆಂದೂ ತಿಳಿಸಿ ಬನ್ನಿ.

ಫೆರೂದ್–ಫೆರಬೂಸ್ : ಹೋಗು, ಬೇಗ ಹೋಗು ಗೋದರ್ಸ್.

ಇರಾನಿ ಸೈನಿಕರು : ಏನೋ ತೀರ್ಮಾನವಾದಂತಿದೆ. ನೋಡು ಫೆರೂದ್ ಮುಖದ ಮೇಲೆ ಸಂತೋಷ. ಗೋದರ್ಸ್ ನೋಡು ಎಲ್ಲಿಗೋ ಹೋಗುತ್ತಿದ್ದಾರೆ.

ಇರಾನಿ ಸೈನಿಕರೆಲ್ಲರೂ : (ಅರ್ಧ ಎತ್ತಿದ ಕಂಠದಲ್ಲಿ) ಇರಾನ್‌ಕಿ ಜೈ !
ಫೆರೂದ್‌ಜೀಕಿ ಜೈ ! !
ಅಲಂಗೀರ್ ಕೈಕಾವೂಸ್‌ಕಿ ಜೈ ! ಜೈ ! !

ತೆರೆ

# ನೋಟ ೭

[ರುಸ್ತುಮರ ಡೇರೆ. ಆತನೂ ಫಲಾಹಾರ ಮುಗಿಸಿ ಕುಳಿತಿದ್ದಾನೆ. ಎಡಮುಂಗೈ ಮಣಿಕಟ್ಟಿನ ಮೇಲೆ ಒಂದು ಬೇಟೆಯ ಡೇಗೆಯನ್ನು ನಿಲ್ಲಿಸಿಕೊಂಡು ಅದನ್ನು ಕೀಟಲೆ ಮಾಡುತ್ತ, ಅದರ ರೆಕ್ಕೆಗಳನ್ನು ಹರಡುತ್ತ ಮುದುರುತ್ತ ಕುಳಿತಿದ್ದಾನೆ.]

– ಗೋದರ್ಸ್ ಪ್ರವೇಶ –

ರುಸ್ತುಂ : (ಡೇಗೆಯನ್ನು ಕೆಳಗೆ ಹಾಕಿ ಎರಡು ಕೈಗಳನ್ನೂ ಮುಂದೆ ಚಾಚಿ) ಓಹೋ ಹೋ ಗೋದರ್ಸ್ ! ಇದೇನು ಈ ಅಪೂರ್ವ ಲಾಭ ! ನನ್ನ ಮೇಲೆ ಇಷ್ಟು ದೊಡ್ಡ ಅನುಗ್ರಹ ! ಕಣ್ಣಿಂದ ನಿನ್ನನ್ನು ನೋಡಿಯೇ ಮೂರು ನಾಲ್ಕು ವರ್ಷಗಳ ಮೇಲಾದುವು, ಅಲ್ಲವೆ ? ಒಳಗೆ ಬಾ. ಮೊದಲು ಸ್ವಲ್ಪ ಫಲಾಹಾರ

ಮಾಡು. ಆಮೇಲೆ ಉಳಿದ ವಿಚಾರ . . . ಗೋದರ್ಸ್, ಅದೇಕೆ ನನ್ನ ಡೇರೆಯೊಳಕ್ಕೆ ಬರಕೂಡದೆಂದಿದ್ದೀಯೇನು ? ಅಥವಾ ನಮ್ಮಲ್ಲಿ ಒಂದು ಲೋಟ ಷರಬತ್ತನ್ನೂ ಕುಡಿಯಬಾರದೆಂದಿದ್ದೀಯೊ ?

ಗೋದರ್ಸ್ : ಫಲಾಹಾರ ಪಾನೀಯಗಳಿಗೆ ಸಮಯವಿಲ್ಲ ರುಸ್ತುಂ. ಅವಕ್ಕೆ ಬೇರೆ ಕಾಲವಿದೆ. ಈಗ ಗುರುತರವಾದ ಪ್ರಸಂಗವೊಂದೊದಗಿದೆ. ರುಸ್ತುಂ, ನೀನು ನಮಗೆ ಮಾಡಬೇಕಾದ ಉಪಕಾರವೊಂದಿರುವುದು.

ರುಸ್ತುಂ : ನಾನು ! ನಿಮಗೆ ! ಉಪಕಾರಮಾಡುವುದು !! ಅಂಥ ಕ್ಷಾಮ ಡಾಮರಗಳು ನಿಮಗೇನು ಬಂದಿರುವುದು ?

ಗೋದರ್ಸ್ : ಇರಾನಿಗೆ ಅಪಮಾನವಾಗುವ ಗತಿ ಬಂದಿದೆ. ನೀನು ಸೊಹ್ರಾಬನ ಕೀರ್ತಿಯನ್ನು ಕೇಳಿರಬಹುದು. ಆತನ ಪರಾಕ್ರಮವೆಂಥದೆಂಬುದು ನಿನ್ನ ಕಿವಿಗೆ ಬಿದ್ದಿರಬಹುದು ; ಬಿದ್ದಿರಬೇಕು—

ರುಸ್ತುಂ : ಹುಂ. ಅವನ ವಿಚಾರ ನನಗೇಕೆ—ನನ್ನಲ್ಲೇಕೆ ?

ಗೋದರ್ಸ್ : ನಮ್ಮ ಸೈನ್ಯದ ವೀರಾಗ್ರಣಿಯೊಡನೆ ದ್ವಂದ್ವಯುದ್ಧವನ್ನು ಕೋರಿ ನಮ್ಮ ಕಡೆಗೆ ಆತನು ಈ ದಿನ ಹೇಳಿಕಳುಹಿಸಿದ್ದಾನೆ.

ರುಸ್ತುಂ : ಇರಬಹುದು.

ಗೋದರ್ಸ್ : ಅವನೆದುರಿಗೆ ಏಕಾಂಗಿಯಾಗಿ ನಿಂತು ಯುದ್ಧಮಾಡಬಲ್ಲ ಯೋಧನು ನಮ್ಮ ಸೈನ್ಯದಲ್ಲಿ ಈಗಾರೂ ಇಲ್ಲ. ನಿನಗೊಬ್ಬನಿಗೆ ಮಾತ್ರ ಆ ಸಾಹಸವು ಸಾಧ್ಯ. ನಾವೆಲ್ಲರೂ ನಿನ್ನನ್ನು ನಂಬಿಕೊಂಡಿದ್ದೇವೆ. ನಮ್ಮ ಜನತೆಯ ಮಾನವುಳಿಸುವುದಕ್ಕಾದರೂ ನಮ್ಮ ಪರವಾಗಿ ನೀನು ದಯಮಾಡಿ ಕಾಳಗ ಮಾಡಬೇಕು. ಸೊಹ್ರಾಬನು ಅವರ ಸೈನ್ಯದಲ್ಲಿ ಕಾಲಿಟ್ಟಂದಿನಿಂದ ನಮಗೆ ಜಯ ದೊರೆತಿಲ್ಲ. ಈಗ ನಾವು ಕಾಳೆಗಕ್ಕೆ ಸಮ್ಮತಿಸೆವಾದರೆ ಇರಾನಿಗೆ ಸೂರ್ಯ ಚಂದ್ರರಿರುವವರೆಗೂ ಅಳಿಸದಂಥ ಕಳಂಕವು ಬರುವುದು.

ರುಸ್ತುಂ : ತೆಗೆ ತೆಗೆ, ಇರಾನಿನಲ್ಲಿ ವೀರರಿಗೇನು ಕಡಿಮೆ ? ಎಷ್ಟೋ ಜನ ಯುವಕ ವೀರರಿದ್ದಾರೆ—ವೀರಶ್ರೇಷ್ಠರಿದ್ದಾರೆ. ನಿಮ್ಮ ರಾಜನ, ಹೌದು ಗೋದರ್ಸ್, ಕೈಕಾವೂಸನ ಬಾಯಿಂದಲೇ ಆ ಮಾತನ್ನು ಕಿವಿಯಾರ ನೀನೇ ಕೇಳಿದ್ದೀಯಲ್ಲ. ನಮ್ಮಂಥ ಮುದುಕರಿಂದ ಆತನಿಗಾಗಲಿ ಇರಾನಿಗಾಗಲಿ ಯಾವ ಉಪಕಾರವಾದೀತು ? ಯುವಕರಿದ್ದಾರೆ; ಯುವಕರ ಪಾಲಕನೂ, ಪೋಷಕನೂ, ಉತ್ತೇಜಕನೂ ರಾಜನಿದ್ದಾನೆ ; ನಮ್ಮಂಥ ಮುದುಕರು ಇದ್ದರೆ ಎಷ್ಟೋ ಹೋದರೂ ಅಷ್ಟೇ ಆತನಿಗೆ.

ಗೋದರ್ಸ್ : ಇಲ್ಲ ರುಸ್ತುಂ. ನೀನು ಹಾಗೆ ಹೇಳಕೂಡದು, ಆತನಿಗೆ ಅನುಭವವಿಲ್ಲ, –ಹುಡುಗುತನ. ಯಾವ ಸಮಯದಲ್ಲಿಯೊ ಏನೊ ಎಂದುದಕ್ಕೆ ಕ್ರೋಧವನ್ನು

ನೆನೆಯುವ ಕಾಲವಿದಲ್ಲ. ಇಡೀ ಇರಾನಿನಲ್ಲಿ ನಿಜವಾಗಿಯೂ ನಿನ್ನನ್ನುಳಿದು, ಸೊಹ್ರಾಬನನ್ನು ಇದಿರಿಸಬಲ್ಲವರಿಲ್ಲ. ಕೆಲವರು ವಯಸ್ಸಾದವರು ; ಉಳಿದವರು ಹುಡುಗರು.

ರುಸ್ತುಂ : ನಾನು ಪ್ರಾಯದ ಹುಡುಗನೊ ? ನಿನಗಿಂತ ಹೆಚ್ಚು ವಯಸ್ಸಾದವನಲ್ಲವೆ? ಯುವಕರನ್ನು ನಂಬಿರುವವನು ಕೈಕಾವೂಸ್. ಸೊಹ್ರಾಬ್ ಯುವಕ; ಅವನೊಡನೆ ಯುದ್ಧ ಮಾಡುವವನೂ ಯುವಕನಾಗಿಯೇ ಇರಬೇಕು. ಅವನು ತಿರಸ್ಕಾರ ಮಾಡುವನೆಂದರೆ ನಿಮ್ಮಲ್ಲಿನ ಯುವಕರಿಗೆ ಅಪಮಾನ. ಷಾಹ ಕಾವೂಸನೇ ನಿಂತು ಕಾಳಗ ಮಾಡಲಿ. ಈ ವಯಸ್ಸಿನಲ್ಲಿ ನನಗೇನು ಬೇಕಾಗಿದೆ ?

ಗೋದರ್ಸ್ : ಸೊಹ್ರಾಬನ ಪ್ರಚಂಡ ಸಾಹಸವನ್ನು ನೀನು ಒಂದು ಗಳಿಗೆಯ ಕಾಲ ಕಣ್ಣಾರ ನೋಡಿದ್ದರೆ ನೀನು ಈ ರೀತಿ ಮಾತನಾಡುತ್ತಿರಲಿಲ್ಲ, ರುಸ್ತುಂ.

ರುಸ್ತುಂ : ನೋಡದಿದ್ದರೇನು ? ಬೇಕಾದಷ್ಟು ಕೇಳಿದ್ದೇನೆ. ಇನ್ನೂ ಹೆಚ್ಚಾಗಿ ಕೇಳಿದ್ದೇನೆ. ಎಲ್ಲೆಲ್ಲಿಯೂ ಅವನ ಪ್ರಶಂಸೆಯೇ ತುಂಬಿದೆ. 'ಅಂಥ ಮಗನು ನನಗೊಬ್ಬನಿದ್ದಿದ್ದರೆ !'—ಎಂದುಕೊಂಡೂ ಇದ್ದೇನೆ. ನಮ್ಮ ವೀರ ವಂಶವು ಇಲ್ಲಿಗೇ ಕೊನೆಯಾಗಬೇಕಾಯಿತು. ನನಗಿರುವವಳು ಅದೇರ್‌ಬೈಜಾನಿನಲ್ಲಿರುವ ಆ ಅಬಲೆ ಹುಡುಗಿ. ನನ್ನ ಹೆಸರನ್ನು ಮುಂದುವರಿಸುವ ಅಂಥ ಮಗ ನನಗೊಬ್ಬನಿದ್ದಿದ್ದರೆ ! . . . ಕತ್ತಿ ಭಲ್ಲೆಗಳನ್ನು ಅವನಿಗಿತ್ತು, ರಂಗಕ್ಕೆ ಕಳುಹಿಸಿ, ಅವನ ಕೀರ್ತಿಯನ್ನು ಕೇಳಿ ಕಾಲ ಹಾಕುತ್ತ, ನನ್ನ ಹೆಸರಿನ ಭಯದಿಂದಲೇ ನನ್ನ ತಂದೆ ಸಾಲರ ಶತ್ರುಗಳನ್ನು ದೂರವಿರಿಸಿ ವೃದ್ಧರಾದ ಅವರ ಸೇವೆಮಾಡಿ ಕೊಂಡು ಸುಖವಾಗಿರುತ್ತಿದ್ದೆ ಆ ಅದೃಷ್ಟ ನನ್ನ ಹಣೆಯಲ್ಲಿ ಬರೆಯಲಿಲ್ಲ.

ಗೋದರ್ಸ್ : ಆಗದುದಕ್ಕೂ ಇಲ್ಲದುದಕ್ಕೂ ವ್ಯಥೆಪಟ್ಟು ಪ್ರಯೋಜನವೇನು ? ಅಖಂಡ ಇರಾನಿಗೇ ರಾಹು ಮೂಡಿದಂತೆ ಸೊಹ್ರಾಬನ ರೂಪದಲ್ಲಿ ವಿಪತ್ತು ಕವಿದಿರುವಾಗ ನೀನು ಹೀಗೆ ಮಾತನಾಡುವುದು ಸರಿಯಲ್ಲ. ಅಲ್ಲದೆ, ಕೇಳು—

ರುಸ್ತುಂ : ನನಗೆ ಬೇಕಿಲ್ಲ, ಗೋದರ್ಸ್. ಕೃತಘ್ನರ ಪರವಾಗಿ, ನಾನು ಬೇಡ ವಾಗಿರುವ ರಾಜನ ಪರವಾಗಿ ನಾನೇಕೆ ಯುದ್ಧ ಮಾಡಬೇಕು ? ಅವನೂ ಅವನ ಕೀರ್ತಿಯೂ ಇದ್ದರೆ ಇರಲಿ, ಹೋದರೆ ಹೋಗಲಿ.

ಗೋದರ್ಸ್ : ಜನರೇನೆಂದುಕೊಂಡಾರು ಬಲ್ಲೆಯೊ ?

ರುಸ್ತುಂ : ಜನರಿಗೂ ಇದಕ್ಕೂ ಏನು ಸಂಬಂಧ ?

ಗೋದರ್ಸ್ : ನೀನಿಲ್ಲಿಗೆ ಬಂದಿರುವುದು ಈಗಾಗಲೆ ಕೆಲವರಿಗೆ ತಿಳಿದಿದೆ. ಸಂಜೆಯೊಳ ಗಾಗಿ ಎಲ್ಲ ಸೈನಿಕರಿಗೂ ಗೊತ್ತಾಗುವುದು.

ರುಸ್ತುಂ : ಆಗಲಿ.

ಗೋದರ್ಸ್ : ಇಂಥ ವಿಪತ್ಸಂಧಿಯಲ್ಲಿ ಶತ್ರುಗಳ ಪರವಾಗಿ ಸೊಹ್ರಾಬನು 'ನಿಮ್ಮಲ್ಲಿ ವೀರರಿದ್ದರೆ ಬಂದು ಕಾಳೆಗಕೊಡಬಹುದು' ಎಂದು ಕರೆಯುತ್ತಿರುವಾಗ—ನಿನ್ನ ಕೂಡೆಯೇ ಯುದ್ಧಮಾಡಬೇಕೆಂದು ಅವನು ಊರೂರೂ ನಿನ್ನನ್ನೇ ಹುಡುಕಿಕೊಂಡು ತಿರುಗುತ್ತಿರುವಾಗ—

ರುಸ್ತುಂ : ಏನು—ಏನು ಹೇಳಿದೆ ? ನನ್ನನ್ನು ಹುಡುಕಿಕೊಂಡು ತಿರುಗುತ್ತಿರುವನೆ? ಊಂ ? ಊಂಹ್ !

ಗೋದರ್ಸ್ : ಆತನು ಯಾರನ್ನು ಹುಡುಕಿಕೊಂಡು ತಿರುಗುತ್ತಿರುವನೊ ಆ ನೀನು ಕಾಳೆಗವನ್ನು ಒಲ್ಲೆನೆಂದರೆ–ಮುಖ ಮರಸಿಕೊಂಡರೆ–ಎದುರಿಗಿದ್ದು, ನಾವು ಬೇಡಿಕೊಂಡಮೇಲೂ ನೀನು ಕಾಳೆಗವಮಾಡೆನೆಂದರೆ, ಪ್ರಪಂಚವೇನೆಂದೀತು ಕಾಣೆಯಾ-

ರುಸ್ತುಂ : ಏನೆಂದೀತು ?—

ಗೋದರ್ಸ್ : 'ರುಸ್ತುಮನು ಹಣ್ಣಾದ. ಹಿಂದೆ ಗಳಿಸಿದ ಕೀರ್ತಿಯನ್ನು ಕಾಪಾಡಿಕೊಳ್ಳಬೇಡವೆ ? ಲೋಭಿಗೆ ತನ್ನ ಧನ ಸುರಕ್ಷಿತವಾಗಿರಬೇಕೆಂಬ ಆಸೆಯಿಲ್ಲವೆ ? ರುಸ್ತುಮನೂ ಹಾಗೆಯೇ. ಸ್ವಾಭಾವಿಕವೆ ತಾನೆ ? ಹೊಸ ವೀರ್ಯವುಳ್ಳ ಹುಡುಗರಿಂದ ಆ ಕೀರ್ತಿಗೆ ಅಪಾಯ ತಾಕದಂತೆ ಆ ಹಳೆಯ ಕೀರ್ತಿಯನ್ನು ಬಹು ಎಚ್ಚರಿಕೆಯಿಂದ ಕಾಪಾಡಿಕೊಳ್ಳುತ್ತಿದ್ದಾನೆ' ಎನ್ನದೆ ? ಅದು ನಿನಗೆ ಗೌರವವೆ ? ನಿನ್ನ ಚಾರಿತ್ರಕ್ಕೆ ಒಪ್ಪುವಂಥದೆ ?

ರುಸ್ತುಂ : (ಸಿಡಿಗೋಪದಿಂದ) ನೀನೇಕೆ ಹೀಗೆ ಮಾತನಾಡುವೆ, ಗೋದರ್ಸ್ ! ನನ್ನ ಸ್ವಭಾವ ನಿನಗೆ ಹೊಸತಲ್ಲ. ನೀನು ವರ್ಣಿಸುವಂಥ ನರಾಧಮನೂ ಹೇಡಿಯೂ ನಾನಲ್ಲವೆಂಬುದನ್ನು ನೀನರಿಯೆಯಾ ? ಜಗತ್ತರಿಯದೆ ? ಪ್ರತಿಭಟರ ಸಂಖ್ಯೆ ಒಬ್ಬರಿಂದ ಹೆಚ್ಚಾದರೇನು ಕಡಮೆಯಾದರೇನು ? ಅವರು ವೀರರಾದರೇನು ಹಂದೆಗಳಾದರೇನು? ವಯಸ್ಸಾದವರಾದರೇನು ಹುಡುಗರಾಗಿದ್ದರೇನು? ಅವರೆಲ್ಲ ಮರ್ತ್ಯರೇ ಅಲ್ಲವೆ—ನಾನು . . . ನಾನು . . . ರುಸ್ತುಮನೇ ಅಲ್ಲವೆ . . . ಬಿಡು ಗೋದರ್ಸ್. ಅನಾಮಧೇಯರಾಗಿ ಯಾರು ಮಹತ್ಕಾರ್ಯಗಳನ್ನು ಮಾಡಿಯಾರು ?

ಗೋದರ್ಸ್ : ಆದರೆ—ಆದರೆ . . . .

ರುಸ್ತುಂ : ಮತ್ತೂ ಆದರೆ ? ಹಾಗಿದ್ದರೆ ನೋಡುವೆ ಬಾ, ರುಸ್ತುಮನು ತನ್ನ ಕೀರ್ತಿಯನ್ನು ಹೇಗೆ ಕೂಡಿಟ್ಟು ಕಾಪಾಡುವನೆಂಬುದನ್ನು ತೋರಿಸುತ್ತೇನೆ.

ಗೋದರ್ಸ್ : ಈ ಮಾತು ರುಸ್ತುಮರ ಸ್ವಂತ ಕೊರಲಿಂದ ಬರುವಂತಿದೆ.

ರುಸ್ತುಂ : ನಿನ್ನ ಕೆಲಸವಾಯಿತು. ಆದರೆ ಒಂದು ಮಾತನ್ನು ಲಾಲಿಸು.

ಗೋದರ್ಸ್ : ಇರಾನಿಗೆ ಅದೃಷ್ಟೋದಯವಾಯಿತು ರುಸ್ತುಂ. ನಿನ್ನ ಕೀರ್ತಿಯ ನೆಳಲಿನಲ್ಲಿ ಬೆಳೆದಿದೆ ಇರಾನ್. ಅದರ ಮಡಿಲಿನಲ್ಲಿ ನಾವು. ಏನು ಹೇಳು,

ರುಸ್ತುಂ : ನಾನು ಸಾಮಾನ್ಯ ಕವಚವೊಂದನ್ನು ತೊಟ್ಟು ಅಜ್ಞಾತನಂತೆ ಯುದ್ಧ ಮಾಡುವೆನು—ನೀನು ಈ ರೀತಿ ಹೇಳಿದುದಕ್ಕಾಗಿ. ಆದರೆ ಮಹಾವೀರ ರುಸ್ತುಮನು ಹುಲುಮನುಷ್ಯರ ಎದುರಿಗೆ ಕತ್ತಿಯೆತ್ತಿ ಭಲ್ಲೆಯೆತ್ತಿ ದ್ವಂದ್ವ ಯುದ್ಧಕ್ಕೆ ನಿಂತನೆಂದು ಮುಂದಕ್ಕೆ ನಿನ್ನಾ ಜನರು ಮಾತನಾಡಿಕೊಳ್ಳದಿರಲಿ . . . ಒಂದು ಲೋಟ ಪರಬತ್ತು ತೆಗೆದುಕೊಂಡು ಹೋಗು—ಈಗಲಾದರೂ ಆಗ ಬಹುದಲ್ಲ.

ಗೋದರ್ಸ್ : (ಹಸನ್ಮುಖಿಯಾಗಿ) ಆಗಬಹುದು ರುಸ್ತುಂ. ಆದರೂ ಹೆಚ್ಚುಹೊತ್ತಿನ ಅವಕಾಶವಿಲ್ಲ. ಕೆಲಸ ಮೊದಲು, (ಇಬ್ಬರೂ ಸೇವಿಸುವರು) ಉಪಚಾರ ಆಮೇಲೆ. ಒಂಬತ್ತು ಘಂಟೆಗೆ ಕಾಳೆಗ. ನಾವೆಲ್ಲರೂ ಸಿದ್ಧರಾಗಿರುವೆವು.

ರುಸ್ತುಂ : ಸಿದ್ಧನಾಗಿ ನಿಲ್ಲುವೆನು. ನೀನಿನ್ನು ಹೋಗಿ ಬಾ. (ಗೋದರ್ಸ್ ಬೀಳ್ಕೊಳ್ಳುವನು) ಬಹ್ರಾಮ್, ಜಾಮ್‌ಷೇದ್, ಯಾರೊ ಅಲ್ಲಿ !

ಅವರು : ಜನಾಬ್ ! ಹುಜೂರ್ !

ರುಸ್ತುಂ : (ಬಹ್ರಾಮನನ್ನು ಕುರಿತು) ನನ್ನ ಬೊಖಾರಾ ಕವಚವನ್ನು ಸಿದ್ಧಪಡಿಸು. (ಜಾಮ್‌ಷೇದನನ್ನು ಕುರಿತು) ನನ್ನ ಗದೆ ಭಲ್ಲೆಗಳನ್ನೂ ಸಿಂದುಸ್ಥಾನ್ ಖಡ್ಗವನ್ನೂ ತೆಗೆದುಕೊಂಡು ಬಾ ಹೋಗು.

ಇಬ್ಬರೂ : ಹುಕುಂ.

– ಹೋಗುವರು –

ತೆರೆ

## ನೋಟ ೮

[ಆಕ್ಸಸ್ ನದಿಯ ದಂಡೆಯಲ್ಲಿ ಮರಳಿನಮೇಲೆ ಎರಡೂ ಕಡೆಯ ಸೈನ್ಯಗಳು. ಕಾಳೆಗ ಪ್ರಚಾಲಕರು ಪೆರಾನ್‌ವೈಸಾ, ಘೆರೂದ್. ತುರಾನಿನ ಕಡೆ ಸೊಹ್ರಾಬನು ಕಣ್ಣು ತೆರೆದು ಕನಸಿನಲ್ಲಿರುವವನಂತೆ ನೋಡುತ್ತಿದ್ದಾನೆ. ಆ ಕಡೆಯಿಂದ ರುಸ್ತುಮನ ಪ್ರವೇಶ . . . ಸೊಹ್ರಾಬನು ನಾಲ್ಕಡಿ ಮುಂದೆ ಬರುವನು.

ರುಸ್ತುಂ ಬಂದವನು ದೂರದಿಂದಲೇ ಸೊಹ್ರಾಬನ ಮುಖವನ್ನೂ ಮೈಕಟ್ಟನ್ನೂ ವೀರಭಂಗಿಯನ್ನೂ ನೋಡಿ ಚಮಕಿತನಾಗಿ ಅವನ ಹತ್ತಿರಕ್ಕೆ ಬಂದು ಅವನ ಭುಜ ಗಳನ್ನು ಮುಟ್ಟಿ,]

ರುಸ್ತುಂ : ಸೊಹ್ರಾಬ್, ನೀನಿನ್ನೂ ಹುಡುಗನಾಗಿದ್ದೀಯೆ. ನೂರು ವರ್ಷ ಬದುಕಿ ಬಾಳಬೇಕಾದವನು ; ಪ್ರಚಂಡವಾದ ಕೀರ್ತಿಯನ್ನು ಸಂಪಾದಿಸಿದ್ದೀಯೆ ; ನಿನಗೇಕೆ ಇಂಥ ವಿಪರೀತ ಯೋಚನೆ ಬಂತು ? ಹಿತ ಹೇಳುವವರಿಲ್ಲದೆ ಹೋದರೆ ? ಅಲ್ಲವೊ, ಸಾವಿಗಿಂತ ಬದುಕು ಮೇಲಲ್ಲವೆ ? ಮಣ್ಣಿನಲ್ಲಿ ಮಲಗಿ ತಣ್ಣಗಾಗುವುದಕ್ಕಿಂತ ಈ ಸುಂದರವಾದ ಜಗತ್ತಿನಲ್ಲಿ ಸೂರ್ಯನ ಬೆಳಕು ಕಾವುಗಳಲ್ಲಿ ಬೆಚ್ಚಗಿದ್ದು ಬಾಳುವುದು ಮೇಲಲ್ಲವೆ ? ನಿನ್ನನ್ನು ನೋಡಿ ಕನಿಕರ ಬರುತ್ತಿದೆ. ನೋಡು, ನಿನಗಿಂತ ಆಕೃತಿಯಲ್ಲಿ ನಾನು ದೊಡ್ಡಾಳು ; ಪುಷ್ಟನಾಗಿದ್ದೇನೆ ; ಹೆಚ್ಚು ವರ್ಷಗಳ ಅನುಭವವುಳ್ಳವನು. ನನಗೆ ಸಮರಾದ ನೂರಾರು ಯೋಧರೊಡನೆ ಕಾಳಗ ಮಾಡಿದ್ದೇನೆ. ನಾನು ನಿಂತೆಡೆ ಶತ್ರುವಿಗೆ ಜಯವಾಗಿಲ್ಲ. ಕಂಡು ಕಂಡು ಸಾವಿನ ಬಾಯೊಳಕ್ಕೇಕೆ ನುಗ್ಗುವೆ ? ಬಾ ಸೊಹ್ರಾಬ್, ನನಗೆ ಗಂಡುಮಕ್ಕಳಿಲ್ಲ. ನಿನ್ನಂಥ ವೀರ ಯುವಕನು ಇರಾನಿನಲ್ಲೇ ಬೇರೊಬ್ಬನಿಲ್ಲ. ಈ ಕಾಳಗದ ಗೊಡವೆ ಬಿಡು, ನನ್ನೊಡನೆ ಬಾ. ಮಗನಂತೆ ನಿನ್ನನ್ನು ಸಾಕಿಕೊಳ್ಳುವೆನು. ನನ್ನ ಧ್ವಜದಡಿಯಲ್ಲಿ ಇದಕ್ಕೂ ಹೆಚ್ಚಿನ ಕೀರ್ತಿಯನ್ನು ಪಡೆ. ಇಲ್ಲವೆ, ನಮ್ಮೂರಿಗೆ ಹೋಗೋಣ. ಮೂರ್ಖತನ ಮಾಡಿ ನಾಶವಾಗಬೇಡ.

ಸೊಹ್ರಾಬ್ : (ಯಾವುದೋ ಮಗ್ನತೆಯಿಂದ ಎಚ್ಚತ್ತವನಂತೆದ್ದು, ಆತನ ಕೈಗಳನ್ನು ಹಿಡಿದುಕೊಂಡು) ವೃದ್ಧ ವೀರ, ನೀನಾರು ಹೇಳು. ನೀನು ರುಸ್ತುಮನೇನು ? ರುಸ್ತುಮನೇ ಅಲ್ಲವೆ ಹೇಳು.

ರುಸ್ತುಂ : (ಹಾಗೇ ಯೋಚಿಸುತ್ತ ಬಿಡಿಸಿಕೊಂಡು ಗೋದರ್ಸ್ ಅನ್ನು ಕುರಿತು) ನೋಡಿದೆಯಾ ಗೋದರ್ಸ್, ಈ ನರಿಯ ಯುಕ್ತಿಯನ್ನು ! ನಾನು ರುಸ್ತುಮನೆಂದು ಹೇಳಿದೆನೆನ್ನು ; ತಕ್ಷಣವೇ ಏನಾದರೊಂದು ನೆಪವೆತ್ತಿ ನನ್ನ ಪರಾಕ್ರಮವನ್ನು ಸ್ತುತಿಸಿ ಅದೊ ಇದೊ ಉಂಗಮಣಿ ಕೊಟ್ಟು, ಕಾಳಗವನ್ನು ನಿಲ್ಲಿಸಿ, ಯುದ್ಧಗಳು ಮುಗಿದು ತಾನು ತುರಾನಿಗೆ ಹಿಂತಿರುಗಿದಾಗ ವಿಶೇಷ ದಿನಗಳಲ್ಲಿ ಅನೇಕ ವೀರರು ಸಂದಣಿಸಿರುವಾಗಲೊ, ಅಫ್ರಾಸಿಯಾಬನ ಓಲಗದಲ್ಲಿಯೊ, ಉಪವನ ನಾಟ್ಯಗಳಲ್ಲಿ ಸುಂದರಿಯರ ಮಧ್ಯದಲ್ಲಿಯೊ, ಹಿಂದೆ ಇಂಥ ಒಂದು ಸಮಯದಲ್ಲಿ ಮಹಾ ಮಹಾವೀರರು ಅಕ್ಸಸ್ ತೀರದಲ್ಲಿ ನೆರೆದಿದ್ದ ವೇಳೆ 'ನಾನು ಕಾಳಗಕ್ಕೆ ತೋಳ್ತಟ್ಟಿ ಕರೆಯಲು ಇರಾನಿನವರಾರಿಗೂ ಧೈರ್ಯವಿಲ್ಲದೆ ಹೋಯಿತು ; ರುಸ್ತುಮನೊಬ್ಬನು ಮಾತ್ರ ಎದುರಿಗೆ ಬಂದು ನಿಲ್ಲಲು ಧೈರ್ಯಮಾಡಿದ. ಆಗ ನಾವು ಕೈ ಅಲುಗಿಸಿ ಸಮಾನಸ್ಕಂಧರಂತೆ ಮರ್ಯಾದೆಯಿಂದ ಬೀಳ್ಕೊಂಡೆವು' ಎಂದು ಬಡಾಯಿ ಕೊಚ್ಚುವನು. ಈ ತುರಾನೀ ಚಿಳ್ಳೆಗಳನ್ನು ನಾನು ಚೆನ್ನಾಗಿ

ಬಲ್ಲೆ. ನಾನದಕ್ಕೆ ಅವಕಾಶಕೊಟ್ಟೇನೆ? ನನ್ನ ಮೂಲಕ ಇರಾನಿಗೆ ಅಪಮಾನ ಮಾಡಿಸಿಯೇನೆ? (ಸೊಹ್ರಾಬನ ಕಡೆಗೆ ಪುನಃ ಬರುವನು)

ಸೊಹ್ರಾಬ್ : (ಇಷ್ಟರಲ್ಲಿ ಸೊಹ್ರಾಬನು ಪೆರಾನ್‌ವೈಸಾ ಹತ್ತಿರ ಹೋಗಿ) ನಿಮಗೆ ಹೇಗೆ ಕಾಣುವುದು ? ಆತನು ರುಸ್ತುಮರಂತಿಲ್ಲವೆ ?

ಪೆರಾನ್‌ವೈಸಾ : ಹಾಗೆ ಭ್ರಾಂತಿಯೇನೊ ಆಗುವುದು ಸೊಹ್ರಾಬ್. ಆದರೂ ಈತನು ರುಸ್ತುಮನಲ್ಲ. ರುಸ್ತುಮನು ಹೀಗೆ ಬಂದು ನಿಲ್ಲಬೇಕಾಗಿತ್ತೆ ? ಅವನ ಸಿಂಹ ನಾದವನ್ನೂ ನಾನರಿಯೆನೆ ? ಆತನ ಕವಚ ಕುಲಾವಿಗಳು ಇವೇ ? ಆತನ ಕುತ್ತಿಗೆ ಯಲ್ಲಿ ನರೆಯೆಂದರೇನು ? ಚರ್ಮದಲ್ಲಿ ಸುಕ್ಕೆಂದರೇನು ? ಉಹುಂ.

ರುಸ್ತುಂ : (ಸೊಹ್ರಾಬನು ಮರಳಿ ಬರಲು ಅರ್ಧ ಕುಪಿತ ಸ್ವರದಿಂದ) ನಾನು ಯಾರಾದರೇನು ? ಕಾಳೆಗಕ್ಕೆ ನೀನೊಬ್ಬ ವೀರನನ್ನು ಕರೆದಿದ್ದೀಯೆ, ವೀರ ನೊಬ್ಬನು ಬಂದು ನಿಂತಿದ್ದೇನೆ. ಇಷ್ಟು ಸಾಲದೇನು ?

ಸೊಹ್ರಾಬ್ : (ಬಾಗಿ ಆತನ ಮೊಣಕಾಲುಗಳನ್ನು ಕಟ್ಟಿಕೊಂಡು ಮುಖವೆತ್ತಿ ನೋಡುತ್ತ) ನಿನ್ನ ತಂದೆತಾಯ್ಗಳಾಣೆ, ನಿನ್ನಾತ್ಮದಾಣೆ ಹೇಳು, ನೀನೇ ರುಸ್ತುಮ ನಲ್ಲವೆ ? ನನ್ನನ್ನು ವಂಚಿಸಬೇಡ.

ರುಸ್ತುಂ : (ತಿರಸ್ಕಾರದಿಂದ ಬಿಡಿಸಿಕೊಂಡು) ಓಹೋ ಏಕೆ, ರುಸ್ತುಮನೆಂದು ಹೇಳಿದರೆ ಉಪಾಯದಿಂದ ನುಣಚಿಕೊಂಡು ನನ್ನನ್ನೊಡಂಬಡಿಸಿ ಕಾಳೆಗವನ್ನು ನಿಲ್ಲಿಸುವುದಕ್ಕೊ ? ಹೇಡಿಯಂತೆ ಆ ಪ್ರಶ್ನೆಯನ್ನೇಕೆ ಕೇಳುವೆ ? ಪೋರ ! ರುಸ್ತುಮರ ಹೆಸರನ್ನು ಕೇಳಿದೊಡನೆ ವೈರಿಗೆ ಎದೆ ನಡುಕ ಬರುವುದೋ. ಅವನ ಮುಖವನ್ನು ನೋಡಿ ವೈರಿ ಹೆದರಿ ಓಡುವನೋ. ರುಸ್ತುಮನೆ ಎದುರಿಗಿದ್ದಾ ನೆಂದು ತಿಳಿದೆಯಾದರೆ ನೀನು ಕಾಳೆಗ ಮಾಡುವೆಯೇನೊ ? ನಿನ್ನನ್ನೆದುರಿಸಿ ನಿಲ್ಲಲು ರುಸ್ತುಮನೇ ಆಗಬೇಕೊ ! ನಿನ್ನ ತಾಯಿ ಎರೆದಿರುವ ಹಾಲು ಬೆಣ್ಣೆಗಳ ಗುರುತು ಕೆನ್ನೆಗಳಿಂದ ಇನ್ನೂ ಅಳಿಸಿಹೋಗಿಲ್ಲ ! ರುಸ್ತುಮನನ್ನು ಬಿಟ್ಟು ಬೇರೊಬ್ಬರೊಡನೆ ಕಾಳೆಗ ಮಾಡೆಯೋ ! ಹ್ಹ ಹ್ಹ ಹ್ಹಾ, ನಾನೊಬ್ಬ ಅನಾಮ ಧೇಯನು ಬಂದಿದ್ದೇನೆ. ಧೈರ್ಯವಿದ್ದರೆ ನಿಂತು ಕಾಳೆಗಮಾಡು. ಇಲ್ಲವಾದರೆ ಕಾಲಿಗೆ ಬೀಳು. ಕ್ಷಮಾಪಣೆ ಬೇಡಿ ನಿನ್ನ ನರಿಮೋರೆಯನ್ನು ನನ್ನೆದುರಿಂದ ತೊಲಗಿಸಿಕೊಂಡು ಹೋಗು.

ಸೊಹ್ರಾಬ್ : (ಕನಲಿ) ಎಷ್ಟು ಸೊಕ್ಕೋ ನಿನಗೆ ? ವಯಸ್ಸಾಗಿದೆಯೆನ್ನುವೆ ? ಆದರೂ ಬಾಯಿಹಿಡಿದು ಮಾತನಾಡುವುದನ್ನು ನಿನಗೆ ಯಾರೂ ಕಲಿಸಿಲ್ಲವೆಂದು ತೋರುತ್ತಿದೆ. ನಾನು ಕಲಿಸುವೆನು ತಡೆ. ಮಾತುಗಳಿಗೆ ಹೆದರಿ ಹಿಮ್ಮೆಟ್ಟಿ ಬಳಿತುಕೊಳ್ಳುವುದಕ್ಕೆ ನಾನು ಹುಡುಗಿಯಲ್ಲ. ಯಾವುದೋ ಸಂದೇಹ ತೋರಿತು—ನೀನು ರುಸ್ತುಮನಲ್ಲವೇ ಎಂದು ಕೇಳಿದೆ. ಆದರೂ ನೀನು

ಹೇಳಿದ ಒಂದು ಮಾತ್ರ ನಿಜ ; ರುಸ್ತುಮರೇ ಇಲ್ಲಿದ್ದಿದ್ದರೆ ಈ ಕಾಳಗವಾಗುತ್ತಿರಲಿಲ್ಲ. ಅವರು ಬಲು ದೂರದಲ್ಲಿದ್ದಾರೆ. ಇಲ್ಲಿಗೆ ಹೇಗೆ ಬರಬೇಕು ? . . . ನೀನು ಹೆದರಿಸುವುದಕ್ಕೆ ಬರುವೆಯಾದರೆ, ನಿಲ್ಲು ಸೆಣಸು. ಎಲವೊ, ಆಳು ಆನೆಯಂತಿದ್ದ ಮಾತ್ರಕ್ಕೆ ಹೆಚ್ಚಿಗೆ ಬರುವುದೇನು ? ಹೆಚ್ಚು ಯುದ್ಧಗಳಲ್ಲಿ ನಿಂತು ನಿನ್ನ ಪರಾಕ್ರಮವನ್ನು ತೋರಿಸಿರಬಹುದು. ನಿನ್ನ ಶತ್ರುಗಳು ಆಗ ಸೋತು ಹಲ್ಲುಕಿರಿದಿದ್ದರೆ ಆಗ ಸೊಹ್ರಾಬನಂಥ ವೀರನಾವನೂ ಹುಟ್ಟಿರಲಿಲ್ಲ, ಕಂಡೆಯಾ. ಈಗ ಹುಟ್ಟಿ ಕಾಳಗಕ್ಕೆ ನಿಂತಿದ್ದಾನೆ. ವಯಸ್ಸಾದವನೆನ್ನುವೆ ! ಯುದ್ಧದಲ್ಲಿ ಅದೃಷ್ಟಗಳು ಹೇಗೆ ನಡೆಯುವುವೊ ಯಾರು ಬಲ್ಲರು ? ನಾವೆಲ್ಲರೂ ಸಾಗರದಲ್ಲಿ ಈಜುವವರಂತೆ, ಉಕ್ಕಲೆಗಳ ತುದಿಯಲ್ಲಿ ತೂಗಿಬಿದ್ದಿದ್ದೇವೆ. ಅಲೆಗಳು ಬೀಸಿ ಹೇಗೆ ತಳ್ಳುವುವೊ—ಎತ್ತಿ ದಡಕ್ಕೇ ಎಸೆಯುವುವೊ, ಇಲ್ಲವಾದರೆ ಸೆಳೆದು ಕೊಂಡು ಹೋಗಿ ಸಾಗರದ ತಳಕ್ಕೇ ತಳ್ಳುವುವೊ ಯಾರು ಬಲ್ಲರು ? ಕಾರ್ಯದ ಪರಿಣಾಮದಲ್ಲಿ, ಆ ಸಮಯದಲ್ಲಿ ಮಾತ್ರ ತಿಳಿದೀತು. ಎಂಥ ವೀರನಾಗಲಿ ವಿನಯವನ್ನು ಕಲಿವುದು ಮೇಲು. ಎಲ್ಲಿ, ನಿನ್ನ ಕೈಚಳಕವನ್ನು ನೋಡೋಣ, ಹೋರು ಬಾ. ನಿನ್ನ ಹೆಮ್ಮೆಯ ಧೋರಣೆಗೆ ಅಸ್ತಿಭಾರವಿದೆಯೇನೊ ನೋಡೋಣ.

ರುಸ್ತುಂ : ಭಲೆ, ಭಲೆ, ಎಂಥ ವೀರಾಲಾಪ ! ನಿನ್ನ ಧ್ವನಿಯನ್ನು ಕೇಳಿ ನಿನಗೇ ಸಂತೋಷವಾಗುತ್ತಿರುವಂತಿದೆ. ಅಮ್ಮನ ಮಡಿಲನ್ನು ಇನ್ನೂ ನಿನ್ನೆಮೊನ್ನೆ ಬಿಟ್ಟು ಬಂದದ್ದು . . . ಪ್ರಪಂಚಕ್ಕೆ ಕಣ್ಣು ತೆರೆಯುವುದರೊಳಗಾಗಿಯೆ ಯಮನ ಸದನಕ್ಕೆ ಹೋಗಬೇಕಾಗಿ ಬಂದಿದೆ, ಪಾಪ ! . . . (ತುತೂರಿ) . . . ನೀನು ಹಿಂತಿರುಗಿ ಹೋಗಲಾರೆ ಖಂಡಿತ, ಈ ಭಲ್ಲೆಯೊಂದನ್ನು ತಡೆ, ನೋಡುವ ! . . . (ಬೀಸಿ ಎಸೆಯುವನು. ಆ ಗುರಿಯಿಂದ ಹಾರಿ ಸೊಹ್ರಾಬನು ತಪ್ಪಿಸಿಕೊಳ್ಳುವನು, ಅದು ಮರಳು ಹಾರಿಸುವುದು. ರುಸ್ತುಮನು ಕೆಂಡ ಕೆಂಡವಾಗಿ ಗದೆಯನ್ನೆತ್ತಿ ಉರುಬಿನಿಂದ ಬಂದು . . .)

ರುಸ್ತುಂ : ಎಲವೆಲವೊ, ಇದು ನಾಟ್ಯಶಾಲೆಯಲ್ಲ ! ನೀನಿಲ್ಲಿ ನರ್ತಕನಲ್ಲ ! ಗುಲಾಮ, ಈ ಕುಣಿತವನ್ನು ಹೆಣ್ಣುಗಳೆದುರಿಗೆ ತೋರಿಸು ಹೋಗು. ಕಾಳಗ ಹುಡುಗಿಯಾಟವಲ್ಲ. ಈ ತೆರನಾದ ಯುದ್ಧವಿದ್ಯೆಯನ್ನು ನಿನಗೆ ಹೇಳಿಕೊಟ್ಟವರು ಯಾರು ? ಕಾಲಿನ ಚಟುವಟಿಕೆ ತೋಳಿಗಿಲ್ಲವೆಂದು ತೋರುವುದು. ನಿನ್ನ ದೇವರನ್ನು ಸ್ಮರಿಸಿಕೊ. ಈ ಗದೆ ನಿನ್ನ ಮೈ ಎಲುಬುಗಳನ್ನು ಮುರಿದು ನದಿಯ ದಂಡೆಯಲ್ಲಿ ಸೂರಿ ಚೆಲ್ಲುವುದು. ಅವು ಗಾಳಿಯಲ್ಲಿ ಬಿಳಿಯಬೇಕಾದೀತು. ಬರುವ ಬೇಸಗೆಯ ನೆರೆಯವರೆಗೂ ಅವು ಅಲ್ಲಿಯೇ ಬಿದ್ದಿರಬೇಕಾದೀತು, ಜೋಕೆ . . .

(ಗದೆಯನ್ನೆತ್ತಿ ತಿರುಗಿಸಿ ಸೊಹ್ರಾಬನ ತಲೆಗೆ ಗುರಿಯಿಟ್ಟು ಉರುಬಿನಿಂದ ಎರಡು ಕೈಗಳಿಂದಲೂ ಬೀಸುವನು. ಪಕ್ಕಕ್ಕೆ ಸರಿದು ಸೊಹ್ರಾಬನು ಸುಖವಾಗಿ ನಿಂತು, ತನ್ನ ಕೈ ಚಪಲವನ್ನು ಅಡಗಿಸುವನು . . . ಗುರಿತಪ್ಪಿದ ರಭಸದಲ್ಲಿ ರುಸ್ತುಮನು ಸ್ವಾಧೀನತಪ್ಪಿ ಮುಂದಕ್ಕೆ ಮುಗ್ಗರಿಸುವನು. ಆ ಸ್ಥಿತಿಯಲ್ಲಿ ರುಸ್ತುಮನನ್ನು ಹೊಡೆಯಲು ಮನಸ್ಸು ಬಾರದೆ, ಪುನಃ)

ಸೊಹ್ರಾಬ್ : ವೃದ್ಧ ವೀರನೆ, ಇನ್ನು ನಮ್ಮಿಬ್ಬರಿಗೂ ಯುದ್ಧ ಸಾಕು. ನಿಮ್ಮನ್ನು ಕೊಲ್ಲಲು, ನಿಮ್ಮ ರಕ್ತ ಹರಿಯುವುದನ್ನು ನೋಡಲು ಮನಸ್ಸೊಪ್ಪದು. ಹೀಗೇಕಾಗಿದೆಯೊ—ಈ ಮಮತೆಯನ್ನು ಯಾವ ದೇವರುಗಳು ತಂದೊಡ್ಡಿರುವರೋ ಕಾಣೆ. ನೀವು ರುಸ್ತುಮರಾಗಿರದಿದ್ದರೆ ಬೇಡ. ಇಲ್ಲಿಗೆ ಕಾಳೆಗವನ್ನು ನಿಲ್ಲಿಸಿ ಸಂಧಿಮಾಡಿಕೊಳ್ಳೋಣ. ಒಂದು ಲೋಟಾ ಮದ್ಯದಿಂದ ಮೈತ್ರಿ ಬೆಸೆಯೋಣ. ನೀವು ರುಸ್ತುಮರ ಕಥೆಗಳನ್ನೂ ವಿಚಾರಗಳನ್ನೂ ಹೇಳುತ್ತಿರಿ, ನಾನು ಕೇಳುತ್ತಿರುವೆನು. ಇಲ್ಲವಾದರೆ ನಮ್ಮ ನಮ್ಮ ಸ್ಥಾನಗಳಿಗೆ ನಾವು ಹಿಂತಿರುಗಿ ಹೋಗೋಣ. ಹುಡುಗನಾದರೂ ನಾನೂ ಯುದ್ಧಗಳನ್ನು ನೋಡಿದ್ದೇನೆ. ಸಾವಿರಾರು ಜನರನ್ನು ದಯೆಯಿಲ್ಲದೆ ಕೊಂದಿದ್ದೇನೆ. ಅವರ ರಕ್ತ ಚಿಮ್ಮಿ ಹರಿದು, ಅವರ ನರಳಾಟವನ್ನು ಕೇಳಿ ಮನಕರಗದೆ ಕಾದಿದ್ದೇನೆ. ಆದರೂ ನಿಮ್ಮ ಪರಾಭವವನ್ನು ಸಹಿಸಲಾರೆ. ನೀವಷ್ಟು ಯುದ್ಧ ಮಾಡಬೇಕಾದರೆ ತುರಾನಿನಲ್ಲಿ ಬೇಕಾದಷ್ಟು ಜನ ವೀರರಿದ್ದಾರೆ. ನಾನು ಸೆಣಸಿ ಸೋಲಿಸಲು ಇರಾನಿ ಸೈನ್ಯದಲ್ಲಿ ಬೇಕಾದಷ್ಟು ಮಂದಿಯಿದ್ದಾರೆ. ನನಗೂ ನಿಮಗೂ ಮಾತ್ರ ಕಾಳಗ ಬೇಡ, ದೇವರಾಣೆ.

ರುಸ್ತುಂ : (ಕೋಪದಿಂದ ತುಟಿಗಳು ನಡುಗುತ್ತ ಬಾಯಲ್ಲಿ ನೊರೆಬರುತ್ತಿರಲು ಭಯಂಕರನಾಗಿ) . . . ಎಲವೊ ಕುನ್ನಿ, ಬಾಯಿಗೆ ಬಂದಂತೆ ಹರಟಬೇಡ. ಬಾಲಕನೆಂದು ಕನಿಕರದಿಂದ ನಿನ್ನನ್ನು ಈವರೆಗೂ ಬಿಟ್ಟೆ. ಕನಿಕರ ಇನ್ನು ಹೋಯಿತು. ಮರುಳು ಮಾತುಗಳಿಂದ, ನಿನ್ನ ಹೆಣ್ಣು ನರ್ತನದಿಂದ ಎರಡು ಸೈನ್ಯಗಳೆದುರಿಗೆ ನನಗೆ ಅಪಮಾನ ಮಾಡಿದ್ದೀಯೆ ; ಬಾ, ಇದೇ ನಿನ್ನ ಕಡೆ.

(ಪ್ರಬಲವಾದ ಯುದ್ಧವಾಗುವುದು, ಒಬ್ಬರನ್ನು ಒಬ್ಬರು ಅಟ್ಟಿಸಿಕೊಂಡು ಕತ್ತಿ ಗದೆ ಹಿಡಿದು ಯುದ್ಧ ಮಾಡುತ್ತಾ ರಂಗದ ಸುತ್ತಲೂ ತಿರುಗಾಡುವರು)

ಗೋದರ್ಸ್ : ಅದೊ, ರುಸ್ತುಮರ ಗುರಿ ಈಗಲೂ ತಪ್ಪಿತು.

ಫೆರೂದ್ : ಸೊಹ್ರಾಬನ ಕೌಶಲ—ಆದರೂ ನೋಡು ಗೋದರ್ಸ್ ಆತ್ಮರಕ್ಷಣೆ ಮಾತ್ರ ಮಾಡಿಕೊಳ್ಳುತ್ತಿದ್ದಾನೆ.

ಸೊವಾರಾ : ಕೈಗೆ ಸಿಕ್ಕಿಸಿಕೊಂಡು ಮೇಲೆ ಎತ್ತಿ ಎಸೆಯಬೇಕೆಂದು ಪ್ರಯತ್ನ ಮಾಡುತ್ತಿದ್ದಾನೆ, ನೋಡು. ರುಸ್ತುಮನಿಗೆ ಈ ಪಟ್ಟು ಎಂದಿಗೂ ತಪ್ಪಿದ್ದಿಲ್ಲ.

ಗೋದರ್ಸ್ : ಆ ಪಟ್ಟೂ ತಪ್ಪಿ ಹೋಯಿತು. ಭಾಪು, ಭಾಪು ಸೊಹ್ರಾಬ್ !

ಪೆರಾನ್‌ವೈಸಾ : ಹೂಮಾನ್, ಅದು ಪ್ರಬಲವಾದ ಪಟ್ಟು-ಹಾ, ಭೇಷ್-ತಪ್ಪಿಸಿಕೊಂಡ, ಸೊಹ್ರಾಬನ ಮೈಯಲ್ಲಿ ಶತ್ರುವಿನ ತುಡುಕಿಗೆ ಹಿಡಿಗೆ ಆಯುವೆಲ್ಲಿ ಸಿಕ್ಕಬೇಕು ?

ಹೂಮಾನ್ : ಸೊಹ್ರಾಬನಿಗೆ ಏಟು ಬಿದ್ದಿತು—ಇಲ್ಲ—ಅವನ ಗುರಾಣಿಯ ಚರ್ಮ ಹರಿದು ಹೋಗಿ ಅದು ಮುಕ್ಕಾಯಿತು-ಔರಾ, ಔರಾ.

ಪೆರಾನ್‌ವೈಸಾ : ಎಷ್ಟು ಬಲವಾದ ಏಟನ್ನು ಗುರಿಯಿಟ್ಟು ಹೊಡೆದಿದ್ದಾನೆ ಸೊಹ್ರಾಬ್.

ಗೋದರ್ಸ್ : ಅರ್‌ಮಸ್ದ—ನಾರಿಮಾನ್—ರುಸ್ತುಮರ ತಲೆಗೆ ಏಟು ಬಿತ್ತು. ಅವರ ಕುಲಾವಿ ಕತ್ತರಿಸಿ ಬಿತ್ತು ನೋಡು.

ರುಸ್ತುಂ : (ಕೊನೆಗೆ) ರು..ಸ್ತುಂ..ಂ!

(ಸಿಂಹನಾದ ಮಾಡುತ್ತ ಸೊಹ್ರಾಬನ ಮೇಲೆ ಕವಿದು ಬರುವನು)

ಸೊಹ್ರಾಬ್ : ರು—ಸ್ತುಂ ! ರುಸ್—ತುಂ!!

(ಎನ್ನುತ್ತೆನ್ನುತ್ತ ಬಲಗೈ ಖಡ್ಗವನ್ನೂ ಎಡಗೈ ಗುರಾಣಿಯನ್ನೂ ಹಾಗೆಯೇ ಬೀಳುಬಿಟ್ಟು ಎದುರಿಗೆ ಬರುತ್ತಿರುವ ಭೀಷಣ ಮೂರ್ತಿಯನ್ನೇ ಎವೆಯಿಕ್ಕದೆ ದಿಟ್ಟಿಸಿ ನೋಡುತ್ತ ಆತನು ಪಕ್ಕದಲ್ಲಿ ತಿವಿಯಲು-'ರುಸ್ತುಂ ! ರುಸ್ತುಂ ! ಆ-ಹಾ' ಎಂದು ನೆಲಕ್ಕೆ ಉರುಳುವನು.

ಸೈನ್ಯದವರು ಆಶ್ಚರ್ಯಚಕಿತರಾಗಿ ಕಣ್ಣು ಬಾಯ್ಗಳನ್ನು ಬಿಟ್ಟು ಮೂಕರಂತೆ ನೋಡುತ್ತಿರುವರು)

ತೆರೆ

## ನೋಟ ೯

[ತುರಾನಿ ಪಾಳೆಯದ ಹಿಂದುಗಡೆ. ಡೇರೆ ಕಾಯುವ ಕಾವಲಿನವನ ಪಹರೆ. ಸುಲೇಮಾನ್ ತಹಮೀನ ಅವರ ಪ್ರವೇಶ]

ತಹಮೀನ : ಸುಲೇಮಾನ್, ಈ ಪಹರೆಯುವನನ್ನು ಕೇಳು.

ಸುಲೇಮಾನ್ : ಇಲ್ಲಿಂದ ಕಾಳೆಗವಾಗುವ ರಂಗಕ್ಕೆ ಇನ್ನೂ ಎಷ್ಟು ದೂರವಿದೆ ?

ಕಾವಲವನು : ಕಾಲು ಘಂಟೆಯ ನಡಿಗೆ ಜನಾಬ್. ಆದರೆ ನೀವು ಈಗ ಈ ದಾರಿಯಲ್ಲಿ ಹೋಗುವ ಹಾಗಿಲ್ಲ. ಯುದ್ಧ ಮುಗಿದ ತುತೂರಿ ಕೇಳಿಸುತ್ತಿದೆ. ಸೈನ್ಯಗಳೆಲ್ಲ ಹಿಂತಿರುಗುತ್ತಿರಬೇಕು.

ಸುಲೇಮಾನ್ : ಬೇರೆ ದಾರಿಯೇ ಇಲ್ಲವೆ ? ಈ ದಿನ ವಿಶೇಷ ಸಮಾಚಾರವೇನು, ದ್ವಂದ್ವಯುದ್ಧವೆನ್ನುತ್ತಿದ್ದರಲ್ಲ ?

ಕಾವಲವನು : ಹೌದು. ಆದರೆ ಸೈನ್ಯದವರು ಬರುವ ತನಕ ಆ ಸಮಾಚಾರ ತಿಳಿಯುವ ಹಾಗಿಲ್ಲ. ಭಯಂಕರ ಕಾಳಗವಾಗಿರಬೇಕು.

ಸುಲೇಮಾನ್ : ಹಾಗೇಕೆ ಹೇಳುತ್ತೀಯೆ ?

ಕಾವಲವನು : ಇಲ್ಲದಿದ್ದರೆ ಸೊಹ್ರಾಬರಿಗೆ ಮೂರು ಘಂಟೆಯ ಕಾಲ ಬೇಕಾಗುತ್ತಿರಲಿಲ್ಲ.

ಸುಲೇಮಾನ್ : ಇರಾನ್ ಕಡೆಯ ವೀರನಾರು ?

ಕಾವಲವನು : ತಿಳಿಯದು. ರುಸ್ತುಮವರನ್ನುಳಿದು ಬೇರೆ ಯಾರು ನಿಂತರೂ ಸೊಹ್ರಾಬ್‌ಜೀಯವರಿಗೆ ಕಡ್ಡಿಯ ಸಮಾನ.

ತಹಮಿೂನ : ಏನು ರುಸ್ತುಂಜೀಯೆ ? ಅವರು ಮಗುವಿನ ಮೇಲೆ ಯುದ್ಧಕ್ಕೆ ನಿಂತಿದ್ದಾರೆಯೆ ? ಅಯ್ಯೋ—

ಕಾವಲವನು : ನನಗೆ ತಿಳಿಯದು ಮಾಯಿ. ಅವರೆಲ್ಲಿ ಬಂದಾರು ? ಒಂದು ವೇಳೆ ಬಂದಿದ್ದರೆ, ಎಂದು ನಾನು ಸುಮ್ಮನೆ ಯೋಚಿಸಿಕೊಂಡೆ.

ತಹಮಿೂನ : ಈತನ ಯೋಚನೆ ನಿಜವಾಗದಿರಲಿ ದೇವರೇ ! ಬೇರೆ ಯಾವುದೂ ದಾರಿಯೇ ಇಲ್ಲವೆ, ಆ ಸ್ಥಳಕ್ಕೆ ಹೋಗುವುದಕ್ಕೆ ?

ಕಾವಲವನು : ಈಚೆ ಕಡೆಯಿಂದ ಕಲ್ಲು ಮುಳ್ಳು ಹಾಯ್ದು ಬಳಸಿ ಹೋಗಬೇಕು. ನದಿಯ ದಂಡೆಯಲ್ಲೆ. ಇನ್ನು ನೀವು ಹೊರಡಿ. ಸೈನ್ಯದವರು ಬರುತ್ತಿದ್ದಾರೆ. ನಾನು ಹೀಗೆ ಜನದ ಕೈಯಲ್ಲಿ ಮಾತನಾಡುತ್ತಿರುವುದನ್ನು ಅವರು ಕಾಣಬಾರದು.

ತಹಮಿೂನ : ಏನಾಗಿದೆಯೊ ಕಾಣೆನಲ್ಲ ಸುಲೇಮಾನ್. ಬೇಗ ಬೇಗ ಹೆಜ್ಜೆ ಹಾಕು. . .ಸ್ವಲ್ಪ ತಾಳು, ಕಾಲಿಗೆ ಈ ಮುಳ್ಳುಗಳು ಅಡ್ಡಲಾಗಿವೆ. (ಮುಳ್ಳುಗಳನ್ನು ಮುರಿದು ಕಿತ್ತು ಕಾಲಿನಲ್ಲಿ ರಕ್ತ ಸುರಿಯುತ್ತಿರಲು, ಬಟ್ಟೆ ಹರಿದಿರಲು ಭರದಿಂದ) ಉಂ ನಡೆ.

ಸುಲೇಮಾನ್ : ಸ್ವಲ್ಪ ತಾಳಿ, ಇಷ್ಟು ಹೊತ್ತೇ ಆಯಿತು. ಅತಿ ಆತುರದಿಂದ ಏನು ಪ್ರಯೋಜನ ? ಇದಕ್ಕೂ ಮುಂಚೆ ನಾವು ಬರುವುದು ಸಾಧ್ಯವಾಗಲಿಲ್ಲ ತಾಯಿ. ವೃಥಾ ಆಯಾಸ ಹೆಚ್ಚುವುದು.

ತಹಮಿೂನ : ಒಂದು ಕ್ಷಣವೂ ತಡೆಯಲಾರೆ. ನಡೆ ನಡೆ. ನೀನೆಷ್ಟು ಜಾಗ್ರತೆ ಕರೆದುಕೊಂಡು ಹೋದರೆ ನಾನಷ್ಟು ಬೇಗನೆ ಬರುತ್ತೇನೆ. ದೇವರೇ, ದೇವರೇ, ನನ್ನ ಮಗುವನ್ನುಳಿಸು.

– ಹೋಗುವರು –

ತೆರೆ

# ನೋಟ ೧೦

[ಪುನಃ ಯುದ್ಧರಂಗ. ಸರದಾರರು ಕೆಲವರು ಮಾತ್ರ ಎರಡು ಕಡೆಯವರೂ ಇರುವರು. ನಡುವೆ ಸೊಹ್ರಾಬನು ನೆಲದ ಮೇಲೆ ಬಿದ್ದಿರುವನು. ರುಸ್ತುಮನು ಜಯೋನ್ಮತ್ತನಾಗಿ ಒಂದು ಭಲ್ಲೆಯ ಮೇಲೂರಿಕೊಂಡು ನಿಂತಿರುವನು.]

ರುಸ್ತುಂ : ನಿನ್ನ ಔದ್ಧತ್ಯಕ್ಕೆ ತಕ್ಕ ಶಿಕ್ಷೆಯಾಯಿತು ! ಈ ದಿನ ಇರಾನಿ ವೀರನೊಬ್ಬ ನನ್ನು ಜಯಿಸಿ ಅವನನ್ನು ಸುಲಿದು ಕೀರ್ತಿಯನ್ನು ಸೂರೆಗೊಂಡು ನಿನ್ನ ರಾಜನನ್ನು ಒಲಿಸಬೇಕೆಂದಿದ್ದೆ ; ಅಥವಾ ರುಸ್ತುಮನೇ ಸ್ವಯಂ ಕಾಳಗಕ್ಕೆ ನಿಂತಿದ್ದರೆ ನಿನ್ನ ಯುಕ್ತಿಯಿಂದ ಅವನನ್ನು ಮರುಳುಮಾಡಿ, ಅವನನ್ನು ಸಂಧಿಗೊಡಂಬಡಿಸಿ ನಿನ್ನ ಹೆಚ್ಚಿಗೆಯನ್ನು ಎಲ್ಲ ಕಡೆಗೂ ಹರಡಿ ಅದು ನಿನ್ನ ತಾಯಿ ತಂದೆಗಳಿಗೆ ಕರ್ಣಾಮೃತವಾಗುವಂತೆ ಮಾಡಬೇಕೆಂದಿದ್ದೆ. ಮೂಢ, ಈಗ ಏನಾಯಿತು ನೋಡು : ಇಲ್ಲಿ ಸಾಯಲು ಬಿದ್ದಿರುವೆ. ಈ ಸ್ಥಿತಿಯಲ್ಲಿ ಯಾವ ರಾಜನಿಗೆ, ಯಾವ ತಾಯಿತಂದೆಗಳಿಗೆ ಪ್ರಿಯನಾದೀಯೆ ? ನರಿ ನಾಯಿಗಳಿಗೆ ಹೆಚ್ಚು ಆದರನಾದೀಯೆ ಅಷ್ಟೇ. ರುಸ್ತುಮನನ್ನು ಕಾಳಗಕ್ಕೆ ಕರೆದ ವೀರನು ಅಜ್ಞಾತನೊಬ್ಬನಿಂದ ಪರಾಜಿತನಾಗಿ ಬಿದ್ದಿರುವೆ !

ಸೊಹ್ರಾಬ್ : (ನೋವಿನಲ್ಲಿಯೇ ತಲೆಯೆತ್ತಿ) ನೀನು ಹೆಸರಿಲ್ಲದವನು ನಿಜ. ಆದರೂ ನಿನ್ನ ಹೆಮ್ಮೆಯನ್ನು ಸಾಕುಮಾಡು. ನಿನ್ನ ಶಕ್ತಿ ನನ್ನನ್ನು ಮುರಿಯ ಲಿಲ್ಲವೋ ! ನನ್ನನ್ನು ಕೊಂದವನು ನೀನಲ್ಲ. ನನ್ನ ತಂದೆ ರುಸ್ತುಮರು ; ನೀನು ನುಡಿದ ಅವರ ಹೆಸರು. ಅದರ ಜೊತೆಗೆ ಪ್ರೇಮದಿಂದ ತುಂಬಿದ ಈ ನನ್ನ ಹೃದಯ. ಈ ದಿನದವರೆಗೂ ಆಗಿದ್ದ ಸೊಹ್ರಾಬನೇ ಇಂದೂ ನಾನಾಗಿದ್ದಿದ್ದರೆ ನಿನ್ನಂಥ ಹತ್ತು ಜನರು ನನ್ನ ಒಂದು ತೋಳಿಗೆ ಸರಿ ನಿಲ್ಲು ತ್ತಿದ್ದಿರೇನೊ ? ಆ ಹತ್ತು ಜನರೂ ನನ್ನಂತೆ ಹೀಗೆ ಕೆಳಗೆ ಬಿದ್ದಿರುತ್ತಿದ್ದರು. ನೀನು ಈಗ ನಿಂತಿರುವಂತೆ ಜಯದಲ್ಲಿ ನಾನು ನಿಂತಿರುತ್ತಿದ್ದೆ. ಅಲ್ಲ ! ನಿನ್ನ ಗಂಡಗರ್ವವೆಷ್ಟು ? ರುಸ್ತುಮರ ಹೆಸರನ್ನು ಕೇಳಿ ಕತ್ತಿ ಗುರಾಣಿಗಳನ್ನು ನಾನು ಕೆಳಗೆ ಬಿಟ್ಟಾಗ, ಹೇಡಿ, ಶಸ್ತ್ರರಹಿತನಾಗಿದ್ದ ನನ್ನನ್ನು,—ಹಿಂದೆ ನಾಲ್ಕಾರು ಬಾರಿ ನನಗೆ ಅನುಕೂಲ ದೊರೆತಿದ್ದಾಗ ಕನಿಕರದಿಂದ ನಿನ್ನ ಪ್ರಾಣ ಉಳಿಸಿದ ನನ್ನನ್ನು ಇರಿದಿರುವೆ. ಇದೆಂಥಾ ವೀರ ! ಆದರೂ ಹೇಳುವೆನು ಕೇಳಿ ನಡುಗು : ಈ ಸಮಾಚಾರ ರುಸ್ತುಮರ ಕಿವಿಗೆ ಬೀಳದಿರದು.

ರುಸ್ತುಂ : ರುಸ್ತುಮರಿಗೂ ಇದಕ್ಕೂ ಸಂಬಂಧವೇನು ?

ಸೊಹ್ರಾಬ್ : ಇದೆ.

ರುಸ್ತುಂ : ರುಸ್ತುಮರ ಮಗನು ?

ಸೊಹ್ರಾಬ್ : ಹೌದು. . . ನಾನು. ತಮ್ಮ ಮಗನನ್ನು ಎಂಥ ಸನ್ನಿವೇಶದಲ್ಲಿ ಕೊಂದಿರುವೆಯೆಂದು ಅವರಿಗೆ ಬೇಗನೆ ತಿಳಿಯುವುದು. ಇದರ ಸೇಡು ತೀರಿಸಿ ಕೊಳ್ಳಲು ಅವರಿನ್ನೂ ಬದುಕಿದ್ದಾರೆ. ನಿನ್ನ ರಕ್ತಮಾಂಸಗಳನ್ನು ದಿಕ್ಕು ದಿಕ್ಕಿಗೂ ಎರಚಿ ಚೆಲ್ಲಿಯಾಡಲು ಅವರು ಬರುವಾಗ ನೀನೆಲ್ಲಿ ಹೋಗಿ ಅಡಗಿ ಕೊಳ್ಳಬಲ್ಲೆ ? ಯಾರು ನಿನ್ನನ್ನು ಸಂರಕ್ಷಿಸಿಯಾರು ! ಇಂಥ ಮಗನನ್ನು ಕಳೆದುಕೊಂಡೆನೆಂದು ತಿಳಿದ ಬಳಿಕ ಅವರಿಗಾಗುವ ದುಃಖವು ಎಂಥದೆಂಬುದನ್ನು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳಬಲ್ಲೆಯೇನೊ ನೀನು ? ಅಯ್ಯೋ—ಆ ದುಃಖವನ್ನು ನೋಡುವವರೆಗಾದರೂ ನಾನು ಬದುಕಿರಬಲ್ಲೆನಾದರೆ. . . ಅವರನ್ನು ಕೊನೆಗೂ ಕಾಣದೆಯೇ—

ರುಸ್ತುಂ : ಹುಚ್ಚು ಹರಟೆ. ಇವನಿಗೆ ಜ್ಞಾನಪಲ್ಲಟವಾಗಿದೆ. ತಂದೆಯಂತೆ—ಮಗನಂತೆ—ದುಃಖವಂತೆ—ಸೇಡಂತೆ !

ಸೊಹ್ರಾಬ್ : (ಅದು ಕೇಳದವನಂತೆ). . . ಆತನ ವಿಚಾರದಲ್ಲಿ ನನಗಷ್ಟು ವ್ಯಸನವಿಲ್ಲ. ಆಕೆ, ನನ್ನ ತಾಯಿ, ದೂರದಲ್ಲಿ ಅದೇರ್‌ಬೈಜಾನಿನಲ್ಲಿ ನನಗಾಗಿ ಕಾದು ತಪಿಸುತ್ತಿರುವ ಆಕೆಗಾಗಿ ವ್ಯಸನ. ಈ ಸಮಾಚಾರ ಆಕೆಯ ಕಿವಿಗೂ ಬೀಳುವುದು. ಜಯಶೀಲನಾಗಿ ಕೀರ್ತಿಯನ್ನು ಹೊತ್ತು ತರುವನು, ಪತಿಯನ್ನು ಕರೆದುಕೊಂಡು ಬರುವನು ಎಂದು ಕಾದಿರುವ ಆಕೆಗೆ, ಪಾಪ, ಸಿಡಿಲು ಬಡಿದಂತಾಗುವುದು. ಅಯ್ಯೋ ಆಕೆಯನ್ನು ಸಂತೈಸುವರಾರು ? ಮಗನಿನ್ನು ತನ್ನೆಡೆಗೆ ಬಾರನು, ಅವನ ಮುಖವೂ ಇನ್ನಿಲ್ಲವಾಯಿತು, ಅಜ್ಞಾತನೊಬ್ಬನಿಂದ ಅವನು ಹತನಾದನು ಎಂದು ಕೇಳಿ ಆ ಹೆಂಗುಸು ಹೇಗೆ ಸಹಿಸಿಯಾಳು ?

ರುಸ್ತುಂ : ಇದೇನು ಅಸಂಬದ್ಧ ಪ್ರಲಾಪ ? ಅದೇರ್‌ಬೈಜಾನ್—ತಾಯಿ—ರುಸ್ತುಮನ ಮಗನು—ಇವನು—ನನಗೆ ಒಂದೂ ಅರ್ಥವಾಗುತ್ತಿಲ್ಲ. ರುಸ್ತುಮರಿಗೆ ಮಗನೆಲ್ಲಿದ್ದಾನೊ ? ನಿನಗಾರು ಹೇಳಿದವರು.

ಸೊಹ್ರಾಬ್ : ಇದ್ದ—ಇಂದಿನವರೆಗೂ. ನಾನೇ ಅವನು. ತಹಮೀನೆಯ ಮಗನು.

ರುಸ್ತುಂ : ತಹಮೀನ ಹೆತ್ತವಳು ಮಗಳು. ಮಗಳೂ ಅವಳೂ ಅವರ ಊರಿನಲ್ಲಿ ಸಮಂಗಾನಲ್ಲಿ ಎಲ್ಲಿಯೊ ಕುಳಿತು ಸಂಸಾರದ ಕೆಲಸಗಳಲ್ಲಿರಬೇಕು. ನಿನಗೂ ಅವರಿಗೂ ಏನು ಸಂಬಂಧ ? ನಿನಗಾರೊ ಮೋಸ ಮಾಡಿರಬೇಕು. ಅಥವಾ

ನಿನ್ನ ಕೀರ್ತಿಯನ್ನು ಹೆಚ್ಚಿಸಲೆಂದು ನಿನ್ನ ತಂದೆ ರುಸ್ತುಮರೆಂದು ಸುಳ್ಳು ಹೇಳಿರಬೇಕು.

ಸೊಹ್ರಾಬ್ : (ಒಂದು ಕೈಮೇಲೆ ಪಕ್ಕಕ್ಕೆದ್ದು) ಏನೆಂದು ಹೇಳಿದೆ ? ನನ್ನ ಮಾತನ್ನು ಸುಳ್ಳೆಂದು ಹೇಳುವವನು ನೀನಾರು ! ನಿನಗೆಷ್ಟು ದಿಟ್ಟತನ ! (ಭಲ್ಲೆಯನ್ನು ಕೈತಡವಿ ಹುಡುಕಿ ಅದು ಸಿಕ್ಕದಿರಲು) ಸಾಯುವವನ ಬಾಯಿಂದ ಸುಳ್ಳು ಹೊರಟೀತೇನೊ ? ನಾನು ಬದುಕಿದ್ದಷ್ಟು ದಿನವೂ ಸುಳ್ಳು ನನ್ನ ಹೆಸರಿದ್ದವರ ಬಳಿ ಕೂಡ ಬರಲಂಜುತ್ತಿತ್ತು.

ರುಸ್ತುಂ : ತಹಮೀನೆಯೇ ಕಾಗದ ಬರೆದು ಕಳುಹಿಸಿದ್ದಾಳೆ.

ಸೊಹ್ರಾಬ್ : ಕಾಗದದಲ್ಲಿ ತಿಳಿಸಿದುದು ಸುಳ್ಳು ಸಮಾಚಾರ. ಪ್ರೀತಿಯ ಅಜ್ಞಾನದಲ್ಲಿ ಮಾಡಿದ ಯೋಚನೆ ಅದು. ಪತಿಯಂತೆ ನಾನೂ ಕೈತಪ್ಪಿ ಹೋಗುವೆನೆಂಬ ಭಯದಿಂದ ಹಾಗೆ ಮಾಡಿದಳು. ಇದರ ನಿಜವನ್ನು ರುಸ್ತುಮರಿಗೆ ತಿಳಿಸುವುದಕ್ಕಾಗಿಯೇ ಅವರನ್ನು ಹುಡುಕಿಕೊಂಡು ಈ ಮೂರು ತಿಂಗಳಿಂದಲೂ ನಾನು ದೇಶ ದೇಶವೂ ಅಲೆಯುತ್ತಿದ್ದುದು. . .ಅಮ್ಮಾ. . .ಅಮ್ಮಾ. . .

ರುಸ್ತುಂ : ಅದಕ್ಕಾಗಿ ಹುಡುಕಿಕೊಂಡು ತಿರುಗುತ್ತಿದ್ದುದು ! ಇದು ನಿಜವೆ ? ನನ್ನ ಕಿವಿಗಳು ಸರಿಯಾಗಿ ಕೇಳುತ್ತಿವೆಯೆ ! ಇದಕ್ಕೆ ನಿನ್ನ ಪ್ರಮಾಣವೇನು ? ಸಾಕ್ಷಿ ಯಾರು ?

ಪೆರಾನ್‌ವೈಸಾ : ಈ ವಿಚಾರ ನನಗೂ ತಿಳಿದು ಬಂದಿತ್ತು ಸ್ವಾಮಿ. ಸರದಾರರ ಇಷ್ಟದಂತೆ ಅದನ್ನು ಯಾರಿಗೂ ತಿಳಿಸಲಿಲ್ಲ.

ರುಸ್ತುಂ : ನಿಮಗೂ ತಿಳಿದಿತ್ತೆ ?. . . (ಹುಚ್ಚನಂತಾಡುವನು)

ಸೊಹ್ರಾಬ್ : ಸೊಹ್ರಾಬನ ಮಾತಿಗಿಂತ ನಿನಗೆ ಪ್ರಮಾಣ ಬೇಕೆ ? ಈ ತೋಳ ಬಂದಿಯನ್ನು ನೋಡು. ಪ್ರಯಾಣಕ್ಕೆ ಮುಂಚೆ ನನ್ನ ತಾಯಿ ಕಟ್ಟಿದ ಈ ರಕ್ಷಾಬಂಧನವನ್ನು ನೋಡು ; ಮೊಳಕೈ ಮೇಲೆ ಹುಯ್ದಿರುವ ಹಕ್ಕಿಯ ಹಚ್ಚೆಯನ್ನು ನೋಡು. ಅವು ರುಸ್ತುಮರಿಗೆ ಸೇರಿದವೊ ಅಲ್ಲವೊ ತಿಳಿಯುವುದು.

ರುಸ್ತುಂ : ಅಂಥ ಪ್ರಮಾಣಗಳು ಸುಳ್ಳಾಗಲಾರವು. (ಕಳವಳಿಸಿ ಬಾಗಿ ತೋಳ ಕವಚವನ್ನು ಬಿಚ್ಚುತ್ತ) ಅವನ್ನು ನೀನು ತೋರಿಸಿದರೆ ನೀನು ಹೇಳುವುದು ನಿಜ. ನೀನು ರುಸ್ತುಮರ ಮಗನೇ ಖಂಡಿತ.

(ಕೈ ನಡುಕ ಬಂದು ತೋಳಬಂದಿಯನ್ನು ಕೆಳಗೆ ಬೀಳಬಿಟ್ಟು)

ಅಯ್ಯೋ ಮೋಸವಾಯಿತು—ಮೋಸವಾಯಿತು ! ಅಯ್ಯೋ....ಅಯ್ಯೋ....

(ಹಿಂದತ್ತ ಬೀಸಿಕೊಂಡು ತತ್ತರಿಸಿ ಬರುವನು)

ಸೊಹ್ರಾಬ್ : ಈಗೇನು ಹೇಳುವೆ? ನಾನು ರುಸ್ತುಮರ ಮಗನೊ ಅಲ್ಲವೊ? ಇವು ರುಸ್ತುಮರ ಗುರುತುಗಳೊ ಬೇರೊಬ್ಬರವೊ?

ರುಸ್ತುಂ : (ಉನ್ಮತ್ತನಾಗಿ) ಅಯ್ಯೋ ಮೋಸ ಮಾಡಿದರು—ಸರ್ವನಾಶವಾಯಿತು—ಮಗೂ ಮಗೂ, ಸೊಹ್ರಾಬ್, ನಾನೇ ನಿನ್ನ ತಂದೆ! ನಿನ್ನನ್ನು ಘಾತಿಸಿದ ಪಾಪಿ ತಂದೆ! (ಅವನ ಮುಖದಲ್ಲಿ ಮುಖವಿಟ್ಟು ಅಳುವನು)

ಎಲ್ಲರೂ : ಇವರು ತಂದೆ ಮಕ್ಕಳೇ — ಏನನ್ಯಾಯವಾಯಿತು — ಏನನ್ಯಾಯ ವಾಯಿತು!

(ಶೋಕದ ಭರದಲ್ಲಿ ಸ್ವಾಸ್ಥ್ಯ ತಪ್ಪಿ ರುಸ್ತುಮನು ಮೂರ್ಛೆ ಹೋಗುವನು. ಸೊಹ್ರಾಬನು ಅವನ ಹತ್ತಿರಕ್ಕೆ ಒರಗಿಕೊಂಡು ಬಂದು ಪ್ರೀತಿಯಿಂದ ಆತನ ತಲೆಯನ್ನೂ ಮುಖವನ್ನೂ ಸವರುತ್ತಿರುವನು)

ಸೊಹ್ರಾಬ್ : ನೀವೇ ರುಸ್ತುಮರೇ–ಹೌದು ಹೌದು. ಲಕ್ಷಣಗಳು ನಿಮ್ಮವೆಂದು ಗುರುತಿಸಿಯೇ ನಿಮ್ಮಲ್ಲಿ ನಾನು ಶಾಂತಿಯ ಮಾತಾಡಿದ್ದು–ಅಪ್ಪಾ, ಅಪ್ಪಾ, ಕಣ್ಣು ತೆರೆಯಿರಿ–ನನ್ನ ಕೂಡ ಮಾತನಾಡಿ ...

(ಸ್ವಲ್ಪ ಹೊತ್ತಿನಲ್ಲಿ ಎಚ್ಚರಗೊಂಡ ರುಸ್ತುಮನು ಕೆಳಗಿನ ಮರಳನ್ನು ತಲೆಗೆ ಹುಯ್ದು ಕೊಳ್ಳುತ್ತ, ತನ್ನ ತಲೆಯ ಕೂದಲನ್ನು ಕಿತ್ತೆಳೆಯುತ್ತ, ಹುಚ್ಚುಹುಚ್ಚಾಗಿ ತಿರುಗಾಡುತ್ತ...)

ರುಸ್ತುಂ : ಎಲವೊ ಗೋದರ್ಸ್, ಪೆರಾನ್‌ವೈಸಾ, ಎಷ್ಟು ದಿನಗಳಿಂದ ಇದಕ್ಕೆ ಸಂಚು ಮಾಡಿದ್ದಿರಿ? ನನ್ನೆದುರಿಂದ ತೊಲಗಿ ಹೋಗಿ! ಇಲ್ಲವಾದರೆ—(ಕತ್ತಿಯನ್ನು ಜಳಪಿಸುತ್ತ ಅವರನ್ನಟ್ಟಿ ಹೋಗಿ) ಈ ಕತ್ತಿಯಿಂದ ಇಂದು ಪಾರಾಗಲಾರಿರಿ. (ಕಣ್ಣೀರಿಡುತ್ತ, ತಲೆಬಾಗಿಸಿ ಅವರು ಹೊರಟು ಹೋಗುವರು) ಛೀ.... ಏನು ಮಾಡುತ್ತಿದೇನೆ?

(ಹಿಂದಕ್ಕೆ ಬಂದು) ಮಗು, ನೀನೆಷ್ಟು ವಿನೀತನಾಗಿ ಬೇಡಿಕೊಂಡೆ! ನಾನು ಅಣಕಿಸಿದೆನೇ! ತಾಯಿಯ ಮನೆಯಿಂದ ಹೊರಟುದು ತಂದೆಯ ಭಲ್ಲೆಗೆ ತುತ್ತಾಗುವುದಕ್ಕಾಯಿತೇ? ಕಂದ ನಿನ್ನನ್ನು ಸೋಲಿಸಲು ಶಕ್ತಿಯಿಲ್ಲದೆ ನೀನು ಆಯುಧವನ್ನು ಕೆಳಗೆ ಹಾಕಿದಾಗ ಹೇಡಿಯಂತೆ ನಿನ್ನನ್ನು ತಿವಿದು ಕೊಂದೆನೇ! ಹುಡುಗನಾದ ನಿನಗಿದ್ದ ಔದಾರ್ಯವು ರುಸ್ತುಮನಾದ ನನಗಿಲ್ಲದೆ ಹೋಯಿತೇ!.... ಇದ್ದೊಬ್ಬ ಮಗನನ್ನು ಕೈಯಾರ ಕೊಂದ ಘಾತಕನು ನೀನು ರುಸ್ತುಂ! ನೀನಿನ್ನು ಜೀವದಿಂದ ಇರಬಾರದು... — ಈ ಹಾಳು ಕೈಗಳು ಎಷ್ಟು ರಕ್ತದಲ್ಲಿ ತೊಯ್ದಿವೆ! ಈ ಖಡ್ಗದಿಂದ ಎಷ್ಟು ಜನ ತಂದೆಯರಿಗೆ ಪುತ್ರಶೋಕವುಂಟು ಮಾಡಿದ್ದೇನೆ! ಎಷ್ಟು ಜನ ಸಾಧ್ವಿಯರಿಗೆ ವೈಧವ್ಯ ತಂದಿದ್ದೇನೆ! ಛೀ ಪಾಪಿ, ಪಾಪಿ....

(ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸುತ್ತಿರುವನು)

ಸೊಹ್ರಾಬ್ : ಕೊಡದು, ಕೊಡದು ಅಪ್ಪಾ ; ಈ ರೀತಿ ಮಾಡುವುದು ನಿಮ್ಮಂಥ ವೀರರಿಗೆ ಉಚಿತವಲ್ಲ.

ರುಸ್ತುಂ : ವೀರರು, ವೀರರು ! ಘಾತಕರು ವೀರರೆಂತಾದಾರು ? ನನ್ನ ಕಾಲದಲ್ಲಿ ಎಷ್ಟು ಜನ ವೀರಾಳುಗಳನ್ನು ಕೊಂದು ನನ್ನ ಕೀರ್ತಿಯನ್ನು ಸ್ಥಾಪಿಸಿದೆ ! ನಷ್ಟ ನಮಗಾಗುವವರೆಗೂ ಯುದ್ಧದ ದುಃಖಗಳು ನಮಗೆ ಮನಗಾಣುವುದಿಲ್ಲ.... ಅಯ್ಯೊ, ಅವರೆಲ್ಲರೂ ಇಂದು ಬದುಕುವಂತಾದರೆ, ತಮ್ಮ ತಮ್ಮ ತಂದೆ ತಾಯಿ, ಹೆಂಡಿರು ಮಕ್ಕಳನ್ನು ಸೇರುವಂತಾದರೆ—ಅದಕ್ಕಾಗಿ ಬೇಕಾದರೆ ನನ್ನಾತ್ಮವನ್ನು ಮಾರಿ ಕೊಡುತ್ತೇನೆ,—ಮಗೂ ಮಗೂ, ಇನ್ನೀ ಕೈಯಿಂದ ಖಡ್ಗವನ್ನೆತ್ತುವುದಿಲ್ಲ.

ಸೊಹ್ರಾಬ್ : ನೀವಿನ್ನೂ ಮಹತ್ಕಾರ್ಯಗಳನ್ನು ಮಾಡಬೇಕಾಗಿದೆ. ನಿಮ್ಮಂಥವರು ಮಹತ್ಕಾರ್ಯ ಸಾಧನೆಗೇ ಹುಟ್ಟಿದ್ದೀರಿ. ತಂದೆಯ ಕೀರ್ತಿಯೇ ಮಗನದು, ಮಗನ ಕೀರ್ತಿ ತಂದೆಯದು. ಹೀಗೆ ಚಿಂತಿಸಿ ಫಲವಿಲ್ಲ.

ರುಸ್ತುಂ : ಫಲವಿಲ್ಲ. ಫಲವೆಲ್ಲಿ ಬಂತು ?

ಸೊಹ್ರಾಬ್ : ಹೀಗೇ ಆಗಬೇಕೆಂದು ನಾನು ಹುಟ್ಟುವಾಗಲೆ ವಿಧಿನಿಯಮವಾಗಿತ್ತು. ಅದನ್ನು ದಾಟಬಲ್ಲವರಾರು ? ತಂದೆಯೊಡನೆ ಮಾತ್ರ ಯುದ್ಧಕ್ಕೆ ನಿಲ್ಲಬೇಡೆಂದು ಎಚ್ಚರಿಸಿ, ಹೊರಡುವಾಗ ನನ್ನ ತಾಯಿ ಒತ್ತಿ ಒತ್ತಿ ಹೇಳಿದ್ದಳು. ನಿಮ್ಮ ಮೇಲೇ ಕಾಳಗಕ್ಕೆ ನಿಲ್ಲಬೇಕಾಯಿತು. ಕರುಳು ತಿಳಿದು ನೀವು ರುಸ್ತುಮರಲ್ಲವೇ ಎಂದು ನಾನು ಅಂಗಲಾಚಿ ಬೇಡಿಕೊಂಡಾಗ ನಿಮ್ಮ ಮನಸ್ಸಿಗೆ ವಿಪರೀತ ಕಲ್ಪನೆಗಳು ತೋರಿದುವು ; ನೀವು ಆಗ್ರಹ ಮಾಡುವಂತಾಯಿತು. ನಾನು ಚೆನ್ನಾಗಿ ಬಲ್ಲೆ ! ಮಮತೆಯು ನಿಮ್ಮಲ್ಲಿಯೂ ಅಂಕುರಿಸಿತು. ಆ ಮಮತೆ ಪ್ರೀತಿಗಳನ್ನು ಮೆಟ್ಟಿ ತುಳಿಯಿತು ವಿಧಿ. ವಿಧಿ ಮುಟ್ಟಿದ ಬೆಣಚುಕಲ್ ಬೆಟ್ಟಗಳು ಜೇನು ಮಯಣವಾಗುವುವು. ಬೆಣ್ಣೆ ಬೆಣಚುಕಲ್ಲಾಗುವುದು. ಯಾರೇನು ಮಾಡಿ ಯಾರು ? ನನ್ನ ಕಾಲವಿಷ್ಟಕ್ಕೇ ಮುಗಿಯಿತು. ನೀವು ಸಹಿಸಬೇಕು. ಗಾಳಿಯಂತೆ ಬಂದೆ, ನೀರಿನಂತೆ ಹೋಗುತ್ತಿದ್ದೇನೆ.

ರುಸ್ತುಂ : (ಹತ್ತಿರಕ್ಕೆ ಮಗನನ್ನು ಸೆಳೆದುಕೊಂಡು ನೋಡುತ್ತ) ಈ ವಯಸ್ಸಿಗೆ ನಿನಗಿಷ್ಟು ಸಹನೆಯನ್ನಾರು ಕಲಿಸಿದರು ಮಗು ! ನಿನ್ನನ್ನು ಮಗನೆಂದು ಕರೆಯು ವುದಕ್ಕೂ ನನಗಧಿಕಾರವಿಲ್ಲ. ನಿನಗೂ ನಿನ್ನ ತಾಯಿಗೂ ದೊಡ್ಡ ಅನ್ಯಾಯ ಮಾಡಿದೆ ; ದುಷ್ಕರ್ಮಕ್ಕೆ ತಕ್ಕ ಪ್ರಾಯಶ್ಚಿತ್ತವಾಯಿತು. ಅಯ್ಯೋ, ಸೊ-ಹ್ರಾ-ಬ್ ! ಸೊ-ಹ್ರಾ-ಬ್ !!

ಸೊಹ್ರಾಬ್ : ವೃಥಾ ದುಃಖಿಸಬೇಡಿ. ನಿಮ್ಮನ್ನು ನೋಡಬೇಕೆಂಬುದು ನನ್ನ ಜೀವದ ಮುಖ್ಯ ಆಸೆಯಾಗಿತ್ತು. ಆ ಆಸೆ ನೆರವೇರಿತು. ಇನ್ನು ನಾನು ನಿಮ್ಮ ಮಗನೆಂದು

ನೀವರಿತುದು ನನಗೆ ತಿಳಿಯುವಂತೆ ಒಂದು ಸಲ ಮುದ್ದಿಸಿ ನಿಮ್ಮ ಕಣ್ಣೀರನ್ನು ಮೇಲೆ ಹರಿಯಿಸಿ. ನನಗೆ ಬೇರಾವ ಅಪೇಕ್ಷೆಯೂ ಇಲ್ಲ. ತೃಪ್ತಿಯಾಗುವುದು.

(ರುಸ್ತುಮನ ದುಃಖ ಕೋಡಿಹರಿವುದು. ಮುದ್ದಿಸುವನು. ರುಸ್ತುಮನ ಕುದುರೆ ಇಬ್ಬರ ನಡುವೆ ತಲೆಯಿಕ್ಕಿ ಬಂದು ಸೊಹ್ರಾಬನ ತಲೆಯನ್ನು ಮೂಸಿನೋಡಿ ರುಸ್ತುಮನ ಮುಖಕ್ಕೆ ಮುಖವಿಡುವುದು)

ರುಸ್ತುಂ : (ಅದನ್ನು ತಳ್ಳುತ್ತ) ಹೋಗಾಚೆಗೆ ರಾಕುಷ್,—ಈ ಘೋರವನ್ನು ನೋಡುವುದಕ್ಕೆ ಈಗ ಬರುವೆ. ಈ ರಂಗಕ್ಕೆ ನನ್ನನ್ನೇಕೆ ಹೊತ್ತು ತಂದೆ ? ದಾರಿಯಲ್ಲಿಯೇ ನಿನ್ನ ಕಾಲುಗಳೇಕೆ ಬೀಳವಾಯ್ತು ?

ಸೊಹ್ರಾಬ್ : ಅಪ್ಪಾ, ಇದೇಯೆ ರಾಕುಷ್ ? ಬಾ ರಾಕುಷ್. ಎಷ್ಟೋ ಬಾರಿ ನಿನ್ನ ಗುಣಗಳನ್ನೂ ಸಾಹಸಗಳನ್ನೂ ಕೇಳಿದ್ದೇನೆ. ನಿನ್ನ ಪುಣ್ಯ ನನಗಿಲ್ಲದೆಹೋಯಿತು. (ಅದರ ಆಯಲನ್ನು ಪ್ರೀತಿಯಿಂದ ಸವರುತ್ತ) ನೀನು ಸರ್ವದಾ ತಂದೆಯವರ ಹತ್ತಿರವಿರುವೆ. ಅವರ ಸೇವೆ ಮಾಡಿರುವೆ. ಅವರ ಊರುಗಳಲ್ಲಿ ತಿರುಗಾಡಿ ಅಲ್ಲಿನ ನದಿ ಸರೋವರಗಳಲ್ಲಿ ದಾಹವಾರಿಸಿಕೊಂಡಿರುವೆ. ತಾತಂದಿರು ಸಾಲ್ ರವರ ಸ್ವಂತ ಕೈಯಿಂದ ಹುಲ್ಲು ತಿಂದಿರುವೆ. ನಾನೋ–ಅಪ್ಪಾ, . . .

ರುಸ್ತುಂ : ಮಗು—

ಸೊಹ್ರಾಬ್ : ರಾಕುಷಿನ ಮೇಲೆ ಇರಿಸಿಕೊಂಡು ನನ್ನ ದೇಹವನ್ನು ಸಾಬುಲಿಸ್ತಾನಿಗೆ ತೆಗೆದುಕೊಂಡು ಹೋಗಬೇಕು. ನನ್ನನ್ನು ಇವರೊಡನೆ ಹಿಂದಕ್ಕೆ ಊರಿಗೆ ಕಳುಹಿಸಬೇಡಿ. ಅಮ್ಮನು . . . ಈ ದುಃಖವನ್ನು ಸಹಿಸಲಾರಳು. ಮೂರು ತಿಂಗಳೊಳಗೆ ಅವರ ಬಳಿಗೆ ನಿಮ್ಮನ್ನು ಕರೆದುತರುವೆನೆಂದು ನಾನು ಅವರಿಗೆ ಭಾಷೆ ಕೊಟ್ಟಿದ್ದೆ . . . ಅಮ್ಮಾ . . . ಅಮ್ಮಾ . . . (ನೋವಿನಲ್ಲಿ ಕಣ್ಣು ಮುಚ್ಚುವನು)

– ಸುಲೇಮಾನ್ ತಹಮೀನೆಯರ ಪ್ರವೇಶ –

ತಹಮೀನ : ಸುಲೇಮಾನ್, ಅವರೆಲ್ಲಿರುವರು ಬೇಗನೆ ತೋರಿಸು ; ಸೊಹ್ರಾಬ್— ಸೊಹ್ರಾಬ್—ನನ್ನನ್ನು ವಂಚಿಸಿ ನೀನೆಲ್ಲಿ ಹೋದೆ—ಇನ್ನಾರನ್ನು ಸೊಹ್ರಾಬ್ ಎಂದು ಕರೆಯಲಿ, ಬೇಟಾ—

ಸುಲೇಮಾನ್ : ಹೀಗೆ ತಾಯಿ, ಹೀಗೆ ಬನ್ನಿ . . .

ತಹಮೀನ : (ಒಂದೇ ಹಾರಿಗೆ ಹೋಗಿ ಸೊಹ್ರಾಬನನ್ನು ಎತ್ತಿಕೊಂಡು ತೊಡೆಯ ಮೇಲೆ ಮಲಗಿಸಿಕೊಂಡು ಅಳುತ್ತ) ಸೊಹ್ರಾಬ್, . . . ದೇವರೇ, ನನ್ನ ಜೀವವನ್ನು ತೆಗೆದುಕೊಂಡು ನನ್ನ ಮಗುವನ್ನು ಉಳಿಸಿಕೊಡು. ಸೊಹ್ರಾಬ್, (ಅವನ ಕೆನ್ನೆಗೆ ತನ್ನ ಕೆನ್ನೆಯನ್ನುಜ್ಜುತ್ತ) ಅವರೊಡನೆ ಯುದ್ಧ ಮಾಡಬೇಡ ವೆಂದು ಬೇಡಿಕೊಂಡಿದ್ದೆ . . . ಅಯ್ಯೋ, ಮಗೂ—ಮಗೂ. ನೆಲದ ಮೇಲೆ

ಹೆಜ್ಜೆಯಿಟ್ಟರೆ ಸವೆಯುವೆಯೆಂದು ಪೋಷಿಸಿದ ಮೈ ರಣವಾಗಿದೆಯೇ ! ನಿನ್ನಾ ಕೃತಿಯನ್ನೂ ಶಕ್ತಿಯನ್ನೂ ನೋಡಿ ಅವರಿಗೆ ನಿನ್ನ ಗುರುತಾಗದೆ ಹೋಯಿತೆ ? —ಕರುಣೆ ಬರಲಿಲ್ಲವೆ ? ಈ ರಕ್ತವನ್ನು ಹೇಗೆ ನೋಡಲಿ ಮಗೂ . . . ಅವರನ್ನು ಕರೆದುಕೊಂಡು ಬರುವೆಯೆಂದು ದಾರಿ ಕಾಯುತ್ತ ಎಷ್ಟೋ ಆಸೆ ಪಟ್ಟುಕೊಂಡು ಕುಳಿತಿದ್ದೆನೇ ! ತಂದೆಯನ್ನು ಹುಡುಕ ಹೋದವನಿಗೆ ಗೋರಿ ಗತಿಯಾಯಿತೆ ! ಇನ್ನು ನಾನು ಹೇಗೆ ಬದುಕಲಿ, ಮಗೂ ; ನಿನ್ನನ್ನು ಹೊಯ್ಯುವ ಮುನ್ನ ನಿನ್ನ ತೋಳಿನ ಮೇಲಿನ ರಕ್ಷಾಬಂಧನ ಅವರಿಗೆ ಕಾಣಬಾರದಾಗಿತ್ತೆ ! ನಾನು ಬೇಡಿಕೊಂಡಂತೆ ನಿನ್ನ ಜೊತೆಯಲ್ಲಿಯೇ ನನ್ನನ್ನು ಕರೆದುಕೊಂಡು ಬಾರದೆ ಹೋದೆಯೇ ! ಎಷ್ಟು ದೂರದಿಂದಲಾದರೂ ಅವರು ನನ್ನನ್ನು ಗುರುತಿಸುತ್ತಿದ್ದರು. ನಿನ್ನ ತಾಯನ್ನು ಅತಂತ್ರಳನ್ನಾಗಿ ಮಾಡಿ ಏಕೆ ಕಣ್ಣು ಮುಚ್ಚಿದೆ, ಕಂದ . . .

ರುಸ್ತುಂ : (ಮೇಲೆದ್ದು ನಿಂತು ತಡೆಯಲಾರದ ದುಃಖದಿಂದ ಇಬ್ಬರನ್ನೂ ನೋಡುತ್ತಿದ್ದು) ಈ ಅಪರಾಧಕ್ಕಾಗಿ ಯಾವ ಶಿಕ್ಷೆಯನ್ನು ಬೇಕಾದರೂ ಅನುಭವಿಸಲು ಸಿದ್ಧನಾಗಿದ್ದೇನೆ. ಅರಿಯದೆ ಆಯಿತು ಮೈನಾ, ನೀನೂ ನಿಜವನ್ನು ಮರೆಮಾಚಿದೆ.

ತಹಮೀನ : ನಿಮ್ಮದೇನು ತಪ್ಪು ! ನನ್ನ ದುರದೃಷ್ಟ ; ಹೇಗೆಯೋ ಯೋಚಿಸಿದುದು ಹೇಗೆಯೋ ಆಯಿತು.

ರುಸ್ತುಂ : ನೀನು ಕಳುಹಿಸಿದ ಆ ಸಮಾಚಾರ ಇಷ್ಟನರ್ಥಕ್ಕೆ ಕಾರಣವಾಯಿತು.

ತಹಮೀನ : ಹೀಗೆಲ್ಲ ಆಗುವುದೆಂದು ಯಾರು ಎಣಿಸಿದ್ದರು ? ಹೇಗಾದರೇನು ನನ್ನ ಬಾಳು ಬರಿದಾಯಿತು ! ನನ್ನ ಕರುಳು ಕುಯಿದು ಬಿದ್ದಿತು . . . ಸೊಹ್ರಾಬ್, ಕಣ್ಣು ತೆರೆಯಮ್ಮ, ನಾನು ಮಗು,—

ಸೊಹ್ರಾಬ್ : (ಆಕೆಯ ಪಕ್ಕಕ್ಕೆ ಅರ್ಧ ಕಣ್ಣು ತೆರೆದು) ಹಾ . . . ಎದೆ ಉರಿಯುತ್ತಿದೆ . . . ಇದಾರು . . . ಅಮ್ಮನಲ್ಲವೇ . . . ಅಮ್ಮ . . .

ತಹಮೀನ : ನಾನು ಕಂದ, ಗುರುತು ತಿಳಿಯಿತೆ ರಾಬ್ಬೀ ?

ಸೊಹ್ರಾಬ್ : ಬಂದೆಯಾ ಅಮ್ಮ, ಕೊನೆಗೆ ನಿಮ್ಮನ್ನು ನೋಡದೆ ಸಾಯಬೇಕಾಯಿತೆ ಎಂದು ಸ್ವಲ್ಪ ವ್ಯಸನವಿತ್ತು. ದೇವರು ಕರೆತಂದನಮ್ಮ, ನೀವು ಬಂದಿರಲ್ಲ.

ತಹಮೀನ : ಬಂದೆ—ಮುಂದೆ ಎಂದೆಂದಿಗೂ ನಿನ್ನನ್ನು ಕಳೆದುಕೊಳ್ಳುವುದಕ್ಕಾಗಿ ಬಂದೆ. ಯುದ್ಧ ಬೇಡವೆಂದು ಬೇಡಿಕೊಂಡಿದ್ದೆ ಮಗು—ನೀನು ಕೇಳಲಿಲ್ಲ.

ಸೊಹ್ರಾಬ್ : ಈ ರೀತಿಯೇ ಆಗಬೇಕಾಗಿತ್ತಮ್ಮ. ನನ್ನ ಇಚ್ಛೆ ನಡೆಯಲಿಲ್ಲ. ಅದಾರು-ಸುಲೇಮಾನನೆ ? ಹತ್ತಿರ ಬಾ ಸುಲೇಮಾನ್, ತಲೆಬಾಗಿಸಿ ಏಕೆ ನಿಂದೆ? ನನಗಿದು ಸಂತೋಷದ ದಿನ. ನನ್ನಿಂದ ನಿಮಗೆಲ್ಲ ತುಂಬ ತೊಂದರೆಯಾಯಿತು.

(ಸುಲೇಮಾನನು ಹಲ್ಲು ಕಚ್ಚಿ ಅವನ ಕೈಗಳನ್ನು ತನ್ನ ಕೈಯಲ್ಲಿ ಮೃದುವಾಗಿ ಹಿಡಿದು ತನ್ನ ತಲೆಯ ಮೇಲಿರಿಸಿಕೊಂಡು ಕಣ್ಣೀರು ಸುರಿಸುತ್ತಿರುವನು)

ಅಪ್ಪಾ, ಅಮ್ಮನನ್ನೂ ನಿಮ್ಮನ್ನೂ ಸೇರಿಸುವೆನೆಂದು ಅವರಿಗೆ ಮಾತು ಕೊಟ್ಟಿದ್ದೆ—ದೇವರು ದೊಡ್ಡವನು—ಆ ಆಸೆಯನ್ನು ನಡಸಿಕೊಟ್ಟ.

ರುಸ್ತುಂ : ನಡಸಿಕೊಟ್ಟ—

ಸೊಹ್ರಾಬ್ : ಅಮ್ಮ, ನನ್ನ ಮಾತಿನಂತೆ ನಾನು ನಡೆದುಕೊಂಡಿದ್ದೇನೆ. ನಾನು ಹೇಳಿರಲಿಲ್ಲವೆ-ನಿಮಗೆ ವ್ಯಾಕುಲ ಬೇಡೆಂದು ?

ತಹಮೀನ : ನಡೆದುಕೊಂಡಿದ್ದೀಯೆ ಮಗು.

ಸೊಹ್ರಾಬ್ : ನನ್ನ ಇಷ್ಟಗಳೆಲ್ಲವೂ ಈಗ ನೆರವೇರಿದಂತಾಯಿತು. ಅಲ್ಲವೆ ಸುಲೇಮಾನ್ ?

ಸುಲೇಮಾನ್ : ಎಲ್ಲರಿಗೂ ಸಂತೋಷವಾಗುವಂತೆ ನೆರವೇರಿಸಿದ್ದೀರಿ.

ಸೊಹ್ರಾಬ್ : ಇನ್ನೆಂದಿಗೂ ನೀವು ಅಮ್ಮನನ್ನು ಒಬ್ಬಳಾಗಿ ಬಿಟ್ಟಿರಕೂಡದು ಅಪ್ಪಾ. (ರುಸ್ತುಂ ತಹಮೀನೆಯರಿಗೆ ದುಃಖವು ಮೀರಿಬರುವುದು)

ಅಪ್ಪಾ, ಸರದಾರರಿಗೆ ಹೇಳಿಕಳುಹಿಸಿ ಸಂಧಿಮಾಡಿ. ತುರಾನ್-ಇರಾನ್ ಯುದ್ಧ ನನ್ನೊಂದಿಗೆ ನಿಲ್ಲಲಿ. ತುರಾನಿಯವರನ್ನು ನೀವು ಶಿಕ್ಷಿಸಬೇಡಿ. ಅವರದೇನು ತಪ್ಪಿಲ್ಲ. ನನಗೋಸ್ಕರವಾಗಿ ಅವರು ಈ ಯುದ್ಧವನ್ನು ಹೂಡಿದರು . . .

ರುಸ್ತುಂ : ಶಿಕ್ಷೆ-ಶಿಕ್ಷೆ-ನಾನೆ ? ಇನ್ನು ಶಿಕ್ಷೆಯ ಯೋಚನೆಯೆ ?—ಆಗಲಿ ಮಗು.

ಸೊಹ್ರಾಬ್ : ಪೆರಾನ್‌ವೈಸಾ ಅವರು ನನಗೆ ಬಹು ಉಪಕಾರ ಮಾಡಿದರು. ಅಫ್ರಾಸಿಯಾಬರು ಅಣ್ಣನಂತೆ ನೆರವಿತ್ತರು. ಅವರಿಗೆ ನನ್ನ ನಮಸ್ಕಾರ ತಿಳಿಸಿ (ನೋವಿನಿಂದ) ಅ-ಹ-ಅ-ಹ-

ರುಸ್ತುಂ : ಸುಲೇಮಾನ್, ಸರದಾರರನ್ನು ಕರೆದುಕೊಂಡು ಬಾ, ಹೋಗು.

– ಫೆರೂದ್, ಪೆರಾನ್‌ವೈಸಾ ಇಬ್ಬರೂ ಬರುವರು –

(ಅವರ ಕೈಗಳನ್ನು ಸೇರಿಸಿ) ಪೆರಾನ್‌ವೈಸಾಜೀ, ಈ ಯುದ್ಧವು ಇಲ್ಲಿಗೆ ನಿಲ್ಲಲಿ. ನೀವು ಸುರಕ್ಷಿತವಾಗಿ ನದಿಯನ್ನು ದಾಟಿ ಹೋಗಿ. ಇರಾನಿನವರಿಂದ ನಿಮ್ಮವರಿಗೆ ಯಾವ ತೊಂದರೆಯೂ ಉಂಟಾಗದು. ಇದು ನನ್ನ ಮಗುವಿನ

ಇಚ್ಛೆ. ನೀವೂ ನಿಮ್ಮ ರಾಜರೂ ಅದಕ್ಕೆ ಬಹು ಉಪಕಾರಮಾಡಿದ್ದೀರಂತೆ. ನಾನು ಕೃತಜ್ಞನಾಗಿದ್ದೇನೆ. ಇದನ್ನು ದಯವಿಟ್ಟು ಅಫ್ರಾಸಿಯಾಬರಿಗೂ ತಿಳಿಸಿ.

(ಕಣ್ಣೀರು ತುಂಬಿ ಅವರಿಬ್ಬರೂ ಸೊಹ್ರಾಬನಿಗೆ ಮುಜರೆ ಮಾಡುವರು)

ಫೆರೂದ್, ಈ ಘೋರವಿನ್ನು ಸಾಕು. ನೀವು ಸೈನ್ಯದೊಡನೆ ಊರಿಗೆ ಹೋಡಿ. ಇಲ್ಲಿ ನಡೆದುದನ್ನೆಲ್ಲ ನೀನು ನಿಮ್ಮ ರಾಜನಿಗೆ ತಿಳಿಸು. ಇನ್ನು ಮೇಲೆ ನನ್ನ ಪಾಡು ನನ್ನದು.

ಜಾಮ್‌ಷೇದ್, ಜಾಮ್‌ಷೇದ್ ! —(ಬರುವನು)— ಡೇರೆಗಳನ್ನೆತ್ತಿ ಪ್ರಯಾಣಕ್ಕೆ ಸಿದ್ಧರಾಗಿ. —(ಹೋಗುವನು)— (ಪುನಃ ಸೊಹ್ರಾಬನಿರುವಲ್ಲಿಗೆ ಬಂದು) ನಿನ್ನ ಇಚ್ಛೆಯಂತೆ ಎಲ್ಲವನ್ನೂ ಮಾಡಿರುವೆನು ಮಗು.

ಸೊಹ್ರಾಬ್ : ನನ್ನ ಕೆಲಸವಾಯಿತು. ನಾಲ್ಕು ದಿನವಿದ್ದು ನಿಮ್ಮಿಬ್ಬರ ಸೇವೆಮಾಡುವ ಭಾಗ್ಯವೊಂದು ಮಾತ್ರ ದೊರೆಯಲಿಲ್ಲ. ಆದರೆ ಮನುಷ್ಯನ ಆಸೆಗೆ ಮಿತಿಯೆಲ್ಲಿ ? . . . . ಈ ನೋವನ್ನು ತಾಳಲಾರೆ. ಬರ್ಚಿಯನ್ನು ಹೊರಕ್ಕೆ ತೆಗೆದುಬಿಡಿ. ಸುಖವಾಗಿ ಪ್ರಾಣ ಬಿಡುವೆನು.

ರುಸ್ತುಂ : ಖುದಾ, ಖುದಾ, ನನ್ನ ಕೈಯಿಂದಲ್ಲಾಗದು.

ಸೊಹ್ರಾಬ್ : ಅಪ್ಪಾ, ನನ್ನ ದೇಹವನ್ನು ಸಾಬುಲಿಸ್ತಾನಕ್ಕೇ ತೆಗೆಸಿಕೊಂಡು ಹೋಗುವಿರಿತಾನೆ ?

ರುಸ್ತುಂ : ತೆಗೆದುಕೊಂಡು ಹೋಗುವೆನು.

ಸೊಹ್ರಾಬ್ : ಅದನ್ನು ಸಾಲರಿಗೆ ತೋರಿಸಿ ನರೀಮಾನ್ ಸಾಮ್‌ರವರ ಗುಂಬಸುಗಳ ಹತ್ತಿರವೆ ನನಗೂ ಸಮಾಧಿ ಮಾಡಿಸಬೇಕು.

ರುಸ್ತುಂ : ಮಾಡಿಸುವೆನು.

ಸೊಹ್ರಾಬ್ : ನನ್ನ ಗೋರಿಯ ತೆನೆ ಉಳಿದ ಎಲ್ಲಕ್ಕಿಂತಲೂ ಎತ್ತರವಾಗಿರಬೇಕು.

ರುಸ್ತುಂ : ಎಲ್ಲಕ್ಕಿಂತ ಎತ್ತರವಾಗಿ ಕಟ್ಟಿಸುವೆನು.

ಸೊಹ್ರಾಬ್ : ಸುತ್ತು ಹತ್ತು ಮೈಲಿಯ ದೂರಕ್ಕೆ ಅದು ಕಾಣಿಸುವಂತಿರಬೇಕು. ಅದನ್ನು ನೋಡಿದವರು, ಅದು ಸೊಹ್ರಾಬನ ಗೋರಿ ; ತಂದೆ ರುಸ್ತುಮನು, ಪಾಪ, ಮಗನೆಂದರಿಯದೆ ಕಾಳಿಗದಲ್ಲಿ ಕೊಂದ ಸೊಹ್ರಾಬನದು ಎಂದು ಗುರುತಿಸುವಂತಿರಬೇಕು.

ರುಸ್ತುಂ : ಆಗಲಿ.

ಸೊಹ್ರಾಬ್ : ಇನ್ನು ನನ್ನನ್ನು ಕಳುಹಿಸಿಕೊಡಿ ಅಪ್ಪ.

ರುಸ್ತುಂ : ಹೀಗೆ ಬಾ ಸುಲೇಮಾನ್,

ಸೊಹ್ರಾಬ್ : ಕೂಡದು ಕೂಡದು, ನೀವೇ ತೆಗೆಯಬೇಕು. ನಿಮ್ಮ ಮಗನು ನೋವಿಗೆ ಅಂಜನು.

(ರುಸ್ತುಮನು ಬೇರೆ ಕಡೆಗೆ ಮುಖ ತಿರುಗಿಸಿ ಬರ್ಚಿಯನ್ನು ತೆಗೆಯುವನು; ರಕ್ತ ಉಕ್ಕಿ ಹರಿಯುವುದು)

ರುಸ್ತುಂ-ತಹಮೀನ : ಹಾ, ಹಾ-ಸೊಹ್ರಾಬ್-ಮಗೂ-ಮಗೂ !

ಸೊಹ್ರಾಬ್ : (ಕ್ಷೀಣ ಸ್ವರದಿಂದ) ನೀವು ದುಃಖಿಸಬೇಡಿ. ಇದಕ್ಕಿಂತ ಮೇಲಾದ ಮರಣ ಯಾರಿಗೆ ಬಂದೀತು ? ವೀರನಂತೆ ಕಾದಿ ಸಾಯುತ್ತಿದ್ದೇನೆ. ನಿಮ್ಮ ಮಗನೆಂಬ ಬಿರುದಿಗೆ ತಕ್ಕಂತೆ ನಾನು ಕಾಳಗಮಾಡಿದೆನೆ, ಅಪ್ಪ ?

ರುಸ್ತುಂ : ಸೋತವನು ನಾನು. ಇನ್ನೊಬ್ಬನು ನಿನ್ನಂತೆ ಈವರೆಗೂ ನನ್ನೆದುರಿಗೆ ಯುದ್ಧಮಾಡಿಲ್ಲ. ಬೇರೊಬ್ಬರಿಂದ ನಾನಿಂಥ ಪೆಟ್ಟು ತಿಂದಿಲ್ಲ.

ಸೊಹ್ರಾಬ್ : ಈ ಮಾತು ನಿಜವೆ ? ಧನ್ಯ-ಸೊಹ್ರಾಬ್, ಧನ್ಯ !

ರುಸ್ತುಂ : ಸಾರಿಸಾರಿಗೂ ನಿಜ. ಎರಡು ಸೈನ್ಯಗಳು ಇದಕ್ಕೆ ಸಾಕ್ಷಿ. ನನ್ನ ದುರಭಿಮಾನವೇ ಸಾಕ್ಷಿ.

ಸೊಹ್ರಾಬ್ : ನಿಮ್ಮನ್ನು ನೀವು ಹಳಿದಾಡಿಕೊಳ್ಳಬೇಡಿ. ಇದಕ್ಕಿಂತಲೂ ಹೆಚ್ಚಿನ ಕೀರ್ತಿ ಏನುಬೇಕು ಹೇಳಮ್ಮ—ಅಮ್ಮಾ—

ತಹಮೀನ : ಆ . . .

ಸೊಹ್ರಾಬ್ : ನಾನು ಹುಟ್ಟಿದಂದಿನಿಂದ ನಿಮಗೆ ಕಷ್ಟವೇ ಆಯಿತು. ಇನ್ನು ಹೋಗಿ . . . ಬರುತ್ತೇನೆ . . .

ತಹಮೀನ : ನನ್ನನ್ನು ಬಿಟ್ಟು ಹೋಗಬೇಡ-ಬೇಡ . . (ಇನ್ನೂ ಹತ್ತಿರ ಅಪ್ಪಿಕೊಂಡು ಮುದ್ದಾಡುವಳು)

ಸೊಹ್ರಾಬ್ : ಸೈರಿಸಿ—ಸೈರಿಸಿ . . . ಬಾಬೂಜೀಯವರಿದ್ದಾರೆ. ಅಲ್ಲಿ ನೋಡಿ, ಆಕ್ಸಸ್ ನದಿ ಹೇಗೆ ಹರಿಯುತ್ತಿದೆ ! ಎಷ್ಟು ಶಾಂತವಾಗಿ-ಒಂದು ಅಲೆಯಿಲ್ಲದೆ ! —ಇನ್ನೊಂದು ಮೈಲಿಯಲ್ಲಿ ಅದು ಸಾಗರವನ್ನು ಸೇರಿಕೊಳ್ಳುವುದು. ಪ್ರಯಾಣವನ್ನು ಮುಗಿಸುವೆನೆಂದು ನಿಶ್ಚಿಂತವಾಗಿದೆ—ಅಲ್ಲವೆ—ಅಪ್ಪಾ—

ರುಸ್ತುಂ : ಹೌದು, ಮುಗಿಸುತ್ತಿದೆ.

ಸೊಹ್ರಾಬ್ : ನಾನೂ ಅದರಂತೆಯೇ—ಮುಗಿಸುತ್ತಿದ್ದೇನೆ.

(ಕಣ್ಣು ಮುಚ್ಚುವುದು)

ರುಸ್ತುಂ-ತಹಮೀನ : ಮಗೂ-ನಾವೂ ಬರುವೆವು, ಕರೆದುಕೊಂಡು ಹೋಗು.

ಸೊಹ್ರಾಬ್ : ಎಲ್ಲರಿಗೂ ಕಾಲವು ಬರುವುದು.

ಇಬ್ಬರೂ : ಈಗಲೇ ಬರುವಂತಾಗಲಿ, ಮಗು, ಈಗಲೇ ಬರುವಂತೆ ಹರಸು.

(ಬಿಕ್ಕಿ ಬಿಕ್ಕಿ ಅಳುವರು. ಮುಖದಲ್ಲಿ ಶಾಂತಿಯೂ ಸಂತೋಷವೂ ನಿಂತು ಸೊಹ್ರಾಬನು ನಿರ್ಯಾಣಹೊಂದುವನು. ಸ್ವಲ್ಪ ಹೊತ್ತು ನಿಶ್ಶಬ್ದ . . . ಆಮೇಲೆ—)

ರುಸ್ತುಂ : ಮೈನಾ ?—

ತಹಮೀನ : ಜೀ—

ರುಸ್ತುಂ : ಹದಿನೈದು ವರ್ಷಗಳ ನಾಟಕ ಮುಗಿಯಿತು. ನಮ್ಮ ಪ್ರೀತಿಯ ಫಲವನ್ನುಂಡೆವು.

ತಹಮೀನ : ನನ್ನ ಪ್ರೀತಿಯ ಫಲ.

ರುಸ್ತುಂ : ನನ್ನ ದುರಭಿಮಾನದ ಫಲ. ಇಬ್ಬರ ಅಜ್ಞಾನದ ಫಲ. ಅದೂ ಅಲ್ಲ ಮೈನಾ. ಹದಿನೈದು ವರ್ಷಗಳ ಅನ್ಯಾಯಕ್ಕೆ ಶಿಕ್ಷೆ—

ತಹಮೀನ : ತಪ್ಪು ನನ್ನದು.

ರುಸ್ತುಂ : ಈ ಮಗುವಿರುವಷ್ಟು ಕಾಲವೂ ಒಂದು ದಿನ ಜೊತೆಯಲ್ಲಿದ್ದು ಅದನ್ನು ಪ್ರೀತಿಸಲಿಲ್ಲ.

ತಹಮೀನ : ಇಲ್ಲ.

ರುಸ್ತುಂ : ಈಗ ಅದು ತೀರಿಹೋಯಿತು. ಈಗ ಬೆರೆದಿರುವೆವು.

ತಹಮೀನ : ಹುಂ . . ಅದು ಹುಟ್ಟುವ ಮುಂಚೆ ; ಅದು ತೀರಿ ಹೋದ ಮೇಲೆ. ಅದನ್ನು ತೀರಿಸಿದ ಮೇಲೆ – ಇಲ್ಲಿ – ಹೀಗೆ.

(ಎರಡು ಕಡೆಗಳಲ್ಲಿ ಇಬ್ಬರೂ ನಿಂತು ಸೊಹ್ರಾಬನನ್ನು ದುಃಖದಿಂದ ನೋಡುತ್ತಿರುವರು)

ತೆರೆ

# ಶ್ರೀಶೈಲ ಶಿಖರ

# ಪಾತ್ರಗಳು

ಶಿವ

ಗೌರಿ

ನಂದಿ

ತಂಡು

ಗಣಗಳು

⁕

ನರಸರೆಡ್ಡಿ

ವೀರಭದ್ರ ರಾವ್

ಶಾಸ್ತ್ರಿ

ನರಸರೆಡ್ಡಿಯ ಜನ

ಗಿರಣಿ ಕೂಲಿಯವರು—ಗಂಡು ಹೆಣ್ಣು

ಇಬ್ಬರು ವ್ಯಾಪಾರಸ್ಥರು

⁕

ಜಾತ್ರೆಯ, ಪುಷ್ಕರಿಣಿಯ ಜನ—ಗಂಡು ಹೆಣ್ಣು

⁕

ಕಮಲಾಸಾನಿ

ರಾಮಯ್ಯ

ಇಬ್ಬರು ಹೆಂಗಸರು

# ಅಂಕ ೧

[ಕೈಲಾಸಕ್ಕೆ ಯಕ್ಷ ಕಿನ್ನರಾದಿ ಗಣಗಳವರು ಶಿವದರ್ಶನಕ್ಕೆ ಹೋಗುತ್ತಿದ್ದಾರೆ]

ಓಂ ಶಿವಶಂಕರ, ಭಂ ಶಿವಶಂಕರ
ಭಕ್ತರ ಕಾಯುಯ್, ಜಯ ಶಿವಶಂಕರ

(ಕಿನ್ನರರು ವಾದ್ಯಗಳನ್ನು ಬಾಜಿಸುತ್ತ—ಗೌಳ ರಾಗದಲ್ಲಿ—ವಂದನಾ ಗೀತೆಗಳನ್ನು ಹಾಡುತ್ತ ಹೋಗುತ್ತಿದ್ದಾರೆ. ಕಿಂಪುರುಷರು ಬಗೆಬಗೆಯ ಹಣ್ಣು ಹೂ ತೆಗೆದುಕೊಂಡು)

ಇದು ಮಲ್ಲಿಗೆ, ಇದು ತಾವರೆ, ಮೊಲ್ಲೆ,
ಹೊಸ ಬೆಳಸಿದ, ಸೌಗಂಧಿಕವಿಲ್ಲೇ.
ಸಂಪಿಗೆ, ಕಸ್ತೂರೀ—ಜಾಜಿ,
ಉಳ್ಳರಳಿದ ಚೆಂಗುಲಾಬಿ.
ಕುರವಕ, ಸೇವಂತಿಗೆ, ಸುರಗಿ,
ಹೊಸ ಮೊನೆಗಳ ಕನ್ನೈದಿಲು ಸೊಬಗಿ
ತನಿವಣ್ಗಳು, ನಾರಂಗವು, ಜಂಬು,
ಇಮ್ಮಾವಿದು, ಕದಲೀ, ದ್ರಾಕ್ಷೀ, ಸೇಬು.

(ಗುಹ್ಯಕರು, ಸಿದ್ಧರು—ಓಂ ಶಿವಾ, ಶಂಕರಾ, ಶಾಶ್ವತಾ, ಶುಭಾ, ಮಹಾದೇವಾ ಎನ್ನುತ್ತ ಹೋಗುತ್ತಿದ್ದಾರೆ.

ಓ ರುದ್ರಾ, ಮಹಾಕಾಲಾ,—ಭಯಕೃತ್, ಭಯನಾಶನಾ—
ತ್ರಿಯಂಬಕಾ, ಪುರಹರಾ, ಭದ್ರಾ, ಲೋಕೇಶಾ, ಲಯಕಾರಕಾ

ಎಂದು ಹೋಗುತ್ತಿದ್ದಾರೆ. ಅಪ್ಸರೆಯರು, ಗಂಧರ್ವರು ಹಾಡುತ್ತ ಕುಣಿಯುತ್ತ ಸಭೆಗೆ ಬರುತ್ತಿದ್ದಾರೆ)

ಓ ಶಂಕರ ಗೌರೀರಮಣ — ಪಲ್ಲವಿ.

ಶಿವಶಂಕರ, ಶುಭದಾ, ವರದಾ,
ಕರುಣಾಕರ, ಚಿದ್ವಿಲಾಸ,
ಗಿರಿ ಕಾನನ, ರೋಮಾಂಚಕ
ಧ್ವನಿ ನಿನ್ನದು, ಸಂಜೀವಕ.

ಲೋಕವ ಹುಟ್ಟಿಸಿ, ಲೋಕವನಳಿಯಿಸಿ
ಉರಿಗಣ್ಣಿನ ಸಿಂಗಾರಕೆ ನೇಯುತ
ನೆಲ ನೀರಿನ ಗಣಿಕಾವಿನ
ಇರವೆಲ್ಲವನಳಿಸುತ್ತಿಹೆ.

ಗ್ರಹತಾರಾ ಮಂಡಲಗಳು ಉರುಳುತ್ತಿವೆ, ಉರಿಯುತ್ತಿವೆ ;
ಬ್ರಹ್ಮಾಂಡದ ಬಿಸಿಬೂದಿಗಳೆರಚುತ್ತಿವೆ ದಿಸೆದಿಸೆಗೆ.
ಶಶಿಸೂರ್ಯರು, ತಲ್ಲಣದಲಿ ಮರೆಯಾಗಲು ನೀ ಕುಣಿಯುವೆ.

ನಟರಾಜಾ, ನಟರಾಜಾ, ಶಿವಶಂಕರ ಗೌರೀರಮಣ.
ತಾಳದ ಮೇಳಗಳೆಲ್ಲವ ಕಲಕಿರುವೀ ಉನ್ಮಾದದ
ತಾಂಡವದಲಿ ಏನ್‌ನಲಿವೋ—ಏನ್‌ನಲಿವೋ—ಏನ್‌ನಲಿವೋ, ನಿನಗೆ
ನಟರಾಜಾ—ನಟರಾಜಾ—ನಟರಾಜಾ, ಗೌರೀರಮಣ.

(ಮೇಳ—ಜತಿ ಸ್ವರಗಳ ನರ್ತನ ಮಾಡುತ್ತ, ಹಾಡುತ್ತ ಹೋಗುತ್ತಿದ್ದಾರೆ. ಬಗೆ ಬಗೆಯ ತುತ್ತೂರಿ, ಕಹಳೆ, ಶಂಖ, ಡಮರು, ಭೇರಿ, ಮೃದಂಗದ ಧ್ವನಿಗಳ ನಡು ನಡುವೆ ಓಂ ಶಿವ, ಭಂ ಶಿವ—ಕೇಳುತ್ತಿದೆ. ಉತ್ತರ ದಕ್ಷಿಣದಲ್ಲಿ ಧೀರ ಗಂಭೀರ ಧ್ವನಿಗಳು, ಬೇರೆ ಬೇರೆ, ಆಚೆಯ ಕಡೆಗಳಿಂದ ಗಣಗಳು ಜಯಘೋಷ ಮಾಡುತ್ತ ಬರಲು ಪೀಠದಲ್ಲಿ ಕುಳ್ಳಿರಲು ನಂದಿ ಅವರಿಗೆ ಆಜ್ಞೆ ಮಾಡುತ್ತಾನೆ. ಶಿವ ಗೌರಿ ಪ್ರವೇಶ.)

ನಂದಿ : ಎಚ್ಚರಿಕೆ, ಶಿವಪರಾಕ್.

(ಒಂಟಿಯಾಗಿ—ಗುಂಪಿನಲ್ಲಿ ಧ್ವನಿಗಳು)

ಕಾಮಹರಾ, ಗೌರೀವರ
ಚಂದ್ರಧರಾ, ಗಂಗಾಧರ
ಓ ಶಿವಶಂಕರ, ಓ ಶಿವಶಂಕರ

ಪರಾಕ್, ಬಹುಪರಾಕ್.
ಲೋಕಾನುಗ್ರಹಾರ್ಥವಾಗಿ ಬಿಜಮಾಡಿಸಬೇಕು.
ಜಯ ಜಯ ಶಂಕರ, ಓಂ ಶಿವಶಂಕರ, ಭಂ ಶಿವಶಂಕರ.

(ಎಂದ ಕೂಡಲೆ ಭ್ರಮರ ಝೇಂಕಾರದಂತೆ ಕೇಳಿಸುತ್ತದೆ. ನೆರೆದವರೆಲ್ಲರ ಕೊರಳಿನಲ್ಲಿಯೂ ಪುನಃ ಆ ಧ್ವನಿಗಳು ಮೊಳಗುತ್ತವೆ. ವಾದ್ಯಗಳು ಮೊಳಗುತ್ತವೆ. ಕೊನೆಯ ಕಹಳೆಯ ಧ್ವನಿ ನಿಂತ ಮೇಲೆ)

ಶಿವ : ವೃಷಭದೇವ, ಗಣಗಳೆಲ್ಲವೂ ಸುಖವೆ ? ಕೈಲಾಸದ ಪ್ರಜೆಗಳೆಲ್ಲ ಕ್ಷೇಮವೆ ?

ನಂದಿ : ಮಹಾಶಿವನ ಅನುಗ್ರಹದಿಂದ ಎಲ್ಲರೂ ಕ್ಷೇಮ. ನಿನ್ನ ರಕ್ಷಣೆಯಲ್ಲಿರುವ ನಮಗೆ ಯಾವ ಚ್ಯುತಿ ಇದ್ದೀತು ? ನಮಗಿಲ್ಲಿ ಯಾವ ಕೊರತೆ ಇದೆ ? ನಿನ್ನ

ಒಂದು ಮುಗುಳ್ನಗೆಯಿಂದ ಹದಿನಾಲ್ಕು ಲೋಕಗಳು ಸಂತೋಷಪಡುವುವು ; ಹಗಲಿಡುವುವು.

ತಂಡು : ನಿನ್ನ ಕಡೆಗಣ್ಣಿನಿಂದ ಒಂದು ನಸುಮುನಿಸು ಮಿನುಗಿದರೆ ಹದಿನಾಲ್ಕು ಲೋಕಗಳು ಉರಿದು ಬೂದಿಯಾಗುವುವು. ಕಾಲಕರ್ತೃ ನೀನು. ಲೋಕ ನಿಯಾಮಕನು ನೀನು. ಎಲ್ಲ ಬಾಳ ಮಿತಿ ನೀನು. ಸರ್ವಗತಿ ನೀನು.

ಶಿವ : ಆಯಿತು, ಆಯಿತು. ದಿನಬೆಳಗೂ ನಿಮ್ಮ ಹೊಗಳಿಕೆ ಕೇಳಿ ಎಲ್ಲಿಯಾದರೂ ನನಗೆ ಮಮತೆ ಕವಿದುಬಿಟ್ಟೀತು. ಅಲ್ಲವೆ, ಗೌರಿ ?

ಗೌರಿ : ನಿಮ್ಮ ಮನಸ್ಸನ್ನು ಯಾರು ಅರಿತವರು ? ಆದರೆ ಲೋಕವನ್ನು ಆಳುವವರಿಗೆ ಮಮತೆ ಬೇಡವೆ ? ಪೂರ್ತಿ ಕೂಡದೆ ?

ಶಿವ : ತಮ್ಮ ತಮ್ಮ ಸ್ಥಾನ, ಮಾನ, ಶಕ್ತಿಗಳನ್ನೂ ತಮ್ಮನ್ನೂ ಕುರಿತು ಅಲ್ಲ ಮಮತೆ. ಅಂಥದು ಅಹಂಕಾರವಾಗುವುದು. ಆದರೆ ಈ ಎಲ್ಲ ನನ್ನದು, ನನಗೆ ಸೇರಿದ್ದು, ನನ್ನ ನೆರವಿನಿಂದ ಬಾಳಿ ಬದುಕಬೇಕಾಗಿದೆ, ಇದರ ಕಷ್ಟ ನನ್ನದು ಎಂಬ ಮಮತೆ—ಅದರ ಹಿತಕ್ಕೆ ತೆರೆದ ಮನಸ್ಸು ಸರಿಯಾದೀತು.

ಗೌರಿ : ಲೋಕವನ್ನು ಕಾಪಾಡುವ ನಿಮಗೆ ಒಪ್ಪುವ ಮಾತು ಅದು. ನಿಮ್ಮ ಕೃಪೆ ಎಲ್ಲಕ್ಕೂ ಯಾವಾಗಿಗೂ ಉಂಟು.

ಶಿವ : ನೀನು ಸದಾ ಜೊತೆಗೆ ಇದ್ದೇ ಇರುವೆಯಲ್ಲ, ಆ ಕೃಪೆಯನ್ನು ಎಚ್ಚರ ವಾಗಿಡುವುದಕ್ಕೆ. ಅದು ನಿನ್ನ ತಾಯಿತನದ ಗುಣ. ಲೋಕಕ್ಕೆ ಅದು ದಾನ ಮಾಡಿದ ಉಣಿಸು : ಕ್ಷಮೆ, ಕರುಣೆ, ಪ್ರೀತಿ.

ಗೌರಿ : ಇದರಲ್ಲಿ ನನ್ನ ಹಿರಿಮೆ, ಸ್ವತಂತ್ರ ಏನಿದೆ ? ನಿಮ್ಮ ಶಕ್ತಿಯ ಒಂದು ಕಳೆ ಮಾತ್ರ ನಾನು. ತಾಯಿಯೂ ಆದವರು ಎಂದು ನಿಮ್ಮನ್ನು ಲೋಕ ಈವರೆಗೆ ಹೇಳಿ ಪೂಜಿಸಿದೆಯಲ್ಲವೆ ?

ಶಿವ : ಜಾಣೆ ನೀನು. ಆ ತಾಯಿ ಭಾಗ ನಿನ್ನದು. ನೀನು ನನ್ನ ಶಕ್ತಿ ಎಂದು ಕೊಂಡು ನನ್ನನ್ನೇ ಅರ್ಧನಾರಿಯನ್ನಾಗಿ ಮಾಡಿರುವ ನಿನಗೆ ಆ ಪ್ರಭಾವ ಅರ್ಥವಾಗಿರಬೇಕು. ಸವಿಯಾಗಿಯೂ ಇರಬೇಕು, ಅಲ್ಲ ? ಲಕ್ಷ್ಮಿ, ಸರಸ್ವತಿಯರಿಗೆ ದೊರಕದ ಪದವಿಯನ್ನು ನೀನು ಮಾತನಾಡದೆ ಸಾಧಿಸಿ ಕೊಂಡಾಗಿದೆ.

ಗೌರಿ : ನೀವು ಕೊಟ್ಟಿರಿ, ನನಗೆ ಬಂತು. ಅದು ಸರಿ ; ಆ ಹಾಡುಗಳು ಬಹು ಸೊಗಸಾಗಿವೆ. ಯಾವ ಭಾಷೆಯವೆಂದಿರಿ, ಅವು ?

ಶಿವ : ತಮಿಳವು.

ಗೌರಿ : ಅದರ ಒಂದು ಗೀತವನ್ನು ಇಲ್ಲಿ ಯಾರಾದರೂ ಹಾಡಿಯಾರೆ ?

(ಒಡನೆಯೇ ಎರಡು ಚರಣ 'ತಾಯುಮಾನವರ್' ಹಾಡನ್ನು ಗಂಧರ್ವರು ಹಾಡುವರು. ವೃಂದಗಾನದ ಹಿನ್ನೆಲೆ – ಜೊತೆ – ಸಮ್ಮೇಳ)

ಬಹು ಇಂಪಾಗಿದೆ, ಗೀತ.

ಶಿವ : ಈ ದಿನದ ವಿಶೇಷ ಸುದ್ದಿ ಏನು ?

ನಂದಿ : ಶ್ರೀಶೈಲದ ಕೀರ್ತಿ ಲೋಕದಲ್ಲಿ ಅತಿಶಯವಾಗಿ ಹಬ್ಬುತ್ತಿದೆ. ಈವರೆಗೆ ಜನಕ್ಕೆ ದುರ್ಗಮವಾಗಿದ್ದ ಆ ಮಲ್ಲಿಕಾರ್ಜುನ ಕ್ಷೇತ್ರಕ್ಕೆ ಹೋಗುವುದನ್ನು ಸುಲಭ ಮಾಡುತ್ತಿದ್ದಾರಂತೆ. ದಿನವೂ ಜನ ಹೋಗಿ ಬರಲು ಸೌಕರ್ಯ ಕಲ್ಪಿಸುತ್ತಿದ್ದಾರೆ. ದಿನದಿನಕ್ಕೆ ಅದರ ಮಾಹಾತ್ಮ್ಯ ಹೆಚ್ಚುತ್ತಿದೆ. ಅಲ್ಲಿಯ ಶಿವರಾತ್ರಿ ಉತ್ಸವ ಈ ಸಾರಿ ತುಂಬಾ ಅತಿಶಯವಾಗಿ ನಡೆಯುವುದಂತೆ.

ಶಿವ : ಬಂದು ಹೋಗಲು ಸೌಕರ್ಯ ಹೆಚ್ಚಿದಂತೆಲ್ಲ ಜನದ ಭಕ್ತಿ ಹೆಚ್ಚುವುದೆಂದು ಯಾರು ಹೇಳಬಹುದು ? ಭಕ್ತಿ ಕಡಮೆಯಾಗಬಲ್ಲದು. ಇಂಥ ಸ್ಥಾನಗಳು ದುರ್ಗಗಳಾಗಿದ್ದರೇ ಒಳ್ಳೆಯದೋ ಏನೊ.

ತಂಡು : ಶ್ರದ್ಧೆ ನಡಸಿದರೆ ?

ಶಿವ : ಆಗಲಿ, ಸಂತೋಷ. ಅವೆಲ್ಲ ನಮಗೆ ಪ್ರಿಯವಾದ ಸ್ಥಾನಗಳು ; ಜನಕ್ಕೆ ಧರ್ಮೋತ್ಸಾಹ ಉಂಟಾದ್ದರ ಶುಭ ಸೂಚನೆ ಈ ಸಂಗತಿ. ಸಂತೋಷ. ಗೌರಿ, ನೀನು ಈಗ ಕೇಳಿದೆಯಲ್ಲ ತಮಿಳು ಹಾಡು ? ಆ ತಮಿಳುನಾಡಿನ ಮೇಲಕ್ಕೆ ಉತ್ತರದಲ್ಲಿದೆ ಶ್ರೀಶೈಲ. ಕನ್ನಡಿಗರಿಗೆ, ತೆಲುಗರಿಗೆ ಶ್ರೀಶೈಲ ದೊಡ್ಡ ಪುಣ್ಯಕ್ಷೇತ್ರ. ಅಲ್ಲೇ ನಮ್ಮ ಮೆಚ್ಚಿನ ಕದಲೀವನವಿರುವುದು. ನೆನಪಿದೆಯಷ್ಟೆ ? (ಗಣಗಳಿಗೆ) ಅದರ ಕೀರ್ತಿ ಗೀತಗಳು ಯಾವವನ್ನಾದರೂ ಹೊಸದಾಗಿ ಕೇಳಿದ್ದೀರ ?

ಪ್ರಮಥರು : ಪುರಾಣಗಳನ್ನೂ ಪ್ರಾಚೀನ ಸ್ತೋತ್ರಗಳನ್ನೂ ಪುನಃ ಬಳಕೆಗೆ ತರುತ್ತಿದ್ದಾರೆ. ಅವುಗಳಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ

ಶ್ರೀ ಶೈಲ ಶಿಖರಂ ದೃಷ್ಟ್ವಾ ಪುನರ್ಜನ್ಮ ನ ವಿದ್ಯತೇ

ಎಂಬ ವಾಕ್ಯ ಈ ಹೊಸ ಶ್ರದ್ಧೆಗೆಲ್ಲ ಕಾರಣವಾಗಿರುವ ಹಾಗಿದೆ. ಯಾರೋ ದೊಡ್ಡ ಪೌರಾಣಿಕರು ಈಚೆಗೆ ಆ ಕಡೆ ಹೊಸ ಭಕ್ತಿಯನ್ನು ಹೆಚ್ಚಿಸುತ್ತಿದ್ದಾರೆ.

ಶಿವ : ಸಂತೋಷ. ಇಂಥವನ್ನು ಜನ ಹಲವೇಳೆ ಕೇಳಿದ್ದಾರೆ. ಹಲವು ಸ್ಥಳಗಳಿಗೆ ಆ ಮಾತನ್ನು ಬಳಸಿದ್ದಾರೆ. ಶ್ರೀಶೈಲವೊಂದಕ್ಕೇ ಏಕೆ ಅದರ ಅನ್ವಯ ? ಹೇಗಾದರೂ ಲೋಕಕ್ಕೆ ಶ್ರದ್ಧೆ ಉಂಟಾಗುವುದು ಮುಖ್ಯ. ಅದು ಆಳವಾಗಿ ದೈವದಲ್ಲಿ ನಿಷ್ಠವಾದರೆ, ದೈವಪ್ರೀತಿಯನ್ನು ಅನನ್ಯವಾಗಿ ಬೇಡಿ ಬದುಕಿದರೆ ಮುಕ್ತಿ ದೊರೆತೇ ದೊರೆಯುವುದು.

ನಂದಿ : ಶ್ರೀಶೈಲ ಕೈಲಾಸಕ್ಕೆ ಸಮವೆನ್ನುತ್ತಿದ್ದಾರಂತೆ—

ಶಿವ : ಏಕೆನ್ನಬಾರದು ? ಕೈಲಾಸದ ಹಿರಿಮೆಗೆ ಏನು ಕುಂದು ಅದರಿಂದ ?

ನಂದಿ : ಕೈಲಾಸದ ಶ್ರೇಷ್ಠತೆಗೆ ಸ್ಪರ್ಧೆ ಉಂಟುಮಾಡಿಕೊಳ್ಳುತ್ತಾರೆ ಇವರು. ಇದೇನು ಭ್ರಾಂತಿ !

ಶಿವ : ಆಗಬಹುದಲ್ಲಾ. ಇಂಥ ಸ್ಪರ್ಧೆಯಲ್ಲಿಯೇ ಧರ್ಮಸಾಹಸವಿರುವುದು. ಶ್ರೀಶೈಲ ನಮಗೆ ಸೇರಿದ್ದಲ್ಲವೊ ? ನಾನು ಇಲ್ಲಿ ಬೇರೆ, ಅಲ್ಲಿ ಬೇರೆಯೆ ?

ನಂದಿ : ಹೇಗಾದೀತು ? ಕೋಪಿಸಬಾರದು, ಅತಿಪ್ರಸಂಗವೆಂದು—ಕೈಲಾಸ ಪದವಿ ಪರಮ ಪದವೆಂದು ಕೇಳಿದ್ದೇವೆ.

ಶಿವ : ಹೌದು, ಕೈಲಾಸಕ್ಕೆ ಬರಲಾದವರಿಗೆ ಇದು ಪರಮ ಪದ. ಈವರೆಗೆ ಬರಲಾರದವರಿಗೆ ಮುಕ್ತಿ ಬೇಡವೇನು ? ಅಥವಾ ಇಲ್ಲಿಯೂ ಕೀಳು ಮೇಲು ಎಂಬ ಅರ್ಥಗಳುಂಟೊ ? ಇದೇನು ಮಾತು ನಂದಿ ? ಇಲ್ಲಿಗೆ ಬರುವ ಮುಂಚೆ ನೀವು ಒಬ್ಬೊಬ್ಬರು ಏನಾಗಿದ್ದಿರಿ, ಎಲ್ಲಿಂದ ಬಂದಿರಿ—ನೆನಪಿದೆಯೆ ?

ನಂದಿ : ಚೆನ್ನಾಗಿ ನೆನಪಿದೆ, ದೇವ. ಅದರಿಂದೆಲ್ಲಾ ಉದ್ಧಾರವಾಗಿ ಬಂದೆವು, ನಿನ್ನ ಪಾದಗಳ ಬಳಿಗೆ. ಇನ್ನು ಆ ಸಂಗತಿಯನ್ನು ಕೇಳುವುದಿಲ್ಲ. ನಿನ್ನ ಇಷ್ಟದಂತೆ ನಡೆಯುವುದು ಮಾತ್ರ, ಅದಕ್ಕೆ ಒಳಪಟ್ಟು ನಡೆಯುವುದು ಮಾತ್ರ ನಮ್ಮ ಸಂತೋಷ. ಹಾಗಾಗುವಂತೆ ಅನುಗ್ರಹಿಸಬೇಕು.

ಶಿವ : ತಪ್ಪೇನೂ ಇಲ್ಲ. ಪ್ರಶ್ನೆಗಳನ್ನು ಕೇಳಬೇಕು, ಮತಿ ವಿಶದವಾಗಬೇಕಾದರೆ. ಬೇರೆ ಮಾರ್ಗವಿಲ್ಲ.

ನಂದಿ : ನಿನ್ನನ್ನು ಕೇಳದೆ ಇನ್ನಾರನ್ನು ಕೇಳಬಹುದು ? ನಿನ್ನ ಅನುಗ್ರಹ.

ಗೌರಿ : ಆರ್ಯ, ನಾನು ಒಂದು ಪ್ರಶ್ನೆ ಕೇಳಲೆ ?

ಶಿವ : ನೀನೆ ? ಆಗಬಹುದು.

ನಂದಿ : ದೇವರ ಅಪ್ಪಣೆಯಾದರೆ....

ಶಿವ : ವೃಷಭರಾಜ, ತಂಡು, ಪ್ರಮಥರೆ, ಶುಭಮಸ್ತು.

(ಸಭೆಗೆ ಬಂದಿದ್ದವರೆಲ್ಲ ಹಿಂದಿನಂತೆ ವಾದ್ಯಗೋಷ್ಠಿಗಳಿಂದಲೂ ಸ್ತೋತ್ರಪಾಠಗಳಿಂದಲೂ ನಿಷ್ಕ್ರಮಿಸುವರು. ಓಂ ಶಿವಶಂಕರ, ಭಂ ಶಿವಶಂಕರ, ಜಯ ಶಿವಶಂಕರ—ಆವರಣವನ್ನು ತುಂಬಿ ಕ್ರಮೇಣ ನಡುನಡುವೆ ಮೊಳಗಿ ಮುಗಿಯುವುದು. ಸಭೆ ನಿಷ್ಕ್ರಮಿಸಿದ ಮೇಲೆ, ಏಕಾಂತದಲ್ಲಿ)

ಶಿವ : ಏನು ಗೌರಿ ನಿನ್ನ ಪ್ರಶ್ನೆ ? ಯಾವುದೊ ಶಂಕೆ ನಿನ್ನ ಮನಸ್ಸಿನಲ್ಲಿ ಮೊಳೆತಂತೆ ಕಾಣುತ್ತಿದೆ.

ಗೌರಿ : ಕೇಳುವುದಕ್ಕೆ ಸಂಕೋಚವಾಗುತ್ತದೆ. ಆದರೂ ಕೇಳುತ್ತೇನೆ. ಕೈಲಾಸದಲ್ಲಿ ಈಗಾಗಲೆ ಪುಣ್ಯಾತ್ಮರ ವರ್ಗ ಕಿಕ್ಕಿರಿದಿದೆ. ಶ್ರೀಶೈಲ ಶಿಖರವನ್ನು ನೋಡಿದ

ಕೂಡಲೆ ಪಾಪ ವಿಮೋಚನೆಯಾಗಿ ಕೋಟಿ ಕೋಟಿ ಜನ ಮುಕ್ತರಾಗಿ ಇಲ್ಲಿ ಬರುವುದಾದರೆ ಕೈಲಾಸದ ಗತಿ ಏನು ? ಇಲ್ಲಿ ಹೊಸ ಏರ್ಪಾಡುಗಳನ್ನು ಏನಾದರೂ ಕೈಗೊಳ್ಳಬೇಕಿಲ್ಲವೆ ಮುಂಚಿತವಾಗಿ—ಎನ್ನಿಸಿತು. ಕೈಲಾಸದ ಕೀರ್ತಿಗೆ ಸಾಟಿಯಾಯಿತಲ್ಲವೆ ಶ್ರೀಶೈಲದ್ದು ?

ಶಿವ : ಈ ಪ್ರಶ್ನೆ ನಿನ್ನಿಂದಲೇ ದೇವಿ ? ಆಗಲಿ, ಯಾಕಾಗಬಾರದು ? ಕೈಲಾಸ ಒಂದು ಪಟ್ಟಣವೆಂದುಕೊಂಡೆಯು ? ಇಲ್ಲಿಯ ಅವಕಾಶಕ್ಕೂ ಮಿತಿ ಉಂಟೆ ? ಕೋಟಿಕೋಟಿ ಜನ ಮುಕ್ತರಾಗಲಿ ಎಂಬುಬೇ ಅಲ್ಲವೆ ನಮ್ಮ ಆಸೆ ? ನಿಜವಾಗಿ ಆಗುತ್ತಾರೆಯೆ ? ಅಷ್ಟು ಸುಲಭವೆ ಮುಕ್ತಿ ? ಮುಕ್ತರಾದವರಿಗೆ ನಿನ್ನ ಬಳಿಯಲ್ಲಿ ಸ್ಥಾನವಿಲ್ಲದಿದ್ದರೆ, ಅದು ಇನ್ನೆಲ್ಲಿ ದೊರಕೀತು ! ಕೈಲಾಸದ ಈ ಪೀಠ ಕೂಡ ನಿನ್ನೆ, ಮೊನ್ನೆಯದು. ಈಚಿನ ಐದಾರು ಸಾವಿರ ವರ್ಷಗಳಿಂದ ತಾನೆ ಇದರ ಹೆಸರು ? ಕೇದಾರ, ವಾರಾಣಸಿ, ಹಂಪೆ, ಗೋಕರ್ಣ, ಚಿದಂಬರ, ರಾಮೇಶ್ವರ, ಇನ್ನೂ ಎಷ್ಟೋ ಸ್ಥಳಗಳು ನಮ್ಮ ವಿಹಾರ ಸ್ಥಾನಗಳಲ್ಲವೆ ? ಮರೆತೆಯ ? ಇದೇನು ಬಂತು ಕೈಲಾಸದ ಮೋಹ ನಿನಗೆ ?

ಗೌರಿ : ಮೋಹವಲ್ಲ ಆರ್ಯ, ಮುಕ್ತಿ ಅಗ್ಗವಾಗಲಿಲ್ಲವೆ ಎನ್ನಿಸಿತು.

ಶಿವ : ಖಂಡಿತ ಅಗ್ಗವಾಗಲಿಲ್ಲ. ಲೋಕದ ಜನ ಶ್ರೀಶೈಲ ಶಿಖರವನ್ನು ಕಂಡಾರು. ಶ್ರೀಶೈಲ ಬರಿಯ ಬೆಟ್ಟವಲ್ಲ. ಶಿವಹೃದಯ ಅಲ್ಲಿನ ಶಿಖರ. ಅದನ್ನು ಕಾಣುವವರು ಇದನ್ನು ಕಾಣುತ್ತಾರೆ. ಅದು ಸುಲಭವಲ್ಲವಲ್ಲ ?

ಗೌರಿ : ಇದನ್ನು ನಾನರಿಯೆನೆ ? ಆದರೂ ಸ್ತೋತ್ರಪಾಠಗಳನ್ನು ಕೇಳಿ ಹೊಸ ಶ್ರದ್ಧೆ ಬಂದಾಗ ಸುಲಭವಾದೀತೆನ್ನಿಸಿತು. ಅವರಿಲ್ಲಿಗೆ ಬರಕೂಡದೆಂದಲ್ಲ ನಾನು ಕೇಳಿದ್ದು. ನನಗೇನು ಕಷ್ಟ ? ಮಾಡುವವರು ಮಾಡುತ್ತಾರೆ, ನೋಡಿಕೊಳ್ಳುವವರು ನೋಡಿಕೊಳ್ಳುತ್ತಾರೆ. ಮುಂಚಿತವಾಗಿ ಸಿದ್ಧತೆ ಇಲ್ಲಿ ಯಾವುದಾದರೂ ನಡೆಯಬೇಕಾದೀತೇ ಎಂದು ಕೇಳಿದೆ ಅಷ್ಟೇ.

ಶಿವ : ಮರುಳಕ್ಕ, ಬಾ. ಹೋಗಿ ನೋಡಿಕೊಂಡು ಬರೋಣ. ಲೋಕದ ಜನರಿಗೆ ಮುಕ್ತಿ ಎಷ್ಟು ಸುಲಭವೆಂಬುದನ್ನು ಕಾಣುವೆ. ನಿನಗೂ ಇಲ್ಲಿ ಬೇಸರವಾದಂತಿದೆ. ನಾವು ದಕ್ಷಿಣದ ಸಂಚಾರಕ್ಕೆ ಹೋಗಿ ಸ್ವಲ್ಪ ಕಾಲವಾಯಿತು. ಕೆಲಕಾಲ ಸಂಚಾರಕ್ಕೆ ಹೋಗುತ್ತೇವೆಂದು ಕೈಲಾಸದವರಿಗೆ ತಿಳಿಸಿ ಹೋಗೋಣ.

ಗೌರಿ : ಕೈಲಾಸದಲ್ಲಿ ಬೇಸರ ಹೇಗೆ ಉಂಟಾದೀತು ? ಆದರೆ ಸಂಚಾರವೆಂದರೆ ನನಗೂ ಪ್ರೀತಿಯೇ. ಶ್ರೀಶೈಲಕ್ಕೆ ಹೋಗುತ್ತೇವೆ ತಾನೆ ?

ಶಿವ : ಓಹೊ, ಅಲ್ಲಿಗೇ ಹೋಗೋಣ. ಇನ್ನೂ ನಿನ್ನ ಇಷ್ಟ ಬಂದಲ್ಲಿಗೆಲ್ಲ ಹೋಗೋಣ. ನಾವು ಹೋಗಕೂಡದಾದ ಸ್ಥಾನ ಯಾವುದೂ ಇಲ್ಲವಲ್ಲ ?

ಗೌರಿ : (ನಗುತ್ತ) ಅದರ ಶಿಖರ ನೋಡಿ ಬರೋಣವೆ ?

ಶಿವ : (ನಕ್ಕು) ಅದನ್ನು ಸೆರೆ ಹಿಡಿದ ನೀನು ಪುನಃ ನೋಡುವುದೇನುಂಟು ? ನಾನೂ ನೀನೂ ಬೇರೆ, ಅದು ಬೇರೆ ಅಂದುಕೊಂಡಿದ್ದೀಯೇನು ?

ಗೌರಿ : ಇಲ್ಲಿ ನೋಡಲು ಯತ್ನಿಸುತ್ತಿದ್ದೇನೆ. ಅಲ್ಲಿ ಹೇಗೊ ಆದನ್ನು ನೋಡೋಣ. ಅಲ್ಲಿ ನಾವು ಹೇಗೆ ಕಾಣಿಸಿಕೊಳ್ಳುವುದೆಂದು ನಿರ್ಣಯಿಸಿದ್ದೀರಿ ? ಈ ಸಾರಿ ಯಾವ ವೇಷವೊ ?

ಶಿವ : ದಿವ್ಯವಾದ ನಿನ್ನ ಕಾಂತಿ ಉತ್ತರದ ಹೆಣ್ಣಿನದು, ತುಂಬು ವಯಸ್ಸಿನ ಮುತ್ತೈದೆಯದು ; ನನ್ನದು ಮುದುಕನದು. ಆಗಬಹುದಷ್ಟೆ ?

ಗೌರಿ : ನಿಮಗೆ ವಯಸ್ಸೆಂದರೇನು ?

ಶಿವ : ನೀನು ಮುದುಕಿಯೇನು ?

ಗೌರಿ : ಅಲ್ಲ, ಅನ್ನಿ ; ನಿಮ್ಮ ಹುಡುಗಾಟ ಎಂದಿಗೂ ಒಂದೇ.

ಶಿವ : ಪರಮೇಶ್ವರಿ ಹುಡುಗಿಯಾಟವಾಡಬೇಕೆಂದರೆ ಶಿವನು ಹುಡುಗನಾಗಬೇಡವೆ ?

ಗೌರಿ : ಜಯ ಪರಮೇಶ್ವರ.

ಶಿವ : ಜಯ ಪರಮೇಶ್ವರಿ.

(ಈ ಶಬ್ದಗಳು ಬಗೆಬಗೆಯಾಗಿ ಕೈಲಾಸದಲ್ಲಿ ಮೊಳಗಿ ಹೊಳಲು ಕೊಡುವುವು. ಮಂದ್ರ ಧ್ವನಿಯಲ್ಲಿ ಗುಡುಗು ಅದಕ್ಕೆ ಶ್ರುತಿಗೂಡುವುದು)

## ಅಂಕ ೨

[ಸಾವಿರಾರು ಜನ ಶ್ರೀಶೈಲದ ದಾರಿಯಲ್ಲಿ ಹೋಗುತ್ತಿದ್ದಾರೆ, ಶಿವರಾತ್ರಿ ಉತ್ಸವಕ್ಕೆ –ಕಾಡುದಾರಿಯ ಕಷ್ಟಗಳನ್ನು ಲೆಕ್ಕಿಸದೆ. ಮಂಗಳವಾದ್ಯಗಳು ಬೇರೆ ಬೇರೆ ಗುಂಪುಗಳವರಿಂದ ಒಂಟಿ ಒಂಟಿಯಾಗಿ ಜೊತೆ ಜೊತೆಯಾಗಿ ಆಗಾಗ ಮೊಳಗುತ್ತ ಇವೆ.]

ಒಂದು ಗುಂಪಿನ ಒಬ್ಬ : ಆ ಇಬ್ಬರನ್ನು ನೋಡಿದೆಯ ? ಏನು ತೇಜಸ್ಸು, ಆಕೆಯದು ಏನು ಚೆಲುವು! ಈ ಲೋಕದ್ದಲ್ಲವೆನ್ನಿಸುತ್ತಿದೆ. ನೆಲದ ಮೇಲೆ ಹೆಜ್ಜೆ ಇಡುವರೋ ಇಲ್ಲವೊ ಎಂಬಂತೆ ನಡೆಯುತ್ತ ಇದ್ದಾರೆ. ಇದ್ದರೆ ಹಾಗಿರಬೇಕು.

ಇನ್ನೊಬ್ಬ : ಆಗಿಂದ ನಾನು ನೋಡುತ್ತಿದ್ದೇನೆ. ಜಿಂಕೆಯಂಥ ನಡೆ ಆಕೆಯದು. ಅವನ ನಡೆ ಸಿಂಹದ್ದು. ಧೀರ. ಮೈಯಲ್ಲಿ ಒಂದಿಷ್ಟು ಜಳ್ಳುಮಾಂಸಖಂಡ ಇರುವಂತೆ ಕಾಣಿಸದು. ಉಕ್ಕಿನ ಭಲ್ಲೆಯ ಹಾಗಿದ್ದಾನೆ. ಎಷ್ಟು ಶುದ್ಧವಾದ ದೇಹಕಾಂತಿ ಅವರದು !

ಮೂರನೆಯವ : ಪುಣ್ಯಪುರುಷರು. ಹಾಗೆ ಹುಟ್ಟಿದರೆ, ಇದ್ದರೆ ಚೆನ್ನ.

ಮಗುದೊಬ್ಬ : ಮನೆತನ ಚೆನ್ನಾಗಿದ್ದರೆ ಮಕ್ಕಳು ಚೆನ್ನಾಗಿ ಹುಟ್ಟುತ್ತಾರಯ್ಯ. ವ್ಯಕ್ತಿಯ ಭಾಗ್ಯವೆಷ್ಟೋ ಅಷ್ಟೇ. ಇದು ಕುಲದ ಭಾಗ್ಯವಲ್ಲವೆ ?

ಮೊದಲನೆಯವ : ಒಡವೆಯಿಲ್ಲ. ಹೆಚ್ಚು ವಸ್ತುಗಳಿಲ್ಲ. ಜಾತ್ರೆಗೆ ಹೋಗುತ್ತಿರುವವರಿಗೆ ಮಲಗಲು, ಉಡಲು, ಉಣಲು, ಹಾಸಿಗೆ, ಪಾತ್ರೆ ಪದಾರ್ಥ ಯಾವುದೂ ಬೇಡವೆ ? ಇವರು ಬೈರಾಗಿಗಳಂತೆಯೂ ಇಲ್ಲ.

ಇನ್ನೊಬ್ಬ : ಹೆಚ್ಚು ಹಣವೂ ಅವರಲ್ಲಿರುವಹಾಗಿಲ್ಲ. ನೋಡಿದರೆ ಇನ್ನೊಬ್ಬರನು ಬೇಡುವ ಜಾತಿಯೂ ಅಲ್ಲ.

ಮೊದಲನೆಯವ : ಉತ್ತರದವರಂತಿದೆ.

ಇನ್ನೊಬ್ಬ : ಹೌದು. ಕಾಶಿ, ಅಯೋಧ್ಯೆ ಕಡೆ ಗಂಡಸರು ಹೀಗೆ ಚಂದನ ಇಡುತ್ತಾರೆ.

ಮೊದಲನೆಯವ : ಹೆಂಗಸಿನ ಉಡೆ ದಕ್ಷಿಣದ್ದೂ ಅಲ್ಲ, ಉತ್ತರದ್ದೂ ಅಲ್ಲ. ಆದರೆ ಮೋಹಕವಾಗಿದೆ. ಚೆಲುವಾಗಿದ್ದರೆ ಎಲ್ಲಾ ಒಪ್ಪುತ್ತದೆ. ಹೌದೋ ಅಲ್ಲವೊ ?

ಇನ್ನೊಬ್ಬ : ನನ್ನ ಒಪ್ಪು ತಪ್ಪು ಕಟ್ಟಿಕೊಂಡು ಏನು ಮಾಡುತ್ತೀಯೆ ? ನಾನೊಪ್ಪಲಿ, ಬಿಡಲಿ, ಚೆಲುವು ಚೆಲುವೇ . . . ಅವನ ಕೈಯಲ್ಲಿರುವ ಕೋಲು ತೆಳುವಾಗಿದ್ದರೂ ಬಲವಾಗಿದೆ. ಹಿಡಿಯು ಹಾವಿನಹೆಡೆ ಮಾಟ ಬಲು ಸೊಗಸು. ಯಾವ ಕಟ್ಟಿಗೆಯೊ ? ನಾನು ಈವರೆಗೂ ಅಂಥದನ್ನು ಕಂಡದ್ದಿಲ್ಲ ; ಕೈಯಲ್ಲಿ ಮಾಡಿದ್ದಲ್ಲ.

ಮೊದಲನೆಯವ : ಯಾರೊ ? ಎಲ್ಲಿಯವರೊ ?

ಇನ್ನೊಬ್ಬ : ಶ್ರೀಶೈಲಕ್ಕೆ ಹೋಗಿ ನಿಧಾನವಾಗಿ ವಿಚಾರಿಸೋಣ. ಇವರೂ ಅಲ್ಲಿಗೆ ಬರುವವರೇ. ನಮ್ಮವರು ಮುಂದಕ್ಕೆ ಹೋಗಿದ್ದಾರೆ. ಬೇಗ ಸೇರಿಕೊಳ್ಳೋಣ. ಯಾವಯಾವ ಕೆಲಸ ಎಷ್ಟು ಮುಂದುವರಿದಿದೆಯೊ ಮೊದಲು ತಿಳಿಯಬೇಕಾಗಿದೆ.

ಮೊದಲನೆಯವ : ಆಗಬೇಕಾದ್ದೆಲ್ಲ ಆದ ಮೇಲೆ ತಾನೆ ಜಾತ್ರೆ ?

ಇನ್ನೊಬ್ಬ : ಆದಮೇಲೆ ಏನು ? ಆದರೆ ಮಾತ್ರ ಜಾತ್ರೆ. ಇಲ್ಲವಾದರೆ ನಾನು ಹಿಂತಿರುಗಬೇಕು.

ಆತ : ಗೌರೀ.

ಆಕೆ : ಆ, ಏನಂದಿರಿ ?

ಆತ : ಈಗ ದಾಟಿದೆವಲ್ಲಾ—ಅದು ಕಡಪದ ಪ್ರದೇಶ. ಶ್ರೀಶೈಲಕ್ಕೆ ಅದೇ ಹೊಸ್ತಿಲು. ದೇಶ ಚೆನ್ನಾಗಿದೆ, ಅಲ್ಲ ?

ಆಕೆ : ಇದು ನಮ್ಮ ಪ್ರಾಂತದಂತಲ್ಲ. ಬೆಟ್ಟ, ಕಾಡು, ಮರ, ಹೂ, ಪಕ್ಷಿ ಬೇರೆ ಜಾತಿಯವು. ಇಲ್ಲಿನ ದಾಸವಾಳ, ನಂದಿಬಟ್ಟಲು ಬಹು ಮುದ್ದು. ಆ ಏಳುಸುತ್ತಿನ ಮಲ್ಲಿಗೆ ಎಷ್ಟು ಕಮ್ಮಗಿತ್ತು ನೋಡಿದಿರ ? ಜನ ಸ್ವಲ್ಪ ಕಪ್ಪಲ್ಲವೆ ?

ಆತ : ನಿನ್ನದು ಯಾವ ಪ್ರಾಂತ ? ಹೂ ಹಣ್ಣು ಒಂದೊಂದು ಕಡೆ ಒಂದೊಂದು ಬಗೆ. ಬಣ್ಣ ಕಪ್ಪಾದರೇನು ? ಮೈಬಣ್ಣ ಕಟ್ಟಿಕೊಂಡು ಏನು ಮಾಡುತ್ತೀಯೆ ? ಜನ ಒಳ್ಳೆಯವರು. ನಮ್ಮ ಹಿಂದೆ ಮಾತನಾಡಿಕೊಳ್ಳುತ್ತಿದ್ದುದು ಕೇಳಿಸಿತೆ ? ನಿನ್ನ ನಡಗೆಯನ್ನು ವರ್ಣಿಸಿದರು.

ಆಕೆ : ಕೇಳಿಸಿತು. ನಿಮ್ಮ ಕುಲವನ್ನೂ ಆಕಾರವನ್ನೂ ಮೆಚ್ಚಿದರು.

ಶಿವ : ನಿನ್ನ ಕುಲವಂತೂ ಪರ್ವತರಾಜನದು, ತುಂಬಾ ಉನ್ನತವಾದ್ದು, ನನ್ನದು ?

ಗೌರಿ : ನಿಮ್ಮ ಊರಾವುದು ? ನಿಮ್ಮ ಕುಲ ಯಾವುದು ? ನಿಮ್ಮ ತಂದೆ ತಾಯಿ ಯಾರು ?

ಶಿವ : ನನ್ನದೆ ? . . . ಈ ಪ್ರಶ್ನೆಗೆ ನನ್ನಲ್ಲಿ ಉತ್ತರವಿಲ್ಲ . . . ಹೌದು, ನನ್ನ ತಂದೆ ಯಾರು ? ತಾಯಿ ಯಾರು ? ಅಂ . . . (ನಗುವನು) (ಧ್ವನಿಭೇದದಲ್ಲಿ) ತಂದೆ, ತಾಯಿ, ಮಗ, ನೀನು, ಅವರು, ಕೈಲಾಸ, ಶ್ರೀಶೈಲ, ಹಿಮಾಚಲ, ಕಡಲು, ಆಕಾಶ, ಬಿಸಿಲು, ಮಳೆ—ಎಲ್ಲ ನಾನೇ . . . ಅಂ . . .

ಗೌರಿ : ತಪ್ಪಾಯಿತೇನೊ.

ಶಿವ : ಛೇ ಅಲ್ಲ ಬಿಡು. ಈ ವಿಚಿತ್ರ ಉತ್ತರ ಕೊಡಬೇಕಾದ್ದಕ್ಕೆ ನಕ್ಕೆ, ಅಷ್ಟೆ.

ಆಕೆ : ನಾವಿನ್ನೇನೊ ಸಾಮಾನು ಹೊತ್ತುಕೊಂಡು ಹೋಗಬೇಕಾಗಿತ್ತಂತೆ.

ಆತ : ಇನ್ನೇನು ಬೇಕಂತೊ ? ತಮಗೆ ಬೇಕಾದ್ದೆಲ್ಲ ನಮಗೂ ಬೇಕೆಂಬುದಲ್ಲವೇ ಅವರ ಯೋಚನೆ ? ಅವರು ಬೇರೆ ಹೇಗೆ ಯೋಚಿಸಿಯಾರು ? ಆ ಸಂಸ್ಕಾರ ಹಾಗೆ.

ಆಕೆ : ನಿಮಗೆಂದೂ ಹಸಿವಾಗುವುದಿಲ್ಲವೆ ?

ಆತ : ಉಃ . . . ಸದ್ಯಕ್ಕಿಲ್ಲ. ಈಗ ನನ್ನ ಹೊಟ್ಟೆ ತುಂಬಿದೆ. ಅಪರೂಪಕ್ಕೆ ನನಗೂ ಒಂದೊಂದು ಸಲ ಹಸಿವಾಗುವುದು. ಆಗ ಈ ಚಿಕ್ಕಪುಟ್ಟ ಲೋಕಗಳು ಬಲಿಯಾಗುತ್ತವಾಗಿ ನಾನು ಹಸಿವಾಗದಂತೆ ಇರುತ್ತೇನೆ. ಎಷ್ಟೆಷ್ಟೋ ಕಾಲ. ಹಸಿವಾದಾಗ ಮೈ ಮರೆಯುವಷ್ಟು ಅಹಂಕಾರ ಬರುತ್ತದೆ. ಅವರಿಗೆ ಅಡಿಗೆ, ಊಟ, ಸಂಸಾರದ ಯೋಚನೆ ಸಹಜ.

ಆಕೆ : ನಿಮಗೆ ಸಂಸಾರವಿಲ್ಲವೆ ? ಅದರ ಚಿಂತೆಯಿಲ್ಲವೆ ? ಹಾಗೆಲ್ಲ ಮಾತನಾಡುತ್ತಿದ್ದರಲ್ಲ ಅವರು ?

ಆತ : ಹೌದು ಅನ್ನು.

ಆಕೆ : ಆದರೂ ಆಶ್ಚರ್ಯ. ಈ ಶಿವರಾತ್ರಿಯಂದು ಅವರ ಚಿಂತೆ, ಮಾತು ಹೆಚ್ಚಾಗಿ ದೇವರನ್ನು ಕುರಿತದ್ದಲ್ಲ. ಸುತ್ತಲ ಪ್ರದೇಶದ ಚೆಲುವನ್ನು ಕುರಿತು ಕೂಡ ಅಲ್ಲ. ದಿನಚರಿಯ ಮಾತು ಕತೆಯೇ—ಮನೆಯಲ್ಲಿ, ಹಳ್ಳಿಗಳಲ್ಲಿ ದಿನಾ ಏನು ಮಾತನಾಡುತ್ತಾರೊ ಅದನ್ನೇ ಇಲ್ಲಿಯೂ ಮಾತನಾಡುತ್ತಿದ್ದಾರೆ. ಇವರಿಗೆ ಕ್ಷೇತ್ರವೇಕೊ, ತೀರ್ಥವೇಕೊ ?

ಆತ : ಹೌದು ಗೌರಿ. ದಿನಚರ್ಯೆಗಳಿಂದ ಪಾರಾಗುವುದು ಯಾರಿಗೂ ಕಷ್ಟ. ಇಂಥವರು ಕೋಟಿಕೋಟಿಯಾಗಿ ಕೈಲಾಸಕ್ಕೆ ಬರುತ್ತಾರೆಯೆ ? ಬಡವರಿಗೆ ಬಡತನದ ಚಿಂತೆ, ಶ್ರೀಮಂತರಿಗೆ ಐಶ್ವರ್ಯದ ಚಿಂತೆ. ಮುಂದೆ ಹೋಗುತ್ತಿದ್ದಾರೆ

ನೋಡು, ಏನು ವೈಭವ ಅವರದು ! ಆದರೆ ತುಂಬಾ ಭಯ. ಉಳ್ಳವರಿಗೆ ಎಂದೂ ಹೀಗೆಯೇ. ಅವರಿಗೆ ದಾರಿಯಲ್ಲಿ ಕಳ್ಳಕಾಕರ ಭೀತಿ.

ಆಕೆ : ದೇವಾಲಯಕ್ಕೆ ಹೋಗುವಾಗ ಯಾಕೊ ಈ ಒಡವೆ ವೈಭವ ?

ಆತ : ಪೂಜಾರಿಗಳು ಮೊದಲು ಅವರ ಪೂಜೆ ನಡಸಿಕೊಡುವರು. ಸುತ್ತಲವರೂ ಇವರ ಸಿರಿಯನ್ನು ಯಾಕೆ ನೋಡಬಾರದು ?

ಆಕೆ : ಆಚೆ ಕಡೆ ಜನ ಯಾರು ? ಮೈಗೆ ಬಟ್ಟೆ ಇಲ್ಲ. ಮಣಿಸರಗಳನ್ನು ಕೊರಳಿಗೆ, ತಲೆಗೆ ಕಟ್ಟಿದ್ದಾರೆ. ಕೈಯಲ್ಲಿ ಬಿಲ್ಲು ಬಾಣ ಇದೆ. ಕಾಲು ಬೆರಳಲ್ಲಿ ಸುತ್ತಿದೆ. ಅವರು ಮೈ ತೊಳೆದು ಎಷ್ಟು ದಿನವಾಗಿರಬಹುದೊ ?

ಆತ : ಕಳೆದ ಶಿವರಾತ್ರಿಯಂದು. ಇಂದು ಸ್ನಾನ ಮಾಡುತ್ತಾರೆ. ಆ ಕೆಲವರು ಭಿಲ್ಲರು, ಚೆಂಚುಜನ. ಇಲ್ಲಿನ ಕಾಡುಜನ ಧೈರ್ಯವಂತರು. ಅವರ ಬಾಣದ ಗುರಿ ಎಂದೂ ತಪ್ಪುವುದಿಲ್ಲ. ಅವರಲ್ಲಿ ಹಲವರು ಶಿವಭಕ್ತರು. ಕಪಟ ಅರಿಯದ ಜನ ಅದು.

ಆಕೆ : ಯಾವುದೋ ಲೀಲೆಯನ್ನು ನೆನಸಿಕೊಳ್ಳುತ್ತಿರುವಂತಿದೆ.

ಆತ : ನಿಜ. ಅಂದಿನ ಕಿರಾತ ವೇಷವನ್ನು—ಯಾರಾದರೂ ಕೇಳಿಯಾರು—ಅರ್ಜುನನಿಗೆ ಪಾಶುಪತ ಕೊಟ್ಟ ವೇಷವನ್ನು.

ಆಕೆ : ಈ ಭಿಲ್ಲರು ಆ ಕುಲದವರೆ ?

ಆತ : ಅಂದು ನಾನೂ ನೀನೂ ಎಲ್ಲಾ ಕಿರಾತರೇ ಅಲ್ಲವೆ ?

ಆಕೆ : ಮರೆತಿದ್ದೆ. ನಾನೂ ಆ ಹುಡುಗನಿಗೆ ಅಂಜಲಿಕವನ್ನು ಕೊಟ್ಟೆ. ಇನ್ನೂ ನಿನ್ನೆ ಮೊನ್ನೆ ಕೊಟ್ಟಂತಿದೆ !

ಆತ : ನಮ್ಮ ಲೆಕ್ಕದಲ್ಲಿ ನಿನ್ನೆ ಮೊನ್ನೆ. ಅಲ್ಲಿಂದ ಒಂದು ಯುಗ ಕಳೆದಿದೆ. ಬೇಗ ಶ್ರೀಶೈಲಕ್ಕೆ ಹೋಗೋಣ ನಡೆ. ಇನ್ನೇನು ಅವರ ಉತ್ಸವಗಳು ಮೊದಲಾಗುವುವು.

– ಕಣ್ಮರೆಯಾಗುವರು –

# ಅಂಕ ೩

[ಶ್ರೀ ಶೈಲದ ದೇವಸ್ಥಾನದ ಬಳಿ ಒಂದು ಕಡೆ ಒಂದು ದೊಡ್ಡ ಪುಷ್ಕರಿಣಿ. ಶಿವ ರಾತ್ರಿಯ ಉತ್ಸವಕ್ಕಾಗಿ ಲಕ್ಷಾಂತರ ಜನ ನೆರೆದ ಕೋಲಾಹಲ. ದೇವಾಲಯದ ಎದುರಿಗೆ—ಮೇಲಿನ ಹರದಲ್ಲಿ ದೊಡ್ಡ ತೇರೊಂದು ಸಜ್ಜಾಗಿ ನಿಂತಿದೆ. ಅದಕ್ಕೆ ಬಗೆ ಬಗೆಯಾಗಿ ಅಲಂಕಾರ ಮಾಡಿದ್ದಾರೆ. ವಾದ್ಯಗಳ ಮೊಳಗು. ದನ ಕುದುರೆ ಮೇಕೆಗಳ ಧ್ವನಿ. ನಡುನಡುವೆ ಮೋಟರುಗಳ ಧ್ವನಿ. ಕೆಲವು ಗುಂಪುಗಳ ಜನ 'ಶಂಭೋಶಂಕರ' 'ಜಯಮಲ್ಲಿಕಾರ್ಜುನ' 'ಪೈಕೊಂಡವಾಡ' 'ಗುರುಮೂರ್ತಿ ಸಾಂಬಶಿವ' 'ನಾ ತಂಡ್ರಿ' 'ಹರಹರಾ ಹರಾ' ಎಂದು ಮುಂತಾಗಿ ಕೂಗುತ್ತಿದ್ದಾರೆ. ಈ ಶಬ್ದಗಳು ಈ ಅಂಕದಲ್ಲಿ ನಡುನಡುವೆ ಹೆಚ್ಚು ಕಡಮೆ ಕೇಳುತ್ತಲೇ ಇರುತ್ತವೆ. ಪುಷ್ಕರಿಣಿಯ ತುಂಬಾ ಜನ. ನೀರಿನ ಹತ್ತಿರದ ಮೆಟ್ಟಿಲಲ್ಲಿ ಹಣ್ಣು ಹಣ್ಣು ಮುದುಕ, ಆತನ ಹೆಂಡತಿ ಮುತ್ತೈದೆ ಕುಳಿತಿದ್ದಾರೆ. ನೂರಾರು ಜನದ ಇರುಕಿನಲ್ಲಿ, ಯಾವುದೋ ಗೌರವದಿಂದ ತೇಜೋ ವಂತರಾದ ಅವರಿಗೆ ಜನ ಸ್ವಲ್ಪ ಸ್ಥಳ ಕಲ್ಪಿಸಿಕೊಡುತ್ತಿದ್ದಾರೆ. ಆಗಾಗ ಜನ ಬಂದು : 'ತಮ್ಮದು ಯಾವ ಊರೊ ದೇವರು ?' 'ಎಕ್ಕಡನುಂಡಿ ವಚ್ಚಾರು ತಾಮು ?' ಎಂದು ಕನ್ನಡದಲ್ಲಿ, ತೆಲುಗಿನಲ್ಲಿ ಕೇಳುತ್ತಿದ್ದಾರೆ. 'ಉತ್ತರಂ' 'ಉತ್ತರಂ' ಎಂದು ಆತನು ಉತ್ತರ ಕೊಡುತ್ತಿದ್ದಾನೆ. ಪುಷ್ಕರಿಣಿಯ ಸ್ನಾನಕ್ಕಾಗಿ ಸಾವಿರಾರು ಜನ ತುಂಬಿದ್ದಾರೆ. 'ಹನ್ನೆರಡು ಘಂಟೆಗೆ ರಥೋತ್ಸವ' 'ದೇವರಿಗೆ ಅಲಂಕಾರವಾಗಿದೆ' 'ತೇರಿಗೆ ಬೇಗ ದೇವರನ್ನು ತಂದಾರು' 'ಬೇಗ ಹೋಗೋಣ ಬನ್ನಿ' 'ಲೇವೋಯ್ ಪೊದ್ದಯ್ಯಿಂದಿ' 'ಏಮಿ, ಏ, ಅಟ ಇಟ ಚೂಸ್ತುನ್ನಾವ್ ? ತೊನ್ನುಲು ಕಾವಾಲ್ನೇಮಿ ?'—ಹೀಗೆ ನೂರಾರು ಮಾತುಗಳು. ಹಲವಾರು ಕಣ್ಣನ್ನು ಆ ಮುದುಕ, ಮುದುಕಿ ಆಕರ್ಷಿಸುವರು. ಅಸಾಧಾರಣ ವರ್ಚಸ್ಸಿನ ಮುದುಕ, ತುಂಬು ಮುದುಕಿಯಾದರೂ ಅವನಿಗಿಂತ ವಯಸ್ಸಿನಲ್ಲಿ ಕಿರಿಯಳಾದವಳು ಹೆಂಡತಿ. ಮಾತಿನಲ್ಲಿ ಶೈಥಿಲ್ಯ ಇಲ್ಲ, ಗಾಂಭೀರ್ಯ ಇದೆ. ಮಂದ್ರದಲ್ಲಿ ಮುದುಕ, ಮಧ್ಯ ಧ್ವನಿಯಲ್ಲಿ ಮುದುಕಿ ಮಾತನಾಡುತ್ತಾರೆ. ಆತನು ಸ್ನಾನಕ್ಕೆ ಸಿದ್ಧನಾಗಿದ್ದಾನೆ.]

ಆಕೆ : ನನ್ನ ಸ್ನಾನವಂತೂ ಆಯಿತಲ್ಲ ನೀವು ಹೋಗಿ ಬನ್ನಿ. ಸ್ವಲ್ಪ ಚಂದನ ಇಟ್ಟು ಹೋಗಿ. (ಸುತ್ತಲಿನವರನ್ನು ಉದ್ದೇಶಿಸಿ) ಸ್ವಲ್ಪ ಜಾಗಕೊಡಿರಪ್ಪಾ, ಅವರು ಸ್ನಾನಕ್ಕೆ ಇಳಿಯುತ್ತಾರೆ . . . ಆ, ಹಾಗೆ . . . ಸಾಕು.

ಒಬ್ಬಿಬ್ಬರು : 'ಸಂತೋಷವಾಗಾಗಲಿ ತಾಯಿ' 'ಮಾರಾಯರಾಗಿ ತಾನಾ ಮಾಡಲಿ' 'ಕಾವಚ್ಚು ತಲ್ಲಿ' 'ಕಾನಿಂಡು!' 'ದಯಮಾಡಿಸಿ.'

ಇನ್ನು ಕೆಲವರು : ಏನಾಕೃತಿ ಇದು ! ಎಷ್ಟು ಶುಭ್ರ, ಎಷ್ಟು ಧವಳ—ಮೈ ಅದು.

ಬೇರೆಯವರು : 'ಮುತ್ತು ದಂತ ಕಡೆದು ಮಾಡಿದ ಹಾಗಿದೆ ಈ ಬಿಳುಪು' 'ವಯಸ್ಸಾಗಿದೆ, ಸ್ವಲ್ಪವೂ ಜೀರ್ಣವಾಗಿಲ್ಲ' 'ಅರಳಿದ ತಾವರೆಯಂತಿದೆ ಮುಖ' 'ಹಣೆಯ ಮೇಲೆ ಚಂದನ ನೋಡಿ' 'ಸಾಕ್ಷಾತ್ ಶಿವನ ಹಾಗೆ ಇದ್ದಾರೆ' 'ಇಂತಹ ದಿವ್ಯರೂಪ ನಾನು ಎಲ್ಲಿಯೂ ಈವರೆಗೂ ನೋಡಿದ್ದಿಲ್ಲ' 'ಎಚ್ಚರಿಕೆಯಿಂದ ಇಳಿಯಬೇಕು ಸ್ವಾಮಿ, ಮೆಟ್ಟಿಲು ಸವೆದಿದೆ'.

ಆತ : ಆಗಲಪ್ಪ ! ಆಗಲಿ.

ಒಬ್ಬ : ದಯಚೇಯಾಲೀ ದ್ಯಾವರಾ.

ಆತ : ಕಾನಿ.

(ಆಕೆಯನ್ನು ಕುರಿತು ಕೆಲವು ಮಹಿಳೆಯರು ಬಂದು ಕ್ಷೇಮಸಮಾಚಾರ ವಿಚಾರಿಸುತ್ತಾರೆ)

ಅವರು : ತಾವು ಯಾವ ಕಡೆಯವರು ತಾಯಿ ?

ಆಕೆ : ಹಿಮಾಚಲ ಪ್ರದೇಶ—ಇನ್ನೂ ಮೇಲೆ.

ಅವರು : ನಿಮಗೆ ಕನ್ನಡ ಬರುವುದೆ ? ತೆಲುಗು ಬರುವುದೆ ? ಈ ಪ್ರದೇಶಕ್ಕೆ ಹಿಂದೆ ಬಂದಿದ್ದೀರಾ ?

ಆಕೆ : ನಾವೆಲ್ಲೆಲ್ಲೂ ಸುತ್ತಿದ್ದೇವೆ. ದಕ್ಷಿಣ ಭಾಷೆಗಳ ಪರಿಚಯ ಇದೆ. ಎಲ್ಲಾ ಅರ್ಥವಾಗುತ್ತೆ.

ಒಬ್ಬಳು : ತಾಯೀಯವರ ವಯಸ್ಸೆಷ್ಟೊ ? ಹಿರಿಯರ ವಯಸ್ಸು ಕೇಳಬಾರದು, ಕ್ಷಮಿಸಬೇಕು—

ಆಕೆ : ನನಗೆ ತಿಳಿಯದಪ್ಪ. ಬಹುದಿನ ಆಗಿರಬೇಕು.

ಒಬ್ಬ : ಆಗಿರಬೇಕು ; ಆಗಿರಬಹುದು ; ಎಂಬತ್ತ್ತೋ, ತೊಂಬತ್ತೊ ಆಗಿರಬಹುದು.

ಇನ್ನೊಬ್ಬಳು : ಅಪಚಾರಂ ಚೇಸ್ತುನ್ನಾಮು ತಲ್ಲಿ.

ಆಕೆ : ಇನ್ನೂ ಆಗಿರಬಹುದು. ಅಪಚಾರವೇನೂ 'ಲೇದು.'

ಒಬ್ಬಾಕೆ : ಯಜಮಾನರಿಗಿಂತ ತಾವು ಚಿಕ್ಕವರ ಹಾಗೆ ಕಾಣಿಸುತೀರಿ ಅಮ್ಮ ; ನಮ್ಮಮ್ಮ ಮುದ್ದುಗಾರ ಗೌರಮ್ಮನ ಹಾಗಿದೆ.

ಇನ್ನೊಬ್ಬಳು : ಯೇಮನಿ ಅಡುಗುತಾರಮ್ಮಾ.

ಆಕೆ : ಕೇಳಲಿ ಬಿಡಿ. ಅಮ್ಮ, ನಾವು ಇತ್ತ ಕಡೆಯವರಲ್ಲ. ಅವರು ನನಗಿಂತ ತುಂಬಾ ದೊಡ್ಡವರು. ನನ್ನ ಮದುವೆ ಈಚೆಗೆ ಆಯಿತು.

ಒಬ್ಬಾಕೆ : ಈಚೆಗೆ ಅಂದರೇನಮ್ಮ ?

ಇನ್ನೊಬ್ಬಳು : ತಾಯಿ, ಒಂದು ಮಾತು ಕೇಳಲಿಯಾ ? ನಮ್ಮಪ್ಪ ಬೆಳ್ಳಗವ್ರೆ, ಕುತ್ತಗೇಗದೇನು ಕರಿ ಮಚ್ಚೆ ?

ಆಕೆ : (ಮುಗುಳ್ನಗೆ ನಗುತ್ತ) ಹೌದು, ಆ ಕಪ್ಪು ತುಂಬಾ ದಿವಸದಿಂದ ಇದೆ. ನನ್ನ ಕೈಹಿಡಿಯೊ ಮುಂಚೆಯಿಂದ ಇದ್ದದ್ದೇ ಅದು. ಏನೇನೊ ಕತೆ ಹೇಳ್ತಾರೆ ಅವರು. ಹೇಳುವಾಗ ಕೇಳೋಕೆ ಚೆನ್ನಾಗಿರುತ್ತೆ. ಯಾವ ಪುರಾಣ ಪುಣ್ಯಕತೆಯೂ ಅಷ್ಟು ಚೆನ್ನಾಗಿರುವುದಿಲ್ಲ. ನನಗೆ ಬೇಜಾರಂದಾಗಲೆಲ್ಲ ಒಂದೊಂದು ಹೊಸ ಕತೆ ಹೇಳ್ತಾರೆ.

ಒಬ್ಬ : ಆ ತಂಡ್ರಿನಿ ಚೂಸ್ತೆ ಸಾಕ್ಷಾತ್ ನೀಲಕಂಠದೇವುನಿ ಚೂಸಿನಟ್ಲೌತುಂದಿ.

ಆಕೆ : ಔನು, ಹಾಗೂ ಅಂದುಕೊಳ್ಳಬಹುದು.

ಇನ್ನೊಬ್ಬ : ಶ್ರೀಶೈಲದಲ್ಲಿ ಮಲ್ಲಿಕಾರ್ಜುನ ದೇವರು ರೀ ! ಇಲ್ಲಿ ಬೇರೆ ದೇವರನ್ನು ನೆನೆಯಬಾರದು.

ಆಕೆ : ಇಬ್ಬರೂ ಒಂದೇ ದೇವರಲ್ಲವೆ ?

ಒಬ್ಬ : ಅದು ಹೇಗಾದೀತು ಅಮ್ಮ ? ಶ್ರೀಶೈಲದ ದೇವರು ಈ ಬೆಟ್ಟದ ಮೇಲವರು. ನೀಲಕಂಠೇಶ್ವರ ಬೇರೆ ದೇವರು. ಅವರ ಕ್ಷೇತ್ರ ಬೇರೆ ಕಡೆ. ಮಲ್ಲಿಕಾರ್ಜುನ ಸ್ವಾಮಿ ಮಲ್ಲಿಕಾರ್ಜುನಸ್ವಾಮೀನೇ, ನೀಲಕಂಠೇಶ್ವರಸ್ವಾಮಿ ನೀಲಕಂಠೇಶ್ವರ ಸ್ವಾಮೀನೇ.

ಆಕೆ : ಆಯಿತಪ್ಪ, ನಿಮ್ಮಿಷ್ಟ ಬಂದಹಾಗೆ ಹೇಳಿ. ಅವರನ್ನು ನಿಮ್ಮ ಹೆಸರೇನು ಅಂದರೆ ಒಂದೊಂದು ಸಲ ತಮಾಷೆಗೆ ಎಲ್ಲಾ ಅನ್ನುತ್ತಾರೆ. 'ನೀನು ಕರದದ್ದೇ ನನ್ನ ಹೆಸರು' ಎಂದರು ಒಂದು ಸಲ. ಅವರ ಬಗೆ ವಿಚಿತ್ರ. ಅದರಲ್ಲಿ ನಾ ತಿಳಿದಿರುವುದಕ್ಕಿಂತ ತಿಳಿಯದಿರುವುದೇ ಹೆಚ್ಚು ಪಾಲು.

ಇನ್ನೊಬ್ಬ : ನಿಮಗೂ ? ಸ್ವಾಮಿಯೋರು ಕೊಳಕ್ಕೆ ಇಳಿದರು—ನೀರಿಗೆ ಬಿದ್ದರು. ಹಾ, ಎಷ್ಟು ಚೆನ್ನಾಗಿ ಈಜುತ್ತಾರೆ !

ಆಕೆ : ಅವರು ಗಂಗೆಯಲ್ಲಿ, ಮಾನಸ ಸರೋವರದಲ್ಲಿ ಈಜಿದ್ದಾರೆ. ಎಲ್ಲಿ ಹೀಗೆ ನಿಂತುಕೊಳ್ಳಿ—ನನ್ನ ಜೀವವೆಲ್ಲ ಈಗ ಅಲ್ಲೇ ಇದೆ. ಸ್ವಲ್ಪ ಓರೆಗೆ ನಿಂತು ಕೊಳ್ಳುತ್ತೀರಾ, ಅಪ್ಪ—

ಇತರರು ಕೆಲವರು : ಅಂದುರ ಜೀವಾಲೂ ಅಕ್ಕಡನೇ ಉಂಡಿನಟ್ಲುಂದಿ. ಸಾಕ್ಷಾತ್ ಸ್ಫಟಿಕದ ಶಿವಲಿಂಗದ ಹಾಗಿದ್ದಾರೆ.

(ಹಿನ್ನೆಲೆಯಲ್ಲಿ ರುದ್ರ, ನಮಕ, ಚಮಕಗಳ ಘೋಷ ಎಲ್ಲಿಂದಲೂ ಕೇಳುತ್ತದೆ)

ಆಕೆ : ನನಗೂ ಹಾಗೇ ಅನ್ನಿಸುತ್ತಪ್ಪ . . . ಅಯ್ಯೋ ಇದೇನು !—ಏಕಾಯಿತು ? ಏಕೆ ಹೀಗಾಯಿತು ?

ಜನ : ಏಮಿ ತಲ್ಲಿ ? . . . ಏನು ತಾಯಿ ?

ಆಕೆ : ಅಯ್ಯೋ ಅಯ್ಯೋ. ಅವರ ಕಾಲು ಸೋತಂತಿದೆ. ಯಾರಾದರೂ ಸಹಾಯಕ್ಕೆ ಹೋಗಿ—ಮೇಲಕ್ಕೆ ತನ್ನಿ ಹೋಗಿ . . .

ಇತರರು : 'ನೇನು ಪೋತಾನು'

'ನಾವು ಹೋಗುತ್ತೇವೆ'

'ಸಮಾಧಾನ ಮಾಡಿಕೊಳ್ಳಿ ತಾಯಿ—'

'ಇಗೋ ಹೊರಟೆವು.'

ಆಕೆ : ಏನು ಗತಿಯಪ್ಪಾ, ಯಾವತ್ತೂ ಹೀಗಾಗಿರಲಿಲ್ಲವೇ—ಆದರೆ ಸ್ವಲ್ಪ ತಾಳಿರಪ್ಪ. ಉಹೂಃ, ಉಹೂಃ, ಹಾಗೆಲ್ಲಾ ಹೋಗಬಾರದು.

ಇತರರು : ಇನ್ನು ಹೇಗೆ ಹೋಗಬೇಕು ತಾಯಿ ?

ಆಕೆ : ಅವರ ಮೈಯನ್ನು ಮುಟ್ಟುವುದಕ್ಕೆ ಇತರರಿಗೆ ಆಗುವುದಿಲ್ಲ. ನಾನು ಚಂದನ ಕೊಡುತ್ತೇನೆ. ಅವರು ತುಂಬಾ ಮಡಿ. ಈ ಚಂದನ ಹಚ್ಚಿಕೊಳ್ಳದವರು, ಅದನ್ನು ಹಣೆಗಿಡದವರು ಅವರನ್ನು ಮುಟ್ಟಬಾರದು.

ಒಬ್ಬ : ಅದೇನು ತಾಯಿ ?

ಆಕೆ : ಪಾಪಲೇಪ ಇದ್ದವರಿಗೆ ನನ್ನ ಮೈ ಸಿಕ್ಕುವುದಿಲ್ಲ—ಎನ್ನುತ್ತಾರೆ. ಏನೊ ಎಂತೊ. ಅವರ ಮಾತಿನ ಅರ್ಥವೇನೊ. ಆದರೂ ಅವರು ಆಡಿದ್ದೆಲ್ಲ ನಿಜವಾಗಿದೆ. ನೀವು ಹೋಗಿ ಪ್ರಯತ್ನಮಾಡಿ ಏಕೆ ವ್ಯರ್ಥವಾಗಬೇಕು ? ಸ್ನಾನ ಮಾಡುವಾಗ ಅವರ ನೇಮ ತುಂಬಾ ಕಠಿನ.

ಒಬ್ಬ : ಏಮಿ ಮಾಟ ತಲ್ಲಿ ? ಮೇಮು ಎವರೂ ಪೋಯೇಟ್ಟಲ್ಲನೇ ಲೇದೇ !

ಜನ : ಪಾಪಲೇಪ ಇಲ್ಲದವರು ನಾವು ಯಾರು ಇದ್ದೇವೆ ತಾಯಿ ? ಮನುಷ್ಯರಿಗೆ ಅದು ಶಕ್ಯವೇ ಅಮ್ಮಾ ?

ಆಕೆ : ಅಯ್ಯೋ ಮುಳುಗಿಹೋಗುತ್ತಿದ್ದಾರೇ . . .

ಜನ : ಉಳಿಸು ಅಂತಾಳೆ, ಮುಟ್ಟಬೇಡ ಅಂತಾಳೆ—ಅಬ್ಬಬ್ಬಾ—ಏನು ಹೆಂಗಸು ! ನೋಡೋಕೆ ಎಷ್ಟು ಕೋಮಲ !—ಪಾಪಲೇಪ ಇರಬಾರದಂತೆ—ನಾವು ಯಾರು ಹೇಗೆ ಉಳಿಸುವುದಕ್ಕಾದೀತು ? ಅವ್ವಾ, ಇಟ್ಲ ಅಬ್ಬರಂ ಚೇಸ್ತೆ ಎಟ್ಲ, ತಲ್ಲಿ ?

ಆಕೆ : ಅಬ್ಬರ ಅಲ್ಲಪ್ಪ—ಅಬ್ಬರ ಅಲ್ಲ—ನೀರಲ್ಲಿ ಒಳಗೆ ಹೋಗಿ, ಹಾಗೇ ಮುಟ್ಟಿದರೆ ನಾಶ ಆಗುತ್ತಾರೆ ಅಪ್ಪಾ, ಆದ್ದರಿಂದ ಹೇಳಿದೆ. ಸಹಾಯಕ್ಕೆ ಹೋಗುವವರ ಯೋಚನೆಯೂ ಬೇಡವೆ ನನಗೆ ? ಅಯ್ಯೋ, ಅವರ ಮಾತು ವಿಚಿತ್ರ. ಈಗ ಹಾಗೆ ಹೇಳಿ ಹೋದರು. ಈ ವಯಸ್ಸಿನಲ್ಲಿ ಈಜು ಬೇಡ ಎನ್ನುತ್ತೇನೆ. ಕೇಳುವ ಗಂಡೇ ಅದು ? ನಕ್ಕುಬಿಡುತ್ತಾರೆ.

ಒಬ್ಬ : ಇಂಕಾ ಒಕಟಿ ಪೆಟ್ಟಿಂದೇ ಈ ಅಮ್ಮ !

ಒಬ್ಬ : ಪೆಟ್ಟಿಂದಿ, ಲೇ.

ಇನ್ನೊಬ್ಬ : ತೆಗೀರಮ್ಮ, ಯಾತರ ಮಾತು. ನರಸರೆಡ್ಡಿ, ವೀರಭದ್ರರಾವ್, ಶೇಷ ಶಾಸ್ತ್ರಿಗಳೇ ನೀವಿಳೀರ್ರಿ,—ನೀವಿಳೀರ್ರಿ,—ನೀವಿಳೀರ್ರಿ, ತಕ್ಕೊಳ್ರಿ ಚಂದನ.

ಆಕೆ : ಯಾರಾದರೂ ಸರಿಯಪ್ಪ. ಅವರನ್ನು ಉಳಿಸಿಕೊಂಡು ಬನ್ನಿ. ಅಯ್ಯಯ್ಯೋ, ಎರಡು ಸಾವಿರ ಮೈಲಿ ಪ್ರಯಾಣ ಬಂದು ಈ ಸಣ್ಣ ಕೊಳದಲ್ಲಿ ಮುಳುಗಿ ಹೋಗುವ ಹಾಗಾಯಿತಲ್ಲ--

(ಎನ್ನುತ್ತಿರುವಾಗಲೇ ನರಸರೆಡ್ಡಿ, ವೀರಭದ್ರರಾವ್, ಶೇಷಶಾಸ್ತ್ರಿಗಳು ನೀರಿಗಿಳಿಯಲು ಬಾಗಿ ಚಂದನ ತೆಗೆದುಕೊಳ್ಳುವರು. ಹೋಗಿ ಒಬ್ಬೊಬ್ಬರೂ ಹಣೆಗಿಟ್ಟು ಇಳಿಯ ತೊಡಗುವರು. ಮುದುಕಿ ಕೂಗುತ್ತಿರುವಾಗ ದೃಶ್ಯಗಳು ಬದಲಾಗುವುವು)

## ಒಳದೃಶ್ಯ ೧

ನರಸರೆಡ್ಡಿ : ಸಿಕ್ಕಿದರೇನೊ, ಹಿಡಿದುಕೊಂಡು ಬಂದಿರೊ ? ದ್ಯಾವಣ್ಣ, ದಕ್ಷಿಣೆ ಎಷ್ಟು ? ಫಲ ಎಷ್ಟು ?

ದ್ಯಾವಣ್ಣ : ಹತ್ತು ಗಾಡಿ ಸಿಕ್ಕಿದವು. ಇನ್ನೂರು ಮೂಟೆ ಅಕ್ಕಿ, ಮೂರು ಸಾವಿರ ರುಪಾಯಿ ನಗದು, ಐವತ್ತು ಬಾಳೆಗೊನೆ, ನಾಲ್ಕು ಆಡು--

ರೆಡ್ಡಿ : ಯಾರೂ ತಂಟೆ ತಕರಾರು ಮಾಡಲಿಲ್ಲವೆ ?

ದ್ಯಾವಣ್ಣ : ಮಾಡದೆ ಇರ್ತಾರಾ ? ಮಚ್ಚು, ಕತ್ತಿ ಇಟ್ಟುಕೊಂಡು ಬಂದಿದ್ದರು. ಒಬ್ಬ ಒಂದು ಹಳೆ ಪಿಸ್ತೂಲ್ ಹಾರ್ಸೋಕೆ ನೋಡಿದ. ಅತ್ತ ಕಡೆ ಎರಡು ಹೆಣ ಬಿತ್ತು. ಆದರೆ ಬಿಟ್ಟೇವಾ ಅವರನ್ನ ?

ರೆಡ್ಡಿ : ಎತ್ತು, ಗಾಡಿ ಏನು ಮಾಡಿದಿರಿ ?

ದ್ಯಾವಣ್ಣ : ಕಿತ್ತುಬಿಟ್ಟು ಬೇರೆ ಕಡೆ ಸಾಗಿಸಿದೆವು. ಇನ್ನು ಗಾಡಿ ಸುಳಿವು ಸಿಕ್ಕುವ ಹಾಗಿಲ್ಲ. ಎತ್ತು ಹೆದರಿಕೊಂಡು ಓಡಿಹೋದವು.

ರೆಡ್ಡಿ : ಗಾಡಿ ನಮ್ಮೂರ ಕಡೆ ಬಂತು ಎನ್ನುವ ಜಾಡು ಸೂಚನೆ ಇರಕೂಡದು. ಮೂಟೆ ಬೇರೆ ಬೇರೆ ಕಡೆ ಸಾಗಿಸಬೇಕು. ಚೀಲಗಳನ್ನು ಸುಟ್ಟುಬಿಡಿ.

ದ್ಯಾವಣ್ಣ : ಅದೆಲ್ಲ ಮಾಡಿ ಆಯಿತು.

ರೆಡ್ಡಿ : ಹಣ ಏನು ಮಾಡಿದಿರಿ ?

ವೆಂಕಟರಾಜು : ಅಮ್ಮಗಾರಿಕಿಚ್ಚಿನ್ನಾನು.

ರೆಡ್ಡಿ : ಯಾ ಅಮ್ಮಗಾರಿಕಿ ?

ರಾಜು : ನೀಲಮ್ಮಗಾರಿಕಿ.

ರೆಡ್ಡಿ : ಸರಿ. ಇನ್ನೇನೂ ಸಿಕ್ಕಲಿಲ್ಲವೇನೊ ? ಏಮಿ ವೆಂಕಟರಾಜು ?

ರಾಜು : ಒಕ ಮುಸಿಲಿದಿ, ರೆಂಡು ಪಿಲ್ಲಲು.

ರೆಡ್ಡಿ : ದ್ಯಾವಣ್ಣ, ಅದೇಕೆ ಹೇಳಲಿಲ್ಲ ? ಅವರನ್ನೇನು ಮಾಡಿದಿರಿ ?

ದ್ಯಾವಣ್ಣ : ಆಮೇಲೆ ಹೇಳೋಣಾ ಅಂತಿದ್ದೆ. ಮುದುಕೀನ ಹಳ್ಳಕ್ಕೆ ತಳ್ಳಿಬಿಟ್ಟರು. ಹುಡುಗರನ್ನ ಹೂವೇರಿ ಬಂಗಲೆಗೆ ಕರೆದುಕೊಂಡು ಬಂದಿದ್ದೇವೆ.

ರೆಡ್ಡಿ : ಹೂಂ. ಕುದುರೆ ಕಟ್ಟು ಅಂತ ಹೇಳು; ನೀವೆಲ್ಲ ದಣಿವಾರಿಸಿಕೊಂಡು ನಾಳೆ ಊರಮನೆಗೆ ಬನ್ನಿ.

## ಒಳದೃಶ್ಯ ೨

ರೆಡ್ಡಿ : ನಿಮ್ಮ ಹೆಸರೇನು ? ಹೆದರಿಕೊಳ್ಳಬೇಕಾದ್ದಿಲ್ಲ. ನಿಮಗೇನೂ ತೊಂದರೆ ಮಾಡುವುದಿಲ್ಲ ನಾನು.

ಹೆಂಗಸರು : (ಅಳುವರು) ನಮ್ಮದೇನೂ ತಪ್ಪಿಲ್ಲ. ಕಳ್ಳರು ಬಿದ್ದು ಅಟ್ಟಿಕೊಂಡು ಬಂದರು. ನಮ್ಮನ್ನು ನಮ್ಮ ಮನೆ ಸೇರಿಸಿ. ನಿಮ್ಮನ್ನು ಕಂಡರೆ ಮರ್ಯಾದಸ್ತರಿರುವಂತೆ ಕಾಣುತ್ತೆ. ನಾವು ನಮ್ಮ ಅತ್ತೆ ಮನೆಗೆ ಹೋಗುತ್ತಿದ್ದೆವು. ನಾವು ಒಳ್ಳೆಯವರು ಕಾಣಪ್ಪ. ಯಾವೊತ್ತೂ ಕೆಟ್ಟ ಕೆಲಸ ಮಾಡಿದೋರಲ್ಲ. ಮನೆ ಬಿಟ್ಟು ಹೊರಗೆ ಬಂದವರಲ್ಲ.

ರೆಡ್ಡಿ : ನಿಮಗಿಲ್ಲಿ ಯಾವ ಭಯವೂ ಇಲ್ಲ. ಆದರೆ ನೀವು ನಿಮ್ಮ ಅತ್ತೆ ಮನೆ ಯೋಚನೆ, ನಿಮ್ಮ ತಂದೆ ಮನೆಗೆ ಹಿಂದಕ್ಕೆ ಸೇರುವ ಯೋಚನೆ ಬಿಡಬಹುದು. ನೀವು ಒಳ್ಳೆಯವರಲ್ಲ ಎಂದು ಹೇಳಿದವರು ಯಾರು ? ಯಾವ ಕುಲಸ್ಥರು ಎಂದು ನನಗೆ ಗೊತ್ತಿದೆ. ನಾನೂ ನಿಮ್ಮ ಕುಲದವನೇ. ಆದರೆ ನಿಮ್ಮಪ್ಪ ನನಗೆ ಮೊದಲು ಮಾತು ಕೊಟ್ಟಿದ್ದ, ನಿಮ್ಮನ್ನು ನನ್ನ ಮನೆಗೆ ಕೊಡುತ್ತೇನೆ ಅಂತ. ಆಮೇಲೆ ಕೇಳುವುದಕ್ಕೆ ಕಳಿಸಿದರೆ 'ನಿಮಗೆ ಕೊಡೋಕಿಂತ ಕುತ್ತಿಗೆ ಕಿವುಚಿ ಬಾವಿಗೆ ಹಾಕ್ತೀನಿ' ಅಂದನಂತೆ. ಕುತ್ತಿಗೆ ಹಿಸುಕುವುದೇಕೆ ? ಕುತ್ತಿಗೆ ಮೇಲೆ ಕೈ ಆಡಿಸುತ್ತೇವೆ. ತಂಟೆ ತಕರಾರು ಮಾಡದೆ ಸುಮ್ಮನಿದ್ದರೆ ಸರಿ. ಇಲ್ಲದಿದ್ದರೆ ಛಡಿಏಟು ಬಿದ್ದೀತು. ಇದು ಕಾಡಿನ ನಡುವೆಯ ಬಂಗಲೆ. ಇಪ್ಪತ್ತು ಮೈಲಿ ದೂರ ಒಂದು ಹಳ್ಳಿ ಇಲ್ಲ. ಒಂದು ನರಪಿಳ್ಳೆ ಸಂಚಾರ ಇಲ್ಲ. ಇನ್ನೊಬ್ಬರ ಸಹಾಯ ಸಿಕ್ಕದು. ಯಾರೊ ಅಲ್ಲಿ ? ಇವರಿಗೆ ತಿನ್ನೋಕೆ, ಉಣ್ಣೋಕೆ ಕೊಟ್ರೇನೊ ? ಕೇಳಿದ್ದು ಕೊಡಿ, ಬೇಕಾದ್ದು ಮಾಡಿಹಾಕಿ.

ಹೆಂಗಸರು : ನಿಮ್ಮ ಕಾಲಿಗೆ ಬೀಳುತೇವಪ್ಪ, ನಮ್ಮ ಊರಿಗೆ ನಮ್ಮನ್ನ ಕಳಿಸಿಕೊಡಿ. ಬೇಕಾದ್ದು ಕೊಡಿಸುತೀವಿ. ನಮ್ಮ ಮಾನ ಕಾಪಾಡಿ.

ರೆಡ್ಡಿ : ಇನ್ನು ನಿಮ್ಮ ಮಾನ ನಮ್ಮದು. ನನ್ನ ತಮ್ಮನಿಗೊಂದಾಯಿತು, ನನಗೊಂದಾಯಿತು.

ಹೆಂಗಸರು : ಅಯ್ಯೊ ದೇವರೇ—ಏನು ಗತಿ ತಂದೆಯಪ್ಪ. (ಬಿಕ್ಕಿಬಿಕ್ಕಿ ಅಳುವರು)

ರೆಡ್ಡಿ : ಏನು ಗತಿ ತಂದ ? ಒಳ್ಳೆ ಗತಿ ತಂದ. ನರಸರೆಡ್ಡಿ ಕೈಗೆ ತಂದ. ಮುಚ್ಚಿ ಬಾಯಿ. ಓಡಿಹೋಗುವುದಕ್ಕೊ ಜೀವ ತೆಗೆದುಕೊಳ್ಳುವುದಕ್ಕೊ ಯತ್ನಿಸಿದರೆ ನಿಮ್ಮ ಗತಿ ಯಾರಿಗೂ ಬೇಡ. ಹುಷಾರ್ !

(ಈ ದೃಶ್ಯ ಮುಗಿದು ಅವನು ನೀರಿನಲ್ಲಿಳಿಯುವ ಸಾಹಸ ಮಾಡದೆ)

ಮುದುಕ ಸಿಕ್ಕದೆ ಹೋಗಬಹುದು. ನಾನೇಕೆ ವೃಥಾ ಜೀವ ಕಳೆದುಕೊಳ್ಳಬೇಕು ? ಉಹುಂ....(ಹಿಮ್ಮೆಟ್ಟುವನು)

## ಒಳದೃಶ್ಯ ೩

ಜನರು : ರಾಯರೇ, ಹದಿನೈದು ದಿನವಾಯಿತು. ಹೆಂಡತಿ ಕಾಯಿಲೆ ಇದ್ದಾಳೆ. ಮಗುವಿಗೆ ಹಾಲಿಲ್ಲ. ನಮಗೆ ಅನ್ನ ಇಲ್ಲ. ಸಂಘ ಕೊಟ್ಟ ಹಣ ಅಂದೇ ಮುಗಿದುಹೋಯಿತು. ಅಂಗಡಿಗಳಲ್ಲಿ ಸಾಲ ಕೊಡುವುದಿಲ್ಲ. ನಮ್ಮ ಪಾಡು ನಾಯಿಪಾಡಾಗಿದೆ.

ಇನ್ನೊಬ್ಬ : ಬಡವರ ಮೇಲೆ ದಯೆತೋರಿಸಿ ಸ್ವಾಮಿ. ನಿಮಗೆ ಎಂಟು ನೂರು ಜನದ ಕಷ್ಟ ಚೆಂದಾಗಿ ಕಾಣಿಸ್ತಿದೆಯೆ ಸ್ವಾಮಿ ? ನಮ್ಮ ಕೆಲಸಕ್ಕೆ ನಾವು ಹೋಗುತ್ತೇವೆ. ಬಡವರು ಬದುಕ್ಕೋತೇವೆ.

ವೀರಭದ್ರರಾವ್ : ಮುಷ್ಕರ ಇನ್ನು ಎಷ್ಟು ದಿನ ನಡೆದೀತು ? ಹೆಚ್ಚು ದಿನ ಮುಂದಕ್ಕೆ ತಳ್ಳದು. ನೋಡಿಯೇಬಿಡೋಣ. ಸ್ವಲ್ಪ ತಡೆಯಿರಿ. ಇದೆಲ್ಲಾ ನಿಮ್ಮ ಪ್ರಯೋಜನಕ್ಕೆ ತಾನೆ ಮಾಡಿರುವುದು ?

ಹೆಂಗಸು : ನಿಮ್ಮ ಕಾಲಿಗೆ ಬಿದ್ದೇವು ಸ್ವಾಮಿ, ಅನ್ನ ನೀರು ಇಲ್ಲದೆ ಇನ್ನೆಷ್ಟು ದಿನ ಸಾಯೋದು ? ಬಂದಷ್ಟು ಬರಲಿ. ಸಾಲಗಾರರು ಬೀದಿ ಬಾಗಿಲಲ್ಲಿ ನಿಂತು ಹೀನಮಾನ ಅಂತಾರೆ. ಮನೆಯಲ್ಲಿ ಯಾರಿಗೆ ಯಾರೂ ಮುಖ ಕೊಟ್ಟು ಮಾತಾಡೋಕಿಲ್ಲ. ಮುಸುಕಿನ ಜೋಳ, ಮುಗ್ಗಿದ ಸಾಮೆ ತಿಂದು ಆಯಿತು. ತಂಗುಳು, ಎಂಜಲು ತಿಂದೂ ಆಯಿತು. ಭಿಕ್ಷೆ ಬೇಡಿ ಆಯಿತು.

ಇನ್ನೊಬ್ಬಳು : ಮುಷ್ಕರ ಹೂಡುವವರಿಗೆ ಭಿಕ್ಷೆ ಏಕೆ ಅಂತಾರೆ, ಜನ.

ಇನ್ನೊಬ್ಬಳು : ಮನೆಯಲ್ಲಿ ಮಗಳ ಹೆರಿಗೆ ಆಯಿತು. ಅವಳ ಎದೇಲಿ ಹಾಲಿಲ್ಲ. ಹಾಲು ಕೊಳ್ಳೋದಿಕ್ಕೆ ನಮ್ಮಲ್ಲಿ ಹಣ ಇಲ್ಲ. ನಾವು ಕೆಲಸಕ್ಕೆ ಹೋಗುತ್ತೇವೆ ಸ್ವಾಮಿ, ನೀವು ಏನೇ ಮಾಡಿಕೊಳ್ಳಿ.

ರಾವ್ : ಮುಷ್ಕರ ಮೂರನೆ ಸ್ಥಿತಿಗೆ ಮುಟ್ಟಿದೆ. ಅದರ ಬಿಸಿ ಗಿರಣಿಯವರಿಗೆ ತಟ್ಟಿದೆ. ಇನ್ನೇನು ಇವೊತ್ತೋ ನಾಳೆಯೊ ನಮ್ಮ ಕರಾರಿಗೆ ಅವರು ಬಗ್ಗಿ ಬೀಳೋದು ನಿಜ. ಇಗೋ, ಇದನ್ನು ತಕ್ಕೋ. ಎರಡು ರುಪಾಯಿಗೆ ಹಾಲುಪುಡಿ ತೆಗೆದುಕೊಂಡು ಹೋಗು.

(ಜನದ ಗಲಾಟೆ)

ರಾಯರೆ, ರಾಯರೆ, ನಮ್ಮೋರು ನೂರುಮಂದಿ ಕೆಲಸಕ್ಕೆ ಹೋದರು. ಉಳಿದೋರು ಅಷ್ಟು ಜನ ಅವರನ್ನು ತಡೆದರು. ಇವರಿಗೂ ಅವರಿಗೂ ಮಾರಾಮಾರಿ ಆಯಿತು. ಎಷ್ಟು ಮಾಡಿದರೂ ಜಗಳ ನಿಲ್ಲಲಿಲ್ಲ. ಜಗಳ ಬಿಡಿಸಲು ಹೋದ ಹನುಮಯ್ಯನನ್ನು ಇಬ್ಬರ ನಡುವೆ ಕೊಂದರು. ಇನ್ನು ಕೆಲವರು ಯಂತ್ರದ ಹತ್ತಿರ ಹೋದರು ; ಪೊಲೀಸರು ತಡೆಯುವ ಆಜ್ಞೆ ಮಾಡಿದರು. ಯಾರೂ ಚೆದರಲಿಲ್ಲ. ಲಾಠಿ ಬೀಸಿದರು, ಬಗ್ಗಲಿಲ್ಲ. ಆಮೇಲೆ ಗುಂಡು ಹಾರಿಸಿದರು, ಸ್ವಾಮಿ. ನಾಲ್ಕು ಹೆಣ ಬಿದ್ದವೆ. ಹದಿನೈದಿಪ್ಪತ್ತು ಜನಕ್ಕೆ ಗಾಯ ಆಗವೆ.

ರಾವ್ : (ತನ್ನಲ್ಲಿ) ಇಂಥಾ ಉಲ್ಬಣಕ್ಕೆ ಬಂದ ಹೊರತು, ದುರ್ದೈವ, ಸಂಪುಗಳು ತಂಪಾಗುವ ಹಾಗೇ ಇಲ್ಲ. ಇದು ಗಿರಣಿಯ ಕಬ್ಬಿಣದ ಯಂತ್ರಗಳು ಕೇಳುವ, ಕೊಳ್ಳುವ ನರಬಲಿಯೇನೊ ಕಾಣೆ. (ಪ್ರಕಾಶ) ಇಂಥದನ್ನು ಸಹಿಸುವ ನೀವು ಧೀರರು. ನೋಡಿ ಇಲ್ಲಿ,—ಸ್ನೇಹಿತರೆ, ನಿಮಗೆ ನಷ್ಟವಾಗಿರುವುದು, ಕಷ್ಟವಾಗಿರುವುದು ನಾನು ಬಲ್ಲೆ. ಅವರೂ ಬಲ್ಲರು. ಹೀಗೆ ಮಾಡಿ ನಿಮ್ಮನ್ನು ಬಗ್ಗಿಸಬೇಕೆಂಬುದೇ ಗಿರಣಿಯ ಒಡೆಯರ ಯತ್ನ. ಎಂದಿಗೂ ಹೀಗೇ. ಸಂಘದ ಅಧಿಕಾರಿಗಳಿಗೆ ಅದು ಪರಿಚಿತವಲ್ಲವೆ ? ಇಷ್ಟು ಅನ್ಯಾಯ, ದಬ್ಬಾಳಿಕೆ ಮಾಡಿ, ಇಷ್ಟು ಜೀವಹತ್ಯಗಳಿಂದ ಅವರು ಪಡಬಹುದಾದ ಸುಖವಾದರೂ ಏನು ? ನಾವು ಸರಕಾರಕ್ಕೆ ತಿಳಿಯಪಡಿಸಿದ್ದೇವೆ, ಎಚ್ಚರಿಸಿದ್ದೇವೆ—ಸಂಪು ಹೂಡುತ್ತೇವೆಂದು. ಇದು ನ್ಯಾಯವಾದ ಮುಷ್ಕರ, ಕೆಲಸಗಾರರ ದೃಷ್ಟಿಯಿಂದ. ದಿನಾ 9 ಘಂಟೆಗೆ ಬದಲು 8 ಗಂಟೆ ಕೆಲಸ ಮಾಡುತ್ತೇವೆ,—ಎಂದೆವು. ಒಪ್ಪಲಿಲ್ಲ. ಧಾರಣೆವಾಸಿಗಳು ವಿಷದಂತೆ ಏರುತ್ತಿವೆ. ಬಡವರು ಬದುಕೋದು ಹೇಗೆ ? 30ರಿಂದ 35ರ ವರೆಗಾದರೂ ಸಂಬಳ ಏರಿಸಿ ಎಂದೆವು. 10 ನಯೋಪೈಸೆ ಹೆಚ್ಚಾಗಿ ಕೊಡುವುದಿಲ್ಲವೆಂದರು. ಕಳ್ಳರು ! ಅವರಿಗೆ ಈ ಸಾರಿ

ಲಾಭವೆಷ್ಟು ಗೊತ್ತೆ ? 60 ಲಕ್ಷ ರುಪಾಯಿ. ತಮ್ಮ ಕೆಲಸಗಾರರಿಗೆ ತಲಾ 5 ರುಪಾಯಿ ಬಡತಿ ಕೊಟ್ಟರೆ ಒಟ್ಟು 50 ಸಾವಿರ ರುಪಾಯಿ ಆಗುವುದಿಲ್ಲ. ಅಷ್ಟು ಕೇಳುವುದು ಹೆಚ್ಚೆ ? ಐವರು ನಾಯಕರನ್ನು ಪುನಃ ಕೆಲಸಕ್ಕೆ ತೆಗೆದು ಕೊಳ್ಳಬೇಕೆಂದು ಅಧಿಕಾರಿಗಳನ್ನು ಕೇಳಿದೆವು. ಕೆಲಸದ ನಡುವೆ ಅರ್ಧಗಂಟೆ ವಿರಾಮ ಬೇಕೆಂದು ಬೇಡಿದೆವು. ಅವರು ಒಪ್ಪಲಿಲ್ಲ. ಇದು ನನ್ನ ಪ್ರಯೋಜನಕ್ಕಾಗಿ ಅಲ್ಲ ಮಾಡಿದ್ದು : ನಿಮ್ಮ ಸುಖಕ್ಕಾಗಿ. ನೋಡೋಣ—ಇನ್ನು ಯಾರು ಬಂದು ಕೆಲಸ ಮಾಡುವರೊ ಇಲ್ಲಿ. ಗಿರಣಿ ಮುಚ್ಚುವಂತಾದರೆ ಮಾತ್ರ ಅವರಿಗೆ ಗೊತ್ತಾಗುವುದು. ಆಗ ಮಾತಾಡುವರು. ತಿಂಗಳಿಗೆ 4000–5000 ರುಪಾಯಿ ಸಂಬಳ, ಇತರ ಎಷ್ಟೋ ಬಗೆಯ ಪ್ರಯೋಜನ ಗಳಿಸಿದ ಹಾಗಲ್ಲ. ಎಲ್ಲಾ ತೋಳಗಳು. ಮನುಷ್ಯರೆ ಅವರು ? ಬೋನಸ್ ಪೇರುಗಳನ್ನು ನೂರು–ಇನ್ನೂರು ತಮ್ಮ ತಮ್ಮಲ್ಲಿಯೇ ಹಂಚಿಕೊಂಡ ಹಾಗಲ್ಲ. ಈ ಹಣ ಯಾರು ಅವರಿಗೆ ಗಳಿಸಿಕೊಟ್ಟವರು ? ನೀವು. ಗಿರಣಿಯ ಅಭಿವೃದ್ಧಿ ಯಾರಿಂದ ? ನಿಮ್ಮಿಂದ. ಇಂಥ ನಿಮ್ಮ ಅಲ್ಪ ಸೌಖ್ಯಕ್ಕಾಗಿ ಅಡ್ಡಿ ಉಂಟು ಮಾಡಿರುವ ಗಿರಣಿ ಇದ್ದರೇನು, ಇಲ್ಲದಿದ್ದರೇನು ? ಇವರು ಕೊಡದಿದ್ದರೆ, ಗಿರಣಿ ಮುಚ್ಚುವೆವೆಂದರೆ ಹೇಳಿಬಿಡಲಿ. ಹೆದರಿಸಲಿ. ಗಿರಣಿ ಮುಚ್ಚು ವುದರಿಂದ ಲಾಭವಿಲ್ಲವೆಂದು ತೋರಿಸಿ ಕೊಡುತ್ತೇವೆ. ಗಿರಣಿಯನ್ನು ನಾವು ನಡಸುತ್ತೇವೆ. ನಮ್ಮ ಸಲಹೆ ತೆಗೆದುಕೊಂಡರೆ ಅವರ ಉತ್ಪತ್ತಿಯನ್ನು ಇಮ್ಮಡಿ ಮಾಡಿಕೊಡಬಲ್ಲೆವೆಂದು ತೋರಿಸುತ್ತೇವೆ. ಅದು ಅವರಿಗೆ ಬೇಕಿಲ್ಲ. ಕೆಲಸಗಾರರಿಗೆ ತಲಾ ಒಂದು ನೂರು ರುಪಾಯಿ ಸಂಬಳ ಕೊಟ್ಟರೂ ಲಾಭ ಇನ್ನೂ ಹೆಚ್ಚಾಗುವುದೆಂದೂ ಕೆಲಸಗಾರರ ಉತ್ಸಾಹದಿಂದ ಗಿರಣಿಗೆ ಸೌಭಾಗ್ಯ ವುಂಟೆಂದೂ ಮನವರಿಕೆ ಮಾಡಿಕೊಡುತ್ತೇವೆ. ಅವರು ಗಿರಣಿಯನ್ನು ಮುಚ್ಚಿದರೆ ಸರಕಾರ ಅದನ್ನು ತೆಗೆದುಕೊಳ್ಳುವಂತೆ ಮಾಡುತ್ತೇವೆ. ಮುಂದಿನ ವಾರದೊಳಗೆ ನಿರ್ಣಯವಾಗುವುದು ಖಂಡಿತ. ಇಷ್ಟು ತಾಳಿದವರು ಇನ್ನು ಸ್ವಲ್ಪ ತಡಕೊಳ್ಳಿ.

(ಆ ಸದ್ದು ನಿಲ್ಲುವುದು)

## ಒಳದೃಶ್ಯ ೪

ರಾವ್ : ನಾನು ಇನ್ನೇನು ಮಾಡುವುದಿದೆ ಪ್ರಸಾದರೆ ? ಎಂಟು ನೂರು ಜನರನ್ನು ನಾವು ಹೇಗೆ ತಡೆಯುವುದಕ್ಕಾದೀತು ? ಬಡವರ ಹೊಟ್ಟೆಪಾಡಿನ ಕಡೆ ನೀವೂ ನಾವೂ ಇಬ್ಬರೂ ಗಮನವಿಡಬೇಕಲ್ಲವೆ ?

ಪ್ರಸಾದ್ : ಯೋಚನೆ ಮಾಡಿ ರಾವ್. ಗಿರಣಿಗೆ ಇಷ್ಟು ನಷ್ಟ ಮಾಡಿ, ದಿನಾ ಒಂಬತ್ತು ಗಂಟೆಯಂತೆ, ಹನ್ನೊಂದು ದಿನ ಎಂಟು ನೂರು ಜನರ ಕೆಲಸ ಇಲ್ಲವಾದರೆ ಉತ್ಪತ್ತಿ ಎಷ್ಟು ಕಡಮೆಯಾಗುವುದು, ನಿಮಗೆ ಎಷ್ಟು ಕಷ್ಟವಾಗುವುದು ? ಎಷ್ಟು ಜನಕ್ಕೆ ಹಸಿವು, ನೋವು, ಕಷ್ಟ, ನಷ್ಟ ಉಂಟು ಮಾಡಿದಂತಾಗುವುದಿಲ್ಲ ? ವ್ಯಾಪಾರಕ್ಕೆಷ್ಟು ನಷ್ಟ ಮಾಡಿದ್ದೀರಿ ? ನಮ್ಮ ಗಿರಾಕಿಗೆ ಸರಿಯಾಗಿ ನಾವು ಸಾಮಾನು ಸರಬರಾಜು ಮಾಡಿದರೆ ತಾನೆ ನಮಗೆ ವರಮಾನ ? ದುಡಿದವರಿಗೆ ಕೂಲಿ, ಸಂಬಳ ? ಇಷ್ಟು ಜನರ ನಿಟ್ಟುಸಿರು, ಕಷ್ಟ, ನಷ್ಟದ ಕಾರಣವಾಗಿ ಸಂಘವಾದರೂ ಅವರಿಗೆ ಏನು ಸಾಧಿಸಿಕೊಟ್ಟಂತಾಯಿತು? ಗಿರಣಿಗೆ ಲಾಭ ಬಂದಾಗ ನಾವೇ ಐದ್ವೈದು ರೂಪಾಯಿ ಕೊಡಲಿಲ್ಲವೆ ? ವರ್ಷಕ್ಕೆ ಒಂದೊಂದು ತಿಂಗಳ ಕೂಲಿ ಸಂಬಳ ಪ್ರತಿಯೊಬ್ಬರಿಗೂ ಹೆಚ್ಚುವರಿ ಕೊಡುತ್ತಿಲ್ಲವೆ ? ಗಿರಣಿಯ ಲಾಭವೆಲ್ಲ ಗಿರಣಿಗೆ ಉಳಿಯುತ್ತಿದ್ದರೆ ನಿಮ್ಮವರಿಗೂ ಹಂಚುತ್ತಾ ಇದ್ದೆವು. ಆ ಡ್ಯೂಟಿ, ಈ ಡ್ಯೂಟಿ ಎಂದು ಸರಕಾರ ರುಪಾಯಿಗೆ 30 ಪೈಸೆ ತಕ್ಕೊಳ್ತಾರೆ. ಇದರ ಮೇಲೆ ವರಮಾನದ ತೆರಿಗೆ, ಹೆಚ್ಚು ಲಾಭದ ತೆರಿಗೆ. ಅದೆಲ್ಲಾ ಕೂಲಿಯವರಿಗೆ ತಿಳಿಯದಿರಬಹುದು. ನಿಮಗೆ ಗೊತ್ತಿಲ್ಲದೆ ಇಲ್ಲ. ವ್ಯಾಪಾರ ಕುದುರಲಿ. ಕಾಲ ಚೆನ್ನಾಗಲಿ. ಕೆಲಸಗಾರರನ್ನು ಒಪ್ಪಿಸಿ. ಏನು ರಾವ್‌ಜೀ ? ಸ್ವಂತವಾಗಿ ನಿಮಗೂ ನಾವೇನೂ ಎಂದೂ ಅನ್ಯಾಯ ಮಾಡಿಲ್ಲ. ಈಗಲೂ ಮಾಡುವುದಿಲ್ಲ. ನೀವು ದೊಡ್ಡ ಮನಸ್ಸು ಮಾಡಬೇಕು. ರಾಜಕೀಯ ಉದ್ವೇಗಗಳನ್ನು ಇಲ್ಲಿ ತುಂಬಬೇಡಿ. ಇದನ್ನು ನೋಡಿ : ಈ ಕಾಗದದಲ್ಲಿ ನಮ್ಮ ಷರತ್ತುಗಳಿವೆ. ನಿಮ್ಮ ಪ್ರಯೋಜನವಿದೆ. ಜನರನ್ನು ಒಪ್ಪಿಸಿ. ಕೆಲಸಗಾರರು ಏನು ಮಾಡುತ್ತಾರೆ—ನೀವು ಹೇಳಿದಂತೆ ಕೇಳುತ್ತಾರೆ. ಇಬ್ಬರೂ ಬದುಕೋಣ.

ರಾವ್ : ನಾನಂತೂ ಹೇಳಿ ನೋಡುತ್ತೇನೆ. ನನ್ನ ಕೈಯಲ್ಲಾದ್ದನ್ನೆಲ್ಲ ಮಾಡುತ್ತೇನೆ. ಆದರೂ ಇಷ್ಟಕ್ಕೆ ಜನ ಒಪ್ಪುತ್ತಾರೊ ಇಲ್ಲವೊ, ನೋಡುತ್ತೇನೆ. ನಮಸ್ಕಾರ.

ಪ್ರಸಾದ್ : ಹೇಳೊ ರೀತಿ ಹೇಳಿ. ಒಪ್ಪದೆ ಏನು ಮಾಡುತಾರೆ ? ನಮಸ್ಕಾರ. (ಅವನು ಹೊರಟುಹೋದ ಮೇಲೆ) ನಾವು ಕಳ್ಳರಂತೆ ! ತೋಳಗಳಂತೆ !

ಇವರು ಇನ್ನೇನೊ ! ಇವರೂ ಕೆಲಸಗಾರರನ್ನು ಕಿತ್ತು ತಿನ್ನುವವರೇ. ಕೊಳಿ. ಎರಡೂ ಕೊಳಿಯೇ. ಕೊಳ್ಳಿ. ಎರಡೂ ಕೊಳ್ಳಿಯೇ.

## ಒಳದೃಶ್ಯ ೫

ಕೆಲಸಗಾರರು ಹತ್ತು ಜನ : ಇನ್ನು ತಡೆಯುವುದಕ್ಕೆ ಆಗುವುದಿಲ್ಲ. ನಾವು ಕೆಲಸಕ್ಕೆ ಹೋಗಿಯೇ ತೀರುತೇವೆ. ಸಂಘವಿರಲಿ, ಇಲ್ಲದಿರಲಿ, ನಮಗೆ ಅನ್ನ ಬೇಕು. ಬಟ್ಟೆ ಬೇಕು.

ಅನ್ನ—ಅನ್ನ ; ಕೆಲಸ ; ಅನ್ನ—

ನಾಲ್ಕು ಜನ : ಮುಚ್ಕೋ ಬಾಯಿ.

ಗಿರಣಿ ಸುಟ್ಟು ಹಾಕುತ್ತೇವೆ. ನೀವಾರು ತಡೆಯುತ್ತೀರೋ ತಡೆಯಿರಿ. —ಸಂಘ ಬೇಡವಂತೆ—ಸಂಘದಿಂದ ಹೊರಕ್ಕೆ ಹಾಕುತ್ತೇವೆ. ಆಮೇಲೆ ಗಿರಣಿ ಕೆಲಸಕ್ಕೆ ಹೋಗೋ ಮುಖ ನೋಡುತ್ತೇವೆ.

ರಾಯರು ಬಂದರು—ರಾಯರು ಬಂದರು.

ರಾಯರು ಹಾಳಾದರು—

ಮುಚ್ಚುಬಾಯ್—ನೀನು ಹಾಳಾದೆ—ಹಲ್ಲು ಮುರಿದು ಗಂಟಲಲ್ಲಿ ತುರುಕಿ ನುಂಗಿಸುತ್ತೇನೆ—ಹುಷಾರ್.

ರಾವ್ : ಗೆಳೆಯರೆ, ಬಂಧುಗಳೆ, ಹನ್ನೆರಡು ದಿನ ನಿಮ್ಮನ್ನು ಈ ಕಷ್ಟಕ್ಕೆ ಈಡು ಮಾಡಿದೆವು. ಮಾಲೀಕರ ಹತ್ತಿರ ನಾನೇ ನಾಲ್ಕು ಸಲ ಹೋಗಿದ್ದೆ, ಸಂಧಾನಕ್ಕಾಗಿ. ನನ್ನ ಮಾನ, ಅಪಮಾನ ಲೆಕ್ಕಿಸದೆ. ಅವರು ಅಂದುದನ್ನೆಲ್ಲ ಸಹಿಸಿಕೊಂಡೆ. ನಿಮಗಾಗಿ ದುಡಿದೆ. ಇದರಲ್ಲಿ ನನ್ನ ಪ್ರಯೋಜನ ಏನುಂಟು ? ನಮ್ಮ ಆಸೆ ಬಯಸಿದ್ದೆಲ್ಲಾ ಆಗುವ ಹಾಗಿದ್ದರೆ ಆಕಾಶಕ್ಕೆ ಕುದುರೆಯ ಸವಾರಿ ಮಾಡಬಹುದಾಗಿತ್ತು. ಸಂಘಕ್ಕೂ ಮಾಲೀಕರಿಗೂ ಹೇಗೊ ಒಂದು ಒಪ್ಪಂದ ಮಾಡಿಸಿದ್ದೇನೆ. ಕಡೆಗೆ—

(ಚಪ್ಪಾಳೆ—'ನಮಗೆ ಅನುಕೂಲವಾದರೆ ಸರಿ. ಇಲ್ಲವಾದರೆ ನಿಮ್ಮ ತಲೆ ತೆಗೆಯುತ್ತೇವೆ'. 'ಕಾಮುಷ್—ಮುಚ್ಕೋ ಬಾಯ್'. 'ನೀನು ಮುಚ್ಕೋ'—ಗದ್ದಲ)

ಸದ್ಯಕ್ಕೆ ತಿಂಗಳಿಗೆ ಮೂರು ರುಪಾಯಿ ಬಡ್ತಿ ಆದರೂ ಕೊಡಲು ಅವರನ್ನು ಒಪ್ಪಿಸಿದ್ದೇನೆ.

(ಚಪ್ಪಾಳೆ—ಧ್ವನಿ. 'ಮೂರು ರುಪಾಯಿ—ತಿರುಪೆ—ಯಾರಿಗೆ ಬೇಕು—ಏತಕ್ಕೆ ಸಾಕು...')

ಕೆಲಸದಿಂದ ತೆಗೆದಿದ್ದ ಐವರಲ್ಲಿ ಮೂವರನ್ನು ಒಡನೆಯೇ ಕೆಲಸಕ್ಕೆ ತೆಗೆದುಕೊಳ್ಳುವುದಾಗಿ ಒಪ್ಪಿದ್ದಾರೆ. ವಿರಾಮದ ಷರತ್ತಿಗೆ ಒಪ್ಪಿದ್ದಾರೆ.

ಜನ : ಇನ್ನಿಬ್ಬರನ್ನು ಇವರ ಅಪ್ಪನ ಮನೆಗೆ ಊಟಕ್ಕೆ ಕಳುಹಿಸಬೇಕಂತೊ ? 'ಕಾಮ್ರೇಡ್–ಕಾಮ್ರೇಡ್ !'

(ಕೈಚಪ್ಪಾಳೆ. 'ರಾಯರಿಗೆ ಜಯವಾಗಲಿ' 'ಸಂಘಕ್ಕೆ ಜಯವಾಗಲಿ' 'ಇವನ ತಲೆ' 'ಮುಚ್ಚು ಬಾಯ್')

ಹುತಾತ್ಮರಿಗೆ, ಗಾಯಗೊಂಡವರಿಗೆ ಪರಿಹಾರವನ್ನು ಕೊಡುವುದಾಗಿ ಹೇಳಿದ್ದಾರೆ. ಸಂಘ ಈ ಸಾರಿ ಇನ್ನೇನೂ ಹೆಚ್ಚಾಗಿ ಮಾಡದಿದ್ದದ್ದಕ್ಕೆ ನಾನು ವಿಷಾದಿಸುತ್ತೇನೆ.

ಜನ : 'ಬದುಕಿದೆವು, ಬದುಕಿದೆವು'––'ಇನ್ನಿಬ್ಬರನ್ನು ಕೂಡಲೆ ಕೆಲಸಕ್ಕೆ ತೆಗೆದುಕೊಳ್ಳಬೇಕು'––'ಆಗಲಿ ತಾಳಯ್ಯ'––'ಕೇಳಿದ್ದೆಲ್ಲ ಆಗಬೇಕೆಂದರೆ ಹೇಗೆ ?'–– 'ರಾಯರು ಕೇಳಿದ್ದನ್ನು ತಾನೆ ಅವರು ಕೇಳಿದ್ದು ?'––'ಮುಚ್ಚು ಬಾಯ್'

(ಎಂದು ಕೂಗುಗಳು, 'ರಾಯರಿಗೆ ಜಯವಾಗಲಿ'–'ಕಾಮಗಾರರ ಸಂಘಕ್ಕೆ ಜಯವಾಗಲಿ. ಜಯ್')

ರಾವ್ : ನಿಮಗೋಸ್ಕರ ಸಂಘ. ಕೂಲಿಗಾರರಿಗೆ ಜಯವಾಗಲಿ––ಸಂಘಕ್ಕೆ ಜಯವಾಗಲಿ.

(ಈ ದೃಶ್ಯ ಮರೆಯಾಗಿ ವೀರಭದ್ರರಾವ್ ನಿಟ್ಟುಸಿರು ಎಳೆದು)

ಉಹುಂ : —ನಾನು ನೀರಿಗೆ ಬೀಳುವುದಿಲ್ಲ.

(ನೀರಿಗಿಳಿಯದೆ ಬೇರೆ ಕಡೆ ಹೋಗಿ ನಿಲ್ಲುವನು)

## ಒಳದೃಶ್ಯ ೬

ಶೇಷಶಾಸ್ತ್ರಿ : ಏನು ವಿಚಿತ್ರ ! ಅಥವಾ, ಚಂದನದ ಪ್ರಭಾವವೊ ಇದು ! ಆಕೆ ಯಾರು ? ಯಾರೋ ಹಾಳಾಗಲಿ. ಹಾಳಾಗಬೇಕೇಕೆ––ಎಲ್ಲಿಯಾದರೂ ಚೆನ್ನಾಗಿರಲಿ. ಬಹುದಿನದ ಹಾಳು ನೆನಪು ಮರಳುತ್ತಿದೆ.

* * *

ಧ್ವನಿ : ಅಯ್ಯೊ ಶಾಸ್ತ್ರಿಗಳೆ, ಪತ್ರ ಬರೆದವರು ನೀವೇ ಸ್ವಾಮಿ. ಮೂಟೆಗೆ ನಲವತ್ತು ರುಪಾಯಿ ಎಂದು ಮಾತಿನಲ್ಲಿ ತೀರ್ಮಾನವಾಗಿ ಒಪ್ಪಿದ್ದೆವು. ಒಪ್ಪಂದವಾಗಿದ್ದದ್ದು ಹಾಗೆ. 45 ರುಪಾಯಿಗೆ ನಾನು ಒಪ್ಪಿರಲಿಲ್ಲ. 50,000 ಮೂಟೆಗಳಿಗೆ, ಮೂಟೆಗೆ ಐದು ರೂಪಾಯಿಯಂತೆ ಹೆಚ್ಚು ಖರೀದಿ ಬಿದ್ದರೆ ನಾವು ಬದುಕುವುದು

ಹೇಗೆ ? ಎಣ್ಣೆ ಟಿನ್ನಿಗೆ ಆರು ರುಪಾಯಂತೆ 30,000 ಟಿನ್ನಿಗೆ ಒಪ್ಪಂದಮಾಡಿದ್ದದ್ದು. ಕಾಗದದಲ್ಲಿ ಟಿನ್ನಿಗೆ ಎಂಟು ರುಪಾಯಿ ಅಂತ ಬಿದ್ದಿದೆ. ಇದೆಲ್ಲಿಯ ನ್ಯಾಯ ? ಪೇಟೆಯ ದರ ನಮಗೆ ಹೇಗೆ ಗಿಟ್ಟುವುದು ? ನಾವು ಬದುಕುವುದೋ ನಾಶವಾಗುವುದೊ ? ವ್ಯಾಪಾರದಲ್ಲಿ ಮೂಟೆಗೆ ಎರಡು ಮೂರು ರುಪಾಯಿ ನಮಗೆ ಲಾಭ ಬೇಡವೆ ? ಟಿನ್ನಿಗೆ ಒಂದು ರುಪಾಯಿ ಲಾಭ ಬೇಡವೆ ? ಬೇರೆ ಖರ್ಚುಗಳಿಗೆಲ್ಲ ಇನ್ನು ಹೇಗೆ ? ಒಪ್ಪಂದಗಳಿಗೆ ಕೊರಳು ಕೊಟ್ಟಿದ್ದೇವೆ. ಮಾತು ತಪ್ಪಿದರೆ ಸಂಚಕಾರ ಹೋಗುತ್ತೆ. ನಂಬಿಕೆ ಉಳಿಸಿಕೊಂಡು ನಾಳೆ ಪೇಟೆಯಲ್ಲಿ ತಲೆಯೆತ್ತಿ ನಡೆಯುವುದು ಹೇಗೆ ?

ಶಾಸ್ತ್ರಿ : ಏನಯ್ಯ ಹೀಗೆ ಮಾತಾಡುತಿದ್ದೀರಿ ? ಪತ್ರ ನಿಮ್ಮಲ್ಲಿಲ್ಲವೆ ? ನೋಡೋಣ ತೆಗೆಯಿರಿ.

ಧ್ವನಿ–2 : ಎರಡೂ ನೀವೇ ಬರೆದದ್ದು. ನಿಮ್ಮನ್ನು ನಂಬಿದೆವು. ನಿಮ್ಮನ್ನು ನಮ್ಮೂರಿಂದ ಇಲ್ಲಿಗೆ ಕರಕೊಂಡು ಬಂದೆವು, ಈ ಕೆಲಸ ಕುದುರಿಸಿರೆಂದು. ನಿಮ್ಮ ಖರ್ಚೆಲ್ಲಾ ಕಳೆದಮೇಲೆ 5,000 ರುಪಾಯಿಕೊಟ್ಟೆವು. ನಿಮ್ಮನ್ನು ನೆಚ್ಚಿದೆವು. ನಿಮ್ಮಿಂದ ಹಾಳಾದೆವು.

ಶಾಸ್ತ್ರಿ : ಇದೇನ್ರಿ, ನಿಮ್ಮ ಆಕ್ಷೇಪಣೆ ? ಈ ಪತ್ರ ಇಲ್ಲಿದೆಯಲ್ಲ, ನೋಡಿ, ನೀವೇ ನೋಡಿ. ಚಾಚೂ ತಪ್ಪಿಲ್ಲ.

ಧ್ವನಿ : ಇದೇನು ಮಾಯೆಯೊ ! ಆ ಪತ್ರದಲ್ಲಿ ಇದ್ದದ್ದನ್ನು ನಾನೇ ಓದಿದೆ. ಸರಿಯಾಗಿ ಇದೆ ಎಂದು ಒಪ್ಪಿದೆವು. ಮೂಟೆಗೆ 40, ಟಿನ್ನಿಗೆ 6 ರುಪಾಯಿ ದರ ನಿಶ್ಚಯ ಮಾಡಿಕೊಂಡಿದ್ದೆವು. ಆ ನಂಬಿಕೆಯ ಮೇಲೆ ನನ್ನ ಕೈಯಲ್ಲಿನ ಎಲ್ಲ ಹಣವನ್ನೂ ಯಾರಯಾರ ಮೇಲೆಯೋ ಹಾಕಿದೆ. ನಾಳೆ ದಿವಾಳಿ ಆಗುತ್ತೇನೆ. ಶಾಸ್ತ್ರಿ, ನಿಮ್ಮನ್ನು ನೆಚ್ಚಿ ಹಾಳಾದೆ !

ಶಾಸ್ತ್ರಿ : ನಿರಪರಾಧಿಯಾದ ನನ್ನನ್ನು ಏತಕ್ಕೆ ಹಳಿಯುತ್ತೀರಿ ? ನಿಮ್ಮ ನಿಮ್ಮ ಒಪ್ಪಂದ ಆದ ಹಾಗೆ ನಾನು ಪತ್ರಬರೆದೆ. ಎರಡು ಪತ್ರಗಳೂ ಇಲ್ಲಿವೆ. ಆ ಪತ್ರ ಈ ಪತ್ರ ತಾಳೆಯಾಗುತ್ತೆ. ನೋಡಿ. ನೀವು ಚೆನ್ನಾಗಿ ಬದುಕಿದರೆ ತಾನೆ ನನಗೆ ಪ್ರಯೋಜನ ? ನಿಮ್ಮ ನಂಬಿಕೆ ಕಳೆದುಕೊಂಡು ಎಲ್ಲಿಗೆ ಹೋದೇನು ನಾನು ? ಹೀಗೆಲ್ಲಾ ಮಾತಾಡುವುದು ತರವಲ್ಲ.

ಧ್ವನಿ–2 : ತಾಳೆ ಇಲ್ಲದೆ ಏನಾಗುತ್ತೆ ? ಎರಡು ಜೊತೆ ಪತ್ರಗಳನ್ನು ಬರೆದು ಮೊದಲನೆಯದನ್ನು ಹಾಳುಮಾಡಿದ್ದೀರಿ. ಕಾಣುವುದಿಲ್ಲವೆ ? ನಿಮ್ಮಂಥ ಪಾಪಿಗಳಿಗೆ ಯಾವ ನರಕ ಕಾದಿದೆಯೋ, ಶಾಸ್ತ್ರಿ.

ಶಾಸ್ತ್ರಿ : ಹಲ್ಲುಹಿಡಿದು ಮಾತನಾಡಿ. ಈ ಮನೆಯಿಂದ ಇನ್ನು ನೀವು ಹೋಗಬಹುದು.

ಧ್ವನಿ–2 : ನಿನ್ನ ಮನೆ ಹಾಳಾಯ್ತು.

ಧ್ವನಿ : ಹೋಗುತ್ತೇನೆ ಶಾಸ್ತ್ರಿ. ನೀನು ಚೆನ್ನಾಗಿ ಬದುಕುವುದನ್ನು ದೇವರು ಕಾಣಲಿ.

ಶಾಸ್ತ್ರಿ : ಅದು ನನ್ನ ಪಾಡು. ಅದನ್ನು ಕಟ್ಟಿಕೊಂಡು ನಿಮಗೇನು ? ನನ್ನ ಪಾಡು ನನ್ನದು.

*

ಅಯ್ಯೋ ಈ ಕರ್ಮದಿಂದ ಪಾರಾಗುವ ಹಾಗಿಲ್ಲ. ಮೋಸಮಾಡಿದೆ, ನಿಜ. ಪತ್ರಗಳನ್ನು ಬದಲಾಯಿಸಿದ್ದುಂಟು. ಅವರಿಬ್ಬರೂ ನನ್ನಿಂದ ಹಾಳಾದರು. ಆದರೆ ಅದಕ್ಕಾಗಿ ಇನ್ನೆಷ್ಟು ದಿನ ಪಶ್ಚಾತ್ತಾಪ ಪಡುವುದು ? ದಾನ, ಧರ್ಮ ಮಾಡಿದ್ದೇನೆ. ದೇವರಿಗೆ ಉತ್ಸವ, ಅಭಿಷೇಕ ಮಾಡಿಸಿದ್ದೇನೆ. ಇನ್ನೇನು ಮಾಡಬಹುದು ?

....ಉಹುಂ....ಮುದುಕನನ್ನು ನಾನು ಮುಟ್ಟಲಾರೆ.

(ನೀರಿನಲ್ಲಿ ಇಳಿಯದೆ ಆತನೂ ಹೋಗುವನು)

*    *    *

(ಮೂಲದೃಶ್ಯಕ್ಕೆ ತಿರುಗುವುದು)

ಆಕೆ : ಎರಡು ಸಲ ಮುಳುಗಿದರಲ್ಲಪ್ಪಾ....ಅಯ್ಯಯ್ಯೊ, ಇನ್ನೇನು ಗತಿ ? ಇಷ್ಟು ಮಂದಿಯಲ್ಲಿ ಈಜು ಬರುವವರು ಯಾರೂ ಇಲ್ಲವೆ ? ಅವರನ್ನು ಉಳಿಸಿ ತನ್ನಿ. ನನ್ನ ತಾಳಿಯ ಭಾಗ್ಯವೇ, ನನ್ನ ದೇವರೇ––ಅವರನ್ನು ಉಳಿಸಿಕೊಡಿರಪ್ಪಾ––

ಜನ : ಈ ಅಮ್ಮನಂತೋರು ಇನ್ನೊಬ್ಬರನ್ನ ನಾನು ಕಂಡಿಲ್ಲ. ಕರೀತಾಳೆ, ಕಂಡೀಷನ್ ಹಾಕ್ತಾಳೆ. ಆ ಮುದುಕಪ್ಪಾ ಬದುಕಬೇಕು ಅಂತಾನೊ ಅಲ್ಲವೋ ಇವಳಿಷ್ಟ ! ಉಳಿಸಬೇಕಂತೆ––ಮುಟ್ಟಬಾರದಂತೆ ! ಪಾಪಿಷ್ಠನಾದವನು ಸಾಯುತಾನಂತೆ. ಯಾರು ಮಾಡೋಕಾಗ್ತದೆ ? 'ಭೋಚಂದಾಯ್ತು'––'ಲಾಯಕ್ಕಾಬ್ತರೀ'

(ದೂರದಲ್ಲಿ ಜನರ ಗುಜುಗುಜು—ಯಾರೋ ಬರುತ್ತಿರುವರು)

'ಕಮಲಾಸಾನಿ'––'ಕಮಲಾಸಾನಿ'––'ಹೆಣ್ಣು ಎಂದರೆ ಇದೋ ಹೆಣ್ಣು !'–– 'ಇಷ್ಟಲ್ಲದೇ ಕನ್ನೂಲಾಳುತಾಳೇನು ಇವಳು ?'––'ಏನಂದೆ ? ನಿಜ.' 'ಹೆಣ್ಣು ಎನ್ನುವ ಹೆಣ್ಣಲ್ಲ ಇದು' – 'ಆ ಬಳುಕೋ ಆ ಬಿನ್ನಾಣವೊ–'

'ಚೊಕ್ಕಪು ಬಂಗಾರು ಬೊಮ್ಮ––
ನೇ ಚೆಪ್ಪಿತಿನೇ––ನಾಕೊಮ್ಮ
ಕಮಲಾಸಾನಮ್ಮ !––'

'ದಾರಿ ಬಿಡಿರೋ, ಅವರು ಬರಲಿ'––'ಕಮಲಾಸಾನಮ್ಮ ಅವರು ಬರೋ ದೊಂಡುಬಾಕಿ ಇತ್ತು ಇಲ್ಲಿಗೆ'––'ದಯಮಾಡಿಸಬೇಕು ಕಮಲಾಸಾನಿಯವರು !'

# ಅಂಕ ೪

[ಚೆಲುವೆ ಕಮಲಾಸಾನಿಯ ಪ್ರವೇಶ. ಹಿಂದೆ ಒಬ್ಬ ಸೇವಕ. ಜೊತೆಯವರು ಇಬ್ಬರು 20–25 ವರ್ಷದ ಹೆಂಗಸರು ಇದ್ದಾರೆ. ಅವರ ಕೈಯಲ್ಲಿ ದೇವಸ್ಥಾನದಿಂದ ಪೂಜೆಮಾಡಿಸಿ ತಂದ ಹೂ, ಹಣ್ಣು, ಕಾಯಿ ಇವೆ]

ರಾಮಯ್ಯ : ಅವ್ವಾ, ತೇರಿಗೆ ಓಗೋಕಿಲ್ವೇನು ?

ಕಮಲ : ಹೋಗೋಣ ಸ್ವಲ್ಪ ತಾಳು, ಇಲ್ಲೇನೋ ತುಂಬಾ ಜನ ಸೇರಿದ್ದಾರೆ.

ರಾಮಯ್ಯ : ಯಾರೋ ಅಮ್ಮ ಹುಯಿಲಿಡುತ್ತಿದ್ದಾಳೆ.

ಜನ : ದಾರಿಬಿಡಿ, ದಾರಿಬಿಡಿ. ಕರ್ನೂಲಿನ ಕಮಲಾಸಾನಿಯವರು ಪ್ರವೇಶಿಸುತ್ತಿದ್ದಾರೆ—ದಾರಿ. . .ದಾರಿ. . .

ಒಬ್ಬ : ದಯಮಾಡಿಸಬೇಕು ಕಮಲಾ....ಸಾನಿ....ಅವರೇ.

ಕಮಲ : ನರಸರೆಡ್ಡಿಯವರು ! ಇದೇನಿಲ್ಲಿ—ನೀರಿನ ಕೊಳದ ಹತ್ತಿರ, ದೇವ ಪುಷ್ಕರಿಣಿಯಲ್ಲಿ ?

ನರಸರೆಡ್ಡಿ : ಕಣ್ಣಿಗೆ ಸಂತೋಷ ಮಾಡಿಕೊಳ್ಳೋಣ ಅಂತ.

ಕಮಲ : ನಿಮ್ಮ ಕಣ್ಣಿಗೆ ಯಾವಾಗಲೂ ಸಂತೋಷವೇ. ಆದರೆ ಅದಕ್ಕೆ ಬೀಳುವ ಹೆಣ್ಣಿನ ಪಾಡು ಬೇಡ, ಇನ್ನು ಯಾವಳಿಗೆ ಏನು ಗತಿ ಕಾದಿದೆಯೋ !

ರೆಡ್ಡಿ : ನಿನ್ನಂಥವರಿಗೆ ಏನು ಕಷ್ಟ ? ಉಳಿದ ಹೆಣ್ಣುಗಳಿಗಾದರೆ ಆಗಬಹುದು. ನಿನಗೂ ಅಂಥಾದ್ದೇನಾದರೂ ಆದರೆ ನನಗೆ ಹೇಳಿಕಳಿಸಬಹುದಲ್ಲಾ ?

ಕಮಲ : ಆಗಬಹುದು. ನಿಮ್ಮ ಸಹಾಯವೇ ನಮ್ಮಂಥವರ ಬದುಕು ಅನ್ನಿ. . . ಇದೇನು ?

ರೆಡ್ಡಿ : ನೋಡು ಆ ಮುದುಕೀನ. ಹೊಂತಕಾರಿ, ನಿನಗೆಲ್ಲಿ ಬಂದೀತು ಆ ಅಬ್ಬರ !

ಕಮಲ : ನಾನು ಅಬ್ಬರ ಮಾಡುವವಳೆ ?....ಏನಂತೆ ?

ರೆಡ್ಡಿ : ಅವಳ ಗಂಡ ಮುದುಕನನ್ನ ಉಳಿಸಿಕೊಡಬೇಕಂತೆ....

ಕಮಲ : ಅವರಿಗೇನಾಗಿದೆ ? ಅಲ್ಲಿ ಅವರು ಇರೋಹಾಗಿಲ್ವಲ್ಲ ?

ರೆಡ್ಡಿ : ನೀರಲ್ಲಿ ಬಿದ್ದು ಈಗಾಗಲೇ ಒಂದೆರಡು ಮುಳುಗು ಹಾಕಿದ್ದಾನೆ.

ಕಮಲ : ಲೋಕಪ್ರಸಿದ್ಧ ಈಜುಗಾರರು ನೀವು. ನಿಮ್ಮ ಕೈಯಲ್ಲಿ ಆತನನ್ನು ಉಳಿಸುವುದಕ್ಕಾಗಲಿಲ್ಲವೆ ?

ರೆಡ್ಡಿ : ನಮ್ಮಂಥವರ ಈಜು ಪ್ರಯೋಜನಕ್ಕೆ ಬರುವುದಿಲ್ಲ ಎಂದು ತಿಳಿದು ಆ ಯತ್ನ ಬಿಟ್ಟೆ.

ಕಮಲ : ಅಂದರೆ ?

ರೆಡ್ಡಿ : ಪಾಪಿಷ್ಠರಲ್ಲದವರು ಮಾತ್ರ ಆ ಮುದುಕನನ್ನು ನೀರಲ್ಲಿ ಮುಟ್ಟಬಹುದಂತೆ. ಪಾಪಿಷ್ಠರು ಮುಟ್ಟಿದರೆ ಸಾಯುತಾರಂತೆ.

ಕಮಲ : ಅವರೊ... ಮುಟ್ಟಿದವರೊ ?

ರೆಡ್ಡಿ : ನೀನೇ ಹೋಗಿ ಕೇಳು. ಉಳಿಸುವುದಕ್ಕೆ ಆಗುವ ಹಾಗಿದ್ದರೆ ನೋಡು. ನಿನಗೂ ರುಸ್ತುಂ ಈಜು ಬರುತ್ತಲ್ಲ ! ಹಹ್ಹಹ್ಹಹ್ಹಾ—

(ನಗುವನು. ಕಮಲಾಸಾನಿ ಮುದುಕಿಯ ಬಳಿ ಹೋಗಿ ಅವಳ ಕಾಂತಿಯನ್ನು ಕಂಡು ಚಕಿತಳಾಗುವಳು. ದೇವರ ಪ್ರಸಾದದ ಪದಾರ್ಥಗಳನ್ನು ತೆಗೆದುಕೊಂಡು, ಮಂತ್ರಮುಗ್ಧಳಂತೆ ಆ ಮುದುಕಿಯ ಮುಂದಿಟ್ಟು ನಮಸ್ಕರಿಸುವಳು)

ಮುದುಕಿ : ನೀವಾರಮ್ಮ ? ಏಳಿ. . .ಅಯ್ಯೋ, ಹೀಗೆ ಆಗಿಹೋಯಿತೆ ? ಮುಂದೆ ಹೇಗೆ. . .ಈ ಜನ ಎಂಥವರಪ್ಪಾ. . .ಇನ್ನೆಲ್ಲಪ್ಪ ಬದುಕಿಯಾರು ಅವರು ? ಇನ್ನು ಐದು ನಿಮಿಷದೊಳಗೆ ಯಾರೂ ಕೈಹಾಕದೆ ಇದ್ದರೆ ಇಂಥ ಉತ್ಸವ ದಿನ, ಈ ಪುಣ್ಯಕ್ಷೇತ್ರದಲ್ಲಿ ನನ್ನ ಬಾಳು ಬದಲಾಯಿಸುತ್ತಮ್ಮ. ನಾನೂ ಅದರೊಳಕ್ಕೇ ಹೋಗಿ ಬೀಳುತ್ತೇನೆ.

ಕಮಲ : ಸಂಗತಿ ತಿಳಿಯಿತು ತಾಯಿ. ನಮ್ಮಂಥವರು ಮುಟ್ಟಬಾರದು. ಇಲ್ಲದಿದ್ದರೆ ನಾನು ನೀರಿಂದ ಅವರನ್ನು ಎತ್ತಿ ತರುತ್ತಿದ್ದೆ.

ಮುದುಕಿ : ನಿಮ್ಮಂಥವರು ಎಂದರೇನಮ್ಮ ? ನೀವು ಮನುಷ್ಯರಲ್ಲವೆ ? ಹೃದಯ ಇಲ್ಲವೇನಮ್ಮ ನಿಮಗೆ ? ಈಜು ಬರುತ್ತೇನಮ್ಮ ನಿನಗೆ ?

ಕಮಲ : ಈಜು ಬರುತ್ತೆ ತಾಯಿ. ನಾನಾರು ಎಂಬುದು ನಿಮಗೆ ಗೊತ್ತಿರಲಾರದು. ತಮ್ಮಂಥವರಿಗೆ ತಿಳಿದು ಆಗಬೇಕಾಗಿಯೂ ಇಲ್ಲ.

ಮುದುಕಿ : ಸಾಕ್ಷಾತ್ ಅಪ್ಸರೆ ಹಾಗಿದ್ದೀಯಲ್ಲಮ್ಮ, ಯಾಕಮ್ಮ ಹಾಗಂತಿ ?

ಕಮಲ : ಅಂಥವಳೇ ಒಬ್ಬಳು—ಈ ಭೂಲೋಕದಲ್ಲಿ ನಾನು. ಅಂಥ ವೃತ್ತಿಯವಳು. ಕೀಳು ಹೆಣ್ಣು ತಾಯಿ. ಇಷ್ಟು ಜನ ನನ್ನ ಸುತ್ತ ನಿಂತಿರುವವರನ್ನು ನೋಡಿದಿರೋ ಇಲ್ಲವೊ ! ನನ್ನಲ್ಲಿ ಇವರಿಗೆ ಎಷ್ಟು ಗೌರವವಿದೆ ಎಂಬುದು ನಿಮಗೆ ಕಾಣಿಸುತ್ತಿರಬೇಕು.

ಮುದುಕಿ : ಅದನ್ನೆಲ್ಲಾ ನೋಡೋಕೆ ನನಗೆ ವ್ಯವಧಾನ ಎಲ್ಲಿದೆಯಮ್ಮ ಈಗ ? ನೀನು ಹೇಳೋದು ಒಂದೂ ನನಗೆ ಅರ್ಥವಾಗುವುದಿಲ್ಲ. ಇಂಥ ರೂಪ, ಇಂಥ ಒಡವೆ, ಇಂಥ ವಸ್ತ್ರ, ಕೈಯಲ್ಲಿ ದೇವರಿಗೆ ಅರ್ಪಿಸಿದ ಪೂಜಾ ಸಾಮಗ್ರಿ ಎಲ್ಲಾ ಇವೆ ? ಎಷ್ಟು ಕೋಮಲವಾದ ಅಂತಃಕರಣ ಅಮ್ಮ ನಿನ್ನದು ! ಮಾತು ಎಷ್ಟು ಸವಿ, ಪ್ರಿಯ !

ಕಮಲ : ಅಮ್ಮಾ ನಾನೇನೆಂದು ಹೇಳಲಿ. ಈ ಮೈ ಕೊಳೆ. ನಾನು ಪಾಪಿಷ್ಠಳು. ನಿಮ್ಮಂಥವರ ಎದುರು ನಿಲ್ಲಲು ಕೂಡ ಯೋಗ್ಯಳಲ್ಲ. ನಾನು ಹೋಗಿ ಎತ್ತಿ ತರಬಹುದೆಂದು ಹೇಳಿ. ನೀರಲ್ಲಿ ಬಿದ್ದು ಅವರನ್ನು ತಂದು ಒಪ್ಪಿಸುತ್ತೇನೆ. ನನಗೆ ಸಾಯುವ ಭೀತಿ ಇಲ್ಲ. ಪಾಪಿಷ್ಠಳೆಂಬುದು ಒಂದು ಮಾತ್ರ ಅಡ್ಡಿ.

ಮುದುಕಿ : ಈ ಸಣ್ಣ ವಯಸ್ಸಿನ ಮಗು ನಿನಗೆ ಪಾಪ ಪುಣ್ಯ ಏನು ಗೊತ್ತಾಗುತ್ತದೆ?

ಕಮಲ : ಲೋಕಕ್ಕೆ ಗೊತ್ತಾಗಿದೆ ತಾಯಿ. ನನಗೆ ಮಾನ ಮರ್ಯಾದೆ ಇಲ್ಲ. ಕೊಡುವವರು ಕೊಟ್ಟರೆ ತಾನೆ ಮರ್ಯಾದೆ ? ಕೇಳಿದರೆ ಬರುತ್ತೆಯೆ ?

ಮುದುಕಿ : ಪಾಪ ದೇಹಕ್ಕೆ ಅಂಟಿದ್ದು ತಾನೆ ?

ಕಮಲ : ಯಾರೂ ನನ್ನನ್ನು ನೋಡಬಹುದು : ನನ್ನನ್ನು ಕುರಿತು ಸಿಕ್ಕಿದ ಹಾಗೆ ಮಾತನಾಡುವವರೇ ಎಲ್ಲರೂ. ನನ್ನ ಬದುಕಿಗೆ, ಒಳಗೆ, ನನ್ನ ಮನಸ್ಸು ಒಪ್ಪುತ್ತಿಲ್ಲ—ದೇವರಾಣೆಗೂ, ಅಮ್ಮ. ಆದರೂ ಜೀವನ ನಡೆಯಬೇಕಲ್ಲ. ಹೇಗೋ ಮೊದಲಾಯಿತು. ಹೇಗೋ ನಡೆಯುತ್ತಿದೆ.

ಮುದುಕಿ : ಶಕ್ತಿಯಿದ್ದರೆ ಬೇಗ ಹೋಗಮ್ಮ.. ಬೇಗ ಹೋಗಮ್ಮ. ಆದರೆ ತಾಳು. ಈ ಕುಂಕುಮ ಇಟ್ಟುಕೊಂಡು ಹೋಗು....ಇಲ್ಲವಾದರೆ ನೀನು ಅವರನ್ನು ಮುಟ್ಟಲಾರೆ. ಅವರು ಮುಳುಗಿ ಹೋಗುತ್ತಾರೆ.

ಕಮಲ : ಹೋಗಬಹುದೆ ನಾನು ?

ಮುದುಕಿ : (ಕುಂಕುಮ ಕೊಟ್ಟು) ಯಾಕಾಗಬಾರದು, ಯತ್ನ ಮಾಡಮ್ಮ. ನನ್ನ ಕಡೆಯ ಆಸೆ ನೀನೇ ಸದ್ಯ.

ಕಮಲ : ಒಂದು ನಿಮಿಷ ತಾಯಿ. ನಿಮ್ಮ ಕೊರಲಿನ ಮುತ್ತಿನ ಸರ ಎಷ್ಟು ಚೆನ್ನಾಗಿದೆ ? ಎಲ್ಲಿ ಮಾಡಿಸಿದಿರಿ ?

ಮುದುಕಿ : ಎಲ್ಲಿಂದಲೋ ನಮ್ಮ ಯಜಮಾನರು ತಂದುಕೊಟ್ಟದ್ದು. ಕಾಣುತ್ತೆಯೆ ನಿನಗೆ ಅದು ? ನೀನು ಪುಣ್ಯಶಾಲಿ, ಅವರನ್ನು ಉಳಿಸಿದರೂ ಉಳಿಸೀಯೆ.

ಕಮಲ : ಜಯ ಶಿವಾ....ಶಂಕರ ! ಅಪ್ಪಣೆ ತಾಯಿ... ಹೊರಟೆ. ಈ ಒಡವೆ ಏಕೆ, ಈ ಸರ ಏಕೆ, ಈ ಕಾಲುಗೆಜ್ಜೆ ಏಕೆ ? ಈ ಓಲೆ ಏಕೆ ಇನ್ನು, ಮಲ್ಲಿಕಾರ್ಜುನಸ್ವಾಮಿ ದರ್ಶನ ಮಾಡಿರುವ ನನಗೆ ? ರಾಮಣ್ಣ, ವಾಸಂತಿ, ಕೊಳ್ಳಿ. ಇವನ್ನು ನಿಮ್ಮ ಕೈಗೆ ತೆಗೆದುಕೊಳ್ಳಿ. ನಾನು ನೀರಿಗೆ ಬೀಳುತ್ತೇನೆ. ಗಡ್ಡೆಗೆ ಬಂದ ಕೂಡಲೆ ಒಂದು ಒಣಗಿದ ಬಟ್ಟೆ ಕೊಡಿ. ಶಿವಾ... ನಮ್ಮಪ್ಪಾ, ಲೋಕೈಕನಾಥ, ಈ ಮುತ್ತೈದೆಯ ಯಜಮಾನರನ್ನು ಬದುಕಿಸಿಕೊಡು. ಎಲ್ಲಾ ಶಕ್ತಿ, ಎಲ್ಲ ಮತಿ, ಗತಿ, ನಿನ್ನದು. ಇದು ಶಿವಕಾರ್ಯ ; ಶಿವ ನಡಸಿಕೊಡಲಿ.

(ದೂರದಲ್ಲಿ ಮಂತ್ರಘೋಷ ಕೇಳಿಸುವುದು; ವಾದ್ಯಗಳ ಮೊಳಗು ದೇವಾಲಯದಿಂದ)

ವೀರಭದ್ರರಾವ್ : ಪರಮ ಪವಿತ್ರಳು ಕಮಲಾಸಾನಿ !

ಕಮಲ : ಹಿಂದೆ ನಿಮ್ಮ ಸೇವಕಿ. ಈಗಾದರೆ ನಾನು ದೇವಾಲಯದಿಂದ ಬಂದಿದ್ದೇನೆ. ಮಂತ್ರ ಹೇಳುತ್ತಿದ್ದರು : 'ಶ್ರೀ ಶೈಲಶಿಖರಂ ದೃಷ್ಟ್ವಾ ಪುನರ್ಜನ್ಮ ನ ವಿದ್ಯತೇ' ಎಂದು. ಅದು ನಿಜವಾದರೆ ಈ ಕ್ಷಣವಾದರೂ ಶುದ್ಧಳಾಗಿದ್ದೇನೆ. ಅಪ್ಪಣೆ ಕೊಡಿ ರಾವ್‌ಜೀ.

(ಮುಂದೆ ಹೋಗುತ್ತಾಳೆ)

ಶಾಸ್ತ್ರಿ : ಇದೇನು ಈ ಹುಚ್ಚು ನಿನಗೆ !

ಕಮಲ : ಶಾಸ್ತ್ರಿಗಳೇ, ಆಶೀರ್ವಾದ ಮಾಡಿ. ಒಂದು ಜೀವವನ್ನುಳಿಸುವ ಕೆಲಸ ಇದು. ನೆರವೇರಲಿ. ಶಿವಾ. . .ಶಂಕರ. . .

(ನೀರಿನಲ್ಲಿ ದುಮುಕಿದ ಶಬ್ದ, ಕೂಗುಗಳು—'ದುಮುಕಿದಳು' 'ಅಂಬಿನಂತೆ ನುಗ್ಗುತ್ತಿದ್ದಾಳೆ' 'ಮೀನಿನಂತೆ ಹೋಗುತ್ತಿದ್ದಾಳೆ.' 'ವಹವ್ವಾ'—'ನಾಗಕನ್ನಿಕೆ ಕಾಣೊ ಅವಳು'—'ರೆಡ್ಡಿ ಗಾರು, ಚೂಸಿತಿರೇಮಂಡೋಯ್ !')

ರೆಡ್ಡಿ : ಆರು ಕಂಟ್ಲೊ ಚೂಸ್ತುನ್ನಾ ಮಂಡೀ.

ರಾವ್ : ಹತ್ತಿರಕ್ಕೆ ಹೊರಟಳು—ಆ—ಅಲ್ಲೇ ಮುದುಕನು ಮುಳುಗಿರಬೇಕು.

ಶಾಸ್ತ್ರಿ : ದಾರಿಯಲ್ಲಿ ಉದ್ದಕ್ಕೂ ಶಂಕರ, ಶಂಕರ ಎಂದು ಹೋಗುತ್ತಿದ್ದಾಳೆ. ಹತ್ತಿರ ಮುಟ್ಟಿದಳು. ಮುದುಕನ ಬೋಳುತಲೆ ಕಾಣುತ್ತಿದೆ. ಆಶ್ಚರ್ಯ ! ಆಶ್ಚರ್ಯ ! ಹಿಡಿದಳು. ಎತ್ತಿದಳು. ತೇಲಿಕೊಂಡು ತರುತ್ತಿದ್ದಾಳೆ. ಏನು ತೇಜಸ್ಸು, ಏನು ಕಾಂತಿ ಮುದುಕನದು—ಭಲೆ, ಕಮಲಾಸಾನಿ !

ಜನ : ಪುಣ್ಯವಂತಳು ಕಮಲಾಸಾನಿ ... ಪುಣ್ಯವಂತುರಾಲು — ಶಹಬಾಸ್ — ಕನ್ನೂಲು ಕಮಲಾಸಾನಿ ಹೇಗೆ ಪಾಪಿಷ್ಠಳಾದಾಳು ! 'ಮಜಾ ಚೂಸ್ತಿ ರೇಮಂಡಿ' 'ಏಮೋ ಅಂತಾ ತಲಕಿಂದಲ್ಯೆಯಿಂದೇ'

(ಇತ್ಯಾದಿ ಮಾತುಗಳ ನಡುವೆ ಮುದುಕನನ್ನು ತೇಲಿಸಿ ಎಳೆದುಕೊಂಡು ಕಮಲಾಸಾನಿ ಘಟ್ಟವನ್ನು ಸೇರುವಳು.

ಮುದುಕಿ ಘಟ್ಟಕ್ಕೆ ಬಂದು ನಿಂತಿದ್ದವಳು ಕುಳಿತು, ಆತು ಆತನನ್ನು ಎಬ್ಬಿಸಿ ಅವನ ಕಿವಿಯಲ್ಲಿ ಮೆಲ್ಲಗೆ 'ಇದೇನು ಈ ಮಂಕು, ಕಣ್ಣು ತೆರೆಯಬಾರದೆ ?' ಎನ್ನುತ್ತ ಭುಜದ ಮೇಲಕ್ಕೆ ಮೆಲ್ಲಗೆ ಎತ್ತಿ ಒರಗಿಸಿಕೊಂಡು ಮೇಲಕ್ಕೆ ಹೆಜ್ಜೆ ಹೆಜ್ಜೆ ನಡಸಿಕೊಂಡು ಬರುವಳು. ಬೇಗ ಬಟ್ಟೆ ಬದಲಾಯಿಸಿ ಕಮಲಾಸಾನಿ ನೆರವಾಗುವಳು. ಅವಳ ಮುಖದಲ್ಲಿ ಅವರ್ಣನೀಯ ತೇಜಸ್ಸು—ನಿಶ್ಶಬ್ದ—ದೂರದಲ್ಲಿ ರಥೋತ್ಸವದ ವಾದ್ಯಗಳು ಮೊಳಗುತ್ತಿವೆ. 'ರಥಕ್ಕೆ ದೇವರನ್ನು ಬಿಜಮಾಡಿಸುತ್ತಿರಬೇಕು'. ವಾದ್ಯಗಳ ಮೊಳಗು ಇನ್ನಷ್ಟು ಜೋರಾಗಿ ಬರುತ್ತದೆ. 'ಅಪ್ಪನೋರು

ಬಿಜಮಾಡಿಸಿದರು ಎಂದು ಕಾಣುತ್ತೆ. ಹೋ, ನಡೆಯಿರಿ.' 'ಪೋದಾಮಂಡೋಯ್' 'ಎಂತ ಚೂಸಿತೇನೂ ಇಂತೇ' 'ಮುಸಲಿವಾಡು ಬದುಕಿನಾಡೇ' 'ದೇವರ ದಯದಿಂದ ಆ ಮುದುಕಿಯ ಹುಯಿಲು ತಪ್ಪಿತು' 'ಇನ್ನು ನೆಮ್ಮದಿಯಾಗಿ ಹೋಗೋಣ' 'ಎಷ್ಟು ದಿನ ಬದುಕಿರಬೇಕು ಅಂತ ಇದೆಯೋ—ಈಗಲೇ ನೂರಕ್ಕೆ ಮೇಲ್ಪಟ್ಟು ಆಗಿರಬೇಕು' 'ಇಲ್ಲಿಗೆ ಏಕೆ ಬರಬೇಕಾಗಿತ್ತು ? ನೀರಿಗೆ ಬೀಳಬೇಕೆಂದು' 'ಬನ್ನಿ ಹೋಗೋಣ' ವಾದ್ಯಗಳ ಉಗ್ಗಡಣೆ...'ಹಣ್ಣು ! ದವನ'... 'ಕಲ್ಯಾಣಸೇವೆ ಕೊಳ್ಳಿ'—'ಬತ್ತಾಸು ಕೊಳ್ಳಿ' 'ಚಿಲ್ಲರೆ ಇಳ್ಳೆದೆಲೆ' 'ಹೂವು ಕೊಳ್ಳಿ—ಮಾಲೆ ಕೊಳ್ಳಿ' ವಾದ್ಯಗಳ ಉಗ್ಗಡಣೆ. ಓಂ ಶಿವಶಂಕರ—ಭಂ ಶಿವಶಂಕರ. ಮಂತ್ರಗಳು, 'ಓಂ ನಮಃ ಶಿವಾಯ—ಓಂ ನಮಃ ಶಿವಾಯ'...ಇತ್ತ ಮುದುಕನು ಎಚ್ಚತ್ತು ಮುದುಕಿಯ ಕಡೆ ನೋಡುತ್ತಾನೆ.)

ಮುದುಕಿ : ಬಹು ಭಯವಾಗಿತ್ತು.

ಮುದುಕ : ನಿನಗೂ ಭಯವೆ ?

ಕಮಲ : ನಾನು ಬದುಕಿದೆ ತಾಯಿ. ನನ್ನನ್ನು ಬದುಕಿಸಿದಿರಿ.

ಮುದುಕ : ಇವಳಾರು ?

ಜನವರ್ಗ : ಕರ್ನೂಲಿನ ನಾಯಕಿ ಕಮಲಾಸಾನಿ, ಕಮಲವ್ವ.

ಮುದುಕ : ನೀನು ಪುಣ್ಯಾತ್ಮಳು ಕಮಲಮ್ಮ.

ರಾವ್ : ಅಪ್ಪಾಂತೆ ಅಪ್ಪ !

ಮುದುಕ : ಆಂ...?

ರಾವ್ : ಏನೂ ಇಲ್ಲ ಗುರುವೆ.

ರೆಡ್ಡಿ : ಇದೇನು ಮಾತು ಬಿಡಿ. ಇವಳು ಮಾಡದ ಪಾಪ ಇಲ್ಲ. ಇವಳು ಕುಡಿಯದ ಮದ್ಯವಿಲ್ಲ. ಪಡದ ಭೋಗವಿಲ್ಲ. ಇವಳು ಮೋಹಗೊಳಿಸದ ವಿಟನಿಲ್ಲ. ದರೋಡೆ ಮಾಡದ ಧನಿಕನಿಲ್ಲ. ಇನ್ನೂ ಮೂವತ್ತಿಲ್ಲ ಗುರುವೆ, ಮೂರು ಲೋಕ ಗೆದ್ದಿದ್ದಾಳೆ.

ಮುದುಕ : ನೀವು ಮೂರನ್ನೂ ನೋಡಿದ್ದೀರ ?

ರೆಡ್ಡಿ : ಈ ಸಮಯದಲ್ಲಿ ಆಡಬಾರದು. ನಾನು ಇವಳನ್ನು ನೋಡಿದ್ದೇನೆ. ಇವಳ ಚರಿತ್ರೆ ಪೂರ್ತಿ ಬಲ್ಲೆ.

ಮುದುಕಿ : ಮಾಡಬಾರದ್ದನ್ನು ಮಾಡುವವರಿಗೆ ಅದನ್ನು ಆಡುವುದಾದರೂ ಪಾಪ ಎನ್ನಿಸಬೇಕು. ನಿಮಗೆ ಹಾಗನ್ನಿಸುವುದೂ ಇಲ್ಲ. ಮುದಿ ಹೆಂಗಸು ನಾನು ಕೂತಿದ್ದೇನೆಂಬ ತಡೆಯೂ ನಿಮ್ಮನ್ನು ಬಾಧಿಸುತ್ತಿಲ್ಲ !

ಕಮಲ : ಹೋಗಲಿ ಬಿಡಿ ತಾಯಿ. ಈ ಜನ ನನ್ನನ್ನು ಹಿಂದೆ ಕಾಪಾಡಿದವರು, ನಡಸಿಕೊಟ್ಟವರು.

ರೆಡ್ಡಿ : ಮುದುಕಿ ಎಂದು ಸುಮ್ಮನಿದ್ದರೆ ಬಾಯಿಗೆ ಬಂದಂತೆ ಹರಟುತ್ತಾಳೆ.

ಮುದುಕ : ಆ — ಆಂ...?

ರೆಡ್ಡಿ : ನನಗೇಕೆ ? ಅವಳನ್ನೇ ಕೇಳಿ. ಅವಳ ಪಾಪದ ಪಟ್ಟಿಯನ್ನು ಅವಳೇ ಹೇಳುತ್ತಾಳೆ.

ಮುದುಕ : ಏನಮ್ಮ ಇವರಾಡುವ ಮಾತು ?

ರಾವ್ : ಇವಳಿಗೆ ಧೈರ್ಯ ಹೇಗೆ ಬಂತೊ ತಮ್ಮನ್ನು ಮುಟ್ಟುವುದಕ್ಕೆ ! ತಮ್ಮ ಕುಟುಂಬ ಆಡಿದ ಮಾತಿಗೆ ಗಂಡಸರಾದ ನಾವು ಹಿಮ್ಮೆಟ್ಟಿದೆವು.

ಶಾಸ್ತ್ರಿ : ಹೌದು ನಾವೆಲ್ಲ ಹಿಮ್ಮೆಟ್ಟಿದೆವು.

ಮುದುಕ : ಏನು ಮುದುಕಿ ಆಡಿದ ಮಾತು ? ಗೌರಿ, ನೀನು ಏನು ಹೇಳಿದೆ ?

ಮುದುಕಿ : ನೀವು ಬಹಳ ಮಡಿ, ಪಾಪ ಮಾಡಿದವರು ನಿಮ್ಮನ್ನು ಮುಟ್ಟಬಾರದು, ಹಾಗೆ ಮುಟ್ಟಿದವರು ಬದುಕುವುದಿಲ್ಲ—ಎಂದು.

ಮುದುಕ : ಆಕೆ ಹೇಳಿದ್ದು ಸರಿಯೇ. ತಪ್ಪೇನು ? ನಮ್ಮ ನೇಮ ಅದು. ಸ್ನಾನ ಮಾಡುವಾಗ ಧ್ಯಾನದಲ್ಲಿರುತ್ತೇವೆ. ನಮ್ಮ ಜೊತೆಯು ಈಕೆ ಬಲ್ಲರು.

ರೆಡ್ಡಿ : ನಾವು ಪಾಪಿಷ್ಠರು !

ಮುದುಕ : ಅಷ್ಟು ತಿಳಿದಿರುವುದು ಹೆಚ್ಚೇ.

ರಾವ್ : ಇವಳು ಪರಮ ಪವಿತ್ರಳು !

ಮುದುಕ : ನಾನು ಘಟ್ಟಕ್ಕೆ ಬಂದದ್ದು ಸಾಕ್ಷಿಯಲ್ಲವೆ ?

ರೆಡ್ಡಿ : ತ್ರಿಪುರ ಸುಂದರಿ !

ಮುದುಕ : ಆಂ ! !....

ಮೂವರೂ : ಇದೇನಯ್ಯ, ಈ ಮುದುಕನ್ನ ಕಂಡರೆ ಏನೋ ತಡೆಯುತ್ತದೆ— ಭಯವಾಗುತ್ತೆ—ಎಂದೂ ಇಲ್ಲದ ಮೈ ಬೆವರುತ್ತೆ.

ಕಮಲ : ನಾನು ಪವಿತ್ರಳಲ್ಲ ಎಂದು ನನಗೆ ಗೊತ್ತಿದೆ. ಪಾಪಿಷ್ಠಳೆಂದು ತಿಳಿದಿದೆ. ಆ ತಾಯಿಯನ್ನು ನೋಡಿದೆ. ನನಗೆ ಹಿಂದೆ ಎಂದೂ ಉಂಟಾಗದ ಭಕ್ತಿ ಅವರಲ್ಲಿ ಉಂಟಾಯಿತು. ಅವರ ಕೊರಳಲ್ಲಿ ದಿವ್ಯವಾದ ಸರವನ್ನು ನೋಡಿದೆ.

ಮುದುಕ : ನಿನಗೆ ಇವಳ ಸರ ಕಾಣಿಸಿತೆ ?

ಕಮಲ : ತಮ್ಮ ಮಗು ನಾನು, ಹಿರಿಯರೆ. ಅಪರಾಧವಾಯಿತೇನೊ ? ಅರಿಯದವಳು ನಾನು. ಕ್ಷಮಿಸಬೇಕು.

ಮುದುಕ : ಸರದಲ್ಲಿ ಏನು ಕಾಣಿಸಿತಮ್ಮ ? ನೋಡಿದೆಯ ?

ಕಮಲ : ಒಂದೊಂದು ಮುತ್ತಿನಲ್ಲೂ ಶಿವನನ್ನು ಕಂಡಂತಾಯಿತು ತಂದೆ.

ಮುದುಕಿ : ಶುದ್ಧಾಂತಃಕರಣ ಉಳ್ಳವರಿಗೆ ಎಲ್ಲೆಲ್ಲಿಯೂ ಶಿವ ಕಾಣಿಸುತಾರಮ್ಮ.

ರೆಡ್ಡಿ, ರಾವ್, ಶಾಸ್ತ್ರಿ } (ನಗುವರು ; ತಮ್ಮೊಳಗೆ–) ಅಬ್ಬಬ್ಬಾ— ಅಬ್ಬರದ ಮುದುಕಿಗೆ ಶುದ್ಧಾಂತಃಕರಣ ಕಂಡದ್ದು ಆಶ್ಚರ್ಯವೇನಲ್ಲ— ಮಾತಾಡಹೋದರೆ ಈ ಹಾಳು ಮುದುಕನ ಕಣ್ಣು ಬಾಯಿಕಟ್ಟುತ್ತಿದೆ.

ಮುದುಕ : ನಿನಗೆ ಈ ಮೂವರ ಪರಿಚಯವಿದೆಯೆ ?

ಕಮಲ : ಇವರ ಪ್ರೋತ್ಸಾಹದಿಂದ ಜೀವನ ಮಾಡಿರುವವಳು ನಾನು. ಈ ಮೈ ಇವರ ಎಂಜಲು ತಂದೆ. ಕೊಳೆ, ಹೇಸಿಗೆ ಮಾಡಿಕೊಂಡಿದ್ದೆ ಈವರೆಗೂ. ಇಂದು ಪರಿವರ್ತನೆ ಹೊಂದಿದ್ದೇನೆ. ಇನ್ನೆಂದೂ ಆ ಬದುಕಿಗೆ ಹಿಂತಿರುಗಿ ಹೋಗುವುದಿಲ್ಲ. ನಿಮ್ಮ ಅನುಗ್ರಹವೊಂದಿರಲಿ, ತಂದೆ.

ರೆಡ್ಡಿ : ಕೈ ಕೊಟ್ಟಳಪ್ಪೋ. ಇವಳು ಪವಿತ್ರಳಾಗುತಾಳಂತೆ !

ರಾವ್ : ಶಹಬಾಸ್ !

ಶಾಸ್ತ್ರಿ : ಇಂಥದನ್ನು ಎಂದೂ ಕಂಡದ್ದಿಲ್ಲ ; ಕೇಳಿದ್ದಿಲ್ಲ.

ಮುದುಕ : ಹೇಗೆ ಕಂಡೀರಿ ? ಪಾಪಿಷ್ಠರು ಮುಟ್ಟಿದರೆ ಸಾಯುವರೆಂದು ಹೇಳಿರಲಿಲ್ಲವೇನಮ್ಮ ? ನಿನಗೆ ಸಾವಿನ ಭಯ ಇರಲಿಲ್ಲವೆ ? ಭಯ ಬರಲಿಲ್ಲವೆ ?

ಕಮಲ : ನನ್ನ ಜೀವಕ್ಕೆ ದುಗ್ಗಾಣಿ ಬೆಲೆ ಇಲ್ಲ, ತಂದೆ. ನನಗೆ ಈಜು ಬರುತ್ತದೆ. ಇಂಥ ಪುಣ್ಯಾತ್ಮರೇ ಯಾರೋ ಕಲಿಸಿಕೊಟ್ಟರು. ನಾನು ಕೊಳದಲ್ಲಿ, ನದಿಯಲ್ಲಿ, ಕಡಲಲ್ಲಿ ಎಲ್ಲೆಲ್ಲಿಯೂ ಈಜಾಡಿದ್ದೇನೆ. ಪಂಥ ಒಡ್ಡಿ ಇಂಥವರನ್ನು ಸೋಲಿಸಿ ಹಿಂದೆಹಾಕಿದ್ದೇನೆ. ಕೇಳಿ. ಆದರೆ ನನ್ನ ಈ ಕೀಳು ಜೀವ ಇದ್ದರೇನು, ಹೋದರೇನು ಎನ್ನಿಸಿತು.

ಮುದುಕ : ಅದೇ ಸಾತ್ವಿಕ ಸಾಹಸ ಅಮ್ಮ.

ರೆಡ್ಡಿ : ಆ ಸಾಹಸ ನಮಗೆ ಬರಲಿಲ್ಲ !

ಶಾಸ್ತ್ರಿ : ಮುಖ್ಯ, ಅಭ್ಯಾಸ ಮಾಡಲಿಲ್ಲ, ಅಲ್ಲವೆ ರೆಡ್ಡಿ ?

ಮುದುಕಿ : ಹೇಗೆ ಬಂದೀತು ? ಸಾಹಸ ಮನಸ್ಸಿಗೆ ಹಾಯಬೇಕು. ಇಚ್ಛೆ ಆ ಕಡೆ ತಿರುಗಬೇಕು, ಕಾರ್ಯಕ್ಕೆ ತೊಡಗಬೇಕು. ಸಾಹಸ ಸುಲಭವಲ್ಲ. ಇಚ್ಛೆಯಿಂದಲೇ ಮನಸ್ಸು ಹಿಮ್ಮೆಟ್ಟಿದರೆ ಸಾಹಸ ಹೇಗೆ ? ಕಾರ್ಯವೆಲ್ಲಿ ?

ರೆಡ್ಡಿ : ಮುದುಕಿ ಪುನಃ ಏನನ್ನೋ ತೆಗೆದಳು, ರಾವ್—ಈ ಸಲ ವೇದಾಂತ ಹೇಳುತ್ತಾಳೆ....ಯಾಕೆ ತಾಯಿ ಹಾಗಂತೀರಿ ?

ಮುದುಕಿ : ನಾನು ನಿಮಗೆ ಚಂದನ ಕೊಟ್ಟೆ. ಆ ಕೂಡಲೆ ನಿಮಗೆ ನಿಮ್ಮ ಹಿಂದಿನ ಜೀವನವೆಲ್ಲ ಮರುಕಳಿಸಿತು. ಅದು ನಿಮಗೆ ನಿಮ್ಮಲ್ಲೇ ಅಧೈರ್ಯ ತಂದಿತು. ಅಪನಂಬಿಕೆ ತಂದಿತು. ನಿಮಗೆ ಪಶ್ಚಾತ್ತಾಪವಾಗಲಿಲ್ಲ. ಅಗೋ, ಆ ಶಾಸ್ತ್ರಿಗಳಿಗೆ ಒಂದು ಘಳಿಗೆ ಮಾತ್ರ ಆಯಿತೇನೊ ! ಆಮೇಲೆ ಅವರ ಪ್ರವೃತ್ತಿಯು ಕಣ್ಣು ಮುಚ್ಚಿ ಹೋಯಿತು. ಮನಸ್ಸು ಪುನಃ ಕುರುಡಾಯಿತು.

ಮುದುಕ : ಇವಳು ಹೇಳುತ್ತಿರುವುದು ನಿಜವಲ್ಲವೆ ?

(ತಮ್ಮ ಒಳಗನ್ನೂ ವಿವರಗಳನ್ನೂ ಕೇಳಿ ಭಯದಿಂದ)

ರೆಡ್ಡಿ : ನಿಜ ಗುರುವೆ.

ರಾವ್ : ಮಂತ್ರಗಿಂತ್ರ ಹಾಕಿದರೇನೋ ರೆಡ್ಡಿ ?

ಶಾಸ್ತ್ರಿ : ಆಕೆಗೆ ಇದೆಲ್ಲಾ ಹೇಗೆ ಗೊತ್ತು ? ಏನೊ ತುಂಬಾ ಮಾಟ ಮಂತ್ರ ಕಂಡವರ ಹಾಗಿದ್ದಾರೆ ಇವರು.

ಮುದುಕ : ಚಂದನದ ಪ್ರಭಾವ ಅದು. ನಾನು ಆಕೆಗೆ ಕೊಟ್ಟಿದ್ದೆ. ಅದು ಮೈ ಸೋಕಿದರೆ ಅವರವರ ಪಾಪದ ನೆನಪುಗಳು ಮರುಕಳಿಸುವುವು. ಕರ್ಮಸ್ಮೃತಿ ಬರುವುದು. ಒಂದೊಂದು ಸ್ಮೃತಿಗೂ ಜನ ಬೆದರುವರು. ಹೇಸುವವರು ಹೇಸುವರು. ಅವರವರ ಸಂಸ್ಕಾರದಂತೆ. ಒಳ್ಳೆಯ ಮನಸ್ಸು ಹುಟ್ಟಿದರೆ ಉತ್ಸಾಹವುಂಟಾಗುವುದು.

ಮೂವರೂ : ನಮಗೆ ಹಾಗಾಗಿರಬೇಕು !

ನಾವು ನಿಜವಾಗಿ ನೀರಿಗೆ ಬೀಳುವವರಿದ್ದೆವು. ನಾನು ನಿಮ್ಮನ್ನೆತ್ತಿ ತರಬಲ್ಲವ ನಾಗಿದ್ದೆ.

ಈ ತೋಳಿನಲ್ಲಿ ಆನೆಯ ಬಲವಿದೆ, ಸಾಮಾನ್ಯವಾಗಿ. ಇಂದು ಅದು ಫಲಿಸಲಿಲ್ಲ. ಬಂಜೆಯಾಯಿತು.

ಮುದುಕ : ಪಾಪದ ಲೇಪ ನಿಮ್ಮನ್ನು ಇನ್ನೂ ದಟ್ಟವಾಗಿ ಕವಿದಿದೆ. ನಿಜವಾದ ಪಶ್ಚಾತ್ತಾಪ ಬಂದು ಧರ್ಮಕ್ಕೆ ತಿರುಗುವ ಮನಸ್ಸಾಗಿದ್ದಿದ್ದರೆ ನಿಮಗೆ ಧೈರ್ಯ ಬರುತ್ತಿತ್ತು.

ಕಮಲ : ನನಗದೇ ಧೈರ್ಯ ಕೊಟ್ಟಿತೆಂದು ಕಾಣುತ್ತದೆ.

ಮುದುಕ : ಇವಳು ನಿನಗೆ ಚಂದನ ಕೊಟ್ಟಳೆ ?

ಮುದುಕಿ : ಇಲ್ಲ, ಕುಂಕುಮ ಕೊಟ್ಟೆ.

ಮುದುಕ : ಸರಿ ! ನೀನು ತಾಯಿ. ಆದ್ದರಿಂದಲೇ ನಿನ್ನ ಏಕಾವಳಿ ಅವಳಿಗೆ ಕಾಣಿಸಿದ್ದು. ಅವರೆಗಾಗಲೆ ಅವಳ ಮನಸ್ಸೂ ಹದವಾಗಿತ್ತು.

ಕಮಲ : ಏನೇ ಮಾಡಿ, ತಾಯಿ, ನೀವು ನನ್ನನ್ನು ಬದುಕಿಸಿದಿರಿ. ಆ ಜನ್ಮ ಹೋಯಿತು. ಬೆಳಗ್ಗೆ ತಾನೇ ಕೇಳಿದ್ದೆ : ಶ್ರೀಶೈಲ ಶಿಖರವನ್ನು ನೋಡಿದರೆ ಪುನರ್ಜನ್ಮ ಇರುವುದಿಲ್ಲವೆಂದು. ಅರ್ಥ ವಿವರಿಸಿದ ಒಬ್ಬರು ಹೀಗೆ ಹೇಳು ತ್ತಿದ್ದರು.

ಮುದುಕ : ಏನೆಂದು ವಿವರಿಸುತ್ತಿದ್ದರು ?

ಕಮಲ : ಅದನ್ನೇ ಕಾಣಬೇಕೆಂದು ಕೂಡ ಇಲ್ಲ ; ಪುಣ್ಯಾತ್ಮರನ್ನು ಕಂಡಾಗ ಶ್ರೀಶೈಲದ ಶಿಖರ ಕಾಣುತ್ತದೆ. ದೊಡ್ಡ ಯೋಚನೆ ಬಂದಾಗ ಶ್ರೀಶೈಲ ದರ್ಶನವಾದಂತೆ ಎಂದರು. ಅಂತಃಕರಣ ಅರಳಿದಾಗ ಅದರ ಶಿಖರ ಕಾಣುತ್ತೆ—ಎಂದರು.

ಮುದುಕಿ : ಹೌದು ಮಗು, ಅದು ನಿಜ. ಎರಡೂ ಒಂದೇ.

ಮುದುಕ : ನನಗೆ ಈಗ ಸಾಕಷ್ಟು ಶಕ್ತಿ ಬಂದಿದೆ. ಇವಳು ನನ್ನನ್ನು ನೋಡಿಕೊಳ್ಳು ತ್ತಾಳೆ. ನೀನು ತೇರಿಗೆ ಹೋಗಬಹುದು ಕಮಲಮ್ಮ.

ಕಮಲ : ನನಗೆ ಇದಕ್ಕಿಂತ ದೊಡ್ಡ ರಥೋತ್ಸವ ಬೇಕಿಲ್ಲ ತಂದೆ.

ರೆಡ್ಡಿ : ಆ....! ಯಾವ ಉತ್ಸವ ಅಂದೆ ? ನನಗೆ ಇನ್ನೇನೊ ಕೇಳಿಸಿದಂತಾಯಿತು.

ಮುದುಕ : ನಿಮಗೆ ಇನ್ನು ಹೇಗೆ ಕೇಳೀತು ಅಯ್ಯ ? ಪ್ರಾಣ ಅಲ್ಪವಾದರೆ ಕೇಳಿಸುವುದೂ ಅಲ್ಪಪ್ರಾಣವೇ ತಾನೆ ?

ರಾವ್ : ಸುಮ್ಮನೆ ಇಲ್ಲಿಂದ ಹೊರಡುವುದು ಮೇಲು, ರೆಡ್ಡಿ. ಈ ಮುದುಕ, ಮುದುಕಿ ಸಾಧಾರಣರಿರುವಂತಿಲ್ಲ—ನಮಗೇಕೆ ಬನ್ನಿ. ಇನ್ನು ಮಾನ ಬರು ವಂತಿಲ್ಲ.

ಕಮಲ : ಹಿರಿಯರು ಬರುವುದಾದರೆ ಮೂವರೂ ಹೋಗೋಣ. ತಮ್ಮ ಸಾನ್ನಿಧ್ಯ ಕ್ಕಿಂತ ದೊಡ್ಡ ರಥೋತ್ಸವ ಇನ್ನಾವುದೂ ಕಾಣದು.

ಒಬ್ಬ : ದೈವದ್ರೋಹದ ಮಾತು.

ಮುದುಕ : ನಿಮ್ಮದು.

ಕಮಲ : ನೀವಿರುವಲ್ಲಿ ನಾನಿರುತ್ತೇನೆ, ನೀವು ಹೋಗುವಲ್ಲಿಗೆ ನಾನೂ ಹೋಗುತ್ತೇನೆ. ಈ ಜೀವ ಇನ್ನು ತಮಗೆ, ತಮ್ಮ ಸೇವೆಗೆ ಮೀಸಲು.

ಮುದುಕ : ಮುಕ್ತವಾಯಿತಮ್ಮ.

ಕಮಲ : (ಅಡ್ಡ ಬಿದ್ದು) ಪವಿತ್ರವಾಯಿತು. ಉದ್ಧಾರವಾಯಿತು.

ರೆಡ್ಡಿ : ಇದರಲ್ಲೇನೊ ವಿಶೇಷವಿದೆ. ಕಮಲಾ ಮುಖವನ್ನು ನೋಡಿದಿರಾ ?

ರಾವ್ : ಮುದುಕ ಮುದುಕಿಯರನ್ನು ನೋಡಿದಿರಾ ?

ಶಾಸ್ತ್ರಿ : ಯುವಕರಾಗಿ ಕಾಣುತ್ತಾರೆ. ದಾರಿಯಲ್ಲಿ ಬರುತ್ತಿದ್ದ ಯುವಕ ದಂಪತಿಗಳ ಹಾಗೆ ಕಾಣಿಸುತ್ತಿದ್ದಾರೆ. ಅವರೇ ಇವರು.

ಜನ : ಹಾ–ಏನು ತೇಜಸ್ಸು ! ಇದು ಸಾಕ್ಷಾತ್ ಮಲ್ಲಿಕಾರ್ಜುನ ಸ್ವಾಮಿಯ ತೇಜಸ್ಸು !

ಶಾಸ್ತ್ರಿ : ಕಮಲ, ನೀನು ಪುಣ್ಯಶಾಲಿ. ಅವರು ಹೇಳಿದ್ದು ಸರಿ. ಪಾಪ ದೇಹಕೆ ಮಾತ್ರ ಸಂಬಂಧಿಸಿದ್ದು. ನೀನು ಮನಸಾರ ಪಾಪ ಮಾಡಲಿಲ್ಲವೆಂದು ಈಗ ಗೊತ್ತಾಗುತ್ತಿದೆ.

ಕಮಲ : ಮೊದಲು ಬೇಕಾದಷ್ಟು ಮಾಡಿದ್ದೇನೆ. ಈಚೆಗೆ ತುಂಬಾ ಹೇಸಿಗೆ ಉಂಟಾಗಿತ್ತು.

ಮುದುಕ : ಕೇಳಿದೆಯಾ ಗೌರಿ ; ಇವಳ ಹೃದಯ ಪಕ್ವವಾಗಿತ್ತು. ನೀನದಕ್ಕೇ ಅವಳಿಗೆ ಕುಂಕುಮ ಕೊಟ್ಟದ್ದು ಅಂತ ಕಾಣುತ್ತೆ.

ಗೌರಿ : ಕೊಡಬೇಕೆನ್ನಿಸಿತು, ಕೊಟ್ಟೆ.

ಮುದುಕ : ದುರ್ಮಾರ್ಗವನ್ನು ಯಾರಾದರೂ ಎಂದಾದರೂ ಬಿಡಬಹುದು. ಆದರೆ ಧೈರ್ಯ ಬೇಕು. ಅಪರಾಧಕ್ಕೆ ಪಶ್ಚಾತ್ತಾಪಬೇಕು. ಮನಸ್ಸು ಲೋಕಹಿತಕ್ಕೆ ತಿರುಗಬೇಕು, ಅಷ್ಟೇ. ಈ ಮಗಳ ಮನಸ್ಸು ತಿರುಗಿತು. ಆಯಿತು, ಇವಳಿಗೆ ಮುಕ್ತಿ.

ರೆಡ್ಡಿ : ಎಷ್ಟು ಬೇಗ ?

ಮುದುಕ : ಉರಿ ತಾಕಿದರೆ ಸಾಕು ಕರ್ಪೂರಕ್ಕೆ. ಹೊತ್ತಿ, ಉರಿದು, ಕರಗಲು ಎಷ್ಟು ಹೊತ್ತು ಬೇಕು ?

ಶಾಸ್ತ್ರಿ : ಇವಳಿಗೆ ಆದದ್ದನ್ನು ನೋಡಿದರೆ ಎಲ್ಲರಿಗೂ ಆ ಭರವಸೆ ಉಂಟಾದಂತಲ್ಲವೆ?

ಮುದುಕಿ : ಎಲ್ಲರಿಗೂ ಆಗುತ್ತದೆ, ಎಂದಾದರೊಂದು ದಿನ : ಕೆಲವರಿಗೆ ಬೇಗ, ಕೆಲವರಿಗೆ ತಡವಾಗಿ—ಅವರವರ ಬಾಳ ಬಯಕೆಯಂತೆ, ಮನಸ್ಸಿನ ಚಿಂತೆಯಂತೆ, ಅವರವರ ಚಾರಿತ್ರದಂತೆ.

(ಎಲ್ಲರೂ ನಮಸ್ಕರಿಸುವರು)

ಎಲ್ಲರೂ : ತಪ್ಪಾಯಿತು, ಕಾಪಾಡಬೇಕು.

ಮುದುಕಿ : ಶಿವ ಕಾಪಾಡುತ್ತಾರೆ.

ಮುದುಕ : ತಾಯಿ ಜಗದಂಬೆ ಕಾಪಾಡುತ್ತಾರೆ.

ಕಮಲ : ನೋಡಿ, ನೋಡಿ ಕಾಣದೆ ? ಕಾಣದೆ ನಿಮಗೆ ?

(ಅಲ್ಲಿರುವವರಿಗೆ)

ನಿಮಗೆ ಏನೂ ಕಾಣುತ್ತಿಲ್ಲವೆ ?

ಜನರು : ಏನು ? ಏನು ಕಾಣುವುದು ?

ಕಮಲ : ಇವರು ಶಿವ ಪಾರ್ವತಿ ಎಂಬಂತೆ—

ಜನ : ಇಂಥ ಆಕೃತಿಯನ್ನೇನೊ ನಾವು ಈವರೆಗೆ ಕಂಡಿಲ್ಲ. ಉಳಿದುದು ನೀನು ಕಂಡದ್ದು. ನಿನ್ನ ಕಣ್ಣು ನಮಗಿಲ್ಲ ಕಮಲಾ.

ಕಮಲ : ಇರುವಂತಾಗಲಿ. ಬರುವಂತಾಗಲಿ.

(ಓಲಗ, ಜಾಗಟೆ, ತುತ್ತೂರಿ, ಶಂಖ ಎಲ್ಲ ವಾದ್ಯಗಳ ಮೊಳಗು. ಉತ್ಸವದ ವೈಭವದ ಧ್ವನಿ ಎಲ್ಲ ದಿಕ್ಕನ್ನೂ ತುಂಬಿಕೊಳ್ಳುತ್ತ ಹತ್ತಿರ ಹತ್ತಿರ ಬರುತ್ತಿದೆ. ತೇರು ಎಳೆಯುತ್ತಿರುವ ಕೂಗುಗಳು)

ಜನ : ಎಂದಿಲ್ಲದ ಚೆಲುವು ಮಲ್ಲಿಕಾರ್ಜುನಸ್ವಾಮಿಯದು. ಲೋಕದ ಉದ್ಧಾರಕ್ಕಾಗಿ ಸ್ವಾಮಿ ಅವತರಿಸಿದಂತಿದೆ.

ಮುದುಕ : ಬಾ ಮಗು ! ನಾವಿನ್ನು ಹೋಗೋಣ.

ಕಮಲ : ವಾಸಂತಿ, ನೀನೂ ಶಶಿ ನನ್ನ ಒಡವೆ, ವಸ್ತ್ರ ತೆಗೆದುಕೊಂಡು ಸುಖವಾಗಿ ಮರ್ಯಾದೆಯಿಂದ ಬಾಳಿ, ಹೋಗಿ. ರಾಮಣ್ಣ, ನನ್ನ ಹಣದಲ್ಲಿ ನೀನಷ್ಟು ತೆಗೆದುಕೊ. ಉಳಿದದ್ದನ್ನು ಬಡಬಗ್ಗರಿಗೆ ಹಂಚಿಬಿಡು. ಭೂಮಿ, ಕಾಣಿ ಮಾರಿ ಒಂದು ಛತ್ರ ಕಟ್ಟಿಸು. ಶ್ರೀಶೈಲದಲ್ಲಿ ರಥೋತ್ಸವದ ದಿನ ಎಲ್ಲ ಕಾಲಕ್ಕೂ ಅನ್ನದಾನ ನಡೆಯುವಂತೆ ಏರ್ಪಡಿಸು. ಬಂದ ಮಕ್ಕಳಿಗೆ ಹಸುವಿನ ಹಾಲು ಹಂಚಿ.

ಮುದುಕಿ : ಈ ಸ್ಥಳದಲ್ಲಿ ಈಕೆಯ ಹೆಸರಲ್ಲಿ ಒಂದು ಪೀಠವನ್ನು ರಚಿಸಿ.

ಕಮಲ : ರಾಮಣ್ಣ, 'ಕಮಲಾಸಾನಿಯ ಉದ್ಧಾರಸ್ಥಾನವಿದು' ಎಂದು ಬರಸು, ಅದರ ಮೇಲೆ.

(ಅದನ್ನು ಕಣ್ಣಿಗೆ ಒತ್ತಿಕೊಳ್ಳುವಳು)

ರಾಮಣ್ಣ : ಈಗ ಮನೆಗೆ ಬರುವುದಿಲ್ಲವೇ ಅಮ್ಮ ?

ಕಮಲ : ಇನ್ನು ನನ್ನ ಮನೆ ಇವರಿಬ್ಬರಿರುವಲ್ಲಿ.

ಮುದುಕ : ಈ ಪ್ರಸಾದವನ್ನು ತೆಗೆದುಕೊ. ನಾವಿಬ್ಬರೂ ಹೊರಡುತ್ತೇವೆ. ನೀನಿನ್ನೂ ಚಿಕ್ಕವಯಸ್ಸಿನವಳು. ಇನ್ನೂ ನಾಲ್ಕು ವರ್ಷ ಸುಖವಾಗಿದ್ದು ನಮ್ಮಲ್ಲಿಗೆ ಬರಬಹುದು.

ಕಮಲ : ನಾನು ಜೊತೆಯಲ್ಲಿ ಬರುವುದು ತಮಗಿಷ್ಟವಿಲ್ಲವಾದರೆ ತಮ್ಮಪ್ಪಣೆಯಂತೆ ನಡೆಯುತ್ತೇನೆ. ಎಲ್ಲಿರು ಎಂದು ಅಪ್ಪಣೆ ಮಾಡಿದರೆ ಅಲ್ಲಿರುತ್ತೇನೆ. ನೀವಿಟ್ಟಲ್ಲಿ ಸ್ವರ್ಗ, ಕೈಲಾಸ. ಈ ಅಮ್ಮ ನನಗೆ ಜಗದಂಬೆ, ಲೋಕದಲ್ಲಿ ನನಗಿನ್ನಾರೂ ಇಲ್ಲ. (ಸುತ್ತಲೂ ನೋಡಿ) ಲೋಕವೇ ಇಲ್ಲ.

ಮುದುಕ : ಇನ್ನೂ ಮೂವತ್ತು ವರ್ಷ ನಿನಗೆ.

ಕಮಲ : ಮೂರು ಯುಗಗಳ ಕಾಲ ಬಾಳಿದಷ್ಟು ಅದರ ಸಿಹಿ, ಕಹಿ ಅರಿವಾಗಿದೆ, ತಂದೆ. ಈ ಲೋಕದ ಬಾಳು ಸಾಕಾಗಿದೆ, ನನಗೆ.

ಮುದುಕ : ಆಶ್ಚರ್ಯವನ್ನು ಕೇಳುತ್ತಿಲ್ಲವೆ, ಗೌರಿ ?

ಮುದುಕಿ : ಆಶ್ಚರ್ಯವಲ್ಲದೆ ಮತ್ತೇನು ?

(ಕಮಲ ಮುಂದೆ ನಡೆಯುತ್ತ ದಾರಿ ತೋರಿಸುತ್ತಿರಲು ಮುದುಕ, ಮುದುಕಿ ಹಿಂಬಾಲಿಸುವರು)

ಕಮಲ : ಹೀಗೆ...ಹೀಗೆ...ಮೆಟ್ಟಿಲು ತುಂಬಾ ಕಡಿದು ಇಲ್ಲಿ. ಇದು ತುಂಬಾ ಎತ್ತರವಾಗಿದೆ. ಮೆಲ್ಲಗೆ ಏರಬೇಕು, ಅಮ್ಮಾ...ಹೀಗೆ...ಹೀಗೆ ಬನ್ನಿ.

ಮುದುಕಿ : ನಿನ್ನ ಉಪಚಾರ ನಮಗೆ ತುಂಬಾ ಹಿತವಾಗಿದೆ, ಕಮಲಾ.

ಮುದುಕ : ಈ ಜಾತ್ರೆಗೆ ನೆರೆದವರಲ್ಲೆಲ್ಲ ನೀನೊಬ್ಬಳು ಪುಣ್ಯಾತ್ಮಳು, ಕಮಲ... ನಾನು ನಿನಗೇನು ಹೇಳಿದೆ, ಗೌರಿ ?

ಮುದುಕಿ : ಎಲ್ಲಿ ?...ಎಂದು ?...ಲಕ್ಷ ಸಲ, ಲಕ್ಷ ಹೇಳಿದ್ದೀರಿ. ಯಾವುದನ್ನು ಕುರಿತು ಮಾತು ?

ಮುದುಕ : ಸರಿಹೋಯಿತು ! ಶ್ರೀಶೈಲ ಮಾಹಾತ್ಮ್ಯೆಯನ್ನು ಕೇಳಿ ತಾನೇ ಇಲ್ಲಿಗೆ ನಾವು ಬಂದದ್ದು ? ಎಲ್ಲಿ, ನೆನಪಿದೆಯೆ ಅದಾದರೂ ?

ಮುದುಕಿ : ಇಲ್ಲಿ ನಡೆದದ್ದನ್ನು ನೋಡುತ್ತ ಮೋಹಿತಳಾಗಿ ಅದನ್ನು ಮರೆತೇಬಿಟ್ಟಿದ್ದೆ. ನಿಮಗೆಲ್ಲಾ ತಿಳಿದಿದ್ದೂ ಕೇಳುತ್ತೀರಿ. ಸ್ಥಳ, ಸಮಯ ನಿಮಗೆ ತಿಳಿಯದೆ ?

ಮುದುಕ : ಅದನ್ನು ಸ್ಪಷ್ಟವಾಗಿ ಹೇಳು. ಅವಳಿಗೆ ಅದು ಕೇಳಿಸಲಿ, ತಿಳಿಯಲಿ. ಕಮಲ ಈಗ ನಮ್ಮವಳು. ಇನ್ನು ಮೇಲೆ ಈ ಲೋಕವನ್ನು ದಾಟುವಳು.

ಮುದುಕಿ : ತುಂಬಾ ಸಂತೋಷ. ನನ್ನ ಅಜ್ಞಾನಕ್ಕೆ ನನಗೆ ವಿಸ್ಮಯವಾಗುತ್ತಿದೆ. ಹೌದು, ಕೈಲಾಸದಲ್ಲಿ ಗಣಗಳ ಸಭೆ ಮುಗಿದ ಮೇಲೆ.

ಮುದುಕ : ಇಲ್ಲಿಗೆ ಎಷ್ಟು ಜನ ಬಂದಿದ್ದರು ? ಆ ಲಕ್ಷ ಜನದಲ್ಲಿ ಈ ಒಂದು ಜೀವಕ್ಕೆ ಮುಕ್ತಿ ದೊರಕಿತು. ಇಷ್ಟು ಅಪರೂಪ. ಒಳಗೆ ಸಿದ್ಧವಾಗುತ್ತಿತ್ತು. ನೀನು ದಯೆ ತೋರಿಸಿದೆ. ಕುಂಕುಮ ಕೊಟ್ಟೆ.

ಮುದುಕಿ : ನಿಮಗೆ ತಿಳಿದ ಲೋಕಸ್ವರೂಪ, ಲೋಕಹೃದಯ ನನಗೇನು ತಿಳಿದೀತು ?

ಮುದುಕ : ನಿನ್ನ ಹೃದಯವನ್ನು ಕೇಳು ; ಅದು ತಿಳಿಸುತ್ತದೆ. ನನ್ನಲ್ಲಿ ನೀನು ; ನೀನಿರುವಲ್ಲಿ ನಾನು ; ಲೋಕಗಳ ನೆರವಿಗೆ.

ಕಮಲ : (ಜಗ್ಗನೆದ್ದು ಕೈಮುಗಿದು ಜನರನ್ನು ಕುರಿತು) ನೋಡಿ, ನೋಡಿ, ನಿಮಗೆ ಕಾಣಿಸುತ್ತಿಲ್ಲವೆ ? ಏನೂ —

(ಕಣ್ಣು, ಮುಖ ಅರಳಿ ಹಾಡತೊಡಗುವಳು)

ಓ ಶಿವಶಂಕರ, ಜಗದಂಬಾ
ಬದುಕಿದೆ ನಾನು, ಓ ಶಿವಶಂಕರ
ಬದುಕಿಸಿದಯ್ ತಾಯ್, ಸರ್ವಮಂಗಳೇ
ಹುಟ್ಟಿನ ಸಾವಿನ ಹಗರಣ ಹರಿಯೆ
ಮುಟ್ಟಿದುದಾಯಿತು ಬದುಕಿನ ಗುರಿಯು
ಎನಿತೋ ಬವಣೆಯನುಂಡುದಾಯಿತು
ಕಡೆಗೀ ಕರುಣೆಯ ಕಂಡುದಾಯಿತು
ಬದುಕಿದೆ, ಬದುಕಿದೆ, ಬದುಕಿದೆ ತಾಯೇ
ಕಾಯುವುದೆನ್ನನು, ಓ ಶಿವಶಂಕರ
ಓ ಶಿವಶಂಕರ
ಜಯ ಶಿವಶಂಕರ

ಕಾಂಬುದು ನೀನೇ ಕೇಳ್ವುದು ನೀನೇ
ಎಲ್ಲ ಉಸಿರೊಳೂ ನುಡಿವುದು ನೀನೇ
ನೆತ್ತರು ಹರಿಯುವ ನಾಡಿಯು ಒಳಗೆ
ಊದುವ ಗಾಳಿಯು ಸಿಳ್ಳೆಗಳೊಳಗೆ
ಉರಿಯುವ ಸೂರ್ಯನ ತಾಪಗಳೊಳಗೆ
ಚಂದ್ರಕಾಂತಿಯು ತಾಪಗಳೊಳಗೆ
ಗ್ರಹತಾರಾ ನೀಹಾರಿಕೆಯೊಳಗೆ
ಮೊಗ್ಗೆಗಳರಳಲು ಹೂವಿನ ಒಳಗೆ
ಮೃಗಮದ ಕರ್ಪೂರ ಕಾಶ್ಮೀರದಲಿ
ಕಮ್ಮಿಡುತಿಹ ಸೌಗಂಧಗಳಲ್ಲಿ
ಅಂತರಾಂತರದ ಎಲ್ಲೆಡೆಗಳಲಿ
ಒಳಗೆ, ಹೊರಗೆ, ಕೆಳಗೆ, ಮೇಲೆ, ಸುತ್ತಲು, ಮುತ್ತಲು
ಎಲ್ಲಾ ನೀವೇ, ಓ ತಾಯ್ತಂದೇ
ಓ ಶಿವಶಂಕರ, ಜಯ ಜಗದಂಬಾ

(ಅವಳು ನಮಸ್ಕಾರ ಮಾಡುತ್ತಿರುವಂತೆ ಶಿವ ಪಾರ್ವತಿಯರ ವರದ ಹಸ್ತ ಚಾಚುವುದು. ಅವರ ಸುತ್ತೂ ಈ ದೃಶ್ಯ ದಿವ್ಯ ಪ್ರಭೆಯಿಂದ ಬೆಳಗುವುದು. ಲೋಕವನ್ನು ತುಂಬುವುದು. ಆ ಒಡನೆಯೇ ಮೊದಲ ದೃಶ್ಯದ ಆರಂಭದಲ್ಲಿರುವಂತೆ ಗಾನವಾದ್ಯಗಳ ಮೊಳಗು. ಕ್ರಮವಾಗಿ ಅವರು ಅದೃಶ್ಯರಾಗುವರು)

ಜನ : ದೊಡ್ಡ ಪವಾಡವನ್ನು ನೋಡಿದೆವು.

ರಾಮಯ್ಯ : ನಮ್ಮಮ್ಮ, ತಾಯಿ, ಈ ಕಣ್ಣು ನನಗಿನ್ನು ಇಂಗಿ ಹೋದರೂ ಪರವಾ ಇಲ್ಲ. ನೀನು ಧನ್ಯಳು !

ಜನ : ಅಡ್ಡಿಯೇನು ? ಅಡ್ಡಿಯೇನು ?

ತೆರೆ

# ಚ್ಯವನ

# ಪಾತ್ರವರ್ಗ

ಚ್ಯವನ
ಶರ್ಯಾತಿ
ಅಶ್ವಿನಿಯರು (೨)
ರುದ್ರ
ಇಂದ್ರ
ಮದಾಸುರ
ಸುಕನ್ಯೆ
ರಾಣಿ
ಚಿತ್ರೆ

ಅನ್ಯರು

ರಾಜಪುರೋಹಿತ, ದಂಡಾಧಿಪತಿ, ಪರಿವಾರ, ಸುಕನ್ಯೆಯ ಗೆಳತಿಯರು.
ಯಜ್ಞಶಾಲೆಯಲ್ಲಿನ ಋಷಿಪುರೋಹಿತವರ್ಗ, ದನಿಗಳು.

## ಸ್ಥಾನಗಳು

I ಕೊಳ
II ಆಶ್ರಮ
III ಕೊಳ
IV ಯಜ್ಞಶಾಲೆ

# ದೃಶ್ಯ ೧

## ಆಶ್ರಮದ ಬಳಿ – ಕೊಳ

ಅಶ್ವಿನೀ ದೇವತೆಗಳು : ದೇವಿ,—

ಸುಕನ್ಯೆ : ಯಾರದು ?

ಅಶ್ವಿನಿ : ನಾವು

ಸುಕನ್ಯೆ : ನಾವೆಂದರೆ ?

ಅಶ್ವಿನಿ : ಅಶ್ವಿನೀ ದೇವತೆಗಳು

ಸುಕನ್ಯೆ : ಅಶ್ವಿನೀ ದೇವತೆಗಳೆ ? ನೀವು ಯಾರೊ ನಾ ಕಾಣೆ. ನಾನು ಒಂಟಿ ಹೆಣ್ಣು. ಗಂಡಸರು ಹೀಗೆ ಬಂದು ಹೆಂಗಸಿನ ಎದುರಿಗೆ ನಿಲ್ಲಬಾರದು.

ಅಶ್ವಿನಿ : ಅದನ್ನು ನಾವು ಬಲ್ಲೆವು.

ಸುಕನ್ಯೆ : ಹೆಂಗಸರು ಸ್ನಾನ ಮಾಡುತ್ತಿರುವಾಗ ಗಂಡಸರು ನೋಡಬಾರದೆಂಬುದನ್ನು ತಿಳಿವಷ್ಟು ದೊಡ್ಡತನ ನಿಮಗೆ ಬರಲಿಲ್ಲವೆ ?

ಅಶ್ವಿನಿ : ಇಂಥ ಚೆಲುವು ನಾವು ಎಲ್ಲೂ ಎಂದೂ ಕಂಡುದಿಲ್ಲ. ಅದರಿಂದ ನುಡಿಸಿದೆವು. ನಮ್ಮವು ಸದಾ ತೆರೆದ ಕಣ್ಣು. ಎಲ್ಲವೂ ಅವಕ್ಕೆ ಬೀಳುತ್ತವೆ. ವಿಧಿಯಿಲ್ಲ.

ಸುಕನ್ಯೆ : ದೇವತೆಗಳೆಂದಿರಿ ? ದೇವಲೋಕದ ಚೆಲುವು ಲೋಕವಿಖ್ಯಾತವಾದ್ದಲ್ಲವೆ ?

ಅಶ್ವಿನಿ : ಸಾಧಾರಣವಾಗಿ ನಿಜ. ಆದರೆ ನಿನ್ನ ಚೆಲುವಿಗೆ ಸಾಟಿಯಾದ್ದನ್ನು ಕಂಡಿಲ್ಲ.

ಸುಕನ್ಯೆ : ಪ್ರಶಂಸೆಯಾಯಿತು. ನಾನು ಪರಸ್ತ್ರೀ. ನೀವು ಬಂಧುಗಳಲ್ಲ. ಮಿತ್ರರಲ್ಲ. ನಾನು ನನ್ನ ಗಂಡನೊಡನಿಲ್ಲ. ಆಪತ್ತಿನಲ್ಲಿಲ್ಲ. ಕಂಡವರಲ್ಲ. ಹೀಗೆ ಒಂಟಿ ಹೆಂಗಸನ್ನು ನಿಲ್ಲಿಸಿ ಮಾತನಾಡಿಸುವುದು ತರವಲ್ಲ.

ಅಶ್ವಿನಿ : ತರವಾಗಬೇಕಾದರೆ ಏನು ಮಾಡಬೇಕೆನ್ನುವೆ ?

ಸುಕನ್ಯೆ : ಇಲ್ಲಿಂದ ಹೊರಟುಹೋಗಿ.

ಅಶ್ವಿನಿ : ಇದು ತುಂಬಾ ನಿಷ್ಕರುಣೆಯ ಮಾತು. ನೀನಾರು ?

ಸುಕನ್ಯೆ : ಅದನ್ನು ಕಟ್ಟಿಕೊಂಡು ನಿಮಗೇನಾಗಬೇಕು. ನಾನು ಋಷಿಪತ್ನಿ.

ಅಶ್ವಿನಿ : ಚೆನ್ನಾಯಿತು. ಅಂಥವಳನ್ನು ನುಡಿಸುವುದು ಅಪಾಯಕರವೇ ಸರಿ.

ಸುಕನ್ಯೆ : ಅಪಾಯದ ಮಾತು ನಿಮಗೆ ಸಂಬಂಧಪಟ್ಟದ್ದು. ಇಂಥ ಕಾರ್ಯಕ್ಕೆ ಸಾಮಾನ್ಯವಾಗಿ ನಿಮ್ಮ ಮನಸ್ಸು ಹಿಮ್ಮೆಟ್ಟಬೇಕು.

ಅಶ್ವಿನಿ : ನೀನು ಏನೇ ಹೇಳು. ನಿನ್ನನ್ನು ಕಂಡ ಕೂಡಲೆ ಇಬ್ಬರಿಗೂ ಹೀಗೆನ್ನಿಸಿದೆ. ನಿನ್ನನ್ನು ಮಾತನಾಡಿಸಬೇಕೆನ್ನಿಸಿತು. ನನಗೆ ಒಂದಲ್ಲ, ನನ್ನ ತಮ್ಮನಿಗೆ ಬೇರೆಯಲ್ಲ.

ಸುಕನ್ಯೆ : ಇಬ್ಬರಿಗೆ ಹಾಗನ್ನಿಸಬಾರದಲ್ಲ.

ಅಶ್ವಿನಿ : ಬಾರದು. ಆದರೆ ಆಗಿದೆ. ನಮ್ಮ ನಮ್ಮಲ್ಲಿ ಅಸೂಯೆ ಇಲ್ಲ. ನಾವು ಅವಳಿಗಂಡುಗಳು.

ಸುಕನ್ಯೆ : ಇನ್ನು ನನ್ನನ್ನು ತಡೆಯದೆ ಇಲ್ಲಿಂದ ಹೋಗಗೊಡುವ ಉಪಕಾರ ಮಾಡಬೇಕು.

ಅಶ್ವಿನಿ : ಋಷಿಪತ್ನಿ ಎಂದಿರಿ.

ಸುಕನ್ಯೆ : ಹೌದು.

ಅಶ್ವಿನಿ : ಯಾವ ಋಷಿ ?

ಸುಕನ್ಯೆ : ಹೆಣ್ಣು ಪತಿಯ ಹೆಸರನ್ನು ನುಡಿಯಬೇಕಾಗಿ ಬಂದುದು ಪ್ರಮಾದ. ಆದರೆ ತಪ್ಪಿಸಿಕೊಳ್ಳಲು ದಾರಿಯಿಲ್ಲ.

ಅಶ್ವಿನಿ : ಋಷಿಗಳು ಪೂಜ್ಯರು. ಪೂಜ್ಯರ ಹೆಸರನ್ನು ಹೇಳುವುದು ಅಪಚಾರವಲ್ಲ.

ಸುಕನ್ಯೆ : ಚ್ಯವನ ಮಹರ್ಷಿಗಳು.

ಅಶ್ವಿನಿ (ತಮ್ಮಲ್ಲಿ) : ಸತ್ಯ, ಇದು ಆಪತ್ತೇ ಸರಿ. ಆದರೆ ಮಾರ್ಗವಿಲ್ಲ. ಇಷ್ಟು ದೂರ ನಡೆದುದಾಯಿಂತು. ಹಿಮ್ಮೆಟ್ಟು ಪೌರುಷವಲ್ಲ. ಆಪತ್ತೊ ಬದುಕೊ ನಮ್ಮ ಮನಸ್ಸನ್ನು ನಿವೇದಿಸುತ್ತಿದ್ದೇವೆ. ಅದು ಸ್ಥಿತಿಯ ನಿವೇದನೆ.

ಸುಕನ್ಯೆ : ತಪ್ಪಲ್ಲವೆ ನೀವು ಮಾಡುತ್ತಿರುವುದು ?

ಅಶ್ವಿನಿ : ಅದನ್ನು ನೋಡಿಕೊಳ್ಳೋಣ. ನಾವು ದೇವತೆಗಳು. ಮನುಷ್ಯರ ಎಣಿಕೆಗಳಿಗೂ ನಮ್ಮವಕ್ಕೂ ವ್ಯತ್ಯಾಸ ಉಂಟು.

ಸುಕನ್ಯೆ : ಧರ್ಮಾಧರ್ಮ ವಿವೇಚನೆ ಇಲ್ಲವೆ ?—ದೇವತೆಗಳಿಗೆ ?

ಅಶ್ವಿನಿ : ಒಳ್ಳೆಯ ಚೆಲುವಾದ ಹೂವನ್ನು ಕಂಡರೆ ಆಸೆ ಬಾರದೆ ? ಅದನ್ನು ಬಯಸಬಾರದೆ ? ಅಲ್ಲದೆಯೊ—ಲೋಕದ ಹಣ್ಣು, ಹೆಣ್ಣು, ದೇವತೆಗಳಿಗೆ ಮೊದಲ ಸಲುಗೆ.

ಸುಕನ್ಯೆ : ಇದು ಇನ್ನೊಬ್ಬರಿಗೆ ಸೇರಿದ್ದು — ಈ ಮೊದಲೇ —

ಅಶ್ವಿನಿ (೧) : ದೇವತೆಗಳಿಗೆ ಆ ನಿಯಮವಿಲ್ಲ. ಅವರು ಕೇಳಬಹುದು. ದೊರಕಿದರೆ ಆಯಿತು. ಇಲ್ಲವಾದರೆ ತಮ್ಮ ದಾರಿ ಹಿಡಿದು ಹೋಗುತ್ತಾರೆ.

ಅಶ್ವಿನಿ (೨) : ಆಯಿತು. ಮಹರ್ಷಿ ಚ್ಯವನರು ವೃದ್ಧರಲ್ಲವೆ ? ನೀನು ಯುವತಿ.

ಸುಕನ್ಯೆ : ವೃದ್ಧರು ಯುವಕರು ಎಂಬುದು ಸಾಮಾನ್ಯ ಮಾನವರ ಎಣಿಕೆ. ವಯಸ್ಸಿನ ಎಣಿಕೆ ತಪಸ್ವಿಗಳಿಗೆ ಸಲ್ಲದು. ಅವರು ನನ್ನ ಪತಿ; ನನ್ನ ದೇವರು.

ಅಶ್ವಿನಿ : ನೀನು ರಾಜಕುಮಾರಿ ಎಂದು ಕೇಳಿ ಬಲ್ಲೆವು.

ಸುಕನ್ಯೆ : ಹೌದು. ನಾನು ಶರ್ಯಾತಿ ಮಹಾರಾಜನ ಮಗಳು.

ಅಶ್ವಿನಿ : ಅಂಥ ನೀನು ಇವರಿಗೆ ಸತಿಯಾದುದು ಹೇಗೆ ?

ಸುಕನ್ಯೆ : ನನ್ನನ್ನು ಅವರಿಗೆ ತೆತ್ತುಕೊಂಡೆ.

ಅಶ್ವಿನಿ : ಅವರು ಕೇಳಿಯೊ ? ನೀನಾಗಿ ನೀನೊ ?

ಸುಕನ್ಯೆ : ಎರಡೂ ; ಅದನ್ನು ಕಟ್ಟಿಕೊಂಡು ನಿಮಗಾಗಬೇಕಾದ್ದೇನಿದೆ ? ನನಗೆ ಸಮಯವಾಯಿತು, ಅಪ್ಪಣೆಕೊಡಬೇಕು. ಸ್ನಾನಕ್ಕೆ ಬಂದವಳು ಯಾರ ಯಾರೊಡನೆಯೊ ಮಾತನಾಡುತ್ತ ಕಾಲ ಕಳೆಯಬಾರದು. ಪೂಜಾಕಾರ್ಯ ಕಾದಿದೆ. ತಡವಾಗುತ್ತಿದೆ.

ಅಶ್ವಿನಿ : ತುಂಬಾ ಕುತೂಹಲಕಾರಿ ಕಥೆ ಇರಬೇಕು. ನಿನ್ನ ಬಾಯಿಂದಲೇ ಕೇಳುವ ಉಪಕಾರ ಮಾಡಬೇಕು.

ಸುಕನ್ಯೆ : ಅವರ ಕಥೆಯಾದ್ದರಿಂದ—ಈ ಮಾತನ್ನು ಹೇಳುತ್ತಿದ್ದೇನೆ ಅವರಿಗೆ ನಮಿಸಿ : ನನ್ನ ಮನಸ್ಸಿನಲ್ಲಿ ಯಾವ ವಿಚಿಂತೆಯೂ ಇಲ್ಲವೆಂದು ಅವರು ಬಲ್ಲರು. ನೀವು ಈಗ ಬಲ್ಲಿರಿ. ಇದು ಹೀಗಾಯಿತು.

(ದೃಶ್ಯ ಬದಲಾಗುತ್ತದೆ)

[ಹುಡುಗಿಯರು ಹಲವಾರು ಮಂದಿ ವನವೊಂದರಲ್ಲಿ ಸ್ವೇಚ್ಛೆಯಾಗಿ ತಿರುಗಾಡುತ್ತಿದ್ದಾರೆ. ವಸಂತಮಾಸ, ಹಾಡು, ನರ್ತನ ವಿನೋದ, ವಿಲಾಸ]

ಹೆಣ್ಣುಗಳು : ಬಾ ಗೆಳತಿ, ಬಾ ಸುಕನ್ಯೆ, ಬೇಗ ಬಾರಿಲ್ಲಿಗೆ
ತೋರ ದಂಡೆ ಮಾಡಿರುವೆ ಮುಡಿಯುವೆ ಬಾ, ಮಲ್ಲಿಗೆ ॥
ಮೊಲ್ಲೆ ಜಾಜಿ ಇರುವಂತಿಗೆ ಸೇವಂತಿಗೆ ಸಂಪಿಗೆ
ಎಲ್ಲ ಚೆಲ್ಲಿ ಸೂರೆಗೈದೆವಾವಿಲ್ಲಿಗೆ ಬೇಗ ಬಾ
ಮುಂಗೈಗಿದೆ ಮುಗುಳ ಬಳೆ — ಕೊರಲಿಗಿದೆ ಕಂಠಿಕೆ

ತಂಡ ೧ : ತೂಗುತ್ತಿದೆ, ಕನ್ನೈದಿಲೆ — ತುಂಬಿದೆದೆಯ ಇಂಬಿಗೆ.

ತಂಡ ೨ : ಜೇಂಕರಿಸುವ ದುಂಬಿವಿಂಡು — ಹಣ್ಣು ಹಲಸ ಮುತ್ತಿದೆ
ತುಟಿಗೆ ಕಣ್ಗೆ, ಎರಗಿ, ಸುತ್ತಿ, ನಿನ್ನ ಮೊಗವ ಮುತ್ತಿದೆ.

ಸುಕನ್ಯೆ : ಅಹ, ಆಹಾ
ಎಲ್ಲಿಯುದದು ಮೊರೆ ಮೊರೆತ, ಮಂತ್ರದ ಮೆಲು ಮಂದ್ರ
ಯಾರದೋ ಘಡು ದನಿಯದು — ಸುಸ್ವರದಲಿ ಮಂತ್ರ

ತಂಡ ೧ : ಮರುಳು ನಿನಗೆ ಮಂತ್ರವೆಲ್ಲಿ
ನಿರ್ಜನ ಕಾಂತಾರದಲ್ಲಿ
ಬಾರಿತ್ತಲು, ಎನ್ನತ್ತಲು ಬಾ ಸುಕನ್ಯೆ ಆಡುವ

ಸುಕನ್ಯೆ : ಏಕೊ ಏನೊ ಒಳಗೆ ಎನಗೆ ದಿಗಿಲ್ ಎನಿಸುತಿರುವುದೇ

ತಂಡ ೨ : ನಿನಗೇತಕೆ ಭೀತಿ ಮುಗುದೆ ಹಿಂದು ಹೆಣ್ಣು ನಾವಿರೆ

ಸುಕನ್ಯೆ : ಏಕೊ ಏಕೊ ಕಾಣೆ ನನಗೆ
ದಿಗಿಲ್ ದಿಗಿಲ್ ಎನಿಸಿದೆ

೧ ಬಿಡು ಭೀತಿಯ ಮುಗುದೆ ಬರಿದೆ

೨ ನಾವೆಲ್ಲರು ನಿನ್ನ ಬಳಿಯೆ – ಕಾವಲಿರುವೆವಲ್ಲವೆ

ಎಲ್ಲರೂ : ಬಾ ಗೆಳತಿ, ಬಾ ಸುಕನ್ಯೆ, ಬೇಗ ಬಾರಿಲ್ಲಿಗೆ

೩ ನೆಲ ಜಲ ಹೊಲ ಬಾನು ಕಾನು
ಎಷ್ಟು ತಿಳಿ, ಎಷ್ಟು ಚೆನ್ನು,
ನೀರಾಟವ ಮುಗಿಸಿ ಆಯ್ತು
ಆಡುವ ಬಾ ನಾವಿನ್ನು

ಎಲ್ಲರೂ : ಬಾ ಗೆಳತಿ, ಬಾ ಸುಕನ್ಯೆ, ಬೇಗ ಬಾರಿಲ್ಲಿಗೆ

೪ ಮಳೆ ಮುಗಿದಿದೆ ನೆಲ ನೆನೆದಿದೆ
ಕಮ್ಮೆನುತಿದೆ ಮಣ್ಣು
ಎಳ ಯೌವನ ತಿಳಿ ಸೌಮನ
ಗೆಳತಿಯರೊಳು ಚೆನ್ನ

ಎಲ್ಲ ಹಂಚಿ i) ನೀನೆ ನಮ್ಮ ಕಣ್ಣು
ii) ಕಣ್ಣ ಬೆಳಕು, ಹೊಳಪು
iii) ನಿನ್ನದೊಂದೆ ಚೆಲುವು ಇಂದು
iv) ಬಾ ಮೆರೆಯುವೆ ಇಂದು.

ಎಲ್ಲರೂ : ಬಾ ಗೆಳತಿ, ಬಾ ಸುಕನ್ಯೆ, ಬಾ ಬೇಗ ಇಲ್ಲಿಗೆ

ಹುಡುಗಿಯರು ಉಟ್ಟ ಬಟ್ಟೆ ಗಾಳಿಗೆ ಹಾರಾಡುತ್ತಿದೆ. ಮುರಿದ ರೆಂಬೆ, ಕೊಂಬೆ, ಕಳಚಿ ಬಿದ್ದ ಹೂ ಎರಚಾಡುತ್ತಿದೆ. ಹತ್ತಿರ ಹೋಗುತ್ತ ಗಿಡಗಳಿಂದ ಹೂ ಆಯುತ್ತಿದ್ದಾರೆ. ಅರಸನ ಮಗಳು ಸುಕನ್ಯೆ ಏನೋ ನೋಡುತ್ತ ಕ್ಷಣಕಾಲ ನಿಲ್ಲುತ್ತಾಳೆ. ಹೋ–ಹೋ–ಇದೇನು ? ಅವರು "—ಏನೋ ನೋಡುತ್ತಿದ್ದೀಯೆ ಅರಸುಕುಮಾರಿ ? ಈ ಹುತ್ತವನ್ನು ನೋಡಿದೆಯ–ಇಲ್ಲ ; ಇಲ್ಲ ಬಹು ಸೊಗಸಾಗಿದೆ–ಹಾವು ಗೀವಿದ್ದೀತು–ಎಚ್ಚರಿಕೆ ಅರಸುಕುಮಾರಿ–ಇದು ಹಾವಿನ ಹುತ್ತವಲ್ಲ–

ಅಲ್ಲಿಂದ ಯಾವುದೊ ಮಂತ್ರ ಕೇಳುತ್ತಿದೆ–ಅಲ್ಲಿ ಯಾರೊ ಮಾತನಾಡುತ್ತಿರುವಂತಿದೆ. ಸ್ಪಷ್ಟವಲ್ಲ. ಎಲ್ಲಿಯ ಮಂತ್ರ ?–ಆಶ್ಚರ್ಯ ಹೌದು–ಮಾತು ; ಸ್ಪಷ್ಟವಾಗಿ ಏನೆಂದು ಕೇಳಿಸದು. ಆ ಹೊಳಪು ಯಾವುದು ? ಹೊಳಪೆಲ್ಲಿಂದ ಬರಬೇಕು ? ಯಾವ ಪ್ರಾಣಿಯೊ ಏನೋ. ಪ್ರಾಣಿಯಾದಲ್ಲಿ ದೊಡ್ಡದು–ಒಂದೇ ಸಮನಾಗಿದೆ ಧ್ವನಿ–ಎಷ್ಟು ಹೊಳಪು''—

ಸುಕನ್ಯೆ : ಅಮ್ಮಾ ಹೌದು. ಆ ಕಡ್ಡಿ ತೆಗೆದುಕೊಂಡು ಬಾ ! ಹೀಗೆ : ಇದನ್ನು—

ಚಿತ್ರೆ : ಸಾಕು, ಬೇಡ, ಏನೊ ಹೇಗೊ.

ಸುಕನ್ಯೆ : ಹೇಳಿದ ಮಾತು ಕೇಳಿ ಆ ಕಡ್ಡಿ ತೆಗೆದುಕೊ.

(ಚಿತ್ರೆ ಕೊಡುವಳು)

ಚಿತ್ರೆ : ಆ ಹೊಳಪಿನ ಕಡೆ ಆಡಿಸಲು ಕೂಡಲೆ ಬೆಳಕು ಮುಚ್ಚಿಕೊಳ್ಳುತ್ತದೆ.

ಸುಕನ್ಯೆ : ಬೆಳಕು ನಂದಿ ಹೋಯಿತು (ಒಳಗಿಂದ) ಹಾ–ಆಹಾ– ಸರಿಹೋಯಿತು ! (ಒಳಗಿಂದ ಗಂಟಲು ಸರಿಮಾಡಿಕೊಂಡ ಶಬ್ದ) ಯಾರದೊ ಕಣ್ಣ ಬೆಳಕು.

ಚಿತ್ರೆ : ಪುನಃ ಅದೋ ನೋಡು. ಯಾರೊ ಇದ್ದಾರೆ, ಏನೊ ಇದೆ.

ಸುಕನ್ಯೆ : ಕೆದಕೋಣ ಬಾ ; (ಕಡ್ಡಿಯಿಂದ ಚುಚ್ಚುವಳು)

ಶಬ್ದ : ಯಾರದು ? ಹಿಂಸೆ ಮಾಡಬೇಡಿ. ಹೊರಟುಹೋಗಿ.

(ಸುಕನ್ಯೆ, ಹುಡುಗಿಯರು ಬೆದರಿ ಓಡಿ ಹೋಗುತ್ತಾರೆ)

– ದೃಶ್ಯ ಬೇರೆಯಾಗಿ –

ನಾಲ್ವರು ಅಧಿಕಾರಿಗಳು : ಮಹಾಪ್ರಭು ! ಪಾಳೆಯದಲ್ಲಿ ತುಂಬಾ ಕಷ್ಟವಾಗಿದೆ. ಹಿಡಿದ ಶಸ್ತ್ರಗಳ ಹಿಡಿತ ಹಾಗೇ ಇದೆ—ಪರಿವಾರಕ್ಕೆ ಉಸಿರಾಡಲು ಕಷ್ಟವಾಗಿದೆ.

ಕುದುರೆ, ನಿಶ್ಚೇಷ್ಟವಾಗಿ ನಿಂತಿವೆ.

ಜನರ ಅಂಗುಳು ಒಣಗಿವೆ.

ನಮಗೆಲ್ಲ ಒಳಗೆ ಬೇಗೆ, ತಾಪ.

ಇನ್ನೊಬ್ಬರು : ಪ್ರಭು ! ಎಂದೂ ಇಲ್ಲದ ಆಪತ್ತು. ಇದ್ದಕ್ಕಿದ್ದಂತೆ ಜನ ಕುಸಿದು ಬೀಳುತ್ತಿದ್ದಾರೆ. ತೆರೆದ ಕಣ್ಣಿಗೆ ಯಾರೂ ಏನೂ ಕಾಣಿಸದಂತಾಗಿದೆ.

ರಾಜ : ಆಶ್ಚರ್ಯ, ಆಶ್ಚರ್ಯ – ಆರ್ಯ ಗುರುಗಳಿಗೆ ನನ್ನ ನಮಸ್ಕಾರವನ್ನು ತಿಳಿಸು. ಏನಾಯಿತೊ ಏನೊ ! ಯಾವ ಅಚಾತುರ್ಯ ನಡೆಯಿತೊ. ಸಿಬ್ಬಂದಿ ಯವರನ್ನು ಕರೆ ; ಸುತ್ತಲ ಪ್ರದೇಶವನ್ನೆಲ್ಲ ಪರೀಕ್ಷಿಸಿ.

ಆಳುಗಳು : ಅಪ್ಪಣೆ...ಪ್ರಭು, ಗುರುಗಳು ದಯಮಾಡಿಸಿದ್ದಾರೆ.

ರಾಜ : ಪೂಜ್ಯರಿಗೆ ಅಭಿವಾದನೆ.

ಗುರು : ಆಯುಷ್ಮಾನ್ ಭವ. ಶ್ರೇಯೋಸ್ತು.

ರಾಜ : ಕುಳಿತುಕೊಳ್ಳಬೇಕು ; ಸುದ್ದಿ ಕೇಳಿದಿರ ?

ಗುರು : ಕೇಳಿದೆ. ಆಶ್ಚರ್ಯ. ವೈದ್ಯರು ತಮ್ಮ ಚಿಕಿತ್ಸೆಗೆ ಮೀರಿದೆಯೆನ್ನುತ್ತಾರೆ. ಮಹಾತ್ಮರಿಗೆ ಯಾರಿಗೊ ಅಪಚಾರವಾಗಿರಬೇಕು.

ರಾಜ : ಇಲ್ಲಿ ಯಾರೂ ಮಹಾತ್ಮರನ್ನು ಕಂಡ ಹಾಗಿಲ್ಲವಲ್ಲ. ಕಂಡಿದ್ದರೆ ಅವರ ಸೇವೆ ನಡಸಬಹುದಾಗಿತ್ತು.

ಗುರು : ಕಾಣದೆ ಯಾರೊ ತಪಸ್ವಿಗಳಿರಬಾರದೇಕೆ ಮಹಾರಾಜ ?

ರಾಜ : ಇಲ್ಲಿ ಯಾವುದಾದರೂ ಆಶ್ರಮವಿದೆಯೆ ? ಯಾವ ಲಕ್ಷಣವೂ ಇಲ್ಲವಲ್ಲ (ದಂಡಾಧಿಕಾರಿಗೆ) ರುದ್ರ ? ಇದೇ ಏನು ನಿಮ್ಮ ಎಚ್ಚರಿಕೆ ? ಯಾರಿಂದ ಏನು ತಪ್ಪು ನಡೆದಿದೆ ವಿಚಾರಿಸಿದಿರ ?

ರುದ್ರ : ನಮಗೆ ತಿಳಿದಂತೆ ಯಾರಿಂದಲೂ ಅಪಚಾರ ನಡೆದಿಲ್ಲ ಪ್ರಭು.

ರಾಜ : ಇಲ್ಲಿ ದಾನ ಧರ್ಮ ನಡೆದವೊ ? ಬಂದವರಿಗೆಲ್ಲ ಊಟ ಉಪಚಾರ ನಡಸಿದಿರೊ ? ಬಡವರಿಗೆ ವಸ್ತು, ಒಡವೆ ಹಂಚಿರೆಂದು ಹೇಳಿತ್ತು.

ರುದ್ರ : ಎಲ್ಲವನ್ನೂ ಅಪ್ಪಣೆಯಂತೆ ನಡಸಿಯಾಗಿದೆ. ಇನ್ನೇನು ಹೊರಡಲು ಸಿದ್ಧವಾಗಿತ್ತು. ಇದ್ದಕ್ಕಿದ್ದಂತೆ ಹೀಗಾಯಿತು.

ರಾಜ : ಎಲ್ಲರನ್ನೂ ವಿಚಾರಿಸಿ ಆಯಿತೆ ?

ರುದ್ರ : ಆಗಿದೆ. ಗಂಡಸರಲ್ಲಿ – ಸೈನ್ಯದವರಲ್ಲಿ ಯಾವ ಅಸಂಗತವೂ ನಡೆದಿಲ್ಲ.

ರಾಜ : ಹೆಂಗಸರಲ್ಲಿ ? ಮಹಾರಾಣಿಯವರನ್ನು ಕೇಳಿದಿರ ?

(ಮಹಾರಾಣಿ, ಹುಡುಗಿಯರು ಬರುತ್ತಾರೆ)

ರಾಣಿ : ಆರ್ಯಪುತ್ರ, ಪೂಜ್ಯರಿಗೆ ನಮಸ್ಕಾರ, ಸುದ್ದಿ ತಿಳಿಯಿತು. ತಮ್ಮಲ್ಲಿ ಹೇಳಿಕೊಳ್ಳಲು ಬಂದೆ. ನಮ್ಮಲ್ಲಿ ಯಾರೂ ಯಾವ ಅಪಚಾರವನ್ನೂ ಯಾರಿಗೂ ಮಾಡಿಲ್ಲ. ತಮ್ಮ ಅಪ್ಪಣೆಯಂತೆ ನಡೆದಾಗಿದೆ.

ಸುಕನ್ಯೆ : ಅಪ್ಪಾಜಿ—

ಚಿತ್ರೆ : ಇದನ್ನು ಏನೆಂದು ಹೇಳುವುದು, ಅವರಿಗೆ ತಿಳಿಸುವಷ್ಟೇನು ಮುಖ್ಯವಲ್ಲ ಆ ಸಂಗತಿ.

ರಾಜ : ಏನು ಏನು, ಯಾವ ಸಂಗತಿ ? ಏನು ಮಗು ನಿನ್ನ ಮಾತು ?

ಸುಕನ್ಯೆ : ಅಪ್ಪಾಜಿ—ಹುಡುಗಿಯರು ನಾವೆಲ್ಲ ಹೀಗೇ ಉಪವನದಂತಿರುವಲ್ಲಿ ಆಡುತ್ತ ಹಾಡುತ್ತ ವಿಹರಿಸುತ್ತಿದ್ದೆವು. ಆ ಮರದ ತೋಪಿನ ಸೆರಗಿನಲ್ಲಿ ಕಡೆಗೆ ಹುತ್ತದಂಥ ಏನೊ ಕಂಡಿತು. ಅಲ್ಲಿಗೆ ಹೋಗುತ್ತಲೂ ಯಾವುದೊ ಬೆಳಕು ಕಂಡಿತು. ಒಂದೇ ಒಂದು ಕಿರಣ. ಗುಂ ಗುಂ ಶಬ್ದವಾಗುತ್ತಿತ್ತು. ನಿಶ್ಚಲವಾಗಿತ್ತು. ಇದೇನೊ ಎಂದು ಅದನ್ನು ಕೆದಕಿದೆ. ಸ್ಪಷ್ಟವಲ್ಲದ ಮಾತು ಕೇಳಿಸಿದವು.

ಇಂಥದೆಂದು ತಿಳಿಯಲಿಲ್ಲ. ಬೆಳಕಿರುವ ಕಡೆ ಒಂದು ಕಡ್ಡಿಯನ್ನು ಚುಚ್ಚಿ ನೋಡಿದೆ, ಬೆಳಕು ನಿಂತಿತು. ಪುನಃ ಬೆಳಕು ತೆರೆದಾಗ ಅದನ್ನು ಹುತ್ತ ದಲ್ಲಿರುವಂತೆಯೇ ನಾನು ಕೆದಕಿದೆ. 'ಯಾರು ? ಹಿಂಸೆ ಮಾಡಬೇಡಿ, ಹೊರಟುಹೋಗಿ' ಎಂದಿತು ಮಾತು ;—ಅಷ್ಟೇ. ಮತ್ತಿನ್ನೇನೂ ಅಲ್ಲ. ಹೆದರಿಕೊಂಡು ಅಲ್ಲಿಂದ ನಾವೆಲ್ಲರೂ ಹಿಂತಿರುಗಿದೆವು. ಇದು ಬಿಟ್ಟು ಇನ್ನೇನೂ ನಡೆಯಲಿಲ್ಲ. ಯಾವುದೊ ಅಪರಾಧವಾಗಿರಬೇಕು, ನಮ್ಮಿಂದ.

ಅಧಿಕಾರಿ : ಮಹಾಪ್ರಭು, ಇಲ್ಲಿ ಯಾರೂ ಉಳಿಯುವ ಹಾಗಿಲ್ಲ. ಅರ್ಧ ಮಂದಿಗೆ ಉಸಿರು ಸಿಕ್ಕಿಕೊಳ್ಳುತ್ತಿದೆ. ಜನ ಕಣ್ಣು ತೇಲುಗುಡ್ಡೆ, ಮೇಲುಗುಡ್ಡೆ ಹಾಕು ತ್ತಿದ್ದಾರೆ. ಜೀವಜಂತುಗಳಿಗೆ ಜಲ ಮಲ ಕಟ್ಟಿದೆ. ನನಗೂ ನರಳುವಂತಾಗಿದೆ.

ಗುರು : ಮಹಾಪ್ರಭು, ನಾನೊಂದು ಮಾತು ಹೇಳಲೆ ?

ರಾಜ : ಅಪ್ಪಣೆ ಕೊಡಿಸಬೇಕು.

ಗುರು : ಇದು ಹಿಂದೆ ಭೃಗುಮಹರ್ಷಿಗಳು ತಪಸ್ಸು ಮಾಡಿದ್ದ ಸ್ಥಳ. ಈಗ ಬಹು ಕಾಲದಿಂದ ಇದು ಬಿಡುವಾಗಿದೆ. ಕಣ್ಣಿಗೆ ಬೀಳದಂತೆ ಯಾರೊ ತಪಃಸಿದ್ಧಿಗಾಗಿ ಇಲ್ಲಿ ಇರಬಹುದು.

ರಾಜ : ವಿಚಾರಿಸೋಣ ಬನ್ನಿ—ಮಗು, ಸುಕನ್ಯ, ಜೊತೆಗೆ ಬಾಮ್ಮ—ಹೆಣ್ಣುಗಳೇ ನೀವೂ ಬನ್ನಿ, ಹುತ್ತ ಯಾವ ಕಡೆ ಇದೆಯಮ್ಮ ?

ಸುಕನ್ಯೆ : ಇತ್ತ—ಹೀಗೆ—ಬರಬೇಕು—ಇತ್ತ—ಅದೊ—ಅಲ್ಲಿ.

ರಾಜ : ನಿಜವಾಗಿ ಆಶ್ಚರ್ಯಕರ. ಇದು ಹಾವಿನ ಹುತ್ತವಲ್ಲ (ಯಾವುದೊ ಆಳವಾದ, ದುರ್ಬಲವಾದ ಕಂಠದಲ್ಲಿ ಮಂತ್ರೋಚ್ಚಾರ ಕೇಳುತ್ತದೆ.) ಹಿರಿಯರು ತಪಸ್ವಿಗಳು ಇರಬೇಕು (ಗಟ್ಟಿಯಾಗಿ) ಮಹಾತ್ಮರಿಗೆ ಪ್ರಣಾಮಗಳು. ನಾನು ಶರ್ಯಾತಿ ಮಹಾರಾಜ. ತಮ್ಮಲ್ಲಿ ಅಪಚಾರ ನಡೆಯಿತಂತೆ.

ಧ್ವನಿ : ಹುಂ !

ರಾಜ : ಅರಿಯದ ಹುಡುಗರು ; ಆಟವಾಡುತ್ತ ಅರಿಯದೆ ಅಪಚಾರ ನಡಸಿದರು. ತಮ್ಮಲ್ಲಿ ಕ್ಷಮೆ ಬೇಡುತ್ತೇನೆ. ದಯಮಾಡಿ ದರ್ಶನ ಕೊಟ್ಟು ನಮ್ಮ ಅಪರಾಧಗಳನ್ನು ಮನ್ನಿಸಿ ಕಾಪಾಡಬೇಕು. ನಾವು ತಮಗೆ ಶರಣಾಗತರು.

ಧ್ವನಿ : ಅಪರಾಧ ಮಾಡಿದ್ದು ನೀನಲ್ಲವಲ್ಲ.

ರಾಜ : ಹೌದು ನನ್ನ ಮಗಳು. ವನವಿಹಾರ ಮಾಡುತ್ತಿದ್ದರು. ಲೋಕವನ್ನು ಅರಿಯದ ಹುಡುಗರು ಮಹಾತ್ಮರ ತಪಸ್ಸಿಗೆ ಭಂಗ ಮಾಡಿರಬೇಕು.

ಧ್ವನಿ : ಕಣ್ಣು ಚುಚ್ಚಿ ರಕ್ತ ಕಾರುವಂತೆ ಮಾಡಿದ್ದಾರೆ. ಇದು ಯಾವ ಹುಡುಗಾಟಿಕೆ. ರಾಜನ ಮನೆಯ ಮಕ್ಕಳು ಸರಿಯಾಗಿ ಬೆಳೆಯದಾದರೆ ಉಳಿದವರು ಹೇಗೆ ಬೆಳೆಯಬೇಕು.

ರಾಜ : ಪರಮಾಪಚಾರ. ಯಾವ ಶಿಕ್ಷೆಯನ್ನಾದರೂ ವಿಧಿಸಬಹುದು. ಪರಿವಾರದವರೆಲ್ಲ ನಿಮ್ಮನ್ನು ಬೇಡಿಕೊಳ್ಳುತ್ತಿದ್ದೇವೆ.

ಧ್ವನಿ : ರಾಜಕುಮಾರಿ ?

ಕುಮಾರಿ : ಅವಳೂ ಬೇಡಿಕೊಳ್ಳುತ್ತಿದ್ದಾಳೆ. ನನ್ನ ತಪ್ಪಿಗಾಗಿ, ತಂದೆಗೂ ರಾಜ ಪರಿವಾರದವರಿಗೂ ಯಾವ ತೊಂದರೆಯೂ ಆಗಬಾರದೆಂದು ಬೇಡಿಕೊಳ್ಳುತ್ತೇನೆ. ಸರ್ವಥಾ ತಪ್ಪಾಯಿತು.

ಧ್ವನಿ : ಸಾಮಾನ್ಯವಾದ ಮಾತೊ ? ಹೃದಯದಿಂದ ಬಂದುದೊ ?

ಕುಮಾರಿ : ತಮ್ಮಲ್ಲಿ ಒಮ್ಮೆ ತಪ್ಪಾಗಿ ನಡೆದುಕೊಂಡಾಯಿತು ; ಅರಿಯದೆ ಚಪಲದಿಂದ. ಪುನಃ ಅಂಥ ಅಪರಾಧವನ್ನು ಮಾಡಲಾರೆ.

ಧ್ವನಿ : ನಿಜವೆ ?

ಕುಮಾರಿ : ನಿಜ.

ಧ್ವನಿ : ಅಪರಾಧಿಗಳು ಶಿಕ್ಷೆಗೆ ಒಪ್ಪಿಕೊಂಡರೆ ಪರಿವಾರಕ್ಕೆ ಬಿಡುಗಡೆಯಾದೀತು.

ಕುಮಾರಿ : ಅನುಗ್ರಹಿಸಬೇಕು.

ಧ್ವನಿ : ಮಹಾರಾಜ, ನಿಮ್ಮ ಮಗಳು ಇಲ್ಲಿಯೇ ಉಳಿದು ನಮಗೆ ಸೇವೆಮಾಡಿಕೊಂಡಿರಲಿ.

ರಾಜ : ಮಹಾತ್ಮರೆ, ಅವಳಿನ್ನೂ ಸಣ್ಣ ವಯಸ್ಸಿನ ಹುಡುಗಿ. ಅರಮನೆಯ ಸುಖಭೋಗಗಳಲ್ಲಿ ಬೆಳೆದಾಕೆ. ಅರಿಯದ ಮಗು. ಕಾಡಿನಲ್ಲಿ ಒಂಟಿಯಾಗಿರುವುದು ಘೋರ ಶಿಕ್ಷೆ. ಈ ಒಂದರಲ್ಲಿ ಕ್ಷಮಿಸಬೇಕು. ಬೇರೆ ಯಾವ ದಂಡ ಬೇಕಾದರೂ ವಿಧಿಸಿ. ರಾಜಕುಮಾರಿಗೆ ಈ ವಯಸ್ಸಿನಲ್ಲಿ ಈ ಶಿಕ್ಷೆ ಬೇಡ.

ಧ್ವನಿ : ಶಕ್ಯವಿಲ್ಲ. ಕರ್ಮ ಮಾಡಿದವರೇ ಪ್ರಾಯಶ್ಚಿತ್ತ ಅನುಭವಿಸಬೇಕು.

ಸುಕನ್ಯೆ : ಅಪ್ಪಾಜಿ. ನಾನಿದಕ್ಕೆ ಒಪ್ಪಿಕೊಳ್ಳುತ್ತೇನೆ. ನಿಮ್ಮೆಲ್ಲರ ಮೇಲೆ ಕವಿದ ಅಪರಾಧದ ದುಷ್ಫಲ ನಿವಾರಿತವಾಗಲಿ.

ರಾಜ : ಅಮ್ಮ, ನಿನ್ನನ್ನು ಎಂಥ ಕಷ್ಟಕ್ಕೆ ಈಡುಮಾಡಿಕೊಂಡೆ ? ಮಹಾತ್ಮರೆ, ಈ ಒಂದು ಸಲ ಪುನಃ ತಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ೧೦೦ ಗ್ರಾಮಗಳನ್ನು ಆಶ್ರಮಕ್ಕೆ ದಾನವಾಗಿ ಕೊಡುತ್ತೇನೆ. ಸಾವಿರ ಕಪಿಲೆ ಕಳಿಸುತ್ತೇನೆ. ತಕ್ಕ ಪರಿವಾರ ನೇಮಿಸುತ್ತೇನೆ. ಅರಮನೆಯಿಂದ ಯಾವ ನೆರವು ಬೇಕಾದರೂ ಸರ್ವದಾ ಒದಗಿಸುತ್ತೇನೆ.

ಧ್ವನಿ : ಆಗದು. ಅವನ್ನು ಕಟ್ಟಿಕೊಂಡು ನನಗೇನಾಗಬೇಕು ? ರಾಜಕುಮಾರಿ ಇಲ್ಲಿ ನನ್ನಲ್ಲಿ ನಿಂತು ಆಜೀವ ಸೇವೆಯನ್ನು ಸಲ್ಲಿಸುವ ಹಾಗಿದ್ದರೆ ನೋಡಿ. ಇಲ್ಲವಾದರೆ ನಿಮ್ಮ ಇಷ್ಟ.

ರಾಜ : ತಪಸ್ವಿಗಳಲ್ಲಿ ಕರುಣೆಯ ಭಿಕ್ಷೆ ಬೇಡುತ್ತಿದ್ದೇವೆ ನಾವೆಲ್ಲ.

ಚ್ಯವನ : ನಾವು ಋಷಿಗಳೆಂಬುದನ್ನು ಕಾಣಿರ ? ಶಿಕ್ಷೆ ತಪ್ಪಬೇಕಾದರೆ ಇರುವ ಒಂದೇ ದಾರಿಯನ್ನು ಸೂಚಿಸಿದ್ದೇನೆ. ನಮ್ಮಲ್ಲಿ ನಿಯಮ ನಿಷ್ಠುರ.

ಗುರು : ಇದು ಅನಿವಾರ್ಯ ಪ್ರಸಂಗ ಮಹಾರಾಜ.

ರಾಜ : ಏನು ಮಾತು ಗುರುಗಳೆ ? ೧೫ ವಯಸ್ಸು ತಿರುಗದ ಮಗಳು. ಸುಕುಮಾರಿಯಾಗಿ ಬೆಳೆದವಳು. ಈ ಕಾಡಿನಲ್ಲಿ ವಾಸ ಮಾಡಿಕೊಂಡಿರಲು ಹೇಗೆ ಬಿಡಲಿ ?

ಸುಕನ್ಯೆ : ಆ ಮಾತು ಬೇಡ ಅಪ್ಪಾಜಿ. ನನ್ನ ತಪ್ಪಿಗೆ ನನಗೆ ಶಿಕ್ಷೆ. ಅದನ್ನು ನಾನು ಅನುಭವಿಸುತ್ತೇನೆ. ಅದೊಂದೇ ನಿಮ್ಮೆಲ್ಲರಿಗೆ ರಕ್ಷೆ.

ಚ್ಯವನ : ಅನುಭವಿಸುತ್ತೇನೆಂದು ಅನುಭವಿಸಬಾರದು. ಸಂತೋಷದಿಂದ ಇರಬೇಕಾಗುತ್ತದೆ.

ಸುಕನ್ಯೆ : ಆಗಬಹುದು. ಕಲಿಸಿಕೊಡಬೇಕು. ಹೇಳಿ ಮಾಡಿಸಿಕೊಳ್ಳಬೇಕು. ತಮ್ಮ ಪಾದಸೇವೆ ಸಲ್ಲಿಸುತ್ತೇನೆ.

ಚ್ಯವನ : ಮನಸಾ ?

ಸುಕನ್ಯೆ : ಮನಸಾ.

(ಶಿಥಿಲವಾದ ದೇಹವುಳ್ಳ, ತಪಸ್ಸಿಂದ ಕ್ಷೀಣವಾಗಿರುವ ಚ್ಯವನಋಷಿ ಎದ್ದು ಬರುತ್ತಾನೆ. ತೇಜಸ್ವಿ. ರಾಜಪರಿವಾರದವರು ಎರಗಿ ಪ್ರಣಾಮ ಮಾಡುತ್ತಾರೆ.)

ರಾಣಿ : ಅಮ್ಮ ನಿನಗೇನು ಗತಿ ಬಂತಮ್ಮ !

ಸುಕನ್ಯೆ : ಸದ್ಗತಿಯೇ ಅಮ್ಮ. ಮಹರ್ಷಿಗಳ ಸೇವೆ ಸಲ್ಲಿಸುತ್ತೇನೆ. ನನ್ನ ಸೌಖ್ಯ ಇನ್ನು ಇಲ್ಲಿಯೇ.

ಚ್ಯವನ : ಕೇಳಿದೆಯ ಮಹಾರಾಜ. ಇದಕ್ಕೆ ನೀನು ಒಪ್ಪಿದರೆ ಇಲ್ಲಿಂದ ಉಳಿದವರೆಲ್ಲ ಹೊರಡಬಹುದು. ನೆಮ್ಮದಿಯಾಗಿ.

ರಾಜ : ಬಹು ಕಠಿನ ನಿರ್ಬಂಧ, ಮಹಾತ್ಮರೆ.

ಚ್ಯವನ : ನಿಮ್ಮ ಮಗಳಿಗೆ ಹಾಗನ್ನಿಸಿದರೆ ಹೇಳಿ.

ಸುಕನ್ಯೆ : ನಿರ್ಬಂಧವಾಗುವುದಿಲ್ಲ ಅಪ್ಪಾಜಿ. ನನಗೆ ಆಶೀರ್ವಾದ ಮಾಡಿ ಹೊರಡಿ. ನಾನಿನ್ನು ಅರಸಕುಮಾರಿ ಅಲ್ಲ, ಮುನಿಪತ್ನಿ. ನನ್ನ ಸಮಸ್ತ ಕಲ್ಯಾಣವೂ ಇವರ ಅಡಿಯಲ್ಲಿ ದತ್ತ. ಚಿತ್ರೆ, ಲಲಿತೆ, ರಮಾ, ನಳಿನಿ ನನ್ನನ್ನು ಬೀಳ್ಕೊಡಿ (ಅವರನ್ನು ಆಲಿಂಗಿಸಿಕೊಳ್ಳುವಳು. ಕಣ್ಣೀರಿಡುತ್ತ ಅವರು ಬೀಳ್ಕೊಳ್ಳುವರು.)

ಚ್ಯವನ : ಶುಭಮಸ್ತು, ಚ್ಯವನರ ಇಷ್ಟಾರ್ಥಗಳು ನೆರವೇರಿಯಾವು, ಮಹಾರಾಜ. ನಿಮಗೆ ಚಿಂತೆ ಬೇಡ. ನಿಮ್ಮೆಲ್ಲರ ಮನಸ್ಸಿಗೆ ನೋವಾಗದಂತೆ ಈಕೆ ಇಲ್ಲಿ ಈ ಆಶ್ರಮಜೀವನ ನಡಸುತ್ತಾಳೆ. ಬೇಕೆನ್ನಿಸಿದಾಗ ತಾವೂ ಪರಿವಾರದವರೂ

ಇಲ್ಲಿಗೆ ಭೇಟಿಕೊಟ್ಟು ಅರಸಕುಮಾರಿಯನ್ನು ನೋಡಿಕೊಂಡು ಹೋಗುತ್ತಿರ ಬಹುದು. ಆಕೆಗೆ ಗಾಸಿಯಾಗದಂತೆ ನೋಡಿಕೊಳ್ಳುತ್ತೇವೆ.

ರಾಜ : ನಮ್ಮನ್ನು ಹರಸಬೇಕು.

(ಸುಕನ್ಯೆ ತಂದೆ ತಾಯಿಯರಿಗೆ ಎರಗುತ್ತಾಳೆ. ಕಣ್ತುಂಬ ಅವರು ಹರಸುತ್ತಾರೆ.)

(ಪರಿವಾರದವರೆಲ್ಲ ಎರಗುತ್ತಾರೆ.)

ಚ್ಯವನ : ಶ್ರೇಯೋಸ್ತು, ಹೋಗಿ ಬನ್ನಿ.

(ಕಣ್ಣೀರಿಡುತ್ತ ತಾಯಿ ಮಗಳನ್ನು ಕಟ್ಟಿಕೊಳ್ಳುತ್ತಾಳೆ)

ಸುಕನ್ಯೆ : ಅಮ್ಮ, ಅಳಬೇಡ—ನನ್ನ ಬದುಕು ಚೆನ್ನಾಗಿ ಮಾಡಿಕೊಳ್ಳುತ್ತೇನೆ. ಚೆನ್ನಾಗಿ ಸಾಕಿದಿರಿ. ಹೆತ್ತವರಿಗೆ, ಸಾಕಿದವರಿಗೆ ಅಪಕೀರ್ತಿ ತರಬಾರದು. ಅರಮನೆಯೇನು ಗುರುಮನೆಯೇನು ? ಋಷಿಗಳು ನಮಗೆ ಗುರು. ನನ್ನ ಭಾಗಕ್ಕೆ ಅವರೇ ದೇವರು, ಹೋಗಿ ಬನ್ನಿ.

(ಅವರು ನಿಷ್ಕ್ರಮಿಸುವರು)

[ದೃಶ್ಯ ಮೊದಲಿನಂತೆ ಮುಂದುವರಿಯುವುದು]

ಅಶ್ವಿನಿ : ನಿರ್ಬಂಧದ ಮದುವೆಯಾಯಿತೆನ್ನು.

ಸುಕನ್ಯೆ : ಸಮಯವನ್ನು ಒಪ್ಪಿಕೊಂಡುದು ನಾನು, ಮನಸಾ, ನನಗೆ ಯಾವ ಅಸುಖವೂ ಆಗಿಲ್ಲ.

ಅಶ್ವಿನಿ : ಮುದಿಗಂಡನನ್ನು ಮದುವೆಯಾಗಿ—

ಸುಕನ್ಯೆ : ಪಾಪ ಶಾಂತವಾಗಲಿ. ಅವರು ಮಹರ್ಷಿಗಳು. ಮೇಲಾಗಿ ಅವರು ನನಗೆ ಪತಿದೇವರು. ನನಗೆ ಯಾವ ಲೋಪವೂ ಕೊರತೆಯೂ ಆಗದ ಹಾಗೆ ನನ್ನನ್ನು ನಡಸಿಕೊಂಡಿದ್ದಾರೆ. ಅವರ ತಪಸ್ಸಿಗೆ ಅನುಗುಣವಾಗಿ ನಾನು ನಡೆದುಕೊಳ್ಳು ತ್ತಿದ್ದೇನೆ. ಒಂದು ದಿನ ಬೇರೆ ಎಣಿಸಿಲ್ಲ. ಇಹಪರ ಎರಡೂ ಅವರೇ ನನಗೆ.

ಅಶ್ವಿನಿ : ಯೌವನವನ್ನು ಹೀಗೆ ಸವೆಯಿಸಿ, ಅರಸಕುಮಾರಿಯಾದವಳು ಋಷಿ ಪತ್ನಿಯಾಗಿ—

ಸುಕನ್ಯೆ : ಪತಿನಿಂದೆಯನ್ನು ನಾನು ಕೇಳಲಾರೆ. ನನ್ನನ್ನು ಇನ್ನು ಹೋಗಲು ಬಿಡಿ.

ಅಶ್ವಿನಿ : ಒಂದು ಮಾತು ಸುಕನ್ಯೆ.

ಸುಕನ್ಯೆ : ಹೆಸರು ಹಿಡಿದು ಹೇಳದೆ ನುಡಿದರೆ ನಾನು ಕೃತಜ್ಞಳು.

ಅಶ್ವಿನಿ : ಮಹರ್ಷಿಗಳಿಗೆ ಯೌವನ ಬರುವಂತೆ ನಾವು ಮಾಡಬಲ್ಲೆವು.

ಸುಕನ್ಯೆ : ಅವರಿಗೆ ಆ ಅಗತ್ಯವಿಲ್ಲ.

ಅಶ್ವಿನಿ : ಲೋಕದೃಷ್ಟಿಯಲ್ಲಿಯೂ ಆಕೃತಿಯಲ್ಲಿಯೂ ಆದರೆ ನಷ್ಟವೇನು ?

ಸುಕನ್ಯೆ : ಸಂತೋಷ.

ಅಶ್ವಿನಿ : ಮಹರ್ಷಿಗಳಿಗೆ ಇವೊತ್ತು ನಡೆದುದನ್ನೆಲ್ಲ ಹೇಳುವೆಯ ?

ಸುಕನ್ಯೆ : ಸಂಗತಿಯ ಪ್ರತಿ ಅಂಶವನ್ನೂ ತಿಳಿಸಿ ಅವರ ಕ್ಷಮೆ ಬೇಡುತ್ತೇನೆ. ಪರಪುರುಷರೊಡನೆ ಈ ಮಾತನಾಡಬೇಕಾಗಿ ಬಂದ ಸಂದರ್ಭವನ್ನು ವಿವರಿಸುತ್ತೇನೆ.

ಅಶ್ವಿನಿ : ಅವರಿಗೆ ಕೋಪ ಉಂಟಾದರೆ ?

ಸುಕನ್ಯೆ : ಸತ್ಯವನ್ನು ನುಡಿದರೆ ಅವರಿಗೆ ಎಂದಿಗೂ ಕೋಪವಿಲ್ಲ. ನನ್ನ ಮನಸ್ಸನ್ನು ಅವರು ಬಲ್ಲರು.

ಅಶ್ವಿನಿ : ನಿನ್ನ ಯೌವನವನ್ನು ನೀನು ವ್ಯರ್ಥಮಾಡಿಕೊಳ್ಳುತ್ತಿದ್ದೀಯೆ.

ಸುಕನ್ಯೆ : ಅವರ ಸೇವೆಯಲ್ಲಿ ಕೃತಾರ್ಥ ಮಾಡಿಕೊಳ್ಳುತ್ತಿದ್ದೇನೆ. ಅಲ್ಲಿ ದೊರಕದ ಸುಖ ಬೇರೆ ನನಗೆ ದೊರಕದು ; ಬೇಕಿಲ್ಲ. ಅರಮನೆಯ ಸುಖಭೋಗ ಎಂಥವೆಂದು ನಾನು ಬಲ್ಲೆ.

ಅಶ್ವಿನಿ : ಯೌವನದ ಭೋಗವನ್ನು ?

ಸುಕನ್ಯೆ : ಸಾಕು ಆ ಮಾತು. ತಮ್ಮ ಸಮಯವಾವುದು ?

ಅಶ್ವಿನಿ : ನಾವು, ಅವರೊಪ್ಪಿದರೆ, ಅವರಿಗೆ ೨೫ ವಯಸ್ಸಿನಂಥ ಯೌವನ ಬರುವಂತೆ, ಅದು ಅವರಿಚ್ಛೆ ಬರುವವರೆಗೂ ನಡೆವಂತೆ—ಅನುಗ್ರಹ ಮಾಡಬಲ್ಲೆವು. ಆ ವಿದ್ಯೆ ನಾವು ಕಲಿತುದೆಂದು ಅವರಿಗೆ ಅರಿಕೆ ಮಾಡು.

ಸುಕನ್ಯೆ : ಆಯಿತು—ಆಮೇಲೆ.

ಅಶ್ವಿನಿ : ಯೌವನ ಬಂದ ಮೇಲೆ—ಋಷಿಗಳು ಒಂದು ಒಡಂಬಡಿಕೆಗೆ ಒಪ್ಪಬೇಕು—ನಮ್ಮ ಮೂವರಲ್ಲಿ ಯಾರನ್ನಾದರೂ ನೀನು ವರಿಸಲು ಅವಕಾಶಕೊಡಬೇಕು.

ಸುಕನ್ಯೆ : ಎಲ್ಲಿಯ ಮಾತು ? ಇದು ಪಾಪದ ಸಮಯ.

ಅಶ್ವಿನಿ : ಅಲ್ಲವೆಂದು ಅವರಿಗೆ ತಿಳಿಯುತ್ತದೆ.

ಸುಕನ್ಯೆ : ಅವರ ಮನಸ್ಸನ್ನು ನೀವೇನು ಬಲ್ಲಿರಿ ?

ಅಶ್ವಿನಿ : ನಿನ್ನನ್ನು ಒಲಿಸಿದವರಿಗೆ ತಿಳಿಯುತ್ತದೆ;—ನಿನಗೆ ಪುನಃ ಸ್ವಯಂವರ ಅಧಿಕಾರ ಕೊಡಬಹುದೆಂದು.

ಸುಕನ್ಯೆ : ನಾನು ಸ್ವಯಂವರೆಯೇ ಅಲ್ಲವೆ ?

ಅಶ್ವಿನಿ : ಅಲ್ಲ. ಹಿಂದೆ ಬಲಾತ್ಕಾರವಿತ್ತು.

ಸುಕನ್ಯೆ : ಈ ಮಾತನ್ನು ನಾನು ಕೇಳುವುದು ಸರಿಯಲ್ಲ. ತಮ್ಮ ಸಮಯವನ್ನು ಅವರಲ್ಲಿ ನಿವೇದಿಸುತ್ತೇನೆ.

ಅಶ್ವಿನಿ : ಅಷ್ಟು ಸಾಕು. ಅವರು ಒಪ್ಪುವುದಾದರೆ ಬರುವ ವಾರ ಇದೇ ದಿನ ಇಲ್ಲಿಗೆ ಇದೇ ಸಮಯಕ್ಕೆ ನೀವಿಬ್ಬರೂ ಈ ಸರೋವರದಲ್ಲಿಗೆ ಬರತಕ್ಕದ್ದು. ನಾವು ಕಾದಿರುತ್ತೇವೆ. ನಮ್ಮ ಇಷ್ಟಾರ್ಥವನ್ನು ನೆರವೇರಿಸು.

ಸುಕನ್ಯೆ : ಅವರಿಗೆ ತಿಳಿಸುತ್ತೇನೆ. ಅವರ ಅಪ್ಪಣೆಯಂತೆ ನಡೆದುಕೊಳ್ಳುತ್ತೇನೆ. ಈಗ ನನ್ನನ್ನು ಹೋಗಬಿಡಿ. ನಿಮಗೆ ವಂದನೆ. ದೇವರುಗಳ ಕಣ್ಣಿಗೆ ಬಿದ್ದ ಹೆಣ್ಣು ಕೆಡಲಿಲ್ಲವೆಂಬ ಕೀರ್ತಿ ನನ್ನದಾಗಲಿ. ನಿಮ್ಮ ಅನುಗ್ರಹವಿರಲಿ.

ಅಶ್ವಿನಿ : ಮುಂದಿನ ವಾರ—ಇದೇ ದಿನ—ಇದೇ ಹೊತ್ತಿಗೆ. ಹೋಗಿ ಬಾ. ಒಳ್ಳೆಯದಾಗಲಿ.

(ಸುಕನ್ಯೆ ಹೋಗುತ್ತಾಳೆ, ಅಶ್ವಿನಿಗಳು ಅದೃಶ್ಯರಾಗುತ್ತಾರೆ.)

## ದೃಶ್ಯ ೨

### ಚ್ಯವನರ ಆಶ್ರಮ

(ಚ್ಯವನರ ಪಾದತಲದಲ್ಲಿ : — ಅಳುತ್ತ ಸುಕನ್ಯೆ — ಅವಳನ್ನು ಸಮಾಧಾನ ಮಾಡುತ್ತ, ಋಷಿ)

ಚ್ಯವನ : ನೀನೇಕೆ ಅಳಬೇಕು ಸುಕು ? ದೇವತೆಗಳು ಹಾಗೆ ಮಾಡಬಾರದಿತ್ತು. ನಿಜ. ಆದರೆ ಅವರನ್ನು ತಡೆವವರು ಯಾರು ? ನಿನ್ನ ಕೈಯಲ್ಲಾಗುತ್ತಿತ್ತೆ ?

ಸುಕನ್ಯೆ : ಆಗದುದರಿಂದಲೇ ಅಂಥ ಮಾತನ್ನು ಕೇಳಬೇಕಾಗಿ ಬಂತು. ನನ್ನ ಜೀವ ಹಾರಿಹೋಯಿತು. ಶೀಲಭಂಗಕ್ಕೆ ಎಲ್ಲಿ ಎಡೆಯಾಗುವುದೊ ಎಂದು ತಲ್ಲಣಿಸಿದೆ. ಅದಕ್ಕಾಗಿ ತಮ್ಮ ಕ್ಷಮೆ ಬೇಡುತ್ತೇನೆ. ಒಳಗೇ ಮನಸ್ಸು ತಮ್ಮಲ್ಲಿ ಮೊರೆ ಯಿಡುತ್ತಿತ್ತು, ಶಕ್ತಿಗಾಗಿ.

ಚ್ಯವನ : ನಿನಗೆ ನನ್ನನ್ನು ಮದುವೆಯಾದ ಸಂದರ್ಭ ನೆನಪಿನಲ್ಲಿದೆಯೆ ? ನಮ್ಮಿಬ್ಬರ ಜೊತೆ ಬಲವಂತದಿಂದಾದುದು.

ಸುಕನ್ಯೆ : ಹಾಗೆ ಕಂಡಿರಬಹುದು. ಮೊದಲು ನನಗೂ ಕಂಡಿತು ನಿಜ. ಆದರೆ ಬೇಗ ನನ್ನ ಮನಸ್ಸು ಸ್ಥಿತಿಯನ್ನು ಅರಿಯಿತು.

ಚ್ಯವನ : ನಿನ್ನ ತಂದೆಯನ್ನು ಕಷ್ಟದಿಂದ ಬಿಡುಗಡೆ ಮಾಡಲು ಕಾರ್ಯ ನಡೆಯಿತಲ್ಲವೆ ?

ಸುಕನ್ಯೆ : ಇರಬಹುದು. ಆದರೆ ಒಪ್ಪಿದವಳು ನಾನು.

ಚ್ಯವನ : ತಂದೆ ನಿನ್ನನ್ನು ಒಪ್ಪಿಸಿ ತಾವು ಮುಕ್ತರಾಗಲು ಒಪ್ಪಿಕೊಂಡರಲ್ಲವೆ ? ಅವರಿಗೆ ಬೇರೆ ದಾರಿಯಿರಲಿಲ್ಲವೆನ್ನು—ನಿನ್ನನ್ನು ಒಪ್ಪಿಸಿದಲ್ಲದೆ ಆ ಮುಕ್ತಿ ಶಕ್ಯವಿಲ್ಲ ಎಂದಿತ್ತು ನನ್ನ ಸಮಯ ?

ಸುಕನ್ಯೆ : ತಂದೆ ತಾಯಿಗಳ ಬಿಡುಗಡೆ ಮಗಳ ಕರ್ತವ್ಯವಲ್ಲವೆ ?

ಚ್ಯವನ : ಹೌದು, ಅದು ಕರ್ತವ್ಯವಾಯಿತು. ಸಂದರ್ಭ ಹಾಗೆ ಒದಗದಿದ್ದರೆ ನೀನು ಮನಸಾ ನನ್ನಂಥವನನ್ನು ವರಿಸುತ್ತಿದ್ದೆಯ ?

ಸುಕನ್ಯೆ : ದಯಮಾಡಿ ಪರೀಕ್ಷೆಮಾಡಬಾರದು. ಕಾರಣಗಳನ್ನು ಹಾಗೆ ಬೆದಕಿದರೆ ಬಡವೆಗೆ ಬೇರೆ ನೆರವಿಲ್ಲ. ನಾನು ತಮ್ಮಲ್ಲಿ ಉಳಿಯಲು ಒಪ್ಪಿದಂದಿನಿಂದ ತಮಗೆ ಸರಿಯಾಗಿ ನಡೆದುಕೊಂಡಿದ್ದೇನೆಂದು ತಿಳಿಸಿ ಭರವಸೆ ನೀಡಬೇಕು. ಒಮ್ಮೆಯೂ ನನ್ನ ಮನಸ್ಸು ಬೇರೆ ಚಿಂತಿಸಿಲ್ಲ.

ಚ್ಯವನ : ಹುಚ್ಚಿ, ನಿನ್ನಲ್ಲಿ ಯಾವ ಲೋಪ ದೋಷ ಇವೆಯೆನ್ನಲಿ ? ಸರ್ವಥಾ ಸಾಧ್ವಿಯ ಹಾಗೆ, ಆಶ್ರಮದಲ್ಲಿ ಹುಟ್ಟಿ ಬೆಳೆದವಳ ಹಾಗೆ ನಡೆದುಕೊಂಡಿದ್ದೀಯೆ.

ಸುಕನ್ಯೆ : ಆ ಮಾತನ್ನು ಕೇಳಿ ಮನಸ್ಸಿಗೆ ಹರ್ಷವಾಯಿತು. ನನಗೆ ಬೇರಾವ ಸಂತೋಷವೂ ಬೇಕಿಲ್ಲ.

ಚ್ಯವನ : ನನ್ನ ಯೌವನ ನಿನಗೆ ಹರ್ಷ ತಾರದೆ ?

ಸುಕನ್ಯೆ : ಯಾವ ಕೊರತೆಯೂ ಕಾಣದಂತೆ ನನ್ನನ್ನು ನಡಸಿಕೊಂಡಿದ್ದೀರಿ.

ಚ್ಯವನ : ಲೋಕದ ಸುಖ, ಭೋಗ, ಸಂಪತ್ತುಗಳು ಇಲ್ಲಿಲ್ಲ.

ಸುಕನ್ಯೆ : ಮನಸ್ಸಿಗೆ ನೆಮ್ಮದಿ ಇರುವಾಗ ಅವೆಲ್ಲವುಗಳಿಂದ ಏನಾಗಬೇಕಿದೆ ? ನನಗೆ ಬೇಕಿಲ್ಲ.

ಚ್ಯವನ : ತಂದೆ ತಾಯಿಗಳಿಗೆ ದುಃಖವಿರುತ್ತದೆ ; ನಡು ವಯಸ್ಸು ಮೀರಿದ ಋಷಿಗೆ ಸಣ್ಣ ವಯಸ್ಸಿನ ನಿನ್ನನ್ನು ಆಹುತಿ ಕೊಟ್ಟಾಯಿತೆಂದು. ಅವರ ಮನಸ್ತಾಪ ವಾದರೂ ತಗ್ಗಲಿ.

ಸುಕನ್ಯೆ : ಈ ಬಗೆಯ ಯೋಚನೆಗೆ ನನ್ನ ಮನಸ್ಸು ಒಳಪಡದು.

ಚ್ಯವನ : ಅಶ್ವಿನಿಯರ ಸಮಯಕ್ಕೆ ಒಪ್ಪಿಕೊಳ್ಳೋಣ ಸುಕು.

ಸುಕನ್ಯೆ : ನನ್ನ ಕೈ ಬಿಡುತ್ತೀರ ? ತಿಳಿದು ತಿಳಿದು ಈ ಅಧರ್ಮಕ್ಕೆ ಒಪ್ಪಲು ನನ್ನ ಮನಸ್ಸು ಬಾರದು.

ಚ್ಯವನ : ದೇವತೆಗಳ ಕಣ್ಣು ಬಿದ್ದ ಹೆಣ್ಣು ನೀನು. ಲೋಕದ ಸಮಸ್ತ ಸಂಪತ್ತು ಅವರ ಮೊದಲ ತೃಪ್ತಿಗೆ ಈಡು. ನಮ್ಮ ಆಚಾರದಲ್ಲಿ ನಿಯಮ ಹಾಗೆ.

ಸುಕನ್ಯೆ : ನಾನು ನಿಮ್ಮ ಪತ್ನಿ, ನೀವು ಮಹರ್ಷಿಗಳು.

ಚ್ಯವನ : ಒಂದು ಸಲ ಅವರು ನಿನ್ನೊಡನೆ ನುಡಿದರೆ ನಾನು ಅದಕ್ಕೆ ಹೆದರಬಾರದು.

ಅವರ ಸಮಯವನ್ನು ಎದುರಿಸುವ ಕೆಚ್ಚು ಚ್ಯವನನಲ್ಲಿದೆ. ನನಗೆ ಮೊದಲೆ ಇವರ ಮಾತು.

ಸುಕನ್ಯೆ : ನನ್ನ ಪರೀಕ್ಷೆಗಾಗಿ ಅಲ್ಲವಷ್ಟೆ ? ಸರ್ವಥಾ ನನ್ನಲ್ಲಿ ಕಲುಷತೆ ಇಲ್ಲ.

ಚ್ಯವನ : ನನಗೆ ಆ ಶಂಕೆ ಎಂದಿಗೂ ಇಲ್ಲ. ದೇವತೆಗಳು ನನ್ನನ್ನೂ ನಿನ್ನನ್ನೂ ಪರೀಕ್ಷೆ ಮಾಡುತ್ತಿದ್ದಾರೆ. ನನ್ನ ಧರ್ಮದ ವಿಷಯದಲ್ಲಿ ನನಗೂ ಶಂಕೆಯಿದೆ.

ಸುಕನ್ಯೆ : ಶಾಂತಂ ಪಾಪಂ.

ಚ್ಯವನ : ಹಾಗಲ್ಲ ಸುಕು. ಆ ದಿನ ನೆನಸಿಕೊಳ್ಳಬಲ್ಲೆಯ ?

ಸುಕನ್ಯೆ : ಚೆನ್ನಾಗಿ.

ಚ್ಯವನ : ನೀವು ಎಷ್ಟೊ ಮಂದಿ ಆಡುತ್ತಿದ್ದಿರಿ; ಆ ಹುಯಿಲು, ಚಪ್ಪಾಳೆ, ನಗು, ಕೀಟಲೆ, ಕುಣಿತ, ಹಾಡು, ಗದ್ದಲವೋ ಗದ್ದಲ. ಗಂಡು ಹುಡುಗರ ಗೊಂದಲ ಬೇರೆ ತರದ್ದು.

ಸುಕನ್ಯೆ : ನಿಮ್ಮ ತಪಸ್ಸಿಗೆ ತುಂಬಾ ಅಡಚಣೆ ಉಂಟಾಗಿರಬೇಕು. ನಮಗೆ ಅದೊಂದೂ ತಿಳಿಯದು. ಇಚ್ಛೆ ಬಂದಂತೆ ವಿಹರಿಸಿದೆವು. ಅದು ನಿಜ.

ಚ್ಯವನ : ನೀನು ಹಾಡುತ್ತಿದ್ದೆ. ನೀವೆಲ್ಲ ಕೊರಲು ಸೇರಿಸಿದಿರಿ. ಎಲ್ಲ ಕಾಣಿಸಿದಿರಿ. ಆ ಸಮಯದಲ್ಲಿ ನನ್ನ ಕಣ್ಣಿಗೆ ನೀನು ಬಿದ್ದೆ. ಹತ್ತು ವರ್ಷದ ಸಂಯಮ ನನಗೆ ಮುರಿಯಿತು.

ಸುಕನ್ಯೆ : ಈ ಕಿವಿಯಿಂದ ಏನು ಕೇಳುತ್ತಿದ್ದೇನೆ ?

ಚ್ಯವನ : ನಿಜವನ್ನು ಸುಕನ್ಯ. ನಾನು ಭೃಗುಗಳ ಮಗ; ವಶಿತ್ವಕ್ಕೆ ಹೆಸರಾದವರು ಹಿರಿಯರು. ನನಗೂ ಒಮ್ಮೆಗೇ ಎದೆ ಜಿಲ್ಲೆಂದಿತು. ಮನಸ್ಸು ಚೆಲುವನ್ನು ಬಯಸಿತು. ತಪಸ್ಸಿನ ತಾಪ ದೇಹದ ತಾಪವಾಯಿತು. ಹುತ್ತದ ಮೇಲೆ ನೀನು ಬಾಗಿದಾಗ ನಿನ್ನನ್ನು ಮೆಲ್ಲಗೆ ಕರೆದೆ.

ಸುಕನ್ಯೆ : ಹೌದೆ ? ಏನೆಂದು ?

ಚ್ಯವನ : ಅದನ್ನು ಕೇಳಬೇಕೇನು ?

ಸುಕನ್ಯೆ : ಯಾವುದೊ ಮಾತು ಕೇಳಿಸಿತು. ಯಾರು, ಎಂದು ಸ್ಪಷ್ಟವಾಗಲಿಲ್ಲ.

ಚ್ಯವನ : ನಿನ್ನನ್ನು ಒಲಿಸಿಕೊಳ್ಳಲು ಹುತ್ತದಿಂದ ಹೊರಗೆ ಬರುತ್ತೇನೆನ್ನಿಸಿತ್ತು.

ಸುಕನ್ಯೆ : ಬರಬಹುದಾಗಿತ್ತಲ್ಲ.

ಚ್ಯವನ : ಕೂಡಲೆ ಕಡ್ಡಿಯಿಂದ ನೀನು ನನ್ನ ಕಣ್ಣನ್ನು ಚುಚ್ಚಿದೆ.

ಸುಕನ್ಯೆ : ಶತಾಪರಾಧವಾಯಿತು.

ಚ್ಯವನ : ಅಪರಾಧ ಹಾಗಿರಲಿ, ನನಗೆ ನಿನ್ನನ್ನು ಪಡೆಯಲು ದಾರಿ ಕಂಡಿತು.

ಸುಕನ್ಯೆ : ಆಶ್ಚರ್ಯ, ತಪಸ್ವಿಗಳ ಮನಸ್ಸು ಸಾಮಾನ್ಯರಂತೆ ಇರಬಲ್ಲದೆಂದು.

ಚ್ಯವನ : ತಪಸ್ವಿಗಳೂ ಮನುಷ್ಯರಲ್ಲವೆ ಸುಕು ? ನಾವು ಸಂನ್ಯಾಸಿಗಳಲ್ಲ. ತಪಶ್ಶಕ್ತಿ ಪಡೆದು ಲೋಕಹಿತಕ್ಕೆ ದುಡಿಯಬೇಕಾದ್ದು ನಮ್ಮ ಕರ್ತವ್ಯ. ಅದಕ್ಕೆ ವಶಿತ್ವ ಬೇಕು. ನಿಃಸ್ವಾರ್ಥತೆ ಬೇಕು.

ಸುಕನ್ಯೆ : ಏನು ಕೇಳುತ್ತಿದ್ದೇನೆ ?

ಚ್ಯವನ : ಹೌದು ಸುಕನ್ಯ, ನಾವು ವಿರಕ್ತರಲ್ಲ. ಸಂಸಾರತ್ಯಾಗಿಗಳಲ್ಲ. ಋಷಿ, ಋಷಿಪತ್ನಿಯರ ರೀತಿ ಲೌಕಿಕದ ರೀತಿ. ಆದರೆ ಲೋಕಸಂಗ್ರಹಕ್ಕೆ, ಉಪದೇಶಕ್ಕೆ ಮಿಸಲಾಗಬೇಕಾದ್ದು. ಸ್ವಚ್ಛವಾಗಿ ನಡೆಯುವುದನ್ನು ಕಲಿಯಬೇಕು, ಕಲಿಸಬೇಕು ನಾವು.

ಸುಕನ್ಯೆ : ಏನೊ ಅಂದಿರಿ, ಯಾವುದೊ ಬೇರೆ ದಾರಿ ಕಂಡಿತೆಂದು.

ಚ್ಯವನ : ನಿನ್ನನ್ನೂ, ನಿನ್ನವರನ್ನೂ ನನ್ನ ಇಷ್ಟಕ್ಕೆ ಸಿಕ್ಕಿಸಿಕೊಂಡು ಇಷ್ಟವನ್ನು ನೆರವೇರಿಸಿಕೊಳ್ಳಬಹುದೆಂದು. ಆಗ ನಿಮ್ಮ ಸೈನ್ಯವನ್ನು ಗಾಸಿಗೊಳಿಸಿದೆ. ಅವರು ಆ ಕೆಲವು ಗಂಟೆ ಪಟ್ಟಪಾಡು ಕೆಟ್ಟದ್ದು.

ಸುಕನ್ಯೆ : ಹೌದು; ಅದನ್ನು ನೋಡಿದೆ; ಸ್ವಂತವಾಗಿ ಅನುಭವಿಸಿದೆ; ಜೀವ ಕಷ್ಟವಾಯಿತು, ನಮ್ಮೆಲ್ಲರಿಗೂ.

ಚ್ಯವನ : ನಿಮಗೆ ಹೆಚ್ಚು ತಾಗಿರಲಾರದು, ಮುಂದೆ ನಡೆದುದನ್ನು ನೀನು ಬಲ್ಲೆ.

ಸುಕನ್ಯೆ : ನಿಜವಾಗಿ ನೀವು ನನ್ನನ್ನು ಬಯಸಿದಿರ ?

ಚ್ಯವನ : ಮತ್ತೇನೆಂದುಕೊಂಡೆ ?

ಸುಕನ್ಯೆ : ಪರಮಾಪಚಾರಕ್ಕೆ ದಂಡ ತೆರಬೇಕಾದರೆ ತೆರುತ್ತೇನೆ. ಸಂತೋಷವಾಗಿ ಎಂದುಕೊಂಡೆ. ಒಂದು ಕ್ಷಣ ಮಾತ್ರ ನನ್ನಿಂದ ಆದೀತೆ ಎನ್ನಿಸಿತು. ತಾಳುವುದು ಎಷ್ಟು ಕಷ್ಟವೊ ಎನ್ನಿಸಿತ್ತು. ಆದರೆ ಅಷ್ಟು ಜನದ ಹಿತದ ಮುಂದೆ ನನ್ನ ತ್ಯಾಗ ದೊಡ್ಡದೆನಿಸಲಿಲ್ಲ. ತ್ಯಾಗವೆಂದು ಕೂಡ ಅನ್ನಿಸಲಿಲ್ಲ.

ಚ್ಯವನ : ನಿನಗೆ ತ್ಯಾಗ ; ನನಗೆ ದಾನ. ನಿನ್ನನ್ನು ಪಡೆದು ಸಂತೃಪ್ತಿ ಪಡುತ್ತೇನೆಂದು ಕೊಂಡೆ.

ಸುಕನ್ಯೆ : ತೃಪ್ತಿಯಿಂದ ತಮ್ಮಲ್ಲಿ ನಡೆದುಕೊಳ್ಳಲು ನಾನು ಯತ್ನಿಸಿದ್ದೇನೆ.

ಚ್ಯವನ : ಅರಸುಕುಮಾರಿಯನ್ನು ಬಯಸಿ ಈ ನಿಷ್ಠುರಗಳಿಗೆ ಈಡುಮಾಡಿ ಗಾಸಿಪಡಿಸಿ ಅವಳನ್ನು ಕರ್ತವ್ಯದಲ್ಲಿ ನಿಲ್ಲಿಸಿಕೊಂಡರೆ ಅವಳ ಒಲವನ್ನು ಸಂಪಾದಿಸಬಹುದೆ ಎನ್ನಿಸಿತು, ನನಗೂ.

ಸುಕನ್ಯೆ : ನಿಮ್ಮ ಯತ್ನ ಪ್ರೀತಿಯದು, ಸಾಂತ್ವನದ್ದು ಎಂದು ನನಗೆ ಬೇಗ ಗೊತ್ತಾಯಿತು. ಅದರಲ್ಲಿ ಬಲಾತ್ಕಾರದ ದರ್ಪವನ್ನು ಒಂದುದಿನವೂ ಕಾಣಿಸಲಿಲ್ಲ. ಹೊಂದಿಕೊಳ್ಳುವುದು ನನಗೆ ಸುಲಭವಾಯಿತು. ಎಷ್ಟು ನಯದ ಉಪಚಾರ ! ನನ್ನ ಮನಸ್ಸನ್ನು ನೋಯಿಸಕೂಡದೆಂಬ ಮನಸ್ಸು ನಿಮ್ಮದು.

ಚ್ಯವನ : ನಿನ್ನ ಯುಕ್ತಿ ನನಗೆ ಅರ್ಥವಾಯಿತು. ಬೇಕಾದ್ದು ಬಂದರೆ ತೃಪ್ತಿ. ಬಂದುದರಲ್ಲಿ ತೃಪ್ತಿಪಡುವುದರಲ್ಲಿ ಅಷ್ಟೇನೂ ನಿಜವಾದ ಸಂತೋಷವಿಲ್ಲ.

ಸುಕನ್ಯೆ : ನಿಜವಾದ ಸಂತೋಷ ಯಾವುದು ?

ಚ್ಯವನ : ಹೇಗಿದ್ದವಳು ಹೇಗಾದೆ ಎಂಬ ಕಲ್ಪನೆ ಮರೆತು ಪೂರ್ತ ನನ್ನ ಪರವಾಗಿ ನಿನಗೆ ಹರ್ಷ ಉಂಟಾಗುವ ಹಾಗಾದ್ದು—ಅದು ಸಂತೋಷ.

ಸುಕನ್ಯೆ : ಅದನ್ನು ಈ ಎರಡು ಮೂರು ವರ್ಷಗಳಲ್ಲಿ ನಾನು ಪಡೆದಿದ್ದೇನೆ. ನನ್ನಾಣೆ ನಂಬಬೇಕು.

ಚ್ಯವನ : ನಿಮ್ಮ ತಂದೆ, ತಾಯಿ, ಅರಮನೆಯ ಸುಖ, ಬೇರೆಯ ಆಸೆ, ನಿರೀಕ್ಷೆ, ನಿನ್ನ ತ್ಯಾಗದ ನೆನಪು, ಯಾವುದರಿಂದಾಗಲಿ ನಿಟ್ಟುಸಿರು ಬಿಡುವ ಮನಸ್ಸಿದೆಯೆ ಸುಕನ್ಯಾ ?

ಸುಕನ್ಯೆ : ಪ್ರಮಾಣವಾಗಿ ಹೇಳಬಲ್ಲೆ. ಅಂಥ ಲೋಪ ಒಂದು ಕ್ಷಣವೂ ನನಗೆ ತೋರಿಲ್ಲ, ಬೇರೆ ಯಾವ ಬಯಕೆಯೂ ಬಂದಿಲ್ಲ. ಇಂಥ ಸಹಜವಾದ ಪ್ರೀತಿಯನ್ನು ನಾನು ಅರಮನೆಗಳಲ್ಲಿ ಕಂಡಿಲ್ಲ.

ಚ್ಯವನ : ಇಲ್ಲಿ ನಿನಗೆ ಸಂತೋಷವೇನಿದೆ ? ಚಿತ್ರವಿಲ್ಲ ; ಗಾನವಿಲ್ಲ, ಭೋಗವಿಲ್ಲ, ವಿಲಾಸವಿಲ್ಲ ; ಒಡವೆ, ವಸ್ತ್ರ, ಆಟ, ವಿನೋದ, ಸಮವಯಸ್ಕರ ಸಂಗ, ಯಾವುದೂ ಇಲ್ಲ—

ಸುಕನ್ಯೆ : ತಾವಿದ್ದೀರಿ. ತಮ್ಮ ಪ್ರೀತಿಯ ಅಮೃತಪಾನವಿದೆ. ಬೇಕಾದಂತೆ ವನ ವಿಹಾರ ಮಾಡಿದ್ದೇವೆ. ಕೊಳದಲ್ಲಿ ಆಟವಾಡಿದ್ದೇವೆ. ಘಟ್ಟ, ತೋಡು ತಿರುಗಾಡಿದ್ದೇವೆ. ಮುಗಿಲು, ಸಂಜೆ ಮಳೆ ಬೆಳೆ ನೋಡಿದ್ದೇವೆ. ಹಾಡುವ ಹಕ್ಕಿಗಳನ್ನು ಅಣಕಿಸಿದ್ದೇವೆ. ಆಮೇಲೆ ಈ ಹೂ, ಹಣ್ಣು, ಈ ಶಾಂತಿ, ಈ ವ್ಯಾಸಂಗ, ಅನುಷ್ಠಾನ, ಈ ಶುಚಿ ಇವು ಅರಮನೆಗಳಲ್ಲಿ, ಪಟ್ಟಣಗಳಲ್ಲಿ ಇಲ್ಲ. ಎಲ್ಲಿಂದ ಬರಬೇಕು ?

ಚ್ಯವನ : ಬದುಕಿನ ಹಕ್ಕಿಗೆ ಇವೆರಡೂ ರೆಕ್ಕೆಗಳಿದ್ದಂತೆ, ಒಂದಿಲ್ಲದೆ ಇನ್ನೊಂದಿದ್ದರೆ ಜೀವನಕ್ಕೆ ಸೊಗಸಿಲ್ಲ. ಎರಡೂ ಬಾಳಿಗೆ ಬರಬೇಕೆಂದೇ ಮಾನವನ ತಪಸ್ಸು, ಕಾರ್ಯ ಬೆಳೆಯಬೇಕು. ಇದನ್ನು ಲೋಕ ಅರಿಯಬೇಕು.

ಸುಕನ್ಯೆ : ತಮ್ಮ ಮಾತಿನಲ್ಲಿ ನಡತೆಯಲ್ಲಿ ಅದು ನನಗೆ ಅರಿವಾಗಿದೆ. ಆ ಆದರ್ಶ ನನ್ನ ಎದೆಗೆ ತುಂಬು ತಂದಿದೆ, ಮನಸ್ಸು ಹಿಗ್ಗಿದೆ. ಅರಮನೆಯಲ್ಲಿ, ಭೋಗ ಗಳಲ್ಲಿ ಸಿಕ್ಕದ ಸಂಪತ್ತು ಅದು. ಅಲ್ಲಿ ಭ್ರಮೆ ಬಹಳ. ಎಲ್ಲ ಅವಸರ ; ಆತುರ ; ಎಲ್ಲ ಕ್ಷಣಿಕ, ಕೃತಕ ; ಅತೃಪ್ತ ಲೋಕ ಅದು. ದರ್ಪದ ಪ್ರಪಂಚ ಅಲ್ಲಿ. ದಂಡದ ಬಲ ಸರ್ವಥಾ ; ಗೌರವಕ್ಕಿಂತ ಭಯ ಹೆಚ್ಚು ; ಸಂಶಯಗಳು ಅಧಿಕ.

ಚ್ಯವನ : ನಾನು ಹತ್ತು ವರ್ಷದ ತಪಸ್ಸಿನಿಂದ ಸಾಧಿಸದ್ದನ್ನು ನೀನು ಈ ೨–೩ ವರ್ಷಗಳಲ್ಲಿ ಗಳಿಸಿದೆ. ಇನ್ನು ನನಗೆ ಯಾವ ಚಿಂತೆಯೂ ಇಲ್ಲ.

ಸುಕನ್ಯೆ : ಆದರೆ ಈಗೇಕೆ ಅಶ್ವಿನಿಗಳ ಸಮಯವನ್ನು ಒಪ್ಪಬೇಕು ?

ಚ್ಯವನ : ನಾನೂ ನೀನೂ ಇಷ್ಟು ಸುಖದಲ್ಲಿದ್ದೇವೆಂದು ಜನವೂ ನಂಬಲೆಂದು ; ನಿನ್ನ ತಂದೆ ತಾಯಿಗಳಿಗೂ ಇದು ತಿಳಿಯಲೆಂದು.

ಸುಕನ್ಯೆ : ನನ್ನ ಪರೀಕ್ಷೆಗಾಗಿ ಈ ಬಗೆಯ ಯುಕ್ತಿವಾದವನ್ನು ಹೇಳುತ್ತಿಲ್ಲವೆ ?

ಚ್ಯವನ : ತೇರ್ಗಡೆಯ ಶಕ್ತಿ ಇರುವವರಿಗೆ ಯಾವ ಪರೀಕ್ಷೆ ಕಷ್ಟ ?

ಸುಕನ್ಯೆ : ಪರೀಕ್ಷೆಯೇ ಅನ್ನಿ ?

ಚ್ಯವನ : ಕ್ಷತ್ರಿಯ ಕನ್ಯೆಗೆ ಸ್ವಯಂವರದ ಅವಕಾಶವಿದೆ.

ಸುಕನ್ಯೆ : ನಾನು ಸ್ವಯಂವರೆಯೇ ಅಲ್ಲವೆ ?

ಚ್ಯವನ : ಅಂದು ನಿರ್ಬಂಧಕ್ಕೆ ಒಳಪಟ್ಟಿತ್ತು ಅಲ್ಲವೆ ?

ಸುಕನ್ಯೆ : ಈಗ ಪುನಃ ಲೋಕರೂಢಿಯಲ್ಲಿ ಸ್ವಯಂವರೆಯಾಗಬೇಕೆಂದೇನು ನಿಮ್ಮ ಮನಸ್ಸು ?

ಚ್ಯವನ : ತಪ್ಪೇನು ? ನಿನ್ನ ಮನಸ್ಸಿಗೂ ಒಂದು ನೆಮ್ಮದಿ ಬರುತ್ತದೆ. ನಿನ್ನನ್ನು ಬಲಾತ್ಕಾರದಿಂದ ಮಾತ್ರವೇ ಬಿಗಿದದ್ದಲ್ಲ. ನನ್ನವಳು ನೀನು ಸರ್ವಥಾ ಎಂದು ನನ್ನ ಮನಸ್ಸು ಅರಿಯಬೇಡವೆ ?

ಸುಕನ್ಯೆ : ಅಪನಂಬಿಕೆಯೆ ಸ್ವಾಮಿ ?

ಚ್ಯವನ : ನಿನಗೆ ಸ್ವಾತಂತ್ರ್ಯ ಕೊಡಬೇಕೆಂದು ನನ್ನ ಇಂದಿನ ಇಷ್ಟ.

ಸುಕನ್ಯೆ : ಆ ಸ್ವಾತಂತ್ರ್ಯಕ್ಕೆ ನಾನು ತಕ್ಕವಳಾಗಲೆಂದು ಹರಸಿ.

ಚ್ಯವನ : ನನ್ನ ಹರಕೆಗೆ ಆ ಬಲವಿಲ್ಲ—ಈ ಸನ್ನಿವೇಶದಲ್ಲಿ. ಅದು ಸ್ವಾರ್ಥವಾಗುತ್ತದೆ.

ಸುಕನ್ಯೆ : ನಿಮಗೆ ಮಮತೆ ಇಲ್ಲವೆ ನನ್ನಲ್ಲಿ ?

ಚ್ಯವನ : ನಾನು ಹಾಗೆ ಹೇಳಿದೆನೆ ? ನನ್ನ ಮನಸ್ಸನ್ನು ಸಂಕೋಚಗೊಳಿಸುತ್ತಿರುವ ಕ್ಲೇಶವನ್ನು ದಾಟಿದ ಹಾಗಾಗುತ್ತದೆ.

ಸುಕನ್ಯೆ : ನೀವು ಮುಟ್ಟಿದ ಹೆಣ್ಣಲ್ಲವೆ ?

ಚ್ಯವನ : ಯೋಜನಗಂಧಿಯನ್ನು ಪರಾಶರರು ಮುಟ್ಟಲಿಲ್ಲವೆ ? ಆಕೆಗೆ ಅವರು ವರ ಕೊಡಲಿಲ್ಲವೆ ? ಕನ್ಯಾತ್ವ ಪುನಃ ಬರಲಿ ಎಂದು ? ಅಂಥವಳನ್ನಲ್ಲವೇ ಗಂಗೆಯ ಧವನಾದ ಶಂತನು ಬಯಸಿದ್ದು ?

ಸುಕನ್ಯೆ : ಕಥೆ

ಚ್ಯವನ : ಅದಕ್ಕೆ ಸಮನಾದ ಅವಕಾಶವನ್ನು ಇಲ್ಲಿ ದೊರಕಿಸುತ್ತೇನೆ—ನನ್ನ ಅದೃಷ್ಟವನ್ನೂ—

ಸುಕನ್ಯೆ : ಅದೃಷ್ಟವನ್ನು ?

ಚ್ಯವನ : ಭಾಗ್ಯವನ್ನು ಪರೀಕ್ಷೆ ಮಾಡಿಕೊಳ್ಳೋಣ ಎಂದು—ಸತ್ಯದ ದರ್ಶನ ಆಗಲಿ.

ಸುಕನ್ಯೆ : ಪುನಃ ಕೇಳುತ್ತೇನೆ. ಇಂದು ನಡೆದುದಕ್ಕೆ, ನನ್ನ ನಡತೆಯನ್ನು ಕಂಡು ನಿಮಗೆ ಯಾವ ಕೋಪವೂ ಅಸಮಾಧಾನವೂ ಇಲ್ಲವೆಂದು ನಂಬಲೆ ?

ಚ್ಯವನ : ಎಷ್ಟು ಸಲ ಹೇಳಲಿ ? ಖಂಡಿತ ನನ್ನ ಒಂದೇ ಪಾಪಕ್ಕೆ ವಿಮೋಚನೆ ದೊರೆಯುತ್ತದೆಂದು ಅದಕ್ಕೆ ಅಭಿನಂದನೆ ಉಂಟಾಗಿದೆ.

ಸುಕನ್ಯೆ : ಪರೀಕ್ಷೆ ನಡೆಯಲಿ. ಒಪ್ಪಿಗೆ.

ಚ್ಯವನ : ನೀನು ರಾಜಪುತ್ರಿಯಾದರೂ ನಿನ್ನ ಮನಸ್ಸು ಋಜು ; ನಿನ್ನ ಸತ್ವ ಹಿರಿದು ಎಂದು ಅರಿತೇ ನಾನು ಇದಕ್ಕೆ ಒಪ್ಪುತ್ತಿದ್ದೇನೆ ಸುಕನ್ಯ.

ಸುಕನ್ಯೆ : ನನ್ನ ಪುಣ್ಯದ ಪರೀಕ್ಷೆಯಾಗಲಿ.

ಚ್ಯವನ : ಅಗ್ನಿಗೆ ಆರತಿ ಮಾಡು ನಡೆ. ಆಶ್ರಮದವರಿಗೆ ಭೋಜನ ನಡೆಯಲಿ.

ಸುಕನ್ಯೆ : ಈವರೆಗೆ ಎಲ್ಲ ಸಿದ್ಧವಾಗಿರುತ್ತದೆ. ಹೋಮಶಾಲೆಗೆ ದಯಮಾಡಿಸಿ.

ತೆರೆ

## ದೃಶ್ಯ ೩

### ಸರೋವರದ ದಂಡೆ

[ಚ್ಯವನ, ಸುಕನ್ಯೆ ಎಡದಿಂದ ಪ್ರವೇಶ. ಅಶ್ವಿನಿಯರು ಕಾಣಿಸಿಕೊಳ್ಳುತ್ತಾರೆ.]

ಅಶ್ವಿನಿ (೧) : ದಂಪತಿಗಳಿಗೆ

(೨) : ವಂದನೆ.

ಚ್ಯವನ : ಲೋಕದ ಭಿಷಜರಿಗೆ ಸ್ವಾಗತ ; ಕುಮಾರರು ಕುಶಲವೆ ?

ಅಶ್ವಿನಿ : ನಿಮ್ಮ ವಿಶ್ವಾಸದಿಂದ.

ಚ್ಯವನ : ನಿಮ್ಮ ಕುಶಲಕ್ಕೆ ಇನ್ನೊಬ್ಬರ ವಿಶ್ವಾಸ ಅಗತ್ಯವೆಂದು ತಿಳಿದಿರಲಿಲ್ಲ.

ಅಶ್ವಿನಿ : ಇಲ್ಲದೆ ಏನು ? ಸ್ಥಿತಿಗೆ ಅದು ಬೇಕಿಲ್ಲ, ಅದಕ್ಕೆ ಚ್ಯುತಿ ಬರಬಹುದಲ್ಲ ? ಋಷಿಗಳಿಗೆ ಸೇರಿದ್ದು ಅದು. ಲೋಕದ ಅನುಗ್ರಹವೂ ಅಗತ್ಯ.

ಚ್ಯವನ : ದೇವತೆಗಳು ಅಮರರು ; ಅವರ ಚ್ಯುತಿ ಲೋಕದಿಂದ ಆಗದು. ಅವರ ಪುಣ್ಯಕ್ಕೇ ಒಳಪಟ್ಟುದಲ್ಲವೆ ?

ಅಶ್ವಿನಿ : ಪುಣ್ಯ ಮುಗಿದರೆ ಲೋಕಕ್ಕೆ ಬೀಳಬೇಕಲ್ಲವೆ ?

ಚ್ಯವನ : ಕೇಳಿದ್ದೇನೆ. ನಿಮ್ಮ ಪುಣ್ಯ ಬೆಳೆಯುತ್ತಿದೆ ಎಂದು ಕೇಳಿದ್ದೇನೆ. ಬಹುಕಾಲ ನಿಮ್ಮ ಭೇಷಜದ ಉಪಕಾರ ಲೋಕಕ್ಕೆ ಇರಬೇಕೆಂದು ನನ್ನ ಹಾರೈಕೆ.

ಅಶ್ವಿನಿ : ಗುರುಗಳ ಆಶೀರ್ವಾದ.

ಚ್ಯವನ : ಆದರೆ ಇದೇನು ಸುಕನ್ಯಾ ಸಂಬಂಧದಲ್ಲಿ ನಿಮ್ಮ ವ್ಯವಹಾರ ?

ಅಶ್ವಿನಿ : ಆಕೆ ತಿಳಿಸಿರಬೇಕು.

ಚ್ಯವನ : ತಿಳಿಸಿದಳು. ನನ್ನ ಮುಪ್ಪನ್ನು ಕುರಿತು ನುಡಿದಿರಂತೆ.

ಅಶ್ವಿನಿ : ಹೌದು. ಆಕೆಯ ಯೌವನಕ್ಕೆ ತಕ್ಕ ದಾಂಪತ್ಯ ಆಕೆಗೆ ಇಲ್ಲವಾಯ್ತೆಂಬ ಕೊರತೆ ಕಂಡು ಆ ಮಾತನ್ನು ಆಡಿದ್ದುಂಟು.

ಚ್ಯವನ : ನಡತೆ ಕುಮಾರರಿಗೆ ತಕ್ಕದ್ದೊ ? ಋಷಿಪತ್ನಿ ಎಂದು ತಿಳಿದಮೇಲೂ ನಿಮ್ಮ ಬಯಕೆ ಹಾಗೆ ಬಲಿಯುಬಹುದೆ ?

ಅಶ್ವಿನಿ : ಬಯಕೆ ಎಂದಲ್ಲ. ವಿಚಾರಕ್ಕೆ ಮುನ್ನ, ನಿಜ ತಿಳಿವ ಮುನ್ನ ಆ ಸೌಂದರ್ಯವನ್ನು ನೋಡಿದೆವು. ಕಣ್ಣಿನ ಸೋಲು ಹೃದಯದ ಸೋಲಾಗಿ ಆ ಚಪಲವನ್ನು ತರಿಸಿತು.

ಚ್ಯವನ : ನೀವು ಭೋಗದ ಮಕ್ಕಳು. ಭೋಗ, ಕಾಮ ಸಹಜ. ಆದರೆ ಯುಕ್ತಾಯುಕ್ತ ವಿವೇಚನೆ ಜೊತೆಗಿದ್ದರೆ ಚೆನ್ನಾಗಿರುತ್ತದೆ.

ಅಶ್ವಿನಿ : ಆ ಬಗ್ಗೆ ಯೋಚಿಸಲಿಲ್ಲ. ನಮಗೆ ಯಾವುದನ್ನೂ ನೋಡದೆ ವಿಧಿಯಿಲ್ಲ. ಕಣ್ಣಿಗೆ ಬಿದ್ದದ್ದು ಚೆಲುವಾದರೆ ಅದನ್ನು ಮೆಚ್ಚುವುದು ತಪ್ಪಲ್ಲವಲ್ಲವೆ ?

ಚ್ಯವನ : ಮೆಚ್ಚುವುದು ಸರಿಯೆ ; ಅದನ್ನು ತಮಗೆ ಮಾಡಿಕೊಳ್ಳಬಯಸುವುದು ಧರ್ಮವಲ್ಲ.

ಅಶ್ವಿನಿ : ದೇವತೆಗಳ ದಿನಚರಿಯಲ್ಲಿ ಇಂಥವು ಆಗಾಗ ನಡೆಯುತ್ತವೆ. ಸರಿ ತಪ್ಪುಗಳ ಯೋಚನೆ ಮನುಷ್ಯರ ಮನಸ್ಸನ್ನು ಹೊಂದಿದ್ದು ; ಅವರ ಒಳಗನ್ನು ಸೇರಿದ್ದು.

ಚ್ಯವನ : ಎಂದರೆ ?

ಅಶ್ವಿನಿ : ಮನುಷ್ಯರು ದೇವತೆಗಳಿಗೆ ಒಲಿವರಾದರೆ ಅವರನ್ನು ಬಯಸುವುದು ತಪ್ಪಾಗದು. ಇಂದ್ರಾದಿಗಳಿಗೇ ಇದು ಹೊರತಲ್ಲವೆಂಬುದನ್ನು ತಾವು ಬಲ್ಲಿರಿ.

ಚ್ಯವನ : ಮಹೇಂದ್ರನಿಗೆ ಲಭಿಸಿದ ಗತಿಯನ್ನು ನೀವು ಬಲ್ಲಿರಲ್ಲವೆ ?

ಅಶ್ವಿನಿ : ಒಂದೆರಡು ಪ್ರಸಂಗಗಳಲ್ಲಿ ಅಚಾತುರ್ಯ ನಡೆದುದುಂಟು. ಆತನಲ್ಲಿ ಕಾಮುಕತೆ ಬೆಳೆದುದುಂಟು. ಆತನು ವಂಚನೆಗೆ ಎಡೆಗೊಟ್ಟುದುಂಟು.

ಚ್ಯವನ : ಅದಕ್ಕೆ ಆತ ಶಿಕ್ಷೆ ಅನುಭವಿಸಿದುದೂ ತಿಳಿದಿರಬೇಕು.

ಅಶ್ವಿನಿ : ಆತನ ಬಯಕೆಗಳು ಈಡೇರದ ಪ್ರಸಂಗಗಳು ಹಲವುಂಟು.

ಚ್ಯವನ : ಆ ಅದೃಷ್ಟ ಈವರೆಗೆ ಬಹುಮಟ್ಟಿಗೆ ನಡೆದಿದೆ ನಿಜ.

ಅಶ್ವಿನಿ : ನಮ್ಮ ಒಡೆಯರನ್ನು ಕುರಿತ ಈ ಮಾತು ಅವರಿಗೆ ಹೀನಾಯ. ನಾವು ಅಂಥವನ್ನು ಕೇಳಬಾರದು.

ಚ್ಯವನ : ನಿಮ್ಮ ಒಡೆಯ ನಿಜ ; ನಿಮಗೂ ಆತನಿಗೂ ತುಂಬಾ ಅಂತರವೆಂದು ಕೇಳಿದ್ದೇನೆ. ದೇವಲೋಕದಲ್ಲಿ ಹಲವಾರು ಹಕ್ಕು, ಸಮತೆ ಬೇರೆ ಬೇರೆಯೆನ್ನು ತ್ತಾರಲ್ಲವೆ ? ನಿಮ್ಮಲ್ಲಿ ಸಮಾನತೆ ಇಲ್ಲ.

ಅಶ್ವಿನಿ : ಅವೆಲ್ಲ ಅಲ್ಲಿನ ನಿಯಮಕ್ಕೆ ಸೇರಿದ್ದು. ನಮಗೆ ಇರುವ ಬೆಲೆ ಸ್ಥಾನ, ಮಾನ ನಮಗೆ. ಹೆಚ್ಚು ಬಯಸಿದರೆ ಬಂದೀತೆ ?

ಚ್ಯವನ : ಅದು ತೃಪ್ತಿ ತಂದಿದೆಯೆ ? ಒಮ್ಮೆಯೂ ನಿಮ್ಮ ಹೀನತೆಗೆ, ಅಸಮತೆಗೆ ನೀವು ವ್ಯಸನಪಟ್ಟಿಲ್ಲವೆ ?

ಅಶ್ವಿನಿ : ದೇವಲೋಕದ ರಚನೆ, ಆಡಳಿತ ವ್ಯವಸ್ಥೆ ದೇವೇಂದ್ರನಿಗೆ ಸೇರಿದ್ದು. ಅವನ ಶಕ್ತಿಗೆ ಮಿತಿಯಿಲ್ಲ. ಮಾನವರ ಯಜ್ಞಯಾಗಗಳ ಮೇಲೆಯೂ ಅವು ನಿಂತಿವೆ. ಈ ಪ್ರಶ್ನೆ ಕೇಳದಿದ್ದರೆ ಚೆನ್ನವಿತ್ತು. ಈಗ ಇಂದಿನ ಕಾರ್ಯದಲ್ಲಿ ತೊಡಗಲು ನೀವು ಸಿದ್ಧರಿದ್ದೀರೆಂದು ತಿಳಿಯಬಹುದೆ ?

ಚ್ಯವನ : ನನಗೆ ಸಮ್ಮತ. ಪುನಃ, ಬೇಕಾದರೆ, ಸುಕನ್ಯೆಯನ್ನು ಕೇಳಿ.

ಅಶ್ವಿನಿ : ಏನು ದೇವಿ, ನಮ್ಮ ಸಮಯವನ್ನು ಋಷಿಗಳಲ್ಲಿ ನಿವೇದಿಸಬೇಕೆಂದು ತಿಳಿಸಿದ್ದೆವು. ವಿಶದವಾಗಿ ತಿಳಿಸಿ ಆಗಿದೆಯೆ ?

ಸುಕನ್ಯೆ : ಅವರು ನಿಯಮಕ್ಕೆ ಒಪ್ಪಿದ್ದಾರೆ.

ಅಶ್ವಿನಿ : ಚಿಕಿತ್ಸೆಗೆ ಅವರು ಒಪ್ಪಿದ್ದರಾಯಿತು. ತರುವಾಯದ್ದು ನಿನ್ನ ಪಾಲಿಗೆ ಬೀಳುವ ಕಾರ್ಯ.

(ಸುಕನ್ಯೆ ಚ್ಯವನನ ಕಡೆ ಸಂಕೋಚದಿಂದ ನೋಡುತ್ತಾಳೆ)

ಚ್ಯವನ : ನಿನಗೆ ಸಂಕೋಚ ಬೇಡ ಸುಕನ್ಯಾ ; ನಿನಗೆ ಸ್ವಾತಂತ್ರ್ಯವನ್ನು ಕೊಟ್ಟಿರುವೆ ನಲ್ಲ ನಾನು ? ನನಗೆ ತಮ್ಮಲ್ಲಿ ಸಮಾನತೆ ಕೊಟ್ಟಿದ್ದಾರೆ ಕುಮಾರರು. ಅವರಂತಹ ಯೌವನ, ಕಾಂತಿ, ಶಕ್ತಿ ನನಗೆ ಒದಗಿಸಬಲ್ಲದ್ದು ಅವರ ದೈವಭೈಷಜ. ನನಗೆ ಉಪಕಾರವೇ. ಲೋಕಾನುಗ್ರಹ ಶಕ್ತಿ ಅವರಿಗಿರುವಂತೆ ನನ್ನ ಶಕ್ತಿಯೂ ಆ ಮೂಲಕ ಹೆಚ್ಚಾಗುವಂತೆ ಆಗಲೇಳು. ಅವಕಾಶ ದೊರೆತಾಗ ಏಕೆ ಪ್ರಯೋಜನ ಪಡೆಯಬಾರದು ? ಬಾರದ್ದನ್ನು ಬಯಸಬಾರದು. ಆಗುವುದನ್ನು ಒಲ್ಲೆನೆನ್ನ ಬಾರದು.

ಸುಕನ್ಯೆ : ಬಡವೆ ನನ್ನನ್ನು ಇಂಥಲ್ಲಿ ಏಕೆ ಎಳೆದಾಡಬೇಕು ?

ಚ್ಯವನ : ಸನ್ನಿವೇಶ ಹಾಗೆ ಹುಟ್ಟಿದರೆ ಯಾರೇನು ಮಾಡಬಹುದು ? ದೇವತೆಗಳ ಕಣ್ಣಿಗೆ ಬಿದ್ದ ಹೆಣ್ಣು ನೀನು ಎಂದೆನಲ್ಲವೆ ? ಬೀಳಬಾರದಿತ್ತು. ಯಾವ ಸಂದರ್ಭದಲ್ಲಿಯೊ ಬಿದ್ದೆ. ಅವರಿಗೆ ಇಂಥಲ್ಲಿ ಅಡ್ಡಿ ಆತಂಕ ಇಲ್ಲ. ಮಾನವವಾದ್ದೆಲ್ಲ ಅವರ ಉಪಭೋಗಕ್ಕೆ ತೆರೆದಿದೆ. ಅದು ಲೋಕ ನಿಯಂತ್ರಣದ ಒಂದು ಲಕ್ಷಣ. ಲೋಕದ ಮೊದಲ ಭಾಗ ದೇವತೆಗಳಿಗೆ.

ಸುಕನ್ಯೆ : ಇದನ್ನು ನಾನು ಕೇಳಬೇಕಾಗಿ ಬಂದುದು ನನ್ನ ದುಷ್ಕೃತ. ನನ್ನ ಪರೀಕ್ಷೆ ಆಗಲೇಬೇಕೆಂದು ತಮ್ಮೆಲ್ಲರ ಅಪೇಕ್ಷೆ. ತೀರ್ಮಾನ ಹಾಗೆ ಇರುವುದಾದರೆ ನಾನೇನು ಮಾಡಬಲ್ಲೆ ?

ಅಶ್ವಿನಿ : ಮಹರ್ಷಿಗಳಿಗೆ ಯೌವನ ಬರುವುದು ನಿನಗೆ ಅಸಮಾಧಾನವೆ ?

ಸುಕನ್ಯೆ : ಶಾಂತಂ ಪಾಪಂ. ಅವರ ತಪಸ್ಸು ಎಂದಿಗೂ ಅಭಿವೃದ್ಧಿಮುಖವಾಗಲಿ. ಅವರ ತೇಜಸ್ಸು ಲೋಕ ರಕ್ಷಕವಾಗಬಲ್ಲದ್ದು—ನಾನು ಕೇವಲ ಅವರ ಸಹಚರಿ ; ಪರಿಚರ್ಯೆಯಲ್ಲಿ ನಿಂತವಳು.

(ಅಶ್ವಿನಿಯರು ಒಬ್ಬರನ್ನೊಬ್ಬರು ನೋಡುತ್ತಾರೆ.)

ಚ್ಯವನ : ಕೇವಲ ಸಹಚರಿ ಮಾತ್ರವೇ ಅಲ್ಲ. ಸಹಧರ್ಮಚರಿ. ಮರೆಯಬೇಡ. ಇನ್ನು ವಿಳಂಬ ಏಕೆ ? ನೀನು ಅಪ್ಪಣೆಕೊಟ್ಟರೆ ಅವರ ಚಿಕಿತ್ಸೆಗೆ ನಾನು ಸಿದ್ಧವೆನ್ನಲೆ ?

ಸುಕನ್ಯೆ : ಪರೀಕ್ಷೆ ! ಚಿಕಿತ್ಸೆ ! ನನ್ನ ಪಾಡು ದೀನವಾಗಿದೆ.

ಚ್ಯವನ : ಚಿಂತೆ ಬೇಡ ಸುಕು, ಆಗಲಿ ಎನ್ನು ; ನಿನ್ನ ಇಷ್ಟವಿಲ್ಲದೆ ನಾನು ಒಡಂಬಡಿಕೆಗೆ ಒಪ್ಪುವ ಹಾಗಿಲ್ಲ. ಈ ಕ್ರಿಯೆ ನಿನ್ನ ಕಾರಣದಿಂದ ತೊಡಗಿದೆ.

ಸುಕನ್ಯೆ : ಹೆಣ್ಣಿಗೆ ಎಂದಿಗೂ ಪರಿಸ್ಥಿತಿ ಇದೇ.

ಚ್ಯವನ : ಸಂತೋಷದಿಂದ ಒಪ್ಪು. ಒಮ್ಮೆ ನಿನ್ನನ್ನು ಕೈಹಿಡಿದ ಪ್ರಸಂಗ ಅವರಿಗೆ ಗೊತ್ತಿದೆ. ಮನುಷ್ಯರ ಮನಸ್ಸನ್ನು ಅರಿವ ಶಕ್ತಿ ಅವರಿಗುಂಟು. ಅಳೆವ ಶಕ್ತಿ ಹಲವೇಳೆ ಇಲ್ಲ. ಅವರು ಬೆಲೆಗಟ್ಟುವ ರೀತಿ ಬೇರೆ. ಸತ್ವವೂ ಧರ್ಮವೂ ನಿರಂತರ ಪರೀಕ್ಷೆ ಕೊಡುತ್ತಲೇ ಇದ್ದರೆ ಮೇಲು. ಅದರ ಧಾತು ವೃದ್ಧಿಯಾಗಲು ಅದೊಂದೇ ಮಾರ್ಗ. ಇಲ್ಲವಾದರೆ ಜಡವಾದೀತು ; ಮಸುಕಾದೀತು.

ಸುಕನ್ಯೆ : ನನ್ನ ಮನಸ್ಸನ್ನು ಅಳೆಯಬೇಕೆಂದು ನಿಮ್ಮದೂ ಇಷ್ಟವಾದಂತೆ ಕಾಣುತ್ತದೆ. ಇಷ್ಟು ದೂರ ಪ್ರಮಾದ ಬೆಳೆದಮೇಲೆ ಆಗಲಿ. ನನ್ನ ಅದೃಷ್ಟ ಹೇಗೆ ಇದ್ದರೆ ಹಾಗೆ ನನ್ನ ಭಾಗದ ವಿಧಿ ನಡೆಸಲಿ.

ಚ್ಯವನ : ಯಾವುದೂ ಅದೃಷ್ಟವಲ್ಲ. ವಿಧಿ ಬೇರೆ ಅಲ್ಲ. ಸ್ವಭಾವವೇ ಅದೃಷ್ಟ. ಸ್ವಭಾವವೇ ವಿಧಿ. ನಿನ್ನ ಸ್ವಭಾವದಲ್ಲಿ ನಿಲ್ಲು. ಅದಕ್ಕೆ ನಿನಗೆ ಅಧಿಕಾರವುಂಟು.

ಆ ಅಧಿಕಾರ ನಿನಗೆ ಇಲ್ಲವಾಯಿತೆಂದು ಯೋಚನೆ ಎಂದಿದ್ದರೆ ಅದು ಉಂಟೆಂದು ಹೇಳುತ್ತಿದ್ದೇನೆ. ಒಂದು ಸಲ ವಶ ಮೀರಿ ಆಸೆಪಟ್ಟೆ ನಿಜ. ಅದು ಸರಿಯಲ್ಲ. ನೀನು ಸ್ವತಂತ್ರಳು. ಒಪ್ಪು. ನನಗೆ ಈ ಪರೀಕ್ಷೆ ಸಮ್ಮತ.

ಸುಕನ್ಯೆ : ತಮ್ಮ ಇಚ್ಛೆ—ಆಗಬಹುದು.

ಚ್ಯವನ : ಕುಮಾರರೆ ಕೇಳಿದಿರ ? ದೇವಿಯ ಒಪ್ಪಿಗೆ ದೊರೆತಾಯಿತು.

ಅಶ್ವಿನಿ : ಇದು ವಿಧಾನ, ಇದು ಸಮಯ : ನಾವು ಮೂವರು ಸರೋವರದ ನೀರಿನಲ್ಲಿ ಮುಳುಗುತ್ತೇವೆ. ಸ್ವಲ್ಪ ಕಾಲದ ಮೇಲೆ ಮೂವರೂ ಎದ್ದು ಬರುತ್ತೇವೆ. ಒಂದೇ ರೀತಿ ನಿನಗೆ ನಾವು ಕಾಣುತ್ತೇವೆ. ನಮ್ಮಂತೆ ಆತನು. ಯಾವ ಆತಂಕವೂ ಇಲ್ಲದೆ ನಮ್ಮ ಮೂವರಲ್ಲಿ ಒಬ್ಬರನ್ನು ಆಯಬಹುದು. ನಮ್ಮನ್ನು ಒಲ್ಲೆಯಾದರೆ ನಮಗೆ ಕೋಪವಿಲ್ಲ. ಚ್ಯವನರಿಗೂ ಇಲ್ಲವೆಂದು ನಂಬಿದ್ದೇನೆ.

ಚ್ಯವನ : ಇಲ್ಲ. ಕಾಯಾ, ವಾಚಾ, ಮನಸಾ. ಆಕೆಗೆ ಯಾವ ಅನಿಷ್ಟವೂ ಬಾರದಂತೆ ನನ್ನ ತಪಸ್ಸು ಆಕೆಯನ್ನು ಕಾಪಾಡಲುಳ್ಳದ್ದು. ಆ ಮಾತಿಗೆ ನನ್ನ ಹೃದಯ ಸಾಕ್ಷಿ. ಉರಿವ ಸೂರ್ಯನು ಸಾಕ್ಷಿ.

ಅಶ್ವಿನಿ : ನಮ್ಮಲ್ಲಿಯೂ ದೋಷ ಆರೋಪಣೆ ಆಗಬಾರದು.

ಚ್ಯವನ : ನಿಮಗೂ ಯಾವ ದೋಷವೂ ತಟ್ಟದು. ನನಗೆ ಅವಕಾಶ ಒದಗಿಸಿರುವುದರಿಂದ ಸಮಸ್ತ ಪರಿಣಾಮಗಳಿಂದಲೂ ನಿಮ್ಮನ್ನು ನನ್ನ ಅದೇ ತಪಸ್ಸು ಕಾಪಾಡಲುಳ್ಳದ್ದು.

ಅಶ್ವಿನಿ : ನಿಜವೊ ?

ಚ್ಯವನ : ನಿಜ.

ಅಶ್ವಿನಿ : ಈಗ ಮೂವರೂ ನೀರಿಗಿಳಿಯುತ್ತೇವೆ ದೇವಿ. ಬೇಗನೆ ಹಿಂದಿರುಗುತ್ತೇವೆ. ನಿಶ್ಚಿಂತಳಾಗಿರು. ನಮ್ಮಿಂದಾಗಲಿ ಋಷಿಗಳಿಂದಾಗಲಿ ನಿನಗೆ ಯಾವ ಕೇಡೂ ಸಂಭವಿಸದು.

[ಮೂವರೂ ನೀರಿನಲ್ಲಿ ಇಳಿದು ಹೋಗುತ್ತಾರೆ]

*

(ಇತ್ತ)

ಸುಕನ್ಯೆ : ಹೆಣ್ಣ ಪಾಡು ಬೀಳು. ಏಕೆ ನಾನು ಚೆಲುವೆಯಾಗಿ ಹುಟ್ಟಿದೆನೊ ? ರಾಜನ ಮಗಳಾಗಿ ಹುಟ್ಟಿ ಸುಖವಾಗಿದ್ದೆ. ಋಷಿಯ ಕಣ್ಣು ಬಿತ್ತು ; ಆತನ ಕೈಗೆ ಸಿಕ್ಕಿದೆ. ಅಲ್ಲಿ ಸೌಖ್ಯವಾಗಿದ್ದವಳ ಮೇಲೆ ದೇವತೆಗಳ ಕಣ್ಣೇಕೆ ಬೀಳಬೇಕಿತ್ತೊ ? ಆಗಲಾದರೂ ನನ್ನ ತಪ್ಪಿತ್ತು. ಈಗ ನಾನು ಮಾಡಿದ ತಪ್ಪೇನು ? ಅದನ್ನು ಇನ್ನು ಚಿಂತಿಸಿ ಫಲವೇನು ? ನನ್ನ ಭಾಗ್ಯವನ್ನು ನಾನು

ಸಾಧಿಸಬೇಕು. ದೇವರ ಅನುಗ್ರಹ ನನ್ನ ಮೇಲೆ ಇಳಿದು ನನ್ನನ್ನು ಕಾಪಾಡಲಿ. ನಾನು ಏಕಾಂಗಿ ; ತಂದೆ, ತಾಯಿ, ಪತಿ—ಈ ಆಯ್ಕೆಯಲ್ಲಿ ಯಾರೂ ನನ್ನ ನೆರವಿಗಿಲ್ಲ. ಈಗ—ಸ್ವಭಾವದಲ್ಲಿ, ಏಕಾಂಗಿಯಾಗಿ ನಿಂತಿದ್ದೇನೆ. ನಾನೇ ಆಯಬೇಕು.

ಆದರೆ, — ಏಕಿದೀ ಪರೀಕ್ಷೆ, ಮಾನವತಿಗೆ ?
ಲೋಕದೆಲ್ಲ ಕಾಮುಕತೆಯು ಕಣ್ಣ ಮರೆಗೆ,
ಬದುಕುವಳಿಗೆ — ಏಕಿದೀ

ತಾಯಿ ತಂದೆ ಎಲ್ಲವೆಂದು ಲೋಕವರಿಯುತಿರಲು ಬೆಳೆದೆ
ಯಾವುದೊಂದು ಚಪಲವೆನ್ನ ಕಾಡದಂತೆ ನಡೆದೆ,
ಈ ಮೂರು ವರ್ಷ

ಏನು ಕುತ್ತೋ ಆಪತ್ತೋ ಅಡಸಿತೆನ್ನ ಮೇಲೆ
ಏಗತಿಯೋ ಕಾಣದಾಯ್ತು ಯಾರು ಕಾವರೆನ್ನನು ?

ದನಿಗಳು : ನಿನ್ನ ಶೀಲ—ನಿನ್ನ ಶೀಲ ; ಸೌಭಾಗ್ಯ ; ನಿನ್ನ ಶುಚಿ
ಮನದ ಭಾವ, ಶಕ್ತಿಗಳು
—ಕಾವುವು ಅವು ನಿನ್ನನು.

ಸುಕನ್ಯೆ : ನನ್ನ ಶೀಲ, ನನ್ನ ಶುಚಿ, ನನ್ನ ಸೌಭಾಗ್ಯ ! ಅಹಹ !
ಒಂದು ಕ್ಷಣ ಆ ಮೊದಲ ದಿನ
ಯಾವುದೆಂತೊ—ಗತಿಯುದೆಂತೊ
ಎಂದುದುಂಟು ದುಗುಡದಲಿ—
ಮಾಯವಾಯ್ತು ಒಂದೇ ಕ್ಷಣದಿ
ಋಷಿಪತಿ ಇವರೊಲವಿನಲ್ಲಿ

ದನಿಗಳು : ಆಯ್ತು ಆಯ್ತು ಕಂಡೆವದನು
ಸುಕನ್ಯೆ : ಮರುಗಿದೆನೆ, ಕೊರಗಿದೆನೆ
ಬೇರೊಂದನು ಬೇಡಿದೆನೆ
ಎನ್ನ ಸಕಲ ಒಲವು ನಿಲವು
ಇವರಿಗಾಯ್ತು ಮೀಸಲಾಯ್ತು
ಎರಡು ಪ್ರೀತಿ ಬೆಳೆಯಲಾಯ್ತು.
ಏನು ಕುತ್ತೋ ಆಪತ್ತೋ

ಏತಕಿಂದು ಅಡಸಿತೊ, ಏಗತೆಯೊ—ಕಾಣದಾಯ್ತು
ಯಾರು ಕಾವರೆನ್ನನು ? ಯಾರು—?

ದನಿಗಳು : ನಿನ್ನ ಶೀಲ ; ನಿನ್ನ ಶುಚಿ.
—ಕಾವುವು ಅವು ನಿನ್ನನು.

ಸುಕನ್ಯೆ : ಅಗೋ (ನೀರಿನ ಮೇಲೇಳುವ ಶಬ್ದ) ದೇವರೆ, ದೇವರೇ, ದೈವವೇ ನನ್ನ ಮನಸ್ಸನ್ನು ಸ್ಥಿರ ಮಾಡು. ನನ್ನ ಶುಚಿಗೆ ನೆರವಾಗು. ಇದೇನಿದೇನು ? ಮೂರು ರೂಪಗಳೂ ಒಂದೇ. ಒಮ್ಮೆ ಪತಿರಾಯನಂತೆ ; ಒಮ್ಮೆ ಅಶ್ವಿನಿಗಳಂತೆ. ಇದರಲ್ಲಿ ಯಾರು ಯಾರು ? ಹೃದಯವೇ ನಿನ್ನ ನಿಷ್ಠೆ ನಿನ್ನನ್ನು ನಡಸಲಿ.

ಮೂರು ದನಿಗಳು : ಇದೋ ನೋಡು, ಮೂವರನ್ನೂ. ಎದುರಿಗೆ ನಿಂತಿದ್ದೇವೆ. ಇಚ್ಛೆ ನಿನ್ನನ್ನು ನಡಸಲಿ. ನೀನು ಸ್ವತಂತ್ರಳು. ನಿಜವಾಗಿ ನೀನಿಂದು ಸ್ವಯಂವರೆ. ಕ್ಷತ್ರಿಯ ಕನ್ಯೆಗೆ ಸ್ವಯಂವರ ಆಜನ್ಮ ಹಕ್ಕು.

ಸುಕನ್ಯೆ : ಹುಟ್ಟು ಕ್ಷತ್ರಿಯ ಕನ್ಯೆ ನಿಜ ; ಈಗ ಬ್ರಾಹ್ಮಣಿತಿ.

ಮೂವರು : ಅಂದು ಸ್ವಯಂವರವೇರ್ಪಡಬೇಕಿತ್ತು. ನಿರ್ಬಂಧವಾಯ್ತು.

ಸುಕನ್ಯೆ : ನಾನೊಪ್ಪಿ ಋಷಿಗಳಲ್ಲಿ ಸತೀತ್ವವನ್ನು ಕೈಕೊಂಡಿದ್ದೇನೆ. ಅಂದಿನಿಂದ ಒಂದು ಕ್ಷಣ ಅವರಿಗೆ ತಪ್ಪಲಿಲ್ಲ. ಅವರು ಹೇಳಿದಂತೆ ನಾನು—ಮನಸಾರ.

ಮೂವರು : ಪೂರ್ಣ ಸ್ವಾತಂತ್ರ್ಯದಲ್ಲಿ ವರಣವಾದರೆಯೇ ಸ್ವಯಂವರಕ್ಕೆ ಕೀರ್ತಿ ; ಸಿದ್ಧಿ.

ಸುಕನ್ಯೆ : ಅಶ್ವಿನಿಗಳು ನೀವಿಬ್ಬರು — ಯೌವನ ಪಡೆದ ಋಷಿಗಳು ಎದುರಿಗಿರಲು ಯಾರನ್ನಾದರೂ ವರಿಸಬಹುದೆಂಬಲ್ಲವೆ ತಾವು ಹೇಳಿದ್ದು ? ಮೂವರೂ ಒಂದೇ ರೀತಿ ಕಂಡರೆ ನನಗೆ ಭ್ರಮೆಯಾಗದೆ ಹೇಗೆ ? ನಿಮ್ಮಲ್ಲಿ ದೇವತೆಗಳು ಯಾರು ? ಋಷಿರಾಯನಾರು ? ಅದನ್ನು ಅನುಗ್ರಹಿಸುವಂತೆ ಆಗಲಿ ?

ಮೂವರು : ದೇವತೆಗಳು, ದೇವತೆಗಳೇ ; ಮನುಷ್ಯರು ಮನುಷ್ಯರೇ. ಋಷಿಯಾಗಲಿ, ರಾಜನಾಗಲಿ, ಸಾಮಾನ್ಯ ಮನುಷ್ಯರಾಗಲಿ —

ಸುಕನ್ಯೆ : ಈ ಕಷ್ಟವನ್ನೇನೆಂದು ಹೇಳಲಿ ? ಇದೊ ಮೂವರು ನನಗೆ ಹಿರಿಯರು. ನನ್ನ ಸ್ವಯಂವರ ಧರ್ಮ್ಯವಾಗಲೆಂದು ಹರಸಬೇಕು.

ಮೂವರು : ತಥಾಸ್ತು.

ಸುಕನ್ಯೆ : ಈ ಕಷ್ಟ ದಮಯಂತಿಗೆ ಬಂತು. ಅಂದು ಆಕೆಗೆ ದೇವತೆಗಳು ಒಲಿದರು. ದೇವತೆಗಳು ನನಗೂ ಒಲಿಯಬೇಕು. ಅವರಲ್ಲಿ ನಮ್ರವಾದ ಪ್ರಾರ್ಥನೆ

ಅದು. ನಾನು ಮಾನವಿ. ನನಗೆ ನಿಮ್ಮ ಮನಃಶಕ್ತಿ ದಿವ್ಯಶಕ್ತಿಯಾಗಲಿ ಋಷಿಗಳ ತಪಃಶಕ್ತಿಯಾಗಲಿ ಎಲ್ಲಿ ಬರಬೇಕು ? ನನ್ನ ಮನಸ್ಸೊಂದೇ ನನಗೆ ನೆರವು. ನನ್ನ ನಿಷ್ಠೆ ಬೆಂಗಾವಲು.

ಮೂವರು : ಅವು ನಿನಗೆ ಕಾವಲಾಗಲಿ. ನಿನ್ನ ಮನಸ್ಸು, ಬದುಕು, ನಿಷ್ಠೆ ಫಲಿಸಲಿ, ನಮಗೆ ಬೇಸರವಿಲ್ಲ.

ಸುಕನ್ಯೆ : (ತನ್ನಲ್ಲಿ) ಮೂವರಲ್ಲಿ ಇವರಿಬ್ಬರ ಕಣ್ಣುಗಳು ತೆರೆದೇ ಇವೆ ; ಇವರ ದೇಹಜ್ಯೋತಿಗೆ ನೆರಳಿಲ್ಲ ; ಈ ಇಬ್ಬರ ಕಾಲೂ ನೆಲವನ್ನು ಮುಟ್ಟುತ್ತಿಲ್ಲ. ಆದರೆ ಮೂವರಲ್ಲಿಯೂ ಆತುರವಿಲ್ಲ.

(ಪ್ರಕಾಶ) ಪುನಃ ಕೇಳುತ್ತೇನೆ—

ಏನಿದೀ ಪರೀಕ್ಷೆಯಿದು ಮಾನವತಿಗೆ ನನಗೆ
ಕುಲಕೆ ಬೆಲೆಯೆ, ಮನಕೆ ಬೆಲೆಯೆ
ಮನದ ನೇರ ಬಯಕೆಗೆನಲೆ,
ಎನ್ನ ಪುಣ್ಯದೆಲ್ಲ ಸೊಬಗು ಕವಿದು ಬರಲಿ ಇಂದು ಎನಗೆ
ಹವನ, ಕವನ, ನೇಮ, ಕರುಮ
ಎನ್ನ ಬೆನ್ಗೆ ನಿಲ್ಲಲಿ.
ಎಂದಿನಿಸೂ ಚಲಿಸದಿದ್ದ ಮನಸಿನಾಸೆ ಕಾಪಾಡಲಿ.
ಅರಿಯದಂತೆ ದೇವರುಗಳ ಕಾಮನವನು ಕೆರಳಿಸಿದೀ
ಲೋಪವಿರಲು ಮಾಯಗೊಳಲಿ
ಎನ್ನ ಪತಿಯ ಪಾದವೆನಗೆ ಅಂದಿನಂತೆ ನಿಲ್ಲಲಿ.
ಎಂದೆಂದಿಗು ಫಲಿಸಲಿ.
ಸತಿಯ ಭಾಗ್ಯ, ವ್ರತದ ಭಾಗ್ಯ, ಪತಿಯ
ಪ್ರೇಮದೆಲ್ಲ ಭಾಗ್ಯ ಎನ್ನ ಪಾಲ್ಗೆ ನಿಲ್ಲಲಿ.
ಎನ್ನ ಶೀಲ, ಚಾರಿತ್ರ, ಈ ಕ್ಷಣದಲಿ ಕಾಯಲಿ.

ದನಿಗಳು : ಕಾಯಲಿ.

ಸುಕನ್ಯೆ : ಇದೋ ಪೂಜ್ಯರಿಗೆ ವಂದನೆ. ನನ್ನ ಮನಸ್ಸು ಒಂದು ದಿನ, ಒಂದು ಕ್ಷಣ, ಕ್ಷಣದಂಶದಲ್ಲಿ ಒಂದಂಶ ಮಹರ್ಷಿಗಳ ಕಡೆಯಿಂದ ಓಲದಿದ್ದುದು ನಿಜವಾದರೆ ನನ್ನ ಕೊರಳ ತಾಳಿಯ ಭಾಗ್ಯ, ಪುಣ್ಯ, ಅವರಿಂದಲೇ ಉಳಿಯಲಿ.

ಮೂವರು : ದೇವ ಭಾಗ್ಯ ?

ಸುಕನ್ಯೆ : ನನಗೆ ಬೇಡ.

ಮೂವರು : ಅಮರತ್ವ ?

ಸುಕನ್ಯೆ : ಒಲ್ಲೆ.

ಮೂವರು : ಋಷಿಪತ್ನಿಯಾಗಿ ಏನು ಸುಖ ? ಯಾವ ಭೋಗ ? ಒಂದು ಪಂಜರದ ಗಿಳಿ ನೀನು ಇಲ್ಲಿ. ಕಲೆಯೆ ? ವಿಲಾಸವೆ ? ಸಂಚಾರವೆ ? ಭೋಗವೆ ? ಏನಿದೆ ?

ಸುಕನ್ಯೆ : ಅವಾವುವೂ ನನಗೆ ಬೇಕಿಲ್ಲ. ನಾನು ಈವರೆಗೆ ಉಂಡಿರುವ ಪ್ರೀತಿಗೆ ಎಲ್ಲೆ ಇಲ್ಲ. ಅದಕ್ಕಿಂತ ಬೇರೆ ಯಾವುದೂ ಬೇಕೆನ್ನಿಸಿಲ್ಲ. ಇದೊ : ನಾನು ತಮಗೆ ಸಾಷ್ಟಾಂಗ ಪ್ರಣಾಮ ಮಾಡುತ್ತೇನೆ. ದೇವತೆಗಳು ನನಗೆ ತಂದೆಗೆ ಸಮಾನ ; ಪತಿಪ್ರೀತಿಯ ಅನುಗ್ರಹ ನನಗೆ ಪುನಃ ದೊರೆವಂತಾಗಲಿ ; ಇದೊಂದೇ ನನ್ನ ಇಚ್ಛೆ. ಇಲ್ಲವೆಂದರೆ ಈ ಸಮಯದಲ್ಲಿಯೇ ಮೃತ್ಯುವನ್ನು ಅನುಗ್ರಹಿಸಬೇಕು.

ಅಶ್ವಿನಿ : ಸಾಹಸದ ಬಗೆ ಬೇಡ ಸುಕನ್ಯಾ. ನೀನು ಪುಣ್ಯಶಾಲಿ. ದೇವಲೋಕದ ಒಸಗೆ ದುಂದುಭಿ ಮೊಳಗಲಿ. ಪುಷ್ಪವೃಷ್ಟಿಯಾಗಲಿ. 'ದೇವೀ ವವ್ರೇ ಸ್ವಕಂ ಪತಿಂ' ಎಂದು ಮೂರು ಲೋಕಕ್ಕೂ ಘೋಷಣೆಯಾಗಲಿ. (ವಾಕ್ಯ ಮೊಳಗುತ್ತದೆ) ನಿನ್ನ ಋಷಿಭರ್ತೃವಿನೊಡನೆ ನಿರಂತರ ಸೌಖ್ಯದಿಂದ ತುಂಬಿದ ಯೌವನದ ಸರಸಗಳಲ್ಲಿ ಬದುಕು. ನಮಗೆ ಯಾವ ಆಗ್ರಹವೂ ಇಲ್ಲ. ದೇವತೆಗಳಿಗೆ ಆಗ್ರಹ ಸಲ್ಲದು. ಋಷಿವರ್ಯ, ವಿಧಾನಕ್ರಿಯೆ ಹೀಗಾದುದಕ್ಕೆ ಕ್ಷಮಿಸಬೇಕು.

ಚ್ಯವನ : ಪರೀಕ್ಷೆ ಫಲಿಸಿತೆ ?

ಅಶ್ವಿನಿ : ಸತ್ಯಕ್ಕೆ ಚ್ಯುತಿ ಇಲ್ಲ. ಒಂದು ರೀತಿ ನಿಮ್ಮಿಬ್ಬರ ಶೀಲ ಪರೀಕ್ಷೆ ಆಗ ಬೇಕಿತ್ತಲ್ಲವೆ ? ಇನ್ನು ಮೇಲೆ ನಿಮ್ಮಿಬ್ಬರ ಮನಸ್ಸಿನಲ್ಲಿ ಯಾವ ಕಾಲುಷ್ಯವೂ ಸಂಕೋಚವೂ ಸಂಶಯದ ನೆಳಲೂ ಆಡದು. ಇವಳ ಮನಸ್ಸು ಹೇಗೊ ಏನೊ ಎಂಬ ಸಂಶಯ ನಿಮ್ಮಲ್ಲಿತ್ತು. ಅವರನ್ನು ಸರ್ವಥಾ ಒಪ್ಪಿಯೇ ಮಡದಿ ಯಾಗಿದ್ದೇನೆ ಎಂಬ ನಂಬಿಕೆ ಆಕೆಯಲ್ಲಿ ಊರಲಿ. ನಾವು ಹೋಗಿ ಬರುತ್ತೇವೆ. ನಿಮ್ಮ ದಾಂಪತ್ಯದ ಕಥೆ ಆಚಂದ್ರಾರ್ಕವಾಗಲಿ. ತಾಯಿ, ನಮಗೆ ಅಪ್ಪಣೆ ಕೊಡು. ನಿನ್ನನ್ನು ತಾಪಗೊಳಿಸಿದ್ದಕ್ಕೆ ಕ್ಷಮಿಸು.

ಸುಕನ್ಯೆ : ಬದುಕಿದೆ. ನಿಮ್ಮ ಪ್ರಸಾದ ಅದು. ಈ ಸೌಜನ್ಯಕ್ಕೆ ನಾನೇನು ಕೊಡಲಿ ?

ಚ್ಯವನ : ಈ ಉಪಕಾರಕ್ಕೆ ನಾನೇನು ಕೊಟ್ಟೇನು ? ಒಂದು ಕ್ಷಣ ನನ್ನ ಕಾಮ ಕಾಮುಕತೆಯಾಗಿತ್ತು. ಇಂದು ಶುದ್ಧವಾಗಿದೆ. ನನ್ನ ಪ್ರೀತಿಯ ಹೆಣ್ಣು ನನಗೆ ಸ್ವಯಂವರೆಯಾಗಿ ಪುನಃ ದೊರೆತಳು. ನಿಮ್ಮ ಅನುಗ್ರಹದಿಂದ.... ಒಂದು ಮಾತು ಕುಮಾರರೆ : ನಮ್ಮ ಮಾವಂದಿರು ಇಲ್ಲಿ ಇಷ್ಟರಲ್ಲಿಯೇ

ಸರ್ವಾರ್ಥಸಿದ್ಧಿ ಯಾಗವನ್ನು ಮಾಡಲುಳ್ಳವರು. ಮಂತ್ರದಿಂದ ನಾನು ಆಹ್ವಾನಿಸಿದಾಗ ದಯಮಾಡಿಸಿ ಅಲ್ಲಿ ನಮ್ಮ ವಿಶ್ವಾಸದ ಕಾಣಿಕೆಯನ್ನು ಸ್ವೀಕರಿಸಬೇಕು. ಅಂಥ ಯಜ್ಞಶಾಲೆಯಲ್ಲಿ ನಿಮಗೆ ಸ್ಥಾನಮಾನ ಇಲ್ಲವೆಂದು ತಡೆದಿರಬಾರದು. ಚ್ಯವನರಲ್ಲಿ ನಂಬುಗೆಯಿಟ್ಟು ದಯಮಾಡಿಸಬೇಕು.

ಅಶ್ವಿನಿ : ಋಷಿವರ್ಯನ ಅಪ್ಪಣೆ.

ಚ್ಯವನ–ಸುಕನ್ಯೆ : ನಮ್ಮ ಭಾಗ್ಯ.

(ನಿರ್ಗಮಿಸುವರು)

ಸುಕನ್ಯೆ : (ಚ್ಯವನನಿಗೆ ಪುನಃ ನಮಸ್ಕಾರ ಮಾಡಿ) ಸರ್ವ ಪ್ರಕಾರದಲ್ಲಿಯೂ ನನ್ನ ಪ್ರೀತಿಯನ್ನು ಸ್ವೀಕರಿಸುವ ಭಾರ ತಮ್ಮದು. ನನ್ನನ್ನು ಎಂದಿನಂತೆ ಕಾಪಾಡಬೇಕು.

ಚ್ಯವನ : ಹುಚ್ಚಿ, ನಿನ್ನದು ಮಹಾದಾನ. ನಾನು ವೃದ್ಧ, ಬ್ರಾಹ್ಮಣ. ಶೀರ್ಣವಾಗಿ, ಜೀರ್ಣವಾಗಿದ್ದವನು. ನಿರ್ಬಂಧಕ್ಕೆ ಸಿಕ್ಕಿಸಿಕೊಂಡಾಗ ನಿನ್ನವರಾದ ಇನ್ನೊಬ್ಬರ ಪ್ರಯೋಜನಕ್ಕಾಗಿ ನೀನಾಗಿ ನಿನ್ನನ್ನು ತೆತ್ತುಕೊಂಡೆ. ಆಗಲೂ ನಿನ್ನದೇ ಹಿರಿಮೆ. ಆದರೆ ನಿನ್ನನ್ನು ಕಂಡಾಗ ನನ್ನಲ್ಲಿ ನಿನ್ನ ಮೇಲಿನ ತವಕ ಒತ್ತಿತು. ಋಷಿಗೆ ತಕ್ಕುದಲ್ಲದ ನುಡಿ ನುಡಿದು ನಾನು ನಿರ್ಬಂಧ ಹಾಕಿದೆ. ಅದಕ್ಕಾಗಿ ನಾನು ಒಳಗೆ ಪಟ್ಟ ತಾಪ ಅಷ್ಟಿಷ್ಟಲ್ಲ. ಕಾಮದ ಹುಳಿ ಈಚೆಗೆ ಮುರಿದು ಅದರ ರಸ ಸವಿಯಾಗಿದೆ. ನಿನ್ನ ಪ್ರೀತಿಯಲ್ಲಿ, ಪರಿಚಯದಲ್ಲಿ ವಯಸ್ಸಿನ ಕಾರಣದಿಂದ ಮೊದಲಿಂದಲೂ ಒಂದು ಲೋಪ ತೋರಿಯೇ ಇತ್ತು. ನಿನಗೆ ಹೇಗಿದ್ದಿರಬೇಕೊ ನೀನು ಮಾತ್ರ ಬಲ್ಲೆ. ಇಂದೂ ನಿನ್ನದು ಅದೇ ನಿಷ್ಠೆ. ಒಂದು ಹೊಸ ಯೌವನವನ್ನು ನಿನ್ನ ಪುಣ್ಯ ನನಗೆ ದೊರಕಿಸಿಕೊಟ್ಟಿದೆ. ಇದು ನನಗೆ ಹೊಸದಾಗಿ ದೊರೆತ ಸೌಭಾಗ್ಯ. ಅದೂ ನಿನ್ನ ದಾನವೇ. ಇಂಥ ಮಾತನ್ನಾಡಬಾರದು. ಆದರೆ ನಿಜವಾಗಿ ಸ್ವರ್ಗಸಂಪತ್ತಿಗಿಂತಲೂ ಮಿಗಿಲು. ನನಗೆ ಇನ್ನು ಯಾವ ಚಿಂತೆಯೂ ಇಲ್ಲ. ತಂದೆ ತಾಯಿಯರಿಗೆ ಈ ಸೌಭಾಗ್ಯದ ಸುದ್ದಿಯನ್ನು ಮುಟ್ಟಿಸು. ಮುಂದಿನ ಪಂಚಮಿ ಇಲ್ಲಿಗೆ ದಯಮಾಡಿಸಬೇಕೆಂದು ಹೇಳಿ ಕಳಿಸು ; ನಮ್ಮ ನವದಾಂಪತ್ಯದ ಹಿರಿಮೆಯನ್ನು ಅವರು ಕಾಣಲಿ. ಈ ಆಶ್ರಮದಲ್ಲಿ ಅವರು ಸರ್ವಾರ್ಥಸಿದ್ಧಿ ಯಾಗ ಮಾಡಬೇಕೆಂಬುದು ನಮ್ಮ ಇಷ್ಟವೆಂದು ತಿಳಿಸು. ಎಲ್ಲ ಸಾಮಗ್ರಿ, ಸಜ್ಜು ಇಲ್ಲಿಯೇ ನೆರೆದಿರುತ್ತದೆ. ಈಗ ಆಶ್ರಮಕ್ಕೆ ಹೋಗೋಣ ಬಾ (ಕೈ ಕೈ ಹೆಣೆದು ಹೊರಡುತ್ತಾರೆ.)

ಚ್ಯವನ–ಸುಕನ್ಯೆ : ೧ ಕಳೆಯಿತು ಇರುಳು
ಅರಳಿತು ಹಗಲು

(ದನಿಗಳು—ಸೈ, ಸೈ, ಸೈ.)
ತೆರೆಯಿತು ಹೊಸ ಹುರುಪು
ಕುಡಿಯೊಡೆಯಿತು ಒಲವು
ದನಿಗಳು—ಒಲವು : ಒಲವು
ಚೆಲುವೇ, ನಲವೇ
ಓ ನೆಲವೇ ಜಲವೇ,
ಕೇಳಿರಿ ಇದೊ ಒಸಗೆಯನು
ಸ್ವಾತಂತ್ರ್ಯದ ಸಂದೇಶವನು
ಹೊಸಹರೆಯದ ಸಂದೇಶವನು
೨ ಹೊಸ ಯೌವನ, ಹೊಸ ಜೀವನ
ರಸದೂಟಗಳೌತಣ
ಹೊಸ ರಕುತದ ಬಿಸಿ ಬೆರೆತ
ಹೊಸ ಹುರುಪಿನ ಹಸಿತ
(ದನಿಗಳು—ಹಸಿತ, ಹಸಿತ, ಹಸಿತ)
ಬಾ ನಲ್ಲಳೆ - ಬಾ ನಲ್ಲನೆ
ತಿರೆ ತೆರೆದಿದೆ ರಿಂಗಣಕ್ಕೆ
ರಂಗೇರಿದೆ ಬಾನಿಗೆ
ಚುಂಗೇರಿದ ಮಿಲನಕೆ
(ದನಿಗಳು—ಎದೆ ಮಂದಿರದಲ್ಲಿ)
ಚ್ಯವನ-ಸುಕನ್ಯೆ : ೩ ನನ್ನದೊಲವು ನಿಮ್ಮ ತಪ
ಫಲಿಸಿವೆ ಗೆಡೆ ಸಾಹಸ
ಚೆದರಿತ್ತೋ ಬಗೆಯ ಮುಗಿಲು
ಸಂದೇಹದ ಅಳುಕು
(ದನಿಗಳು—ಚೆದರಿತ್ತು ಅಳುಕು)
ಚ್ಯವನ-ಸುಕನ್ಯೆ : ಓ ನಲ್ಲನೆ-ಓ ನಲ್ಲಳೆ
ಹುಣ್ಣಿಮೆ ಬೆಳುದಿಂಗಳಂತೆ
ಹೊಮ್ಮಿದೆ ನಗೆ ಮುಗಿಲು
ಕಮ್ಮಿತ್ತೀ ಹಗಲು
(ದನಿಗಳು—ನಗೆ ಮುಗಿಲು)
ಇಬ್ಬರೂ—ಗಾಳಿಯುಲಿಗೆ, ಅಲೆ ತಾನಕೆ
ತೊನೆದಾಡುವ ನಾವು ಬಾ
ಬಾಳ ಸವಿ, ಬಾನ ಸವಿ
ತಣಿಸಲಿ ಇಳೆಯೆಲ್ಲವ
(ದನಿಗಳು—ತಣಿದಿದೆ ಇಳೆಯೆಲ್ಲವೂ)

ತೆರೆ

# ದೃಶ್ಯ ೪

[ಸಕಲ ವೈಭವದಿಂದ ಶರ್ಯಾತಿ ಮಹಾರಾಜನ ಯಜ್ಞ ನಡೆಯುತ್ತಿದೆ. ವೇದ ಘೋಷ, ಹೋಮ, ಹೋಮಧೂಮ, ಶರ್ಯಾತಿಯ ತೇಜಸ್ಸು, ಚ್ಯವನನ ವರ್ಚಸ್ಸು ಅದ್ಭುತವಾಗಿವೆ. ರಾಣಿ ರಾಜನೊಡನೆ ಕುಳಿತಿದ್ದಾಳೆ. ಪುರೋಹಿತ ಚ್ಯವನನ ಬಳಿ ಸುಕನ್ಯೆ ಇದ್ದಾಳೆ. ಮಗಳ, ಅಳಿಯನ ಕಾಂತಿ ಸೌಭಾಗ್ಯಗಳನ್ನು ಕಂಡು ರಾಜ ರಾಣಿ ಸಂತೃಪ್ತರಾಗಿದ್ದಾರೆ.]

ಋಷಿಗಳು : ಸಾಂಗವಾಗಿ ಯಜ್ಞ ಕಾರ್ಯ ನೆರವೇರಿದೆ.

ಚ್ಯವನ : ಸಭೆಯ ಅನುಜ್ಞೆಯಾಗಬೇಕು. ಪೂರ್ಣಾಹುತಿಗೆ ಮುಂಚೆ ಇಂದ್ರಾದಿ ದಿಕ್ಪಾಲಕರಿಗೆ ಆಹ್ವಾನ ಕೊಡಬೇಕು. ಅವರ ಅರ್ಚನೆ, ಅವರ ಸೋಮಪಾನ, ಆದ ತರುವಾಯ ಪೂರ್ಣಾಹುತಿ. ಆಹ್ವಾನವಾಗಲಿ.

ಸರ್ವರೂ : ಸಕಾಲವಾಗಿದೆ. ಯಾವ ನ್ಯೂನತೆಯೂ ಇಲ್ಲದೆ ಯಜ್ಞ ಕಾರ್ಯ ನೆರವೇರಿದೆ.

ಚ್ಯವನ : ತಮ್ಮೆಲ್ಲರ ಅನುಗ್ರಹದಿಂದ. ಎಲ್ಲಿ, ಆಹ್ವಾನ ಮಂಗಳದ ಘೋಷಗಳಾಗಲಿ (ಪಂಚವಾದ್ಯಗಳು ಮೊಳಗುವುವು. ಆಹ್ವಾನ ಮಂತ್ರಗಳನ್ನು ಉಚ್ಚರಿಸುವರು. ಘನಪಾಠಿಗಳು ಅವನ್ನು ಕ್ರಮವಾಗಿ ಉಚ್ಚರಿಸುತ್ತಾರೆ. ಕಡೆಗೆ, ಮಂತ್ರಪಠನ. 'ಇಂದ್ರಾ ಅತ್ರೈಹಿ ಇಂದ್ರಾ ಅತ್ರೈಹಿ ಇಂದ್ರಾ ಅತ್ರೈಹಿ ಭೋ' ಎನ್ನುತ್ತಾನೆ. ಸಂಭ್ರಮದಿಂದ ಇಂದ್ರನು ಯಜ್ಞ ಮಂಟಪಕ್ಕೆ ಇಳಿದು ಬರುತ್ತಾನೆ. ಆತನಿಗೆ ಆರತಿ ಎತ್ತುತ್ತಾರೆ.)

(ಸ್ವಾಗತ—''ಸಾಮ್ರಾಜ್ಯಂ ಭೋಜ್ಯಂ ಸ್ವಾರಾಜ್ಯಂ—ವೈರಾಜ್ಯಂ—ಎಂಬ ಮಂತ್ರ ಪಾಠ—'')

ದೇವರಾಟ್ ಮಹೇಂದ್ರನು ದಯಮಾಡಿಸಿ ಈ ಯಜ್ಞವನ್ನು ಹರಸಬೇಕು. ಇದೋ ಸೋಮ. ಮಹೇಂದ್ರನು ತೃಪ್ತನಾಗಲಿ.

ಇಂದ್ರ : (ಸೋಮಪಾನ ಮಾಡುತ್ತಾನೆ) ಶರ್ಯಾತಿ ಮಹಾರಾಜನ ಸರ್ವಾರ್ಥಸಿದ್ಧಿ ಯಜ್ಞ ಕ್ರಮವಾಗಿ ನಡೆದಿದೆ. ಇದರ ಕೀರ್ತಿ, ಶ್ರೇಯ, ಮಹಾರಾಜನಿಗೂ ಪುರೋಹಿತ ಮಹರ್ಷಿ ಚ್ಯವನರಿಗೂ ಸಲ್ಲತಕ್ಕದ್ದು. ದೇವ ಕಾರ್ಯ ತುಂಬಾ ಸಮರ್ಪಕವಾಗಿ ನಡೆದಿದೆ. ದೇವತೆಗಳು ತೃಪ್ತರಾಗಿದ್ದಾರೆ.

ಶರ್ಯಾತಿ : ಕೃತಾರ್ಥನಾದೆ.

ಚ್ಯವನ : ಶುಭಮಸ್ತು. ಮಹೇಂದ್ರನಲ್ಲಿ ಒಂದು ವಿಜ್ಞಾಪನೆ.

ಇಂದ್ರ : ಅಪ್ಪಣೆ ಕೊಡಿಸಬೇಕು.

ಚ್ಯವನ : ಮಹೇಂದ್ರನಿಗೆ ತಿಳಿದಿರಬೇಕು : ಅಶ್ವಿನಿ ದೇವತೆಗಳು ನನಗೆ ಉಪಕಾರ ಮಾಡಿದ್ದಾರೆ. ಅವರು ಸೌಂದರ್ಯಶಾಲಿಗಳು, ಗುಣವಂತರು. ಲೋಕಕ್ಕೆಲ್ಲ ಭೈಷಜವನ್ನು ಮಾಡುವವರು. ನನಗೆ ಯೌವನ ಸಂಪತ್ತಿಯನ್ನು ಒದಗಿಸಿದ್ದಾರೆ. ಇಂಥವರಿಗೆ ಈ ಯಜ್ಞ ಸಮಾರಂಭದಲ್ಲಿ ನನ್ನ ಕೃತಜ್ಞತೆಯ ಕಾಣಿಕೆಯನ್ನು ಅರ್ಪಿಸಬೇಕೆಂದಿದ್ದೇನೆ.

ಇಂದ್ರ : ಆಗಬಹುದು. ದೇವಲೋಕದ ನಿಯಮಗಳನ್ನು ಮೀರದಂತೆ ಮಾತ್ರ.

ಚ್ಯವನ : ಅವರಿಗೆ ಸೋಮಪಾನ ಮಾಡಿಸಬೇಕೆಂದಿದ್ದೇನೆ. ಅದಕ್ಕೆ ನಿನ್ನ ಅನುಮತಿ ಬೇಕು.

ಇಂದ್ರ : ಅದು ಹೇಗಾದೀತು ? ಅವರು ಚಿಕಿತ್ಸಕರು. ಕರ್ಮಕಾರರು.

ಚ್ಯವನ : ನಿನ್ನಂತೆ ದೇವತೆಗಳಲ್ಲವೆ ?

ಇಂದ್ರ : ದೇವತೆಗಳು ಹೌದು. ಆದರೆ ದೇವತೆಗಳಲ್ಲಿ ಅವರು ಸೇವಕವರ್ಗ. ಮರ್ತ್ಯಲೋಕಕ್ಕೆ ಹೋಗಿ ಸಿಕ್ಕಿದಂತೆ ತಿರುಗಾಡುತ್ತಾರೆ. ಬೇರೆ ಬೇರೆ ವೇಷಗಳನ್ನು ಧರಿಸುತ್ತಾರೆ.

ಚ್ಯವನ : ಮಹೇಂದ್ರನು ಕಾಮ ವೇಷಧಾರಿಯಲ್ಲವೆ ?

ಇಂದ್ರ : ಆ ಮಾತುಬೇಡ. ರಾಜಶಕ್ತಿಯಲ್ಲಿ ಎಲ್ಲ ಶಕ್ತಿಗಳೂ ಸೇರಿವೆ. ಲೋಕ ಸಂರಕ್ಷಣೆಯ ಕಾರ್ಯವನ್ನು ಹೊತ್ತವರು ಎಲ್ಲವನ್ನೂ ಮಾಡಬೇಕಾಗುತ್ತದೆ.

ಚ್ಯವನ : ಋತವನ್ನು ಕಾಪಾಡಲು.

ಇಂದ್ರ : ಉಂ...ಆ ನೇಮಗಳು ಇಂದ್ರನಿಗೆ ತಿಳಿದಿದೆ. ಇಂದ್ರನೊಡನೆ ಅಶ್ವಿನಿಗಳಿಗೆ ಸಮಸೇವನೆ ಸಲ್ಲದು—ಇವರು ನಮ್ಮ ಪಂಕ್ತಿಯವರಲ್ಲ.

ಚ್ಯವನ : ಇವರು ಲೋಕೋಪಕಾರಿಗಳು, ಉದಾರಿಗಳು. ಯಜ್ಞಶಾಲೆಯಲ್ಲಿ ಅಂಥವರ ಬಹುಮಾನ ತಕ್ಕದು.

ಇಂದ್ರ : ಅದಕ್ಕೆ ಮಿತಿಯುಂಟು.

ಚ್ಯವನ : ಯಾವುದು ? ಯಾರದು ?

ಇಂದ್ರ : ದೇವರಾಜನಾದ ನನ್ನದು.

ಚ್ಯವನ : ಯಜ್ಞಫಲವಾಗಿ ಬಂದ ಪುಣ್ಯ ಆ ಮಿತಿಯನ್ನು ಮೀರಬಲ್ಲದು. ದೇವರಾಜನ ಶಕ್ತಿ, ಕೀರ್ತಿ, ತಪಸ್ವಿಗಳ ತಪಸ್ಸಿನಿಂದ, ರಾಜರ ಯಜ್ಞ ಹೋಮಗಳಿಂದ ಉಳಿದಿವೆ. ಈಗ ನಾನು ಉಪಕಾರಿಗಳಿಗೆ ಪುರಸ್ಕಾರ ಮಾಡುವವನು. ಅದಕ್ಕೆ ಆತಂಕ ಉಂಟುಮಾಡಬಾರದು.

ಇಂದ್ರ : ಋಷಿಗಳೂ ಮೇರೆ ಮೀರಬಾರದು.

ಚ್ಯವನ : ಧರ್ಮ್ಯವಾಗಿರುವವರೆಗೂ ಇಂದ್ರಾಧಿಕಾರಕ್ಕೆ ಬೆಲೆ. ಯಜ್ಞಕಾರ್ಯ

ಗಳಿಂದ ಬಲದಿಂದ ಬಂದ ಕೀರ್ತಿ ಇಂದ್ರನದು. ಋತದ ಮೇಲೆ ನಿಂತದ್ದು. ಯೋಗ್ಯರಾದವರಿಗೆ ಸಲ್ಲುವ ಮರ್ಯಾದೆಗೆ ಇಂದ್ರನೂ ಅಡ್ಡಿ ಬರಬಾರದು.

ಇಂದ್ರ : ಔದ್ಧತ್ಯದಿಂದ ಋಷಿಗಳು ವರ್ತಿಸಬಾರದು.

ಚ್ಯವನ : ಮಾತನ್ನು ವಿನಯದಿಂದಾಡಿದರೆ ಮೇಲು. ಔದ್ಧತ್ಯದ ಮಾತನಾಡಲು ಇಂದ್ರನಿಗೆ ಹಕ್ಕಿಲ್ಲ; ಅವನು ಇಲ್ಲಿಗೆ ಆಹ್ವಾನಿತ ಅತಿಥಿ.

ಇಂದ್ರ : ಅತಿಥಿಗೆ ಅವಮರ್ಯಾದೆ ಆಗತಕ್ಕದ್ದಲ್ಲ.

ಚ್ಯವನ : ಯಜ್ಞೋದ್ದೇಶಕ್ಕೆ ಅವನ ನಿಷೇಧ ಸರಿಯಾಗದು. ಈಗ ನಾನು ಅಶ್ವಿನಿಗಳನ್ನು ಆಹ್ವಾನಿಸುವವನಿದ್ದೇನೆ. ಯಾರು ತಡೆಯುವರೋ ನೋಡೋಣ.

ಇಂದ್ರ : ನಾನು ತಡೆಯುತ್ತೇನೆ.

ಚ್ಯವನ : ಇಂದ್ರನು ಮಲೆಯುತ್ತಿದ್ದಾನೆನ್ನಬೇಕಾಗುತ್ತದೆ. ಇಂದ್ರನ ಶಕ್ತಿಯೂ ಮದಿಸಬಾರದು.

ಇಂದ್ರ : ವಜ್ರಾಯುಧವನ್ನಾದರೂ ಬಳಸಿ ಇದನ್ನು ತಡೆಯುತ್ತೇನೆ. ನನ್ನನ್ನು ಯಾರು ಪ್ರತಿಭಟಿಸುತ್ತಾರೊ ನೋಡುತ್ತೇನೆ.

ಚ್ಯವನ : ಧರ್ಮದ ಪರೀಕ್ಷೆಯೆ ? ನೋಡಿಬಿಡುತ್ತೇನೆ.

ಇಂದ್ರ : ಮಹೇಂದ್ರನ—ಅದರಲ್ಲಿಯೂ ತನ್ನ ಪ್ರಜೆಯ ಮೇಲಿನ ಅಧಿಕಾರಕ್ಕೆ ಪ್ರತಿಭಟನೆ ಮಾಡುವವರಿಗೆ ಏನಾಗುತ್ತದೆಯೊ ಅದನ್ನು—ನಾನೂ ನೋಡಿಬಿಡುತ್ತೇನೆ.

[ಚ್ಯವನ ಅವನ ಕಡೆ ನೋಡಿ ಹ-ಹ-ಹ ಎಂದು ಮೃದು ವ್ಯಂಗ್ಯದಿಂದ ನಕ್ಕು]

(ಕೆಲವು ಮಂತ್ರಗಳನ್ನು ಜಪಿಸಿ)

ಚ್ಯವನ : ನಾನು ತಪಸ್ವಿಯಾದರೆ—ಮಂತ್ರಕ್ಕೆ ಬಲವಿದ್ದರೆ—ಈ ಯಾಗ ಸಾಂಗವಾಗಿ ನಡೆದಿದ್ದರೆ ಅಶ್ವಿನಿಗಳು ಇಲ್ಲಿ ಬಹುಮಾನಿತರಾಗುತ್ತಾರೆ. ತಪಸ್ಸು ಯಜ್ಞಗಳ ಫಲವನ್ನೂ ಸುಕನ್ಯೆಯ ಶುಚಿಯ ಫಲವನ್ನೂ ಇದಕ್ಕೆ ಧಾರೆ ಎರೆದಿದ್ದೇನೆ. ಸುಕನ್ಯೆ, ಸಮಿಧೆಗೆ ತುಪ್ಪವನ್ನು ಎರೆ—ಮಹಾರಾಜ, ಅಶ್ವಿನಿಗಳನ್ನು ಆಹ್ವಾನ ಮಾಡು (ಮಂತ್ರ).

(ಮಂತ್ರವನ್ನು ಉಚ್ಚರಿಸಿ) ಓಂ ಅಶ್ವಿನೌ ಅತ್ರೈಹಿ-ಅಶ್ವಿನಿದೇವತೆಗಳು ದಯಮಾಡಿಸಬೇಕು. ಅಶ್ವಿನೌ ಅತ್ರೈಹಿ ತಂ.

ಇಂದ್ರ : ಕೂಡದು. (ಬಂದ ಅಶ್ವಿನಿಯರನ್ನು ಕುರಿತು) ನಿಮ್ಮ ಅಹಂಕಾರ ಹೆಚ್ಚಾಯಿತು. ಆಮೇಲೆ ಅದನ್ನು ನೋಡಿಕೊಳ್ಳುತ್ತೇನೆ. ಋಷಿಗಳೆ—ಸೋಮಪಾನವನ್ನು ಈ ಭೃತ್ಯರಿಗೆ ಕೊಡಬಾರದು. (ಅಶ್ವಿನಿಗಳಿಗೆ) ನೀವು ತೆಗೆದುಕೊಳ್ಳಬಾರದು.

ಅಶ್ವಿನಿ : ಯಜ್ಞಶಾಲೆಯಿಂದ ಕರೆದುದರಿಂದ ನಾವು ಬಂದೆವು. ರಾಜಾಜ್ಞೆಯನ್ನು ಮೀರಲಿಲ್ಲ. ನಮ್ಮ ಅಪರಾಧ ಲೇಶವಿಲ್ಲ ಇಲ್ಲಿ. ಋಷಿಗಳು ಪುರಸ್ಕರಿಸಿದರೆ ಪುರಸ್ಕಾರಕ್ಕೆ ಯೋಗ್ಯರು ನಾವಲ್ಲ ಎನ್ನಲಾರೆವು.

ಚ್ಯವನ : ಯಜ್ಞಶಾಲೆಯಲ್ಲಿ ರಾಜಾಜ್ಞೆ ದುಡುಕಬಾರದು.

ಇಂದ್ರ : ಬಾಯಿಮುಚ್ಚಿ ಇರುವುದು ಒಳಿತು.

ಅಶ್ವಿನಿ : ಎಷ್ಟುಕಾಲ ಈ ದರ್ಪ ? ಯಜ್ಞಭೋಕ್ತರು ನಾವು ; ಕರ್ಮಕಾರರು ನೀವು ಎಂದು ಎಷ್ಟು ದಿನ ಈ ವರ್ಗವ್ಯತ್ಯಾಸ ನಡಸುತ್ತೀರಿ ? ದೇವತೆ ದೇವತೆ ಗಳಲ್ಲಿ ಏಕೆ ಈ ಅಸಮತೆ ? ಮಹೇಂದ್ರನು ಈ ಕಡೆ ನೋಡಿ ಈವರೆಗೆ ನಡೆದಿರುವ ಅನ್ಯಾಯವನ್ನು ಸರಿಪಡಿಸಬೇಕು.

ಇಂದ್ರ : ಅಂಥ ಮಾತಿಗೆ ನಿರ್ಣಯ ಇಲ್ಲಲ್ಲ, ಈಗಲ್ಲ.

ಚ್ಯವನ : ಪ್ರಾರ್ಥನೆಗೆ ಇದು ದೇವಲೋಕವಲ್ಲ. ಯಜ್ಞ ಸಮಾರಂಭದಲ್ಲಿ ನಾನು ಅಶ್ವಿನೀ ದೇವತೆಯರನ್ನು ಆಹ್ವಾನಿಸಿದ್ದೇನೆ. ಇಂದಿನಿಂದ ಅವರಿಬ್ಬರಿಗೂ ಸೋಮಪಾನದಲ್ಲಿ ಸಮಸೇವನೆಯ ಯೋಗ್ಯತೆಯುಂಟಾಗುತ್ತದೆ. (ಓಂ... ಎನ್ನುತ್ತ ಮಂತ್ರೋಚ್ಚಾರಣೆಮಾಡಿ ಅಶ್ವಿನಿಗಳಿಗೆ ಸೋಮಪಾತ್ರೆಗಳನ್ನು ಕೊಡ ಹೋಗುತ್ತಾನೆ.)

ಇಂದ್ರ : ಕೊಡದು, ಕೊಡದು. (ಹೂಂ.... ವಜ್ರವನ್ನು ಚ್ಯವನನ ಮೇಲೆ ಎಸೆಯಲು ತೋಳನ್ನು ನೆಗಹುತ್ತಾನೆ.)

ಚ್ಯವನ : ಇಂದ್ರ....ಇದು ನಿನಗೆ ತಿಳಿಯಬೇಕಿತ್ತು. ಯಜ್ಞಭೂಮಿಯಲ್ಲಿ ವಜ್ರಾಯುಧ ಫಲಿಸದು. ವೃತ್ರಹನನಕ್ಕಾಗಿ ಅದನ್ನು ಸಮೆದದ್ದು. ಅದನ್ನು ಸಮೆದ ತ್ವಷ್ಟೃ ಇಲ್ಲಿಯೇ ಇದ್ದಾನೆ. ಹಾಗೇ ? ಹಟವೆ ? ಸರಿ–ಇದು ಪ್ರತಿಕಾರ– ವಜ್ರ ಸ್ತಂಭಿತವಾಗಲಿ... ವಜ್ರ ಸ್ತಂಭಿತವಾಗಲಿ....ಕುಲಿಶ ಸ್ತಂಭಿತವಾಗಲಿ. ದಂಭ ಸ್ತಂಭಿತವಾಗಲಿ.

(ಇಂದ್ರ ಕೈ ಮೈ ನಿಶ್ಚಲವಾಗಿ ನಿಲ್ಲುತ್ತಾನೆ. ಇಂದ್ರನ ಕೈ ಅಲುಗದೆ ಎತ್ತಿದ್ದು ಎತ್ತಿದ್ದಂತೆಯೇ ಇದೆ. ಇಂದ್ರನಿಗೆ ಅಪಮಾನವಾದುದು ಕಾಣುತ್ತದೆ. ದುರ್ಬಲನಾಗಿ ನಿಲ್ಲುತ್ತಾನೆ ; ಸಭೆ ಅವಾಕ್)

ಎಂದೊ ಒಂದು ಕಾಲದಲ್ಲಿ ದೇವಕಾರ್ಯಕ್ಕಾಗಿ, ಲೋಕಹಿತಕ್ಕಾಗಿ ಸೃಷ್ಟಿ ಕರ್ತನ ಪ್ರೇರಣೆಯಂತೆ ಋಷಿಗಳು ನಿನಗೆ ಅಧಿಕಾರವನ್ನು ಒಪ್ಪಿಸಿದರು. ಶಕ್ತಿಗಳನ್ನು ಕೊಟ್ಟರು. ಅವು ನಡೆಯುತ್ತಿರುವಂತೆ ಯಜ್ಞಾದಿ ಕಾರ್ಯಗಳನ್ನು ಏರ್ಪಡಿಸಿದರು. ಇಂದ್ರ ಪದವಿ ಕೂಡ ಅಧ್ರುವ ; ಲೋಕಹಿತಕ್ಕೆ ವಿರುದ್ಧ ಕೃತ್ಯಗಳಲ್ಲಿ ತೊಡಗಿದರೆ ಅದು ಹ್ರಸ್ವವಾದೀತು. ನಿನ್ನ ದುರಭಿಮಾನಕ್ಕೆ ಮಿತಿಯಿಲ್ಲ. ಯಜ್ಞಕ್ರಿಯೆಯ ಉದ್ದೇಶಕ್ಕೆ ಅಡ್ಡಿ ಬರುವುದು ಧರ್ಮವಲ್ಲ.

ಇದಕ್ಕೆ ಶಿಕ್ಷೆ ಉಂಟು....ಎಲ್ಲಿ ಹೂಂ... (ಒಬ್ಬ ಕ್ರೂರ ರಾಕ್ಷಸ ಮದನೆಂಬವನು ಭೂಮಿ ಆಕಾಶ ಬಲಿದಂತೆ ನಿಂತು ಇಂದ್ರನೆಡೆಗೆ ನುಗ್ಗಿ ಆತನನ್ನು ತಿನ್ನುವಂತೆ ಮುಂದುವರಿಯುತ್ತಾನೆ. ಯಾವುದಕ್ಕೂ ಸದ್ಯಃ ಅಶಕ್ತನಾದ ಇಂದ್ರನಿಗೆ ಭೀತಿಯಾಗುತ್ತದೆ.)

ಇಂದ್ರ : ಋಷಿಗಳು ತಮ್ಮ ತಪಃಶಕ್ತಿಯನ್ನು ಹೀಗೆ ಅಪವ್ಯಯ ಮಾಡಬಾರದು.

ಚ್ಯವನ : ಇಂದ್ರನು ತನ್ನ ದರ್ಪವನ್ನು ದುರ್ವ್ಯಯ ಮಾಡುತ್ತಿದ್ದಾನೆಂದು ಮೊದಲೇ ತಿಳಿಸಿಯಾಗಿದೆ.

ಇಂದ್ರ : ಸ್ಥಿತಿಯನ್ನು ಕಾಪಾಡುವ ಅಧಿಕಾರಿ ನಾನು. ಆ ಕರ್ಮಕ್ಕೆ ಅಡ್ಡಿ ಬರುವುದು ಧರ್ಮವಲ್ಲ. ಅದಕ್ಕೆ ಅಡ್ಡಿ ಬರುವುದು ಅಧರ್ಮ.

ಚ್ಯವನ : ಲೋಕೋಪಕಾರಿಗಳಿಗೆ ಪುರಸ್ಕಾರ ಮಾಡುವುದು ಧರ್ಮಕ್ರಿಯೆ. ಪ್ರಗತಿ ಕಾರ್ಯ. ಅದನ್ನು ಇಂದ್ರನು ಒಪ್ಪಬೇಕು. ಹಾಗೆ ಮಾತ್ರವೇ ಸತ್ವ, ಕ್ಷೇಮ, ಯೋಗ್ಯತೆ ಬೆಳೆದೀತು. ಸ್ಥಿತಿಯನ್ನು ಮೇಲ್ಪಡಿಸುವುದೂ ಧರ್ಮವೇ. ಒಳಿತೆಂಬುದೂ ಅದಕ್ಕಿಂತ ಉತ್ತಮವಾದುದಕ್ಕೆ ದಾರಿ ಮಾಡಿಕೊಡಬೇಕು ಎಂಬುದು ಪ್ರಗತಿನಿಯಮ.

ಇಂದ್ರ : ನನಗೆ ಆಹ್ವಾನ ಮಾಡುವ ಮುಂಚೆ, ಈ ಯಜ್ಞವನ್ನು ಮಾಡುವ ಮುಂಚೆ ಈ ಉದ್ದೇಶವಿತ್ತೆ ?

ಚ್ಯವನ : ಈ ಯಜ್ಞವನ್ನು ಇನ್ನೇಕೆ ಮಾಡಿದ್ದೆನ್ನುವೆ ?

ಇಂದ್ರ : ಅಯ್ಯೋ, ಈ ಭೀಕರತೆಯನ್ನು ತಡೆಯಲಾರೆ, ಈ ಪಾಪಿ ರಕ್ಕಸನು ನನ್ನನ್ನು ಹಿಂಸಿಸುತ್ತಿದ್ದಾನೆ. ನನ್ನ ವಜ್ರ ವಿಫಲವಾಗಿದೆ.

ಚ್ಯವನ : ಧರ್ಮವಾದ ತಪಸ್ಸಿನ ಎದುರು ಯಾವ ಇತರ ಶಕ್ತಿಗೂ ಪ್ರಾಬಲ್ಯವಿಲ್ಲ.

ಇಂದ್ರ : ಈ ಪೀಡೆಯನ್ನು ನಿವಾರಿಸಿ ಮಹರ್ಷಿಗಳೇ. ಧರ್ಮಾಧರ್ಮ ವಿವಕ್ಷೆ ಆಮೇಲೆ.

ಚ್ಯವನ : ಸೋಮಪಾನ ಅಧಿಕಾರ ಅವರಿಗೆ ಆಗಲು ಇಂದ್ರನು ಒಪ್ಪಬೇಕು.

ಇಂದ್ರ : ಒಪ್ಪಬೇಕಾದ್ದು ಅನಿವಾರ್ಯವಾದರೆ—

ಚ್ಯವನ : ಅನಿವಾರ್ಯವೂ ಹೌದು. ಲೋಕಹಿತಕ್ಕೂ ಉತ್ತಮಗತಿಗೂ ಅಗತ್ಯ ಹೌದು.

ಇಂದ್ರ : ಅವರ ಹಿರಿಮೆಯಾದರೂ ಏನು ?

ಚ್ಯವನ : ಕಣ್ಣು ತೆರೆದು ಲೋಕವನ್ನು ನೋಡು. ದೇವತೆಗಳಿಗೆ ಹೆಣ್ಣ ಚೆಲುವು ಕಂಡಿತು. ಆಕೆಯ ಮನಸ್ಸನ್ನು ಅವರು ಪರೀಕ್ಷಿಸಿದರು. ಅಲ್ಲಿ ಶುಚಿಯನ್ನೂ ನಿಷ್ಠೆಯನ್ನೂ ಕಂಡರು. ನನ್ನ ಮನಸ್ಸನ್ನೂ ಪರೀಕ್ಷಿಸಲೆಂದಿರಬೇಕು. ಅಂಥ ಸಮಯವನ್ನು ಹಾಕಿದರೆ ಋಷಿ ಹೇಗೆ ಪ್ರತಿಭಟಿಸುವನೊ ನೋಡೋಣವೆಂದು,

ಅದು ದೇವತೆಗಳ ಅಧಿಕಾರಕ್ಕೆ ಒಳಪಟ್ಟ ಕಾರ್ಯ. ಸಾಮಾನ್ಯರು ಒಪ್ಪದ ಸಮಯಕ್ಕೆ ನಾನು ಒಪ್ಪಿದೆ. ಸುಕನ್ಯೆಯು ತೀರ್ಮಾನ ತಮಗೆ ವಿರುದ್ಧವಾದಾಗ ಅವರು ಕೋಪಿಸಿಕೊಳ್ಳಲಿಲ್ಲ. ತೀರ್ಮಾನ ನ್ಯಾಯವೆಂದು ಒಪ್ಪಿ ಕ್ರೋಧ ಆವೇಶಗಳಿಲ್ಲದೆ ನಮ್ಮನ್ನು ಅನುಗ್ರಹಿಸಿದರು. ಅದು ಸುಮನಸ ಕೃತ್ಯ—ನಿಜ ವಾಗಿ ದೇವತೆಗಳು ಸುಮನಸರಾಗದಿದ್ದರೆ ಇನ್ನಾವ ಲಕ್ಷಣವೂ ಅವರಿಗೆ ಗುಣವಲ್ಲ, ಭೂಷಣವಲ್ಲ. ಸೌಮನಸ್ಯದಿಂದಲೇ ಲೋಕಹಿತವಾಗಬೇಕು. ಅದನ್ನು ಮರೆದವರಿಗೆ ದೇವತ್ವದ ಸಕಲ ಗೌರವ ಸಲ್ಲವಾದರೆ ಇನ್ನಾರಿಗೆ ಸಲ್ಲಬೇಕು ? ಮಹೇಂದ್ರನು ಕಾಲ ಕಾಲಕ್ಕೆ ಇದನ್ನು ನೋಡಬೇಕು. ಗುಣ ಬೆಳಗಿದವರಿಗೆ ಪುರಸ್ಕಾರವೀಯಬೇಕು.

ಇಂದ್ರ : ಇಂಥ ಪ್ರಶ್ನೆ ಹಿಂದೆ ಬಂದಿರಲಿಲ್ಲ.

ಚ್ಯವನ : ಅಸಮತೆ ಪ್ರಬಲಿಸಿಯೇ ಇತ್ತು. ರಾಜನಿಗೆ ಎದುರು ಬಿದ್ದು ಅದನ್ನು ಸಂಪಾದಿಸಲು ಅವರು ಉದ್ಧತರಾಗಲಿಲ್ಲ. ಶಕ್ತರು ಕೊಡಬೇಕು ; ದುರ್ಬಲರು ಕೇಳಬಾರದು ; ಇದು ಸದ್ಗತಿಯ ಧರ್ಮ, ಪ್ರಗತಿಯ ಬೀಜತಂತ್ರ. ಹೆಂಡತಿ ಕೇಳಬಾರದು ; ಆ ಮುಂಚೆ ಗಂಡ ಕೊಡಬೇಕು. ಸೇವಕ ಕೇಳ ಬಾರದು ; ಒಡೆಯ ಕೊಡಬೇಕು. ಬಡವನಿಂದ ಕೇಳಿಸಿಕೊಳ್ಳಬಾರದು—ಧನಿ ಕೊಡಬೇಕು. ಧರ್ಮದಲ್ಲಿ ನಯ ಇದು.

ಇಂದ್ರ : ಹೊಸ ಮಾತು.

ಚ್ಯವನ : ಪ್ರಗತಿಯ ಮಾತು. ಹೊಸತೊ ಹಳೆಯದೊ. ನಡೆಯಬೇಕಾದುದು ಹೀಗೆ. ಸಮಯ ಮೀರುತ್ತಿದೆ ; ಇಂದ್ರ, ಋಷಿಗಣ ಕಾದಿದೆ ; ಸಭೆಗೆ ಆಯಾಸವಾದೀತು ; ಪೂರ್ಣಾಹುತಿಯ ಕೆಲಸ ಉಳಿದಿದೆ.

ಇಂದ್ರ : ಹುಂ—ಈ ಹಿಂಸೆಯನ್ನು ತಡೆಯಲಾರೆ ಮಹರ್ಷಿ—ನಿನ್ನ ಮಾತಿಗೆ ಒಪ್ಪಿಕೊಂಡಿದ್ದೇನೆ. ಇನ್ನು ಮುಂದೆ ಇವರಿಗೂ ನಮ್ಮೆಲ್ಲರೊಡನೆ ಯಜ್ಞ ಯಾಗಾದಿಗಳಲ್ಲಿ ಸಹಪಂಕ್ತಿಯಲ್ಲಿ ಸೋಮಪಾನ ಮಾಡುವ ಅಧಿಕಾರ ಬಂದಿದೆ. ನಿನ್ನ ತಪಸ್ಸಿನ ಬಲದಿಂದ. ನಾನು ಇದಕ್ಕೆ ಒಪ್ಪಿದ್ದೇನೆ.

ಚ್ಯವನ : ಅವರ ಸೌಮನಸ್ಯದ ಫಲ ?

ಇಂದ್ರ : ಹೇಗೊ ಆಗಲಿ. ತ್ವಷ್ಟೃ, ವಿಶ್ವಕರ್ಮನಿಗೂ ಹಾಗೇ ಈ ಹಕ್ಕು ಬರುತ್ತದೆ.

ಚ್ಯವನ : ಇನ್ನೊಂದು ಘೋಷಣೆಯಾಗಬೇಕು. ಯಾರು ಯಾರು ಲೋಕ ಹಿತಕಾರ್ಯದಿಂದ, ನಿರಪೇಕ್ಷಭಾವದಿಂದ ನೋವಿಗೆ ನೆರವಾಗುತ್ತಾರೊ ದುರ್ಬಲರಿಗೆ ಸಹಾಯರಾಗುತ್ತಾರೆಯೊ ಅಂಥವರಿಗೆಲ್ಲ ಸೌಜನ್ಯದಲ್ಲಿ ಸಮಾನತೆ ದೊರೆಯುತ್ತದೆಂದು ಘೋಷಣೆ ಮಾಡಬೇಕು, ಲೋಕಹಿತ ಫಲಿಸಲಿ,

ಇಂದ್ರ : ಆಗಬಹುದು. ಋಷಿಯ ಆಶಯ ನೆರವೇರಲಿ. ಇಂದು, ನಾಳೆ, ಎಂದೆಂದಿಗೂ ಇದು ವಿಶ್ವ ಘೋಷಣೆ—ನಿತ್ಯನಿಯಮ—(ದುಂದುಭಿ ಇತ್ಯಾದಿ ಮೊಳಗುತ್ತವೆ.)

ಚ್ಯವನ : ನಮಃ. ಏತದ್ಧಿ ಪರಮಂ ವಚಃ, ಏಷಾ ಹಿ ಪರಮಾ ಕೃತಿಃ, ಏತದ್ಧಿ ಸೌಭಾಗ್ಯಂ. ಓಂ...ಇನ್ನು ನೀನು ನಿಶ್ಚಿಂತನಾಗಿರಬಹುದು. ವಜ್ರವನ್ನು ಒರೆಗೆ ಸೇರಿಸಬೇಕು (ಇಂದ್ರ ವಜ್ರಾಯುಧವನ್ನು ಒರೆಗೆ ಸೇರಿಸುತ್ತಾನೆ.) ಇನ್ನು ನೀನು, ಮದಾಸುರ,...

ಅಸುರ : ಅಪ್ಪಣೆಯೇನು ? ನನ್ನನ್ನು ಸೃಷ್ಟಿಸಿದಿರಿ. ಈ ಕಾರ್ಯಕ್ಕೆ ಆಜ್ಞಾಪಿಸಿದಿರಿ. ಇಂದ್ರಕೋಪಕ್ಕೆ ಈಡು ಮಾಡಿದಿರಿ ; ಅದನ್ನು ತಕ್ಷಣಕ್ಕೆ ನಿರ್ವಹಿಸುವ ಶಕ್ತಿ ಕೊಟ್ಟಿರಿ. ನನಗೆ ಇದರಿಂದ ಯಾವ ಕೇಡೂ ಆಗದಂತೆ ಅನುಗ್ರಹಿಸಬೇಕು.

ಚ್ಯವನ : ನೀನು ಮದಾಸುರ. ದುರ್ಮದದ ಶಿಕ್ಷೆಗಾಗಿ ಉತ್ಪನ್ನ. ಇನ್ನು ಮುಂದೆ ಇಷ್ಟು ಉಗ್ರನಾಗಿರಬೇಕಿಲ್ಲ. ಮೃದುವಾಗು, ಸಾಧುವಾಗು, ಸಭ್ಯನಾಗು· ಸ್ತ್ರೀಯರ ಶೃಂಗಾರದಲ್ಲಿ ಸೇರಿಕೊ. ಬೇಟೆ ಕಾರ್ಯಗಳಲ್ಲಿ ದ್ಯೂತದಲ್ಲಿ ಮದ್ಯಪಾನದಲ್ಲಿ ಮಾತ್ರ ನೀನು ವಿಹರಿಸತಕ್ಕದ್ದು, ಲೋಕ ಕಂಟಕನಾಗದೆ– ಶ್ರೇಯೋಸ್ತು. ಹೋಗು.

ಅಸುರ : ಬದುಕಿದೆ.

ಇಂದ್ರ : ಈಗ ತಿಳಿಯಿತು. ನನ್ನ ಮದವೇ ಅದು. ಅದೇ ನನ್ನನ್ನು ಕಾಡಿದ್ದು ; ನನ್ನ ವಜ್ರವನ್ನು ನಿಷ್ಫಲ ಮಾಡಿದ್ದು ; ಋಷಿವರ್ಯರ ಕ್ರಿಯೆಯಿಂದ ನನ್ನದೂ ದುರ್ಮದವೆಂದು ಅರ್ಥವಾಯಿತು. ಲೋಕಕ್ಕೆ ಈ ದಿನ ಆಶ್ವಾಸನೆ ಕೊಡುತ್ತೇನೆ : ದರ್ಪದಿಂದಲ್ಲ ; ಅಧಿಕಾರ, ಔದ್ಧತ್ಯಗಳಿಂದಲ್ಲ ಬಲ ; ಆಯುಧಗಳಿಂದ ಶಕ್ತಿಯಿಂದ ಅಲ್ಲ ಬಲ ; ತಪಸ್ಸಿನಿಂದ, ಲೋಕಹಿತ ಕಾರ್ಯದಿಂದ. ಅಶ್ವಿನಿಯರೆ, ನಿಮ್ಮ ವಿನಯ ಕಾರ್ಯದಿಂದ, ಸೌಮನಸ್ಯದಿಂದ ದೇವಲೋಕಕ್ಕೆ ಮರೆತಿದ್ದ ಒಂದು ಗುಣದ ಹೊಸ ಪ್ರಕಾಶವಾಯಿತು. ಇದರಲ್ಲಿ ನಿಮ್ಮದೇನೂ ತಪ್ಪಿಲ್ಲ. ಚ್ಯವನ ಸುಕನ್ಯೆಯರ ಕೀರ್ತಿ ಅಜರಾಮರವಾಗಿ ಲೋಕದಲ್ಲಿ ಬೆಳಗಲಿ. ಈ ಯಜ್ಞವನ್ನು ಹೀಗೆ ಮಾಡಿ ಮುಗಿಸಿದ ಶರ್ಯಾತಿ ಮಹಾರಾಜನ ಯಾಗ ಸಫಲವಾಗಲಿ.

ಋಷಿಗಣ : ಇದಕ್ಕೆ ನಮ್ಮೆಲ್ಲರ ಅಭಿನಂದನೆಗಳು.

ಚ್ಯವನ : ದೇವತೆಗಳೆಲ್ಲ ಅನುಗ್ರಹಿಸಿ ತೃಪ್ತಿಯಾಗುವಂತೆ ಸೋಮಪಾನ ಮಾಡಬೇಕು. ಈ ಯಜ್ಞ ಆಗ ಸಾಂಗವಾದೀತು (ಎಲ್ಲರೂ ಸೋಮಪಾನಮಾಡುತ್ತಾರೆ.—

ಸಾಮಗಾನ) ನಮಸ್ಕಾರ—ತೃಪ್ತರಾದ ದೇವತೆಗಳು ನಮ್ಮನ್ನು ಹರಸಿ ನಿಷ್ಕ್ರಮಿಸಬಹುದು.

ಸರ್ವಲೋಕ ಹಿತಾಯ, ಸಕಲ ಲೋಕ ಸುಖಾಯ, ಸಮಸ್ತ ಸಂತೋಷಾಯ. ನಮಃ

ಪೂರ್ಣಾಹುತಿಗೆ ಅನುಜ್ಞೆಯೆ ?

ಚ್ಯವನ : ಮಹಾ ಮಂತ್ರೋಚ್ಚಾರಣೆ ಮಾಡಿ.

(ಶಾಂತಿ ಕ್ರಿಯೆ, ತರ್ಪಣ, ಆಹುತಿ ಎಲ್ಲವೂ ನಡೆಯುತ್ತವೆ. ಆ ಕಾರ್ಯವನ್ನು ನಡಸಿ ಅಗ್ನಿಗೆ ಆರತಿ ಮಾಡುತ್ತಾರೆ.)

ಶರ್ಯಾತಿ–ರಾಣಿ : ಯಜ್ಞಕಾರ್ಯವನ್ನು ನೆರವೇರಿಸಿಕೊಟ್ಟ ಮಹರ್ಷಿ ಪುರೋಹಿತರಿಗೆ ನಮಸ್ಕರಿಸುತ್ತೇವೆ. ಆಶೀರ್ವದಿಸಬೇಕು.

ಚ್ಯವನ : ಯಜ್ಞದ ಯಜಮಾನರು ನೀವು. ನಮಸ್ಕಾರ ಅಗತ್ಯವಿಲ್ಲ. ಶ್ರೇಯೋಸ್ತು, ಕೃತಾರ್ಥೋಭವ.

(ಆಮೇಲೆ)

ಸುಕನ್ಯೆ, ನಿನ್ನ ತಾಯಿ ತಂದೆಯರಿಗೆ ನಮಸ್ಕರಿಸು. ಇದೊ, ತಮಗೆ ಮೊದಲು ಅಸಂತೃಪ್ತಿ ಮಾಡಿದೆ. ನಾನು ಸಂಬಂಧದಲ್ಲಿ ತಮ್ಮ ಅಳಿಯ, ಕ್ಷಮಿಸಬೇಕೆಂದು ಬೇಡುತ್ತೇನೆ. ತಮ್ಮ ಮಗಳೂ ನಾನೂ, ನನ್ನ ಅತ್ತೆ ಮಾವಂದಿರಿಗೆ ನಮಸ್ಕರಿಸುತ್ತಿದ್ದೇವೆ.

ರಾಜ–ರಾಣಿ : ನವದಂಪತಿಗಳಿಗೆ ಸುಕನ್ಯೆಯ ತಾಯಿ ತಂದೆ ಹರಕೆ ನೀಡುತ್ತಾರೆ.

ಎಲ್ಲರೂ : ತುಂಬಾ ಆನಂದದ ಸಂಭ್ರಮ. ಇದನ್ನು ನೋಡಿ ಕಣ್ಣು ಮನಸ್ಸು ತೃಪ್ತವಾದವು.

ಸಮಸ್ತ ಸನ್ಮಂಗಳಾನಿ ಭವಂತು  
ಕಾಲೇ ವರ್ಷತು ಪರ್ಜನ್ಯಃ  
ಪೃಥಿವೀ ಸಸ್ಯಶಾಲಿನೀ  
ಲೋಕೋಯಂ ಕ್ಷೋಭರಹಿತಃ  
ಸರ್ವೇ ಸನ್ತು ನಿರಾಮಯಾಃ

(ತೆರೆ)

# ಪಟ್ಟಬಂಧ

# ಪಾತ್ರವರ್ಗ

| | |
|---|---|
| ದಶರಥ | ಕೌಸಲ್ಯೆ |
| ರಾಮ | ಸುಮಿತ್ರೆ |
| ಲಕ್ಷ್ಮಣ | ಕೈಕೆ |
| ಭರತ | ಸೀತಾ |
| ಶತ್ರುಘ್ನ | ಮಂಥರೆ |
| ವಸಿಷ್ಠ | |
| ಸುಮಂತ್ರ | |
| ಗುಹ | |

ಸೇನಾನಾಯಕರು, ಅಧಿಕಾರಿಗಳು, ಸಭಾಸದರು, ಜೊತೆಯ
ಅಂಬಿಗರು, ಜನವರ್ಗ, ಸೇವಕ ಸೇವಕಿಯರು

# ಅಂಕ ೧

## ದೃಶ್ಯ ೧

ಮಂಥರೆ : ಆಶ್ಚರ್ಯ ! ಕೌಸಲ್ಯೆಯ ಅಂತಃಪುರದಲ್ಲಿ ಏನೊ ತುಂಬ ಸಡಗರ ಇರೋ ಹಾಗೆ ಕಾಣುತ್ತೆ ! ಇಷ್ಟು ಜನ ಅಲ್ಲಿ ಎಂದೂ ಇರುತ್ತಿರಲಿಲ್ಲ ! (ಸೇವಕಿಯನ್ನು ಕುರಿತು) ಲೇ, ಯಾರೇ ನೀನು ? ನಿನ್ನ ಒಡತಿಯ ಅರಮನೆಯಲ್ಲಿ ಏನೊ ದೊಡ್ಡ ಸಮಾರಂಭ ಇರೊ ಹಾಗೆ ಕಾಣುತ್ತೆ : ಏನು ವಿಶೇಷ ?

ಸೇವಕಿ : ಸುದ್ದಿ ಕೇಳಲಿಲ್ಲವೆ ? ನಾಳೆ ರಾಮನಿಗೆ ಯುವರಾಜ ಪಟ್ಟ ಕಟ್ಟುತ್ತಾರೆ. ರಾಜಸಭೆಯಲ್ಲಿ, ಊರಲ್ಲಿ ಅದನ್ನು ಸಾರಿಸಿದ್ದಾರೆ. ದೇವರಿಗೆ ನಮ್ಮ ರಾಣಿ ಪೂಜೆ ನಡಸುತ್ತಿದ್ದಾರೆ. ಬಂದ ಗಂಡಸರಿಗೆ ಹೆಂಗಸರಿಗೆ ದಾನ ಹಂಚ್ತಾ ಇದ್ದಾರೆ.

ಮಂಥರೆ : ಹಾಗೊ ! ಇಲ್ಲದೆ ಇದ್ದರೆ ಆ ಜಿಪುಣೆ ಸಿಕ್ಕಸಿಕ್ಕಿದವರಿಗೆ ಅಷ್ಟು ಹಣ ಕೊಟ್ಟು ಯಾಕೆ ಪೋಲು ಮಾಡ್ತಾ ಇದ್ದಳು ! ಹಣ, ದಾನ ಹೊಳೇ ಹರೀತಾ ಇದೆ.

ಸೇವಕಿ : ಆಕೆಯ ಬದುಕಿನಲ್ಲಿ ಇದು ಅತಿಸಂತೋಷದ ಸಂಗತಿ, ಸಮಯ ಅಲ್ಲವೆ ?

ಮಂಥರೆ : ಆಗಿರಬೇಕು.

(ಕೈಕೆಯ ಅರಮನೆಯ ಕಡೆಗೆ ತಿರುಗುತ್ತ ಗೊಣಗುತ್ತಾಳೆ)

ಈಗ ನನ್ನ ಮಗು ಕೈಕೆ ಗತಿ ಏನಾಗುತ್ತೊ ? ಅವಳಿಗೆ ಇದು ಗೊತ್ತೇ ಇಲ್ಲ. ಅವಳಿಗೆ ಎಚ್ಚರಿಕೆ ಕೊಡಬೇಕು. ಅಹ, ಅಹ ! ಎಷ್ಟು ಬೇಗ ಸ್ಥಿತಿ ವ್ಯತ್ಯಾಸ ವಾಗುತ್ತೆ ? ಗಾಲಿಯ ಅರ ಮೇಲಕ್ಕೆ ಹೋಗಿದ್ದವು ; ಈಗ ಕೆಳಕ್ಕೆ ಬರುತ್ತಿವೆ ! ಬಡಪಾಯಿ ! ಅವಳಿಗೆ ಯೋಚನೆಯೇ ಇಲ್ಲ ; ಅವಳ ಹೆಮ್ಮೆಗೆ ಮಿತಿಯೇ ಇಲ್ಲ...ಗಂಡನ ಪ್ರೀತಿಗೌರವ ಎಂದೆಂದಿಗೂ ಹೀಗೇ ತನಗೆ ನಡೆಯುತ್ತೆ ಎಂದು. ಅವಳು ತಿಳಿದಿರುವುದೇ ಹೀಗೆ.

(ನೇರ ಕೈಕೆಯ ಅರಮನೆಯ ಕೊಠಡಿಗೆ ಹೋಗುತ್ತಾಳೆ.)

ನೀನು ಅವಿವೇಕಿ. ಸುದ್ದಿ ತಿಳಿದು ಪಟ್ಟಣವೆಲ್ಲ ವಿಜೃಂಭಣೆಯಿಂದ ಉತ್ಸವ ಗಳನ್ನು ನಡಸ್ತಾ ಇದೆ.

ಕೈಕೆ : ಯಾವ ಸುದ್ದಿ ? ಯಾವ ಉತ್ಸವ ? ನಿನಗೆ ಯಾಕೆ ಅಷ್ಟು ಚಿಂತೆ ? ಕಳವಳ ?

ಮಂಥರೆ : ನಿನಗಾಗಿ. ಮುಂದೆ ನಿನಗೆ ಏನಾಗಲಿದೆ ? ದೊರೆ ಪ್ರೀತಿ ನಿನಗೆ ಎಷ್ಟು

ಹೆಚ್ಚು ಎಂದು ಕೊಚ್ಚುತ್ತಿದ್ದೆ. ಎಷ್ಟೋ ಕಾಲದಿಂದ ಇನ್ನೊಬ್ಬಳ ಮೇಲೆ ಅವರು ಕಣ್ಣಾಡಿಸಿದ್ದೇ ಇಲ್ಲ ಎನ್ನುತ್ತಿದ್ದೆ.

ಕೈಕೆ : ಇಲ್ಲ, ಆಡಿಸಲಿಲ್ಲ ನಿಜ. ದೊರೆಯ ಪ್ರೀತಿ ನನಗೇ ಇದೆ. ಆ ನಂಬಿಕೆ ಇದೆ.

ಮಂಥರೆ : ನಿನ್ನ ಹೆಮ್ಮೆಯೇ ಹೆಮ್ಮೆ. ನಿನಗೆ ಏನು ಬೇಕಾದರೂ ಗಂಡ ಕೊಡುತ್ತಾನೆ; ಉಳಿದ ಎಲ್ಲರಿಗಿಂತಲೂ ನಿನ್ನಲ್ಲೇ ವಿಶ್ವಾಸ ಎಂದು ನಿನ್ನ ಜಂಬ.

ಕೈಕೆ : ಹೌದು. ಆದರೆ ನೀನು ಹೇಳಬೇಕು ಅಂತಿರೋದು ಏನು ?

ಮಂಥರೆ : ನಾಳೆ ರಾಮನನ್ನು ಯುವರಾಜನೆಂದು ಲೋಕಕ್ಕೆ ತಿಳಿಯಪಡಿಸುತ್ತಾರೆ. ಆ ಬಳಿಕ ರಾಜ್ಯದ ಕಾರ್ಯಗಳೆಲ್ಲ ಅವನ ಕೈವಶವಾಗುತ್ತೆ.

(ಕೈಕೆ ತೃಪ್ತಿಯಲ್ಲಿ ಎದ್ದು ನಿಲ್ಲುತ್ತಾಳೆ.)

ಕೈಕೆ : ಒಳ್ಳೆಯ ಸುದ್ದಿ, ನಿಜವಾಗಿ ; ಮುದುಕಿ, ತುಂಬಾ ಒಳ್ಳೇ ಸುದ್ದಿ ತಂದಿದ್ದಿ ನೀನು. ಇನ್ನಾವುದೂ ನನ್ನನ್ನು ಇಷ್ಟು ಸುಖಿಯಾಗಿ ಮಾಡುವುದಿಲ್ಲ. ಈ ಸುದ್ದಿ ತಂದುಕೊಟ್ಟದ್ದಕ್ಕಾಗಿ ತಗೋ, ಈ ಮುತ್ತಿನ ಹಾರವನ್ನು ಬಹುಮಾನವಾಗಿ. ರಾಮನಿಗೆ ಯೌವನ ಬಂದಿದೆ ; ಶಕ್ತನಾಗಿದ್ದಾನೆ. ಪಟ್ಟಕ್ಕೆ ತಕ್ಕವನು. ಭರತನೆಷ್ಟು ನನಗೆ ಪ್ರಿಯನೊ ಅವನೂ ಅಷ್ಟೇ ಪ್ರಿಯನು. ಸ್ವಂತ ತಾಯಿಗೆ ಎಷ್ಟು ಗೌರವ ತೋರಿಸುತ್ತಾನೊ ನನಗೆ ಅಷ್ಟೇ ಗೌರವ ತೋರಿಸುತ್ತಾನೆ. ನಿಜವಾಗಿ ನನಗೆ ಸಂತೋಷವಾಗಿದೆ.

ಮಂಥರೆ : ನಿನಗೆ ಬುದ್ಧಿ ಏನೂ ಇಲ್ಲ, ಮಗು. ಸುದ್ದಿ ಕೇಳಿ ನಿನಗೆ ಚಿಂತೆ ಬರುವುದರ ಬದಲು ಸಂತೋಷ ಎಂದು ನುಡಿಯುತ್ತಿದ್ದೀಯೆ. ನಿನ್ನನ್ನು ಇದು ಅಲ್ಲಾಡಿಸ ಬೇಕಿತ್ತು. ಇದು ನಡೆದರೆ ಅರಮನೆಯಲ್ಲಿ ನೀನೇನು ಮಾಡುತ್ತೀ ? ರಾಜನಲ್ಲಿ ನಿನ್ನ ಸ್ಥಾನವೇನಾಗುತ್ತದೆ ?

ಕೈಕೆ : ಇಷ್ಟು ದಿನವೂ ಏನಾಗಿದ್ದೆನೊ ಅದೇ. ನನ್ನ ರಾಜನ ಮುದ್ದಿನ ಚಿಕ್ಕ ಹೆಂಡತಿ. ದೊರೆ ನನಗೆ ಪ್ರಿಯರು. ಅತಿ ಸಣ್ಣ ಇಷ್ಟವನ್ನು ನುಡಿದರೆ ಸಾಕು ತೀರಿಸು ತ್ತಾರೆ. ಬೆಳಿಗ್ಗೆ, ಮಧ್ಯಾಹ್ನ, ರಾತ್ರಿ ಅವರಿಗೆ ಬಿಡುವಾದಾಗಲೆಲ್ಲಾ ಇಲ್ಲಿಯೇ ಬಂದಿರುತ್ತಾರೆ. ಎಷ್ಟು ಪ್ರೀತಿ ಅವರಿಗೆ ನನ್ನಲ್ಲಿ !

ಮಂಥರೆ : ನೀನು ಇಂಥ ತಿಳಿಗೇಡಿಯಾಗಿಲ್ಲದಿದ್ದರೆ ದಶರಥನು ನಿನ್ನ ಮೇಲೆ ಮೋಹ ಗೊಂಡಷ್ಟು ನೀನು ಅತಿಮೋಹವುಳ್ಳವಳಾಗುತ್ತಿರಲಿಲ್ಲ. ನಾನು ಕೇಳೋದು ಇದನ್ನ : ಎಲ್ಲರಿಗಿಂತಲೂ ನೀನು ರಾಜನಿಗೆ ಪ್ರಿಯಳಾಗಿದ್ದರೆ ಇದನ್ನು ಅವನು ನಿನಗೆ ಏಕೆ ಮಾಡ್ತಾ ಇದ್ದ, ಮಗು ?

ಕೈಕೆ : ವಂಶಕ್ಕೆ ದೊಡ್ಡ ಮಗ ರಾಮ. ಜನಕ್ಕೆ ಅವನ ಮೇಲೆ ಪ್ರೀತಿ. ಹೇಗೆ ಬೆಲೆ

ಕಟ್ಟಿದರೂ ಅವನು ಪಟ್ಟಕ್ಕೆ ತಕ್ಕವನು. ಈ ನಾಡಿನ ಶಾಸನಗಳೂ ಹಾಗೇ ಇವೆ. ತಂದೆ, ತಾತಂದಿರು ನಡಸಿಕೊಂಡು ಬಂದ ಸಂಪ್ರದಾಯ ಅದೇ.

ಮಂಥರೆ : ನಿನ್ನ ಗತಿ ಏನಾಗುತ್ತೆ ? ಇದು ನಾನು ನಿನ್ನನ್ನು ಕೇಳುವ ಪ್ರಶ್ನೆ. ಈವರೆಗೂ ಕೌಸಲ್ಯೆಯನ್ನು ಸುಮಿತ್ರೆಯನ್ನು ನೀನು ಯಾವ ಗೌರವದಿಂದಲೂ ಕಂಡಿಲ್ಲ ; ಅವರಿಗೂ ನಿನಗೂ ಯಾವ ಪ್ರೀತಿಯೂ ಇರಲಿಲ್ಲ ; ದೊರೆಯೂ ನೀನೂ ಅವರನ್ನು ಉಪೇಕ್ಷೆ ಮಾಡಿದ್ದೀರಿ. ಬರುವುದೆಲ್ಲ ನಿನ್ನ ಕಡೆ ಹರಿದು ಬಂದಿದೆ. ನಿನ್ನನ್ನು ಕಂಡು ಅವರಿಗೆ ಅಸೂಯೆ ಇದೆ.

ಕೈಕೆ : ಅವರಿಷ್ಟ ಬಂದ ರೀತಿ ಅವರಿರಲಿ. ರಾಮನು ಉದಾರಿ. ಅವನು ಎಂದೇ ಆಗಲಿ, ತನ್ನ ರಾಜ್ಯದಲ್ಲಾಗಲಿ, ತನ್ನ ಆಳಿಕೆಯಲ್ಲಾಗಲಿ, ಒಂದು ತಪ್ಪು ನಡೆಯಲು ಅವಕಾಶ ಕೊಡುವುದಿಲ್ಲ. ನನಗೆ ಯಾವಾಗಲೂ ಅವನನ್ನು ಕಂಡರೆ ಪ್ರೀತಿಯೇ. ಇದನ್ನು ಧಾರಾಳವಾಗಿ ಹೇಳಿಬಿಡುತ್ತೇನೆ : ಕೆಲವೇಳೆ ಭರತನ ಮೇಲೆ ಇರುವುದಕ್ಕಿಂತ ನನಗೆ ರಾಮನ ಮೇಲೆ ಪ್ರೀತಿ ಹೆಚ್ಚು. ಸುಮ್ಮನೆ ಯಾಕೆ ಸಂದೇಹ, ಭಯ ಎತ್ತುತ್ತಿದ್ದೀಯೆ ? ನೀನೊಂದು ಮುದಿಗೂಬೆ. ನಿನಗೆ ನನ್ನಲ್ಲಿರುವ ಪ್ರೀತಿ ನನಗೆ ಲೋಕದ ಎಲ್ಲ ಕೇಡುಗಳನ್ನು ತರುತ್ತವೆನ್ನಿಸುತ್ತಿದೆ. ಯಾವ ಭಯ, ಸಂದೇಹ ಉಂಟಾಗಬಹುದು ಎಂದು ನನ್ನ ಕಣ್ಣಿಗೆ ಕಾಣೆಸದು, ಮಂಥರೆ.

ಮಂಥರೆ : ಅದೆಲ್ಲ ನಿಜ ಇರಬಹುದು ; ಇನ್ನು ಮೇಲೆ ಕೌಸಲ್ಯೆ ನಿನ್ನನ್ನು ಯಾವ ರೀತಿ ಕಂಡಾಳು ! ಅವಳು ರಾಜಮಾತೆ ಆಗುತ್ತಾಳೆ. ಸಮಸ್ತದಲ್ಲಿಯೂ ಆಕೆಯ ಕೈ ಮೇಲಾಗುತ್ತದೆ. ಅರಮನೆಯ ಮೇಲೆ, ಆಳುವ ರಾಜನ ಮೇಲೆ, ನಿನ್ನ ಮೇಲೆ ?

ಕೈಕೆ : ನನ್ನ ದೊರೆ ನನ್ನೊಡನಿರುತ್ತಾರೆ. ತನ್ನ ಪ್ರೀತಿ ನನ್ನಿಂದ ಉರುಳುವಂತೆ ಅವರು ಏನೂ ಮಾಡಲಾರರು. ಅಂತಹ ಮನುಷ್ಯರಲ್ಲ ಆತ.

ಮಂಥರೆ : ದಶರಥನು ಮುದುಕ. ರಾಣಿಯರಲ್ಲಿ ನೀನು ಎಲ್ಲರಿಗಿಂತ ಚಿಕ್ಕವಳು. ಇತರ ಎಲ್ಲ ರಾಣಿಯರಲ್ಲಿಯೂ ನೀನು ಹೊಟ್ಟೆ ಉರಿ ಉಂಟುಮಾಡಿದ್ದೀಯೆ. ಅವರಿಗೆ ತೋರಿಸಿರುವ ಎಲ್ಲ ತಿರಸ್ಕಾರ ಅವಮಾನಗಳನ್ನು ಕೌಸಲ್ಯೆ ನಾಳೆ ಕ್ಷಮಿಸುತ್ತಾಳೆಯೆ ? ನಿನ್ನ ಕಾಲ ಕಸದಂತೆ ಅವಳನ್ನು ಕಂಡಿದ್ದೀಯೆ ! ನಿನ್ನ ಎಣಿಕೆ ತಪ್ಪು. ರಾಜನಿಂದ ರಾಮನಿಗೆ ಬೇಗ ಅಧಿಕಾರ ಸೇರುತ್ತದೆ. ಪ್ರಬಲ ಸ್ಥಾನದ ಪೀಠದಿಂದ ನೀನು ಇಳಿದು ಬೀಳುತ್ತೀಯೆ. ಗಂಡನಿಲ್ಲದೆ, ಸ್ಥಾನವಿಲ್ಲದೆ, ಅಧಿಕಾರವಿಲ್ಲದೆ ನೀನು ಅವರ ದ್ವೇಷಕ್ಕೆ ಈಡಾಗುತ್ತೀಯೆ. ದೊಡ್ಡ ರಾಣಿ ಎಲ್ಲಕ್ಕೂ ಮೇಲ್ಪಟ್ಟವಳು. ಅವಳ ಮಗ ಆಳುತ್ತಿರುತ್ತಾನೆ. ನೀನು ಉಸಿರಿಡುತ್ತ ಬದುಕಿರುತ್ತೀಯೆ, ಅಷ್ಟೇ. ಇಲ್ಲವೆ, ಕೇಕಯ ರಾಜ್ಯದ ಆ ಬೆಟ್ಟ ಭೂಮಿಗೆ, ತಂದೆಯ ಕಾಡಿನ ಪ್ರದೇಶಕ್ಕೆ ಹೊರಟುಹೋಗಬೇಕಾದೀತು. ಅಂಥದು

ಆಗಬೇಕೆಂದು ನಿನ್ನ ಇಷ್ಟವೆ ? ಯೋಚನೆ ಮಾಡು. ಅಥವಾ, ಅದೇ ನಿನಗೆ ಪ್ರಿಯವೊ.

ಕೈಕೆ : ಏನಿತೀ ಮಾಡ್ತೀಯೆ ? ನನ್ನ ಮನಸ್ಸಿನಲ್ಲಿ ವಿಷ ಬಿತ್ತುತ್ತಿದ್ದೀಯೆ. ಇದರಿಂದ ನಿನಗೇನು ಲಾಭ ? ದೊರೆ ದೊಡ್ಡ ಸಭೇಲಿ ತೀರ್ಮಾನ ಮಾಡಿದ್ದಾರೆ. ಅದನ್ನು ಬದಲಾಯಿಸಲು ಆಗುತ್ತೆಯೊ ಯಾರಾದರೂ ? ಜನವೆಲ್ಲಾ ಅದನ್ನು ಕೇಳಿದ್ದಾರೆ. ನೀನೇ ಹೇಳ್ತಾ ಇದ್ದೀಯೆ ಪ್ರಪಂಚ ಎಲ್ಲ ಆನಂದದಿಂದ ಈ ಸಮಾರಂಭಕ್ಕೆ ಸಿದ್ಧವಾಗ್ತಾ ಇದೆ ಎಂದು.

ಮಂಥರೆ : ದೊರೆ ಸ್ವಲ್ಪವೂ ತಡ ಮಾಡ್ತಾ ಇಲ್ಲ. ಜನಕ ಮಹಾರಾಜನಿಗೆ ಹೇಳಿ ಕಳಿಸಿಲ್ಲ ; ನಿಮ್ಮ ಜನಕ್ಕೆ ಹೇಳಿ ಕಳಿಸಿಲ್ಲ. ಸಮಯ ಚೆನ್ನಾಗಿದೆ ; ಈಗ ಭರತ ಊರೊಳಗೆ ಇಲ್ಲ. ಪಟ್ಟಾಭಿಷೇಕ ನಾಳೆ ಬೆಳಿಗ್ಗೆ.

ಕೈಕೆ : ನನ್ನ ತಂದೆಗೂ ಹೇಳಿ ಕಳಿಸಿಲ್ಲ. ಜನಕನಿಗೂ ಇಲ್ಲ ಎನ್ನುತ್ತಿದ್ದೀಯೆ. ಸರಿ ಹೋಯಿತು ತೂಕ. ರಾಜನು ಯಾವ ಪಕ್ಷಪಾತವನ್ನೂ ಮಾಡಿಲ್ಲ, ಮಾಡ. ಕೌಸಲ್ಯೆಯನ್ನು ಕುರಿತದ್ದು ಚಿಂತೆಯ ವಿಷಯವೇ. ನಿಜವಾಗಿ ಒಳ್ಳೆಯದಲ್ಲ ; ಪರಿಸ್ಥಿತಿಯನ್ನು ನೋಡಿದರೆ. ಆದರೂ ಈಗ ನಾನು ಇನ್ನೇನನ್ನೂ ಮಾಡೋಕಾಗೊಲ್ಲ.

ಮಂಥರೆ : ಆಗೋಲ್ಲ ? ಮಾಡಲಾರೆಯ ? ಇನ್ನು ಕೆಲವೇ ಕ್ಷಣಗಳಲ್ಲಿ ಮಹಾರಾಜರು ಇಲ್ಲಿಗೆ ಬರ್ತಾರೆ. ಹೇಳು ಅವರಿಗೆ : ಅತನ ತೀರ್ಮಾನ ನಿನಗೆ ಒಪ್ಪೋಲ್ಲ ಎಂದು. ಹುಚ್ಚು ಹಿಡಿದವಳ ಹಾಗೆ ಪಟ್ಟು ಹಿಡಿ. ಸತ್ತರೂ ಸರಿಯೆ, ಒಪ್ಪೋಲ್ಲ ಎಂದು ಹೇಳು.

ಕೈಕೆ : ಹುಚ್ಚು ಹುಚ್ಚು ಕೂಗಾಡ್ತಾ ಇದ್ದೀಯೆ. ಈಗ ಅದನ್ನು ಬದಲಾಯಿಸೋದಕ್ಕೆ ಆಗುತ್ತೆಯೆ ? ಸುಮ್ಮನೆ ರಂಪು ಮಾಡಿದ ಹಾಗಾಗುತ್ತೆ. ಅನಾವಶ್ಯಕವಾಗಿ ಒಂದು ಕಹಿ ಪ್ರಸಂಗವನ್ನು ಉಂಟು ಮಾಡಿದ ಹಾಗಾಗುತ್ತೆ. ಯಾರಿಗೂ. ಅದ್ದನ್ನು ನೋಡಿ ಸುಮ್ಮನೆ ಇರೋಕೆ ಬಿಡು.

ಮಂಥರೆ : ಅಂಥ ಗತಿ ಏನೂ ಇಲ್ಲ. ದೊರೆ ತೀರ್ಮಾನವನ್ನು ಬದಲು ಮಾಡಬೇಕೆಂದು ನೀನು ಬಲಾತ್ಕಾರ ಮಾಡಬಹುದು. ಆತನು ಮರ್ಯಾದಸ್ಥ. ತಾನು ಕೊಟ್ಟಿರುವ ಮಾತುಗಳನ್ನು ಆತ ನಡಸಿಕೊಡುವವನು.

ಕೈಕೆ : ಏನು ಮಾತು ?

ಮಂಥರೆ : ಹೇಳು ಆತನಿಗೆ : ಕೇಳಿದಾಗ ನಿನಗೆ ಎರಡು ವರಗಳನ್ನು ಕೊಡುತ್ತೇನೆ ಎಂದು ಹೇಳಿರಲಿಲ್ಲವೆ ಆತ ? ಅದನ್ನು ಈಗ ನಡಸಿಕೊಡು ಅಂತ ಕೇಳು.

ಕೈಕೆ : ಅದು ಚಿಲ್ಲರೆ ಸಂಗತಿ. ಸ್ವಾರ್ಥ ತೋರಿಸಿದ ಹಾಗಾಗುತ್ತೆ. ಇಂಥ ಶುಭ

ಸಮಯದಲ್ಲಿ ಆ ಸಂಗತಿ ಎತ್ತಿ ಇಲ್ಲಿ ನಡಸಿಕೊಡಬೇಕೆಂದು ಕೇಳುವುದು ಸರಿಯಾಗದು.

ಮಂಥರೆ : ಅದನ್ನೇ ನೀನು ಮಾಡಬೇಕು. ತನ್ನ ಮಾತು ನಡಸಿಕೊಡದೆ ಹೋದರೆ ಪಟ್ಟು ಹಿಡೀತೇನಂತ ಹೇಳು. ಮುಂದೆ ಅವನು ಹೇಳಿದ್ದನ್ನು ಮಾಡುವುದಿಲ್ಲ ಎಂದು ಹೇಳು. ತಿನ್ನೋಲ್ಲ, ಕುಡಿಯೋಲ್ಲ ಎನ್ನು ; ಜೀವ ಬಿಡ್ತೇನೆ ಅನ್ನು.

ಕೈಕೆ : ಶನಿ ತೀರ್ಮಾನಗಳು ; ನನ್ನೆದುರು ನಿಲ್ಲಬೇಡ : ಪಾಪಿ. ಹೋಗು ಹೊರಗೆ.

ಮಂಥರೆ : ನಾನು ಹೋಗಬಹುದು ; ಆದರೆ ನೀನು ಎಲ್ಲಿ ನಿಲ್ತೀಯೆ ? ನಾನು ಹೇಳಿದ ಹಾಗೆ ಮಾಡಿದರೆ ಮಾತ್ರ ನೀನು ಉಳಿಯುವೆ. ಈ ಸ್ಥಿತಿಯನ್ನು ಹದಕ್ಕೆ ತರಬಲ್ಲೆ. ದೊರೆ ಇಲ್ಲಿಗೆ ಬರೊ ಸಮಯ ಆಯ್ತು. ಆತನು ಮನಸ್ಸು ಬದಲಾಯಿಸಿದ್ದಾನೆಂದೂ ತನ್ನ ಮಾತು ನಡಸುವುದಕ್ಕೆ ಆಗುವುದಿಲ್ಲವೆಂದೂ ತಿಳಿಯಲಿ. ಜನ ತೀರ್ಮಾನ ಮಾಡಿದವರು, ಬದಲಾಯಿಸಬಲ್ಲರು ; ಅಲ್ಲವೆ ?

ಕೈಕೆ : ಕೇಳಬೇಕಾದ ಎರಡು ವರ ಯಾವುವು ?

ಮಂಥರೆ : ಹದಿನಾಲ್ಕು ವರುಷ ರಾಮನು ನಾಡು ಬಿಟ್ಟು ಕಾಡಿಗೆ ಹೋಗಬೇಕೆನ್ನು. ಆಗ ಅಯೋಧ್ಯೆಯಲ್ಲಿದ್ದು ಕೊಂಡು ಭರತನು ಆಳಬೇಕೆನ್ನು. ಖಡಾಖಂಡಿತವಾಗಿ ಹೇಳು. ಮಿಾಯಬೇಡ, ಕುಡಿಯಬೇಡ, ತಿನ್ನಬೇಡ, ತಲೆ ಬಾಚಿಕೊಳ್ಳಬೇಡ. ನೀನು ಹೇಳಿದ್ದನ್ನು ಅವನು ನಡಸಿಕೊಡದಿದ್ದರೆ ಅವನು ನಿನ್ನ ಕೈಯಲ್ಲಿ ಮಾತನಾಡಲು ಅಶಕ್ಯವಾಗುವಂತೆ ಮಾಡು. ಏನು ನಡೆಯುತ್ತೊ ನೋಡೋಣ, —ಅವನ ಪ್ರೀತಿ ನಿನ್ನ ಮೇಲಿರುವುದು ನಿಜವಾದರೆ. ಮೋಹದಲ್ಲಿ ಆಡಿದಲ್ಲೆ ಮಾತುಗಳೆಲ್ಲ ಒಟ್ಟಿಗೆ ಕೂಡಿ ಹಾಕಿದರೂ ಒಂದು ಗಟ್ಟಿ ಸನ್ನಿವೇಶದಲ್ಲಿ ಆ ಮನುಷ್ಯನ ಲೆಕ್ಕಕ್ಕೆ ಬರುವುದಿಲ್ಲ.

ಕೈಕೆ : ಸ್ಥಿತಿ ಈಗ ಅಷ್ಟು ಕೆಟ್ಟಿದೆಯೆ ಮಂಥರೆ ?

ಮಂಥರೆ : ಹೌದು. ಬೇಗ, ಕೈ ಮಿಾರೀತು ಜೋಕೆ.

ಕೈಕೆ : ಅವರು ಒಪ್ಪಿಕೊಳ್ತಾರೆ ಅಂತ ನೀನು ನಿಶ್ಚಯವಾಗಿ ನಂಬಿದ್ದೀಯ ಮಂಥರೆ ? ಕೆಟ್ಟ ಮುದುಕಿ.

ಮಂಥರೆ : ನಿನಗೆ ವರಗಳನ್ನು ಕೊಡಲಿಲ್ಲ ಎಂದು ಹೇಳಲಿ. ಅವನ್ನು ಮುರೀತೀಯ ಈಗ ಎಂದು ಕೇಳು. ಇಲ್ಲ ಮಗು, ನಿನ್ನ ಕೈ ಬಿಡೊಲ್ಲ ಆತ. ಇಕ್ಷ್ವಾಕು ವಂಶದ ರಾಜ ಕೊಟ್ಟ ಮಾತಿಗೆ ಎಂದೂ ತಪ್ಪುವವನಲ್ಲ. ನಡಸಿಕೊಡ್ತಾನೆ. ನೀನು ಆತನ ಪ್ರಾಣ ಉಳಿಸಿದ್ದೀಯೆ. ಅವನ ಜೀವ ಈಗ ನಿನ್ನ ಕೈಯಲ್ಲಿದೆ.

ಕೈಕೆ : ಯೋಚಿಸಿದರೆ ನನಗೆ ನಡುಕ ಬರುತ್ತೆ. ಆತನ ಜೀವ ? ನನ್ನ ಕೈಗಳಲ್ಲಿ ? ಆದರೂ ಅನಿಸುತ್ತೆ : ಬೇರೆ ದಾರಿ ಇಲ್ಲ ಎಂದು. ರಾಜನಾಗಿರಲು ರಾಮನೇನೊ ಯೋಗ್ಯ. ಆದರೆ ನನ್ನ ಮೇಲೆ ಅಧಿಕಾರ ನಡಸಲು ಕೌಸಲ್ಯೆ ಯೋಗ್ಯಳಲ್ಲ.

ಅದನ್ನು ಸಹಿಸಲಾರೆ. ಅವಳು ಅಥವಾ ನಾನು. ಅದು ತೀರ್ಮಾನವಾಗಬೇಕು. ಮಾಡ್ತೇನೆ ; ಏನೇ ಆಗಲಿ.

ಮಂಥರೆ : ನನ್ನ ಮಗು ಹಾಗಿರುವುದನ್ನು ನೋಡಿದರೆಯೇ ನನಗೆ ಸಂತೋಷ. ಈಗ ನೀನು ನಿಜವಾಗಿ ನಿನ್ನಮ್ಮನ ಮಗಳು. ಗೆಲ್ತೀಯೆ ಕೈಕೆ,—ನಿಸ್ಚಿಚ್ಛೆ ಗಟ್ಟಿ ಮಾಡಿಕೊ. ಎಲ್ಲ ದಾರಿಗೆ ಬರುತ್ತೆ.

ಕೈಕೆ : ಸುಖ ಇರಲಿ, ದುಃಖ ಬರಲಿ. ಕೆಲಸ ಕೈಕೊಂಡಿದ್ದೇನೆ ; ವಿಧಿ ಹೇಗೆ ಬೇಕಾದರೂ ನಡಸಲಿ.

ಮಂಥರೆ : ಗದರಿಸಿದರೆ, ಬೇರೆ ಆಸೆ ತೋರಿಸಿದರೆ ಒಪ್ಪಿಕೊಳ್ಳಬೇಡ, ಮರುಳಾಗ ಬೇಡ.

ಕೈಕೆ : ಈಗ ಯಾವುದೂ ನನ್ನನ್ನು ತಿರುಗಿಸುವುದಿಲ್ಲ.

ಮಂಥರೆ : ದೇವರು ನಿನ್ನ ಇಷ್ಟ ನಡಸಿಕೊಡಲಿ, ಮಗು.

(ಕೈಕೆಯನ್ನು ಪ್ರೀತಿಯಿಂದ ತಬ್ಬಿಕೊಂಡು ಭುಜ ತಟ್ಟುತ್ತಾಳೆ)

ಕೈಕೆ : ನಾನು ಎಣಿಸಿದ್ದಕ್ಕಿಂತ ನೀನು ಜಾಣೆ. ಬರೀ ಸೇವಕಿಯಲ್ಲ, ದಾದಿಯಲ್ಲ. ಬೇರೆಯವರು ನಿನ್ನನ್ನು ಸರಿಯಾಗಿ ನಡಸಿಕೊಳ್ತಾ ಇಲ್ಲ. ನೀನು ವಕ್ರ, ಗೂನಿ ಎಂದು ತಿರಸ್ಕರಿಸುತ್ತಾರೆ. ನಿನಗೆ ದೊಡ್ಡ ಬಹುಮಾನ ಕೊಡ್ತೇನೆ ನಾನು.

(ತೆರೆ)

## ದೃಶ್ಯ ೨

(ದಶರಥ ಸಂತೋಷವಾಗಿ ಉತ್ಸುಕನಾಗಿ ಬರುತ್ತಿದ್ದಾನೆ. ಹೊಸಿಲು ದಾಟುತ್ತಲೇ)

ದಶರಥ : ಕೈಕೆ, ಕೈಕೆ, ನಿನಗೆ ಒಳ್ಳೇ ಸುದ್ದಿ ತಂದಿದ್ದೇನೆ. ಎಲ್ಲಿದ್ದೀ ? (ಒಬ್ಬ ಸೇವಕಿಗೆ) ನಿನ್ನ ಒಡತಿ ಎಲ್ಲಿ ? ಕೈಕೆ ಎಲ್ಲಿ ? ಅವಳ ಕೋಣೆಯಲ್ಲಿ ಏಕಿಲ್ಲ ? ಎಲ್ಲವೂ ಸಿಕ್ಕಾಪಟ್ಟೆ ಬಿದ್ದಿವೆ ಏಕೆ ? ಹೀಗೆ ಚೆಲ್ಲಾಪಿಲ್ಲಿಯಾಗಿ ಅವಳೆಂದಿಗೂ ಬಿಡು ತ್ತಿರಲಿಲ್ಲ. ಒಂದು ದೂಳ ಕಣ ಯಾವುದರ ಮೇಲೂ ಬೀಳಲು ಬಿಡುವುದಿಲ್ಲ. ಯಾವುದೂ ಅಸ್ತವ್ಯಸ್ತವಾಗಿರಕೂಡದು. ಏನಾಗಿದೆ ಈ ಮನೆಗೆ ಇವೊತ್ತು ? ಎಲ್ಲಿದ್ದಾಳೆ ? ಕೈಕೆ, ಕೈಕೆ—

(ಒಬ್ಬ ಸೇವಕಿಯ ಪ್ರವೇಶ)

ಸೇವಕಿ : ಒಳಮನೆಯಲ್ಲಿದ್ದಾರೆ ಮಹಾಸ್ವಾಮಿ. ನಮ್ಮ ಯಾರನ್ನೂ ಅಲ್ಲಿಗೆ ನೋಡ ಬಿಡುವುದಿಲ್ಲ, ಮಾತಾಡುತ್ತಿಲ್ಲ. ದೊಡ್ಡ ವ್ಯಥೆಯಲ್ಲಿದ್ದಾರೆ.

ದಶರಥ : ಯಾಕಂತೆ ? ಅವಳಿಗೆ ಇಲ್ಲದ್ದು ಯಾವುದು ಇದೆ ? ಅವಳಿಗೆ ಬೇಕಾದ್ದು ಏನಿರಬಹುದು ? (ಒಳಮನೆಗೆ ಹೋಗುತ್ತಾನೆ.) ಕೈಕೆ, ನಿನಗೆ ಒಳ್ಳೇ ಸುದ್ದಿ ತರ್‍ತಿದ್ದೇನೆ. ಅದನ್ನು ಕೇಳಿ ನಿನಗೆ ಸಂತೋಷವಾಗುತ್ತೆ. ನಿನಗೆ ಏನಾಗಿದೆ ?

(ಕಿಟಕಿಗಳು ಮುಚ್ಚಿವೆ ; ಗವಾಕ್ಷಿಗಳಿಗೆ ತೆರೆ ಕಟ್ಟಿದೆ. ಕೂದಲು ಬಿಚ್ಚಿಕೊಂಡು ಕೈಕೆ ನೆಲದ ಮೇಲೆ ಬಿದ್ದಿದ್ದಾಳೆ. ಒಳಗೆ ಹೋಗಿ ಹೆಗಲು ತಟ್ಟುತ್ತಾನೆ. ಮೆಲ್ಲಗೆ ಅಲ್ಲಾಡಿಸುತ್ತಾನೆ. ತಕ್ಕಮಟ್ಟಿಗೆ ಮೃದುವಾಗಿ)

ದಶರಥ : ಇದೇನು ನಿನ್ನ ಸ್ಥಿತಿ ? ಮೈಲಿ ಚೆನ್ನಾಗಿಲ್ಲವೆ ? ಯಾರಾದರೂ ನಿನ್ನನ್ನು ಕಾಡಿದ್ದಾರೆಯೆ ? ಯಾವುದಕ್ಕೆ ಈ ಕೋಪ ನಿನಗೆ ? ನಿನ್ನನ್ನು ಹುಡುಕಿಕೊಂಡು ಬಂದಿದ್ದೇನೆ. ಎಂದಿನ ಹರ್ಷ ನಿನಗಿಲ್ಲ. ತಲೆ ಬಾಚಿಕೊಂಡಿಲ್ಲ ; ಕೊರಲಲ್ಲಿ ಸರಗಳಿಲ್ಲ ; ಸಿಕ್ಕಿದ ಹಾಗೆ ಬೀಸಾಡಿದ್ದೀಯೆ. ನೀನು ಹಾಕಿಕೊಂಡಿರುವ ಈ ಬಟ್ಟೆಗಳೊ ! ದೊಡ್ಡ ಆಪತ್ತು ಹೊಡೆದ ಹಾಗೆ ನೆಲದ ಮೇಲೆ ಬಿದ್ದಿದ್ದೀಯೆ. ನಾನಿನ್ನೂ ಬದುಕಿದ್ದೇನೆ, ಕೈಕೆ. ಅಯೋಧ್ಯೆಯಲ್ಲಿ ಬೇಕಾದಷ್ಟು ಐಶ್ವರ್ಯ ಇದೆ. ನನ್ನ ಶಕ್ತಿಗೆ ಯಾವ ಮಿತಿಗಳೂ ಇಲ್ಲ. ನಾನು ಏನು ಮಾಡಬಹುದೊ ಅದಕ್ಕೆ ಯಾವ ಪುರೋಹಿತನೂ ಯಾವ ಮಂತ್ರಿಯೂ ಯಾವ ಹೊರ ಒಳಗಿನವರೂ ಅಡ್ಡಿ ಮಾಡರು. ಏನಿಷ್ಟು ದೊಡ್ಡ ತೊಂದರೆ ? ನೀನು ಹೇಳಿದ್ದನ್ನು ಯಾವುದನ್ನಾದರೂ ನಾನು ಮಾಡಿಲ್ಲವೆ ?

(ಕೈಕೆ ಉತ್ಸಾಹವಿಲ್ಲದೆ)

ಕೈಕೆ : ಅದೇ : ನನ್ನ ಕಿವಿಗೆ ಬಿದ್ದ ಸುದ್ದಿ ಏನು ?

ದಶರಥ : ಆ ಸುದ್ದಿ ನಿನಗೆ ಸಂತೋಷ ಉಂಟುಮಾಡಬೇಕು. ನಿನಗೆ ರಾಮನಲ್ಲಿ ಪ್ರೀತಿ ಇದೆ ಅಲ್ಲವೆ ? ಸ್ವಂತ ಮಗನೆನ್ನುವಷ್ಟು ಪ್ರೀತಿ ನಿನಗೆ ಅವನಲ್ಲಿಯೂ ಇದೆ ಎಂದು ನನಗೆ ಗೊತ್ತು.

ಕೈಕೆ : ಪ್ರೀತಿ, ಬೇಕಾದಷ್ಟಿದೆ. ಆದರೆ ನನ್ನ ಮೊದಲ ಪ್ರೀತಿ ನನ್ನ ಮಗನ ಮೇಲೆ. ಹನ್ನೆರಡು ತಿಂಗಳಿಗೆ ಮೀರಿ ದೂರದ ಕೇಕಯ ನಾಡಿನಲ್ಲಿ ಅವನು ಇರಲು ಉಳಿಸಿ ಬಿಟ್ಟಿದ್ದೀರಿ. ಇದ್ದಕ್ಕಿದ್ದಂತೆ ಅವನ ಎಲ್ಲ ಹಕ್ಕುಗಳನ್ನು ಕಿತ್ತುಕೊಳ್ಳಲು ಅವಕಾಶ ಪಡೆದುಕೊಂಡಿದ್ದೀರಿ. ರಾಮನ ಕೈಗೆ ರಾಜ್ಯವನ್ನು ಒಪ್ಪಿಸುತ್ತೇನೆಂದು, ಅದು ನಿಮ್ಮ ಉದ್ದೇಶ ಎಂದು. ಈ ಬೆಳಿಗ್ಗೆ ನೀವು ನನಗೆ ಹೇಳಲಿಲ್ಲ. ರಾಮನಿಗೂ ಭರತನಿಗೂ ವಯಸ್ಸಿನಲ್ಲಿ ಕೆಲವು ದಿನಗಳು ಹೆಚ್ಚು ಕಡಮೆ

ಅಷ್ಟೇ. ಭರತನಿಗೂ ರಾಮನಿಗಿರುವಷ್ಟೇ ಹಕ್ಕಿದೆ. ಅವನು ನನ್ನ ಮಗ; ನಮ್ಮಿಬ್ಬರ ಮಗ.

ದಶರಥ : ಹೌದು. ನಮ್ಮಿಬ್ಬರ ಮಗ. ಆದರೇನು ? ರಾಮ ಎಲ್ಲರಿಗಿಂತಲೂ ಹಿರಿಯ. ಸಿಂಹಾಸನ ಏರಲು ಹಕ್ಕುಳ್ಳ ಅಧಿಕಾರಿ. ಜನವೆಲ್ಲ ಅವನನ್ನು ಮೆಚ್ಚಿ ಕೊಂಡಾಡುತ್ತಾರೆ. ಈಗ ಎಷ್ಟೋ ವರ್ಷಗಳಿಂದ ನಾನು ಅವನನ್ನು ಯುವ ರಾಜನನ್ನಾಗಿ ಘೋಷಿಸಬೇಕೆಂದು ಜನ ನಿರೀಕ್ಷಿಸುತ್ತಿದ್ದಾರೆ. ಅದೇ ಸಹಜ. ನಮ್ಮ ವಂಶದ ಸಂಪ್ರದಾಯ ಕೂಡ.

ಕೈಕೆ : ನನಗಲ್ಲ.

ದಶರಥ : ನಾನು ಎಂಥ ವಿವೇಕಶೂನ್ಯ ? ನಿನಗೆ ಸಂತೋಷವಾಗುತ್ತೆ ಎಂದು ನಂಬಿ ಕೊಂಡು ಎಷ್ಟೊ ಉಲ್ಲಾಸದಿಂದ ಇಲ್ಲಿಗೆ ಬಂದೆ. ಎಂದಿಗೇ ಆಗಲಿ, ಭರತನಿಗಿಂತ ರಾಮನಲ್ಲಿ ನಿನಗೆ ಕಡಮೆ ವಿಶ್ವಾಸವೆಂದು ನೀನು ತೋರಿಸಿಲ್ಲ. ನಾಲ್ಕೂ ಜನ ಮಕ್ಕಳು ಒಟ್ಟಿಗಿರುತ್ತಾರೆ. ಅವರಲ್ಲಿ ಒಬ್ಬರೊಬ್ಬರಿಗೆ ವಿಶ್ವಾಸ ಪ್ರೀತಿ ಗೌರವ ಇವೆ. ಭರತನಿಗೆ ನಾನು ಈ ಸುದ್ದಿ ಕಳಿಸದಿದ್ದರೆ ಜನಕನಿಗೂ ಕಳಿಸಿಲ್ಲ.

ಕೈಕೆ : ಈ ಅವಸರ ಏನಿತ್ತು ?

ದಶರಥ : ಕೈಕೆ, ಇದ್ದಕ್ಕಿದ್ದಂತೆ ನನಗೇನೊ ಶಂಕೆ ಹುಟ್ಟಿತು : ನಾನು ಬೇಗ ಸಾಯಲಿದ್ದೇನೆ ಎಂದು. ಬಹು ಕೆಟ್ಟ ಕನಸೊಂದಾಯಿತು ನಿನ್ನೆ. ಅದನ್ನು ನಿನಗೆ ಹೇಳಬೇಕೆನ್ನಿಸಲಿಲ್ಲ. ಈ ನಿನ್ನ ಮುದ್ದು ಮುಖದ ಮೇಲೆ ನೆಳಲು ಕವಿಸ ಬೇಕೆನಿಸಲಿಲ್ಲ. ಈ ಸಂಗತಿಯನ್ನು ವಸಿಷ್ಠರಿಗೆ ತಿಳಿಸಿದಾಗ ಅವರೂ ಹೇಳ ಬೇಕೆಂದಿದ್ದರಂತೆ ; ಈ ಕೆಲವು ದಿನಗಳು ನನಗೆ ಕೆಡುಕಿನ ದಿನಗಳು ಎಂದು. ಅರ್ಚನೆ, ಶಾಂತಿಕ್ರಿಯೆ ನಡಸುತ್ತಿದ್ದಾರೆ. ನನ್ನ ಒಳಗೇ ಏನೇನೊ ಚಿಹ್ನೆಗಳು ಕಾಣ್ತಾ ಇವೆ–ಬೇಗ ಸಾವು ಬರಬಹುದು ಎಂದು. ಆದ್ದರಿಂದ ಇದ್ದಕ್ಕಿದ್ದಂತೆ ಈ ತೀರ್ಮಾನ ಮಾಡಿದೆ–ನಾಡಿನ ಮೇಲಿನ ಆಳಿಕೆ ನನಗಿಂತ ಯುವಕರಾದವರ ಕೈಗೆ ಹೋಗಬೇಕೆಂದು.

ಕೈಕೆ : ನಿಜವಾಗಿ ಚುರುಕೇ ಮಾಡಿದ್ದೀರಿ. ಯುವಕನು ರಾಮನೇ ಆಗಬೇಕಾದ್ದಿರ ಲಿಲ್ಲವಲ್ಲ. ಮನಸಾರ ಇಚ್ಛೆಪಟ್ಟು ಭರತನಿಗೆ ಮೋಸ ಮಾಡಬೇಕೆಂದು ಯೋಚಿಸಿದಿರಿ. ಕೌಸಲ್ಯೆಗೆ ಅನುಗ್ರಹ ತೋರಿಸಿದಿರಿ—ನನ್ನ ಮೇಲೆ ಮುಯ್ಯಿ ತೀರಿಸಿಕೊಳ್ಳುವಂತೆ.

ದಶರಥ : ದೇವರೇ, ಎಂಥ ಅಸೂಯೆ ಹೆಣ್ಣು ! ರಾಮನು ಎಂದಾದರೂ ನಿನ್ನನ್ನು ಅಸಂತೋಷ ಪಡಿಸಿದ್ದಾನೆಯೆ ? ಅವನು ಮಗುವಾಗಿದ್ದಾಗ ಅವನೊಡನೆ ನೀನೆ ಆಡಿದೆ ; ಮುದ್ದಿಸಿದೆ ; ಸಾವಿರ ಸಾರಿ ಅವನಿಗೆ ಹರಕೆ ಹಾಕಿದೆ. ರಾಮನಿಗೆ ವಿರುದ್ಧ ಭಾವ ನಿನಗಿದೆಯೆಂದು ಒಂದು ಸೂಚನೆ ಕಾಣೆಸಿಲ್ಲ.

ಕೈಕೆ : ಇರಬಹುದು : ಆದರೆ ನಾನು ಭರತನ ತಾಯಿ.

ದಶರಥ : ನಾನು ಈಗಾಗಲೇ ಸಾರ್ವಜನಿಕವಾಗಿ ಘೋಷಣೆ ಹೊರಡಿಸಿದ್ದೇನೆ. ಪಟ್ಟಣವೆಲ್ಲ ಸಂತೋಷದಲ್ಲಿ ಸಂಭ್ರಮಗಳಲ್ಲಿ ಇದೆ. ಚೊಚ್ಚಲು ಗಂಡು ಮಗನನ್ನು ಹೆತ್ತ ತಾಯಿಯರು ಸ್ವಂತ ಸಂತೋಷ ಮರೆತ ಹಾಗೆ ವಿಜೃಂಭಿಸುತ್ತಿದ್ದಾರೆ. ಅವರ ಹಾಡೇನು, ಕುಣಿತ ಏನು, ತುಂಬಾ ಉಲ್ಲಾಸದಲ್ಲಿದ್ದಾರೆ.

ಕೈಕೆ : ಭರತನಾಗುತ್ತಾನೆಂದು ಘೋಷಿಸಿದ್ದರೆ ಅದು ಬೇರೆಯಾಗುತ್ತಿತ್ತೆ ? ಇದೇ ಆಗ್ತಾ ಇತ್ತು—

ದಶರಥ : ಯಾಕೆ ಇವೊತ್ತು ಇಷ್ಟು ವಕ್ರವಾಗಿದ್ದೀಯೆ ? ನಿನ್ನ ತಲೆಗೆ ಯಾವ ದುಷ್ಟಗ್ರಹ ಹೊಕ್ಕಿದೆ ?

ಕೈಕೆ : ಮುಂದೆ ಮಾತು ಬೇಡ. ಇದನ್ನು ಮುಂದುವರಿಸಬೇಕೆಂದು ನನಗೆ ಇಷ್ಟವಿಲ್ಲ. ಕೌಸಲ್ಯೆಯಲ್ಲಿಗೊ ಸುಮಿತ್ರೆಯಲ್ಲಿಗೊ ಹೋಗಿ. ನನ್ನನ್ನು ಕೇಕಯಕ್ಕೆ ಕಳಿಸಿ ಬಿಡಿ. ನಿಮಗೆ ಕಣ್ಣು ಬೇನೆ ಆಗಿರಲು ನನಗೆ ಇಷ್ಟವಿಲ್ಲ.

ದಶರಥ : ಇವೊತ್ತು ನಿನ್ನನ್ನು ಸುಮುಖಿಯಾಗಿ ಮಾಡಲು ನಾನು ಏನು ಮಾಡಬಲ್ಲೆ ? ನಿನಗೆ ಯಾವ ಕೆಟ್ಟದ್ದನ್ನೂ ಮಾಡಿದ್ದೇನೆಂದು ನಾನು ಅರಿತಿಲ್ಲ.

ಕೈಕೆ : ನಾನು ಏನು ಕೇಳುತ್ತೇನೊ ಅದು ಬಿಟ್ಟು ಬೇರೇನೂ ಇಲ್ಲ. ನೀವು ಪ್ರಾಮಾಣಿಕರಾದರೆ ನೀವು ಕೊಟ್ಟಿರುವ ಮಾತುಗಳನ್ನು ನೆರವೇರಿಸಬೇಕು.

ದಶರಥ : ಎಂದು ನಾನು ನುಡಿದುದನ್ನು ಮಾಡದೆ ಇದ್ದೇನೆ ? ಯಾವುದರಲ್ಲಿ ತಪ್ಪಿದ್ದೇನೆ ? ಎಂದು ?

ಕೈಕೆ : ರಾಮನಿಗೆ ಸಂಬಂಧಪಟ್ಟುದರಲ್ಲಿ ಹೊರತು ಇನ್ನಾವುದರಲ್ಲಿಯೂ ಇಲ್ಲ. ವಿಶ್ವಾಮಿತ್ರನಿಗೆ ಕೊಟ್ಟ ಮಾತನ್ನು ನೀವು ಮುರಿಯುವುದರಲ್ಲಿದ್ದಿರಿ : ರಾಮನನ್ನು ಅವನೊಡನೆ ಕಳಿಸಬೇಕೆಂದು ಅವನು ಕೇಳಿದಾಗ ? ಅಲ್ಲವೆ ?

ದಶರಥ : ಏನು ಹೇಳುತ್ತಿದ್ದೀಯೆ ? ಹದಿನಾರು ವರ್ಷ ಕೂಡ ಆಗದಿದ್ದ ಮಗ. ಆ ಋಷಿ ಕೇಳಿದ್ದೇನು ? ಅತಿ ಭಯಂಕರ ರಾಕ್ಷಸರು ಅವರು. ಉತ್ತರದ ಯಾವ ರಾಜರಿಗೂ ಅಸಾಧ್ಯರು. ಅಂಥವರ ಎದುರು ನಿಂತು ಅವರನ್ನು ಅಡಗಿಸಬೇಕೆಂದು ಆ ಋಷಿ ಕೇಳಿದರು. ಆ ರಾಕ್ಷಸರು ಋಷಿ ಕಾರ್ಯಗಳಿಗೆ ಅಡ್ಡಿ ಬರುತ್ತಿದ್ದಾರೆಂದರೆ, ಅವನನ್ನು ಕಳಿಸುವುದು ಎಂದರೆ ಸಾವಿಗೆ ಎಂದೇ ಅಲ್ಲವೆ ?

ಕೈಕೆ : ನಿಮಗೆ ಗೊತ್ತಿತ್ತು : ರಾಮನು ಅಲ್ಪನಲ್ಲವೆಂದು ; ಒಂದು ಗುಬ್ಬಿ ಅಲ್ಲವೆಂದು. ಅವನು ಈ ನಾಡಿನಲ್ಲಿರುವ ಎಲ್ಲರಿಗಿಂತಲೂ ಉತ್ತಮ ಬಿಲ್ಗಾರನೆಂದು. ಅವನ ಸಹಾಯಬೇಕೆಂದು ನಿಮ್ಮನ್ನು ಕೇಳುತ್ತಿದ್ದವರು ಮಹರ್ಷಿ. ತನ್ನ ತಪಸ್ಸಿನ ಬಲವನ್ನು ಕೊಟ್ಟು ವಿಶ್ವಾಮಿತ್ರನು ಕಾಪಾಡುತ್ತಿದ್ದನು.

ದಶರಥ : ನನ್ನ ಭಯ ಚಿಂತೆ ನನ್ನನ್ನು ಕಾಡುತ್ತಿದ್ದವು. ತುಂಬಾ ಚಿಕ್ಕ ವಯಸ್ಸಿನವನು ರಾಮ. ಹೇಗೆ ಅವನನ್ನು ಅಪಾಯಕ್ಕೆ ಈಡು ಮಾಡಲಿ ?

ಕೈಕೆ : ವಿಶ್ವಾಮಿತ್ರನಿಗೆ ಕೊಟ್ಟ ಮಾತನ್ನು ಮುರಿಯಬೇಕೆಂದು ಮನಸ್ಸಿತ್ತು ನಿಮಗೆ. ವಸಿಷ್ಠರು ಆ ಋಷಿಯ ಪರವಾಗಿ ನಿಮ್ಮಲ್ಲಿ ಮಾತನಾಡದಿದ್ದರೆ ಮಾತಿಗೆ ತಪ್ಪುತ್ತಿದ್ದಿರಿ...ಕಳಿಸಿಕೊಡಿ ಎಂದು ಹೇಳಿದರು. ನಿಮಗೆ ಭೀತಿ : ಇಬ್ಬರು ಋಷಿಗಳಿಗೆ ಕೋಪ ಬರುತ್ತದೆ ಎಂದು ; ನಿಮ್ಮ ಮೇಲೆ ಒಬ್ಬರಂತೂ ಕೋಪಿಸಿಕೊಳ್ಳುವುದರಲ್ಲಿದ್ದರು. ಭಯ, ಭೀತಿ ! ರಾಮನಿಗಾಗಿ ಕೊಟ್ಟ ಮಾತನ್ನೂ ಮುರಿಯುತ್ತಿದ್ದಿರಿ.

ದಶರಥ : ನೀನು ಹಾಗೆ ಯೋಚನೆ ಮಾಡಬಲ್ಲೆ ಎಂದು ನಾನು ಎಂದಿಗೂ ನಂಬುತ್ತಿರಲಿಲ್ಲ. ನಿನಗೆ ಕೊಟ್ಟ ಯಾವ ಮಾತನ್ನು ನಾನು ಮುರಿದಿದ್ದೇನೆ ?

ಕೈಕೆ : ನನಗೆ ಕೊಟ್ಟ ಮಾತು ನಡಸಿಕೊಡುತ್ತೀರ ?

ದಶರಥ : ಕೊಟ್ಟ ಮಾತು ? ಎಂದು ? ಎಲ್ಲಿ ?

ಕೈಕೆ : ಈಗ್ಗೆ ಇಪ್ಪತ್ತು ವರ್ಷಗಳಾಗಿರಬಹುದು. ರಾಕ್ಷಸರೊಡನೆ ನೀವು ಕಾಳಗ ಮಾಡಿದಿರಿ. ಯುದ್ಧರಂಗದಲ್ಲಿ ನೆಲದ ಮೇಲೆ ಬಿದ್ದಿದ್ದಿರಿ. ಸಾಯುವ ಹಾಗೆ. ಪುನಃ ಜೀವ ಬರುವಂತೆ, ಶಕ್ತಿ ಬರುವಂತೆ ನಾನು ಶುಶ್ರೂಷೆ ಮಾಡಿದೆ. ನೆನಪಿದೆಯೆ ?

ದಶರಥ : ಇದೆ. ಏನಾಯಿತು ?

ಕೈಕೆ : ನನಗೆ ಎರಡು ವರಗಳನ್ನು ಕೊಟ್ಟಿರಿ.

ದಶರಥ : ಹೌದು.

ಕೈಕೆ : ಅದನ್ನು ನಾನು ಆಗ ಕೇಳಲಿಲ್ಲ. ಬೇಕಾದಾಗ ಕೇಳುವೆನೆಂದು ಹೇಳಿದ್ದೆ.

ದಶರಥ : ಹೌದು.

ಕೈಕೆ : ಈಗ ಕೇಳ್ತೀನಿ.

ದಶರಥ : ವರಗಳು ? ಈಗ ? ಪಟ್ಟಾಭಿಷೇಕಕ್ಕೂ ಅದಕ್ಕೂ ಏನು ಸಂಬಂಧ ?

ಕೈಕೆ : ಅವಕ್ಕೇ. ಒಂದು : ರಾಮ ನಾಡು ಬಿಟ್ಟು ಹದಿನಾಲ್ಕು ವರ್ಷ ಕಾಡಿಗೆ ಹೋಗತಕ್ಕದ್ದು ; ಎರಡು : ಅಷ್ಟು ಕಾಲವೂ ಅಯೋಧ್ಯೆಯಲ್ಲಿ ಭರತನು ರಾಜ್ಯವಾಳತಕ್ಕದ್ದು.

(ದಶರಥನು ದೊಪ್ಪನೆ ನೆಲದ ಮೇಲೆ ಬೀಳುತ್ತಾನೆ. ಸ್ವಲ್ಪದರಲ್ಲಿ ಅರೆಚೇತರಿಸಿಕೊಂಡು ಉದ್ವೇಗದಿಂದ)

ದಶರಥ : ಕೈಕೆ, ಕೈಕೆ, ನಿಜವಾಗಿ ಯಾವುದೊ ಪಿಶಾಚಿ ನಿನ್ನನ್ನು ಹೊಕ್ಕಿದೆ. ನಿನ್ನನ್ನು ದೇವತೆ ಎಂಬಂತೆ ಆದರಿಸಿದ್ದೇನೆ. ನೀನು ಬಯಸಿದ್ದೆಲ್ಲವನ್ನೂ ಕೊಟ್ಟಿದ್ದೇನೆ.

ಇತರ ಎಲ್ಲರಿಗಿಂತಲೂ ನಿನ್ನಲ್ಲಿ ಪಕ್ಷಪಾತ ತೋರಿಸಿದ್ದೇನೆ. ಕೌಸಲ್ಯೆಗೆ ಸುಮಿತ್ರೆಗೆ ನೋವುಂಟುಮಾಡಿದ್ದೇನೆ. ನಿನ್ನ ಮೋಹದಿಂದ ಮರುಳಾಗಿದ್ದೇನೆಂದು ಮಂತ್ರಿಗಳೂ ತಿಳಿದುಕೊಂಡಿದ್ದಾರೆ. ಅಯೋಧ್ಯೆಯ ಜನನಾಯಕರಲ್ಲಿ ಅತ್ಯಂತ ಶಕ್ತರಾದವರೂ ನಾನು ಹಾಗೆಯೇ ಎಂದುಕೊಂಡಿದ್ದಾರೆ. ಅದಕ್ಕೆ ನನಗೆ ನೀನು ಕೊಡುವ ಬಹುಮಾನ ಇದು. ದೂರ ಕೇಕಯ ರಾಜ್ಯದಿಂದ ಸಣ್ಣ ವಯಸ್ಸಿನ ಹೆಣ್ಣನ್ನು ತಂದು ಮೋಹಕ್ಕೆ ಸಿಕ್ಕಿಕೊಂಡಿದ್ದೇನೆ ಎಂದು. ನೋಡು : ನಿನಗೆ ನಾನು ಯಾವ ಅನ್ಯಾಯ ಮಾಡಿಲ್ಲ. ಬೇರೆ ಎಲ್ಲವನ್ನೂ ನಿನಗೆ ಕೊಡುತ್ತೇನೆ. ಸಂಪತ್ತು, ಗೌರವ, ಬಿರುದು, ಪದವಿ : ಯಾವೆಲ್ಲದರ ಮೇಲೆ ನಿನ್ನ ಅಧಿಕಾರ ಬೇಕೆನ್ನುವಿಯೊ ಅದರ ಮೇಲೆಲ್ಲ ಅಧಿಕಾರ ಕೊಡುತ್ತೇನೆ... ದೇವರಾಣೆ ಕೇಳು... ಕೈಕೆ... ರಾಮನನ್ನು ಕಾಡಿಗಟ್ಟು ಎಂದು ಮಾತ್ರ ಕೇಳಬೇಡ...ಹಿಂದೆ ವಾಗ್ದಾನ ಮಾಡಿದ್ದೇನೆ, ನಿಜ. ಅದು ಒಡಂಬಡಿಕೆಯೇ ಸರಿ. ಆದರೆ ನೀನು ಇದನ್ನು ಮಾಡೆಂದರೆ ಇದಕ್ಕಿಂತ ಕ್ರೂರವಾದ ಬೇರೆ ಯಾವುದೂ ಇಲ್ಲ. ಸಾಯಿ ಎಂದು ನನ್ನನ್ನು ಹೇಳಿದಂತೆಯೇ ಸರಿ. ಕೈಕೆ, ವರವನ್ನು ಕೇಳಿ ತೆಗೆದುಕೊಳ್ಳುವುದು ಇಬ್ಬರಿಗೂ ಸಂತೋಷ ಉಂಟುಮಾಡಬೇಕು : ಕೊಡುವವರಿಗೆ, ಕೊಳ್ಳುವವರಿಗೆ. ಇದನ್ನು ಕೇಳಿ ನನ್ನ ಬಾಳನ್ನು ಹೆಸರನ್ನು ಎರಡನ್ನೂ ನಾಶಮಾಡುತ್ತಿದ್ದೀಯೆ. ಸಭೆಯ ಮುಂದೆ ಸಾರ್ವಜನಿಕವಾಗಿ ಮಾಡಿದ ಘೋಷಣೆಯನ್ನು ನಾನೇ ಹೇಗೆ ಹಿಂದಕ್ಕೆ ತೆಗೆದು ಕೊಳ್ಳಲಿ ? ನಾನೇ ಸೂಚನೆ ಮಾಡಿ ಮಂತ್ರಿಸಭೆ ತೀರ್ಮಾನ ಮಾಡಿದ್ದನ್ನು ನಾನು ಹಿಂದಕ್ಕೆ ಕೇಳಿಕೊಂಡರೆ ಹೇಗೆ ಮಾನದಿಂದ ಬಾಳಿಯೇನು ? ಮಂತ್ರಿಗಳು, ಪುರೋಹಿತರು, ಸೇನಾಧಿಪತಿಗಳು, ಹಿರಿಯರು, ನಾಡಿನ ನಾಯಕರು, ಸಾಮಾನ್ಯರು ನಾನು ಹೇಳಿದ್ದನ್ನು ಕೇಳಿದ್ದಾರೆ : ಕೇಳಿ ಸಂತೋಷ ಪಟ್ಟಿದ್ದಾರೆ ; ಉತ್ಸವಗಳನ್ನು ನಡಸುತ್ತಿದ್ದಾರೆ. ರಾಮನಿಗೆ ಹೇಳಿಕಳಿಸಿಯಾಗಿದೆ. ಅವನಿಗೆ ಹೇಳಿ ಆಗಿದೆ. ತನ್ನ ತಾಯ ಬಳಿಗೆ ಹೋಗಿ ಅವನು ಈ ಸುದ್ದಿಯನ್ನು ತಿಳಿಸಿದ್ದಾನೆ. ಇಷ್ಟು ಹೊತ್ತಿಗೆ ಸೀತೆಯ ಕಿವಿಗೂ ಬಿದ್ದಿರುತ್ತದೆ.

ಕೈಕೆ : ನನ್ನ ಕಿವಿಗೆ ಬಿದ್ದಿರುವುದು ಕಡೆಗೆ.

ದಶರಥ : ಎಷ್ಟು ಉತ್ಸಾಹದಿಂದ ಧಾವಿಸಿ ಬಂದೆ ನಿನ್ನಲ್ಲಿಗೆ—ನಾನೇ ಖುದ್ದಾಗಿ ನಿನಗೆ ತಿಳಿಸಬೇಕೆಂದು ! ಈಗಲೂ ರಾಮನಿಗೆ ಹೇಳಿ ಕಳಿಸಿದ್ದೇನೆ : ಇಲ್ಲಿಗೆ ಬಾರೆಂದು. ನಾವಿಬ್ಬರೂ ಸೇರಿ ನಮ್ಮ ಸಂತೋಷವನ್ನು ಜೊತೆಯಲ್ಲಿ ತಿಳಿಸೋಣವೆಂದು.

(ಕೈಕೆ ಅಪಹಾಸ್ಯದಿಂದ ನಗುತ್ತಾಳೆ)

ಕೈಕೆ : ಹ ಹ್ಹ ಹ್ಹ ! ಜೊತೆಯಾಗಿ ಸಂತೋಷ ಪಡಬೇಕಂತೆ ! ಇದಕ್ಕೆ !

ದಶರಥ : ಬೇಡ, ಬೇಡ ; ಇದನ್ನು ಒತ್ತಾಯ ಪಡಿಸಬೇಡ. ಇದು ನನ್ನನ್ನು ಕೊಲ್ಲುತ್ತದೆ.

ಕೈಕೆ : ಇದೇ ; ಬೇರಾವುದೂ ಬೇಡ.

ದಶರಥ : ತಪ್ಪು ಮಾಡದವನನ್ನು ಶಿಕ್ಷಿಸು ಎಂದು ಹೇಳು ; ಕೊಲೆಪಾತಕನನ್ನು ಕ್ಷಮಿಸು ಎನ್ನು ; ಶ್ರೀಮಂತನನ್ನು ದಿವಾಳಿ ಮಾಡೆನ್ನು ; ಭಿಕಾರಿಯನ್ನು ಸಿರಿವಂತನನ್ನಾಗಿ ಮಾಡೆನ್ನು ; ಆದರೆ ಇದು ನನ್ನ ಕೈ ಮೀರಿದ್ದು.

ಕೈಕೆ : ಆಗದು.

ದಶರಥ : ನನಗೆ ಹುಚ್ಚು ಹಿಡಿಸುತ್ತಿದ್ದೀ. ನನ್ನ ಮರ್ಯಾದೆ ಕಳೆಯುತ್ತಿದ್ದೀ. ಸಾರ್ವಜನಿಕರಲ್ಲಿ ಅಪಮಾನದಿಂದ ತಲೆ ತಗ್ಗಿಸುವ ಹಾಗೆ ಮಾಡುತ್ತಿದ್ದೀ. ಯಾವ ಯಾವುದಕ್ಕೆ ಬೆಲೆಕೊಟ್ಟು ದೊಡ್ಡದು ಎಂದು ಎಣಿಸಿದ್ದೆನೊ, ಯಾವುದಕ್ಕಾಗಿ ಬದುಕಿದ್ದೆನೊ, ಯಾವುದನ್ನು ಪ್ರೀತಿಸಿದ್ದೆನೊ ಎಲ್ಲವೂ ಧೂಳೀಪಟವಾಗುತ್ತಿದೆ....

(ರಾಮನು ಬಂದಿದ್ದಾನೆಂದು ತಿಳಿಯುತ್ತದೆ)

ದಶರಥ : ನಾನು ಅವನ ಮುಖವನ್ನು ಹೇಗೆ ನೋಡಲಿ ? ಅವನಿಗೆ ಏನು ಹೇಳಲಿ ? ದೇವರೆ, ಯಾವ ಸ್ಥಿತಿಗೆ ನನ್ನನ್ನು ನಾನು ತಂದುಕೊಂಡಿದ್ದೇನೆ ! ಮಾರಿ ಹೆಣ್ಣು !

(ಅಸಹಾಯಕನಾಗಿ ಭಗ್ನನಾದಂತೆ ಇರುತ್ತಾನೆ. ರಾಮನ ಪ್ರವೇಶ)

ಕೈಕೆ : ಒಳಗೆ ಬಾ, ರಾಮ.

ರಾಮ : ನಮಸ್ಕಾರ ಅಮ್ಮಾ. ತಂದೆಯವರು ಈ ಸ್ಥಿತಿಯಲ್ಲಿ ಇದ್ದಾರಲ್ಲ : ಇದೇನಿದು ? ಇಲ್ಲಿ ಯಾವಾಗಲೂ ಅವರು ಸಂತೋಷದಲ್ಲಿರುತ್ತಿದ್ದರು ; ಈಗ ಏಕಿಲ್ಲ ? ಪ್ರೀತಿಯಿಂದಲೂ ಸಂತೋಷದಿಂದಲೂ ನನ್ನನ್ನು ಯಾಕೆ ಬರಮಾಡಿಕೊಳ್ಳುವುದಿಲ್ಲ ?

ಕೈಕೆ : ಸಂಕಟಕ್ಕೀಡಾಗಿದ್ದಾರೆ, ಮಗು.

ರಾಮ : ಅವರ ಪೀಡೆಗೆ ನಾನು ಕಾರಣನೆ ? ಇನ್ನೇತಕ್ಕೆ ? ಇದರ ಕಾರಣವೇನು ? ನನ್ನಿಂದ ಈ ಕಷ್ಟ ಬಂದಿತೆಂದು ನನಗೆ ಅನ್ನಿಸಿಲ್ಲ. ಈಗ್ಗೆ ಒಂದು ಗಂಟೆ ಮುಂಚೆ ತಾನೆ ತುಂಬ ಉತ್ಸಾಹದಲ್ಲಿದ್ದರು. ತಮ್ಮ ಇಷ್ಟಾರ್ಥವೆಲ್ಲ ನೆರವೇರಿದ ಹಾಗೆ ಕಾಣುತ್ತಿದ್ದರು. ಇದ್ದಕ್ಕಿದ್ದಂತೆ ಈ ಬದಲಾವಣೆ ಏಕೆ ?

ಕೈಕೆ : ಅವರನ್ನೇ ಕೇಳು.

ರಾಮ : ಅಪ್ಪಾಜಿ....ಅಪ್ಪಾಜಿ....(ಕೈಕೆಯನ್ನು ಕುರಿತು) ಅವರು ಮಾತಾಡುತ್ತಿಲ್ಲ ; ನನ್ನ ಕಡೆ ನೋಡುತ್ತಿಲ್ಲ. ನೀವೂ ಕಠಿಣವಾಗಿರುವಂತಿದೆ ; ಯಾವುದೊ ನಿರ್ಧಾರದಲ್ಲಿರುವ ಹಾಗಿದೆ ; ಬಿಗಿಯಾಗಿದ್ದೀರಿ : ಇದರ ಅರ್ಥವೇನು ?

ತಂದೆಯುವರು ನನ್ನ ಕೈಯಲ್ಲಿ ಏಕೆ ಮಾತನಾಡುತ್ತಿಲ್ಲ ? (ತಂದೆಗೆ) ಅಪ್ಪಾ–ನಾನು ರಾಮ, ಬೇಡ್ತಾ ಇದ್ದೇನೆ. ನೀವು ನನ್ನೊಡನೆ ಮಾತನಾಡಬೇಕು ಎಂದು.

(ದಶರಥ ಸ್ವಲ್ಪ ಎಚ್ಚರಗೊಂಡಂತೆ ಕಾಣುತ್ತಾನೆ. ಆದರೆ ನುಡಿಯಲು ಆಗದೆ ಅಶಕ್ತನಾಗಿದ್ದಾನೆ)

ರಾಮ : ನನ್ನೊಡನೆ ಮಾತಾಡೆಂದು ಹೇಳಿ, ತಾಯಿ. ಅಪ್ಪಾ, ಹೇಳಿಕಳಿಸಿದಿರಿ, ಬಂದಿದ್ದೇನೆ. ಅಪ್ಪಣೆ ಏನು ?

(ದಶರಥನಿಗೆ ಮಾತಾಡಲಾಗುವುದಿಲ್ಲ. ಅರ್ಥವಿಲ್ಲದ ಕೆಲವು ಶಬ್ದಗಳು ಅವನ ಗಂಟಲಿಂದ ಬರುತ್ತವೆ)

ಕೈಕೆ : ನಿನ್ನ ಕೈಲಿ ಮಾತಾಡಲು ಅವರು ಭಯಪಡುತ್ತಿದ್ದಾರೆ ಮಗು.

ದಶರಥ : ಪಾಪಿ ಹೆಂಗಸು ! (ಏನೇನೊ ಗೊಣಗುತ್ತಾನೆ)

ರಾಮ : ನನಗೇನು ಅರ್ಥವಾಗುವುದಿಲ್ಲ. ನೀವೇ ನನಗೆ ವಿಶದವಾಗಿ ತಿಳಿಸಿ. ನಿಮ್ಮಿಬ್ಬರ ನಡುವೆ ಏನು ನಡೆದಿದೆ ? ಇಲ್ಲಿಗೆ ಎಷ್ಟು ಆಸೆಯಿಂದ, ಸಂತೋಷ ದಿಂದ ಬಂದೆ ! ನೀವಿಬ್ಬರೂ ಜೊತೆ ಸೇರಿ ನಿಮ್ಮ ಹರಕೆಯನ್ನು ಕೇಳ್ತೇನೆ ಎಂಬ ನಿರೀಕ್ಷೆಯಿಂದ ಬಂದೆ. ಈ ಸ್ಥಿತಿ ನನಗೆ ಸಹಿಸಲು ಅಸಾಧ್ಯವಾಗಿದೆ. ಅಮ್ಮಾ ಈ ಕಟು ಸ್ಥಿತಿ ಅಗತ್ಯವಿಲ್ಲ, ಇದರಿಂದ ನನ್ನನ್ನು ಬಿಡುಗಡೆ ಮಾಡಿ.

ಕೈಕೆ : ನಿಮ್ಮ ತಂದೆ ನನಗೆ ಒಂದು ಮಾತು ಕೊಟ್ಟಿದ್ದರು. ಅದರಿಂದ ತಪ್ಪಿಸಿಕೊಳ್ಳಲು ಪ್ರಯತ್ನ ಪಡುತ್ತಿದ್ದಾರೆ.

ರಾಮ : ಏನು ಮಾತು ?

ಕೈಕೆ : ಒಂದಲ್ಲ, ಎರಡು ವರ ಕೇಳಿದೆ.

ರಾಮ : ಅವರನ್ನು ನೀವು ಏನು ಕೇಳಿದಿರಿ ?

ಕೈಕೆ : ಇದ್ದಕ್ಕಿದ್ದಂತೆ ನೀನು ಯುವರಾಜನಾಗಿ ಅಭಿಷಿಕ್ತನಾಗುತ್ತೀಯೆ ಎಂಬ ಸುದ್ದಿ ತಿಳಿಯಿತು. ನಾನು ಅವರನ್ನು ಕೇಳಿದೆ: ನಿನಗೆ ಪ್ರತಿಯಾಗಿ ಭರತನಿಗೆ ಅಭಿಷೇಕ ಮಾಡಿ ಎಂದು ; ನೀನು ಹದಿನಾಲ್ಕು ವರ್ಷ ದೇಶ ಬಿಟ್ಟು ಕಾಡಿಗೆ ಹೋಗ ಬೇಕೆಂದು.

ರಾಮ : ಇಷ್ಟೇಯೆ ? ಇದು ಆತನಿಗೆ ಅಷ್ಟು ಸಂಕಟವನ್ನು ಏಕೆ ತರಬೇಕು ? ಅವರೇ ಇದನ್ನು ನನಗೆ ಹೇಳಬೇಕಿರಲಿಲ್ಲ. ಕೊಟ್ಟ ಮಾತನ್ನು ನಡಸಿಕೊಡಬೇಕು— ಯಾವುದೇ ಆಗಲಿ. ನಮ್ಮ ವಂಶದಲ್ಲಿ ಧರ್ಮ ಅದು. ನನ್ನ ತಂದೆ ಆಗದೆಂದು ನಿಮಗೆ ಯಾಕೆ ಹೇಳಬೇಕು ? ಭರತನೊ ರಾಮನೊ : ನಮ್ಮಲ್ಲಿ ಯಾವ ವ್ಯತ್ಯಾಸವೂ ಇಲ್ಲ. ನಾವಿಬ್ಬರೂ ಒಂದೇ ಸಮನಾಗಿ ನಿಮ್ಮ ಮಕ್ಕಳು. ನಿಮ್ಮ

ಬಯಕೆ ಹಾಗಿದ್ದರೆ, ತಾಯಿ, ನೀವೇ ನನಗೆ ನೇರ ಹೇಳಬಹುದಿತ್ತು. ನನಗೆ ಹೆಚ್ಚು ಪ್ರಯೋಜನ ಬೇಕೆಂದು ನಾನು ಎಂದೂ ಆಸೆ ಪಡುವುದಿಲ್ಲ. ನಿಮಗಾಗಲಿ, ತಂದೆಗಾಗಲಿ ನೋವುಂಟಾಗುವುದಾಗಿದ್ದರೆ ನನಗೆ ಸ್ವರ್ಗವೇ ಬೇಡ. ಯಾವಾಗ ಹೋಗಬೇಕು ?

ದಶರಥ : ಯಾ...ಯಾ...ರಾಮಾ...ಮಗೂ (ಮಾತು ಬರದು)

ರಾಮ : ಏನಪ್ಪ

ಕೈಕೆ : ಇವೊತ್ತು.

ರಾಮ : ಸಿದ್ಧವಾಗಿದ್ದೇನೆ, ಒಂದು ಕ್ಷಣ ತಡೆಯುವುದಿಲ್ಲ.

ದಶರಥ : (ಜಗ್ಗನೆ ಎದ್ದು ಮಾತನಾಡುತ್ತ) ಈ ಪಾಪಿಯ ತಲೆಯ ಮೇಲೆ ನನ್ನ ಶಾಪವಿರಲಿ ; ಇವಳು ರಕ್ಕಸಿ. (ರಾಮನಿಗೆ) ಮಗು, ಈ ಪ್ರಾರ್ಥನೆಯನ್ನು ನಡಸಿಕೊಡಬೇಕು ಎಂದು ನನಗೆ ಒತ್ತಾಯ ಮಾಡಬೇಡ. ಕ್ಷತ್ರಿಯ ; ಮಾತಿಗೆ ಕಟ್ಟುಬಿದ್ದಿದ್ದೇನೆ, ನಿಜ ; ಆದರೆ ಇದು ವಿಪರೀತ. ನಿನಗೆ ಬೇಕೆನಿಸಿದರೆ ನನ್ನನ್ನು ನಿಗ್ರಹಿಸಿ ರಾಜ್ಯವನ್ನು ನಿನ್ನ ಕೈಗೆ ತೆಗೆದುಕೊ. ಇಂಥ ಕೊಲೆ ಕಾರ್ಯವನ್ನು ಅವಳು ಮಾಡುವುದಕ್ಕೆ ಅವಕಾಶ ಕೊಡಬೇಡ. ಇಲ್ಲ, ಮಗು, ನನ್ನ ಸಂಕಟ ಹೇಳ ತೀರದು. ನಾನು ಯಾವ ಹೆಂಗಸನ್ನು ನಂಬಿದೆನೊ ಅವಳ ಕೈಗೆ ದುರ್ಬಲನಾಗಿ, ನಿಸ್ಸಹಾಯಕನಾಗಿ ಸಿಕ್ಕಿಕೊಂಡಿದ್ದೇನೆ. ಅವಳು ಕೇಳಿದ್ದನ್ನೆಲ್ಲ ಕೊಟ್ಟೆ— ನಿನ್ನ ತಾಯನ್ನೂ ಸುಮಿತ್ರೆಯನ್ನೂ ಹೀನಾಯಗೊಳಿಸಿದೆ. ಪ್ರಪಂಚವನ್ನೆಲ್ಲ ಆಳುವವಳು ಇವಳು ಎಂಬಂತೆ ನಡಸಿಕೊಂಡೆ. ಅದಕ್ಕೆಲ್ಲ ಈಗ ಪ್ರತಿ. ಹೀಗಾಗ ಬಾರದು. ಕೂಡದು, ಕೂಡದು. ಅಯ್ಯೋ, ಇದು ನನಗೆ ಸಾವು ತರುತ್ತದೆ....

ರಾಮ : ಹೀಗೆ ಕಂಗಾಲಾಗಬೇಡಿ, ಅಪ್ಪ. ಮಗನ ಹಕ್ಕುಗಳನ್ನು ಬೇಡುವುದು ತಾಯಿಗೆ ಸಹಜ. ಆಕೆಗೆ ನೀವು ಹಿಂದೆ ಮಾತು ಕೊಟ್ಟಿದ್ದೀರಿ ; ತಪ್ಪಬೇಡಿ. (ಕೈಕೆಗೆ) ಸರಿ, ತಾಯಿ, ನಾನು ಹೊರಡುತ್ತೇನೆ. ಈ ತೀರ್ಮಾನವನ್ನು ಯಾವುದೂ ಅಲ್ಲಾಡಿಸದು. ತಂದೆಯವರು ಕೊಟ್ಟ ಮಾತು ನಡೆಯಲಿ. ವಾಗ್ದಾನ ಮುರಿದ ರೆಂಬ ಅಪಕೀರ್ತಿ ಅವರಿಗೆ ಬಾರದಿರಲಿ. ಆ ಬಂಧನದಿಂದ ತಂದೆಗೆ ಬಿಡುಗಡೆ ಯಾಗಲಿ. (ತಂದೆಗೆ) ಅಪ್ಪಾ, ಏನೊ ಕೊಂಕಾಯಿತು, ತೊಂದರೆಯಾಯಿತು ಎಂಬ ಭಾವನೆ ನಿಮಗೆ ಬಾರದೆ ಇರಲಿ. ನಾನು ಆಳುತ್ತೇನೆಯೆ, ಭರತನಾಳುವುದೆ ಎಂಬ ಸಂಗತಿ ಸಣ್ಣ ವಿಚಾರ. ನಾನು, ಭರತ ಇಬ್ಬರೂ ಸಮವಾಗಿ ನಿಮ್ಮ ಮಕ್ಕಳು. ದೊಡ್ಡವರೆ ಚಿಕ್ಕವರೆ ಎಂಬುದು ಲೆಕ್ಕಕ್ಕೆ ಬರಬಾರದು. ಕೆಲವು ಗಂಟೆಗಳ ಕಾಲ, ಕೆಲವು ದಿನಗಳ ಕಾಲ ದೊಡ್ಡವರು ಚಿಕ್ಕವರು ಎಂಬ ಸಂಗತಿ ಯನ್ನು ಗಣನೆಗೆ ತಂದುಕೊಳ್ಳಬೇಕಿಲ್ಲ. ನಾನೆಷ್ಟೊ ಅವನೂ ಅಷ್ಟೆ. ಭರತನು ನಾಡನ್ನು ಆಳಲು ಯೋಗ್ಯನಾದವನು. ವಿವೇಕಶಾಲಿ, ಧೈರ್ಯಶಾಲಿ ; ಹಿರಿಯ

ರಲ್ಲಿ ಭಕ್ತಿ ಉಳ್ಳವನು ; ನನ್ನಷ್ಟೇ ಜನಪ್ರಿಯನು. ಅವನಿಗೆ ಹೇಳಿಕಳಿಸಿ. ನಾಳೆ ಬೆಳಿಗ್ಗೆಯ ಮುಂಚೆಯೆ ನಾನು ಅಯೋಧ್ಯೆಯನ್ನು ಬಿಟ್ಟು ಹೋಗಿರುತ್ತೇನೆ. ತಾಯಿ ಕೌಸಲ್ಯೆಗೆ ಹದಿನಾಲ್ಕು ವರ್ಷ ಕಾಲ ಹೋಗುತ್ತೇನೆಂದು ತಿಳಿಸಿ ಹೋಗುತ್ತೇನೆ. ಅಷ್ಟೇ ಏಕೆ, ಆಜೀವ ಪರ್ಯಂತ ಹೋಗೆಂದರೂ ಹೋದೇನು. ತಾಯಿ, ಕೈಕೆ, ನೀವು ನಿರಾಳ ಮನಸ್ಸಿನಿಂದ ಇರಿ.

ದಶರಥ : ಒಂದು ದಿನದ ಅವಕಾಶ ಕೊಡು, ಮಗು ; ಆಲೋಚಿಸೋಣ.

ರಾಮ : ಒಂದು ದಿನ ? ಆ ಅವಕಾಶ ಬೇಡ, ತಂದೆ ; ಮನಸ್ಸು ಮಾಡಿಕೊಂಡಿದ್ದೇನೆ. ಒಂದು ದಿನ ತಡ ಮಾಡಿದರೆ ಏನಾದೀತೋ ಯಾರು ಬಲ್ಲರು ? ಹೆಚ್ಚು ಕಾಲ ಮನುಷ್ಯನ ಮನಸ್ಸು ಒಂದೇ ನಿಶ್ಚಯದಲ್ಲಿ ಇರುವುದು ಕಷ್ಟ. ತಾಯಿ ಕೈಕೆ ಹೇಗೆ ಬಯಸುತ್ತಾರೊ ಹಾಗಾಗಲಿ. ನಿಮ್ಮಿಬ್ಬರ ಆಶೀರ್ವಾದ ನನಗಿರಲಿ. ಬೇಡುತ್ತೇನೆ, ಇದನ್ನು ಅತಿ ಮಾಡುವುದು ಬೇಡ. ನಾಳೆ ಬೆಳಗಾಗುವುದರೊಳಗಾಗಿ ಅಯೋಧ್ಯೆಯನ್ನು ನಾನು ದಾಟಿ ಹೋಗಿರುತ್ತೇನೆ. ತಂದೆ, ಇದೊ ನಮಸ್ಕರಿಸುತ್ತೇನೆ. ತಾಯಿ, ನಮಸ್ಕರಿಸುತ್ತೇನೆ. ನಿಮ್ಮ ಹರಕೆ ನನ್ನೊಡನೆ ಇರಲಿ. ತಾಯಿ ತಂದೆ ತಮ್ಮ ಮಕ್ಕಳಿಗೆ ಪ್ರಾಣಗಳನ್ನು ಕೊಡುತ್ತಾರೆ. ಅದನ್ನು ತೆಗೆದುಕೊಳ್ಳುವುದು, ತಮ್ಮಿಷ್ಟದಂತೆ ಅದನ್ನು ಬಳಸುವುದು ಅವರಿಗೆ ಸೇರಿದ್ದು. ಒಡನೆಯೆ ಭರತನಿಗೆ ಹೇಳಿಕಳಿಸಿ. ತಾಯಿ, ಈಗ ತಂದೆಯವರನ್ನು ಬಹು ಎಚ್ಚರಿಕೆಯಿಂದ ನೋಡಿಕೊಳ್ಳಬೇಕಾಗಿದೆ. ನನ್ನ ತಾಯಿಯನ್ನೂ ಲಕ್ಷ್ಮಣನ ತಾಯಿಯನ್ನೂ ನಮ್ಮ ಕುಟುಂಬಕ್ಕೆ ಸೇರಿದ ಇತರರನ್ನೂ ನೀವು ಕಾಪಾಡಿ. ಇನ್ನು ಮೇಲೆ ಅವರನ್ನೆಲ್ಲ ನೋಡಿಕೊಳ್ಳಬೇಕಾದವರು ನೀವು. ನಿಮ್ಮ ಕೈಯಲ್ಲಿದ್ದಾರೆ ಎಂದು ನಾನು ಹೇಳುವುದಿಲ್ಲ ; ಆದರೆ ನಿಮ್ಮ ರಕ್ಷಣೆಗೊಳಪಟ್ಟವರಾಗುತ್ತಾರೆ. ನಿಮ್ಮಿಂದಲೂ ಭರತನಿಂದಲೂ ಅವರು ಪಾಲನೆಗೊಂಡರೆ ನನಗೆ ಸಂತೋಷ. ಕಾಡಿನಲ್ಲಿ ಹದಿನಾಲ್ಕು ವರ್ಷ ಯಾವ ಚಿಂತೆ ಇಲ್ಲದೆ, ಅಯೋಧ್ಯೆಯಲ್ಲಿ ಕಳೆಯುವ ಹಾಗೇ ಕಳೆಯುತ್ತೇನೆ. ಮನಸಾ ನಿಮಗೆ ನಮಸ್ಕರಿಸುತ್ತೇನೆ. ಇದೊ ಹೊರಟೆ.

(ಪ್ರದಕ್ಷಿಣೆ ಮಾಡಿ, ಸಾಷ್ಟಾಂಗ ನಮಸ್ಕಾರ ಮಾಡಿ ಹೊರಡುವನು. ದಶರಥ ಮುರಿದು ಬಿದ್ದವನಾಗಿದ್ದಾನೆ. ಮಾತಿಲ್ಲ.)

ದಶರಥ : ನೀನು ಪಿಶಾಚಿ, ಕೈಕೆ. ನಿನ್ನನ್ನು ಮದುವೆಯಾದೆ ; ಅಗ್ನಿಯ ಸುತ್ತ ನಡಸಿಕೊಂಡು ಹೋದೆ. ಹೆಂಡತಿ ಎಂದು ಕರೆದೆ. ಕೆಲವು ಕಾಲ ನೀನು ನನಗೆ ಸಂತೋಷ ಕೊಟ್ಟೆ. ನಿನಗಾಗಿ ಉಳಿದವರನ್ನೆಲ್ಲ ನಾನು ಉಪೇಕ್ಷೆ ಮಾಡಿದೆ. ಇಂಥ ನೀನು ನನಗೆ ಈ ನೋವುಂಟು ಮಾಡಿದ್ದೀಯೆ. ನನ್ನ ಮನೆಗೇ ದೊಡ್ಡ

ಕೇಡನ್ನು ತಂದಿದ್ದೀಯೆ. ಯಾವುದು ನನ್ನ ಅತಿಪ್ರಿಯ ಆಕಾಂಕ್ಷೆಯೊ ಅದನ್ನು ಮುರಿದಿದ್ದೀಯೆ. ಇನ್ನು ನೀನು ನನ್ನ ಹೆಂಡತಿಯಲ್ಲ...ಓ, ಯಾರೊ ಹೊರಗೆ, ನನ್ನನ್ನು ಕೌಸಲ್ಯೆಯ ಅರಮನೆಗೆ ಕರೆದುಕೊಂಡು ಹೋಗಿ. ಇನ್ನೆಂದೂ ಈ ರಾಕ್ಷಸಿಯನ್ನು ನಾನು ನೋಡುವುದಿಲ್ಲ. ಇವಳೊಡನೆ ನನ್ನ ಬದುಕು ಮುಗಿಯಿತು. ಇನ್ನು ಹೆಚ್ಚು ಕಾಲ ನಾನು ಬದುಕುವುದಿಲ್ಲ. ವಿಧವೆಯಾಗಿ ಇವಳು ತನ್ನ ಮಗನೊಡನೆ ಅಯೋಧ್ಯೆಯನ್ನು ಆಳಲಿ. ಸಿಂಹಾಸನವನ್ನು ಭರತನು ಒಪ್ಪಿಕೊಂಡರೆ ನನ್ನ ಹರಕೆ ಅವನಿಗಿಲ್ಲ. ಅವನು ನನಗೆ ಆಹಾರ, ತರ್ಪಣ ಕೊಟ್ಟರೆ ಅವನಿಂದ ಅದನ್ನು ನಾನು ತೆಗೆದುಕೊಳ್ಳುವುದಿಲ್ಲ. ಕೌಸಲ್ಯೆಯ ಮನೆಗೆ ನನ್ನನ್ನು ಈಗಲೇ ಕರೆದುಕೊಂಡು ಹೋಗಿ...ಈ ಹೆಂಗಸನ್ನು ಇನ್ನು ನಾನು ಕಣ್ಣಿಂದ ನೋಡಲಾರೆ.... (ಎರಡೂ ಕೈಗಳನ್ನು ಮೇಲೆತ್ತುವನು.) ಈ ನನ್ನ ಕಣ್ಣು ಹೋದುವು...

(ಮುಂದೆ ದಶರಥನು ಮಾತನಾಡಲಾರದಾಗಿ ಅರ್ಥಶೂನ್ಯವಾದ ಮಾತನ್ನು ಆಡುತ್ತಿದ್ದಾನೆ.)

ದಶರಥ : (ಸ್ವಲ್ಪ ಚೇತರಿಸಿಕೊಂಡು) ರಾಮನೊಡನೇ ಹೊರಟು ಹೋಯಿತು ಕಣ್ಣು... ಇನ್ನು ಪುನಃ ಹಿಂದಿರುಗುವುದಿಲ್ಲ ಎಂದು ಕಾಣುತ್ತದೆ. ಹಾಗಾಗುವುದೇ ಮೇಲು. ಅವನು ಮನಸ್ಸಿನಲ್ಲಿ ನಿರ್ಧರ ಮಾಡಿಕೊಂಡರೆ ಕಲ್ಲು ಬಂಡೆ. ಇನ್ನು ಹದಿನಾಲ್ಕು ವರ್ಷ ಹಿಂದಕ್ಕೆ ಬರುವುದಿಲ್ಲ. ಆ ಹೊತ್ತಿಗೆ ಬದುಕಿದ್ದು ಅವನು ಹಿಂದಿರುಗಿದಾಗ ನಗೆಮೊಗದ ರಾಮಚಂದ್ರನನ್ನು ತಮ್ಮ ಕಣ್ಣಿನಿಂದ ನೋಡುವವರು ಮನುಷ್ಯರಲ್ಲ, ದೇವತೆಗಳು.

(ಹಿನ್ನೆಲೆಯಲ್ಲಿ :
ನ ತೇ ಮನುಷ್ಯಾ ದೇವಾಸ್ತೇ ಯೇ ಚಾರುಶುಭಕುಂಡಲಂ
ಮುಖಂ ದ್ರಕ್ಷ್ಯಂತಿ ರಾಮಸ್ಯ ವರ್ಷೇ ಪಂಚದಶೇಪುನಃ)

ನನಗೆ ಆ ಅದೃಷ್ಟವಿಲ್ಲ. ಏನು ಮಾಡಿಬಿಟ್ಟೆ, ಕೈಕೆ ? ನನ್ನನ್ನು ಯಾವ ಸ್ಥಿತಿಗೆ ಇಳಿಸಿಬಿಟ್ಟೆ ? ಈ ಲೋಕಗಳಿಗೆಲ್ಲ ನಾನು ರಾಜನಾಗಿದ್ದೆ. ಈಗ ಒಂದು ಹುಳುವಿಗಿಂತ ಕಡಮೆ ಆಗಿ ಮಾಡಿದ್ದೀಯೆ. ಹುಳು...! ನಾನು ಕೊಟ್ಟ ಮಾತು ನನ್ನನ್ನು ಹಾಳು ಮಾಡಿದೆ. ಈ ಅಧ್ವಾನ್ನ ಹೆಂಗಸು ಎಲ್ಲವನ್ನೂ ಸುಟ್ಟು ನಾಶ ಮಾಡಿದಳು. ಇನ್ನು ನನಗೆ ಸಂತೋಷವಿಲ್ಲ. ಯಾವುದೂ ಇಲ್ಲ. ಇಲ್ಲ...ಇಲ್ಲ...ಯಾವುದೂ. ಕೌಸಲ್ಯೆ...ಕೌಸಲ್ಯೆ...

(ತೆರೆ)

# ದೃಶ್ಯ ೩

[ಲಕ್ಷ್ಮಣ, ರಾಮ ಕೌಸಲ್ಯೆಯ ಅಂತಃಪುರದಿಂದ ಹೊರಗೆ ಹೊರಡುತ್ತಿದ್ದಾರೆ.]

ರಾಮ : ಹೋಗಲಿ, ಕಡೆಗೆ ತಾಯ ಈ ಅಡ್ಡಿಯನ್ನು ದಾಟಿ ಬಂದಂತಾಯಿತು. ಪಾಪ, ಇಪ್ಪತ್ತು ವರ್ಷಗಳಿಗಿಂತ ಹೆಚ್ಚಾಗಿ ಆಕೆಗೆ ಯಾವ ಹರ್ಷವೂ ದೊರೆತದ್ದು ಕಾಣೆ. ಆಕೆಗೆ ಇದ್ದವನು ಎಲ್ಲ ಆಗಿ ನಾನು. ತನ್ನ ಆಶೋತ್ತರಗಳನ್ನೆಲ್ಲ ನನ್ನ ಮೇಲೆ ಕಟ್ಟಿ ಬೆಳಸಿದಳು. ಯಾವ ತಾಯಿ ತಾನೆ ಪ್ರೀತಿಯ ಮಗನಿಗೆ ರಾಜ್ಯಾಭಿಷೇಕ ತಪ್ಪಿ ಅದಕ್ಕೆ ಬದಲು ಕಾಡಿಗೆ ಹೋಗುವ ಗತಿ ಬಂದರೆ ಸಹಿಸಿಯಾಳು ? ಒಂದು ಕ್ಷಣ ಆಕೆಯ ಆಸೆಗಳೆಲ್ಲ ಆಕಾಶಕ್ಕೇರಿದವು. ಒಂದೇ ಕ್ಷಣದಲ್ಲಿ ನಿರೀಕ್ಷೆಗಳೆಲ್ಲ ಭಗ್ನವಾಗಿ ನಾಶವಾದವು. ತನ್ನ ಮಗನು ರಾಜಪದವಿಗೆ, ಅಧಿಕಾರಕ್ಕೆ ಏರುತ್ತಾನೆಂಬುದಕ್ಕಿಂತ ಹೆಚ್ಚು ನಿಶ್ಚಯವಾದ್ದು ಇನ್ನಾವುದೂ ಇರಲಿಲ್ಲ. ಸುದ್ದಿ ಕೇಳಿ ವೃದ್ಧಳಾದ ಆಕೆಯ ಮುಖ ಎಷ್ಟು ಅರಳಿತ್ತು ! ಪ್ರಕಟವಾಗಿ ಆಕೆಯಲ್ಲಿಗೆ ಹೋದಾಗ ಎಂಥ ಪ್ರೀತಿ ನನ್ನನ್ನು ಸ್ವಾಗತಿಸಿತು ! ಈ ಸುದ್ದಿ ಅವಳಿಗೆ ಬಡಿದಾಗ ಅವಳನ್ನು ಹುಚ್ಚು ಹಿಡಿಸಿತು. ಇಂಥ ಮಾರ್ಪಾಡು ಬರುತ್ತದೆ, ಕೈಕೆ ಅದಕ್ಕೆ ಕಾರಣಳಾಗುತ್ತಾಳೆ ಎಂದು ಯಾರು ಎಣಿಸಬಹುದಿತ್ತು ? ಕೈಕೆ ಕೂಡ ನನ್ನನ್ನು ವಿಶೇಷವಾಗಿ ಪ್ರೀತಿಸುತ್ತಿದ್ದಳು. ವಿಶ್ವಾಸ, ದಯೆ ಅಲ್ಲದೆ ನಾನು ಇನ್ನೊಂದನ್ನು ಆಕೆಯಲ್ಲಿ ಕಂಡಿರಲಿಲ್ಲ. ಎಂದಿಗೇ ಆಗಲಿ, ಕಠಿಣವಾದ ಒಂದು ಮಾತನ್ನು ಆಕೆ ನನಗೆ ನುಡಿದಿಲ್ಲ. ಒಮ್ಮೆಯಾದರೂ ನನಗಿಂತ ಭರತನು ಮೇಲೆಂದು ಆಕೆ ಎಣಿಸಿದ್ದನ್ನು ನಾನು ಕಂಡಿಲ್ಲ. ವಿಧಿಯ ಕಾರ್ಯ ವಿಚಿತ್ರ. ಹೇಗೊ ಕಷ್ಟಕರವಾದ ಒಂದು ಆತಂಕವನ್ನು ದಾಟಿಯಾಗಿದೆ. ವಿಧಿಶಾಸನವನ್ನು ಗಂಡಾಳಂತೆ ನಾವು ಎದುರುಗೊಳ್ಳಬೇಕು. ಸತ್ಯವಂತರಾಗಿ ಬದುಕಿ ನಮ್ಮ ಅಭಿಮಾನವನ್ನು ಪೂರ್ತಿಯಾಗಿ ಕಾಪಾಡಿಕೊಳ್ಳಬೇಕು, ಸಾಧಿಸಬೇಕು. ಇಂಥ ಸಣ್ಣ ಆಶಾಭಂಗಗಳನ್ನು ಸಹಿಸಲಾರೆನಾದರೆ ನಾನು ತುಂಬ ಕೀಳಾದೇನು.

ಲಕ್ಷ್ಮಣ : ಸಣ್ಣದೆ ? ನೀನು ವಿಚಿತ್ರ, ಅಣ್ಣ ; ಇಷ್ಟು ದೊಡ್ಡ ಸಂದರ್ಭವನ್ನು ಇಷ್ಟು ಸಾಧುವಾಗಿ ಎಣಿಸುತ್ತಿದ್ದೀಯೆ. ನೆನಸಿಕೊಂಡರೆ ನನಗೆ ರಕ್ತ ಕುದಿಯುತ್ತದೆ. ತಾಯಿ ಕೌಸಲ್ಯೆ ಮಾತನಾಡಿ, ನನ್ನ ಅಮ್ಮ ಸುಮಿತ್ರೆ ಸಮಾಧಾನದ ಮಾತುಗಳನ್ನು ಆಡಿದಾಗ ನಾನು ಇದ್ದೆ. ನೀನು ಏನೇ ಹೇಳು, ನೀನು ಉಪಯೋಗಿಸಿದ ವಾದಗಳಾಗಲಿ, ಒಂದೇ ಏಟಿಗೆ ಮನೆ, ಅಧಿಕಾರ, ಜನ,

ನಿನ್ನನ್ನು ಪ್ರೀತಿಸುವ ಇವರು ಎಲ್ಲರನ್ನೂ ತೊರೆದು ಹೋಗಲು ನೀನು ಮಾಡಿರುವ ನಿರ್ಣಯವಾಗಲಿ ನನಗೆ ಒಪ್ಪಿತವಲ್ಲ. ಕಾಡಿಗೆ ಹೋಗುವುದಕ್ಕಾಗಲಿ, ಪ್ರಕೃತಿಯ, ದುಷ್ಟ ಮೃಗಗಳ ಹಿಂಸೆ ಅಪಾಯಗಳನ್ನು ಎದುರಿಸುವುದಕ್ಕಾಗಲಿ ಅಗತ್ಯ ಏನಿತ್ತು ? ವಿಧಿಯಂತೆ ! ನೀನು ಕ್ಷತ್ರಿಯ. ನಿನ್ನಂಥವನು ಆ ನೆಪವನ್ನು ಬಳಸಬಾರದು. ಅದು ದುರ್ಬಲನ ಕಲ್ಪನೆ, ವರ್ಣನೆ. ಸತ್ಯ, ಧರ್ಮ ನಿನ್ನ ಕಡೆ ಇದೆ ; ಸಕಲ ಮಂತ್ರಿಜನ, ಪುರೋಹಿತರು ನಿನ್ನ ಕಡೆ ಇದ್ದಾರೆ. ನಾಡೆಲ್ಲ ನಿನ್ನ ಪಟ್ಟಾಭಿಷೇಕ ವಾರ್ತೆಯನ್ನು ಕೇಳಿ ಹೆಚ್ಚು ಸಂಭ್ರಮದಲ್ಲಿದೆ. ತಂದೆಗೆ ಸುಖವಿಲ್ಲ. ನಾನು ಅನ್ಯಾಯ ಎನ್ನುವುದು ಇದನ್ನು. ತಂತ್ರಿ ಹೆಂಗಸೊಬ್ಬಳು ಮುದಿ ಗಂಡನೊಬ್ಬನನ್ನು ಬಲೆಗೊಡ್ಡಿ ಸಿಕ್ಕಿಸಿಕೊಂಡಿದ್ದಾಳೆ. ತಾಯಿ ಮಗ ಬಹುಕಾಲ ಇದಕ್ಕಾಗಿ ಸಂಚು ಮಾಡಿದ್ದಾರೆ. ಈ ತಂತ್ರದಲ್ಲೆಲ್ಲ ಪ್ರಾಮಾಣಿಕವೆಂಬ ಅಂಶ ಇಷ್ಟು ಇಲ್ಲ ; ಇವರು ಶಿಕ್ಷೆಗೆ ಅರ್ಹರು. ಅದರಿಂದ ತಪ್ಪಿಸಿಕೊಳ್ಳಲು ಅವರನ್ನು ಬಿಡಬಾರದು. ನಿನ್ನ ತೀರ್ಮಾನ ನನಗೆ ಸುತರಾಂ ಒಪ್ಪದು. ನನಗೆ ತೋಳ್ಬಲ ಇದೆ ; ಅದು ನಿನ್ನ ನೆರವಿಗಾಗಿ ಭಕ್ತಿಯಿಂದಲೂ ಶ್ರದ್ಧೆಯಿಂದಲೂ ನಿಲ್ಲುತ್ತದೆ. ನಿನಗೂ ರಾಜ್ಯಕ್ಕೂ ನಡುವೆ ಯಾರು ನಿಲ್ಲುತ್ತಾರೆ ನೋಡೋಣ. ಯಾವ ಆತಂಕ ಒಡ್ಡಿ ಬಂದರೂ ನನ್ನ ಖಡ್ಗ ಅದನ್ನು ಕತ್ತರಿಸೀತು. ಯಾವ ಶತ್ರುವನ್ನೂ ನನ್ನ ಬಾಣಗಳು ಭೇದಿಸಿಯಾವು. ಯಾರೇ ಆಗಲಿ—ತಂದೆ, ತಾಯಿ, ತಮ್ಮ, ಅಣ್ಣ, ಅಯೋಧ್ಯೆ—ಎಲ್ಲ ಒಟ್ಟಿಗೆ ನಿನಗೆ ಎದುರು ನಿಂತರೂ ನನ್ನೆದುರಿಗೆ ಅವು ಕೆಳಗೆ ಬಿದ್ದಾವು. ಇಂಥ ನಡತೆ ನ್ಯಾಯವೆಂದು ಒಪ್ಪುವುದು ನಿನ್ನ ಶೀಲಕ್ಕೇ ಚ್ಯುತಿ. ಹೀಗಾಗಬಾರದು.

ರಾಮ : ಇಲ್ಲಿ ನಾನು ನಿನ್ನ ಒಪ್ಪಿಗೆಗೆ ಕಾದಿರಬೇಕೆ, ಲಕ್ಷ್ಮಣ ? ಆ ಮಾತು ನನಗೆ ಒಪ್ಪದು. ಈ ತೀರ್ಮಾನಕ್ಕೆ ಕ್ಷಾತ್ರಕ್ಕಿಂತ ಮೇಲ್ಪಟ್ಟ ಪರಿಶೀಲನೆ ಇದೆ. ಈ ಹಿಂಸೆಗೆಲ್ಲ ತಂದೆಯನ್ನು ಈಡು ಮಾಡಬೇಕಾಗಿರಲಿಲ್ಲವೆಂದು ನಾನು ತಾಯಿ ಕೈಕೆಗೆ ಹೇಳಿದೆ. ಆಕೆಯೇ ನನಗೆ ಈ ಸೂಚನೆ ಕೊಡಬಹುದಿತ್ತು. ಭರತನಿಗೆ ರಾಜ್ಯವನ್ನು ಒಪ್ಪಿಸಿ, ಸಂತೋಷವಾಗಿ ನಾನು ಕಾಡಿಗೆ ಹೋಗುತ್ತಿದ್ದೆ. ನಮ್ಮ ವಂಶದಲ್ಲಿ, ಅತಿಶಯವಾಗಿ ಹಿರಿಯ ಆರ್ಯ ಮನೆತನಗಳಲ್ಲಿ ಕುಟುಂಬ ಒಂದು ಘಟಕ. ತಂದೆ, ತಾಯಿ, ಸೋದರರು ಒಟ್ಟಿಗೆ ಒಂದು ಜೀವ. ಒಂದಕ್ಕೆ ಒಳ್ಳೆಯದಾದ್ದು ಇನ್ನೊಂದಕ್ಕೂ ಒಳ್ಳೆಯದಾಗಬೇಕು. ವಿಧೇಯತೆಗೆ ಮಟ್ಟಗಳಿವೆ. ಜೊತೆಗೆ ಕುಟುಂಬವನ್ನು ಉಳಿಸುವ ಕರ್ತವ್ಯಗಳೂ ಅಲ್ಲಿವೆ. ಈ ಕಡೆಗಾಲದಲ್ಲಿ ತಂದೆಗೆ ಸಂದೇಹ ಬರಬೇಕೆ ?—ತಾವು ಕೊಟ್ಟ ಮಾತನ್ನು ನೆರವೇರಿಸುವುದಕ್ಕೆ ಲೋಕದಲ್ಲಿ ತನಗೆ ಸಾಧನ ಸಿಕ್ಕದೆಂದು ? ಕುಟುಂಬದ ಹಿರಿಯನು ಕೊಟ್ಟ ಮಾತು ಎಲ್ಲರನ್ನೂ ಕಟ್ಟುತ್ತದೆ. ತಮ್ಮ ಜೀವಿತದ ನಿಡುಗಾಲದ

ಆಳಿಕೆಯಲ್ಲಿ ಉದ್ದಕ್ಕೂ ತಂದೆ ಮರ್ಯಾದಸ್ಥ ಪ್ರಾಮಾಣಿಕ ರಾಜರಾಗಿದ್ದರು. ಸ್ವರ್ಗ ಅವರಿಗೆ ಗಳಿಕೆಯಾಗಬೇಕು. ಕೊಟ್ಟ ಮಾತುಗಳನ್ನೆಲ್ಲ ಈವರೆಗೂ ನೆರವೇರಿಸಿದ್ದಾರೆ. ಇಂಥವರು ಕಡೆಯ ದಿನಗಳಲ್ಲಿ ತನ್ನ ಮಾತನ್ನು ನೆರವೇರಿಸದಿದ್ದುದಕ್ಕಾಗಿ ಸ್ವರ್ಗದಲ್ಲಿ ತಮ್ಮ ಸ್ಥಾನ ಕಳೆದುಕೊಳ್ಳುತ್ತೇನೊ ಏನೊ ಎಂಬ ಸಂದೇಹಕ್ಕೆ ಒಳಗಾಗಬೇಕೆ? ಕಾರಣ ಸ್ವಾರ್ಥ! ಆದರೆ ಸ್ವಂತವಾಗಿ ನಾಡು ಬಿಟ್ಟುಹೋಗು ಎಂದು ಎಂದಿಗಾದರೂ ಅವರು ಬಯಸಿಯಾರೆ? ಯಾರೇ ಆಗಲಿ, ಕೈಕೆಯೇ ಇಂಥ ತೀರ್ಮಾನ ಮಾಡುವಳೆಂದು ಹೇಳಬಹುದಿತ್ತೆ? ಉಹುಂ; ಇದು ವಿಧಿಯ ಕಾರ್ಯವೇ ಸರಿ. ಯಾವುದೊ ಶಕ್ತಿ ಕೆಲವು ಸನ್ನಿವೇಶಗಳಲ್ಲಿ ಎಲ್ಲ ಮನಸ್ಸುಗಳನ್ನೂ ತುಟಿಗಳನ್ನೂ ಕೈಗಳನ್ನೂ ಅವರ ವಶ ತಪ್ಪಿ ನುಡಿಸುತ್ತದೆ. ಅವರಿಂದ ಮಾಡಿಸುತ್ತದೆ. ಇಲ್ಲಿ ಅದೇ ಕಾರಣವಿರಬೇಕು. ಅದರ ಕ್ರಿಯಾರೀತಿ ಅದೃಷ್ಟ ನಡೆಯಲಿರುವ ಕಾರ್ಯಪ್ರಪಂಚ ಒಂದೇ. ಹೀಗೇ ಆಗಬೇಕಿತ್ತೆಂಬುದನ್ನು ಇಂಥ ತೀರ್ಮಾನ ಕಾಣಿಸಬಲ್ಲದು. ಯಾವುದೊ ಮಂಗಳ ಮಹೋದ್ದೇಶ ನೆರವೇರಬೇಕಿದೆ; ಅದಕ್ಕಾಗಿ ಹೀಗಾಗಿರಬೇಕು. ನನಗೆ ನಿನಗೆ ಆ ಕಾರಣ ಏನೆಂದು ಈಗ ಗೊತ್ತಿಲ್ಲ. ಭರತನು ರಾಜ್ಯವಾಳಲಿ, ನೀನಾಳಲಿ, ನಾನಾಳಲಿ ಏನು ವ್ಯತ್ಯಾಸ? ಅವನು ಸಾತ್ವಿಕ—ನಿನ್ನಷ್ಟೆ ಅವನಿಗೆ ನನ್ನಲ್ಲಿ ಪ್ರೀತಿ ಇದೆ. ವಾದ ಬೆಳಸಬೇಡ. ನನ್ನ ಮನಸ್ಸಿನಲ್ಲಿ ಇದನ್ನೆಲ್ಲ ಯೋಚಿಸಿದ್ದೇನೆ.

[ಹಿನ್ನೆಲೆಯಲ್ಲಿ
ತದೇನಾಂ ವಿಸೃಜ ಅನಾರ್ಯಾಂ ಕ್ಷತ್ರಧರ್ಮಾಶ್ರಿತಾಂ ಮತಿಂ
ಧರ್ಮಮಾಶ್ರಯ ಮಾ ತೈಕ್ಷ್ಣ್ಯಂ ಮದ್ಬುದ್ಧಿಃ ಅನುಗಮ್ಯತಾಂ]

ವಿರುದ್ಧವಾಗಿ ನಿಂತುದನ್ನು ಕತ್ತರಿಸಿ ಮುಂದೆ ಹೋಗಲು ನನ್ನ ಬಲಭುಜ ಶಕ್ತವಾಗಿಲ್ಲವೆ?—ಬಲಪ್ರಕಾಶನ ಒಂದೇ ಯಾವುದನ್ನಾದರೂ ಸಾಧಿಸುವ ಮಾರ್ಗವಾಗಿದ್ದರೆ...ಇದು ಬಲಪ್ರಕಾಶನದ ಪ್ರಪಂಚವಲ್ಲ: ಮಾನದ್ದು. ವಂಶದ ಮಾನ ಕೂಡ. ನಾನು ಇದನ್ನು ನೆರವೇರಿಸದಿದ್ದರೆ ಹೆಂಡತಿಯ ಋಣದಲ್ಲಿ ತಂದೆ ಬಿದ್ದು ಸಾಯುತ್ತಾರೆ. ತಂದೆ ತಾಯಿ ನಮ್ಮ ಇರವಿಗೇ ಕಾರಣ. ಅವರ ಭರವಸೆಯಲ್ಲಿ ನಾವು ಬದುಕಿರುತ್ತೇವೆ. ನಮ್ಮನ್ನು ಗಂಡಾಗಿ ಹೆಣ್ಣಾಗಿ ಬೆಳಸುವವರು ಅವರು. ನಾವು ಅವರಿಗೆ ಸೇರುವವರು. ಸಾತ್ವಿಕತೆ ನನಗೆ ಶೀಲವನ್ನೂ ಗಮ್ಯವನ್ನೂ ಕರ್ತವ್ಯವನ್ನೂ ಉಂಟು ಮಾಡುತ್ತದೆ. ಆದ್ದರಿಂದ ನನ್ನ ತೀರ್ಮಾನ ಅಗತ್ಯ; ಸರಿ ಎಂಬುದು ನನ್ನ ನಂಬಿಕೆ. ನಿನಗೆ ನನ್ನಲ್ಲಿ ಎಷ್ಟು ಪ್ರೀತಿಯಿದೆ ಎಂದು ನಾನು ಬಲ್ಲೆ. ನಿನ್ನ ಒಲವು ರಾಗ ದ್ವೇಷಗಳದು. ತೈಕ್ಷ್ಣ್ಯವನ್ನು ಬಿಡು. ನೀನು ಏನು ಹೇಳುತ್ತೀಯೊ ಆ ನಿನ್ನ ಒಪ್ಪಿತಕ್ಕೆ ನಾನು ಕಾಯುವುದು ಬೇಡ. ನಿನ್ನ ಸೂಚನೆಗಿಂತ ನಾನು

ಹೇಳುತ್ತಿರುವುದರಲ್ಲಿ ಮೇಲ್ತರದ ಯುಕ್ತತೆ ಇದೆ. ಬಾಣ ಪ್ರಯೋಗಿಸಿ, ಕತ್ತಿ ಝಳಪಿಸಿ ಪೌರುಷ ತೋರುವ ಕಾಲ ಇದಲ್ಲ. ನನ್ನಲ್ಲಿ ವಿಶ್ವಾಸವಿಡು, ತಮ್ಮ. ಇಕ್ಷ್ವಾಕು ರಾಜರು ಧರ್ಮದ ದಾರಿಯನ್ನು ಬಿಟ್ಟು ಬೇರೆ ತುಳಿದುದಿಲ್ಲ : ಅವರು ವಶಿಗಳಾಗಿರಬೇಕು. ಇಷ್ಟು ಆಯಿತು : ಇದರಿಂದ ಎಲ್ಲ ಏನಾದೀತು ? ಸ್ವಲ್ಪ ಕಾಲ ದೇಶದಿಂದ ಹೊರಗೆ ಹೋಗಿರುತ್ತೇವೆ, ಅಷ್ಟೇ ತಾನೆ ? ರಾಜಧಾನಿಯಲ್ಲಿ ಆಳುತ್ತಿರುವುದು ನಮ್ಮ ತಮ್ಮ ; ತಾಯಿಗೆ ಅವನು ತೃಪ್ತಿ ಕೊಡುವುದು ಸಲ್ಲದೆ ? ತಂದೆ ಋಣಮುಕ್ತವಾಗುವರು—ಇದು ಸಣ್ಣ ಕ್ಷೇಮದ ಸಾಧನೆಯೆ ? ನನಗೆ ಈವರೆಗೂ ರಾಜತ್ವ ಇದ್ದಿತೆ—ಈಗ ಕಳೆದುಕೊಳ್ಳುವುದಕ್ಕೆ ?

ಲಕ್ಷ್ಮಣ : ಇದನ್ನು ನಾನು ಹೇಳುವುದು ಸರಿಯಲ್ಲ. ಎಲ್ಲ ರೀತಿಯೂ ರಾಜ್ಯ ನಿನ್ನದು. ಯಾವುದು ನಿನ್ನ ಹಕ್ಕಿನಿಂದ ಬಂದದ್ದೊ ಅದನ್ನು ಬೀಸಾಡುವುದು ಒಂದು ಕರ್ತವ್ಯವನ್ನು ಮುರಿದ ಹಾಗೆ ಎಂದು ಮಾತ್ರ ಹೇಳಿದೆ.

ರಾಮ : ಹಕ್ಕು ಸರಿಯಾಗುವುದು ಯಾವಾಗ ?—ಅದು ಧರ್ಮವಾದಾಗ. ಹೆಚ್ಚು ವಿವರಣೆ ಕೇಳಬೇಡ.

ಲಕ್ಷ್ಮಣ : ನನ್ನ ಮನಸ್ಸಿಗೆ ಇದು ಒಪ್ಪುವುದಿಲ್ಲ. ಆದರೂ ನಿನ್ನ ತೀರ್ಮಾನಕ್ಕೆ ನಾನು ಬಾಗುತ್ತೇನೆ. ನೀನು ನನಗಿಂತ ವಿವೇಕಶಾಲಿ ; ನಿನ್ನ ತೀರ್ಮಾನ ನನ್ನದು. ನೂರು ವರ್ಷ ನಾನು ಬದುಕಿದ್ದರೂ ನಿನ್ನ ತೀರ್ಮಾನವನ್ನು ಒಪ್ಪಿಕೊಂಡು ನಿನ್ನ ಇಚ್ಛೆಯಂತೆ ನಡೆಯುವವನು. ತಂದೆ ತಾಯಿ ವಾದ ನೆಪಗಳಾಗುವುದಿಲ್ಲ—ಒಂದು ಕೋಣೆಯಲ್ಲಿ ನಡೆದ ಕುತಂತ್ರಕ್ಕೆ, ದ್ರೋಹಕ್ಕೆ. ನೀನು ನನಗೆ ತಂದೆಯ ಸಮಾನ. ನಿನ್ನನ್ನು ಹಿಂಬಾಲಿಸುತ್ತೇನೆ.

ರಾಮ : ಅಷ್ಟು ತ್ವರೆ ಬೇಡ. ಇಲ್ಲೇ ಉಳಿದಿದ್ದು ಮನೆಯನ್ನೂ ಸಂಗತಿಗಳನ್ನೂ ನೋಡಿಕೊಳ್ಳುತ್ತಿರು.

ಲಕ್ಷ್ಮಣ : ಆಗದು. ಇಷ್ಟೂ ವರ್ಷಗಳ ಕಾಲ ನಾವು ಜೊತೆಯಲ್ಲಿದ್ದುದೇಕೆ ? ನಿನ್ನ ಜೊತೆಯಲ್ಲಿರಲು ನನಗೆ ನೆರವು ಕೊಟ್ಟಿದ್ದೀಯೆ. ನೀನು ಕಾಡಿಗೆ ಹೋಗಿ ನನ್ನನ್ನು ಇಲ್ಲಿರು ಎನ್ನುವುದು ಸರಿಯಾಗದು. ಜೊತೆಯಲ್ಲಿ ಆಟವಾಡಿದ್ದೇವೆ, ಓದಿದ್ದೇವೆ, ವಿಶ್ವಾಮಿತ್ರರೊಡನೆ ಹೋಗಿದ್ದೇವೆ, ವಿವಾಹ ಮಂಟಪಕ್ಕೆ ಜೊತೆಯಲ್ಲಿ ಹೋಗಿದ್ದೇವೆ. ಕಾಡಿಗೂ ಜೊತೆಯಲ್ಲಿ ಹೋಗೋಣ.

ರಾಮ : ನಾನು ಹೇಳುವುದನ್ನು ಕೇಳು, ಲಕ್ಷ್ಮಣ. ತಂದೆ ಮುದುಕರು. ಕೈಕೆಯ ಮನಸ್ಸು ಅನಿಶ್ಚಿತ. ನಮ್ಮನ್ನು ಓಡಿಸಿ ತನ್ನ ಮಗನಿಗೆ ರಾಜ್ಯವನ್ನು ಕೊಡಿಸುವ ಅವಳು ನಮ್ಮ ತಂದೆಯ ಜೀವಕ್ಕೂ ಅಪಾಯ ಉಂಟು ಮಾಡಿಯಾಳು. ಮನಸ್ಸು ಒಂದು ಗೊತ್ತಿಗೆ ಬಂದಾಗ ಹೆಂಗಸರು ಏನು ಮಾಡುತ್ತಾರೆ ಎಂದು ಹೇಳಲಾಗುವುದಿಲ್ಲ.

ಲಕ್ಷ್ಮಣ : ನನಗೆ ಅದು ತೂಕವಿಲ್ಲದ ವಾದ. ಅರಳುಮರುಳಿಂದ ಒಬ್ಬ ಮುದುಕನ ಜೀವ ಅವನ ತೃಪ್ತಿಗಾಗಿ ಅನ್ಯಾಯಕ್ಕೂ ಒಪ್ಪಿದಾಗ ನನಗೆ ಬೆಲೆಯಿಲ್ಲ.

ರಾಮ : ತಂದೆಯ ವಿಷಯವಾಗಿ ಇಷ್ಟು ಕಠಿಣವಾಗಿ ಆಲೋಚನೆ ಮಾಡುತ್ತಿರುವುದಕ್ಕಾಗಿ ದೇವರು ನಿನ್ನನ್ನು ಕ್ಷಮಿಸಲಿ. ತಾಯಿ ಕೌಸಲ್ಯೆಯನ್ನು ನೋಡಿಕೊಳ್ಳಬೇಕಾಗಿದೆ, ಅಯೋಧ್ಯೆಯಲ್ಲಿ. ಪಾಪ, ನಿನ್ನ ತಾಯಿ ಇಷ್ಟು ಕಾಲವೂ ನಡೆದಿರುವುದು ಒಂದು ಬದುಕೆ ? ನೀನು ಯಾವಾಗಲೂ ನನ್ನೊಡನೆ ಇದ್ದೀ. ಶತ್ರುಘ್ನನು ಭರತನೊಡನಿರುತ್ತಾನೆ. ಅವಳಿಗೆ ಉಳಿದುದೇನು ? ಅವಳನ್ನೂ ನನ್ನ ತಾಯಿಯನ್ನೂ ನೋಡಿಕೊಳ್ಳುವವರು ಯಾರು ?—ನಾವಿಬ್ಬರೂ ಹೊರಗೆ ಹೋಗಿರುವಾಗ ? ಭರತನು ರಾಜನಾಗಿರುವಾಗ ? ನಾನು ಏನಾಗಿದ್ದೆನೊ ಅದು ನೀನಾಗು. ನೆರವಾಗು. ಸಮಾಧಾನ ಕೊಡು.

ಲಕ್ಷ್ಮಣ : ಕೌಸಲ್ಯೆಗೆ ನೆರವೆ ? ಅವಳೊಂದು ಕೋಟೆ, ದುರ್ಗ ! ಸ್ವತಃ ಶಕ್ತಳು ! ಸಾವಿರ ಲಕ್ಷ್ಮಣರನ್ನು ಆಕೆ ನೋಡಿಕೊಳ್ಳಬಲ್ಲಳು. ಸಾವಿರ ಗ್ರಾಮಗಳ ಒಡತಿ. ತನ್ನನ್ನು ತಾನು ನೋಡಿಕೊಳ್ಳಬಲ್ಲಳು. ನನ್ನ ತಾಯಿ ಅಷ್ಟು ಶಕ್ತಳಲ್ಲದಿದ್ದರೂ ತನ್ನ ಬಳಿ ಗಂಡ ಇರುತ್ತಾನೆ ಎಂಬುದು ಅವಳನ್ನು ಸಮಾಧಾನ ಪಡಿಸಿದೆ. ನನ್ನನ್ನು ನೀನು ನಿವಾರಿಸುವ ಹಾಗಿಲ್ಲ. ನಿನ್ನೊಡನೆ ನಾನು. ಸೀತೆ ಹಿಂದೆ ಉಳಿಯುತ್ತಾಳೆಯೆ ?

ರಾಮ : ಅದನ್ನು ನನಗೆ ಬಿಡು. ಯಾವ ಬದುಕಿಗೆ ಅವಳು ಈಡಾಗುತ್ತಾಳೆಂಬುದನ್ನು ಅವಳು ತಿಳಿದುಕೊಳ್ಳಬಲ್ಲಳು.

ಲಕ್ಷ್ಮಣ : ನಿನ್ನ ಇಷ್ಟ ನೆರವೇರಲಿ, ರಾಮ !

ರಾಮ : ಈಗ ನಾನು ಒಳಗೆ ಹೋಗುತ್ತೇನೆ. ಸೀತೆಗೆ ಸುದ್ದಿ ತಿಳಿಸಿ ನಾನು ಕಾಡಿಗೆ ಹೋಗುವುದಕ್ಕೆ ಅವಳ ಸಮ್ಮತಿ ಪಡೆಯುತ್ತೇನೆ. ನಿಶ್ಶಬ್ದವಾಗಿ ನಾವು ಹೊರಟು ಹೋಗಲು ಏನು ಏರ್ಪಾಡು ಮಾಡಬೇಕೊ ಅದನ್ನು ಮಾಡು. ಜನರನ್ನು ಸಮಾಧಾನ ಪಡಿಸಬೇಕು ; ಉದ್ರೇಕ ಬೇಡ, ಕೋಪ ಬೇಡ ಎಂದು ಅವರಿಗೆ ಹೇಳಬೇಕು. ಎಷ್ಟು ಕಾಲ–ಹದಿನಾಲ್ಕು ವರ್ಷ ? ನಮಗಿನ್ನೂ ಸಣ್ಣ ವಯಸ್ಸು ; ಶಕ್ತರಾಗಿದ್ದೇವೆ. ತೋಳ್ಬಲ, ಶಸ್ತ್ರಬಲ ಇವೆ. ನಮಗೆ ಕೆಡುಕಾಗದು. ನಾನು ಹೊರಟು ಬರುವಾಗ ತಾಯಿ ಹರಕೆಯಾಗಿ ನನಗೆ ಹೇಳಿದ್ದೇನು ?

ಯಂ ಪಾಲಯಸಿ ಧರ್ಮಂ ತ್ವಂ ಧೃತ್ಯಾ ಚ ನಿಯಮೇನ ಚ
ಸ ವೈ ರಾಘವ ಶಾರ್ದೂಲ ಧರ್ಮಸ್ತ್ವಾಂ ಅಭಿರಕ್ಷತು

(ವ್ಯಸ್ತನಾಗಿ ಲಕ್ಷ್ಮಣನು ಒಂದು ದಾರಿ ಹಿಡಿದು ಹೋಗುತ್ತಾನೆ. ರಾಮ ತನ್ನ ಅರಮನೆಯೊಳಕ್ಕೆ ಹೋಗುತ್ತಾನೆ.)

## ದೃಶ್ಯ ೪

[ಸೀತೆ ರಾಮನು ಬರುತ್ತಿರುವುದನ್ನು ಕಾಣುತ್ತಾಳೆ. ಮೇಲೆದ್ದಾಗ ಅವಳಿಗೆ ಆಶ್ಚರ್ಯ, ಚಿಂತೆ. ವಾಡಿಕೆಗಿಂತ ಹೆಚ್ಚಾಗಿ ಮುಖ ಬಾಡಿದೆ, ಅವನ ಮನಸ್ಸಿನ ಮೇಲೆ ಭಾರ ಹೊತ್ತಂತೆ. ಹೊರಬಾಗಿಲ ಹತ್ತಿರಕ್ಕೆ ಹೋಗಿ ಅವನ ಭುಜದ ಮೇಲೆ ಕೈಯಿಟ್ಟು ತಗ್ಗಿದ ಮುಖದತ್ತ ನೋಡುತ್ತಾಳೆ. ತಾನು ಕುಳಿತ ಪೀಠದತ್ತ ಅವನನ್ನು ಕರೆತಂದು ಪ್ರೀತಿಯಿಂದ ಬಳಿ ನಿಲ್ಲುತ್ತಾಳೆ.]

ಸೀತೆ : ಏನಿದು ನಿಮ್ಮ ಸ್ಥಿತಿ ? ತುತೂರಿ ಇಲ್ಲ ; ಸ್ತೋತ್ರಪಾಠಕರಿಲ್ಲ ; ಮಂತ್ರ ನುಡಿವ ಪುರೋಹಿತರಿಲ್ಲ ; ಮಂತ್ರಿಗಳಿಲ್ಲ ; ಬೆಳ್ಗೊಡೆ ಇಲ್ಲ ; ಬೀಸುವ ಚಾಮರಗಳಿಲ್ಲ ? ವ್ಯಥೆ ಕಾಡುತ್ತಿರುವಂತಿದೆ ; ನಿಮ್ಮನ್ನು ಏನೊ ಒಂದು ಮುತ್ತಿರುವಂತಿದೆ. ಇಂದು ಪುಷ್ಯ ನಕ್ಷತ್ರ ; ಬೃಹಸ್ಪತಿ ಅದರ ಅಧಿಕಾರಿ ದೇವತೆ. ಇಂದಿನ ಮುಹೂರ್ತ ಗೊತ್ತಾಗಿತ್ತು ಶುಭವಾದ್ದೆಂದು. ಪಟ್ಟಾಭಿಷೇಕ ಮಂಟಪಕ್ಕೆ ಹೋಗಿ ಅಗ್ನಿಕಾರ್ಯಗಳನ್ನೆಲ್ಲ ಮಾಡುವುದಕ್ಕೆ. ನನ್ನ ಪೂಜಾಕಾರ್ಯಗಳೆಲ್ಲ ಮುಗಿದಿವೆ. ನೀವು ಬರುವುದಕ್ಕೆ ಕಾದಿದ್ದೇನೆ. ಜೊತೆಯಲ್ಲಿ ಹವನ ಹೋಮ ಮಾಡುವ ಮುಂಚೆ ನಿಮ್ಮ ಪಾದಧೂಳಿ ತೆಗೆದುಕೊಳ್ಳಬೇಕೆಂದು ಕಾದಿದ್ದೇನೆ. ಒಳಗೆಲ್ಲ ಸಿದ್ಧವಾಗಿವೆ. (ರಾಮನು ಸುಮ್ಮನಿರುವುದನ್ನು ಕಂಡು) ಈ ನಿಮ್ಮ ಸ್ಥಿತಿ ನನಗರ್ಥವಾಗುತ್ತಿಲ್ಲ. ಸಣ್ಣ ನಗೆ ನಗಲು ಯತ್ನಿಸುತ್ತಿರುವಂತಿದೆ. ಬರುವ ನಿಟ್ಟುಸಿರನ್ನು ಪೂರ್ತಿ ತಡೆದಿದ್ದೀರಿ. ನಿಮ್ಮನ್ನು ಏನೊ ಪೀಡಿಸುತ್ತಿದೆ ! ಈ ಸ್ಥಿತಿಯಲ್ಲಿ ಏಕಿದ್ದೀರಿ ? ಇಂಥ ನಿಸ್ತೇಜ ಕಳೆಯನ್ನು ನಿಮ್ಮ ಮುಖದ ಮೇಲೆ ಎಂದೂ ಕಂಡಿಲ್ಲ. ಮುಗುಳ್ನಗೆಯಿಲ್ಲ, ಉಲ್ಲಾಸವಿಲ್ಲ !

ರಾಮ : ಸೀತಾ, ಪೂಜ್ಯ ತಂದೆಯುವರು ನನ್ನನ್ನು ಕಾಡಿಗೆ ಕಳಿಸುತ್ತಿದ್ದಾರೆ. ನೀನು ದೊಡ್ಡ ಕುಲದಲ್ಲಿ ಹುಟ್ಟಿದವಳು, ಸತೀತ್ವದ ಎಲ್ಲ ಕರ್ತವ್ಯಗಳನ್ನೂ ಅರಿತವಳು. ಈಗ ನಾನು ಹೋಗಬೇಕಾಗಿದೆ. ಲಕ್ಷ್ಮಣನು ಪದಾರ್ಥಗಳನ್ನು ಸಿದ್ಧ ಮಾಡುತ್ತಿದ್ದಾನೆ. ಧೈರ್ಯವಾಗಿರಬೇಕು, ಸೀತಾ.

ಸೀತೆ : ಕಾಣದ ಕಡೆಯಿಂದ ಇದಾವ ಸಿಡಿಲು ಬಡಿಯಿತು ? ಇದೆಲ್ಲ ಏಕೆ ? ನಮ್ಮ ಮೇಲೆ ಈ ಆಪತ್ತು ಕವಿಯಲು ಕಾರಣವೇನು ?

ರಾಮ : ನಡೆದಿರುವುದು ಹೀಗೆ. ಕೈಕೆ ಹೇಳುತ್ತಾಳೆ : ಅವಳಿಗೆ ಹಿಂದೆಂದೊ ತಂದೆಯುವರು ಎರಡು ವರಗಳನ್ನು ಕೊಟ್ಟಿದ್ದರಂತೆ. ಅವನ್ನು ಈಗ ಬಯಸುತ್ತಿದ್ದಾಳೆ. ನಾನು ಹದಿನಾಲ್ಕು ವರ್ಷ ಕಾಡಿಗೆ ಹೋಗಬೇಕೆಂದು ; ಆ ಕಾಲದಲ್ಲಿ

ಭರತನು ಅಯೋಧ್ಯೆಯಲ್ಲಿ ರಾಜನಾಗಿರಬೇಕೆಂದು. ತಂದೆ ಕೊಟ್ಟ ಮಾತನ್ನು ನೆರವೇರಿಸಲು ಆ ಸಮಯಗಳಿಗೆ ನಾನು ಒಪ್ಪಿಕೊಂಡಿದ್ದೇನೆ. ವ್ಯಥೆಯೇನೊ ನಮ್ಮೆಲ್ಲರಿಗೂ ಇದೆ—ಸಂದೇಹವಿಲ್ಲ. ತಾಯಿಗೆ, ನಿನಗೆ ಎಲ್ಲರಿಗಿಂತಲೂ. ನಾನು ಹೇಗೊ ಸಹಿಸಿಕೊಳ್ಳುತ್ತೇನೆ. ಸ್ವಲ್ಪ ತಾಳಿಕೊ. ಹದಿನಾಲ್ಕು ವರ್ಷ ದೀರ್ಘವಲ್ಲ. ನಮ್ಮದಿನ್ನೂ ಎಳಪ್ರಾಯ. ಅವಧಿ ಬೇಗ ಮುಗಿದು ಹೋಗುತ್ತದೆ. ನಾನು ಹಿಂದಿರುಗಿ ಬರುತ್ತೇನೆ. ಓ, ಅರೋಗ ದೃಢಕಾಯನಾಗಿ, ಸಂತೋಷ ದಲ್ಲಿ. ಆ ಅವಧಿ ಸಮಯದಲ್ಲಿ ನನ್ನ ತಂದೆ ತಾಯಿಯರನ್ನು ನೀನು ನೋಡಿಕೊ. ಬೇಕಾದ ಎಲ್ಲ ನೆರವನ್ನೂ ಕೊಡು. ಇಬ್ಬರಿಗೂ ಸೇವೆ ಸಲ್ಲಿಸು. ಭರತನು ರಾಜನಾದಾಗ ಅವನಲ್ಲಿ ಚೆನ್ನಾಗಿ ನಡೆದುಕೊ, ಉದಾರವಾಗಿ. ಎಚ್ಚರಿಕೆ ತಪ್ಪಿ ಕೂಡ ನನ್ನ ಹೊಗಳಿಕೆಯ ಮಾತನ್ನು ಅವನೆದುರಿಗೆ ಆಡಬೇಡ ; ಅವನಿಗೆ ಪೀಡೆಯಾದೀತು. ನೀನು ಚೆನ್ನಾಗಿ ಬೆಳೆದವಳು. ಸಂಸಾರದ ಮರ್ಯಾದೆಗಳನ್ನು ಬಲ್ಲವಳು. ಇದನ್ನು ನಿನಗೆ ತಿಳಿಸೋಣವೆಂದು ಬಂದೆ—ನಿನ್ನ ಅಪ್ಪಣೆ ಪಡೆದು ಹೋಗೋಣ ಎಂದು. ಹೋಗಗೊಡು ಸೀತೆ ; ಒಡನೆಯೇ ಹೋಗಬೇಕಾಗಿದೆ.

ಸೀತೆ : ಚೆನ್ನಾಯಿತು. ನೀವು ಈಗ ನನಗೆ ಹೇಳುತ್ತಿರುವುದೇನು ? ನೀವು ಕಾಡಿಗೆ ಹೋಗುತ್ತೀರಿ—ನನ್ನನ್ನು ಇಲ್ಲಿಯೇ ಉಳಿಸಿ ಎಂದು ; ನೀವಿಲ್ಲದೆ ಅಷ್ಟು ದೀರ್ಘಕಾಲ—ಹತ್ತು ವರ್ಷ, ಆಮೇಲೆ ಮೂರು, ಆಮೇಲೆ ಇನ್ನೊಂದು—ಅಸಾಧ್ಯ ! ಉಹುಂ. ನಿಮ್ಮ ಬದುಕಿನೊಳಕ್ಕೆ ಬಂದಿದ್ದೇನೆ. ನಿಮ್ಮ ಪ್ರೀತಿಯ ಬಿಸಿಲಲ್ಲಿ ತೆರೆದು ಸಂಪನ್ನವಾದ ಬದುಕು ಬದುಕಿದ್ದೇನೆ. ನಿಮಗೆ ಸಂಪೂರ್ಣ ವಾಗಿ ತೆತ್ತುಕೊಂಡಿದ್ದೇನೆ. ನನ್ನನ್ನೂ ನನ್ನ ಭಕ್ತಿಯನ್ನೂ ನೆಚ್ಚನ್ನೂ ಸ್ವೀಕರಿಸಿದ್ದೀರಿ. ಈಗ ನನ್ನನ್ನು ಹಿಂದೆ ನಿಲ್ಲೆನ್ನುವುದೆ ? ಆಗದು. ನಾನೂ ನಿಮ್ಮ ಹಿಂದೆಯೇ ಬರುತ್ತೇನೆ. ಕೈಕೆ, ಭರತ, ಅಯೋಧ್ಯೆ, ಅರಮನೆ—ಇವನ್ನು ಕಟ್ಟಿಕೊಂಡು ನನಗೇನಾಗಬೇಕು ? ನಾನು ನಿಮ್ಮವಳು. ನೀವಿರುವಲ್ಲಿ ನಾನು. ನಿಮಗೆ ಬರುವ ಸುಖ ದುಃಖ ನನಗೆ. ಏನು ಮಾಡೆಂದರೆ ಅದನ್ನು ಮಾಡುತ್ತೇನೆ ; ನಿಮ್ಮನ್ನು ಬಿಟ್ಟು ಬದುಕೆಂದರೆ ಮಾತ್ರ ಆಗದು. ನೂರು ನೂರು ಸಾರಿ ಆಗದು.

ರಾಮ : ನೀನು ಕೇಳುತ್ತಿರುವುದು ಏನು ಎಂಬುದನ್ನು ನೀನರಿಯೆ, ಸೀತಾ. ಅರಮನೆ ಯೊಳಗಿನ ಬದುಕಿಗಿಂತ ಬೇರೆ ಏನನ್ನೂ ನೀನು ಕಾಣೆ. ಇಲ್ಲಿನ ಸಂತೋಷ, ಸುಖ ಸೌಕರ್ಯ, ಅರಸುತನದ ಬದುಕು ಬಿಟ್ಟು ನಿನ್ನ ಹೆಜ್ಜೆ ಎಂದಾದರೂ ನೆಲವನ್ನು ಮುಟ್ಟಿದೆಯೊ ಇಲ್ಲವೊ ನಾನರಿಯೆ. ಅರಣ್ಯಗಳಲ್ಲಿ ಹೇಗೆ ಸಂಚರಿಸೀಯೆ ? ಇವನ್ನು ನೀನು ಅನುಭವಿಸಲಾರೆ. ಅವಕ್ಕೆ ನಿನ್ನನ್ನು ಈಡು ಮಾಡಲು ನನಗೆ ಇಷ್ಟವಿಲ್ಲ. ನಿನ್ನನ್ನು ಕರೆದುಕೊಂಡು ಹೋಗೆಂದು ನನ್ನನ್ನು ಒತ್ತಾಯಗೊಳಿಸ

ಬೇಡ—ನಿನ್ನನ್ನು ಪ್ರಾರ್ಥಿಸುತ್ತೇನೆ, ಸೀತಾ. ಕೆಲವೇ ದಿನಗಳಿಗೂ ಆ ಬದುಕನ್ನು ನೀನು ಸಹಿಸಲಾರೆ. ದಿನಗಳೇನು, ಗಂಟೆಗಳು ಕೂಡ.

ಸೀತೆ : ನನ್ನನ್ನು ನೋಡಿಕೊಳ್ಳಲು, ರಕ್ಷಿಸಲು ನೀವಿದ್ದೀರಿ. ನೀವು ದಣಿದಾಗ ನಾನು ನಿಮಗೆ ಸಮಾಧಾನ, ಸುಖ ತಂದುಕೊಡುತ್ತೇನೆ. ನಿಮಗೆ ಅಡಿಗೆ ಮಾಡಿ ಹಾಕುತ್ತೇನೆ.

ರಾಮ : ಅಡಿಗೆ ? ಸರಿಯಾಯಿತು. ಮದುವೆಯಾದ ಹೆಂಡತಿ ! ಅಲ್ಲವೆ ?

ಸೀತೆ : ಈವರೆಗೂ ನಾನು ಹೆಚ್ಚಾಗಿ ಅಡಿಗೆ ಕೆಲಸ ಮಾಡಿಲ್ಲ, ನಿಜ. ಈಗ ಆಗುತ್ತದೆ. ಬೇರೆ ಯಾರು ಎಷ್ಟು ಚೆನ್ನಾಗಿ ಮಾಡುತ್ತಾರೊ ಅಷ್ಟು ಚೆನ್ನಾಗಿ ಮಾಡುತ್ತೇನೆ. ಪದಾರ್ಥದ ಪರಿಮಳ, ಅದನ್ನು ಮಾಡುವುದು, ಅದಕ್ಕೆ ಬೇಕಾದ ಕುಶಲತೆಯನ್ನು ನನಗೆ ಕಲಿಸಿಕೊಡಿ. ನಾನೇನು ದಡ್ಡಳೆ ? ಅಗತ್ಯವೇ ಗುರು !

ರಾಮ : ಮಾತು ಸುಲಭ, ಸೀತಾ, ಬದುಕು ಕಷ್ಟ.

ಸೀತೆ : ಇಬ್ಬರಿದ್ದರೆ ಜೊತೆಗೆ ಕಷ್ಟಗಳನ್ನು ಎದುರಿಸಬಹುದು. ನಾನು ನಿಮಗೆ ಹೊರೆಯಾಗುವುದಿಲ್ಲ. ಹೆಣ್ಣಾಗಿ ಕೂಡ ನಾನು ನಿಮ್ಮ ಮೇಲೆ ಯಾವ ಹೊಣೆಗಾರಿಕೆಗಳನ್ನೂ ಹೊರಿಸುವುದಿಲ್ಲ. ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ. ಯಾವ ತೊಂದರೆಯೂ ಕೊಡದೆ ಹೇಗೆ ನಾನು ನಿಮ್ಮ ಜೊತೆಯಲ್ಲಿರುತ್ತೇನೆ ಎಂಬುದನ್ನು ಕಾಣುವಿರಂತೆ. ನಾನು ಇಲ್ಲದೆ ಇದ್ದರೆ ಹೇಗೊ ಹಾಗೆ. ಕಟ್ಟಕಡೆಗೆ ಪಟ್ಟಣದಿಂದ ಹೊರಗೆ ಹೋಗುವ ಒಂದು ಅವಕಾಶ ನನಗೆ ದೊರೆತಂತಾಗುತ್ತದೆ. ತಂದೆಯ ಮನೆಯಲ್ಲಿ ಇದ್ದಾಗ ನನ್ನ ಜಾತಕದಲ್ಲಿ ಕಾಡಿನ ವಾಸ ಸ್ವಲ್ಪ ಬರೆದಿದೆ ಎಂದು ಕೇಳಿದ್ದೆ. ನೋಡಿ, ಅದು ನಿಜವಾಗುತ್ತಿರುವಂತಿದೆ. ಅಷ್ಟೇ ಏನು ? ಇಂಥ ಅವಕಾಶ ಬೇಕೆಂದು ನಾನು ನಿರೀಕ್ಷೆಯಲ್ಲಿದ್ದೆ.

ರಾಮ : ನಿನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಲು ನನ್ನ ಮನಸ್ಸು ಒಪ್ಪುತ್ತಿಲ್ಲ, ಸೀತಾ. ಅಲ್ಲಿನ ಬದುಕು ಕಠಿಣ. ಇಲ್ಲಿ ನಿನಗೆ ಕೆಲಸವಿದೆ, ಮಾಡಬೇಕಾದ್ದು. ನನ್ನ ತಾಯಿ ತಂದೆ ಇಬ್ಬರೂ ವೃದ್ಧರು. ಅವರಿಗೆ ಪ್ರೀತಿ, ಸೇವೆ ಸಲ್ಲಿಸಬೇಕಾಗಿದೆ. ನನ್ನ ಸ್ಥಾನದಲ್ಲಿದ್ದು ನೀನು ಅವನ್ನು ಸಲ್ಲಿಸು.

ಸೀತೆ : ಆಗದು ; ನಾನು ಮನಸ್ಸು ಮಾಡಿಬಿಟ್ಟಿದ್ದೇನೆ. ಯಾವ ಕಷ್ಟಗಳನ್ನು ಎದುರಿಸಿದರೂ ಎಲ್ಲವನ್ನೂ ನಿವಾರಿಸಲು ನೀವು ಶಕ್ತರು, ಧೈರ್ಯಶಾಲಿಗಳು. ಯೋಧರಾಗಿ ಇರುವ ನೀವು ಎಂತಹ ಶತ್ರುವನ್ನಾದರೂ ಎದುರಿಸಬಲ್ಲಿರಿ.

ರಾಮ : ನನಗೆ ಕೋಪ ಉಂಟುಮಾಡುತ್ತಿದ್ದೀಯೆ, ಸೀತಾ.

ಸೀತೆ : ನಾನು ಶಕ್ತರಾದ ಒಬ್ಬ ಗಂಡಸನ್ನು ಮದುವೆಯಾದೆನೆಂದಿದ್ದೆ. ದುರ್ಬಲನೊಬ್ಬನಿಗೊ ನಟನಿಗೊ ನರ್ತಕನಿಗೊ ನನ್ನ ತಂದೆ ನನ್ನನ್ನು ಮದುವೆ ಮಾಡಿ ಕೊಡಲಿಲ್ಲವೆಂದು ನಂಬಿದ್ದೆ. ತಂದೆ ಹೇಳಿದ್ದು ಇದಲ್ಲವೆ ?

(ಹಿಮ್ಮೇಳದಲ್ಲಿ)
ಇಯಂ ಸೀತಾ ಮಮಸುತಾ ಸಹಧರ್ಮಚರೀ ತವ
ಪ್ರತೀಚ್ಛ ಚೈನಾಂ ಭದ್ರಂ ತೇ ಪಾಣಿಂ ಗೃಹ್ಣೀಷ್ವ ಪಾಣಿನಾ
ಪತಿವ್ರತಾ ಮಹಾಭಾಗಾ ಛಾಯೇವ ಅನುಗತಾ ಸದಾ

ಯುವ ಜೀವನದ ಹದಿನಾಲ್ಕು ವರ್ಷಕಾಲ ಅದರ ಒಂದು ಭಾಗವಲ್ಲವೆ ? ಕಠಿಣ ಹೃದಯುಳಾದ ಒಬ್ಬ ಹೆಂಗಸಿನ ಕಣ್ಣಿಗೆ ಒಳಗಾಗಿ—ಅವಳೂ ಅವಳ ಮಗನೂ —ಆತನು ನಿಮ್ಮ ತಮ್ಮನಾದರೇನು ? ನನಗೆ ಪರಕೀಯರು—ನನ್ನನ್ನು ನೀವು ನಿರಾಕರಿಸುತ್ತಿದ್ದೀರಿ. ಹಾಗೆ ಉಳಿಯುವುದಕ್ಕಿಂತ ನನಗೆ ಸಾವು ಲೇಸು.

ರಾಮ : ಇದು ಸ್ವೇಚ್ಛೆಯ ಮಾತು.

ಸೀತೆ : ಅಲ್ಲ. ನನಗೂ ನಿಮಗೂ ತಕ್ಕಂತೆ ನಡೆದುಕೊಳ್ಳುವುದು. ನೀವು ನನ್ನನ್ನು ಕರೆದುಕೊಂಡು ಹೋಗದಿದ್ದರೆ ನೀರೊ ಬೆಂಕಿಯೊ ವಿಷವೊ ಕೊರಲು ಸುತ್ತ ಬಿಗಿಸಿಕೊಂಡ ಬಳ್ಳಿಯೊ ನನ್ನ ಬದುಕನ್ನು ಕಡೆಗಾಣಿಸುವುದು. ಇಲ್ಲ, ಯಾವುದೊ ಒಂದು ಕಲ್ಲು ಬಂಡೆಗೆ ಹೋಗಿ ತಲೆ ಹೊಡೆದುಕೊಳ್ಳುತ್ತೇನೆ. ಬೇಡುತ್ತೇನೆ, ನನ್ನನ್ನು ತ್ಯಜಿಸಿ ಒಂಟಿಯಾಗಿ ಹೋಗಬೇಡಿ. ನೀವಿಲ್ಲದೆ ನಾನಿರಲಾರೆ. ನೂರು ಸಲ ಹೇಳಿದ್ದೀರಿ : ನನ್ನಲ್ಲಿ ನಿಮಗೆ ಪ್ರೀತಿ ಇದೆ ಎಂದು. ಆ ಪ್ರೀತಿಯ ಲಕ್ಷಣ ಇದೇ ಏನು ?

(ರಾಮ ಪ್ರೀತಿಯಲ್ಲಿ ಅವಳ ಮೈ ತಡವುತ್ತಾನೆ. ಮೃದುವಾಗಿ ಮಾತಾಡುತ್ತ.)

ರಾಮ : ಈಗ ತೋರುತ್ತಿದೆ, ನಿನ್ನನ್ನು ಜೊತೆಗೆ ಒಯ್ಯಬೇಕೆಂದು. ಬಾ. ಸುಖದಲ್ಲಿ ಹೇಗೊ ಕಷ್ಟದಲ್ಲಿಯೂ ಹಾಗೇ ಜೊತೆಯಲ್ಲಿರೋಣ. ನಿನ್ನನ್ನು ರಕ್ಷಿಸಿಕೊಳ್ಳಲು ಸಾಕಷ್ಟು ಗಂಡುತನ ನನ್ನಲ್ಲಿದೆ. ಈ ಕಾರ್ಯದ ವಿಷಯದಲ್ಲಿ ನಿನ್ನ ಮನಸ್ಸಿನ ಆಳ ಎಷ್ಟು ಎಂದರಿಯದೆ ನಿನ್ನನ್ನು ಕರೆದುಕೊಂಡು ಹೋಗಲು ಆಗುವುದಿಲ್ಲ. ಈಗ ನನಗೆ ತೃಪ್ತಿಯಾಯಿತು. ನನಗೆ ಎಂದಿಗೂ ನಂಬಿಕೆಯಿದೆ : ನಿನ್ನ ನಿಷ್ಠೆಯಲ್ಲಿ, ಮನೋಬಲದಲ್ಲಿ. ಆದ್ದರಿಂದ ಸಿದ್ಧವಾಗು. (ಈ ನಡುವೆ ಕೂಗುತ್ತ) ಯಾರಿದ್ದೀರಿ ಹೊರಗೆ ?

(ಒಬ್ಬ ಸೇವಕ ಕಾಣಿಸಿಕೊಳ್ಳುತ್ತಾನೆ.)

ಹತ್ತಿರ ಲಕ್ಷ್ಮಣ ಎಲ್ಲಿಯಾದರೂ ಇದ್ದರೆ ಒಳಗೆ ಬರಹೇಳು.

ಸೇವಕ : ಹೊರಕೋಣೆಯಲ್ಲಿ ಕಾಯುತ್ತಿದ್ದಾರೆ, ಒಡೆಯ.

ರಾಮ : ಲಕ್ಷ್ಮಣ. (ಲಕ್ಷ್ಮಣನು ಒಳಗೆ ಬರುತ್ತಾನೆ)

ಲಕ್ಷ್ಮಣ : ಏನಣ್ಣ ?

ರಾಮ : ನೀವಿಬ್ಬರೂ ವಿಧೇಯರಲ್ಲ. ನಾನೂ ಇಲ್ಲಿ ಉಳಿದಿರುವುದಿಲ್ಲ ಎನ್ನುತ್ತಾಳೆ

ಸೀತೆ. ಎಂದರೆ, ಪ್ರಯಾಣಕ್ಕೆ ನಾವು ಮೂವರು. ಅಗತ್ಯವಾದ್ದನ್ನು ಅಣಿಮಾಡು. ಎಷ್ಟನ್ನು ನಾವು ಉಳಿಸಿಕೊಳ್ಳಬಹುದು, ತೆಗೆದುಕೊಂಡು ಹೋಗಬಹುದು ? ನಮ್ಮ ಧನುಸ್ಸು, ಬತ್ತಳಿಕೆಗಳು ವಸಿಷ್ಠರ ಮನೆಯಲ್ಲಿ ಪೂಜೆ ಗಿಟ್ಟಿವೆ. ದಿನದ ಬಳಕೆಗೆ ಬೇಕಾದ ಸಣ್ಣ ಸಾಧನ ಸಲಕರಣೆಗಳು ಕೆಲವಿರಲಿ. ನಮ್ಮಿಬ್ಬರಿಗೂ ಬಹು ತೆಳುವಾದ ಕವಚಗಳಿರಲಿ. ಇಷ್ಟನ್ನು ಹೊತ್ತು ಹೋಗ ಬಲ್ಲವೆ ? ದಾರಿಯಲ್ಲಿ ಬೇಕಾದ್ದನ್ನು ಆಗಾಗ ಮಾಡಿಕೊಳ್ಳೋಣ. ನನ್ನ ಸ್ನೇಹಿತರಿಗೆಲ್ಲ ಹೇಳಿ ಕಳಿಸು. ನನಗೆ ತೋರಿದ ಸಣ್ಣ ಕೊಡುಗೆಗಳನ್ನು ಅವರಿಗೆ ಕೊಡುತ್ತೇನೆ. ಸೀತಾ, ನಿನ್ನ ಗೆಳತಿಯರನ್ನು ಕರೆದು ತುಂಬ ಅಗತ್ಯವೆಂದು ತೋರುವ ಸ್ವಲ್ಪವನ್ನು ಉಳಿಸಿಕೊಂಡು ಉಳಿದ ಒಡವೆಗಳನ್ನೆಲ್ಲ ಅವರಿಗೆ ಕೊಟ್ಟು ಬಿಡು. ಅವರಿಗೆ ಸಂತೋಷವಾಗುತ್ತದೆ ; ಪ್ರೀತಿಯಿಂದ ಬಳಸುತ್ತಾರೆ. ಒಂದೆರಡು ನಾರು ಬಟ್ಟೆಗಳನ್ನು ತೆಗೆದುಕೊ. ಸಣ್ಣ ಒಡವೆಗಳು ಒಂದೆರಡು ಇರಲಿ—ಸುಮಂಗಲದ ಸೂಚಿಕೆಯಾಗಿ. ಕೈಕೆ ಕಾಣಲಿ, ನಾವು ಕಾಡಿನ ಜೀವನಕ್ಕೆ ತಕ್ಕ ವೇಷದಲ್ಲಿದ್ದೇವೆಂದು.

ಸೀತೆ : ನಾರು ಸೀರೆಯನ್ನು ಹೇಗೆ ಉಡುವುದೆಂದು ನನಗೆ ಗೊತ್ತಿಲ್ಲ.

ರಾಮ : ಒಂದನ್ನು ತೆಗೆದುಕೊಂಡು ಬಾ, ಉಡುವುದು ಹೇಗೆ ಎಂಬುದನ್ನು ತೋರಿಸುತ್ತೇನೆ.

ಸೀತೆ : ನೀವು ! ಸೀರೆ ಉಡುವುದನ್ನು ಹೇಳಿಕೊಡುತ್ತೀರಾ ?

ರಾಮ : ತಪ್ಪೇನು ? ಒಂದನ್ನು ತೆಗೆದುಕೊಂಡು ಬಾ. ಎಲ್ಲಕ್ಕೂ ಮೇಲ್ಪಟ್ಟು ಇದು ಮಾತು : ಇನ್ನು ಮೇಲೆ ಪೂರ್ತಿ ನಾನು ಹೇಳಿದಂತೆ ತಪ್ಪದೆ ನಡೆಯಬೇಕು. ಇಲ್ಲವಾದರೆ ನಾವು ಎಲ್ಲೇ ಇರಲಿ, ನಿನ್ನನ್ನು ಮನೆಗೆ ಕಳಿಸುತ್ತೇನೆ. ಆಮೇಲೆ ಒಂದು ಗಂಟೆಯ ಕಾಲ ಜೊತೆಗಿರಿಸಿಕೊಳ್ಳುವುದಿಲ್ಲ. ಅದು ಕಡೆಯ ನಿರ್ಣಯ... ಎಚ್ಚರಿಕೆ. ಇಬ್ಬರಿಗೂ—

ಲಕ್ಷ್ಮಣ, ಸೀತೆ } ಕೇಳಿದೆವು, ಅರ್ಥವಾಯಿತು.

(ಅವರು ಹೋಗುತ್ತಾರೆ.)

ರಾಮ : ನನ್ನಮ್ಮ ದೇವರುಗಳ ಸೇವೆ ಮಾಡಿದ್ದಾಳೆ. ಅವರು ಅವಳನ್ನು ಕಾಪಾಡಲಿ. ಹೆಚ್ಚು ಕಷ್ಟಕ್ಕೆ, ದುಃಖಕ್ಕೆ ಈಡು ಮಾಡದಿರಲಿ. ಇನ್ನು ಮುಂದೆ ಇತರರಿಗೆ ನನ್ನಿಂದ ದೊರೆಯಬೇಕಾದ ಕರ್ತವ್ಯಗಳನ್ನು ನೆರವೇರಿಸುತ್ತ ಅವರ ಹೊರೆಗಳನ್ನು ದುಃಖಗಳನ್ನು ನಿವಾರಿಸುವ ಕಾರ್ಯ ನನ್ನದಾಗಲಿ. ಕ್ಷತ್ರಿಯ ಜೀವನದ ಅತ್ಯುತ್ತಮ ಭಾಗ ವಾಗ್ದಾನ ಪರಿಪಾಲನೆ. ತನ್ನದು, ತನ್ನ ಮೇಲೆ ಹೊಂದಿರು

ವವರದು. ನನಗೆ ಕಲಿಸಿರುವ ಧರ್ಮ ಅದು. ಅದರಂತೆ ನಡೆದುಕೊಳ್ಳಬಯಸು ತ್ತೇನೆ. ಉಳಿದ ಯಾವುದೂ ನನ್ನ ಎಣಿಕೆಗೆ ಬರಬೇಕಾದ್ದಿಲ್ಲ. ಸ್ವಸ್ತಿ.

(ತೆರೆ)

## ದೃಶ್ಯ ೫

[ದೂಳು ಮುಸುಕಿದ ಉಡುಪು, ದೇಹ; ಪ್ರಯಾಣದ ಶ್ರಮ ಉಳ್ಳವರಾಗಿ ಭರತ, ಶತ್ರುಘ್ನ ಇಬ್ಬರೂ ಕುದುರೆಗಳ ರಥದಿಂದ ಇಳಿದು ಹಿಂದೆ ಬರುವವರನ್ನು 'ಸಂಜೆ ವಿಶ್ರಾಂತಿ ತೆಗೆದುಕೊಳ್ಳಿ; ಒಂದು ದಿನ ಇದ್ದು ಅಯೋಧ್ಯೆಗೆ ಬನ್ನಿ' ಎನ್ನುತ್ತಿರುವರು. ಹೊಸ ಕುದುರೆಗಳನ್ನು ಹತ್ತಿ ತಮ್ಮ ಪ್ರಯಾಣವನ್ನು ಮುಂದುವರಿಸುವರು.]

ಭರತ : ಬಾಭ್ರವ್ಯ, ಆಗದು. ನೀವು ಯಾರೂ ನಮ್ಮನ್ನು ಹಿಂಬಾಲಿಸಬೇಕಿಲ್ಲ. ನಾವು ಪ್ರಯಾಣವನ್ನು ಮುಂದುವರಿಸುತ್ತೇವೆ. ಕುದುರೆಗಳು ವಿಶ್ರಾಂತಿಗೊಳ್ಳಲಿ. ಎಲ್ಲರೂ ಆಹಾರ ತೆಗೆದುಕೊಳ್ಳಿ; ಆರು ದಿನಗಳಿಂದ ಪ್ರಯಾಣ ಮಾಡಿ ತುಂಬ ಆಯಾಸಪಟ್ಟಿದ್ದೀರಿ. ಸ್ವಲ್ಪ ವಿಶ್ರಮಿಸಿ. ಎಲ್ಲರೂ ಶ್ರಮ ಪಡುವುದು ಅಗತ್ಯವಿಲ್ಲ.

ಬಾಭ್ರವ್ಯ : ಬೇಡ, ಒಡೆಯರೆ. ನಿಮಗೂ ವಿಶ್ರಾಂತಿಯಿಲ್ಲ. ಇಂಥ ಕಷ್ಟ ಶ್ರಮಗಳಿಗೆ ನಮಗೆ ವಾಡಿಕೆ ಇದೆ. ನಾವು ಸೈನ್ಯದವರು; ಯಾವ ಸುಖಸೌಕರ್ಯ ಇಲ್ಲದೆ ಇರಲು ನಾವು ಶಿಕ್ಷಣ ಪಡೆದಿದ್ದೇವೆ. ಆಹಾರ, ವಿಶ್ರಾಂತಿ ಇಲ್ಲದೆ ಎಲ್ಲ ಬಗೆಯ ನೆಲ ಕಾಡು ಬೆಟ್ಟಗಳ ಮೇಲೂ ಸಂಚಾರ ಮಾಡಲು ನಮಗೆ ಅಭ್ಯಾಸವುಂಟು. ಎಲ್ಲರೂ ಪ್ರಯಾಣವನ್ನು ನಾಳೆ ಮುಂದುವರಿಸೋಣ. ಇನ್ನೊಂದು ದಿನದೊಳಗಾಗಿ ಎಲ್ಲರೂ ಒಟ್ಟಿಗೆ ಅಯೋಧ್ಯೆಯನ್ನು ಸೇರಬಲ್ಲೆವು. ಎರಡು ದಿನಗಳಿಂದ ನೀವಿಬ್ಬರೂ ಕಣ್ಣ ರೆಪ್ಪೆ ಮುಚ್ಚಿ ನಿದ್ರೆ ಪಡೆದಿಲ್ಲ. ಕಣ್ಣು ಊದಿವೆ; ಕೈ ಹಿಡಿತ ಸಡಿಲವಾಗಿ ಕಾಣುತ್ತಿದೆ. ಇಷ್ಟು ದಿನ ಆಹಾರದ ಕಡೆ ಗಮನ ಕೊಟ್ಟಿಲ್ಲ. ಬೇಡಿಕೊಳ್ಳುತ್ತೇನೆ: ಪ್ರಯಾಣವನ್ನು ಸ್ವಲ್ಪ ಸುಲಭ ಮಾಡಿಕೊಳ್ಳೋಣ. ಚಿತ್ತೈಸಬೇಕು.

ಭರತ : ಶತ್ರುಘ್ನ, ನೀನು ಅವರೊಡನೆ ಸ್ವಲ್ಪ ಇಲ್ಲೇ ಉಳಿದುಕೊ. ಅವರನ್ನು ಜೊತೆಯಲ್ಲಿ ಕರೆದುಕೊಂಡು ಬಾ. ನೀನೂ ಆಯಾಸಗೊಂಡಿದ್ದೀಯೆ. ಹಾಗೆ ಮಾಡಪ್ಪ....

ಶತ್ರುಘ್ನ : ಸಾಧ್ಯವಿಲ್ಲ, ಭರತ. ನಿನ್ನಷ್ಟೇ ನನಗೂ ಮನಸ್ಸಿನಲ್ಲಿ ವೇಧೆ ಉಂಟಾಗಿದೆ,

ಶಕ್ಯವೆನ್ನಬಹುದಾದರೆ ಅಯೋಧ್ಯೆಯನ್ನು ಹೋಗಿ ಸೇರಲು ನಿನಗಿಂತ ನಾನು ಹೆಚ್ಚು ಆತುರನಾಗಿದ್ದೇನೆ.

ಭರತ : ಬಾಭ್ರವ್ಯ, ತಮ್ಮನು ನುಡಿದುದನ್ನು ಕೇಳಿದೆ. ನಾವಿಬ್ಬರೂ ತ್ವರೆಯಿಂದ ಮುಂದೆ ಹೋಗುತ್ತೇವೆ. ನಿನ್ನೊಡನೆ ಬರಲು ಹಲವು ಜನರಿದ್ದಾರೆ. ವಸ್ತ್ರ, ಸಾಮಗ್ರಿಗಳು, ಒಡವೆ, ರತ್ನ, ಆನೆ, ದೊಡ್ಡ ಬೇಟೆನಾಯಿಗಳು—ಇನ್ನೂ ಏನೇನೊ ಇವೆ. ಆ ಎಲ್ಲವನ್ನೂ ತ್ವರೆಗೊಳಿಸಿಕೊಂಡು ಹೋಗುವ ಅಗತ್ಯವಿಲ್ಲ. ನನ್ನ ಮಾತನ್ನು ಕೇಳಿ : ರಾತ್ರಿ ಇಲ್ಲಿ ಕಳೆಯಿರಿ. ನಾವು ಹೊರಟೆವು. ದೇವರು ಒಳ್ಳೆಯದನ್ನು ಮಾಡಲಿ.

(ಮುಂದೆ ನಾಗಾಲೋಟದಲ್ಲಿ ಹೋಗುವರು)

ಭರತ : ಆರು ದಿನ ಬೆಟ್ಟಗುಡ್ಡಗಳ ಮೇಲೆ, ನದಿ ಸರೋವರ, ಕಾಡು ಮೇಡು ದಾಟಿ ಸಾಗಿ ಬಂದಿದ್ದೇವೆ. ಆರು ದಿನದ ಪ್ರಯಾಣ ನಿಜವಾಗಿ ನಿಡಿದೇ. ನಮ್ಮ ಬದುಕಿನಲ್ಲಿ ನಾವು ಎಂದೂ ಇಷ್ಟು ದಿನ, ಇಷ್ಟು ದೂರ ಒಟ್ಟಿಗೇ ಪ್ರಯಾಣ ಮಾಡಿದ್ದಿಲ್ಲ. ಆದರೇನು, ಈ ಸಮಯ ಇತರ ಸಮಯಗಳಂತಲ್ಲ. ತ್ವರೆಗೆ ಅಗತ್ಯವಿದೆ. ಅಯೋಧ್ಯೆಯಲ್ಲಿ ಏನಾಗಿದೆಯೊ ? ಸುದ್ದಿ ತಂದಿರುವವರು ಯಾವುದನ್ನೂ ಸ್ಪಷ್ಟಪಡಿಸುತ್ತಿಲ್ಲ. ಯಾರಿಗೊ ಏನೊ ಆಗಿರಬೇಕು. ಆಗೇ ಇರಬೇಕು. ಆಲೋಚನೆಗೆ ಸಿಕ್ಕದು ; ನುಡಿಗೆ ಒದಗದು. ತಾಯಿಯವರಿಗೆ ಹೇಗೊ ? ಸೋದರರಿಗೆ ಹೇಗೊ ? ರಾಮನಿಗೆ ಏನೊ ? ಇಲ್ಲವೆ, ಓ ದೇವರೆ, ತಂದೆಯವರಿಗೇ ಏನಾದರೂವೊ ? ದೇವರು ಕೇಡನ್ನು ನಿವಾರಿಸಲಿ. ಅಂಥು ದನ್ನು ಆಲೋಚನೆ ಮಾಡಲೇ ಆರೆ. ಹನ್ನೆರಡು ತಿಂಗಳು ಕಾಲ ಪೂರ್ತಿ ದೂರದ ಆ ಪರ್ವತರಾಜ್ಯದಲ್ಲಿ ವೃಥಾ ಕಳೆದಿದ್ದೇವೆ. ಸೋದರಮಾವ ತಣಿದು ಅಜ್ಜ ಮುದ್ದು ಮಾಡಿ ನಮ್ಮನ್ನು ಉಳಿಸಿಕೊಂಡುಬಿಟ್ಟರು ; ಈ ಮುಂಚೆ ಹಿಂದಿರುಗಲು ಬಿಡಲಿಲ್ಲ. ಅಜ್ಜ ನಮ್ಮನ್ನು ಸಣ್ಣ ಮಕ್ಕಳಂತೆ ನೋಡುತ್ತಿದ್ದರೇ ಹೊರತು ವಯಸ್ಸಾದವರಂತೆ ಎಣಿಸಲಿಲ್ಲ. ಏನು ಕಾರಣ ಕೊಟ್ಟರೂ ಮಾತು ನಡೆಯದಾಯಿತು. ಪ್ರೀತಿಯಲ್ಲಿ ಎಷ್ಟೇ ಕರುಣೆ ಇರಲಿ, ಕರ್ತವ್ಯದಿಂದ ನಮ್ಮನ್ನು ಹೊರಗಿಡಬಾರದು. ಎಷ್ಟು ಬಗೆಯಾಗಿ ವಾದ ಮಾಡಿದರೂ ಬಗೆಬಗೆಯ ಮನೋರಂಜನೆ ಒದಗಿಸಿ ಅಲ್ಲೇ ಉಳಿಸಿಕೊಂಡರು. ಬೇಟೆ, ಆಟ, ನೃತ್ಯ, ಗಾಯನ, ಸಂತೋಷ ಕೂಟಗಳು ಇವೇ ದಿನಾ. ನಮ್ಮನ್ನು ಬಿಟ್ಟುಕೊಡಿ, ಹೋಗುತ್ತೇವೆ ಎಂದು ಹೇಳುವುದು ಒರಟುತನವಾಗುತ್ತಿತ್ತು. ಈಗ ಹೀಗಾಗಿದೆ. ಅಯೋಧ್ಯೆಯಿಂದ ಸುದ್ದಿ ಬರುವ ಹಿಂದಿನ ರಾತ್ರಿಯೆಲ್ಲ ಕೆಟ್ಟಕೆಟ್ಟ ಕನಸುಗಳು ! ಇವರು ಬಂದ ಮೇಲೆ ದೇವರ ದಯದಿಂದ ಅಜ್ಜನವರು ನಮ್ಮನ್ನು ತಡೆಯ

ಲಾಗಲಿಲ್ಲ. ಆದರೂ ಎಷ್ಟು ಪ್ರೀತಿ ಅವರದು ! ಅಜ್ಜನಿಗೂ ಅಮ್ಮನಿಗೂ ಎಷ್ಟು ವ್ಯತ್ಯಾಸ ! ಅಲ್ಲಿ ಮನೆಯಲ್ಲಿ ಅಮ್ಮನ ಕಾರಣದಿಂದ ಯಾವ ಸಂಗತಿಯೂ ನಡೆದಿರಲಾರದು ಎಂದುಕೊಂಡಿದ್ದೇನೆ. ಸಾಧಾರಣವಾಗಿ ಅವಳು ಒಳ್ಳೆಯವಳೇ. ಆದರೆ ಒಬ್ಬ ಮಗಳಾಗಿದ್ದು ಅವಳಿಚ್ಛೆಯಂತೆ ನಡೆಯುವುದನ್ನು ಕಲಿತಿದ್ದಾಳೆ. ಆ ಇಚ್ಛಾವರ್ತನೆಯನ್ನು ಅಲ್ಲಿ ಯಾರು ತಡೆಯಬಲ್ಲರು ?

(ಹಿನ್ನೆಲೆಯಲ್ಲಿ—
ಆತ್ಮಕಾಮಾ ಸದಾ ಚಂಡೀ ಕ್ರೋಧನಾ ಪ್ರಾಜ್ಞಮಾನಿನೀ.)

ಅದು ಕೆರಳಿದಾಗ ? ನಮ್ಮೆಲ್ಲರನ್ನೂ ಕುರಿತು ಅವಳಿಗೆ ಪ್ರೀತಿಯೇ. ನಿಜವಾಗಿ ಕೌಸಲ್ಯೆ ಸುಮಿತ್ರೆಯರನ್ನು ಕಂಡರೆ ಗೌರವವೇ. ಅವಳಿಗೂ ಗೊತ್ತು : ಅವರು ಬಹಳ ಒಳ್ಳೆಯ ಹೆಂಗಸರೆಂದು ; ತನಗಿಂತ ಮುಂಚೆ ಅರಮನೆಗೆ, ತಂದೆಯವರ ಬದುಕಿಗೆ ಬಂದು ಸೇರಿದವರೆಂದು. ಆದರೆ ಗರ್ವಿಷ್ಠೆ ; ದರ್ಪ, ಪ್ರತಿಷ್ಠೆಯವಳು. ತನ್ನ ಅಧಿಕಾರ ನಡೆಯಬೇಕೆಂದು ಸದಾ ಅವಳ ಮನಸ್ಸು. ಅವರನ್ನು ಕಂಡರೆ ಸ್ವಲ್ಪ ಅಸೂಯೆ. ಅವರಿಗಿಂತಲೂ ಹೆಚ್ಚಾಗಿ ತನಗೆ ಗಂಡನು ಪ್ರೀತಿ ವಿಶ್ವಾಸ ತೋರಿಸಬೇಕೆಂದು ಸದಾ ಯತ್ನಿಸುತ್ತಾಳೆ. ತನ್ನ ಗಂಡನಿಗೆ ತನ್ನಲ್ಲಿ ಹೆಚ್ಚು ಮೋಹವಿದೆಯೆಂದೂ ಗೊತ್ತು. ಇದರಿಂದ ಏನೂ ದುಷ್ಫಲಗಳಾಗಿಲ್ಲವೆಂದು ಕೊಂಡಿದ್ದೇನೆ...

ಶತ್ರುಘ್ನ : ಏನೇನೊ ಕಲ್ಪನೆಗಳಿಂದ ನಿನ್ನ ಮನಸ್ಸನ್ನು ಕೆಡಿಸಿಕೊಳ್ಳಬೇಡ, ಭರತ. ಯಾವುದು ನಿಜ ಎಂಬುದು ಬೇಗ ಕಣ್ಣಿಗೆ ಬೀಳುತ್ತದೆ. ಸ್ವಲ್ಪ ಸಹನೆ ತಂದುಕೊ. ಇನ್ನೇನು ಕೆಲವೇ ಗಂಟೆಗಳು ! ಆರೊ ಎಂಟೊ, ಹೆಚ್ಚೆಂದರೆ ಹತ್ತು ಗಂಟೆ ಕಾಲ, ಅಷ್ಟೆ ; ಅದಕ್ಕೆ ಮೀರುವುದಿಲ್ಲ.

ಭರತ : ಶತ್ರುಘ್ನ, ನನ್ನ ಮನಸ್ಸಿನಲ್ಲಿ ಎಷ್ಟು ಕಳವಳ ಉಂಟಾಗಿದೆ ಎಂದರೆ ನಿನ್ನೆ ನೋಡಿದೆಯೊ ಇಲ್ಲವೊ—ತೋಳದ ಬೇಟೆಗೆ ಬಳಸುವ ಆ ಬೇಟೆ ನಾಯಿ ಸರಪಳಿಯಿಂದ ಬಿಡಿಸಿಕೊಳ್ಳುವುದಕ್ಕೆ ಎಷ್ಟು ಗಲಾಟೆ ಮಾಡಿತು : ಹಾಗಿದೆ ನನ್ನ ಮನಸ್ಸು. ಆ ನಾಯಿ ಬಹು ಒಳ್ಳೆಯ ನಾಯಿ ! ಅಯೋಧ್ಯೆಯಲ್ಲಿ ನಮಗೆ ಅಂಥ ನಾಯಿಗಳಿಲ್ಲ. ನಮ್ಮ ಜೊತೆಯಲ್ಲಿಯೇ ಅವನ್ನೆಲ್ಲ ತೆಗೆದುಕೊಂಡು ಹೋಗಿದ್ದರಾಗಿತ್ತು. ಆದರೆ ಎಲ್ಲರಿಗೂ ಆಯಾಸವಾಗಿತ್ತು.

[ಒಂದು ಗುಂಪು ಜನ ಇವರನ್ನು ಎದುರುಗೊಳ್ಳಲು ಸಂಭ್ರಮದಿಂದ ಬರುತ್ತಾರೆ. ಅಯೋಧ್ಯೆ ಸೀಮೆಯ ಮುಖ್ಯಾಧಿಕಾರಿ ಎದುರಿಗೆ ಬಂದು ಗೌರವದಿಂದ ತಲೆ ಬಾಗಿಸುತ್ತಾನೆ]

ಅಧಿಕಾರಿ : ನೀವೆಲ್ಲ ನಾಳೆ ಬರುವಿರೆಂದು ನಿರೀಕ್ಷಿಸಿದ್ದೆವು, ಮಹಾಸ್ವಾಮಿ. ನಿಮ್ಮನ್ನು ಸಂಭ್ರಮದಿಂದ ಸ್ವಾಗತಿಸಬೇಕೆಂದಿದ್ದೆವು. ಇವೊತ್ತಿನ್ನೂ ಸಿದ್ಧತೆಯಿರಲಿಲ್ಲ. ಮುಂದಾಗಿ ಕೆಲವು ಗಣ್ಯ ಮಂದಿ ಬೇರೆ ಬೇರೆ ಕಡೆಗೆ ಹೋಗಿದ್ದಾರೆ. ನೀವು ಬೇರೆ ದಾರಿಯಲ್ಲಿ ಬರುತ್ತೀರೆಂದು ಅವರು ನಿರೀಕ್ಷಿಸುತ್ತಿದ್ದರು. ಆದರೆ ಈ ಗಡಿ ಪ್ರದೇಶದಲ್ಲಿ ನಿಮ್ಮನ್ನು ಎದುರುಗೊಂಡುದಾದರೂ ಸರಿಯಾಯಿತು. ಸ್ವಲ್ಪ ಆಹಾರ ತೆಗೆದುಕೊಂಡು ಕೆಲವು ನಿಮಿಷ ವಿಶ್ರಮಿಸಿ. (ಸೇವಕನಿಗೆ) ಯಾರಿದ್ದೀರಿ ಅಲ್ಲಿ ? ಅಯೋಧ್ಯೆಗೆ ತ್ವರೆಯಿಂದ ಹೋಗಿ ಅರಸುಕುಮಾರರು ನಾಳೆ ಮಧ್ಯಾಹ್ನದ ಹೊತ್ತಿಗೆ ಬರುತ್ತಾರೆಂದು ತಿಳಿಸಿ.

ಭರತ : ಬೇಡ, ಬೇಡ, ನಾವು ಬರುತ್ತೇವೆಂದು ಯಾವ ಘೋಷಣೆಯೂ ಬೇಕಿಲ್ಲ. ನಮಗೆ ಕಾಯುತ್ತ ವಸಿಷ್ಠರು ಅನಾವಶ್ಯಕವಾಗಿ ತೊಂದರೆ ಪಟ್ಟುಕೊಳ್ಳ ಬೇಕಾಗುತ್ತದೆ. ಸುಮಂತ್ರನೂ ಹಾಗೆಯೇ. ಅವರಿಗೆ ವಯಸ್ಸಾಗಿದೆ ; ನಾವು ಅವರಿಗೆ ಆಯಾಸ ಪಡಿಸಬಾರದು. ಚೂರು ಪಾರು ಬಾಯಲ್ಲಿ ಹಾಕಿ ಕೊಳ್ಳೋಣ ; ಒಂದು ಗಂಟೆ ವಿಶ್ರಾಂತಿ ಸಾಕು. ಆ ಬಳಿಕ ಇಲ್ಲಿಂದ ಸಾಗುತ್ತೇವೆ. ಮುಂದಾಗಿ ಯಾರೂ ಹೋಗಿ ಅಯೋಧ್ಯೆಯಲ್ಲಿ ತಿಳಿಸಬೇಡಿ. ನಾವಿಬ್ಬರೂ ಎಲ್ಲರಿಗೂ ಮುಂಚೆ ಹೋಗಿ ಅಯೋಧ್ಯೆಯನ್ನು ಮುಟ್ಟುತ್ತೇವೆ.

ಅಧಿಕಾರಿ : ಅಪ್ಪಣೆ, ಮಹಾಸ್ವಾಮಿ.

ಭರತ : ಮಹಾಸ್ವಾಮಿ : ವಿಚಿತ್ರವಾಗಿದೆ.

(ತೆರೆ)

## ದೃಶ್ಯ ೫

[ಭರತ ಶತ್ರುಘ್ನರು ದಶರಥನ ಅರಮನೆಯ ಮಹಾದ್ವಾರದಲ್ಲಿ ಇಳಿಯುತ್ತಾರೆ. ಭರತನು ಕಾವಲು ಅಧಿಕಾರಿಯನ್ನು ಕುರಿತು]

ಭರತ : ತಂದೆಯವರು ಒಳಗಿದ್ದಾರೆಯೇ ?

ಕಾವಲವನು : ಇಲ್ಲ ಸ್ವಾಮಿ.

ಭರತ : ಎಲ್ಲಿರಬಹುದು ? ಎಲ್ಲವೂ ಏಕೆ ಹೀಗೆ ವ್ಯಸನಕರವಾಗಿ ಕಾಣುತ್ತಿದೆ ? ನಗರ ಸಾವಿನ ಮನೆಯಂತಿದೆ. ರಸ್ತೆಗಳ ಮೇಲೆ ಜನ ಇಲ್ಲ ; ಜನಗಳ ಶಬ್ದವಿಲ್ಲ ; ಹಾಡಿಲ್ಲ ; ನೃತ್ಯಗಳಿಲ್ಲ ! ಗಂಡಸರಾಗಲಿ, ಹೆಂಗಸರಾಗಲಿ ಆಟ ವಿನೋದಗಳಲ್ಲಿ

ಕಾಣರು ! ಊರಿನ ಉಪವನಗಳು ಜನಶೂನ್ಯವಾಗಿವೆ... ಯಾರ ಮುಖದ ಮೇಲೂ ಗೆಲುವಿಲ್ಲ ; ಮಕ್ಕಳು ಎಲ್ಲೆಲ್ಲಿಯೂ ಕುಣಿದಾಡುತ್ತಿಲ್ಲ ...ನಮ್ಮನ್ನು ಕಂಡು ಜನ ಹಿಮ್ಮೆಟ್ಟುತ್ತಿದ್ದಾರೆ ! ನಗರವೆಲ್ಲ ತನ್ನ ಸ್ವರೂಪವನ್ನೇ ಕಳೆದು ಕೊಂಡಿದೆ !

(ಹಿನ್ನೆಲೆಯಲ್ಲಿ—
'ನಿರಾಕಾರಾ, ನಿರಾನಂದಾ, ದೀನಾ, ಪ್ರತಿಹತಸ್ವನಾ')

ನೀರ ಚಿಲುಮೆಗಳು ಆಡುತ್ತಿಲ್ಲ ; ಮನೆಗಳ ಕೈಸಾಲೆಗಳು ಅಲಂಕಾರಗೊಂಡಿಲ್ಲ ; ದಿನಚರಿಯಂತೆ ನೀರು ಹಾಕಿ ಸಾರಿಸಿ ರಂಗೋಲೆ ಹಾಕಿಲ್ಲ ! ಹೂತೋರಣಗಳಿಲ್ಲ ! ಅಯೋಧ್ಯೆಗೆ ಏನಾಗಿದೆ ? ನಗರ ವಿಧವೆಯಾದಂತಿದೆ...ನೋಡಿಕೊಳ್ಳುವವ ರಿಲ್ಲದೆ, ಒಡೆಯನಿಲ್ಲದಂತೆ ಕಾಣುತ್ತಿದೆ...ನನ್ನ ಎದೆ ಬಿರಿದು ಒಡೆಯುವಂತಿದೆ. ಏನೊ ಬಹು ದೊಡ್ಡ ದುಃಖ, ನಷ್ಟ ಉಂಟಾಗಿರುವಂತಿದೆ. ಯಾರೂ ಏಕೆ ಏನನ್ನೂ ನನಗೆ ಹೇಳರು ?

(ತಾಯಿಯ ಅರಮನೆಯ ಹೆಬ್ಬಾಗಿಲಿನಲ್ಲಿ ಇಳಿದು ವೇಗವಾಗಿ ಒಳಕ್ಕೆ ಹೋಗುತ್ತಾನೆ.)

ಅಮ್ಮಾ, ಅಮ್ಮಾ, ಎಲ್ಲಿದ್ದೀಯೆ ? ತಂದೆಯವರು ಒಳಗಿದ್ದಾರೆಯೆ ? (ತನಗೇ) ಯಾಕೆ ಆಕೆ ಕಣ್ಣಿಗೆ ಬೀಳುತ್ತಿಲ್ಲ ? ಈ ಅರಮನೆಯಲ್ಲಿ ಎಲ್ಲವೂ ಹೀಗೆ ನಿಶ್ಶಬ್ದ ವಾಗಿರಲು ಕಾರಣವೇನು ? ಮುಖಗಳೆಲ್ಲ ಬಾಡಿವೆ ! ಯಾರ ಮುಖದ ಮೇಲೂ ನಗೆಯ ಸುಳಿವಿಲ್ಲ ! ಮನೆಯಲ್ಲಿ ಸಡಗರವಿಲ್ಲ. ಅಮ್ಮಾ, ತಂದೆಯವರ ಅರಮನೆಗೆ ಹೋಗಿದ್ದೆ : ಅಲ್ಲಿ ಅವರು ಇರಲಿಲ್ಲ ; ಇಲ್ಲಿರಬೇಕು...(ಒಳಗೆ ಹೋಗಿ ಕೈಕೆಯನ್ನು ಹುಡುಕುವನು. ಪೀಠದಿಂದ ಇಳಿದು ತೆರೆದ ತೋಳುಗಳಿಂದ ಮಗನನ್ನು ಸ್ವಾಗತಿಸುವಳು. ಮುಖದಲ್ಲಿ ಕಳೆಯಿಲ್ಲ ; ಆಕೆಯ ಆರೈಕೆಯಲ್ಲಿ ಕುಂದು ಕಾಣುತ್ತಿದೆ. ಆ ಸ್ವಾಗತದಲ್ಲಿಯೂ ಎಂದಿನ ಕಾವಿಲ್ಲ. ಮಗನನ್ನು ತಬ್ಬಿಕೊಳ್ಳುವುದು ಯಾವಾಗಿನಂತಿಲ್ಲ.)

**ಕೈಕೆ :** ಕಡೆಗೆ ಬಂದೆಯಾ ಮಗನೆ, ಬಾ. ಈ ಮನೆಯಲ್ಲಿ ನಿನಗೆಲ್ಲಾ ಒಳ್ಳೆಯದಾಗಲಿ. ಹನ್ನೆರಡು ತಿಂಗಳ ದೀರ್ಘಕಾಲ ಹೊರಗೆ ಉಳಿದು ಬಿಟ್ಟೆ. ನಿನ್ನನ್ನು ನಿರೀಕ್ಷಿಸಿ ಕಾಯುತ್ತ ನನ್ನನ್ನು ಇಲ್ಲುಳಿಸಿದೆ. ನನ್ನ ತಂದೆ ಹೇಗಿದ್ದಾರೆ ? ನನ್ನ ಅಣ್ಣ ಹೇಗಿದ್ದಾನೆ ? ನನಗೇನಾದರೂ ಹೇಳಿ ಕಳಿಸಿದ್ದಾರೆಯೆ ? ಕ್ಷೇಮವಾಗಿದ್ದಾರೆಯೆ ?

**ಭರತ :** ಅವರೆಲ್ಲ ಚೆನ್ನಾಗಿದ್ದಾರೆ. ನಿನಗೆ ತಮ್ಮ ಪ್ರೀತಿಯನ್ನೂ ವಿಶ್ವಾಸವನ್ನೂ ತಿಳಿಸಿರುವುದಲ್ಲದೆ ಬೇಕಾದಷ್ಟು ಸಾಮಾನು ಕಳಿಸಿದ್ದಾರೆ. ನಾಳೆ ಇಲ್ಲಿಗೆ ಬಂದು ಸೇರುತ್ತೆ. ಆದರೆ ಅದೆಲ್ಲ ಹಾಗಿರಲಿ, ಅಯೋಧ್ಯೆಯಲ್ಲಿ ಏನು ನಡೀತಿದೆ ಈಗ ? ಶವವಸ್ತ್ರವೊಂದು ಹೊದೆಸಿದಂತೆ ಕಾಣುತ್ತಿದೆ ! ತಂದೆಯವರೆಲ್ಲಿ ?

ಕೈಕೆ : ಬಾ ಮಗು, ಬಂದು ನನ್ನ ಬಳಿ ಕುಳಿತುಕೊ ; ಸ್ವಲ್ಪ ಹೊತ್ತು ವಿಶ್ರಮಿಸಿಕೊ. ಏನಾದರೂ ಬಾಯಿಗೆ ಹಾಕಿಕೊ. ಅನ್ನಪಾನಾದಿಗಳು ಸ್ವಲ್ಪ ಆಗಲಿ.

(ಅವನ್ನು ಸ್ವಲ್ಪ ತಂದು ಮುಂದಿಡುತ್ತಾರೆ)

ಭರತ : ನನ್ನ ಮನಸ್ಸಿನಲ್ಲಿ ವಿಶ್ರಾಂತಿ ಇಲ್ಲ, ಅಮ್ಮ. ನನಗೆ ಅನ್ನ ಪಾನ ಬೇಕಿಲ್ಲ. ತಂದೆ ತಮ್ಮ ಸ್ಥಳದಲ್ಲಿಲ್ಲ. ಈ ಏಳು ದಿನಗಳಿಂದಲೂ ಅವರೇ ನನ್ನ ತಲೆಯ ತುಂಬ. ಈಗ ಸಹಜವಾಗಿ ಕಾಣುತ್ತಿದೆ—ಅವರು ಇಲ್ಲಿಲ್ಲ ಎಂದು.

ಕೈಕೆ : ಈ ಸಂಗತಿಯನ್ನು ಹೇಳುವುದಕ್ಕೆ ನನಗೆ ವ್ಯಥೆಯಾಗುತ್ತದೆ ಮಗು. ಹಿರಿಯರಂತೆ ಅವರೂ ಕಾಲಗತರಾಗಿದ್ದಾರೆ. ವಯಸ್ಸಾಗಿತ್ತು. ಇನ್ನೂ ಹೆಚ್ಚು ಕಾಲ ಉಳಿಯಲು ಶಕ್ತರಾಗಲಿಲ್ಲ.

ಭರತ : ಮುಂಚಿತವಾಗಿಯೇ ನನಗೆ ಏಕೆ ಸುದ್ದಿ ತಿಳಿಸಲಿಲ್ಲ? ನನ್ನನ್ನು ಅಷ್ಟು ಪ್ರೀತಿಯಿಂದ ಬೆಳಸಿದ್ದ ನನ್ನ ತಂದೆಯ ಮುಖವನ್ನು ನೋಡಲು ಒಂದು ಅವಕಾಶವೂ ಇಲ್ಲದಂತಾಯಿತು ! ಎಷ್ಟು ಪ್ರೀತಿ ಅವರಿಗೆ ! ಅವರ ಕಡೆಯ ಕ್ಷಣದಲ್ಲಿ ಅವರ ಬಳಿ ಇದ್ದು ಅವರ ಸೇವೆ ಮಾಡುವ ಭಾಗ್ಯ ಪಡೆದ ರಾಮ ಲಕ್ಷ್ಮಣರು ಭಾಗ್ಯಶಾಲಿಗಳು.

ಕೈಕೆ : ಇಲ್ಲ, ಭರತ. ಅವರು ತೀರಿಕೊಂಡಾಗ ರಾಮಲಕ್ಷ್ಮಣರು ಅವರ ಬಳಿ ಇರಲಿಲ್ಲ.

ಭರತ : ಮತ್ತೆ ಅವರೆಲ್ಲಿದ್ದರು ? ಅವರ ಕಡೆಯ ಮಾತಾಗಿ ನನಗೆ ಏನು ಹೇಳಿದರು ?

ಕೈಕೆ : ದಂಡಕಾರಣ್ಯದಲ್ಲಿ ವನವಾಸಕ್ಕೆ ಹೊರಟು ಹೋದ ರಾಮನ ಹೆಸರನ್ನು ಮೇಲು ಮೇಲೆ ಕೂಗುತ್ತಿದ್ದರು. ನನಗೆ ಶಾಪವಿಡುತ್ತಿದ್ದರು ; ನಾನು ಆ ಕೋಣೆಯಲ್ಲಿ ಇಲ್ಲದಿದ್ದರೂ. ಕೌಸಲ್ಯೆಯ ಅರಮನೆಗೆ ಹೊರಟುಹೋಗಿದ್ದವರು ತನ್ನನ್ನು ಮುಟ್ಟಬೇಕೆಂದೂ ತಾನು ಕೌಸಲ್ಯೆಯ ಬಳಿ ಇದ್ದೇನೆಂದು ತನಗೆ ನಿಶ್ಚಯವಾಗುವಂತೆ ಆ ಸ್ಪರ್ಶ ಬೇಕೆಂದೂ ಆಕೆಯನ್ನು ಕೇಳಿಕೊಳ್ಳುತ್ತಿದ್ದರಂತೆ. ಅವರ ಕಣ್ಣನೋಟ ಹೋಗಿತ್ತು. ರಾಮ ಲಕ್ಷ್ಮಣ ಸೀತೆಯರೊಡನೆ ಆತನ ದೃಷ್ಟಿ ಹೋಗಿಬಿಟ್ಟಿದ್ದಿತೆಂದು ನುಡಿಯುತ್ತಿದ್ದರು. ನನ್ನನ್ನು ಶತ್ರುವೆನ್ನುತ್ತಿದ್ದರು. ಹದಿನೈದು ವರ್ಷಗಳ ಬಳಿಕ ಅಯೋಧ್ಯೆಗೆ ರಾಮಚಂದ್ರನು ಹಿಂದಿರುಗುವಾಗ ಸುಂದರವಾದ ಅವನ ಮುಖವನ್ನು ಕಾಣುವ ಜನ ಪುಣ್ಯವಂತರು. ಅಂಥವರು ಮನುಷ್ಯರಲ್ಲ. ದೇವತೆಗಳು—ಎನ್ನುತ್ತ ಕಡೆಯ ಉಸಿರೆಳೆದರು. ಹೀಗೆ ನುಡಿಯುತ್ತಿದ್ದರೆಂದು ನನ್ನ ಕಿವಿಗೆ ಬಿದ್ದಿದೆ.

(ಹಿನ್ನೆಲೆಯಲ್ಲಿ : 'ನ ತೇ ಮನುಷ್ಯಾಃ ದೇವಾಸ್ತೇ ಏ ಚಾರು ಮುಖ ಕುಂಡಲಂ
ಮುಖಂ ದ್ರಕ್ಷ್ಯಂತಿ ರಾಮಸ್ಯ ವರ್ಷೇ ಪಂಚದಶೇ ಪುನಃ')

ಭರತ : ಎಷ್ಟು ಕಠಿಣ ಸುದ್ದಿ ಇದು ! ಹಾಳು ಸುರಿಯುವ ದುಷ್ಪಾಡು ಇದು ! ನನಗೆ ಪ್ರಿಯವಾದ್ದೆಲ್ಲ ನಷ್ಟವಾಗಿದೆ. ಆಗಲಿ ಅಮ್ಮ, ನೇರವಾದ ಒಂದು ಪ್ರಶ್ನೆ ಕೇಳುತ್ತೇನೆ ; ದಂಡಕಾರಣ್ಯಕ್ಕೆ–ವನವಾಸಕ್ಕೆ–ಹೋಗಬೇಕಾದ ಯಾವ ಘೋರಾಪರಾಧವನ್ನು ರಾಮನು ಮಾಡಿದ್ದ ?

ಕೈಕೆ : ಮಗು ಯಾವ ಅಪರಾಧವನ್ನೂ ಇಲ್ಲ.

ಭರತ : ವನವಾಸ ಶಿಕ್ಷೆ ಗುರುತರವಾದ್ದು. ಬ್ರಾಹ್ಮಣರಿಗೆ ಕೊಟ್ಟಿದ್ದ ಭೂಮಿ ಕಾಣಿಗಳನ್ನಾಗಲಿ ಇತರ ಯಾವ ಆಸ್ತಿಪಾಸ್ತಿಗಳನ್ನಾಗಲಿ ಅವನು ಅಪಹರಿಸಿದ್ದನೆ ? ಶ್ರೀಮಂತನಾದ ಯಾವನನ್ನಾದರೂ ಭಿಕ್ಷುಕನನ್ನಾಗಿ ಮಾಡಿದ್ದನೆ ? ಪರಸ್ತ್ರೀಯನ್ನು ಭಂಗಪಡಿಸಿ ಆಕೆಯ ಪಾತಿವ್ರತ್ಯವನ್ನು ಕೆಡಿಸಿದ್ದನೆ ? ಇನ್ನೊಬ್ಬರ ಮಗುವನ್ನು ನಾಶವಾಗುವಂತೆ ಭ್ರೂಣ ಹತ್ಯೆ ಮಾಡಿದನೆ ? ಇದಕ್ಕಿಂತ ಕಡಮೆಯಾದ ಯಾವ ದುಷ್ಕೃತ್ಯಗಳಿಗೂ ವನವಾಸ ಸಲ್ಲುವುದಿಲ್ಲ. ರಾಮನು ಇಂಥ ಯಾವ ದುಷ್ಕೃತ್ಯಗಳನ್ನಾಗಲಿ ಮಾಡಬಲ್ಲನೆಂದು ನಾನು ನಂಬಲಾರೆ. ಎಷ್ಟು ಒಳ್ಳೆಯವನು ! ಎಲ್ಲರಿಗೂ ನೆರವಾಗುವವನು ! ಆತನ ಸಹಾಯ ಅಗತ್ಯವಾದವರಿಗೆ ತನಗೇ ಯಾವ ತೊಂದರೆಯಾಗಲಿ ಲಕ್ಷಿಸದೆ ಮಾಡುವವನು....

ಕೈಕೆ : ಮಗೂ, ಮಗೂ, ಅವನು ಯಾವ ತಪ್ಪನ್ನೂ ಮಾಡಲಿಲ್ಲ. ನೀನು ಹೇಳುವಂತೆಯೇ ಯಾವ ಅಪರಾಧವನ್ನೂ ಮಾಡಲಾರದವನು. ಅಂತಹ ವನವಾಸ ಶಿಕ್ಷೆಗೆ ಅವನು ಸುತರಾಂ ತಕ್ಕವನಲ್ಲ.

ಭರತ : ಹಾಗಿದ್ದರೆ ಏಕೆ ವನವಾಸ ಶಿಕ್ಷೆ ? ತಂದೆಯವರಿಗೆ ಅವಿಧೇಯನಾದನೆ ? ಅವರಿಗೆ ವಿರುದ್ಧವಾಗಿ ತನ್ನನ್ನು ನೇಮಿಸಿಕೊಳ್ಳಬೇಕೆಂದನೆ ? ಅವನನ್ನು ಕಾಣಬೇಕೆಂದು ತರಾತುರಿಯಿಂದ ಬಂದೆ. ತಂದೆಯವರು ಅವನಿಗೆ ಪಟ್ಟಾಭಿಷೇಕವನ್ನು ಮಾಡುವುದನ್ನು ನೋಡಬೇಕೆಂದು ಕೂಡ ಮನಸ್ಸಿತ್ತು. ಅಂತಹ ಸುಖಕರ ಸನ್ನಿವೇಶವನ್ನು ನೋಡಲು ನನ್ನ ಮನಸ್ಸಿಗೆ ಸುಖ ಸಂತೋಷ ಆಗುತ್ತಿತ್ತು ! ಏನು ನಡೆಯಿತು ? ತಂದೆಯ ಮುಖ ಕಾಣದಾಯಿತು. ಅವನ ಆಶೀರ್ವಾದ ಹೋಯಿತು ! ನನ್ನ ತಂದೆಗೆ ಎರಡನೆಯ ಪದವಿಯಲ್ಲಿದ್ದ ನನ್ನ ಅಣ್ಣ ವನವಾಸಕ್ಕೆ ಹೋದ ! ಮೇರು ಪರ್ವತದಲ್ಲಿರುವ ಅರಣ್ಯವು ಮೇರುವನ್ನು ರಕ್ಷಿಸುವಂತೆ ತಂದೆಯವರ ರಾಜ್ಯಾಡಳಿತಕ್ಕೆ ನೆರವಾಗಿ ಅವರ ಬಲಗೈಯಂತಿದ್ದ ರಾಮನು ಈ ದೇಶವನ್ನು ಬಿಟ್ಟು ಹೋಗಬೇಕಾಯಿತು ! ಎಲ್ಲಿಯೂ ಸಂತೋಷವಿಲ್ಲ ! ತಂದೆಯವರಿಗೆ ಸೇವೆ ಸಲ್ಲಿಸುತ್ತಿದ್ದ ಯಾರ ಮುಖದಲ್ಲಿಯೂ ಗೆಲುವಿಲ್ಲ. ನೀನು ವಿಧವೆಯಾಗಿದ್ದೀ. ಸೋದರಿ ರಾಣಿಯರು–ನನ್ನ ಇತರ ತಾಯಿಯರು–ಚಾರಿತ್ರ್ಯದಲ್ಲಿ, ಸದ್ಗುಣದಲ್ಲಿ ದೊಡ್ಡವರು. ಎಂದೂ ತಂದೆಯವರ ಮನಸ್ಸಿಗೆ

ವ್ಯಥೆಮಾಡದಷ್ಟು ಹಿರಿಯರಾಗಿರುವವರು. ಈಗ ನಿನ್ನ ಹಾಗೆಯೇ ವ್ಯಸನದಲ್ಲಿ ವಿಧವೆಯರಾಗಿದ್ದಾರೆ. ಇದು ಏಕೆ ಉಂಟಾಯಿತು, ಏಕೆ ? ಏಕೆ ?

ಕೈಕೆ : ನನಗೆ ನಿನ್ನ ಮೇಲಿನ ಪ್ರೀತಿಯಿಂದಾಗಿ, ಮಗು. ನಿಮ್ಮ ತಂದೆ ನನಗೆ ಕೊಟ್ಟಿದ್ದ ಒಂದು ಮಾತನ್ನು ನೆರವೇರಿಸಲೆಂದು ಕೇಳಿದೆ.

ಭರತ : ನನ್ನ ಮೇಲಿನ ಪ್ರೀತಿಗೆ ? ನನ್ನ ತಂದೆ ನಿನಗೆ ಕೊಟ್ಟ ಮಾತು ?

ಕೈಕೆ : ಹೌದು. ನನ್ನ ಮಗನು ರಾಜನಾಗಬೇಕೆಂದು, ರಾಮನು ಹದಿನಾಲ್ಕು ವರ್ಷ ವನವಾಸ ಹೋಗಬೇಕೆಂದು ಕೇಳಿದೆ. ನಿಮ್ಮ ತಂದೆ ನನಗೆ ಎರಡು ವರಗಳನ್ನು ಕೊಟ್ಟಿದ್ದರು ಹಿಂದೆ. ಅವನ್ನು ನಾನು ಆಗ ಬೇಡದೆ ಉಳಿಸಿಕೊಂಡಿದ್ದೆ. ಮೊದಲಿಂದಲೂ ನನ್ನ ಮಗನು ರಾಜನಾಗಬೇಕೆಂದು ಪ್ರತ್ಯಾಸೆ ಬೆಳಸಿಕೊಂಡಿದ್ದೆ. ನಿಮ್ಮ ತಂದೆ ನೇರವಾಗಿ ನಡೆಯುವವರು. ಆದರೆ ನೇರ ಒಪ್ಪಿಕೊಳ್ಳಲಿಲ್ಲ– ವಾಗ್ದಾನದ ಈ ಪೂರೈಕೆಗೆ. ಅವರ ಜೀವನಕ್ಕೆ ಅತಿಪ್ರಿಯನಾದ ಮಗನನ್ನು ಕಾಡಿಗೆ ಕಳಿಸಲು ಅವರ ಹೃದಯ ಭೇದನವಾಯಿತು. ಅವನ ಮೇಲಿನ ಅತಿಶಯ ಪ್ರೀತಿ ನನ್ನ ಮಗನ ಪ್ರತಿಕೂಲವಾಗಿತ್ತು. ಇದೇ ಇಲ್ಲಿನ ವ್ಯಥೆಯ ಪ್ರಸಂಗ. ವಯಸ್ಸು ಹೆಚ್ಚಾಗಿತ್ತು ; ಸಹಿಸಿಕೊಳ್ಳಲಾರದಾದರು.

ಭರತ : ಅಮ್ಮಾ ಯಾವ ದೇವರ ಪ್ರೀತಿಗಾಗಿ ಇದು ? ನನ್ನ ಮೇಲಿನ ಪ್ರೀತಿಗಾಗಿ ನನ್ನ ತಂದೆ ಜೀವ ಬಿಡಬೇಕಾಯಿತೆ ?

ಕೈಕೆ : ಇಷ್ಟು ಕ್ಷೋಭೆ ನೀನೇಕೆ ಪಟ್ಟುಕೊಳ್ಳಬೇಕು, ಭರತ ? ಮಕ್ಕಳಿಗೆ ಮುಂಚೆ ಅವರ ಎದುರಿಗೆ ತಂದೆಯರು ತೀರಿಕೊಳ್ಳುತ್ತಾರೆ. ಇದು ಸಹಜವಾದ ಪ್ರಕೃತಿ ಲಕ್ಷಣ. ಯೌವ ರಾಜ್ಯಾಭಿಷೇಕವನ್ನು ತೀರ್ಮಾನಿಸುವ ಮುಂಚೆ ತನ್ನ ಕೊನೆಗಾಲ ಬಂದೀತೆಂದು ಅವರಿಗೆ ಭಯವಿತ್ತು. ನಾನು ಈ ವರವನ್ನು ಕೇಳಿದಾಗ ನನ್ನ ಉದ್ದೇಶ ಉತ್ತಮವಾದ್ದೇ ಆಗಿತ್ತು, ಭರತ. ರಾಜ್ಯ ಇಂದು ನಿನ್ನದು.

ಭರತ : ದೇವರೇ ದೇವರೇ, ನಿನ್ನ ಇಷ್ಟ ಎಷ್ಟು ಕ್ರೂರ, ಅಮ್ಮ ! ಎಷ್ಟು ಅನುಚಿತ ! ನೀನು ನಮ್ಮ ಕುಲಕ್ಕಾಗಲಿ ವಂಶಕ್ಕಾಗಲಿ ಸೇರಿದವಳಲ್ಲ. ನಿಮ್ಮ ತಂದೆ ಅಶ್ವಪತಿಗೆ ತಕ್ಕ ಮಗಳಂತೆ ಕೂಡ ಕಾಣುವುದಿಲ್ಲ. ಇಕ್ಷ್ವಾಕು ವಂಶಕ್ಕೆ ತಕ್ಕ ತಾಯಿಯಂತೂ ಎಂದೂ ಅಲ್ಲ. ಈ ಕೆಟ್ಟ ಕಾಯಿಲೆ ನಮ್ಮ ಕುಟುಂಬಕ್ಕೆ ಅಪಕೀರ್ತಿ ತರತಕ್ಕದ್ದು. ನನಗೆ ಅಪಮಾನಕರ ; ನಿನ್ನ ಗಂಡನಿಗೆ ಸಾವು ತಂದಿದೆ. ಒಟ್ಟು ದೇಶಕ್ಕೇ ಎದೆಬೇನೆ ಉಂಟು ಮಾಡಿದೆ. ನನ್ನ ಅಣ್ಣ ದೇವತೆಯಂಥ ವನು ! ಅಂಥವನನ್ನು ಮನೆಯಿಂದ ಓಡಿಸಿದೆ. ಅರಣ್ಯದಲ್ಲಿ ಅಲೆದಾಡಲು ಅವನು ಸುತರಾಂ ಅರ್ಹನಲ್ಲ. ಆ ಕಾಡು ಜೀವನದ ಕಷ್ಟಗಳಿಗೆ ಈಡಾಗ ಬಾರದವನು. ಜೊತೆಯಲ್ಲಿ ಅತ್ತಿಗೆ ಹೋಗಿದ್ದಾಳೆ ; ನನ್ನ ತಮ್ಮ ಲಕ್ಷ್ಮಣ ಹೋಗಿದ್ದಾನೆ.

**ಕೈಕೆ :** ತಾಯಿಯಾದವಳು ಮಗನ ಪರವಾಗಿ ನುಡಿದು ಅವನಿಗೆ ಸಿಂಹಾಸನ ಬೇಕೆಂದು ಬೇಡುವುದು ಅಷ್ಟು ಅಸಹಜವೆ ? ಅವ್ಯಾಪಾರವೆ ?

**ಭರತ :** ಸಹಜವಾದ್ದು ಯಾವಾಗಲೂ ಸರಿಯಾದುದಲ್ಲ. ನೀನು ಇಚ್ಛೆ ಬಂದಂತೆ ನಡೆಯುವವಳು, ಸ್ವಾರ್ಥಿ. ದುರಾಸೆ ಎಂದಿಗೂ ಹೀಗೇ. ಚಪಲ ತಿರುಗಿದಂತೆ. ಅಕ್ಕಂದಿರನ್ನು ಅಪಮಾನಗೊಳಿಸಿದ್ದೀಯೆ. ಬಹುಬುದ್ಧಿವಂತ ಹೆಂಗಸೆಂದು ಸರ್ವದಾ ಯೋಚಿಸಿದ್ದೀ. ಇದು ಜಾಣತನವಲ್ಲ ; ಸಂಚುಗಾರಿಕೆ. ನಿನ್ನ ಹೃದಯದಲ್ಲಿ ಕರುಣೆಯೆಂಬುದಿಲ್ಲ.

**ಕೈಕೆ :** ಪ್ರೀತಿಯಿಂದ ನಾನು ಆಲೋಚನೆ ಮಾಡಿದುದು ಇಷ್ಟು ತಪ್ಪಾಗುವುದೆಂದು ಯಾರು ಎಣಿಸಬಹುದಾಗಿತ್ತು, ಮಗು ? ಇಷ್ಟು ನಷ್ಟ, ಇಷ್ಟು ದುಃಖ ತರಬಹುದೆಂದು ಯಾರು ನಂಬಿದ್ದರು ?

**ಭರತ :** ನೀನು ನನ್ನ ತಾಯಿಯಾಗಿರಲು ತಕ್ಕವಳಲ್ಲ. ಯಾವಾಗ ನಿನ್ನ ಮನೆಯನ್ನು ಬಿಟ್ಟು ಕೌಸಲ್ಯೆಯ ಅರಮನೆಯಲ್ಲಿಗೆ ತಂದೆಯವರು ಹೋದರೊ ಆಗ ನಿನ್ನನ್ನು ತ್ಯಜಿಸಿದರು. ಅದು ನಿನ್ನನ್ನು ತನ್ನ ಹೆಂಡತಿಯಾಗಿ ಒಪ್ಪೆನೆಂದು ಪ್ರಕಟವಾಗಿ ಹೇಳಿದಂತೆಯೇ ಆಯಿತು !

**ಕೈಕೆ :** ಅವರು ಹಾಗೆ ನುಡಿದರು, ಮಗು, ನನ್ನ ಎದೆಶೂಲವಾಗಿ.

**ಭರತ :** ಅವರು ಎಂಥ ಮನುಷ್ಯರಾಗಿದ್ದರೆಂಬುದನ್ನು ನೀನು ಬಲ್ಲೆ. ನಿನ್ನಿಷ್ಟ ಬಂದಲ್ಲಿಗೆ ಹೋಗು. ಬದುಕು ; ಸಾಯಿ : ಅದಕ್ಕೆ ಬೆಲೆಯಿಲ್ಲ. ನೀನು ಇನ್ನು ಮೇಲೆ ನನ್ನೊಡನೆ ಮಾತನಾಡಬೇಕಿಲ್ಲ. ನನಗೆ ಮಾತನಾಡಲು ಇಷ್ಟವಿಲ್ಲ. ನೀನು ಹೆಂಗಸು ; ಹೆತ್ತ ತಾಯಿ ; ಹಾಗಿಲ್ಲದಿದ್ದರೆ ನಿನ್ನನ್ನು ಕೊಂದುಬಿಡುತ್ತಿದ್ದೆ. ಅದು ತಪ್ಪಲ್ಲ. ಆದರೆ ರಾಮನ ಕಿವಿಗೆ ಅಂಥ ಸಂಗತಿ ಬಿದ್ದಿದ್ದರೆ ಅವನು ಅದನ್ನು ಒಪ್ಪುತ್ತಿರಲಿಲ್ಲ ; ನನ್ನನ್ನು ಕ್ಷಮಿಸುತ್ತಿರಲಿಲ್ಲ. ಈಗ ನಾನು ದೊಡ್ಡಮ್ಮ ಕೌಸಲ್ಯೆಯಲ್ಲಿಗೆ ಹೋಗುತ್ತೇನೆ. ನನ್ನನ್ನು ಕ್ಷಮಿಸಬೇಕೆಂದು ಆಕೆಯನ್ನು ಬೇಡಿ ಕೊಳ್ಳುತ್ತೇನೆ. ಓ ಎಂಥ ದುಸ್ಥಿತಿಗೆ ನಮ್ಮನ್ನೆಲ್ಲ ಈಡು ಮಾಡಿದೆ ! ನಿನಗೆ ಒಳ್ಳೆಯದಲ್ಲ. ನನಗಲ್ಲ. ನನ್ನ ತಂದೆಯವರನ್ನು ಕೊಂದೆ ; ಹಿರಿಯ ಜೊತೆ ರಾಣಿಯರಿಗೆ ಎಣಿಸಲಾರದಷ್ಟು ದುಃಖ ತಂದಿದ್ದೀ. ಈ ನಾಡಿನಲ್ಲಿ ಅತಿಶ್ರೇಷ್ಠ ನಾದ ಮನುಷ್ಯನನ್ನು ಕಾಡಿಗಟ್ಟಿದ್ದೀಯೆ. ನನ್ನ ತಮ್ಮನನ್ನೂ ನನ್ನ ಅತ್ತಿಗೆ ಯನ್ನೂ ಕ್ರೂರವಾದ ಕಷ್ಟಗಳಿಗೆ ಈಡು ಮಾಡಿದ್ದೀಯೆ....

(ನಿಷ್ಕ್ರಮಿಸುವನು)

**ಕೈಕೆ :** ಅಯ್ಯೋ ಏನು ಮಾಡಿಬಿಟ್ಟೆ ! ನನ್ನ ಎಲ್ಲ ಪ್ರತ್ಯಾಸೆಗಳೂ ಆಕಾಂಕ್ಷೆಗಳೂ ಮುರಿದುಬಿದ್ದುವು. ಎಲ್ಲ ಎಣಿಕೆಗಳೂ ನಾಶವಾದವು. ನನ್ನ ಹೊಟ್ಟೆಯಲ್ಲಿ

ಹುಟ್ಟಿದ ಮಗನೇ ನನ್ನನ್ನು ದ್ರೋಹಿ ಎಂಬಂತೆ ಎಣಿಸುತ್ತಿದ್ದಾನೆ. ಇಲ್ಲಿಯಾಗಲಿ, ಇನ್ನು ಮೇಲೆ ಎಂದೇ ಆಗಲಿ, ನನಗೆ ಬದುಕು, ಬಾಳು ಇಲ್ಲ. ಮಂಥರೇ, ಮಂಥರೇ—ಎಂಥ ಕೆಟ್ಟ ಆಲೋಚನೆಯನ್ನು ನೀನು ನನ್ನ ತಲೆಗೆ ತುಂಬಿದೆ! ನೀನು ಬುದ್ಧಿವಂತಳೆಂದು ನಿನ್ನನ್ನು ಹೊಗಳುತ್ತಿದ್ದೆ; ನೀನು ನನ್ನನ್ನು ನಾಶ ಮಾಡಿದ್ದೀಯೆ! ಆದರೆ—ಅವಳದೇನು ತಪ್ಪು? ಅವಳು ಒಂದು ಮುದಿ ಜರಠ. ತನ್ನ ಮೇಲಿನ ಪ್ರೀತಿಗಿಂತ ನನ್ನ ಮೇಲಿನ ಪ್ರೀತಿ ಅವಳಿಗೆ ಹೆಚ್ಚು ...ನಾನು ಎಲ್ಲಕ್ಕೂ ಹೆಚ್ಚಾಗಿ ಭರತನ ಮೇಲೆ ಪ್ರೀತಿ ಇಟ್ಟಿಲ್ಲವೆ? ಅವಳಿಗೆ ನಮ್ಮಿಬ್ಬರ ಮೇಲೂ ಮೋಹ. ಸರಿಯಾದ ಯೋಚನೆಯೆಂದೇ ನಾನು ಯೋಚಿಸಿದ್ದೆ; ಹಾಗೇ ಅವಳೂ ಅಂದುಕೊಂಡಿದ್ದಾಳು. ಇದು ನಮ್ಮ ಭಾಗ್ಯ! ದಾರಿ ತಪ್ಪಿತು; ವಿಧಿಯಾಯಿತು! ನನ್ನ ಹೃದಯ ಒಡೆದು ಹೋಗುತ್ತಿದೆ. ಈ ದುಃಖವನ್ನು ನಾನು ಹೇಗೆ ಸಹಿಸಬಲ್ಲೆ? ಆಗ ಗಂಡ, ಈಗ ಮಗ....

(ನೆಲಕ್ಕೆ ಬೀಳುವಳು)

(ತೆರೆ)

## ಅಂಕ ೨

### ದೃಶ್ಯ ಒಂದು

ಭರತ : ಹದಿನಾಲ್ಕು ದಿನ ಕಳೆದಿವೆ, ಶತ್ರುಘ್ನ, ಒಂದು ಸಾವಿನ ಮನೆಯಂತೆ ಇದ್ದುದನ್ನು ಒಂದು ಸ್ತಿಮಿತಕ್ಕೆ ತರಲು. ಇಲ್ಲಿಯದನ್ನೆಲ್ಲ ಶುಚಿಗೊಳಿಸಲು ಅಗತ್ಯವಾದ್ದನ್ನೆಲ್ಲ ಮಾಡಿಯಾಗಿದೆ. ಜನದ ಹೃದಯದಲ್ಲಿ ಹೊರತು ನಗರದಲ್ಲಿ ಯಾವ ವ್ಯಸನವೂ ಇರಬೇಕಿಲ್ಲ. ಅರಮನೆಗಳ ಮೇಲೆ ವ್ಯಥೆಯ ಚಿಹ್ನೆಗಳು ಯಾವುದನ್ನೂ ಕಾಣಿಸುವ ಸಂಕೇತಗಳು ಬೇಡ. ನನ್ನನ್ನು ಎಚ್ಚರಿಸುವುದಕ್ಕೆ ರಾಜನ ಸ್ತೋತ್ರಪಾಠಗಳನ್ನೂ ಗೀತಗಳನ್ನೂ ಬಾಜಿಸುವ ತುತೂರಿಗಳ ಸ್ವನವನ್ನೂ ಈ ಬೆಳಿಗ್ಗೆ ಕೇಳಿದೆ—ನಾನೊಬ್ಬ ರಾಜನಿದ್ದ ಹಾಗೆ. ಇದು ನನ್ನನ್ನು ವ್ಯಥೆಪಡಿಸುತ್ತಿದೆ. ನಾನು ರಾಜನಲ್ಲ; ರಾಮನು ರಾಜ. ರಾಜ್ಯ ಅವನದು; ಅವನದಾಗಿರಬೇಕು. ಮನಸ್ಸಲ್ಲಿ ಹಾಗೆ, ವಾಸ್ತವವಾಗಿ ನನಗೆ ಹಾಗೇ. ನನ್ನ ಕಾರ್ಯ ಅವನಿರುವಲ್ಲಿಗೆ ಹೋಗುವುದು. ರಾಜ್ಯವನ್ನು

ಸ್ವೀಕರಿಸುವಂತೆ ಮಾಡುವುದು ; ಅವನನ್ನು ಹಿಂದಕ್ಕೆ ಕರೆತರುವುದು—ಆನರೆಗೂ ನನಗೆ ವಿಶ್ರಾಂತಿಯಿಲ್ಲ. ವಸಿಷ್ಠರು ಈಗ ನನಗೆ ಹೇಳಿ ಕಳಿಸಿದ್ದಾರೆ. ರಾಜಸಭೆ ಕೂಡಿದೆಯಂತೆ. ಪ್ರಾಂತಗಳ ಪಾಲಕರೂ ಮಿತ್ರ ಅರಸು ಮನೆತನಗಳವರೂ ಸೇನಾಧಿಪತಿಗಳೂ ಜನವರ್ಗದ ಹಿರಿಯರೂ ಈ ನಾಡಿನ ಎಲ್ಲ ವರ್ಗ ಸ್ಥಾನಗಳ ಜನರೂ ಬರತಕ್ಕದ್ದೆಂದು ಹೇಳಿಕಳಿಸಿದೆಯಂತೆ. ಪಟ್ಟಾಭಿಷೇಕಕ್ಕೆ ಸಂಬಂಧಿಸಿದ ಸಮಸ್ತ ಪರಿಕರಗಳೂ—ಹೂ, ಆಭರಣ, ಕಿರೀಟ, ವಸ್ತ್ರ, ಸಿಂಹಾಸನ, ಛತ್ರ, ಪಟ್ಟದಾನೆ, ಕುದುರೆ, ಪಲ್ಲಕ್ಕಿ, ಖಡ್ಗ—ರಾಜನ ಚಿಹ್ನೆಗಳಾಗಿ, ರಾಜ್ಯಾಡಳಿತ ಸಂಕೇತಗಳಾಗಿ ಎಲ್ಲವೂ ಸಿದ್ಧವಾಗಿವೆಯಂತೆ. ರಾಜನಾಗಿರಲು ನನ್ನನ್ನು ಸಭೆ ಕೇಳಲಿದೆಯಂತೆ. ನಾನು ಅದನ್ನು ಒಪ್ಪುವುದಿಲ್ಲ. ನನ್ನಂತೆಯೇ ನಿನ್ನದು ಎಂದು ನಂಬಿದ್ದೇನೆ, ಶತ್ರುಘ್ನ. ನನ್ನ ಹೃದಯದಲ್ಲಿ ಹೇಗಿದೆ ಎಂಬುದು ನಿನಗೆ ಚೆನ್ನಾಗಿ ತಿಳಿದಿದೆ. ನನ್ನ ತೀರ್ಮಾನ ಇಂಥದೆಂಬುದನ್ನು ಜನಕ್ಕೆಲ್ಲ ಶ್ರುತಪಡಿಸು ವುದಕ್ಕೆ ಇದು ತಕ್ಕ ಸಮಯವೆಂದೂ ಅವಕಾಶವೆಂದೂ ನಾನು ಅಂದುಕೊಂಡಿ ದ್ದೇನೆ.

(ಸಭೆಗೆ ಅವರು ಬಂದುದರ ಘೋಷಣೆಯಾಗುತ್ತದೆ. ಭೇರಿ ತುತೂರಿ ಮೊಳಗುತ್ತವೆ. ಸಂತೋಷದ ಸಂಭ್ರಮ. ವಸಿಷ್ಠರು ಅವರ ಗೌರವ ಪೀಠದಿಂದ ಮೇಲೆದ್ದು ಭರತನನ್ನು ಸ್ವಾಗತಿಸುತ್ತಾರೆ. ಭರತನು ಮುಖ್ಯ ಪೀಠದ ಸುತ್ತ ಭಕ್ತಿಯಿಂದಲೂ ವಿನಯದಿಂದಲೂ ಪ್ರದಕ್ಷಿಣೆ ಮಾಡಿ ಅದರ ಪಕ್ಕದ ಕೆಳಗಡೆಯ ಪೀಠದಲ್ಲಿ ಕುಳಿತುಕೊಳ್ಳುತ್ತಾನೆ. ಅದರ ತರುವಾಯದ ಪೀಠದಲ್ಲಿ ಶತ್ರುಘ್ನನು ಕುಳಿತುಕೊಳ್ಳುತ್ತಾನೆ.)

**ವಸಿಷ್ಠ :** ಭರತನಿಗೆ ಸ್ವಾಗತ. ಇದು ನಿನಗೆ ತಿಳಿದಿದೆಯೆ, ರಾಜಕುಮಾರ ? ನಿಮ್ಮ ತಂದೆಯವರು ಶೀರಿಕೊಂಡು ಕೀರ್ತಿಶೇಷರಾಗಿದ್ದಾರೆ. ಅವರ ರಾಣಿಯರು, ಮಕ್ಕಳು, ಸ್ನೇಹಿತರು, ಮಂತ್ರಿವರ್ಗ, ಪುರೋಹಿತರು, ಅಯೋಧ್ಯಾ ನಗರ— ಎಲ್ಲ ದುಃಖಕ್ಕೆ ಈಡಾಗಿವೆ. ಇದನ್ನು ಒಡೆಯನಾಗಿ ಇಷ್ಟು ದೀರ್ಘಕಾಲ ಜನಪ್ರಿಯನಾಗಿ ಆಳಿದ ರಾಜನನ್ನು ಕಳೆದುಕೊಂಡ ಭಾವ ಎಲ್ಲರಲ್ಲಿಯೂ ಕಾಣುತ್ತದೆ. ಇನ್ನು ಮುಂದೆ ಆತನ ಹಿರಿಮೆ, ಶಕ್ತಿ, ಧರ್ಮಬುದ್ಧಿ, ಔದಾರ್ಯ ಗಳು ನೆನಪಾಗಿ ಮಾತ್ರ ಉಳಿದಿರುತ್ತವೆ. ಆತನಿಗೆ ಶತ್ರುಗಳೆಂಬುವರು ಇರಲಿಲ್ಲ. ಮಿತ್ರವರ್ಗ ವಿಶ್ವಾಸಯುತವಾಗಿದೆ, ಪ್ರಿಯವಾಗಿದೆ. ಅವರೆಲ್ಲ ಇಲ್ಲಿ ಬಂದು ಸೇರಿದ್ದಾರೆ. ಪ್ರಜಾವರ್ಗಗಳವರು, ಅವರ ಮುಖ್ಯರು, ನಾಡಿನ ನಾಯಕರು ಎದುರಿಗಿದ್ದಾರೆ. ಒಂದು ದೊಡ್ಡ ಸಮಾರಂಭವನ್ನು ವೀಕ್ಷಿಸಲು ಅಯೋಧ್ಯೆಯ ನರನಾರಿಯರು ರಸ್ತೆಗಳಲ್ಲಿ ಸಂತೋಷದಿಂದ ಇದ್ದಾರೆ. ಮುಂದಿನ ಪ್ರತಿನಿಧಿ ರಾಮನು ಆಳಿ ಹೋದ ರಾಜರ—ಎಂದರೆ ತಂದೆಯವರ—ಅಪ್ಪಣೆಯಂತೆ

ರಾಜ್ಯವನ್ನೂ ಸಿಂಹಾಸನವನ್ನೂ ಬಿಟ್ಟು ವನಕ್ಕೆ ಹೋಗಿದ್ದಾನೆ. ಆತನೊಡನೆ ತಮ್ಮ ಲಕ್ಷ್ಮಣನೂ ಹೋಗಿದ್ದಾನೆ. ಈಗ ಈ ನಾಡಿನ ಒಡೆತನ ನಿನ್ನ ಪಾಲಿಗೆ ಬಂದಿದೆ. ಇಲ್ಲಿರುವ ನಾವೆಲ್ಲರೂ ನಮ್ಮ ಸ್ವಂತ ಇಷ್ಟಾರ್ಥದಂತೆ ನೀನು ಸಿಂಹಾಸನವನ್ನು ಸ್ವೀಕರಿಸಬೇಕೆಂದು ಬೇಡುತ್ತೇವೆ ; ಒಪ್ಪಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇವೆ. ರಾಜನಿಲ್ಲದೆ ಸಿಂಹಾಸನ ಇರಬಾರದು. ಅರಾಜಕತೆ ರಾಜ್ಯದಲ್ಲಿ ಕ್ಷೇಮಕಾರಿಯಲ್ಲ. ರಾಜ್ಯದ ಅಧಿಕಾರ ದಂಡವೂ ರಾಜಲಕ್ಷಣವಾದ ಕಿರೀಟವೂ ಮುಂದೆ ಇಟ್ಟಿವೆ. ರಾಜ್ಯದ ಆಡಳಿತದ ಅಧಿಕಾರವೂ ಶಕ್ತಿಯೂ ಎದುರಿಗಿವೆ ಎಂಬುದನ್ನು ಅವು ಉದ್ಘೋಷಿಸುತ್ತವೆ. ಆ ಅಧಿಕಾರ ಶಕ್ತಿ ಎಚ್ಚರವಾಗಿದೆ, ದಕ್ಷವಾಗಿದೆ ಎಂಬುದನ್ನು ಈ ಸಂಗತಿ ಸೂಚಿಸುತ್ತದೆ. ನಮ್ಮ ಪ್ರಾರ್ಥನೆ ಇದು : ಸಿಂಹಾಸನದ ಬಳಿಗೆ ಹೋಗಿ ಹಿರಿಯರ ಆಶೀರ್ವಾದದೊಡನೆ ಅದನ್ನು ನೀನು ಏರಬೇಕು. ನಾಲ್ಕು ದಿಕ್ಕುಗಳಿಂದ ರಾಜರು, ರಾಜ್ಯಗಳ ನಾಯಕರು, ದ್ವೀಪಾಂತರ ರಾಜ್ಯಗಳ ಮುಖ್ಯರು, ಅಪರಾಂತದವರು ಈ ಸಭೆಯಲ್ಲಿದ್ದಾರೆ. ಅವರು ನಿನ್ನ ಮುಂದೆ ಬಂದು ನಿನಗೆ ಕಪ್ಪಕಾಣಿಕೆ ಸನ್ಮಾನ ನಿವೇದನೆಯನ್ನು ನಿವೇದಿಸಲು ಕಾದಿದ್ದಾರೆ. ಸೇನಾನಾಯಕರೇ, ನಿಮ್ಮ ನಿಮ್ಮ ಕ್ರಮದಲ್ಲಿ ಮುಂದಕ್ಕೆ ಬಂದು, ಈತನ ಅಧಿಕಾರಕ್ಕೆ ನೀವು ಒಳಪಟ್ಟಿದ್ದೀರೆಂದೂ ನಿಮ್ಮ ಭಕ್ತಿ ಶ್ರದ್ಧೆ ಅವರಿಗೆ ಇವೆಯೆಂದೂ ನಿಮ್ಮ ಗೌರವದ ಪ್ರಮಾಣಗಳನ್ನು ನಿವೇದಿಸಿ.

ಭರತ : ದೇವರ ಮೇಲೆ ಆಣೆ ಇಟ್ಟು ಹೇಳುತ್ತೇನೆ, ಆಚಾರ್ಯ ; ಇದನ್ನೆಲ್ಲ ನಿಲ್ಲಿಸಿ. ರಾಜ್ಯ ನನ್ನದಲ್ಲ. ನ್ಯಾಯವಾದ ಹಕ್ಕುದಾರನು ಬದುಕಿದ್ದಾನೆ. ಅವನು ನನ್ನ ಅಣ್ಣ ; ನಮ್ಮ ಕುಟುಂಬದಲ್ಲೇ ಮೊದಲನೆಯವನು. ತಂದೆಯುವರು ತೀರಿಕೊಂಡ ಬಳಿಕ ಅವನೇ ನನಗೆ ತಂದೆ. ರಾಮನು ಕಾಡಿಗೆ ಹೋಗಬೇಕು, ನಾನು ರಾಜನಾಗಬೇಕು ಎಂಬ ತೀರ್ಮಾನ ನನ್ನದಲ್ಲ. ಮಗನ ಮೇಲಿನ ಮೋಹದಿಂದ, ವಾತ್ಸಲ್ಯದ ಒಂದು ಸ್ವಾರ್ಥದಿಂದ ತಾಯಿ ಧರ್ಮಾಂಧಳಾಗಿ ಈ ನಮ್ಮ ವಂಶಕ್ಕೇ ವಿಶೇಷ ಲಕ್ಷಣವಾಗಿರುವ ನಡತೆ, ನ್ಯಾಯ, ಧರ್ಮಗಳಿಗೆ ವಿರುದ್ಧವಾಗಿ ನಡೆದಿದ್ದಾಳೆ. ನನಗೆ ಅದರಲ್ಲಿ ಭಾಗವಿಲ್ಲ. ಅದಕ್ಕೆ ಸಂಬಂಧಿಸಿದ ಹೊಣೆಗಾರಿಕೆಗಳೆಲ್ಲದರಿಂದಲೂ ನನ್ನನ್ನು ಬಿಡಿಸಿ. ನಿಮ್ಮ ಜ್ಞಾನ ಹಿರಿಯದು ; ನೀವು ವೃದ್ಧರು, ಪೂಜ್ಯರು ; ನಮ್ಮ ಕುಲಕ್ಕೇ ಆಚಾರ್ಯರು. ಈ ನಮ್ಮ ಕುಲಕ್ಕೆ ಸಂಬಂಧಿಸಿದ ಸಮಸ್ತ ಪದ್ಧತಿಗಳನ್ನೂ ಬಲ್ಲವರು. ರಾಜ್ಯದ ನಡವಳಿಕೆಗಳ ನೆಲೆಯುಂತೆ, ನಿಧಿಯಂತೆ ಇದ್ದೀರಿ. ರಾಜನಾಗೆಂದು ನನ್ನನ್ನು ಕೇಳುವುದು ನಿಮಗೆ ಸರಿಯಲ್ಲವೆಂದು ನಿಮಗೆ ತಿಳಿದಿರಬೇಕಿತ್ತು. ನಿಜವಾದ ಉತ್ತರಾಧಿಕಾರಿ ರಾಮ ಜೀವಿಸಿದ್ದಾನೆ. ಈಗ ಹೊರಗೆ ಹೋಗಿದ್ದಾನೆ. ಅವನು ಧೈರ್ಯಶಾಲಿ.

ಎಲ್ಲವನ್ನೂ ತಿಳಿದವನು. ರಾಜ್ಯಾಧಿಕಾರಕ್ಕೆ ತಕ್ಕ ಎಲ್ಲ ಶಿಕ್ಷಣವನ್ನೂ ಪಡೆದಿದ್ದಾನೆ. ತನ್ನ ಜನತೆಯ ಪ್ರೀತಿಯನ್ನೂ ಗೌರವವನ್ನೂ ಸಂಪಾದಿಸಿದ್ದಾನೆ. ನಿರ್ದೋಷಿ. ಪರಹಿತವನ್ನು ಬಯಸಿ ಸಂತತವಾಗಿ ಕಾರ್ಯ ಮಾಡುವವನು. ಸ್ವದೋಷ, ಪರದೋಷ ಎರಡನ್ನೂ ಅರಿತವನು. ಹಸನ್ಮುಖಿ. ಗೋಷ್ಠಿಯಲ್ಲಿ ಯಾರಿಗೂ ಸಂಕೋಚ ಉಂಟಾಗದಂತೆ ಇರಬಲ್ಲವನು. ನನ್ನ ತೀರ್ಮಾನ ಹೀಗೆ : ಆದಷ್ಟು ಬೇಗ ಅವನಿರುವಲ್ಲಿಗೆ ಹೋಗುವುದು. ನಮ್ಮಣ್ಣನನ್ನು—ಸತ್ಯತಃ ನ್ಯಾಯವಾದ ರಾಜನನ್ನು—ಕಂಡು, ಶಕ್ಯವಾದ್ದೆಲ್ಲವನ್ನೂ ಮಾಡಿ ಅವನನ್ನು ಒಪ್ಪಿಸಿ, ಅಯೋಧ್ಯೆಗೆ ಮರಳುವಂತೆ ಬೇಡಿಕೊಳ್ಳುವುದು. ನನ್ನ ದೈವವೇ ಇದಕ್ಕೆ ಸಾಕ್ಷಿ. ಶತ್ರುಘ್ನನಿಗೆ ನನ್ನ ಮನಸ್ಸು ಗೊತ್ತು. ಕೌಸಲ್ಯಾದೇವಿಗೆ, ಸುಮಿತ್ರಾದೇವಿಗೆ ನನ್ನಿಚ್ಛೆಯನ್ನು ತಿಳಿಸಿದ್ದೇನೆ. ಆಕೆಯ ಇಷ್ಟವನ್ನು ನಾನು ನೆರವೇರಿಸಲಾರೆನೆಂದು ನನ್ನ ತಾಯಿ ಕೈಕೆಗೆ ಸ್ಪಷ್ಟಪಡಿಸಿದ್ದೇನೆ. ನಿಮ್ಮಲ್ಲಿ ಹಿರಿಯರಾಗಿರುವವರೆಲ್ಲರನ್ನೂ ಬೇಡಿಕೊಂಡು, ಅರಣ್ಯಕ್ಕೆ ಬರುವ ಎಲ್ಲರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಿ, ಅಧಿಕಾರದ ಸಮಸ್ತ ಚಿಹ್ನೆಗಳನ್ನೂ ಜೊತೆಯಲ್ಲಿ ತೆಗೆದುಕೊಂಡು ಹೋಗಿ, ಈಗ ಇಲ್ಲಿ ಪಟ್ಟಾಧಿಕಾರಕ್ಕಾಗಿ ಸಂಗ್ರಹಿಸಿರುವ ಕಿರೀಟ, ಖಡ್ಗ, ದಂಡ, ಸ್ವರ್ಣಪಾದುಕೆ, ಛತ್ರ, ಪಟ್ಟದ ಆನೆ, ಕುದುರೆ, ಸೈನ್ಯದ ಮುಖ್ಯ ವಿಭಾಗಗಳು—ಎಲ್ಲವನ್ನೂ ಜೊತೆಗೆ ಒಯ್ದು ಹೋಗೋಣ. ಯಾರಿಗೆ ಇಚ್ಛೆಯಿದೆಯೊ ನಮ್ಮ ಜೊತೆ ಬರಲು ಅವರು ಈ ಗುಂಪಿನಲ್ಲಿ ಸೇರಿಕೊಳ್ಳಬಹುದು. ದಾರಿಗಳನ್ನೂ ದೊಡ್ಡ ಮಾರ್ಗಗಳನ್ನೂ ಮಾಡಬಲ್ಲ ಎಲ್ಲ ಅಧಿಕಾರಿಗಳಿಗೂ ಲೋಕೋಪಯೋಗಿ ಕಾರ್ಯಗಳಲ್ಲಿ ತೊಡಗಿರುವ ಎಲ್ಲ ಅಧಿಕಾರಿಗಳಿಗೂ ಎಲ್ಲ ಮಾರ್ಗಗಳೂ ಸುರಕ್ಷಿತವಾಗಿರುವಂತೆ ಸಮವಾಗಿರುವಂತೆ ನೋಡಿಕೊಳ್ಳುವಂತೆ ದಯಮಾಡಿ ಅಪ್ಪಣೆ ಮಾಡಿ. ಸೇತುವೆಗಳನ್ನು ಭದ್ರಪಡಿಸಲಿ. ದಾರಿಯಲ್ಲಿ ತಂಗುವ ಪ್ರದೇಶಗಳು ರಚಿತವಾಗಿ ಎಲ್ಲರ ತಿಳಿವಳಿಕೆಗೂ ಬರಲಿ. ದಾರಿಯಲ್ಲಿ ಎಲ್ಲ ಸೌಕರ್ಯಗಳೂ ಒದಗುವಂತೆ ಮಾಡಲಿ. ನಮ್ಮ ಜೊತೆಯಲ್ಲಿ ಬರುವ ಸಮಸ್ತರಿಗೂ ಅನ್ನ ಪಾನ ವಿಶ್ರಾಂತಿ ದೊರಕುವಂತೆ ಏರ್ಪಡಲಿ. ಇನ್ನಾವ ಅಡ್ಡಿ ಆತಂಕಗಳೂ ನಾವು ರಾಮನನ್ನು ಕಾಣಬೇಕಾಗಿರುವ ಸ್ಥಳದವರೆಗೂ ಯಾವ ತೊಂದರೆಯೂ ಆಗತಕ್ಕದ್ದಲ್ಲ. ಈಗ ಇಲ್ಲಿ ಸೇರಿರುವ ನಿಮ್ಮಲ್ಲಿನ ಬಹು ಜನಕ್ಕೆ ನನ್ನ ಹಾಗೆಯೇ ರಾಮನು ಹಿಂದಕ್ಕೆ ಬರುವ ಮನಸ್ಸು ಮಾಡಬೇಕೆಂದೂ ಪಟ್ಟಾಭಿಷಿಕ್ತನಾಗಿ ರಾಜ್ಯಾಧಿಕಾರದಲ್ಲಿ ಗಾಂಭೀರ್ಯದಲ್ಲಿ ಮೆರೆಯಬೇಕೆಂದೂ ಕೇಳೋಣ ಎಂದಿದ್ದೇನೆ. ಅದಕ್ಕಿಂತ ಕಡಮೆಯಾದ ಯಾವುದೂ ನನಗೆ ಸಂತೋಷ ತಾರದು ; ವಿಶ್ರಾಂತಿ ತಾರದು.

ವಸಿಷ್ಠ : ರಾಮನು ಈಗ ಎಲ್ಲಿರಬಹುದೊ ? ಖಚಿತಪಡಿಸಿಕೊಳ್ಳೋಣ.

ಭರತ : ಭರದ್ವಾಜಾಶ್ರಮವನ್ನು ಬಿಟ್ಟು ಮುಂದುವರಿದಿದ್ದಾನಂತೆ : ಸುದ್ದಿ ಬಂದಿದೆ. ಚಿತ್ರಕೂಟದಲ್ಲಿ ಯಾವುದೊ ಒಂದು ಸ್ಥಳದಲ್ಲಿ ನೆಲೆಗೊಂಡಿದ್ದಾನಂತೆ. ಇಲ್ಲಿಂದ ಆ ಸ್ಥಳ ದೂರ. ಸೇರಲು ಕೆಲವು ದಿನಗಳ ಪ್ರಯಾಣ ಬೇಕಾಗುತ್ತದೆ. ಈ ನಡುವೆ ರಾಜ್ಯದ ರಕ್ಷಣೆಯನ್ನೆಲ್ಲ ರಾಮನ ಹೆಸರೇ ನೆರವೇರಿಸಬಲ್ಲದು. ನಗರದ ಒಳಗೆ ಎಲ್ಲವೂ ಸುಸ್ಥಿತಿಯಲ್ಲಿ ಇರುವಷ್ಟು ರಕ್ಷಕಬಲವೂ ಮೂಲಬಲವೂ ಇರಲಿ. ನಮ್ಮ ಯತ್ನಗಳ ಮೇಲೆ ಭಗವಂತನ ಆಶೀರ್ವಾದವಿರಲಿ. ನಮ್ಮ ಮೂವರು ತಾಯಿಯರೂ ಜೊತೆಯಲ್ಲಿ ಬರುತ್ತೇವೆಂದಿದ್ದಾರೆ. ಎಲ್ಲರೂ ಒಟ್ಟಿಗೆ ಹೋಗೋಣ : ಪ್ರೀತಿಯಿಂದ, ಸೌಹಾರ್ದದಿಂದ. ಲಕ್ಷ್ಮಣನು ಭಾಗ್ಯಶಾಲಿ ; ನಮ್ಮಣ್ಣನ ಸಂತತ ಸಹವಾಸ ಅವನಿಗೆ ದೊರಕಿದೆ. ಸೀತಾದೇವಿಯ ಸ್ಥಾನ ತನ್ನ ಪತಿಯ ಜೊತೆಯಲ್ಲಿರುವುದು ಸಹಜ, ನ್ಯಾಯ. ರಾಜನಾಗಿರುವುದಕ್ಕೆ ನಾನು ಎಂದಿಗೂ ಒಪ್ಪುವುದಿಲ್ಲ. ಇನ್ನೂ ಒಂಬತ್ತು ಮತ್ತು ಐದು ವರ್ಷಗಳು ರಾಮನಿಗೆ ಬದಲಾಗಿ ನಾನು ಅರಣ್ಯವಾಸ ಮಾಡುತ್ತೇನೆ. ಅವನಿಗೆ ಉಚಿತವಾದ ಸ್ಥಾನ ಅವನಿಗೆ ದೊರೆಯಲಿ. ಅದು ತಪ್ಪಿದರೆ ಅವನ ಅಪ್ಪಣೆಗಳನ್ನು ನೆರವೇರಿಸುತ್ತ ನಾನೂ ಆತನ ಜೊತೆಯಲ್ಲಿಯೇ ಉಳಿಯುತ್ತೇನೆ. ಈಗ ನನ್ನನ್ನು ದಯವಿಟ್ಟು ಇಲ್ಲಿಂದ ಹೋಗಬಿಡಿ. ನನ್ನ ಇಚ್ಛೆ ನೆರವೇರುವಂತೆ ಹರಸಿ.

(ನಿಷ್ಕ್ರಮಿಸುವನು)

ವಸಿಷ್ಠ ಮತ್ತು ಹಲವು ಮುಖ್ಯರು : ದೊಡ್ಡ ವಂಶಕ್ಕೆ ತಕ್ಕ ಹಿರಿತನದ ಮಗು ಭರತ ! ನಮ್ಮೆಲ್ಲರ ಪ್ರಾರ್ಥನೆಯೂ ಆತನ ಪರವೇ ಆಗಿದೆ. ರಾಮನನ್ನು ಕುರಿತೇ ನಮ್ಮೆಲ್ಲರ ಯೋಚನೆಗಳೂ. ಒಮ್ಮೆ ನಾವೆಲ್ಲ ರಾಮನನ್ನು ಬೇಡಿದ್ದೇವೆ. ನಮ್ಮ ಮನವಿಗಳನ್ನು ಅವನು ಆಗ ಒಪ್ಪಲಿಲ್ಲ. ಪರಿಸ್ಥಿತಿ ಈಗ ಬೇರೆಯಾಗಿದೆ. ಅವನ ಇಚ್ಛೆಯನ್ನು ಬದಲಾಯಿಸೀತೇನೋ ನೋಡೋಣ. ಸ್ವತಃ ಯಾವನಿಗೆ ರಾಜ್ಯ ದತ್ತವಾಗಿತ್ತೊ ಅವನೇ ನೇರ ಹೋಗಿ ರಾಮನು ಹಿಂದಿರುಗಬೇಕೆಂದು ಪ್ರಾರ್ಥಿಸಲಿದ್ದಾನೆ. ಕೈಕಯೀ ದೇವಿ ಎಲ್ಲರೊಡನೆ ಸೇರಿಕೊಂಡಿದ್ದಾರೆ. ಆಕೆಯ ಮೊದಲ ಇಷ್ಟ ನೆರವೇರಲಿಲ್ಲ. ಉಳಿದೆಲ್ಲರ ಪ್ರಾರ್ಥನೆಗಳಿಗೆ ಆಕೆಯ ಹಾರೈಕೆಯೂ ಈಗ ಸೇರಿಕೊಂಡಿದೆ. ರಾಮನ ಹೃದಯ ಕರಗೀತು. ಈಗ ಅವನಲ್ಲಿಗೆ ಹೋಗುವ ಜನವರ್ಗ ಸಂಪೂರ್ಣವಾದುದು. ಅಧಿಕಾರಿಗಳೇ, ಬಂಧುಗಳೇ, ಆಡಳಿತದ ರಾಜಾಜ್ಞೆಗಳು ನೆರವೇರುವಂತೆ ನೋಡಿಕೊಳ್ಳಿ. ಪ್ರಯಾಣದ ಮಾರ್ಗಗಳು ಸುರಚಿತವಾಗಲಿ. ಲೋಕೋಪಯೋಗಿ ವಿಭಾಗದ ಎಲ್ಲರನ್ನೂ ಈ ಕೆಲಸದಲ್ಲಿ ಕೂಡಲೇ ತೊಡಗುವಂತೆ ಮಾಡಿ. ರಾಜ್ಯದ ಸೀಮಾಂತವರೆಗೂ

ಈ ಕಾರ್ಯ ವಿಸ್ತಾರಗೊಳ್ಳಲಿ. ಸಮಸ್ತ ಸಾಗಣೆಕಾರ್ಯ, ಸಂಚಾರಸೌಕರ್ಯ ಏರ್ಪಟ್ಟು ಸಿದ್ಧವಾಗಲಿ. ನಿಲ್ಲುವ ಸ್ಥಾನಗಳಲ್ಲೆಲ್ಲ ಕುದುರೆ ಆನೆ ದಣಿವಾರಿಸಿ ಕೊಳ್ಳುವಂತೆ ಒದಗಿರಲಿ. ಎಷ್ಟು ತ್ವರೆಯಿಂದ ಶಕ್ಯವೊ ಅಷ್ಟು ತ್ವರೆಯಲ್ಲಿ ಕೆಲಸ ಆಗಬೇಕು. ಸಭೆ ಮುಗಿಯಿತು.

(ಎಲ್ಲರೂ ಏಳುತ್ತಾರೆ)

(ತೆರೆ)

## ದೃಶ್ಯ ೨

[ಗಂಗಾ ತಡಿಗೆ ಹೋಗುವ ದಾರಿ. ತನ್ನ ಬೇಹಿನವರಿಗೆ, ಅಂಬಿಗರಿಗೆ, ಸೈನ್ಯದ ಒಂದು ತುಕಡಿಯುವರಿಗೆ]

ಗುಹ : ನದಿಯು ಕಡೆಗೆ ಬರುತ್ತಿರುವ ಜನಸಂದಣಿ ಎಷ್ಟಿರಬಹುದು, ನಿಮ್ಮಲ್ಲಿ ಯಾರಿಗಾದರೂ ಲೆಕ್ಕ ಮಾಡಲು ಬರುತ್ತದೆಯೇ ? ನಿಮ್ಮ ಎಣಿಕೆ ಎಷ್ಟು ?

ಜೊತೆಯುವನು : ಬಹು ದೊಡ್ಡ ಸಂದಣಿ, ಒಡೆಯರೆ. ಹತ್ತಾರು ಸಾವಿರ ಜನ. ಕಣ್ಣು ಎಟಕುವಷ್ಟು ದೂರ ಎತ್ತರದ ಮರಗಳ ಮೇಲೆ ನಿಂತು ನೋಡಿದೆವು. ಬರುತ್ತಿರುವ ಜನಸಂಖ್ಯೆಗೆ ಕೊನೆಯಿಲ್ಲ ! ತ್ವರೆಯಲ್ಲಿ ಬರುತ್ತಿದ್ದಾರೆ, ಹುರುಪಿಂದ—ಜಯ ಸಾಧಿಸುವ ಸೈನ್ಯದಂತೆ.

ಗುಹ : ಧ್ವಜ ಇಕ್ಷ್ವಾಕು ವಂಶದ ಧ್ವಜವಿರುವಂತಿದೆ. ವಾಸ್ತವವಾಗಿ ನೋಡಿದರೆ ಭರತನದಿರಬೇಕು. ಇಷ್ಟು ಹೊತ್ತಿಗೆ ಆತನು ಸಿಂಹಾಸನವೇರಿ ರಾಮನಿರುವಲ್ಲಿಗೆ ಹೋಗಲು ಬಯಸುತ್ತಿರಬಹುದು. ಆದರೆ ದಾರಿಯಲ್ಲಿ ಎರಡಕ್ಕಿಂತ ಹೆಚ್ಚು ದೊಡ್ಡ ನದಿಗಳಿವೆ. ಅವನ್ನು ಇವರು ದಾಟಬೇಕು. ರಾಮನು ನನ್ನ ಸ್ನೇಹಿತ ; ನಾನೊಪ್ಪಿದ ಪರಮಾಧಿಪತಿ. ನನಗೂ ನಿಮಗೂ ಅತಿಥಿಯಾಗಿದ್ದವನು. ನಮ್ಮ ಸೈನ್ಯ ಸಿದ್ಧವಾಗಿರಲಿ. ಸಮಸ್ತ ಸಜ್ಜಿನಲ್ಲಿಯೂ ಇರಲಿ. ರಾಮನಿಗೆ ವಿರುದ್ಧ ವಾಗಿ ಈ ಪ್ರಯಾಣ ನಡೆಯುವ ಕೇಡಿಗತನ ಅವರಿಗೆ ಇರುವ ಹಾಗಿದ್ದರೆ, ಅದು ಎಷ್ಟೇ ಬಲವತ್ತರವಾಗಲಿ, ಆ ಸೈನ್ಯವನ್ನು ನಾವು ಎದುರಿಸಬೇಕು. ಇಲ್ಲಿನ ಎಲ್ಲ ಸಂದಿಗೊಂದಿಗಳನ್ನೂ ಬಲ್ಲವರು ನಾವು. ಬೆಟ್ಟ ಗುಡ್ಡ ಕಣಿವೆ ಹಾದಿ ಗಳನ್ನು ಬಲ್ಲವರು. ಈ ನದಿಯಲ್ಲಿ ಆಳ, ಹಾಯ್ಗಡಗಳು ನಮಗೆ ಗೊತ್ತು. ಇನ್ನೊಂದು ಸಂಗತಿ : ಓ, ಆ ಮೂರು ಮಂದಿಯೂ ನಮ್ಮಲ್ಲಿಗೆ ಬಂದಾಗ

ಅವರ ನಡತೆ ಎಷ್ಟು ಉದಾರ, ಎಷ್ಟು ಗಂಭೀರ! ರಾಮನದು ಎಷ್ಟು ಮೃದು, ರಮ್ಯ ವಿಲಾಸ! ಆತನ ಮಾತು ಎಷ್ಟು ಸವಿ, ಎಷ್ಟು ನುಣು! ಹೇಗೆ ನೋಡಿದರೂ ಉದಾರತೆ, ಗಾಂಭೀರ್ಯ, ಉನ್ನತಿ! ಎಷ್ಟು ಆತ್ಮವಿಶ್ವಾಸ ಆತನದು! ಇಂಥ ರಾಜ್ಯವನ್ನು ಆಳುವುದಕ್ಕೆ ಅಂಥ ದೊರೆಯೇ ಅಗತ್ಯ. ಇದಾರು ? ಸುಮಂತ್ರ ? ರಾಮನಿಗೆ ಗೆಳೆಯ, ಹಿರಿಯ. ನಮ್ಮ ಕಡೆಗೆ ಏಕೆ ಬರುತ್ತಿದ್ದಾನೆ ?

(ಗುಹ ಆತನನ್ನು ಎದುರುಗೊಳ್ಳಲು ಮುಂದುವರಿಯುತ್ತಾನೆ.)

ಸುಮಂತ್ರ : ನಿನ್ನನ್ನು ಕಂಡುದು ಚೆನ್ನಾಯಿತು, ಗುಹ. ನಿನ್ನನ್ನೇ ಮೊದಲು ಕಾಣಬೇಕೆಂದು ನಾನು ಆತುರವಾಗಿದ್ದೆ. ನಮ್ಮನ್ನೆಲ್ಲ ನದಿಯ ಆಚೆ ದಡಕ್ಕೆ ದಾಟಿಸಬಲ್ಲೆಯ ? ಸಾವಿರಾರು ಮಂದಿ ಗಂಡಸರು ಹೆಂಗಸರು ಇದ್ದೇವೆ. ರಥ, ಕುದುರೆ ಇವೆ. ಕುಮಾರ ಭರತ, ಶತ್ರುಘ್ನ, ತಾಯಿ ರಾಣಿಯರು—ಎಲ್ಲ ಜೊತೆಯಲ್ಲಿದ್ದಾರೆ. ಇತರರು ಸಾವಿರಾರು ಮಂದಿ ಗಂಡು–ಹೆಣ್ಣುಗಳು.

(ಇಷ್ಟು ಹೊತ್ತಿಗೆ ಭರತನು ಬಳಿಗೆ ಬಂದು ಸೇರುತ್ತಾನೆ.)

ಸುಮಂತ್ರ : ಈತನು ಗುಹ, ನಮ್ಮ ಗೆಳೆಯ, ನಿಷಾದರ ಒಡೆಯ.

ಭರತ : ಗೆಳೆಯ, ನೀನು ಗುಹನಂತೆ. ನಮ್ಮ ಅಣ್ಣನ ಸ್ನೇಹಿತನಂತೆ. ನಿಮ್ಮಲ್ಲಿ ಒಂದು ರಾತ್ರಿಯನ್ನು ಸುಖವಾಗಿ ಕಳೆಯಲು ರಾಮನಿಗೆ ನೆರವು ದೊರೆಯಿತಂತೆ. ಆ ಮೂವರನ್ನು ನೀನು ನದಿ ದಾಟಿಸಿದೆಯಂತೆ. ನಿನ್ನಲ್ಲಿ ನನ್ನ ಪ್ರಾರ್ಥನೆ ಒಂದಿದೆ. ನಾವು ನದಿಯನ್ನೂ ಈ ಕಾಡು ಭೂಮಿಯನ್ನೂ ಸುರಕ್ಷಿತವಾಗಿ ದಾಟಿ ಹೋಗಬೇಕಾಗಿದೆ. ಈ ಸಮಸ್ತವನ್ನೆಲ್ಲ ದಾಟಿಸಲು ನೀನು ಸಹಾಯ ಮಾಡಬೇಕು. ನಮ್ಮ ಕಥೆಯೆಲ್ಲ ಈವರೆಗೆ ನಿನ್ನ ಕಿವಿಗೆ ಮುಟ್ಟಿರಬೇಕು.

ಗುಹ : ಒಡೆಯರೆ, ನೀವು ನನಗೆ ಅಧಿರಾಜರು. ಮೊದಲು ನಮ್ಮ ಆತಿಥ್ಯವನ್ನು ದಯಮಾಡಿ ಸ್ವೀಕರಿಸಬೇಕು. ಈ ರಾತ್ರಿ ನಮ್ಮಲ್ಲಿ ಎಲ್ಲರಿಗೂ ಸಾಕಾಗುವಷ್ಟು ಹಾಲು ಹಣ್ಣು ಕಾಯಿ ಮಾಂಸ–ಹಸಿ, ಅಟ್ಟದ್ದು–ಇದೆ. ನೂರಾರು ವರ್ಷಗಳಿಂದ ನಮ್ಮದು ಸಾಮಂತ ರಾಜ್ಯ ; ನಚ್ಚಿನ ಸೇವೆ ಸಲ್ಲಿಸುತ್ತ ಅಯೋಧ್ಯೆಯ ರಾಜರಿಗೆ ಅಡಿಯಾಳಾಗಿದ್ದೇವೆ. ರಾಜರು ನಮ್ಮನ್ನು ತುಂಬ ವಿಶ್ವಾಸದಿಂದ ನೋಡಿಕೊಳ್ಳುತ್ತಿದ್ದಾರೆ. ನಮಗೆ ಬೇಕಾಗಿರುವುದು ಏನೂ ಇಲ್ಲ. ನಾವು ಮಿತ್ರವರ್ಗ.

ಭರತ : ನಿನ್ನ ಕರುಣೆ ದೊಡ್ಡದು, ಗುಹ. ಇಷ್ಟು ಉದಾರವಾಗಿ ಇಷ್ಟು ದೊಡ್ಡ ಸಂಖ್ಯೆಯ ಜನಕ್ಕೆ ಆತಿಥ್ಯ ನೀಡುತ್ತಿದ್ದೀಯೆ. ಅದು ನಮಗೆ ಒಪ್ಪಿತು. ಆದರೆ

ಸಮಸ್ತ ಸಂಭಾರಗಳೊಡನೆಯೂ ನಾವು ಬಂದಿದ್ದೇವೆ. ನದಿಯನ್ನು ದಾಟುವ ಕಾರ್ಯದಲ್ಲಿ ಮಾತ್ರ ನಮಗೆ ಸಹಾಯ ಬೇಕು.

ಗುಹ : ಅಪ್ಪಣೆಯಾದರೆ ಒಂದು ಸಣ್ಣ ಪ್ರಾರ್ಥನೆ ಮಾಡಬಹುದೆ ? ನನಗೆ ಇಲ್ಲಿನ ದಾರಿಗಳೆಲ್ಲ ಚೆನ್ನಾಗಿ ಗೊತ್ತು. ಭರದ್ವಾಜಾಶ್ರಮದವರೆಗೆ ನಿಮ್ಮನ್ನು ದಾರಿ ತೋರಿಸಿಕೊಂಡು ಹೋಗುವುದಕ್ಕೆ ಸಾಕಾಗುವಷ್ಟು, ಎರಡು ನದಿಗಳನ್ನು ದಾಟಿಸುವಷ್ಟು ಮಂದಿ ಜನರನ್ನು ಕಳಿಸಬಲ್ಲೆ. ನಾನೇ ದಾರಿಯುದ್ದಕ್ಕೂ ನಿಮ್ಮ ಜೊತೆಯಲ್ಲಿ ಬರಬಲ್ಲೆ. ನನಗೆ ಒಂದು ಸಮಾಧಾನ ಬೇಕು. ರಾಮನು ವಿಶ್ರಮಿಸುತ್ತಿರುವ ಪ್ರದೇಶಕ್ಕೆ ಹೋಗುತ್ತಿರುವ ನಿಮ್ಮ ಮನಸ್ಸನ್ನು ನಾನು ಅರಿಯಬೇಕು. ಇಷ್ಟು ದೊಡ್ಡ ಸೈನ್ಯ ನಿಮ್ಮ ಹಿಂದಿರುವುದು ನನಗೆ ಭೀತಿ, ಸಂಶಯ, ಕಾತರ ಉಂಟುಮಾಡುತ್ತಿದೆ. ಶಾಂತವಾಗಿಯೂ ಯಾವ ಕೆಡುಕೂ ಆಗದೆಯೂ ರಾಮನು ಇರಬೇಕೆಂಬುದು ನನ್ನ ಇಚ್ಛೆ.

ಭರತ : ಓ, ಏನು ದುಃಖ ಇದು ! ನನ್ನ ನಡತೆಯನ್ನು ವಿಶದಪಡಿಸಬೇಕಾದ ದುರ್ಗತಿಗೆ ಈಡಾಗಬೇಕಾಗಿದೆ ! ಗೆಳೆಯ, ನೀನು ಸಂಶಯಪಡಬೇಕಾದ ಸಮಯ ವೆಂದಿಗೂ ಬಾರದಿರಲಿ. ರಾಮ ನನ್ನ ಅಣ್ಣ, ನನಗೆ ಹಿರಿಯ. ತಂದೆಯ ಸಮಾನ. ಈಗ ನಾನು ನನ್ನ ಜನರೊಡನೆ ಹೊರಟಿರುವುದು ಆತನನ್ನು ರಾಜಧಾನಿಗೆ ಮರಳಿ ಕರೆತರುವುದಕ್ಕೆ. ಅವನು ಸಿಂಹಾಸನವನ್ನು ಏರಬೇಕೆಂದು ಕೇಳಿಕೊಳ್ಳಲು.

(ಗುಹನಿಗೆ ತುಂಬಾ ಸಂತೋಷವಾಗುತ್ತದೆ.)

ಗುಹ : ಒಡೆಯ ಭರತ, ನೀವು ನಿಜವಾಗಿ ಬಹುದೊಡ್ಡವರು. ಈ ನಡತೆಯಂಥು ದನ್ನು ನಾನು ಈವರೆಗೆ ಕೇಳಿಲ್ಲ. ಕಂಡಿಲ್ಲ. ಪ್ರಯತ್ನವೇ ಇಲ್ಲದೆ ದೊಡ್ಡ ರಾಜ್ಯ ನಿಮಗೆ ಬಂದಿದೆ. ಅದನ್ನು ಬಿಟ್ಟುಕೊಟ್ಟು ಅಣ್ಣನಿಗೆ ಒಪ್ಪಿಸುವುದು ನಿಮ್ಮ ಇಚ್ಛೆಯಾಗಿದೆ. ರಾಜ್ಯದ ಹೊರಕ್ಕೆ ಕಳಿಸಿದ ರಾಮನನ್ನು ಪುನಃ ಉಚಿತವಾದ ತನ್ನ ಸ್ಥಾನಕ್ಕೂ ನಾಡಿಗೂ ಕರೆತರುವುದು ನಿಮ್ಮ ಉದ್ದೇಶವಾಗಿದೆ. ನಿಮ್ಮ ಕೀರ್ತಿ ಭೂಮಿಯ ಮೇಲೆ ಎಂದೆಂದಿಗೂ ಉಳಿದಿರುತ್ತದೆ.

ಭರತ : ಅದು ಬೇಡ ಇಲ್ಲಿ, ಗುಹ. ನಿಮ್ಮಲ್ಲಿದ್ದಾಗ ಅಣ್ಣ ಅತ್ತಿಗೆ ಹೇಗಿದ್ದರು, ತಿಳಿಸು : ನನಗೆ ತುಂಬ ಸಂತೋಷವಾಗುತ್ತದೆ. ಆ ರಾತ್ರಿ ವಿಶ್ರಮಿಸುವ ಮುಂಚೆ ಏನೇನು ನಡೆಯಿತು ? ಅವರು ಹೇಗಿದ್ದರು ?

ಗುಹ : ನನ್ನ ಕಡೆಯ ಜನರಿಗೆಲ್ಲ ಇದನ್ನು ಹೇಳು : ರಾತ್ರಿಯ ವಿಶ್ರಾಂತಿಗೆ ಇವರೆಲ್ಲರಿಗೂ ತಕ್ಕಂತೆ ಅನುಕೂಲವಾದ ಸಜ್ಜು ಸೌಕರ್ಯಗಳನ್ನು ಒದಗಿಸಿ. ಅವರು ಬೇಡುವುದನ್ನೆಲ್ಲ ಅವರಿಗೆ ಕೊಡಿ. ನಮ್ಮಲ್ಲಿರುವ ದೊಡ್ಡ ದೋಣಿಗಳನ್ನು

ಪ್ರಯಾಣಕ್ಕೆ ಸಿದ್ಧಮಾಡಿ : ಭರದ್ವಾಜರ ಆಶ್ರಮದ ಕಡೆಗೆ ಹೋಗಬೇಕು. ಯಾನ ಪಾತ್ರಗಳು ಶುಚಿಯಾಗಿರಲಿ. ಎಚ್ಚರಿಕೆಯಿಂದ, ಅತಿಥಿಗಳ ಸೌಕರ್ಯ ದೃಷ್ಟಿಯಿಂದ ಎಲ್ಲವೂ ಅಣಿಯಾಗಲಿ.

ಜೊತೆಯ ನಾಯಕ : ಅಪ್ಪಣೆ.

ಗುಹ : (ಭರತನಿಗೆ) ಹೌದು, ಸ್ವಾಮಿ. ನಾವು ಅತ್ತಿತ್ತ ಸುತ್ತಿಕೊಂಡು ಬರೋಣ. ಆ ರಾತ್ರಿ ರಾಮ ಎಲ್ಲಿ ಮಲಗಿಕೊಂಡ ಎಂಬ ಸ್ಥಳವನ್ನು ತೋರಿಸುತ್ತೇನೆ. ಆತನಿಗೆ ನನ್ನ ಪ್ರಣಾಮಗಳನ್ನು ಸೂಚಿಸಿದೆ—ಬಂದ ಕೂಡಲೇ. ಆತಿಥ್ಯಕ್ಕೂ ವಸತಿಗೂ ಎಲ್ಲವೂ ಸಿದ್ಧವಾಗಿದ್ದವು. ಅವರು ಯಾವುವನ್ನೂ ಸ್ವೀಕರಿಸಲಿಲ್ಲ, ಗೊತ್ತೆ? 'ನಾವು ಕ್ಷತ್ರಿಯರು. ಇನ್ನೊಬ್ಬರು ಕೊಟ್ಟುದನ್ನು ತೆಗೆದುಕೊಳ್ಳುವುದಿಲ್ಲ. ನಮ್ಮ ಧರ್ಮ ಕೊಡುವುದು' ಎಂದರು. ಲಕ್ಷ್ಮಣನಿಗೆ ಹೇಳಿ ಶುದ್ಧವಾದ ನೀರನ್ನು ತರಿಸಿದರು, ಕುಡಿದರು ; ರಾತ್ರಿ ಉಪವಾಸವಿದ್ದರು. ಇಲ್ಲಿ ಈ ಇಂಗುದೀ ಮರವಿದೆಯಲ್ಲ, ನೋಡಿ, ಅದರ ಕೊಂಬೆ ರೆಂಬೆಗಳು ವಿಸ್ತಾರವಾಗಿ ಹಬ್ಬಿದೆ. ಲಕ್ಷ್ಮಣ ದೇವನು ಸಾಕಾದಷ್ಟು ದರ್ಭೆಯನ್ನು ಕತ್ತರಿಸಿ ತಂದು ನೆಲದ ಮೇಲೆ ಹಾಸಿದನು. ಅವರ ನಾರು ಬಟ್ಟೆಗಳನ್ನು ಹಾಸಿದನು. ಅಣ್ಣನಿಗೂ ಅತ್ತಿಗೆಗೂ ಹೀಗೆ ಹಾಸಿಗೆ ಹಾಸಿ ಕೊಟ್ಟು ರಾತ್ರಿಯೆಲ್ಲ ಲಕ್ಷ್ಮಣನು ಎಚ್ಚೆತ್ತು ಕಾವಲಿದ್ದನು. ತನ್ನ ಬಿಲ್ಲು-ಬಾಣಗಳನ್ನು ಹಿಡಿದು ನಿದ್ರೆ ಮಾಡದೆ ಎಚ್ಚರವಾಗಿ ಇದ್ದನು. ನನಗೆ ಆ ಅವಕಾಶವನ್ನು ಕೊಡಲಿಲ್ಲ. ಎಷ್ಟೋ ಬೇಡಿಕೊಂಡೆ, ನಾನು ಸ್ವಲ್ಪ ಹೊತ್ತು ಕಾದಿರುತ್ತೇನೆ, ನೀನು ಆ ಮಟ್ಟಿಗೆ ವಿಶ್ರಮಿಸಿಕೊ ಎಂದೆ. ಒಪ್ಪಲಿಲ್ಲ. ರಾಮನಿಗೆ ನಾನು ಸ್ನೇಹಿತ, ಸ್ವಂತವಾಗಿ ನಾನೇ ನನ್ನ ಸಂಗಡಿಗರೊಡನೆ ಎಚ್ಚೆತ್ತಿದ್ದು ಜೊತೆಯಲ್ಲಿ ಬಂದವರಿಗೆ ಯಾವ ಕೇಡೂ ಆಗದಂತೆ ಕಾವಲಿರುತ್ತೇನೆ ಎಂದೆ. ಲಕ್ಷ್ಮಣನು ಏನು ಹೇಳಿದ ಗೊತ್ತೆ ?—'ಅದು ಹೇಗೆ ಆಗುತ್ತದೆ, ಗುಹ ? ಮಾನವ ಕುಲದಲ್ಲಿ ಹುಟ್ಟಿದ ಒಬ್ಬ ದೊಡ್ಡ ರಾಜ ಈ ದಿನ ನೆಲದ ಮೇಲೆ ಮಲಗಲು ತೀರ್ಮಾನಿಸಿದ್ದಾನೆ. ಯಾವ ಸುಖ ಸೌಕರ್ಯಕ್ಕೆ ಆತನಿಗೆ ಕೊರತೆ ಇತ್ತು ? ಶಕ್ತವಾದ ಅವನ ದೀರ್ಘ ಬಾಹುಗಳು ಸಮಸ್ತ ಭೂಲೋಕವನ್ನೂ ಕಾಪಾಡಲು ಶಕ್ತವಾಗಿವೆ. ಅವನು ಕೋಪಿಸಿಕೊಂಡರೆ ದೇವತೆಗಳಿಗೇ ಭಯ. ಅಂಥವನೂ ಸುಕುಮಾರಿಯಾಗಿ ಬೆಳೆದ ಸೀತೆಯೂ ಅಂಥುದೇ ಹಾಸಿಗೆಯಲ್ಲಿ ಮಲಗಿದ್ದಾರೆ. ಮೃದುವಲ್ಲ, ಕಠಿಣವಾದ ನೆಲ. ಅದರ ಮೇಲೆ ಮಲಗುವುದು ಏನು ಎಂಬುದರ ಪರಿವೆಯೇ ಆಕೆಗಿಲ್ಲ. ಈ ದಿನ ನನಗೆ ಹೇಗೆ ಬಂದೀತು ? ಬೇಡ, ಗೆಳೆಯ. ನಾನು ಕಾವಲಿರುತ್ತೇನೆ. ನನ್ನ ಕುರಿತು ನಿದ್ದೆ ಚಿಂತೆ ಬೇಡ' ಎಂದ. ಸ್ವಲ್ಪ ದೂರ ಸರಿದು ಹೋಗಿ ನಿರೀಕ್ಷಿಸುತ್ತ ಒಂದು ಮಾತನ್ನೂ ಆಡದೆ ಕಾವಲು ನಿಂತ. ಉದ್ದಕ್ಕೆ ರಾತ್ರಿಯೆಲ್ಲ ನಾನೂ ಅವನೊಡನೆ ನಿಂತಿದ್ದೆ.

ಭರತ : ಯಾವ ಸ್ಥಿತಿಗೆ ನಾವು ಅಣ್ಣನನ್ನು ತರಬೇಕಾಯಿತು ? ಲಕ್ಷ್ಮಣನು ಪುಣ್ಯಶಾಲಿ, ಅಣ್ಣನಿಗೆ ಈ ಸೇವೆ ಸಲ್ಲಿಸುವುದಕ್ಕೆ. ಹಗಲು–ಇರುಳು. ವನವಾಸದ ಅವಧಿಯ ಪ್ರತಿದಿನದ ಪ್ರತಿಗಂಟೆ. ಅಷ್ಟು ಕಾಲವೂ. ನಾನೇನಾಗಿದ್ದೆ ? ನಾನು ಮಾಡಿರುವುದೇನು ?

ಗುಹ : ಸರಿಯಾದ್ದನ್ನೇ ಮಾಡುತ್ತಿದ್ದೀರಿ.

ಭರತ : ಗುಹ, ರಾಮನಿಗೆ ಒಳ್ಳೆಯದಾಗಲಿ ಎಂದು ಬಯಸುವ ಸ್ನೇಹಿತರೆಲ್ಲರೂ ನನ್ನ ಯತ್ನ ಸಿದ್ಧಿಸಲಿ ಎನ್ನಿ. ನಾವೆಲ್ಲ ಈ ಯತ್ನ ನೆರವೇರಲಿ ಎಂದು ದೇವತೆಗಳನ್ನು ಪ್ರಾರ್ಥಿಸೋಣ.

ಗುಹ : ನೀವು ಬಹು ದೊಡ್ಡ ಮನಸ್ಸಿನವರು, ಒಡೆಯರೆ. ಶುಚಿಗಳು, ಸತ್ಯವಂತರು ; ನಿಮ್ಮ ಹೃದಯ ಕೋಮಲವಾದ್ದು. ನಮ್ಮ ಪರಮಾಕಾಂಕ್ಷೆ ನಿಮ್ಮೊಡನಿದೆ. ಎಲ್ಲ ಪ್ರಯತ್ನದಿಂದಲೂ ನಿಮ್ಮನ್ನು ನದಿ ದಾಟಿಸುತ್ತೇನೆ. ನಾಳೆ ಬೆಳಿಗ್ಗೆ ಮೈತ್ರೀ ಮುಹೂರ್ತದಲ್ಲಿ ಪ್ರಯಾಣ ತೊಡಗೋಣ. ಸುರಕ್ಷಿತವಾಗಿ ವಿಶ್ರಾಂತಿ ಪಡೆಯಿರಿ. ಈ ರಾತ್ರಿ ಎಲ್ಲಾ ಒಳ್ಳೆಯದಾಗಲಿ.

(ತೆರೆ)

## ದೃಶ್ಯ ೩

[ಚಿತ್ರಕೂಟ ಪ್ರಾಂತದಲ್ಲಿ ಬೆಟ್ಟಗಳ ಮೇಲೂ ಇಳಿಜಾರು ಪ್ರದೇಶಗಳಲ್ಲಿಯೂ ಕಾಡಿನ ನಡುನಡುವೆಯೂ ಇರುವ ಹಸಿರುಗಾವಲಿನ ಹಸಲೆ ಪ್ರದೇಶ. ರಾಮ ಸೀತೆ ಆಟ ವಿನೋದಗಳಲ್ಲಿ ಕಾಲಕಳೆಯುತ್ತಿದ್ದಾರೆ.]

ರಾಮ : ಈ ಬೆಟ್ಟಗಳು, ಕಾಡುಗಳು ಎಷ್ಟು ಚೆಲುವಾಗಿವೆ, ಸೀತಾ ! ಅಯೋಧ್ಯೆಯಿಂದ ಬಂದು ಈ ಕಾಡಿನಲ್ಲಿದ್ದರೂ ರಾಜ್ಯ ನನಗೆ ಹೋಯಿತೆಂಬ ನಷ್ಟದ ಭಾವನೆ ಒಂದಿಷ್ಟೂ ಬರುವುದಿಲ್ಲ. ಜೊತೆಗೆ ನೀನಿದ್ದೀಯೆ. ಸೇವೆಯಲ್ಲಿ ತನ್ನನ್ನು ಮರೆತು ಲಕ್ಷ್ಮಣನು ದುಡಿಯುತ್ತಿದ್ದಾನೆ. ಅವನು ನಮಗಾಗಿ ಕಟ್ಟಿರುವ ಎಲೆಮನೆ ಬಹು ಅಂದವಾಗಿದೆ. ಅಚ್ಚುಕಟ್ಟಾಗಿದೆ. ಅವನು ಜೊತೆಯಲ್ಲಿ ಇರಲು ನಮಗೆ ಯಾವ ಕೊರತೆ ಇಲ್ಲ. ತಂದೆಯ ಕೈ ನನ್ನನ್ನು ಕಾಯುತ್ತಿರುವಂತಿದೆ. ತಂದೆಯಂತಹ ಪ್ರೀತಿ, ಆದರ ಅವನದು ! ನೀರು ಸಂಗ್ರಹವಾಗಿರುತ್ತದೆ. ಆಹಾರ ಅಟ್ಟಿರುತ್ತದೆ. ಹಕ್ಕಿ, ಪ್ರಾಣಿ, ಹೂ, ಕಂದ, ಮೂಲ,

ಹಣ್ಣು ಎಲ್ಲವನ್ನೂ ತಂದಿರಿಸುತ್ತಾನೆ. ಹಾಸಿಗೆ ಹಾಸುತ್ತಾನೆ. ಅವನ ರಕ್ಷಣೆಯನ್ನು ನೆಚ್ಚಬಹುದು. ನನಗಿನ್ನೇನು ಬೇಕು ? ಸ್ತ್ರೀಪುರುಷರು ಇರುವ ಪ್ರಪಂಚವನ್ನೂ ಗೆಳೆಯರನ್ನೂ ಮರೆತಂತೆ ನೀನು ನಡೆದುಕೊಳ್ಳುತ್ತಿದ್ದೀ. ನಾನಲ್ಲದೆ ಬೇರೆ ಸಂಗಡಿಗರಿಲ್ಲ. ಯಾವ ಕುಶಲಕಾರ್ಯಗಳೂ ಹಬ್ಬಹುಣ್ಣಿಮೆಗಳೂ ಸಂತೋಷದ ಉತ್ಸವಗಳೂ ಇಲ್ಲ. ನಿನ್ನ ಮುಖಕ್ಕೂ ಅಂಗಾಂಗಗಳಿಗೂ ಹೊಸ ರಂಗು ಬಂದಿವೆ. ಸ್ವಲ್ಪ ಬಾಡಿದ ಹಾಗೆ ಕಾಣುತ್ತೀಯೆ, ನಿಜ. ಬಹು ಸ್ವಲ್ಪ. ಆದರೆ ನಿರಾಳವಾದ ಆಟವಿನೋದಗಳಲ್ಲಿ ತೊಡಗಿರುತ್ತ ಹಿಂದಿಗಿಂತ ಹೆಚ್ಚು ಆರೋಗ್ಯವಂತಳಾಗಿ ಕಾಣುತ್ತೀಯೆ. ಕಾಡು ಪಾರಿವಾಳಗಳು ಗೆಳೆಯರು. ನವಿಲು, ಕಾಡು ಹೇಂಟೆ, ಜಿಂಕೆ, ಮೊಲ ಬಳಿಗೆ ಬಂದು ನಿನ್ನ ಮಡಿಲಲ್ಲಿ ಕುಳಿತುಕೊಳ್ಳುತ್ತವೆ. ಹಣ್ಣು, ಹೊಸ ಮಾಂಸಗಳ ರುಚಿ ; ಪಕ್ಷಿಗಳ ಶಬ್ದ ಉಲಿ ; ನಾನಾ ಬಗೆಯ ಬಂಡೆಗಳ ಬಣ್ಣ, ಬಾನ ಬಗೆ ಬಗೆ ನೋಟ ; ಸೂರ್ಯನ ಮೂಡು ; ಪಡು ; ಗಂಭೀರವಾಗಿ ಹರಿದುಹೋಗುವ ಮಂದಾಕಿನಿಯ ನೀರು ; ಕರ್ಣಿಕಾರ, ತಾವರೆ—ಈ ಪ್ರತಿಯೊಂದೂ ಅದರದರದೇ ಸಂತೋಷವನ್ನೂ ಹಿಗ್ಗನ್ನೂ ನಿನಗೆ ತರುವಂತಿದೆ. ಅವು ನನ್ನ ಮನಸ್ಸನ್ನು ತಣಿಸುವ ಉಲ್ಲಾಸಗಳಾಗಿವೆ. ನಿನ್ನ ಕಾಲುಗಳಿಗೆ ನೆಲ ಗಡುಸಲ್ಲ. ನದಿಗೆ ಒಂಟಿಯಾಗಿ ಸ್ನಾನಕ್ಕೆ ಹೋಗಲು ಭಯವಿಲ್ಲ....

ಸೀತಾ : ಓ, ಕವಿಯ ಹಾಗೆ ಮಾತನಾಡುತ್ತಿದ್ದೀರಿ !

ರಾಮ : ಈ ಸ್ಥಳ ಯಾರನ್ನೂ ಕವಿಯಾಗಿ ಮಾಡುತ್ತದೆ ! ನೆಲವೊ ಕಾಡೊ—ಅವಕ್ಕೆ ಒಲಿದರೆ ತಮ್ಮದಾದ ವಿಶೇಷ ಸಂತೋಷವನ್ನು ಅವು ಕೊಡುತ್ತವೆ. ಆಗಾಗ ನನ್ನ ಮನಸ್ಸನ್ನು ಸ್ವಲ್ಪ ಕಳಲಿಸುವಂತೆ ನನ್ನ ಕಣ್ಣೆದುರಿಗೆ ಪ್ರೀತಿಯ ತಾಯಿ ಕೌಸಲ್ಯೆಯದೊ ತಂದೆಯದೊ ಚಿಕ್ಕ ತಾಯಿ ಸುಮಿತ್ರೆಯದೊ ಮುಖಗಳು ಕಂಡಂತೆ ಆಗುತ್ತದೆ. ಈ ಹತ್ತು ದಿನಗಳಿಂದ ಮುಂದೆ ಹದಿನಾಲ್ಕು ನಿಡಿದಾದ ವರ್ಷಗಳಿಗಿಂತ ಹೆಚ್ಚಿನ ಕಾಲದಲ್ಲಿ ಅವರಿಗೆ ಏನಾಗಲಿವೆಯೊ ! ಕಾಡಿನ ಜೀವನದ ಕಷ್ಟಗಳನ್ನು ಅಡ್ಡಿ ಆತಂಕಗಳನ್ನು ಕುರಿತು, ನಮ್ಮನ್ನು ಕುರಿತು ಅವರು ಚಿಂತಿಸುತ್ತಿರುತ್ತಾರೆ. ಪಾಪ....

ಸೀತಾ : ನಿಮ್ಮ ಜೊತೆಗೆ ನನಗೂ ಅದೇ ಕಲ್ಪನೆ. ಆದರೆ ನಿಮ್ಮೊಡನಿರುವಾಗ ಅರಣ್ಯ ನನಗೆ ಸ್ವರ್ಗವಾಗಿದೆ. ಒಂದೆರಡು ಕ್ಷಣ ನಿಮ್ಮ ತಾಯಿ ತಂದೆ, ಲಕ್ಷ್ಮಣನ ತಾಯಿ ಮತ್ತು ಒಬ್ಬಿಬ್ಬರು ಗೆಳತಿಯರ ಮುಖ ನನಗೂ ನೆನಪಿಗೆ ಬರುತ್ತಿರುತ್ತವೆ. ಆದರೆ ಮದುವೆಯಾದ ಮೇಲೆ ನನ್ನ ತಾಯಿ ತಂದೆಯರನ್ನೇ ಮರೆಯಲು ನಾನು ಕಲಿತಿಲ್ಲವೆ ? ಅಗಲಿಕೆಯ ಗಾಯ, ನೆತ್ತರ ಚಿಮ್ಮು ಇವನ್ನು ಹೊಸ ಕಂಡ ಪ್ರೀತಿ ನಿಲ್ಲಿಸುತ್ತದೆ, ಮಾಯಿಸುತ್ತದೆ. ನಡೆಯುತ್ತಿರುವ ಕಾಲದಲ್ಲಿ ಸುಖವಾಗಿ

ಬಾಳಲು ಕಲಿಯುತ್ತೇವಲ್ಲವೆ ? ಇದು ಈಗ ಬೇಕಾದಷ್ಟು ಸಂತೋಷ ತಂದಿದೆ.

ರಾಮ : ಈಗ ನೋಡು, ಈ ದೊಡ್ಡ ಚೌಕವಾದ ಅರೆಬಂಡೆಯ ಹತ್ತಿರ ಬಂದಿದ್ದೇವೆ. ಲಕ್ಷ್ಮಣನು ಏನೇನೊ ಸಿದ್ಧ ಮಾಡಿರುವ ಹಾಗೆ ಕಾಣುತ್ತಿದೆ. ಈ ದಿನ ಅವನು ಏನೊ ವಿಶೇಷ ಅಡುಗೆ ಮಾಡಿರುತ್ತಾನೆ. ಒಂದೆರಡು ಹೊಸ ಪದಾರ್ಥಗಳನ್ನು ಮಾಡಿರುತ್ತೇನೆ ಎಂದಿದ್ದ. ಅಡುಗೆಯ ಚಾತುರ್ಯವನ್ನು ಅವನು ಎಲ್ಲಿ ಯಾವಾಗ ಕಲಿತನೊ ಗೊತ್ತಿಲ್ಲ ! ಎಷ್ಟು ಚೆನ್ನಾಗಿ ಮಾಡುತ್ತಾನೆ ! ದಿನಾ ಅವನ ಬಾಣಸ ಮೇಲಾಗುತ್ತಿದೆ. ನಮ್ಮಲ್ಲಿರುವ ಅಕ್ಕರೆ, ಆಸ್ಥೆ ಕಾರಣ ; ಹಣ್ಣಾಗುತ್ತಿದೆ.

ಸೀತಾ : ತನ್ನ ಕೆಲಸದಲ್ಲಿ ಪರಿಚಾರಿಕೆಯನ್ನಾದರೂ ಸಲ್ಲಿಸಲು ನನಗೆ ಅವನು ಅವಕಾಶ ಕೊಡುತ್ತಿಲ್ಲ. ನನ್ನ ಬೆರಳು, ಅಂಗೈ ಮೃದುತೆ ಕಳೆದುಕೊಳ್ಳುತ್ತವಂತೆ ! ಬಿಸಿಲು ಒಡಲನ್ನು ಕಂದುಗೊಳಿಸುತ್ತದಂತೆ ! ನೋಡಿ, ಅವನು ಹೇಳಿದ : 'ರಾಮನನ್ನು ತಂದೆ ದಶರಥನೆಂದೂ ನಿಮ್ಮನ್ನು ತನ್ನಂತೆಯೇ ಕಾಣಬೇಕೆಂದೂ ನನಗೆ ತಾಯಿ ಸುಮಿತ್ರೆ ಹೇಳಿದ್ದಾಳೆ. ನಿಮಗೆ ಸೇವೆ ಸಲ್ಲಿಸುವುದು ನನ್ನ ಕಾರ್ಯ. ಅದು ನನ್ನ ಬದುಕಿನ ಕಾಲದಲ್ಲಿ ನನ್ನ ಒಂದೇ ಕೆಲಸ ; ಸಂತೋಷ. ಈ ಹದಿನಾಲ್ಕು ವರ್ಷ ವನವಾಸ ಕಾಲದಲ್ಲಿ ಅದು ನನ್ನ ಪಾಲಾಗಿರಲಿ' ಎಂದೆಲ್ಲ ಹೇಳಿದ ...

ರಾಮ : ನೋಡು, ಅಗೋ ಬಂದ ; ಊಟ ತರುತ್ತಿದ್ದಾನೆ.

(ಲಕ್ಷ್ಮಣನು ಆಹಾರವನ್ನು ತಂದು ದೊಡ್ಡ ಎಲೆಗಳ ಮೇಲೆ ಬಡಿಸುತ್ತಾನೆ)

ಲಕ್ಷ್ಮಣ : ಇವೊತ್ತಿನ ಊಟ ವಿಶೇಷವಾದ್ದು, ಅಣ್ಣ. ಒಳಗೆ ಹೋಗಿ ಬೇಗ ನೀರು ತರುತ್ತೇನೆ.

ರಾಮ : ಅವನು ಹೇಳಿದಂತೆಯೇ ಆಗಿದೆ : ನಾಲ್ಕೈದು ಬಗೆಯ ಪದಾರ್ಥಗಳು. ಒಂದು ಬೇಲದ ಹಣ್ಣು, ಹಲಸು, ಬಾಳೆ, ಜೇನಿಂದ ಮಾಡಿದ್ದು. ಇದು ಗೆಣಸನ್ನೂ ಇನ್ನೇನೊ ಕಂದ ಮೂಲಗಳನ್ನೂ ಸೇರಿಸಿ ಮಾಡಿದ್ದು. ಬಿಸಿಬಿಸಿಯಾಗಿದೆ. ಎರಡು ಬಗೆಯ ಮಾಂಸಗಳ ಅಡುಗೆ ಇದು. ಇವನ್ನು ಎಷ್ಟು ಚೆನ್ನಾಗಿ ಹುರಿದು ಮಾಡಿದ್ದಾನೆ ! ಒಂದೇ ಹದದಲ್ಲಿ ಅಟ್ಟುದು. ಇದು ಜಿಂಕೆಯ ಮಾಂಸ ; ಇನ್ನೊಂದು ವರಾಹದ್ದು. ಇದನ್ನು ಕಂಡೊಡನೆ ಬಾಯಲ್ಲಿ ನೀರೂರುತ್ತದೆ.

(ಹಿಂದಿನ ದನಿಯಾಗಿ : ಇದಂ ಮೇಧ್ಯಂ ಇದಂ ಸ್ವಾದು ನಿಷ್ಟಪ್ತಂ ಇದಂ ಅಗ್ನಿನಾ)

ಇದರ ಪರಿಮಳ ಅಷ್ಟೇ ಸಾಕು. ಹಸಿವಿದ್ದರೆ ಅಡಗುತ್ತದೆ. ನೋಡು, ರುಚಿ

ನೋಡು, ಸೀತೆ ; ಕಾರ, ಸಿಹಿ ಎರಡೂ ಇವೆ. ಬಗೆಗೆ ಮೀರಿದಷ್ಟು ಸ್ವಾದುವಾದ ಜೀವನ ಇದು.

(ಊಟ ಮುಗಿವ ಮುಂಚೆ ಒಂದು ಜನಸಂದಣಿಯ ಶಬ್ದ ಕೇಳಿ ಬರುತ್ತದೆ. ದೂರದಿಂದ ಕೊಂಬು ಕಹಳೆ ಶಂಖಗಳ ಮೊಳಗು, ರಥದ ಗಾಲಿಗಳು ಚಲಿಸುತ್ತಿರುವಂತೆ, ರಾಹುತರು ಕುದುರೆಗಳನ್ನು ನಡಸಿಕೊಂಡು ಬರುವಂತೆ ಶಬ್ದ. ಒಂದು ದೊಡ್ಡ ಸೈನ್ಯಕ್ಕೆ ಅಪ್ಪಣೆ ಕೊಡುವ ಶಬ್ದ. ಕ್ಷಣ ಕ್ಷಣಕ್ಕೆ ಹತ್ತಿರ ಬರುವಂತೆ ಕೇಳಿಸುತ್ತದೆ. ಆದರೂ ಅದು ಇನ್ನೂ ಈ ಗುಡ್ಡದ ಆ ಆಚೆಯಿಂದ.)

ರಾಮ : ಲಕ್ಷ್ಮಣ, ನೋಡು, ಇದೇನು, ಬಾನವರೆಗೂ ದೂಳೆದ್ದು ಕಾಣುತ್ತಿದೆ ! ಹಕ್ಕಿಗಳು ಭಯದಿಂದ ಕೂಗುತ್ತ ಎಲ್ಲಾ ದಿಕ್ಕುಗಳಲ್ಲಿಯೂ ಹಾರಿ ಹೋಗುತ್ತಿವೆ ! ಸಾಧು ಪ್ರಾಣಿಗಳೂ ಕ್ರೂರ ಜಂತುಗಳೂ ಭಯಗೊಂಡು ಓಡುತ್ತಿವೆ ! ಜೀವಕ್ಕೆ ಏನು ಹಾನಿ ಬರುವುದೊ ಎಂಬ ಬೆದರಿಕೆಯಿಂದ ಎಂಬಂತೆ ದಿಕ್ಕು ಪಾಲಾಗಿ ಓಡುತ್ತಿರುವಂತಿದೆ. ಕೇಳಿಸುವ ಶಬ್ದವಂತೂ ಬಹುಸಂಖ್ಯೆಯವರಿಂದ ಬಂದಂತಿದೆ. ಬೇಗ ಮಾಡು. ಈ ಸಾಲವೃಕ್ಷವನ್ನು ಏರಿ ನೋಡು. ಮೇಲೆ ಆಕಾಶದಲ್ಲಿ ದೂಳು ಹಬ್ಬಿರುವುದರಿಂದ ನನಗೇನೂ ಕಾಣಿಸುವುದಿಲ್ಲ. ಏನೊ ಹೇಗೊ ? ಯಾರಾದರೂ ರಾಜರು ಈ ದಾರಿಯಲ್ಲಿ ಬರುತ್ತಿದ್ದಾರೊ ? ಅಥವಾ, ಬೇಟೆಗಾರರ ರಂಪವೊ—ನೋಡಿ ಹೇಳು. ಆದರೂ ಶಬ್ದದ ಲಕ್ಷ್ಯವನ್ನು ನೋಡಿದರೆ ಸಾಧುವಾಗಿದೆ ; ಸಮಾಧಾನದಿಂದ ಇರುವಂತಿದೆ. ದೊಡ್ಡದಾದ ಜನಸಂದಣಿ ಒಂದು ಕ್ರಮದಿಂದ ಬರುತ್ತಿರುವಂತಿದೆ. ಸಂಖ್ಯೆ ಬಹು ಹೆಚ್ಚಿನದಿರ ಬೇಕು.

ಲಕ್ಷ್ಮಣ : ದೇವರಾಣೆಗೂ ನಮ್ಮ ಜೀವಕ್ಕೆ ಅಪಾಯ ತಟ್ಟುತ್ತಿರುವಂತೆ ಕಾಣುತ್ತಿದೆ. ಅಣ್ಣ, ನೀನು ಪರ್ಣಶಾಲೆಯೊಳಕ್ಕೆ ಅತ್ತಿಗೆಯನ್ನು ಕರೆದುಕೊಂಡು ಹೋಗು. ಆಕೆಗೆ ರಕ್ಷಣೆ ಬೇಕು. ನಿನ್ನ ಧನುರ್ಬಾಣಗಳನ್ನು ಕೈಗೆ ತೆಗೆದುಕೊ ; ಖಡ್ಗ ಹಿಡಿದುಕೊ. ನಾನೂ ಹಾಗೇ ಮಾಡುತ್ತೇನೆ. ಅಯೋಧ್ಯೆಯ ಕಡೆಯಿಂದ ಒಟ್ಟು ಸೈನ್ಯವೇ ಬರುವಂತಿದೆ.

ರಾಮ : ಅಯೋಧ್ಯೆಯ ಕಡೆಯಿಂದಲೆ ?

ಲಕ್ಷ್ಮಣ : ಹೌದು, ನಮ್ಮ ರಾಜ್ಯದ ಕೋವಿದಾರ ಧ್ವಜ ಎತ್ತರದಲ್ಲಿ ಹಾರುತ್ತಿದೆ. ಪಟ್ಟದಾನೆ ಒಂದು ಅರೆಕೋಶ ದೂರದಲ್ಲಿ ನಡೆದು ಬರುತ್ತಿದೆ. ಎಷ್ಟು ವೇಗವಾಗಿ ! ಬರುವವರ ಉದ್ದೇಶ ಖಂಡಿತವಾಗಿ ಕೆಡುಕಿನದು. ನಮ್ಮ ಆ ಸಹೋದರ ತನಗೆ ಯಾವ ಕಷ್ಟವೂ ಇಲ್ಲದೆ ರಾಜ್ಯ ದೊರೆಯಿತೆಂಬ ಮದದಿಂದ ಬರುತ್ತಿದ್ದಾನೆ. ರಕ್ತದಾಹವೇ ಇರಬೇಕು ! ನಾವು ಯಾರೂ ಬದುಕಿರಬಾರದೆಂದು

ಇಚ್ಛಿಸಿದ್ದಾನು! ನಾವಿರುವವರೆಗೂ ಅವನ ದಾರಿಯಲ್ಲಿ ಮುಳ್ಳು. ತ್ವರೆ ಮಾಡು ; ನಾನಿಳಿದು ಬಂದೆ.

(ರಾಮನು ಸ್ಥಿರವಾಗಿ ಆ ಕಲ್ಲರೆಯ ಹತ್ತಿರವೇ ನಿಲ್ಲುತ್ತಾನೆ—ಸೀತೆಗೆ 'ಸ್ವಲ್ಪ ದೂರ ಹಿಂದೆ ಇರು' ಎಂದು ಮಾತ್ರ ಹೇಳಿ.)

ರಾಮ : ಯಾಕೆ ನಿನಗೆ ಈ ಅಪಾಯದ ಭ್ರಾಂತಿ, ಲಕ್ಷ್ಮಣ ? ಭರತ ಒಂದು ಸೈನ್ಯದ ನಾಯಕನಾಗಿ ಬರುತ್ತಾನೆಂಬುದೇ ನಮ್ಮನ್ನು ನಾಶಮಾಡುತ್ತಾನೆಂದೇ ? ಅಶಕ್ಯ ! ಪಟ್ಟಾಭಿಷೇಕವಾಗಿದ್ದೀತೆ ? ಅವನು ನಮ್ಮನ್ನು ಅರಸಿ ಬರಬೇಕಾದ್ದು ನಮ್ಮನ್ನು ಬೇಟೆಯಾಡಲೆಂದೆ ? ನಾನಾಗಿ ವನವಾಸವನ್ನು ಆಯ್ದು ಬಂದಿದ್ದೇನೆ. ನಾನಾಗಲಿ ನೀನಾಗಲಿ ಅವನಿಗೆ ವಿರೋಧಿಗಳಲ್ಲ ; ಅವನಿಗೆ ಅದು ಗೊತ್ತಿದೆ. ನಾವು ಎಂದಿಗನ್ನ ಅವನ ಸ್ಥಾನಕ್ಕೆ ಚ್ಯುತಿ ತರುವೆವೆಂದು ಅವನಿಗೆ ಭೀತಿ ಇದ್ದೀತೆ ? ನಮ್ಮನ್ನು ನಾಶಗೊಳಿಸಲು ಅವನು ಒಟ್ಟು ಒಂದು ಸೈನ್ಯವನ್ನೇ ಏಕೆ ತರಬೇಕು ? ನೀನೂ ನಾನೂ ಜೊತೆಗಿದ್ದರೆ ಎಷ್ಟು ದೊಡ್ಡ ಸೈನ್ಯ ಬಂದರೂ ನಾವು ರಕ್ಷಿಸಿ ಕೊಳ್ಳಲಾರೆವೆ ? ಕಾರಣ ಅದಾಗಿರಲಾರದು ! ಅವನ ಉದ್ದೇಶ ಕೆಟ್ಟು ದಾಗಿರಲಾರದು. ಅಯೋಧ್ಯೆಯಿಂದ ಅವನಿಗೆ ಸುದ್ದಿ ಕಳಿಸಿದ್ದಾರು. ಅಜ್ಜನ ದೇಶದಿಂದ ಹಿಂದಿರುಗಿ ಬಂದಿದ್ದಾನೆ. ರಾಜಧಾನಿಯ ಸ್ಥಿತಿ ಹೇಗಿದ್ದಿತೆಂದು ಕಂಡಿದ್ದಾನೆ. ನಾವು ಮೂವರೂ ರಾಜಧಾನಿಯಿಂದ ಹೊರಟು ಬಂದಿರುವೆವೆಂದು ಕೇಳಿ ಆಗಿರುವ ಅನ್ಯಾಯವನ್ನು ಕಂಡು ನಮ್ಮನ್ನು ಕಾಣಲು ಬರುತ್ತಿರಬೇಕು : ನಮ್ಮನ್ನು ಹಿಂದಕ್ಕೆ ಕರೆದೊಯ್ಯಲು. ನನಗೆ ಗೊತ್ತು : ಭರತನು ಉದಾರಿ, ಪ್ರಾಮಾಣಿಕ, ಋಜು ಸ್ವಭಾವದವನು. ನೀನು ಹೇಗೊ ಅವನೂ ಹಾಗೇ.

ಲಕ್ಷ್ಮಣ : ನಿನ್ನ ಧೈರ್ಯ, ತಾಳ್ಮೆ ಅಮೋಘವಾದ್ದು, ರಾಮ. ನಿನಗೆ ಯಾವ ಭಯವೂ ಇಲ್ಲ, ಸಂಶಯವೂ ಇಲ್ಲ. ಈ ಅವಕಾಶವನ್ನು ಬಳಸಿಕೊಂಡು ಭರತನನ್ನು ನಾಶ ಮಾಡಬೇಕೆಂಬುದು ನನ್ನ ಅಭಿಲಾಷೆ. ನಿನ್ನ ರಾಜ್ಯದ ಮೇಲೆ ಹಕ್ಕುಗಳನ್ನು ಕಳ್ಳತನದಿಂದ ಎಂಬಂತೆ ಪಡೆದುಕೊಂಡಿದ್ದಾನೆ. ತಾಯಿ, ಅವನು ಸಂಚು ಮಾಡಿದ್ದಾರೆ.

ರಾಮ : ಹೀಗೆ ಹುಚ್ಚು ಹುಚ್ಚಾಗಿ ರೇಗಾಡಬೇಡ, ಲಕ್ಷ್ಮಣ. ಒಂದು ರಾಜ್ಯ ಗಳಿಸುವುದರಿಂದ ಏನು ಸಂತೋಷ ಬಂದೀತು ? ನಮ್ಮ ನಾಲ್ವರಿಗೂ ಸಂತೋಷ ತರುವುದಾದರೆ ಮಾತ್ರ ನಾನು ರಾಜ್ಯವನ್ನು ಬಯಸಿಯೇನು. ಒಟ್ಟು ಭೂಮಂಡಲವನ್ನೆಲ್ಲ—ಅಷ್ಟೇ ಏಕೆ, ಇಂದ್ರನ ರಾಜ್ಯವನ್ನೆಲ್ಲ—ಪಡೆಯ ಬಹುದಾದರೂ ನನಗೆ ಅದು ಬೆಲೆಯದಲ್ಲ—ಒಬ್ಬ ತಮ್ಮನನ್ನು, ತಾಯನ್ನು, ತಂದೆಯನ್ನು ಅದಕ್ಕಾಗಿ ಕೊಲ್ಲಬೇಕಾದರೆ. ನಿನಗೂ ಭರತನಿಗೂ ಶತ್ರುಘ್ನನಿಗೂ

ಮೂವರಿಗೂ ಸಂತೋಷವನ್ನು ಬೆಳಸದಾದರೆ ಅಂಥ ರಾಜ್ಯ ನನಗೆ ಬೇಡ. ನಾವು ನಾಲ್ವರೂ ಸೇರಿ ಒಂದು ಕುಟುಂಬ. ಇದು ನನಗೆ ಗೊತ್ತಿದೆ. ಸೈನ್ಯದೊಡನೆ ಭರತನು ಬರುತ್ತಿರುವುದು ನನ್ನ ಕ್ಷಮೆ ಬೇಡಿ ನನ್ನನ್ನು ಹಿಂದಕ್ಕೆ ಕರೆದೊಯ್ಯುವುದಕ್ಕೆ. ನನಗೆ ಇಷ್ಟೂ ಸಂದೇಹವಿಲ್ಲ.

ಲಕ್ಷ್ಮಣ : ನಿನ್ನ ಸಮಾಧಾನದಲ್ಲಿ ನಾನಿರಬಲ್ಲೆನಾದರೆ ಆಗಿತ್ತು.

ರಾಮ : ಒಂದು ಪ್ರಶ್ನೆ ಕೇಳಲೆ, ಲಕ್ಷ್ಮಣ ? ಎಂದೇ ಆಗಲಿ, ಭರತ ನಿನಗೆ ಕೆಡಕು ಮಾಡಿದ್ದಾನೆಯೆ ? ನೆನೆಯಬಲ್ಲೆಯ ? ಅವನ ಮೇಲೆ ನಿನಗೆ ಇನ್ನೇನಾದರೂ ಕೋಪ ಕಾರಣವಿದೆಯೆ ? ಆಕ್ಷೇಪಣೆಯ ಪ್ರಸಂಗ ನಡೆದಿದೆಯೆ ? ಹೀಗೇಕೆ ಕೂಗಾಡುತ್ತಿದ್ದೀಯೆ ?

ಲಕ್ಷ್ಮಣ : ಇಲ್ಲ ಅಣ್ಣ, ನಿನಗೆ ನಡೆದಿರುವ ಅನ್ಯಾಯ ಎಷ್ಟು, ಕ್ರೂರ ಎಷ್ಟು ಎಂದು ಯೋಚಿಸಿ ಮಾತ್ರ ನನ್ನ ರಕ್ತ ಕುದಿಯುತ್ತಿದೆ, ಅಷ್ಟೇ.

ರಾಮ : ನನಗೆ ರಾಜ್ಯದ ಇಷ್ಟವಿದ್ದರೆ ಲೋಕದಲ್ಲಿ ನಾನು ಇಷ್ಟ ಪಟ್ಟ ಕಡೆ ರಾಜ್ಯವನ್ನು ಗಳಿಸಿಕೊಳ್ಳಲು ಶಕ್ತನಲ್ಲವೆ ? ನನ್ನ ಮನೋವಿಶ್ವಾಸ ಧರ್ಮದಲ್ಲಿ ಹುಟ್ಟಿದ್ದು. ಬೇಡ, ಆ ಭಯವನ್ನು ಬಿಡು, ಲಕ್ಷ್ಮಣ. ಭರತನು ಒಳ್ಳೆಯ ತಮ್ಮ. ಅವನ ಪರವಾಗಿ ಸಂಶಯಗಳು ಬೇಡ. ಸೋದರನಲ್ಲಿ ಸೋದರನಿಗೆ ವಿರೋಧ, ತಾಯಿ ತಂದೆಯರಲ್ಲಿ ಮಕ್ಕಳಿಗೆ ವಿರೋಧ ಮಾಡಿ ತಿರುಗಿ ಬೀಳಿಸುವುದು ಬಹು ಒಳ್ಳೆಯ ಕಾರ್ಯವೆ ? ಅಥವಾ, ಈ ಮಾತು ಕೇಳಲಿಲ್ಲ, ರಾಜ್ಯ ಆಳುವ ಅಭಿಲಾಷೆ ಏನಾದರೂ ನಿನ್ನದೊ ? ಆ ಬಗೆಗೆ ನಿನ್ನಲ್ಲಿ ಅತ್ಯಲ್ಪ ಆಕಾಂಕ್ಷೆ ಇದ್ದರೂ ಹೇಳು : ಭರತನಿಗೆ ನಾನೇ ಹೇಳುತ್ತೇನೆ. ಕೂಡಲೇ 'ಬಾಢಂ'—'ಸರಿ' ಎನ್ನುತ್ತಾನೆ. ತಗೊ, ನಿನ್ನದಾಗುವುದು. ಭರತನನ್ನು ಕುರಿತು ತಪ್ಪು ಅಭಿಪ್ರಾಯ ತಕ್ಕದ್ದಲ್ಲ.

(ಲಕ್ಷ್ಮಣನು ಲಜ್ಜೆಯಿಂದ ತಲೆ ತಗ್ಗಿಸುತ್ತಾನೆ.)

ಲಕ್ಷ್ಮಣ : ಸುತರಾಂ ಇಲ್ಲ, ರಾಮ. ನನ್ನ ಸ್ಥಳ ನಿನ್ನ ಪಾದದೆಡೆ, ಸೇವೆಯಲ್ಲಿ. ನಿನ್ನ ಪಕ್ಷವಾದ ನನ್ನ ಶ್ರದ್ಧೆ ನನಗೆ ಇತರ ಎಲ್ಲ ಚಾಪಲ್ಯಗಳನ್ನೂ ಕಳೆಯುವಂತೆ ಮಾಡುತ್ತದೆ. ನಾನು ಏನು ಆಡಿದೆನೊ ಅದನ್ನು ಕ್ಷಮಿಸು. ನಮ್ಮನ್ನು ಹಿಂದಕ್ಕೆ ಕರೆದುಕೊಂಡು ಹೋಗಲು ನಮ್ಮ ಪ್ರೀತಿಯ ತಂದೆಯವರೇ ಬರುತ್ತಿದ್ದಾರೊ ಏನೊ. ಇದ್ದರೂ ಇರಬಹುದು. ಕಡೆಗೆ ಅತ್ತಿಗೆಯನ್ನಾದರೂ ಹಿಂದಕ್ಕೆ ಕರೆದೊಯ್ಯುವುದಕ್ಕೆ. ನೀನು ಆಕೆಯನ್ನು ಕಷ್ಟಗಳಿಗೆಲ್ಲ ಈಡು ಮಾಡಲು ಜೊತೆಗೆ ಕರೆದುಕೊಂಡು ಬರಬೇಕಾಗಿರಲಿಲ್ಲ. ಇಷ್ಟು ಕಾಲ

ನಮ್ಮನ್ನು ಬಿಟ್ಟಿರುವುದು ಆತನಿಗೆ ಸಹಿಸಲಾಗದಿರಬೇಕು. ಜನವನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಆತನೇ ಬಂದಿದ್ದಾನು.

ರಾಮ : ಆದರೆ ಇದೇನು, ಲಕ್ಷ್ಮಣ ? ದೂರದಲ್ಲಿ ತಂದೆಯುವರ ಶ್ವೇತಚ್ಛತ್ರ ಕಾಣುವುದಿಲ್ಲ ? ಆ ಗುಂಪಿನ ಜನರೊಡನೆ ಅವರು ಇರುವ ಯಾವ ಲಕ್ಷಣವೂ ಇಲ್ಲ ! ಆಶ್ಚರ್ಯ ! ಸೈನ್ಯವನ್ನೆಲ್ಲ ಭರತ ತಡೆಯುತ್ತಿದ್ದಾನೆ ಮುಂದೆ ಬಾರದಿರಿ ಎಂದು ; ಇರುವಲ್ಲಿಯೇ ಇರಿ ಎಂದು ಹೇಳುತ್ತಿದ್ದಾನೆ. ರಾಜಕುಮಾರನ ಉಡುಪಿನಲ್ಲಿ ಕೂಡ ಇಲ್ಲ. ತಲೆಗೂದಲನ್ನೂ ಉಡುಪನ್ನೂ ನಮ್ಮಂತೆ ಧರಿಸಿ ಬರುತ್ತಿದ್ದಾನೆ. ವಸಿಷ್ಠ ಸುಮಂತ್ರರೂ ಜೊತೆಯಲ್ಲಿದ್ದಾರೆ. ಬಲಕ್ಕೆ ಬಾ ; ಸೀತಾ, ಇನ್ನೂ ಸ್ವಲ್ಪ ಹಿಂದಕ್ಕೆ ನಿಲ್ಲು. ಮನಸ್ಸು ಏನೊ ಶಂಕೆ ಪಡುತ್ತಿದೆ. ಅಯೋಧ್ಯೆಯಲ್ಲಿ ಏನು ನಡೆದಿದೆಯೊ ? ಯೋಚಿಸಲು ಕೂಡ ಸಹಿಸಲಾರದಷ್ಟು ಚಿಂತೆ ಉಂಟಾಗಿದೆ : ಏನಿರಬಹುದು ?

(ಸ್ವಲ್ಪ ದೂರದಿಂದಲೇ ಭರತನಿಗೆ ರಾಮನಿರುವುದು ಕಾಣುತ್ತದೆ. ಸೀತಾ ಲಕ್ಷ್ಮಣರು ಕಣ್ಣಿಗೆ ಬೀಳುತ್ತಾರೆ. ಉಸಿರು ಹಿಡಿದುಕೊಂಡು ಓಡಿಬರುತ್ತಾನೆ. ನುಡಿಯಲು ತೋರದೆ ಮಾತು ಕೊರಳಲ್ಲೇ ತಡೆದುಕೊಳ್ಳುತ್ತದೆ. ಎರಡೂ ಕೈಗಳನ್ನು ಮುಂದೆ ಚಾಚಿಕೊಂಡು 'ಅಣ್ಣಾ, ಅಣ್ಣಾ' ಎನ್ನುತ್ತ ಬಂದು ರಾಮನ ಕಾಲಿಗೆ ಬೀಳುತ್ತಾನೆ ; ಅವನನ್ನು ಬಲವಾಗಿ ಹಿಡಿದುಕೊಳ್ಳುತ್ತನೆ. ಕಣ್ಣಲ್ಲಿ ನೀರು. ಹೆಚ್ಚು ಕಡಮೆ ಪ್ರಜ್ಞೆ ತಪ್ಪಿದವನಂತಿದ್ದಾನೆ. ಕೂಡಲೆ ಎನ್ನಬಹುದಾದಷ್ಟು ಬೇಗ ಶತ್ರುಘ್ನನೂ ಹಾಗೇ ರಾಮನ ಪಾದಗಳನ್ನು ಹಿಡಿದುಕೊಳ್ಳುತ್ತಾನೆ.)

ರಾಮ : ಏಳು ಭರತ, ಏಳು ಶತ್ರುಘ್ನ. ಇದೆಲ್ಲ ಏನು ? ಏಕೆ ? ಆಚಾರ್ಯರಿಗೆ ಪ್ರಣಾಮಗಳು. ಸುಮಂತ್ರ, ಅಭಿವಾದನೆಗಳು. ಬನ್ನಿ, ಎಲ್ಲ ಕುಳಿತುಕೊಳ್ಳೋಣ. ಸೀತಾ, ಲಕ್ಷ್ಮಣ, ಕೃಷ್ಣಾಜಿನಗಳನ್ನು ತಂದು ಹರಡಿ ; ಅವರು ಕುಳಿತುಕೊಳ್ಳಲಿ....ಇಷ್ಟು ಬೇಗ ಭರತನನ್ನು ಕಾಣುತ್ತೇನೆ ಎಂದು ನಾನು ಎಣಿಸಿರಲಿಲ್ಲ. ವಸಿಷ್ಠರಾಗಲಿ, ಸುಮಂತ್ರನಾಗಲಿ, ಇಷ್ಟು ಜನರನ್ನಾಗಲಿ ನಿರೀಕ್ಷಿಸಲಿಲ್ಲ. ಅವರೂ ನಮ್ಮ ಕಡೆ ಧಾವಿಸುವಂತಿದೆ. ಇದು ಅನಗತ್ಯವಾಗಿತ್ತು. ಕಾರಣವಿಲ್ಲದೆ ನೀನು ಕ್ಲೇಶಪಟ್ಟೆ. ಈಗ ತಾನೆ ನೀನು ಸಿಂಹಾಸನ ಏರಿರಬೇಕು. ಅದಾಗಿ ಒಂದು ವಾರವೊ ಹತ್ತು ದಿನಗಳೊ ಆಗಿರಬೇಕು. ಆಡಳಿತದ ವಿಷಯಗಳನ್ನು ಲೋಕಸ್ವರೂಪವನ್ನು ಕೈವಶ ಮಾಡಿಕೊಳ್ಳಲು ಕಾಲಾವಕಾಶ ಬೇಕು.

(ಭರತನು ಮಾತನಾಡಲು ಯತ್ನಿಸುತ್ತಾನೆ. ಒಂದೆರಡು ಸಲ ಆಗುವುದಿಲ್ಲ. ರಾಮನು ಅವನ ಭುಜದ ಮೇಲೆ ಪ್ರೀತಿಯಿಂದ ಕೈ ಆಡಿಸುತ್ತಾನೆ; ಅವನ ಭುಜ ತಟ್ಟುತ್ತಾನೆ,

ಅವನು ಸ್ವಾಸ್ಥ್ಯ ಸಂಪಾದಿಸಲೆಂದು. ಹಿರಿಯರು ಮಾತನಾಡದೆ ಕುಳಿತಿರುವರು, ಮುಂದೆ ನಡೆಯಲಿರುವ ಸಂಗತಿಗಳಿಗೆ ಕಾಯುತ್ತ.)

ಭರತ : ನಮ್ಮಮ್ಮ, ತಂದೆ ನಿಮಗೆ ಅಪರಾಧ ಮಾಡಿದ್ದಾರೆ, ರಾಮ. ನಾನೆಲ್ಲೋ ದೂರದಲ್ಲಿ ಕೇಕಯದಲ್ಲಿ ಇದ್ದೆ. ದುಷ್ಟ ಬುದ್ಧಿಯ ತಾಯಿ ಅವರ ಮೇಲೆ ಪ್ರಭಾವ ಬೀರಿ ಅವರಿಂದ ಒಂದು ತೀರ್ಮಾನ ಮಾಡಿಸಿ ನಿನ್ನನ್ನು ಹೊರಗಟ್ಟಿದ್ದಾರೆ. ನೀನು ಪ್ರಾಮಾಣಿಕ, ವಿಧೇಯನಾದ ಮಗ. ಆದ್ದರಿಂದ ಸ್ವಲ್ಪ ಸಮಯವೂ ತಡೆಯದೆ ಅಯೋಧ್ಯೆಯನ್ನು ಬಿಟ್ಟು ನನ್ನ ಕಿವಿಗೆ ಬಿದ್ದಂತೆ ಹದಿನಾಲ್ಕು ವರ್ಷ ದಂಡಕದಲ್ಲಿ ಇರಲು ಬಂದುಬಿಟ್ಟೆ. ಅದು ಹೇಗಾದೀತು ? ನಿನ್ನೊಡನೆ ಸೀತಾದೇವಿ, ಲಕ್ಷ್ಮಣ ಬಂದಿದ್ದಾರೆ. ಅವನು ಅದೃಷ್ಟಶಾಲಿ. ನಿನ್ನೊಡನೆ ಇರಲು ಅವಕಾಶ ಕೊಟ್ಟಿದ್ದೀಯೆ. ತನ್ನ ಪ್ರಾಣಕ್ಕಿಂತ ಹೆಚ್ಚು ಪ್ರೀತಿ ನಿನ್ನಲ್ಲಿರುವ ಅವನು ನಿಮ್ಮ ಅತಿ ಸಣ್ಣ ಸೌಕರ್ಯವನ್ನೂ ನೋಡಿಕೊಳ್ಳುತ್ತಿದ್ದಾನೆ, ಪ್ರೀತಿಯಿಂದ ! ನನಗೂ ಅಂಥ ಇಚ್ಛೆ ಇದೆ ಎಂಬುದನ್ನು ನಿನಗೆ ಹೇಗೆ ತೋರಿಸಿ ಕೊಡಲಿ, ರಾಮ ? ಆ ಅವಕಾಶ ನನಗೆ ಒದಗಿ ಬರಲಿಲ್ಲ....ಒಂದು ದಿನ ಕೂಡ ನೀನು ಹೊರಟುಹೋದ್ದನ್ನು ತಂದೆಯವರು ತಾಳಲಾಗಲಿಲ್ಲ. ನೀನು ಹೋಗುವಾಗ ನಿನ್ನನ್ನು ನೋಡಿದ ಕಣ್ಣುಗಳು ಅವರಿಗೆ ಹಿಂದಿರುಗಲೇ ಇಲ್ಲ. ಅವರು ಹಾಗೆ ಹೇಳಿದರಂತೆ. ಅವರ ದೃಷ್ಟಿ ಕಲ್ಲುಕುರುಡಾಯಿತು. ನನ್ನ ತಾಯಿಗೆ ಶಾಪವಿಟ್ಟರಂತೆ ; ತಾಯಿ ಕೌಸಲ್ಯೆಯ ಅರಮನೆಗೆ ಹೋಗಿಬಿಟ್ಟರಂತೆ. ಎಲ್ಲರಿಗೂ ದುಃಖ ಕವಿದಿರಲು ಅವರು ತೀರಿಕೊಂಡರಂತೆ....

ರಾಮ : ನನ್ನ ಹೃದಯಕ್ಕೆ ಈ ಕೆಟ್ಟ ಯೋಚನೆ ಹರಿದಿತ್ತು. ಓ, ಯಾವಾಗ ನನ್ನ ತಂದೆಯ ಶ್ವೇತಛತ್ರಿಯನ್ನು ನಿಮ್ಮ ತಂಡದಲ್ಲಿ ಕಾಣಲಿಲ್ಲವೊ ಆಗ ಏನೊ ವ್ಯಸನದ ಪ್ರಸಂಗ ಸಡೆದಿರಬೇಕು ಎನ್ನಿಸಿತು. ಅಪ್ಪಾ, ಅಪ್ಪಾ, ನಿಮ್ಮ ಕಣ್ಣುಗಳು ಮುಚ್ಚಿದಾಗ ಪ್ರೀತಿಪೂರ್ಣವಾದ ಸಜ್ಜನರಾದ ನಿಮ್ಮ ಮುಖವನ್ನು ನೋಡುವ ಅದೃಷ್ಟ ನನಗಿರಲಿಲ್ಲ. ನಿಮ್ಮ ಮೃತಿಗೆ ನಾನು ಕಾರಣವಾದೆ. ನೀವೆಲ್ಲ ಭಾಗ್ಯವಂತರು !—ಆಚಾರ್ಯ, ಸುಮಂತ್ರ, ನೀವು ಅಲ್ಲಿದ್ದಿರಿ. ನೀನು ಪುಣ್ಯವಂತ, ಭರತ, ಉತ್ತರ ಕಾರ್ಯಗಳನ್ನು ನಡಸುವುದಕ್ಕಾಯಿತು.

(ಹಿನ್ನೆಲೆಯಲ್ಲಿ : ಸೀತೇ ಮೃತಸ್ತೇ ಶ್ವಶುರಃ ಪಿತ್ರಾಹೀನೋಽಸಿ ಲಕ್ಷ್ಮಣ
ಭರತೋ ದುಃಖಮಾಚಷ್ಟೇ ಸ್ವರ್ಗತಂ ಪೃಥಿವೀಪತಿಂ)

ಸೀತಾ, ನಿನ್ನ ಮಾವಂದಿರು ತೀರಿಕೊಂಡಿದ್ದಾರೆ ; ಲಕ್ಷ್ಮಣ ನಿನ್ನ ತಂದೆ ತೀರಿಕೊಂಡು ನೀನು ತಬ್ಬಲಿಯಾಗಿದ್ದೀಯೆ. ಭರತನು ತಂದೆಯವರ ಮರಣ ವಾರ್ತೆಯನ್ನು ತಂದಿದ್ದಾನೆ...

(ಅವರ ಕಣ್ಣುಗಳಲ್ಲಿ ನೀರು ತುಂಬುತ್ತದೆ. ಸ್ವಲ್ಪ ಕಾಲ ಎಲ್ಲರೂ ಮಾತಿಲ್ಲದೆ ಇರುತ್ತಾರೆ.)

ವಸಿಷ್ಠ : ಮೊದಲು ಸ್ನಾನ ತೀರಿಸಿಕೊಳ್ಳಿ, ಮಕ್ಕಳೆ ; ತಂದೆಗೆ ತರ್ಪಣವನ್ನೂ ಆಹಾರವನ್ನೂ ಸಲ್ಲಿಸಿ.

ರಾಮ : ಹೌದು, ಲಕ್ಷ್ಮಣ. ಮೊದಲು ಸ್ನಾನ ಮಾಡೋಣ. ಸ್ವಲ್ಪ ಇಂಗುದಿ ಹಿಟ್ಟನ್ನು ಬೇಯಿಸು. ಯಾವುದಾದರೂ ಹಣ್ಣಿನ ತಿರುಳನ್ನು ಜೊತೆಗೆ ಸೇರಿಸು. ಈಗ ನಮಗೆ ಇರುವುದೆಲ್ಲ ಇಷ್ಟೇ, ನಮಗೆ ಯಾವುದು ಅನ್ನವೊ ಅದೇ ತಂದೆಯವರ ಗೌರವಕ್ಕೂ ; ಮೇಲ್ತೆರದ್ದೇನೂ ಇಲ್ಲ.

(ರಾಮ, ಲಕ್ಷ್ಮಣ, ಸೀತೆ ಸ್ನಾನಕ್ಕೆ ತರ್ಪಣಾದಿಗೆ ಹೋಗುತ್ತಾರೆ. ಸ್ವಲ್ಪ ಹೊತ್ತಿನ ತರುವಾಯ)

ರಾಮ : ತಮ್ಮ, ಭರತ, ನಡೆದ ಸಂಗತಿಗಳ ವಿವರವನ್ನು ಕೇಳಲು ನಾವು ಈಗ ಸಿದ್ಧರಾಗಿದ್ದೇವೆ.

ಭರತ : ತಂದೆಯವರು ತೀರಿಕೊಂಡ ಮೇಲೆ ವಾರ್ತಾಹರರನ್ನು ನಾವಿರುವಲ್ಲಿಗೆ ಕಳಿಸಿದರು. ಆ ಹಾಳು ಪ್ರಯಾಣ ಒಟ್ಟಿಗೆ ಒಂದು ವಾರ ಹಿಡಿಯಿತು. ನಾನು ಬಂದು ನೋಡಿದ ಅಯೋಧ್ಯೆ ಯಾವ ನೋಟದ ಭಾಗ್ಯ ! ಅದರ ಸಂತೋಷವೆಲ್ಲ ಹೋಗಿತ್ತು ! ಒಂದು ಸಾವಿನ ಮನೆ, ರಾಮ ! ಅಯೋಧ್ಯೆಯೆಲ್ಲ ವಿಧವೆಯಾದಂತೆ ಕಂಡಿತು. (ಹಿನ್ನೆಲೆಯಲ್ಲಿ : 'ನಿರಾಕಾರಾ ನಿರಾನಂದಾ ದೀನಾ ಪ್ರತಿಹತಸ್ವನಾ'). ಎದೆ ಒಡೆದು ಹೋಗುವಂತಿತ್ತು ನನಗೆ. ತುಂಬ ಪ್ರಯಾಸದಿಂದ ಪಿತೃಕರ್ಮಗಳನ್ನು ಮಾಡಿದೆ. ಎರಡು ದಿನಗಳಿಗೆ ಹಿಂದೆ ತಾನೆ ಎಲ್ಲವೂ ಮುಗಿಯಿತು. ನಾಯಕರ, ಪುರೋಹಿತರ ಒಪ್ಪಿಗೆಯಿಂದ ನಿನ್ನಲ್ಲಿಗೆ ಓಡಿ ಬಂದಿದ್ದೇವೆ. ನಮ್ಮದು ಹಿರಿಯ ಮನೆತನ, ರಾಮ. ಅದಕ್ಕೊಂದು ಶೀಲ ಸಂಪತ್ತಿ ಇದೆ, ಸಂಪ್ರದಾಯ ಇದೆ... ಹಿರಿಯ ಮಗ ರಾಜ್ಯವನ್ನಾಳಬೇಕು. ನೀನು ನಮ್ಮೆಲ್ಲರಿಗೂ ಹಿರಿಯ. ಹಿರಿಯನೊ ಕಿರಿಯನೊ—ಅಯೋಧ್ಯೆಯನ್ನು ಆಳಲು ತಕ್ಕವನು ನೀನು. ಶಕ್ತಿ ಅಧಿಕಾರಗಳಿಂದ ದೊಡ್ಡ ರೀತಿಯಲ್ಲಿ ನೀನೊಬ್ಬನೇ ಆಳಬಲ್ಲವನು. ನಿನ್ನ ಹಿರಿಮೆ, ಶೀಲ, ಬಲ, ವಿವೇಕ—ಇವು ಮಾತ್ರ ನಮ್ಮೆಲ್ಲರನ್ನೂ ನಡಸಬಲ್ಲವು.

ರಾಮ : ಆದರೆ ಇದೇನು ನಿನ್ನ ವೇಷ, ಭರತ ? ತಲೆಗೂದಲ ಈ ಒಪ್ಪ ? ಚೆನ್ನಾಯಿತು !

ಭರತ : ಅದಿರಲಿ ಬಿಡು. ನಾನು ದಾರಿಯಲ್ಲಿ ಬರುತ್ತಿದ್ದಾಗ ಗುಹ ಹೇಳಿದ : ನೀನು ಹೇಗೆ ಉಡುಪು ಧರಿಸಿದ್ದೆ ; ಇಂಗುದಿ ಮರದ ಕೆಳಗೆ ಮಲಗಿದ್ದೆ ಎಂದು. ಅದು ನನ್ನ ಹೃದಯವನ್ನು ಬಿರಿಯಿತು. ನೀನು ಪುನಃ ಬಂದು ರಾಜನಾಗುವವರೆಗೂ

ನಾನೂ ಹಾಗೆಯೇ ಇರಲು ನಿಶ್ಚಯಿಸಿದೆ. ಹೀಗೆಯೇ ಬಾಳುತ್ತೇನೆ. ಕಣ್ಣು ಮನಸ್ಸನ್ನು ಸುಖದ ಮೇಲೆ ಹಾಯಗೊಡುವುದಿಲ್ಲ, ಅಣ್ಣ. ನಾವೆಲ್ಲರೂ ಈಗ ಮೊಳಕಾಲೂರಿ ಬೇಡಿಕೊಳ್ಳುತ್ತೇವೆ—ನೀನು ಹಿಂದಕ್ಕೆ ಬಾ. ತಾಯಿ ಕೈಕೆ ನಮ್ಮ ಸಂಗಡ ಬಂದಿದ್ದಾಳೆ. ತಾಯಿ ಕೌಸಲ್ಯೆ, ಸುಮಿತ್ರೆ ಇಬ್ಬರೂ ಬಂದಿದ್ದಾರೆ. ನಿನ್ನ ಸ್ಥಳ ಅಯೋಧ್ಯೆಯಲ್ಲಿ. ಕೃಪೆ ಮಾಡಿ ಹಿಂದಕ್ಕೆ ಬಾ. ಸಿಂಹಾಸನಾರೋಹಣಕ್ಕೆ ಬೇಕಾದ ಎಲ್ಲ ಸಂಭಾರಗಳನ್ನೂ ಜೊತೆಗೇ ತಂದಿದ್ದೇವೆ. ಪುರೋಹಿತವರ್ಗ, ನಾಯಕರು, ಹೆಗ್ಗಡೆಗಳು, ಹಿರಿಯರು, ತಾಯಂದಿರು, ಪಟ್ಟದಾನೆ, ಕುದುರೆ, ಸಿಂಹಾಸನ—ಪೂರ್ತಿ ಕಾದಿವೆ.

ರಾಮ : ನೀನು ವಿಚಿತ್ರ ಹುಡುಗ, ಭರತ. ಈ ಮುಂಚೆಯೇ ನನ್ನ ಉತ್ತರವನ್ನು ತಾಯಂದಿರಿಗೆ, ವಸಿಷ್ಠರಿಗೆ, ಜನನಾಯಕರಿಗೆ ತಿಳಿಸಿದ್ದೇನೆ. ನೀನು ಸೂಚಿಸುವುದು ಸರಿಯಲ್ಲ. ವನವಾಸದ ಭಾಗ ನನ್ನ ಪಾಲಿಗೆ ಬಂತು ; ನಿನ್ನ ಭಾಗ ಅಯೋಧ್ಯೆಯಲ್ಲಿ ಇದ್ದುಕೊಂಡು ಆಳುವುದು. ಇವು ಬೇಡಿಕೆಯ ಸಮಯಗಳು. ನಾನು ಒಡಂಬಟ್ಟೆ. ನಾನು ಹಾಗೆ ಮಾಡದಿದ್ದರೆ ತಂದೆಯವರು ಋಣದಲ್ಲಿ ಬಿದ್ದು ಸಾಯಬೇಕಿತ್ತು. ಅವರ ಜೀವಶಕ್ತಿಯೆಲ್ಲ ಅದಕ್ಕೆ ವಿರುದ್ಧವಾಗಿತ್ತು. ವಯಸ್ಸಾದ ಅವರ ಸಂಕಟ ನನಗೆ ಕಾಣುತ್ತಿತ್ತು. ಬಲಪ್ರದರ್ಶನ ಮಾಡಿ ತನ್ನನ್ನು ದಮನ ಮಾಡು ಎಂದು ಕೂಡ ಅವರು ನನ್ನನ್ನು ಕೇಳಿಕೊಂಡರು. ನಿನ್ನ ತಾಯಿಯ ಇಷ್ಟವನ್ನು ನೆರವೇರಿಸದಿರುವುದಕ್ಕಾಗಿ ಅದೊಂದೇ ದಾರಿ ಎಂದು ಕೂಡ ಅವರೇ ಸೂಚಿಸಿದರು.

ಭರತ : ಎಂಥ ಕೀಟ ಆಕೆ !

ರಾಮ : ಆಕೆಯ ಪರವಾಗಿ ಕಠಿಣ ನುಡಿಯಬೇಡ, ಭರತ. ನಾನಾಗಿ ಆ ಭಾರವನ್ನು ಹೊತ್ತೆ. ಇದು ನನ್ನ ಸ್ವಂತ ಹೊಣೆಗಾರಿಕೆ. ಈಗ ಪುನಃ ಆ ಸಂಬಂಧದಲ್ಲಿ ವಾದ ಬೇಡ. ಆಯ್ತು ಆಗಿದೆ ; ತೆರಬೇಕಾದ ಬೆಲೆ ತೆತ್ತಾಗಿದೆ. ತಂದೆಯವರ ಸಾವು ಅದರ ಮೇಲೆ ಮುದ್ರೆ ಒತ್ತಿದಂತಾಗಿದೆ. ನಾವು ತಂದೆಯಿಲ್ಲದ ತಬ್ಬಲಿಗಳಾಗಿದ್ದೇವೆ. ತಾಯಿಯರೂ ಕಷ್ಟ ಅನುಭವಿಸಿದ್ದಾರೆ.

ಭರತ : ನನ್ನ ತಾಯಿ ದುಷ್ಟ ಕಾರ್ಯ ಮಾಡಿದ್ದಾಳೆ, ಅಣ್ಣ. ನಿನ್ನ ನೆನಪು ನನಗೆ ಬಾರದಿದ್ದರೆ ಅವಳನ್ನು ಕೊಂದುಬಿಡಬೇಕೆನಿಸಿತ್ತು.

ರಾಮ : ಶಾಂತಂ ಪಾಪಂ. ಭರತ, ತಾಯಿ ತಂದೆಯರ ಜೀವ ಪವಿತ್ರ. ಅವರ ಸೇವೆಗಾಗಿ ಎಷ್ಟು ಕ್ರೂರವಾದ ಕಷ್ಟವನ್ನೂ ನಾನು ನನ್ನ ಮೇಲೆ ತಂದುಕೊಳ್ಳುತ್ತೇನೆ. ಇನ್ನೊಂದು ಸಂಗತಿ : ತಾಯಿ ಮಗನಿಗೆ ಸಿಂಹಾಸನ ಬೇಕೆಂದು ಕೇಳುವುದು ತಪ್ಪೆ ? ಹಿಂದೆ ಎಷ್ಟೊ ಸಲ ಎಲ್ಲೆಲ್ಲಿಯೂ ಇದು ನಡೆದಿಲ್ಲವೆ ?

ಭರತ : ಯಾವುದೊ ಒಂದು ವಾಗ್ದಾನದ ಮೇರೆಗೆ ಹೀಗೆ ಪೀಡಿಸಿ ಬಲಾತ್ಕಾರದಿಂದ ತೆಗೆದುಕೊಂಡರಲ್ಲ !

ರಾಮ : ಯಾಕೆ ಪೀಡೆ ಆಗಬೇಕು ? ಎಲ್ಲ ವಾಗ್ದಾನಗಳೂ ನೆರವೇರಬೇಕು, ಅಲ್ಲವೆ ? ಆಕೆ ಆತನ ಜೀವವನ್ನು ಹಿಂದೆ ಕಾಪಾಡಿದ್ದಳು. ನಾನು ಇದನ್ನೂ ಹೇಳಬಲ್ಲೆ : ನನ್ನ ಕಿವಿಗೆ ಸುದ್ದಿ ಬಿದ್ದಿದೆ. ಅಯೋಧ್ಯೆಗೆ ನಿನ್ನ ತಾಯನ್ನು ವಧುವಾಗಿ ತಂದಾಗ ನಮ್ಮ ತಂದೆಯವರು ಆಕೆಯ ತಾಯಿ ತಂದೆಯರಿಗೆ ಮಾತು ಕೊಟ್ಟಿದ್ದರಂತೆ ; ಅವಳಲ್ಲಿ ಹುಟ್ಟುವ ಮಗ ಸಿಂಹಾಸನಕ್ಕೆ ಅಧಿಕಾರಿಯಾಗುತ್ತಾನೆ ಎಂದು.

ಭರತ : ಆದರೂ ಆ ಬಗೆಗೆ ಯಾರೂ ಏನನ್ನೂ ಹೇಳಲಿಲ್ಲವೇಕೆ ?

ರಾಮ : ಇದು ಗಾಳಿ ಸುದ್ದಿ ; ನಿಶ್ಚಯ ಇದೇ ಎಂದು ಯಾರಿಗೂ ತಿಳಿದಿರಲಿಲ್ಲ.

ಭರತ : ವಸಿಷ್ಠರಿಗೆ ಗೊತ್ತಿತ್ತೆ ? ಸುಮಂತ್ರನಿಗೆ ? ತಾಯಿ ಕೌಸಲ್ಯೆಗೆ ?

ರಾಮ : ನನಗೂ ಗೊತ್ತಾಗಿ ತಿಳಿಯದು. ಅವರಿಗೆ ನಿಶ್ಚಯವಾಗಿ ತಿಳಿದಿದ್ದರೆ ಅವರು ಸೂಚಿಸಬಹುದು. ನನ್ನ ತಾಯಿಗೆ ಏನೊ ಸಂಶಯವಿತ್ತು. ಅಂಥ ಒಂದು ತಂದೆಯವರ ವಾಗ್ದಾನ ಇತ್ತೊ ಎಂದು. ಆಕೆಯ ಪಟ್ಟಾಧಿಕಾರ ನನಗೆ ಬರದೆ ಹೋಗಬಹುದು ಎಂಬ ವಿಷಯದಲ್ಲಿ ಮನಸ್ಸಿನಲ್ಲಿ ಒಂದು ಸಂದೇಹಕ್ಕಿಂತ ಹೆಚ್ಚಿನ ಭಾವವಿತ್ತು. ನನಗೂ ಆಕೆ ಎಂದೂ ಅದನ್ನು ಹೇಳಿದ್ದಿಲ್ಲ.

[ಇಷ್ಟು ಹೊತ್ತಿಗೆ ಕೌಸಲ್ಯೆ, ಸುಮಿತ್ರೆ, ಕೈಕೆ ಅಲ್ಲಿಗೆ ಬರುತ್ತಾರೆ. ಕೌಸಲ್ಯೆ ಬೇಗ ಇವರ ಜೊತೆ ಸೇರಿಕೊಳ್ಳುತ್ತಾಳೆ. ತಾಯಿ ಮಕ್ಕಳು ಒಬ್ಬರೊಬ್ಬರಿಗೆ ವಿಶೇಷ ಪ್ರೀತಿಯಿಂದ ಸ್ವಾಗತ ಕೊಡುತ್ತಾರೆ. ಕಣ್ಣುಗಳ ತುಂಬ ನೀರು.]

ಕೌಸಲ್ಯೆ : ಈ ಸಂಗತಿ ಖಂಡಿತವೆಂದು ನನಗೆ ಗೊತ್ತಿರಲಿಲ್ಲ. ಇಂಥ ಗಾಳಿ ಸುದ್ದಿ ಎಲ್ಲ ಕಡೆಯೂ ಹರಡಿತ್ತು, ಅಷ್ಟೆ.

ಭರತ : ನನ್ನ ತಾಯಿಗೆ ಗೊತ್ತಿತ್ತೆ ?

ಕೈಕೆ : ರಾಜ್ಯ ಬೇಕೆಂದು ಆ ಸಮಯದ ಮೇಲೆ ನಾನು ಕೇಳಲಿಲ್ಲ. ನನ್ನ ಕಡೆಯವರಿಗೆ ಮಾತು ಕೊಟ್ಟಿದ್ದರೆ, ಇಲ್ಲವೆ ಎಂಬುದೂ ಮುಖ್ಯವಲ್ಲ. ಅದನ್ನು ನನಗೆ ಯಾರೂ ಹೇಳಿಯೂ ಇರಲಿಲ್ಲ. ಅಸ್ಪಷ್ಟ ಗಾಳಿ ಸಮಾಚಾರ. ದುರ್ಬಲ ಸ್ವಾರ್ಥದ ದುರದೃಷ್ಟಕರ ಸಂದರ್ಭ ಒಂದರಲ್ಲಿ ಹಿಂದೆ ನಿಮ್ಮ ತಂದೆ ನನಗೆ ಒಂದು ಮಾತನ್ನು ಕೊಟ್ಟಿದ್ದರು. ಅದನ್ನು ನಾನು ಹಿಡಿದೆ. ಯಾವುದೊ ಕೆಟ್ಟ ಶಕ್ತಿ ನನ್ನನ್ನು ಹೊಕ್ಕಿತ್ತು. ಅದಕ್ಕಾಗಿ ನಾನೀಗ ಬೆಲೆ ತೆರುತ್ತಿದ್ದೇನೆ, ರಾಮ. ಕಹಿ ಫಲ. ನನಗೆ ಎಲ್ಲ ಹೋಯಿತು. ನೀನೊಬ್ಬನನ್ನು ಬಿಟ್ಟು ಪ್ರಪಂಚದಲ್ಲಿ ಇನ್ನೆಲ್ಲ ವನ್ನೂ ನನಗೆ ಕೈಗೊಪ್ಪಿಸುತ್ತಿದ್ದ ಆ ಗಂಡ ತೀರಿಕೊಂಡರು. ಎಲ್ಲರಿಗಿಂತಲೂ ಮಿಗಿಲು ಮೊದಲು ನೀನು, ಎರಡನೆಯವಳು ನಾನು. ಆತನು ನನಗೆ ಏನೂ

ಕೊಡಲಿಲ್ಲ ! ಈಗ ನನಗೆ ಬದುಕಲು ಕೂಡ ಏನೂ ಉಳಿದಿಲ್ಲ. ನನ್ನನ್ನು ಕ್ಷಮಿಸು, ರಾಮ. ನನ್ನ ಮಗನೊಡನೆ ನಾನೂ, ಇಲ್ಲಿ ಬಂದಿರುವ ಎಲ್ಲರೊಡನೆ ನಾನೂ ಮನವಿ ಮಾಡಿಕೊಳ್ಳುತ್ತೇನೆ. ಎಲ್ಲರೂ ಹಿಂದಕ್ಕೆ ಬನ್ನಿ. ನಮ್ಮೆಲ್ಲರನ್ನೂ ಸಂತೋಷಗೊಳಿಸಿ ಎಂದು ಬೇಡುತ್ತಿದ್ದೇನೆ. ಇದು ಹೀಗೆ ನಡೆಯಬೇಕಾಗಿರಲಿಲ್ಲ. ನೀನು ಪ್ರಾಮಾಣಿಕ. ಆ ಸಂಗತಿ ನನಗೆ ಮೊದಲಿಂದಲೂ ಗೊತ್ತು. ಪ್ರಮಾದ ; ತಪ್ಪಾಯಿತು. ಕ್ಷಮಿಸು, ಮರೆ.

(ಅಲ್ಲಿದ್ದ ಎಲ್ಲರೂ ಇದಕ್ಕೆ ಕರಗುತ್ತಾರೆ.)

ರಾಮ : ಅದು ನಿರ್ದಿಷ್ಟ ವಾರ್ತೆಯಾಗಿರಲಿಲ್ಲ ಎಂದೆನಲ್ಲವೆ ? ನಾನು ರಾಜನಾಗುವೆನೊ ಇಲ್ಲವೊ ಎಂಬ ವಿಷಯದಲ್ಲಿ ನನಗೆ ಯೋಚನೆ ಎಂದೂ ಇರಲಿಲ್ಲ. ಆಸಕ್ತಿಯಂತೂ ಇರಲಿಲ್ಲ. ನೀನೊ ನಾನೊ, ಭರತ, ಯಾರೂ ತಕ್ಕವರೇ. ಸೋದರರಾದ ನಮ್ಮಲ್ಲಿ ಯಾರು ರಾಜರಾದರೂ ಒಂದೇ : ದಕ್ಷತೆಯಿಂದ ಚೆನ್ನಾಗಿ ಆಳಬಲ್ಲೆವು ಎಂದು ನನ್ನ ಅಭಿಪ್ರಾಯ.

ಭರತ : ನೀನು ಯಾವಾಗಲೂ ಹೀಗೆ, ರಾಮ. ಸ್ವಾರ್ಥವನ್ನು ಯೋಚಿಸದವನು. ನೀನು ಮೊದಲು ಯೋಚಿಸುವುದು ಇನ್ನೊಬ್ಬನ ಕ್ಷೇಮವನ್ನು ; ಹಿತವನ್ನು. ನಿನ್ನ ಮೊದಲ ಪಕ್ಷಪಾತ ಎಂದಿಗೂ ಅದು. ನೀನು ಇತರ ಮನುಷ್ಯರಂತಲ್ಲ. ಈ ಮಹೋಕ್ತಿ ನಿಜ....

(ಹಿನ್ನೆಲೆಯಲ್ಲಿ : ದೇವಕಲ್ಪಂ ಋಜುಂ ದಾನ್ತಂ ರಿಪೂಣಾಮಪಿ ವತ್ಸಲಂ)

ನಿನ್ನ ಗುಣಗಾನ ಎಲ್ಲೆಲ್ಲೂ ಹಾಗೇ. ಹೀಗೇ ನಡೆದುಕೊಂಡೀಯೆ !

ರಾಮ : ಇದನ್ನೆಲ್ಲ ನುಡಿದು ನನ್ನನ್ನು ಸಂಕೋಚಗೊಳಿಸಬೇಡ, ಭರತ, ಬೇರೆ ಯಾವುದನ್ನು ಕುರಿತು ಯೋಚನೆ ಮಾಡಲೂ ನನಗೆ ಕಾಲವಿರಲಿಲ್ಲ. ತಂದೆಯವರ ಕೈಯಲ್ಲಿ ಮಾತನಾಡಲು ಕೂಡ ಆಗಲಿಲ್ಲ. ಅವರು ಕೆಂಗಾಲಾಗಿದ್ದರು. ಇದ್ದಕ್ಕಿದ್ದಂತೆ ಎಲ್ಲ ನಡೆಯಿತು. ನಮಗೆ ಯಾರಿಗೂ ತಿಳಿವಳಿಕೆ ಕೊಡದೆ ತಂದೆಯವರು ತಮ್ಮ ಮಂತ್ರಿವರ್ಗದವರಿಗೆ ನೇರವಾಗಿ ಪಟ್ಟಾಭಿಷೇಕದ ವಿಷಯವನ್ನು ಕುರಿತು ಮಾತನಾಡಿದ್ದರು ; ಸಭೆಯಲ್ಲಿ ಇದ್ದುಕೊಂಡು ಅವರು ತಮ್ಮ ಮನೋಭಿಪ್ರಾಯವನ್ನು ತಿಳಿಸಿದರು. ಮಂತ್ರಿಸಭೆ ಸರ್ವಮತದಿಂದ ಅಂಗೀಕಾರ ಮಾಡಲು ಘೋಷಣೆ ಹೊರಟಿತು. ಅದಾದ ತರುವಾಯವೇ ನನಗೆ ಅವರು ಹೇಳಿಕಳಿಸಿದರು. ಮಾರನೆಯ ದಿನವೇ ಇದು ನಡೆಯತಕ್ಕದ್ದೆಂದು ಒತ್ತಾಯ ಮಾಡಿದರು. ಇನ್ನೇನು ಮಾಡುವುದಕ್ಕೂ ಅವಕಾಶವಿರಲಿಲ್ಲ. ನಡೆದ ಘಟನೆಗಳು ಒಂದನ್ನೊಂದು ಹಿಂಬಾಲಿಸಿ ಅತಿ ವೇಗವಾಗಿ ನಡೆದವು. ಇದನ್ನು ಹೇಳುತ್ತೇನೆ, ಕೇಳು : ನಿನ್ನ

ತಾಯಿಯ ಮೇಲೆ ಎಂದೇ ಆಗಲಿ, ಕಠಿಣವಾಗಿ ನಡೆದುಕೊಳ್ಳಬೇಡ. ಆಕೆಯನ್ನು ಕುರಿತು ತಪ್ಪುಮಾತು, ಕಠಿನವಾದ ಮಾತು ನೀನು ಆಡಿದೆ ಎಂದು ನನ್ನ ಕಿವಿಗೆ ಬಿದ್ದರೆ ನನಗೆ ಅಸುಖವಾಗುತ್ತದೆ.

ಕೈಕೆ : ಏನು ವಿಶಾಲತೆ ನಿನ್ನದು, ಮಗು ! ನನ್ನ ಮನಸ್ಸಿನ ಮೇಲೆ ಬಹುದೊಡ್ಡ ಹೊರೆಯನ್ನು ಹೊರಿಸಿದ್ದೀಯೆ. ಹಿಂದಕ್ಕೆ ಬಾ, ಹಿಂದಕ್ಕೆ ಬಾ, ರಾಮ. ತಪ್ಪು ನನ್ನದು ; ಮಹಾಪರಾಧ.

ಕೌಸಲ್ಯೆ : ನೀನು ತುಂಬ ಒಳ್ಳೆಯವಳು, ಕೈಕೆ. ಭರತ, ಕೈಕೆ ಇಬ್ಬರೂ ಈಗ ನಿನ್ನನ್ನು ಕೇಳುತ್ತಿದ್ದಾರೆ, ರಾಮ, ಅಯೋಧ್ಯೆಗೆ ಹಿಂದಿರುಗು. ಸ್ವಲ್ಪ ಸಂತೋಷ ಬೆಳಗಬಹುದು. ನಿಮ್ಮ ತಂದೆಯನ್ನು ಕಳೆದುಕೊಂಡ ನಮ್ಮಂಥ ವೃದ್ಧರಿಗೆ ಒಂದಷ್ಟು ಹರ್ಷವಾಗಬಹುದು.

ರಾಮ : ಆಗದು, ಅಮ್ಮ. ಇಲ್ಲಿಗೆ ಸಂಬಂಧಪಟ್ಟುದು ಭರತನ, ಅವನ ತಾಯಿಯ ಇಷ್ಟ ಅಲ್ಲ. ನಾನೇ ಕೈಕೊಂಡ ಕರ್ತವ್ಯ : ಒಂದು ಸಾಲದ ಹೊರೆಯಿಂದ ತಂದೆಯ ಮೇಲೆ ಎರಗಿದ್ದ ವಾಗ್ದಾನದ ಚಿಂತೆಯನ್ನು ಪರಿಹಾರ ಮಾಡುವುದಕ್ಕಾಗಿ. ಧರ್ಮಪಾಶವೊಂದು ಅವರನ್ನು ಕಟ್ಟಿತ್ತು. ಸ್ವಂತ ನಿರ್ಧಾರದಿಂದ ಆ ತೀರ್ಮಾನವನ್ನು ನಾನು ತೆಗೆದುಕೊಂಡೆ. ಅವರೂ ನನ್ನ ಮೇಲೆ ಹೊರೆ ಹಾಕಲಿಲ್ಲ.

ಭರತ : ನಿನಗೆ ಬದಲಾಗಿ ನಾನು ಕಾಡಿನಲ್ಲಿರುತ್ತೇನೆ.

ರಾಮ : ಆಗದು, ಭರತ. ನಾನು ಒಪ್ಪಿದ ಸಮಯಗಳು ತಿಳಿಯಾಗಿವೆ, ನಿರ್ದಿಷ್ಟವಾಗಿವೆ. ನಾನು ಕಾಡಿನಲ್ಲಿರತಕ್ಕದ್ದು ; ಅಯೋಧ್ಯೆಯಲ್ಲಿ ನೀನು ಆಳತಕ್ಕದ್ದು ಎಂಬುದು ನೇಮ.

ವಸಿಷ್ಠ : ಭರತ ನಿನಗೆ ರಾಜ್ಯವನ್ನು ಒಪ್ಪಿಸುತ್ತಿದ್ದಾನೆ. ಕೈಕೆ ನೀನು ಮರಳಬೇಕೆಂದು ಬೇಡುತ್ತಿದ್ದಾಳೆ. ಅದು ನಿನ್ನನ್ನು ಎಲ್ಲ ಹೊಣೆಗಾರಿಕೆಗಳಿಂದಲೂ ಬಿಡುಗಡೆ ಮಾಡುತ್ತದೆ.

ರಾಮ : ತಂದೆಯವರ ವಾಗ್ದಾನವನ್ನು ವಿಪರೀತ ಮಾಡುತ್ತದೆ ; ಸಮಯ ಭಂಗವಾಗುತ್ತದೆ. ಇತರ ಅಧಿಕಾರಿಗಳ ಪ್ರಶ್ನೆ ಇಲ್ಲಿ ಬರುವುದಿಲ್ಲ. ಯಾವುದು ನನ್ನನ್ನು ಕಟ್ಟಿ ಹಿಡಿದಿದೆಯೊ ಅದು ಮಾಡುತ್ತೇನೆಂದು ನಾನು ಕೈಕೊಂಡದ್ದು. ನಾನು ಕೊಟ್ಟ ಮಾತು ನೆರವೇರದಾದರೆ, ಆತ ಪಾಡು ಪಡಬೇಕಾಗುತ್ತದೆ.

ವಸಿಷ್ಠ : ಈ ಸಂಗತಿ ನಿನಗೆ ತಿಳಿಯಬೇಕು, ರಾಮ. ಪರಿಸ್ಥಿತಿಯನ್ನು ನೋಡು, ರಾಮ. ಬಹುಕಾಲವಾದರೂ ಕೈಕೆಯನ್ನು ಮದುವೆಯಾದ ಮೇಲೂ ತಂದೆಗೆ ರಾಣಿಯರಾರಿಂದ ಮಕ್ಕಳಾಗಲಿಲ್ಲ. ಆದುದರಿಂದ ಮಕ್ಕಳಿಗಾಗಿ ದೇವತೆಗಳನ್ನು ಪ್ರಾರ್ಥಿಸಬೇಕಾಯಿತು. ಪುತ್ರಕಾಮೇಷ್ಟಿ ನಡೆಯಿತು. ಉತ್ಪನ್ನವಾದ

ಪಾಯಸವನ್ನು ಮೂವರು ರಾಣಿಯರಿಗೆ ಹಂಚಿದರು. ನೀವು ನಾಲ್ವರು ಹುಟ್ಟಿದಿರಿ. ಅದಕ್ಕೆ ಮುಂಚೆ ನಡೆದ ಯಾವ ಮಾತುಗಳೂ ಹೀಗೆ ಅಸತ್ತಾದವು. ಎಲ್ಲಕ್ಕಿಂತ ಮೇಲ್ಪಟ್ಟು ವಂಶದ ಸಂಪ್ರದಾಯಗಳು ಮೊದಲು ಸ್ಥಾಪಿತವಾಗಬೇಕು.

ರಾಮ : ಅದಲ್ಲ ಇಲ್ಲಿ ತೀರ್ಮಾನಕ್ಕಿರುವುದು, ಆಚಾರ್ಯ. ತಾಯಿ ಕೈಕೆ ಅಲ್ಲಿಯೇ ಇದ್ದಳು. ತನ್ನ ಮಗನಿಗೆ ರಾಜ್ಯವನ್ನು ಕೇಳಿದಳು. ತನ್ನ ತಂದೆಗೆ ನಮ್ಮ ತಂದೆ ಕೊಟ್ಟ ಮಾತು ನಿಜ. ಭರತನ ಸೋದರ ಮಾವನ ಮಾತಿನ ಮೇಲೆ ಆಕೆ ರಾಜ್ಯವನ್ನು ಕೇಳಲಿಲ್ಲ.

ಕೈಕೆ : ನಾನು ಸೋತೆ, ಮಗು.

ಕೌಸಲ್ಯೆ : ಒಟ್ಟು ಸ್ಥಿತಿಯನ್ನೆಲ್ಲ ನೀನು ಈಗ ಅರಿತುಕೊಳ್ಳಬಲ್ಲೆ ; ಇದನ್ನು ಉದಾರವಾಗಿ ಯೋಚಿಸು. ನಾವೆಲ್ಲ ಒಟ್ಟಿಗೆ ಸಂತೋಷಪಡುತ್ತೇವೆ.

ರಾಮ : ಅಸಾಧ್ಯ, ಅಮ್ಮ. ನನ್ನ ಮನಸ್ಸು ಬಗ್ಗದು. ನಾನು ಹಟವಾದಿ ಎಂದು ಕೊಳ್ಳಬೇಡ. ಇದು ಧರ್ಮದ ಶಾಸನ. ಸ್ವರ್ಗದಲ್ಲಿ ತಂದೆ ಇರುವಾಗ ಆತನ ಜೀವ ಸಂಪೂರ್ಣವಾಗಿ ತೃಪ್ತವಾಗಿರಲಿ ಎಂಬುದು ನನ್ನ ಮನಸ್ಸು. ನಹುಷ, ದೀಲಿಪ ಮುಂತಾದವರ ವಂಶದಲ್ಲಿ ಹುಟ್ಟಿದ ತಾನು ಮಾತಿಗೆ ತಪ್ಪಿದ ಮನುಷ್ಯ ನೆಂದು ದಶರಥ ದೇವನು ತಲೆ ತಗ್ಗಿಸುವಂತಾಗಬಾರದು. ಹದಿನಾಲ್ಕು ವರ್ಷ ಕಾಲ ಹೆಚ್ಚು ಕಾಲವಲ್ಲ. ಬೇಗ ಹಿಂದಕ್ಕೆ ಬರುತ್ತೇನೆ, ಖಂಡಿತವಾಗಿ.

ಭರತ : ನೀನು ಹಿಂತಿರುಗಬೇಕೆಂದು ನಿನ್ನ ಮೇಲೆ ಒತ್ತಾಯ ಹಾಕಲು ಇಲ್ಲಿ ಪ್ರಾಯೋಪವೇಶ ಮಾಡಬೇಕೆಂದು ಆಲೋಚನೆ ಮಾಡಿದ್ದೆ, ರಾಮ.

ರಾಮ : ನಮ್ಮ ವಂಶದ ಕ್ಷತ್ರಿಯನಿಗೆ ಪ್ರಾಯೋಪವೇಶ ತಕ್ಕುದಲ್ಲ, ಭರತ. ನಾವು ಘನತೆಗೆ ಹೆಸರಾದವರು. ಪೌರುಷದಿಂದ ನಮ್ಮ ಪಾಲಿಗೆ ಬಂದ ಭಾಗ್ಯವನ್ನು, ನಮ್ಮ ಜೀವಕ್ಕೆ ಒದಗಿಸಿದ ವಿಧಿಯನ್ನು ಎದುರಿಸಬೇಕಾದವರು. ಈಗ ನಿಮ್ಮೆಲ್ಲರ ಹೃದಯದಲ್ಲಿ ಏನಿದೆ ಎಂಬುದು ನನಗೆ ಗೊತ್ತಾಯಿತು. ಇನ್ನಾವ ಬಗೆಯ ಚಿಂತೆಗೂ ಎಡೆಯಿಲ್ಲ. ನನ್ನ ಪರವಾಗಿ ನಿಮ್ಮಲ್ಲಿ ಯಾರಿಗೂ ಕಠಿಣ ಭಾವನೆ ಇಲ್ಲವೆಂದು ಎಲ್ಲರಿಗೂ ಖಚಿತವಾಯಿತು. ನನ್ನ ಮನಸ್ಸು ಈಗ ಪೂರ್ತಿ ವಿಶದವಾಗಿದೆ. ರಾಜತ್ವಕ್ಕಿಂತ ಹೆಚ್ಚು ಬೆಲೆಯುಳ್ಳ ಮಾನ, ಗೌರವಗಳ ಪ್ರಮಾಣ ವನ್ನು ನೀನು ತಂದುಕೊಟ್ಟಿದ್ದೀಯೆ, ಭರತ. ಕೇಳಿದೆಯ ಲಕ್ಷ್ಮಣ ? ಕೇಳಿದೆಯ, ಸೀತಾ ? ನೋಡಿ, ನಾನೇ ಸ್ವಂತವಾಗಿ ಕೈಕೊಂಡದ್ದು ಇದು. ಉಳಿದ ಕಾಲವನ್ನು ಇಲ್ಲಿಯೇ ಕಳೆಯುತ್ತೇನೆ. ನಾಡಿನ ಮೇಲೆಲ್ಲ ಸಂಚರಿಸುತ್ತ. ಇನ್ನಾವ ವಿಷಯದಲ್ಲಿಯೂ ನಿಷ್ಠುರ ಭಾವ ಇಲ್ಲದೆ. ನಾವು ಕಾಡಿಗೆ ಬಂದದ್ದು ಇನ್ನೊಬ್ಬನ ಕಾರಣದಿಂದಲ್ಲ, ತಂದೆಯ ಮನಸ್ಸಿನ ಸಂತೋಷಕ್ಕಾಗಿ. ಅದಕ್ಕೂ

ಅಲ್ಲ; ಅವರನ್ನು ವಾಗ್ದಾನದ ಋಣದಿಂದ ಬಿಡುಗಡೆ ಮಾಡಲು. ಆತನಿಗೆ ಋಣ ಮುಕ್ತಿಯಾಗಲಿ.

ಭರತ : ಆತನಾಗುವನೆ ?

ರಾಮ : ಖಂಡಿತವಾಗಿ. ಈ ನೆಲೆ ಆತನಿಗೆ ವಿಶದವಾಗಿ ಗೊತ್ತಿದೆ.

(ಭರತ ಯಾವುದೊ ಮಾತನ್ನು ಆಚಾರ್ಯ ವಸಿಷ್ಠರ ಕಿವಿಯಲ್ಲಿ ಮೆಲ್ಲಗೆ ಹೇಳುತ್ತಾನೆ, ಅತೀವ ಉತ್ಸುಕತೆಯಿಂದ ಆತುರದಿಂದ.)

ವಸಿಷ್ಠ : (ಭರತನಿಗೆ) ಪ್ರಯತ್ನ ಮಾಡು, ಕುಮಾರ, ನೋಡೋಣ.

ಭರತ : ನೀನು ಹೀಗೆ ಹೇಳಿದ ಮೇಲೆ ನಿನ್ನನ್ನು ಪೀಡಿಸುವುದು ತರವಲ್ಲ, ಅಣ್ಣ. ಆದರೆ ನಿನ್ನಲ್ಲಿ ಒಂದು ಸಣ್ಣ ಮನವಿ. ನೀನು ಮಾತ್ರ ಅಯೋಧ್ಯೆಗೆ ಅಧಿಕಾರಿ, ರಾಜ ಎಂದು ನಮ್ಮೆಲ್ಲರಿಗೆ ನಿರ್ಧಾರವಿದೆ. ಅಯೋಧ್ಯೆಯಿಂದ ಅಧಿಕಾರ ನಡಸು ; ಎಲ್ಲಿಂದಲಾದರೂ ನಡಸು ; ಅದಲ್ಲ ಮುಖ್ಯ. ನಿನ್ನ ಸಮಯಗಳಿಗೆ ಒಳಪಟ್ಟೇ ನೀನು ನಡೆಯಬೇಕೆಂದರೆ ನಿನ್ನ ಹೆಸರಲ್ಲಿ ನಿನ್ನ ಕಾರ್ಯಭಾರಿಯಾಗಿ ಅಯೋಧ್ಯೆಯಲ್ಲಿ ಆಳುವಂತೆ ಅಪ್ಪಣೆ ಕೊಡು. ನಾನು ನಿನ್ನ ಪ್ರತಿನಿಧಿ ಮಾತ್ರ. ನಿನ್ನ ಹಿರಿಮೆಗೆ ಮೂರ್ತಿತ್ವ ಬರುವಂತೆ ನಡೆದುಕೊಳ್ಳುತ್ತೇನೆಂದು ನಿನಗೆ ಮಾತು ಕೊಡುತ್ತೇನೆ. ನನ್ನ ಕೈಲಾಗುವಷ್ಟು ಮಟ್ಟಿಗೆ ನಿನ್ನ ಸ್ಫೂರ್ತಿಯಿಂದ ನಿನ್ನ ಗುಣ ಸಾಧಿತವಾಗುವಂತೆ ನೆರವೇರಿಸುತ್ತೇನೆ. ಇದು ಕಷ್ಟ ; ಆದರೆ ನಿನ್ನ ಆತ್ಮಶಕ್ತಿಯೇ ನನ್ನನ್ನು ನಡಸಲೆಂದು ಅದನ್ನು ಆಹ್ವಾನ ಮಾಡಿಕೊಳ್ಳುತ್ತ ರಾಜಕಾರ್ಯವನ್ನು ನಡಸುತ್ತೇನೆ.

ವಸಿಷ್ಠ : ಇದೇನು ದೊಡ್ಡ ವರವಲ್ಲ, ರಾಮ. ಇನ್ನು ಹದಿನಾಲ್ಕು ವರ್ಷ ಕಾಲ ಭರತನು ನಿನ್ನ ಸ್ಫೂರ್ತಿಯಿಂದ ಪೋಷಿತನಾಗಲಿ. ಅವನಿಗೆ ನಿನ್ನಲ್ಲಿರುವ ಭಕ್ತಿ ಶ್ರದ್ಧೆ ಅದನ್ನು ಸಾಧಿಸಿಯಾವು. ತಾಯಂದಿರಿಗೆ ಇಷ್ಟನ್ನಾದರೂ ನಡಸಿಕೊಡು, ರಾಮ.

ಕೌಸಲ್ಯೆ, ಸುಮಿತ್ರೆ, ಕೈಕೆ : ಸ್ವಲ್ಪವಾದರೂ ಹರ್ಷದಿಂದ ಹಿಂದಕ್ಕೆ ಹೋಗುತ್ತೇವೆ. ಇಷ್ಟಕ್ಕಾದರೂ ಒಪ್ಪಿಕೊ, ರಾಮ.

ರಾಮ : ನನಗೆ ಇದನ್ನು ಒಪ್ಪಿಕೊಳ್ಳಲು ಕಷ್ಟ ಮಾಡುತ್ತಿದ್ದೀರಿ, ಆಚಾರ್ಯ. ಅಮ್ಮ, ತಾಯಿಯರೆ, ನಿಜವಾಗಿ ಕಷ್ಟ. ಇದಕ್ಕೆ ಒಪ್ಪಿದರೆ ಸರಿಯಾದ್ದನ್ನು ಮಾಡುತ್ತಿದ್ದೇನೊ ಇಲ್ಲವೊ ನಾನರಿಯೆ. ಆದರೂ ಭರತನು ಒಳ್ಳೆಯ ಸೋದರ. ಸ್ವಲ್ಪ ಮಟ್ಟಿಗಾದರೂ ಅವನು ಉಲ್ಲಾಸಗೊಂಡರೆ ಎಲ್ಲರಿಗೂ ಸಂತೋಷವಾಗುತ್ತದೆ.

ವಸಿಷ್ಠ : ಇಷ್ಟಕ್ಕಾದರೂ ನೀನು ಒಪ್ಪಿಕೊಂಡರೆ ನನಗೆ ಮಹತ್ತರ ತೃಪ್ತಿಯಾಗುತ್ತದೆ. ಇತರ ಜನನಾಯಕರನ್ನು ಹಿರಿಯರನ್ನು ಬೇಕಾದರೆ ಕೇಳು. ಈ ಸಂಗತಿಯನ್ನು ಅವರೂ ಕೇಳಲಿ. ನಿಜವಾಗಿ ಅವರಿಗೆ ಸಂತೋಷವಾಗುತ್ತದೆ.

(ಇಷ್ಟು ಹೊತ್ತಿಗೆ ಮುಖ್ಯರೆಲ್ಲರೂ ಅಲ್ಲಿಗೆ ಬಂದು ಸಂಗತಿ ತಿಳಿದು ತಮ್ಮ ಹರ್ಷವನ್ನು ವ್ಯಕ್ತಪಡಿಸುವರು.)

ಭರತ : ಅದರ ಸಂಕೇತವಾಗಿ ಒಂದು ಸಣ್ಣ ಪ್ರಾರ್ಥನೆಯಿದೆ. ನೀನು ಸಿಂಹಾಸನದ ಮೇಲೆ ಕುಳಿತು ಕಿರೀಟಧಾರಣೆ ಮಾಡಲೊಪ್ಪಿದರೆ ಒಡೆಯನೊಬ್ಬನ ಸೇವಕನಾಗಿ ರಾಜನ ಕರ್ತವ್ಯಗಳನ್ನು ಹೊತ್ತು ನಡಸುತ್ತೇನೆ. ಇದೊ, ಈ ಪಾದುಕೆಗಳ ಮೇಲೆ ನಿಲ್ಲು. ನಿನ್ನ ಸಿಂಹಾಸನಾರೋಹಣಕ್ಕಾಗಿ ಇದನ್ನು ನಮ್ಮೊಡನೆ ತಂದಿದ್ದೇವೆ. ನೀನು ಅಯೋಧ್ಯೆಯಲ್ಲಿಯೇ ಇರುವೆಯೆಂಬಂತೆ ನಿನ್ನ ಅಧಿಕಾರದ ಸಂಕೇತವಾಗಿ ಈ ಪಾದುಕೆ ಇರುತ್ತದೆ. ನಾನು ನಿನ್ನ ಕಾರ್ಯಭಾರಿ. ಅದನ್ನು ಕೊಂಡು ಹೋಗಿ ಸಿಂಹಾಸನದ ಮೇಲಿಟ್ಟು ನಿನಗೆ ಸೇವೆಯನ್ನು ಸಲ್ಲಿಸುತ್ತೇನೆ. ರಾಜಕಾರ್ಯವನ್ನು ನಡಸುತ್ತ ನಾಡಿಗೆ, ಜನಕ್ಕೆ ಏನು ಕಾರ್ಯಗಳು ನಡೆಯುತ್ತಿವೆ ಎಂಬುದನ್ನು ದಿನವೂ ಅದಕ್ಕೆ ವರದಿ ಒಪ್ಪಿಸುತ್ತೇನೆ. ಹೀಗೆ ನಾನು ಅಯೋಧ್ಯೆಯಲ್ಲಿಯೂ ನೀನು ಕಾಡಿನಲ್ಲಿಯೂ ಇರುವಂತಾಗುತ್ತದೆ. ಏನು ದುಃಖ ಇದು !—ಹೀಗೆ ಆಗಬೇಕಾದುದು ! ಆ ಬಗೆಯ ಚಿಂತೆ ಹಗಲು ರಾತ್ರಿ ನನ್ನ ಮನಸ್ಸನ್ನು ಅಶಾಂತ ಮಾಡಿದೆ. ನೀನು ಹೊರಗಿರುವ ಕಾಲದ ಪೂರ್ತಿ—ನೀನು ಅಯೋಧ್ಯೆಯನ್ನು ಬಿಟ್ಟು ಹೊರಟ ಹದಿನಾಲ್ಕು ವರ್ಷದ ಮೇಲೆ ಮೂರು ದಿನಗಳು ಕಾಯುತ್ತೇನೆ. ಆ ಅವಧಿಯಲ್ಲಿ ನೀನು ಅಯೋಧ್ಯೆಗೆ ಹಿಂದಿರುಗದಾದರೆ ಅಗ್ನಿ ಪ್ರವೇಶ ಮಾಡುತ್ತೇನೆ. ಅದು ನನ್ನನ್ನು ದಹಿಸಲಿ. ಅಲ್ಲಿ ಇನ್ನು ಯಾರು ಇರುತ್ತಾರೆಯೊ ಇನ್ನು ಯಾರು ಇರುವರೊ ಅವರು ಅಯೋಧ್ಯೆಯನ್ನು ಆಳಲಿ. ಈ ಒಡಂಬಡಿಕೆಯ ಮೇಲೆ ನಾನು ಹಿಂದಕ್ಕೆ ಹೋಗುತ್ತೇನೆ. ಈ ಮಾತು ನಮ್ಮಿಬ್ಬರ ಮೇಲೆ ಕಡ್ಡಾಯವಾಗಿ ಹೊರುತ್ತದೆ, ಆಚಾರ್ಯ ವಸಿಷ್ಠರು, ತಾಯಿಯರು, ಜನನಾಯಕರು, ಲಕ್ಷ್ಮಣ, ಸೀತಾದೇವಿ, ಶತ್ರುಘ್ನ ಇದಕ್ಕೆ ಸಾಕ್ಷಿ.

ರಾಮ : ಈಗ ಮಾಡಲಾಗುವುದಿಲ್ಲ ಎನ್ನಲಾರೆ, ಭರತ. ನಿನ್ನ ಮೇಲೆ ನನಗಿರುವ ಪ್ರೀತಿಯನ್ನು ನಾನು ಹೇಗೆ ವ್ಯಕ್ತಪಡಿಸಲಿ ? ತಂದೆಗೆ ತಕ್ಕ ಒಳ್ಳೆಯ ಮಗನಾಗಿರಲು ನಾನು ಯೋಚಿಸುತ್ತಿದ್ದೆ. ಅದನ್ನು ಪ್ರಮಾಣಪಡಿಸಬೇಕೆಂದು ಯತ್ನಿಸಿದೆ. ಎಂಥ ತಮ್ಮ ನೀನು ! ತಂದೆಗೂ ನೆಮ್ಮದಿ ಉಂಟಾಗಲಿ. ಇದಕ್ಕೆ ಪ್ರತಿ ನಾನು ಏನು ಕೊಡಲಿ ? ಆಚಾರ್ಯರೆ, ಮಂತ್ರಿಗಳೆ, ನಮ್ಮ ಜನವರ್ಗದ ನಮ್ಮ ವಂಶದ ಈ ಮಹಾತ್ಮನನ್ನು ಶ್ರದ್ಧೆ ವಿಶ್ವಾಸಗಳಿಂದ ನೋಡಿಕೊಳ್ಳಿ. ನನ್ನ

ಆಲೋಚನೆಗಳೆಲ್ಲ ನಿಮ್ಮೊಡನೆಯೇ ಇದ್ದಂತೆ ಭಾವಿಸಿ. ಧರ್ಮದ ಹರಕೆ ಎಲ್ಲರ ಮೇಲೂ ಇರಲಿ. ತಾಯಿ ಕೌಸಲ್ಯೆ ನನಗೆ ಮಾಡಿದ ಹರಕೆ ಇದು—

ಯಂ ಪಾಲಯಸಿ ಧರ್ಮಂ ತ್ವಂ ಧೃತ್ಯಾ ಚ ನಿಯಮೇನ ಚ
ಸ ವೈ ರಾಘವ ಶಾರ್ದೂಲ ಧರ್ಮಸ್ತ್ವಾಂ ಅಭಿರಕ್ಷತು.

ಅದು ನಿನ್ನನ್ನೂ ಕಾಪಾಡಲಿ.

(ಸ್ವರ್ಣ ಪಾದುಕೆಯನ್ನು ತರುತ್ತಾರೆ. ರಾಮ ಅದರ ಮೇಲೆ ನಿಲ್ಲುತ್ತಾನೆ. ಹೂವಿಂದ ಅದನ್ನು ಅಲಂಕರಿಸಿ ಪೂಜೆ ಸಲ್ಲಿಸಿದ ಮೇಲೆ ವಾದ್ಯಗಳ ಮೊಳಗು, ತುತೂರಿ ದುಂದುಭಿ ರವ. ಸಂಭ್ರಮ. ಅಲ್ಲಿ ನೆರೆದಿರುವವರೆಲ್ಲರೂ ಸಂತೋಷದ ಉಕ್ತಿಗಳನ್ನು ಹೇಳುತ್ತಿರಲು ರಾಮನ ಕಾಲುಗಳಿಂದ ಮೃದುವಾಗಿ ಪಾದುಕೆಗಳನ್ನು ಬಿಡಿಸಿ ಭರತನು ತಲೆಯ ಮೇಲಿಟ್ಟು ಪಲ್ಲಕ್ಕಿಯಲ್ಲಿ ಅದನ್ನು ಸ್ಥಾಪಿಸುತ್ತಾನೆ. ಕೌಸಲ್ಯೆ ರಾಮನನ್ನು ಆರೈದು ಪ್ರೀತಿಯಿಂದಲೂ ಅಕ್ಕರೆಯಿಂದಲೂ ಆಶೀರ್ವದಿಸಿ ಹೋಗುತ್ತಾಳೆ. ತಾಯಿಯರಿಗೆ ಆಚಾರ್ಯರಿಗೆ ರಾಮ ಪ್ರಣಾಮ ಮಾಡುತ್ತಾನೆ. ಸೀತಾ ಲಕ್ಷ್ಮಣರೂ ಹಾಗೇ. ಎಲ್ಲರೂ ಹಿಂದಕ್ಕೆ ಪ್ರಯಾಣ ಮಾಡಲು ಸಿದ್ಧರಾಗುತ್ತಾರೆ. ಸೋದರರು ಒಬ್ಬರನ್ನೊಬ್ಬರು ತಬ್ಬಿಕೊಳ್ಳುತ್ತಾರೆ. ಭರತ ಶತ್ರುಘ್ನ ಇಬ್ಬರೂ ರಾಮನಿಗೂ ಸೀತೆಗೂ ನಮಸ್ಕಾರ ಮಾಡುತ್ತಾರೆ. ಸೀತೆ ತಾಯಿಯರಿಗೆಲ್ಲ ಅವರ ಪಾದಗಳನ್ನು ಮುಟ್ಟಿ ನಮಸ್ಕರಿಸುತ್ತಾಳೆ. ಎಲ್ಲರ ಕಣ್ಣಲ್ಲಿಯೂ ನೀರು. ಹಿರಿಯರ ಹರಕೆ ಪಡೆದು ವಸಿಷ್ಠರನ್ನು ಬೀಳ್ಕೊಟ್ಟು ಈ ಮೂವರೂ ಆಶ್ರಮದೊಳಕ್ಕೆ ಹಿಂದಿರುಗುತ್ತಾರೆ.

ಜಯ ರಾಮ ಜಯ ರಾಮ

ಜಯ ಜಯ ರಾಮ

ಎಂಬ ಘೋಷ ಎಲ್ಲೆಲ್ಲೂ ಕೇಳುತ್ತದೆ.)

(ತೆರೆ)

# ಪಿಗ್‌ಮೇಲಿಯನ್

# ಪಾತ್ರಗಳು

| | |
|---|---|
| ಪ್ರೊ. ಹಿಗ್ಗಿನ್ಸ್ | ಶಿಕ್ಷಾದಿ ಶಾಸ್ತ್ರಗಳ ವಿದ್ವಾಂಸ |
| ಕರ್ನಲ್ ಪಿಕರಿಂಗ್ | ಜೊತೆಯ ವಿದ್ವಾಂಸ, ಸ್ನೇಹಿತ |
| ಆಲ್‌ಫ್ರೆಡ್ ಡೂಲಿಟ್ಲ್ | ದೂಳು ಹೊಡೆಯುವವ |
| ಫ್ರೆಡ್ಡಿ | ಮಧ್ಯಮ ವರ್ಗದ ಯುವಕ |
| ಶ್ರೀಮತಿ ಹಿಗ್ಗಿನ್ಸ್ | ಪ್ರೊಫೆಸರ ತಾಯಿ |
| ಎಲಿಸ ಡೂಲಿಟ್ಲ್ | ಹೂಮಾರುವ ಹುಡುಗಿ, ಆಲ್‌ಫ್ರೆಡ್ ಮಗಳು |
| ಮಿಸೆಸ್ ಪಿಯರ್ಸ್ | ಹಿಗ್ಗಿನ್ಸ್ ಮನೆವಾಳ್ತಿಯ ಹೆಂಗಸು |
| ತಾಯಿ ಐನ್ಸ್‌ಫರ್ಡ್‌ಹಿಲ್ | ಫ್ರೆಡ್ಡಿ ತಾಯಿ |
| ಕ್ಲ್ಯಾರಾ ಐನ್ಸ್‌ಫರ್ಡ್‌ಹಿಲ್ | ಫ್ರೆಡ್ಡಿ ತಂಗಿ |

ಪರಿಚಾರಿಕೆ, ಇತರ ಚಿಲ್ಲರೆ ಗಂಡಸರು, ಕೋವೆಂಟ್ ಗಾರ್ಡನ್ ನಾಟಕ ಶಾಲೆಯ ಬಳಿಯುವರು ಇತ್ಯಾದಿ.

# ಅಂಕ ಒಂದು

[ಕೋವೆಂಟ್ ಗಾರ್ಡನ್ ನಾಟಕ ಶಾಲೆ. ರಾತ್ರಿ 11-15 ಗಂಟೆ. ಬೇಸಗೆಯು ದೊಡ್ಡ ಮಳೆ ಸುರಿಯುತ್ತಿದೆ, ಗಾಡಿಗಳ ಸಿಳ್ಳೆಗಳು ಎಲ್ಲಾ ದಿಕ್ಕಿನಿಂದಲೂ ಹುಚ್ಚು ಹುಚ್ಚಾಗಿ ಕೇಳಿಬರುತ್ತಿವೆ. ಪಾದಚಾರಿಗಳು ಆಸರೆಗಾಗಿ ಪೇಟೆ ಅಂಗಡಿಗಳಿಗೆ ಹೋಗುತ್ತಿದ್ದಾರೆ. ಸೆಂಟ್‌ಪಾಲ್ಸ್ ಚರ್ಚಿನ ಮೊಗಸಾಲೆಗೆ ಬರುತ್ತಿದ್ದಾರೆ. ಈಗಾಗಲೇ ಅಲ್ಲಿ ಬಹು ಮಂದಿ ಸೇರಿದ್ದಾರೆ. ಅವರಲ್ಲಿ ಒಬ್ಬ ಕುಲೀನ ಸ್ತ್ರೀ, ಆಕೆಯ ಮಗಳು-ಸಂಜೆಯ ಉಡುಪಿನಲ್ಲಿದ್ದಾರೆ. ಅವರೆಲ್ಲ ಖಿನ್ನರಾಗಿ ಮಳೆಯ ಕಡೆ ನೋಡುತ್ತಿದ್ದಾರೆ. ಒಬ್ಬನು ಮಾತ್ರ ಇತರರ ಕಡೆಗೆ ಬೆನ್ನು ತಿರುಗಿಸಿ ತನ್ನ ನೋಟ್‌ಬುಕ್ಕಿನಲ್ಲಿ ಏನನ್ನೋ ಬೇಗಬೇಗ ಬರೆಯುವುದರಲ್ಲಿ ತೊಡಗಿ ಅದರಲ್ಲಿ ಪೂರ್ತಿ ಮಗ್ನನಾಗಿರುವಂತಿದ್ದಾನೆ. ಚರ್ಚಿನ ಗಡಿಯಾರ, ಗಂಟೆಯ ಮೊದಲ ಪಾದವನ್ನು ಬಡಿಯುತ್ತಿದೆ.]

ಮಗಳು : (ಮಧ್ಯದ ಕಂಬಗಳ ನಡುವೆ, ತನ್ನ ಎಡಕ್ಕಿರುವ ಕಂಬದ ಹತ್ತಿರದಿಂದ) ಚಳಿ ಮೂಳೆ ಮುಟ್ಟುತ್ತಿದೆ. ಫ್ರೆಡ್ಡಿ ಇಷ್ಟು ಹೊತ್ತು ಏನು ಮಾಡುತ್ತಿದ್ದಾನೆ? ಅವನು ಹೋಗಿ ಇಪ್ಪತ್ತು ನಿಮಿಷ ಆಯಿತು.

ತಾಯಿ : (ಮಗಳ ಬಲಗಡೆಯಿಂದ) ಅಷ್ಟು ಹೊತ್ತು ಆಗಿಲ್ಲವೇ. ಆದರೂ ಈವರೆಗೆ ಅವನು ನಮಗೊಂದು ಗಾಡಿತರಬೇಕಿತ್ತು.

[ಪಕ್ಕದಲ್ಲಿ ನಿಂತವ, ಆ ಸ್ತ್ರೀಯ ಬಲಗಡೆಯಿಂದ]

ಒಬ್ಬ : ಹನ್ನೊಂದೂವರೆಗೆ ಮುಂಚೆ ಅವರಿಗೆ ಗಾಡಿ ಎಲ್ಲಿ ಸಿಗುತ್ತಮ್ಮ ? ನಾಟಕ ಶಾಲೆಯ ಸಂಪಾದನೆಯನ್ನೆಲ್ಲ ಕಳೆದುಕೊಂಡು, ಗಾಡಿಯವರು ಆಗ ಹಿಂದಿರುಗುತ್ತಾರೆ.

ತಾಯಿ : ನಮಗೆ ಗಾಡಿ ಅಗತ್ಯವಾಗಿ ಬೇಕಲ್ಲ ? ಹನ್ನೊಂದೂವರೆವರೆಗೂ ನಿಂತಿರುವುದಕ್ಕಾಗುತ್ತದೆಯೆ ? ಸರಿಯಾಗಲಿಲ್ಲ.

ಒಬ್ಬ : ಇದರಲ್ಲಿ ನನ್ನದೇನೂ ತಪ್ಪಿಲ್ಲ ಅಮ್ಮ.

ಮಗಳು : ಫ್ರೆಡ್ಡಿ ಸ್ವಲ್ಪ ಸುಟಿ ಇದ್ದಿದ್ದರೆ ನಾಟಕ ಶಾಲೆಯ ಬಾಗಿಲಿನಲ್ಲಿಯೇ ಒಂದು ಗಾಡಿ ಸಿಕ್ಕುತಿತ್ತು.

ತಾಯಿ : ಪಾಪ, ಅವನೇನು ಮಾಡಬಹುದಾಗಿತ್ತು ?

ಮಗಳು : ಬೇರೆಯವರಿಗೆ ಗಾಡಿ ಸಿಕ್ಕಲ್ಲವೆ ? ಅವನಿಗೆ ಏಕೆ ಸಿಕ್ಕಲಿಲ್ಲ ?

[ಸೌತ್‌ಹ್ಯಾಂಪ್ಟನ್ ಬೀದಿಯ ಕಡೆಯಿಂದ ಫ್ರೆಡ್ಡಿ ಅವಸರದಿಂದ ಬಂದು ನೀರು ಸುರಿಯುತ್ತಿರುವ ಚತ್ರಿಯನ್ನು ಮಡಿಸಿ ಅವರ ನಡುವೆ ನಿಲ್ಲುತ್ತಾನೆ. ೨೦ ವಯಸ್ಸಿನ ಯುವಕ. ಸಂಜೆಯ ಉಡುಪನ್ನು ತೊಟ್ಟಿದ್ದಾನೆ. ಹೆಜ್ಜೆಯ ಹರಡುಗಳಲ್ಲಿ ತುಂಬಾ ಒದ್ದೆಯಾಗಿದೆ.]

ಮಗಳು : ಏನು, ಗಾಡಿ ಸಿಕ್ಕಲ್ಲವೆ ?

ಫ್ರೆಡ್ಡಿ : ವಿಶ್ವಾಸಕ್ಕಿಲ್ಲ ; ಹಣ ಕೊಡುತೇನೆಂದರೆ ಇಲ್ಲ. ಒಂದು ಗಾಡಿಯೂ ಸಿಗುವಹಾಗಿಲ್ಲ.

ತಾಯಿ : ಫ್ರೆಡ್ಡಿ, ಲೊ, ಒಂದಾದರೂ ಇರಬೇಕು. ನೀನು ಪ್ರಯತ್ನಿಸಿಲ್ಲ.

ಮಗಳು : ಬೇಜಾರಮ್ಮ, ನನಗೆ. ನಾವೇ ಹೋಗಿ ಒಂದು ಗಾಡಿ ತರಬೇಕು ಎಂದು ಎಣಿಸುತ್ತಿದ್ದೀಯೇನೊ ?

ಫ್ರೆಡ್ಡಿ : ಹೇಳುತಿದ್ದೇನಲ್ಲ, ಇದ್ದವೆಲ್ಲ ಬೇರೆಯವರಿಗೆ ಗೊತ್ತಾಗಿವೆ. ಮಳೆ ಹಟಾತ್ತಾಗಿ ಬಂತು : ಯಾರೂ ಅದಕ್ಕೆ ಸಿದ್ಧರಾಗಿರಲಿಲ್ಲ ; ಪ್ರತಿಯೊಬ್ಬರೂ ಗಾಡಿ ತೆಗೆದುಕೊಳ್ಳಲೇಬೇಕಾಯಿತು. ಒಂದು ಕಡೆ ಚೇರಿಂಗ್ ಕ್ರಾಸ್‌ವರೆಗೂ ಹೋಗಿದ್ದೆ. ಇನ್ನೊಂದು ಕಡೆ ಲಡ್ಗೇಟ್ ಸರ್ಕಸ್ ಹತ್ತಿರದವರೆಗೂ ಹೋಗಿದ್ದೆ. ಇದ್ದವೆಲ್ಲ ಗೊತ್ತಾಗಿ ಹೋಗಿದ್ದವು.

ತಾಯಿ : ಟ್ರಫಾಲ್ಗರ್ ಚೌಕದಲ್ಲಿ ಪ್ರಯತ್ನಿಸಿದೆಯ ?

ಫ್ರೆಡ್ಡಿ : ಆ ಚೌಕದಲ್ಲಿ ಒಂದೂ ಇರಲಿಲ್ಲ.

ಮಗಳು : ನೀನು ಪ್ರಯತ್ನ ಮಾಡಿದೆಯ ?

ಫ್ರೆಡ್ಡಿ : ಚೇರಿಂಗ್ ಕ್ರಾಸ್ ಸ್ಟೇಷನಿನಷ್ಟು ದೂರ ಹೋಗಿ ಪ್ರಯತ್ನಿಸಿದೆ. ಹ್ಯಾಮರ್‌ಸ್ಮಿತ್‌ವರೆಗೂ ನಡೆದುಹೋಗಬೇಕಿತ್ತೆಂಬುದೇನು ನಿನ್ನಿಚ್ಛೆ ?

ಮಗಳು : ನೀನು ಪ್ರಯತ್ನಿಸಿಯೇ ಇಲ್ಲ.

ತಾಯಿ : ನಿಜವಾಗಿ ನಿನ್ನ ಕೈಯಲ್ಲಿ ಏನೂ ಆಗೋದಿಲ್ಲವೊ, ಫ್ರೆಡ್ಡಿ. ತಿರುಗಿ ಹೋಗು ; ಒಂದು ಗಾಡಿ ಸಿಕ್ಕುವವರೆಗೂ ಹಿಂದಕ್ಕೆ ಬರಬೇಡ.

ಫ್ರೆಡ್ಡಿ : ವ್ಯರ್ಥವಾಗಿ ನಾನು ನೆನೆಯಬೇಕಾಗುತ್ತೆ—ಅಷ್ಟೇ.

ಮಗಳು : ಇಲ್ಲಿ ನಾವು ಈ ರಾತ್ರಿಯೆಲ್ಲ ಮಳೆಗಾಳೀಲಿ ನಿಂತಿರಬೇಕೇನು ? ಮೈಮೇಲೆ ಹೆಚ್ಚು ಬಟ್ಟೆಗಳೂ ಇಲ್ಲವೇ ! ಸ್ವಾರ್ಥಿ ನೀನು !

ಫ್ರೆಡ್ಡಿ : ಆಗಲಿ, ಆಗಲಿ : ಹೋಗ್ತೇನೆ, ಹೋಗ್ತೇನೆ.

[ಚತ್ರಿಯನ್ನು ಅಗಲವಾಗಿ ತೆರೆದು ಸ್ಟ್ರ್ಯಾಂಡ್ ದಿಕ್ಕಿಗೆ ಹೋಗುತ್ತಾನೆ. ಎದುರಿಗೆ ಬರುತ್ತಿದ್ದ ಹೂಮಾರುವ ಹುಡುಗಿಗೆ ಡಿಕ್ಕಿ ಹೊಡೆಯುತ್ತಾನೆ. ಅವಳೂ ಆಸರೆಗಾಗಿ ಬೇಗ ಬೇಗ ಈ ಕಡೆ ಧಾವಿಸುತ್ತಿದ್ದಾಳೆ. ಅವಳ ಕೈಯಿಂದ ಹೂವಿನ ಮಕ್ಕರಿ ಬೀಳುತ್ತದೆ.

ಕಣ್ಣನ್ನು ಕೋರೈಸುವಂತೆ ಮಿಂಚು ಒಂದು ಸಲ ಮಿಂಚುತ್ತದೆ. ಆ ಕ್ಷಣದಲ್ಲಿಯೇ ಗುಡುಗು ಮೊಳಗಿ ಈ ಘಟನೆಗೆ ಜಮಾವಣೆ ಸೇರಿಸುತ್ತದೆ.]

ಹೂವಿನ ಹುಡುಗಿ : ಇದ್ಯಾನ್ ಫ್ರೆಡ್ಡಿ. ಯಾವ ಕಡೆ ಓಯ್ತಿದ್ದೀ ನೋಡ್ಬಾರ್ದಾ, ರಾಜ !

ಫ್ರೆಡ್ಡಿ : ತಪ್ಪಾಯ್ತು. ಕ್ಷಮಿಸು. (ನುಗ್ಗಿ ಹೊರಟುಹೋಗುತ್ತಾನೆ.)

ಹೂವಿನ ಹುಡುಗಿ : (ಎರಚಿ ಬಿದ್ದ ಹೂವನ್ನು ಆಯ್ದುಕೊಂಡು ಅವನ್ನು ಬುಟ್ಟಿಯೊಳಗೆ ಇರಿಸಿಕೊಳ್ಳುತ್ತಾಳೆ.) ಎಂತೆ ಮರ್ಯಾದವಂತ. ಎಲ್ಡು ಗೊಂಚಲು ವಾಯ್‌ಲೆಟ್ ಮಣ್ಣಲ್ಲಿ ತುಳಿದು ಬಿತ್ತು.

[ಕಂಬದ ಅಡಿ ಪೀಠದಲ್ಲಿ ಹೂಗಳನ್ನು ವಿಂಗಡಿಸುತ್ತ ಮಹಿಳೆಯ ಬಲಕ್ಕೆ ಕುಳಿತುಕೊಳ್ಳುತ್ತಾಳೆ. ನೋಡಲು ಆಕರ್ಷಕಳೇನಲ್ಲ. ವಯಸ್ಸು ೧೮–೨೦ ವರ್ಷ ಇರಬಹುದು. ಹೆಚ್ಚಿಲ್ಲ. ಲಂಡನಿನ ದೂಳು, ಹೊಗೆ ಬಿದ್ದು ಕೊಳಕಾದ ನಾವಿಕರ ಹ್ಯಾಟೊಂದನ್ನು ಹಾಕಿಕೊಂಡಿದ್ದಾಳೆ. ತಲೆ ಕೂದಲು ನೀರು ಕಂಡಂತಿಲ್ಲ. ಬುರಸು ಬಾಚಣಿಗೆ ಹೆಚ್ಚಾಗಿ ಕಂಡಿಲ್ಲ. ಅದರ ಸುಂಡಿಲಿ ಬಣ್ಣ ಸಹಜವಿರಲಾರದು. ತನಗೆ ಶಕ್ಯವಾದಷ್ಟು ಶುಚಿಯಾಗಿದ್ದಾಳೆ. ಆ ಮಹಿಳೆಯರಿಗೆ ಹೋಲಿಸಿದರೆ ತುಂಬಾ ಕೊಳೆ. ಆಕೃತಿ ಲಕ್ಷಣಗಳಲ್ಲಿ ಅವರಿಗೆ ಕೀಳಲ್ಲ. ಅವರ ಪರಿಸ್ಥಿತಿಯೂ ಅಷ್ಟೇನೂ ಉತ್ತಮವಾಗಿರುವಂತಿಲ್ಲ. ಅವಳ ಹಲ್ಲುಗಳಿಗೂ ದಂತ ಚಿಕಿತ್ಸೆ ಆಗಬೇಕಿದೆ.]

ತಾಯಿ : ನನ್ನ ಮಗನ ಹೆಸರು ಫ್ರೆಡ್ಡಿ ಎಂದು ನಿನಗೆ ಹೇಗೆ ಗೊತ್ತು, ಅಮ್ಮ ?

ಹೂವಿನ ಹುಡುಗಿ : ಅವ್, ಅವರು, ನಿಮ್ಮಗಾನೇ, ಅವರು ? ಎತ್ತವ್ವ ಮಗನ್ಸರ್‍ಯಾಗಿ ಸಾಕಿ ಬೆಳ್ಸಿದ್ದಿದ್ರೆ ನನ್ನಂತ ಬಡ ವುಡ್ಗಿ ಊಗಳ್ನ ಇಂಗೆ ಕೆಡ್ವಿ, ದುಡ್ಡು ಕೊಡ್ದೆ ಓಂಟೋಯ್ತಾ ಇದ್ರಾ ? ಊವಿನ್ ದುಡ್ಡು ನೀವ್ಕೊಡ್ತೀರಾ ?

[ಅದರ ಹಾಗೆ ಬರೆದುಕೊಳ್ಳುವ ಧ್ವನಿ ಲಿಪಿ ಶಕ್ತಿ ಇಲ್ಲದ್ದರಿಂದ ಆ ಭಾಷಾರಚನೆ, ಉಚ್ಚಾರಣೆ ಹೇಗಿತ್ತೆಂದು ಬರೆದು ತೋರಿಸಲಾಗುವುದಿಲ್ಲ. ಲಂಡನ್ ಹೊರಗಿನವರಿಗೆ ಇದು ಅರ್ಥವಾಗದು.]

ಮಗಳು : ಹಾಗೆ ಮಾಡಬೇಡ ಅಮ್ಮಾ. ಎಂಥ ಯೋಚನೆ !

ತಾಯಿ : ನನ್ನ ತಡೆಯ ಬೇಡ, ಕ್ಲ್ಯಾರ !...ನಿನ್ನ ಹತ್ತಿರ ಚಿಲ್ಲರೆ ಇದೆಯೆ ?

ಮಗಳು : ಇಲ್ಲ. ಆರು ಪೆನ್ಸಿಗೆ ಕಡಮೆಯ ಯಾವ ನಾಣ್ಯವೂ ನನ್ನಲ್ಲಿ ಇಲ್ಲ.

ಹೂವಿನ ಹುಡುಗಿ : (ಭರವಸೆಯಿಂದ) ಅತ್ತು ಪಿಲಿಂಗ್ಗೆ ಚಿಲ್ರೆ ಕೊಡ್ತೀನಿ, ತಾಯಿ.

ತಾಯಿ : (ಕ್ಲ್ಯಾರಾಗೆ) ಅದನ್ನಿಲ್ಲಿ ಕೊಡು. (ಕ್ಲ್ಯಾರ ಮನಸ್ಸಿಲ್ಲದೆ ಕೊಡುತ್ತಾಳೆ.) ಇಲ್ಲಿ ನೋಡು, (ಹುಡುಗಿಗೆ) ಇದು ನಿನ್ನ ಹೂವಿನ ಬೆಲೆ.

ಹೂವಿನ ಹುಡುಗಿ : ನಿಮ್ದು ತುಂಬಾ ದೊಡ್ಮನ್ಸು ತಾಯಿ. ಉಪ್ಕಾರ ಆಯ್ತು.

ಮಗಳು : ಅವಳನ್ನ ಚಿಲ್ಲರೆ ಕೊಡು ಅಂತ ಹೇಳಮ್ಮ. ಆ ಹೂವಿನ ಗೊಂಚಲಿಗೆ ಒಂದೊಂದು ಪೆನ್ನಿಯೇ ಬೆಲೆ.

ತಾಯಿ : ಸಾಕು, ಸುಮ್ಮನೆ ಇರು, ಕ್ಲ್ಯಾರ. (ಹುಡುಗಿಗೆ) ಚಿಲ್ಲರೆ ನೀನೇ ಇಟ್ಟುಕೊ.

ಹೂವಿನ ಹುಡುಗಿ : ತುಂಬಾ ಉಪ್ಕಾರ, ತಾಯಿ.

ತಾಯಿ : ಈಗ ಹೇಳು. ಆ ದೊಡ್ಡ ಮನುಷ್ಯರ ಹೆಸರು ಫ್ರೆಡ್ಡಿ ಅಂತ ನಿನಗೆ ಹೇಗೆ ಗೊತ್ತು ಎಂದು ?

ಹೂವಿನ ಹುಡುಗಿ : ನಂಗೊತ್ತಿರಲಿಲ್ಲಾಮ್ಮ.

ತಾಯಿ : ಆ ಹೆಸರಿಂದ ನೀನು ಅವರನ್ನು ಕರೆದೆ ? ನನಗೇ ಕೇಳಿಸಿತು ? ನನಗೆ ಮೋಸ ಮಾಡಲು ಯತ್ನಿಸಬೇಡ.

ಹೂವಿನ ಹುಡುಗಿ : (ಪ್ರತಿಭಟಿಸುವಂತೆ) ನಿಮ್ಮನ್ ಮೋಸ ಮಾಡೋಕೆ ಯಾರ್ ಯತ್ತಿನ್‌ಸಿದ್ದಾರೆ ? ತಿಳೀದ ಯಾರ್ನಾದ್ರೂ ನೀವೇ ಪ್ರಿಯವಾಗಿ ಮಾತಾಡ್ಸಿದ್ರೆ, ಫ್ರೆಡ್ಡಿ ಎಂದೋ ಚಾರ್ಲಿ ಎಂದೋ ಕರೆಯೋಲ್ಲವೆ, ಅಮ್ಮ ! ನಾನು ಅವರನ್ನ ಹಾಗೆ ಫ್ರೆಡ್ಡಿ ಎಂದೆ. (ಮಕ್ಕರಿಯ ಪಕ್ಕದಲ್ಲಿ ಕೂಡುತ್ತಾಳೆ.)

ಮಗಳು : ಆರು ಪೆನ್ಸ್ ಹಾಳಾಯ್ತು. ನಿಜವಾಗಿ ಅಮ್ಮ, ಫ್ರೆಡ್ಡಿ ಇಂಥಾದ್ದಕ್ಕೆ ಇಳೀತಾನೆ ಎಂದುಕೊಳ್ಳಬಾರದಾಗಿತ್ತು ನೀನು. (ಹೇಸಿಗೆಯಿಂದ ಕಂಬದ ಹಿಂದಕ್ಕೆ ಹೋಗುತ್ತಾಳೆ.)

[ವಯಸ್ಸಾದ ಸಜ್ಜನನಾದ ಮಿಲಿಟರಿ ಬಗೆಯ ಸಭ್ಯಗೃಹಸ್ಥನು ಒಬ್ಬನು ಅದೇ ಆಸರೆಗೆ ನುಗ್ಗಿ ಬಂದು ನೀರು ತೊಟ್ಟಿಡುವ ಚತ್ರಿಯನ್ನು ಮಡಿಸಿ ಮುಚ್ಚುತ್ತಾನೆ. ಅವನೂ ಫ್ರೆಡ್ಡಿ ಸ್ಥಿತಿಯಲ್ಲಿಯೇ ಇದ್ದಾನೆ. ಹೆಜ್ಜೆಯ ಹರಡಿನ ಮೇಲೆ ತುಂಬಾ ಒದ್ದೆಯಾಗಿದೆ. ಸಂಜೆಯ ಉಡುಪಿನಲ್ಲಿದ್ದಾನೆ. ಮೈಮೇಲೆ ಹಗುರವಾದ ಮೇಲಂಗಿ ಇದೆ. ಮಗಳು ನಿಂತಿದ್ದು ಈಗ ಖಾಲಿಯಾಗಿದ್ದ ಸ್ಥಳಕ್ಕೆ ಬಂದು ನಿಲ್ಲುತ್ತಾನೆ.]

ಸಭ್ಯ : ಘ್ಯಾ...

ತಾಯಿ : (ಆತನನ್ನು ಕುರಿತು) ಏನು, ಸ್ವಾಮಿ, ಈ ಮಳೆ ನಿಲ್ಲುವ ಲಕ್ಷಣ ಕಾಣುತ್ತದೆಯೆ ?

ಸಭ್ಯ : ನನಗೆ ಕಾಣಿಸುತ್ತಿಲ್ಲ. ಎರಡು ನಿಮಿಷಗಳ ಹಿಂದೆ ಇದ್ದದ್ದು ಇನ್ನೂ ಜೋರಾಯ್ತು.

[ಹೂವನ್ನು ಮಾರುವ ಹುಡುಗಿಯ ಬಳಿಗೆ ಹೋಗುವನು. ಕಂಬದ ಅಡಿ ಪೀಠದ ಮೇಲೆ ಕಾಲಿಡುವನು. ಷರಾಯಿಯ ಕೊನೆ ಮಡಿಕೆಯನ್ನು ಬಿಚ್ಚಿ ಕೆಳಕ್ಕೆ ಬಿಡಲು ಬಾಗುವನು.]

ತಾಯಿ : ಎಂಥ ಕೆಲಸ ಆಯಿತು ! (ವ್ಯಸ್ತಳಾಗಿ ತಾನೂ ಹಿಂದಕ್ಕೆ ಹೋಗಿ ಮಗಳನ್ನು ಸೇರಿಕೊಳ್ಳುವಳು.)

ಹೂವಿನ ಹುಡುಗಿ : (ಮಿಲಿಟರಿ ಸಭ್ಯನು ಹತ್ತಿರದಲ್ಲಿರುವುದನ್ನು ನೋಡಿ, ಆತನನ್ನು ಒಲಿಸಿಕೊಳ್ಳುವಂತೆ) ಮೊದಲ್ಗಿಂತ ಎಚ್ಚಾದ್ರೆ, ಇನ್ನೇನು ಮುಗೀತೂಂತಾನೇ ಕಾಣ್ತದೆ. ಬ್ಯಾಸರ ಬ್ಯಾಡಿ ಕೆಪ್ಟಿನ್. ಈ ಬಡವಳ್ ಮಾರೋ ಪೂವ ವಸಿ ಕೊಂಡ್ಕೊಳ್ರಿ.

ಸಭ್ಯ : ಇಲ್ಲಮ್ಮ, ನನ್ನಲ್ಲಿ ಚಿಲ್ಲರೆ ಇಲ್ಲ.

ಹೂವಿನ ಹುಡುಗಿ : ಚಿಲ್ಲರೆ ನಾನ್ಕೊಡ್ಬಲ್ಲೆ ಕೆಪ್ಟಿನ್.

ಸಭ್ಯ : ಒಂದು ಸವರನ್ನಿಗೆ ? ಅದಕ್ಕಿಂತ ಕಡಮೆ ನಾಣ್ಯ ನನ್ನಲ್ಲಿಲ್ಲ.

ಹೂವಿನ ಹುಡುಗಿ : ಅಯ್ಯೋ, ನನ್ನಪ್ಪ. ಆದ್ರೂ ನನ್ನಿಂದ ಒಂದೂವ್ವ ಕೊಂಡ್ಕೊಳ್ಳಿ, ಕೆಪ್ಟಿನ್. ಅರ್ದ ಕ್ರೌನ್‌ಗೆ ಚಿಲ್ರೆ ಐತೆ. ಇದನ್ ತಕ್ಕೊಳ್ಳಿ ಯೆಳ್ಡು ಪೆನ್ಸ್‌ಗೆ.

ಸಭ್ಯ : ನೋಡು, ತೊಂದರೆ ಪಡಿಸಬೇಡ...ಹಾಗೆ...ಒಳ್ಳೆ ಹುಡುಗಿ...(ಜೇಬನ್ನು ಹುಡುಕುತ್ತ,) ನಿಜವಾಗಿ ನನ್ನಲ್ಲಿ ಏನೂ ಚಿಲ್ಲರೆಯಿಲ್ಲ...ತಾಳು : ಇಲ್ಲಿ ಮೂರು ಅರೆ ಪೆನ್ನಿ ನಾಣ್ಯ ಇವೆ. ನಿನಗೆ ಪ್ರಯೋಜನ ಆದರೆ ಕೊಡುತೇನೆ. (ಇನ್ನೊಂದು ಕಂಬದ ಹತ್ತಿರಕ್ಕೆ ಹೋಗುತ್ತಾನೆ.)

ಹೂವಿನ ಹುಡುಗಿ : (ಆಸೆ ಕುಂದಿ, ಏನೂ ಇಲ್ಲದ್ದಕ್ಕಿಂತ ಮೂರು ಅರೆ ಪೆನ್ನಿ ಮೇಲೆಂದುಕೊಂಡು,) ತಮ್ಮ ಸಂತೋಷ, ಸಾಮಿ.

ಪಕ್ಕದಲ್ಲಿ ನಿಂತವ : (ಹುಡುಗಿಗೆ) ಜೋಕೆ. ಅವರಿಗೆ ಒಂದು ಹೂ ಕೊಡು. ಮೊದಲಿಂದ ನೀನು ಹೇಳುತ್ತಿರುವ ಪ್ರತಿಯೊಂದು ಮಾತನ್ನೂ ಬರಕೊಳ್ಳುತ್ತ ಒಬ್ಬ ವಯ್ಯಾ ಇದ್ದಾನೆ. (ನೋಟ್ ತೆಗೆದುಕೊಳ್ಳುತ್ತಿರುವವನ ಕಡೆಗೆ ಎಲ್ಲರೂ ತಿರುಗುವರು.)

ಹೂವಿನ ಹುಡುಗಿ : (ಹೆದರಿಕೆಯಿಂದ ಚಿಮ್ಮಿ ನಿಲ್ಲುತ್ತ) ಸಾಮಿಯೋರ ಕೂಡ ಮಾತಾಡಿ ನಾನು ತಪ್ಪೇನು ಮಾಡ್ನಿಲ್ಲ. ರಸ್ತೆ ಅಂಚುಕಲ್ಲಿಂದ ಆಚೆ ನಿಂತ್ಕೊಂಡಿರೋವರ್ಗೂ ಪೂಮಾರೋ ಅಕ್ಕು ನಂಗೈತೆ. (ಎತ್ತಿದ, ಚಿತ್ತೋದ್ರೇಕದ ಧ್ವನಿಯಲ್ಲಿ) ನಾನ್ ಮರ್ಯಾದಸ್ತ ಪುಡ್ಗಿ. ನಂಗೆ ಯಾರೂ ಕೆಡಕ್ಮಾಡ್ಬಾರ್ದು. ಒಂದುವ್ವ ಕೊಂಡ್ಕಳ್ರಿ ಅಂತ ನಾನವ್ರನ್ನ ಮಾತಾಡ್ಸಿದ್ದು.

[ಸುತ್ತ ಗದ್ದಲ. ಬಹುವಾಗಿ ಹುಡುಗಿಗೆ ಸಹಾನುಭೂತಿಯಿಂದ. ಆದರೆ ಅವಳ ಅಬ್ಬರದ ಕೂಗಾಟವನ್ನು ಆಕ್ಷೇಪಿಸುತ್ತ. "ಏ, ಕೂಗಬೇಡ...ನಿನಗೆ ಯಾರು ಕೆಡಕು ಮಾಡ್ತಾರೆ ?...ನಿನ್ನ ಯಾರೂ ಮುಟ್ಟೋಕೆ ಬರೋದಿಲ್ಲ...ಯಾಕ್ಹೀಗೆ ಅಬ್ಬರ ಮಾಡ್ತೀಯಾ ! ಸುಮ್ನಾಗು, ಸುಮ್ನಾಗು''...ಇತ್ಯಾದಿ. ವಯಸ್ಸಾದ ಕೆಲವು ಪ್ರೇಕ್ಷಕರು ಸಂತೈಸುವಂತೆ ಅವಳ ಬೆನ್ನು ತಟ್ಟುವರು. ಅಷ್ಟು ತಾಳ್ಮೆ ಇಲ್ಲದವರು, 'ನಿನ್ನ ತಲೆ, ಬಾಯಿ ಮುಚ್ಚು' ಎನ್ನುವರು...ನಿಂಗೇನಾಗಿದೆ ? ಎಂದು ಬಲವಾಗಿ ಕೂಗುವರು. ದೂರದ ಗುಂಪಿನವರು ವಿಷಯ ಏನೆಂದು ತಿಳಿಯದೆ ಇಲ್ಲಿ ಬಂದು ಸೇರಿ ಪ್ರಶ್ನೆ ಕೇಳುತ್ತ ಉತ್ತರ ಕೊಡುತ್ತ ಗದ್ದಲ ಹೆಚ್ಚಿಸುವರು. ''ಏನು ಗಲಾಟೆ ?'' ''ಏನ್ಮಾಡಿದ್ಲು ?'' ಅವನೆಲ್ಲಿದ್ದಾನೆ ? 'ತೇದಾ* ಬರೆದುಕೊಳ್ಳುತ್ತಿದ್ದಾನೆ.' ಅವನೇ ? ''ಹೂ, ಹೌದು ಅಲ್ಲಿದ್ದಾನಲ್ಲಾ ಅವ್ನು !'' ''ಆ ದೊಡ ಮನುಷ್ಯರ ಹತ್ತಿರ ದುಡ್ಡು ತೆಗೆದುಕೊಂಡಳು'' ...ಇತ್ಯಾದಿ...ಹೂವಿನ ಹುಡುಗಿ ಹುಚ್ಚು ಹಿಡಿದಂತಾಗಿದ್ದಾಳೆ. ಜನ ಗಿರಕಾಯಿಸಿಕೊಂಡಿದ್ದಾರೆ. ಆ ಜಾಗದಿಂದ ಸಭ್ಯನ ಬಳಿಗೆ ಹೋಗಿ ಮೊರೆ ಇಡುತ್ತ]

ಓ ಸಾಮಿ, ಅವರು ನನ್ನ ಚಾರ್ಜ್ ಮಾಡದಂಗೆ ಮಾಡಿ ಸಾಮಿ. ಅದರಿಂದ ನನಗೇನು ಕಷ್ಟ ಆಗುತ್ತೇಂತ ನಿಮಗೆ ಗೊತ್ತಿಲ್ಲ. ನನ್ನ ಮರ್ಯಾದೆ ತೆಗೆದುಬಿಡ್ತಾರೆ, ಸಭ್ಯರ ಕೈಲಿ ಮಾತಾಡ್ದೇಂತ ಬೀದೀಗೆ ಓಡಿಸ್ತಾರೆ ಸಾಮಿ, ಅವರು—

ನೋಟ್ ತೆಗೆವವನು : (ಅವಳ ಬಲಗಡೆ ಬರುವನು. ಉಳಿದವರು ಅವನ ಹಿಂದುಗಡೆ ಬರುವರು) ನೋಡು...ನೋಡು...ನೋಡು ನಿನಗೆ ಯಾರು ಕೆಡುಕು ಮಾಡುತಿದ್ದಾರೆ. ಬುದ್ಧಿ ಇಲ್ಲದ ಹುಡುಗಿ ನೀನು. ನನ್ನ ಯಾರು ಅಂತ ತಿಳಿದುಕೊಂಡಿದ್ದೀಯೆ ?

ಪಕ್ಕದಲ್ಲಿ ನಿಂತವನು : ಏನೂ ಪರವಾಯಿಲ್ಲ. ಅವರು ದೊಡ್ಡ ಮನುಷ್ಯರು. ಅವರ ಬೂಟ್ಸ್ ನೋಡು. (ನೋಟ್ ತೆಗೆದುಕೊಳ್ಳುವವರಿಗೆ ವಿವರಿಸುತ್ತ) ನೀವು ಪೋಲೀಸಿನ ಕಾರ್‍ರು* ಎಂದು ಅವಳಿಗೆ ತೋರಿತು.

ನೋಟ್ ತೆಗೆವವನು : (ಕುತೂಹಲ ಕೆರಳಿ) ಪೋಲೀಸಿನಕಾರ್‍ರು ಎಂದರೇನು ?

ಪಕ್ಕದಲ್ಲಿ ಇದ್ದವನು : ಎಂದರೆ (ಖಚಿತಪಡಿಸಲು ತಿಳಿಯದೆ) ಪೋಲೀಸ್‌ಕಾರ್‍ರು ಎನ್ನಬಹುದು. ಇನ್ನು ಏನೆಂದು ಕರೆಯುವುದು ? ಒಂದು ಬಗೆಯ ಸುದ್ದಿ ಕೊಡುವವರು.

ಹೂವಿನ ಹುಡುಗಿ : (ಇನ್ನೂ ಸಂಕ್ಷೋಭೆಯಲ್ಲಿಯೆ) ಬೈಬಲ್ ಮ್ಯಾಗೆ ಆಣೆ ಇಟ್ಟೇಳ್ತೀನೆ, ಸಾಮಿ. ನಾನು ಎಂದೂ ಒಂದು ಮಾತಾಡ್ನಿಲ್ಲ.

---

* =ಪತ್ತೇದಾರ, 'Tec' =Detective
* =ಸುದ್ದಿಕಾರರು. Nark.

ನೋಟ್ ತೆಗೆವವನು : (ಔದ್ಧತ್ಯದಲ್ಲಿ, ಆದರೂ ಸೌಜನ್ಯದಿಂದ) ಏ, ಸಾಕು ನಿಲ್ಲಿಸು. ನಾನು ಪೊಲೀಸಿನವನು ಕಂಡಹಾಗೆ ಕಾಣುತೇನೆಯೆ ?

ಹೂವಿನ ಹುಡುಗಿ : (ಇನ್ನೂ ನೆಚ್ಚಿಕೆ ಬಾರದವಳಂತೆ) ಆದ್ರೆ ನನ್ನ ಮಾತ್ಗಳ್ನ ಯಾಕೆ ಬರ್ಕೊಂಡ್ರಿ ? ನಾನಾಡಿದ್ನ ಸರಿಯಾಗಿ ಬರ್ಕೊಂಡ್ರಿ ಅಂತ ನಂಗ್ಹ್ಯಾಗೆ ಗೊತ್ತಾಗ್ಬೇಕು ? ನನ್ನ ಇಷ್ಟ್ಯಾನ ಏನ್ಬರ್ದಿದ್ದೀರಿಯೆಂದು ನಂಗೆ ತೋರ್ಸಿ. (ನೋಟ್ ತೆಗೆದುಕೊಳ್ಳುತ್ತಿದ್ದವನು, ತನ್ನ ಪುಸ್ತಕ ತೆಗೆದು ಅವಳ ಮೂಗಿನ ಕೆಳಗೆ ನೇರ ಹಿಡಿಯುತ್ತಾನೆ. ಅವನ ಬೆನ್ನ ಹಿಂದೆ ನಿಂತು ಅದನ್ನು ಓದಲು ಪ್ರಯತ್ನಿಸುವವರ ಒತ್ತಡ ಅವನಿಗಿಂತ ದುರ್ಬಲನಾದವನ ಆಯುವನ್ನು ತಪ್ಪಿಸುವಂತಿದೆ.) ಅದೇನದು ? ಅದು ಸರಿಯಾದ ಬರವಣಿಗೇನೆ ಅಲ್ಲ. ನಾನದನ್ನೋದೋಕಾಗೋಲ್ಲ.

ನೋಟ್ ತೆಗೆವವನು : ನನ್ನ ಕೈಯಲ್ಲಿ ಆಗುತ್ತದೆ. (ಅವಳ ಉಚ್ಚಾರಣೆಯನ್ನು ಚ ತು ತಪ್ಪದೆ ಬಳಸುತ್ತ ಓದುವನು.) "ಬ್ಯಾಸರ ಬ್ಯಾಡಿ ಕೆಪ್ಟಿನ್, ಈ ಬಡವಳ್ ಮಾರೋ ಹೂವ ಪಸಿ ಕೊಂಡ್ಕೊಳ್ರಿ."

ಹೂವಿನ ಹುಡುಗಿ : (ಬಹಳ ಉದ್ವೇಗದಿಂದ) ನಾನು ಅವರನ್ನು ಕೆಪ್ಟಿನ್ ಎಂದು ಕರದಿದ್ರಿಂದಲೇ ಮನಸ್ಸಲ್ಲಿ ಕೆಟ್ಟದ್ದೇನೆಸ್ನಿಲ್ಲ. (ಆ ಸಭ್ಯನನ್ನು ಕುರಿತು) ಓ ಸಾಮಿ, ಕೆಪ್ಟಿನ್ ಅಂತ ಒಂದ್ಮಾತಾಡಿದ್ದಕ್ಕಾಗಿ ಅವರು ನನ್ನ ಚಾರ್ಜು ಮಾಡ್ದೇಯಿರೋ ಆಗೆ ಮಾಡಿ. ನೀನು...ಎಂಥಾ...!

ಸಭ್ಯ : ಚಾರ್ಜು ! ನಾನು ಏನೂ ಆಪಾದನೆ ಮಾಡುವುದಿಲ್ಲ. (ನೋಟ್ ತೆಗೆದು ಕೊಳ್ಳುವವನನ್ನು ಕುರಿತು) ನಿಜವಾಗಿ ಸ್ವಾಮಿ, ನೀವು ಪತ್ತೇದಾರರಾಗಿದ್ದರೆ ಯುವತಿಯರು ನನ್ನನ್ನು ಕೆಡಿಸದೆ ಇರುವಂತೆ ನನ್ನನ್ನು ರಕ್ಷಿಸಲು ತೊಡಗ ಬೇಕಾಗಿಲ್ಲ—ನಾನು ನಿಮ್ಮನ್ನು ಕೇಳುವ ತನಕ. ಆ ಹುಡುಗಿಯ ಮನಸ್ಸಿನಲ್ಲಿ ಕೆಟ್ಟದ್ದೇನೂ ಇರಲಿಲ್ಲವೆಂಬುದು ಯಾರಿಗೂ ಕಾಣಿಸೀತು.

ಹತ್ತಿರ ನಿಂತವರು ಸಾಮಾನ್ಯವಾಗಿ : (ಪೊಲೀಸರ ಗುಪ್ತ ನಡವಳಿಕೆಗೆ ವಿರೋಧವಾಗಿ ಪ್ರತಿಭಟಿಸುತ್ತ) ಖಂಡಿತ ಕಾಣಿಸೀತು. ಅದನ್ನು ಕಟ್ಟಿಕೊಂಡು ನಿನಗೇನು ?— ನಿನ್ನ ಕೆಲಸ ನೀನು ನೋಡಿಕೊ—ಅವನಿಗೆ ಕೆಲಸದಲ್ಲಿ ಬಡ್ತಿ ಬೇಕಾಗಿದೆ ; ನಾನು ಹೇಳ್ತೇನೆ—ಜನ ಆಡುವ ಮಾತುಗಳನ್ನೆಲ್ಲ ಬರಕೊಳ್ಳುತ್ತಿದ್ದಾನಲ್ಲ ! ಹುಡುಗಿ ಅವರನ್ನು ಕುರಿತು ಒಂದು ಮಾತಾಡಿಲ್ಲ—ಆಡಿದ್ದರೆ ಏನ್ತಪ್ಪ ?—ಮಳೇಲಿ ಇಂಥವರಿಂದ ಅಪಮಾನ ಪಡದೇ ಒಬ್ಬ ಹುಡುಗಿ ಆಸರೆಗಾಗಿ ಬರೋಹಾಗಿಲ್ಲ. ಇತ್ಯಾದಿ...ಇತ್ಯಾದಿ. (ಅವಳ ಪರವಾಗಿ ಸಹಾನುಭೂತಿ ಉಳ್ಳವರು, ಅವಳನ್ನು ಕಂಬದ ಪೀಠದ ಬಳಿಗೆ ಕರೆದುಕೊಂಡು ಹೋಗುವರು. ಅಲ್ಲಿ ಅವಳು ಪುನಃ ಕುಳಿತು, ತನ್ನ ಭಾವವನ್ನು ತಡೆದುಕೊಳ್ಳುತ್ತಿರುವಳು.)

ಪಕ್ಕದವನು : ಅವನು 'ತೇದಾ' ಅಲ್ಲ. ಯಾವೋನೊ ಸಿಕ್ಕಿದವರ ಗೋಜಿಗೆ ಕೈಹಾಕುವವನು : ನನಗೆ ಗೊತ್ತು. ಹೌದುರಿ, ಅವನ ಬೂಟ್ಸ್ ನೋಡಿ.

ನೋಟ್ ತೆಗೆವವನು : (ಅವನ ಕಡೆ ಪ್ರಸನ್ನನಾಗಿ ತಿರುಗಿ) ಸೆಲ್ಸೆಯಲ್ಲಿ ನಿಮ್ಮವರು ಎಲ್ಲಾ ಚೆನ್ನಾಗಿದ್ದಾರೆಯೆ ?

ಪಕ್ಕದವನು : (ಸಂಶಯದಿಂದ) ನಮ್ಮ ಜನ ಸೆಲ್ಸೆಯವರೆಂದು ನಿಮಗೆ ಹೇಳಿದವರು ಯಾರು ?

ನೋಟ್ ತೆಗೆವವನು : ಆ ಮಾತು ಹಾಗಿರಲಿ. ಅವರು ಅಲ್ಲಿನವರೇ, ನನಗೆ ಗೊತ್ತು. (ಹುಡುಗಿಗೆ) ಇಷ್ಟು ದೂರ ಮೂಡಲಿಗೆ ಹೇಗೆ ಬಂದೆ ? ನೀನು ಹುಟ್ಟಿದ್ದು 'ಲಿಸ್ಸನ್ ಗ್ರೋವಿ'ನಲ್ಲಿ.

ಹೂವಿನ ಹುಡುಗಿ : (ಗಾಬರಿಯಿಂದ) ನಾನು ಲಿಸ್ಸನ್‌ಗ್ರೋವ್ ಬಿಡೋದೇನ್ತಪ್ಪ ? ಅದು ಅಂದಿಗಳ ವಾಸಕ್ಕೆ ತಕ್‌ಸ್ತಳಾ ಅಲ್ಲ. ವಾರಕ್ಕೆ ನಾಲ್ಕೂವರೆ ಷಿಲಿಂಗ್ ಬಾಡ್ಗೆ ಕೊಡ್ಬೇಕಿತ್ತು. (ಕಣ್ಣೀರಿಡುತ್ತ) ಒಹ್—ಬೂ—ಹೂ—ಊ !

ನೋಟ್ ತೆಗೆವವನು : ನಿನಗೆ ಇಷ್ಟಬಂದ ಕಡೆ ವಾಸಮಾಡು. ಸದ್ಯ ಆ ಶಬ್ದ ನಿಲ್ಲಿಸು.

ಸಭ್ಯ : (ಹುಡುಗಿಗೆ) ಸಾಕು...ಸಾಕು. ಅವರು ನಿನಗೆ ಏನೂ ಕೆಡುಕು ಮಾಡುವುದಿಲ್ಲ. ಇಷ್ಟಬಂದ ಕಡೆ ಇರೋದಕ್ಕೆ ನಿನಗೆ ಅಧಿಕಾರ ಉಂಟು.

ಒಬ್ಬ ವ್ಯಂಗ್ಯವಿನೋದಿ : (ನೋಟ್ ತೆಗೆದುಕೊಳ್ಳುವವನಿಗೂ, ಸಭ್ಯನಿಗೂ ನಡುವೆ ನುಗ್ಗಿ ಮಾತನಾಡುತ್ತ) ಉದಾಹರಣೆಗೆ : ಅವಳು ಪಾರ್ಕ್ ಲೇನಿನಲ್ಲಿ ಇರಬಹುದು, ಅಲ್ಲಾ ! ವಾಸದ ಮನೆ ಸೌಕರ್ಯದ ಪ್ರಶ್ನೆಯನ್ನು ಕುರಿತು ನಿಮ್ಮ ಕೂಡ ಚರ್ಚೆ ಮಾಡಬೇಕು ಎನ್ನಿಸ್ತದೆ.

ಹೂವಿನ ಹುಡುಗಿ : (ಮಕ್ಕರಿಯ ಮೇಲೆ ಬಾಗಿ ಚಿಂತಾಕ್ರಾಂತಳಾಗಿ ತನಗೆಯೆ ಮಾತನಾಡಿಕೊಳ್ಳುತ್ತ,) ನಾನು ಒಳ್ಳೇ ವುಡ್ಗಿ, ನಾನು.

ವ್ಯಂಗ್ಯದವನು : (ಅವಳನ್ನು ಗಮನಿಸದೆ) ನಾನು ಯಾವ ಕಡೆಯವನು ಅಂತ ನಿಮಗೆ ಗೊತ್ತಿದೆಯೇನು ?

ನೋಟ್ ತೆಗೆವವನು : (ತಕ್ಷಣವೇ) ಹಾಕ್ಸ್ಟನ್.

[ಗುಜು ಗುಜು. ನೋಟ್ ತೆಗೆದುಕೊಳ್ಳುವವನ ಪ್ರದರ್ಶನದಲ್ಲಿ ಸುತ್ತಲಿನವರ ಆಸಕ್ತಿ ಹೆಚ್ಚುತ್ತಿದೆ.]

ವ್ಯಂಗ್ಯಕಾರ : (ವಿಸ್ಮಿತನಾಗಿ) ಸರಿಯಪ್ಪ. ನಾನು ಅಲ್ಲಿನೋನಲ್ಲ ಅಂತ ಹೇಳ್ದೋರ್‍ಯಾರು. ಭಲೆ ಕಣ್ರೀ. ನಿಮಗೆಲ್ಲಾ ಗೊತ್ತು.

ಹೂವಿನ ಹುಡುಗಿ : (ತನಗಾದ ಅನ್ಯಾಯವನ್ನು ಇನ್ನೂ ನೆನಸಿಕೊಳ್ಳುತ್ತ) ನನ್ನ ಗೋಜಿಗೆ ಅವರ‍್ಯಾಕೆ ಬರ್ಬೇಕಿತ್ತು. ಬೇಕಿರ‍್ಲಿಲ್ಲವಲ್ಲ.

ಪಕ್ಕದವನು : (ಅವಳಿಗೆ) ಖಂಡಿತವಾಗಿಯೂ ಬರಬೇಕಿರಲಿಲ್ಲ. ನಿನ್ನ ಗೋಜಿಗೆ ಅವನನ್ನು ಬರಗೊಡಿಸಬೇಡ. (ನೋಟ್ ತೆಗೆದುಕೊಳ್ಳುವವನಿಗೆ) ಇಲ್ಲಿ ನೋಡ್ರಿ, ನಿಮ್ಮ ತಂಟೆಗೆ ಬರದೆ ಇರುವ ಜನರ ವಿಷಯ ತಿಳಿದುಕೊಳ್ಳುವುದಕ್ಕೆ ನಿಮಗೇನು ಅಧಿಕಾರ ? ನಿಮ್ಮ ವಾರಂಟೆಲ್ಲಿರಿ ?

ಪಕ್ಕದ ಹಲವರು : (ಕಾನೂನಿನ ಪಾಯಿಂಟ್ ಹೊಳೆದು ಉತ್ತೇಜಿತರಾಗಿ) ಹೌದು, ಎಲ್ಲಿ ನಿಮ್ಮ ವಾರಂಟು ?

ಹೂವಿನ ಹುಡುಗಿ : ಅವರು ಬೇಕಾದ್ದು ಯೇಳ್ಕೊಳ್ಳಿ. ಅವರ‍್ಗೊಡವೆ ನಂಗೇನೂ ಬೇಕಾಗಿಲ್ಲ.

ಪಕ್ಕದವನು : ನಿಮ್ಮ ಕಾಲಿನ ಕೆಳಗಿರುವ 'ಕಸ' ನಾವು ಎಂದು ತಿಳಿದುಕೊಂಡಿದ್ದೀರಿ, ಅಲ್ಲವೇನ್ರಿ ? ದೊಡ್ಡ ಮನುಷ್ಯರ ಮೇಲೆಲ್ಲ ಜೋರು ಮಾಡೋಕೆ ಹೋಗು ತ್ತೀರಲ್ಲರಿ ?

ವ್ಯಂಗ್ಯಕಾರ : ಹೌದುರಿ : ನಿಮ್ಮ ಕಣಿ ಸರಿಯಾಗ ಬೇಕಾದರೆ...ಅವರು...ಎಲ್ಲಿಂದ ಬಂದವರು ಹೇಳ್ರಿ.

ನೋಟ್ ತೆಗೆವವನು : ಚೆಲ್ಟನ್ಹಂ, ಹ್ಯಾರೊ, ಕೇಂಬ್ರಿಜ್...ಮತ್ತು ಇಂಡಿಯ.

ಸಭ್ಯ : ಕ್ವಯ್ಟ್ ರೈಟ್. (ದೊಡ್ಡ ನಗು) [ಈ ನೋಟ್ ತೆಗೆದುಕೊಳ್ಳುವವನ ಬಗೆಗೆ ಎಲ್ಲರೂ ಪ್ರಸನ್ನರಾಗಿದ್ದಾರೆ. ಪ್ರಶಂಸೆಯ ಮಾತುಗಳಲ್ಲಿ 'ಸರ್ವಜ್ಞ ಕಣೊ' 'ಸರಿಯಾಗಿ ಹೇಳಿದ' 'ಆ ಭಾರಿ ಮನುಷ್ಯರು ಎಲ್ಲಿಂದ ಬಂದರು ಎಂದು ಹೇಳಿದ್ದನ್ನು ಕೇಳಿದೆಯ ?' ಇತ್ಯಾದಿ] ನಾನು ತಮ್ಮನ್ನು ಕೇಳಬಹುದೆ—ನಾಟ್ಯ ಶಾಲೆಯಲ್ಲಿ ಜೀವನಕ್ಕಾಗಿ ಈ ಕೆಲಸ ಮಾಡುತಿದ್ದೀರೇನು ?

ನೋಟ್ ತೆಗೆವವನು : ಅದನ್ನು ಯೋಚಿಸಿದ್ದೇನೆ. ಬಹುಶಃ ಎಂದೊ ಮಾಡಿಯೇನು.

[ಮಳೆ ನಿಂತಿದೆ, ಗುಂಪಿನ ಹೊರಗಿನವರು ಹೊರಟು ಹೋಗುತ್ತಿದ್ದಾರೆ.]

ಹೂವಿನ ಹುಡುಗಿ : (ಜನ ಅವನ ಪರವಾಗಿ ಪ್ರಸನ್ನರಾದ್ದನ್ನು ಕಂಡು) ಅವ್ರು ದೊಡ್‌ಮನ್ಸರಲ್ಲ. ಒಬ್ಬ ಬಡ ವುಡ್ಗಿ ಗೋಜ್ಗೆ ಬರೋರು ಯಾಗ್ ದೊಡ್ ಮನ್ಸರಾಗ್ತಾರೆ ?

ಮಗಳು : (ತಾಳ್ಮೆ ತಪ್ಪಿ, ಒರಟಾಗಿ ನುಗ್ಗಿ ಬಂದು, ಸಭ್ಯಗೃಹಸ್ಥನ ಸ್ಥಳದಲ್ಲಿ ನಿಲ್ಲುವಳು. ಆತನು ಮರ್ಯಾದೆಯಿಂದ ಪಕ್ಕಕ್ಕೆ ಸರಿದು ನಿಲ್ಲುವನು.) ಈ ಫ್ರೆಡ್ಡಿ ಏನು ಮಾಡುತಾ ಇದ್ದಾನೊ. ಇನ್ನು ಹೆಚ್ಚು ಹೊತ್ತು, ಈ ಮಳೆ ಗಾಳೀಲಿ ನಿಂತರೆ ನನಗೆ 'ನ್ಯುಮೋನಿಯಾ' ಬರುತ್ತದೆ.

ನೋಟ್ ತೆಗೆವವನು : (ತನ್ನಷ್ಟಕ್ಕೆ ತಾನೆ ಮಾತನಾಡುತ್ತ, 'ಮೋನಿಯಾ' ಎಂಬುದರ ಅವಳ ಉಚ್ಚಾರಣೆಯನ್ನು ಬರೆದುಕೊಳ್ಳುತ್ತ) ಅರ್‍ಲ್ಸ್ ಕೋರ್ಟ್.

ಮಗಳು : (ರಭಸದಿಂದ) ನಿಮ್ಮ ಈ ಅಧಿಕ ಪ್ರಸಂಗದ ವ್ಯಾಖ್ಯಾನಗಳನ್ನು ನಿಮ್ಮಲ್ಲಿಯೇ ಇಟ್ಟುಕೊಳ್ಳಿ.

ನೋಟ್ ತೆಗೆವವನು : ಓ...ಅದನ್ನು ಗಟ್ಟಿಯಾಗಿ ಹೇಳಿದೆನೊ ? ಆ ಉದ್ದೇಶವಿರಲಿಲ್ಲ —ಕ್ಷಮಿಸಬೇಕು. ನಿಮ್ಮ ತಾಯಿ 'ಎಪ್ಸಮ್' ಅಲ್ವೆ ? ಅದು ತಪ್ಪಾಗುವ ಹಾಗೇನೂ ಇಲ್ಲ.

ತಾಯಿ : (ಅವನಿಗೂ ಅವಳಿಗೂ ನಡುವೆ ಬಂದು) ಎಷ್ಟು ವಿಚಿತ್ರವಾಗಿದೆ ! ನಾನು ಬೆಳೆದದ್ದು ಎಪ್ಸಮ್ ಹತ್ತಿರದ ಲಾರ್ಜ್ ಲೇಡಿ ಪಾರ್ಕಿನಲ್ಲಿ.

ನೋಟ್ ತೆಗೆವವನು : (ಗಟ್ಟಿಯಾಗಿ ವಿನೋದದಿಂದ) ಹಾ...ಹಾ ಎಂಥ ದೆವ್ವದಂಥ ಹೆಸರು, ಕ್ಷಮಿಸಿ. (ಮಗಳನ್ನು ಕುರಿತು) ನಿಮಗೆ ಗಾಡಿ ಬೇಕಾಗಿದೆ ಅಲ್ಲಾ ?

ಮಗಳು : ನನ್ನೊಡನೆ ಮಾತನಾಡುವುದಕ್ಕೆ ಎಷ್ಟು ಧೈರ್ಯ ನಿಮಗೆ ?

ತಾಯಿ : ಕ್ಲ್ಯಾರಾ...ಕ್ಲ್ಯಾರಾ...ನೋಡು ! (ತಾಯಿಯ ಇಷ್ಟವನ್ನು ಲೆಕ್ಕಿಸದವಳಂತೆ, ಕೋಪದಿಂದ ಭುಜ ಅಲುಗಿಸುತ್ತ, ಅಟ್ಟಹಾಸದಿಂದ ಬೇರೆಯ ಕಡೆಗೆ ಸರಿಯುತ್ತಾಳೆ.) ನಮಗೆ ಒಂದು ಗಾಡಿ ತರಿಸಿಕೊಟ್ಟರೆ ತುಂಬಾ ಉಪಕಾರ ಆಗುತ್ತೆ, ಅಪ್ಪಾ. (ನೋಟ್ ತೆಗೆದುಕೊಳ್ಳುವವನು ಒಂದು ಸಿಳ್ಳೆಯನ್ನು ಕೈಗೆ ತೆಗೆದುಕೊಳ್ಳುತ್ತಾನೆ.) ದೊಡ್ಡ ಸಹಾಯ ಅಪ್ಪಾ ! (ಮಗಳಿರುವ ಕಡೆಗೆ ಹೋಗುತ್ತಾಳೆ. ನೋಟ್ ತೆಗೆದುಕೊಳ್ಳುವವನು ಕರ್ಣಭೇದಿಯಾದ ಧ್ವನಿಯಲ್ಲಿ ಅದನ್ನು ಊದುತ್ತಾನೆ.)

ವ್ಯಂಗ್ಯಕಾರ : ನೋಡಿದೆಯ ? ನನಗೆ ಗೊತ್ತು. ಅವನು ಬೇದಿರಸಿನಲ್ಲಿರುವ ಪೊಲೀಸಿನವನು ಅಂತ !

ಬಳಿ ನಿಂತವನು : ಅದು ಪೊಲೀಸ್ ಸಿಳ್ಳೆ ಅಲ್ಲ ; ಆಟಗಾರರ ಪೀಪಿ.

ಹೂವಿನ ಹುಡುಗಿ : (ತನ್ನ ನೊಂದ ಭಾವದಲ್ಲಿಯೇ ಮುಳುಗಿ) ನನ್ನ ಮರ್ಯಾದೆ ತೆಗೆಯೋಕ್ಕೆ ಅವರ್ಗಧಿಕಾರ ಯಿಲ್ಲ. ದೊಡ್ ವಂಶದ ಯೆಂಗಸ್ರಿಗೆ ಅವರ ಮರ್ಯಾದೆ ಯೆಂಗೋ ನಂಗೂ ನನ್ನ ಮರ್ಯಾದೆ ಅಂಗೇ.

ನೋಟ್ ತೆಗೆವವನು : ನೀವು ನೋಡಿದಿರೋ ಇಲ್ಲವೊ, ಎರಡು ನಿಮಿಷಕ್ಕೆ ಮುಂಚೆಯೇ ಮಳೆ ನಿಂತಿತು.

ಪಕ್ಕದವನು : ಹೌದು ನಿಂತಿತು. ಈ ಮುಂಚೆಯೇ ಏಕೆ ನೀವು ಹೇಳಲಿಲ್ಲ ? ಇಷ್ಟು ಹೊತ್ತು ನಿಮ್ಮ ಅವಿವೇಕ ಕೇಳುತ್ತ ಇಲ್ಲಿ ಕಾಲ ಕಳೆಯಬೇಕಾಯಿತು. (ಸ್ಟ್ರ್ಯಾಂಡ್ ಕಡೆಗೆ ನಡೆದು ಹೋಗುತ್ತಾನೆ.)

ವ್ಯಂಗ್ಯಕಾರ : ನೀವು ಎಲ್ಲಿಂದ ಬರುತಿದ್ದೀರಿ ಎಂದು ನಾನು ಹೇಳಬಲ್ಲೆ. ನಿಮ್ಮ ಸ್ಥಳ ಅನ್‌ವೆಲ್. ಅಲ್ಲಿಗೆ ಹಿಂತಿರುಗಿ ಹೋಗಿ.

ನೋಟ್ ತೆಗೆವವನು : (ಸಹಾಯಕನಾಗಿ) ಹ್ಯಾನ್‌ವೆಲ್ಲ್.

ವ್ಯಂಗ್ಯಕಾರ : (ತುಂಬಾ ಮಾತಿನ ಗಾಂಭೀರ್ಯವನ್ನು ನಟಿಸುತ್ತ) ತುಂಬಾ ಉಪಕಾರ ಆಯ್ತು ಮೇಷ್ಟ್ರೆ. ಹಾ...ಹಾ...ನಮಸ್ಕಾರ. (ಅಣಕಿಸುವಂತೆ ತನ್ನ ಹ್ಯಾಟನ್ನು ಮುಟ್ಟಿಕೊಂಡು ಹೊರಟು ಹೋಗುತ್ತಾನೆ.)

ಹೂವಿನ ಹುಡುಗಿ : ಜನಗಳ್ನ ಅಂಗೆ ಯೆದ್ರಸೋದ ! ತನಗೇ ಅಂಗಾದ್ರೆ ಯೆಂಗನ್ಸತ್ತೊ.

ತಾಯಿ : ಬಾನು ತಿಳಿಯಾಯ್ತು ಕ್ಲಾರಾ, ಒಂದು ಮೋಟರ್ ಬಸ್ ಸಿಗುವಲ್ಲಿಗೆ ಹೋಗೋಣ, ಬಾ. (ಕಾಲುಡೆಯನ್ನು ಹರಡಿನಿಂದ ಸ್ವಲ್ಪ ಮೇಲಕ್ಕೆತ್ತಿಕೊಂಡು ಸ್ಟ್ಯಾಂಡ್ ಕಡೆಗೆ ಹೋಗುವಳು.)

ಮಗಳು : ...ಆದ್ರೆ...ಗಾಡಿ...! (ತಾಯಿ ಈ ಮಾತುಗಳನ್ನು ಕೇಳಿಸದಷ್ಟು ದೂರ ವಾಗಿದ್ದಾಳೆ.) ಓ ಬೇಸರ, ಇದು. (ಕೋಪದಿಂದ ತಾಯನ್ನು ಹಿಂಬಾಲಿಸು ತ್ತಾಳೆ.)

[ನೋಟ್ ತೆಗೆದುಕೊಳ್ಳುವವನು, ಸಭ್ಯ ಗೃಹಸ್ಥ ಮತ್ತು ಹೂವಿನ ಹುಡುಗಿ ಈ ಮೂವರನ್ನು ಬಿಟ್ಟು ಉಳಿದವರೆಲ್ಲ ಹೊರಟುಹೋಗಿದ್ದಾರೆ. ಹೂವು ಮಾರುವ ಹುಡುಗಿ ತನ್ನ ಹೂವಿನ ಮುಕ್ಕರಿಯನ್ನು ಸರಿಪಡಿಸಿಕೊಳ್ಳುತ್ತಿದ್ದಾಳೆ, ಇನ್ನೂ ಗೊಣಗುಟ್ಟುತ್ತ ತನ್ನನ್ನೇ ಕರುಣಿಸಿಕೊಳ್ಳುತ್ತಿದ್ದಾಳೆ.]

ಹೂವಿನ ಹುಡುಗಿ : ಬಡ ವುಡ್ಗಿ, ಇತರ್ರು ಅವಳ್ನ ಗೋಳು ಒಯ್‌ಕೊಳ್ದಿಯಿದ್ರೂ ಅವಮಾನ ಮಾಡ್ದೆಯಿದ್ರೂ, ಪ್ರಾಣ ವೊರಕೊಳ್ಳೋದೇ ಕಷ್ಟ.

ಸಭ್ಯ : (ಮೊದಲು ತಾನಿದ್ದ, ನೋಟ್ ತೆಗೆದುಕೊಳ್ಳುವವನ ಎಡಕ್ಕೆ ಬಂದು) ತಾವು ಇದನ್ನ ಹೇಗೆ ಮಾಡುತ್ತೀರಿ, ಕೇಳಬಹುದೆ ?

ನೋಟ್ ತೆಗೆಪವನು : ಕೇವಲ ಶಬ್ದ ಶಿಕ್ಷಾ ಬಲದಿಂದ. ಆಡುವ ಮಾತನ್ನು ಕುರಿತ ಶಾಸ್ತ್ರ ಅದು. ಅದು ನನ್ನ ವೃತ್ತಿ. ನನ್ನ ಖುಷಿಯ ಕೆಲಸವೂ ಹೌದು. ತನಗೆ ಖುಷಿಯಿರುವುದರಲ್ಲಿ ಜೀವನ ಮಾಡುವ ಮನುಷ್ಯನೇ ಸುಖಿ. ಐರಿಷ್ ಯಾರು ? ಯಾರ್ಕ್‌ಷೈರ್ ಅವರ್‍ಯಾರು ಎಂಬುದನ್ನು ಅವರ ಮಾತಿನಿಂದ ನೀವು ಗುರುತಿಸಬಹುದು. ಆರು ಮೈಲಿಯಲ್ಲಿರುವ ಯಾರನ್ನಾದರೂ ಅವರ ಮಾತಿನಿಂದ ಬೇರೆಮಾಡಿ ನಾನು ಗುರುತಿಸಬಲ್ಲೆ. ಲಂಡನಿನ ಎರಡೆರಡು ಮೈಲಿಗಳಿಗಿರುವ ವ್ಯತ್ಯಾಸವನ್ನು ಗುರುತಿಸಬಲ್ಲೆ. ಕೆಲ ವೇಳೆ ಎರಡು ರಸ್ತೆಗಳಲ್ಲಿರುವ ಭೇದ ಗಳನ್ನು ಗುರುತಿಸಬಲ್ಲೆ.

ಹೂವಿನ ಹುಡುಗಿ : ಇವನ್ಗೆ ಅವ್ಮಾನ ಆಗಾಕಿಲ್ಲಾ. ಇವ್ನು ಗಂಡ್ಸೇ...ಯೇಡಿ.

ಸಭ್ಯ : ಆದರೆ ಅದರಲ್ಲಿ ಜೀವನ ನಡೆಯುತ್ತದೆಯೆ ?

ನೋಟ್ ತೆಗೆವವನು : ಓ...ಆಗುತ್ತೆ. ಸೊಂಪಾದ ಸಂಪಾದನೆ. ಇದು ನಾಯಿ ಕೊಡೆಗಳ ಯುಗ. ಕೆಂಟಿಷ್ ಟೌನಿನಲ್ಲಿ ವರ್ಷಕ್ಕೆ ೮೦ ಪೌಂಡ್ ಸಂಪಾದನೆಯಿಂದ ತೊಡಗಿದ ಜನ ಪಾರ್ಕ್‌ಲೇನಿನಲ್ಲಿ ಲಕ್ಷ ಪೌಂಡ್ ಸಂಪಾದಿಸುತ್ತ ಇರಬಲ್ಲ ಕಾಲ. ಕೆಂಟಿಷ್‌ಟೌನನ್ನು ಬಿಡಬೇಕೆಂಬುದು ಅವರ ಇಷ್ಟ. ಆದರೆ ಮಾತನಾಡಲು ಬಾಯಿ ಬಿಟ್ಟರೆ ಸಾಕು—ಅವರು ಎಲ್ಲಿನವರೆಂದು ಗೊತ್ತಾಗಿ ಹೋಗುತ್ತೆ. ನಾನು ಅವರಿಗೆ ಮಾತನಾಡುವುದನ್ನು ಕಲಿಸಿಕೊಡಬಲ್ಲೆ.

ಹೂವಿನ ಹುಡುಗಿ : ತನ್‌ಕೆಲ್ಸ ತಾನ್ ಮಾಡ್ಕೊಳ್ಳಿ. ನನ್ನಂತ ಬಡ ವುಡ್ಗಿ ಗೊಡ್ವೆ ಇವನ್ಯಾಕೆ ಅಂತೀನಿ—

ನೋಟ್ ತೆಗೆವವನು : (ಸಿಡಿಯುತ್ತ) ಏ ಹೆಣ್ಣೇ...ಈ ಅಧ್ವಾನ್ನ...ಬೂ ಹೂ ತಕ್ಷಣ ನಿಲ್ಲಿಸು. ಅಥವಾ ಬೇರೆ ಒಳ್ಳೆ ಕಡೆಗೆ ಎಲ್ಲಿಯಾದರೂ ಹೋಗಿ ಆಶ್ರಯ ಪಡೆ.

ಹೂವಿನ ಹುಡುಗಿ : (ದುರ್ಬಲ ಪ್ರತಿಭಟನೆಯಿಂದ) ನಂಗಿಷ್ಟಯಿದ್ರೆ, ಯಿಲ್ಲಿರೋದ್ಕ ನಂಗದಿಕಾರವುಂಟು. ನಿಮ್ಗಿರೋ ಅಂಗೇನೇ.

ನೋಟ್ ತೆಗೆವವನು : ಮನಸ್ಸಿನ ನೆಮ್ಮದಿ ಕೆಡಿಸುತ್ತ ಅಸಹ್ಯಕರ ಶಬ್ದಗಳನ್ನು ಉಚ್ಚಾರ ಮಾಡುತ್ತ ಇರುವ ಇಂಥ ಹೆಂಗಸಿಗೆ ಎಲ್ಲಿರುವುದಕ್ಕೂ ಅಧಿಕಾರವಿಲ್ಲ.–ಬದುಕಿರೋದಕ್ಕೇ ಅಧಿಕಾರವಿಲ್ಲ.—ನೀನು ಮನುಷ್ಯ ಪ್ರಾಣಿ. ನಿನಗೆ ಒಂದು ಆತ್ಮ ಇದೆ. ದೇವರು ಕೊಟ್ಟಿರುವ, ಚೆನ್ನಾಗಿ ಉಚ್ಚಾರ ಮಾಡಬಲ್ಲ ಭಾಷೆಯೂ ಇದೆ. ನಿನ್ನ ಹುಟ್ಟು ಭಾಷೆ, ಷೇಕ್ಸ್‌ಪಿಯರ್, ಮಿಲ್ಟನ್ ಬರೆದ ಭಾಷೆ. ಬೈಬಲಿನ ಭಾಷೆ. ಸುಮ್ಮನೆ ಅಲ್ಲಿ ಕುಳಿತು ಪಿತ್ತ ಹಿಡಿದ ಪಾರಿವಾಳದಂತೆ ಕುರುಕ ಬೇಡ, ಹೋಗು.

ಹೂವಿನ ಹುಡುಗಿ : (ಸುಸ್ತಾಗಿ, ಅವನ ಕಡೆಗೆ ಆಕ್ಷೇಪದಿಂದ ನೋಡುತ್ತ, ಆದರೆ ತಲೆಯನ್ನು ಮೇಲೆತ್ತಲು ಧೈರ್ಯವಿಲ್ಲದೆಯೆ) ಆಹ್...ಆಹ್...ಆಹ್... ಔ...ಔ...ಔ...ಊ...!

ನೋಟ್ ತೆಗೆವವನು : (ಪುಸ್ತಕವನ್ನು ಕೈಗೆ ತೆಗೆದುಕೊಂಡು) ದೇವರೇ, ಎಂಥಾ ಶಬ್ದ ! (ಬರೆದುಕೊಳ್ಳುತ್ತಾನೆ. ಪುಸ್ತಕವನ್ನು ಎತ್ತಿ ಹಿಡಿದು ಓದುತ್ತಾನೆ. ಅವಳ ಮಾತಿನ ಸ್ವರಗಳನ್ನು ಖಚಿತವಾಗಿ ಅವಳು ಆಡಿದಂತೆಯೇ ವಾಚಿಸುತ್ತಾನೆ.) ಆಹ್...ಆಹ್...ಆಹ್...ಔ...ಔ...ಔ...ಊ...!

ಹೂವಿನ ಹುಡುಗಿ : (ಈ ಪ್ರದರ್ಶನದಿಂದ ಚಕ್ಕಗುಳಿ ಇಟ್ಟಂತಾಗಿ ಇಷ್ಟವಿಲ್ಲದೆಯೇ ನಗುತ್ತಾಳೆ.) ನೀನು ಆಳಾದೆ.

ನೋಟ್ ತೆಗೆವವನು : ಈ ಪ್ರಾಣಿಯನ್ನು ನೋಡಿ ; ರಸ್ತೆ ಅಂಚು ಕಲ್ಲಿನ ಇವಳ ಇಂಗ್ಲಿಷನ್ನು ನೋಡಿ ; ಸಾಯುವತನಕ ಇವಳನ್ನು ಅದು ಗಟಾರದಲ್ಲಿಯೇ ಉಳಿಸುತ್ತೆ. ನಾನು ಮನಸ್ಸು ಮಾಡಿದರೆ, ಸ್ವಾಮಿ, ಮೂರು ತಿಂಗಳಲ್ಲಿ ಆ ಹುಡುಗಿಯನ್ನು ತಯಾರು ಮಾಡುತ್ತೇನೆ. ರಾಯಭಾರಿಯೊಬ್ಬನ ಆರಾಮ ಕೂಟದಲ್ಲಿ ಶ್ರೀಮಂತಿನಿಯಂತೆ ನಡಸಿ ತೂಗಿಸಬಲ್ಲೆ. ಅಥವಾ ಶ್ರೀಮಂತ ಸ್ತ್ರೀಯೊಬ್ಬಳ ಸಖಿಯಂತೆಯೊ ಅಂಗಡಿ ವ್ಯಾಪಾರಿಯ ಸಹಾಯಕಳಂತೆಯೊ ಒಂದು ಸ್ಥಾನ ಕೊಡಿಸಬಲ್ಲೆ : ಅದಕ್ಕೆ ಇನ್ನೂ ಮೇಲು ತರಗತಿಯ ಇಂಗ್ಲಿಷ್ ವಾಣಿಜ್ಯ ಪ್ರಪಂಚದಲ್ಲಿನ ಕೋಟ್ಯಧೀಶ್ವರರಿಗೆ ನಾನು ಕೊಡುವ ನೆರವು ಇಂಥದು. ಅದರಿಂದ ಬರುವ ಸಂಪಾದನೆಯಿಂದ ಶಬ್ದಶಿಕ್ಷಾಶಾಸ್ತ್ರದಲ್ಲಿ ನಿಜವಾದ ವ್ಯಾಸಂಗದ ಕೆಲಸವನ್ನು ಮಾಡುತ್ತೇನೆ. ಜೊತೆಗೆ ಮಿಲ್ಟನಿನ ಕವಿತಾ ಮಾರ್ಗವನ್ನು ಅನುಸರಿಸಿ ಸ್ವಲ್ಪ ಕವಿತೆ ಬರೆಯುತ್ತೇನೆ.

ಸಭ್ಯ : ನಾನೂ ಇಂಡಿಯ ದೇಶದ ಉಪಭಾಷೆಗಳ ವ್ಯಾಸಂಗ ಮಾಡುವವನು. ಮತ್ತು...

ನೋಟ್ ತೆಗೆವವನು : (ಆಸಕ್ತಿಯಿಂದ) ಹೌದೇನು ? "ಆಡುವ ಸಂಸ್ಕೃತ" ಎಂಬ ಗ್ರಂಥವನ್ನು ಬರೆದ ಕರ್ನಲ್ ಪಿಕರಿಂಗ್ ತಮಗೆ ಗೊತ್ತೇ ?

ಸಭ್ಯ : ಕರ್ನಲ್ ಪಿಕರಿಂಗ್ ನಾನೇ. ತಾವು ಯಾರೊ ?

ನೋಟ್ ತೆಗೆವವನು : ಹೆನ್ರಿ ಹಿಗ್ಗಿನ್ಸ್. "ಸಾರ್ವತ್ರಿಕ ಅಕ್ಷರಮಾಲೆ" ಎಂಬುದರ ಕರ್ತೃ.

ಪಿಕರಿಂಗ್ : (ಉತ್ಸಾಹದಿಂದ) ತಮ್ಮನ್ನು ಕಾಣಲು ಇಂಡಿಯದಿಂದ ಬಂದೆ.

ಹಿಗ್ಗಿನ್ಸ್ : ತಮ್ಮನ್ನು ನೋಡಬೇಕೆಂದು ಇಂಡಿಯ ದೇಶಕ್ಕೆ ಹೋಗಬೇಕು ಎಂದಿದ್ದೆ.

ಪಿಕರಿಂಗ್ : ತಮ್ಮ ವಾಸ ಎಲ್ಲಿ ?

ಹಿಗ್ಗಿನ್ಸ್ : 27A, ವಿಂಪೋಲ್ ಸ್ಟ್ರೀಟ್. ನಾಳೆ ನಮ್ಮ ಮನೆಗೆ ದಯಮಾಡಿಸಿ.

ಪಿಕರಿಂಗ್ : ನಾನು 'ಕಾರಲ್ಟನ್' ಅಲ್ಲಿದ್ದೇನೆ. ಈಗಲೇ ನನ್ನ ಜೊತೆಯಲ್ಲಿ ಬನ್ನಿ. ಅಲ್ಲಿಯೇ ಊಟಮಾಡಿ...ಸ್ವಲ್ಪ ಹರಟೆ ಹೊಡೆದು ಬಾಯಿ ಚಪಲ ತೀರಿಸಿ ಕೊಳ್ಳೋಣ.

ಹಿಗ್ಗಿನ್ಸ್ : ಸರಿ, ಆಗಬಹುದು.

ಹೂವಿನ ಹುಡುಗಿ : (ತನ್ನನ್ನು ಹಾದು ಹೋಗುತ್ತಿರುವ ಪಿಕರಿಂಗನ್ನು ಕುರಿತು) ದಯಮಾಡಿ ಒಂದು ಹೂ ಕೊಂಡ್ಕೊಳ್ಳಿ ಮಾಸಾಮಿ. ಬಾಡ್ಗೇಗೆ ಅಣ ಸಾಲ್ದಾಗಿದೆ.

ಪಿಕರಿಂಗ್ : ನಿಜವಾಗಿ ನನ್ನಲ್ಲಿ ಏನೂ ಚಿಲ್ಲರೆ ಇಲ್ಲಮ್ಮ, ಕ್ಷಮಿಸು. (ಹೊರಟು ಹೋಗುತ್ತಾನೆ.)

ಹಿಗ್ಗಿನ್ಸ್ : (ಅವಳ ಸುಳ್ಳಿಂದ ಸ್ತಬ್ದನಾಗಿ) ಸುಳ್ಳಿ, ನೀನು. ಅರ್ಧ ಕ್ರೌನಿಗೆ ಚಿಲ್ಲರೆ ಇದೆ ಎಂದೆ !

ಹೂವಿನ ಹುಡುಗಿ : (ನಿರಾಸೆಯಿಂದ ಮೇಲೆದ್ದು) ನಿಂ ಮೈತುಂಬಾ ಯಾರಾದ್ರೂ ಪೊಳೆ ಒಡೆದರಾದೀತು ! ನಿಜವಾಗಿ (ಮಕ್ಕರಿಯನ್ನು ಅವನ ಕಾಲಿನ ಬಳಿ ಎತ್ತಿ ಹಾಕಿ) ಈ ಮಕ್ಕರೀಲಿರೊ ಪೂಸೆಲ್ಲಾ ಆರು ಪೆನ್ನಿಗೆ ಕೊಡ್ತೇನೆ. ತೊಗೊಳ್ಳಿ.

[ಚರ್ಚಿನ ಗಡಿಯಾರ ಎರಡನೆ ಪಾದವನ್ನು ಬಡಿಯುತ್ತದೆ. ಅದು ದೇವರಾಣತಿಯಂತೆ ನುಡಿಯುತ್ತದೆ. ಬಡಹುಡುಗಿಯು ಪರವಾಗಿ ಧರ್ಮ ಬುದ್ಧಿ ತೋರಿಸದ 'ಪಾಪಿ' ಅವನು ಎಂಬಂತೆ. ಇದು ನೆನಪಿನ ಎಚ್ಚರಿಕೆ. ಹಿಗ್ಗಿನ್ಸ್ ಗಂಭೀರವಾಗಿ ತನ್ನ ಹ್ಯಾಟನ್ನು ಮೇಲೆತ್ತುವನು. ಮಕ್ಕರಿಯೊಳಕ್ಕೆ ಒಂದು ಹಿಡಿ ನಾಣ್ಯ ಹಾಕಿ ಪಿಕರಿಂಗನ್ನು ಹಿಂಬಾಲಿಸಿ ಹೋಗುವನು.]

ಹೂವಿನ ಹುಡುಗಿ : (ಅರ್ಧ ಕ್ರೌನ್ ಒಂದನ್ನು ಆರಿಸಿಕೊಂಡು) ಆಹ್...ಔ... ಊಹ್ ! (ಎರಡು ಮೂರು ಅರ್ಧ ಕ್ರೌನ್‌ಗಳನ್ನು ಆರಿಸಿಕೊಂಡು) ಆಹ್... ಔ...ಊಹ್...ಊಹ್......(ಹಲವು ನಾಣ್ಯಗಳನ್ನು ಆರಿಸುತ್ತ) ಆಅಅಅ ಆಹ್...ಔ...ಊಹ್...(ಒಂದು ಅರ್ಧ ಸವರನ್ ಸಿಗಲು) ಆಆಅಅ...ಔ... ಊಹ್...!

ಫ್ರೆಡ್ಡಿ : (ಗಾಡಿಯಿಂದ ಹೊರಕ್ಕೆ ಜಿಗಿದು ಬಂದು) ಕಡೆಗೆ ಒಂದು ಸಿಕ್ಕಿತು......... ಹಲ್ಲೋ ! (ಹುಡುಗಿಗೆ) ಇಲ್ಲಿದ್ದ ಆ ಇಬ್ಬರು ಮಹಿಳೆಯರು ಎಲ್ಲಿಗೆ ಹೋದರು ?

ಹೂವಿನ ಹುಡುಗಿ : ಮಳೆ ನಿಂತ್‌ಕೊಡ್ಲೆ ಬಸ್ಸಿಗೆ ನಡೆದೋದ್ರು.

ಫ್ರೆಡ್ಡಿ : ನನ್ನ ತಲೆಯ ಮೇಲೆ ಈ ಗಾಡಿ ಹಾಕಿ !...ಹಾಳಾಯ್ತು !

ಹೂವಿನ ಹುಡುಗಿ : (ವೈಭವದಿಂದ) ಯೋಚನೆ ಮಾಡ್ಬೇಡ ಅಯ್ಯಾ...ಟ್ಯಾಕ್ಸೀಲಿ ನಾನು ಪೋಗ್ತೇನೆ ಮನೇಗೆ. (ವಿಜೃಂಭಣೆಯಿಂದ ಗಾಡಿಯೊಳಕ್ಕೆ ಹೋಗಲಿದ್ದಾಳೆ. ಗಾಡಿ ನಡಸುವವನು ತನ್ನ ಕೈಯನ್ನು ಹಿಂದಕ್ಕೆ ಚಾಚಿ, ಅವಳು ಅದರ ಒಳಗೆ ಬಾರದಂತೆ ಬಾಗಿಲನ್ನು ದೃಢವಾಗಿ ಮುಚ್ಚಿ ಹಿಡಿಯುತ್ತಾನೆ. ಅವನ ಅಪನಂಬಿಕೆಯನ್ನು ಪೂರ್ತಿ ಅರ್ಥ ಮಾಡಿಕೊಂಡು, ತನ್ನ ಕೈತುಂಬಾ ಇರುವ ಹಣವನ್ನು ಅವನಿಗೆ ತೋರಿಸುತ್ತಾಳೆ.) ಯೆಂಟು ಪೆನ್ಸ್ ನಂಗೇನೂ ಲಕ್ಷ್ಯಯಿಲ್ಲ, ಚಾರ್ಲಿ. (ಹಲ್ಲು ಕಿರಿದು ಅವನು ಬಾಗಿಲನ್ನು ತೆಗೆಯುತ್ತಾನೆ.) ಡ್ರೂರಿ ಲೇನ್ ಹತ್ರ, ಯೇಂಜೆಲ್ ಕೋರ್ಟ್–ಮಿಕಲ್ ಜಾನ್ ಯೆಣ್ಣೆ ಅಂಗ್ಡಿ

ಹತ್ರ ಮೂಲೆ. ಗಾಡಿ ಯೆಷ್ಟು ಬೇಗ ನಡಸ್ತೀಯೊ ನೋಡೋವ. (ಒಳಗೆ ಕುಳಿತು ಬಾಗಿಲನ್ನು ಎಳೆದು ಒಳಗಿನಿಂದ ಶಬ್ದ ಮಾಡುತ್ತ ಹಾಕಿಕೊಳ್ಳುವಳು. ಗಾಡಿ ಹೊರಡುವುದು.)

ಫ್ರೆಡ್ಡಿ : ನನ್ನ ಮುಂಡವೋಚಿಕೊಂಡು ಹೋಯಿತು !

# ಅಂಕ ಎರಡು

[ಮಾರನೆಯ ದಿನ ಬೆಳಿಗ್ಗೆ ೧೧ ಘಂಟೆಗೆ ಹಿಗ್ಗಿನ್ಸ್ ಅವರ ಪ್ರಯೋಗ ಶಾಲೆ ; ವಿಂಪೋಲ್ ರಸ್ತೆಯಲ್ಲಿ ಮೊದಲ ಮಹಡಿ ಮೇಲಿನ ಕೋಣೆ ಅದು. ಮೇಲೆ ನಿಂತರೆ ಹೊರಗೆ ರಸ್ತೆ ಕಾಣುತ್ತದೆ ; ಅದು ದಿವಾನ್‌ಖಾನೆಗಾಗಿ ಕಟ್ಟಿದ್ದು. ಬಲಮೂಲೆಯಲ್ಲಿ ಎರಡು ಅಲಮಾರುಗಳಿವೆ ; ಒಂದು ಚಪ್ಪಟೆ ಮೇಜಿದೆ. ಅದರ ಮೇಲೆ ಒಂದು ಫೊನೊಗ್ರಾಫ್, ಒಂದು ಧ್ವನಿ ನಾಳ ದರ್ಶಕ ಯಂತ್ರ ಮುಂತಾದವಿವೆ. ಶಬ್ದಗಳನ್ನು ಮಾಡಲು, ಅಳೆಯಲು ನಾನಾ ಚಿಕ್ಕ, ದೊಡ್ಡ ಸಾಧನಗಳಿವೆ. ವಾಸ್ತವ ಮಾನವ ಗಾತ್ರದ ಮಾನವನ ಒಂದು ಅರ್ಧ ತಲೆಯಿದೆ ; ಶಬ್ದೋಚ್ಚಾರಣೆಯ ಅಂಗಗಳನ್ನು ಸ್ಫುಟವಾಗಿ ಅದರಲ್ಲಿ ಕಾಣಬಹುದು. ಶಬ್ದಗಳನ್ನು ಗ್ರಹಿಸಲು ಅರಗಿನ ತಾಟುಗಳುಳ್ಳ ಪೆಟ್ಟಿಗೆ ಒಂದು.

ಆಚೆಗೆ ಬೆಂಕಿ ಕಾಯಿಸಿಕೊಳ್ಳುವ ಏರ್ಪಾಡಿದೆ ; ಒಲೆಯ ಹತ್ತಿರ ಸುಖಾಸನವೊಂದು. ಅದರ ನೆತ್ತಿಯಲ್ಲಿ ಒಂದು ಗಡಿಯಾರ. ಬೆಂಕಿ ಕಾಯಿಸಿಕೊಳ್ಳುವ ಸ್ಥಳಕ್ಕೂ ಫೋನೊಗ್ರಾಫ್ ಮೇಜಿಗೂ ನಡುವೆ ವೃತ್ತ ಪತ್ರಿಕೆಗಳನ್ನು ಹಾಕುವನಿಲವೊಂದಿದೆ.

ಎಡಕ್ಕೆ ಒಂದು ಕಡೆ ಡ್ರಾಯರುಗಳಿರುವ ಪೆಠಾರಿ. ಅದರ ಮೇಲೆ ಒಂದು ದೂರವಾಣಿ ಯಂತ್ರ. ಅದರ ವಿಳಾಸಗಳ ಪುಸ್ತಕ. ಆಚೆ ಮೂಲೆಯಲ್ಲಿ ದೊಡ್ಡ ಪಿಯಾನೊ ಒಂದು. ಪಕ್ಕದಲ್ಲಿ ಅದರ ಉದ್ದಕ್ಕೂ ಒಂದು ನೀಡಿರುವ ಪಿಯಾನೊ ಬಾರಿಸುವವರ ಪೀಠ. ಪಿಯಾನೊ ಮೇಲೆ ದೊಡ್ಡ ಹಣ್ಣು ಹೇರಿದ ತಟ್ಟೆ. ಅದರಲ್ಲಿ ಬೇಕಾದಷ್ಟು ಚಾಕೊಲೆಟ್ ಇದೆ.

ನಡುವೆ ಸಾಕಷ್ಟು ಬಿಡುವಾದ ಸ್ಥಳದಲ್ಲಿ, ಫೋನೊಗ್ರಾಫ್ ಮೇಜಿನ ಬಳಿಯ ಎರಡು ಕುರ್ಚಿಗಳ ಜೊತೆಗೆ ಇನ್ನೊಂದು ಬಿಡಿ ಕುರ್ಚಿ ಇದೆ. ಗೋಡೆಗಳ ಮೇಲೆ ರೇಖಾ ಚಿತ್ರಗಳು.

ಪಿಕರಿಂಗ್ ಮೇಜಿನ ಬಳಿ ಕುಳಿತಿದ್ದಾನೆ. ತಾನು ನೋಡಿದ ಕೆಲವು ಕಾರ್ಡುಗಳನ್ನು ತೆಗೆದಿಡುತ್ತಿದ್ದಾನೆ. ಹಿಗ್ಗಿನ್ಸ್ ಬಳಿಯಲ್ಲಿ ನಿಂತಿದ್ದಾನೆ ; ವಿವರಿಸುವವನಂತೆ. ಹಿಗ್ಗಿನ್ಸ್ ವಯಸ್ಸು ೪೦. ಆರೋಗ್ಯವಂತ, ಚುರುಕಾದವನು, ಮುಗುವಿನಂಥ ಮನಸ್ಸಿನವನು. ಎಂಥ ಸಮಯದಲ್ಲಿಯೂ ನೆಚ್ಚಲು ತಕ್ಕವನು. ಅವನನ್ನು ಕಂಡರೆ ಅವನೆಷ್ಟೇ ಅಯುಕ್ತವಾಗಿ ಮಾತನಾಡಲಿ ಪ್ರೀತಿ ಉಂಟಾಗುತ್ತದೆ.]

ಹಿಗ್ಗಿನ್ಸ್ : (ಕಡೆಯ ಡ್ರಾಯರನ್ನು ಮುಚ್ಚುತ್ತ) ನನ್ನಲ್ಲಿರುವ ಸಾಮಾನುಗಳೆಲ್ಲ ಬಹುಶಃ ಇಷ್ಟೇ.

ಪಿಕರಿಂಗ್ : ನನಗೆ ವಿಸ್ಮಯವಾಗಿದೆ. ಅದರಲ್ಲಿನ ಇನ್ನೂ ಅರ್ಥವನ್ನು ನಾನು ಪೂರ್ತಿ ಅರ್ಥಮಾಡಿಕೊಂಡಿಲ್ಲ.

ಹಿಗ್ಗಿನ್ಸ್ : ಅವುಗಳಲ್ಲಿ ಯಾವುದನ್ನಾದರೂ ಪುನಃ ನೋಡುತ್ತೀರೇನು ?

ಪಿಕರಿಂಗ್ : (ಎದ್ದು ಬೆಂಕಿ ಕಾಯಿಸಿಕೊಳ್ಳುವ ಸ್ಥಳಕ್ಕೆ ಬಂದು ಬೆಂಕಿಗೆ ಬೆನ್ನು ತಿರುಗಿಸಿ ನಿಂತುಕೊಳ್ಳುವನು.) ಸಾಕು, ಈಗಬೇಡ. ಈ ಬೆಳಿಗ್ಗೆಗೆ ಸಾಕು. ಸಾಕಾಗಿದೆ.

ಹಿಗ್ಗಿನ್ಸ್ : (ಹಿಂಬಾಲಿಸುತ್ತ ಅವನ ಎಡಕ್ಕೆ ನಿಂತು) ಶಬ್ದಗಳನ್ನು ಕೇಳಿ ಆಯಾಸ ಆಯಿತೆ ?

ಪಿಕರಿಂಗ್ : ಹೌದು. ಭಯಂಕರ ಶ್ರಮ ಆಗುತ್ತದೆ. ಇಪ್ಪತ್ತನಾಲ್ಕು ಸ್ವರಗಳನ್ನು ಸ್ಪಷ್ಟವಾಗಿ ಉಚ್ಚಾರ ಮಾಡುತ್ತೇನೆಂದು ನಾನು ಹೆಮ್ಮೆಯಿಂದಿದ್ದೆ. ನಿಮ್ಮ ನೂರಮೂವತ್ತು ಸ್ವರಗಳ ಉಚ್ಚಾರಣೆ ಕೇಳಿ ಸುಸ್ತಾಗಿದ್ದೇನೆ. ಅವುಗಳಲ್ಲಿ ಅನೇಕಕ್ಕೆ ಇರುವ ವ್ಯತ್ಯಾಸ ಸ್ವಲ್ಪವೂ ನನ್ನ ಕಿವಿಗೆ ಕೇಳಿಸುವುದಿಲ್ಲ.

ಹಿಗ್ಗಿನ್ಸ್ : (ಅರೆನಗು ನಗುತ್ತ ಕೈಹತ್ತಿರವಿದ್ದ ಮಿಠಾಯಿ ತಿನ್ನಲು ಪಿಯಾನೊ ಬಳಿಗೆ ಹೋಗಿ) ಅಭ್ಯಾಸ ಮಾಡಿದರೆ ತಿಳಿಯುತ್ತದೆ. ಮೊದಲು ಮೊದಲು ಯಾವ ವ್ಯತ್ಯಾಸವೂ ಕೇಳಿಸುವುದಿಲ್ಲ. ಕೇಳುತ್ತ ಹೋಗಿ : ಸ್ವಲ್ಪದರಲ್ಲಿಯೇ ಒಂದಕ್ಕೊಂದಕ್ಕೆ Aಗೂ Bಗೂ ಇರುವಷ್ಟು ವ್ಯತ್ಯಾಸ ಕಂಡುಬರುತ್ತದೆ. (ಮಿಸೆಸ್ ಪಿಯರ್ಸ್ ಇಣಿಕಿನೋಡುವಳು. ಹಿಗ್ಗಿನ್ಸಿನ ಮನೆವಾರ್ತೆಯ ಹೆಂಗಸು ಆಕೆ.) ಏನು ಸಮಾಚಾರ ?

ಪಿಯರ್ಸ್ : (ಸಂಕೋಚಪಡುತ್ತ, ಸಂದೇಹದಲ್ಲಿರುವಂತೆ ಕಾಣುತ್ತದೆ.) ಚಿಕ್ಕ ವಯಸ್ಸಿನ ಹೆಂಗಸು ಒಬ್ಬಳು. ತಮ್ಮನ್ನು ನೋಡಬೇಕಂತೆ, ಸ್ವಾಮಿ.

ಹಿಗ್ಗಿನ್ಸ್ : ಚಿಕ್ಕ ವಯಸ್ಸಿನ ಹೆಂಗಸು ! ಏನು ಬೇಕಂತೆ ?

ಪಿಯರ್ಸ್ : ತಾನು ಯಾತಕ್ಕಾಗಿ ಬಂದಿದ್ದಾಳೆ ಎಂದು ನಿಮಗೆ ತಿಳಿದರೆ ನೀವು ಸಂತೋಷದಿಂದ ಅವಳನ್ನು ನೋಡುತ್ತೀರಿ ಎನ್ನುತ್ತಾಳೆ. ತುಂಬಾ ಸಾಮಾನ್ಯ ಹುಡುಗಿ...ನಿಜವಾಗಿ, ತುಂಬಾ ಸಾಮಾನ್ಯಳಾದವಳು. ನಾನು ಅವಳನ್ನು ಕಳಿಸಿಬಿಡುತ್ತಿದ್ದೆ. ಆದರೆ ಯಂತ್ರಗಳಲ್ಲಿ ಮಾತನ್ನು ತೆಗೆದುಕೊಳ್ಳುವ ನಿಮಗೆ ಅವಳು ಬೇಕಾಗಬಹುದು ಎನ್ನಿಸಿತು. ನಾನೇನೂ ತಪ್ಪು ಮಾಡಲಿಲ್ಲ ತಾನೆ ? ನೀವು ಕೆಲವು ವೇಳೆ ವಿಚಿತ್ರ ಜನಗಳನ್ನು ನೋಡುತ್ತೀರಿ. ಹೀಗೆ ಹೇಳುತ್ತಿರುವುದಕ್ಕೆ ಕ್ಷಮಿಸಬೇಕು. ನಿಜವಾಗಿ ಸ್ವಾಮಿ—

ಹಿಗ್ಗಿನ್ಸ್ : ಓ ! ಅದೆಲ್ಲ ಸರಿ ಪಿಯರ್ಸ್, ಅವಳ ಉಚ್ಚಾರ ನಿಜವಾಗಿ ವಿಚಿತ್ರವಾಗಿದೆಯೇನು ?

ಪಿಯರ್ಸ್ : ಭಯಂಕರವಾಗಿದೆ ಸ್ವಾಮಿ. ಅದರಲ್ಲಿ ನೀವು ಹೇಗೆ ಆಸಕ್ತಿ ವಹಿಸಬಲ್ಲಿರೊ ನಾನು ಅರಿಯಲಾರೆ.

ಹಿಗ್ಗಿನ್ಸ್ : (ಪಿಕರಿಂಗಿಗೆ) ಅವಳನ್ನು ಮೇಲಕ್ಕೆ ಕರಸೋಣ. ಪಿಯರ್ಸ್, ಅವಳನ್ನು ಮೇಲಕ್ಕೆ ಕಳಿಸಿಕೊಡು. (ತನ್ನ ಕೆಲಸದ ಮೇಜಿನ ಬಳಿಗೆ ಹೋಗಿ ಧ್ವನಿ ಮುದ್ರಿಕೆಯ ಯಂತ್ರವನ್ನು ಸಜ್ಜು ಮಾಡಿಕೊಳ್ಳುತ್ತಾನೆ.)

ಪಿಯರ್ಸ್ : (ಅರ್ಧಮಾತ್ರ ಒಪ್ಪಿದವಳಂತೆ) ಆಗಲಿ ಸ್ವಾಮಿ. ನೀವು ಹೇಳಿದಂತೆ. (ಹಂತ ಇಳಿದು ಕೆಳಗೆ ಹೋಗುವಳು.)

ಹಿಗ್ಗಿನ್ಸ್ : ಸ್ವಲ್ಪ ಅದೃಷ್ಟವೇ ಬಂದಿತು ಎನ್ನಿ. ಧ್ವನಿ ಮುದ್ರಿಕೆಯನ್ನು ನಾನು ಹೇಗೆ ಮಾಡುತ್ತೇನೆಂಬುದನ್ನು ತೋರಿಸುತ್ತೇನೆ. ಅವಳನ್ನು ಮಾತಾಡಲು ತೊಡಗಿಸೋಣ. ಅದನ್ನು ಮೊದಲು ಬೆಲ್ ಸಂಪ್ರದಾಯದಂತೆ ಕಣ್ಣಿಗೆ ಕಾಣಿಸುವ ಅಕ್ಷರಗಳಲ್ಲಿ ಬರೆದುಕೊಳ್ಳುತ್ತೇನೆ ; ಆಮೇಲೆ ರೋಮನ್ ಅಕ್ಷರಗಳಲ್ಲಿ ಬರಕೊಳ್ಳುತ್ತೇನೆ. ಆ ಬಳಿಕ ಧ್ವನಿಲಿಪಿ ಯಂತ್ರದಲ್ಲಿ ತೆಗೆದುಕೊಳ್ಳೋಣ. ಬರೆದ ಮಾತುಗಳು ಎದುರಿಗೆ ಇರುವಾಗ, ಯಂತ್ರವನ್ನು ಎಷ್ಟು ಸಲವೆಂದರೆ ಅಷ್ಟು ಸಲ ತಿರುಗಿಸಿ ಅವಳ ಮಾತನ್ನು ಕೇಳಬಹುದಾಗುತ್ತದೆ.

ಪಿಯರ್ಸ್ : (ಹಿಂದಿರುಗುತ್ತ) ನಾನು ಹೇಳಿದ ಯುವತಿ ಇವಳು, ಸ್ವಾಮಿ.

[ಹೂವಿನ ಹುಡುಗಿ ರಾಜಠೀವಿಯಿಂದ ಬರುತ್ತಾಳೆ. ಹ್ಯಾಟಿನ ಮೇಲೆ ಮೂರು ಆಗ್ನಿಪಕ್ಷಿಯ ಗರಿಗಳಿವೆ ; ಕಿತ್ತಿಳೆ, ಬಾನ್ನೀಲಿ, ಕೆಂಬಣ್ಣದವು. ಸ್ವಲ್ಪ ಸ್ವಚ್ಛವಾದ ಕೆಲಸದ ಬಟ್ಟೆ ಧರಿಸಿದ್ದಾಳೆ ; ಕೋಟನ್ನು ಸುಮಾರು ಚೊಕ್ಕ ಮಾಡಿದೆ. ನಿಷ್ಕಪಟವಾದ ಇವಳ ಹೆಮ್ಮೆ, ಬಿಗುಮಾನ ನೋಡಿ ಪಿಕರಿಂಗಿಗೆ ಸ್ವಲ್ಪ ಕರುಣೆ ಉಂಟಾಗುತ್ತದೆ. ಪಿಯರ್ಸನ್ನು ಕಂಡು ನೆಟ್ಟಗೆ ಕುಳಿತಿದ್ದಾನೆ. ಹಿಗ್ಗಿನ್ಸನಲ್ಲಿ ಹೆಚ್ಚು ಮಾರ್ಪಾಡಿಲ್ಲ...ಹೆಂಗಸು, ಗಂಡಸು ಎಂಬ ಭೇದ ಅವನಿಗೆ ಹೆಚ್ಚಾಗಿಲ್ಲ ; ತನಗೆ ಬೇಕಾದ್ದನ್ನು ಮಾಡಿಸಿಕೊಳ್ಳಬೇಕೆಂದು ಇರುವಾಗ ಹೆಂಗಸನ್ನು ಕುರಿತು ಮಗು ತನ್ನ ನರ್ಸನ್ನು ಪುಸಲಾಯಿಸುವಂತೆ ನಡೆದುಕೊಳ್ಳುವವನು.]

ಹಿಗ್ಗಿನ್ಸ್ : (ಹೆಚ್ಚು ಆಸಕ್ತಿಯಿಲ್ಲದೆ, ತನ್ನ ನಿರೀಕ್ಷೆಗೆ ಭಂಗವಾಯಿತು ಎಂಬುದನ್ನು ತೋರಿಸಿಕೊಳ್ಳುವಂತೆ ಅವಳನ್ನು ಗುರುತಿಸುತ್ತಾನೆ. ತಕ್ಷಣದಲ್ಲಿಯೇ ಮಕ್ಕಳು ತಮಗೆ ಇಷ್ಟವಿಲ್ಲದ್ದನ್ನು ಆಕ್ಷೇಪಿಸುವಂತೆ,) ಇವಳೇ ! ನಿನ್ನೆಯ ರಾತ್ರಿ ಮಾತು ಬರೆದುಕೊಂಡ ಹುಡುಗಿ ಇವಳು. ಇವಳಿಂದ ಏನೂ ಪ್ರಯೋಜನವಿಲ್ಲ. ಲಿಸ್ಸನ್‌ಗ್ರೋವ್ ಉಚ್ಚಾರಣೆಯಲ್ಲಿ ನನಗೆ ಬೇಕಾದ ಎಲ್ಲ ಮುದ್ರಿಕೆಗಳೂ ಇವೆ. ನಾನು ಅದಕ್ಕಾಗಿ ಇನ್ನೊಂದು ಉರುಳು ತಟ್ಟೆ ಹಾಳುಮಾಡಲಾರೆ. (ಹುಡುಗಿಗೆ) ಇಲ್ಲಿಂದ ನೀನು ಹೊರಟು ಹೋಗು ; ನನಗೆ ನೀನು ಬೇಕಾಗಿಲ್ಲ.

ಹೂವಿನ ಹುಡುಗಿ : ಅಷ್ಟು ಔಮರ್ಯಾದೆಯಿಂದ ಮಾತಾಡ್‌ಬೇಡಿ. ನಾನ್ ಯಾಕೆ ಬಂದಿದ್ದೇನೆಂದು ನೀವಿನ್ನೂ ಕೇಳ್ನಿಲ್ಲ. (ಬಾಗಿಲಲ್ಲಿ ಅಪ್ಪಣೆಗಾಗಿ ನಿಂತಿರುವ ಪಿಯರ್ಸ್‌ನ್ನು ಕುರಿತು) ನಾನು ಟ್ಯಾಕ್ಸೀಲಿ ಬಂದಿದ್ದೇನೆಂತ ಅವ್ರಿಗೆ ಯೋಳಿದ್ರೊ, ಇಲ್ವೊ ?

ಪಿಯರ್ಸ್ : ಹುಚ್ಚು ಹುಡುಗಿ ! ಹಿಗ್ಗಿನ್ಸರಂಥ ದೊಡ್ಡ ಮನುಷ್ಯರಿಗೆ ನೀನು ಯಾತರಲ್ಲಿ ಬಂದರೆ ಏನು ಲಕ್ಷ್ಯ ?

ಹೂವಿನ ಹುಡುಗಿ : ಹೋ...ನಾವು ಮರ್ಯಾದಸ್ತರಲ್ಲಾ ! ಪಾಟ ಯೇಳಿಕೊಡೋಕೆ ಅವರಿಗೆ ಮರ್ಯಾದೆ ಕಡ್ಮೆ ಆಗ್ಲಾರ್ದು. ಅವರೇ ಆಗ ಯೋಳಿದ್ದು ಕೇಳಿಸ್ತು. ನಾನಿಲ್ಲಿ ಯಾವ ದಾಕ್ಸಿನ್ಯಾನೂ ಕೇಳೋಕೆ ಬರ್ನಿಲ್ಲ. ನನ್ ಅಣಕ್ಕೆ ಇಲ್ಲಿ ಬೆಲೆ ಯಿಲ್ದಿದ್ರೆ ಬೇರೆ ಕಡೇಗ್ ವೋಗ್ತೇನೆ.

ಹಿಗ್ಗಿನ್ಸ್ : ಯಾವ ಬೆಲೆ ?

ಹೂವಿನ ಹುಡುಗಿ : ನಿಮ್ಗೆ ಕೊಡೋಷ್ಟು. ಯೀಗ್ಗೊತ್ತಾಯ್ತು ನಿಮ್ಗೆ, ಅಲ್ಲಾ ! ಪಾಟ ಯೇಳಿಸ್ಕೊಳ್ಳಾಕೆ ಬಂದಿದೀನಿ ನಾನು. ಅದಕ್ಕೆ ಅಣಾನು ಕೊಡ್ತೇನೆ. ಅನುಮಾನ ಬ್ಯಾಡ !

ಹಿಗ್ಗಿನ್ಸ್ : (ಅಪ್ರತಿಭನಾಗಿ) ಸರಿ ಅನ್ನು !! (ಉಸಿರನ್ನು ಸೆಳೆದು ಹಗುರ ಮಾಡಿಕೊಂಡು) ನಾನು ನಿನಗೆ ಏನೆನ್ನಬೇಕೆಂಬುದು ನಿನ್ನ ನಿರೀಕ್ಷೆ ?

ಹೂವಿನ ಹುಡುಗಿ : ನೀವು ದೊಡ್ ಮನುಸ್ಸರಾಗಿದ್ರೆ, ನನ್ನ ಕೂತ್ಗೊ ಅನ್ಬೋದಾಗಿತ್ತೂಂತ. ನಿಮಗೆ ಗಿರಾಕಿ ತಂದಿದ್ದೇನೆ ಎಂದು ಯೋಳ್ತಾ ಇಲ್ವಾ ?

ಹಿಗ್ಗಿನ್ಸ್ : ಪಿಕರಿಂಗ್, ಈ ಅಪ್ರಯೋಜಕಳನ್ನು ಕುಳಿತುಕೊ ಎನ್ನೋಣವೆ ? ಅಥವಾ ಕಿಟಕಿಯಿಂದ ಹೊರಕ್ಕೆ ಎತ್ತಿ ಬೀಸಾಡೋಣವೆ ?

ಹೂವಿನ ಹುಡುಗಿ : (ಭೀತಿಯಿಂದ ಪಿಯಾನೊ ಬಳಿಗೆ ಓಡಿಹೋಗಿ ಆತ್ಮ ರಕ್ಷಣೆಗೆ ಎಂಬಂತೆ ನಿಲ್ಲುವಳು.) ಆ ಆ......ಓ......ಔ...ಔ...ಔ...ಊ (ಗಾಯಗೊಂಡಂತೆ, ಗೊಣಗುಟ್ಟುತ್ತ) ಸಿರಿಮಂತ ಯೆಂಗ್ಸರು ಸಂಬ್ಳ ಕೊಡ್ತೇನೆ ಎನ್ನೊ ಹಾಗೆ ನಾನೂ ಅಣ ಕೊಡ್ತೇನೆ ಯೊನ್ನುವಾಗ ನನ್ನ ಅಪ್ರಯೋಜಕಳು ಎಂದು ಯಾಕೆ ಕರೀತೀರಿ ?

[ನಿಶ್ಚಲರಾಗಿ ಇಬ್ಬರು ಗಂಡಸರು ಕೊಠಡಿಯ ಆಚೆಯ ಕಡೆಯಿಂದ, ನಟ್ಟ ನೋಟದಿಂದ, ಅವಳನ್ನು ವಿಸ್ಮಯದಿಂದ ನೋಡುವರು.]

ಪಿಕರಿಂಗ್ : (ಮೃದುವಾಗಿ) ನಿಂಗೆ ಏನು ಬೇಕು ತಾಯಿ ?

ಹೂವಿನ ಹುಡುಗಿ : ಟಾಟನ್‌ಹ್ಯಾಂ ಕೋರ್ಟ್ ರೋಡಿನ ಮೂಲೆಯಲ್ಲಿ ಮಾರೋಕೆ ಬದಲಾಗಿ ನಾನೂ ಒಂದು ಪೂ ಮಾರೊ ಅಂಗಡೀಲಿ ಯೋಗ್ಯಳಾದ ಪೂ ಮಾರೊ ಯೆಂಗಸಾಗಬೇಕು. ನನ್ನ ಮಾತು ಎಚ್ಚು ನಯವಾದೊರ್ತು ಅವರು ನನ್ನ ತೊಗೊಳ್ಳೋಲ್ಲ. ಮಾತು ಕಲ್ಸಿಕೊಡ್‌ಬಲ್ಲೆ ಎಂದು ಇವರು ನಿನ್ನೆ ಯೋಳಿದರು. ಯಿಲ್ಲಿ ನಾನು ಸಿದ್ದವಾಗಿದ್ದೇನೆ ಅಣ ಕೊಡೋಕೆ—ನಾನೇನು ಉಪ್ಕಾರ ಕೇಳ್ತಾಯಿಲ್ಲ. ಅವರು ನನ್ನನ್ನ ಕಸ ಕಂಡಾಗೆ ಕಾಣ್ತಿದಾರೆ.

ಪಿಕರಿಂಗ್ : ಹಿಗ್ಗಿನ್ಸ್ ಅಂಥವರಿಗೆ ಕೊಡುವಷ್ಟು ಹಣ ನಿನ್ನಲ್ಲಿದೆ ಎನ್ನುವ ಅವಿವೇಕ ಬುದ್ಧಿಗೆ ಏನು ಹೇಳೋಣ ?

ಹೂವಿನ ಹುಡುಗಿ : ಯಾಕ್ಕೊಡ್‌ಬಾರ್ದು ? ಪಾಟಗಳಿಗೆ ಯೆಷ್ಟು ಕೊಡೋದೂ ಅಂತ, ನಂಗೊತ್ತೈತೆ. ನಾ ಕೊಡೋಕೆ ಸಿದ್ದ ಆಗಿದ್ದೇನೆ.

ಹಿಗ್ಗಿನ್ಸ್ : ಎಷ್ಟು ?

ಹೂವಿನ ಹುಡುಗಿ : (ವಿಜಯಗೊಂಡಂತೆ, ಅವನ ಬಳಿಗೆ ಹಿಂದಿರುಗಿ ಬಂದು) ಈಗ, ಸರ್‍ಯಾಗಿ ಮಾತಾಡ್ತಿದ್ದೀರ ? ನಿನ್ನೆ ರಾತ್ರೆ ನೀವು ನನ್ಮೇಲೆಸೆದು ಹೋದ ಅಣದಲ್ಲಿ ಸೊಲ್ಪ ಬಾಗ ನಿಮಗೆ ಬರೋ ಅವಕಾಶ ಅಯ್ತೆಯೆಂದು ಕಂಡಾಗ ನಿಮ್ಮ ಮನಸ್ಸು ತಿರ್ಗುತ್ತೇ ಅನ್ಕೊಂಡೆ. (ರಹಸ್ಯವಾಗಿ ಎಂಬಂತೆ) ಒಂದು ತೊಟ್ಟು ಆಕ್ಕೋಡಿದ್ರಲ್ಲಾ ?

ಹಿಗ್ಗಿನ್ಸ್ : (ಅಪ್ಪಣೆ ಮಾಡುವವನಂತೆ) ಕುಳಿತುಕೊ.

ಹೂವಿನ ಹುಡುಗಿ : ಓ, ಅದನ್ನ ನೀವು ಮರ್ಯಾದೆ ಅಂತ ಕಾಣೋಹಾಗಿದ್ದರೆ—

ಹಿಗ್ಗಿನ್ಸ್ : (ಅವಳ ಮೇಲೆ ಗುಡುಗಾಡಿ) ಕುಳಿತುಕೊ.

ಪಿಯರ್ಸ್ : (ಗಡುಸಾಗಿ) ಏ ಹುಡುಗಿ, ಕುಳಿತುಕೊ, ಹೇಳಿದ ಹಾಗೆ ಮಾಡು.

[ಬೆಂಕಿ ಕಾಯಿಸಿಕೊಳ್ಳುವ ಸ್ಥಳದ ಹತ್ತಿರ ಇರುವ ನೆಲಗಂಬಳಿಯ ಮೇಲೆ ಇದ್ದ ಒಂದು ಕುರ್ಚಿಯನ್ನು ತಂದು ಹಿಗ್ಗಿನ್ಸ್, ಪಿಕರಿಂಗ್ ನಡುವೆ ಇರಿಸುವಳು. ಹುಡುಗಿ ಕುಳಿತುಕೊಳ್ಳುವುದನ್ನು ಕಾಯುತ್ತ ಅದರ ಹಿಂದೆ ನಿಂತುಕೊಳ್ಳುವಳು.]

ಹೂವಿನ ಹುಡುಗಿ : ಆಹ್...ಆಹ್...ಆಹ್...ಔ...ಔ...ಊ (ಅರ್ಧ ತಿರುಗಿ ಬೀಳುವವಳಂತೆ ಮತ್ತು ಅರ್ಧ ದಿಕ್ಕು ತೋರದಂತೆ ನಿಂತೇ ಇರುತ್ತಾಳೆ.)

ಪಿಕರಿಂಗ್ ; (ಬಹು ಮರ್ಯಾದೆಯಿಂದ) ಕುಳಿತುಕೋಬಾರದೇನಮ್ಮ ?

ಹೂವಿನ ಹುಡುಗಿ : (ಸಂಕೋಚದಿಂದ) ಕುಂತ್ಕೊಂಡೇನು ! (ಕುಳಿತುಕೊಳ್ಳುತ್ತಾಳೆ. ಪಿಕರಿಂಗ್ ನೆಲಗಂಬಳಿಯ ಪೀಠಕ್ಕೆ ಹಿಂದಿರುಗುತ್ತಾನೆ.)

ಹಿಗ್ಗಿನ್ಸ್ : ನಿನ್ನ ಹೆಸರೇನು ?

ಹೂವಿನ ಹುಡುಗಿ : ಲಿಸಾ ಡೂಲಿಟ್ಲ್.

ಹಿಗ್ಗಿನ್ಸ್ : (ಗಂಭೀರವಾಗಿ ಚರಣಗಳನ್ನು ಪಠಿಸುತ್ತ)

ಎಲಿಸ, ಎಲಿಸಬೆತ್, ಬೆಟ್ಸಿ, ಬೆಸ್
ನಾಲ್ವರು ಹೋದರು ಕಾಡಿಗೆ,
ಹಕ್ಕಿಗೆ ಗೂಡನ್ನು ತರೋಕೆ

ಪಿಕರಿಂಗ್ :

ಅಲ್ಲೊಂದು ಹಕ್ಕಿಯ ಗೂಡನ್ನ ಕಂಡರು
ಅದರಲ್ಲಿ ಮೊಟ್ಟೆ ನಾಲ್ಕಿತ್ತು

ಹಿಗ್ಗಿನ್ಸ್ :

ಒಬ್ಬೊಬ್ರೊಂದನ್ನು ತಕ್ಕೊಂಡರು
ಮೂರನ್ನು ಅಲ್ಲಿಯೇ ಉಳಿಸಿಬಿಟ್ರು.

[ತಮ್ಮ ಚಮತ್ಕಾರಕ್ಕೆ ತಾವೇ ಮನಸಾರ ನಗುತ್ತಾರೆ.]

ಲಿಸ : ಯೇನ್ಬುದ್ಧಿಯಿಲ್ಲದ ಮಾತು !

ಪಿಯರ್ಸ್ : ಆ...ದೊಡ್ಡ ಮನುಷ್ಯರನ್ನು ಕುರಿತು ಹಾಗೆಲ್ಲ ಮಾತನಾಡಬಾರದು.

ಲಿಸ : ಸರಿಯೇ. ಅವರ್‍ಯಾಕೆ ನನ್ ಕುರಿತು ಯಿವೇಕವಾಗಿ ಮಾತಾಡ್ಬಾರ್‍ದು ?

ಹಿಗ್ಗಿನ್ಸ್ : ಕೆಲಸಕ್ಕೆ ಬರೋಣ. ಪಾಠಗಳಿಗೆ ನೀನು ನನಗೆ ಎಷ್ಟು ಹಣ ಕೊಡಬೇಕು ಅಂದುಕೊಂಡಿದ್ದೀಯೆ ?

ಲಿಸ : ಎಷ್ಟು ಸರಿ ಅನ್ನೋದು ನಂಗೊತ್ತು. ನನ್ನ ಸ್ನೇಯಿತರೊಬ್ಬರು, ತುಂಬಾ ಮರ್ಯಾದಸ್ತರು ಅವರು—ನಿಜವಾದ ಫ್ರೆಂಚ್ ಗೃಹಸ್ತರಿಂದ ಒಂದು ಗಂಟೇಗೆ ೧೮ ಪೆನ್ಸಿನಂತೆ ಕೊಟ್ಟು ಫ್ರೆಂಚ್ ಪಾಟ ಯೋಳಿಸ್ಕೊಳ್ತಿದ್ದಾರೆ. ನನ್ನ ಬಾಪೇನ ನಂಗೆ ಕಲ್ಸಿಕೊಡೋಕೆ ಫ್ರೆಂಚ್ ಕಲ್ಸಿಕೊಡೋಕೆ ಕೇಳೊ ಅಷ್ಟು ಅಣಾನ ಮುಖ ಇಟ್ಕೊಂಡು ಕೇಳ್ಳಾರ್ರಿ. ಅದ್ದರಿಂದ ಪಾಟಕ್ಕೆ ಒಂದು ಷಿಲಿಂಗ್‌ಗಿಂತ ಯೆಚ್ಚಾಗಿ ಕೊಡೋಕಾಗೋಲ್ಲ. ತೊಗೊಳ್ಳಿ, ಬುಡಿ.

ಹಿಗ್ಗಿನ್ಸ್ : (ಕೊಠಡಿಯಲ್ಲಿ ಉದ್ದಕ್ಕೂ ನಡೆದಾಡುತ್ತ ತನ್ನ ಜೇಬಿನಲ್ಲಿನ ಬೀಗದ ಕೈಯನ್ನೂ ನಗದನ್ನೂ ಶಬ್ದ ಮಾಡಿಸುತ್ತ,) ಪಿಕರಿಂಗ್, ಷಿಲಿಂಗ್ ಅಂದರೆ ಬರಿಯ ಷಿಲಿಂಗೇ ಅಲ್ಲ, ಈ ಹುಡುಗಿಯ ವರಮಾನದ ಶೇಕಡ ಭಾಗ ಎಂದು ಲೆಕ್ಕಮಾಡಿದರೆ ಮಿಲಿಯಧೀಶ್ವರರ ೬೦-೭೦ ಗಿನಿಗೆ ಸಮನಾಗುತ್ತದೆ.

ಪಿಕರಿಂಗ್ : ಅದು ಹೇಗೆ ?

ಹಿಗ್ಗಿನ್ಸ್ : ಲೆಕ್ಕಮಾಡಿ. ಮಿಲಿಯಧೀಶ್ವರರಿಗೆ ದಿನಕ್ಕೆ ಸುಮಾರು ೧೫೦ ಪೌಂಡು

ಬರುತ್ತದೆ. ಇವಳ ಸಂಪಾದನೆ ಸುಮಾರು ಅರ್ಧ ಕ್ರೌನ್.

ಲಿಸ : (ಅಟ್ಟಹಾಸದಿಂದ) ನಿಮಂಗ್ಯಾರು ಯೋಳಿದರು ನನ್ನ ಸಂಪಾದ್ನೆ ಅಷ್ಟೇ ಅಂತ?

ಹಿಗ್ಗಿನ್ಸ್ : (ಮುಂದುವರಿಯುತ್ತ) ಇವಳ ಒಂದು ಪಾಠಕ್ಕೆ ತನ್ನ ದಿನದ ವರಮಾನದಲ್ಲಿ ಐದರಲ್ಲಿ ಎರಡು ಭಾಗ ಕೊಡುತ್ತೇನೆ ಎನ್ನುತ್ತಾಳೆ. ಮಿಲಿಯಧೀಶ್ವರನ ದಿನದ ವರಮಾನದಲ್ಲಿ ಐದನೆಯ ಎರಡು ಭಾಗ ಸುಮಾರು ೬೦ ಪೌಂಡುಗಳಾಗುತ್ತವೆ. ಅಲ್ಲವೆ? ಧಾರಾಳವೇ ಆಯಿತು. ನಮ್ಮಪ್ಪರಾಣೆ. ಇದು ದೊಡ್ಡ ಸಂಪಾದನೆ. ನನಗೆ ಈವರೆಗೂ ಇಷ್ಟು ಹೆಚ್ಚು ಹಣ ಯಾರೂ ಕೊಟ್ಟವರಿಲ್ಲ.

ಲಿಸ : (ಭೀತಳಾಗಿ, ಎದ್ದು) 60 ಪೌಂಡು? ಯೇನ್ಮಾತಾಡ್ತಾ ಇದ್ದೀರಿ; ನಾನ್ನಿಮ್ಗೆ 60 ಪೌಂಡು ಕೊಡ್ತೇನೆ ಅನ್ಲಿಲ್ಲ. ನಂಗೆ ಅಸ್ಟ್ ಅಣ ಯೆಲ್ಲಿ ಸಿಕ್ಕುತ್ತೆ?

ಹಿಗ್ಗಿನ್ಸ್ : ಮುಚ್ಚು ಬಾಯಿ.

ಲಿಸ : (ಅಳುತ್ತ) ನನ್ನಲ್ಲಿ ಆರುವತ್ತು ಪೌಂಡಿಲ್ಲ...ಓ...ಓ

ಪಿಯರ್ಸ್ : ಅಳಬೇಡ, ಹುಚ್ಚು ಹುಡುಗಿ. ನಿನ್ನ ಹಣವನ್ನು ಯಾರೂ ಮುಟ್ಟುವುದಿಲ್ಲ.

ಹಿಗ್ಗಿನ್ಸ್ : ನೀನು ಹೀಗೆ ಗೋಳಾಡುವುದನ್ನು ನಿಲ್ಲಿಸದೆ ಹೋದರೆ, ಕಸಪೊರಕೆ ತೆಗೆದುಕೊಂಡು ನಿನಗೆ ಯಾರಾದರೂ ಮುಟ್ಟಿಸುತ್ತಾರೆ. ಕುಳಿತುಕೊ.

ಲಿಸ : (ನಿಧಾನವಾಗಿ ಹೇಳಿದಂತೆ ಮಾಡುತ್ತ) ಆಹ್...ಆಹ್...ಆಹ್...ಔ... ಊ...ಓ...! ಯೆನ್ನಮ್ಮಪ್ಪನಂತೆ ನೀವೂ ನಡ್ಕೋತಿದ್ದೀರಿ.

ಹಿಗ್ಗಿನ್ಸ್ : ನಾನು ನಿನಗೆ ಪಾಠ ಕಲಿಸಲು ನಿಶ್ಚಯಿಸಿದರೆ ನಿನಗೆ ಇಬ್ಬರು ಅಪ್ಪಂದಿರಿಗಿಂತ ಹೆಚ್ಚು ಕೇಡಾದೀತು. ತೆಗೆದುಕೊ. (ತನ್ನ ರೇಷ್ಮೆ ಕರವಸ್ತ್ರವನ್ನು ಅವಳ ಕೈಗೆ ಕೊಡುವನು.)

ಲಿಸ : ಯಾಕ ಇದು?

ಹಿಗ್ಗಿನ್ಸ್ : ನಿನ್ನ ಕಣ್ಣುಗಳನ್ನು ಒರಸಿಕೊಳ್ಳುವುದಕ್ಕೆ. ಒದ್ದೆಯಾದ ನಿನ್ನ ಮುಖದ ಯಾವ ಭಾಗವನ್ನಾದರೂ ಒರಸಿಕೊಳ್ಳುವುದಕ್ಕೆ. ನೆನಪಿಡು! ಅದು ನಿನ್ನ ಕೈವಸ್ತ್ರ. ಅಂಗಡಿಗಳಲ್ಲಿ ಮರ್ಯಾದಸ್ಥಳಾದ ಹೆಂಗಸಿನ ಹಾಗೆ ಆಗಬೇಕಾದರೆ ಒಂದನ್ನು ಇನ್ನೊಂದು ಎಂದು ತಪ್ಪಾಗಿ ಎಣಿಸಬಾರದು.

[ಲಿಸ ಪೂರ್ತಿ ದಿಕ್ಕು ತೋರದೆ ಅಸಹಾಯಕಳಾಗಿ ಅವನ ಕಡೆ ನೋಡುತ್ತಾಳೆ.]

ಪಿಯರ್ಸ್ : ಹಿಗ್ಗಿನ್ಸ್ ಅವರೆ, ಅವಳ ಕೂಡ ಹೀಗೆಲ್ಲ ಮಾತನಾಡುವುದು ಪ್ರಯೋಜನವಿಲ್ಲ. ನೀವು ಹೇಳೋದು ಅವಳಿಗೆ ಅರ್ಥವಾಗುವುದಿಲ್ಲ. ಜೊತೆಗೆ ನೀವು

ಹೇಳುವುದೂ ತಪ್ಪು. ಅವಳು ಹಾಗೆ ಮಾಡುವುದೂ ಇಲ್ಲ. (ಕೈವಸ್ತ್ರವನ್ನು ತಾನು ತೆಗೆದುಕೊಳ್ಳುತ್ತಾಳೆ.)

ಲಿಸ : (ಅವಳಿಂದ ಅದನ್ನು ಕಿತ್ತುಕೊಂಡು) ಯಿಲ್ಕೊಡಿ ಆ ಕರ್‌ವಸ್ತ್ರಾನ. ಅದನ್ನ ಅವರು ಕೊಟ್ಟಿದ್ದು ನಂಗೆ ; ನಿಮ್‌ಗಲ್ಲ.

ಪಿಕರಿಂಗ್ : (ನಗುತ್ತ) ಹೌದು, ಅದು ಅವಳ ಆಸ್ತಿ ಎಂದೆಣಿಸಬೇಕು ಮಿಸೆಸ್ ಪಿಯರ್ಸ್.

ಪಿಯರ್ಸ್ : (ಸಮಾಧಾನದಿಂದ) ನಿಮಗೆ ಸರಿಯಾದ ಶಾಸ್ತಿಯಾಯ್ತು ಹಿಗ್ಗಿನ್ಸ್ ಅವರೆ.

ಪಿಕರಿಂಗ್ : ಹಿಗ್ಗಿನ್ಸ್, ನನಗೆ ಕುತೂಹಲ ಉಂಟಾಗಿದೆ. ರಾಯಭಾರಿಯ ಆರಾಮ ಕೂಟದ ವಿಷಯ ಏನೆನ್ನುತ್ತೀರಿ ? ಆಗ ನೀವು ಹೇಳಿದ್ದನ್ನ ನೆರವೇರಿಸಬಲ್ಲಿರಾದರೆ, ಈಗ ಬದುಕಿರುವ ಗುರುಗಳಲ್ಲೆಲ್ಲ ನಿಮ್ಮನ್ನು ಸರ್ವಶ್ರೇಷ್ಠ ಗುರುಗಳೆನ್ನುತ್ತೇನೆ. ನಿಮ್ಮ ಪ್ರಯೋಗಕ್ಕೆ ತಗಲುವ ವೆಚ್ಚವನ್ನೆಲ್ಲ ನಾನು ಕೊಡುತ್ತೇನೆ. ನಿಮ್ಮ ಕೈಯಲ್ಲಿ ಇದು ಆಗುವುದಿಲ್ಲ. ಇದು ಪಣ. ಪಾಠಗಳಿಗೆ ನಾನು ದುಡ್ಡು ಕೊಡುತ್ತೇನೆ.

ಲಿಸ : ನೀವು ನಿಜವಾಗಿ ಒಳ್ಳೇರು, ಕೆಪ್ಟನ್.

ಹಿಗ್ಗಿನ್ಸ್ : (ಅವಳ ಕಡೆಗೇ ನೋಡುತ್ತ, ಮುಗ್ಧನಾಗಿ) ಇದು ತಡೆಯಲಾರದಷ್ಟು ದೊಡ್ಡ ಮೂದಲೆ. ಇವಳ ಕೀಳ್ಮೆ ಅಷ್ಟು ರುಚಿಯಾಗಿದೆ ! ಇವಳ ಕೊಳಕುತನ ಅಷ್ಟು ಭಯಂಕರವಾಗಿದೆ.

ಲಿಸ : (ಅತಿಯಾಗಿ ಆಕ್ಷೇಪಿಸುತ್ತ) ಆಹ್...ಆಹ್...ಆಹ್...ಔ...ಔ...ಊ...ಊ...!! ನಾನೇನೂ ಕೊಳ್ಕಲ್ಲ. ಇಲ್ಲಿಗೆ ಬರೋಕ್ ಮುಂಚೆ ಕೈಗಳ್ನ, ಮುಕಾನ ತೊಳ್ಕೊಂಡ್ ಬಂದಿದೇನೆ. ಕಂಡಿತ ತೊಳ್ಕೊಂಡ್ ಬಂದಿದೇನೆ.

ಪಿಕರಿಂಗ್ : ಮುಖಸ್ತುತಿಮಾಡಿ, ನೀವು ಅವಳ ತಲೆ ತಿರುಗುವಂತೆ ಮಾಡಲಾರಿರಿ ಹಿಗ್ಗಿನ್ಸ್.

ಪಿಯರ್ಸ್ : (ನೆಮ್ಮದಿ ಇಲ್ಲದೆ) ಹಾಗೆ ಮಾಡಬೇಡಿ ಸ್ವಾಮಿ. ಒಬ್ಬ ಹುಡುಗಿಯ ತಲೆ ತಿರುಗಿಸಬೇಕಾದರೆ ಎಷ್ಟೋ ದಾರಿಗಳುಂಟು. ಹಿಗ್ಗಿನ್ಸ್ ಅವರಿಗಿಂತ ಅದನ್ನು ಚೆನ್ನಾಗಿ ಮಾಡಬಲ್ಲವರು ಇನ್ನೊಬ್ಬರಿಲ್ಲ. ಯಾವಾಗಲೂ ಅವರ ಇಷ್ಟ ಅದಲ್ಲದೆ ಇರಬಹುದು. ಅವರು ಏನಾದರೂ ಅವಿವೇಕ ಮಾಡಿಯಾರು. ನೀವು ದಯಮಾಡಿ ಅವರಿಗೆ ಅದಕ್ಕೆ ಉತ್ತೇಜನ ಕೊಡದೆ ಇದ್ದರೆ ಒಳ್ಳೆಯದು.

ಹಿಗ್ಗಿನ್ಸ್ : (ಮನಸ್ಸಿನೊಳಗಿನ ಭಾವನೆ ಬೆಳೆದಂತೆಲ್ಲ ಉದ್ರೇಕಗೊಂಡು) ಜೀವನ ಎಂದರೇನು ? ಸ್ಫೂರ್ತಿಯಿಂದ ತುಂಬಿದ ಅವಿವೇಕಗಳ ಪರಂಪರೆ ಮಾತ್ರ, ಅಲ್ಲವೆ ? ಅವನ್ನು ಮಾಡಲು ಆಗುವಂತೆ, ಅವು ಸಿಕ್ಕುವುದೊಂದೇ ಕಷ್ಟ.

ಅವಕಾಶ ಬಂದಾಗ ಬಿಡಬಾರದು. ಇಂಥ ಅವಕಾಶಗಳು ದಿನಾ ಬರುವುದಿಲ್ಲ. ಬಾಲ ಎಳೆದುಕೊಂಡು ತಿರುಗುವ ಈ ಗಟಾರದ ಹುಳುವನ್ನು ನಾನು 'ಡಚ್ಚೆಸ್ಸಾಗಿ' ಮಾಡುತ್ತೇನೆ.

ಲಿಸ : (ತನ್ನನ್ನು ಕುರಿತ ಈ ಅಭಿಪ್ರಾಯವನ್ನು ಪ್ರತಿಭಟಿಸುವಂತೆ) ಆಆಆಆ... ಔ...ಔ...ಊ...ಊ

ಹಿಗ್ಗಿನ್ಸ್ : (ಆವೇಶದ ಉತ್ಸಾಹದಲ್ಲಿ) ಹೌದು ; ಆರು ತಿಂಗಳಲ್ಲಿ.—ಅವಳ ಕಿವಿ ಚೆನ್ನಾಗಿದ್ದರೆ, ನಾಲಿಗೆ ಚುರುಕಾಗಿದ್ದರೆ, ಮೂರು ತಿಂಗಳಲ್ಲಿ—ಎಲ್ಲಿಗೆ ಬೇಕಾದರೆ ಅಲ್ಲಿಗೆ ಅವಳನ್ನು ಕರೆದುಕೊಂಡು ಹೋಗುತ್ತೇನೆ ; ಅವಳು ಯಾರ ಹಾಗೆ ಎಂದರೆ ಅವರಂತೆ ನಡೆದುಕೊಳ್ಳಲು ಕಲಿಸುತ್ತೇನೆ. ಈ ದಿನದಿಂದಲೇ ಆರಂಭ ಮಾಡೋಣ : ಈಗ ಈ ಕ್ಷಣ ! ಪಿಯರ್ಸ್, ಇವಳನ್ನು ಕರೆದುಕೊಂಡು ಹೋಗು. ಚೊಕ್ಕಟವಾಗಿ ಇರುವಂತೆ ಮಾಡು. ಬೇರೆ ಬಗೆಯಲ್ಲಿ ಕೊಳೆ ಹೋಗದೆ ಹೋದರೆ, ಕೋತಿ ಬ್ರಾಂಡ್ ಉಪಯೋಗಿಸು. ಅಡಿಗೆ ಮನೆಯ ಒಲೆಯಲ್ಲಿ ಬೆಂಕಿ ಉರಿಯುತ್ತಿದೆಯೊ ?

ಪಿಯರ್ಸ್ : (ವಿರೋಧಿಸುತ್ತ) ಇದೆ...ಆದರೆ...!

ಹಿಗ್ಗಿನ್ಸ್ : (ಉರುಬಿಂದ) ಅವಳ ಮೈಮೇಲಿರುವ ಆ ಬಟ್ಟೆಗಳನ್ನೆಲ್ಲ ತೆಗೆದುಹಾಕಿ ಸುಟ್ಟುಬಿಡು. ವೈಟ್ಲೆ ಅಂಗಡಿಗೊ, ಇನ್ನಾರಿಗೊ ಹೊಸ ಬಟ್ಟೆಗಳನ್ನು ಕಳಿಸು ಎಂದು ಟೆಲಿಫೋನ್ ಮಾಡು. ಅವು ಬರುವ ತನಕ ಅವಳನ್ನು ಕಂದು ಕಾಗದ ದಲ್ಲಿ ಸುತ್ತು.

ಲಿಸ : ನೀವು ದೊಡ್ ಮನಸ್ಯರೇನ್ರಿ. ಕಂಡಿತ ಅಲ್ಲ. ಯಿಂತಾ ಮಾತಾಡ್ತೀರಲ್ಲಾ. ನನ್ನಾಣೆಗೂ ನಾನು ಒಳ್ಳೇ ಉಡ್ಗಿ. ನಿಮ್ಮಂತೋರು ಯೆಂತೋರು ಅಂತ ಗೊತ್ತೈತೆ.

ಹಿಗ್ಗಿನ್ಸ್ : ಏ ಹೆಣ್ಣೆ, ನಿನ್ನ ಲಿಸನ್‌ಗ್ರೋವ್ ಧರ್ಮ, ಆಚಾರ ಯಾವುದೂ ನನಗೆ ಬೇಕಾಗಿಲ್ಲ. ಡಚ್ಚೆಸ್ ಹಾಗೆ ನಡೆದುಕೊಳ್ಳೋದನ್ನು ನೀನು ಕಲಿತುಕೊಳ್ಳ ಬೇಕು. ಇವಳನ್ನು ಕರೆದುಕೊಂಡು ಹೋಗು, ಪಿಯರ್ಸ್. ತಂಟೆ ಮಾಡಿದರೆ ಚೆನ್ನಾಗಿ ನಾಲ್ಕು ಬಿಡು.

ಲಿಸ : (ಜಿಗಿದೆದ್ದು ಪಿಕರಿಂಗಿಗೂ ಮಿಸೆಸ್ ಪಿಯರ್ಸಿಗೂ ನಡುವೆ ರಕ್ಷಣೆಗಾಗಿ ಓಡಿ ಯಾಡುತ್ತ) ಕೂಡದು. ನಾನು ಪೋಲೀಸರ್ನ ಕರೀತೇನೆ. ನೋಡೋಣ.

ಪಿಯರ್ಸ್ : ಅವಳನ್ನು ಇರಿಸಿಕೊಳ್ಳುವುದಕ್ಕೆ ಜಾಗವೇ ಇಲ್ಲವಲ್ಲ ?

ಹಿಗ್ಗಿನ್ಸ್ : ಕಸದ ಬುಟ್ಟಿಯಲ್ಲಿ ಎತ್ತಿಹಾಕು.

ಲಿಸ : ಆಆಆ...ಔ...ಔ...ಊ

ಪಿಕರಿಂಗ್ : ತಾಳಿ ಹಿಗ್ಗಿನ್ಸ್, ಸರಿಯಾಗಿ ಯೋಚನೆ ಮಾಡಿ.

ಪಿಯರ್ಸ್ : (ನಿರ್ಧಾರದಿಂದ) ನೀವು ಸರಿಯಾಗಿ ಯೋಚಿಸಬೇಕು ಹಿಗ್ಗಿನ್ಸ್ ಅವರೆ. ನಿಜವಾಗಿ ಯೋಚನೆ ಮಾಡಿ. ಎಲ್ಲರು ಹೇಳಿದ್ದನ್ನೂ ಹೀಗೆ ದಾಟಿ ನಡೆಯು ಬಾರದು.

[ಈ ಆಕ್ಷೇಪಣೆಗೆ ಜಗ್ಗುವನು. ಬಿರುಗಾಳಿಯು ಬೀಸು ನಿಂತಂತಾಗಿ ಒಂದು ಪ್ರಸನ್ನ ತೆಯು ಆಶ್ಚರ್ಯದ ತಂಗಾಳಿ ಆಡಿದಂತಾಗುವುದು.]

ಹಿಗ್ಗಿನ್ಸ್ : (ತನ್ನ ವೃತ್ತಿಯವರ ನಯ ಸೂಕ್ಷ್ಮಗಳಿಗೆ ಹೊಂದುವ ಧ್ವನಿಯಲ್ಲಿ ಮಾತನಾಡುತ್ತಾನೆ.) ನಾನು ! ಎಲ್ಲರನ್ನೂ ದಾಟಿ ನಡೆಯುತ್ತೇನೆಯೆ ? ಮಿಸೆಸ್ ಪಿಯರ್ಸ್, ಮಿಸ್ಟರ್ ಪಿಕರಿಂಗ್, ಯಾರನ್ನು ದಾಟಿ ನಡೆಯಲೂ ನನಗೆ ಸ್ವಲ್ಪವೂ ಇಚ್ಛೆಯಿಲ್ಲ. ನಾನು ಮಾಡಬೇಕೆನ್ನುವುದು ಇಷ್ಟೇ: ಈ ಬಡಹುಡುಗಿಗೆ ನಾವು ದಯೆ ತೋರಿಸಬೇಕು. ಬದುಕಿನಲ್ಲಿ ಅವಳು ತನ್ನ ಹೊಸ ಸ್ಥಾನಕ್ಕೆ ಸಿದ್ಧವಾಗಿ ಹೊಂದಿಕೊಳ್ಳುವಂತೆ ಅವಳಿಗೆ ಸಹಾಯ ಮಾಡಬೇಕು. ಅವಳ ಮನಸ್ಸಿನ ನಾಜೂಕನ್ನು ಕೆಡಿಸುವುದಕ್ಕೇ ಆಗಲಿ ನಿಮ್ಮ ಮನಸ್ಸನ್ನು ನೋಯಿಸು ವುದಕ್ಕೇ ಆಗಲಿ ನನಗೆ ಇಷ್ಟವಿಲ್ಲ. ಆದ್ದರಿಂದ ನಾನು ವಿಶದವಾಗಿ ನುಡಿಯದಿರ ಬಹುದು.

[ಲಿಸಾಗೆ ಹೊಸ ವಿಶ್ವಾಸ ಬಂದು ಮೆಲ್ಲಗೆ ತನ್ನ ಕುರ್ಚಿಯ ಬಳಿಗೆ ಬರುತ್ತಾಳೆ.]

ಪಿಯರ್ಸ್ : (ಪಿಕರಿಂಗಿಗೆ) ಇಂಥಾದ್ದನ್ನು ನೀವು ಎಂದಾದರೂ ಕೇಳಿದ್ದೀರೇನು ಸ್ವಾಮಿ ?

ಪಿಕರಿಂಗ್ : (ಮನಸಾರ ನಗುತ್ತ) ಎಂದೂ ಇಲ್ಲ, ಮಿಸೆಸ್ ಪಿಯರ್ಸ್....ಎಂದೂ ಇಲ್ಲ.

ಹಿಗ್ಗಿನ್ಸ್ : (ತಾಳ್ಮೆಯಿಂದ) ಏನು ಸಮಾಚಾರ ?

ಪಿಯರ್ಸ್ : ಸಮಾಚಾರವೆ ? ಕಡಲ ಕರೆಯಿಂದ ಒಂದು ಸಣ್ಣ ಗಾರೆಕಲ್ಲನ್ನು ಆರಿಸಿ ಕೊಳ್ಳುವ ಹಾಗೆ ಇಂಥ ಹುಡುಗಿಯನ್ನು ನೀವು ತೆಗೆದುಕೊಳ್ಳುವುದ ಕ್ಕಾಗುವುದಿಲ್ಲ.

ಹಿಗ್ಗಿನ್ಸ್ : ಏಕಾಗುವುದಿಲ್ಲ ?

ಪಿಯರ್ಸ್ : ಏಕಾಗುವುದಿಲ್ಲ ? ಅವಳ ಸಂಗತಿ ನಮಗೇನೂ ಗೊತ್ತಿಲ್ಲ. ಅವಳ ತಾಯಿ ಯಾರೊ, ತಂದೆ ಯಾರೊ ? ಅವಳಿಗೆ ಮದುವೆ ಆಗಿರಬಹುದು.

ಲಿಸ : ಅಯ್ಯೋ ದ್ಯಾವ್ರೇ !

ಹಿಗ್ಗಿನ್ಸ್ : ನೋಡಿದೆಯಾ, ಅವಳು ಹೇಳಿದ್ದು ಕೇಳಿದೆಯೊ ಇಲ್ಲವೊ. ಮದುವೆ ಅಂತೆ

ಮದುವೆ ! ನಿನಗೆ ಗೊತ್ತಿಲ್ಲ : ಈ ವರ್ಗದ ಹೆಣ್ಣು ಮದುವೆ ಆದ ಒಂದು ವರ್ಷದಲ್ಲಿ ಐವತ್ತು ವರ್ಷದವಳಂತೆ ಸವೆದು ಬಡಕಲಾಗಿರುತ್ತಾಳೆ.

ಲಿಸ : ನನ್ನ ಯಾರ್ ಮದ್ವೆ ಆಯ್ತಾರೆ ?

ಹಿಗ್ಗಿನ್ಸ್ : (ಇದ್ದಕ್ಕಿದ್ದಂತೆ ತನ್ನ ಬಹು ರೋಮಾಂಚಕಾರಿಯಾದ, ಇಂಪಾದ ಮೆಲು ದನಿಯಲ್ಲಿ ಮನವೊಲಿಸುವ ವಾಕ್ಯಸರಣಿಯಲ್ಲಿ) ದೇವರ ಆಣೆಗೂ ಎಲಿಸ, ನಾನು ನಿನ್ನ ಕೆಲಸ ಮುಗಿಸುವುದರೊಳಗಾಗಿ, ನಿನ್ನನ್ನು ಬಯಸಿ ನಿಂತು ನಿನಗೋಸ್ಕರ ಗುಂಡೇಟು ಹೊಡೆದುಕೊಂಡು ಸಾಯುವವರ ಶವಗಳು ದಾರಿಯಲ್ಲಿ ಎರಚಿ ಬೀಳುತ್ತವೆ.

ಪಿಯರ್ಸ್ : ಎಲ್ಲಿಯು ಮಾತು ಬಿಡಿ. ಅವಳ ಕೂಡ ನೀವು ಹಾಗೆ ಮಾತನಾಡಬಾರದು.

ಲಿಸ : (ಎದ್ದು ನಿಮಿರಿ ನಿಂತು ನಿರ್ಧಾರದಿಂದ) ನಾನ್ ಒಂಟೋಯ್ತೀನೆ. ಇವರಿಗೆ ನಿಜವಾಗಿ ಬುದ್ಧಿ ಕೆಟ್ಟಯ್ತೆ. ತಲೇ ಕೆಟ್ಟೋರು ಯಾರೂ ನನಗೆ ಪಾಟಕಲ್ಸೋದು ಬ್ಯಾಡ.

ಹಿಗ್ಗಿನ್ಸ್ : (ಕೋಮಲವಾದ ಆತನ ಮನಸ್ಸು ಚುಚ್ಚಿದಂತಾಗಿದೆ. ಆತನ ವಾಕ್ ಸರಣಿಗೆ ಅವಳು ಒಲಿಯದಿದ್ದುದನ್ನು ಕಂಡು) ಸರಿಹೋಯಿತು. ನನಗೆ ಹುಚ್ಚು ಎನ್ನುತ್ತೀಯ ? ಹುಚ್ಚನೆ ನಾನು ? ಆಗಲಿ ಪಿಯರ್ಸ್. ಅವಳಿಗೆ ಹೊಸ ಬಟ್ಟೆ ಆರ್ಡರ್ ಮಾಡಬೇಡ. ಅವಳನ್ನು ಹೊರಕ್ಕೆ ಅಟ್ಟಿಬಿಡು.

ಲಿಸ : (ದೀನಳಾಗಿ) ಉಹು... ಉಹುಂ... ನನ್ ಮುಟ್ಟೋಕೆ ನಿಮ್‌ಗದಿಕಾರ ಯಿಲ್ಲ.

ಪಿಯರ್ಸ್ : ಮರ್ಯಾದೆ ಮೀರಿದರೆ ಏನಾಗುವುದು ಎಂದು ನೋಡಿದೆಯ ? (ಬಾಗಿಲನ್ನು ತೋರುತ್ತ) ಹೀಗೆ ಬಾ.

ಲಿಸ : (ಕಣ್ಣಲ್ಲಿ ನೀರು ಬಂದು) ನಂಗೆ ಬಟ್ಟೆಗಳೇನೂ ಬೇಕಾಗಿರ್ನಿಲ್ಲ. ನಾನದನ್ನ ತೆಕ್ಕೊಳ್ತಿರ್ನಿಲ್ಲ (ಕೈವಸ್ತ್ರವನ್ನು ಬೀಸಾಡುತ್ತಾಳೆ) ನನ್ನ ಬಟ್ಟೆ ನಾನ್ ಕೊಂಡ್ಕೊ ಬಲ್ಲೆ.

ಹಿಗ್ಗಿನ್ಸ್ : (ಚಳಕದಿಂದ ಕೈವಸ್ತ್ರವನ್ನು ತೆಗೆದುಕೊಂಡು, ಬಾಗಿಲ ಕಡೆಗೆ ಇಷ್ಟವಿಲ್ಲದೆ ಹೋಗುವವಳನ್ನು ಅಡ್ಡಗಟ್ಟಿ) ನೀನು ಕೃತಘ್ನೆ, ಕೆಟ್ಟ ಹುಡುಗಿ. ಗಟಾರದಿಂದ ನಿನ್ನನ್ನು ಮೇಲಕ್ಕೆ ಎತ್ತುತ್ತೇನೆ, ನೀನು ಚೆಲುವಾಗುವಂತೆ ಉಡಿಗೆ ಕೊಡುತ್ತೇನೆ, ನಿನ್ನನ್ನು ಶ್ರೀಮಂತ ಹೆಂಗಸನ್ನಾಗಿ ಮಾಡುತ್ತೇನೆ ಎಂದುದಕ್ಕೆ,—ಇದು ನೀನು ತೋರಿಸುವ ಪ್ರತಿ ವಿಶ್ವಾಸ.

ಪಿಯರ್ಸ್ : ನಿಲ್ಲಿಸಿ ಹಿಗ್ಗಿನ್ಸ್ ಅವರೆ. ನಾನು ಇದಕ್ಕೆ ಅವಕಾಶ ಕೊಡುವುದಿಲ್ಲ. ಕೆಟ್ಟ ಮನುಷ್ಯರು, ನೀವು... ನಿಮ್ಮ ತಾಯಿ ತಂದೆ ಬಳಿಗೆ, ಮನೆಗೆ ಹೋಗಮ್ಮ. ಹೆಚ್ಚು ಎಚ್ಚರಿಕೆಯಿಂದ ನಿನ್ನನ್ನು ನೋಡಿಕೊಳ್ಳುವಂತೆ ಅವರಿಗೆ ಹೇಳು.

ಲಿಸ : ನಂಗೆ ತಾಯಿ ತಂದೆ, ಇಲ್ಲಾಮ್ಮಾ. ದೊಡ್ಡೋಳಾಗಿದ್ದೀಯೆ, ನಿನ್ ಜೀವನ ಸಂಪಾದಿಸ್ಕೊ ಯೆಂದು ಮನೆಬಿಟ್ಟು ಓಡಿಸಿದರು.

ಪಿಯರ್ಸ್ : ನಿಮ್ಮ ತಾಯಿ ಎಲ್ಲಿ ?

ಲಿಸ : ನಂಗೆ ತಾಯಿ ಇಲ್ಲ. ಮನೆಯಿಂದ ನನ್ನನ್ ಓಡಿಸಿದೋಳು ನನ್ನ ಆರನೆ ಮಲತಾಯಿ. ಅವರ ಸಹಾಯಯಿಲ್ದೆ ಬದ್ಕಿದ್ದೇನೆ. ನಾನು ಒಳ್ಳೆ ವುಡ್ಗೀನಮ್ಮಾ.

ಹಿಗ್ಗಿನ್ಸ್ : ಹಾಗಾದರೆ ಸರಿಯಾಯಿತು. ಈ ಗಲಾಟೆ ಎಲ್ಲ ಯಾಕೆ ? ಈ ಹುಡುಗಿ ಯಾರಿಗೂ ಸೇರಿದವಳಲ್ಲ—ನನ್ನ ಬಿಟ್ಟರೆ ಇನ್ನು ಯಾರಿಗೂ ಇವಳಿಂದ ಪ್ರಯೋಜನವೂ ಇಲ್ಲ. (ಮಿಸೆಸ್ ಪಿಯರ್ಸ್ ಬಳಿಗೆ ಹೋಗಿ, ಅವಳನ್ನು ಒಲಿಸಿಕೊಳ್ಳುವಂತೆ) ನೀನು ಅವಳನ್ನು ಸಾಕಿಕೊ ಪಿಯರ್ಸ್. ಒಬ್ಬ ಮಗಳು ಇದ್ದರೆ ನಿನಗೆ ತುಂಬಾ ವಿನೋದವಾಗಿರುತ್ತದೆ. ಇನ್ನು ಹೆಚ್ಚು ರಂಪ ಮಾಡ ಬೇಡ. ಅವಳನ್ನು ಕೆಳಗೆ ಕರೆದುಕೊಂಡು ಹೋಗು. ಆಮೇಲೆ—

ಪಿಯರ್ಸ್ : ಆದರೆ, ಅವಳ ಗತಿಯೇನು ? ಅವಳಿಗೆ ಏನಾದರೂ ಸಂಬಳ ಕೊಡಬೇಕೆ? ಸರಿಯಾಗಿ ಯೋಚನೆ ಮಾಡಿ, ಸ್ವಾಮಿ.

ಹಿಗ್ಗಿನ್ಸ್ : ಓಹ್...ಓ... ಅಗತ್ಯವಾದಷ್ಟು ಕೊಡು. ಅದನ್ನು ಮನೆ ಖರ್ಚಿನ ಪುಸ್ತಕದಲ್ಲಿ ಬರೆದಿಡು. (ತಾಳ್ಮೆ ಕೆಟ್ಟು) ಅವಳಿಗೆ ದುಡ್ಡು ಯಾತಕ್ಕೆ ಬೇಕಾಗುತ್ತೆ? ಇಲ್ಲಿಯೇ ಊಟ ಆಗುತ್ತೆ, ಬಟ್ಟೆ ಆಗುತ್ತೆ. ಅವಳಿಗೆ ನೀನು ದುಡ್ಡು ಕೊಟ್ಟರೆ ಕುಡಿದುಬಿಡುತ್ತಾಳೆ ಅಷ್ಟೇ !

ಲಿಸ : (ಅವನ ಕಡೆಗೆ ತಿರುಗಿ) ಎಂತಾವ್ರೋರು—ಮನುಸ್ಸರೇನರಿ ನೀವು ? ನಿಮ್ಮಾತು ಸುಳ್ಳು : ನನ್ನಲ್ಲಿ ಒಂದು ದಿನ ಕುಡಿದ ಲಕ್ಸಣ ಕಂಡೋರಿಲ್ಲ. (ತನ್ನ ಕುರ್ಚಿಗೆ ಹಿಂದಕ್ಕೆ ಹೋಗಿ ನಿರ್ಲಕ್ಷಳಂತೆ ಧೀರವಾಗಿ ನಿಲ್ಲುತ್ತಾಳೆ.)

ಪಿಕರಿಂಗ್ : (ಸರಸವಾಗಿ ಅರ್ಧ ಆಕ್ಷೇಪಣೆಯ ಧ್ವನಿಯಲ್ಲಿ) ಈ ಹುಡುಗಿಗೂ ಅಂತಃಕರಣ ಇದೆ ಎಂದು ನಿಮಗೆ ತೋರುತ್ತದೆಯೆ ಹಿಗ್ಗಿನ್ಸ್ ?

ಹಿಗ್ಗಿನ್ಸ್ : (ವಿಮರ್ಶೆ ಮಾಡುವಂತೆ, ಅವಳ ಕಡೆಗೆ ನೋಡುತ್ತ) ಉಹುಂ, ನನಗೆ ತೋರುವುದಿಲ್ಲ. ನಾವು ಲಕ್ಷಿಸಬೇಕಾದ ಯಾವ ಅಂತಃಕರಣವೂ ಇಲ್ಲ. (ನಗು ಮುಖದಲ್ಲಿಯೇ) ನಿನ್ನಲ್ಲಿ ಇದೆಯೆ ಎಲಿಸ ?

ಲಿಸ : ನಂಗಿರೊ ಅಂತಕ್ಕರಣ ನಂಗೂ ಆಯ್ತೆ. ಬೇರೆ ಎಲ್ರಿಗೂ ಇರುವಂತ್ಲೇನೆ.

ಹಿಗ್ಗಿನ್ಸ್ : (ಪಿಕರಿಂಗಿಗೆ, ಯೋಚಿಸುತ್ತ) ಕಷ್ಟ ನಿಮಗೆ ಕಾಣುತ್ತೆಯೆ ?

ಪಿಯರ್ಸ್ : ಯಾವ ಕಷ್ಟ ?

ಹಿಗ್ಗಿನ್ಸ್ : ವ್ಯಾಕರಣ ಶುದ್ಧವಾಗಿ ಇವಳಿಂದ ಮಾತನಾಡಿಸುವುದು : ಬರಿಯ ಉಚ್ಚಾರಣೆ ತಿದ್ದುವುದು ಸುಲಭ.

ಲಿಸ : ನಂಗೆ ಯಾಕರಣ ಸುದ್ದವಾಗಿ ಮಾತಾಡೋಕೆ ಇಚ್ಚೆಯಿಲ್ಲ. ಕುಲೀನ ಯೆಂಗಸರಂಗೆ ಮಾತಾಡಬೇಕು.

ಪಿಯರ್ಸ್ : ವಿಷಯವನ್ನು ಕುರಿತು ಮಾತನಾಡಿ ಹಿಗ್ಗಿನ್ಸ್. ಯಾವ ಸಮಯಕ್ಕೆ ಒಳಪಟ್ಟು ಇವಳು ಇಲ್ಲಿರಬೇಕು ಎಂಬುದನ್ನು ನನಗೆ ಹೇಳಿ. ಅವಳಿಗೆ ಏನಾದರೂ ಕೂಲಿಕೊಡಬೇಕೆ ? ಆಮೇಲೆ, ನೀವು ಕಲಿಸಿದ್ದೆಲ್ಲ ಮುಗಿದ ಮೇಲೆ ಅವಳ ಗತಿ ಏನು ? ಸ್ವಲ್ಪ ಮುಂದಿನ ಆಲೋಚನೆ ಮಾಡುವುದು ಉತ್ತಮ.

ಹಿಗ್ಗಿನ್ಸ್ : (ತಾಳ್ಮೆಗೆಟ್ಟು) ಅವಳನ್ನು ಗಟಾರದಲ್ಲಿಯೇ ಉಳಿಸಿದರೆ ಅವಳ ಗತಿ ಏನಾಗುತ್ತದೆ ಅದನ್ನು ನನಗೆ ಹೇಳು, ಪಿಯರ್ಸ್ ?

ಪಿಯರ್ಸ್ ? ಅದು ಅವಳಿಗೆ ಸಂಬಂಧಪಟ್ಟ ಸಂಗತಿ. ನಿಮಗೆ ಸಂಬಂಧಿಸಿದ್ದಲ್ಲ ಹಿಗ್ಗಿನ್ಸ್.

ಹಿಗ್ಗಿನ್ಸ್ : ಹಾಗಾದರೆ, ನನ್ನ ಕೆಲಸ ಎಲ್ಲಾ ಮುಗಿದ ಮೇಲೆ ಅವಳನ್ನು ಮತ್ತೆ ಹಿಂದಕ್ಕೆ ಗಟಾರದಲ್ಲಿ ಎಸೆಯಬಹುದಲ್ಲ ? ಪುನಃ ಅವಳ ಕೆಲಸವೇ ಆಗುತ್ತೆ ಅದು. ಸರಿ ಹೋಯಿತಲ್ಲವೆ ?

ಲಿಸ : ರುದಯಯಿಲ್ಲದ ಮನುಸ್ಸರು ನೀವು. ನಿಮ್ಮನ್ನು ಬಿಟ್ಟು ಇನ್ನೊಂದನ್ನು ಕಂಡ್ರೆ ನಿಮಗೆ ಲಕ್ಸವೇ ಇಲ್ಲ. (ಎದ್ದು ನೆಲದ ಮೇಲೆ ದೃಢವಾಗಿ ನಿಲ್ಲುವಳು) ಇಲ್ನೋಡಿ. ಯೀ ಇಸಯ ನಂಗೆ ಸಾಕಾಯ್ತು ನಾನೋಯ್ತಿದ್ದೇನೆ. (ಬಾಗಿಲ ಕಡೆಗೆ ಹೋಗತೊಡಗುವಳು) ನಿಮ್ ನಡ್ತೇಗೆ ನೀವ್ ನಾಚ್ಕೋಬೇಕು. ಔದು.

ಹಿಗ್ಗಿನ್ಸ್ : (ಪಿಯಾನೊ ಮೇಲಿಂದ ಚಾಕೊಲೆಟ್ ಕ್ರೀಮ್ ಚೂರು ಒಂದನ್ನು ತೆಗೆದುಕೊಳ್ಳುವನು ; ಇದ್ದಕ್ಕಿದ್ದಂತೆ ಅವನ ಕಣ್ಣಿನಲ್ಲಿ ತುಂಟತನ ಮಿನುಗುತ್ತಿರಲು) ಈ ಚಾಕೊಲೆಟ್ ಸ್ವಲ್ಪ ತೆಗೆದುಕೊ ಎಲಿಸ.

ಲಿಸ : (ನಿಲ್ಲುತ್ತ, ಮೋಹಗೊಂಡು,) ಅದರಲ್ಲಿ ಯೇನಿದೆ ಯೆನ್ನೋದು ನಂಗೇನ್ಗೊತ್ತು, ವುಡುಗೇರಿಗೆ ನಿಮ್ಮಂತಾ ಜನ ಮದ್ದಾಕ್ತಾರೇಂತ ಕೇಳಿದ್ದೇನೆ.

(ಹಿಗ್ಗಿನ್ಸ್ ತನ್ನ ಕೈ ಚಾಕು ತೆಗೆದು ಒಂದು ಚಾಕೊಲೆಟನ್ನು ಎರಡು ತುಂಡು ಮಾಡಿ ಒಂದರ್ಧವನ್ನು ತನ್ನ ಬಾಯೊಳಕ್ಕೆ ಹಾಕಿಕೊಂಡು ಇನ್ನರ್ಧವನ್ನು ಅವಳಿಗೆ ಕೊಡ ಹೋಗುತ್ತಾನೆ.)

ಹಿಗ್ಗಿನ್ಸ್ : ನೆಚ್ಚಿಗೆ, ಪ್ರಮಾಣ ಬಂದಿತೊ ಈಗ ? ಒಂದರ್ಧ ನಾನು ತಿನ್ನುತ್ತೇನೆ. ಇನ್ನರ್ಧ ನೀನು ತಿನ್ನು ! (ಉತ್ತರ ಕೊಡಲು ಬಾಯಿ ತೆರೆದಾಗ, ಅರ್ಧ ಚಾಕೊಲೆಟನ್ನು ಅದರೊಳಗೆ ಹಿಗ್ಗಿನ್ಸ್ ಹಾಕುತ್ತಾನೆ) ಪೆಟ್ಟಿಗೆ ಪೆಟ್ಟಿಗೆ

ಚಾಕೊಲೆಟ್ ತಂದುಕೊಡುತ್ತೇನೆ. ಬ್ಯಾರಲ್‌ಗಟ್ಟಲೆ ದಿನಾ ತಂದುಕೊಡುತ್ತೇನೆ, ಅದನ್ನು ತಿಂದುಕೊಂಡು ಇರುವೆಯಂತೆ.

ಲಿಸ : (ಅದು ಗಂಟಲಿಗೆ ಸಿಕ್ಕಿಕೊಂಡಂತೆ ಆಗಿರುತ್ತದೆ. ಆದರೆ ನುಂಗಿ) ಅದನ್ನು ನಾನು ತಿನ್ತಾ ಇರ್ಲಿಲ್ಲ. ಆದರೆ ಬಾಯಿಗೆ ಆಕಿಕೊಂಡ ಮೇಲೆ ಈಚೆಗೆ ತೆಗೆಯೋದು ಮರ್ಯಾದಸ್ತರು ಮಾಡೊ ಕೆಲಸ ಅಲ್ಲ.

ಹಿಗ್ಗಿನ್ಸ್ : ಕೇಳು ಎಲಿಸ. ಟ್ಯಾಕ್ಸೀಲಿ ಬಂದೆ ಎಂದು ನೀನು ಹೇಳಿದೆ ಅಲ್ಲ ?

ಲಿಸ : ಏನ್ ಬಂದ್ರೆ ? ನಂಗೆ ಟ್ಯಾಕ್ಸೀಲಿ ಬರೋಕೆ ಅಕ್ಕಿಲ್ವಾ ? ಎಲ್ಲರಿಗೂ ಯಿರೊ ಅಂಗೇನೆ ?

ಹಿಗ್ಗಿನ್ಸ್ : ಹಕ್ಕು ಇದೆ ಎಲಿಸ. ಇನ್ನು ಮುಂದೆ ಎಷ್ಟು ಟ್ಯಾಕ್ಸಿಗಳನ್ನು ತೆಗೆದುಕೊಳ್ಳಬಹುದೋ ಅಷ್ಟನ್ನೂ ತೆಗೆದುಕೊಳ್ಳಬಹುದು. ಊರಿನ ಸುತ್ತಮುತ್ತ, ಒಳಗೆ, ಹೊರಗೆ, ದಿನಾ ಟ್ಯಾಕ್ಸಿಯಲ್ಲಿ ಹೋಗಬಹುದು. ಅದನ್ನು ಯೋಚಿಸು ಎಲಿಸ.

ಪಿಯರ್ಸ್ : ಹಿಗ್ಗಿನ್ಸ್ ಅವರೇ, ನೀವು ಹುಡುಗಿಗೆ ತುಂಬಾ ಆಸೆ ತೋರಿಸುತ್ತಿದ್ದೀರಿ. ಅದು ಸರಿಯಲ್ಲ. ನಾಳೆಗತಿಯನ್ನು ಅವಳು ಯೋಚನೆ ಮಾಡಬೇಕು.

ಹಿಗ್ಗಿನ್ಸ್ : ಇಷ್ಟು ಚಿಕ್ಕ ವಯಸ್ಸಿಗೆ ? ನಾನ್‌ಸೆನ್ಸ್. ಯೋಚಿಸಲು ನಾಳೆ ಎಂಬುದೇ ಇಲ್ಲವಾದಾಗ ನಾಳೆಯನ್ನು ಕುರಿತು ಯೋಚಿಸುವುದಕ್ಕೆ ಬೇಕಾದಷ್ಟು ಕಾಲ ಏರುತ್ತದೆ. ಬೇಡ ಎಲಿಸ ; ಈಕೆ ಮಾಡಿದ ಹಾಗೆ ನೀನೂ ಮಾಡು ; ಬೇರೊಬ್ಬರ ಭವಿಷ್ಯವನ್ನು ಕುರಿತು ಯೋಚಿಸು : ನಿನ್ನದನ್ನು ಕುರಿತು ಎಂದೂ ಯೋಚಿಸಬೇಡ. ಬೇಕಾದರೆ ಚಾಕೊಲೆಟ್, ಟ್ಯಾಕ್ಸಿ, ಚಿನ್ನ, ವಜ್ರ ಇವುಗಳನ್ನು ಕುರಿತು ಯೋಚನೆ ಮಾಡು.

ಲಿಸ : ವುಹುಂ. ನಂಗೆ ಚಿನ್ನ ಬೇಡ, ವಜ್ರ ಬೇಡ, ನಾನು ವೊಳ್ಳೇ ವುಡ್ಗಿ.

(ಪುನಃ ಕುಳಿತುಕೊಳ್ಳುವಳು, ಗಂಭೀರವಾಗಿ.)

ಹಿಗ್ಗಿನ್ಸ್ : ಮಿಸೆಸ್ ಪಿಯರ್ಸ್ ಪೋಷಣೆಯಲ್ಲಿ ನೀನು ಹಾಗೇ ಉಳಿಯುವೆ ಎಲಿಸ. ಒಳ್ಳೆಯ ಚೆಲುವಾದ ಮೀಸೆಯುಳ್ಳ, ರಕ್ಷಕ ದಳದ ಅಧಿಕಾರಿಯನ್ನು ಮದುವೆಯಾಗುವೆಯಂತೆ. ಶ್ರೀಮಂತರ ಮಗನನ್ನು. ತನ್ನ ಮಗ ನಿನ್ನನ್ನು ಮದುವೆ ಮಾಡಿಕೊಂಡುದಕ್ಕೆ, ಅವನಿಗೆ ಆಸ್ತಿಯಲ್ಲಿ ಭಾಗವಿಲ್ಲ ಎನ್ನುತ್ತಾನೆ ಅವರಪ್ಪ ಮೊದಲು. ಆಮೇಲೆ ನಿನ್ನ ಚೆಲುವು, ಒಳ್ಳೆಯತನ ಕಂಡು, ತಾನೇ ಕರಗುತ್ತಾನೆ.

ಪಿಕರಿಂಗ್ : ಕ್ಷಮಿಸಿ ಹಿಗ್ಗಿನ್ಸ್, ನಡುವೆ ನಾನು ಮಾತನಾಡಬೇಕಾಗಿದೆ. ಮಿಸೆಸ್ ಪಿಯರ್ಸ್ ಹೇಳುವುದು ನಿಜ. ಈ ಹುಡುಗಿ ಆರು ತಿಂಗಳ ಕಾಲ ಶಿಕ್ಷಣ ಪ್ರಯೋಗ

ವೊಂದಕ್ಕೆ ಒಳಪಟ್ಟು ನಿಮ್ಮ ಕೈವಶವಾಗಿರಬೇಕಾದರೆ ತಾನು ಏನು ಮಾಡುತ್ತಿದ್ದಾಳೆ ಎಂಬುದನ್ನು ಅವಳು ಪೂರ್ತಿಯಾಗಿ ಅರ್ಥಮಾಡಿಕೊಳ್ಳಬೇಕು.

ಹಿಗ್ಗಿನ್ಸ್ : ಹೇಗೆ ಮಾಡಿಕೊಂಡಾಳು ? ಅವಳೇನೂ ಅರ್ಥಮಾಡಿಕೊಳ್ಳಲಾರಳು. ಅಲ್ಲದೆ ನಾವು ಮಾಡುತ್ತಿರುವುದನ್ನು ನಾವಾರಾದರೂ ಅರಿಯಬಲ್ಲೆವೆ ? ಅರಿತೆವಾದರೆ ಅದರಂತೆ ಎಂದಿಗಾದರೂ ಮಾಡುತ್ತೇವೆಯೆ ?

ಪಿಕರಿಂಗ್ : ತುಂಬಾ ಜಾಣತನದ ಮಾತು ಹಿಗ್ಗಿನ್ಸ್. ಯುಕ್ತವಲ್ಲ, ವ್ಯವಹಾರವೂ ಅಲ್ಲ. (ಎಲಿಸಾಗೆ) 'ಮಿಸ್ ಡೂಲಿಟ್ಲ್ –'

ಲಿಸ : (ಪೂರ್ತಿ ಆ ಪ್ರಭಾವಕ್ಕೆ ಒಳಪಟ್ಟು,) ಆ...ಆ...ಔ...ಊ.

ಹಿಗ್ಗಿನ್ಸ್ : ನೋಡಿದಿರ ? ಎಲಿಸ ಮಾಡುವುದು ಅಷ್ಟೇ. ಆ...ಆ...ಔ...ಊ. ವಿವರಿಸಿ ಪ್ರಯೋಜನವಿಲ್ಲ. ಸೈನ್ಯದ ಅಧಿಕಾರಿಗಳಾದ ನಿಮಗೆ ತಿಳಿದಿರಬೇಕು : ನಿಮ್ಮ ಅಪ್ಪಣೆ ಅವಳಿಗೆ ತಿಳಿಸಿ : ಅವಳಿಗೆ ಬೇಕಾಗಿರುವುದು ಅದು. ಎಲಿಸ, ಮುಂದಿನ ಆರು ತಿಂಗಳು ನೀನು ಇಲ್ಲಿಯೇ ವಾಸಮಾಡಬೇಕು. ಹೂಮಾರುವವರ ಅಂಗಡಿಯಲ್ಲಿನ ಕುಲೀನ ಸ್ತ್ರೀ ಮಾತನಾಡುವಂತೆ ಚೆಲುವಾಗಿ ಮಾತನಾಡುವುದನ್ನು ಕಲಿಯಬೇಕು. ನೀನು ಒಳ್ಳೆಯವಳಾಗಿದ್ದರೆ, ಹೇಳುವುದನ್ನೆಲ್ಲ ಮಾಡುವ ಹಾಗಿದ್ದರೆ, ನಿನಗೆ ಮಲಗುವುದಕ್ಕೆ ಒಳ್ಳೆಯ ಮಲಗುವ ಕೋಣೆ ಸಿಕ್ಕುತ್ತೆ. ತಿನ್ನಲು ಬೇಕಾದ್ದು ಸಿಕ್ಕುತ್ತೆ. ಚಾಕೊಲೆಟ್ ಕೊಳ್ಳಲು, ಟ್ಯಾಕ್ಸಿಯಲ್ಲಿ ಓಡಿಯಾಡಲು ಹಣ ಸಿಕ್ಕುತ್ತೆ. ತುಂಟಳಾದರೆ, ಸೋಮಾರಿ ಆದರೆ ಅಡಿಗೆ ಮನೆಯಲ್ಲಿ ಮಲಗಬೇಕಾಗುತ್ತೆ—ಕಪ್ಪು ಜೀರುಂಡೆಗಳ ಜೊತೆಯಲ್ಲಿ —ಮಿಸೆಸ್ ಪಿಯರ್ಸ್ ನಿನಗೆ ಕಸಪೊರಕೆ ಸೇವೆ ಮಾಡುತ್ತಾಳೆ. ಆರು ತಿಂಗಳ ಕೊನೆಯಲ್ಲಿ ಉತ್ತಮವಾದ ಗಾಡಿಯಲ್ಲಿ, ಅಂದವಾದ ಉಡುಪಿನಲ್ಲಿ ನೀನು ಬಕಿಂಗ್‌ಹ್ಯಾಂ ಅರಮನೆಗೆ ಹೋಗುವೆಯಂತೆ. ನೀನು ಕುಲೀನ ಸ್ತ್ರೀ ಅಲ್ಲವೆಂದು ಅರಸರಿಗೆ ಗೊತ್ತಾದರೆ ಪೊಲೀಸರಿಗೆ ಹಿಡಿದುಕೊಟ್ಟು ನಿನ್ನನ್ನು ಲಂಡನಿನ ಟವರ್ ಸೆರೆಮನೆಗೆ ಒಯ್ಯುತ್ತಾರೆ. ಅಧಿಕಪ್ರಸಂಗಿ ಹೂಮಾರುವ ಹೆಣ್ಣುಗಳಿಗೆಲ್ಲ ಎಚ್ಚರಿಕೆ ಕೊಡುವಂತೆ ; ಅಲ್ಲಿ ನಿನ್ನ ತಲೆ ಕತ್ತರಿಸಿ ಹಾಕುತ್ತಾರೆ. ನೀನು ಇಂಥವಳು ಎಂದು ಅವರಿಗೆ ಪತ್ತೆಯಾಗದೆ ಹೋದರೆ ನಿನಗೆ ಏಳೂವರೆ ಷಿಲಿಂಗ್ ಬಹುಮಾನ ಕೊಡುತ್ತೇನೆ ; ಅದನ್ನು ತೆಗೆದುಕೊಂಡು ಅಂಗಡಿಯಲ್ಲಿ ಕುಲೀನ ಸ್ತ್ರೀಯಂತೆ ಜೀವನ ಆರಂಭಿಸಬಹುದು. ಈ ಅವಕಾಶವನ್ನು ನೀನು ನಿರಾಕರಿಸಿದರೆ ನೀನು ದುಷ್ಟಳು, ಕೃತಘ್ನಳು. ದೇವತೆಗಳೇ ಕಣ್ಣೀರು ಸುರಿಸುವಂತಾಗುತ್ತದೆ. (ಪಿಕರಿಂಗಿಗೆ) ಈಗ ನಿಮಗೆ ತೃಪ್ತಿಯಾಯಿತೆ, ಪಿಕರಿಂಗ್ ? (ಮಿಸೆಸ್ ಪಿಯರ್ಸ್‌ಗೆ) ಇದಕ್ಕಿಂತ ಸ್ಪಷ್ಟವಾಗಿ, ನ್ಯಾಯವಾಗಿ ನಾನು ಏನು ಹೇಳಬಹುದು ?

ಪಿಯರ್ಸ್ : (ತಾಳ್ಮೆಯಿಂದ) ನಾನು ಈ ಹುಡುಗಿಯ ಬಳಿ ಬೇರೆಯಾಗಿ ಸ್ವಲ್ಪ ಮಾತನಾಡುತ್ತೇನೆ. ಅವಳನ್ನು ನನ್ನ ಕೈಗೆ ತೆಗೆದುಕೊಳ್ಳುವೆನೊ ಇಲ್ಲವೊ ನನಗೆ ಗೊತ್ತಿಲ್ಲ. ಈ ಏರ್ಪಾಡಿಗೂ ಒಪ್ಪುವುದಕ್ಕಾಗುವುದೊ ಇಲ್ಲವೊ ಗೊತ್ತಿಲ್ಲ. ನನಗೆ ಗೊತ್ತು : ಅವಳಿಗೆ ಯಾವ ಕೆಡಕು ಉಂಟಾಗುವುದಕ್ಕೂ ನೀವು ಇಷ್ಟ ಪಡುವುದಿಲ್ಲವೆಂದು. ಆದರೆ ಜನದ ಉಚ್ಚಾರಣೆಯಲ್ಲಿ ನೀವು ಆಸಕ್ತಿ ವಹಿಸಿದಿರೆಂದರೆ ಅವರಿಗಾಗಲಿ ನಿಮಗಾಗಲಿ ಏನಾಗುತ್ತೆಂಬುದನ್ನು ನೀವು ಯೋಚಿಸುವುದೂ ಇಲ್ಲ. ಆ ಲಕ್ಷ್ಯ ನಿಮಗೆ ಇರುವುದಿಲ್ಲ. ಎಲಿಸ, ನನ್ನ ಜೊತೆಯಲ್ಲಿ ಬಾಮ್ಮ.

ಹಿಗ್ಗಿನ್ಸ್ : ಆಗಲಿ ಪಿಯರ್ಸ್, ಅವಳನ್ನು ಸ್ನಾನದ ಮನೆಗೆ ಕರೆದುಕೊಂಡು ಹೋಗು.

ಲಿಸ : (ಇಷ್ಟವಿಲ್ಲದೆ ಏಳುತ್ತ ಸಂಶಯದಿಂದ) ದೊಡ್ಡ ಪಟಿಂಗರ ಹಾಗೆ ನೀವು ನಡೀತಿದ್ದೀರಿ. ನಂಗೆ ಇಷ್ಟಾ ಇಲ್ಲದೆ ಇದ್ದರೆ ನಾನಿಲ್ಲಿರೋಲ್ಲ. ಬಕಿಂಗ್‌ಹ್ಯಾಂ ಅರಮನೆಗೆ ನಾನು ಹೋಗುತ್ತೇನೆ ಎಂದು ಯಾರನ್ನೂ ಕೇಳಿಲ್ಲ. ಪೊಲೀಸರ ಕೈಗೆ ನಾನೆಂದೂ ಸಿಕ್ಕಿಲ್ಲ. ಸಿಕ್ಕೊ ಅಂತ ತಪ್ಪು ನಾನು ಯೆಂದೂ ಮಾಡಿಲ್ಲ. ನಾನು ವೊಳ್ಳೆ ವುಡ್ಗಿ.

ಪಿಯರ್ಸ್ : ಮಾತಿಗೆ ಮಾತು ಉತ್ತರ ಕೊಡಬಾರದು ಎಲಿಸ. ಆ ದೊಡ್ಡ ಮನುಷ್ಯರು ಹೇಳುವುದು ನಿನಗೆ ಅರ್ಥ ಆಗೋಲ್ಲ ಬಾ. (ದಾರಿ ತೋರಿಸಿ ಅವಳನ್ನು ನಡಸುತ್ತ, ಎಲಿಸಾಗೆ ಬಾಗಿಲನ್ನು ತೆರೆಯುತ್ತಾಳೆ.)

ಲಿಸ : (ಹೋಗುತ್ತ) ನಾ ಯೇಳೋದು ಸರಿ. ನನ್ ತಲೆ ಕತ್ತರಿಸಿ ಆಕೋ ಅಂಗಿದ್ರೆ ನಾನ್ ಅರಸರ ಅತ್ರ ವೋಗೋಲ್ಲ. ಯೀ ಸ್ತಿತೀಲಿ ಸಿಕ್ಕಾಕ್ಕೋತೀನಿ ಯೆಂದು ತಿಳಿದ್ದಿದ್ರೆ ನಾನ್ ಯಿಲ್ಲಿಗೆ ಬರ್ತಾನೇ ಇರ್ನಿಲ್ಲ. ನಾನ್ ಯಾವಾಗ್ಲೂ ವೊಳ್ಳೆ ವುಡ್ಗಿಯಾಗಿಯೇ ಇದ್ದೇನೆ. ನಾನ್ ಅವರ ಕೂಡ ಯಾವ ಮಾತನ್ನೂ ಆಡಿಲ್ಲ. ಅವರಿಂದ ನಂಗೇನೂ ಆಗ್‌ಬೇಕಾದ್ದಿಲ್ಲ. ನನ್ಗ ಯಾರ ಲಕ್ಸವೂ ಇಲ್ಲ. ಯಾರೂ ನನ್ನ ಮೇಲೆ ಜಬರದಸ್ತಿ ಮಾಡಬೇಕಾಗಿಲ್ಲ. ಯೆಲ್ರಿಗೂ ಯಿರೊ ಆಗೇ ನಂಗೂ ಅಂತಕ್ಕರಣ ಮರ್ರ್ಯಾದೆಯಿದೆ. (ಪಿಯರ್ಸ್ ಬಾಗಿಲನ್ನು ಹಾಕುತ್ತಾಳೆ. ಎಲಿಸಾ ಮೊರೆ ಕೇಳುತ್ತಿಲ್ಲ.)

[ಪಿಕರಿಂಗ್, ಬೆಂಕಿ ಉರಿಯುತ್ತಿದ್ದ ಕಡೆಯಿಂದ ಕುರ್ಚಿಯ ಕಡೆಗೆ ಬರುತ್ತಾನೆ. ಅದರ ಮೇಲೆ ತೋಳನ್ನು ಹಿಂದಕ್ಕೆ ಚಾಚಿ ಕಾಲು ಅಡ್ಡವಾಗಿ ಹಾಕಿ ಕುಳಿತುಕೊಳ್ಳುತ್ತಾನೆ.]

ಪಿಕರಿಂಗ್ : ಒಂದು ನೇರ ಪ್ರಶ್ನೆ ಕೇಳಲೆ ಹಿಗ್ಗಿನ್ಸ್ ? ಕ್ಷಮಿಸಿ. ಹೆಂಗಸರ ವಿಷಯದಲ್ಲಿ ನೀವು ಶೀಲವಂತರೆ !

ಹಿಗ್ಗಿನ್ಸ್ : (ಮನಸ್ಸಿನಲ್ಲಿ ಏನನ್ನೊ ಚಿಂತಿಸುತ್ತ) ಹೆಂಗಸರ ಸಂಬಂಧದಲ್ಲಿ ಶೀಲವಂತರಾದ ಮನುಷ್ಯರು ಯಾರನ್ನಾದರೂ ನೀವು ಕಂಡಿದ್ದೀರ ?

ಪಿಕರಿಂಗ್ : ಓಹೋ. ಹಲ ವೇಳೆ.

ಹಿಗ್ಗಿನ್ಸ್ : (ತನ್ನ ಕೈಗಳ ಮೇಲೆ ಏಳುವುದಕ್ಕೆ ಪ್ರಯತ್ನಪಟ್ಟು ಪಿಯಾನೊ ಬಳಿಗೆ ಬಂದು ಒಂದು ಎಗರಿನಲ್ಲಿ ಅದರ ಮೇಲೆ ಕುಳಿತು ವಿಷಯವನ್ನು ಸ್ಥಾಪಿಸುವಂತೆ.) ನಾನು ಕಂಡಿಲ್ಲ. ಹೆಂಗಸು ನನ್ನ ಒಡನೆ ಸ್ನೇಹ ಬೆಳಸಿದ ಕೂಡಲೆ ಅಸೂಯೆ ಪಡುತ್ತಾಳೆ. ಹೀಗೆ ಮಾಡು, ಹಾಗೆ ಮಾಡು ಎಂದು ನಿರ್ಬಂಧಿಸುತ್ತಾಳೆ. ಸಂಶಯಪಡುತ್ತಾಳೆ. ಇವರ ಹಾಳು ಸಹವಾಸ ಸಾಕು ಎನ್ನುವಷ್ಟು ಬೇಸರವಾಗುತ್ತದೆ. ಹೆಂಗಸಿನೊಡನೆ ಸ್ನೇಹ ಬೆಳಸಿದರೆ ಆ ಒಡನೆಯೇ ನಾನು ಸ್ವಾರ್ಥಿಯಾಗುತ್ತೇನೆ ; ನಾನು ಹೇಳಿದಂತೆಯೇ ನಡೆಯಬೇಕೆಂದು ನಾನೂ ಹಟವಾದಿಯಾಗುತ್ತೇನೆ. ಹೆಂಗಸರು ಎಲ್ಲವನ್ನೂ ತಲೆ ಕೆಳಗು ಮಾಡುತ್ತಾರೆ. ನಿಮ್ಮ ಬಾಳೊಳಕ್ಕೆ ಅವರನ್ನು ಬರಗೊಟ್ಟರೆ ಆಯಿತು : ಹೆಂಗಸು ಒಂದು ಕಡೆಗೆ ಎಳೆಯುತ್ತಾಳೆ, ಗಂಡಸು ಇನ್ನೊಂದು ಕಡೆ ಎಳೆಯುತ್ತಾನೆ—ಎಂಬುದನ್ನು ಕಾಣುತ್ತೀರಿ.

ಪಿಕರಿಂಗ್ : ಉದಾಹರಣೆಗೆ ? ಯಾವುದರ ಕಡೆಗೆ ?

ಹಿಗ್ಗಿನ್ಸ್ : (ಅಶಾಂತನಾಗಿ ಪಿಯಾನೊ ಇಂದ ಇಳಿದು ಬಂದು) ಓ, ದೇವರಿಗೆ ಗೊತ್ತು ! ಬಹುಶಃ ತನ್ನ ಇಷ್ಟದಂತೆ ಬದುಕಬೇಕೆಂದು ಹೆಂಗಸು ಬಯಸುತ್ತಾಳೆ. ಹೀಗೆಯೇ ಗಂಡಸೂ ; ಅವನ ಇಷ್ಟದಂತೆ. ಇವರು ಅವರನ್ನು—ಅವರು ಇವರನ್ನು ತಪ್ಪು ಜಾಡಿಗೆ ಎಳೆಯಬೇಕೆಂದು ಯತ್ನಿಸುತ್ತಾರೆ. ಉತ್ತರಕ್ಕೆ ಹೋಗಬೇಕೆಂಬುದು ಒಬ್ಬರ ಇಷ್ಟವಾದರೆ ದಕ್ಷಿಣಕ್ಕೆಂಬುದು ಇನ್ನೊಬ್ಬರದು. ಪರಿಣಾಮ ! ಇಬ್ಬರೂ ಪೂರ್ವಕ್ಕೆ ಹೋಗಬೇಕಾಗುತ್ತೆ—ಇಬ್ಬರಿಗೂ ಪೂರ್ವದ ಗಾಳಿ ಒಗ್ಗದೆ ಹೋದರೂ. (ಪಿಯಾನೊ ಬಳಿಯಲ್ಲಿಯೇ ಹತ್ತಿರದ ಬೆಂಚಿನ ಮೇಲೆ ಕುಳಿತುಕೊಳ್ಳುತ್ತಾನೆ,) ಆದ್ದರಿಂದ ನೋಡಿ : ನಾನು ಗೊಡ್ಡು ಬ್ರಹ್ಮಚಾರಿಯಾಗಿ ನಿಶ್ಚಿತನಾಗಿದ್ದೇನೆ : ಬಹುಶಃ ಹೀಗೆಯೇ ಇರುತ್ತೇನೆ ಅಂತ ಕಾಣುತ್ತೆ.

ಪಿಕರಿಂಗ್ : (ಎದ್ದು, ಅವನ ಎದುರಿಗೆ ಬಂದು ನಿಂತು ಗಂಭೀರವಾಗಿ) ನೋಡಿ ಹಿಗ್ಗಿನ್ಸ್, ನನ್ನ ಮನಸ್ಸಿನಲ್ಲಿ ಏನಿದೆ ಎನ್ನುವುದು ನಿಮಗೆ ಗೊತ್ತು. ಈ ಕೆಲಸದಲ್ಲಿ ನಾನು ಇರಬೇಕಾದರೆ ಆ ಹುಡುಗಿಯ ಹೊಣೆ ನನ್ನ ಮೇಲೆ ಇರುತ್ತದೆ. ಆಕೆಯ ಸ್ಥಿತಿಯ ಅವಕಾಶವನ್ನು ಸ್ವಲ್ಪವೂ ಪಡೆದುಕೊಳ್ಳತಕ್ಕದ್ದಲ್ಲ ಎಂದು. ಇದು ನನ್ನ ನಂಬಿಕೆ.

ಹಿಗ್ಗಿನ್ಸ್ : ಏನು ! ಅದೇ ! ದೇವರ ಆಣೆಗೂ ನಾನು ನಿಮಗೆ ಭಾಷೆ ಕೊಡುತ್ತೇನೆ. (ವಿವರಿಸಲು, ಏಳುತ್ತ) ನೋಡಿ, ಅವಳು ನಮ್ಮಲ್ಲಿಗೆ ಕಲಿಯಲು ಬಂದ ಶಿಷ್ಯಳು.

ಶಿಷ್ಯಳು ಪವಿತ್ರಳು ಎಂಬ ಭಾವನೆ ಇಲ್ಲದಿದ್ದರೆ ಕಲಿಸಲು ಅಶಕ್ಯವಾಗುತ್ತದೆ. ಹತ್ತಾರು ಅಮೇರಿಕದ ಮಿಲಿಯಧೀಶ್ವರಿಯರಿಗೆ ಇಂಗ್ಲಿಷ್ ಮಾತನಾಡುವುದನ್ನು ನಾನು ಕಲಿಸಿದ್ದೇನೆ. ಲೋಕಸುಂದರಿಯರು ಎನ್ನಬಹುದಾದವರು. ನಾನು ಪಳಗಿ ಹದವಾದವನು. ನನಗೆ ಅವರೂ ಒಂದೇ, ಒಂದು ಮರದ ತುಂಡೂ ಒಂದೇ... ನಾನೂ ಒಂದು ಮರದ ತುಂಡೇ ಎನ್ನಬಹುದು. ಎಂದರೆ— (ಮಿಸೆಸ್ ಪಿಯರ್ಸ್ ಬಾಗಿಲನ್ನು ತೆರೆಯುವಳು. ಎಲಿಸಳ ಹ್ಯಾಟ್ ಅವಳ ಕೈಯಲ್ಲಿದೆ. ಒಲೆಯ ಹತ್ತಿರ ಇರುವ ವಿರಾಮ ಕುರ್ಚಿಗೆ ಸರಿದು ಪಿಕರಿಂಗ್ ಕುಳಿತುಕೊಳ್ಳುತ್ತಾನೆ.)

ಹಿಗ್ಗಿನ್ಸ್ : (ಆತುರದಿಂದ) ಏನು ಪಿಯರ್ಸ್, ಎಲ್ಲ ಸರಿಹೋಯಿತೆ ?

ಪಿಯರ್ಸ್ : (ಬಾಗಿಲಲ್ಲಿ) ಒಂದು ಮಾತನ್ನು ಕೇಳಿ ತೊಂದರೆ ಪಡಿಸಬಹುದೆ ಹಿಗ್ಗಿನ್ಸ್ ಅವರೆ ?

ಹಿಗ್ಗಿನ್ಸ್ : ಓಹೊ. ಖಂಡಿತವಾಗಿ....ಒಳಗೆ ಬರಬಹುದಲ್ಲಾ ! (ಮುಂದಕ್ಕೆ ಪಿಯರ್ಸ್ ಬರುವಳು) ಅದನ್ನು ಸುಡಬೇಡ ಪಿಯರ್ಸ್. ಆ ಒಂದನ್ನು ತಮಾಷೆಯ ಸಾಮಾನನ್ನಾಗಿ ಉಳಿಸಿಕೊಳ್ಳೋಣ. (ಹ್ಯಾಟನ್ನು ತೆಗೆದುಕೊಳ್ಳುವನು.)

ಪಿಯರ್ಸ್ : ಎಚ್ಚರಿಕೆಯಿಂದ ಹಿಡಿದುಕೊಳ್ಳಿ—ದಯಮಾಡಿ. ಅದನ್ನು ಸುಡುವುದಿಲ್ಲವೆಂದು ಅವಳಿಗೆ ಮಾತುಕೊಡಬೇಕಾಯಿತು. ಸ್ವಲ್ಪ ಹೊತ್ತು ಅದನ್ನು ಒಲೆ ಬೆಂಕಿಯ ಮೇಲೆ ಹಿಡಿಯುತ್ತೇನೆ.

ಹಿಗ್ಗಿನ್ಸ್ : (ಪಿಯಾನೊ ಮೇಲೆ, ಅವಸರದಲ್ಲಿ ಅದನ್ನು ಇಟ್ಟು) ಸರಿಯಾಯಿತು. ನೀನು ಏನನ್ನೋ ಹೇಳಬೇಕು ಎಂದೆ, ಅಲ್ಲ ?

ಪಿಕರಿಂಗ್ : ನಾನು ಇಲ್ಲಿರೋದು ಏನೂ ಅಡ್ಡಿ ಇಲ್ಲ ತಾನೆ !

ಪಿಯರ್ಸ್ : ಖಂಡಿತವಾಗಿ ಇಲ್ಲ. ಹಿಗ್ಗಿನ್ಸ್ ಅವರೆ, ಆ ಹುಡುಗಿಯ ಮುಂದೆ ಬಳಸುವ ಮಾತುಗಳಲ್ಲಿ ತುಂಬಾ ಎಚ್ಚರಿಕೆ ತೆಗೆದುಕೊಳ್ಳಬೇಕು.

ಹಿಗ್ಗಿನ್ಸ್ : (ನಿಷ್ಠುರವಾಗಿ) ಸರಿ—ಆಯ್ತು. ನಾನು ಆಡುವ ಮಾತಿನಲ್ಲಿ ಯಾವಾಗಲೂ ವಿಶೇಷ ಗಮನ ಇಟ್ಟೇ ಇರುತ್ತೇನೆ. ಇದನ್ನು ನನಗೇಕೆ ಹೇಳುತ್ತೀಯೆ ?

ಪಿಯರ್ಸ್ : (ಮನಸ್ಸನ್ನು ಬದಲಾಯಿಸದೆ) ಹಾಗಲ್ಲ. ಸಿಕ್ಕಿದ ಕಡೆ ಪದಾರ್ಥವನ್ನು ಇಟ್ಟು ಮರೆತಾಗ ಅಥವಾ ಸ್ವಲ್ಪ ತಾಳ್ಮೆ ತಪ್ಪಿದಾಗ ನಿಮಗೆ ನಿಮ್ಮ ಮಾತಿನ ಮೇಲೆ ಎಚ್ಚರವಿರುವುದಿಲ್ಲ. ನೋಡಿ, ನನಗೆ ಪರವಾಯಿಲ್ಲ. ನನಗೆ ಅದೆಲ್ಲ ಅಭ್ಯಾಸವಾಗಿದೆ. ಆ ಹುಡುಗಿ ಎದುರಿಗೆ ಆಣೆ ಇಡಬೇಡಿ.

ಹಿಗ್ಗಿನ್ಸ್ : (ಕೋಪದಿಂದ) ನಾನು... ಆಣೆ ಇಡೋದು ? (ಒತ್ತಿ ಹೇಳುತ್ತ)

ನಾನು ಎಂದಿಗೂ ಆಣೆ ಇಟ್ಟು ಮಾತನಾಡುವುದಿಲ್ಲ. ಆ ಅಭ್ಯಾಸ ಕಂಡರೆ ನನಗೆ ಆಗುವುದಿಲ್ಲ. ನಿನ್ನ ತಲೆ....ನಿನ್ನ ಶನಿ ಅರ್ಥ ಏನು ?

ಪಿಯರ್ಸ್ : (ಚಲಿಸದೆ) ನಾನು ಅಂದದ್ದು ಇದೇ. ನೀವು ತುಂಬಾ ಹೆಚ್ಚಾಗಿ ಆಣೆ ಇಡುತ್ತೀರಿ. ಇಂತಹ ಮಾತನ್ನು ಆಡುತ್ತೀರಿ : ಸುಡ–ಬಿಡ–ತಲೆ–ತೋಕೆ ಎಂಬ ಮಾತುಗಳು. ಅಧ್ವಾನ್ನ.... ಹಾಳಾಯ್ತು.... ಈ ಪದಗಳನ್ನು ಹೇಳಿದರೆ ನನಗೇನೂ ಲಕ್ಷ್ಯವಿಲ್ಲ.

ಹಿಗ್ಗಿನ್ಸ್ : ಪಿಯರ್ಸ್, ಈ ಮಾತು ನಿನ್ನ ಬಾಯಿಂದಲೆ ? ನಿಜವಾಗಿ !

ಪಿಯರ್ಸ್ : (ಹೇಳಲೇ ಬೇಕೆಂದು) ಒಂದು ಮಾತನ್ನು ಮಾತ್ರ ನೀವು ಉಪಯೋಗಿಸಲೇ ಬಾರದು. ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಸ್ನಾನದ ನೀರು ತುಂಬಾ ಬಿಸಿಯಾಗಿದ್ದುದರಿಂದ ಆ ಹುಡುಗಿ ಈಗತಾನೆ ಅದನ್ನು ಉಪಯೋಗಿಸಿದಳು. 'ಬಾತ್' ಎಂಬ ಪದದ ಮೊದಲನೆ ಅಕ್ಷರದಿಂದ ಅದು ಮೊದಲಾಗುತ್ತದೆ. ಅವಳಿಗೇನು ಗೊತ್ತು ಪಾಪ ! ಅವಳ ತಾಯಿಯ ಮೊಳಕಾಲಿನ ಮೇಲಾಡುತ್ತ ಕಲಿತು ಬಂದದ್ದು. ನಿಮ್ಮ ಬಾಯಿಂದ ಕೇಳಬಾರದು, ಅಂಥದನ್ನು.

ಹಿಗ್ಗಿನ್ಸ್ : (ಉದಾತ್ತನಾಗಿ) ಆ ಮಾತನ್ನು ಯಾವ ದಿನವೇ ಆಗಲಿ ನಾನು ಉಚ್ಚರಿಸಿಯೇ ಇಲ್ಲ, ಪಿಯರ್ಸ್. (ಅವಳು ಅವನ ಕಡೆಗೆ ನೆಟ್ಟನೋಟದಿಂದ ನೋಡುತ್ತಾಳೆ. ಒಳಗೆ ಅಸ್ಥಿರವಾದ ಅಂತಃಸಾಕ್ಷಿ ಪೀಡಿಸುತ್ತಿದ್ದರೂ ಅದನ್ನು ಮರೆಯುವಂತೆ ನ್ಯಾಯಮೂರ್ತಿಯ ರೀತಿಯಲ್ಲಿ) ಅತಿಯಾಗಿ, ಅನಿವಾರ್ಯವಾಗಿ ಉದ್ರೇಕಗೊಂಡ ಸಮಯದಲ್ಲಿ ಹೊರತು—ಬಹುಶಃ, ಅಂತಹ ಸಮಯದಲ್ಲಿ ಅದು ಕ್ಷಮ್ಯವಲ್ಲವೆ ?

ಪಿಯರ್ಸ್ : ಈ ದಿನ ಬೆಳಗ್ಗೆ ತಾನೇ, ಸ್ವಾಮಿ, ನಿಮ್ಮ ಬೂಟ್ಸಿಗೆ—ಬೆಣ್ಣೆಗೆ–ಬ್ರೆಡ್ಡಿಗೆ ಅದನ್ನು ಬಳಸಿದಿರಿ.

ಹಿಗ್ಗಿನ್ಸ್ : ಓಹೊ. ಅದೋ, ಬರಿಯ ಶಬ್ದಾಲಂಕಾರ, ಪಿಯರ್ಸ್. ಕವಿ ಸಹಜ ಅದು.

ಪಿಯರ್ಸ್ : ಆಗಬಹುದು. ಯಾವ ಹೆಸರಿಂದಲಾದರೂ ಅದನ್ನು ಕರೆಯಿರಿ. ನಿಮ್ಮ ಬಾಯಿಂದ ಆ ಹುಡುಗಿ ಅದನ್ನು ಕೇಳದೆ ಇರಲಿ.

ಹಿಗ್ಗಿನ್ಸ್ : ಸರಿ....ಆಗಬಹುದು....ಆಗಬಹುದು....ಅಷ್ಟೆಯೇನು ?

ಪಿಯರ್ಸ್ : ಇಲ್ಲ ಸ್ವಾಮಿ. ಸ್ವಂತ ಶುಚಿಯ ವಿಚಾರದಲ್ಲಿ ಈ ಹುಡುಗಿಯ ಸಂಬಂಧದಲ್ಲಿ ನಾವು ವಿಶೇಷ ಆಸ್ಥೆ ವಹಿಸಬೇಕಾಗುತ್ತೆ.

ಹಿಗ್ಗಿನ್ಸ್ : ಓಹೋ. ಖಂಡಿತವಾಗಿ. ನೀನು ಹೇಳುವುದು ಸರಿ. ಅದು ಬಹು ಮುಖ್ಯ.

ಪಿಯರ್ಸ್ : ಉಡುಪಿನ ವಿಷಯದಲ್ಲಿ ಅವಳು ಸೋಮಾರಿಯಾಗದಂತೆ, ಸಾಮಾನುಗಳನ್ನಿಡುವುದರಲ್ಲಿ ಒಪ್ಪ, ಓರಣ ತಪ್ಪದಂತೆ—

ಹಿಗ್ಗಿನ್ಸ್ : (ಅವಳ ಕಡೆಯೇ ಗಂಭೀರವಾಗಿ ಬರುತ್ತ) ಹೌದೂ....ಹೌದು. ಅದರ ಕಡೆಗೆ ನಿನ್ನ ಗಮನ ನಾನೇ ಸೆಳೆಯಬೇಕು ಎಂದಿದ್ದೆ. (ಪಿಕರಿಂಗ್ ಬಳಿಗೆ ಹೋಗುತ್ತಾನೆ. ಆತನು ಈ ಸಂಭಾಷಣೆಯನ್ನು ತುಂಬಾ ಉಲ್ಲಾಸದಿಂದ ಕೇಳುತ್ತಿದ್ದಾನೆ.) ಇಂಥ ಸಣ್ಣ ಸಂಗತಿಗಳೇ ಮುಖ್ಯವಾಗುತ್ತವೆ, ಪಿಕರಿಂಗ್. ಪೆನ್ಸನ್ನು ಎಚ್ಚರವಾಗಿ ನೋಡಿಕೊಂಡರೆ ಪೌಂಡುಗಳು ತಮ್ಮ ಪಾಡನ್ನು ತಾವೇ ನೋಡಿಕೊಳ್ಳುತ್ತವೆ ಎಂಬ ಮಾತು ಹಣದ ವಿಷಯದಲ್ಲಿ ಎಷ್ಟು ನಿಜವೊ ನಮ್ಮ ಅಭ್ಯಾಸಗಳ ವಿಷಯದಲ್ಲಿಯೂ ಅಷ್ಟೇ ನಿಜ. (ನೆಲಗಂಬಳಿಯ ನಡುವೆ ಬಂದು ತಾನು ಈ ವಿಷಯದಲ್ಲಿ ನಿರ್ದುಷ್ಟನೆಂಬಂತೆ ನಿಲ್ಲುತ್ತಾನೆ.)

ಪಿಯರ್ಸ್ : ಹಾಗೆಯೇ, ಸ್ವಾಮಿ : ಬೆಳಗಿನ ಫಲಾಹಾರಕ್ಕೆ ರಾತ್ರಿ ತೊಟ್ಟಿದ್ದ ಉದ್ದ ನಿಲುವಂಗಿಯಲ್ಲಿ ಬರಬೇಡಿ. ಅದನ್ನೇ ಹೆಚ್ಚಾಗಿ ಕೈ ಒರಸಿಕೊಳ್ಳಲು ಅಷ್ಟು ಉಪಯೋಗಿಸಬಾರದು. ಎಲ್ಲ ಪದಾರ್ಥಗಳನ್ನೂ ಒಂದೇ ಪ್ಲೇಟಿಗೆ ಹಾಕಿಕೊಂಡು ತಿನ್ನಬೇಡಿ. ಗಂಜಿ ತಟ್ಟೆಯನ್ನು ಕೈಯಿಂದ ಎತ್ತಿ ಚೊಕ್ಕಟವಾಗಿರುವ ಮೇಜಿನ ಬಟ್ಟೆಯ ಮೇಲೆ ಇಡದಂತೆ ನೋಡಿಕೊಂಡರೆ ಹುಡುಗಿಗೆ ಒಳ್ಳೆಯ ಮೇಲ್ಪಂಕ್ತಿ ಆಗುತ್ತದೆ. ಕಳೆದ ವಾರ ಜ್ಯಾಮಿನಲ್ಲಿದ್ದ ಮೀನಿನ ಎಲುಬು ಗಂಟಲಿಗೆ ಸಿಕ್ಕಿಕೊಂಡು ತುಂಬಾ ಗಾಸಿಪಟ್ಟಿರಿ.

ಹಿಗ್ಗಿನ್ಸ್ : (ಕದನದಲ್ಲಿ ಸೋತವನಂತೆ, ನೆಲಗಂಬಳಿಯಿಂದ ಹೊರಟು ಪಿಯಾನೊ ಬಳಿಗೆ ಹಿಂದಿರುಗುವನು.) ಮನಸ್ಸಿನಲ್ಲಿ ಬೇರೆ ಏನನ್ನೊ ಯೋಚನೆ ಮಾಡುತ್ತ ಇಂಥಾದ್ದನ್ನು ನಾನು ಮಾಡಿರಬಹುದು. ಆದರೆ ವಾಡಿಕೆಯಾಗಿ ಖಂಡಿತ ಮಾಡುವುದಿಲ್ಲ. (ರೇಗುತ್ತ) ಹಾಗೇ, ನೋಡು ಪಿಯರ್ಸ್, ನನ್ನ ಮೇಲಂಗಿಯಲ್ಲಿ ಸುಡುಗಾಡು 'ಬೆನ್‌ಸೀನ್' ವಾಸನೆ ಬರುತ್ತಿದೆ.

ಪಿಯರ್ಸ್ : ಇರಬಹುದು ಹಿಗ್ಗಿನ್ಸ್ ಅವರೆ,—ವಾಸನೆ ಬರುತ್ತೆ-ತಮ್ಮ ಬೆರಳನ್ನು ಒರಸಿಕೊಂಡರೆ—

ಹಿಗ್ಗಿನ್ಸ್ : (ಕಿರಿಚುತ್ತ) ಓಹೋ... ಆಗಲಿ....ಆಗಲಿ...ಪಿಯರ್ಸ್. ಇನ್ನು ಮೇಲೆ, ನಾಳೆಯಿಂದ ನನ್ನ ತಲೆ ಕೂದಲಿಗೇ ಒರಸಿಕೊಳ್ಳುತ್ತೇನೆ.

ಪಿಯರ್ಸ್ : ನನ್ನ ಮೇಲೆ ಕೋಪಿಸಿಕೊಳ್ಳಬಾರದು, ಸ್ವಾಮಿ.

ಹಿಗ್ಗಿನ್ಸ್ : (ಅಂಥ ಕೆಟ್ಟ ಭಾವನೆ ತಾನು ಇನ್ನೊಬ್ಬರಲ್ಲಿ, ತನ್ನ ವಿಷಯದಲ್ಲಿ ಉಂಟು ಮಾಡಬಲ್ಲನೆಂಬುದು ತಿಳಿದು, ಧಕ್ಕೆಗೊಂಡು,) ಇಲ್ಲ.... ಇಲ್ಲ.... ಇಲ್ಲ... ಪಿಯರ್ಸ್. ನೀನು ಈಗ ಹೇಳಿದ್ದೆಲ್ಲ ಸರಿ. ಆ ಹುಡುಗಿಯ ಎದುರಿಗೆ ಬಹು ಎಚ್ಚರಿಕೆಯಿಂದ ಇರುತ್ತೇನೆ. ಅಷ್ಟೇ ತಾನೆ ?

ಪಿಯರ್ಸ್ : ಇಲ್ಲ ಸ್ವಾಮಿ. ನೀವು ವಿದೇಶದಿಂದ ತಂದ ಜಪಾನಿ ಉಡುಪಿನಲ್ಲಿ

ಕೆಲವನ್ನು ಅವಳು ಉಪಯೋಗಿಸಬಹುದೇನು ? ಅವಳ ಹಳೆಯ ಬಟ್ಟೆಗಳನ್ನು ಪುನಃ ಅವಳಿಗೆ ಹಾಕಲಾರೆ.

ಹಿಗ್ಗಿನ್ಸ್ : ಹೂಂ, ಖಂಡಿತವಾಗಿ. ಬೇಕಾದ್ದು ಮಾಡು ಪಿಯರ್ಸ್. ಆಯಿತಲ್ಲವೊ ?

ಪಿಯರ್ಸ್ : ಕ್ಷಮಿಸಬೇಕು ಸ್ವಾಮಿ, ಅಷ್ಟೇ ! (ಹೊರಟು ಹೋಗುತ್ತಾಳೆ.)

ಹಿಗ್ಗಿನ್ಸ್ : ನೋಡಿ ಪಿಕರಿಂಗ್, ನನ್ನ ವಿಷಯದಲ್ಲಿ ಆಕೆಗೆ ಅತಿವಿಚಿತ್ರವಾದ ಅಭಿಪ್ರಾಯಗಳಿವೆ. ನಾನಿದ್ದೇನೆ : ಹೆಚ್ಚು ಸಂಕೋಚದವನು : ದಾಷ್ಟಿಕ ಇಲ್ಲದವನು. ನನ್ನಲ್ಲಿಯೇ ಹೆಚ್ಚು ನಂಬಿಕೆ ಇಲ್ಲದಿರುವ ಮನುಷ್ಯ.... ಪ್ರೌಢ ವಯಸ್ಸಿಗೆ ಬಂದ ಇತರರಂತೆ ನಿಜವಾಗಿ ದರ್ಪ ಎಂದರೇನೆಂಬುದೇ ನನಗೆ ತಿಳಿಯದು. ಆದರೂ ಆಕೆಯ ಮನಸ್ಸಿನಲ್ಲಿ ಖಚಿತವಾಗಿಹೋಗಿದೆ : ನಾನು ದಬ್ಬಾಳಿಕೆಯ ಮನುಷ್ಯ, ಉದ್ಧತನಾಗಿ ನಡೆಯತಕ್ಕ ಮನುಷ್ಯ, ನಿರಂಕುಶ ಎಂದು. ಇದಕ್ಕೆ ಕಾರಣ ಗೊತ್ತಾಗುವುದಿಲ್ಲ. (ಮಿಸೆಸ್ ಪಿಯರ್ಸ್ ಹಿಂದಿರುಗಿ ಬರುತ್ತಾಳೆ.)

ಪಿಯರ್ಸ್ : ಕೇಳಬೇಕು ಸ್ವಾಮಿ. ತೊಡಕು ಈಗಲೇ ಮೊದಲಾಗುವಂತಿದೆ. ದೂಳು ಹೊಡೆಯುವ ಮನುಷ್ಯನಂಥ 'ಆಲ್‌ಫ್ರೆಡ್ ಡೂಲಿಟ್ಲ್' ಎಂಬವನು ನಿಮ್ಮನ್ನು ಕಾಣಬೇಕಂತೆ. ನಿಮ್ಮಲ್ಲಿ ಅವನ ಮಗಳಿದ್ದಾಳಂತೆ.

ಪಿಕರಿಂಗ್ : (ಏಳುತ್ತ) ಫ್ಯೂ...ಸರಿಹೋಯಿತು. (ನೆಲಗಂಬಳಿ ಕಡೆಗೆ ಹೋಗುತ್ತಾನೆ.)

ಹಿಗ್ಗಿನ್ಸ್ : (ಒಡನೆಯೆ) ಆ ಪಟಿಂಗನನ್ನು ಕಳಿಸಿಕೊಡು.

ಪಿಯರ್ಸ್ : ಉಂ......ಉಂ......ಸರಿ, ಸ್ವಾಮಿ (ಹೊರಟು ಹೋಗುವಳು.)

ಪಿಕರಿಂಗ್ : ಅವನು ಪಟಿಂಗನಲ್ಲದೆ ಇರಬಹುದು ಹಿಗ್ಗಿನ್ಸ್.

ಹಿಗ್ಗಿನ್ಸ್ : ನಾನ್‌ಸೆನ್ಸ್ ; ಅವನು ಪಟಿಂಗನೇ ಸರಿ.

ಪಿಕರಿಂಗ್ : ಹೌದೋ ಅಲ್ಲವೊ ; ಅವನು ಸ್ವಲ್ಪ ತಂಟೆ ತಕರಾರು—ಮಾಡುತ್ತಾನೇನೊ ಅನ್ನಿಸುತ್ತೆ.

ಹಿಗ್ಗಿನ್ಸ್ : (ವಿಶ್ವಾಸದಿಂದ) ಹಾಗೆ ಏನೂ ಮಾಡಲಾರ. ತೊಂದರೆಯೇನಾದರೂ ಆಗುವಹಾಗಿದ್ದರೆ ನಾನು ಅವನಿಗೆ ತಂಟೆ ಮಾಡಬೇಕೇ ಹೊರತು, ಅವನಿಂದ ನನಗೆ ಏನೂ ತಂಟೆ ಆಗುವುದಿಲ್ಲ. ಅವನಲ್ಲಿ ಏನಾದರೂ ಕೌತುಕದ ಸಂಗತಿ ಸಿಕ್ಕೀತು ?

ಪಿಕರಿಂಗ್ : ಹುಡುಗಿಯ ವಿಷಯದಲ್ಲಿಯೆ ?

ಹಿಗ್ಗಿನ್ಸ್ : ಅಲ್ಲ......ಅವನ ಭಾಷೆಯಲ್ಲಿ.

ಪಿಕರಿಂಗ್ : ಓ......ಹ್......

[ಮಿಸೆಸ್ ಪಿಯರ್ಸ್ ಬಾಗಿಲಿಂದ 'ಡೂಲಿಟ್ಲ್' ಎಂದು ತಿಳಿಸಿ ಅವನನ್ನು ಪ್ರವೇಶ ಗೊಳಿಸಿ ಹೊರಟು ಹೋಗುತ್ತಾಳೆ.]

ಡೂಲಿಟ್ಲ್ : (ಬಾಗಿಲಲ್ಲಿ ನಿಂತು ಆ ಇಬ್ಬರು ಸಭ್ಯ ಮನುಷ್ಯರಲ್ಲಿ ತನಗೆ ಬೇಕಾದವರು ಯಾರು ಎಂಬ ಸಂದೇಹದಲ್ಲಿ,) 'ಪ್ರೊಫೆಸರ್ ಹಿಗ್ಗಿನ್ಸ್'?

ಹಿಗ್ಗಿನ್ಸ್ : ನಾನು......ನಮಸ್ಕಾರ, ಕುಳಿತುಕೊಳ್ಳಿ.

ಡೂಲಿಟ್ಲ್ : ನಮಸ್ಕಾರ ಮಾಸ್ವಾಮಿ. (ದಂಡಾಧಿಕಾರಿಯಂತೆ ಕುಳಿತುಕೊಳ್ಳುವನು.) ಒಂದು ದೊಡ್ಡ ಇಷಯ ಕುರ್ತು ಮಾತಾಡೋಕೆ ಅಂತ ಬಂದಿದ್ದೇನೆ ಸ್ವಾಮಿ.

ಹಿಗ್ಗಿನ್ಸ್ : (ಪಿಕರಿಂಗಿಗೆ) ಸಾಕಿ ಬೆಳೆದದ್ದು 'ಹೌನ್ಸ್‌ಲೊ', ತಾಯಿ 'ವೆಲ್ಷ್' ಎಂದು ಕೊಂಡಿದ್ದೇನೆ. (ಡೂಲಿಟ್ಲ್ ಆಶ್ಚರ್ಯದಿಂದ ಬಾಯಿ ತೆರೆಯುತ್ತಾನೆ. ಹಿಗ್ಗಿನ್ಸ್ ಮುಂದುವರಿದು) ನಿಮಗೇನು ಬೇಕು ಡೂಲಿಟ್ಲ್ ?

ಡೂಲಿಟ್ಲ್ : (ಹೆದರಿಸುವವನಂತೆ) ನನಗೆ ಬೇಕಾದ್ದು ನನ್ಮಗಳು : ಗೊತ್ತಾಯ್ತೆ ?

ಹಿಗ್ಗಿನ್ಸ್ : ಓಹೊ, ನಿಜವಾಗಿ ಬೇಕು ! ನೀವು ಅವಳ ತಂದೆ ಅಲ್ಲವೆ ? ಇನ್ನಾರಿಗಾದರೂ ಅವಳು ಬೇಕಾದೀತು ಎಂದು ನೀವು ಎಣಿಸುವುದಿಲ್ಲ ಅಲ್ಲ ! ಸಂಸಾರದ ಮಮತೆ ನಿಮ್ಮಲ್ಲಿ ಕಿಡಿಯಷ್ಟಾದರೂ ಉಳಿದಿದೆ ಎಂದು ನೋಡಿ ಸಂತೋಷವಾಗುತ್ತದೆ. ಮಹಡಿಯ ಮೇಲೆ ಇದ್ದಾಳೆ, ಈಗಲೇ ಕರೆದುಕೊಂಡು ಹೋಗಿ.

ಡೂಲಿಟ್ಲ್ : (ಭಯಪಟ್ಟು ಮೇಲಕ್ಕೆದ್ದು) ಏನು ?

ಹಿಗ್ಗಿನ್ಸ್ : ಅವಳನ್ನು ಕರೆದುಕೊಂಡು ಹೋಗಿಬಿಡಿ. ನಿಮ್ಮ ಪರವಾಗಿ, ಅವಳನ್ನು ಇಟ್ಟುಕೊಳ್ಳುತ್ತೇನೆ ಎಂದು ತಿಳಿದಿದ್ದೀರೇನು ?

ಡೂಲಿಟ್ಲ್ : (ಆಕ್ಷೇಪಣೆಯ ಧ್ವನಿಯಲ್ಲಿ) ಅಲ್ಲ ಅಲ್ಲ, ಇಲ್ಲಿ ನೋಡಿ, ಸ್ವಾಮಿ. ಇದು ಯುಕ್ತವೊ ? ಹೀಗೆ ನನ್ನಂಥ ಮನುಷ್ಯನಿಗೆ ನಷ್ಟ ಉಂಟುಮಾಡೋದು ನ್ಯಾಯ ಅಂತೀರ ? ನೀವೇ ಹೇಳಿ. ಹುಡುಗಿ ನನಗೆ ಸೇರಿದವಳು. ನಿಮಗೆ ಸಿಕ್ಕಿದಳು. ನನ್ನ ಸ್ಥಾನ ಯಾವುದು ? (ಮತ್ತೆ ಕುಳಿತುಕೊಳ್ಳುತ್ತಾನೆ.)

ಹಿಗ್ಗಿನ್ಸ್ : ನಿಮ್ಮ ಮಗಳು ಸೊಕ್ಕಿನಿಂದ ನನ್ನ ಮನೆಗೆ ಬಂದಳು. ಹೂವಿನ ಅಂಗಡಿಯಲ್ಲಿ ತಾನು ಕೆಲಸ ಸಂಪಾದಿಸಿಕೊಳ್ಳಬೇಕೆಂದೂ, ಸರಿಯಾಗಿ ಮಾತನಾಡಲು ತನಗೆ ಕಲಿಸಿಕೊಡಬೇಕೆಂದೂ ನನ್ನನ್ನು ಕೇಳಿದಳು. ಈ ದೊಡ್ಡ ಮನುಷ್ಯರು, ನನ್ನ ಮನೆ ವಾರ್ತೆಯು ಈಕೆ ಆಗಿಂದಲೂ ಇಲ್ಲಿಯೇ ಇದ್ದಾರೆ. (ಅವನನ್ನು ಬೆದರಿಸುವ ಧ್ವನಿಯಲ್ಲಿ) ನಿಮಗೆ ಇಲ್ಲಿಗೆ ಬರುವುದಕ್ಕೆ ಎಷ್ಟು ಧೈರ್ಯ ? ನನ್ನ ಮೇಲೆ ಅಪಖ್ಯಾತಿ ಹೊರಿಸುವುದಕ್ಕಾಗಿ, ಉದ್ದೇಶಪೂರ್ವಕ ನೀವು ಅವಳನ್ನು ಇಲ್ಲಿಗೆ ಕಳಿಸಿದ್ದೀರಿ !

ಡೂಲಿಟ್ಲ್ : (ವಿರೋಧಿಸುವ ಧ್ವನಿಯಲ್ಲಿ) ಇಲ್ಲ, ಸ್ವಾಮಿ.

ಹಿಗ್ಗಿನ್ಸ್ : ಕಳಿಸಿರಲೇಬೇಕು. ಇಲ್ಲದೆ ಇದ್ದರೆ ನಿಮಗೆ ಅವಳು ಇಲ್ಲಿದ್ದಾಳೆ ಎಂದು ಹೇಗೆ ಗೊತ್ತಾಯಿತು ?

ಡೂಲಿಟ್ಲ್ : ಮನುಷ್ಯರ್ನ ಹೀಗೆ ಹಿಡ್ಕೋಬಾರ್ದು, ಸ್ವಾಮಿ.

ಹಿಗ್ಗಿನ್ಸ್ : ಪೋಲೀಸರು ನಿಮ್ಮನ್ನು ಹಿಡಿದುಕೊಂಡು ಹೋಗುತ್ತಾರೆ. ಇದೊಂದು ತಂತ್ರ. ಕೆಟ್ಟ ಬೆದರಿಕೆ ಹಾಕಿ ನನ್ನಿಂದ ಹಣ ಸುಲಿಯುವುದಕ್ಕೆ ಮಾಡಿರುವ ತಂತ್ರ. (ಟೆಲಿಫೋನಿನ ಬಳಿಗೆ ಹೋಗಿ ವಿಳಾಸಗಳ ಪುಸ್ತಕದ ಹಾಳೆಯನ್ನು ತಿರುವುತ್ತಾನೆ.)

ಡೂಲಿಟ್ಲ್ : ನಿಮ್ಮಿಂದ ಒಂದು ಹಿತ್ತಾಳೆ ಫಾರ್ದಿಂಗ್ ಕೇಳಿದ್ದೇನೆಯೆ ನಾನು ? ಈ ದೊಡ್ಡ ಮನುಷ್ಯರೂ ಹೇಳ್ಲಿ : ಹಣದ ವಿಷಯ ಒಂದು ಮಾತಾಡಿದ್ದೇನೆಯೆ !

ಹಿಗ್ಗಿನ್ಸ್ : (ಪುಸ್ತಕವನ್ನು ಆಚೆಗೆ ಹಾಕಿ, ಡೂಲಿಟ್ಲ್ ಕಡೆಗೆ ಬಂದು) ಇನ್ನು ಏತಕ್ಕಾಗಿ ಬಂದಿರಿ ?

ಡೂಲಿಟ್ಲ್ : (ಸವಿಯಾಗಿ) ಏತಕ್ಕಾಗಿ ಒಬ್ಬರು ಬರ್ತಾರೆ ಹೇಳಿ ? ಮನುಷ್ಯರ ಹಾಗೆ ಮಾತಾಡ್ಸಿ, ಸ್ವಾಮಿ.

ಹಿಗ್ಗಿನ್ಸ್ : (ನಿರಸ್ತ್ರನಾಗಿ) ಆಲ್‌ಫ್ರೆಡ್, ನೀನು ಅವಳನ್ನು ಈ ಕೆಲಸಕ್ಕೆ ಹಚ್ಚಿದೆಯ ?

ಡೂಲಿಟ್ಲ್ : ನಮ್ಮಪ್ಪ...ನಾನು ಹಾಗೆ ಮಾಡಲ್ಲ ; ಬೈಬಲ್ ಮೇಲೆ ಕೈಯಿಟ್ಟು ಪ್ರಮಾಣ ಮಾಡ್ತೇನೆ. ಎರಡು ತಿಂಗಳ ಮೇಲಾಯ್ತು, ಆ ಹುಡ್ಗೀನ ಕಂಡು.

ಹಿಗ್ಗಿನ್ಸ್ : ಹಾಗಾದರೆ ಅವಳು ಇಲ್ಲಿದ್ದಾಳೆ ಎಂದು ನಿಮಗೆ ಹೇಗೆ ಗೊತ್ತಾಯಿತು ?

ಡೂಲಿಟ್ಲ್ : (ಬಹು ಇಂಪಾಗಿ, ಬಹು ಚಿಂತಾಜಡವಾಗಿ) ಒಂದ್ಮಾತಾಡೋಕೆ ಅವಕಾಶ ಕೊಟ್ರೆ ಹೇಳ್ತೀನೆ. ಹೇಳ್ಬೇಕೂಂತಿದ್ದೇನೆ. ಹೇಳೋಣಾಗಿದ್ದೇನೆ. ಹೇಳೋಕೆ ಕಾಯ್ತಿದ್ದೇನೆ.

ಹಿಗ್ಗಿನ್ಸ್ : ಪಿಕರಿಂಗ್, ಈ ಮನುಷ್ಯನಿಗೆ ಸಹಜ ವಾಗ್ಮಿತೆಯಿದೆ. ಕಾಡಹಕ್ಕಿಗಳು ಸಹಜ ಲಯಯಲ್ಲಿ ನುಡಿಯುವಂತೆ ಹೇಗೆ ಮಾತನಾಡುತ್ತಾನೆ ನೋಡಿ. ಹೇಳ ಬೇಕೂಂತ ಇದ್ದೇನೆ. ನಿಮಗೆ ಹೇಳೋಣಾಗಿದ್ದೇನೆ, ಹೇಳೋಕೆ ಕಾಯುತ್ತಿದ್ದೇನೆ. ಭಾವನಾ ಪೂರ್ಣವಾದ ಅವನ ವೆಲ್ಷ್ ಬುಡಕಟ್ಟಿನ ಲಕ್ಷಣ ಅದು. ಅವನಲ್ಲಿರುವ ಮೋಸ ಪ್ರವೃತ್ತಿಗೂ ಅಪ್ರಮಾಣಿಕತೆಗೂ ಅದೇ ಕಾರಣ.

ಪಿಕರಿಂಗ್ : ಹಿಗ್ಗಿನ್ಸ್, ದಯವಿಟ್ಟು, ಹಿಗ್ಗಿನ್ಸ್, ಸ್ವಂತವಾಗಿ ನಾನೂ ಪಡುನಾಡಿಗೆ ಸೇರಿದವನು. (ಡೂಲಿಟ್ಲ್‌ಗೆ) ಹುಡುಗಿ ಇಲ್ಲಿದ್ದಾಳೆ ಎಂಬುದು ನಿಮಗೆ ಹೇಗೆ ಗೊತ್ತಾಯಿತು ನೀವು ಅವಳನ್ನು ಇಲ್ಲಿಗೆ ಕಳಿಸದೆ ಇದ್ದರೆ ?

ಡೂಲಿಟ್ಲ್ : ಇದು ಹೀಗಾಯ್ತು ಸ್ವಾಮಿ : ನನ್ನ ಮಗಳು ಒಬ್ಬ ಹುಡುಗನ್ನ ಕರ್ಕೊಂಡು ಖುಷಿಯಿಂದ ತಿರ್ಗಾಡೋಕೆ ಹೊರಟ್ಲು, ಟ್ಯಾಕ್ಸೀಲಿ. ಅವನು

ಅವಳ ಮನೆಯ ಮಾಲೀಕನ ಮಗ. ಮನೆಗೆ ಹಿಂತಿರುಗುವಾಗ ಪುನಃ ಟ್ಯಾಕ್ಸೀಲಿ ಕರ್ಕೊಂಡ್ಹೋದಾಳೂಂತ ಅವನು ಅಲ್ಲಿಯೇ ನಿಂತಿದ್ದ. ಅವಳು ಇಲ್ಲಿರಬೇಕೆಂಬುದು ನಿಮ್ಮಿಷ್ಟವೆಂಬುದನ್ನು ಕೇಳಿ ತನ್ನ ಸಾಮಾನು ತೆಗೆದುಕೊಂಡು ಬಾ ಎಂದು ಅವನ್ನ ಹಿಂದಕ್ಕೆ ಕಳಿಸಿದಳು. ಲಾಂಗ್ ಏಕರ್ ಎಂಡೆಲ್ ರಸ್ತೆಗಳ ಮೂಲೆಯಲ್ಲಿ ನಾನು ಅವನ್ನ ಕಂಡೆ.

ಹಿಗ್ಗಿನ್ಸ್ : ಪಾನಕದ ಅಂಗಡೀಲಿ ಅಲ್ಲ......!

ಡೂಲಿಟ್ಲ್ : ಬಡವರ ಕ್ಲಬ್ ಸ್ವಾಮಿ ಅದು...ನಾನ್ಯಾಕೆ ಹೋಗ್ಬಾರ್ದು ?

ಪಿಕರಿಂಗ್ : ತನ್ನ ಕತೆಯನ್ನು ಅವನು ಹೇಳಲಿ ಬಿಡಿ, ಹಿಗ್ಗಿನ್ಸ್.

ಡೂಲಿಟ್ಲ್ : ಏನ್ ನಡೀತು ಅಂತ ಅವನು ನನಗೆ ಹೇಳ್ದ. ಈಗ ನಿಮ್ಮನ್ನ ಪ್ರಶ್ನೆ ಕೇಳ್ತೀನೆ. ತಂದೆಯಾದ ನನ್ನ ಕರ್ತವ್ಯ ಏನು ಅಂತ ? ಹುಡುಗನಿಗೆ ನಾ ಹೇಳ್ದೆ, ಅವಳ ಸಾಮಾನನ್ನು ನನ್ನ ಕೈಗೆ ತಂದು ಕೊಡು ಎಂದು.

ಪಿಕರಿಂಗ್ : ಅದನ್ನು ತರುವುದಕ್ಕೆ ನೀವೇ ಯಾತಕ್ಕೆ ಹೋಗಲಿಲ್ಲ ?

ಡೂಲಿಟ್ಲ್ : ಮನೆಯ ಯಜಮಾನಿತಿ ನನ್ನನ್ನು ನೆಚ್ಚಿ ಅದನ್ನು ಕೊಡ್ತಿರಲಿಲ್ಲ. ಅಂಥ ಹೆಂಗ್ಸು ಅವ್ಳು : ನಿಮಗೆ ತಿಳ್ದಿರಬೇಕು. ನಾನೇ ಒಂದು ಪೆನ್ನಿ ಕೊಟ್ಟು ಹುಡುಗನ ಕೈಯಿಂದ ಅದನ್ನು ತೊಗೋಬೇಕಾಯ್ತು. ಆ ಪಟಿಂಗನಿಗೂ ನನ್ನಲ್ಲಿ ನಂಬ್ಕೆ ಯಿರ್ಲಿಲ್ಲ. ನಿಮಗೆ ಉಪಕಾರವಾಗ್ಲಿ ಎಂದು ನಾನೇ ತಂದ್ಕೊಟ್ಟೆ ; ನಾ ಮಾಡಿದ್ದು ನಿಮ್ಗೆ ಒಪ್ಪಿತ ಆಗ್ಲೀ ಎಂದು ; ಅಷ್ಟೇ.

ಹಿಗ್ಗಿನ್ಸ್ : ಎಷ್ಟು-ಸಾಮಾನು ?

ಡೂಲಿಟ್ಲ್ : ಒಂದು ವಾದ್ಯ ಸ್ವಾಮಿ, ಕೆಲವು ಪಟಗಳು, ಸ್ವಲ್ಪ ಒಡವೆ, ಒಂದು ಹಕ್ಕಿ ಪಂಜರ. ಬಟ್ಟೆಗಳೇನೂ ಬೇಡಾಂತ ಹೇಳಿದ್ಲು. ಅದನ್ನು ಕೇಳಿ ನನಗೇನನ್ನಿಸ್ಬೇಕು ಸ್ವಾಮಿ ? ತಂದೆಯಾದ ನನಗೆ ಹೇಗನ್ನಿಸಬೇಕು ಎಂಬುದನ್ನು ನೀವೇ ಹೇಳಿ.

ಹಿಗ್ಗಿನ್ಸ್ : ಸಾವಿಗಿಂತ ಕೀಳಾದ ಸ್ಥಿತಿಯಿಂದ ಅವಳನ್ನು ಉದ್ಧಾರ ಮಾಡುವುದಕ್ಕೆ ಬಂದಿರಿ ಎನ್ನಿ. ಹುಂ ?

ಡೂಲಿಟ್ಲ್ : (ಒಪ್ಪುವವನಂತೆ, ತನ್ನ ಅರ್ಥ ಚೆನ್ನಾಗಿ ಗೊತ್ತಾದುದಕ್ಕೆ ಮನಸ್ಸು ಹಗುರವಾಗಿ) ಹೌದು, ಸ್ವಾಮಿ, ನೀವ್ಹೇಳಿದ್ದು ಸರಿ.

ಪಿಕರಿಂಗ್ : ಅವಳನ್ನು ಕರೆದುಕೊಂಡು ಹೋಗಬೇಕೆಂದಿದ್ದರೆ ಈ ಸಾಮಾನನ್ನೆಲ್ಲ ಏಕೆ ತಂದಿರಿ ?

ಡೂಲಿಟ್ಲ್ : ಅವಳನ್ನು ಕರೆದುಕೊಂಡು ಹೋಗುವ ವಿಷಯವಾಗಿ ಈಗ ಒಂದ್ಮಾತಾದ್ರೂ ಹೇಳಿದ್ದೇನೆಯೆ ? ಹೇಳಿ, ನೀವೆ ?

ಹಿಗ್ಗಿನ್ಸ್ : (ನಿರ್ಧಾರದಿಂದ) ನೀವು ಅವಳನ್ನು ಕರೆದುಕೊಂಡು ಹೋಗಲೇಬೇಕು. ಈ ಕ್ಷಣ. ಬೇಗ. (ಒಲೆಯ ಬಳಿಗೆ ಹೋಗಿ ಗಂಟೆ ಬಾರಿಸುತ್ತಾನೆ.)

ಡೂಲಿಟ್ಲ್ : (ಏಳುತ್ತ) ಅಲ್ಲ, ಸ್ವಾಮಿ. ಹಾಗೆಲ್ಲಾ ಹೇಳ್ಬೇಡಿ. ನನ್ನ ಮಗಳ ಅದೃಷ್ಟದ ದಾರಿಯಲ್ಲಿ ಅಡ್ಡ ನಿಲ್ಲೊ ಮನುಷ್ಯ ಅಲ್ಲ, ನಾನು. ಜೀವನದಲ್ಲಿ ಅವಳ ಭಾಗ್ಯ ಈಗ ತೆರೆಯುವಂತಿದೆ, ಎನ್ನಬಹುದು : ನಾನು......

[ಪಿಯರ್ಸ್ ಬಾಗಿಲನ್ನು ತೆರೆದು ಅಪ್ಪಣೆಗಾಗಿ ಕಾದಿದ್ದಾಳೆ]

ಹಿಗ್ಗಿನ್ಸ್ : ಪಿಯರ್ಸ್, ಈತ ಎಲಿಸಾ ತಂದೆ. ಅವಳನ್ನು ಕರೆದುಕೊಂಡು ಹೋಗ ಬೇಕೆಂದು ಬಂದಿದ್ದಾನೆ. ಅವಳನ್ನು ಅವನಿಗೆ ಒಪ್ಪಿಸು. (ಪಿಯಾನೊ ಬಳಿಗೆ ಹೋಗಿ, ಈ ಹಾಳು ಕೆಲಸದಿಂದ ಪೂರ್ತಿ ಕೈ ತೊಳೆಯುವವನಂತೆ ನಿಂತಿದ್ದಾನೆ.)

ಡೂಲಿಟ್ಲ್ : ನನ್ನನ್ನು ತಪ್ಪಾಗಿ ಅರ್ಥ ಮಾಡ್ಕೊಂಡಿದ್ದೀರಿ. ನಾನು ಹೇಳೋದನ್ನ ಕೇಳಿ.

ಪಿಯರ್ಸ್ : ಆತ ಕರೆದುಕೊಂಡು ಹೋಗಲಾರ, ಹಿಗ್ಗಿನ್ಸವರೆ ; ಹೇಗೆ ತಾನೆ ಕರೆದು ಕೊಂಡು ಹೋದಾನು ? ಅವಳು ಉಟ್ಟಿದ್ದ ಬಟ್ಟೆಯನ್ನು ಸುಟ್ಟುಬಿಡು ಎಂದು ಹೇಳಿದಿರಿ.

ಡೂಲಿಟ್ಲ್ : ಸರಿಯಾಯ್ತಲ್ಲ, ನಾನು ಬೀದೀಲಿ ಹುಡ್ಗೀನ, ಒಂದು ಕೋತಿಮರೀನ ಎತ್ಕೊಂಡ್ಹೋದ್ಹಾಗೆ ಎತ್ತಿಕೊಂಡು ಹೋಗೋಕಾಗುತ್ತೆಯೆ ? ನೀವೇ ಹೇಳಿ.

ಹಿಗ್ಗಿನ್ಸ್ : ನಿಮ್ಮ ಮಗಳು ನಿಮಗೆ ಬೇಕು ಎಂದು ನೀವೇ ಹೇಳಿದಿರಿ. ಅವಳಿಗೆ ಬಟ್ಟೆ ಇಲ್ಲದಿದ್ರೆ, ಇಲ್ಲಿಂದ ಹೋಗಿ ಸ್ವಲ್ಪ ಬಟ್ಟೆ ಕೊಂಡು ತನ್ನಿ.

ಡೂಲಿಟ್ಲ್ : (ನಿರಾಶನಂತೆ) ಅವಳಿಲ್ಲಿಗೆ ಬಂದಾಗ ತೊಟ್ಟಿದ್ದ ಬಟ್ಟೆಗಳೆಲ್ಲಿ ? ಅವನ್ನು ನಾನು ಸುಟ್ಟೆನೊ ಅಥವಾ ನಿಮ್ಮ ಈ ಶ್ರೀಮತಿಯವರೊ ?

ಪಿಯರ್ಸ್ : ಎಚ್ಚರಿಕೆ ಇರಲಿ. ನಾನು ಇಲ್ಲಿ ಮನೆವಾರ್ತೆ ಹೆಂಗಸು. ನಿಮ್ಮ ಮಗಳಿಗಾಗಿ ಸ್ವಲ್ಪ ಬಟ್ಟೆಗಳಿಗೆ ಹೇಳಿ ಕಳಿಸಿದ್ದೇನೆ. ಅವು ಬರುತ್ತಲೇ ಅವಳನ್ನು ನೀವು ಕರೆದುಕೊಂಡು ಹೋಗಬಹುದು. ಅಲ್ಲಿಯವರೆಗೂ ನೀವು ಅಡಿಗೆ ಮನೆಯಲ್ಲಿ ಕಾಯುತ್ತಿರಿ, ಹೀಗೆ ಬನ್ನಿ. (ಡೂಲಿಟ್ಲ್ ಬಾಗಿಲವರೆಗೂ ಸಂತ್ರಸ್ತ ನಾಗಿ ಹೋಗುವನು. ಪುನಸ್ಸು ತಿರುಗಿ, ಕಡೆಗೆ ಹಿಗ್ಗಿನ್ಸನ್ನು,)

ಡೂಲಿಟ್ಲ್ : (ಏಕಾಂತವಾಗಿ ಕುರಿತು) ನನ್ನ ಮಾತ್ಕೇಳಿ. ನೀವು ನಾವು ವ್ಯವಹಾರ ತಿಳಿದ ಜನ ಅಲ್ವೆ ?

ಹಿಗ್ಗಿನ್ಸ್ : ಓ ಲೋಕ ತಿಳಿದವರು ನಾವು, ಅಲ್ಲ......! ಒಳಗೆ ಹೋಗು, ಪಿಯರ್ಸ್.

ಪಿಯರ್ಸ್ : ನನಗೂ ಅದೇ ಸರಿ ಎಂದು ಕಾಣುತ್ತೆ. (ಗಂಭೀರವಾಗಿ ಒಳಗೆ ಹೋಗು ತ್ತಾಳೆ.)

ಪಿಕರಿಂಗ್ : ನಿಮ್ಮ ಕೈಯೇ ಮೇಲಾಯ್ತು ಡೂಲಿಟ್ಲ್ !

ಡೂಲಿಟ್ಲ್ : (ಪಿಕರಿಂಗಿಗೆ) ತುಂಬಾ ದೊಡ್ಡ ಮಾತು ಸ್ವಾಮಿ. (ಹಿಗ್ಗಿನ್ಸನ್ನು ಕುರಿತು—ಅವನು ಪಿಯಾನೊ ಬೆಂಚಿನ ಮೇಲೆ ಕುಳಿತಿದ್ದಾನೆ. ಎದುರಿನ

ಮನುಷ್ಯ ತುಂಬಾ ಹತ್ತಿರವಿರುವುದರಿಂದ ಸ್ವಲ್ಪ ಅಸ್ವಸ್ಥತೆ ಉಂಟಾಗಿದೆ. ಡೂಲಿಟ್ಲ್ ವೃತ್ತಿಯು, ಅವನ ಧೂಳಿನ ವಾಸನೆ ಅದಕ್ಕೆ ಕಾರಣ) ನೋಡಿ, ಇದು ನಿಜ. ನಿಮ್ಮನ್ನು ಕಂಡರೆ ನನಗೆ ಪ್ರೀತಿ ಉಂಟಾಗಿದೆ, ಸ್ವಾಮಿ. ಹುಡುಗಿ ನಿಮಗೆ ಬೇಕಾದರೆ, ಅವಳನ್ನು ಹಿಂದಕ್ಕೆ ಮನೆಗೆ ಕರ್ಕೊಂಡ್ಹೋಗ್ಬೇಕೂ ಅಂತ ಪಟ್ಟು ಹಿಡಿಯೋಲ್ಲ—ನಾವು ಒಂದು ಒಪ್ಪಂದಕ್ಕೆ ಬರಬಹುದಾದರೆ, ಬೇರೆ ಹೆಣ್ಣು ಹುಡುಗಿಯರಿಗೆ ಅವಳನ್ನ ಹೋಲಿಸಿ ನೋಡಿದರೆ, ಅವಳ ಕಣ್ಣು ಮೂಗು ನೇರವಾದ ಒಳ್ಳೆಯ ಹುಡುಗಿ, ಮಗಳು ಅಂತ ಅವಳಿಗಾಗೋಷ್ಟು ಖರ್ಚನ್ನು ನಾನು ತೆರಲಾರೆ. ಅಷ್ಟು ಬೆಲೆಯಲ್ಲ ಅವಳು. ಆದ್ದರಿಂದ ನೇರವಾಗಿ ನಿಮಗೆ ಹೇಳ್ತೀನೆ ; ನಾನು ಕೇಳೋದೆಲ್ಲ ಏನು ? ಅವಳ ತಂದೆಯಾದ ನನ್ನ ಹಕ್ಕುಗಳನ್ನು ಏನೂ ತೆಗೆದುಕೊಳ್ಳದೆ ಅವಳನ್ನು ಬಿಟ್ಕೊಡೋಂಥ ಮನುಷ್ಯ ನಾನು ಅಂತ ನೀವು ನಿರೀಕ್ಷಿಸಲಾರಿರಿ ಸ್ವಾಮಿ ? ನೀವು ಯೋಗ್ಯರೆಂದು ನನಗೆ ಕಾಣಿಸುತ್ತೆ ಸ್ವಾಮಿ. ನೋಡಿ, ಐದು ಪೌಂಡಿನ ನೋಟು ಒಂದು ನಿಮಗೇನೂ ಹೆಚ್ಚು ಅಲ್ಲ. ಎಲಿಸ ಬೆಲೆ ನನಗೆಷ್ಟು ? (ತನ್ನ ಕುರ್ಚಿಗೆ ಹಿಂದಿರುಗಿ ನಿರ್ಣಯ ಮಾಡಿದವನಂತೆ ಕುಳಿತುಕೊಳ್ಳುವನು.)

ಪಿಕರಿಂಗ್ : ಡೂಲಿಟ್ಲ್, ನಿಮಗೆ ಇಷ್ಟು ಹೊತ್ತಿಗೆ ಅರ್ಥ ಆಗಿರಬಹುದು, ಹಿಗ್ಗಿನ್ಸರ ಇಷ್ಟ ಪೂರ್ತಿ ಮರ್ಯಾದಸ್ಥರದು ಎಂದು.

ಡೂಲಿಟ್ಲ್ : ಅಲ್ಲದೆ ಏನು ಸ್ವಾಮಿ ? ಹಾಗಲ್ಲಾಂತ ನಾನು ಯೋಚಿಸಿದ್ದಿದ್ರೆ, ಐವತ್ತು ಕೇಳ್ತಿದ್ದೆ.

ಹಿಗ್ಗಿನ್ಸ್ : (ಹೇಸಿಗೆ ಪಟ್ಟು) ಹೃದಯವಿಲ್ಲದ ಚಂಡಾಲ ನೀನು. ಏನು ನಿನ್ನರ್ಥ ? ಐವತ್ತು ಪೌಂಡಿಗೆ ಮಗಳನ್ನು ಮಾರುತಿದ್ದೆಯ ?

ಡೂಲಿಟ್ಲ್ : ಸಾಧಾರಣವಾಗಿ ಹಾಗೆ ಮಾಡುತ್ತಿರಲಿಲ್ಲ. ಆದರೆ ತಮ್ಮಂಥ ದೊಡ್ ಮನುಷ್ಯರಿಗೆ ಉಪಕಾರ ಆದ್ರೆ ನಾವು ಒಂದು ಒಳ್ಳೆ ಒಡಂಬಡ್ಕೆಗೆ ಬರ್ಬಹುದ್ದು. ಅದು ನನ್ನ ಅಭಿಪ್ರಾಯ.

ಪಿಕರಿಂಗ್ : ನಿನಗೆ ಧರ್ಮ, ಕರ್ಮ ಇಲ್ಲವೇನಯ್ಯ ?

ಡೂಲಿಟ್ಲ್ : (ಕುಗ್ಗದೆ) ನಮ್ಮಂಥಾವರಿಗೆ ಅವೆಲ್ಲ ನಡೆಯುತ್ತೆಯೆ ಸ್ವಾಮಿ ? ನನ್ನಷ್ಟು ಬಡವರಾಗಿದ್ದಿದ್ರೆ ನಿಮಗೂ ನಡೀತಿರ್ಲಿಲ್ಲ. ನಾ ಏನನ್ನೂ ಕೆಟ್ಟದ್ದನ್ನ ಯೋಚಿಸೋದಿಲ್ಲ ; ನಿಜವಾಗಿ. ಆದರೆ ಇದರಿಂದ ಎಲಿಸಾಗೇನಾದರೂ ಸಿಗೋ ಹಾಗಿದ್ರೆ, ನಂಗೂ ಯಾಕ್ಸಿಗಬಾರ್ದು ?

ಹಿಗ್ಗಿನ್ಸ್ : (ಕಳವಳದಿಂದ) ಪಿಕರಿಂಗ್, ನನಗೆ ಏನು ಮಾಡಬೇಕು ಎನ್ನುವುದೇ ತೋಚುವುದಿಲ್ಲ. ಧರ್ಮವನ್ನು ನೋಡಿದರೆ, ಸಂದೇಹವೇ ಇಲ್ಲ : ಈ ಪ್ರಾಣಿಗೆ

ಒಂದು ಫಾರ್ದಿಂಗ್ ಕೊಡುವುದು ಮಹಾ ಅಪರಾಧ. ಆದರೂ ಅವನು ಕೇಳು ವುದರಲ್ಲಿ ಒಂದು ತರಹದ ಒರಟು ನ್ಯಾಯವೂ ಇದೆ ಎನ್ನಿಸುತ್ತದೆ.

ಡೂಲಿಟ್ಲ್ : ಅದೇ ಸ್ವಾಮಿ. ಅಷ್ಟೇ ನಾ ಹೇಳೋದೂ. ಹೆತ್ತ ತಂದೆಯ ಹೃದಯ ಅನ್ನೋ ಹಾಗೆ.

ಪಿಕರಿಂಗ್ : ಆ ಭಾವ ನನಗೆ ಅರ್ಥವಾಗುತ್ತದೆ, ಸರಿ. ಆದರೆ ನಿಜವಾಗಿ ಹೀಗೆ ಮಾಡುವುದು ನ್ಯಾಯವಾಗುತ್ತದೆಯೇ ಅನ್ನಿಸುತ್ತೆ ನನಗೆ—

ಡೂಲಿಟ್ಲ್ : ಹಾಗನ್ನ ಬೇಡಿ—ಸ್ವಾಮಿ. ಆ ರೀತಿ ನೋಡ್ಬೇಡಿ. ನಿಮ್ಮಿಬ್ಬರು ದೊಡ್ಡ ಮನುಷ್ಯರನ್ನೂ ಕೇಳ್ತೀನೆ, ನಾನು ಎಷ್ಟರೋನೂಂತ—ನಾನು ಏನು ಅಂತ. ಯಾವುದಕ್ಕೂ ಯೋಗ್ಯರಲ್ಲದ ಬಡವರಲ್ಲಿ ನಾನೊಬ್ಬ. ಅಂಥಾ ಮನುಷ್ಯನ ಪರಿಸ್ಥಿತಿ ಏನೂ ಅಂತ ನೀವೇ ವಿಚಾರ್ಸಿ. ಮಧ್ಯಮ ವರ್ಗದ ಜನದ ನ್ಯಾಯಧರ್ಮಗಳು ಯಾವಾಗಲೂ ಅವರಿಗೆ ವಿರೋಧವಾಗಿಯೇ ಇರುತ್ತವೆ. ಎಲ್ಲಾದರೂ ಏನಾದ್ರೂ ಪ್ರಯೋಜ್ನ ಇರುವ ಕಡೆ, ನಂಗೆ ಸ್ವಲ್ಪ ಕೊಡಿ ಅಂದ್ರೆ ಕತೆ ಯಾವಾಗ್ಲೂ ಒಂದೇ : ನೀನು ಅಯೋಗ್ಯ, ನಿನಗೆ ಕೊಡೋದಕ್ಕೆ ಆಗೋಲ್ಲ ಅಂತಾರೆ. ಆದ್ರೆ ನನ್ನ ಅಗತ್ಯಗಳೊ, ಪೂರ್ತಿ ಯೋಗ್ಯಳೆನ್ನುವ ಯಾವ ವಿಧವೆಯ ಯೋಗ್ಯತೆಗೆ ಕಡಮೆಯಾದಾವು ? ಸತ್ತ ಒಂದೇ ಗಂಡನಿಗಾಗಿ ಒಂದು ವಾರದಲ್ಲಿ ಆರು ಬೇರೆ ಬೇರೆ ಧರ್ಮಗಳಿಂದ ಅವಳಿಗೆ ಧರ್ಮ ಸಿಗುತ್ತಲ್ಲವೆ ? ಯೋಗ್ಯನಾದವನ ಅಗತ್ಯಕ್ಕಿಂತ ನನ್ನ ಅಗತ್ಯ ಕಡಮೆಯೆ ? ಇನ್ನೂ ಹೆಚ್ಚೇ ಅನ್ನಿ, ಅವನಿಗಿಂತ ಕಡಮೆ ಸಂತೋಷದಿಂದ ಊಟ ಮಾಡೋಕಾಗೋಲ್ಲ. ಕುಡಿಯೋಕೆ ಅವನಿಗಿಂತ ಹೆಚ್ಚು ಬೇಕು. ನಾನು ಯೋಚ್ನೆಮಾಡೊ ಮನುಷ್ಯನಾದ್ದರಿಂದ—ನಂಗೆ ಸ್ವಲ್ಪ ವಿನೋದಾನೂ ಬೇಕು. ಸ್ವಲ್ಪ ಉಲ್ಲಾಸ ಬೇಕು. ಮನಸ್ಸು ಕುಗ್ಗಿದಾಗ ಒಂದು ಹಾಡೊ, ಒಂದು ಬ್ಯಾಂಡೊ ಬೇಕು. ನೋಡಿ, ಯೋಗ್ಯರಾದವರಿಗೆ ಪೇಟೆಯಲ್ಲಿ ಎಷ್ಟು ದರ ಹಾಕುತ್ತಾರೊ ಅದೇ ದರ ನಂಗೂ ಹಾಕ್ತಾರೆ. ಮಧ್ಯಮ ವರ್ಗದವರ ಧರ್ಮ, ಕರ್ಮ ಎಂದರೆ ಏನು ? ನಂಗೇನೂ ಎಂದೂ ಕೊಡದಿರೋದಕ್ಕೆ ಒಂದು ನೆಪ ಮಾತ್ರ. ಆದ್ದರಿಂದ ನಿಮ್ಮನ್ನು ಕೇಳ್ತೀನೆ— ಇಬ್ಬರೂ ದೊಡ್ಡ ಮನುಷ್ಯರೆಂದು ; ಆ ಆಟ ನನ್ನ ಮೇಲೆ ಹಾಗೆ ಆಡಬೇಡಿ. ನನ್ನನ್ನು ಪಾಡುಪಡಿಸಬೇಡಿ, ನಿಮ್ಮಲ್ಲಿ ನೇರವಾಗಿ ನಡಕೋತಿದ್ದೇನೆ. ನಾನು ಅಯೋಗ್ಯ, ಹಾಗೇ ಮುಂದೂ ಇರಬೇಕೆಂದಿದ್ದೇನೆ. ಹಾಗಿರೋದೇ ನನಗೆ ಇಷ್ಟ. ಇದು ಸತ್ಯ. ಇಂಥಾ ಸ್ವಭಾವ ಇರೊ ಮನುಷ್ಯನ ಕಷ್ಟದ ಅವಕಾಶ ತೆಗೆದು ಕೊಂಡು ಅವನಿಗೆ ನಷ್ಟ ಉಂಟುಮಾಡ್ತೀರ ? ಹೆತ್ತು, ಸಾಕಿ, ಆಹಾರ ಕೊಟ್ಟು ಬೆಳಸಿ, ಉಡೋಕೆ ಬಟ್ಟೆ ತೆಕ್ಕೊಟ್ಟು, ಹಣೆಯ ಬೆವರು ಸುರಿಸಿ ದುಡಿದು, ನಿಮ್ಮಂಥ ಇಬ್ಬರು ದೊಡ್ಡ ಮನುಷ್ಯರಿಗೆ ಆಸಕ್ತಿ ಉಂಟುಮಾಡುವ ಮಗಳಾಗು

ವಂತೆ ಅವಳನ್ನು ಬೆಳಸಿದ್ದೇನೆ. ಇದರ ದುರವಕಾಶ ಪಡಕೊಳ್ಬಾರ್ದು. ಐದು ಪೌಂಡು ಕೇಳುವುದು ಅತಿಯೆ ? ಅಯುಕ್ತವೆ ? ನಿಮ್ಮನ್ನೇ ಕೇಳ್ತೀನೆ. ನೀವೇ ಹೇಳಿ. ಅದನ್ನ ನಿಮಗೇ ಬಿಡ್ತೀನೆ.

ಹಿಗ್ಗಿನ್ಸ್ : (ಪಿಕರಿಂಗ್ ಬಳಿಗೆ ಎದ್ದು ಹೋಗಿ) ಪಿಕರಿಂಗ್, ಮೂರು ತಿಂಗಳ ಕಾಲ ಈ ಮನುಷ್ಯನನ್ನು ಕೈಗೆ ತೆಗೆದುಕೊಂಡರೆ, ಮಂತ್ರಿಮಂಡಲದಲ್ಲಿ ಒಂದು ಸ್ಥಾನ ಅಥವಾ ವೇಲ್ಸಿನ ಜನಪ್ರಿಯವಾದ ಒಂದು ದೇವಮಂದಿರದ ಒಡೆತನ ಎರಡರಲ್ಲಿ ಯಾವುದನ್ನು ಬೇಕಾದರೂ ಆಯ್ದುಕೊಳ್ಳುವಂತೆ ಮಾಡಬಹುದು.

ಪಿಕರಿಂಗ್ : ಅದಕ್ಕೇನು ಹೇಳ್ತೀರಿ ಡೂಲಿಟ್ಲ್ ?

ಡೂಲಿಟ್ಲ್ : ನಂಗೆ ಬೇಡಾ ಸ್ವಾಮಿ, ಥ್ಯಾಂಕ್ಸ್. ಎಲ್ಲಾ ಮತ ಪ್ರಚಾರಕರ ಮಾತುಗಳನ್ನೂ ಕೇಳಿದ್ದೇನೆ. ಎಲ್ಲ ಮುಖ್ಯ ಮಂತ್ರಿಗಳ ಭಾಷಣಗಳನ್ನೂ ಕೇಳಿದ್ದೇನೆ. ರಾಜಕೀಯ, ಮತಧರ್ಮ, ಸಮಾಜ ಸುಧಾರಣೆ, ಇವುಗಳೆಲ್ಲ ಒಂದು ತರಹದ ವಿನೋದಕಗಳು ಅಂತ ನಂಗೆ ಗೊತ್ತು. ಅವನ್ನು ಕುರಿತು ನನ್ನ ಅಭಿಪ್ರಾಯದಲ್ಲಿ ಹೇಗೇ ನೋಡಿ—ನಾಯಿಪಾಡು ಅವೆಲ್ಲ. ಅಯೋಗ್ಯನಾದವನ ಬಡತನ ನನ್ನ ವೃತ್ತಿ. ಸಮಾಜದಲ್ಲಿರೊ ಒಂದು ಸ್ಥಾನವನ್ನು ಇನ್ನೊಂದಕ್ಕೆ ಹೋಲಿಸಿದರೆ ನನ್ನ ದೃಷ್ಟಿಯಲ್ಲಿ ಸ್ವಲ್ಪ ಚುರುಕಿರೋದು ಅಂದ್ರೆ—ಇದು. ಇದೊಂದೇ ನನ್ನ ರುಚಿಗೆ ಒಪ್ಪೋದು.

ಹಿಗ್ಗಿನ್ಸ್ : ಇವನಿಗೆ ನಾವು ಐದು ಪೌಂಡು ಕೊಡಬೇಕೆಂದು ಕಾಣುತ್ತೆ.

ಪಿಕರಿಂಗ್ : ಕೊಟ್ಟರೆ ಅವನು ಅದನ್ನು ಹಾಳು ಮಾಡುತ್ತಾನೆ ಅನ್ನಿಸುತ್ತದೆ ನನಗೆ.

ಡೂಲಿಟ್ಲ್ : ಇಲ್ಲ, ಸ್ವಾಮಿ. ನನ್ನ ಆಣೆಗೂ ಇಲ್ಲ. ನಾನದನ್ನ ಉಳಿಸ್ತೇನೆ, ಇಟ್ಕೊಂಡಿರ್ತೀನೆ, ಅದನ್ನಿಟ್ಕೊಂಡು ಸೋಮಾರಿಯಾಗ್ತೀನೆ, ಅಂದ್ಕೊಬೇಡಿ. ಸೋಮವಾರದ್ಹೊತ್ಗೆ ಅದರಲ್ಲಿ ಒಂದು ಪೆನ್ನಿ ಕೂಡ ನನ್ನ ಕೈಯಲ್ಲಿರೋದಿಲ್ಲ. ಅದು ನನ್ನ ಕೈಯಲ್ಲಿ ಇಲ್ದಿದ್ರೆ ಕೆಲಸಕ್ಕೆ ಹೇಗೆ ಹೋಗುತ್ತಿದ್ದೆನೊ ಹಾಗೆ. ನನ್ನನ್ನು ಅದು ಪಾಪರ್ ಮಾಡೋಲ್ಲ. ಬಾಜು ಕಟ್ಟಿ ಹೇಳ್ತೀನೆ ಬೇಕಾದರೆ· ನನಗೆ, ನನ್ನ ಹೆಣ್ಣಿಗೆ ಒಂದು ಖುಷಿ, ವಿನೋದ. ಅದರಿಂದ ನಮಗೆ ಸಂತೋಷ ಆಗುತ್ತೆ. ಬೇರೆಯವರಿಗೆ ಉದ್ಯೋಗ ಸಿಕ್ಕುತ್ತೆ. ದುಡ್ಡು ಪೋಲಾಗಲ್ಲ ಎಂದು ನಿಮಗೂ ತೃಪ್ತಿಯಾಗುತ್ತೆ. ಅದಕ್ಕಿಂತ ಚೆನ್ನಾಗಿ ಖರ್ಚು ಮಾಡೋಕೆ ನಿಮ್ಮ ಕೈಯಲ್ಲೂ ಆಗೋಲ್ಲ.

ಹಿಗ್ಗಿನ್ಸ್ : (ಕೈ ಪುಸ್ತಕವನ್ನು ತೆಗೆದುಕೊಂಡು ಡೂಲಿಟ್ಲಿಗೂ ಪಿಯಾನೋಕ್ಕೂ ನಡುವೆ ನಿಂತು) ಇನ್ನು ನನ್ನ ಕೈಯಲ್ಲಿ ತಡೆಯುವುದಕ್ಕೆ ಆಗುವುದಿಲ್ಲ. ಅವನಿಗೆ ೧೦ ಪೌಂಡು ಕೊಡೋಣ. (ಡೂಲಿಟ್ಲಿಗೆ ಎರಡು ನೋಟನ್ನು ಕೊಡಲು ಹೋಗುವನು.)

ಡೂಲಿಟ್ಲ್ : ಬೇಡ ಸ್ವಾಮಿ. ೧೦ ಪೌಂಡನ್ನು ಖರ್ಚು ಮಾಡೋಕೆ ಅವಳಿಗೂ ಮನಸ್ಸು ಬರೋಲ್ಲ. ಭವುಷ ನಂಗೂ ಬರ್ಲ್ಲಾರ್ದು. ೧೦ ಪೌಂಡು ತುಂಬಾ ಹೆಚ್ಚು ಹಣ. ಅಷ್ಟು ಹಣ ಒಬ್ಬನ್ನ ವಿವೇಕಶಾಲಿಯಾಗಿ ಮಾಡಿಬಿಡುತ್ತೆ. ವಿವೇಕ ಬಂತೂಂದ್ರೆ ಸುಖಾ ಎಲ್ಲಾ ಹೋದ್ಹಾಗೇ. ನಾನು ನಿಮ್ಮನ್ನು ಎಷ್ಟು ಕೇಳಿದ್ನೊ ಅಷ್ಟು ಕೊಡಿ ಸ್ವಾಮಿ : ಒಂದ್ ಪೆನ್ನಿ ಹೆಚ್ಗೆ ಬೇಡ ; ಒಂದ್ಪೆನ್ನಿ ಕಡ್ಮೆ ಬೇಡ.

ಪಿಕರಿಂಗ್ : ಆ ನಿನ್ನ ಹೆಂಗಸನ್ನು ನೀನು ಏಕೆ ಮದುವೆ ಮಾಡಿಕೊಳ್ಳಬಾರದು ? ಆ ಬಗೆಯ ಅನೀತಿಗೆ ಉತ್ತೇಜನ ಕೊಡಬಾರದು ಎನ್ನಿಸುತ್ತೆ, ನನಗೆ.

ಡೂಲಿಟ್ಲ್ : ಅವಳಿಗೆ ನೀವೇ ಹೇಳಿ, ಹಾಗೆಂದು. ನಂಗೇನೊ ಇಷ್ಟಾನೇ ಎಂದು ಅವಳಿಗೆ ಹೇಳಿ. ಈ ಸ್ಥಿತೀ ನಷ್ಟ ನಂಗೆ. ಅವಳ ಮೇಲೆ ನಂಗೆ ಹಿಡಿತ ಇಲ್ಲ. ಅವಳಿಗೆ ಪ್ರಿಯವಾಗಿ ನಾನು ನಡೀತಿರಬೇಕು. ಉಚಿತಗಳ್ನ ಕೊಡ್ತಾಲೇ ಇರಬೇಕು. ಬಟ್ಟೆಗಳ್ನ ಕೊಂಡ್ಕೊಡ್ಬೇಕು. ಅಯ್ಯೋ ಎಂಥೆಂಥ ಅಧ್ವಾನ್ನ ಬಟ್ಟೆ ಅಂತೀರಿ ? ಆ ಹೆಂಗಸ್ಗೆ ಗುಲಾಮನಾಗಿಬಿಟ್ಟಿದ್ದೇನೆ. ಕಾರಣ ? ನ್ಯಾಯ ವಾದ, ಮದುವೆಯಾದ ಗಂಡ ನಾನಲ್ಲ. ಅದು ಅವಳಿಗೂ ಗೊತ್ತಿದೆ. ಅವಳು ನನ್ನ ಮದುವೆ ಆಗ್ತಾಳ್ಯೆ ? ನನ್ನ ಸಲಹೆ ಕೇಳಿ ಸ್ವಾಮಿ ; ಇನ್ನೂ ಚಿಕ್ಕವಳಾಗಿ ಏನೂ ಅರಿಯದವಳಾಗಿರುವಾಗಲೇ ಎಲಿಸಾಳನ್ನು ಮದ್ವೆ ಮಾಡ್ಕೊಳ್ಳಿ. ಆಗ್ದಿದ್ರೆ ಆಮೇಲೆ ವಿಷಾದ ಪಡ್ಬೇಕಾಗುತ್ತೆ. ಮದ್ವೆ ಮಾಡ್ಕೊಂಡ್ರೆ ಆಗ ವಿಷಾದ ಪಡೋಳು ಅವಳು. ಪಡಲಿ. ಎಷ್ಟಾದ್ರೂ ಅವಳು ಹೆಂಗ್ಸು. ನೀವು ಗಂಡಸರು. ಸ್ಥಿತಿ ಹೇಗೇ ಇರ್ಲಿ ಸುಖವಾಗಿರೋಕೆ ಹೆಣ್ಣಿಗೆ ಹೇಗೂ ಗೊತ್ತಾಗೋಲ್ಲ.

ಹಿಗ್ಗಿನ್ಸ್ : ಪಿಕರಿಂಗ್, ಈ ಮನುಷ್ಯನ ಮಾತನ್ನು ಇನ್ನೊಂದು ನಿಮಿಷ ಹೆಚ್ಚಾಗಿ ಕೇಳಿದರೆ ನಮ್ಮಲ್ಲಿ ಯಾವ ತತ್ವಗಳೂ ಉಳಿಯುವುದಿಲ್ಲ. ಡೂಲಿಟ್ಲ್ ಐದು ಪೌಂಡು ಅಂದೆ ಅಲ್ಲ !

ಡೂಲಿಟ್ಲ್ : ನಿಮ್ಮ ದಯೆ ದೊಡ್ಡದು ಸ್ವಾಮಿ.

ಹಿಗ್ಗಿನ್ಸ್ : ಖಂಡಿತ ಹತ್ತು ಪೌಂಡು ತೆಗೆದುಕೊಳ್ಳುವುದಿಲ್ಲ ಎನ್ನಿಸುತ್ತೆಯೆ ?

ಡೂಲಿಟ್ಲ್ : ಈಗ್ಬೇಡ, ಇನ್ನೊಂದ್ಸಲಕ್ಕೆ ನೋಡೋಣ, ಸ್ವಾಮಿ.

ಹಿಗ್ಗಿನ್ಸ್ : (ಐದು ಪೌಂಡಿನ ಒಂದು ನೋಟನ್ನು ಕೊಡುತ್ತ) ಇಗೋ ತೆಗೆದುಕೊ.

ಡೂಲಿಟ್ಲ್ : ತುಂಬಾ ಉಪ್ಕಾರ ಆಯ್ತು ಸ್ವಾಮಿ, ನಮಸ್ಕಾರ (ಸಂಪಾದಿಸಿದ ಕೊಳ್ಳೆಯನ್ನು ತೆಗೆದುಕೊಂಡು ಹೊರಟು ಹೋಗಲು ಆತುರನಾಗಿ ಬೇಗ ಬಾಗಿಲ ಕಡೆ ಹೋಗುತ್ತಾನೆ. ಬಾಗಿಲನ್ನು ತೆರೆದಾಗ ಎದುರಿಗೆ ನಯವಾದ, ನಾಜೂಕಾದ ಶುಚಿಯಾದ ಒಬ್ಬ ಜಪಾನಿ ಯುವತಿ ಸರಳವಾದ ಒಂದು ನೀಲಿ ಹತ್ತಿಯ 'ಕಿಮೋನೊ' ಧರಿಸಿ ಕಾಣಿಸುವಳು. ಆ ಬಟ್ಟೆಯ ಮೇಲೆ ಸಣ್ಣ ಬಿಳಿಯ

ಮಲ್ಲಿಗೆ ಹೂವನ್ನು ಜಾಣತನದಿಂದ ಅಚ್ಚು ಮಾಡಿದೆ. ಅವಳೊಡನೆ ಮಿಸೆಸ್ ಪಿಯರ್ಸ್ ಇದ್ದಾಳೆ. ಅವಳಿಗೆ ಮರ್ಯಾದೆಯಿಂದ ದಾರಿ ಬಿಡುತ್ತ) ಕ್ಷಮಿಸಬೇಕಮ್ಮ.

ಜಪಾನಿ ಸ್ತ್ರೀ : ದ್ಯಾವರೇ ; ಸೊಂತ ಮಗಳೇ ಗುರ್ತಾಗಲ್ವೆ ?

ಡೂಲಿಟ್ಲ್ : ⎫ ⎧ ಏನಿದು ! ಎಲಿಸ.
ಹಿಗ್ಗಿನ್ಸ್ : ⎬ (ಒಟ್ಟಿಗೆ ಮಾತನಾಡುತ್ತ) ⎨ ಇದು, ಯಾರಿದು ?
ಪಿಕರಿಂಗ್ : ⎭ ⎩ ದೇವರಾಣೆಗೂ !

ಲಿಸ : ಇಚಿತ್ತರವಾಗಿ ಕಾಣ್ತೋಲ್ವೆ ನಾನು ?

ಹಿಗ್ಗಿನ್ಸ್ : ವಿಚಿತ್ರವಾಗಿ ?

ಪಿಯರ್ಸ್ : (ಬಾಗಿಲಲ್ಲಿ) ನೋಡಿ ಹಿಗ್ಗಿನ್ಸ್ ? ಹುಡುಗಿ ತನ್ನ ವಿಷಯವಾಗಿ ಅಹಂಕಾರ ಪಡುವಂಥ ಏನನ್ನೂ ಅವಳಿಗೆ ಹೇಳಬೇಡಿ.

ಹಿಗ್ಗಿನ್ಸ್ : (ಅಂತಃಸಾಕ್ಷಿ ಪೂರ್ವಕವಾಗಿ) ನೀ ಹೇಳುವುದು ತುಂಬಾ ಸರಿ ಪಿಯರ್ಸ್. (ಎಲಿಸಾಗೆ) ಹೌದು, ಹಾಳಾದವಳೇ, ಅತಿ ವಿಚಿತ್ರವಾಗಿ ಕಾಣಿಸುತ್ತದೆ.

ಪಿಯರ್ಸ್ : ಸ್ವಾಮಿ ! ದಯವಿಟ್ಟು,—

ಹಿಗ್ಗಿನ್ಸ್ : (ತನ್ನನ್ನು ತಿದ್ದಿಕೊಂಡು) ನನ್ನ ಅರ್ಥ, ಬಹಳ ವಿಚಿತ್ರವಾಗಿ ಎಂದು.

ಲಿಸ : ತಲೆ ಮೇಲೆ ನನ್ನ ಯಾಟ್ ಆಕ್ಕೊಂಡ್ರೆ ನಾನು ಸರಿಯಾಗಿ ಕಾಣಸ್ತೀನೆ. (ತನ್ನ ಹ್ಯಾಟನ್ನು ತೆಗೆದುಕೊಂಡು ಒಲೆಯ ಸ್ಥಳಕ್ಕೆ ವೈಖರಿಯಿಂದ ಹೋಗುವಳು.)

ಹಿಗ್ಗಿನ್ಸ್ : ದೇವರ ಆಣೆಗೂ ಇದು ಹೊಸ ಫ್ಯಾಷನ್‌ರಿ. ಭಯಂಕರವಾಗಿ ಕಾಣಿಸಬೇಕು.

ಡೂಲಿಟ್ಲ್ : (ತಂದೆಯ ಅಭಿಮಾನದಿಂದ) ಚೊಕ್ಕ ಮಾಡಿದರೆ ಇಷ್ಟು ಚೆಲುವೆಯಾಗಿ ಇವಳು ಕಾಣ್ತಾಳೆ ಎಂದ್ಕೊಂಡಿರ್ಲಿಲ್ಲ. ಅವಳು ನಂಗೆ ಮರ್ಯಾದೆ ತರ್ತಾಳೆ, ಅಲ್ವೆ ಸ್ವಾಮಿ ?

ಲಿಸ : ಯಿಲ್ಲಿ ಶುಚಿಯಾಗಿರೋದು ಸುಲಭ. ನಲ್ಲಿ ತಿರುಗಿಸಿದ್ಕೂಡ್ಲೆ ಬಿಸ್ನೀರು, ತಣ್ಣೀರು ಬರುತ್ವೆ. ಉಣ್ಣೆ ಅಂತೆ ನಯವಾದ ಟುವಾಲುಗಳ ನಿಲವಿದೆ. ಬಿಸಿ ಬಿಸಿಯಾಗಿರುತ್ತೆ. ಮುಟ್ಟಿದರೆ ಬೆರಳು ಸುಡುತ್ತೆ. ಮೈ ಉಜ್ಜಿಕೊಳ್ಳೋಕೆ ಮೃದುವಾದ ಬುರುಸುಗಳವೆ. ಗುಲಾಬಿ ವಾಸನೆ ಸಾಬೂನಿನ ಮರದ ಡಬ್ಬಿಗಳಿವೆ. ಈಗ ನಂಗೆ ತಿಳೀತ್ತೆ, ಸಿರಿಮಂತ ಯೆಂಗ್ಸರು ಯಾಗೆ ಅಸ್ಟು ಶುಚಿಯಾಗಿರ್ತಾರೆ ಅಂತ ; ಸಾನ ಮಾಡೋದು ಅವರಿಗೆ ಸಂತೋಷ ಅಂತ ; ನನ್ನಂಥೋರ ಸಾನದ ಏರ್ಪಾಡು ಯಾಗಿರುತ್ತೆ ಎಂಬೋದನ್ನ ಅವರು ನೋಡಿದ್ರೆ ಆದಾತು !

ಹಿಗ್ಗಿನ್ಸ್ : ಸ್ನಾನದ ಮನೆ ನಿನಗೆ ಒಪ್ಪಿತು ಎಂದು ಕೇಳಿ ಸಂತೋಷವಾಯಿತು.

ಲಿಸ : ಉಹುಂ...ನಾ ಯೇಳೋದನ್ನ ಯಾರ್ಕೇಳಿದ್ರೆ ನಂಗೇನು ಲಕ್ಷ ಇಲ್ಲ. ಪಿಯರ್ಸ್ ಅಮ್ಮನಿಗೆ ಗೊತ್ತು.

ಹಿಗ್ಗಿನ್ಸ್ : ಅದರಲ್ಲಿ ತಪ್ಪಾದದ್ದೇನು ಪಿಯರ್ಸ್ ?

ಪಿಯರ್ಸ್ : (ಸಪ್ಪಗೆ) ಏನೂ ಇಲ್ಲ ಸ್ವಾಮಿ. ಅಂಥಾ ದೊಡ್ಡ ವಿಷಯವೇನೂ ಅಲ್ಲ !

ಲಿಸ : ಅದನ್ನು ವೊಡೆದು ಆಕಬೇಕೂ ಯೆನ್ನಿಸ್ತು. ಯೆತ್ಕಡೆ ನೋಡ್ಬೇಕು ಅಂತ ತೋರ್ನಿಲ್ಲ. ಆದ್ರೆ ಯೇನ್ಮಾಡ್ದೆ ಅಂತೀರಿ ? ಅದ್ರ ಮೇಲೆ ಒಂದು ಟುವಾಲು ತೂಗ್ಹಾಕಿಬಿಟ್ಟೆ.

ಹಿಗ್ಗಿನ್ಸ್ : ಯಾವುದರ ಮೇಲೆ ?

ಪಿಯರ್ಸ್ : ನಿಲವುಗನ್ನಡಿಯ ಮೇಲೆ.

ಹಿಗ್ಗಿನ್ಸ್ : ಡೂಲಿಟ್ಲ್, ಮಗಳನ್ನು ನೀನು ತುಂಬಾ ಕಟ್ಟುನಿಟ್ಟಾಗಿ ಸಾಕಿದ್ದೀಯೆ.

ಡೂಲಿಟ್ಲ್ : ನಾನೇ ! ನಾನವಳನ್ನು ಸಾಕ್ಲೇ ಇಲ್ಲ ಸ್ವಾಮಿ. ಆಗೊಂದು ಸಲ ಈಗೊಂದು ಸಲ ಚಕ್ಕದ ಪಟ್ಟಿ ರುಚಿ ತೋರ್ಸಿದ್ದೇನೆ. ಸಾಕಣೆ ನನ್ನಿಂದ ಅಲ್ರ, ಸ್ವಾಮಿ. ಅವಳಿಗಿದೆಲ್ಲ ಅಭ್ಯಾಸ ಇಲ್ಲ ಸ್ವಾಮಿ, ಅಷ್ಟೇ. ನಿಮ್ಮ ಈ ಸುಲಭದ ಧಾರಾಳದ ಅಭ್ಯಾಸಾನೆಲ್ಲ ಬೇಗ ಕಲಿತ್ಕೊಂಡ್ಬಿಡ್ತಾಳೆ.

ಲಿಸ : ನಾನು ವೊಳ್ಳೆವುಡ್ಗಿ. ನಾನು ಯಾವ ಸುಲಭದ ದಾರಾಳದ ನೀತೀನೂ ಕಲ್ತ್ಕೊಳೋಳೂ ಅಲ್ಲ.

ಹಿಗ್ಗಿನ್ಸ್ : ಎಲಿಸ, ಇನ್ನೊಂದು ಸಲ ನೀನು ಒಳ್ಳೆಯ ಹುಡುಗಿ ಎಂದು ಹೇಳಿದರೆ ನಿಮ್ಮಪ್ಪ ನಿನ್ನನ್ನು ಇಲ್ಲಿಂದ ಕರೆದುಕೊಂಡು ಹೋಗಬೇಕಾಗುತ್ತದೆ.

ಲಿಸ : ಕರ್ಕೊಂಡ್ಹೋಗೋನೆ ಅವ್ನು ! ನಮ್ಮಪ್ಪನ್ನ ನೀವು ಕಾಣ್ರಿ. ಅವ್ನು ಯಿಲ್ಲಿಗೆ ಬಂದ ಕಾರಣ ನಂಗೆ ಗೊತ್ತಿಲ್ವೆ ? ನಿಮ್ಮ ಜೇಬು ತಟ್ಟಿ, ನಿಮ್ಮಿಂದ ಕುಡಿಯೋಕೆ ಏನಾದ್ರೂ ಹೊಡ್ಕೊಂಡ್ಹೋಗೋಕೆ !

ಡೂಲಿಟ್ಲ್ : ಸರಿಹೋಯ್ತು ಬಿಡು. ಹಣ ನಂಗಿನ್ನು ಏತ್ಕೆ ಅಂದ್ಕೊಡಿದೀಯ ? ದೇವಸ್ಥಾನದಲ್ಲಿ ತಟ್ಟೇಗೆ ಹಾಕೋಕೆ ? (ಅವನ ಕಡೆಗೆ ತನ್ನ ನಾಲಗೆಯನ್ನು ಚಾಚುವಳು. ಅವನು ರೇಗುವನು. ಇದನ್ನು ನೋಡಿ ಪಿಕರಿಂಗ್ ಅವರಿಬ್ಬರ ನಡುವೆ ಬರುವನು.) ಹಾಗೆಲ್ಲಾ ನನ್ಕಡೆ ತುಟಿ ಚಾಚೀಯೆ. ಈ ಗೃಹಸ್ಥರು ನೀನು ಹಾಗೆ ಮಾಡಿದೆಯೆಂದು ನನ್ನ ಕಿವೀಗೆ ಹಾಕ್ದೆಯಿದ್ರೆ. ನಿನಗೆ ತಕ್ಕ ಶಾಸ್ತಿ ಮಾಡ್ಬೇಕಾದೀತು ! ತಿಳೀತೊ.

ಹಿಗ್ಗಿನ್ಸ್ : ಹೋಗುವ ಮುಂಚೆ ಅವಳಿಗೆ ಇನ್ನೇನನ್ನಾದರೂ ಹೆಚ್ಚು ಸಲಹೆ ಕೊಡುವುದು ಉಂಟೋ ಹರಸಿ ಗಿರಸಿ—ಹೋಗುತ್ತೀಯ ?

ಡೂಲಿಟ್ಲ್ : ಇಲ್ಲ ಸ್ವಾಮಿ. ನಂಗೆ ತಿಳಿದಿದ್ದನೆಲ್ಲ ನನ್ನ ಮಕ್ಕಳಿಗೆ ಹೇಳ್ಕೊಡೊ ಅಷ್ಟು ದಡ್ಡ ಅಲ್ಲ ನಾನು. ಅದೇನೂ ಮಾಡದೆಯೇ ಅವರನ್ನು ಹಿಡಿತದಲ್ಲಿ ಡೋದು ಕಷ್ಟ. ಎಲಿಸಾ ಬುದ್ಧೀನ ಮೇಲ್ಪಡಿಸ್ಬೇಕಾದ್ರೆ, ಚಕ್ಕದ ಪಟ್ಟಿ ತೊಗೊಂಡು ನೀವೇ ಮಾಡಿ. ಹೋಗಿಬರ್ತೇನೆ, ಸ್ವಾಮಿ, ನಮಸ್ಕಾರ. (ಹೋಗಲು ತಿರುಗುವನು.)

ಹಿಗ್ಗಿನ್ಸ್ : (ಅವನಿಗೆ ಮನದಟ್ಟು ಮಾಡುವಂತೆ) ಸ್ವಲ್ಪ ತಡಿ. ತಪ್ಪದೆ ಗೊತ್ತಾದ ದಿನಗಳಲ್ಲಿ ಬಂದು ನಿನ್ನ ಮಗಳನ್ನು ನೋಡಿಕೊಂಡು ಹೋಗಬೇಕು. ತಂದೆಯಾದ ನಿನ್ನ ಕರ್ತವ್ಯ ಅದು. ನನ್ನ ಒಡಹುಟ್ಟಿದವರು ಒಬ್ಬರು ಪಾದ್ರಿ ಇದ್ದಾರೆ. ಅವಳೊಡನೆ ಮಾತನಾಡುವಾಗ ನಿನಗೆ ಅವರಿಂದ ನೆರವು ಸಿಕ್ಕುತ್ತದೆ.

ಡೂಲಿಟ್ಲ್ : (ತಪ್ಪಿ ಸಿಕೊಳ್ಳುವಂತೆ) ಖಂಡಿತವಾಗಿ ಬರ್ತೇನೆ ಸ್ವಾಮಿ. ಆದ್ರೆ ಈ ವಾರ ಆಗೋಲ್ಲ. ಏನೋ ಒಂದು ಕೆಲ್ಸಕ್ಕೆ ಹೋಗ್ಬೇಕಾಗಿದೆ, ದೂರ. ಆದರೆ, ಆಮೇಲೆ ಖಂಡಿತ ಬರ್ತೇನೆ. ನನ್ನ ಮಾತು ನಂಬಭೌದು. ನಮಸ್ಕಾರ ಸ್ವಾಮಿ. ನಮಸ್ಕಾರ ತಾಯಿ. (ತನ್ನ ಹ್ಯಾಟನ್ನು ತೆಗೆದುಕೊಂಡು ಪಿಯರ್ಸ್‌ಗೆ ಅಭಿವಾದನೆ ಮಾಡಲು ಅವಳು ಅದನ್ನು ನಿರಾಕರಿಸುವಳು. ಹೊರಗೆ ಹೋಗುತ್ತ ಹಿಗ್ಗಿನ್ಸ್‌ಗೆ ಕಣ್ಣು ಹೊಡೆದು ಪಿಯರ್ಸ್‌ನ ಕಠಿಣ ಸ್ವಭಾವಕ್ಕೆ ಆತನು ತುತ್ತಾಗಿ ಕಷ್ಟಪಡುತ್ತಿರಬೇಕೆಂದು ಭಾವಿಸಿ ಅವಳ ಹಿಂದೆ ಹೋಗುವನು.)

ಲಿಸ : ಸುಳ್ಳ ಅವನು, ಅವನು ಹೇಳಿದ್ದನ್ನ ನಂಬಬೇಡಿ. ಅವನ ಮೇಲೆ ಒಬ್ಬ ಪಾದ್ರೀನ ಬಿಡೋದೂ ಒಂದೇ, ಒಂದು 'ಬುಲ್‌ಡಾಗ್' ಬಿಡೋದೂ ಒಂದೇ. ಅವನಿಲ್ಲಿಗೆ ಪುನಃ ಬೇಗ ಬರೋದೂ ಇಲ್ಲ. ನೀವು ಅವನ್ನ ನೋಡೋದೂಯಿಲ್ಲ.

ಹಿಗ್ಗಿನ್ಸ್ : ನನಗೆ ಬೇಕಿಲ್ಲ ಎಲಿಸ. ನಿನಗೆ ಇಷ್ಟವೇನು ?

ಲಿಸ : ನಂಗೂ ಬೇಕಿಲ್ಲ. ಯಾವಾಗ್ಲೂ ಅವನ್ನ ನೋಡ್‌ಬೇಕಾಗಿಲ್ಲ ನಾನು. ಅವನಿಂದ ನಂಗೆ ಅಮರ್ಯಾದೆ. ದೂಳು ಗುಡಿಸ್ತಾ ಜೀವ ಕಳೀತಾಯಿರ್‍ತಾನೆ. ತನ್ನ ಕೆಲ್ಸಗಿಲ್ಸ ಮಾಡೋದ್ಬಿಟ್ಟು.

ಪಿಕರಿಂಗ್ : ಅವನ ಕೆಲಸ ಯಾವುದು ಎಲಿಸ ?

ಲಿಸ : ಬೇರೆಯವರ ಜೇಬಿಂದ ಹಣ ತೆಗೆಸಿ ತನ್ನ ಜೇಬಿನೊಳಕ್ಕೆ ಆಕ್ಕೊಳ್ಳೋದು. ಅವನ ನಿಜವಾದ ವೃತ್ತಿ ನೆಲ ತೋಡುವ ಕೆಲಸ, ಅದನ್ನು ಯಾವಾಗ್ಲಾರ ಮಾಡ್ತಾನೆ—ಕೈಗೆ ಶಕ್ತಿ ಬರ್ಲಿ ಅಂತ. ಅದ್ರಲ್ಲಿ ವೊಳ್ಳೆ ಅಣವೂ ಸಂಪಾದಿಸ್ತಾನೆ. ಯಿನ್ನು ಮುಂದೆ ನನ್ನನ್ನು ಮಿಸ್ ಡೂಲಿಟ್ಲ್ ಎಂದು ಕರೆಯುವುದಿಲ್ಲವೇನು ?

ಪಿಕರಿಂಗ್ : ತಪ್ಪಾಯ್ತು. ಬಾಯಿ ತಪ್ಪಿತು.

ಲಿಸ : ಓ ನಂಗೇನೂ ಲಕ್ಷಯಿಲ್ಲಾನ್ನಿ. ಆಗೆನ್ನುವುದು ತುಂಬಾ ನಾಗರಿಕವಾಗಿ ಕೇಳಿಸುತ್ತೆ. ಯೀಗ ಒಂದು ಟ್ಯಾಕ್ಸಿ ತೊಗೊಂಡು ಟಾಟನ್‌ಹಮ್ ಕೋರ್ಟ್

ರೋಡಿಗೆ ಹೋಗಿ ಅಲ್ಲಿ ಕೆಳಗಿಳಿದು, ನನಗಾಗಿ ಅದನ್ನು ಕಾದಿರಲು ಹೇಳಿ, ಅಲ್ಲಿರೊ ವುಡುಗೀರಿಗೆ ತಮ್ಮ ಅಂತಸ್ತು ಎಂಥಾದ್ದು ಎನ್ನೋದನ್ನ ತಿಳ್ಸಿ ಬರ್ಬೇಕು ಅನ್ಸುತ್ತೆ. ಅವರ ಕೈಲಿ ಮಾತಾಡ್ಬೇಕು ಅನ್ಸುತ್ತೆ ನಂಗೆ, ಅಂದ್ಕೊಂಡ್ರೇನು ?

ಪಿಕರಿಂಗ್ : ನಿಜವಾಗಿ ಫ್ಯಾಷನ್ ಆಗಿರುವ ಏನನ್ನಾದರೂ ನಿನಗೆ ನಾವು ತಂದು ಕೊಡುವತನಕ ನೀನು ಕಾಯುವುದು ಒಳ್ಳೆಯದು.

ಹಿಗ್ಗಿನ್ಸ್ : ಅಲ್ಲದೆ ಲೋಕದಲ್ಲಿ ನಿನ್ನ ಅಂತಸ್ತು ಏರಿರುವ ಈಗ, ನಿನ್ನ ಹಳೆಯ ಸ್ನೇಹಿತರನ್ನು ಉಪೇಕ್ಷಿಸಬಾರದು, ಎಲಿಸ. ನಮ್ಮಲ್ಲಿ ಅದನ್ನು ದೊಡ್ಡೆತ್ತಿನ ಬಾಲ ಹಿಡಿಯುವುದು ಎನ್ನುತ್ತೇವೆ.

ಲಿಸ : ಅಂಥೋರ್ನ ನನ್ನ ಸ್ನೇಹಿತರು ಎಂದು ನೀವು ಕರೀಲಾರ್ರೆಂದು ನಾನು ನಂಬಿದ್ದೇನೆ. ಅವರಿಗೆ ಅವಕಾಶ ದೊರೆತಾಗ ಯೆಷ್ಟೋ ಸಲ ನನ್ನ ಮೇಲೆ ಪರ್ತಿಷ್ಟೆ ತೋರ್ಸಿದ್ದಾರೆ. ಅಘಾಸ್ಯಮಾಡಿದ್ದಾರೆ. ಈಗ ನಾನು ಸೊಲ್ಪ ಮುಯ್ಯಿ ತೀರಿಸ್ಕೊಬೇಕೂ ಅನ್ಸುತ್ತೆ. ನನಗೆ—ಫ್ಯಾಶನ್ ಆದ ಬಟ್ಟೆಗಳು ದೊರಕೋದಾದರೆ ಸೊಲ್ಪ ಕಾಯ್ತೀನೆ. ಕೆಲವು ಬೇಕೂ ಅನ್ಸುತ್ತೆ. ಮಿಸೆಸ್ ಪಿಯರ್ಸ್ ಯೇಳ್ತಾರೆ, ನಾ ಆಕ್ಕೊಳೋಕೆ ನೀವು ಬೇರೆ ಬಟ್ಟೆ ಕೊಡ್ತೀರಾಂತ ! ರಾತ್ರಿ ಆಸ್ಗೇಲಿ ಮಲಗ್‌ಕೊಳ್ಳೋಕೆ ಬೇರೆ, ಅಗಲು ಉಡೋಕ್ಕೆ ಬೇರೆಯಂತೆ. ಆದರೆ ಅಸ್ಟೆಲ್ಲ ಅಣ ಪೋಲಲ್ವೆ ? ಯಿನ್ನೊಬ್ರ ಕಣ್ಣಿಗೆ ಒಡೆಯೋಂತ ಬಟ್ಟೆ ಅದೇ ದುಡ್ಗೆ ಕೊಂಡ್ಕೊಳ್ಳೋದಾಗಿರೋವಾಗ. ಅಲ್ದೆ ಸೊಳಿಗಾಲದ ರಾತ್ರಿ, ತಣ್ಣಗಿರೊ ಒಟ್ಟೆಗಳನ್ನ ಯಾಗೆ ಬದ್ಲಾಯಿಸೋದೋಪ್ಪ, ನಾ ಕಾಣೆ.

ಪಿಯರ್ಸ್ : (ಹಿಂದಕ್ಕೆ ಬಂದು) ಈಗ ನೋಡು, ಎಲಿಸ. ನಿನಗೆ ಹೊಸ ಬಟ್ಟೆ ಬಂದಿವೆ. ಅಳತೆ ಸರಿ ಹೋಗುತ್ತೆಯೆ ನೋಡು.

ಲಿಸ : ಆ……ಔ……ಊ……ಊಹ್ ! (ನುಗ್ಗಿ ಹೊರಗೆ ಹೋಗುತ್ತಾಳೆ.)

ಪಿಯರ್ಸ್ : (ಅವಳನ್ನು ಹಿಂಬಾಲಿಸಿ) ಹೆಣ್ಣು ಹುಡುಗಿಯರು ಹಾಗೆ ನುಗ್ಗಿ ಹೋಗ ಬಾರದು. (ಅವಳ ಹಿಂದೆಯೇ ಹೋಗಿ ಬಾಗಿಲನ್ನು ಮುಚ್ಚಿಕೊಳ್ಳುವಳು.)

ಹಿಗ್ಗಿನ್ಸ್ : ಪಿಕರಿಂಗ್ : ಬಹು ಕಠಿಣ ಕೆಲಸವನ್ನು ಕೈಗೆ ತೆಗೆದುಕೊಂಡಿದ್ದೇವೆ.
ಪಿಕರಿಂಗ್ : (ನಿಷ್ಕರ್ಷೆಯ ಮನಸ್ಸಿನಲ್ಲಿ) ಹೌದು, ಹಿಗ್ಗಿನ್ಸ್.

# ಅಂಕ ಮೂರು

[ಶ್ರೀಮತಿ ಹಿಗ್ಗಿನ್ಸ್ ಅವರ ಅತಿಥಿಗಳ ದಿನ ಇದು. ಇನ್ನೂ ಯಾರೂ ಬಂದಿಲ್ಲ. ಆಕೆಯ ದಿವಾನಖಾನೆ. ಆಕೆಗೆ ಈಗ 60ಕ್ಕೂ ಮೀರಿದ ವಯಸ್ಸು. ಅಪರಾಹ್ನ ಸುಮಾರು 4–5 ಘಂಟೆ ಇರಬಹುದು. ಬಾಗಿಲು ಬಲವಾಗಿ ತೆಗೆಯುವುದು. ತಲೆಯ ಮೇಲೆ ಹ್ಯಾಟ್ ಹಾಕಿಕೊಂಡು ಹಿಗ್ಗಿನ್ಸ್ ಪ್ರವೇಶ]

ಶ್ರೀಮತಿ ಹಿಗ್ಗಿನ್ಸ್ : (ವಿಸ್ಮಿತಳಾಗಿ) ಹೆನ್ರಿ ! (ಗದ್ದರಿಸುತ್ತ) ಇವೊತ್ತು ನೀನು ಇಲ್ಲಿಗೇಕೆ ಬಂದೆ ? ಇದು ನನ್ನ ಅತಿಥಿಗಳನ್ನು ಬರಮಾಡಿಕೊಳ್ಳುವ ದಿನ. ಬರುವುದಿಲ್ಲ ಎಂದು ನೀನು ನನಗೆ ಮಾತು ಕೊಟ್ಟಿದ್ದೆ. (ಆಕೆಗೆ ಪ್ರೀತಿ ತೋರಿಸಲು ಬಾಗಿದಾಗ ತಲೆಯ ಮೇಲಿನ ಅವನ ಹ್ಯಾಟನ್ನು ತೆಗೆದು ಆಕೆ ಅವನ ಕೈಗೆ ಕೊಡುತ್ತಾಳೆ.)

ಹಿಗ್ಗಿನ್ಸ್ : ಹಾಳಾಯಿತು. (ಮೇಜಿನ ಮೇಲೆ ಹ್ಯಾಟ್ ಇಡುತ್ತಾನೆ.)

ಶ್ರೀಮತಿ ಹಿಗ್ಗಿನ್ಸ್ : ಈಗಲೇ ಮನೆಗೆ ಹೋಗು.

ಹಿಗ್ಗಿನ್ಸ್ : (ಮುದ್ದು ತೋರಿಸುತ್ತ) ನನಗೆ ಗೊತ್ತಮ್ಮ. ನಾನು ಉದ್ದೇಶ ಪೂರ್ವಕ ವಾಗಿಯೇ ಬಂದೆ.

ಶ್ರೀಮತಿ ಹಿಗ್ಗಿನ್ಸ್ : ಬರಬಾರದು. ನಾನು ನಿನಗೆ ಖಂಡಿತ ಹೇಳುತಾ ಇದ್ದೇನೆ ಹೆನ್ರಿ. ನೀನು ನನ್ನ ಸ್ನೇಹಿತರಿಗೆಲ್ಲ ಅಸಮಾಧಾನ ಉಂಟು ಮಾಡುತ್ತೀಯೆ. ಅವರು ನಿನ್ನನ್ನು ಇಲ್ಲಿ ಕಂಡರೆ ಇಲ್ಲಿಗೆ ಬರುವುದನ್ನು ನಿಲ್ಲಿಸುತ್ತಾರೆ.

ಹಿಗ್ಗಿನ್ಸ್ : ಅವಿವೇಕ. ನನಗೆ ಚಿಲ್ಲರೆ ಮಾತು ಆಡುವುದಕ್ಕೆ ಬರುವುದಿಲ್ಲ ; ನನಗೆ ಗೊತ್ತು. ಅದರೆ, ಜನ ಅದನ್ನು ಕಿವಿಯ ಮೇಲೆ ಹಾಕಿಕೊಳ್ಳುವುದಿಲ್ಲ. (ಮೆತ್ತೆಯ ಪೀಠದ ಮೇಲೆ ಕುಳಿತುಕೊಳ್ಳುತ್ತಾನೆ.)

ಶ್ರೀಮತಿ ಹಿಗ್ಗಿನ್ಸ್ : ಓ, ಹಾಕಿಕೊಳ್ಳುವುದಿಲ್ಲವೆ ? ಚಿಲ್ಲರೆ ಮಾತಂತೆ ! ನಿನ್ನ ದೊಡ್ಡ ಮಾತು ಇನ್ನು ಹೇಗೊ ! ನಿಜವಾಗಿ ಮಗು, ಇನ್ನು ಇಲ್ಲಿ ಉಳಿಯಬೇಡ.

ಹಿಗ್ಗಿನ್ಸ್ : ಉಳಿಯಬೇಕಮ್ಮ. ನಿನಗೆ ಒಂದು ಕೆಲಸ ತಂದಿದ್ದೇನೆ. ಮಾತುಗಳ ಉಚ್ಚಾರಣೆಯ ಕೆಲಸ.

ಶ್ರೀಮತಿ ಹಿಗ್ಗಿನ್ಸ್ : ಪ್ರಯೋಜನ ಇಲ್ಲ ಮಗು. ನನ್ನ ಕೈಯಲ್ಲಿ ಆಗುವುದಿಲ್ಲ. ವಿಶೇಷ ಬಗೆಯ ಸಂಕೇತಲೇಖನದಲ್ಲಿ ಬರೆದು ಕಳಿಸಿದರೆ ನಿನ್ನ ಮುದ್ದಾದ ಪೋಸ್ಟ್‌ಕಾರ್ಡುಗಳನ್ನೇನೊ ಓದಬೇಕು ಅನ್ನಿಸುತ್ತೆ. ನನ್ನ ಅನುಕೂಲ

ಯೋಚನೆ ಮಾಡಿ ಸಾಮಾನ್ಯ ಬರವಣಿಗೆಯಲ್ಲಿ ನೀನು ಕಳಿಸುವ ಪ್ರತಿಗಳನ್ನು ನಾನು ಮೊದಲು ಓದಿ ಅವನ್ನು ಅರ್ಥಮಾಡಿಕೊಳ್ಳಬೇಕು.

ಹಿಗ್ಗಿನ್ಸ್ : ಇದು ಅಕ್ಷರದ ಉಚ್ಚಾರಣೆ ಕೆಲಸವಲ್ಲ.

ಶ್ರೀಮತಿ ಹಿಗ್ಗಿನ್ಸ್ : ಹಾಗಂತ ನೀನೇ ಹೇಳಿದೆ.

ಹಿಗ್ಗಿನ್ಸ್ : ಆ ಕೆಲಸ ನಿನ್ನ ಭಾಗದ್ದಲ್ಲ. ನನಗೆ ಒಬ್ಬ ಹುಡುಗಿ ಸಿಕ್ಕಿದ್ದಾಳೆ.

ಶ್ರೀಮತಿ ಹಿಗ್ಗಿನ್ಸ್ : ಏನಂದೆ ? ಯಾವಳೊ ಹುಡುಗಿಗೆ ನೀನು ಸಿಕ್ಕಿದೆ ಎಂದೆ ?

ಹಿಗ್ಗಿನ್ಸ್ : ಅದಲ್ಲಮ್ಮ. ಇದು ಪ್ರೇಮದ ವಿಷಯ ಅಲ್ಲ.

ಶ್ರೀಮತಿ ಹಿಗ್ಗಿನ್ಸ್ : ಅಯ್ಯೋ ಅಷ್ಟೇಯೆ !

ಹಿಗ್ಗಿನ್ಸ್ : ಏಕೆ ?

ಶ್ರೀಮತಿ ಹಿಗ್ಗಿನ್ಸ್ : 45 ವರ್ಷಕ್ಕೆ ಕಡಮೆ ಇರುವ ಯಾರಲ್ಲಿಯೂ ನಿನಗೆ ಪ್ರೇಮ ಉಂಟಾಗೋದಿಲ್ಲ. ಸುತ್ತಮುತ್ತ ಚೆಲುವೆಯರಾದ ಕೆಲವು ಹುಡುಗಿಯರಿದ್ದಾರೆ ಎಂಬುದು ನಿನಗೆ ಎಂದು ಕಾಣಿಸುತ್ತೆಯೊ, ಏನೊ.

ಹಿಗ್ಗಿನ್ಸ್ : ಹುಡುಗಿಯರು ಅಂದರೆ ನನಗೆ ಬೇಸರ ಅಮ್ಮ. ಪ್ರೀತಿಗೆ ಯೋಗ್ಯಳಾದ ಹೆಂಗಸು ಎಂದರೆ ನನ್ನ ಮನಸ್ಸಿನಲ್ಲಿ ತುಂಬಾ ನಿನ್ನಂತೆ ಇರತಕ್ಕವಳು. ಚಿಕ್ಕ ಹುಡುಗಿಯರನ್ನು ಪ್ರೀತಿಸುವುದಕ್ಕೆ ನನಗೆ ಬರುವುದೇ ಇಲ್ಲ ಅಂತ ಕಾಣುತ್ತೆ. ಕೆಲವು ಅಭ್ಯಾಸಗಳು ತುಂಬಾ ಬಲವಾಗಿ ನಟ್ಟಿರುತ್ತವೆ ; ಅವನ್ನು ಬದಲಾಯಿಸಲು ಆಗುವುದಿಲ್ಲ. (ಇದಕ್ಕಿದ್ದಂತೆ ಎದ್ದು ತಿರುಗಾಡುತ್ತ ತನ್ನ ಷರಾಯಿ ಜೇಬಿನ ಹಣವನ್ನೂ ಬೀಗದ ಕೈಗಳನ್ನೂ ಶಬ್ದ ಮಾಡುತ್ತಾನೆ.) ಅಲ್ಲದೆ, ಅವರೆಲ್ಲ ದಡ್ಡರು.

ಶ್ರೀಮತಿ ಹಿಗ್ಗಿನ್ಸ್ : ನೀನು ನನ್ನನ್ನು ನಿಜವಾಗಿಯೂ ಪ್ರೀತಿಸುತ್ತಿದ್ದೆಯಾದರೆ ಏನು ಮಾಡುತ್ತಿದ್ದೆ ಗೊತ್ತೆ, ಹೆನ್ರಿ ?

ಹಿಗ್ಗಿನ್ಸ್ : ಬಿಡಮ್ಮ, ಏನ್ಮಾತು ? ಮದುವೆ ಆಗುತ್ತಿದ್ದೆ ಎಂದೊ ?

ಶ್ರೀಮತಿ ಹಿಗ್ಗಿನ್ಸ್ : ಅಸ್ಥಿರವಾಗಿ ತಿರುಗಾಡುವುದನ್ನೂ ಜೇಬುಗಳಲ್ಲಿ ಕೈ ಇಟ್ಟುಕೊಂಡು ಇರುವುದನ್ನೂ ನಿಲ್ಲಿಸುತ್ತ ಇದ್ದೆ.

(ಹಿಗ್ಗಿನ್ಸ್ ಹತಾಶನಾದಂತೆ ಕೈ ಆಡಿಸುತ್ತ, ತಾಯಿ ಹೇಳಿದ್ದನ್ನು ಕೇಳಿ ಪುನಃ ಕುಳಿತುಕೊಳ್ಳುವನು.) ಈಗ ಸರಿ. ನೀನು ಒಳ್ಳೆಯ ಹುಡುಗ. ಇನ್ನು ಹೇಳು—ಆ ಹುಡುಗಿಯ ವಿಚಾರ.

ಹಿಗ್ಗಿನ್ಸ್ : ಅವಳು ನಿನ್ನನ್ನು ನೋಡಲು ಬರುತ್ತಾಳೆ.

ಶ್ರೀಮತಿ ಹಿಗ್ಗಿನ್ಸ್ : ಅವಳನ್ನು ಬಾ ಅಂತ ಕರೆದದ್ದು ನನಗೆ ನೆನಪು ಇಲ್ಲವಲ್ಲ.

ಹಿಗ್ಗಿನ್ಸ್ : ನೀನು ಕರೆಯಲಿಲ್ಲ. ನಾನು ಹೇಳಿದೆ. ಅವಳು ಯಾರು ಎಂದು ನಿನಗೆ ಗೊತ್ತಿದಿದ್ರೆ ನೀನು ಅವಳನ್ನು ಕರೆಯುತ್ತಿರಲಿಲ್ಲ.

ಶ್ರೀಮತಿ ಹಿಗ್ಗಿನ್ಸ್ : ಹೌದೇನು ? ಏಕೆ ?

ಹಿಗ್ಗಿನ್ಸ್ : ನೋಡಮ್ಮ, ಇದು ಹೀಗೆ : ಅವಳು ಸಾಮಾನ್ಯ ಹೂ ಮಾರುವ ಹುಡುಗಿ. ಬೀದಿ ಅಂಚುಕಲ್ಲಿನ ಹತ್ತಿರ ನನಗೆ ಸಿಕ್ಕಿದಳು.

ಶ್ರೀಮತಿ ಹಿಗ್ಗಿನ್ಸ್ : ನನ್ನ ಸಂತೋಷ ಕೂಟಕ್ಕೆ ಬರಲು ಅವಳಿಗೆ ನೀನು ಔತಣ ಕೊಟ್ಟೆ !

ಹಿಗ್ಗಿನ್ಸ್ : (ಎದ್ದು ಅವಳ ಬಳಿಗೆ ಬಂದು ಅವಳ ಮನಸ್ಸನ್ನು ಒಲಿಸಿಕೊಳ್ಳುವಂತೆ) ಅದೆಲ್ಲ ಸರಿಯಾಗುತ್ತಮ್ಮ. ಸರಿಯಾಗಿ ಮಾತನಾಡುವುದಕ್ಕೆ ಅವಳಿಗೆ ಹೇಳಿ ಕೊಟ್ಟಿದ್ದೇನೆ. ನಡವಳಿಕೆಯ ವಿಷಯವಾಗಿ ಕಟ್ಟುನಿಟ್ಟಾದ ಅಪ್ಪಣೆ ಮಾಡಿದ್ದೇನೆ ; ಎರಡು ವಿಷಯಗಳನ್ನು ಕುರಿತು ಮಾತ್ರ ಮಾತಾಡಲು ಹೇಳಿದ್ದೇನೆ : ಹವ, ಎಲ್ಲರ ಆರೋಗ್ಯ—ಇವೊತ್ತು ಹವ ಚೆನ್ನಾಗಿದೆ ಅಲ್ಲ ? ಆರೋಗ್ಯವೆ ಮುಂತಾದ್ದು !—ಎಂಬ ಮಾತನ್ನು ಬಿಟ್ಟು ಸಾಧಾರಣ ಇನ್ನು ಯಾವ ಮಾತನ್ನೂ ಆಡಬೇಡ ಎಂದು ಹೇಳಿದ್ದೇನೆ. ಅಷ್ಟಕ್ಕೆ ಮಿತವಾದರೆ ಸರಿ ಹೋಗುತ್ತೆ.

ಶ್ರೀಮತಿ ಹಿಗ್ಗಿನ್ಸ್ : ಸರಿ ಹೋಗುತ್ತೆ. ಅಲ್ಲವೆ ! ನಮ್ಮ ಆರೋಗ್ಯವನ್ನು ಕುರಿತು ಆಡುವ ಮಾತು ? ನಮ್ಮ ದೇಹದ ಒಳಗಿನ ವಿಷಯವನ್ನು ಕುರಿತದ್ದು ? ಬಹುಶಃ, ನಮ್ಮ ಹೊರಗಿನದನ್ನು ಕುರಿತದ್ದು ಸರಿಯಾಗಬಹುದು. ಎಷ್ಟು ತಿಳಿಗೇಡಿಯಾಗಿರಬಲ್ಲೆಯೊ ನೀನು, ಹೆನ್ರಿ ?

ಹಿಗ್ಗಿನ್ಸ್ : (ತಾಳ್ಮೆ ಇಲ್ಲದೆ) ಹೌದು, ಏನನ್ನಾದ್ರು ಕುರಿತು ಮಾತಾಡಬೇಕೊ ಇಲ್ಲವೊ ? ಅವಳು (ತಾಳ್ಮೆಯನ್ನು ತಂದುಕೊಂಡು) ಸರಿಯಾಗಿ ನಡಕೊಳ್ಳುತಾಳಮ್ಮ. ಇನ್ನು ಅಬ್ಬರ ಮಾಡಬೇಡ. ಈ ಕೆಲಸದಲ್ಲಿ ನನ್ನ ಜೊತೆಗೆ ಪಿಕರಿಂಗ್ ಇದ್ದಾರೆ. ಆರು ತಿಂಗಳ ಒಳಗೆ ಅವಳನ್ನು ಶ್ರೀಮಂತರ ಮನೆಯ ಹೆಂಗಸೆಂದು ಜನ ನಂಬುವಂತೆ ಮಾಡುತ್ತೇನೆ ಎಂದು ಪಣ ತೊಟ್ಟಿದ್ದೇನೆ, ತೊಟ್ಟ ಪಣ ಗೆಲ್ಲುತೇನಮ್ಮ. ಅವಳ ಕಿವಿ ಬಹು ಚುರುಕಾಗಿದೆ. ಮಧ್ಯಮ ವರ್ಗದ ಶಿಷ್ಯೆಯರಿಗಿಂತ ಅವಳಿಗೆ ಹೇಳಿಕೊಡುವುದು ಸುಲಭ. ಏಕೆಂದರೆ ಪೂರ್ತಿ ಒಂದು ಹೊಸ ಭಾಷೆಯನ್ನೇ ಅವಳು ಕಲಿಯಬೇಕಾಗಿದೆ. ನೀನು ಫ್ರೆಂಚ್ ಮಾತನಾಡೊ ಹಾಗೆ ಸುಮಾರು ಅವಳು ಇಂಗ್ಲಿಷ್ ಮಾತಾಡುತಾಳಮ್ಮ.

ಶ್ರೀಮತಿ ಹಿಗ್ಗಿನ್ಸ್ : ಆಮಟ್ಟಿಗೆ ಸರಿಹೋಯಿತು, ಒಟ್ಟಿನಲ್ಲಿ.

ಹಿಗ್ಗಿನ್ಸ್ : ಉಂ... ಹೌದು . ಅಲ್ಲ.

ಶ್ರೀಮತಿ ಹಿಗ್ಗಿನ್ಸ್ : ಹಾಗಂದರೆ ?

ಹಿಗ್ಗಿನ್ಸ್ : ನೋಡು. ಅವಳ ಉಚ್ಚಾರಣೆ ಸರಿಯಾಗಿ ಇರುವ ಹಾಗೆ ನಾನು ಮಾಡಿದ್ದೇನೆ. ನೀನು ಪರಿಶೀಲಿಸಬೇಕಾದ್ದು ಒಬ್ಬ ಹುಡುಗಿ ಮಾತುಗಳನ್ನು

ಹೇಗೆ ಉಚ್ಚಾರಣೆ ಮಾಡುತ್ತಾಳೆ ಎಂಬುದನ್ನು ಮಾತ್ರ ಅಲ್ಲ... ಏನನ್ನು, ಎಂಬುದನ್ನು. ಆ ಸಂಬಂಧದಲ್ಲಿ ನೀನು ನನಗೆ... (ಅತಿಥಿಗಳು ಬಂದರೆಂದು ಪರಿಚಾರಕಳು ಹೇಳುತ್ತಾಳೆ. ಈ ಮಾತು ನಿಲ್ಲುತ್ತದೆ.)

ಪರಿಚಾರಿಕೆ : ಶ್ರೀಮತಿ ಐನ್ಸ್‌ಫರ್ಡ್ ಹಿಲ್ ಮತ್ತು ಅವರ ಮಗಳು. (ಹೇಳಿ ಹಿಂದಿರುಗುವಳು.)

ಹಿಗ್ಗಿನ್ಸ್ : ಅಯ್ಯೋ ದೇವರೇ, (ಏಳುತ್ತಾನೆ. ಮೇಜಿನ ಮೇಲಿಂದ ತನ್ನ ಹ್ಯಾಟನ್ನು ತೆಗೆದುಕೊಂಡು ಬಾಗಿಲಬಳಿಗೆ ಹೋಗುತ್ತಾನೆ. ಅದನ್ನು ತಲಪುವ ಮುಂಚೆಯೇ ಅವರಿಗೆ ತಾಯಿ ಅವನ ಪರಿಚಯ ಮಾಡಿಕೊಡುತ್ತಾಳೆ.)

(ಅವರಿಬ್ಬರು ಮಳೆಗೆ ಆಶ್ರಯಪಡೆಯಲು ಕೋವೆಂಟ್ ಗಾರ್ಡನಿನಲ್ಲಿ ನಮಗೆ ಪರಿಚಿತರಾದ ತಾಯಿ ಮಗಳು. ತಾಯಿ ಉತ್ತಮ ನಡವಳಿಕೆ ಕಲಿತವಳು ; ಶಾಂತಳು ; ಆರ್ಥಿಕ ಸ್ಥಿತಿ ಉತ್ತಮ ವಲ್ಲದವರಲ್ಲಿರುವ ಸಂಕೋಚವಿದೆ. ಮಗಳು ಸಮಾಜದಲ್ಲಿ ಮುಂದುವರಿದವರಲ್ಲಿ ಸಮೃದ್ಧಿ ಯಾಗಿರುವವರ ಉಲ್ಲಾಸದ ವೈಖರಿ ಉಳ್ಳವಳು ; ಮರ್ಯಾದಸ್ಥ ಬಡವರ ಒಂದು ಔದ್ಧತ್ಯವಿದೆ.)

ತಾಯಿ : (ಶ್ರೀಮತಿ ಹಿಗ್ಗಿನ್ಸನ್ನು ಕುರಿತು) ಆರೋಗ್ಯವಾಗಿದ್ದೀರ, ಅಮ್ಮ (ಕೈ ಕುಲುಕುತ್ತ)

ಮಗಳು : ಆರೋಗ್ಯವಾಗಿದ್ದೀರ... (ಕೈ ಕುಲುಕುವಳು.)

ಶ್ರೀಮತಿ ಹಿಗ್ಗಿನ್ಸ್ : (ಪರಿಚಯ ಮಾಡಿಕೊಡುತ್ತ) ನನ್ನ ಮಗ, ಹೆನ್ರಿ.

ತಾಯಿ : ನಿಮ್ಮ ಆ ಪ್ರಖ್ಯಾತರಾದ ಮಗನೆ ? ನಿಮ್ಮನ್ನು ನೋಡಬೇಕೆಂದು ಬಹು ದಿನಗಳಿಂದ ಬಯಸಿದ್ದೆ, ಪ್ರೊಫೆಸರ್ ಹಿಗ್ಗಿನ್ಸ್ ?

ಹಿಗ್ಗಿನ್ಸ್ : (ಯಾವ ವಿಕಾರವೂ ಇಲ್ಲದೆ, ಯಾವ ಚಲನೆಯನ್ನೂ ಮಾಡದೆ) ತುಂಬಾ ಸಂತೋಷ. (ಪಿಯಾನೊ ಕಡೆಗೆ ಬೆನ್ನು ತಿರುಗಿಸಿ ಒರಟಾಗಿ ಬಾಗುತ್ತಾನೆ.)

ಮಗಳು : (ಆತನ ಬಳಿಗೆ ಹೋಗಿ ಪರಿಚಯವಿದ್ದವಳ ವಿಶ್ವಾಸದಿಂದ) ತಾವು ಆರೋಗ್ಯವೆ ?

ಹಿಗ್ಗಿನ್ಸ್ : (ಅವಳ ಕಡೆ ದಿಟ್ಟಿಸಿ ನೋಡಿ) ಈ ಮುಂಚೆ ಎಲ್ಲಿಯೊ ನಿಮ್ಮನ್ನು ನೋಡಿದ್ದೇನೆ ; ಎಲ್ಲಿ ಅಂತ ಗೊತ್ತಿಲ್ಲ. ನಿಮ್ಮ ಧ್ವನಿ ಕೇಳಿದ್ದೇನೆ. (ನಿರುತ್ಸಾಹ ದಿಂದ) ಅದನ್ನು ಕಟ್ಟಿಕೊಂಡೇನು ? ಕುಳಿತುಕೊಳ್ಳಬಾರದೆ ?

ಶ್ರೀಮತಿ ಹಿಗ್ಗಿನ್ಸ್ : ಕ್ಷಮಿಸಿ ಅಮ್ಮ. ನನ್ನ ಈ ಪ್ರಖ್ಯಾತನಾದ ಮಗನಿಗೆ ಮರ್ಯಾದೆ ಗೊತ್ತಿಲ್ಲ. ಮನಸ್ಸಿಗೆ ಬೇರೆ ಏನೂ ತಿಳಿದುಕೊಳ್ಳಬೇಡಿ.

ಮಗಳು : (ಉಲ್ಲಾಸದಿಂದ) ನಾನೇನೂ ತಿಳಿದುಕೊಳ್ಳುವುದಿಲ್ಲ.

(ಅಲ್ಲಿದ್ದ ಎಲಿಸಬೀತನ್ ಕುರ್ಚಿಯಲ್ಲಿ ಕೂಡುವಳು.)

ತಾಯಿ : (ಸ್ವಲ್ಪ, ಏನೂ ತೋರದೆ) ಅಂಥದೇನೂ ಇಲ್ಲಮ್ಮ. (ತಮ್ಮ ಮಗಳಿಗೂ ಶ್ರೀಮತಿ ಹಿಗ್ಗಿನ್ಸ್‌ಗೂ ಮಧ್ಯೆ ಮೆತ್ತೆಯ ಆಸನದಲ್ಲಿ ಕೂಡುವಳು. ಶ್ರೀಮತಿ ಹಿಗ್ಗಿನ್ಸ್ ತನ್ನ ಕುರ್ಚಿಯನ್ನು ಬರವಣಿಗೆ ಮೇಜಿಂದ ಬೇರೆಗೆ ತಿರುಗಿಸಿದ್ದಾಳೆ.)

ಹಿಗ್ಗಿನ್ಸ್ : ನಾನು ಒರಟಾಗಿ ನಡೆದುಕೊಂಡೆನೆ! ನಿಜವಾಗಿ ಹಾಗೆ ಮಾಡಬೇಕು ಎಂದಿರಲಿಲ್ಲ. (ಮಧ್ಯದ ಕಿಟಕಿಯ ಬಳಿಗೆ ಹೋಗಿ ಒಳಗಿನವರಿಗೆ ಬೆನ್ನು ತಿರುಗಿಸಿ ಹೊರ ದೃಶ್ಯವನ್ನು ಈಕ್ಷಿಸುವನು.)

(ಪರಿಚಾರಿಕೆ ಹಿಂತಿರುಗಿ ಬಂದು ಪಿಕರಿಂಗ್ ಬಂದರೆಂದು ಹೇಳಿ ಹೋಗುವಳು.)

ಪಿಕರಿಂಗ್ : ಆರೋಗ್ಯವೆ ಶ್ರೀಮತಿ ಹಿಗ್ಗಿನ್ಸ್ ?

ಶ್ರೀಮತಿ ಹಿಗ್ಗಿನ್ಸ್ : ನೀವು ಬಂದದ್ದು ಸಂತೋಷ. ನಿಮಗೆ ಮಿಸೆಸ್ ಐನ್ಸ್‌ಫರ್ಡ್ ಹಿಲ್ ಪರಿಚಯ ಇದೆಯೆ ? ಆಕೆ–ಅವರ ಮಗಳು.

(ಪರಸ್ಪರ ತಲೆ ಬಾಗಿಸುವರು. ಅಲ್ಲಿಂದ ಒಂದು ಕುರ್ಚಿಯನ್ನು ಮುಂದಕ್ಕೆ ಎಳೆದುಕೊಂಡು ಶ್ರೀಮತಿ ಹಿಗ್ಗಿನ್ಸ್ ಮತ್ತು ಶ್ರೀಮತಿ ಹಿಲ್ ನಡುವೆ ಕೂಡುವಳು.)

ಪಿಕರಿಂಗ್ : ನಾವು ಏತಕ್ಕೆ ಬಂದಿದ್ದೇವೆ ಎಂದು ಹೆನ್ರಿ ಹೇಳಿದ್ದಾರೊ ?

ಹಿಗ್ಗಿನ್ಸ್ : (ಭುಜದ ಹಿಂದೆ ಮುಖ ತಿರುಗಿಸಿ ಮಾತನಾಡುತ್ತ) ನಡುವೆ ಏನೊ ಬಂತು, ಹಾಳು.

ಶ್ರೀಮತಿ ಹಿಗ್ಗಿನ್ಸ್ : ಹೆನ್ರಿ....ಹೆನ್ರಿ...ನೋಡು.

ಶ್ರೀಮತಿ ಹಿಲ್ : (ಅರ್ಧ ಏಳುತ್ತ) ನಾವು ಅಡ್ಡಿಯಾಗಿದ್ದೇವೇನು ?

ಶ್ರೀಮತಿ ಹಿಗ್ಗಿನ್ಸ್ : (ಎದ್ದು ಆಕೆಯನ್ನು ಪುನಃ ಕೂಡಿಸುತ್ತ) ಅಲ್ಲಮ್ಮ ಅಲ್ಲ ; ಇದಕ್ಕಿಂತ ಒಳ್ಳೆಯ ಸುಸಮಯದಲ್ಲಿ ನೀವು ಬರಲಾರಿರಿ. ನಮ್ಮ ಸ್ನೇಹಿತ ರೊಬ್ಬರು ಬರುತ್ತಾರೆ. ಅವರನ್ನು ನೀವು ನೋಡಬೇಕು.

ಹಿಗ್ಗಿನ್ಸ್ : (ಭರವಸೆಯಿಂದ ತಿರುಗುತ್ತ) ಹೌದು, ಹೌದು, ನಮಗಿಬ್ಬರು ಮೂವರು ಜನ ಬೇಕಿತ್ತು. ನೀವಾದ್ರೂ ನಡೆಯುತ್ತೆ. ಸಂತೋಷ.

[ಪರಿಚಾರಿಕೆ ಬಂದು ಶ್ರೀ ಐನ್ಸ್‌ಫರ್ಡ್ ಹಿಲ್ ಎಂದು ತಿಳಿಸುವಳು.]

ಹಿಗ್ಗಿನ್ಸ್ : (ಸುಮಾರು ಕೇಳಿಸುವಂತೆ, ತಾಳ್ಮೆ ಕೆಟ್ಟು) ದೇವರೇ...ಅದೇ ಮನೆಯ ಇನ್ನೂ ಒಬ್ಬರು.

ಫ್ರೆಡ್ಡಿ : (ಶ್ರೀಮತಿ ಹಿಗ್ಗಿನ್ಸ್ ಕೈ ಕುಲುಕುತ್ತ) ಆರೋಗ್ಯವೆ !

ಶ್ರೀಮತಿ ಹಿಗ್ಗಿನ್ಸ್ : ಸಂತೋಷ, ಬನ್ನಿ. (ಪರಿಚಯ ಮಾಡಿಕೊಡುತ್ತ) ಇವರು ಕರ್ನಲ್ ಪಿಕರಿಂಗ್.

ಫ್ರೆಡ್ಡಿ : (ತಲೆಬಾಗಿ) ಆರೋಗ್ಯವೆ !

ಶ್ರೀಮತಿ ಹಿಗ್ಗಿನ್ಸ್ : ನನ್ನ ಮಗ ಪ್ರೊ. ಹಿಗ್ಗಿನ್ಸ್, ನಿಮಗೆ ಗೊತ್ತಿಲ್ಲ ಅಂತ ಕಾಣುತ್ತೆ.

ಫ್ರೆಡ್ಡಿ : (ಹಿಗ್ಗಿನ್ಸಿನ ಬಳಿಗೆ ಹೋಗಿ) ಆರೋಗ್ಯವೆ !

ಹಿಗ್ಗಿನ್ಸ್ : (ಅವನನ್ನು ಜೇಬುಗಳ್ಳನೆಂಬಂತೆ ನೋಡುತ್ತ) ಪ್ರಮಾಣ ಮಾಡಿ ಹೇಳಬಲ್ಲೆ ನಿ...ಮ್ಮ...ನ್ನು ಹಿಂದೆ ಎಲ್ಲೊ ನೋಡಿದ್ದೇನೆ, ಎಲ್ಲಿ ಹೇಳಿ ?

ಫ್ರೆಡ್ಡಿ : ಇಲ್ಲ ಅಂತ ಕಾಣುತ್ತೆ.

ಹಿಗ್ಗಿನ್ಸ್ : (ಬಾಗಿ) ಹೋಗಲಿ ಬಿಡಿ. ಅದರಿಂದ ಏನಾಗಬೇಕು ? (ಫ್ರೆಡ್ಡಿಯ ಕೈ ಕುಲುಕುತ್ತ)

ಹಿಗ್ಗಿನ್ಸ್ : ಸರಿ...ಅಂತೂ, ನಾವೆಲ್ಲ ಇಲ್ಲಿ ಇದ್ದೇವೆ (ಶ್ರೀಮತಿ ಹಿಲ್ ಎಡಕ್ಕೆ ಕುಳಿತು ಕೊಳ್ಳುತ್ತಾನೆ.) ಎಲಿಸ ಬರೋತನಕ ಹಾಳಾದ್ದು ಏನು ಮಾತನಾಡುತ್ತ ಇರೋದು ?

ಶ್ರೀಮತಿ ಹಿಗ್ಗಿನ್ಸ್ : ಹೆನ್ರಿ, ರಾಯಲ್ ಸೊಸೈಟಿಯ ಸಂಜೆಯ ಅಧಿವೇಶನಗಳಿಗೆ ನೀನೆ ಜೀವ, ಆತ್ಮ ಎನ್ನುತ್ತಾರೆ. ನಿಜವಾಗಿ ಸಾಮಾನ್ಯ ಸಂದರ್ಭಗಳಲ್ಲಿ ನಿನ್ನ ನಡವಳಿಕೆ ತಡೆಯೋಕಾಗೋಲ್ಲಪ್ಪ.

ಹಿಗ್ಗಿನ್ಸ್ : ಓಹ್... ನಾನು ಹಾಗೇನು ? ಕ್ಷಮಿಸಬೇಕು. (ಇದ್ದಕ್ಕಿದ್ದಂತೆ ಹರ್ಷ ದಿಂದ) ಹಾಗೇ ಕಾಣುತ್ತದೆ. (ಮೇಲೆತ್ತಿದ ಧ್ವನಿಯಲ್ಲಿ) ಹ, ಹಾ....

ಮಗಳು : (ಮದುವೆಗೆ ಹಿಗ್ಗಿನ್ಸ್ ಯೋಗ್ಯನಾದವನೆಂದು ಪರ್ಯಾಲೋಚಿಸಿ) ನಿಮ್ಮಲ್ಲಿ ಸಹಾನುಭೂತಿ ಉಂಟಾಗುತ್ತದೆ. ನನಗೂ ಚಿಲ್ರೆ ಮಾತು ಆಡೋಕೆ ಬರೋದಿಲ್ಲ. ಜನ ಮನಸ್ಸಲ್ಲಿ ಇದ್ದುದನ್ನೂ ನಿಜವಾಗಿ ಯೋಚಿಸಿದ್ದನ್ನೂ ಹೇಳಿದರೆ ಎಷ್ಟೋ ಚೆನ್ನಾಗಿರುತ್ತಿತ್ತು !

ಹಿಗ್ಗಿನ್ಸ್ : (ಪುನಃ ಖಿನ್ನನಾಗಿ) ದೇವರು ಪಾರುಮಾಡಲಿ.

ತಾಯಿ : (ತನ್ನ ಮಗಳ ಮಾತನ್ನು ಮುಂದುವರಿಸುತ್ತ) ಹಾಗೇಕೆ ಹೇಳುತ್ತೀರಿ ?

ಹಿಗ್ಗಿನ್ಸ್ : ಯಾವುದು ಯೋಚನೆಗೆ ತಕ್ಕುದು ಎಂದು ಜನಕ್ಕೆನಿಸುವುದೊ ಅದು ಸಾಕಷ್ಟು ಕ್ಲೇಶಕರವೇ ಅನ್ನಿ ! ಅದನ್ನು ದೇವರು ಬಲ್ಲ ; ಅವರು ನಿಜವಾಗಿ ಏನನ್ನು ಯೋಚಿಸುತ್ತಿದ್ದಾರೆ ಎಂಬುದರಿಂದ ಅವರ ಹೊರ ತೋರಿಕೆ ಮುರಿದು ಬೀಳುತ್ತೆ. ನಿಜವಾಗಿ ನಾನು ಈಗ ಏನು ಯೋಚನೆ ಮಾಡುತ್ತಿದ್ದೇನೆ ಎಂಬುದನ್ನು ಪ್ರಕಟಗೊಳಿಸಿದರೆ ಪ್ರಿಯವಾಗುತ್ತೆ ಅಂತೀರ ?

ಮಗಳು : (ಉಲ್ಲಾಸದಿಂದ) ಮಾನವರನ್ನು ಕುರಿತು ಅದರಲ್ಲಿ ಅಷ್ಟು ಅವಿಶ್ವಾಸ ವಿದೆಯೆ ?

ಹಿಗ್ಗಿನ್ಸ್ : ಅವಿಶ್ವಾಸ ! ಯಾವ ಅವಿವೇಕಿ ಹೇಳಿದ್ದು ? ಅವಿಶ್ವಾಸ ಅಂತ ! ಸಭ್ಯ ವಾಗುವುದಿಲ್ಲ ಎಂದು ನನ್ನ ಅರ್ಥ.

ತಾಯಿ : (ಗಂಭೀರವಾಗಿ) ನಿಮ್ಮ ಮನಸ್ಸಿನಲ್ಲಿ ನಿಜವಾಗಿ... ಹಾಗಿಲ್ಲ ಅಂದು ಕೊಂಡಿದ್ದೇನೆ ಹಿಗ್ಗಿನ್ಸ್ ಅವರೆ.

ಹಿಗ್ಗಿನ್ಸ್ : ನೋಡಿ, ನಾವೆಲ್ಲ ಸ್ವಲ್ಪ ಹೆಚ್ಚು, ಸ್ವಲ್ಪ ಕಡಮೆ, ಕಾಡು ಜನ. ನಾವು ನಾಗರಿಕರು, ಸಂಸ್ಕೃತರು ಅಂದುಕೊಳ್ಳುತ್ತಾರೆ, ಜನ, ಕವಿತೆ, ತತ್ವಶಾಸ್ತ್ರ, ಕಲೆ, ವಿಜ್ಞಾನ ಇತ್ಯಾದಿಗಳಲ್ಲಿ ಎಲ್ಲವನ್ನೂ ತಿಳಿದುಕೊಂಡಿದ್ದೇವೆ ಅಂತ. ಆದರೆ ನಮ್ಮಲ್ಲಿ ಎಷ್ಟು ಜನಕ್ಕೆ ಈ ಮಾತುಗಳ ಅರ್ಥವಾದರೂ ಗೊತ್ತಿದೆ ? (ಕುಮಾರಿ ಹಿಲ್‌ಗೆ) ಕವಿತೆಯ ವಿಷಯವಾಗಿ ನಿಮಗೇನು ಗೊತ್ತು ? (ಶ್ರೀಮತಿ ಹಿಲ್‌ಗೆ) ನಿಮಗೆ ವಿಜ್ಞಾನದ ವಿಷಯ ಏನು ಗೊತ್ತಿದೆ ? (ಫ್ರೆಡ್ಡಿಯನ್ನು ತೋರಿಸಿ) ಇವರಿಗೆ ಕಲೆ, ವಿಜ್ಞಾನ ಅಥವಾ ಇನ್ನಾವ ವಿಷಯ ಏನು ಗೊತ್ತಿದೆ ? ನನ್ನ ತಲೆ, ತತ್ವ ಶಾಸ್ತ್ರದ ವಿಚಾರ ನನಗೇನು ಗೊತ್ತಿದೆ ಎಂದು ನಿಮ್ಮ ಕಲ್ಪನೆ ?

ಶ್ರೀಮತಿ ಹಿಗ್ಗಿನ್ಸ್ : (ಎಚ್ಚರಿಕೆ ಕೊಡುತ್ತ) ಅಥವಾ ಮರ್ಯಾದೆ, ನಡವಳಿಕೆಯ ವಿಚಾರ ಅನ್ನು—ಹೆನ್ರಿ ?

[ಪರಿಚಾರಕಳು ಶ್ರೀಮತಿ ಡೂಲಿಟ್ಲ್ ಎಂದು ಹೇಳಿ ಅವಳನ್ನು ಒಳಗೆ ಕಳಿಸಿ ಹೋಗುವಳು]

ಹಿಗ್ಗಿನ್ಸ್ : (ಅವಸರದಿಂದ ಎದ್ದು ತನ್ನ ತಾಯಿಯ ಬಳಿಗೆ ಓಡಿ ಹೋಗಿ) ಅವಳೇ, ಬಂದಿದ್ದಾಳಮ್ಮ. (ಉಂಗುಷ್ಟದ ಮೇಲೆ ನಿಂತು ತನ್ನ ತಾಯಿಯ ತಲೆ ಮೇಲಿಂದ ಆಕೆಗೆ ಮನೆಯ ಯಜಮಾನಿತಿ ಇವಳೇ ಎಂದು ಸೂಚಿಸುತ್ತಾನೆ. ಎಲಿಸ ಉಡುಪು ಬಹು ನಯವಾಗಿದೆ. ವಿಶೇಷ ಪ್ರತಿಷ್ಠೆಯನ್ನೂ ಚೆಲುವನ್ನೂ ಕಣ್ಣಿಗೆ ಬೀಳಿಸುತ್ತಿದೆ. ಆಕೆ ಪ್ರವೇಶಿಸುತ್ತಲೆ ಎಲ್ಲರೂ ಏಳುತ್ತಾರೆ. ಎಲ್ಲರ ಎದೆಯ ವೇಗ ಹೆಚ್ಚುತ್ತದೆ. ಹಿಗ್ಗಿನ್ಸ್ ಮಾಡಿದ ಸೂಚನೆಗಳಿಂದ ಚೆನ್ನಾಗಿ ಅಭ್ಯಾಸ ಮಾಡಿದ ಶ್ರೀಮಂತಿಕೆಯ ವಿಲಾಸದಲ್ಲಿ ಶ್ರೀಮತಿ ಹಿಗ್ಗಿನ್ಸ್ ಬಳಿಗೆ ಎಲಿಸ ಬರುತ್ತಾಳೆ.)

ಲಿಸ : (ತುಂಬಾ ಚೊಕ್ಕಟವಾದ, ಸರಿಯಾಗಿ ಅಭ್ಯಾಸ ಮಾಡಿದ ಉಚ್ಚಾರಣೆಯಿಂದ ಮಾತನಾಡುತ್ತಾಳೆ. ಧ್ವನಿಯಲ್ಲಿ ಹೆಚ್ಚಿನ ಇಂಪಿದೆ.) ಶ್ರೀಮತಿ ಹಿಗ್ಗಿನ್ಸ್, ಆರೋಗ್ಯವೆ ತಾಯಿ ? (ಹಿಗ್ಗಿನ್ಸ್ ಹೆಸರಿನಲ್ಲಿರುವ 'ಹ'ಕಾರವನ್ನು ಸರಿಯಾಗಿ ಉಚ್ಚಾರಣೆ ಮಾಡುತ್ತಿದ್ದೇನೆ ಎಂದು ಬಿಗಿಯಾಗಿ ಉಸಿರು ಬಿಡುತ್ತ ಜಯಶಾಲಿ ಯಾಗುತ್ತಾಳೆ.) ನಾನಿಲ್ಲಿಗೆ ಬರಬಹುದೆಂದು ಹಿಗ್ಗಿನ್ಸ್ ಹೇಳಿದರು.

ಶ್ರೀಮತಿ ಹಿಗ್ಗಿನ್ಸ್ : (ಆದರದಿಂದ) ತುಂಬಾ ಸರಿ. ನಿಮ್ಮನ್ನು ನೋಡಿ ತುಂಬಾ ಸಂತೋಷವಾಯಿತು.

ಪಿಕರಿಂಗ್ : ಆರೋಗ್ಯವಾಗಿದ್ದೀರ, ಮಿಸ್ ಡೂಲಿಟ್ಲ್.

ಲಿಸ : (ಆತನ ಕೈ ಕುಲುಕಿಸುತ್ತ) ಕರ್ನಲ್ ಪಿಕರಿಂಗ್ ಅಲ್ಲವೆ ?

ಶ್ರೀಮತಿ ಹಿಲ್ : ನಾವು ಹಿಂದೆ ನಿಮ್ಮನ್ನು ನೋಡಿದ್ದೇವೆ. ಮಿಸ್ ಡೂಲಿಟ್ಲ್, ನಿಮ್ಮ ಕಣ್ಣುಗಳನ್ನು ಕಂಡ ನೆನಪಿದೆ.

ಲಿಸ : ನೀವು ಆರೋಗ್ಯವೆ ? (ಹಿಗ್ಗಿನ್ಸ್ ಬಿಟ್ಟು ಹೋದ ಸ್ಥಳದಲ್ಲಿ ನಯವಿಲಾಸದಿಂದ ಕುಳಿತುಕೊಳ್ಳುವಳು.)

ಶ್ರೀಮತಿ ಹಿಲ್ : (ಪರಿಚಯ ಮಾಡಿಕೊಡುತ್ತ) ಇವಳು ನನ್ನ ಮಗಳು ಕ್ಲ್ಯಾರ.

ಲಿಸ : ಆರೋಗ್ಯವೆ ?

ಕ್ಲ್ಯಾರ : (ಕಯಾಲಿ ತಿರುಗಿದಂತೆ) ನೀವು ಆರೋಗ್ಯವೆ ? (ಎಲಿಸ ಪಕ್ಕದಲ್ಲಿ ಕುಳಿತುಕೊಳ್ಳುವಳು. ಅವಳ ಕಣ್ಣು ತುಂಬಾ ಎಲಿಸಾ ಚಿತ್ರವೇ.)

ಫ್ರೆಡ್ಡಿ : (ಅವರು ಕುಳಿತಿದ್ದ ಪೀಠದ ಕಡೆ ಬಂದು) ನಿಶ್ಚಯವಾಗಿ, ನಿಮ್ಮನ್ನು ನೋಡಿದ ಸಂತೋಷ ಉಂಟು.

ಶ್ರೀಮತಿ ಹಿಲ್ : (ಪರಿಚಯ ಮಾಡಿಕೊಡುತ್ತ) ಈತ ನನ್ನ ಮಗ ಫ್ರೆಡ್ಡಿ.

ಲಿಸ : ನೀವು ಆರೋಗ್ಯವೆ ? (ಫ್ರೆಡ್ಡಿ ತಲೆಬಾಗಿಸಿ ಎಲಿಸಬೀತನ್ ಕುರ್ಚಿಯಲ್ಲಿ ಮುಗ್ಧನಾಗಿ ಕುಳಿತುಕೊಳ್ಳುತ್ತಾನೆ.)

ಹಿಗ್ಗಿನ್ಸ್ : (ಇದ್ದಕ್ಕಿದ್ದಂತೆ) ದೇವರಾಣೆಗೂ, ಹೌದು, ನೆನಪು ಮರುಕೊಳಿಸುತ್ತದೆ. (ಎಲ್ಲರೂ ಅವನ ಕಡೆ ನೋಡುವರು.) ಕೋವೆಂಟ್ ಗಾರ್ಡನ್ ! (ಶೋಚನೀಯವಾಗಿ) ಎಂಥಾ ಸುಡುಗಾಡು !

ಶ್ರೀಮತಿ ಹಿಗ್ಗಿನ್ಸ್ : ಹೆನ್ರಿ......ನೋಡು, ನೋಡು !

(ಮೇಜಿನ ಮೇಲೆ ಕುಳಿತುಕೊಳ್ಳಲಿರುವನು.)

ನನ್ನ ಬರವಣಿಗೆ ಮೇಜಿನ ಮೇಲೆ ಕುಳಿತುಕೊಳ್ಳಬೇಡ. ಅದನ್ನು ಮುರಿದು ಹಾಕುತ್ತೀಯೆ !

ಹಿಗ್ಗಿನ್ಸ್ : (ತಪ್ಪಿತಸ್ಥನಂತೆ) ತಪ್ಪಾಯಿತು—ಅಮ್ಮ. (ವಿಚಿತ್ರವಾಗಿ ತಿರುಗಾಡುತ್ತ ಏನನ್ನೋ ಗೊಣಗುತ್ತ ಕೊನೆಗೆ ಮೆತ್ತೆಯ ಪೀಠದ ಬಳಿಗೆ ಬಂದು ಅದನ್ನು ಮುರಿಯುವಂತೆ ಕೂಡುವನು. ಶ್ರೀಮತಿ ಹಿಗ್ಗಿನ್ಸ್ ಅದನ್ನು ನೋಡಿ, ಏನನ್ನೂ ಹೇಳದೆ ತಡೆದುಕೊಳ್ಳುವಳು.)

[ಸ್ವಲ್ಪ ಹೊತ್ತು ಅಸ್ಪಷ್ಟ ಮೌನ]

ಶ್ರೀಮತಿ ಹಿಗ್ಗಿನ್ಸ್ : (ಕಡೆಗೆ ಸಂಭಾಷಣೆ ತೊಡಗುವಂತೆ) ಮಳೆ ಬಂದೀತು ಅಂತೀರೇನು ?

ಲಿಸ : ಈ ದ್ವೀಪಗಳ ಪಶ್ಚಿಮಕ್ಕೆ ಕವಿದಿರುವ ತೆಳುವಾದ ಮುಗಿಲಿನ ಒತ್ತಡ, ಪೂರ್ವ ದಿಕ್ಕಿನಲ್ಲಿ ನಿಧಾನವಾಗಿ ಚಲಿಸುವ ಸಂಭವವುಂಟು. ವಾಯುಮಾಪಕ ಯಂತ್ರ ಸೂಚಿಸುವಂತೆ ಪರಿಸ್ಥಿತಿಯಲ್ಲಿ ಯಾವ ದೊಡ್ಡ ಬದಲಾವಣೆಯ ಸೂಚನೆಯೂ ಕಾಣಬರುವುದಿಲ್ಲ.

ಫ್ರೆಡ್ಡಿ : ಹ, ಹ್ಹಾ......ಎಷ್ಟು ಭಯಂಕರ ವಿಚಿತ್ರವಾಗಿದೆ ?

ಲಿಸ : ಅದರಲ್ಲಿ ಏನು ತಪ್ಪು ಅಂತೀರ್ರಿ ? ನಾನು ಸರಿಯಾಗಿ ಹೇಳಿದ್ದೇನೆ ಎಂದು ಶಪಥ ಮಾಡಬಲ್ಲೆ.

ಫ್ರೆಡ್ಡಿ : ಕೊಲ್ಲುವಂತಿದೆ.

ಶ್ರೀಮತಿ ಹಿಲ್ : ಹೆಚ್ಚು ಚಳಿ ಹಿಡಿಯುವುದಿಲ್ಲ ಎಂದುಕೊಂಡಿದ್ದೇನೆ. ಊರಲ್ಲೆಲ್ಲ ತುಂಬಾ ಇನ್‌ಫ್ಲುಯೆನ್ಸಾ ಇದೆ. ಪ್ರತಿ ವಸಂತದಲ್ಲಿಯೂ ನಮ್ಮ ಮನೆಯಲ್ಲಿ ಎಲ್ಲರಿಗೂ ಶೀತ ಹಿಡಿಯುತ್ತೆ.

ಲಿಸ : (ಭೀಕರವಾಗಿ) ನಮ್ಮ ಚಿಕ್ಕಮ್ಮ ಇನ್‌ಫ್ಲುಯೆನ್ಸಾದಿಂದ ಸತ್ತರು ಎನ್ನುತ್ತಾರೆ.

(ಶ್ರೀಮತಿ ಹಿಲ್ ಸಹಾನುಭೂತಿಯಿಂದ ಲೊಚಗುಟ್ಟುತ್ತಾಳೆ)

(ಅದೇ ದುರಂತ ಧ್ವನಿಯಲ್ಲಿ) ನನ್ನ ನಂಬಿಕೆ ಬೇರೆ ; ಆ ಮುದುಕಿಗೆ ಏನೊ ಮಾಡಿದರು ಅನ್ನಿಸುತ್ತೆ.

ಶ್ರೀಮತಿ ಹಿಗ್ಗಿನ್ಸ್ : (ತೋಚದೆ) ಏನೊ ಮಾಡಿದರು ಅಂತ ?

ಲಿಸ : ಹೌ-ಉ-ಉ-ದು. ದೇವರ ಪ್ರೀತಿ ನಿಮ್ಮ ಮೇಲಿರಲಿ. ಅವಳು ಇನ್‌ಫ್ಲುಯೆನ್ಸಾದಿಂದ ಯಾಕೆ ಸಾಯಬೇಕು ? ಹಿಂದಿನ ವರ್ಷ ಡಿಫ್ತೀರಿಯಾದಿಂದಲೇ ಬದುಕಿಕೊಂಡಳು. ಇವೇ ಕಣ್ಣಿಂದ ನಾನು ನೋಡಿದ್ದೇನೆ. ಮೈಯೆಲ್ಲ ನೀಲಿ ಕಟ್ಟಿಹೋಗಿತ್ತು. ಅದನ್ನು ಕಂಡು ಅವಳು ಸತ್ತುಹೋದಳು ಅಂದು ಕೊಂಡಿದ್ದರು. ನಮ್ಮಪ್ಪ ಅವಳ ಗಂಟಲಲ್ಲಿ ಒಂದು ಸೌಟಿಂದ ಜಿನ್ ಬಿಡುತ ಇದ್ದರು. ಆಮೇಲೆ, ಇದ್ದಕ್ಕಿದ್ದಂತೆ, ಚಮಚದಿಂದ ಬೋಗುಣಿಯನ್ನೇ ಕೀಳುವಂತೆ ಕಚ್ಚಿಬಿಟ್ಟಳು.

ಶ್ರೀಮತಿ ಹಿಲ್ : (ಬೆಚ್ಚಿ) ಅಯ್ಯಯ್ಯೋ.

ಲಿಸ : (ಅಪರಾಧವನ್ನು ಹೇರುತ್ತ) ಅಷ್ಟು ಶಕ್ತಿ ಇರುವ ಹೆಂಗಸು ಇನ್‌ಫ್ಲುಯೆನ್ಸಾದಿಂದ ಸಾಯುವುದಕ್ಕೆ ಏನಾಗಿತ್ತು ? ನನ್ನ ಪಾಲಿಗೆ ಬರಬೇಕಾಗಿದ್ದ ಅವಳ ಸ್ಟ್ರಾ ಹ್ಯಾಟ್ ಎಲ್ಲಿ ಹೋಯಿತು ಎನ್ನುತ್ತೇನೆ. ಯಾರೊ ಹೊಡೆದಿರಬೇಕು. ನಾನು ಹೇಳುವುದು ಏನು ಅಂದರೆ, ಅದನ್ನು ಹೊಡೆದೋರೆ ಅವಳನ್ನೂ ಏನೊ ಮಾಡಿರಬೇಕು ಅಂತ.

ಶ್ರೀಮತಿ ಹಿಲ್ : ಅವಳಿಗೆ ಏನೋ ಮಾಡಿದರು ಅಂದರೆ ಅರ್ಥವೇನು ?

ಹಿಗ್ಗಿನ್ಸ್ : (ಅವಸರದಲ್ಲಿ) ಅದು ಚಿಲ್ಲರೆ ಮಾತಿನ ಹೊಸ ರೀತಿ. ಒಬ್ಬರನ್ನು ಏನೊ ಮಾಡಿದರು ಎಂದರೆ ಅವರನ್ನು ಕೊಂದರು ಅಂತ.

ಶ್ರೀಮತಿ ಹಿಲ್ : (ಎಲಿಸಳನ್ನು ಕುರಿತು ಭೀಕರವಾಗಿ) ನಿಜವಾಗಿ ನಿಮ್ಮ ಚಿಕ್ಕಮ್ಮನನ್ನು ಯಾರೊ ಕೊಂದರು ಅಂತ ನೀವು ನಂಬೋಲ್ಲ ಅಲ್ಲ ?

ಲಿಸ : ನಂಬುವುದಿಲ್ಲವೆ ? ಯಾರ ಜೊತೆಯಲ್ಲಿ ಅವಳಿದ್ದಳೊ ಅವರು ಹ್ಯಾಟ್‌ಗಾಗಿ ಅಲ್ಲ, ಒಂದು ಹ್ಯಾಟ್ ಪಿನ್‌ಗೋಸ್ಕರ ಅವಳನ್ನು ಕೊಲ್ಲುತ್ತಿದ್ದರು.

ಶ್ರೀಮತಿ ಹಿಲ್ : ನಿಮ್ಮ ತಂದೆಯವರು ಅವಳ ಗಂಟಲ ಒಳಕ್ಕೆ ಹಾಗೆ ಮದ್ಯ ಸುರಿಯುತ್ತ ಇದ್ದರು ಎಂದದ್ದು ಸರಿಯಾಗಲಿಲ್ಲ ಅಲ್ಲ ? ಅದರಿಂದ ಆಕೆಯ ಜೀವ ಹೋಗಬಹುದಾಗಿತ್ತು.

ಲಿಸ : ಅವಳನ್ನು ಕೊಲ್ಲೋದೆ ? ಜಿನ್ ಅವಳಿಗೆ ತಾಯಿ ಹಾಲು ಇದ್ದ ಹಾಗೆ. ಅಲ್ಲದೆ ತನ್ನ ಗಂಟಲಲ್ಲೂ ಬೇಕಾದಷ್ಟು ಆ ಮೊದಲೇ ನಮ್ಮಪ್ಪ ಸುರಿದು ಕೊಂಡಿದ್ದುದರಿಂದ, ಅದು ಎಷ್ಟು ಒಳ್ಳೇದು ಅಂತ ಅವನಿಗೆ ಗೊತ್ತಿತ್ತು.

ಶ್ರೀಮತಿ ಹಿಲ್ : ಎಂದರೆ ಅವರು ಕುಡಿಯುತ್ತ ಇದ್ದರೆ ?

ಲಿಸ : ಕುಡಿಯೋದು ? ಖಂಡಿತ ನನ್ನ ಮಾತು ನಿಜ. ತುಂಬಾ ಹಳೇ ಅಭ್ಯಾಸ ಅವರದು.

ಶ್ರೀಮತಿ ಹಿಲ್ : ನಿಮಗೆ ಅದು ಭಯಂಕರವಾಗಿರಬೇಕು.

ಲಿಸ : ಸ್ವಲ್ಪವೂ ಇಲ್ಲ. ನನಗೆ ಕಾಣಿಸುವಂಥ ಕೇಡು ಅವರಿಗೂ ಏನೂ ಆಗಲಿಲ್ಲ. ಅವರಿಗೂ ಕ್ರಮವಾದ ಅಭ್ಯಾಸ ಅಂತಿಲ್ಲ. (ಹರ್ಷದಲ್ಲಿ) ಒಂದೊಂದು ಸಲ, ಹಟಾತ್ತಾಗಿ ಮನಸ್ಸು ಉಕ್ಕಿದಂತೆ, ಹಾಗೆ ಆಗುವುದು. ಯಾವಾಗಲಾದರೂ, ನೋಡಿ, ಒಂದು ತೊಟ್ಟು ಒಳಗಡೆ ಹೋದರೆ ಆತ ಹೆಚ್ಚು ಪ್ರಸನ್ನವಾಗುತ್ತಿದ್ದರು. ಅವರಿಗೆ ಕೆಲಸ ಇಲ್ಲದಾಗ, ಅವರಿಗೆ ಅಮ್ಮ ನಾಲ್ಕು ಪೆನ್ನಿ ಕೊಡುತ್ತಿದ್ದಳು. ಹೊರಗೆ ಹೋಗಿ ಕುಡಿದು ಉಲ್ಲಾಸವಾಗಿ, ಮನಸ್ಸು ಪ್ರಿಯವಾದ ಮೇಲೆ ಹಿಂತಿರುಗಿ ಬನ್ನಿ ಅನ್ನುತ್ತಿದ್ದಳು. ಎಷ್ಟೋ ಹೆಂಗಸರ ಗತಿ ಹೀಗೇ. ಗಂಡಂದಿರಿಗೆ ಕುಡಿಸಿ, ಜೊತೆ ಬದುಕಿಗೆ ಅವರನ್ನು ಯೋಗ್ಯರನ್ನಾಗಿ ಮಾಡಿಕೊಬೇಕಾಗುತ್ತದೆ. (ಪೂರ್ತಿ ಧಾರಾಳದಿಂದ) ನೋಡಿ, ಹೇಗಾಗುತ್ತೆ. ಗಂಡಸಿನಲ್ಲಿ ಅಂತಃಸಾಕ್ಷಿ ಎಂಬುದು ಸ್ವಲ್ಪ ಇದ್ದರೂ ಅವನ ಬುದ್ಧಿ ನೆಟ್ಟಗಿದ್ದಾಗ, ಅವನು ಅಧೀರನಾಗುತ್ತಾನೆ. ಅವನ ಉಲ್ಲಾಸ ಕುಗ್ಗುತ್ತದೆ. ಒಂದು ತೊಟ್ಟು ಪಾನಕ ಹಾಕಿದರೆ ಆ ಕುಗ್ಗು ಎಗರಿ ಹೋಗುತ್ತದೆ. ಅವನಿಗೆ ಸುಖವಾಗುತ್ತದೆ. (ಅಡಗಿಸಿದ ನಗುವನ್ನು ತಡೆಯಲಾರದೆ ಇದ್ದ ಫ್ರೆಡ್ಡಿಯನ್ನು ಕುರಿತು) ಇಲ್ಲಿ ನೋಡಿರಿ, ಯಾಕರೀ ಹಾಗೆ ಇಹ್ಹಿಹ್ಹೀ ಅಂತ ನಗುತ್ತಿದ್ದೀರಿ ?

ಫ್ರೆಡ್ಡಿ : ಈ ಹೊಸ ರೀತಿಯ ಕಿರುಮಾತನ್ನು ಕೇಳಿ. ಅದನ್ನು ನೀವು ಬಹಳ ಚೆನ್ನಾಗಿ ಆಡುತ್ತಿದ್ದೀರಿ.

ಲಿಸ : ನಾನು ಸರಿಯಾಗಿ ಆಡುತ್ತಿದ್ದರೆ ಅದನ್ನು ಕೇಳಿ ನೀವು ಏಕೆ ನಗುತ್ತಿದ್ದಿರಿ ? (ಹಿಗ್ಗಿನ್ಸ್‌ಗೆ) ಹೇಳಕೂಡದ್ದನ್ನು ಏನಾದರೂ ಹೇಳಿದೆನೆ ?

ಶ್ರೀಮತಿ ಹಿಗ್ಗಿನ್ಸ್ : (ನಡುವೆ ಬಾಯಿ ಹಾಕಿ) ಸುತರಾಂ ಇಲ್ಲ ಮಿಸ್ ಡೂಲಿಟ್ಲ್.

ಲಿಸ : ಸದ್ಯ, ದೇವರದಯ. (ಉದಾರವಾಗಿ) ನಾನು ಯಾವಾಗಲೂ ಹೇಳೋದು ಏನು ಅಂದರೆ—

ಹಿಗ್ಗಿನ್ಸ್ : (ಎದ್ದು ಗಡಿಯಾರ ನೋಡಿಕೊಳ್ಳುತ್ತ) ಅಹ, ಹಂ......

ಲಿಸ : (ಅವನ ಕಡೆ ತಿರುಗಿ ಸೂಚನೆ ತೆಗೆದುಕೊಂಡು ಏಳುತ್ತ) ಸರಿ, ನಾನು ಹೋಗ ಬೇಕು.

(ಎಲ್ಲರೂ ಏಳುವರು. ಫ್ರೆಡ್ಡಿ ಬಾಗಿಲ ಬಳಿಗೆ ಹೋಗುವನು.)

ನಿಮ್ಮನ್ನೆಲ್ಲ ಕಂಡದ್ದು ಸಂತೋಷ. ನಮಸ್ಕಾರ. (ಶ್ರೀಮತಿ ಹಿಗ್ಗಿನ್ಸ್ ಕೈ ಕುಲುಕುತ್ತಾಳೆ.)

ಶ್ರೀಮತಿ ಹಿಗ್ಗಿನ್ಸ್: ನಮಸ್ಕಾರ.

ಲಿಸ : ನಮಸ್ಕಾರ, ಕಲ್ನೆಲ್ ಪಿಕರಿಂಗ್.

ಪಿಕರಿಂಗ್ : ನಮಸ್ಕಾರ, ಮಿಸ್ ಡೂಲಿಟ್ಲ್ (ಕೈ ಕುಲುಕುತ್ತಾನೆ.)

ಲಿಸ : (ಇತರರ ಕಡೆ ತಲೆ ಒಲೆಯುತ್ತ) ನಮಸ್ಕಾರ, ಎಲ್ಲರಿಗೂ.

ಫ್ರೆಡ್ಡಿ : (ಅವಳಿಗೆ ಬಾಗಿಲು ತೆಗೆದು) ಪಾರ್ಕಿನಲ್ಲಿ ನಡೆದುಕೊಂಡು ಹೋಗುತ್ತೀರ ಮಿಸ್ ಡೂಲಿಟ್ಲ್ ? ಹಾಗಿದ್ದರೆ—

ಲಿಸ : ನಡೆಯೋದು ! ಉಹೂಂ...ನಾನೇಕೆ ನಡಕೊಂಡು ಹೋಗ್ಲಿ ? ನನಗೆ ತಿಕ್ಕಲು ಹಿಡಿದಿದೆಯೆ ? (ಎಲ್ಲರೂ ಭ್ರಾಂತರಾಗುವರು.) ಟ್ಯಾಕ್ಸಿಯಲ್ಲಿ ಹೋಗ್ತೇನೆ. (ಹೊರಗೆ ಹೋಗುವಳು.)

[ಪಿಕರಿಂಗ್ ಮೇಲುಸಿರು ಬಿಡುತ್ತ ಕುಳಿತುಕೊಳ್ಳುವನು. ಫ್ರೆಡ್ಡಿ ಹೊರ ಕೈಸಾಲೆಗೆ ಹೋಗಿ ಎಲಿಸಳನ್ನು ಕಾಣಲು ಇನ್ನೊಮ್ಮೆ ಪ್ರಯತ್ನಿಸುವನು.]

ಶ್ರೀಮತಿ ಹಿಲ್ : (ಧಕ್ಕೆ ಬಡಿದವಳಂತೆ) ಸರಿ, ಈ ಹೊಸ ರೀತಿಗಳಿಗೆ ಹೊಂದಿ ಕೊಳ್ಳುವುದಕ್ಕೆ ನನಗೆ ನಿಜವಾಗಿ ಆಗೋದಿಲ್ಲ.

ಕ್ಲ್ಯಾರ : (ಅತೃಪ್ತಿಯಿಂದ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತ) ಅದೆಲ್ಲ ಪೂರ್ತಿ ಸರಿ, ಅಮ್ಮ. ಜನ ಏನು ಅಂದುಕೊಳ್ಳುತ್ತಾರೆ : ನಾವು ಎಲ್ಲೂ ಹೊರಗಡೆ ಹೋಗೋದಿಲ್ಲ, ಯಾರನ್ನೂ ನೋಡೋದಿಲ್ಲ ಅಂದುಕೊಳ್ಳುತ್ತಾರೆ, ನೀನಿಷ್ಟು ಹಳೆ ಫ್ಯಾಷನ್ ಆದ್ರೆ.

ಶ್ರೀಮತಿ ಹಿಲ್ : ನಾನು ಹಳೆಯ ತರಹದವಳೇ ಎಂದು ಕಾಣುತ್ತಮ್ಮ. ಆದರೆ ಕ್ಲ್ಯಾರ, ಅಂಥ ಮಾತುಗಳನ್ನು ನೀನು ಉಪಯೋಗಿಸತೊಡಗುವುದಿಲ್ಲ ಅಂದು ಕೊಂಡಿದ್ದೇನೆ. ಗಂಡಸರನ್ನು ಕುರಿತು ಅವರು ಅಯೋಗ್ಯರೆಂಬುದನ್ನು ನಿನ್ನಿಂದ ಕೇಳಿ ಅಭ್ಯಾಸವಾಗಿದೆ. ಕೊಳಿ, ದನ ಎಂದೆಲ್ಲ ಕರೆಯುತ್ತೀಯೆ. ನನಗೇನೊ ಅದು ಅಸಹ್ಯ ; ಸಭ್ಯಳಾದ ಹೆಂಗಸಿಗೆ ತಕ್ಕದ್ದಲ್ಲ ಎನ್ನಿಸುತ್ತೆ. ಆದರೆ ಈಗ ಈ ಕಡೆಯಸಲ ಕೇಳಿದೆನಲ್ಲ, ಇದು ಮಿತಿಮೀರಿದ್ದು ಅನ್ನಿಸುತ್ತಿದೆ. ಅಲ್ಲವೆ, ಕರ್ನಲ್ ಪಿಕರಿಂಗ್ ?

ಪಿಕರಿಂಗ್ : ನನ್ನನ್ನು ಕೇಳಬೇಡಿ. ನಾನು ಹಲವಾರು ವರ್ಷ ಇಂಡಿಯಕ್ಕೆ ಹೋಗಿದ್ದವನು. ಈ ನಡುವೆ ನಡತೆ, ಮರ್ಯಾದೆ ಇಲ್ಲಿ ತುಂಬಾ ಬದಲಾಗಿವೆ. ಎಷ್ಟು ಮಟ್ಟಿಗೆ ಅಂದರೆ : ಮರ್ಯಾದಸ್ಥರ ಊಟದ ಮೇಜಿನ ಬಳಿ ಇದ್ದೇನೊ, ಹಡಗಿನ ಕೆಳ ಅಟ್ಟದಲ್ಲಿದ್ದೇನೊ ಎಂಬುದು ಗೊತ್ತಾಗುವುದಿಲ್ಲ.

ಕ್ಲ್ಯಾರ : ಇದೆಲ್ಲ ಅಭ್ಯಾಸದಂತೆ ಬರುತ್ತೆ. ಅದರಲ್ಲಿ ಸರಿ ತಪ್ಪು ಎಲ್ಲಿ ಬಂತು ? ಯಾರೂ ಅದನ್ನು ಅರ್ಥವಿಟ್ಟು ಮಾತಾಡೋದಿಲ್ಲ, ವಿಚಿತ್ರವಾಗಿ ಕಾಣುತ್ತೆ. ಸ್ವಂತವಾಗಿ ವಿನೋದಕರವಲ್ಲದ ಎಷ್ಟಕ್ಕೋ ಒಂದು ಹೊಸ ಚುಚ್ಚು, ಘಾತ ಕೊಡುತ್ತೆ. ನನಗಂತೂ, ಈ ಹೊಸ ಚಿಲ್ಲರೆ ಮಾತು ತುಂಬಾ ಮಜವಾಗಿ ಕಾಣುತ್ತೆ.

ಶ್ರೀಮತಿ ಹಿಲ್ : (ಏಳುತ್ತ) ಸರಿ, ಇಷ್ಟಾದ ಮೇಲೆ, ಇಲ್ಲಿಂದ ಹೊರಡುವ ಸಮಯ ಆಯಿತು.

[ಪಿಕರಿಂಗ್ ಮತ್ತು ಹಿಗ್ಗಿನ್ಸ್ ಏಳುವರು.]

ಕ್ಲ್ಯಾರ : ಆ...ಹೌದು...ಇನ್ನೂ ಮೂರು ಸಂತೋಷಕೂಟಗಳಿಗೆ ಹೋಗಬೇಕಾಗಿದೆ. ನಮಸ್ಕಾರ, ಶ್ರೀಮತಿ ಹಿಗ್ಗಿನ್ಸ್ ; ನಮಸ್ಕಾರ ಪಿಕರಿಂಗ್ ; ನಮಸ್ಕಾರ, ಪ್ರೊ. ಹಿಗ್ಗಿನ್ಸ್.

ಹಿಗ್ಗಿನ್ಸ್ : (ವಿಕಟ ವಿಲಾಸದಿಂದ ಬಾಗಿಲವರೆಗೂ ಅವಳ ಜೊತೆಯಲ್ಲಿ ಬಂದು) ನಮಸ್ಕಾರ. ಈ ಹೊಸ ಚಿಲ್ಲರೆ ಮಾತನ್ನು ಮೂರು ಸಂತೋಷಕೂಟ ಗಳಲ್ಲಿಯೂ ತಪ್ಪದೆ ಬಳಸಿ. ಸಂಕೋಚಪಟ್ಟುಕೊಳ್ಳಬೇಡಿ ! ಬಲವಾಗಿ ಪ್ರಯೋಗಿಸಿ.

ಕ್ಲ್ಯಾರ : (ಸರಸವಾಗಿ) ಹಾಗೆ ಮಾಡುತ್ತೇನೆ. ಈ ಹಾಳು ಹಳೇ ಕಾಲದ ಸಪ್ಪೆತನ, ಮಡಿ.

ಹಿಗ್ಗಿನ್ಸ್ : (ಅವಳಲ್ಲಿ ಮೋಹ ಉಂಟುಮಾಡುತ್ತ) ಎಂಥ ಶನಿ, ಅವಿವೇಕ ಅಂತೀರಿ.

ಕ್ಲ್ಯಾರ : ಅಧ್ವಾನ್ನದ ಅವಿವೇಕ.

ಶ್ರೀಮತಿ ಹಿಲ್ : (ಸೆಳವು ಬಂದಂತೆ) ಕ್ಲ್ಯಾರಾ !

ಕ್ಲ್ಯಾರ : ಹ ! ಹ !

[ಉಜ್ವಲಗೊಂಡಂತೆ ಹೊರಗೆ ಹೋಗುತ್ತಾಳೆ. ತಾನು ಆಧುನಿಕ ಕಾಲಕ್ಕೆ ಪೂರ್ತಿ ತಕ್ಕವಳಾಗಿದ್ದೇನೆಂಬ ಭಾವನೆಯಿಂದ ಇಂಪಾದ ಬೆಳ್ಳಿನಗುವಿನ ಪ್ರವಾಹದೊಡನೆ ಅವಳು ಮೆಟ್ಟಿಲು ಇಳಿಯುವುದು ಕೇಳಿಸುತ್ತದೆ.]

ಫ್ರೆಡ್ಡಿ : (ಆಕಾಶದ ಕಡೆ ತಿರುಗಿ) ನಿಮ್ಮನ್ನು ನಾನು ಕೇಳುತ್ತೇನೆ,—(ಅಲ್ಲಿಗೆ ತಡೆದು ನಿಲ್ಲಿಸಿ ಶ್ರೀಮತಿ ಹಿಗ್ಗಿನ್ಸ್ ಬಳಿಗೆ ಬಂದು) ನಮಸ್ಕಾರ.

ಶ್ರೀಮತಿ ಹಿಗ್ಗಿನ್ಸ್ : (ಕೈಕುಲುಕಿ) ನಮಸ್ಕಾರ. ಮಿಸ್ ಡೂಲಿಟ್ಲನ್ನು ಪುನಃ ಕಾಣಲು ನಿನಗೆ ಇಷ್ಟವೆ ?

ಫ್ರೆಡ್ಡಿ : (ಆತುರದಿಂದ) ಹೌದು...ತುಂಬಾ.

ಶ್ರೀಮತಿ ಹಿಗ್ಗಿನ್ಸ್ : ಸರಿ ಹಾಗಾದರೆ, ನನ್ನ ಅತಿಥಿಗಳ ದಿನ ಗೊತ್ತಿದೆಯಲ್ಲ ?

ಫ್ರೆಡ್ಡಿ : ಗೊತ್ತಿದೆ. ತುಂಬಾ ಉಪಕಾರವಾಯಿತು, ನಮಸ್ಕಾರ. (ಹೋಗುವನು )

ಶ್ರೀಮತಿ ಹಿಲ್ : ನಮಸ್ಕಾರ, ಮಿಸ್ಟರ್ ಹಿಗ್ಗಿನ್ಸ್.

ಹಿಗ್ಗಿನ್ಸ್ : ನಮಸ್ಕಾರ......ನಮಸ್ಕಾರ.

ಶ್ರೀಮತಿ ಹಿಲ್ : (ಪಿಕರಿಂಗಿಗೆ) ಸಾಧ್ಯವಿಲ್ಲ. ಅಂಥಾ ಮಾತನ್ನು ಬಳಸಲು ನಾನೇನೊ ಮನಸ್ಸು ಮಾಡಲಾರೆ.

ಪಿಕರಿಂಗ್ : ಬೇಡಿ. ಅಗತ್ಯವಿಲ್ಲವಲ್ಲ; ಬಳಸದೆಯೇ ನೀವು ಚೆನ್ನಾಗಿ ನಡೆದುಕೊಳ್ಳ ಬಲ್ಲಿರಿ.

ಶ್ರೀಮತಿ ಹಿಲ್ : ಅತಿ ಹೊಚ್ಚ ಹೊಸ ಭಾಷಾವೈಖರಿ ಎಂಬುದನ್ನು ಬಾಯಿ ತುಂಬ ನಾನು ಆಡದೆ ಇದ್ದರೆ ಕ್ಲ್ಯಾರ ಮಾತ್ರ ರೇಗುತಾಳೆ ಅಷ್ಟೇ. ನಮಸ್ಕಾರ.

ಪಿಕರಿಂಗ್ : ನಮಸ್ಕಾರ (ಕೈ ಕುಲುಕಿಸುವನು.)

ಶ್ರೀಮತಿ ಹಿಲ್ : (ಶ್ರೀಮತಿ ಹಿಗ್ಗಿನ್ಸ್‌ಗೆ) ಕ್ಲ್ಯಾರ ನಡವಳಿಕೆಗೆ ದಯವಿಟ್ಟು ಬೇಸರ ಪಡಬೇಡಿ. (ಆಕೆಯು ಕೆಳ ದನಿಯಲ್ಲಿ ಮಾತಾಡುತ್ತಿರುವುದನ್ನು ಕೇಳಿ ತನಗಲ್ಲವೆಂದು ಪಿಕರಿಂಗ್, ವಿವೇಕದಿಂದ ಹಿಗ್ಗಿನ್ಸ್ ಬಳಿ ಹೋಗಿ ಸೇರುತ್ತಾನೆ.) ನಾವು ತುಂಬಾ ಬಡವರು. ಅವಳಿಗೆ ಹೆಚ್ಚು ಪಾರ್ಟಿಗಳಿಗೆ ಹೋಗಲು ಆಗುವುದಿಲ್ಲ. ಪಾಪ, ನಿಜವಾಗಿಯೂ ಅವಳಿಗೆ ಏನೂ ತಿಳಿಯದು. (ಶ್ರೀಮತಿ ಹಿಗ್ಗಿನ್ಸ್‌ಗೆ ಅವಳ ಕಣ್ಣು ತೇವವಾಗಿರುವುದು ಕಾಣುತ್ತದೆ. ಸಹಾನುಭೂತಿಯಿಂದ ಅವಳ ಕೈ ಹಿಡಿದು ಬಾಗಿಲ ಬಳಿಗೆ ಹೋಗುವಳು.) ಆದರೆ ಹುಡುಗ ಒಳ್ಳೆಯವ ಅಲ್ಲ ಅಂತೀರ !

ಶ್ರೀಮತಿ ಹಿಗ್ಗಿನ್ಸ್ : ತುಂಬಾ ಒಳ್ಳೆಯವ, ಅವನಿಲ್ಲಿಗೆ ಯಾವಾಗ ಬಂದರೂ ಸಂತೋಷವೇ !

ಸಹಾನುಭೂತಿಯಿಂದ ಅವಳ ಕೈ ಹಿಡಿದು ಬಾಗಿಲ ಬಳಿಗೆ ಹೋಗುವಳು.) ಆದರೆ ಹುಡುಗ ಒಳ್ಳೆಯವ ಅಲ್ಲ ಅಂತೀರ !

ಶ್ರೀಮತಿ ಹಿಗ್ಗಿನ್ಸ್ : ತುಂಬಾ ಒಳ್ಳೆಯವ, ಅವನಿಲ್ಲಿಗೆ ಯಾವಾಗ ಬಂದರೂ ಸಂತೋಷವೇ !

ಶ್ರೀಮತಿ ಹಿಲ್ : ಉಪಕಾರವಾಯಿತಮ್ಮ...ನಮಸ್ಕಾರ. (ಹೊರಗೆ ಹೋಗುವಳು.)

ಹಿಗ್ಗಿನ್ಸ್ : (ಆತುರದಿಂದ ಕಾದು) ಎಲಿಸ ಸಮಾಜದಲ್ಲಿ ಹೇಗೆ ಕಾಣಿಸುತ್ತಾಳಮ್ಮ ? (ತನ್ನ ತಾಯಿಯ ಮೇಲೆ ಕವಿದು ಮೆತ್ತನೆಯ ಆಸನದ ಬಳಿಗೆ ಆಕೆಯನ್ನು ಎಳತರುವನು. ಆಕೆ ಎಲಿಸಳಿದ್ದ ಸ್ಥಳದಲ್ಲಿ ಕುಳಿತುಕೊಳ್ಳುವಳು. ಅವಳ ಎಡಗಡೆಗೆ ಮಗ, ಬಲ ಕುರ್ಚಿಯಲ್ಲಿ ಪಿಕರಿಂಗ್.)

ಶ್ರೀಮತಿ ಹಿಗ್ಗಿನ್ಸ್ : ಏನು ಬುದ್ಧಿ ಇಲ್ಲದ ಹುಡುಗನೊ ನೀನು. ಖಂಡಿತ ಅವಳು ಸಮಾಜದಲ್ಲಿ ಸರಿಯಾಗಿ ನಡೆದುಕೊಳ್ಳಲಾರಳು. ಅವಳಲ್ಲಿ ನಿನ್ನ ಕಲೆಯ ವಿಜಯ ಕಾಣುತ್ತದೆ. ಅವಳ ಉಡುಪನ್ನು ತಯಾರಿಸಿದವರ ಕಲೆ ಕಾಣುತ್ತದೆ. ಅವಳು ಉಚ್ಚರಿಸುವ ಪ್ರತಿ ವಾಕ್ಯವೂ ಅವಳ ನಿಜವನ್ನು ಬಯಲುಪಡಿಸುವುದಿಲ್ಲ ವೆಂದು ಒಂದು ಕ್ಷಣವಾದರೂ ನಿನಗೆ ಯೋಚನೆ ಬಂದರೆ ನಿನಗೆ ಅವಳಲ್ಲಿ ಪೂರ್ತಿ ಹುಚ್ಚು ಹಿಡಿದಿರಬೇಕು.

ಪಿಕರಿಂಗ್ : ಏನೂ ಮಾಡೋಕೆ ಆಗುವುದಿಲ್ಲ ಅಂತೀರ ? ಉದಾಹರಣೆಗೆ ಅವಳ ಸಂಭಾಷಣೆಯೂ ಮಾತಿನ ರಕ್ತಾಂಶವೂ ಹೋಗಲಾಡಿಸುವಂತೆ—

ಶ್ರೀಮತಿ ಹಿಗ್ಗಿನ್ಸ್ : ಅವಳು ಹೆನ್ರಿ ಕೈಯಲ್ಲಿ ಇರುವತನಕ ಆಗುವುದಿಲ್ಲ.

ಹಿಗ್ಗಿನ್ಸ್ : (ಈ ಆಕ್ಷೇಪಣೆಗೆ ನೊಂದು) ಎಂದರೆ ನಿನ್ನರ್ಥ ನನ್ನ ಭಾಷೆ ಅಯೋಗ್ಯ ವೆಂದೇನು ?

ಶ್ರೀಮತಿ ಹಿಗ್ಗಿನ್ಸ್ : ಇಲ್ಲ ಕಂದ, ಅದು ಪೂರ್ತಿ ಯೋಗ್ಯವೇ ಅನ್ನು,—ಯಾವು ದಾದರೂ ಕಾಲುವೆ ಗೀಲುವೆ ದೋಣಿಯ ಮೇಲೆ ಹೋಗುವಾಗ. ಆರಾಮ ಗೋಷ್ಠಿಗಳಲ್ಲಿ ಸರಿಯಾಗುವುದಿಲ್ಲ.

ಹಿಗ್ಗಿನ್ಸ್ : (ಪೆಟ್ಟು ತಿಂದವನಂತೆ) ನಾನು ಏನು ಹೇಳಬಲ್ಲವನಾಗಿದ್ದೇನೆ ?

ಪಿಕರಿಂಗ್ : (ನಡುವೆ ಮಾತನಾಡುತ್ತ) ಚಿಂತಿಸಬೇಡಿ ಹಿಗ್ಗಿನ್ಸ್. ನಿಮ್ಮನ್ನು ನೀವೆ ಅರಿಯುವುದಕ್ಕೆ ಕಲಿಯಬೇಕು; ೨೦ ವರ್ಷಗಳ ಹಿಂದೆ ಹೈಡ್ ಪಾರ್ಕಿನಲ್ಲಿ ಸ್ವಯಂಸೇವಕರನ್ನು ನಾವು ಸಮೀಕ್ಷಿಸುತ್ತಿದ್ದ ಕಾಲದಿಂದ ಈಚೆಗೆ ನಿಮ್ಮಂಥ ಭಾಷೆಯನ್ನು ನಾನು ಕೇಳಿರಲಿಲ್ಲ.

ಹಿಗ್ಗಿನ್ಸ್ : (ದುಮ್ಮಾನದಲ್ಲಿ) ನೀವು ಹಾಗೆ ಹೇಳುವುದಾದರೆ, ನಿಜ. ನಾನು ಯಾವಾಗಲೂ ಮಠಾಧಿಪತಿಗಳ ಹಾಗೆ ಮಾತಾಡೋದಿಲ್ಲ, ಅನ್ನಿ.

ಶ್ರೀಮತಿ ಹಿಗ್ಗಿನ್ಸ್ : (ಶಾಂತವಾಗುವಂತೆ ಅವನನ್ನು ಮುಟ್ಟಿ) ಪಿಕರಿಂಗ್, ವಿಂಪೋಲ್ ರಸ್ತೆಯ ಮನೆಯಲ್ಲಿ ಖಚಿತವಾಗಿ ಸ್ಥಿತಿ ಏನು ಎಂಬುದನ್ನು ನನಗೆ ಹೇಳುತ್ತೀರ ?

ಪಿಕರಿಂಗ್ : (ಹರ್ಷದಿಂದ, ಇದು ವಿಷಯವನ್ನು ಪೂರ್ತಿ ಮಾರ್ಪಡಿಸಿದಂತೆ) ಏನೆನ್ನುತ್ತೀರ, ಹೆನ್ರಿ ಜೊತೆಯಲ್ಲಿರಲು ನಾನು ಅಲ್ಲಿಗೆ ಬಂದಿದ್ದೇನೆ. ನಾವು ಅಲ್ಲಿಗ ಜೊತೆಯಲ್ಲಿ ನನ್ನ ಇಂಡಿಯನ್ ಉಪಭಾಷೆಗಳನ್ನು ಕುರಿತು ಅಭ್ಯಾಸ ಮಾಡುತ್ತಿದ್ದೇವೆ. ಹಾಗೆ ಮಾಡುವುದು ಹೆಚ್ಚು ಅನುಕೂಲ ಎಂದು ಕಂಡಿದೆ.

ಶ್ರೀಮತಿ ಹಿಗ್ಗಿನ್ಸ್ : ಅದು ಸರಿಯೇ. ಅದೆಲ್ಲ ನನಗೆ ಗೊತ್ತು, ಏರ್ಪಾಡೂ ಉತ್ತಮವಾಯಿತು...ಆದರೆ ಈ ಹುಡುಗಿಯ ವಾಸ ಎಲ್ಲಿ ?

ಹಿಗ್ಗಿನ್ಸ್ : ನಮ್ಮೊಡನೆಯೇ ! ಅವಳು ಎಲ್ಲಿರಬೇಕು ?

ಶ್ರೀಮತಿ ಹಿಗ್ಗಿನ್ಸ್ : ಒಡಂಬಡಿಕೆ ಏನಾಗಿದೆ ? ಅವಳು ಸೇವಕಳೆಂದೆ ? ಅಲ್ಲದಿದ್ದರೆ ಅವಳೇನು ?

ಪಿಕರಿಂಗ್ : (ನಿಧಾನವಾಗಿ) ನಿಮ್ಮರ್ಥ ಏನೆಂಬುದನ್ನು ನಾನು ತಿಳಿಯಬಲ್ಲೆ.

ಹಿಗ್ಗಿನ್ಸ್ : ನಮ್ಮಪ್ಪರಾಣೆಗೂ ನನಗೇನೂ ಗೊತ್ತಾಗುವುದಿಲ್ಲ. ಈ ಮಟ್ಟಕ್ಕೆ ಅವಳನ್ನು ತರಲು ತಿಂಗಳುಗಟ್ಟಲೆ ಪ್ರತಿದಿನವೂ ಈ ಹುಡುಗಿಗಾಗಿ ದುಡಿದಿದ್ದೇನೆ. ಅಲ್ಲದೆ ಅವಳಿಂದ ನನಗೆ ನೆರವಾಗಿದೆ. ನನ್ನ ಸಾಮಾನು ಎಲ್ಲಿದೆ ಅಂತ ಅವಳಿಗೆ ಗೊತ್ತು. ದಿನದ ನನ್ನ ಯಾವ ಯಾವ ಕೆಲಸ ಎಷ್ಟು ಹೊತ್ತಿಗೆ, ಎಲ್ಲಿ ಎಂಬುದನ್ನೆಲ್ಲ ಅವಳು ನೆನಪಿನಲ್ಲಿಟ್ಟುಕೊಂಡಿರುತಾಳೆ.

ಶ್ರೀಮತಿ ಹಿಗ್ಗಿನ್ಸ್ : ಅವಳೊಡನೆ ನಿನ್ನ ಮನೆವಾರ್ತೆ ಆಕೆ ಹೊಂದಿಕೊಂಡು ಹೋಗುತ್ತ ಇದ್ದಾಳೆಯೊ ?

ಹಿಗ್ಗಿನ್ಸ್ : ಪಿಯರ್ಸ್ ಅಂತೀಯಾ ಅಮ್ಮ ? ತನ್ನ ಕೈಯಿನ ಎಷ್ಟೋ ಕೆಲಸ ಕಡಮೆ ಆಯಿತು ಅಂತ ಆಕೆಗೂ ಸಂತೋಷವೇ. ಎಲಿಸ ಬರುವ ಮುಂಚೆ ನನ್ನ ಸಾಮಾನು ಎಲ್ಲಿದೆ ಅಂತ ಹುಡುಕಿ ಅವಳು ಕೊಡಬೇಕಾಗಿತ್ತು. ಎಷ್ಟೆಷ್ಟು ಗಂಟೆಗೆ ಎಲ್ಲೆಲ್ಲಿ ಏನೇನು ನನಗೆ ಕೆಲಸ ಅಂತ ನೆನಪು ಕೊಡಬೇಕಾಗಿತ್ತು. ಆದರೂ ಎಲಿಸ ಸಂಬಂಧದಲ್ಲಿ ಅವಳ ತಲೆಯಲ್ಲಿ ಇಲ್ಲದ ಸಲ್ಲದ ಹುಳು ಆಡುತ ಇರುತ್ತೆ. ನೀವು ಯೋಚನೆ ಮಾಡೋಲ್ಲ ಸ್ವಾಮಿ ಎಂದು ಹೇಳುತಾನೆ ಇರುತಾಳೆ ಅವಳು. ಹಾಗೆ ಹೇಳುವುದಿಲ್ಲವೆ, ಪಿಕ್ ?

ಪಿಕರಿಂಗ್ : ಹೌದು, ಅವಳ ಒಕ್ಕಣೆ ಹಾಗೇ 'ನೀವು ಯೋಚನೆ ಮಾಡೋದಿಲ್ಲ ಸ್ವಾಮಿ' ಅಂತ. ಎಲಿಸಳನ್ನು ಕುರಿತ ಎಲ್ಲ ಸಂಭಾಷಣೆ ಮುಗಿಯೋದೂ ಹಾಗೇನೆ.

ಹಿಗ್ಗಿನ್ಸ್ : ಆ ಹುಡುಗಿಯ ವಿಚಾರವನ್ನೂ—ಅಧ್ವಾನ್ನ—ಅವಳ ಸ್ವರ ವ್ಯಂಜನ

ಗಳನ್ನು ಕುರಿತ ಚಿಂತೆಯನ್ನೂ ನಾನು ಹೇಗೆ ನಿಲ್ಲಿಸಬಲ್ಲೆ ? ಆ ಚಿಂತೆಯಲ್ಲಿ ಸವೆದುಹೋಗಿದ್ದೇನೆ. ಅವಳ ತುಟಿಗಳು, ಅವಳ ಹಲ್ಲು, ಆ ನಾಲಿಗೆ, ಅವನ್ನೂ—ಎಲ್ಲಕ್ಕಿಂತ ವಿಚಿತ್ರವಾದ್ದು ಅವಳ ಆತ್ಮ—ಅದನ್ನೂ ಕಾದು ನೋಡುವುದೆ ನನಗೆ ಕೆಲಸ ಆಗಿಬಿಟ್ಟಿದೆ.

ಶ್ರೀಮತಿ ಹಿಗ್ಗಿನ್ಸ್ : ನಿಜವಾಗಿ ನೀವು ಒಂದು ಜೊತೆ ಮಕ್ಕಳಪ್ಪ. ಬದುಕಿರೊ ಈ ನಿಮ್ಮ ಬೊಂಬೆಯನ್ನು ಇಟ್ಟುಕೊಂಡು ಆಡುತೀರಿ.

ಹಿಗ್ಗಿನ್ಸ್ : ಆಡೋದಂತೆ, ನಾನು ಈವರೆಗೂ ಕೈಗೊಂಡ ಕೆಲಸದಲ್ಲಿ ಇದಕ್ಕಿಂತ ಕಷ್ಟವಾದ್ದು ಇನ್ನೊಂದಿರಲಿಲ್ಲ. ಆ ವಿಷಯದಲ್ಲಿ ನೀನೇನೂ ತಪ್ಪು ತಿಳಿದು ಕೊಳ್ಳಬೇಕಾದ್ದಿಲ್ಲ ಅಮ್ಮ. ನಿನಗೆ ಮನಸ್ಸಿಗೆ ಬರಲಾರದ್ದು ಒಂದು ಸಂಗತಿ ಇದೆ: ಮನುಷ್ಯ ಜೀವವೊಂದನ್ನು ತೆಗೆದುಕೊಂಡು, ಅವಳಿಗಾಗಿ ಒಂದು ಹೊಸ ಭಾಷೆ ನಿರ್ಮಾಣಮಾಡಿ ಅವಳನ್ನು ಪೂರ್ತಿ ಬೇರೆ ಮನುಷ್ಯಳನ್ನಾಗಿ ಮಾಡೋದು ಎಷ್ಟು ಭಯಂಕರ ಸ್ವಾರಸ್ಯ ಎಂಬುದು. ವರ್ಗ ವರ್ಗಕ್ಕೆ, ಜೀವ ಜೀವಕ್ಕೆ ನಡುವೆ ಇರುವ ಆಳವಾದ ಅಂತರವನ್ನು ತುಂಬಿ ಸಮಮಾಡುವ ಕೆಲಸ ಅದು.

ಪಿಕರಿಂಗ್ : (ಶ್ರೀಮತಿ ಹಿಗ್ಗಿನ್ಸ್‌ರ ಹೆಚ್ಚು ಹತ್ತಿರಕ್ಕೆ ತನ್ನ ಕುರ್ಚಿಯನ್ನು ಎಳೆದು ಕೊಂಡು ಆಸ್ಥೆಯಿಂದ ಬಾಗಿ) ಹೌದು, ಅತಿಸ್ವಾರಸ್ಯವಾದ್ದು. ನಿಮಗೆ ನಂಬಿಕೆ ಕೊಡುತ್ತೇನೆ, ಶ್ರೀಮತಿ ಹಿಗ್ಗಿನ್ಸ್ ; ಎಲಿಸ ವಿಷಯದಲ್ಲಿ ಬಹು ಎಚ್ಚರಿಕೆ ವಹಿಸುತ್ತಿದ್ದೇವೆ. ಪ್ರತಿವಾರ—ಪ್ರತಿದಿನ ಸುಮಾರು—ಯಾವುದೊ ಹೊಸ ವ್ಯತ್ಯಾಸ ಕಾಣುತ್ತೆ ಅವಳಲ್ಲಿ. (ಇನ್ನೂ ಸಮೀಪಿಸಿ) ಪ್ರತಿ ಮಜಲಿನ ದಾಖಲೆ ಗಳನ್ನೂ ಇಟ್ಟಿದ್ದೇವೆ ; ಡಸನ್ ಗಟ್ಟಳೆ ಗ್ರಾಮಫೋನ್ ತಟ್ಟೆಗಳನ್ನೂ ಫೋಟೊಗಳನ್ನೂ ತೆಗೆದಿಟ್ಟಿದ್ದೇವೆ.

ಹಿಗ್ಗಿನ್ಸ್ : (ಆಕೆಯ ಇನ್ನೊಂದು ಕಿವಿಯ ಕಡೆಯನ್ನು ಆಕ್ರಮಿಸಿ) ದೇವರಾಣೆಗೂ ಅಮ್ಮ, ನಾನು ಈವರೆಗೂ ಕೈ ಹಚ್ಚಿದ ಯಾವ ಪ್ರಯೋಗವೂ ಇಷ್ಟು ಸಂಪೂರ್ಣವಾಗಿ ನನ್ನ ಮನಸ್ಸನ್ನು ತುಡುಕಿರಲಿಲ್ಲ. ನಮ್ಮಿಬ್ಬರ ಜೀವಗಳನ್ನು ಅವಳು ಕ್ರಮವಾಗಿ ತುಂಬಿದ್ದಾಳೆ. ಅಲ್ಲವೆ, ಪಿಕ್ ?

ಪಿಕರಿಂಗ್ : ಎಲಿಸಾ ವಿಷಯವೇ ನಾವು ಯಾವಾಗಲೂ ಮಾತನಾಡುತ್ತಿರುವುದು.

ಹಿಗ್ಗಿನ್ಸ್ : ಎಲಿಸಾಗೆ ಕಲಿಸುವುದು.

ಪಿಕರಿಂಗ್ : ಬಟ್ಟೆ ಹಾಕುವುದು.

ಶ್ರೀಮತಿ ಹಿಗ್ಗಿನ್ಸ್ : ಏನಂದಿರಿ ?

ಹಿಗ್ಗಿನ್ಸ್ : ಹೊಸ ಹೊಸ ಎಲಿಸಗಳನ್ನು ನಿರ್ಮಾಣ ಮಾಡುತ್ತಿರುವುದು. ಅವಳ ಕಿವಿಯ ಚುರುಕು ಅತಿವಿಶೇಷವಾದ್ದು ನೋಡು !

(ಒಟ್ಟಿಗೆ ಮಾತನಾಡುತ್ತ)

ಪಿಕರಿಂಗ್ : ನೋಡಿ, ಶ್ರೀಮತಿ ಹಿಗ್ಗಿನ್ಸ್, ಖಂಡಿತವಾಗಿ ಹೇಳ್ತೀನೆ, ಆ ಹುಡುಗಿ—

ಹಿಗ್ಗಿನ್ಸ್ : ನಿಜವಾಗಿ, ಒಂದು ಗಿಳಿ ಹಾಗೆ. ಏನೇನು ಪ್ರಯತ್ನ ಮಾಡಿದ್ದೇನೆ ಅಂತೀಯ—

ಪಿಕರಿಂಗ್ : ಮಹಾ ಪ್ರತಿಭಾಶಾಲಿ, ಬಹು ಇಂಪಾಗಿ ಪಿಯಾನೊ ನುಡಿಸ ಬಲ್ಲಳು.

ಹಿಗ್ಗಿನ್ಸ್ : ಮನುಷ್ಯ ಧ್ವನಿ ನುಡಿಯಬಹುದಾದ ಪ್ರತಿಯೊಂದು ಬಗೆಯ ಶಬ್ದ ಪ್ರಯೋಗವನ್ನೂ ಅವಳ ಮೇಲೆ ನಡಸಿದ್ದೇನೆ—

ಪಿಕರಿಂಗ್ : ಶಾಸ್ತ್ರೀಯ ಸಂಗೀತ ಕಚೇರಿಗಳಿಗೆ, ವಾದ್ಯಮೇಳದ—

ಹಿಗ್ಗಿನ್ಸ್ : ಯೂರೋಪ್ ಖಂಡದ ಎಷ್ಟೋ ಉಪಭಾಷೆಗಳು, ಆಫ್ರಿಕಾದ ಉಪಭಾಷೆಗಳು, ಹಾಟೆಂಟಾಟ್—

ಪಿಕರಿಂಗ್ : ಶಾಲೆಗಳಿಗೆ ಒಯ್ದಿದ್ದೇವೆ. ಅವೆಲ್ಲ ಒಂದೇ ಸಮ ಅವಳಿಗೆ : ಯಾವುದನ್ನು ಬೇಕಾದರೂ ಬಾರಿಸುತ್ತಾಳೆ.

ಹಿಗ್ಗಿನ್ಸ್ : ಶಬ್ದಗಳು, ಅವನ್ನು ವಶಪಡಿಸಿಕೊಳ್ಳಲು ನನಗೇ ವರ್ಷಗಳ ಕಾಲ ಹಿಡಿಯಿತು—ಹಾಗೆ

ಪಿಕರಿಂಗ್ : ಮನೆಗೆ ಬಂದ ಕೂಡಲೆ ಕೇಳಿದ್ದನ್ನೆಲ್ಲ, ಯಾರದೇ ಆಗಿರಲಿ—

ಹಿಗ್ಗಿನ್ಸ್ : ಕುರಿತ ಏಟಿನ ಹಾಗೆ ಒಂದೇ ಸಾರಿಗೆ ಹಿಡಿದು ಬಿಡುತ್ತಾಳೆ.

ಪಿಕರಿಂಗ್ : ಬೇಠೊವನ್ನನದೇ ಆಗಿರಲಿ, ಬೇರೆ ಯಾವುದೇ ಆಗಿರಲಿ, ಬ್ರಾಹ್ಮ್ಸ್‌ದಾಗಿರಲಿ, ಲೆಹಾರ್‌ದಾಗಿರಲಿ, ಲಯೊನೆಲ್ ಮಾಂಕ್ಟನ್‌ದಾಗಿರಲಿ—

ಹಿಗ್ಗಿನ್ಸ್ : ತನ್ನ ಜೀವಿತ ಕಾಲವೇ ಅದಕ್ಕೆ ಕಳೆದಿದ್ದರೆ ಹೇಗೊ ಹಾಗೆ—

ಪಿಕರಿಂಗ್ : ಆರು ತಿಂಗಳ ಹಿಂದೆ ಅವಳು ಒಂದು ಪಿಯಾನೊ ಮುಟ್ಟಿರ ಲಾರಳು—

ಶ್ರೀಮತಿ ಹಿಗ್ಗಿನ್ಸ್ : (ಈ ಹೊತ್ತಿಗೆ ಒಬ್ಬರ ಧ್ವನಿಯನ್ನು ಇನ್ನೊಬ್ಬರು ಕುಗ್ಗಿಸು ವಂತೆ ಸಹಿಸಲು ಅಶಕ್ಯವಾದ ಶಬ್ದ ಮಾಡುತ್ತಿರುವುದರಿಂದ ತನ್ನ ಕಿವಿಗಳಲ್ಲಿ ಬೆರಳು ಇಟ್ಟುಕೊಂಡು) ಷ್–ಷ್–ಷ್ ! (ನಿಲ್ಲಿಸುತ್ತಾರೆ.)

ಪಿಕರಿಂಗ್ : ಕ್ಷಮಿಸಬೇಕು ! (ಕುರ್ಚಿಯನ್ನು ಹಿಂದಕ್ಕೆ ಎಳೆದುಕೊಳ್ಳುತ್ತಾನೆ.)

ಹಿಗ್ಗಿನ್ಸ್ : ತಪ್ಪಾಯಿತಮ್ಮ. ಪಿಕರಿಂಗ್ ಕೂಗಲು ಷುರು ಮಾಡಿದರೆ, ಇನ್ನಾರಿಗೂ ಆಚೆ ಈಚೆ ಕಡೆಯಿಂದ ಒಂದು ಮಾತಾಡಲು ಅವಕಾಶವಿರುವುದಿಲ್ಲ.

ಶ್ರೀಮತಿ ಹಿಗ್ಗಿನ್ಸ್ : ಸುಮ್ಮನಿರು ಹೆನ್ರಿ. ಕರ್ನಲ್ ಪಿಕರಿಂಗ್, ನಿಮಗೆ ಮನದಟ್ಟು ಆಗಲಿಲ್ಲವೆ, ಎಲಿಸ ವಿಂಪೋಲ್ ರಸ್ತೆ ಮನೆಗೆ ಬಂದಾಗ ಅವಳ ಒಡನೆಯೇ ಇನ್ನೊಂದು ಬಂತು ಎಂದು.

ಪಿಕರಿಂಗ್ : ಅವರಪ್ಪ ಬಂದ ; ಹೆನ್ರಿ ಬೇಗ ಅವನನ್ನು ಸಾಗಹಾಕಿ ಬಿಟ್ಟರು.

ಶ್ರೀಮತಿ ಹಿಗ್ಗಿನ್ಸ್ : ಅವಳ ತಾಯಿ ಬಂದಿದ್ರೆ ಹೆಚ್ಚು ಚೆನ್ನಾಗಿ ಹೊಂದುತ್ತಿತ್ತು. ತಾಯಿ ಬರದೇ ಇದ್ದುದರಿಂದ ಇನ್ನೇನೊ ಒಂದು ಬಂತು.

ಪಿಕರಿಂಗ್ : ಯಾವುದು ಅದು ?

ಶ್ರೀಮತಿ ಹಿಗ್ಗಿನ್ಸ್ : (ಆ ಮಾತಿನಿಂದ, ತನಗೇ ಅರಿಯದಂತೆ, ಮಿತಿ ಹಾಕಿಕೊಳ್ಳುತ್ತ) ಒಂದು ಸಮಸ್ಯೆ.

ಪಿಕರಿಂಗ್ : ಹಾಗೊ ! ಅವಳನ್ನು ಕುಲೀನ ಹೆಂಗಸೆಂದು ಇತರರು ಒಪ್ಪುವಂತೆ ಹೇಗೆ ನಡಸಿಕೊಳ್ಳುವುದು ಎಂಬ ಒಂದು ಸಮಸ್ಯೆ ಅಲ್ಲವೆ ?

ಹಿಗ್ಗಿನ್ಸ್ : ಆ ಸಮಸ್ಯೆಯನ್ನು ನಾನು ಬಿಡಿಸುತ್ತೇನೆ. ಈಗಾಗಲೆ ಅರ್ಧ ಬಿಡಿಸಿದ್ದೇನೆ.

ಶ್ರೀಮತಿ ಹಿಗ್ಗಿನ್ಸ್ : ನೀವು ಇಬ್ಬರು ಬುದ್ಧಿ ಇಲ್ಲದ ಗಂಡು ಪ್ರಾಣಿಗಳು. ತರುವಾಯ ಅವಳನ್ನು ಏನು ಮಾಡಬೇಕು ಎನ್ನುವುದು—ಸಮಸ್ಯೆ.

ಹಿಗ್ಗಿನ್ಸ್ : ಅದೇನು ಮಹಾ ವಿಷಯ ! ಅವಳ ದಾರಿ ಹಿಡಿದು ಅವಳು ಹೋಗಬಹುದು. ನಾನು ಅವಳಿಗೆ ಒದಗಿಸಿಕೊಟ್ಟಿರುವ ಅನುಕೂಲದ ಪ್ರಯೋಜನ ಪಡೆಯಬಹುದು.

ಶ್ರೀಮತಿ ಹಿಗ್ಗಿನ್ಸ್ : ಈಗ ತಾನೇ ಇಲ್ಲಿದ್ದಳಲ್ಲ—ಆ ಬಡ ಹೆಂಗಸಿಗೆ ಇರುವಂಥ ಅನುಕೂಲಗಳನ್ನು ತಾನೇ ನೀನು ಹೇಳುವುದು ! ಒಳ್ಳೆಯ ಕುಲೀನ ಸ್ತ್ರೀಗಿರುವ ನಡವಳಿಕೆ, ಮರ್ಯಾದೆ ಎಲ್ಲ ಇವೆ ಆಕೆಗೆ. ಅಂಥಾ ಹೆಂಗಸಿಗಿರಬೇಕಾದ ವರಮಾನವನ್ನು ಸಂಪಾದಿಸಿಕೊಳ್ಳಲು ಅವು ಅಡ್ಡಿ ತರುತ್ತವೆ. ನಿನ್ನ ಮನಸ್ಸಿನಲ್ಲಿರುವುದು ಅಂಥ ನಡತೆ ತಾನೆ ?

ಪಿಕರಿಂಗ್ : (ಒಪ್ಪುವಂತೆ, ಆದರೆ, ಉದಾಸ ಧ್ವನಿಯಲ್ಲಿ) ಅದೆಲ್ಲ ಸರಿ ಹೋಗುತ್ತೆ, ಶ್ರೀಮತಿ ಹಿಗ್ಗಿನ್ಸ್. (ಹೋಗಲು ಏಳುವನು.)

ಹಿಗ್ಗಿನ್ಸ್ : (ತಾನೂ ಏಳುತ್ತ) ಯಾವುದಾದರೂ ಹಗುರವಾದ ಕೆಲಸವನ್ನು ಅವಳಿಗೆ ದೊರಕಿಸಿ ಕೊಡುತ್ತೇವೆ.

ಪಿಕರಿಂಗ್ : ಅವಳು ಸಾಕಷ್ಟು ಸುಖವಾಗಿದ್ದಾಳೆ. ಅವಳ ವಿಷಯವಾಗಿ ನೀವು ಚಿಂತೆ ಮಾಡಬೇಡಿ. ನಮಸ್ಕಾರ. (ಹೆದರಿದ ಮಗುವನ್ನು ಸಂತೈಸುವಂತೆ ಆಕೆಯ ಕೈ ಕುಲುಕಿಸಿ ಬಾಗಿಲಿಗೆ ಹೋಗುತ್ತಾನೆ.)

ಹಿಗ್ಗಿನ್ಸ್ : ಹೇಗಾದರೂ ಆಗಲಿ, ಈಗ ಚಿಂತಿಸಿ ಪ್ರಯೋಜನ ಇಲ್ಲ. ಕೆಲಸ ಕೈಕೊಂಡು ಆಗಿ ಹೋಗಿದೆ...ಹೋಗಿ ಬರುತ್ತೇನಮ್ಮ.

(ಮುದ್ದಿಟ್ಟು ಪಿಕರಿಂಗನ್ನು ಹಿಂಬಾಲಿಸುವನು.)

ಪಿಕರಿಂಗ್ : (ಕಡೆಯ ಸಾಂತ್ವನದ ಮಾತಿಗಾಗಿ ತಿರುಗಿ) ಕೆಲಸದ ಅವಕಾಶಗಳು ಬೇಕಾದಷ್ಟು ತೆರೆದಿವೆ. ಸರಿಯಾದುದನ್ನು ಮಾಡುತ್ತೇವೆ. ನಮಸ್ಕಾರ.

ಹಿಗ್ಗಿನ್ಸ್ : (ಜೊತೆಯಲ್ಲಿ ಹೋಗುತ್ತ ಪಿಕರಿಂಗಿಗೆ) ಅರ್ಲ್ಸ್ ಕೋರ್ಟಿಲ್ಲಿನ ಷೇಕ್ಸ್‌ಪಿಯರ್ ಪ್ರದರ್ಶನಕ್ಕೆ ಅವಳನ್ನು ಕರೆದುಕೊಂಡು ಹೋಗೋಣ.

ಪಿಕರಿಂಗ್ : ಕರಕೊಂಡು ಹೋಗೋಣ. ಅದರ ಮೇಲಿನ ಅವಳ ವ್ಯಾಖ್ಯಾನ ಇಂಪಾಗಿರುತ್ತದೆ.

ಹಿಗ್ಗಿನ್ಸ್ : ಮನೆಗೆ ಬಂದ ಮೇಲೆ ಎಲ್ಲರನ್ನೂ ಅಣಕಿಸುತಾಳೆ.

ಪಿಕರಿಂಗ್ : ಭಾರಿ ತಮಾಷೆ. (ಹಂತ ಕೆಳಗಿಳಿಯುತ್ತ ಇಬ್ಬರೂ ನಗುತ್ತಿರುವುದನ್ನು ಕೇಳುತ್ತ.)

ಶ್ರೀಮತಿ ಹಿಗ್ಗಿನ್ಸ್ : (ಬರೆಯುವ ಮೇಜಿನ ಬಳಿಗೆ ಹೋಗಿ ತನ್ನ ಕೆಲಸಕ್ಕೆ ಕುಳಿತು ಕೊಳ್ಳುವಳು. ಸಿಕ್ಕಿಸಿಕ್ಕಿದ ಕಡೆ ಹರಡಿ ಬಿದ್ದಿದ್ದ ಕಾಗದದ ರಾಶಿಯನ್ನು ಕೈಯಲ್ಲಿ ಗುಡಿಸಿ, ಕಾಗದದ ಚೀಲದಿಂದ ಒಂದು ಹಾಳೆ ತೆಗೆದು ನಿರ್ಧಾರದಿಂದ ಬರೆಯುತ್ತಾಳೆ. ಮೂರನೆಯ ಸಾಲು ಬರೆಯುವ ವೇಳೆಗೆ ಆ ಕೆಲಸ ಮುಂದೆ ಸಾಗುವುದಿಲ್ಲವಾಗಿ ಕೋಪದಿಂದ ಲೇಖನಿಯನ್ನು ಕೆಳಕ್ಕೆ ಒಗೆಯುವಳು. ಮೇಜನ್ನು ಹಿಡಿದುಕೊಂಡು)
ಈ ಗಂಡಸರು !...ಗಂಡಸರು !!...ಗಂಡಸರು !!!

## ಅಂಕ ನಾಲ್ಕು

[ವಿಂಪೋಲ್ ರಸ್ತೆಯ ಪ್ರಯೋಗಶಾಲೆ. ನಡುರಾತ್ರಿ. ಕೊಠಡಿಯಲ್ಲಿ ಯಾರೂ ಇಲ್ಲ. ಗೋಡೆಯ ಮೇಲಿನ ದೊಡ್ಡ ಗಡಿಯಾರ ಹನ್ನೆರಡು ಬಡಿಯುತ್ತದೆ. ಬೆಂಕಿ ಉರಿಯುತ್ತಿಲ್ಲ; ಬೇಸಗೆಯ ರಾತ್ರಿ.

ಉತ್ತರ ಕ್ಷಣದಲ್ಲಿ ಹಿಗ್ಗಿನ್ಸ್ ಪಿಕರಿಂಗರ ಧ್ವನಿ ಮಹಡಿ ಹಂತದ ಮೇಲೆ ಕೇಳಿ ಸುತ್ತದೆ.]

ಹಿಗ್ಗಿನ್ಸ್ : (ಕೆಳಗಿರುವ ಪಿಕರಿಂಗನ್ನು ಕೂಗುತ್ತ) ಪಿಕ್, ಬೀಗ ಹಾಕಿ ಬಿಡುತೀರ ? ನಾನು ಪುನಃ ಹೊರಗೆ ಹೋಗುವುದಿಲ್ಲ.

ಪಿಕರಿಂಗ್ : ಸರಿ. ಪಿಯರ್ಸ್ ಮಲಗಿಕೊಳ್ಳಬಹುದಲ್ಲ ? ನಮಗಿನ್ನೇನೂ ಬೇಕಾಗಿಲ್ಲ. ಅಲ್ಲವೆ ?

ಹಿಗ್ಗಿನ್ಸ್ : ಉಹುಂ. ಇಲ್ಲ.

(ಎಲಿಸ ಬಾಗಿಲು ತೆಗೆಯುತ್ತಾಳೆ. ದೀಪದ ಬೆಳಕಿರುವ ಹಂತದ ಕೊನೆಯ ನೆಲೆಯಲ್ಲಿ ಕಾಣಿಸುತ್ತಾಳೆ. ಸಂಗೀತಕ್ಕೆ, ನಾಟಕಕ್ಕೆ ಹೋಗುವ ಮೇಲು ಹೊದಿಕೆ ಹೊದ್ದಿದ್ದಾಳೆ. ದಿವ್ಯವಾದ ಸಂಜೆ ಉಡುಪನ್ನು ಧರಿಸಿದ್ದಾಳೆ. ರತ್ನದ ತೊಡಿಗೆ, ಕೈಬೀಸಣಿಗೆ, ಹೂವು ಎಲ್ಲ ಸಜ್ಜಾಗಿದೆ. ಬೆಂಕಿ ಕಾಯಿಸಿಕೊಳ್ಳುವ ಒಲೆಯ ಬಳಿಗೆ ಬಂದು ಅಲ್ಲಿನ ವಿದ್ಯುದ್ದೀಪಗಳನ್ನು ಹಾಕುತ್ತಾಳೆ. ಆಯಾಸವಿರುವ ಹಾಗಿದೆ. ಅವಳ ಕಪ್ಪು ಕಣ್ಣಿಗೆ, ತಲೆಗೂದಲಿಗೆ ಅವಳ ಮುಖದ ಬಿಳಿಚು ಹೆಚ್ಚು ವಿದೃಶವಾಗಿ ಕಾಣುತ್ತದೆ ; ಅವಳ ಮುಖದ ಮೇಲೆ ಸುಮಾರು ಒಂದು ದುರಂತ ಭಾವ ಇದೆ. ಮೇಲಂಗಿಯನ್ನು ತೆಗೆದು ಬೀಸಣಿಗೆಯನ್ನೂ ಹೂಗಳನ್ನೂ ಪಿಯಾನೋ ಮೇಲಿಡುವಳು. ಬೆಂಚಿನ ಮೇಲೆ ಚಿಂತಾಮಗ್ನಳಾಗಿ, ಮೌನವಾಗಿ ಕುಳಿತುಕೊಳ್ಳುವಳು. ಹಿಗ್ಗಿನ್ಸ್ ಸಂಜೆ ಉಡುಪಿನಲ್ಲಿ, ಮೇಲಂಗಿ, ಹ್ಯಾಟ್ ಧರಿಸಿ ಒಳಗೆ ಬರುವನು. ಕೈಮೇಲೆ ಧೂಮಪಾನ ಮಾಡುವಾಗ ಧರಿಸುವ ಕುಡತ ಹಾಕಿಕೊಂಡಿದ್ದಾನೆ. ಹ್ಯಾಟ್, ಮೇಲಂಗಿ ತೆಗೆದು ವೃತ್ತಪತ್ರಿಕೆಯ ನಿಲವಿನ ಮೇಲೆ ಎಸೆಯುತ್ತಾನೆ. ಕೋಟನ್ನೂ ಹಾಗೆಯೇ. ಮೈಕಾಯಿಸಿಕೊಳ್ಳುವ ಬಳಿಯ ಆರಾಮ ಕುರ್ಚಿಯಲ್ಲಿ ಆಯಾಸದಿಂದ ಕುಳಿತುಕೊಳ್ಳುತ್ತಾನೆ. ಪಿಕರಿಂಗಿಗೂ ಆಯಾಸವಾಗಿದೆ ; ಇದೇ ಬಗೆಯ ಉಡುಪಿನಲ್ಲಿ ಆತನೂ ಒಳಗೆ ಬರುತ್ತಾನೆ. ತನ್ನ ಬಟ್ಟೆಗಳನ್ನೂ ತೆಗೆದು ಹಿಗ್ಗಿನ್ಸನವುಗಳ ಮೇಲೆ ಹಾಕುವಷ್ಟರಲ್ಲಿ ಅನಿಶ್ಚಿತನಾಗಿರುವಂತಿದೆ.)

ಪಿಕರಿಂಗ್ : ಹಿಗ್ಗಿನ್ಸ್, ಬೈಠಕ್‌ಖಾನೆಯಲ್ಲಿ ಇವನ್ನೆಲ್ಲ ಸಿಕ್ಕಿದ ಹಾಗೆ ಎಸೆದಾಡಿದ್ದಾದರೆ ಪಿಯರ್ಸ್ ರಂಪುಮಾಡುತ್ತಾಳೆ.

ಹಿಗ್ಗಿನ್ಸ್ : ಆ ಕಟಾಂಜನದ ಮೇಲಿಂದ ಹಜಾರದಲ್ಲಿ ಹಾಕಿ. ಬೆಳಗ್ಗೆ ಅವಳು ನೋಡಿ ಸರಿಯಾದ ಕಡೆ ಇರಿಸುತ್ತಾಳೆ. ಎಲ್ಲಿಯೊ ಕುಡಿದು ಬಂದಿದ್ದೆವೆಂದುಕೊಳ್ಳುತ್ತಾಳೆ.

ಪಿಕರಿಂಗ್ : ಸ್ವಲ್ಪ ಕುಡಿದೂ ಇದ್ದೇವೆ ಅಲ್ಲ ? ಕಾಗದಗಳೇನಾದರೂ ಇವೆಯೆ ?

ಹಿಗ್ಗಿನ್ಸ್ : ನೋಡಲಿಲ್ಲ. (ಪಿಕರಿಂಗ್ ಮೇಲಂಗಿಗಳನ್ನೂ ಹ್ಯಾಟನ್ನೂ ತೆಗೆದು ಹಜಾರಕ್ಕೆ ಹೋಗುವನು. ಹಿಗ್ಗಿನ್ಸ್ La Fanciulla del Golden West ಎಂಬುದರಲ್ಲಿನ ಒಂದು ಹಾಡಿನ ಧಾಟಿಯ ತುಣುಕನ್ನು ಅರ್ಧ ಆಕಳಿಸುತ್ತ ಅರ್ಧ ಕುರುಕುತ್ತ ಇದ್ದಾನೆ. ಹಠಾತ್ ನಿಂತು) ಹಾಳಾದೋವು ಆ ನನ್ನ ಸ್ಲಿಪ್ಪರುಗಳೆಲ್ಲಿ ಹೋದುವೊ !

[ಎಲಿಸ ಅವನ ಕಡೆ ಕರಾಳವಾಗಿ ನೋಡುವಳು. ಇದ್ದಕ್ಕಿದ್ದಂತೆ ಎದ್ದು ಹೊರಗೆ ಹೋಗುವಳು.

ಹಿಗ್ಗಿನ್ಸ್ ಪುನಃ ಆಕಳಿಸಿ ಹಾಡನ್ನು ಪುನಃ ಮುಂದುವರಿಸುವನು. ಪಿಕರಿಂಗ್ ಹಿಂದಿರುಗುವನು. ಕೈಯಲ್ಲಿ ಕಾಗದಗಳ ಕಂತೆ ಇದೆ.]

ಪಿಕರಿಂಗ್ : ಬರಿ ಸುತ್ತೋಲೆಗಳು ಮಾತ್ರ. ನಿಮಗೆ ಈ ಕಿರೀಟ ಮುದ್ರೆ ಇರುವ ಪ್ರಣಯ ಪತ್ರ ಬಂದಿದೆ. (ಸುತ್ತೋಲೆಗಳನ್ನು ಬೆಂಕಿಗೆ ಹಾಕಿ ನೆಲಗಂಬಳಿಯ ಮೇಲೆ ನಿಲ್ಲುತ್ತಾನೆ. ಒಲೆಯ ಸುತ್ತಲಿನ ಕಟಕಟೆಗೆ ಬೆನ್ನು ತಿರುಗಿಸಿದ್ದಾನೆ.)

ಹಿಗ್ಗಿನ್ಸ್ : (ಪ್ರಣಯ ಪತ್ರವನ್ನು ನೋಡಿ) ಸಾಹುಕಾರ (ಒಲೆಯೊಳಕ್ಕೆ ಎಸೆಯುವನು. ಎಲಿಸ ಸ್ಲಿಪ್ಪರುಗಳನ್ನು ತೆಗೆದುಕೊಂಡು ಹಿಂತಿರುಗುವಳು. ಹಿಗ್ಗಿನ್ಸ್ ಮುಂದೆ ಜಮಖಾನದ ಮೇಲಿಡುವಳು. ಒಂದು ಮಾತಿಲ್ಲದೆ ಮುಂಚಿನಂತೆ ಕುಳಿತುಕೊಳ್ಳುವಳು.)

ಹಿಗ್ಗಿನ್ಸ್ : (ಪುನಃ ಆಕಳಿಸುತ್ತ) ದೇವರೆ ! ಎಂಥ ಸಂಜೆ ! ಏನು ಸಂತೆ ! ಎಂಥ ಬುದ್ಧಿ ಇಲ್ಲದ ತಮಾಷೆ. (ಷೂದಾರ ಬಿಚ್ಚಲು ಅದನ್ನು ಮೇಲೆತ್ತುವನು. ಸ್ಲಿಪ್ಪರುಗಳು ಕಾಣುತ್ತವೆ. ನಿಲ್ಲಿಸಿ ತಮ್ಮಷ್ಟಕ್ಕೆ ತಾವೇ ಅವು ತನ್ನೆದುರಿಗೆ ಬಂದವೆಂಬಂತೆ ಅವನ್ನು ನೋಡುತ್ತಾನೆ.) ಓ ಅಲ್ಲಿವೆಯೊ ಅವು ?

ಪಿಕರಿಂಗ್ : (ಕೈಕಾಲು ಚಾಚಿಕೊಂಡು) ನನಗೂ ಸ್ವಲ್ಪ ಆಯಾಸ ಆಗಿದೆ ಅನ್ನಿ. ದಿನ ಬಹುದೀರ್ಘವಾಯಿತು. ಆರಾಮಕೂಟ, ಭೋಜನ ಕೂಟ, ಗೀತ ನಾಟಕ ! ಒಳ್ಳೆಯದೆನ್ನುವುದೂ ಅತಿಯಾಗಬಾರದು. ಆದರೆ ನಿಮ್ಮ ಪಣ ನೀವು ಗೆದ್ದಿರಿ ಹಿಗ್ಗಿನ್ಸ್, ಎಲಿಸ ತನ್ನ ಪಾತ್ರವನ್ನು ಚೆನ್ನಾಗಿ ನಿರ್ವಹಿಸಿದಳು ಅಲ್ಲವೆ ?

ಹಿಗ್ಗಿನ್ಸ್ : (ಆಸ್ಥೆಯಿಂದ) ದೇವರ ದಯದಿಂದ ಎಲ್ಲ ಮುಗಿಯಿತು.

[ಎಲಿಸ ರಭಸದಿಂದ ಸೆಟೆಯುವಳು. ಆದರೆ ಅವಳ ಕಡೆಗೆ ಯಾರಿಗೂ ಲಕ್ಷ್ಯವಿಲ್ಲ. ಬೇಗ ಸ್ವಾಸ್ಥ್ಯವನ್ನು ಪಡೆದುಕೊಂಡು ಹಿಂದಿನಂತೆ ಕಲ್ಲಿನ ಹಾಗೆ ಕುಳಿತುಕೊಳ್ಳುವಳು.]

ಪಿಕರಿಂಗ್ : ಆರಾಮ ಕೂಟದಲ್ಲಿ ಹೇಗೊ, ಏನೊ ಎಂದು ನಿಮ್ಮ ಮನಸ್ಸಿಗೆ ಪುಕ್ಕಲಾಯಿತೇನು ? ನನಗೇನೊ ಆಯಿತು. ಆದರೆ ಎಲಿಸ ಸ್ವಲ್ಪವೂ ಪುಕ್ಕಲಾದಂತೆ ಕಾಣಲಿಲ್ಲ.

ಹಿಗ್ಗಿನ್ಸ್ : ಛೀ......ಅವಳು ಪುಕ್ಕಲಾಗಲೇ ಇಲ್ಲ. ಅವಳು ಸರಿಯಾಗಿರುತ್ತಾಳೆ ಅಂತ ನನಗೆ ಗೊತ್ತಿತ್ತು. ಅದಲ್ಲ. ಇಷ್ಟು ತಿಂಗಳು ಈ ಕೆಲಸ ನೆರವೇರಲು ಪಟ್ಟ ಗಾಸಿ ಈಗ ತೋರುತ್ತ ಇದೆ. ಮೊದ ಮೊದಲು, ಅದರಲ್ಲಿ ಸಾಕಾದಷ್ಟು ಸ್ವಾರಸ್ಯವೇನೊ ಇತ್ತು. ಉಚ್ಚಾರಣೆಯ ಭಾಗದಲ್ಲಿದ್ದಾಗ. ಅದಾದ ಮೇಲೆ ನನಗೆ ಕೆಲಸ ಅಸಹ್ಯವಾಗಿ ಕಂಡಿತು. ಮಾಡುತೇನೆ ಎಂದು ಪಣತೊಡದೆ ಇದ್ದಿದ್ದರೆ ಈ ಕೆಲಸವನ್ನೆಲ್ಲ ಎರಡು ತಿಂಗಳ ಹಿಂದೆಯೇ ಕೊಡವಿಬಿಟ್ಟು ಕೈ ತೊಳೆದುಕೊಳ್ಳುತ್ತಿದ್ದೆ. ಏನೋ ತಿಳಿಗೇಡಿಕಲ್ಪನೆ. ಒಟ್ಟು ಬೇಸರ ತರೋ ಕೆಲಸ.

ಪಿಕರಿಂಗ್ : ಅಷ್ಟು ಬೇಸರ ಏಕೆ ? ಆರಾಮಕೂಟ ತುಂಬಾ ಸ್ವಾರಸ್ಯವಾಗಿರಲಿಲ್ಲವೆ ? ನನ್ನ ಎದೆ ತುಂಬಾ ಹೊಡಕೊಳ್ಳುವುದಕ್ಕೆ ಷುರು ಮಾಡಿತು.

ಹಿಗ್ಗಿನ್ಸ್ : ಹೌದು ಮೊದಲು ಮೂರು ನಿಮಿಷ. ಆದರೆ ಕೈಕಟ್ಟಿ ಕುಳಿತರೂ ನಮಗೆ ಜಯವಾಗುತ್ತದೆ ಎಂದು ಅರಿತಾಗ, ನನಗೆ ಬೋನಿಗೆ ಹಾಕಿದ ಕರಡಿಯು ಹಾಗಾಗಿತ್ತು. ಮಾಡಲು ಕೆಲಸವಿಲ್ಲದೆ ಅಲ್ಲಿರಬೇಕಾಯಿತು. ಔತಣದ ಊಟ ಅದಕ್ಕಿಂತ ಹೆಚ್ಚು ಬೇಸರ. ಒಂದು ಗಂಟೆಗೆ ಮೀರಿ ಅಲ್ಲಿ ಕುಳಿತುಕೊಂಡು ಆಹಾರ ಅಡಚಿಕೊಳ್ಳುತ್ತ ಕೂತಿರೋದು ಹೇಗೆ ! ಬುದ್ಧಿಯಿಲ್ಲದ ಒಬ್ಬ ಫ್ಯಾಷನಬಲ್ ಹೆಂಗಸಿನ ಕೈಯಲ್ಲಿ ಮಾತಾಡುವುದನ್ನು ಬಿಟ್ಟರೆ ಬೇರೇನೂ ಕೆಲಸವಿಲ್ಲ ; ನಾನು ಹೇಳುತ್ತೇನೆ, ಪಿಕರಿಂಗ್ ; ಇಂಥಾ ಕೆಲಸ ಇನ್ನು ಮಾಡುವುದಿಲ್ಲ. ಯಾವ ಕೃತಕ ಶ್ರೀಮಂತಿನಿಯ ಗೊಡವೆಯೂ ನನಗೆ ಬೇಡ. ಒಟ್ಟು ಕೆಲಸ, ಶುದ್ಧ ನರಕ ಯಾತನೆ ಆಗಿತ್ತು.

ಪಿಕರಿಂಗ್ : ಸಮಾಜದ ಕ್ರಮಪಾಡುಗಳಿಗೆ ಹೊಂದಿಕೊಳ್ಳಲು ನೀವು ಕಲಿಯಲೇ ಇಲ್ಲ. (ಪಿಯಾನೊ ಬಳಿಗೆ ಹೋಗುತ್ತ) ಆಗಾಗ ಇಂಥದರ ಸಂಪರ್ಕ ನನಗೇನೊ ಸಂತೋಷವೇ ; ಪುನಃ ಯೌವನ ಬಂದ ಹಾಗೆ ಆಗುತ್ತದೆ. ಅದು ಹೇಗಾದರೂ ಇರಲಪ್ಪ. ಗೆಲವಂತೂ ದೊಡ್ಡದು ; ಮಹದ್ವಿಜಯ. ಎಲಿಸ ಅಷ್ಟು ಚೆನ್ನಾಗಿ ಮಾಡುತ್ತಿರುವುದು ನೋಡಿ ನನಗೇನೊ ಎರಡು ಸಲ ಭಯವಾಯಿತು. ಯಾಕೆ ಅಂತೀರ ? ನಿಜವಾದ ಶ್ರೀಮಂತರಲ್ಲಿ ಎಷ್ಟೊ ಜನ ಅದನ್ನು ಮಾಡಲೇ ಆರರು. ತಮ್ಮ ಸ್ಥಾನದಲ್ಲಿರುವ ಜನಕ್ಕೆ ಆ ವೈಖರಿಯ ಶೈಲಿ ಸಹಜವಾಗಿ ಬರುತ್ತದೆ ಎಂದುಕೊಳ್ಳುತ್ತಾರೆ ಅವರು. ಬುದ್ಧಿಯಿಲ್ಲದ ಜನ. ಆದ್ದರಿಂದ ಅವರು ಏನನ್ನೂ ಕಲಿಯುವುದೇ ಇಲ್ಲ. ಯಾವುದನ್ನೇ ಆಗಲಿ, ಉತ್ಕೃಷ್ಟವಾಗಿ ಮಾಡಬೇಕು ಎಂದಾಗ ಅದಕ್ಕೆ ಒಂದು ಕಸುಬುದಾರಿಕೆಯ ನಿಪುಣತೆ ಬೇಕು.

ಹಿಗ್ಗಿನ್ಸ್ : ಹೌದು. ನನಗೆ ಹುಚ್ಚು ಹಿಡಿಸುವ ಸಂಗತಿ ಅದೇ. ಈ ಬುದ್ಧಿ ಇಲ್ಲದ ಜನಕ್ಕೆ ತಮ್ಮ ಹಾಳು ಕೆಲಸವೇನು, ಅದನ್ನು ಹೇಗೆ ಮಾಡಬೇಕು ಎಂಬುದು ಗೊತ್ತಿಲ್ಲ. (ಏಳುತ್ತ) ಹೇಗೂ ಮುಗಿಯಿತು. ಇನ್ನು ಅದರ ಗೋಜಿಲ್ಲ. ನಾಳೆಗೇನು ಎಂದು ಭಯಪಡದೆ ಕಡೆಗೆ ಹಾಸಿಗೆಯ ಮೇಲೆ ಬಿದ್ದು ಕೊಂಡು ನೆಮ್ಮದಿಯಾಗಿ ನಿದ್ರೆ ಮಾಡಬಹುದು.

(ಎಲಿಸಾ ಸೌಂದರ್ಯ ಕೊಲೆಪಾತಕವಾಗಿ ಕಾಣುತ್ತದೆ.)

ಪಿಕರಿಂಗ್ : ನನಗೂ ನೆಮ್ಮದಿಯಾಗಿ ಬಿದ್ದುಕೊಳ್ಳಬಹುದು ಅನ್ನಿಸುತ್ತದೆ. ಆದರೂ ಬಹು ದೊಡ್ಡ ಸಮಾರಂಭ ಇದು. ನಿಮಗಂತೂ ಮಹಾ ವಿಜಯ. Good night. (ಹೋಗುವನು.)

ಹಿಗ್ಗಿನ್ಸ್ : (ಅವನ ಹಿಂದೆ ಹೋಗಿ) Good night. (ಭುಜದ ಹಿಂದೆ ತಿರುಗಿ ಬಾಗಿಲಲ್ಲಿ) ದೀಪಗಳಾರಿಸು, ಎಲಿಸ. ನನಗಾಗಿ ಬೆಳಗ್ಗೆ ಕಾಫಿ ಮಾಡಬೇಡ

ಎಂದು ಹೇಳು—ಶ್ರೀಮತಿ ಪಿಯರ್ಸ್‌ಗೆ. ನಾನು ಟೀ ತೆಗೆದುಕೊಳ್ಳುತ್ತೇನೆ. (ಹೊರಗೆ ಹೋಗುತ್ತಾನೆ.)

[ಎಲಿಸ ತನ್ನನ್ನು ನಿಯಮಿಸಿಕೊಳ್ಳಲೂ ಉದಾಸೀನಳಾಗಿರಲೂ ಯತ್ನಿಸುತ್ತಾಳೆ. ಎದ್ದು ಒಲೆಯ ಬಳಿಗೆ ಹೋಗಿ ದೀಪವನ್ನು ಆರಿಸುವಾಗ ಅಲ್ಲಿಗೆ ಹೋಗುವ ಹೊತ್ತಿಗೆ ಗಟ್ಟಿಯಾಗಿ ಕಿರಿಚಿಕೊಳ್ಳಬೇಕೆನಿಸುತ್ತದೆ. ಹಿಗ್ಗಿನ್ಸಿನ ಕುರ್ಚಿಯಲ್ಲಿ ಕುಳಿತು ಅದರ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳುತ್ತಾಳೆ. ಕಡೆಗೆ ನೆಲದ ಮೇಲೆ ಬಲವಾಗಿ ಕುಕ್ಕರಿಸಿ ಒದರಾಡುತ್ತಾಳೆ.]

ಹಿಗ್ಗಿನ್ಸ್ : (ಹೊರಗೆ, ನಿರಾಶೆಯ ರೇಗಿನಲ್ಲಿ) ಹಾಳಾದೋವು ಆ ನನ್ನ ಸ್ಲಿಪ್ಪರುಗಳನ್ನು ಏನು ಮಾಡಿದೆನೊ ? (ಬಾಗಿಲಲ್ಲಿ ಕಾಣಿಸುತ್ತಾನೆ.)

ಲಿಸ : (ಸ್ಲಿಪ್ಪರುಗಳನ್ನು ಕೈಗೆ ಎತ್ತಿಕೊಂಡು ತನ್ನ ಶಕ್ತಿಯನ್ನೆಲ್ಲಾ ಬಿಟ್ಟು ಒಂದಾದ ಮೇಲೆ ಒಂದನ್ನು ಅವನ ಮೇಲೆ ಬೀರುತ್ತಾಳೆ.) ನೋಡಿ ನಿಮ್ಮ ಸ್ಲಿಪ್ಪರುಗಳು; ಇವೇ ನಿಮ್ಮ ಸ್ಲಿಪ್ಪರುಗಳು, ತಕೊಳ್ಳಿ. ಇನ್ನು ಮೇಲೆ ಎಂದಿಗೂ ನಿಮಗೆ ಅವುಗಳಿಂದ ಅದೃಷ್ಟ ಕಾಣದಂತಾಗಲಿ.

ಹಿಗ್ಗಿನ್ಸ್ : (ಅಪ್ರತಿಭನಾಗಿ) ಅಯ್ಯೊ ಮಹರಾಯಿತಿ ; (ಅವಳ ಬಳಿಗೆ ಬರುತ್ತಾನೆ.) ಏನು ಸಮಾಚಾರ ? ಏಳು, ಮೇಲಕ್ಕೆ. (ಮೇಲಕ್ಕೆ ಎತ್ತುತ್ತ) ಏನಾದರೂ ತಪ್ಪಾಯಿತೇನು ?

ಲಿಸ : (ಉಸಿರು ಕಟ್ಟಿಕೊಂಡು) ತಪ್ಪೇನೂ ಆಗಲಿಲ್ಲ... ನಿ ಮ ಗೆ... ನಿಮ್ಮ ಪಣವನ್ನು ನಾನು ನಿಮಗೆ ಗೆದ್ದುಕೊಟ್ಟೆ ಅಲ್ಲವೆ ? ನಿ ಮ ಗೆ ಅಷ್ಟು ಸಾಕು. ನನಗೇನೂ ಬೆಲೆಯೇ ಇಲ್ಲ ಅಂತ ಕಾಣುತ್ತೆ.

ಹಿಗ್ಗಿನ್ಸ್ : ನನ್ನ ಪಣ ನೀನು ಗೆದ್ದೆ ! ಅಧಿಕ ಪ್ರಸಂಗಿ, ಕ್ರಿಮಿ, ಅದನ್ನು ಗೆದ್ದವನು ನಾನು. ಆ ಸ್ಲಿಪ್ಪರುಗಳನ್ನು ನೀನು ನನ್ನ ಮೇಲೆ ಏಕೆಸೆದೆ ?

ಲಿಸ : ನಿಮ್ಮ ಮುಖ ಮುರಿಯಬೇಕೆಂದು. ನಿಮ್ಮನ್ನು ಕೊಲ್ಲಬೇಕು ಎನ್ನಿಸುತ್ತೆ. ಎಂಥಾ ಸ್ವಾರ್ಥಪಶು ನೀವು. ಎಲ್ಲಿಂದ ನೀವು ನನ್ನನ್ನು ಆರಿಸಿ ತಂದಿರೊ ಅಲ್ಲಿಯೇ ನನ್ನನ್ನು ಏಕೆ ಇರಗೊಡಿಸಲಿಲ್ಲ ?—ಗಟಾರದಲ್ಲಿ ? ಎಲ್ಲಾ ಮುಗಿದು ಹೋಯಿತಂತೆ, ದೇವರ ದಯದಿಂದ ! ಪುನಃ ನೀವು ನನ್ನನ್ನು ದೇವರ ದಯದಿಂದ ಹಿಂದಕ್ಕೆ ಎಸೆಯಬಲ್ಲಿರಿ ಅಲ್ಲ ? (ಉನ್ಮತ್ತಳಂತೆ ಕೈಬೆರಳುಗಳನ್ನು ಗುಂಡಕ್ಕೆ ಬಿಗಿಯುವಳು.)

ಹಿಗ್ಗಿನ್ಸ್ : (ತಂಪಾದ ಆಶ್ಚರ್ಯದಿಂದ ಅವಳ ಕಡೆ ನೋಡುತ್ತ) ಪರವಾ ಇಲ್ಲ. ಈ ಪ್ರಾಣಿ ಒಳಗೂ ಸ್ವಲ್ಪ ನರದೌರ್ಬಲ್ಯ ಇದೆ.

(ಲಿಸಳ ಅತ್ಯಂತ ಕೋಪದ ಧ್ವನಿ ಅವಳ ಗಂಟಲನ್ನು ಕಟ್ಟುವಂತಿರಲು ಸಹಜವಾಗಿ ಅವನ ಮುಖದ ಕಡೆಗೆ ತನ್ನ ಮೊನೆ ಉಗುರನ್ನು ಚಾಚುವಳು.)

ಹಿಗ್ಗಿನ್ಸ್ : (ಅವಳ ಮುಂಗೈ ಮಣಿಕಟ್ಟುಗಳನ್ನು ಹಿಡಿದು) ಆಃ...ಪರಚಬೇಕು ಅನ್ನಿಸುತ್ತೆ ಅಲ್ಲವೆ ? ಏ ಬೆಕ್ಕೆ, ಪಂಜಗಳನ್ನು ಒಳಕ್ಕೆ ಎಳಕೊ. ನಿನ್ನ ಕೋಪವನ್ನೆಲ್ಲ ನನ್ನ ಮೇಲೆ ತೋರಲು ನಿನಗೆ ಎಷ್ಟು ಧೈರ್ಯ ? ಕುಳಿತುಕೊ, ಸದ್ದು ಮಾಡಬೇಡ. (ಒರಟಾಗಿ ಅವಳನ್ನು ಆರಾಮ ಕುರ್ಚಿಗೆ ನೂಕಿ ಕೂಡಿಸುವನು.)

ಲಿಸ : (ತನಗಿಂತ ಹೆಚ್ಚು ಬಲ ತೂಕಗಳ ಪರಿಣಾಮವಾಗಿ ಕುಕ್ಕುರ ಬಡಿಯಲ್ಪಟ್ಟು) ನನ್ನ ಗತಿ ಏನು ?... ಏನು ಇನ್ನು ನನ್ನ ಗತಿ ?

ಹಿಗ್ಗಿನ್ಸ್ : ನಿನ್ನ ಗತಿ ಏನು ಅಂತ, ನನ್ನ ತಲೆ, ನನಗೆ ಹೇಗೆ ಗೊತ್ತು ? ನಿನಗೇನಾದರೆ ಅದನ್ನು ಕಟ್ಟಿಕೊಂಡು ನನಗೇನು ?

ಲಿಸ : ನಿಮಗೆ ಅದರ ಚಿಂತೆ ಇಲ್ಲ. ನನಗೆ ಗೊತ್ತು. ನಾನು ಸತ್ತರೂ ನಿಮಗೆ ಚಿಂತೆ ಇಲ್ಲ. ನಾನು ನಿಮ್ಮ ಭಾಗಕ್ಕೆ ಏನೂ ಅಲ್ಲ. ಅದಕ್ಕೆ ನಿಮ್ಮ ಸಿಲ್ಪರು ಗಳಷ್ಟು ಬೆಲೆಯೂ ಅಲ್ಲ.

ಹಿಗ್ಗಿನ್ಸ್ : ಆ ಸ್ಲಿಪ್ಪರುಗಳ ಅನ್ನು.

ಲಿಸ : (ಕಹಿ ವಿಧೇಯತೆಯಿಂದ) ಆ ಸ್ಲಿಪ್ಪರುಗಳು. ಹೇಗೆ ಹೇಳಿದರೆ, ಈಗ ವ್ಯತ್ಯಾಸ ಏನು ಅಂತ ನಾನು ಯೋಚಿಸಲಿಲ್ಲ.

(ಸ್ವಲ್ಪಕಾಲ ಯಾರದೂ ಮಾತಿಲ್ಲ. ಎಲಿಸ ಹತಾಶಳಾಗಿ ಕುಕ್ಕುರ ಬಡಿದಿದ್ದಾಳೆ. ಹಿಗ್ಗಿನ್ಸ್ ಅಸ್ವಸ್ಥನಾಗಿದ್ದಾನೆ.)

ಹಿಗ್ಗಿನ್ಸ್ : (ತನ್ನ ಅತಿ ಉದಾತ್ತ ರೀತಿಯಲ್ಲಿ) ಹೀಗೆ ಮಾಡಲು ಏಕೆ ಷುರು ಮಾಡಿದೆ ? ನಿನ್ನನ್ನು ನಾವು ನೋಡಿಕೊಳ್ಳುತ್ತಿರುವುದರಲ್ಲಿ ಏನಾದರೂ ಅಪಚಾರವಾಗಿದೆಯೆ ?

ಲಿಸ : ಇಲ್ಲ.

ಹಿಗ್ಗಿನ್ಸ್ : ನಿನ್ನ ಪರವಾಗಿ ಯಾರಾದರೂ ಕೆಟ್ಟ ರೀತಿ ನಡೆದುಕೊಂಡಿದ್ದಾರೆಯೆ ? ಕರ್ನಲ್ ಪಿಕರಿಂಗ್ ? ಪಿಯರ್ಸ್ ? ಯಾರಾದರು ಸೇವಕರು ?

ಲಿಸ : ಇಲ್ಲ.

ಹಿಗ್ಗಿನ್ಸ್ : ನಿನ್ನನ್ನು ನಾನು ಸರಿಯಾಗಿ ನಡಸಿಕೊಂಡಿಲ್ಲವೆಂದು ನಟಿಸಲು ನೀನು ಎಣಿಸುತ್ತಿಲ್ಲವಷ್ಟೆ ?

ಲಿಸ : ಇಲ್ಲ.

ಹಿಗ್ಗಿನ್ಸ್ : ಅದನ್ನು ಕೇಳಿ ಸಂತೋಷವಾಯಿತು. (ತನ್ನ ಧ್ವನಿಯನ್ನು ಸ್ವಲ್ಪ ನಯಮಾಡುತ್ತ) ಬಹುಶಃ ಈ ದಿನದ ಶ್ರಮದಿಂದ ಆಯಾಸವಾಗಿರಬಹುದು.

ಒಂದು ಗ್ಲಾಸ್ ಷಾಂಪೈನ್ ತೆಗೆದುಕೊಳ್ಳುತ್ತೀಯಾ? (ಬಾಗಿಲ ಕಡೆಗೆ ಸುಳಿಯುತ್ತಾನೆ.)

ಲಿಸ : ಇಲ್ಲ. (ಮರ್ಯಾದೆಯನ್ನು ನೆನಸಿಕೊಂಡು) ತುಂಬಾ ಉಪಕಾರವಾಯಿತು. Thank you.

ಹಿಗ್ಗಿನ್ಸ್ : (ಪುನಃ ಸುಮ್ಮಾನದಿಂದ) ಈಗ ಕೆಲವು ದಿನಗಳಿಂದ ನಿನ್ನಲ್ಲಿ ಇದನ್ನು ಕಾಣುತ್ತಿದ್ದೇನೆ. ಆರಾಮಕೂಟ ಹೇಗಾಗುವುದೊ ಏನೊ ಎಂಬುದನ್ನು ಕುರಿತು ಶಂಕೆ ಹುಟ್ಟುವುದು ಸಹಜವೇ, ಆಗಲಿ ಈಗ ಅದೆಲ್ಲ ಮುಗಿಯಿತು. (ದಯೆಯಿಂದ ಅವಳ ಭುಜವನ್ನು ತಟ್ಟುತ್ತಾನೆ. ಅವಳು ವಿಲಿವಿಲಿ ಒದ್ದಾಡುತ್ತಾಳೆ) ಚಿಂತೆಗೆ ಇನ್ನೇನೂ ಅಗತ್ಯವಿಲ್ಲವಲ್ಲ!

ಲಿಸ : ಇಲ್ಲ. ನಿಮ್ಮ ಚಿಂತೆಗೆ ಇನ್ನೇನೂ ಕಾರಣವೇ ಇಲ್ಲ. (ಜಗ್ಗನೆದ್ದು ಅವನ ಹತ್ತಿರದಿಂದ ಹೊರಟು ಹೋಗಿ ಪಿಯಾನೊ ಬೆಂಚಿನ ಮೇಲೆ ಕುಳಿತು ತನ್ನ ಮುಖವನ್ನು ಮುಚ್ಚಿಕೊಳ್ಳುತ್ತಾಳೆ.) ದೇವರೆ, ದೇವರೆ, ನಾನು ಸತ್ತರೆ ಚೆನ್ನಾಗಿತ್ತು.

ಹಿಗ್ಗಿನ್ಸ್ : (ನಿಜವಾದ ಆಶ್ಚರ್ಯದಿಂದ ಅವಳನ್ನು ದಿಟ್ಟಿಸಿ ನೋಡುತ್ತ) ಏಕೆ, ದೇವರಾಣೆ, ಏಕೆ ಹೀಗೆ! (ಅವಳನ್ನು ಸಮಾಧಾನಪಡಿಸುವಂತೆ, ಅವಳ ಬಳಿಗೆ ಹೋಗಿ) ನಾನು ಹೇಳುವುದು ಕೇಳು ಎಲಿಸ, ಈ ವ್ಯಗ್ರತೆಯೆಲ್ಲ, ಬರಿ, ನಿನ್ನ ಮನಸ್ಸಿನಲ್ಲಿ ನೀನು ಮಾಡಿಕೊಳ್ಳುವುದು.

ಲಿಸ : ನನಗೆ ಏನೂ ಅರ್ಥವಾಗುವುದಿಲ್ಲ. ನಾನು ಅಜ್ಞಳು.

ಹಿಗ್ಗಿನ್ಸ್ : ಇದು ನಿನ್ನ ಕಲ್ಪನೆ ಮಾತ್ರ. ಮನಸ್ಸು ಸ್ವಲ್ಪ ಕುಗ್ಗಿದೆ ಅಷ್ಟೇ ಬೇರೇನೂ ಅಲ್ಲ. ಯಾರೂ ನಿನ್ನನ್ನು ನೋಯಿಸುತ್ತಿಲ್ಲ. ಯಾವುದೂ ಕೆಟ್ಟಿಲ್ಲ. ಒಳ್ಳೆಯ ಹುಡುಗಿಯ ಹಾಗೆ ಮಲಗಿಕೊ. ಎಲ್ಲಾ ಸರಿ ಹೋಗುತ್ತದೆ. ಅಳು ಬಂದರೆ ಸ್ವಲ್ಪ ಅತ್ತು ಬಿಡು. ಪ್ರಾರ್ಥನೆ ಮಾಡು. ಮನಸ್ಸು ನೆಮ್ಮದಿಯಾಗುತ್ತದೆ.

ಲಿಸ : ನಿಮ್ಮ ಪ್ರಾರ್ಥನೆ ನನಗೆ ಕೇಳಿಸಿತು : ದೇವರ ದಯದಿಂದ ಎಲ್ಲಾ ಮುಗಿದು ಹೋಯಿತು, ಎಂಬುದು.

ಹಿಗ್ಗಿನ್ಸ್ : (ತಾಳ್ಮೆ ಇಲ್ಲದೆ) ಎಲ್ಲಾ ಮುಗಿದು ಹೋಯಿತು ಎಂದು ದೇವರಿಗೆ ನೀನೂ ಏಕೆ ಕೃತಜ್ಞಳಾಗುವುದಿಲ್ಲ? ನೀನು ಈಗ ಸ್ವತಂತ್ರಳು. ನಿನ್ನ ಇಷ್ಟ ಬಂದುದನ್ನು ಮಾಡಬಹುದು.

ಲಿಸ : (ನಿರಾಶೆಯಲ್ಲಿ ಸ್ವಲ್ಪ ಧೈರ್ಯ ತಂದುಕೊಂಡು) ನಾನು ಯಾತಕ್ಕೆ ಯೋಗ್ಯಳು? ನನ್ನಲ್ಲಿ ಯಾವ ಯೋಗ್ಯತೆ ಉಳಿಸಿದ್ದೀರಿ? ನಾನು ಎಲ್ಲಿಗೆ ಹೋಗಲಿ? ಮಾಡಬೇಕು ಏನನ್ನು? ನನ್ನ ಗತಿ ಏನು?

ಹಿಗ್ಗಿನ್ಸ್ : (ಬೆಳಕು ಕಂಡಂತಾಗಿ, ಆದರೆ ಸ್ವಲ್ಪವೂ ಇದರಿಂದ ಪರಿಣಾಮುಗೊಳ್ಳದೆ) ಅದೊ ನಿನ್ನ ಚಿಂತೆ ? (ತನ್ನ ಜೇಬಿನಲ್ಲಿ ಕೈಗಳಿಟ್ಟು ಎಂದಿನಂತೆ ಜೇಬಿನಲ್ಲಿದ್ದುದನ್ನು ಶಬ್ದಮಾಡುತ್ತ ಓಡಾಡುವನು. ಕೇವಲ ಅಲ್ಪ ವಿಷಯವನ್ನು ಕುರಿತು ಯೋಚಿಸಲು ಕೃಪೆ ಮಾಡುವಂತೆ) ನಿನ್ನ ಸ್ಥಿತಿಯಲ್ಲಿ ನಾನು ಇದ್ದರೆ ನಾನು ಅದನ್ನು ಕುರಿತು, ಮನಸ್ಸಿಗೆ ಹಚ್ಚಿಕೊಳ್ಳುತ್ತಲೇ ಇರಲಿಲ್ಲ. ಎಲ್ಲೊ ಒಂದು ಕಡೆ ನೆಲೆಯಾಗಿ ನಿಲ್ಲಲು ನಿನಗೆ ಹೆಚ್ಚು ಕಷ್ಟವಾಗುತ್ತದೆಂದು ನಾನು ಎಣಿಸಲಾರೆ. ಆದರೆ, ನೀನು ಇಲ್ಲಿಂದ ಹೊರಟು ಹೋಗುತ್ತೀಯೆಂದು ನನಗೆ ನಿಜವಾಗಿ ಯೋಚನೆ ಬಂದಿರಲಿಲ್ಲ. (ಚುರುಕಾಗಿ ಅವನ ಕಡೆ ನೋಡುವಳು. ಅವನು ಅವಳ ಕಡೆ ನೋಡುವುದಿಲ್ಲ. ಪಿಯಾನೊ ಮೇಲಿರುವ ಹಣ್ಣುಗಳನ್ನು ಪರೀಕ್ಷಿಸಿ ಸೇಬನ್ನು ತಿನ್ನಲು ನಿರ್ಣಯಿಸುವನು.) ಯಾರನ್ನಾದರೂ ಮದುವೆ ಮಾಡಿಕೊಳ್ಳಬಹುದಲ್ಲ ? (ಹಣ್ಣಿನಿಂದ ಒಂದು ದೊಡ್ಡ ಚೂರನ್ನು ಕಡಿದು ಶಬ್ದ ಮಾಡುತ್ತ ಅಗಿಯುವನು.) ನೋಡು ಎಲಿಸ, ನನ್ನಂತೆ, ಕರ್ನಲ್ಲಂತೆ ಎಲ್ಲರೂ ತೀರ್ಮಾನಮಾಡಿ, ಮುದಿ ಬ್ರಹ್ಮಚಾರಿಗಳಾಗಿರುವುದಿಲ್ಲ. ಅಯ್ಯೋ ಪಾಪ, ಬಹುಮಂದಿ ಮದುವೆ ಮಾಡಿಕೊಳ್ಳುವ ಜಾತಿಯುವರು. ನೋಡುವುದಕ್ಕೆ ನೀನೂ ಕುರೂಪಿಯೇನಲ್ಲ. ಕೆಲವು ಸಮಯ ನಿನ್ನನ್ನು ನೋಡುವುದಕ್ಕೆ ಸಂತೋಷವೇ ಆಗುತ್ತೆ. ಈಗಲ್ಲ ಅಂತ ಇಟ್ಟುಕೊ. ಈಗ ಅಳುತ್ತಿದ್ದೀಯೆ. ದೆವ್ವದಷ್ಟು ವಿಕಾರವಾಗಿ ಕಾಣಿಸುತ್ತಿದ್ದೀಯೆ. ಆದರೆ ನೀನು ಸರಿಯಾಗಿದ್ದಾಗ, ನಿನ್ನ ನೆಮ್ಮದಿಯಲ್ಲಿದ್ದಾಗ, ನಿನ್ನಲ್ಲಿ ಆಕರ್ಷಣೆ ಉಂಟು ಎನ್ನಬಲ್ಲೆ ;....ಮದುವೆ ಮಾಡಿಕೊಳ್ಳುವ ಜಾತಿಯವರಿಗೆ, ಎಂದು ನನ್ನ ಅರ್ಥ. ಮಲಗಿಕೊ ಹೋಗು. ಚಿಂತೆಬಿಟ್ಟು ಸ್ವಲ್ಪ ವಿಶ್ರಾಂತಿ ತೆಗೆದುಕೊ. ಬೆಳಿಗ್ಗೆ ಎದ್ದು ಮುಖವನ್ನು ಕನ್ನಡಿಯಲ್ಲಿ ನೋಡಿಕೊ, ನೀನು ಅಷ್ಟೇನು ಅಗ್ಗವಲ್ಲವೆಂದು ನಿನಗೇ ಗೊತ್ತಾಗುತ್ತೆ.

(ಎಲಿಸ ಪುನಃ ಅವನ ಕಡೆ ನೋಡುತ್ತಾಳೆ. ಮಾತಿಲ್ಲ, ಚಲಿಸುವುದಿಲ್ಲ.)

(ಆ ನೋಟ ಅವನ ಮೇಲೆ ಪ್ರಭಾವ ಬೀರುವುದೇ ಇಲ್ಲ. ಸೇಬು ಚೆನ್ನಾಗಿದ್ದುದರಿಂದ ಅದನ್ನು ತಿಂದು ಮುಗಿಸುತ್ತಾನೆ. ಅದು ಒಳ್ಳೆಯ ಹಣ್ಣಾದುದರಿಂದ ಅವನ ಮುಖದ ಮೇಲೆ ಸುಖದ ಒಂದು ಕನಸಿನ ತೃಪ್ತಿ ಕಾಣಿಸುತ್ತದೆ.)

ಹಿಗ್ಗಿನ್ಸ್ : (ತರುವಾಯದ ಸುಯೋಚನೆಯಾಗಿ ಅವನಿಗೆ ಏನೋ ಅನ್ನಿಸುವುದು.) ನಮ್ಮ ಅಮ್ಮ ನಿನಗೆ ತಕ್ಕಂಥ ಯಾರನ್ನಾದರೂ ಒಬ್ಬನ್ನ ಪತ್ತೆಮಾಡಿ ಕೊಡುತ್ತಾಳೆ ಎನ್ನಿಸುತ್ತೆ.

ಲಿಸ : ಟಾಟನ್‌ಹ್ಯಾಂ ಕೋರ್ಟಿನ ಮೂಲೆಯಲ್ಲಿ ಇದ್ದಾಗ ಅಂಥದನ್ನು ನಾವು ಮೀರಿದ್ದೆವು.

ಹಿಗ್ಗಿನ್ಸ್ : (ಎಚ್ಚತ್ತು) ಅಂದರೆ, ಏನು ನಿನ್ನ ಅರ್ಥ ?

ಲಿಸ : ನಾನು ಹೂ ಮಾರುತ್ತಿದ್ದೆ. ನನ್ನನ್ನು ಮಾರಾಟ ಮಾಡಿಕೊಳ್ಳುತ್ತಿರಲಿಲ್ಲ. ಈಗ ನನ್ನನ್ನು ನೀವು ಕುಲೀನ ಸ್ತ್ರೀಯನ್ನಾಗಿ ಮಾಡಿದ್ದೀರಿ. ಬೇರೆ ಏನನ್ನು ಮಾರುವುದಕ್ಕೂ ಯೋಗ್ಯಳಲ್ಲದಂತೆ ಮಾಡಿದ್ದೀರಿ. ನಾನಿದ್ದಲ್ಲಿ ನನ್ನನ್ನು ಬಿಟ್ಟಿದ್ದರೆ ಚೆನ್ನಾಗಿರುತ್ತಿತ್ತು.

ಹಿಗ್ಗಿನ್ಸ್ : (ಸೇಬಿನ ಮಧ್ಯದ ಕಡ್ಡಿಯಂಥ ಭಾಗವನ್ನು ತೀರ್ಮಾನದಿಂದ ಎಂಬಂತೆ ಬೆಂಕಿಗೆ ಎಸೆಯುತ್ತಾನೆ.) ಟಾಷ್ ! ಬುದ್ಧಿ ಇಲ್ಲದ ಮಾತು ಎಲಿಸ. ಮನುಷ್ಯ ಜೀವನದ ಸಂಬಂಧಗಳಿಗೆ ಕೊಳ್ಳುವುದು ಮಾರುವುದು ಎಂಬ ಮಾತನ್ನು ಎಳೆದು ತಂದು ಅವನ್ನು ಅಪಮಾನ ಗೊಳಿಸಬೇಡ....ಇಷ್ಟವಿಲ್ಲದೆ ಇದ್ದರೆ ನೀನು ಯಾರನ್ನು ಮದುವೆ ಆಗುವುದೂ ಅಗತ್ಯವಿಲ್ಲ.

ಲಿಸ : ನಾನು ಇನ್ನೇನು ಮಾಡಬೇಕು ?

ಹಿಗ್ಗಿನ್ಸ್ : ಹೋ, ಬೇಕಾದ್ದನ್ನು ಮಾಡಬಹುದು. ಹಿಂದೆ ನಿನ್ನ ಒಂದು ಯೋಚನೆ ಇತ್ತಲ್ಲ ; ಹೂವಿನ ಅಂಗಡಿಗೆ ಸಂಬಂಧಪಟ್ಟದ್ದು. ಅದು ಹೇಗೆನ್ನಿಸುತ್ತೆ. ಪಿಕರಿಂಗ್ ಕೈಯಲ್ಲಿ ಹಣ ಇದೆ. ಯಾವುದಾದರೂ ಒಂದು ಅಂಗಡಿಯಲ್ಲಿ ಆತನು ನಿನ್ನನ್ನು ನಿಲ್ಲಿಸಬಲ್ಲ. (ನಗುನಗುತ್ತ) ಇವೊತ್ತು ನೀನು ಹಾಕಿಕೊಂಡಿದ್ದೆಯಲ್ಲ ಆ ಬಟ್ಟೆ ಬರೆಗಳಿಗೆಲ್ಲ ಆತ ಹಣ ಕೊಡಬೇಕಾಗಿದೆ. ಒಡವೆಗೆ ಬಾಡಿಗೆ ಕೊಡಬೇಕಾಗಿದೆ. ಹತ್ತಿರ ಹತ್ತಿರ ಇನ್ನೂರು ಪೌಂಡಾದೀತು. ಆರು ತಿಂಗಳ ಹಿಂದೆ ಸ್ವಂತವಾಗಿ ಒಂದು ಹೂವಿನ ಅಂಗಡಿ ಇಡುವುದು ನಿನಗೆ ಸ್ವರ್ಗಕಲ್ಪವಾಗಿತ್ತಲ್ಲವೆ ! ಚಿಂತೆ ಬಿಡು. ಎಲ್ಲಾ ಸರಿಹೋಗುತ್ತೆ. ನಾನು ಮಲಗಿಕೊಳ್ಳಬೇಕು. ಶನಿ ನಿದ್ದೆ ಬರುತ್ತಾ ಇದೆ. ನೋಡು, ನಾನು ಕೆಳಕ್ಕೆ ಏಕೆ ಬಂದೆ ಎಂಬುದು ಮರೆತುಹೋಯಿತು.

ಲಿಸ : ನಿಮ್ಮ ಸ್ಲಿಪ್ಪರುಗಳಿಗೆ ......

ಹಿಗ್ಗಿನ್ಸ್ : ಹೋ......ಅವೇ......ನೀನು ನನ್ನ ಮೇಲೆ ಎಸೆದವು.

(ಅವುಗಳನ್ನು ಎತ್ತಿಕೊಳ್ಳುತ್ತಾನೆ. ಹೊರಗೆ ಹೋಗುವುದರೊಳಗೆ ಅವಳು ಅವನನ್ನು ಮಾತನಾಡಿಸುತ್ತಾಳೆ.)

ಲಿಸ : ನೀವು ಹೋಗುವ ಮುಂಚೆ, ಸ್ವಾಮಿ,—

ಹಿಗ್ಗಿನ್ಸ್ : (ಆಶ್ಚರ್ಯದಿಂದ, 'ಸ್ವಾಮಿ' ಎಂದು ಅವಳು ತನ್ನನ್ನು ಕರೆದುದಕ್ಕೆ, ಕೈಯಿಂದ ಸ್ಲಿಪ್ಪರುಗಳನ್ನು ಬೀಳಿಸುತ್ತ) ಆ......ಏನಂದೆ ?

ಲಿಸ : ನನ್ನ ಬಟ್ಟೆಗಳು ನನಗೆ ಸೇರಿದವೊ ಅಥವಾ ಕರ್ನಲ್ ಪಿಕರಿಂಗಿಗೆ ಸೇರಿದವೊ ?

ಹಿಗ್ಗಿನ್ಸ್ : (ಅವಳ ಪ್ರಶ್ನೆ ಅಯುಕ್ತತೆಯ ಪರಮಾವಧಿ ಎಂದು ತಿಳಿದು ಕೊಠಡಿಯೊಳಗೆ ಪುನಃ ಹಿಂದಿರುಗುತ್ತ) ಆ ಅಧ್ವಾನ್ನ ಬಟ್ಟೆ ಬರೆ ಇಟ್ಟುಕೊಂಡು ಪಿಕರಿಂಗ್ ಏನು ಮಾಡುತ್ತಾರೆ ?

ಲಿಸ : ನೀವು ಆಯ್ತು ಪ್ರಯೋಗ ನಡಸುವ ಮುಂದಿನ ಇನ್ನಾರಾದರೂ ಹುಡುಗಿಗೆ ಕೊಡಲು ಉಪಯೋಗವಾಗಬಹುದು.

ಹಿಗ್ಗಿನ್ಸ್ : (ಧಕ್ಕೆ ಬಿದ್ದಂತೆ, ನೊಂದು) ನಮ್ಮ ಪರವಾಗಿ ನೀನು ಅಂಥಾ ಭಾವನೆ ಇಟ್ಟುಕೊಂಡಿದ್ದೀಯೇನು ?

ಲಿಸ : ಆ ಸಂಗತಿಯನ್ನು ಕುರಿತು ನನಗೆ ಇನ್ನೇನು ಕೇಳುವುದಕ್ಕೂ ಇಷ್ಟವಿಲ್ಲ. ನನಗೆ ಸೇರಿದ ಸಾಮಾನು ಏನಾದರೂ ಇದೆಯೆ ಎಂಬುದಷ್ಟೇ ನಾನು ಕೇಳುವುದು ; ನನ್ನ ಬಟ್ಟೆ ನೀವು ಸುಡಿಸಿಬಿಟ್ಟಿರಿ.

ಹಿಗ್ಗಿನ್ಸ್ : ಅದರಿಂದ ಆದ್ದೇನು ? ಈ ಅರ್ಧರಾತ್ರಿಯಲ್ಲಿ ಅದನ್ನು ಕುರಿತು ಯೋಚಿಸುವ ಅಗತ್ಯ ಏನಿದೆ ?

ಲಿಸ : ನನ್ನ ಜೊತೆಯಲ್ಲಿ ಯಾವುದನ್ನು ತೆಗೆದುಕೊಂಡು ಹೋಗಬಹುದು ಎಂಬುದನ್ನು ನಾನು ತಿಳಿಯಬೇಕು. ನನ್ನ ಮೇಲೆ ಕಳ್ಳತನದ ಆಪಾದನೆ ಬರಬಾರದು.

ಹಿಗ್ಗಿನ್ಸ್ : (ಈಗ ತುಂಬಾ ನೊಂದವನಾಗಿ) ಕಳ್ಳತನ ! ನೀನು ಆ ಮಾತು ಆಡಬಾರದು ಎಲಿಸ, ನಿನ್ನಲ್ಲಿ ಅಂತಃಕರಣವಿಲ್ಲ ಎಂದು ತೋರಿಸುತ್ತೆ.

ಲಿಸ : ಕ್ಷಮಿಸಬೇಕು, ನಾನು ಬರಿಯ ಒಬ್ಬ—ಸಾಮಾನ್ಯ—ಅರಿಯದ ಹುಡುಗಿ. ನನ್ನ ಅಂತಸ್ತಿನಲ್ಲಿ ನಾನು ಎಚ್ಚರಿಕೆಯಿಂದ ಇರಬೇಕು. ನಮ್ಮಂಥ ಜನಕ್ಕೂ ನಿಮ್ಮಂಥ ಜನಕ್ಕೂ ನಡುವೆ ಯಾವ ಅಂತಃಕರಣವೂ ಇರಲಾರದು. ನನಗೆ ಸೇರಿದ್ದು ಯಾವುದು, ಯಾವುದಲ್ಲ ಎಂಬುದನ್ನು ಹೇಳುತ್ತೀರ ?

ಹಿಗ್ಗಿನ್ಸ್ : (ತುಂಬಾ ದುಮ್ಮಾನದಿಂದ) ಇಷ್ಟಬಂದರೆ ಈ ಸುಟ್ಟ ಮನೆಯಲ್ಲಿರುವುದನ್ನೆಲ್ಲ ಎತ್ತಿಕೊಂಡು ಹೋಗು; ಒಡವೆಗಳನ್ನು ಬಿಟ್ಟು, ಅವು ಬಾಡಿಗೆಯವು. ನಿನಗೆ ತೃಪ್ತಿ ಆಗುವುದೆ ? (ಹೆಜ್ಜೆ ತಿರುಗಿಸಿ ಅತಿಶಯ ವ್ಯಥೆಯಲ್ಲಿ ಹೋಗಲಿರುವನು)

ಲಿಸ : (ಅವನ ಮನಸ್ಸಿನಲ್ಲಿ ಉಂಟಾದ ಭಾವವನ್ನು ಅಮೃತದಂತೆ ಆಸ್ವಾದಿಸುತ್ತ ಅದು ಹೆಚ್ಚು ಸುರಿಯಲೆಂಬಂತೆ ಮೂದಲೆಯ ಮಾತಿನಿಂದ ಅವನನ್ನು ಉದ್ರೇಕಗೊಳಿಸುತ್ತ) ದಯಮಾಡಿ ನಿಲ್ಲಿ, (ಒಡವೆಗಳನ್ನು ಕಳಚಿ ತೆಗೆದು)

ನಿಮ್ಮ ಕೊಠಡಿಗೆ ತೆಗೆದುಕೊಂಡು ಹೋಗಿ ಇವನ್ನು ಸುರಕ್ಷಿತವಾಗಿ ಇಟ್ಟು ಕೊಳ್ಳುತ್ತೀರ ? ಅವು ಕಳೆದು ಹೋದರೆ ನನಗೆ ಪೀಡೆ ಉಂಟಾಗುತ್ತದೆ. ಅದರಿಂದ ಯಾವ ಅಪಾಯಕ್ಕೂ ನಾನು ಈಡಾಗಬಯಸುವುದಿಲ್ಲ.

ಹಿಗ್ಗಿನ್ಸ್ : (ರೋಷದಿಂದ) ತೆಗೆದುಕೊಟ್ಟುಬಿಡು. (ಅವನ ಕೈಗೆ ಕೊಡುತ್ತಾಳೆ) ಒಡವೆ ವ್ಯಾಪಾರಿಗಲ್ಲದೆ ಇವು ನನಗೆ ಸೇರಿದ್ದಿದ್ದರೆ ಅವನ್ನು ತೆಗೆದು ಕೃತಘ್ನಳಾದ ನಿನ್ನ ಗಂಟಲಿನೊಳಗೆ ಅಡಕುತ್ತಿದ್ದೆ. (ಅರ್ಧ ಮನಸ್ಸಿನಿಂದ ಅವನ್ನು ಜೇಬು ಗಳಲ್ಲಿ ತುರುಕಿಕೊಳ್ಳುವನು. ತನಗೇ ಅರಿಯದಂತೆ ಚೈನುಗಳ ಹೊರಚಾಚಿದ ಕೊನೆಗಳು ಅವನಿಗೆ ಅಲಂಕಾರವಾಗುತ್ತವೆ.)

ಲಿಸ : (ಒಂದು ಉಂಗುರವನ್ನು ಹೊರತೆಗೆದು) ಈ ಉಂಗುರ ಒಡವೆ ಅಂಗಡಿ ಯವನಿಗೆ ಸೇರಿದ್ದಲ್ಲ. ಬ್ರೈಟನಿನಲ್ಲಿ ನೀವು ನನಗೆ ಕೊಂಡುಕೊಟ್ಟದ್ದು ಅದು. ಈಗ ನನಗೆ ಅದು ಬೇಕಿಲ್ಲ. (ಹಿಗ್ಗಿನ್ಸ್ ಅದನ್ನು ರಭಸದಿಂದ ಒಲೆ ಕಡೆಗೆ ಎಸೆಯುತ್ತಾನೆ. ಅವಳ ಕಡೆ ಉಗ್ರವಾಗಿ ಕವಿದು ಬರುತ್ತಾನೆ. ಅವಳು ಪಿಯಾನೊ ಮೇಲೆ ಬಾಗಿ ಮುಖವನ್ನು ಮುಚ್ಚಿ ಕುಳಿತು) ನನ್ನನ್ನು ಹೊಡೆಯ ಬೇಡಿ.

ಹಿಗ್ಗಿನ್ಸ್ : ನಿನ್ನನ್ನು ಹೊಡೆಯುವುದೆ ? ಚಂಡಾಲ ಪ್ರಾಣಿ ನೀನು. ಅಂಥ ಆಪಾದನೆ ಮಾಡುವುದಕ್ಕೆ ನಿನಗೆಷ್ಟು ಧೈರ್ಯ ? ನನ್ನನ್ನು ಹೊಡೆದಿರುವವಳು ನೀನು.........ನನ್ನ ಹೃದಯಕ್ಕೆ ಗಾಯ ಉಂಟು ಮಾಡಿದ್ದೀಯೆ.

ಲಿಸ : (ಒಳಗಿನ ಸಂತೋಷದಿಂದ ರೋಮಾಂಚಗೊಂಡು) ನನಗೆ ಸಂತೋಷ, ಹೇಗೊ ನನ್ನ ಪಾಲಿಗೆ ಬರಬೇಕಾದ್ದು ಸ್ವಲ್ಪವಾದರೂ ಬಂದಿತು.

ಹಿಗ್ಗಿನ್ಸ್ : (ಗಂಭೀರವಾಗಿ, ತನ್ನ ವೃತ್ತಿಗೆ ತಕ್ಕ ಅತಿ ನಯವಾದ ರೀತಿಯಲ್ಲಿ) ನನ್ನ ಸ್ವಾಸ್ಥ್ಯ ಕಳೆದುಕೊಳ್ಳುವಂತೆ ಮಾಡಿದ್ದೀಯೆ. ಹಿಂದೆ ಎಂದೂ ನನಗೆ ಇಂಥದು ಸಂಭವಿಸಿಲ್ಲ. ಈ ರಾತ್ರಿ ನನಗೆ ಏನನ್ನು ಹೇಳಲೂ ಇಷ್ಟವಿಲ್ಲ. ಹೇಳದೆ ಇರುವುದೇ ಮೇಲು. ನಾನು ಮಲಗಲು ಹೋಗುತ್ತೇನೆ.

ಲಿಸ : (ಉದ್ಧಟತನದಿಂದ) ಕಾಫೀ ವಿಷಯ ನೀವೇ ಪಿಯರ್ಸಿಗೆ ಒಂದು ಕಾಗದ ಬರೆದು ಇಡಿ, ಆಕೆಗೆ ನಾನು ಹೇಳುವುದಿಲ್ಲ.

ಹಿಗ್ಗಿನ್ಸ್ : (ಮರ್ಯಾದೆಯಾಗಿ) ಪಿಯರ್ಸ್ ಹಾಳಾಗಲಿ...ಕಾಫೀ ಹಾಳಾಗಲಿ... ನೀನು ಹಾಳಾಗು. ನನ್ನ ಅವಿವೇಕವೂ ಹಾಳಾಗಲಿ. ಕಷ್ಟಪಟ್ಟು ಸಂಪಾದಿಸಿದ ತಿಳಿವಳಿಕೆಯನ್ನೂ ನನ್ನ ವಿಶ್ವಾಸ ಆಪ್ತತೆಗಳ ಸಂಪತ್ತಿಯನ್ನೂ ಹೃದಯವಿಲ್ಲದ ಒಂದು ಗಟಾರದ ಹುಳುವಿಗೆ ಎರೆದಂತೆ ಆಯಿತು. (ಪರಿಣಾಮಕಾರಿಯಾಗು ವಂಥ ಒಂದು ಮರ್ಯಾದೆಯಿಂದ ಹೊರಗೆ ಹೋಗುವನು. ಬಾಗಿಲನ್ನು ರೂಕ್ಷವಾಗಿ ರಪ್ಪಂತೆ ಬಡಿಯುವುದು ಅದನ್ನು ಕೆಡಿಸುತ್ತದೆ.)

(ಎಲಿಸ ಮೊದಲ ಬಾರಿಗೆ ಮುಗುಳುನಗೆ ನಗುತ್ತಾಳೆ. ಹಿಗ್ಗಿನ್ಸ್ ಹೊರಗೆ ಹೋದ ರೀತಿಯನ್ನು ಉನ್ಮತ್ತವಾದ ಒಂದು ಮೂಕ ಚಿತ್ರದಲ್ಲಿನಂತೆ ಅನುಕರಣ ಮಾಡುತ್ತ ತನ್ನ ಮನಸ್ಸಿನ ಭಾವಗಳನ್ನು ವ್ಯಕ್ತಪಡಿಸುತ್ತಾಳೆ. ಅವಳ ಸ್ವಂತ ವಿಜಯ ಈ ಭಾವದೊಡನೆ ಅಸ್ಪಷ್ಟವಾಗಿ ಸೇರಿಕೊಳ್ಳುತ್ತದೆ. ಕಡೆಗೆ ತನ್ನ ಮೊಳಕಾಲಿನ ಮೇಲೆ ಕುಳಿತು ಉಂಗುರ ವನ್ನು ಹುಡುಕಲು ಬಳಿಯ ಹತ್ತಿರದ ಜಮಖಾನದ ಮೇಲೆ ಬಾಗುತ್ತಾಳೆ.)

## ಅಂಕ ಐದು

[ಶ್ರೀಮತಿ ಹಿಗ್ಗಿನ್ಸ್ ಅವರ ದಿವಾನ್‌ಖಾನೆ, ಹಿಂದಿನಂತೆಯೆ ಬರವಣಿಗೆಯ ಮೇಜಿನ ಹತ್ತಿರ ಆಕೆ ಬರೆಯುತ್ತಿದ್ದಾಳೆ. ಪರಿಚಾರಿಕೆ ಬರುತ್ತಾಳೆ.]

ಪರಿಚಾರಿಕೆ : (ಬಾಗಿಲಲ್ಲಿ) ಹೆನ್ರಿಯವರು ಬಂದು ಕೆಳಗಡೆ ಇದ್ದಾರೆ ಅಮ್ಮ. ಜೊತೆಯಲ್ಲಿ ಕರ್ನಲ್ ಪಿಕರಿಂಗವರೂ ಇದ್ದಾರೆ.

ಶ್ರೀಮತಿ ಹಿಗ್ಗಿನ್ಸ್ : ಮೇಲಕ್ಕೆ ಕರೆದು ತಾ.

ಪರಿಚಾರಿಕೆ : ಟೆಲಿಫೋನಲ್ಲಿ ಮಾತಾಡುತ್ತ ಇದ್ದಾರೆ ತಾಯಿ ; ಪೊಲೀಸಿಗೆ ಎಂದು ಕಾಣುತ್ತದೆ.

ಶ್ರೀಮತಿ ಹಿಗ್ಗಿನ್ಸ್ : ಏನು ?

ಪರಿಚಾರಿಕೆ : (ಇನ್ನೂ ಒಳಕ್ಕೆ ಬಂದು, ಧ್ವನಿ ತಗ್ಗಿಸಿ) ಹೆನ್ರಿಯವರು ಉದ್ರೇಕ ಗೊಂಡಿದ್ದಾರೆ. ಅದನ್ನ......ಅದನ್ನ ಹೇಳಬೇಕು ಎನಿಸಿತು.

ಶ್ರೀಮತಿ ಹಿಗ್ಗಿನ್ಸ್ : ಹೆನ್ರಿ ಉದ್ರೇಕದಲ್ಲಿರಲಿಲ್ಲ ಎಂದು ಹೇಳಿದ್ದಿದ್ದರೆ ನನಗೆ ಹೆಚ್ಚು ಆಶ್ಚರ್ಯವಾಗುತ್ತಿತ್ತು. ಪೊಲೀಸರೊಡನೆ ಕೆಲಸ ಮುಗಿಸಿದ ಮೇಲೆ, ಮೇಲಕ್ಕೆ ಬರುವಂತೆ ಹೇಳು. ಏನೋ ಕಳಕೊಂಡಿದ್ದಾನೆ ಅಂತ ಕಾಣುತ್ತೆ.

ಪರಿಚಾರಿಕೆ : ಹೌದು, ತಾಯಿ. (ಹೋಗುತ್ತಾಳೆ.)

ಶ್ರೀಮತಿ ಹಿಗ್ಗಿನ್ಸ್ : ಮಹಡಿಯ ಮೇಲಕ್ಕೆ ಹೋಗಿ ಮಿಸ್ ಡೂಲಿಟ್ಲ್‌ಗೆ ಹೇಳು ; ಹೆನ್ರಿ, ಕರ್ನಲ್ ಇಲ್ಲಿದ್ದಾರೆ ಎಂದು. ಹಾಗೆಯೇ ನಾನು ಹೇಳಿ ಕಳಿಸುವತನಕ ಅವಳು ಕೆಳಗೆ ಬರಬಾರದೆಂದು ಹೇಳು.

ಪರಿಚಾರಿಕೆ : ಆಗಲಿ ತಾಯಿ.

(ಹಿಗ್ಗಿನ್ಸ್ ಸಿಡಿದು ಒಳಗೆ ಬರುತ್ತಾನೆ. ಪರಿಚಾರಿಕೆ ಹೇಳಿದಂತೆ ವಿಶೇಷ ಮನಃ ಸ್ಥಿತಿಯಲ್ಲಿದ್ದಾನೆ.)

ಹಿಗ್ಗಿನ್ಸ್ : ನೋಡಮ್ಮ, ಒಂದು ಹಾಳಾದ ಸಂಗತಿ ನಡೆದು ಹೋಗಿದೆ.

ಶ್ರೀಮತಿ ಹಿಗ್ಗಿನ್ಸ್ : ಹೌದು ಮಗು, ಬಾ ಒಳಗೆ. (ತನ್ನ ಆತುರವನ್ನು ತಡೆದು

ಕೊಂಡು, ತನ್ನ ಮುದ್ದನ್ನು ತೋರಿಸುತ್ತಾನೆ; ಪರಿಚಾರಿಕೆ ಹೋಗುತ್ತಾಳೆ.) ಏನದು ಮಗು ?

ಹಿಗ್ಗಿನ್ಸ್ : ಎಲಿಸ ಪರಾರಿಯಾಗಿದ್ದಾಳೆ.

ಶ್ರೀಮತಿ ಹಿಗ್ಗಿನ್ಸ್ : (ತನ್ನ ಬರವಣಿಗೆಯನ್ನು ಶಾಂತವಾಗಿ ಮುಂದುವರಿಸುತ್ತ) ನೀನು ಎಲ್ಲೊ ಅವಳನ್ನು ಹೆದರಿಸಿರಬೇಕು ?

ಹಿಗ್ಗಿನ್ಸ್ : ಅವಳನ್ನು ನಾನು ಹೆದರಿಸಿದೆ ! Nonsense ; ವಾಡಿಕೆಯಂತೆ ನಿನ್ನೆಯ ರಾತ್ರಿ, ದೀಪ ಆರಿಸು ಮುಂತಾಗಿ ಹೇಳಿ ಅವಳನ್ನು ಬಿಟ್ಟುಹೋದೆ. ಮಲಗುವುದಕ್ಕೆ ಬದಲಾಗಿ, ತನ್ನ ಬಟ್ಟೆ ಬದಲಾಯಿಸಿಕೊಂಡು ಎಲ್ಲಿಗೊ ಹೊರಟು ಹೋಗಿದ್ದಾಳೆ. ಹಾಸಿಗೆಯಲ್ಲಿ ಅವಳು ಮಲಗಿದ ಲಕ್ಷಣ ಇಲ್ಲ. ಬೆಳಿಗ್ಗೆ ಏಳುಗಂಟೆಗೆ ಮುಂಚೆ ಗಾಡಿಯಲ್ಲಿ ಬಂದು ತನ್ನ ಸಾಮಾನು ಕೇಳಿದಳಂತೆ. ನನಗೆ ಒಂದು ಮಾತನ್ನೂ ತಿಳಿಸದೆ ಬುದ್ಧಿ ಇಲ್ಲದೆ ಆ ಪಿಯರ್ಸ್ ಅವಳಿಗೆ ಅವನ್ನು ಕೊಟ್ಟಿದ್ದಾಳೆ. ನಾನೇನು ಮಾಡಬೇಕು ಈಗ ?

ಶ್ರೀಮತಿ ಹಿಗ್ಗಿನ್ಸ್ : ಅವಳಿಲ್ಲ ಎಂದು ತಿಳಿದುಕೊಳ್ಳಬೇಕಾಗುತ್ತೆ, ಹೆನ್ರಿ. ಇಷ್ಟವಿಲ್ಲದೆ ಇದ್ದರೆ ನಿನ್ನನ್ನೂ ಬಿಟ್ಟು ಹೊರಟುಹೋಗಲು ಆ ಹುಡುಗಿಗೆ ಪೂರ್ತಿ ಅಧಿಕಾರವುಂಟು.

ಹಿಗ್ಗಿನ್ಸ್ : (ಹುಚ್ಚು ಹಿಡಿದವನಂತೆ ಕೋಣೆಯಲ್ಲಿ ಹಾಗೆ ಹೀಗೆ ತಿರುಗಾಡುತ್ತ) ಮನೆಯಲ್ಲಿ ಒಂದು ಪದಾರ್ಥ ಸಿಕ್ಕುವ ಹಾಗಿಲ್ಲ. ನನಗೆ ಯಾವ ಕೆಲಸಗಳಿವೆ ಎಂದು ಗೊತ್ತಿಲ್ಲ ನನಗೆ—(ಪಿಕರಿಂಗ್ ಬರುತ್ತಾನೆ, ಶ್ರೀಮತಿ ಹಿಗ್ಗಿನ್ಸ್ ಲೇಖನಿ ಕೆಳಗಿಟ್ಟು ಮೇಜಿನ ಆ ಕಡೆಗೆ ತಿರುಗುತ್ತಾಳೆ.)

ಪಿಕರಿಂಗ್ : (ಕೈ ಕುಲುಕಿಸಿ) ನಮಸ್ಕಾರ ಶ್ರೀಮತಿಯವರೆ. ಹೆನ್ರಿ ಹೇಳಿದರೇನು ? (ಕುಳಿತುಕೊಳ್ಳುವನು.)

ಹಿಗ್ಗಿನ್ಸ್ : ಆ ಕತ್ತೆ ಇನ್‌ಸ್ಪೆಕ್ಟರ್ ಏನು ಹೇಳುತ್ತಾನೆ ? ಬಹುಮಾನ ಕೊಡುತ್ತೇವೆ ಎಂದು ಹೇಳಿದ್ದೀರೇನು ?

ಶ್ರೀಮತಿ ಹಿಗ್ಗಿನ್ಸ್ : (ಕೋಪದಿಂದ ಕೂಡಿದ ವಿಸ್ಮಯದಲ್ಲಿ ಏಳುತ್ತ) ಎಲಿಸಾನ ಹುಡುಕಲು ಪೊಲೀಸರನ್ನು ಬಿಟ್ಟಿದ್ದೀಯೇನು ?

ಹಿಗ್ಗಿನ್ಸ್ : ಇನ್ನೇನು ಮತ್ತೆ ? ಪೊಲೀಸರು ಇರೋದು ಏತಕ್ಕೆ ? (ದೊಡ್ಡ ಕುರ್ಚಿಯಲ್ಲಿ ಕುಳಿತುಕೊಳ್ಳುವನು.) ನಾವಿನ್ನೇನು ಮಾಡಬಹುದಿತ್ತು ?

ಪಿಕರಿಂಗ್ : ಆ ಇನ್‌ಸ್ಪೆಕ್ಟರ್ ತುಂಬಾ ತೊಂದರೆಗಳನ್ನು ಒಡ್ಡಿದ. ನಾವು ಯಾವುದೊ ಅಯುಕ್ತ ಉದ್ದೇಶದವರೆಂದು ಅವನು ಸಂಶಯ ಪಟ್ಟಹಾಗೆ ಕಾಣುತ್ತದೆ.

ಶ್ರೀಮತಿ ಹಿಗ್ಗಿನ್ಸ್ : ಸರಿಯೇ, ಇನ್ನೇನು ಮಾಡುತ್ತಾನೆ ? ನಿಮಗೇನು ಅಧಿಕಾರವಿದೆ

ಅವಳು ಕಳ್ಳಿ ಎಂದೊ ಕಳೆದುಹೋದ ಒಂದು ಛತ್ರಿ ಎಂದೊ ಆ ಹುಡುಗಿಯ ಹೆಸರನ್ನು ಪೊಲೀಸರಿಗೆ ಕೊಡುವುದಕ್ಕೆ ? ಸರಿಹೋಯಿತಪ್ಪ. (ಕ್ಷುಬ್ಧಳಾಗಿ ಕುಳಿತುಕೊಳ್ಳುವಳು.)

ಹಿಗ್ಗಿನ್ಸ್ : ನಾವು ಅವಳನ್ನು ಕಂಡು ಹಿಡಿಯಬೇಕು.

ಪಿಕರಿಂಗ್ : ಹೀಗೆ ಹೊರಟು ಹೋಗಲು ಅವಳನ್ನು ಹೇಗೆ ಬಿಡಬಹುದು, ಶ್ರೀಮತಿ ಯವರೆ ? ನಾವು ಇನ್ನೇನು ಮಾಡಬಹುದಾಗಿತ್ತು ?

ಶ್ರೀಮತಿ ಹಿಗ್ಗಿನ್ಸ್ : ನಿಮ್ಮಲ್ಲಿ ಒಬ್ಬರಿಗೂ ಮಕ್ಕಳಿಗಿರೋದಕ್ಕಿಂತ ಹೆಚ್ಚು ಬುದ್ಧಿ ಇಲ್ಲ. ಏನೆನ್ನೋಣ ! (ಪರಿಚಾರಿಕೆ ಒಳಗೆ ಬಂದು ಈ ಸಂಭಾಷಣೆಗೆ ಅಡ್ಡ ಬರುತ್ತಾಳೆ.)

ಪರಿಚಾರಿಕೆ : ಹೆನ್ರಿಯವರೆ, ಯಾರೊ ಸಭ್ಯ ಗೃಹಸ್ಥರು ಬಂದಿದ್ದಾರೆ. ನಿಮ್ಮನ್ನೇ ವಿಶೇಷವಾಗಿ ಕಾಣಬೇಕಂತೆ. ವಿಂಪೋಲ್ ರಸ್ತೆಯಿಂದ ಅವರನ್ನು ಇಲ್ಲಿಗೆ ಕಳಿಸಿದ್ದಾರೆ.

ಹಿಗ್ಗಿನ್ಸ್ : ಓ ಹಾಳಾಯಿತು. ನಾನು ಈಗ ಯಾರನ್ನೂ ನೋಡಲಾರೆ ! ಯಾರವರು ?

ಪರಿಚಾರಿಕೆ : ಯಾರೊ ಡೂಲಿಟ್ಲ್ ಎಂಬವರಂತೆ, ಸ್ವಾಮಿ !

ಪಿಕರಿಂಗ್ : ಡೂಲಿಟ್ಲ್ ? ದೂಳು ಹೊಡೆಯುವವನು !

ಪರಿಚಾರಿಕೆ : ದೂಳು ಹೊಡೆಯೋನು ? ಅಲ್ಲ ಸ್ವಾಮಿ ; ಒಬ್ಬ ಸಭ್ಯ ಗೃಹಸ್ಥರು.

ಹಿಗ್ಗಿನ್ಸ್ : (ಉದ್ವೇಗದಿಂದ ಎದ್ದು) ನಮ್ಮ ಪ್ರಾಣಿಗೂ ಪಿಕ್, ಅವಳ ಸಂಬಂಧಿ ಯಾರೊ ಇರಬೇಕು. ಅವಳು ಅವರಲ್ಲಿಗೆ ಹೋಗಿರಬಹುದು. ನಮಗೆ ಗೊತ್ತಿರದ ಯಾರೊ ಒಬ್ಬರು. (ಪರಿಚಾರಿಕೆಗೆ) ಆತನನ್ನು ಬೇಗ ಕಳಿಸು.

ಪರಿಚಾರಿಕೆ : ಆಗಲಿ ಸ್ವಾಮಿ. (ಹೋಗುವಳು.)

ಹಿಗ್ಗಿನ್ಸ್ : (ತಾಯಿಯ ಬಳಿಗೆ ಆತುರದಿಂದ ಹೋಗಿ) ಸಭ್ಯ ಸಂಬಂಧಿಗಳು .........ಆ.........ಈಗ ಏನಾದರೂ ಸಮಾಚಾರ ಗೊತ್ತಾಗುತ್ತೆ. (ಚಿಪ್ಪೆಂಡೇಲ್ ಕುರ್ಚಿಗೆ ಹೋಗಿ ಕುಳಿತುಕೊಳ್ಳುತ್ತಾನೆ.)

ಶ್ರೀಮತಿ ಹಿಗ್ಗಿನ್ಸ್ : ಅವಳ ಜನ ಯಾರಾದರೂ ನಿಮಗೆ ಗೊತ್ತೇನು ?

ಪಿಕರಿಂಗ್ : ಅವಳಪ್ಪ ಮಾತ್ರ ಗೊತ್ತು. ಅವನ ವಿಷಯ ನಿಮಗೆ ಹೇಳಿದ್ದೇವೆ.

ಪರಿಚಾರಿಕೆ : ಡೂಲಿಟ್ಲ್ ಅವರು (ಎಂದು ಹೇಳಿ ಹಿಂದಕ್ಕೆ ಹೋಗುವಳು.)

[ಡೂಲಿಟ್ಲ್ ಪ್ರವೇಶಿಸುತ್ತಾನೆ. ಒಂದು ಹೊಸ ಮಾದರಿಯ ಮೇಲಂಗಿ ತೊಟ್ಟು, ಬಿಳಿಯ ವೆಸ್ಟ್‌ಕೋಟ್, ಬೂದು ಬಣ್ಣದ ಷರಾಯಿ ಹಾಕಿ ಒಳ್ಳೆಯ ಅಲಂಕಾರದಲ್ಲಿದ್ದಾನೆ. ಅಂಗಿಯ ಗುಂಡಿಯ ಕೊನೆಗೆ ಒಂದು ಹೂವಿದೆ. ಹೊಳೆಯುವ ರೇಷ್ಮೆಯ ಹ್ಯಾಟ್ ಇದೆ. ಇದರ ಪರಿಣಾಮವನ್ನು patent leather shoe ಪೂರ್ತಿ ಮಾಡುತ್ತದೆ. ತಾನು

ಬಂದಿರುವ ಕೆಲಸದಲ್ಲಿ ಮಗ್ನನಾಗಿರುವುದರಿಂದ ಶ್ರೀಮತಿ ಹಿಗ್ಗಿನ್ಸನ್ನು ನೋಡುವುದಿಲ್ಲ. ನೇರ ಹಿಗ್ಗಿನ್ಸ್ ಬಳಿಗೆ ಬಂದು ಆವೇಗದ, ಆಕ್ಷೇಪಣೆಯ ಧ್ವನಿಯಲ್ಲಿ ಮಾತನಾಡಿಸುತ್ತಾನೆ.]

ಡೂಲಿಟ್ಲ್ : (ತನ್ನನ್ನು ತಾನೇ ತೋರಿಸಿಕೊಳ್ಳುತ್ತ) ಇದು ನೋಡಿ, ಇದು ಕಾಣ್ತದೇನು ? ನೀವು ಮಾಡಿದ್ದು ಇದು.

ಹಿಗ್ಗಿನ್ಸ್ : ಏನ್ರಿ, ಮಾಡಿದ್ದು ?

ಡೂಲಿಟ್ಲ್ : ಇದು ಅಂತೇನೆ......ಇದನ್ನೋಡಿ......ಈ ಹ್ಯಾಟ್ ನೋಡಿ...... ಈ ಕೋಟ್ ನೋಡಿ.

ಪಿಕರಿಂಗ್ : ಎಲಿಸಾ ನಿಮಗೆ ಬಿಟ್ಟಿ ಕೊಂಡು ಕಳಿಸಿದ್ದಾಳೇನು ?

ಶ್ರೀಮತಿ ಹಿಗ್ಗಿನ್ಸ್ : ನಮಸ್ಕಾರ, ಡೂಲಿಟ್ಲವರೆ, ಕುಳಿತುಕೊಳ್ಳಬಾರದೆ ?

ಡೂಲಿಟ್ಲ್ : (ಮನೆಯ ಯಜಮಾನಿತಿಯನ್ನು ಮರೆತೆನೆಂದು ಸ್ವಲ್ಪ ಅಪ್ರತಿಭನಾಗಿ) ಕ್ಷಮಿಸಬೇಕು, ತಾಯಿ. (ಮುಂದೆ ಬಂದು ಆಕೆಯು ಚಾಚಿದ ಕೈಯನ್ನು ಕುಲುಕುವನು) ಥ್ಯಾಂಕ್ ಯು. (ಪಿಕರಿಂಗನ ಬಲಕ್ಕೆ ಮೆತ್ತೆಯ ಆಸನದಲ್ಲಿ ಕುಳಿತುಕೊಳ್ಳುವನು.) ನನ್ನ ತಲೆಯ ತುಂಬಾ ತುಂಬಿಕೊಂಡಿರುವುದು ನನಗೆ ಸಂಭವಿಸಿರುವ ಇದೊಂದು. ಬೇರೆ ಇನ್ನೇನನ್ನೂ ಯೋಚನೆ ಮಾಡಲು ಆಗುವುದಿಲ್ಲ.

ಹಿಗ್ಗಿನ್ಸ್ : ನಿಮಗೆ ಈಗ ಆಗಿರುವುದು ಏನು, ಮಹಾರಾಯ ?

ಡೂಲಿಟ್ಲ್ : ನನಗೊಬ್ಬನಿಗೆ ಸಂಭವಿಸಿದ್ದರೆ ನಾನು ಯೋಚಿಸುತ್ತಿರಲಿಲ್ಲ. ಯಾರಿಗೆ ಏನಾದ್ರೂ ಆಗಬಹುದು ಎನ್ನಿ. ಅಂಥದೇನು ಆದ್ರೂ ಅದು ಭಗವಂತನ ತಪ್ಪು ಎನ್ನುತ್ತೀರಿ ನೀವು. ಆದರೆ.........ಇದು.........ನೀವು ಮಾಡಿದ್ದು. ನನಗೆ.........ಹೌದು, ಸ್ವಾಮಿ.........ನೀವು ; ಹೆನ್ರಿ ಹಿಗ್ಗಿನ್ಸ್ !

ಹಿಗ್ಗಿನ್ಸ್ : ನಿಮಗೆ ಎಲಿಸ ಸಿಕ್ಕಿದ್ದಾಳೇನು ? ಆ ಸಂಗತಿ ಬೇಕಾಗಿದೆ.

ಡೂಲಿಟ್ಲ್ : ನೀವು ಅವಳನ್ನು ಕಳೆದುಕೊಂಡಿರೇನು ?

ಹಿಗ್ಗಿನ್ಸ್ : ಹೌದು.

ಡೂಲಿಟ್ಲ್ : ನೀವು ಅದೃಷ್ಟವಂತರು ಸ್ವಾಮಿ ! ನನಗವಳು ಸಿಕ್ಕಲಿಲ್ಲ. ನೀವು ನನಗೆ ಮಾಡಿರುವುದನ್ನು ತಿಳಿದ ಮೇಲೆ ನಾನು ಅವಳಿಗೆ ಸಾಕಷ್ಟು ಬೇಗ ಸಿಕ್ಕುತ್ತೇನೆ.

ಶ್ರೀಮತಿ ಹಿಗ್ಗಿನ್ಸ್ : ನನ್ನ ಈ ಮಗ ನಿಮಗೆ ಏನು ಮಾಡಿದ್ದಾರೆ ಡೂಲಿಟ್ಲ್ ?

ಡೂಲಿಟ್ಲ್ : ಏನು ಮಾಡಿದ್ದಾರೆ ? ಹಾಳು ಮಾಡಿದ್ದಾರೆ. ನನ್ನ ಸುಖ ನಾಶ ಮಾಡಿದ್ದಾರೆ. ನನ್ನ ಕಟ್ಟಿಹಾಕಿ ಮಧ್ಯಮ ವರ್ಗದ ನಡುವೆ ಸಿಕ್ಕಿಸಿ—

ಹಿಗ್ಗಿನ್ಸ್ : (ಅಸಹನೆಯಿಂದ ಮೇಲೆದ್ದು, ಡೂಲಿಟ್ಲನ ಮೇಲೆ ಕವಿದುನಿಂತು) ಬಾಯಿಗೆ ಬಂದದ್ದು ಮಾತಾಡುತ್ತಿದ್ದೀರಿ. ನೀವು ಕುಡಿದಿದ್ದೀರಿ. ನಾನು ನಿಮಗೆ ಐದು ಪೌಂಡು ಕೊಟ್ಟೆ. ಆಮೇಲೆ ಎರಡು ಸಲ ನಿಮ್ಮೊಡನೆ ಮಾತನಾಡಿದೆ. ಗಂಟೆಗೆ ಅರ್ಧ ಕ್ರೌನಿನಂತೆ ಹಣಕೊಟ್ಟೆ. ಅಲ್ಲಿಂದ ಈಚೆಗೆ ನಿಮ್ಮನ್ನು ಕಂಡಿಲ್ಲ.

ಡೂಲಿಟ್ಲ್ : ಕುಡಿದಿದ್ದೇನೆಯೊ ನಾನು ? ಹುಚ್ಚನೊ ನಾನು ? ಇದಕ್ಕೆ ಉತ್ತರ ಹೇಳಿ ನನಗೆ ! ಅಮೇರಿಕಾದಲ್ಲಿ ಇದ್ದ ಯಾವನೊ ಒಬ್ಬ ಮುದಿಯನಿಗೆ ನೀವು ಕಾಗದ ಬರೆದಿರೊ ಬರೆಯಲಿಲ್ಲವೊ ? ಲೋಕದಲ್ಲೆಲ್ಲ ನೀತಿ ಸುಧಾರಣೆ ಸಂಘಗಳನ್ನು ಸ್ಥಾಪಿಸಲು 50 ಲಕ್ಷ ಪೌಂಡು ಆತ ಕೊಡುತ್ತಿದ್ದರೊ ಇಲ್ಲವೊ ? ಸಾರ್ವತ್ರಿಕವಾಗಿ ಬಳಕೆಯುಳ್ಳ ಭಾಷೆಯನ್ನು ಸೃಷ್ಟಿ ಮಾಡಲು ಆತನು ನಿಮ್ಮನ್ನು ಕೇಳುತ್ತಿದ್ದನೊ ಇಲ್ಲವೊ ?

ಹಿಗ್ಗಿನ್ಸ್ : ಏನಂತೀರಿ ! 'ಎಸ್ರಾ ಡಿ ವ್ಯಾನ್ನಾಫೆಲರ್' ! ಆತನು ಸತ್ತುಹೋದ. (ಲಕ್ಷ್ಯವಿಲ್ಲದೆ ಪುನಃ ಕುಳಿತುಕೊಳ್ಳುತ್ತಾನೆ.)

ಡೂಲಿಟ್ಲ್ : ಹೌದು ಆತನು ಸತ್ತಿದ್ದಾರೆ. ನನ್ನ ಕೆಲಸವೂ ಮುಗಿದು ಹೋಯಿತು. ನಿಮಗೆ ಈಗ ತಿಳಿದಿರುವಷ್ಟು ಮಟ್ಟಿಗೆ, ಇಂಗ್ಲಂಡಲ್ಲಿ ಬಹು ಸ್ವತಂತ್ರವಾದ ನೀತಿವಂತನೆಂದರೆ 'ಆಲ್‌ಫ್ರೆಡ್ ಡೂಲಿಟ್ಲ್' ಎಂಬ ಒಬ್ಬ ಸಾಮಾನ್ಯ ದೂಳು ಹೊಡೆಯುವವನು ಎಂದು ಅವರಿಗೆ ನೀವು ಬರೆದಿರೊ ಇಲ್ಲವೊ ?

ಹಿಗ್ಗಿನ್ಸ್ : ನೀವು ಕಳೆದ ಸಲ ಬಂದು ಹೋದ ಮೇಲೆ, ಅಂಥ ಒಂದು ಅವಿವೇಕದ ತಮಾಷೆ ಮಾಡಿದೆ ಎಂದು ಈಗ ಜ್ಞಾಪಕಕ್ಕೆ ಬರುತ್ತಿದೆ.

ಡೂಲಿಟ್ಲ್ : ಅವಿವೇಕದ ತಮಾಷೆಯೆಂದು ನೀವೇನೊ ಕರೆಯುತ್ತೀರಿ, ಸ್ವಾಮಿ. ಅದರಿಂದ ನನಗೆ ಪೂರ್ತಿ ಮುಚ್ಚಳ ಹಾಕಿದ ಹಾಗೆ ಆಗಿ ಹೋಯ್ತು. ಅಮೇರಿಕನರು ನಮ್ಮಂತಲ್ಲ ಎಂದು ತೋರಿಸಿಕೊಳ್ಳುವುದಕ್ಕೋಸ್ಕರವೇ ಆತನಿಗೆ ಅವಕಾಶ ಕೊಟ್ಟಿರಿ. ಜೀವನದ ಪ್ರತಿ ಅಂತಸ್ತಿನವರಲ್ಲಿಯೂ ಇರುವ ಯೋಗ್ಯರನ್ನು ಕಂಡರೆ ಅವರಿಗೆ ಗೌರವ ಉಂಟು. ಎಷ್ಟು ಕೀಳು ಸ್ಥಿತಿಯಲ್ಲಿರಲಿ, ಅವರು ಅಂಥವರನ್ನು ಗುರುತಿಸುತ್ತಾರೆ. ಉದಾರವಾದ, ತಮ್ಮ ಒಂದು ವಿಲ್ಲಿನಲ್ಲಿ ಅವರು ಈ ಮಾತುಗಳನ್ನು ಬರೆದಿದ್ದಾರೆ ; ನೀವು ಬುದ್ಧಿಯಿಲ್ಲದೆ ತಮಾಷೆ ಮಾಡಿದ ಫಲವಾಗಿ, ಹೆನ್ರಿ ಹಿಗ್ಗಿನ್ಸ್. ಮುಂಜೀರ್ಣವಾಗಿರುವ ಗಿಣ್ಣನ್ನು ತಯಾರಿಸುವ ಕಂಪನಿ ಒಂದು ಅವರದೆ ಇದೆಯಂತೆ. ವರ್ಷಕ್ಕೆ ಅದರಿಂದ ೩,೦೦೦ ಪೌಂಡು ವರಮಾನ ಬರುವಂತೆ ನನಗೆ ಅದರಲ್ಲಿ ಭಾಗ ಬಿಟ್ಟಿದ್ದಾರೆ. ವರ್ಷಕ್ಕೆ ಆರು ಸಲಕ್ಕೆ ಮೀರದಂತೆ, ಅವರು ಕೇಳಿದಷ್ಟು ಸಲ

ಅವರ ವ್ಯಾನಾಫೆಲರ್ ನೀತಿ ಸುಧಾರಣೆಯ ಲೋಕಸಂಘದಲ್ಲಿ ನಾನು ಉಪನ್ಯಾಸ ಕೊಡಬೇಕಂತೆ, ಅಷ್ಟೇ.

ಹಿಗ್ಗಿನ್ಸ್ : ಅಯ್ಯೊ ಹಾಳಾದೋನೆ. ಫ್ಹ್ಹೃ (ಇದ್ದಕ್ಕಿದ್ದಂತೆ ಕಳೆ ಬಂದು) ಅದೃಷ್ಟ ಎಂದರೆ ಇದು.

ಪಿಕರಿಂಗ್ : ನಿಮಗೆ ಒಳ್ಳೆಯ ಸುರಕ್ಷಣೆ ದೊರೆತ ಹಾಗೆ ಆಯಿತು, ಡೂಲಿಟ್ಲ್, ಯಾರೂ ಎರಡು ಸಲ ಹೀಗೆ ಕೇಳುವುದಿಲ್ಲ.

ಡೂಲಿಟ್ಲ್ : ನನಗೆ ಉಪನ್ಯಾಸದ ವಿಷಯ ಯೋಚನೆಯಲ್ಲ ಬಿಡಿ. ಅವರ ಮುಖ ನೀಲಿಕಟ್ಟುವ ಹಾಗೆ ಭಾಷಣ ಬಿಗೀತೇನೆ. ಅದೇನೂ ಲಕ್ಷ್ಯವಿಲ್ಲ. ನನ್ನನ್ನು ಸಭ್ಯನನ್ನಾಗಿ ಮಾಡಿದರಲ್ಲ, ಅದಕ್ಕೆ ನನ್ನ ಆಕ್ಷೇಪಣೆ. ನನ್ನನ್ನು ಸಭ್ಯನನ್ನಾಗಿ ಮಾಡಬೇಕೂಂತ ಯಾರು ಕೇಳಿದರು ಅವರನ್ನ ? ಸುಖವಾಗಿದ್ದೆ. ಹಣ ಬೇಕೆನಿಸಿದಾಗ ಹೆಚ್ಚು ಕಡಮೆ ಎಲ್ಲರ ಕಿಸೇನೂ ಮುಟ್ಟಿ ಹಣ ತರುತ್ತಿದ್ದೆ— ನಿಮ್ಮ ಕಿಸೆ ಮುಟ್ಟಿದ ಹಾಗೆಯೇ, ಹೆನ್ರಿ ಹಿಗ್ಗಿನ್ಸ್. ಈಗ ನನಗೆ ಚಿಂತೆಯಾಗಿ ಬಿಟ್ಟಿದೆ. ಕುತ್ತಿಗೆ ಕಾಲು ಎರಡೂ ಕಟ್ಟಿದ ಹಾಗೆ ಆಗಿದೆ. ಪ್ರತಿಯೊಬ್ಬರೂ ಹಣಕ್ಕೆ ಈಗ ನನ್ನ ಜೇಬಿಗೆ ಕೈಹಾಕುತ್ತಾರೆ. ನಿಂಗೊಳ್ಳೇದಾಯ್ತುಯ್ಯ ಅಂತಾರೆ, ಲಾಯರು. ಹೌದೇನು ? ಅಂತೇನೆ, ನಾನು. ಅಂದರೆ, ನಿಮಗೊಳ್ಳೇದಾಯಿತು— ಎಂದಲ್ಲವೆ ನಿಮ್ಮ ಅರ್ಥ, ಅಂತೇನೆ ನಾನು. ನಾನು ಬಡವನಾಗಿದ್ದಾಗ ದೂಳಿನ ಗಾಡಿಯಲ್ಲಿ ಒಂದು ಮಕ್ಕಳ ಪ್ರಾಮ್ ಸಿಕ್ಕಿತು. ಆಗ ಆ ಲಾಯರನ್ನಿಟ್ಟೆ. ಅವರು ನನ್ನ ಬಿಡಿಸಿದರು. ಅಲ್ಲಿಂದ ಈಚೆಗೆ ನಾನು ಅವರನ್ನು ಕಾಣಲಿಲ್ಲ. ವೈದ್ಯರ ವಿಷಯವೂ ಹಾಗೇ. ಕೊಡೋಕೆ ಹಣ ಇಲ್ಲದೆ, ನಿಂತುಕೊಳ್ಳಲು ತ್ರಾಣ ಬರುವ ಮುಂಚೆಯೇ ಆಸ್ಪತ್ರೆಯಿಂದ ಓಡಿಸುತ್ತಿದ್ದರು. ಈಗ ಅವರಿಗೆ ಗೊತ್ತಾಗಿದೆ, ನನ್ನ ಆರೋಗ್ಯ ಚೆನ್ನಾಗಿಲ್ಲ ಎಂದು. ದಿನಕ್ಕೆ ಎರಡು ಸಲ ನನ್ನನ್ನು ಅವರು ನೋಡದೆ ಹೋದರೆ ನಾನು ಬದುಕುವುದಿಲ್ಲ ಎಂಬುದು ಅವರ ಅಭಿಪ್ರಾಯ. ಮನೆಯಲ್ಲೂ ನಾನಾಗಿ ಕೈಚಾಚಿ ಕೆಲಸ ಮಾಡೋಕೆ ಬಿಡುವುದಿಲ್ಲ. ಬೇರೆ ಯಾರೊ ಮಾಡಬೇಕು. ಅದಕ್ಕೆ ನಾನು ದಂಡ ತೆರಬೇಕು. ಕಳೆದ ವರ್ಷ ನನಗೆ ಒಬ್ಬರೂ ನೆಂಟರಿರಲಿಲ್ಲ. ಒಬ್ಬರೊ ಇಬ್ಬರೊ ಇದ್ದವರು ನನ್ನೊಡನೆ ಮಾತನಾಡುತ್ತಿರಲಿಲ್ಲ. ಈಗ ಐವತ್ತು ಜನ ಇದ್ದಾರೆ. ಅಷ್ಟು ಜನದ್ದೂ ಒಟ್ಟಿಗೆ ಸೇರಿಸಿದರೆ ನ್ಯಾಯವಾಗಿ ಒಂದು ವಾರದ ಕೂಲಿ ಸಂಪಾದನೆ ಇಲ್ಲ. ಇತರರಿಗಾಗಿ ನಾನು ಬದುಕಬೇಕಾಗಿದೆ. ನನಗಾಗಿ ಅಲ್ಲ. ಇದನ್ನು ನಾನು ಮಧ್ಯಮ ವರ್ಗದವರ ಮರ್ಯಾದೆ ಎನ್ನುವುದು. ಎಲಿಸಾನ ಕಳೆದು ಕೊಂಡಿರಿ ಎಂದು ನೀವು ಹೇಳುತ್ತೀರಿ. ನೀವು ಕಾತರ ಪಡಬೇಕಾಗಿಲ್ಲ. ಪಣಕಟ್ಟಿ ಹೇಳುತ್ತೇನೆ. ಇಷ್ಟು ಹೊತ್ತಿಗೆ ಅವಳು ನನ್ನ ಬಾಗಿಲಿಗೆ ಹೋಗಿರುತ್ತಾಳೆ.

ನಾನು ಮರ್ಯಾದಸ್ಥನಲ್ಲದಾಗ ಹೂಪಾರಿ ತನ್ನ ಖರ್ಚು ತಾನು ಸಂಪಾದಿಸಿಕೊಳ್ಳುತ್ತಿದ್ದಳು ಅವಳು. ಆ ತರುವಾಯ ನನ್ನ ಕೈಯಿಂದ ದಂಡ ತೆರಿಸುವವರು ನೀವು, ಸ್ವಾಮಿ. ಮಧ್ಯಮ ವರ್ಗದವರ ಭಾಷೇನ ನಿಮ್ಮಿಂದ ನಾನು ಕಲಿಯಬೇಕಾಗುತ್ತೆ, ಸರಿಯಾದ ಇಂಗ್ಲಿಷ್ ಮಾತಾಡೋದು ಬಿಟ್ಟು. ನೀವು ಬರೋದು ಅಲ್ಲಿ. ಧೈರ್ಯಮಾಡಿ ಈಗ ಹೇಳುತ್ತೇನೆ ;—ನೀವು ಇಷ್ಟೆಲ್ಲ ಮಾಡಿದ್ದು ಅದಕ್ಕೆ ಅಂತ.

ಶ್ರೀಮತಿ ಹಿಗ್ಗಿನ್ಸ್ : ಆದರೆ, ನೋಡಿ, ಡೂಲಿಟ್ಲ್—ನಿಮಗೆ ನಿಜವಾಗಿಯೂ ಇಷ್ಟು ಕಷ್ಟ ಆಗೋಹಾಗಿದ್ದರೆ ಆ ತೊಂದರೆ ಪಡಬೇಕಾಗಿಲ್ಲವಲ್ಲ ? ಈ ದತ್ತಿಯನ್ನು ನೀವು ತೆಗೆದುಕೊಳ್ಳಬೇಕೆಂದು ಯಾರೂ ನಿಮ್ಮನ್ನು ಬಲಾತ್ಕರಿಸಲಾರರು. ಬೇಡ ಅಂತ ಬಿಟ್ಟುಕೊಡಿ. ಅಲ್ಲವೆ, ಪಿಕರಿಂಗ್ ?

ಪಿಕರಿಂಗ್ : ನನಗೂ ಹಾಗೆ ಅನ್ನಿಸುತ್ತೆ.

ಡೂಲಿಟ್ಲ್ : (ಆಕೆ ಮಹಿಳೆ ಎಂಬ ಗೌರವದಿಂದ—ರೀತಿಯಲ್ಲಿ ಹೆಚ್ಚು ಮೃದುವಾಗಿ) ಇದೇ ತಾಯಿ, ಇಲ್ಲಿನ ದುರಂತತೆ. ಬಿಟ್ಟುಬಿಡು ಅಂತ ಹೇಳೋದು ಸುಲಭ, ಆದರೆ ನನಗೆ ನರ ಇರಬೇಕಲ್ಲ. ನನಗಿಲ್ಲ. ನಮ್ಮಲ್ಲಿ ಯಾರಿಗಿದೆ ಹೇಳಿ ? ಎಲ್ಲರಿಗೂ ದಿಗಿಲು ಬಡಿಯುತ್ತೆ, ತಾಯಿ ; ಎಲ್ಲರ ಹಣೇಬರಹವೂ ಅಷ್ಟೇ ! ಇದು ಬೇಡ ಅಂತ ಬಿಟ್ಟುಬಿಟ್ಟೆ ಅನ್ನಿ : ನಾನು ಮುದುಕನಾದಾಗ ಕೆಲಸದ ಮನೆಗೆ ದೂಡುತ್ತಾರೆ. ಅಲ್ಲದೆ ನನಗೆ ಇನ್ನೇನು ಗತಿ ಇದೆ ? ದೂಳು ಹೊಡೆಯುವವನ ಕೆಲಸ ಉಳಿಸಿಕೊಳ್ಳುವುದಕ್ಕೆ ಈಗಾಗಲೆ ಕೂದಲಿಗೆ ಬಣ್ಣ ಹಾಕಿಕೊಳ್ಳಬೇಕಾಗಿದೆ. ಯೋಗ್ಯ ಬಡವರಲ್ಲಿ ಒಬ್ಬನಾಗಿದ್ದು ಒಂದು ಸ್ವಲ್ಪ ಹಣ ಉಳಿತಾಯ ಮಾಡಿಕೊಂಡಿದ್ದಿದ್ದರೆ, ಅದನ್ನು ಬಿಟ್ಟುಬಿಡಬಹುದಾಗಿತ್ತು. ಯೋಗ್ಯ ಬಡವನಿಗೆ ಕೋಟ್ಯಧೀಶತೆ ಬಂದರೆ ಸುಖವೇನೂ ಇಲ್ಲ. ಆದ್ದರಿಂದ ಯಾಕೆ ಹಾಗೆ ಮಾಡಬೇಕು ? ಅವರಿಗೆ ಇರೊ ಸುಖವೂ ಅಷ್ಟರಲ್ಲೇ ಇದೆ, ಅನ್ನಿ. ನಾನು ನೋಡಿ, ಅಯೋಗ್ಯ ಬಡವರಲ್ಲಿ ಒಬ್ಬನಾದ್ದರಿಂದ ಪಾಪರ್ ಜನ ಧರಿಸಬೇಕಾದ ಸಮವಸ್ತ್ರಕ್ಕೂ ನನಗೂ ನಡುವೆ ಇರುವುದು ಇನ್ನೇನು ?—ಈ ಹಾಳು 3,000 ಪೌಂಡ್ ವರ್ಷಾಶನ ತಾನೆ ? ಇದು ನನ್ನನ್ನು ಮಧ್ಯಮ ವರ್ಗಕ್ಕೆ ಸೇರಿಸುತ್ತದೆ. ಬೇರೆ ಮಾರ್ಗವೇ ಇಲ್ಲ. ಹೀಗೆ ಮಾತಾಡೋದನ್ನ ಕ್ಷಮಿಸಿ ತಾಯಿ. ನನಗೆ ಬಂದ ಮೂದಲೆ ನಿಮಗೆ ಬಂದಿದ್ದಿದ್ದರೆ ನೀವೂ ಹಾಗೇ ಮಾತಾಡುತ್ತಿದ್ದಿರಿ. ಎತ್ತ ಕಡೆ ನೋಡಿದರೆ, ಅತ್ತ ಕಡೆ ಹಿಡಕೊಳ್ಳುತ್ತಾರೆ ನನ್ನ. ಒಂದೊ—ಹುಲಿ ಅಂಥಾ ಕೆಲಸದ ಮನೆ, ಇಲ್ಲವೊ ದರಿಯಂಥಾ ಮಧ್ಯಮ ವರ್ಗದ ಜೀವನ. ಕೆಲಸದ ಮನೆಗೆ ಹೋಗುವಷ್ಟು ನರ ಇಲ್ಲ ನನಗೆ. ನಾನು ದಿಗಿಲು ಬಿದ್ದಿದ್ದೇನಮ್ಮ, ಮುರಿದು ಬಿದ್ದಿದ್ದೇನೆ. ಬಿಕರಿ ಆಗಿ ಹೋಗಿದ್ದೇನೆ. ನನಗಿಂತ ಸುಖಿಗಳಾದ

ವರು ನನ್ನ ಮೈಮೇಲಿನ ದೂಳು ಹೊಡೆದು, ನನ್ನಿಂದ ಬಕ್ಷೀಸ್ ಪಡೆಯುತ್ತಾರೆ. ನಿಮ್ಮ ಮಗ ನನಗೆ ತಂದಿರೋ ಸ್ಥಿತಿ ಇದು. (ಭಾವಪುಯನಾಗುತ್ತಾನೆ.)

ಶ್ರೀಮತಿ ಹಿಗ್ಗಿನ್ಸ್ : ಸರಿಯಪ್ಪ, ಅವಿವೇಕವೇನನ್ನೂ ನೀವು ಮಾಡುವುದಿಲ್ಲ ಎಂಬುದನ್ನು ಕೇಳಿ ಸಂತೋಷ ಆಗಿದೆ, ಡೂಲಿಟ್ಲ್. ಇದರಿಂದ ಎಲಿಸ ಭವಿಷ್ಯದ ಸಮಸ್ಯೆಯು ಪರಿಹಾರ ಆಗುತ್ತದೆ. ಅವಳ ಜೀವನಕ್ಕೆ ನೀವು ಈಗ ಹಣ ಒದಗಿಸಿ ಕೊಡಬಹುದು.

ಡೂಲಿಟ್ಲ್ : (ಚಿಂತೆಯಿಂದ ಕೂಡಿದ ವಿರಕ್ತಿಯಲ್ಲಿ) ಹೌದು, ತಾಯಿ. ನನಗೆ ಬರುವ 3,000 ಪೌಂಡ್ ವರ್ಷಾಶನದಲ್ಲಿ ಎಲ್ಲರ ಜೀವನಕ್ಕೂ ಹಣ ಒದಗಿಸು ಅಂತ ಲೋಕ ನಿರೀಕ್ಷಿಸುತ್ತದೆ.

ಹಿಗ್ಗಿನ್ಸ್ : (ಜಗ್ಗನೆ ಮೇಲೆದ್ದು) ನಾನ್‌ಸೆನ್ಸ್, ಅವಳ ಜೀವನಕ್ಕೆ ಅವನು ಹಣ ಕೊಡಬೇಕಾದ್ದಿಲ್ಲ. ಅವಳು ಅವನಿಗೆ ಸೇರಿದವಳಲ್ಲ. ಅವಳಿಗಾಗಿ ಇವನಿಗೆ ಐದು ಪೌಂಡ್ ಕೊಟ್ಟಿದ್ದೇನೆ. ಡೂಲಿಟ್ಲ್—ನೀನು ಪ್ರಾಮಾಣಿಕನೊ ವಂಚಕನೊ ?

ಡೂಲಿಟ್ಲ್ : (ಸಹನೆಯಿಂದ) ಸ್ವಲ್ಪ ಸ್ವಲ್ಪ ಎರಡೂ ಹೆನ್ರಿ. ಉಳಿದೆಲ್ಲ ಜನರ ಹಾಗೆಯೇ.

ಹಿಗ್ಗಿನ್ಸ್ : ಹುಡುಗಿಗಾಗಿ ನೀನು ಆ ಹಣ ತೆಗೆದುಕೊಂಡೆ. ಅವಳನ್ನು ಕರೆದುಕೊಂಡು ಹೋಗಲು ನಿನಗೆ ಹಕ್ಕಿಲ್ಲ.

ಶ್ರೀಮತಿ ಹಿಗ್ಗಿನ್ಸ್ : ಹೆನ್ರಿ ಏನು ಅವಿವೇಕದ ಮಾತು ನಿನ್ನದು ? ಎಲಿಸ ಎಲ್ಲಿದ್ದಾಳೆ ಎಂದು ತಿಳಿಯಬೇಕೇನು ? ಮಹಡಿಯ ಮೇಲಿದ್ದಾಳೆ.

ಹಿಗ್ಗಿನ್ಸ್ : (ವಿಸ್ಮಯದಿಂದ) ಮಹಡಿಯ ಮೇಲೆ ! ! ! ಹಾಗಾದರೆ ಈಗ ಹೋಗಿ ಕೆಳಗೆ ಕರೆತರುತ್ತೇನೆ. (ನಿಶ್ಚಯದಿಂದ ಬಾಗಿಲ ಕಡೆ ಹೋಗುವನು. ಶ್ರೀಮತಿ ಹಿಗ್ಗಿನ್ಸ್ ಎದ್ದು ಅವನ ಹಿಂದೆ ಹೋಗಿ)

ಶ್ರೀಮತಿ ಹಿಗ್ಗಿನ್ಸ್ : ಸುಮ್ಮನಿರು ಹೆನ್ರಿ, ಕುಳಿತುಕೊ.

ಹಿಗ್ಗಿನ್ಸ್ : ನಾನು—

ಶ್ರೀಮತಿ ಹಿಗ್ಗಿನ್ಸ್ : ಕುಳಿತುಕೊ, ಮಗು, ನಾನು ಹೇಳೋದನ್ನು ಕೇಳು.

ಹಿಗ್ಗಿನ್ಸ್ :ಆಗಲಮ್ಮ. ಆಗಲಿ, ಆಗಲಿ. (ಒರಟಾಗಿ ಮೆತ್ತೆಯ ಪೀಠದ ಮೇಲೆ ಎಸೆದಂತೆ ಕುಳಿತು ಕಿಟಕಿಯ ಕಡೆ ಮುಖ ಮಾಡುವನು.) ಅರ್ಧಗಂಟೆ ಮುಂಚೆ ನೀನು ನನಗೆ ಇದನ್ನು ಹೇಳಿರಬಹುದಾಗಿತ್ತು ಎನ್ನಿಸುತ್ತದೆ.

ಶ್ರೀಮತಿ ಹಿಗ್ಗಿನ್ಸ್ : ಈ ಬೆಳಿಗ್ಗೆ ಎಲಿಸ ನನ್ನಲ್ಲಿಗೆ ಬಂದಳು. ರಾತ್ರಿ ಸ್ವಲ್ಪ ರೋಷದಲ್ಲಿ ತಿರುಗಾಡಿದಳಂತೆ. ಇನ್ನು ಸ್ವಲ್ಪ ಪ್ರಯತ್ನಪಟ್ಟಳಂತೆ ಹೊಳೆಯೊಳಗೆ ಬೀಳೋಣ ಎಂದು. ಧೈರ್ಯ ಬರಲಿಲ್ಲವಂತೆ. ಸ್ವಲ್ಪ ಹೊತ್ತು Carlton

Hotel ನಲ್ಲಿ ಇದ್ದಳಂತೆ. ನೀವಿಬ್ಬರೂ ಅವಳನ್ನು ದನದಂತೆ ಕಂಡಿರಂತೆ, ನನಗೆ ಅವಳೇ ಹೇಳಿದಳು.

ಹಿಗ್ಗಿನ್ಸ್ : (ಪುನಃ ಎಗರಿ ಎದ್ದು) ಏನು ?

ಪಿಕರಿಂಗ್ : (ತಾನೂ ಏಳುತ್ತ) ಶ್ರೀಮತಿಯವರೆ, ಸುಳ್ಳುಪೊಳ್ಳು ಕತೆ ಕಟ್ಟಿ ಹೇಳಿದ್ದಾಳೆ. ನಾವು ಅವಳ ವಿಷಯದಲ್ಲಿ ಒರಟುತನದಿಂದ ನಡೆಯಲಿಲ್ಲ. ಒಂದು ಮಾತು ಕೂಡ ಆಡಲಿಲ್ಲ. ರಾತ್ರಿ ಬೇರೆ ಆದಾಗ ವಿಶೇಷ ಸ್ನೇಹದಲ್ಲಿಯೇ ಬೇರೆಯಾದೆವು. (ಹಿಗ್ಗಿನ್ಸ್ ಕಡೆ ತಿರುಗಿ) ಹಿಗ್ಗಿನ್ಸ್, ನಾನು ಮಲಗಿಕೊಳ್ಳಲು ಹೋದಮೇಲೆ ನೀವೇನಾದರೂ ಅವಳನ್ನು ಹೆದರಿಸಿ, ಬೆದರಿಸಿ ಮಾಡಿದಿರ ?

ಹಿಗ್ಗಿನ್ಸ್ : ನೀವು ಹೇಳುವುದಕ್ಕೆ ತಿರುಗು ಮುರುಗು—ಆದದ್ದು. ನನ್ನ ಸ್ಲಿಪ್ಪರನ್ನು ನನ್ನ ಮುಖದ ಮೇಲೆ ಎಸೆದವಳು ಅವಳು. ಅವಳ ನಡತೆ ಅತ್ಯಂತ ಅಸಭ್ಯವಾಗಿತ್ತು. ಸ್ವಲ್ಪ ರೇಗಲು ಕೂಡ ನಾನು ಅವಕಾಶ ಕೊಟ್ಟಿರಲಿಲ್ಲ. ರೂಮಿಗೆ ಪ್ರವೇಶಮಾಡಿದ ಕ್ಷಣವೇ ರೊಯ್ಯೆಂದು ನನ್ನ ಮುಖದ ಮೇಲೆ ಅವು ಬಂದವು, ನಾನು ಒಂದು ಮಾತನಾಡುವ ಮುಂಚೆ. ಎಂಥ ಭಯಂಕರ ಮಾತುಗಳನ್ನಾಡಿದಳು ಅಂತೀರಿ.

ಪಿಕರಿಂಗ್ : (ಆಶ್ಚರ್ಯದಿಂದ) ಏಕೆ ಹಾಗಾಡಿದಳು ? ಅವಳಿಗೆ ನಾವು ಏನು ಮಾಡಿದೆವು ?

ಶ್ರೀಮತಿ ಹಿಗ್ಗಿನ್ಸ್ : ನೀವೇನು ಮಾಡಿದಿರಿ ಅನ್ನುವುದನ್ನು ನಾನು ತಿಳಿಯಬಲ್ಲೆ. ಹುಡುಗಿ ಸಹಜವಾಗಿ ಅಕ್ಕರೆ ಸ್ವಭಾವದವಳು, ಅನ್ನಿಸುತ್ತದೆ ನನಗೆ. ಅಲ್ಲವೆ ಡೂಲಿಟ್ಲ್ ?

ಡೂಲಿಟ್ಲ್ : ತುಂಬಾ ಅಕ್ಕರೆಯ ಸ್ವಭಾವದವಳು ತಾಯಿ, ನನ್ನನ್ನೇ ಹೋಲುತಾಳೆ.

ಶ್ರೀಮತಿ ಹಿಗ್ಗಿನ್ಸ್ : ನೋಡಿದೆಯ, ನಿಮ್ಮಿಬ್ಬರ ವಿಷಯದಲ್ಲಿಯೂ ಅವಳಿಗೆ ವಿಶ್ವಾಸ ಉಂಟಾಗಿತ್ತು. ಬಹು ಕಷ್ಟಪಟ್ಟು ನಿಮ್ಮ ಕೆಲಸ ಮಾಡಿದಳು, ಹೆನ್ರಿ. ಅಂಥ ಹುಡುಗಿಗೆ ಬುದ್ಧಿಯ ಕೆಲಸ ಎಷ್ಟು ಕಷ್ಟ ಎಂದು ನೀವು ಕಲ್ಪನೆ ಮಾಡಿಕೊಳ್ಳಲಾರಿರಿ. ಆಯಿತು. ಪರೀಕ್ಷೆಯ ದೊಡ್ಡ ದಿನ ಬಂತು. ಒಂದು ತಪ್ಪು ಮಾಡದೆ ಅದ್ಭುತವಾದ ಕೆಲಸವನ್ನು ನಿಮಗಾಗಿ ಮಾಡಿದಳು. ನೀವು ಅಲ್ಲಿ ಕುಳಿತು ಅವಳೊಡನೆ ಒಂದು ಮಾತನ್ನೂ ಆಡದೆ ನೀವಿಬ್ಬರೇ ಮಾತನಾಡಿಕೊಳ್ಳುತ್ತ ದೇವರ ದಯದಿಂದ ಎಲ್ಲಾ ಮುಗಿದುಹೋದ್ದು ಸಂತೋಷ, ಈ ಎಲ್ಲ ಸಂಗತಿ ನಿಮಗೆ ಬೇಸರಿಕೆ ಹಿಡಿಸಿತ್ತು, ಎಂದು ಮಾತನಾಡುತ್ತಿದ್ದಿರಂತೆ. ಸ್ಲಿಪ್ಪರುಗಳನ್ನು ಅವಳು ನಿನ್ನ ಮುಖಕ್ಕೆ ಹಾಕಿದರೆ ನಿನಗೆ ಆಶ್ಚರ್ಯ ಆಯಿತು ಅಲ್ಲ ? ನಾನಾಗಿದ್ದರೆ ಕಾದ ಒಲೆ ಸಲಾಕಿ ಹಾಕುತ್ತ ಇದ್ದೆ.

ಹಿಗ್ಗಿನ್ಸ್ : ಇನ್ನೇನೂ ಹೇಳಲಿಲ್ಲಾಮ್ಮ. ಆಯಾಸ ಆಗಿದೆ. ಮಲಗಿಕೊಳ್ಳಲು ಹೋಗಬೇಕು ಅಂದೆ. ಇನ್ನೇನಾದರೂ ಹೇಳಿದೆವೆ, ಪಿಕರಿಂಗ್ ?

ಪಿಕರಿಂಗ್ : (ಭುಜ ಅಲುಗಿಸುತ್ತ) ಅಷ್ಟೇ ಅಂದದ್ದು.

ಶ್ರೀಮತಿ ಹಿಗ್ಗಿನ್ಸ್ : (ವ್ಯಂಗ್ಯವಾಗಿ) ನಿಶ್ಚಯವಾಗಿ ?

ಹಿಗ್ಗಿನ್ಸ್ : ಖಂಡಿತವಾಗಿ, ನಿಜವಾಗಿ ಅಷ್ಟೇ !

ಶ್ರೀಮತಿ ಹಿಗ್ಗಿನ್ಸ್ : ಅವಳನ್ನು ವಂದಿಸಲಿಲ್ಲ, ಅವಳ ಬೆನ್ನು ತಟ್ಟಲಿಲ್ಲ, ಅವಳನ್ನು ಮೆಚ್ಚಿಕೊಳ್ಳಲಿಲ್ಲ, ಅವಳು ಎಷ್ಟು ಚೆನ್ನಾಗಿ ನಡೆದುಕೊಂಡಳೆಂದು ಒಂದು ಮಾತು ಹೇಳಲಿಲ್ಲ.

ಹಿಗ್ಗಿನ್ಸ್ : (ತಾಳ್ಮೆ ಇಲ್ಲದೆ) ಅದೆಲ್ಲ ಅವಳಿಗೇ ಗೊತ್ತಿತ್ತಮ್ಮ. ಅವಳ ಸಾಧನೆಯನ್ನು ಕುರಿತು ನಾವು ಭಾಷಣ ಮಾಡಲಿಲ್ಲ, ಅಂತ ಅಲ್ಲವೆ ನಿನ್ನ ಅರ್ಥ ?

ಪಿಕರಿಂಗ್ : (ಅಂತರಂಗದಲ್ಲಿ ಚುಚ್ಚಿದವನಾಗಿ) ಬಹುಶಃ ನಾವು ಇನ್ನು ಸ್ವಲ್ಪ ದಾಕ್ಷಿಣ್ಯ ತೋರಿಸಬೇಕಾಗಿತ್ತು ಎನ್ನಿಸುತ್ತೆ. ತುಂಬಾ ಕೋಪಿಸಿಕೊಂಡಿದ್ದಾಳೇನು?

ಶ್ರೀಮತಿ ಹಿಗ್ಗಿನ್ಸ್ : (ಬರೆಯುವ ಮೇಜಿನ ತನ್ನ ಸ್ಥಳಕ್ಕೆ ಹಿಂತಿರುಗಿ) ಪುನಃ ವಿಂಪೋಲ್ ರಸ್ತೆಗೆ ಅವಳು ಹೋಗುವ ಹಾಗಿಲ್ಲ ಹಾಗಾದರೆ. ಏಕೆಂದರೆ, ವಿಶೇಷವಾಗಿ ನೀವು ಅವಳಿಗೆ ದೊರಕಿಸಿಕೊಟ್ಟಿರುವ ಸ್ಥಾನವನ್ನು ಡೂಲಿಟ್ಲ್ ನಡಸಿಕೊಡಬಲ್ಲವರಾಗಿದ್ದಾರೆ. ಆದರೆ, ಅವಳು ಹೇಳುತ್ತಾಳೆ : ಸ್ನೇಹಿತರ ಹಾಗೆ ನಿಮ್ಮನ್ನು ಕಾಣಲೂ ನಡೆದುಕೊಳ್ಳಲೂ ಅವಳಿಗೆ ಇನ್ನೂ ಇಷ್ಟ ಉಂಟು, ಆಗಿದ್ದು ಆಯಿತು ಎಂದು.

ಹಿಗ್ಗಿನ್ಸ್ : (ರೋಷದಿಂದ) ಇಷ್ಟ ಉಂಟಂತೊ, ಹೊ !

ಶ್ರೀಮತಿ ಹಿಗ್ಗಿನ್ಸ್ : ನೀನು ಸರಿಯಾಗಿ ನಡೆದುಕೊಳ್ಳುತ್ತೇನೆ ಎಂದು ಮಾತು ಕೊಟ್ಟರೆ ಅವಳನ್ನು ಕೆಳಗೆ ಬಾ ಅನ್ನುತ್ತೇನೆ. ಇಲ್ಲದಿದ್ದರೆ ನೀನು ಮನೆಗೆ ಹೋಗು. ನನ್ನ ಸಮಯ ಬೇಕಾದಷ್ಟನ್ನು ಈಗಾಗಲೆ ಕಳೆದಿದ್ದೀಯೆ.

ಹಿಗ್ಗಿನ್ಸ್ : ಆಗಲಮ್ಮ, ಆಗಲಮ್ಮ, ಪಿಕರಿಂಗ್ ನೀವು ಸರಿಯಾಗಿ ನಡೆದುಕೊಳ್ಳಬೇಕು. ಮಣ್ಣಿಂದ ನಾವು ಮೇಲೆ ಎತ್ತಿದ ಈ ಪ್ರಾಣಿಗಾಗಿ ನಮ್ಮ ಅತ್ಯುತ್ತಮ ಸಭ್ಯ ನಡತೆ ನಡಸಬೇಕಾಗಿದೆ. (ಕುರ್ಚಿಯ ಮೇಲೆ ಅನಾಸ್ಥೆಯಿಂದ ಹೋಗಿ ಕುಳಿತುಕೊಳ್ಳುತ್ತಾನೆ.)

ಡೂಲಿಟ್ಲ್ : ನೋಡಿ ಸ್ವಾಮಿ, ನೋಡಿ. ಮಧ್ಯಮ ತರಗತಿಯ ಮನುಷ್ಯನಾದ ನನ್ನ ಮನಸ್ಸಿನ ಕಡೆಗೂ ಸ್ವಲ್ಪ ದಾಕ್ಷಿಣ್ಯ ತೋರಿಸಿ.

ಶ್ರೀಮತಿ ಹಿಗ್ಗಿನ್ಸ್ : ಹೆನ್ರಿ, ನೀಕೊಟ್ಟ ಮಾತಿನ ನೆನಪಿಟ್ಟುಕೊ. (ಕರೆಯುವ ಗಂಟೆಯ ಗುಂಡಿಯನ್ನು ಒತ್ತುವಳು) ಡೂಲಿಟ್ಲ್, ದಯಮಾಡಿ ಸ್ವಲ್ಪ ಹೊತ್ತು ಪಡಸಾಲೆಗೆ ಹೋಗಿ ಇರುತೀರ ? ಈ ಗೃಹಸ್ಥರೊಡನೆ ಅವಳು ಹೊಂದಿಕೆಗೆ ಬರುವ

ವರೆಗೂ ನಿಮ್ಮ ಸುದ್ದಿಯಿಂದ ಎಲಿಸಾಗೆ ಧಕ್ಕೆ ಆಗುವುದು ಬೇಡ. ನನ್ನ ಮಾತಿಗೆ ಬೇಸರವಿಲ್ಲ ತಾನೆ ?

ಡೂಲಿಟ್ಲ್ : ತಮ್ಮ ಇಷ್ಟದಂತೆ ತಾಯಿ, ಅವಳನ್ನು ನನ್ನ ಕೈಯಿಂದ ಹೊರಗಿಡಿಸುವುದಕ್ಕೆ ಹೆನ್ರಿಯವರಿಗೆ ಯಾವ ಸಹಾಯ ಬೇಕಾದರೂ ಮಾಡುತ್ತೇನೆ. (ಕಿಟಕಿ ಕಡೆಯಿಂದ ಹೋಗುತ್ತಾನೆ.)

[ಗಂಟೆ ಶಬ್ದ ಕೇಳಿ ಪರಿಚಾರಿಕೆ ಬರುವಳು. ಡೂಲಿಟ್ಲ್ ಇದ್ದ ಸ್ಥಳದಲ್ಲಿ ಪಿಕರಿಂಗ್ ಕುಳಿತುಕೊಳ್ಳುತ್ತಾನೆ.]

ಶ್ರೀಮತಿ ಹಿಗ್ಗಿನ್ಸ್ : ಆಕೆಯನ್ನು ಕೆಳಕ್ಕೆ ಬಾ ಅಂತ ಹೇಳು.

ಪರಿಚಾರಿಕೆ : ಆಗಲಿ ತಾಯಿ, (ಹೊರಗೆ ಹೋಗುವಳು.)

ಶ್ರೀಮತಿ ಹಿಗ್ಗಿನ್ಸ್ : ಹೆನ್ರಿ, ಈಗ ನೀನು ಒಳ್ಳೆಯವನಾಗಿರಬೇಕು.

ಹಿಗ್ಗಿನ್ಸ್ : ಛೇಷಾಗಿ ನಡೆದುಕೊಳ್ಳುತ್ತಿದ್ದೇನಮ್ಮ.

ಪಿಕರಿಂಗ್ : ಅವರು ತಮ್ಮ ಕೈಯಲ್ಲಾದುದನ್ನೆಲ್ಲ ಮಾಡುತ್ತಿದ್ದಾರೆ, ಶ್ರೀಮತಿ ಅವರೆ.

[ಸ್ವಲ್ಪ ಮೌನ]

[ಹಿಗ್ಗಿನ್ಸ್ ತನ್ನ ತಲೆಯನ್ನು ಹಿಂದಕ್ಕೂ ಕಾಲನ್ನು ಮುಂದಕ್ಕೂ ಚಾಚುತ್ತಾನೆ, ಸಿಳ್ಳೆ ಹಾಕುತ್ತಾನೆ.]

ಶ್ರೀಮತಿ ಹಿಗ್ಗಿನ್ಸ್ : ಹೆನ್ರಿ, ಮಗು, ಹಾಗೆ ಕುಳಿತುಕೊಂಡರೆ ನೋಡುವುದಕ್ಕೆ ಚೆನ್ನಾಗಿ ಕಾಣುವುದಿಲ್ಲಪ್ಪ.

ಹಿಗ್ಗಿನ್ಸ್ : (ತನ್ನನ್ನು ಸ್ವಾಸ್ಥ್ಯಕ್ಕೆ ತಂದುಕೊಂಡು) ಚೆನ್ನಾಗಿ ಕಾಣಿಸಲು ನಾನು ಯತ್ನಿಸುತ್ತಿರಲಿಲ್ಲ ಅಮ್ಮ.

ಶ್ರೀಮತಿ ಹಿಗ್ಗಿನ್ಸ್ : ಅದು ಹೇಗಾದರೂ ಆಗಲಿ, ನೀನು ಮಾತನಾಡಲೆಂದು ಮಾತ್ರ ಹೇಳಿದೆ.

ಹಿಗ್ಗಿನ್ಸ್ : ಏಕೆ ?

ಶ್ರೀಮತಿ ಹಿಗ್ಗಿನ್ಸ್ : ಒಂದೇ ಸಮಯದಲ್ಲಿ ಸಿಳ್ಳೆಹಾಕಲೂ ಮಾತನಾಡಲೂ ಆಗುತ್ತದೆಯೇನೊ ?

[ಹಿಗ್ಗಿನ್ಸ್ ನರಳುತ್ತಾನೆ ; ಇನ್ನಷ್ಟು ಕಾಲ ಈ ದುರ್ಭರ ಮೌನ]

ಹಿಗ್ಗಿನ್ಸ್ : (ತಾಳ್ಮೆ ಇಲ್ಲದೆ ಎದ್ದು) ಆ ಹಾಳಾದವಳು ಎಲ್ಲಿದ್ದಾಳೆ, ಈ ದಿನವೆಲ್ಲ ನಾನು ಇಲ್ಲಿಯೇ ಕಾಯಬೇಕೇನು ?

(ಎಲಿಸ ಪ್ರವೇಶಿಸುವಳು. ಮುಖದಲ್ಲಿ ಕಳೆಯಿದೆ. ಪೂರ್ತಿ ಸ್ವಾಸ್ಥ್ಯದಲ್ಲಿ ಇದ್ದಾಳೆ. ತಾನು ತುಂಬಾ ನಿರಾಳವಾಗಿ ನಡೆದುಕೊಳ್ಳುತ್ತಿದ್ದೇನೆಂದು ಎಲ್ಲರಿಗೂ ಖಂಡಿತ ವಾಗಿ ಮನದಟ್ಟಾಗುವಂತೆ ನಡತೆ ಪ್ರದರ್ಶಿಸುತ್ತಿದ್ದಾಳೆ. ಕೈಯಲ್ಲಿ ಒಂದು ಸಣ್ಣ ಕೆಲಸದ ಬುಟ್ಟಿ ಇದೆ. ತನ್ನ ಮನೆಯಲ್ಲಿಯೇ ಇರುವಷ್ಟು ಧಾರಾಳದಲ್ಲಿದ್ದಾಳೆ. ಪಿಕರಿಂಗ್ ಈ ಸ್ಥಿತಿಯನ್ನು ಕಂಡು ಚಕಿತನಾಗಿದ್ದಾನೆ. ಅವನಿಗೆ ಏಳಲಾಗುವುದಿಲ್ಲ.)

ಎಲಿಸ : ಪ್ರೊ. ಹಿಗ್ಗಿನ್ಸ್ ಆರೋಗ್ಯವೆ ? ಚೆನ್ನಾಗಿದ್ದೀರ ?

ಹಿಗ್ಗಿನ್ಸ್ : (ಗಂಟಲಲ್ಲಿ ಮಾತು ಸಿಕ್ಕಿಕೊಳ್ಳಲು) ನಾನು—(ಮುಂದೆ ಮಾತು ಬರುವುದಿಲ್ಲ.)

ಎಲಿಸ : ಆ ಪ್ರಶ್ನೆ ಏಕೆ ಕೇಳಬೇಕು ? ನೀವು ಎಂದೂ ಅನಾರೋಗ್ಯವಾಗಿರುವುದೇ ಇಲ್ಲ. ಪುನಃ ನಿಮ್ಮನ್ನು ನೋಡಿ ಬಹಳ ಸಂತೋಷ ಆಯಿತು, ಕರ್ನಲ್ ಪಿಕರಿಂಗ್.

(ಪಿಕರಿಂಗ್ ಅವಸರದಲ್ಲಿ ಏಳುವನು. ಕೈ ಕುಲುಕುವನು.) ಈ ಬೆಳಿಗ್ಗೆ ತುಂಬಾ ತಂಡಿಯಾಗಿದೆ. ಅಲ್ಲ ? (ಅವನ ಎಡಕ್ಕೆ ಕುಳಿತುಕೊಳ್ಳುವಳು. ಅವನು ಪಕ್ಕದಲ್ಲಿ ಕುಳಿತುಕೊಳ್ಳುತ್ತಾನೆ.)

ಹಿಗ್ಗಿನ್ಸ್ : ಈ ಆಟವನ್ನು ನನ್ನ ಮೇಲೆ ಪ್ರಯೋಗ ಮಾಡುವುದಕ್ಕೆ ನಿನಗೆ ಎಷ್ಟು ಧೈರ್ಯ. ಅದನ್ನು ನಿನಗೆ ಕಲಿಸಿಕೊಟ್ಟದ್ದು ನಾನು. ಅದು ನನ್ನ ಮೇಲೆ ನಡೆಯುವುದಿಲ್ಲ. ಎದ್ದು ಮನೆಗೆ ಬಾ ; ಫೂಲ್ ಆಗಬೇಡ.

(ಎಲಿಸ ಬುಟ್ಟಿಯಿಂದ ಹೊಲಿಗೆ ಕೆಲಸದ ಒಂದು ಚೂರನ್ನು ಕೈಗೆ ತೆಗೆದುಕೊಳ್ಳು ತ್ತಾಳೆ. ಹಿಗ್ಗಿನ್ಸಿನ ಈ ಸಿಡಿತವನ್ನು ಸುತರಾಂ ಲಕ್ಷಿಸದೆ ಹೊಲಿಯತೊಡಗುತ್ತಾಳೆ.)

ಶ್ರೀಮತಿ ಹಿಗ್ಗಿನ್ಸ್ : ಎಷ್ಟು ಚೆನ್ನಾಗಿ ಮಾತನಾಡಿದೆ ಮಗು ! ಯಾವ ಹೆಂಗಸು ಇಂಥ ಆಹ್ವಾನವನ್ನು ಮುಗ್ಧಳಾಗದೆ ನಿರಾಕರಿಸಿಯಾಳು ?

ಹಿಗ್ಗಿನ್ಸ್ : ಅವಳ ಮಾತಿಗೆ ಅವಳನ್ನು ಬಿಡಮ್ಮ. ತನ್ನ ಮಾತನ್ನು ಅವಳೇ ಆಡಲಿ. ನಿನಗೆ ಬೇಗ ಗೊತ್ತಾದೀತು : ಅವಳ ತಲೇಲಿ ನಾನು ಹಾಕದೇ ಇದ್ದ ಒಂದು ಯೋಚನೆ ಇದೆಯೆ, ನಾನು ಹಾಕದೇ ಇರುವ ಒಂದಾದರೂ ಮಾತು ಅವಳ ಬಾಯಲ್ಲಿ ಇದೆಯೆ ಎಂದು ನೀನೇ ಕಾಣುತ್ತೀಯೆ. ಕೋವೆಂಟ್ ಗಾರ್ಡನಿನ ಕೋಸಿನ ಎಲೆಗಳನ್ನು ಕಿವುಚಿ ಈ ಪದಾರ್ಥವನ್ನು ನಿರ್ಮಾಣ ಮಾಡಿದವನು ನಾನು. ನಯಗಾರ ಮಹಿಳೆಯಂತೆ ಇವಳು ನನ್ನಲ್ಲಿ ನಟಿಸುತ್ತಿದ್ದಾಳೆ.

ಶ್ರೀಮತಿ ಹಿಗ್ಗಿನ್ಸ್ : (ಸಮಾಧಾನದಿಂದ) ಹೌದು ಮಗು, ನೀನು ಕುಳಿತುಕೊಳ್ಳು ವೆಯೊ ಇಲ್ಲವೊ ? (ಹಿಗ್ಗಿನ್ಸ್ ಪುನಃ ಬಿರುಸಿನಿಂದ ಕುಳಿತುಕೊಳ್ಳುವನು.)

ಎಲಿಸ : (ಪಿಕರಿಂಗಿಗೆ—ಹಿಗ್ಗಿನ್ಸನ್ನು ಲೆಕ್ಕಿಸದೆ ತನ್ನ ಕೈ ಕೆಲಸವನ್ನು ಚಳಕದಿಂದ

ಮಾಡುತ್ತ) ಈ ಪ್ರಯೋಗ ಮುಗಿದು ಹೋದ್ದರಿಂದ ನನ್ನನ್ನು ನೀವು ಪೂರ್ತಿ ದೂಡಿಬಿಡುತ್ತೀರಿ ಅಲ್ಲವೆ, ಕರ್ನಲ್ ಪಿಕರಿಂಗ್ ?

ಪಿಕರಿಂಗ್ : ಹಾಗೆನ್ನಬೇಡ, ಅದನ್ನು ಪ್ರಯೋಗವೆಂದು ನೀನು ಎಣಿಸಬಾರದು. ಏಕೋ ಏನೊ ಹಾಗಂದರೆ ನನಗೆ ಗಾಸಿಯಾಗುತ್ತದೆ.

ಎಲಿಸ : ಓ ಎಷ್ಟಾದರೂ ಕೋಸಿನ ಎಲೆ ಕಿವುಚಿ ಮಾಡಿದವಳು ತಾನೆ ನಾನು.—

ಪಿಕರಿಂಗ್ : (ನಿರಾಳವಾಗಿ) ಅಲ್ಲ.

ಎಲಿಸ : (ಶಾಂತವಾಗಿ ಮುಂದುವರಿಯುತ್ತ) ನಿಮ್ಮ ಋಣ ನನಗೆ ತುಂಬಾ. ನೀವು ನನ್ನನ್ನು ಮರೆತರೆ ನನಗೆ ಅಸುಖವುಂಟಾಗುತ್ತದೆ.

ಪಿಕರಿಂಗ್ : ನೀನು ಹಾಗೆ ಹೇಳುವುದು ನಿನ್ನ ದೊಡ್ಡ ಮನಸ್ಸನ್ನು ತೋರಿಸುತ್ತದೆ, ಮಿಸ್ ಡೂಲಿಟ್ಲ್.

ಎಲಿಸ : ನನ್ನ ಬಟ್ಟೆಗಳಿಗೆಲ್ಲ ನೀವು ಹಣ ಕೊಟ್ಟದ್ದರಿಂದ ಅಲ್ಲ ? ಹಣ ವೆಚ್ಚಮಾಡುವುದರಲ್ಲಿ ನೀವು ಎಲ್ಲರ ವಿಷಯದಲ್ಲಿಯೂ ಉದಾರಿಗಳು ಎಂದು ನನಗೆ ಗೊತ್ತು. ಆದರೆ ನಾನು ನಿಜವಾಗಿ ಒಳ್ಳೆಯ ಮರ್ಯಾದೆ ನಡತೆ ಕಲಿತದ್ದು ನಿಮ್ಮಿಂದ. ನಾಡಾಡಿ ಹೆಂಗಸನ್ನು ಮಹಿಳೆಯಾಗಿ ಮಾಡುವುದು ಅದು ತಾನೇ ? ನನ್ನ ಎದುರು ಯಾವಾಗಲೂ ಪ್ರೊ. ಹಿಗ್ಗಿನ್ಸ್ ಅವರ ಮೇಲು ಪಂಗ್ತಿಯೇ ಇರಬೇಕಾದರೆ ನೋಡಿ, ಅದು ಬಹು ಕಷ್ಟವಾಗುತ್ತಿತ್ತು. ಅವರ ಹಾಗೆ ಆಗುವಂತೆಯೇ ನನ್ನನ್ನು ಅವರು ಸಾಕಿದರು : ನನ್ನ ಮೇಲೆ ನನಗೆ ಹತೋಟಿ ಇಲ್ಲ. ಅತಿಸ್ವಲ್ಪ ಕಾರಣಕ್ಕೆ ಯಾರ ಮೇಲೆಯೂ ದುರ್ಭಾಷೆ ಬಳಸುವುದೇ ಅವರ ರೀತಿ. ನಾನೂ ಹೀಗೇ ಬೆಳೆದೆ. ನೀವು ಅಲ್ಲಿಲ್ಲದೆ ಇದ್ದಿದ್ದರೆ ಮಾನ್ಯ ಮಹಿಳೆಯರು ಮಹನೀಯರು ಆ ರೀತಿ ನಡೆಯುವುದಿಲ್ಲವೆಂದು ಕೂಡ ನನಗೆ ಗೊತ್ತಾಗುತ್ತ ಇರಲಿಲ್ಲ.

ಹಿಗ್ಗಿನ್ಸ್ : ಸರಿ ಹೋಯ್ತು !

ಪಿಕರಿಂಗ್ : ಅವರ ರೀತಿ ಅದು ಎಂದು ನಿನಗೆ ಗೊತ್ತಿದೆ. ಅವರ ಮನಸ್ಸು ಹಾಗಲ್ಲ.

ಎಲಿಸ : ನನ್ನ ಮನಸ್ಸಿನಲ್ಲೂ ಹಾಗಿರಲಿಲ್ಲ, ನಾನು ಹೂ ಮಾರುವ ಹುಡುಗಿ ಆಗಿದ್ದಾಗ. ಆಗ ಅದು ನನ್ನ ರೀತಿ ಆಗಿತ್ತು. ಆದರೆ ನೋಡಿ, ನಾನು ಆಗ ಹಾಗೆ ಮಾಡುತ್ತಿದ್ದೆ. ಬಟ್ಟೆನಲ್ಲಿ ಇದರಲ್ಲಿ ತಾನೆ ವ್ಯತ್ಯಾಸ ಇರೋದು ?

ಪಿಕರಿಂಗ್ : ಸಂದೇಹವಿಲ್ಲ. ಆದರೂ ಅವರು ನಿನಗೆ ಮಾತು ಕಲಿಸಿದರು. ನಾನು ಅದನ್ನು ಮಾಡಲಾರದವನು ಎಂದು ನಿನಗೆ ಗೊತ್ತಿದೆ.

ಎಲಿಸ : (ಅದನ್ನು ಅಲ್ಪವಾಗಿ ಎಣಿಸಿ) ಹೌದು ಎನ್ನಿ : ಆದರೆ ಅವರ ವೃತ್ತಿ ಅದು.

ಹಿಗ್ಗಿನ್ಸ್ : ಸರ್ವನಾಶ !

ಎಲಿಸ : (ಮುಂದುವರಿಯುತ್ತ) ಹೊಸ ಹೊಸ ಪ್ರಕಾರಕ್ಕೆ ತಕ್ಕಂತೆ ನರ್ತನ ಕಲಿಯುವಂತೆ ಅದು. ಅದರಲ್ಲಿ ಹೆಚ್ಚು ಇನ್ನೇನಿತ್ತು ? ಆದರೆ ನನ್ನ ನಿಜವಾದ ಶಿಕ್ಷಣವನ್ನು ಆರಂಭಿಸಿದ್ದು ಯಾವುದು ನಿಮಗೆ ಗೊತ್ತೆ ?

ಪಿಕರಿಂಗ್ : ಯಾವುದು ?

ಎಲಿಸ : (ತನ್ನ ಕೆಲಸವನ್ನು ಒಂದು ಕ್ಷಣ ನಿಲ್ಲಿಸಿ) ನಾನು ವಿಂಪೋಲ್ ರಸ್ತೆ ಮನೆಗೆ ಮೊದಲು ಬಂದಾಗ, ನನ್ನನ್ನು ನೀವು ಮಿಸ್ ಡೂಲಿಟ್ಲ್ ಎಂದು ಕರೆದಿರಿ ಅವೊತ್ತು. ಆತ್ಮಗೌರವ ನನಗೆ ಅಂದಿನಿಂದ ಮೊದಲಿಟ್ಟಿತು. (ಹೊಲಿಗೆಯನ್ನು ಪುನಃ ಕೈಗೆ ತೆಗೆದುಕೊಂಡು) ಇಂಥವು ನೂರಾರು ಸಣ್ಣ ಸಂಗತಿಗಳು, ನಿಮ್ಮ ಗಮನಕ್ಕೆ ಬರದೇ ಇದ್ದವು. ಅವು ನಿಮಗೆ ಸಹಜ. ನಿಲ್ಲುವ ರೀತಿ, ಹ್ಯಾಟ್ ತೆಗೆಯುವ ರೀತಿ, ಬಾಗಿಲುಗಳನ್ನು ತೆರೆಯುವ ರೀತಿ—

ಪಿಕರಿಂಗ್ : ಓ, ಅದರಲ್ಲೇನೂ ವಿಶೇಷ ಇಲ್ಲ.

ಎಲಿಸ : ಒಂದು ಮುಸುರೆ ತಿಕ್ಕುವ ಹೆಣ್ಣಿಗಿಂತ ಮೇಲಾದವಳು ಎಂದು ನೀವು ನನ್ನನ್ನು ಭಾವಿಸುತ್ತಿದ್ದೀರೆಂದು ನನಗೆ ಕಾಣುತ್ತಿತ್ತು. ಆದರೆ ಇದೂ ನಿಜ : ನಿಮ್ಮ ದಿವಾನ್ ಖಾನೆಗೆ ಆಕೆಯನ್ನು ಬರಮಾಡಿದರೆ ಮುಸುರೆ ತಿಕ್ಕುವ ಹುಡುಗಿಯೊಡನೆ ಕೂಡ ನೀವು ಹೀಗೇ ನಡೆದುಕೊಳ್ಳುತ್ತಿದ್ದಿರೆಂದು ನನಗೆ ಗೊತ್ತು. ನಾನು ಅಲ್ಲಿದ್ದರೆ ನೀವು ಎಂದಿಗೂ ಊಟದ ಮನೆಯಲ್ಲಿ ಬೂಟ್ಸನ್ನು ಬಿಚ್ಚಿ ಹಾಕುತ್ತಿರಲಿಲ್ಲ.

ಪಿಕರಿಂಗ್ : ಅದನ್ನು ನೀನು ಮನಸ್ಸಿಗೆ ಹಚ್ಚಿಕೊಳ್ಳಬಾರದು. ಹೌದು, ಹಿಗ್ಗಿನ್ಸ್ ಎಲ್ಲಿ ಅಂದರೆ ಅಲ್ಲಿ ಬೂಟ್ಸ್ ತೆಗೆದು ಹಾಕುತ್ತಾರೆ.

ಎಲಿಸ : ನನಗೆ ಗೊತ್ತಿದೆ. ನಾನು ಅವರನ್ನು ಆಕ್ಷೇಪಣೆ ಮಾಡುತ್ತಿಲ್ಲ. ಅವರ ರೀತಿ ಅದು. ಅಲ್ಲವೆ ? ನೀವು ಹಾಗೆ ಮಾಡದೆ ಇದ್ದದ್ದು ನನಗೆ ದೊಡ್ಡ ವ್ಯತ್ಯಾಸವಾಗಿ ಕಾಣಿಸುತ್ತಿತ್ತು. ವಾಸ್ತವವಾಗಿ, ನಿಜವಾಗಿ, ನೋಡಿ, ಬಟ್ಟೆ ಉಡುವುದು, ಸರಿಯಾಗಿ ಮಾತಾಡುವುದು ಮುಂತಾದವನ್ನು ಯಾರಾದರೂ ನೋಡಿ ಕಲಿತುಕೊಳ್ಳಬಹುದು. ಕುಲೀನ ಮಹಿಳೆಗೂ ಹೂಮಾರುವ ಹೆಣ್ಣಿಗೂ ಇರುವ ವ್ಯತ್ಯಾಸ, ಅವಳು ಹೇಗೆ ನಡೆದುಕೊಳ್ಳುತ್ತಾಳೆ, ಅನ್ನುವುದರಲ್ಲಿ ಇಲ್ಲ ; ಅವಳನ್ನು ಇತರರು ಹೇಗೆ ಕಾಣುತ್ತಾರೆ, ಹೇಗೆ ನಡಸಿಕೊಳ್ಳುತ್ತಾರೆ ಎಂಬುದರಲ್ಲಿದೆ. ಪ್ರೊಫೆಸರ್ ಹಿಗ್ಗಿನ್ಸ್ ಅವರಿಗೆ ನಾನು ಎಂದಿಗೂ ಹೂಮಾರುವ ಹುಡುಗಿಯ ಹಾಗೆಯೇ. ಏಕೆ ?—ನಾನು ಹೂ ಮಾರೊ ಹುಡುಗಿ ಎಂದೇ ನಡೆದುಕೊಳ್ಳುತ್ತಾರೆ. ಎಂದಿಗೂ ಅಷ್ಟೇ. ನಿಮಗೆ ನಾನು ಮಹಿಳೆಯಾಗಿಯೇ ಇರುತ್ತೇನೆ, ಮಹಿಳೆಯಾಗಿಯೇ ನೀವು ನನ್ನನ್ನು ನಡಸಿಕೊಳ್ಳುತ್ತೀರಿ. ಎಂದಿಗೂ ಅಷ್ಟೇ.

ಶ್ರೀಮತಿ ಹಿಗ್ಗಿನ್ಸ್ : ಹೆನ್ರಿ, ಹಾಗೆ ಹಲ್ಲು ಮಸೆಯಬೇಡಾಪ್ಪ.

ಪಿಕರಿಂಗ್ : ಹೀಗೆಲ್ಲ ಹೇಳುವುದು ನಿನ್ನ ಒಳ್ಳೆಯತನವನ್ನು ತೋರಿಸುತ್ತೆ, ಮಿಸ್ ಡೂಲಿಟ್ಲ್.

ಎಲಿಸ : ನಿಮಗೆ ಇಷ್ಟವಾದರೆ ಈಗ ನೀವು ನನ್ನನ್ನು ಎಲಿಸ ಅಂತ ಕರೆದರೆ ನನಗೆ ಸಂತೋಷ.

ಪಿಕರಿಂಗ್ : ತುಂಬಾ ಸಂತೋಷ......ಎಲಿಸ.

ಎಲಿಸ : ಪ್ರೊ. ಹಿಗ್ಗಿನ್ಸ್ ಅವರು ನನ್ನನ್ನು ಮಿಸ್ ಡೂಲಿಟ್ಲ್ ಎಂದರೆ ಬಹು ಚೆನ್ನ ಎನ್ನಿಸುತ್ತದೆ.

ಹಿಗ್ಗಿನ್ಸ್ : ನೀನು ಮೊದಲು ಹಾಳಾದರೆ ಚೆನ್ನ ಅನ್ನಿಸುತ್ತೆ ನನಗೆ.

ಶ್ರೀಮತಿ ಹಿಗ್ಗಿನ್ಸ್ : ಹೆನ್ರೀ ! ಹೆನ್ರೀ !

ಪಿಕರಿಂಗ್ : (ನಗುತ್ತ) ಅದೇ ದುರ್ಭಾಷೆಯನ್ನೇ ನೀನೂ ಅವರ ಮೇಲೆ ಪ್ರಯೋಗಿಸು. ತಡೆಯಬೇಡ. ಅವರಿಗೂ ಅದರಿಂದ ಎಷ್ಟೋ ಒಳ್ಳೆಯದಾಗುತ್ತದೆ.

ಎಲಿಸ : ನನ್ನ ಕೈಯಲ್ಲಾಗದು. ಒಂದು ಕಾಲದಲ್ಲಿ ಅದನ್ನು ಮಾಡಬಹುದಾಗಿತ್ತು. ಈಗ ಪುನಃ ಹಿಂದಕ್ಕೆ ಹೋಗಲಾರೆ. ನಿನ್ನೆ ರಾತ್ರಿ ಸುತ್ತಾಡುತ್ತಿದ್ದೆ. ಒಬ್ಬ ಹುಡುಗಿ ನನ್ನನ್ನು ಮಾತನಾಡಿಸಿದಳು. ಹಿಂದಿನ ರೀತಿಯಲ್ಲಿ ಅವಳೊಡನೆ ಹಾಗೇ ಮಾತನಾಡಬೇಕೆಂದು ಯತ್ನಿಸಿದೆ. ನೆರವೇರಲಿಲ್ಲ. ನೀವು ಹೇಳಿದಿರಲ್ಲ, ಮಗು ಒಂದನ್ನು ಪರದೇಶಕ್ಕೆ ಕರೆತಂದರೆ ಕೆಲವೇ ವಾರಗಳಲ್ಲಿ ಅದು ಅಲ್ಲಿನ ಭಾಷೆ ಕಲಿಯುತ್ತದೆ, ತನ್ನ ಸ್ವಂತದ್ದನ್ನು ಮರೆಯುತ್ತದೆ ಅಂತ. ಹಾಗಾಯಿತು. ನಿಮ್ಮ ದೇಶಕ್ಕೆ ಬಂದ ಮಗು ನಾನು. ನನ್ನ ಸ್ವಂತ ಭಾಷೆ ಮರೆತಿದ್ದೇನೆ. ನಿಮ್ಮದನ್ನು ಬಿಟ್ಟು ಬೇರೆ ಮಾತಾಡಲಾರೆ. ಟಾಟನ್‌ಹ್ಯಾಂ ಕೋರ್ಟ್ ರಸ್ತೆಯಿಂದ ನಿಜವಾಗಿ ನನ್ನನ್ನು ಬೇರೆ ಮಾಡಿದ್ದು ಅದು. ವಿಂಪೋಲ್ ರಸ್ತೆ ಅದನ್ನು ಮುಗಿಸಿದೆ.

ಪಿಕರಿಂಗ್ : (ಗಾಬರಿಯಿಂದ) ವಿಂಪೋಲ್ ರಸ್ತೆಗೆ ನೀನು ಪುನಃ ಬರುತ್ತೀಯಲ್ಲ ! ಹಿಗ್ಗಿನ್ಸನ್ನು ಕ್ಷಮಿಸುತ್ತೀಯೆ ಅಲ್ಲ ?

ಹಿಗ್ಗಿನ್ಸ್ : (ಏಳುತ್ತ) ಕ್ಷಮಿಸುತ್ತಾಳೆ ! ಅಲ್ಲವೆ ? ಹೋಗಲಿ ಬಿಡಿ. ನಾನಿಲ್ಲದೆ ಅವಳು ಹೇಗೆ ಏಳಿಗೆ ಪಡೆಯುತ್ತಾಳೊ ಅವಳೇ ತಿಳಿದುಕೊಳ್ಳಲಿ. ಅವಳ ನೆರವಿಗೆ ನಾನು ಇಲ್ಲದೆ ಹೋದರೆ ಮೂರು ವಾರಗಳಲ್ಲಿ ಪುನಃ ಗಟಾರಕ್ಕೆ ಬೀಳುತ್ತಾಳೆ.

[ಮಧ್ಯದ ಕಿಟಕಿ ಕಡೆಯಿಂದ ಡೂಲಿಟ್ಲ್ ಕಾಣಿಸುತ್ತಾನೆ. ಗಂಭೀರವಾಗಿ ಆಕ್ಷೇಪಣೆ ಮಾಡುವಂತಿರುವ ನೋಟವನ್ನು ಹಿಗಿನ್ಸ್ ಮೇಲೆ ಬೀರುತ್ತ, ಮೆಲ್ಲಗೆ ಮಗಳ ಬಳಿಗೆ

ಬರುತ್ತಾನೆ. ಅವಳ ಬೆನ್ನು ಆ ಕಡೆ ಇರುವುದರಿಂದ ಅವನು ಸಮೀಪಿಸುವುದು ಅವಳಿಗೆ ತಿಳಿಯದು.]

ಪಿಕರಿಂಗ್ : ಅವರನ್ನು ತಿದ್ದಲು ಆಗುವುದಿಲ್ಲ, ಎಲಿಸ. ಪುನಃ ನೀನು ಗಟಾರಕ್ಕೆ ಬೀಳುವುದಿಲ್ಲ, ಅಲ್ಲ ?

ಎಲಿಸ : ಇಲ್ಲ. ಇನ್ನೆಂದಿಗೂ ಇಲ್ಲ. ನನ್ನ ಪಾಠ ಕಲಿತಾಗಿದೆ. ಪ್ರಯತ್ನಿಸಿದರೂ ಹಳೆಯ ಶಬ್ದಗಳನ್ನು ಉಚ್ಚರಿಸಬಲ್ಲೆನೆಂದು ನಂಬಲಾರೆ.

[ಡೂಲಿಟ್ಲ್ ಅವಳ ಎಡ ಭುಜದ ಮೇಲೆ ಕೈ ಇಡುತ್ತಾನೆ. ಅವಳ ಕೈ ಚೀಲ ಕೆಳಗೆ ಬೀಳುತ್ತದೆ ! ತಂದೆಯ ವೈಭವದ ದೃಶ್ಯವನ್ನು ಕಂಡು, ಪೂರ್ತಿ ಸ್ವಾಸ್ಥ್ಯವನ್ನು ಕಳೆದು ಕೊಂಡು]

ಆಆಆಆಆ ಆ ಹ್ ! ಔ ಊಹ್

ಹಿಗ್ಗಿನ್ಸ್ : (ವಿಜಯದಿಂದ ಕೆಲೆಯುತ್ತ) ಅಹಾ ನೋಡಿದೆಯ ? ಆಆಆ ಆಹ್ ! ಔ ! ಊಹ್ ! ಗೆಲವೋ ಗೆಲವು (ಮತ್ತೆ ಹಾಸಿನ ಮೇಲೆ ಅಟ್ಟಹಾಸದಿಂದ ಕೈ ಕಟ್ಟಿಕೊಂಡು ಕುಳಿತುಕೊಳ್ಳುತ್ತಾನೆ.)

ಡೂಲಿಟ್ಲ್ : ನೀವು ಹುಡುಗಿಯನ್ನು ಆಕ್ಷೇಪಿಸಬಹುದೆ ? ನನ್ನ ಕಡೆ ಹಾಗೆ ನೋಡ ಬೇಡ—ಎಲಿಸ ; ತಪ್ಪು ನನ್ನದಲ್ಲ. ನನ್ನ ಕೈಗಷ್ಟು ಹಣ ಬಂದಿದೆ.

ಎಲಿಸ : ಈ ಸಲ ಯಾವನೊ ಒಬ್ಬ ಕೋಟ್ಯಧೀಶ್ವರನ ಜೇಬಿಗೆ ಕೈ ಹಾಕಿರಬೇಕಲ್ಲವೆ, ಅಪ್ಪ ?

ಡೂಲಿಟ್ಲ್ : ಹಾಕಿದ್ದೇನೆ. ಆದರೆ ಇವೊತ್ತು ಸ್ವಲ್ಪ ವಿಶೇಷ ಬಟ್ಟೆ ಹಾಕಿದ್ದೇನೆ. ಹ್ಯಾನೊವರ್ ಚೌಕದಲ್ಲಿ ಸೆಂಟ್‌ಜಾರ್ಜ್ ಚರ್ಚಿಗೆ ಹೋಗುತ್ತಿದ್ದೇನೆ. ನಿನ್ನ ಮಲತಾಯಿ ನನ್ನ ಮದುವೆಯಾಗಲಿದ್ದಾಳೆ.

ಎಲಿಸ : (ಕೋಪದಿಂದ) ಆ ನಾಡಾಡಿ, ಕೀಳು ಹೆಣ್ಣನ್ನು ಮದುವೆ ಆಗುವಷ್ಟು ಅಲ್ಪವಾಗಿ ನಿನ್ನನ್ನು ಮಾಡಿಕೊಳ್ಳುತ್ತಿದ್ದೀಯ ?

ಪಿಕರಿಂಗ್ : (ಮೆಲ್ಲಗೆ) ಮದುವೆ ಮಾಡಿಕೊಳ್ಳುವುದು ಧರ್ಮ, ಎಲಿಸ. (ಡೂಲಿಟ್ಲಿಗೆ) ಆಕೆ ತನ್ನ ಮನಸ್ಸನ್ನು ಏಕೆ ಬದಲಾಯಿಸಿದಳು ?

ಡೂಲಿಟ್ಲ್ : (ವ್ಯಸ್ತನಾಗಿ) ದಿಗಿಲುಪಟ್ಟು ಮಹಾಸ್ವಾಮಿ, ದಿಗಿಲು ಬಿದ್ದು, ಮಧ್ಯಮ ತರಗತಿಯ ಮರ್ಯಾದೆಗೆ ಬಲಿಯಾಗಿ. ಎಲಿಸ, ತಲೆಯ ಮೇಲೆ ಹ್ಯಾಟ್ ಹಾಕಿಕೊಂಡು ಬಂದು ನನ್ನ ಲಗ್ನ ಆಗಿಸಿಕೊಡಬಾರದೆ ?

ಎಲಿಸ : ಹಾಗೆ ಮಾಡೆಂದು, ಕರ್ನಲ್ ಹೇಳಿದರೆ ನಾನು ಹಾಗೆ ಮಾಡುತ್ತೇನೆ. (ಬಿಕ್ಕುತ್ತ) ನನ್ನ ಮರ್ಯಾದೆ ಕಳೆದುಕೊಂಡು ಬರುತ್ತೇನೆ. ನಾನು ತೆಗೆದು ಕೊಂಡ ತೊಂದರೆಗೆ ಅಲ್ಲಿ ಬೇಕಾದಷ್ಟು ಬಹುಶಃ ಅವಮಾನ ಪಡಿಸಿಕೊಂಡು ಬರುತ್ತೇನೆ.

ಡೂಲಿಟ್ಲ್ : ಆ ಭಯಬೇಡ, ಆ ಬಡಪಾಯಿ ಹೆಂಗಸು ಈಗ ಯಾರ ಮಾತಿಗೂ ಬರುವುದಿಲ್ಲ. ಅವಳಲ್ಲಿದ್ದ ಜೋರನ್ನೆಲ್ಲ ಮರ್ಯಾದೆ ಮುರಿದುಬಿಟ್ಟಿದೆ.

ಪಿಕರಿಂಗ್ : (ಮೆಲ್ಲಗೆ ಅವಳ ಮೊಳಕೈಯನ್ನು ಹಿಂಡುತ್ತ) ಅವರಿಗೆ ಕರುಣೆ ತೋರು ಎಲಿಸ, ನಡಸಬೇಕಾದ್ದನ್ನು ಚೆನ್ನಾಗಿ ನಡಸಿಕೊಳ್ಳಬೇಕು.

ಎಲಿಸ : (ತನ್ನ ಮನಸ್ಸಿಗೆ ಪೀಡೆಯಾಗಿದ್ದರೂ ಬಲಾತ್ಕಾರದಿಂದ ಮುಗುಳು ನಗೆ ನಗುತ್ತ) ಓ ಸರಿ, ಹಾಗಾದರೆ ಆಗಲಿ, ನನಗೇನೂ ಕೆಟ್ಟಭಾವನೆ ಇಲ್ಲವೆಂದು ತೋರಿಸುವುದಕ್ಕೆ, ಒಂದು ಕ್ಷಣದಲ್ಲಿ ಹಿಂದಕ್ಕೆ ಬರುತ್ತೇನೆ.

ಡೂಲಿಟ್ಲ್ : (ಪಿಕರಿಂಗ್ ಪಕ್ಕದಲ್ಲಿ ಕುಳಿತು) ನೇಮ, ಆಚಾರ ಎಂದರೆ ನನಗೆ ಅಸಾಧಾರಣ ಭಯ. ನೀವು ಬಂದು ಅದು ಮುಗಿಯೋತನಕ ನನ್ನ ಜೊತೆಯಲ್ಲಿದ್ದಿದ್ದರೆ, ಆಗಿತ್ತು.

ಪಿಕರಿಂಗ್ : ಈ ಮುಂಚೆ ಒಂದುಸಲ ಇದನ್ನು ಮಾಡಿರಬೇಕಲ್ಲರಿ ? ಎಲಿಸಾ ತಾಯನ್ನು ನೀವು ಮದುವೆ ಆದಾಗ, ಅಲ್ಲವೆ ?

ಡೂಲಿಟ್ಲ್ : ನಿಮಗೆ ಹಾಗೆಂದು ಹೇಳಿದವರು ಯಾರು, ಕರ್ನಲ್ ?

ಪಿಕರಿಂಗ್ : ಯಾರೂ ಹೇಳಲಿಲ್ಲ—ಸಹಜವಾಗಿ—ನಾನು ಹಾಗೆ ಅನುಮಾನಿಸಿದ್ದೆ.

ಡೂಲಿಟ್ಲ್ : ಅದು ಸಹಜವಾದ ದಾರಿಯಲ್ಲ, ಕರ್ನಲ್ ! ಮಧ್ಯಮ ವರ್ಗದವರ ನೀತಿ. ನನ್ನದು ಎಂದಿಗೂ ಯೋಗ್ಯರಲ್ಲದವರ ರೀತಿ. ಆದರೆ ಎಲಿಸಾಗೆ ಇದನ್ನೇನೂ ಹೇಳಬೇಡಿ. ಅವಳಿಗೆ ಗೊತ್ತಿಲ್ಲ. ಅವಳಿಗೆ ತಿಳಿಸುವ ವಿಷಯದಲ್ಲಿ ನಾನು ಯಾವಾಗಲೂ ನಾಜೂಕಾಗಿ ನಡೆದುಕೊಂಡಿದ್ದೇನೆ.

ಪಿಕರಿಂಗ್ : ಸರಿಯಾದ ಮಾತು. ಅದನ್ನು ಹಾಗೇ ಬಿಡೋಣ. ನಿಮ್ಮ ಮನಸ್ಸಿಗೆ ಕೆಡುಕೆನ್ನಿಸದೆ ಇದ್ದರೆ,

ಡೂಲಿಟ್ಲ್ : ಕರ್ನಲ್ ಪಿಕರಿಂಗ್, ನೀವು ಚರ್ಚಿಗೆ ಬಂದು ನನ್ನ ನೆರವಿಗೆ ನಿಂತು ನನ್ನನ್ನು ಕಡೆ ಹಾಯಿಸುತ್ತೀರ ?

ಪಿಕರಿಂಗ್ : ಸಂತೋಷವಾಗಿ. ಅವಿವಾಹಿತನು ಎಷ್ಟು ದೂರ ಹೋಗಬಹುದೊ ಅಷ್ಟು ಮಟ್ಟಿಗೆ.

ಶ್ರೀಮತಿ ಹಿಗ್ಗಿನ್ಸ್ : ನಾನೂ ಬರಬಹುದೆ ಡೂಲಿಟ್ಲ್ ಅವರೆ ? ನಿಮ್ಮ ಮದುವೆಗೆ ತಪ್ಪಿಸಿಕೊಂಡರೆ ಮನಸ್ಸಿಗೆ ಸುಖವಾಗುವುದಿಲ್ಲ.

ಡೂಲಿಟ್ಲ್ : ತಾವು ಅನುಗ್ರಹ ಮಾಡಿ ದಯಮಾಡಿಸಿದರೆ ನನಗೆ ಹೆಮ್ಮೆ ತಂದುಕೊಟ್ಟ ಹಾಗೆ ತಾಯಿ. ಆ ನನ್ನ ಹೆಂಗಸು ಮಹದ್ಗೌರವ ಎಂದು ತಿಳಿದುಕೊಳ್ಳುತ್ತಾಳೆ. ಸುಖದ ದಿನಗಳು ತನಗೆ ಇನ್ನು ಮುಂದೆ ಇಲ್ಲವೆಂದು ಯೋಚಿಸುತ್ತ ಅವಳು ಕುಗ್ಗಿ ಹೋಗಿದ್ದಾಳೆ.

ಶ್ರೀಮತಿ ಹಿಗ್ಗಿನ್ಸ್ : (ಏಳುತ್ತ) ಗಾಡಿಯನ್ನು ಸಜ್ಜಾಗಲು ಹೇಳುತ್ತೇನೆ. ನಾನೂ ಸಿದ್ಧವಾಗುತ್ತೇನೆ. (ಹಿಗ್ಗಿನ್ಸನ್ನು ಬಿಟ್ಟು ಗಂಡಸರು ಏಳುವರು.) ಕಾಲು ಗಂಟೆಗಿಂತ ಹೆಚ್ಚು ಸಮಯ ಬೇಕಾಗಿಲ್ಲ.

[ಆಕೆ ಬಾಗಿಲ ಹತ್ತಿರ ಹೋಗುವಾಗ ಎಲಿಸ ಒಳಗೆ ಬರುತ್ತಾಳೆ. ಅವಳ ತಲೆಯ ಮೇಲೆ ಹ್ಯಾಟ್ ಇದೆ. ಕೈಚೀಲದ ಗುಂಡಿ ಹಾಕಿಕೊಳ್ಳುತ್ತಿದ್ದಾಳೆ.]

ನಿಮ್ಮಪ್ಪನ ಮದುವೆ ನೋಡುವುದಕ್ಕೆ ನಾನು ಚರ್ಚಿಗೆ ಹೋಗುತ್ತಿದ್ದೇನೆ. ನನ್ನ ಜೊತೆಯಲ್ಲಿ ನೀನು ಸಾರೋಟಿನಲ್ಲಿ ಬರುವುದು ಒಳ್ಳೆಯದು. ಮದುವಣಿಗನ ಜೊತೆಯಲ್ಲಿ ಪಿಕರಿಂಗ್ ಹೋಗಲಿ.

[ಶ್ರೀಮತಿ ಹಿಗ್ಗಿನ್ಸ್ ಹೊರಗೆ ಹೋಗುತ್ತಾಳೆ. ನಡು ಕಿಟಕಿಗೂ ಮೆತ್ತೆ ಹಾಸಿದ ಪೀಠಕ್ಕೂ ನಡುವೆ ಕೊಠಡಿಯ ನಡು ಭಾಗಕ್ಕೆ ಎಲಿಸ ಬರುವಳು. ಪಿಕರಿಂಗ್ ಅವಳ ಜೊತೆ ಸೇರಿಕೊಳ್ಳುವನು.]

ಡೂಲಿಟ್ಲ್ : ಮದುವಣಿಗ ! ಎಂಥ ಮಾತು ! ಹೇಗೊ ಅಂತು ಮನುಷ್ಯನು ತನ್ನ ಸ್ಥಾನವನ್ನು ಅರಿತುಕೊಳ್ಳುವಂತೆ ಮಾಡುತ್ತದೆ. (ತನ್ನ ಹ್ಯಾಟನ್ನು ತೆಗೆದುಕೊಂಡು ಬಾಗಿಲ ಕಡೆ ಹೋಗುತ್ತಾನೆ.)

ಪಿಕರಿಂಗ್ : ನಾನು ಹೋಗುವ ಮುಂಚೆ ಎಲಿಸ, ಅವನನ್ನು ಕ್ಷಮಿಸು. ನಮ್ಮೊಟ್ಟಿಗಿರಲು ನಮ್ಮಲ್ಲಿಗೆ ಹಿಂದಕ್ಕೆ ಬಾ.

ಎಲಿಸ : ನಮ್ಮ ತಂದೆಯವರು ನನಗೆ ಹಾಗೆ ಮಾಡಗೊಡಿಸುವುದಿಲ್ಲ. ಮಾಡಗೊಡಿಸುತ್ತೀರ ಅಪ್ಪ ?

ಡೂಲಿಟ್ಲ್ : (ವ್ಯಸ್ತನಾಗಿ ಆದರೆ ಔದಾರ್ಯದಿಂದ) ತುಂಬಾ ತಂತ್ರಮಾಡಿ ಅವರು ನಿನ್ನನ್ನು ಆಟ ಆಡಿಸಿದ್ದಾರೆ, ಎಲಿಸ—ಆ ಇಬ್ಬರು ಆಟಗಾರರು. ಯಾರಾದರೂ ಒಬ್ಬರು ಮಾತ್ರ ಆಗಿದ್ದಿದ್ದರೆ ಅವರನ್ನು ನೀನು ಬಿಗಿಯಬಹುದಾಗಿತ್ತು. ನೀನು ಕಂಡ ಹಾಗೆ ಅವರು ಇಬ್ಬರು–ಒಬ್ಬರು ಇನ್ನೊಬ್ಬರಿಗೆ ಶಾಮೀಲು ಎನ್ನುವಂತೆ. (ಪಿಕರಿಂಗಿಗೆ) ತುಂಬಾ ತಂತ್ರ ಮಾಡಿದಿರಿ, ಕರ್ನಲ್. ಆದರೆ ನನಗೆ ನಿಮ್ಮ ಮೇಲೆ ದುರ್ಭಾವನೆ ಇಲ್ಲ. ನಾನೂ ಅದನ್ನೇ ಮಾಡುತ್ತ ಇದ್ದೆ ಅಂತ ಕಾಣುತ್ತೆ. ನನ್ನ ಜೀವಿತ ಕಾಲದಲ್ಲೆಲ್ಲ, ಒಂದಾದ ಮೇಲೊಂದು ಹೆಣ್ಣಿಗೆ, ನಾನು ಹೀಗೆ ಬಲಿಯಾಗಿದ್ದೇನೆ. ಎಲಿಸ ಮೇಲೆ ನೀವಿಬ್ಬರೂ ಪ್ರಭಾವ ಪಡೆದುದಕ್ಕೆ ನನಗೇನೂ ಹೊಟ್ಟೆ ಸಂಕಟವಿಲ್ಲ. ಈ ನಡುವೆ ನಾನು ಕೈ ಹಾಕಲಾರೆ. ನಮಗೆ ಹೋಗಲು ಹೊತ್ತಾಯಿತು, ಕರ್ನಲ್. ಹೋಗಿ ಬರುತ್ತೇನೆ ಹೆನ್ರಿ. ನಿನ್ನನ್ನೂ ಸೆಂಟ್‌ಜಾರ್ಜ್ ಚರ್ಚಿನಲ್ಲಿ ಕಾಣುತ್ತೇನೆ, ಎಲಿಸ. (ಹೋಗುತ್ತಾನೆ.)

ಪಿಕರಿಂಗ್ : (ಪುಸಲಾಯಿಸುತ್ತ) ನಮ್ಮಲ್ಲಿಯೇ ಉಳಿ, ಎಲಿಸ. (ಡೂಲಿಟ್ಲ್ ಹಿಂದೆ ಹೋಗುತ್ತಾನೆ.)

[ಹಿಗ್ಗಿನ್ಸ್ ಜೊತೆಯಲ್ಲಿ ಒಬ್ಬಳೇ ಇರಲು ಇಷ್ಟವಿಲ್ಲದೆ ಎಲಿಸ ತಪ್ಪಿಸಿಕೊಳ್ಳಲು ಪಡಸಾಲೆಗೆ ಹೋಗುತ್ತಾಳೆ. ಅವನು ಎದ್ದು ಹೋಗಿ ಅವಳ ಬಳಿ ಸೇರುತ್ತಾನೆ. ಅವಳು ರೂಮಿನೊಳಕ್ಕೆ ಬಂದು ಬಾಗಿಲಿಗೆ ಹೋಗಲು ಯತ್ನಿಸುತ್ತಾಳೆ. ಆದರೆ ಅವನು ಹೊರ ಸಾಲೆಯಿಂದ ಬೇಗ ನಡೆದು ಬಂದು ಅವಳು ಅದನ್ನು ತಲಪುವ ಮುಂಚೆಯೇ ಬಾಗಿಲಿಗೆ ಬೆನ್ನು ಮಾಡಿ ನಿಲ್ಲುತ್ತಾನೆ.]

ಹಿಗ್ಗಿನ್ಸ್ : ಆಯಿತಲ್ಲವೆ, ಎಲಿಸ, ನಿನ್ನ ಪಾಲಿನ ಮುಯ್ಯಿ ನೀನು ತೀರಿಸಿಕೊಂಡದ್ದು. ಇನ್ನೂ ತೀರಿಸುತ್ತೀಯೊ ? ಯುಕ್ತವಾದ್ದನ್ನು ಕೇಳುತ್ತೀಯೆ ತಾನೆ ?

ಎಲಿಸ : ನಾನು ಹಿಂದಕ್ಕೆ ಯಾಕೆ ಬೇಕು ನಿಮಗೆ ? ನಿಮ್ಮ ಸ್ಲಿಪ್ಪರುಗಳನ್ನು ಆರಿಸಿ ಕೊಡುವುದಕ್ಕೆ, ನಿಮ್ಮ ಕೋಪ ತಾಪಗಳನ್ನು ತಡೆದುಕೊಳ್ಳುವುದಕ್ಕೆ, ನಿಮ್ಮ ಸಾಮಾನು ತರಲು, ಹೊರಲು ಅಲ್ಲವೆ ?

ಹಿಗ್ಗಿನ್ಸ್ : ನೀನು ನನ್ನಲ್ಲಿಗೆ ಹಿಂದಕ್ಕೆ ಬರಬೇಕು ಅಂತ ನಾನು ಹೇಳಲಿಲ್ಲವಲ್ಲ.

ಎಲಿಸ : ಓ ಹಾಗೊ.........ನಾವು ಈಗ ಮಾತನಾಡುತ್ತಿರುವುದು ಏನನ್ನು ಕುರಿತು ?

ಹಿಗ್ಗಿನ್ಸ್ : ನಿನ್ನ ವಿಷಯವನ್ನು. ನನ್ನನ್ನು ಕುರಿತಲ್ಲ. ನೀನು ಹಿಂದಕ್ಕೆ ಬಂದರೆ ನಿನ್ನನ್ನು ಯಾವಾಗಲೂ ನಡಸಿಕೊಂಡಂತೆಯೇ ನಾನು ನಡಸಿಕೊಳ್ಳುವುದು. ನನ್ನ ಸ್ವಭಾವವನ್ನು ನಾನು ಬದಲಾಯಿಸಿಕೊಳ್ಳುವುದಕ್ಕೆ ನನಗೆ ಇಷ್ಟವಿಲ್ಲ. ಕರ್ನಲ್ ಪಿಕರಿಂಗ್ ನಡತೆ ಎಂಥದೋ ಅಂಥದೇ ನನ್ನದೂ.

ಎಲಿಸ : ಅದು ನಿಜವಲ್ಲ. ಆತನು ಹೂಮಾರುವ ಹುಡುಗಿಯನ್ನು ಶ್ರೀಮಂತಿನಿ ಯಂತೆ ಕಾಣುತ್ತಾರೆ.

ಹಿಗ್ಗಿನ್ಸ್ : ನಾನು—ಶ್ರೀಮಂತಿನಿಯಾದ ಹುಡುಗಿಯನ್ನು ಹೂ ಮಾರುವ ಹುಡುಗಿ ಯಂತೆ ಕಾಣುತ್ತೇನೆ.

ಎಲಿಸ : ಹಾಗೇ. (ಸಮಾಧಾನದಿಂದ ಮುಖ ಬೇರೆ ಕಡೆ ತಿರುಗಿಸಿ ಮೆತ್ತೆಯ ಪೀಠದಲ್ಲಿ ಕುಳಿತುಕೊಳ್ಳುವಳು : ಕಿಟಕಿಗೆ ಎದುರಾಗಿ) ಎಲ್ಲರಿಗೂ ಒಂದೇ.

ಹಿಗ್ಗಿನ್ಸ್ : ಅಷ್ಟೇ.

ಎಲಿಸ : ನಮ್ಮಪ್ಪನ ಹಾಗೆ.

ಹಿಗ್ಗಿನ್ಸ್ : (ಹಲ್ಲು ಕಿರಿಯುತ್ತ ಸ್ವಲ್ಪ ತಗ್ಗಿ) ಎಲ್ಲ ಅಂಶಗಳಲ್ಲಿಯೂ ಆ ಹೋಲಿಕೆ ಯನ್ನು ನಾನು ಒಪ್ಪಿಕೊಳ್ಳುವುದಿಲ್ಲ, ಎಲಿಸ. ಇಷ್ಟು ನಿಜ : ನಿಮ್ಮಪ್ಪ ಗೆದ್ದ ಕುದುರೆ ಬಾಲ ಹಿಡಿಯುವ ಮನುಷ್ಯ ಅಲ್ಲ. ಅದೃಷ್ಟ ತನ್ನ ವಿಕೃತಚಿತ್ತಕ್ಕೆ ಬಂದಂತೆ ಬಾಳು ಯಾವ ಸ್ಥಾನಕ್ಕೆ ಅವನನ್ನು ಒಯ್ಯುತ್ತದೆಯೊ ಅದರಲ್ಲಿ

ನೆಮ್ಮದಿಯಾಗಿರಬಲ್ಲನು. (ಗಂಭೀರವಾಗಿ) ಜೀವನದ ದೊಡ್ಡ ರಹಸ್ಯ ಇದು ಎಲಿಸ. ನಡವಳಿಕೆ ಒಳ್ಳೆಯದೊ ಕೆಟ್ಟದೊ ಯಾವುದಾದರೂ ವಿಶೇಷ ಬಗೆಯದೊ ಎಂಬುದಲ್ಲ. ಒಂದೇ ಬಗೆಯಲ್ಲಿ ನಡೆದುಕೊಳ್ಳುವುದು, ಎಲ್ಲ ಮಾನವ ಸಂಬಂಧದಲ್ಲಿಯೂ ಸ್ವರ್ಗದಲ್ಲಿರುವಂತೆ ನಡೆದುಕೊಳ್ಳುವುದು. ಹೆಚ್ಚೇನು ? ಅಲ್ಲಿ ಮೂರನೆಯ ತರಗತಿ ಗಾಡಿಗಳಿಲ್ಲ. ಒಂದು ಜೀವನದಷ್ಟೇ ಒಳ್ಳೆಯದು ಇನ್ನೊಂದು ಜೀವ.

ಎಲಿಸ : ತಥಾಸ್ತು. ನೀವು ಹುಟ್ಟು ಪ್ರಬೋಧಕರು.

ಹಿಗ್ಗಿನ್ಸ್ : (ಕನಲಿ) ಇಲ್ಲಿ ಪ್ರಶ್ನೆ ನಾನು ನಿನ್ನನ್ನು ಒರಟಾಗಿ ಕಾಣುವೆನೆ ಎಂಬುದಲ್ಲ; ಬೇರೆ ಯಾರನ್ನೇ ಆಗಲಿ ಹೆಚ್ಚು ಚೆನ್ನಾಗಿ ನಡಸಿಕೊಂಡದ್ದನ್ನು ನೀನು ಕೇಳಿ, ಕಂಡು ಉಂಟೆ ಎಂಬುದು.

ಎಲಿಸ : (ಇದ್ದಕ್ಕಿದ್ದಂತೆ ಶ್ರದ್ಧೆ ಉಂಟಾಗಿ) ನೀವು ನನ್ನನ್ನು ಹೇಗೆ ಕಾಣುತ್ತೀರಿ ಎಂಬುದು ಲಕ್ಷ್ಯವಿಲ್ಲ ನನಗೆ ! ನೀವು ಬೇಕಾಗಿದ್ದರೆ ಬೈಯಿರಿ. ನನಗೆ ಲಕ್ಷ್ಯವಿಲ್ಲ. ಪೆಟ್ಟುಕೊಟ್ಟು ಕಣ್ಣಿಗೆ ಗಾಯ ಮಾಡಿ ; ನನಗೆ ಲಕ್ಷ್ಯವಿಲ್ಲ. ಈ ಮುಂಚೆ ನನಗೆ ಹಾಗಾಗಿದೆ. ಆದರೆ (ನಿಂತು ಅವನನ್ನು ಎದುರಿಸಿ) ನೀವು ನನ್ನನ್ನು ಉಪೇಕ್ಷಿಸಲು ನಾನು ಬಿಡುವುದಿಲ್ಲ.

ಹಿಗ್ಗಿನ್ಸ್ : ಹಾಗಾದರೆ ನನ್ನ ದಾರಿ ಬಿಟ್ಟು ಹೊರಟುಹೋಗು. ನಿನಗಾಗಿ ನಾನು ತಡೆಯುವುದಿಲ್ಲ. ನಾನೇನು ಮೋಟರ್ ಬಸ್ ಕೆಟ್ಟು ಹೋದೆನೇ ನನ್ನನ್ನು ಕುರಿತು ಈ ರೀತಿ ಮಾತಾಡಲು ?

ಎಲಿಸ : ಹೌದು ನೀವು ಮೋಟರ್ ಬಸ್ಸೇ. ಎಲ್ಲಕ್ಕೂ ಎಗರಾಡುವುದೇ; ಎಲ್ಲಕ್ಕೂ ಅವಸರವೇ. ಯಾರನ್ನು ಕುರಿತೂ ನಿಮಗೆ ದಾಕ್ಷಿಣ್ಯವಿಲ್ಲ. ನಿಮ್ಮ ನೆರವಿಲ್ಲದೆ ನಾನು ಬದುಕಬಲ್ಲೆ. ನನ್ನ ಕೈಯಲ್ಲಾಗದೆಂದು ಯೋಚಿಸಬೇಡಿ.

ಹಿಗ್ಗಿನ್ಸ್ : ನಿನ್ನ ಕೈಯಲ್ಲಿ ಆಗುವುದೆಂದು ನನಗೆ ಗೊತ್ತು. ನಾನು ಹೇಳಿದೆನೇ ನಿನಗೆ ಆ ಶಕ್ತಿ ಇದೆ ಎಂದು.

ಎಲಿಸ : (ಗಾಯಪಟ್ಟಂತೆ ಅವನಿಂದ ಆ ಮೆತ್ತೆಯ ಪೀಠದ ಇನ್ನೊಂದು ಕಡೆ ಹೋಗಿ, ಇನ್ನೊಂದು ಕಡೆಗೆ ಮುಖ ಮಾಡಿ) ನೀವು ಹೇಳಿದ್ದು ನನಗೆ ಗೊತ್ತಿದೆ : ನೀವು ಮನುಷ್ಯತ್ವವಿಲ್ಲದವರು. ನನ್ನನ್ನು ಹೊರಗೆ ಹಾಕಬೇಕೆಂಬುದು ನಿಮ್ಮ ಇಚ್ಛೆ.

ಹಿಗ್ಗಿನ್ಸ್ : ಸುಳ್ಳುಗಾತಿ.

ಎಲಿಸ : ಥ್ಯಾಂಕ್ ಯು (ಗಂಭೀರವಾಗಿ ಕುಳಿತುಕೊಳ್ಳುವಳು.)

ಹಿಗ್ಗಿನ್ಸ್ : ನಿನ್ನನ್ನು ಕೇಳಿಕೊಳ್ಳಲಿಲ್ಲ ಅಂತ ಕಾಣುತ್ತೆ–ನಿನ್ನನ್ನು ಬಿಟ್ಟು ಇರುವುದಕ್ಕೆ ನನಗೆ ಆಗುತ್ತದೆಯೆ ಇಲ್ಲವೆ ಎಂಬುದನ್ನು ?

ಎಲಿಸ : (ಶ್ರದ್ಧೆಯಿಂದ) ನನ್ನ ಮನಸ್ಸನ್ನು ತಿರುಗಿಸುವುದಕ್ಕೆ ಪ್ರಯತ್ನ ಪಡಬೇಡಿ. ನನ್ನನ್ನು ಬಿಟ್ಟು ನೀವಿರಬೇಕಾಗುತ್ತದೆ.

ಹಿಗ್ಗಿನ್ಸ್ : (ಅಟ್ಟಹಾಸದಿಂದ) ಯಾರ ನೆರವೂ ಇಲ್ಲದೆಯೇ ನಾನು ಇರಬಲ್ಲೆ. ನನ್ನ ಸ್ವಂತ ಆತ್ಮ ನನ್ನದಲ್ಲವೆ ? ನನ್ನದೇ ಆದ ದಿವ್ಯಾಗ್ನಿಯ ಕಿಡಿ ! ಆದರೆ (ಹಟಾತ್ ವಿನಯದಿಂದ) ನೀನು ಇಲ್ಲದ್ದು ಕೊರತೆ ಆಗುತ್ತದೆ ಎಲಿಸ. (ಅವಳ ಹತ್ತಿರ ಕುಳಿತುಕೊಳ್ಳುವನು.) ನಿನ್ನ ಐಲು ಕಲ್ಪನೆಗಳಿಂದ ನಾನೂ ಒಂದಷ್ಟನ್ನು ಕಲಿತು ಕೊಂಡಿದ್ದೇನೆ. ವಿನಯದಿಂದ, ಕೃತಜ್ಞತೆಯಿಂದ ಅದನ್ನು ಒಪ್ಪಿಕೊಳ್ಳುತ್ತೇನೆ. ನಿನ್ನ ಧ್ವನಿ, ಆಕಾರ ನನಗೆ ವಾಡಿಕೆಯಾಗಿವೆ. ನನಗೆ ಇಷ್ಟವಾಗಿವೆ ಎನ್ನಬಲ್ಲೆ.

ಎಲಿಸ : ಅವು ಎರಡೂ ನಿಮ್ಮ ಗ್ರಾಮಫೋನಿನಲ್ಲಿ, ಫೋಟೊ ಪುಸ್ತಕದಲ್ಲಿ ಇವೆ ಯಲ್ಲವೆ ? ನಾನು ಇಲ್ಲದಿರುವಾಗ ನಿಮಗೆ ಒಂಟಿ ಎನಿಸಿದರೆ ಆ ಯಂತ್ರವನ್ನು ತಿರುಗಿಸಿ. ನೀವು ನೋಯಿಸಿದರೆ ಅದಕ್ಕೆ ಯಾವ ಅಂತಃಕರಣಗಳೂ ಇರುವುದಿಲ್ಲ.

ಹಿಗ್ಗಿನ್ಸ್ : ನಿನ್ನ ಆತ್ಮವನ್ನು ತಿರುಗಿಸಿದ ಹಾಗೆ ಆಗುವುದಿಲ್ಲವಲ್ಲ. ಆ ನಿನ್ನ ಅಂತಃ ಕರಣವನ್ನು ಬಿಟ್ಟು ಹೋಗು. ಧ್ವನಿಯನ್ನೂ ಮುಖವನ್ನೂ ನೀನೇ ತೆಗೆದು ಕೊಂಡು ಹೋಗಬಹುದು. ನೀನು ಅವಲ್ಲ.

ಎಲಿಸ : ಓ, ಎಂಥ ದೆವ್ವನಂಥ ಮನುಷ್ಯರು ನೀವು ! ಹುಡುಗಿ ಒಬ್ಬಳ ತೋಳು ನುಲುಚಿ ಅವಳನ್ನು ನೋವಿಗೆ ಈಡು ಮಾಡುವಷ್ಟು ಸುಲಭವಾಗಿ ಅವಳ ಹೃದಯವನ್ನು ತಿರಿಚಬಲ್ಲಿರಿ. ಮಿಸೆಸ್ ಪಿಯರ್ಸ್ ಹಿಂದೆಯೇ ಎಚ್ಚರಿಕೆ ಕೊಟ್ಟಿದ್ದಳು. ಎಷ್ಟೋ ಸಲ ಆಕೆಗೆ ನಿಮ್ಮನ್ನು ಬಿಡಬೇಕು ಅನ್ನಿಸಿತ್ತಂತೆ. ಕಡೆಯ ನಿಮಿಷದಲ್ಲಿ ಯಾವಾಗಲೂ ಅವಳ ಮನಸ್ಸು ತಿರುಗುವಂತೆ ಮಾಡಿದ್ದೀ ರಂತೆ. ಅವಳನ್ನು ಕಂಡರೂ ಒಂದಿಷ್ಟು ಅಕ್ಕರೆ ಇಲ್ಲ ನಿಮಗೆ. ನನ್ನನ್ನು ಕಂಡರೂ ಅಷ್ಟೇ ನಿಮಗೆ. ಸ್ವಲ್ಪವೂ ಅಕ್ಕರೆ ಇಲ್ಲ.

ಹಿಗ್ಗಿನ್ಸ್ : ನನಗೆ ಜೀವವನ್ನು ಕಂಡರೆ ಅಕ್ಕರೆ ಉಂಟು. ಜೀವನ ಯಾತ್ರೆಯಲ್ಲಿ ನನಗೆ ದೊರಕಿದ್ದರಲ್ಲಿ ನೀನು ಒಂದು ಭಾಗವಾಗಿದ್ದೀಯೆ. ನನ್ನ ಮನೆಯ ರಚನೆಯಲ್ಲಿ ನೀನು ಒಂದು ಅಂಗವಾಗಿದ್ದೀಯೆ. ನೀನಾಗಲಿ ಇನ್ನಾರಾಗಲಿ ಹೆಚ್ಚಾಗಿ ಏನನ್ನು ಕೇಳಬಹುದು ?

ಎಲಿಸ : ನನ್ನನ್ನು ಕಂಡರೆ ಅಕ್ಕರೆ ಇಲ್ಲದವರಿಗೆ ನಾನು ಅಕ್ಕರೆ ತೋರಿಸಲಾರೆ.

ಹಿಗ್ಗಿನ್ಸ್ : ವ್ಯಾಪಾರದ ತತ್ವಗಳು ಅವು ಎಲಿಸ. ಹೇಗೆ ಎನ್ನುತ್ತೀಯ ? (ಕೋವೆಂಟ್ ಗಾರ್ಡನಿನಲ್ಲಿ ಅವಳು ಬಳಸುತ್ತಿದ್ದ ಉಚ್ಚಾರವನ್ನು ಕಸುಬುದಾರಿಕೆಯ ಖಚಿತತೆ ಯಿಂದ ಅನುಕರಿಸುತ್ತ) 'ವೊಯ್ಲೆಟ್ ಊವು ಬೇಕೆ'–ಎನ್ನುತ್ತಿದ್ದಂತೆ ಅಲ್ಲವೆ?

ಎಲಿಸ : ನನ್ನನ್ನು ಕಂಡು ಹಲ್ಲು ಕಿರಿಯಬೇಡಿ. ಹಲ್ಲು ಕಿರಿಯುವುದು ಕ್ಷುದ್ರತೆ.

ಹಿಗ್ಗಿನ್ಸ್ : ನನ್ನ ಜೀವಮಾನದಲ್ಲಿ ಯಾರನ್ನು ಕಂಡೂ ನಾನು ಹಲ್ಲು ಕಿರಿದಿಲ್ಲ. ಹಲ್ಲು ಕಿರಿಯುವುದು ಮನುಷ್ಯನ ಮುಖಕ್ಕಾಗಲಿ, ಆತ್ಮಕ್ಕಾಗಲಿ ಒಪ್ಪದು. ವ್ಯಾಪಾರ ತತ್ವವನ್ನು ಕುರಿತು ನನ್ನ ಧಾರ್ಮಿಕ ತಿರಸ್ಕಾರ ಎಷ್ಟೆಂದು ವ್ಯಕ್ತ ಪಡಿಸಲು ಮಾತ್ರ ಹಾಗೆ ಹೇಳಿದೆ. ಪ್ರೀತಿಯ ವ್ಯಾಪಾರ ನನಗೆ ಬೇಕಿಲ್ಲ. ನಾನು ಮಾಡುವವನಲ್ಲ. ನನ್ನ ಸ್ಲಿಪ್ಪರನ್ನು ತಂದು ಕೊಟ್ಟು, ನನ್ನ ಕನ್ನಡಕವನ್ನು ಹುಡುಕಿ ಕೊಟ್ಟು ನನ್ನ ಮೇಲೆ ಒಂದು ಹಕ್ಕನ್ನು ನೀನು ಕೊಂಡುಕೊಳ್ಳಲಾರದ್ದ ರಿಂದ ನಾನು ಪಶು ಎಂದು ನೀನು ಕರೆಯುತ್ತೀಯೆ; ನೀನು ಬುದ್ಧಿ ಇಲ್ಲದವಳು. ಕೇಳಿದಾಗ ಗಂಡನಿಗೆ ಸ್ಲಿಪ್ಪರನ್ನು ತಂದುಕೊಡುವ ಹೆಂಗಸಿನ ನೋಟ ಅಸಹ್ಯಕರ ದೃಶ್ಯ. ನಿನ್ನ ಸ್ಲಿಪ್ಪರನ್ನು ನಾನು ಎಂದಾದರೂ ತಂದುಕೊಟ್ಟಿದ್ದೇನೆಯೆ ? ನನ್ನ ಮುಖದ ಮೇಲೆ ಅವನ್ನು ಎಸೆದುದರಿಂದ ನಿನ್ನನ್ನು ಕುರಿತು ನನಗೆ ಹೆಚ್ಚು ಗೌರವ ಉಂಟಾಗಿದೆ. ನನಗೆ ಗುಲಾಮಳಾಗಿ ದುಡಿದು ಆ ಕಾರಣದಿಂದ ನಾನು ಅಕ್ಕರೆಯಿಂದ ನಿನ್ನನ್ನು ನೋಡಿಕೊಳ್ಳಬೇಕೆಂದು ಕೇಳುವುದು ಅಷ್ಟೇನೂ ಪ್ರಯೋಜನಕಾರಿಯಲ್ಲ. ಗುಲಾಮರನ್ನು ಕಂಡರೆ ಯಾರಿಗೆ ಲಕ್ಷ್ಯವುಂಟು ? ನೀನು ಹಿಂದಕ್ಕೆ ಬರುವುದಾದರೆ ಸತ್‌ಸಹವಾಸಕ್ಕಾಗಿ ಹಿಂದಕ್ಕೆ ಬಾ. ನಿನಗಿನ್ನೇನೂ ಸಿಕ್ಕುವುದಿಲ್ಲ. ನಿನ್ನಿಂದ ನನಗೆ ಎಷ್ಟು ಸಿಕ್ಕಿದೆಯೊ ಅದರ ಸಾವಿರಪಟ್ಟು ನನ್ನಿಂದ ನಿನಗೆ ದೊರಕಿದೆ. ನಾಯಿಗಳಂತೆ ಸ್ಲಿಪ್ಪರು ತರುವುದೊ, ಹೊರು ವುದೊ ಹೇಳಿದಂತೆ ಮಾಡುತ್ತ ನಾನು ನಿರ್ಮಾಣ ಮಾಡಿದ ಶ್ರೀಮಂತಿನಿ ಎಲಿಸಳ ಎತ್ತಿಗೆ ಅದನ್ನು ಹಿಡಿಯಲು ಸಾಹಸಮಾಡಿದರೆ ನಿನ್ನ ಆ ತಿಳಿಗೇಡಿ ಮುಖವನ್ನು ಹೊರಗೆ ಹಾಕಿ ಬಾಗಿಲು ಬೀರುತ್ತೇನೆ.

ಎಲಿಸ : ನನ್ನಲ್ಲಿ ನಿಮಗೆ ಅಕ್ಕರೆ ಇಲ್ಲದಿದ್ದರೆ ಅದನ್ನೇಕೆ ಮಾಡಿದಿರಿ ?

ಹಿಗ್ಗಿನ್ಸ್ : (ಹಾರ್ದಿಕವಾಗಿ) ಏಕೆ ? ನನ್ನ ಕೆಲಸ ಅದು.

ಎಲಿಸ : ಅದರಿಂದ ನನಗೆಷ್ಟು ತೊಂದರೆಯಾಗುತ್ತದೆ ಎಂದು ನೀವು ಯೋಚಿಸಲೇ ಇಲ್ಲ.

ಹಿಗ್ಗಿನ್ಸ್ : ಲೋಕವನ್ನು ಮಾಡಿದವನು ತೊಂದರೆ ಉಂಟುಮಾಡಲು ಹೆದರಿದರೆ ಲೋಕ ಎಂದಿಗಾದರೂ ನಿರ್ಮಾಣವಾಗುತ್ತಿತ್ತೆ ? ಜೀವವನ್ನು ಉಂಟುಮಾಡು ವುದು ಎಂದರೆ ತೊಂದರೆ ನಿರ್ಮಾಣಮಾಡಿದಂತೆ. ತೊಂದರೆ ತಪ್ಪಿಸಿಕೊಳ್ಳುವು ದಕ್ಕೆ ಒಂದೇ ದಾರಿ : ಜೀವಿಗಳನ್ನು ಕೊಲ್ಲುವುದು. ಹೇಡಿಗಳನ್ನು ನೋಡಿ ದ್ದೀಯೊ ಇಲ್ಲವೊ : ತೊಂದರೆ ಕೊಡುವ ಜನರನ್ನು ಕೊಲ್ಲಬೇಕೆಂದು ಸತತವಾಗಿ ಅವರು ಕೂಗುತ್ತಿರುತ್ತಾರೆ.

ಎಲಿಸ : ನಾನು ತತ್ವಬೋಧಕಳಲ್ಲ. ಆ ರೀತಿ ನಾನು ಜೀವಿಗಳನ್ನು ನೋಡುತ್ತಿಲ್ಲ. ನಿಮಗೆ ನನ್ನ ಕಡೆ ಲಕ್ಷ್ಯವಿಲ್ಲವೆಂಬುದು ಮಾತ್ರ ನನ್ನ ಗಮನಕ್ಕೆ ಬರುತ್ತದೆ.

ಹಿಗ್ಗಿನ್ಸ್ : (ಎಗರಿ ಮೇಲೆದ್ದು ಅಸಹನೆಯಿಂದ ತಿರುಗಾಡುತ್ತ) ಎಲಿಸ, ನೀನು ಬೆಪ್ಪು ಹುಡುಗಿ. ನನ್ನ ಮಿಲ್ಟನ್ ಕವಿಯಂತಹ ಮನಸ್ಸಿನ ಐಶ್ವರ್ಯ ವನ್ನು ನಿನ್ನ ಎದುರಿಗೆ ಹರಡಿ ಅದನ್ನು ಪೋಲು ಮಾಡುತ್ತಿದ್ದೇನೆ. ಒಂದೇ ಸಲ ಹೇಳುತ್ತೇನೆ. ಇದನ್ನು ತಿಳಿ. ನನ್ನ ದಾರಿಯಲ್ಲಿ ನಾನು ಹೋಗುತ್ತೇನೆ. ನನಗಾಗಲಿ, ನಿನಗಾಗಲಿ ಏನಾಗುತ್ತದೆ ಎಂಬುದಕ್ಕೆ ಒಂದು ದುಗ್ಗಾಣಿಯಷ್ಟು ಬೆಲೆ ಕಟ್ಟದೆ ನನ್ನ ಕೆಲಸ ಮಾಡುತ್ತೇನೆ. ನಿಮ್ಮಪ್ಪನಂತೆ, ನಿಮ್ಮ ಮಲತಾಯಿ ಯಂತೆ ಯಾವುದೂ ನನ್ನನ್ನು ಬೆದರಿಸದು. ಆದ್ದರಿಂದ ನೀನು ಬಂದರೆ ಬರ ಬಹುದು, ಇಲ್ಲವಾದರೆ ಹಾಳಾಗಬಹುದು. ನಿನ್ನ ಇಷ್ಟದಂತೆ.

ಎಲಿಸ : ಯಾತಕ್ಕಾಗಿ ನಾನು ಹಿಂದಕ್ಕೆ ಬರಬೇಕು ?

ಹಿಗ್ಗಿನ್ಸ್ : (ಮೆತ್ತೆಯ ಹಾಸಿಗೆಯ ಮೇಲೆ ಮೊಳಕಾಲ ಮೇಲೆ ಕುಳಿತು ಅವಳತ್ತ ಓಲುತ್ತ) ಅದರ ವಿನೋದಕ್ಕಾಗಿ. ನಾನು ನಿನ್ನನ್ನು ನನ್ನ ಕೈಗೆ ತೆಗೆದುಕೊಂಡದ್ದು ಅದಕ್ಕೆ.

ಎಲಿಸ : (ಮುಖ ತಿರುಗಿಸಿ) ನಿಮ್ಮ ಇಷ್ಟದಂತೆ ಎಲ್ಲವನ್ನೂ ನಾನು ಮಾಡದಿದ್ದರೆ ನನ್ನನ್ನು ನಾಳೆ ಹೊರಗೆ ಹಾಕಬಹುದಲ್ಲ !

ಹಿಗ್ಗಿನ್ಸ್ : ಹೌದು ; ನೀನು ಬೇಕೆಂಬುದನ್ನೆಲ್ಲ ನಾನು ಮಾಡದಿದ್ದರೆ ನನ್ನನ್ನು ಬಿಟ್ಟು ನಾಳೆ ನೀನು ಹೊರಟುಹೋಗಬಹುದು.

ಎಲಿಸ : ನನ್ನ ಮಲ ತಾಯಿ ಜೊತೆಗೆ ವಾಸಮಾಡಲು : ಅಲ್ಲವೆ ?

ಹಿಗ್ಗಿನ್ಸ್ : ಹೌದು ; ಅಥವಾ, ಹೂ ಮಾರುವುದಕ್ಕೆ.

ಎಲಿಸ : ಓ ನನ್ನ ಹೂವಿನ ಮಕ್ಕರಿಗೆ ನಾನು ಪುನಃ ಹೋಗಬಲ್ಲವಳಾಗಿದ್ದರೆ ಎಷ್ಟು ಚೆನ್ನಾಗಿತ್ತು ; ನಿಮ್ಮಿಂದ, ನನ್ನ ತಂದೆಯಿಂದ, ಎಲ್ಲ ಪ್ರಪಂಚದಿಂದ, ನಾನು ಸ್ವತಂತ್ರಳಾಗಿರಬಹುದಾಗಿತ್ತು. ನನ್ನ ಸ್ವಾತಂತ್ರ್ಯವನ್ನು ಏಕೆ ಕಿತ್ತುಕೊಂಡಿರಿ ? ಅದನ್ನು ನಾನು ಏಕೆ ಬಿಟ್ಟುಕೊಟ್ಟೆ ? ಚೆಲುವಾದ ಈ ಎಲ್ಲ ಉಡಿಗೆ ತೊಡಿಗೆ ತೊಟ್ಟರೇನು ಬಂತು ? ನಾನು ಈಗ ಗುಲಾಮಳು.

ಹಿಗ್ಗಿನ್ಸ್ : ಸ್ವಲ್ಪವೂ ಅಲ್ಲ. ನನ್ನ ಮಗಳಾಗಿ ನಿನ್ನನ್ನು ದತ್ತು ತೆಗೆದುಕೊಳ್ಳುತ್ತೇನೆ. ನಿನಗೆ ಬೇಕೆನಿಸಿದರೆ ನಿನ್ನ ಹೆಸರಿನಲ್ಲಿ ಹಣ ಇಡುತ್ತೇನೆ. ಅಥವಾ, ಪಿಕರಿಂಗನ್ನು ಮದುವೆ ಆಗಲು ನಿನಗೆ ಇಷ್ಟ ಆಗುವುದಾದರೆ—

ಎಲಿಸ : (ಉಗ್ರವಾಗಿ ಅವನ ಕಡೆ ನೋಡುತ್ತ) ನೀವು ಕೇಳಿದರೆ, ನಿಮ್ಮನ್ನೇ ನಾನು ಮದುವೆ ಆಗುವುದಿಲ್ಲ ; ಅವರಕಿಂತ ನಿಮ್ಮ ವಯಸ್ಸು ನನಗೆ ಹೆಚ್ಚು ಸಮೀಪ ದ್ದಾಗಿದ್ದರೂ.

ಹಿಗ್ಗಿನ್ಸ್ : (ಮೃದುವಾಗಿ) ಅವರಿಗಿಂತ, ಅವರದಕ್ಕಿಂತ, ಅನ್ನು. ಅವರಕಿಂತ ಅಲ್ಲ.

ಎಲಿಸ : (ಕೆರಳಿ ಏಳುತ್ತ) ನನ್ನ ಇಷ್ಟಬಂದಂತೆ ಮಾತಾಡುತ್ತೇನೆ. ಈಗ ನೀವು ನನ್ನ ಉಪಾಧ್ಯಾಯರಲ್ಲ.

ಹಿಗ್ಗಿನ್ಸ್ : (ಆಲೋಚಿಸುತ್ತ) ಪಿಕರಿಂಗೂ ಮಾಡಿಕೊಳ್ಳಲಾರರು ಎಂದು ಕಾಣುತ್ತದೆ. ನಾನು ಎಷ್ಟು ಗೊಡ್ಡು ಬ್ರಹ್ಮಚಾರಿಯೊ ಆತನೂ ಅಂಥಾ ಬ್ರಹ್ಮಚಾರಿಯೇ.

ಎಲಿಸ : ನನಗೆ ಬೇಕಾದ್ದು ಅದಲ್ಲ. ಹಾಗೆ ಯೋಚಿಸಬೇಡಿ. ಆ ರೀತಿ ನನ್ನನ್ನು ಬಯಸುವ ಹುಡುಗರು ಯಾವಾಗಲೂ ನನಗೆ ಸಾಕಷ್ಟು ಮಂದಿ ಇದ್ದಾರೆ. ಫ್ರೆಡ್ಡಿ ಹಿಲ್, ದಿನಕ್ಕೆ ಎರಡು ಮೂರು ಸಲ, ಹಾಳೆ ಹಾಳೆ ಕಾಗದ ಬರೆಯುತ್ತಾನೆ.

ಹಿಗ್ಗಿನ್ಸ್ : (ಅಪ್ರಿಯ ಆಶ್ಚರ್ಯದಿಂದ) ಆ ಅಧಿಕ ಪ್ರಸಂಗಿ ! ಅವನು ಹಾಳಾದ : (ಹಿಮ್ಮೆಟ್ಟಿ ತಾನು ತನ್ನ ಹಿಮ್ಮಡಿಯ ಮೇಲೆ ಕುಳಿತಿರುವೆನೆಂದು ತಿಳಿಯುತ್ತಾನೆ.)

ಎಲಿಸ : ಪಾಪದ ಹುಡುಗ. ಇಷ್ಟ ಇದ್ದರೆ, ಅವನಿಗೆ ಆ ಹಕ್ಕಿಲ್ಲವೆ ? ಅವನು ನನ್ನನ್ನು ಪ್ರೀತಿಸುತ್ತಾನೆ.

ಹಿಗ್ಗಿನ್ಸ್ : (ಮೆತ್ತೆಯ ಪೀಠದಿಂದ ಹೊರಗೆ ಬರುತ್ತ) ಅವನಿಗೆ ಉತ್ತೇಜನ ಕೊಡಲು ನಿನಗೆ ಅಧಿಕಾರವಿಲ್ಲ.

ಎಲಿಸ : ಪ್ರತಿ ಹುಡುಗಿಗೂ ಪ್ರೀತಿ ಪಡೆಯಲು ಅಧಿಕಾರವುಂಟು.

ಹಿಗ್ಗಿನ್ಸ್ : ಏನು ! ಅಂಥ ಅವಿವೇಕಿಗಳಿಂದ ?

ಎಲಿಸ : ಫ್ರೆಡ್ಡಿ Fool ಅಲ್ಲ. ಅವನು ಬಡವನಾಗಿರಬಹುದು. ದುರ್ಬಲನಾಗಿರಬಹುದು. ಅವನು ನನ್ನನ್ನು ಬಯಸುತ್ತಾನೆ. ಬಹುಶಃ ಅಂತಸ್ತಿನಲ್ಲಿ ನನಗಿಂತ ಉತ್ತಮರಾಗಿ ನನ್ನ ಮೇಲೆ ದಬ್ಬಾಳಿಕೆ ಮಾಡುವ, ನಾನು ಬೇಡವಾಗಿರುವವರಿಗಿಂತ ಹೆಚ್ಚು ಸುಖವಾಗಿ ನನ್ನನ್ನು ಇಟ್ಟುಕೊಂಡಾನು.

ಹಿಗ್ಗಿನ್ಸ್ : ನಿನ್ನನ್ನು ಏನಾಗಿಯಾದರೂ ಅವನು ಮಾಡಿಯಾನೆ ? ಅದು ಸಂಗತಿ.

ಎಲಿಸ : ನಾನು ಅವನನ್ನು ಏನನ್ನಾದರೂ ಆಗಿ ಮಾಡಬಹುದಲ್ಲ ! ಆದರೆ ಪರಸ್ಪರವಾಗಿ ಒಬ್ಬರು ಇನ್ನೊಬ್ಬರನ್ನು ರೂಪಿಸುವ ವಿಚಾರವನ್ನು ನಾವು ಎಂದೂ ಯೋಚಿಸಿಲ್ಲ. ನೀವೋ, ಇನ್ನೇನನ್ನೂ ಯೋಚಿಸುವುದೇ ಇಲ್ಲ. ಸಹಜವಾಗಿರುವುದು ಮಾತ್ರ ನನಗೆ ಬೇಕಾಗಿದೆ.

ಹಿಗ್ಗಿನ್ಸ್ : ಎಂದರೆ ಏನಾಯಿತು ! ಫ್ರೆಡ್ಡಿ ನಿನ್ನ ವಿಷಯದಲ್ಲಿ ಹಾಗಿರಬೇಕೆಂದೇ ನಿನ್ನ ಇಷ್ಟ ?

ಎಲಿಸ : ಉಹುಂ...ಅಲ್ಲ. ಆ ತರಹದ ಭಾವನೆಯನ್ನಲ್ಲ ನಿಮ್ಮಿಂದ ನಾನು ಬಯಸುವುದು. ನಿಮ್ಮ ವಿಷಯದಲ್ಲಾಗಲಿ ನನ್ನ ವಿಷಯದಲ್ಲಾಗಲಿ ಅತಿ ನಿಶ್ಚಯದಿಂದಿರಬೇಡಿ. ನನಗೆ ಇಚ್ಛೆಯಾಗಿದ್ದರೆ ನಾನು ಕೆಟ್ಟ ಹುಡುಗಿಯಾಗಿರಬಹುದಾಗಿತ್ತು. ನಿಮಗೆ ಎಷ್ಟೇ ವಿದ್ವತ್ತಿದ್ದರೂ, ನಿಮಗಿಂತಲೂ ಹೆಚ್ಚಾಗಿ

ಕೆಲವು ಸಂಗತಿಗಳನ್ನು ನಾನು ಬಲ್ಲವಳು. ನನ್ನಂಥ ಹುಡುಗಿಯರು ಸಾಕಷ್ಟು ಸುಲಭವಾಗಿ ಸಭ್ಯಗೃಹಸ್ಥರು ತಮ್ಮನ್ನು ಪ್ರೀತಿಸುವಂತೆ ತಮ್ಮ ಮಟ್ಟಕ್ಕೆ ಅವರನ್ನು ಸೆಳೆಯಬಲ್ಲರು. ಉತ್ತರ ಕ್ಷಣದಲ್ಲಿ ಇವರು ಸತ್ತಿದ್ದರೆ ಚೆನ್ನಾಗಿರುತ್ತಿತ್ತೆಂದು ಇಬ್ಬರೂ ಪರಸ್ಪರವಾಗಿ ಬಯಸುವಂತಾಗುತ್ತದೆ.

ಹಿಗ್ಗಿನ್ಸ್ : ಹೌದು, ನಿಜ. ಇನ್ನು ಯಾವ ಹಾಳು ಶನಿ ಸಂಗತಿಗಾಗಿ ನಾವು ಜಗಳ ಮಾಡುತ್ತಿರುವುದು ?

ಎಲಿಸ : (ಮನಸ್ಸಿನಲ್ಲಿ ಕಸಿವಿಸಿಗೊಂಡು) ನಾನು ಬೇಡುವುದು ಸ್ವಲ್ಪ ದಯೆಯನ್ನು. ನನಗೆ ಗೊತ್ತಿದೆ : ನಾನು ಸಾಮಾನ್ಯ ಹುಡುಗಿ, ಅಜ್ಞಾನಿ ಎಂದು. ನೀವು ಪುಸ್ತಕದ ಓದು ಕಲಿತ ದೊಡ್ಡ ಮನುಷ್ಯರು. ಆದರೆ ನಿಮ್ಮ ಕಾಲಕೆಳಗಿನ ಕಸ ಅಲ್ಲ ನಾನು. ನಾನು ಮಾಡಿದಿನಿ......(ತಿದ್ದಿಕೊಂಡು) ಅಲ್ಲ......ನಾನು ಮಾಡಿದ್ದು—ಉಡುಪುಗಳಿಗಾಗಿ ಅಲ್ಲ. ಟ್ಯಾಕ್ಸಿಗಳಿಗೂ ಅಲ್ಲ. ಜೊತೆಯಲ್ಲಿ ನಾವು ಸಂತೋಷವಾಗಿ ಇದ್ದುದರಿಂದ. ಸಂಗಾಗನಿಸ್ತು—ಅಲ್ಲ, ನನಗೆ ಆಗ ಅನ್ನಿಸಿತು—ನಿಮ್ಮ ವಿಷಯದಲ್ಲಿ ಅಕ್ಕರೆ ಹುಟ್ಟಿದುದರಿಂದ. ನನ್ನನ್ನು ನೀವು ಪ್ರೀತಿಸಬೇಕು ಎಂಬ ಇಷ್ಟದಿಂದ ಅಲ್ಲ. ನಮ್ಮಿಬ್ಬರ ನಡುವೆ ಇರುವ ವ್ಯತ್ಯಾಸವನ್ನು ನಾನು ಮರೆಯಲಾರೆ. ಆದರೆ ಹೆಚ್ಚು ಸ್ನೇಹವನ್ನು ಬಯಸಿದೆ.

ಹಿಗ್ಗಿನ್ಸ್ : ಅದು ಸರಿ ಅನ್ನು, ನನ್ನ ಭಾವನೆಯೂ ಅದೇ. ಪಿಕರಿಂಗ್ ಭಾವನೆಯೂ ಅದೇ. ಎಲಿಸ ನೀನು ಒಬ್ಬ Fool.

ಎಲಿಸ : ನನಗೆ ಕೊಡಲು ಅದು ತಕ್ಕ ಉತ್ತರವಲ್ಲ. (ಕಣ್ಣಲ್ಲಿ ನೀರು ಕರೆಯುತ್ತ ಬರೆಯುವ ಮೇಜಿನ ಹತ್ತಿರ ಕುರ್ಚಿಯಲ್ಲಿ ಮುದುರಿ ಕುಳಿತುಕೊಳ್ಳುತ್ತಾಳೆ.)

ಹಿಗ್ಗಿನ್ಸ್ : ನೀನು ಸಾಮಾನ್ಯ ಬೆಪ್ಪಿನಂತೆ ಆಡುವುದನ್ನು ನಿಲ್ಲಿಸುವವರೆಗೊ ನಿನಗೆ ಅಷ್ಟೇ ದೊರಕುವುದು. ನೀನು ಉತ್ತಮ ಮಹಿಳೆಯಾಗಿ ಇರಬೇಕಾದರೆ ಒಂದನ್ನು ಖಂಡಿತ ನೀನು ಬಿಡಬೇಕು : ನಿನಗೆ ತಿಳಿದ ಗಂಡಸರು, ಅರ್ಧಕಾಲ ನಿನ್ನನ್ನು ಕುರಿತು ಐಲೈಲಾಗಿ ಮುಚ್ಚಟೆಯ ಮಾತಾಡುತ್ತ ಇನ್ನು ಅರ್ಧವನ್ನು ನಿನ್ನ ಕಾಲು ಮುಖ ಊದಿಕೊಳ್ಳುವ ಹಾಗೆ ಬಡಿದು ಕಳೆಯದಿದ್ದರೆ ನಿನ್ನನ್ನು ಅವರು ಉಪೇಕ್ಷೆ ಮಾಡುತ್ತಾರೆ ಎಂಬ ಭಾವವನ್ನು ಬಿಡಬೇಕು. ನನ್ನ ರೀತಿಯ ಜೀವನದಲ್ಲಿ ಯಾವ ಹರ್ಷವೂ ಉಲ್ಲಾಸವೂ ಕಾಣಿಸದಿದ್ದರೆ ಅದರ ಶ್ರಮ ನಿನಗೆ ತಾಳದಾದರೆ ನೀನು ಹಿಂದಕ್ಕೆ ಗಟಾರಕ್ಕೆ ಹೋಗು. ಮನುಷ್ಯಳಲ್ಲ ನೀನು ಒಂದು 'ದನ' ಎಂಬಂತೆ ಆಗುವವರೆಗೆ, ದುಡಿ. ಮುದ್ದು ಮಾಡಿಸಿಕೊ, ಕಚ್ಚಾಡು, ಕಾದಾಡು, ಬೇಕಾದ ಹಾಗೆ ಕುಡಿ, ನಿದ್ದೆ ಬರುವವರೆಗೂ ಕುಡಿ. ಎಷ್ಟು ಒಳ್ಳೆಯ ಬದುಕು ಗಟಾರದ್ದು : ಅದು ವಾಸ್ತವ. ಬೆಚ್ಚಗೆ ಇರುತ್ತದೆ. ಅದರಲ್ಲಿ ರಭಸವಿದೆ. ಚರ್ಮ ಎಷ್ಟೇ ದಪ್ಪವಾಗಲಿ ಅದು ಅನುಭವಕ್ಕೆ ಸಿಕ್ಕುತ್ತೆ.

ಯಾವ ಶಿಕ್ಷಣವೂ ಇಲ್ಲದೆ, ಏನು ಕೆಲಸವನ್ನೂ ಮಾಡದೆ ಅದರ ರುಚಿ ಸಿಕ್ಕುತ್ತದೆ; ವಾಸನೆ ಸಿಕ್ಕುತ್ತದೆ. ವಿಜ್ಞಾನದಂತೆ ಅಲ್ಲ ; ಸಾಹಿತ್ಯದಂತೆ ಅಲ್ಲ ; ಶಾಸ್ತ್ರೀಯ ಸಂಗೀತದಂತೆ, ಕಲೆಯಂತೆ, ತರ್ಕಶಾಸ್ತ್ರದಂತೆ ಅಲ್ಲ ; ನಾನು ನಿನಗೆ ಪ್ರೀತಿ ಇಲ್ಲದವನಂತೆ, ಅಂತಃಕರಣಶೂನ್ಯನಂತೆ, ಸ್ವಾರ್ಥಿಯಂತೆ, ಕಾಣುತ್ತೇನಲ್ಲವೆ ? ಹಾಗೇ ಆಗಲಿ. ನೀನು ಬಯಸುವ ಜನರಲ್ಲಿಗೆ ತೊಲಗಿ ಹೋಗು. ಮಣಗಟ್ಟಲೆ ದುಡ್ಡಿರುವ, ಭಾವಮಯನೆಂದು ನೀನು ಎಣಿಸುವ ಒಂದು ಹಂದಿಯನ್ನು ಮದುವೆ ಆಗು. ನಿನ್ನನ್ನು ಮುದ್ದಿಸಲು ಅದಕ್ಕೆ ದಪ್ಪನ್ನ ತುಟಿ ಇರುತ್ತವೆ. ನಿನ್ನ ಒದೆಯಲು ಅದಕ್ಕೆ ದಪ್ಪನ್ನ ಒಂದು ಜೊತೆ ಬೂಟ್ಸ್ ಇರುತ್ತದೆ. ಅಂಥವನನ್ನು ಮದುವೆ ಆಗು. ನಿನಗೆ ದೊರಕಿರುವುದನ್ನು ಮೆಚ್ಚಿಕೊಳ್ಳಿ ಯಾದರೆ ನಿನಗೆ ಮೆಚ್ಚಿಗೆಯಾಗುವುದನ್ನು ಪಡೆ, ಹೋಗು.

ಎಲಿಸ : (ನಿರಾಶಳಂತೆ) ಎಷ್ಟು ಕ್ರೂರ ದಬ್ಬಾಳಿಕೆಯವರು ನೀವು ! ನಿಮ್ಮ ಕೂಡ ನಾನು ಮಾತನಾಡಲಾರೆ. ಎಲ್ಲವನ್ನೂ ನನಗೆ ವಿರೋಧವಾಗಿ ತಿರುಗಿಸುತ್ತೀರಿ. ತಪ್ಪು ಯಾವಾಗಲೂ ನನ್ನದೇ, ಆದರೆ ನಿಮಗೆ ಚೆನ್ನಾಗಿ ಗೊತ್ತು, ಆ ಎಲ್ಲ ಸಮಯದಲ್ಲಿಯೂ ಬಡಿಯುವ ಕೈ ನಿಮ್ಮದೆ ಎಂದು. ನಿಮಗೆ ಗೊತ್ತಿದೆ :— ನೀವು ಕರೆಯುತ್ತೀರಲ್ಲ ಗಟಾರಕ್ಕೆ ಎಂದು, ಅಲ್ಲಿಗೆ ನಾನು ಹಿಂತಿರುಗಲಾರೆ ಎಂದು ; ಈ ಜಗತ್ತಿನಲ್ಲಿ ನಿಮ್ಮನ್ನು, ಕರ್ನಲನ್ನು ಬಿಟ್ಟರೆ ನನಗೆ ನಿಜವಾದ ಬೇರೆ ಸ್ನೇಹಿತರಿಲ್ಲ ಎಂದು. ನಿಮ್ಮಿಬ್ಬರ ಜೊತೆಯಲ್ಲಿ ಇದ್ದ ಮೇಲೆ ಯಾವ ಕೆಳಮಟ್ಟದ ಸಾಮಾನ್ಯ ಜನರಲ್ಲಿಯೂ ನನಗೆ ಬದುಕಿರಲು ಶಕ್ಯವಾಗುವುದಿಲ್ಲ ವೆಂದು ನೀವು ಚೆನ್ನಾಗಿ ಬಲ್ಲಿರಿ. ನಾನು ಹಾಗೆ ಮಾಡಬಲ್ಲೆನೆಂದು ನಟಿಸುತ್ತ ನನಗೆ ಅಪಮಾನ ಮಾಡುವುದು ಎಷ್ಟು ಕ್ರೌರ್ಯ ! ಎಷ್ಟು ದುಷ್ಟತನ ನಿಮ್ಮದು ? ತಂದೆಯ ಮನೆಬಿಟ್ಟರೆ, ನನಗೆ ಇನ್ನಾವುದೂ ಸ್ಥಳವಿಲ್ಲದ್ದರಿಂದ ನಾನು ವಿಂಪೋಲ್ ರಸ್ತೆಯ ಮನೆಗೆ ಬರಲೇಬೇಕಾಗುತ್ತದೆಯೆಂದು ನೀವು ಯೋಚಿಸುತ್ತೀರೇನೊ. ಆದರೆ ಅಲ್ಲಿಯೂ ನಿಮ್ಮ ಎಣಿಕೆ ನಿಶ್ಚಯವಾಗದಿರ ಬಲ್ಲದು. ನಾನು ನಿಮ್ಮ ಕಾಲ ಕೆಳಗಿದ್ದೇನೆ, ನೀವು ಬೇಕಾದಂತೆ ತುಳಿಯ ಬಹುದು, ಬಾಯಿಗೆ ಬಂದಂತೆ ಮಾತನಾಡಬಹುದು ಎಂದುಕೊಂಡಿದ್ದೀರೇನೊ ? ನನ್ನನ್ನು ಬಾಳಿಸುವುದಕ್ಕೆ ಅವನಿಗೆ ಶಕ್ತಿ ಬಂದ ಕೂಡಲೆ ನಾನು ಫ್ರೆಡ್ಡಿಯನ್ನು ಮದುವೆಯಾಗುತ್ತೇನೆ.

ಹಿಗ್ಗಿನ್ಸ್ : (ಅವಳ ಬಳಿಗೆ ಬಂದು ಕುಳಿತು) ನಿನ್ನ ತಲೆ : ನೀನು ಒಬ್ಬ ರಾಯ ಭಾರಿಯನ್ನು ಮದುವೆ ಆಗುವೆ. ಇಂಡಿಯಾದ ಗೌರ್ನರ್ ಜನರಲನ್ನು ಮದುವೆಯಾಗುವೆಯಂತೆ. ಅಥವಾ, ಐರ್ಲೆಂಡಿನ ಲಾರ್ಡ್ ಲೆಫ್ಟೆನಂಟನ್ನು ಮದುವೆ ಆಗುವೆಯಂತೆ ; ಅಥವಾ, ಇನ್ನಾರಿಗೊ ಒಬ್ಬ ಉಪರಾಜ್ಞಿ

ಬೇಕಾದವರನ್ನು ಮದುವೆಯಾಗುವೆ. ನನ್ನ ಶ್ರೇಷ್ಠ ಕೃತಿಯನ್ನು ಆ...... ಫ್ರೆಡ್ಡಿಯ ಕೈಗೆ ಹಾಕಿ ವ್ಯರ್ಥ ಮಾಡಿಯೇನೆ ?

ಎಲಿಸ : ಹೀಗೆ ಹೇಳಿದರೆ ನನಗೆ ಮೆಚ್ಚಿಕೆಯಾಗುವುದೆಂದಿದ್ದೀರೇನೋ ? ಒಂದು ನಿಮಿಷದ ಹಿಂದೆ ನೀವು ಹೇಳಿದ್ದನ್ನು ನಾನು ಮರೆತಿಲ್ಲ. ಒಂದು ಮಗುವನ್ನೊ, ಒಂದು ನಾಯಿ ಕುನ್ನಿಯನ್ನೊ ಒಲಿಸಿ ತಿರುಗಿಸಿಕೊಳ್ಳುವಂತೆ ನನ್ನನ್ನು ತಿರುಗಿಸಿಕೊಳ್ಳಲಾರಿರಿ. ನನಗೆ ದಯೆ ದೊರಕದಾದರೆ ಸ್ವಾಧೀನತೆಯನ್ನಾದರೂ ಪಡೆದುಕೊಳ್ಳುತ್ತೇನೆ.

ಹಿಗ್ಗಿನ್ಸ್ : ಸ್ವಾಧೀನತೆ ? ಅದು ಮಧ್ಯಮ ವರ್ಗದ ಜನರ ದೈವನಿಂದೆಯ ಮಾತು. ನಾವೆಲ್ಲರೂ ಒಬ್ಬರಿಗೊಬ್ಬರು ಅಧೀನರು. ಭೂಮಿಯ ಮೇಲಿನ ಪ್ರತಿಯೊಂದು ಪ್ರಾಣಿಯೂ ಹಾಗೆಯೇ.

ಎಲಿಸ : (ಮನಸ್ಸಿನ ನಿಶ್ಚಯದಿಂದ) ನಾನು ನಿಮ್ಮ ಮೇಲೆ ಹೊಂದಿಕೊಂಡಿದ್ದೇನೆಯೆ ಎಂಬುದನ್ನು ನಿಮಗೆ ತೋರಿಸಿಕೊಡುತ್ತೇನೆ. ನೀವು ತತ್ತ್ವೋಪದೇಶ ಮಾಡುವವರಾದರೆ, ನಾನು ಇತರರಿಗೆ ಪಾಠ ಕಲಿಸಿಕೊಡಬಲ್ಲೆ. ಹೋಗುತ್ತೇನೆ. ಶಿಕ್ಷಕಳಾಗುತ್ತೇನೆ.

ಹಿಗ್ಗಿನ್ಸ್ : ದೇವರಾಣೆ, ಕೇಳಲೆ, ನೀನು ಏನು ಪಾಠ ಹೇಳಿಕೊಡಬಲ್ಲೆ ?

ಎಲಿಸ : ನೀವು ನನಗೆ ಕಲಿಸಿದ್ದನ್ನು ; ಶಿಕ್ಷಾ ಶಾಸ್ತ್ರವನ್ನು.

ಹಿಗ್ಗಿನ್ಸ್ : ಹ ! ಹ ! ಹ !...

ಎಲಿಸ : ಪ್ರೊ. ನಿಪಿಯನ್ ಬಳಿ ಹೋಗಿ, ಅವನ ಸಹ ಶಿಕ್ಷಕಳಾಗಲು ಕೇಳಿಕೊಳ್ಳುತ್ತೇನೆ.

ಹಿಗ್ಗಿನ್ಸ್ : (ರೋಷದಿಂದ ಎದ್ದು) ಏನು ! ಆ ಠಕ್ಕ, ಆ ಆಷಾಢಭೂತಿ, ಇನ್ನೊಬ್ಬರ ಮುಖಸ್ತುತಿ ಮಾಡಿಕೊಂಡು ಬದುಕುವ ಆ ಡಕಾಯಿತನಿಗೆ ನನ್ನ ಕ್ರಮವನ್ನು ವಿಧಾನಗಳನ್ನು ಹೇಳಿಕೊಡುವುದೆ? ನಾನು ಕಂಡು ಹಿಡಿದದ್ದನ್ನು ಅವನಿಗೆ ಒಪ್ಪಿಸುವುದೆ ? ಅವನ ದಿಕ್ಕಲ್ಲಿ ಒಂದು ಹೆಜ್ಜೆ ಮುಂದಿಡು. ನಿನ್ನ ಕುತ್ತಿಗೆ ಹಿಸುಕಿಬಿಡುತ್ತೇನೆ. (ಅವಳ ಕುತ್ತಿಗೆಗೆ ಕೈ ಹಾಕುತ್ತಾನೆ) ಕೇಳಿಸಿತೆ ?

ಎಲಿಸ : (ತಡೆಯದೆ, ಆದರೆ ಲಕ್ಷ್ಯ ಮಾಡದೆ) ಹಿಸುಕಿಬಿಡಿ. ನನಗೆ ಏನು ಆಗಬೇಕಾಗಿದೆ ? ನನಗೆ ಗೊತ್ತಿತ್ತು : ಯಾವೊತ್ತೊ ನನ್ನನ್ನು ಹೊಡೆಯುತ್ತೀರೆಂದು. (ಬಿಟ್ಟುಬಿಡುತ್ತಾನೆ. ತನ್ನನ್ನು ತಾನು ಮರೆತುಕೊಂಡುದಕ್ಕಾಗಿ ಕೋಪದಿಂದ ನೆಲವನ್ನು ಒದೆಯುತ್ತ ಬೇಗ ಹಿಮ್ಮೆಟ್ಟಿದುದರಿಂದ ಎಡವಿ ಮೆತ್ತೆಯ ಪೀಠದ ಮೇಲಿನ ತನ್ನ ಸ್ಥಾನಕ್ಕೆ ಹಿಂತಿರುಗುತ್ತಾನೆ.) ಆಹಾ ; ಈಗ ನನಗೆ ನಿಮ್ಮನ್ನು ಎದುರಿಸುವುದು ಹೇಗೆ, ಎಂಬುದು ಗೊತ್ತಾಯಿತು.

ಈವರೆಗೂ ಅದನ್ನು ಯೋಚಿಸದೆ ಎಂಥ ತಿಳಿಗೇಡಿಯಾಗಿದ್ದೆ ! ನೀವು ನನಗೆ ಕೊಟ್ಟ ತಿಳಿವಳಿಕೆಯನ್ನು ನೀವು ಪುನಃ ಹಿಂದಕ್ಕೆ ತೆಗೆದುಕೊಳ್ಳಲಾರಿರಿ. ನೀವೇ ಹೇಳಿದಿರಿ : ನಿಮ್ಮ ಕಿವಿಗಿಂತ ನನ್ನ ಕಿವಿ ಹೆಚ್ಚು ಚುರುಕು ಎಂದು. ನಾನು ಜನರಿಗೆ ಮರ್ಯಾದೆ ತೋರಿಸಬಲ್ಲೆ, ದಯೆ ತೋರಿಸಬಲ್ಲೆ. ಅದು ನಿಮ್ಮ ಶಕ್ತಿಗೆ ಮೀರಿದ್ದು. ಆಹಾ ! ನಿಮಗೆ ತಾಕಿತಲ್ಲವೆ ಇದು, ಹೆನ್ರಿ ಹಿಗ್ಗಿನ್ಸ್ ? ತಾಕಿದೆ. ನಿಮ್ಮ ದೊಡ್ಡ ದೊಡ್ಡ ಮಾತಿಗೆ, ನಾನು ಕೊಡುವ ಬೆಲೆ ಇಷ್ಟೇ. (ಎಂದು ನೆಟ್ಟಿಗೆ ಮುರಿಯುತ್ತಾಳೆ.) ವೃತ್ತ ಪತ್ರಿಕೆಗಳಲ್ಲಿ ಪ್ರಕಟಿಸುತ್ತೇನೆ : ಶ್ರೀಮಂತ ಮಹಿಳೆ ಕೇವಲ ನೀವು ಕಲಿಸಿ ತಯಾರಿಸಿದ ಒಬ್ಬ ಹೂಮಾರುವ ಹುಡುಗಿಯೆಂದು. ಯಾರಿಗೆ ಬೇಕಾದರೆ ಅವರಿಗೆ ೧,೦೦೦ ಗಿನಿ ಶುಲ್ಕ ಕೊಟ್ಟರೆ ಆರು ತಿಂಗಳ ಒಳಗೆ ನನ್ನಂತೆ ಶ್ರೀಮಂತ ಮಹಿಳೆಯಾಗಲು ಕಲಿಸುತ್ತೇನೆ ಎನ್ನುತ್ತೇನೆ. ನಿಮ್ಮ ಕಾಲ ಕೆಳಗೆ ಹೊರಳುತ್ತ ನಿಮ್ಮಿಂದ ತುಳಿಸಿಕೊಂಡು ನಿಮ್ಮಿಂದ ಕೇಳಿದ ಬೈಗುಳನ್ನು ಒಂದೊಂದಾಗಿ ನೆನಸಿಕೊಂಡರೆ ಹೇಗೆನ್ನಿಸುತ್ತದೆಯೊ ! ಅದೇ ಸಮಯದಲ್ಲಿ ನನ್ನ ಒಂದು ಕಿರುಬೆರಳು ಎತ್ತಿದ್ದರೆ ನಿಮಗೆ ಸಮನಾಗಿರಬಹುದಾಗಿತ್ತು ಎಂಬುದನ್ನು ಯೋಚಿಸಿದಾಗ ನನ್ನನ್ನು ನಾನೇ ಒದೆದುಕೊಳ್ಳಬೇಕೆನಿಸುತ್ತದೆ.

ಹಿಗ್ಗಿನ್ಸ್ : (ಅಚ್ಚರಿಪಡುತ್ತ ಅವಳನ್ನು ನೋಡಿ) ಚಂಡಾಲಿ, ಪಾಪಿಕೈನೆ ನೀನು. ಎಷ್ಟು ಸೊಕ್ಕು ನಿನ್ನದು ? ಆದರೆ ನಾಯಿ ಕುನ್ನಿಯಂತೆ ಕುಯ್ ಗುಟ್ಟುವುದಕ್ಕಿಂತ ಇದು ಎಷ್ಟೋ ಮೇಲು. ಸ್ಲಿಪ್ಪರುಗಳನ್ನು ತೆಗೆದುಕೊಂಡು ಬಾ ಎಂದರೆ ಬರುತ್ತ ತಾ ಎಂದರೆ ಕನ್ನಡಕ ಹುಡುಕಿ ತರುವುದಕ್ಕಿಂತ ಮೇಲಲ್ಲವೆ ? (ಮೇಲೇಳುತ್ತ) ನಾನು ನಿನ್ನನ್ನು ಒಬ್ಬ ಹೆಂಗಸನ್ನಾಗಿ ಮಾಡುತ್ತೇನೆ ಎಂದಿದ್ದೆ, ಮಾಡಿದ್ದೇನೆ. ನೀನು ಹೀಗಿದ್ದರೆಯೆ ಚೆನ್ನ.

ಎಲಿಸ : ನಿಮ್ಮನ್ನು ಕಂಡರೆ ನನಗೆ ಭಯವೇನೂ ಇಲ್ಲ. ನೀವು ಇಲ್ಲದೆ ಬದುಕುತ್ತೇನೆ ಎಂದು ತಿಳಿದಾಗ, ಈಗ ನನ್ನ ಕಡೆ ತಿರುಗಿದಿರಿ, ಅಲ್ಲವೆ ? ನನ್ನನ್ನು ಒಲಿಸಿಕೊಳ್ಳುವುದಕ್ಕೆ ಪ್ರಯತ್ನಪಡುತ್ತಿದ್ದೀರಿ ಅಲ್ಲವೆ ?

ಹಿಗ್ಗಿನ್ಸ್ : ಖಂಡಿತ ಹೌದು. ಏನು Fool ನೀನು ? ಐದು ನಿಮಿಷಗಳ ಹಿಂದೆ ನೀನು ನನ್ನ ಕುತ್ತಿಗೆಗೆ ಸುತ್ತು ಕಟ್ಟಿದ ಬೀಸುವಕಲ್ಲಿನ ಹಾಗೆ ಇದ್ದೆ. ಈಗ ಶಕ್ತಿಯ ಒಂದು ಗೋಪುರ ; ಜೊತೆಯ ಯುದ್ಧನೌಕೆ. ನೀನು, ನಾನು, ಪಿಕರಿಂಗ್ ಮೂರು ಮಂದಿ ಬ್ರಹ್ಮಚಾರಿಗಳು ಒಟ್ಟಿಗೆ ಇರುತ್ತೇವೆ. ಈವರೆಗೂ ಇಬ್ಬರು ಗಂಡಸರು, ಒಬ್ಬ ಬೆಪ್ಪ ಹುಡುಗಿ ಇದ್ದ ಹಾಗಲ್ಲ.

[ಶ್ರೀಮತಿ ಹಿಗ್ಗಿನ್ಸ್ ಮದುವೆಗೆ ತಕ್ಕ ಉಡುಪನ್ನು ಉಟ್ಟು ಹಿಂದಿರುಗುತ್ತಾಳೆ. ಎಲಿಸ ತಂಪಾಗಿ ನಾಜೂಕಾಗುವಳು.]

ಶ್ರೀಮತಿ ಹಿಗ್ಗಿನ್ಸ್ : ಗಾಡಿ ಕಾದಿದೆ, ಎಲಿಸ, ಸಿದ್ಧಳಾಗಿದ್ದೀಯ ?

ಎಲಿಸ : ಪೂರ್ತಿ. ಪ್ರೊಫೆಸರು ಬರುತ್ತಾರೇನು ?

ಶ್ರೀಮತಿ ಹಿಗ್ಗಿನ್ಸ್ : ಖಂಡಿತ ಬೇಡ. ಅವನು ಚರ್ಚಿನಲ್ಲಿ ಸರಿಯಾಗಿ ನಡೆದುಕೊಳ್ಳಲಾರ. ಪಾದ್ರಿಯ ಉಚ್ಚಾರಣೆಯ ಮೇಲೆ ಎಲ್ಲರಿಗೂ ಕೇಳುವ ಹಾಗೆ ವ್ಯಾಖ್ಯಾನ ಮಾಡುತ್ತಾನೆ.

ಎಲಿಸ : ಹಾಗಾದರೆ ನಾನು ಪುನಃ ತಮ್ಮನ್ನು ಕಾಣುವುದಿಲ್ಲ, ಪ್ರೊಫೆಸರ್. ನಮಸ್ಕಾರ. (ಬಾಗಿಲಿಗೆ ಹೋಗುತ್ತಾಳೆ.)

ಶ್ರೀಮತಿ ಹಿಗ್ಗಿನ್ಸ್ : (ಹಿಗ್ಗಿನ್ಸ್ ಬಳಿಗೆ ಬಂದು) ಹೋಗಿಬರುತೇನೆ, ಮಗು.

ಹಿಗ್ಗಿನ್ಸ್ : ಹೋಗಿ ಬಾ ಅಮ್ಮ. (ತಾಯಿಗೆ ಮುಚ್ಚಟೆ ತೋರಿಸಬೇಕೆನ್ನುವಷ್ಟರಲ್ಲಿ ಏನನ್ನೊ ಜ್ಞಾಪಿಸಿಕೊಳ್ಳುತ್ತಾನೆ.) ಇಲ್ಲಿ ನೋಡು ಎಲಿಸ, ಮರೆತು ಬಿಟ್ಟಿದ್ದೆ. ಒಂದಿಷ್ಟು ಹ್ಯಾಂ ಮತ್ತು ಸ್ಟಿಲಟನ್ ಗಿಣ್ಣನ್ನು ಅಂಗಡಿಯವನಿಗೆ ಕಳಿಸು ಎಂದು ಹೇಳಿ ಬಾ. ನನಗಾಗಿ 8ನೆ ನಂಬರಿನ ಹಿಮಸಾರಂಗದ ಕೈಚೀಲ ಒಂದು ಜೊತೆ, ಹಾಗೂ ನನ್ನ ಆ ಹೊಸ ಸೂಟಿಗೆ ಹೊಂದುವ ಒಂದು ಟೈ ಕೊಂಡು ತಾ. ಈಲ್ ಅಂಡ್ ಬಿನ್ಮನ್ ಅಂಗಡಿಯಿಂದ. ಬಣ್ಣವನ್ನು ನೀನೇ ಆರಿಸು. (ಹರ್ಷದಿಂದ ಇದ್ದಾನೆ. ನಿಶ್ಚಿಂತನಾಗಿದ್ದಾನೆ. ಇವನನ್ನು ತಿದ್ದುವುದು ಅಶಕ್ಯವೆಂಬುದನ್ನು ಅವನ ಗಂಡು ಧ್ವನಿ ತೋರಿಸುತ್ತದೆ.)

ಎಲಿಸ : (ತಿರಸ್ಕಾರದಿಂದ) ನೀವೇ ಅವನ್ನು ಕೊಂಡುಕೊಳ್ಳಿ ! (ಅಟ್ಟಹಾಸದಿಂದ ಹೊರಗೆ ಹೋಗುತ್ತಾಳೆ.)

ಶ್ರೀಮತಿ ಹಿಗ್ಗಿನ್ಸ್ : ಆ ಹುಡುಗಿಯನ್ನು ಕೆಡಿಸಿಬಿಟ್ಟಿದ್ದೀಯೆ ಅಂತ ಕಾಣಿಸುತ್ತೆ ಹೆನ್ರಿ. ಆದರೆ, ಚಿಂತೆ ಬೇಡ. ನಿನ್ನ ಟೈಯನ್ನೂ ಕೈ ಚೀಲಗಳನ್ನೂ ನಾನು ಕೊಂಡು ತರುತ್ತೇನೆ, ಮಗು.

ಹಿಗ್ಗಿನ್ಸ್ : (ಹಗುರವಾಗಿ) ಓ, ನಿನಗೆ ಚಿಂತೆ ಬೇಡಮ್ಮ. ಖಂಡಿತ ಅವಳೇ ಕೊಂಡು ತರುತ್ತಾಳೆ. ಹೋಗಿ ಬಾ ಅಮ್ಮ.

[ಪ್ರೀತಿಯಿಂದ ಬೀಳುಕೊಡುವನು. ಶ್ರೀಮತಿ ಹಿಗ್ಗಿನ್ಸ್ ವೇಗವಾಗಿ ಹೊರಗೆ ಹೋಗುತ್ತಾಳೆ. ಹಿಗ್ಗಿನ್ಸ್ ಒಂಟಿಯಾಗಿ ಉಳಿದಿದ್ದಾನೆ. ಜೇಬಿನ ನಗದನ್ನು ಅಲುಗಿಸಿ ಶಬ್ದ ಮಾಡುತ್ತಾನೆ. ಸಣ್ಣ ಸಣ್ಣಗೆ ನಗುತ್ತಾನೆ. ತನ್ನ ವಿಷಯದಲ್ಲಿ ತುಂಬಾ ತೃಪ್ತಿಗೊಂಡಂತೆ ನಡೆದುಕೊಳ್ಳುತ್ತಾನೆ.]

——

# ಮೇಜರ್ ಬಾರ್ಬರ

# ಪಾತ್ರವರ್ಗ

ಆ್ಯಂಡ್ರ್ಯು ಅಂಡರ್ ಷಾಫ್ಟ್—ತಂದೆ. ಕಾರ್ಖಾನೆಯ ಯಜಮಾನ

ಸ್ಟೀವನ್—ಮಗ

ಕಸಿನ್—ಬಾರ್ಬರಗೆ ಗೊತ್ತಾದ ವರ

ಲೋಮ್ಯಾಕ್ಸ್—ಶಾರಾಗೆ ಗೊತ್ತಾದ ವರ

ಮಾರಿಸನ್—ಮನೆಯ ಆಳು

ಬಿಲ್ಟನ್—ಕಾರ್ಖಾನೆಯ ನೌಕರ

ಲೇಡಿ ಬ್ರಿಟೊಮಾರ್ಟ್—ತಾಯಿ

ಮೇಜರ್ ಬಾರ್ಬರ—ಮಗಳು

ಶಾರಾ—ಮಗಳು

ಜನರಲ್ ಬೆಯ್ನ್ಸ್—ಮೋಕ್ಷ ಚಮೂ ಅಧ್ಯಕ್ಷೆ

ಜೆನ್ನಿ—ಚಮೂ ಹುಡುಗಿ

ಬಿಲ್ ವಾಕರ್—ತನ್ನ ಹೆಣ್ಣನ್ನು ಹುಡುಕಿಕೊಂಡು ಬರುವ ಒರಟ

ಸ್ನಾಬಿ ಪ್ರೈಸ್—ಚಮೂಗೆ ಬೇಡಲು ಬಂದವನು

ಪರ್ಲಿ—ಬೇಡಲು ಬಂದವನು

ರಮ್ಮಿ ಮಿಚ್ಚೆನ್ಸ್—ಬೇಡಲು ಬಂದವಳು

ಲಂಡನಿನ ಕೋರ್ಟ್ ಥಿಯೇಟರಲ್ಲಿ

ಮೊದಲಬಾರಿಗೆ ಇದನ್ನು ಆಡಿದ್ದು : 1905

# ಅಂಕ ೧

[ಜನವರಿ 1906. ಊಟ ಆದಮೇಲೆ ವಿಲ್ಟನ್ ಕ್ರೆಸೆಂಟಲ್ಲಿ ಲೇಡಿ ಬ್ರಿಟೊಮಾರ್ಟ್ ಅಂಡರ್‌ಷಾಫ್ಟ್ ಮನೆಯ ಪುಸ್ತಕ ಭಂಡಾರದಲ್ಲಿ ...ನಡುವೆ ಸುಖಕರವಾದ ಒಂದು ಮೆತ್ತೆಯ ಮಂಚಿಕೆ. ಆಕೆಯ ವಯಸ್ಸು ಸುಮಾರು 50. ಮಗ, ಸ್ಟೀವನ್ ಒಳಗೆ ಬರುತ್ತಾನೆ. ವಯಸ್ಸು 25ಕ್ಕೆ ಕಡಮೆ. ತುಂಬಾ ಸರಿಯಾಗಿ ನಡೆದು ಕೊಳ್ಳುವ ಹುಡುಗ. ತಾಯನ್ನು ಕಂಡರೆ ಭಯ, ಭಕ್ತಿ. ಶೀಲದ ದೌರ್ಬಲ್ಯ ದಿಂದಲ್ಲ; ಹುಡುಗತನದಿಂದ ಬಂದ ಅಭ್ಯಾಸ, ಅವಿವಾಹಿತ ಹುಡುಗನ ಸಂಕೋಚ ಸೇರಿವೆ.]

ಸ್ಟೀವನ್ : ಏನು ವಿಷಯ ಅಮ್ಮ ?

ಲೇಡಿ ಬ್ರಿಟೊಮಾರ್ಟ್ : ಹೇಳುತೇನೆ ತಾಳು, ಸ್ಟೀವನ್.

(ಸ್ಟೀವನ್ ವಿಧೇಯನಾಗಿ ಮಂಚಿಕೆಯ ಮೇಲೆ ಹೋಗಿ ಕುಳಿತುಕೊಳ್ಳುತ್ತಾನೆ. 'ದಿ ಸ್ಪೀಕರ್' ಎಂಬ ಲಿಬರಲ್ ಪಕ್ಷದ ವಾರಪತ್ರಿಕೆಯನ್ನು ತೆಗೆದುಕೊಳ್ಳುತ್ತಾನೆ.)

ಲೇಡಿ ಬ್ರಿಟೊ : ಓದತೊಡಗಬೇಡ, ಸ್ಟೀವನ್. ಈಗ ನಿನ್ನ ಗಮನವೆಲ್ಲ ನಾನು ಹೇಳುವುದರ ಕಡೆಗೆ ಬೇಕಾಗುತ್ತೆ.

ಸ್ಟೀವನ್ : ಕಾಯುತ್ತಿರುವಾಗ ಮಾತ್ರ, ಎಂದು—

ಲೇಡಿ ಬ್ರಿಟೊ : ನೆಪಗಳನ್ನು ಹೇಳಬೇಡ ಸ್ಟೀವನ್ (ಪೇಪರನ್ನು ಕೆಳಗೆ ಹಾಕುತ್ತಾನೆ.) ನೋಡು ! (ತಾನು ಬರೆಯುತ್ತಿದ್ದುದನ್ನು ಮುಗಿಸಿ, ಎದ್ದು ಮಂಚಿಕೆಯ ಬಳಿಗೆ ಬರುತ್ತಾಳೆ) ನಾನು ತುಂಬಾ ಹೊತ್ತು ನಿನ್ನ ಕಾಯಿಸಲಿಲ್ಲವಲ್ಲ ?

ಸ್ಟೀವನ್ : ಇಲ್ಲ, ಅಮ್ಮ.

ಲೇಡಿ ಬ್ರಿಟೊ : ನನಗೆ ನನ್ನ ದಿಂಬು ತಂದುಕೊಡು. (ಕುರ್ಚಿಯ ಮೇಲಿರುವ ದಿಂಬನ್ನು ತೆಗೆದುಕೊಂಡು ಬಂದು ಮಂಚಿಕೆಯಲ್ಲಿ ಆಕೆ ಸರಿಯಾಗಿ ಕುಳಿತು ಕೊಳ್ಳುವಂತೆ ಒಪ್ಪ ಮಾಡುತ್ತಾನೆ.) ಕುಳಿತುಕೊ. (ಕುಳಿತುಕೊಳ್ಳುತ್ತಾನೆ. ತನ್ನ ಟೈಯನ್ನು ಹೀಗೆ ಹಾಗೆ ಸರಿಪಡಿಸಿಕೊಳ್ಳುತ್ತಾನೆ.) ಸುಮ್ಮನೆ ಟೈ ಮೇಲೇನೊ ನಿನ್ನ ಕೈ ? ಅದು ಸರಿಯಾಗಿಯೇ ಇದೆ.

ಸ್ಟೀವನ್ : ಕ್ಷಮಿಸಮ್ಮ (ಗಡಿಯಾರದ ಸರಪಳಿಯನ್ನು ಹಾಗೆ ಹೀಗೆ ಆಡಿಸುತ್ತಾನೆ.)

ಲೇಡಿ ಬ್ರಿಟೊ : ನಾನು ಹೇಳುವುದರ ಕಡೆ ಲಕ್ಷ್ಯ ಕೊಡುತಿದ್ದೀಯ ಸ್ಟೀವನ್ ?

ಸ್ಟೀವನ್ : ಕೊಡದೆ ಏನಮ್ಮ ?

ಲೇಡಿ ಬ್ರಿಟೊ : ಕೊಡದೆ ಏನು ಎಂಬುದಲ್ಲ, ನನಗೆ ಬೇಕಾದ್ದು ; ಹೆಚ್ಚು ಲಕ್ಷ್ಯ. ದಿನಾ ಸಾಮಾನ್ಯವಾಗಿ ಕೊಡುವ ಲಕ್ಷ್ಯಕ್ಕಿಂತ ಹೆಚ್ಚಿನದು. ನಾನು ಈಗ ಬಹು ಗಂಭೀರವಾದ ವಿಷಯವನ್ನು ಕುರಿತು ನಿನ್ನೊಡನೆ ಮಾತನಾಡುತ್ತಿದ್ದೇನೆ. ಆ ಸರಪಳಿ ಮೇಲೆ ಕೈಯಾಡಿಸುವುದನ್ನು ಬಿಡುವುದಿಲ್ಲವಲ್ಲ, ನೀನು—

ಸ್ಟೀವನ್ : (ಅವಸರದಿಂದ ಸರಪಳಿಯಿಂದ ಕೈ ತೆಗೆದು) ನಿನ್ನ ಮನಸ್ಸಿಗೆ ಬೇಸರ ಬರುವಂತೆ ಏನಾದರೂ ಮಾಡಿದೆನೇನಮ್ಮ ? ಮಾಡಿದ್ದರೆ, ಉದ್ದೇಶ ಪೂರ್ವಕ ವಾಗಿ ಅಲ್ಲ.

ಲೇಡಿ ಬ್ರಿಟೊ : (ಆಶ್ಚರ್ಯದಿಂದ) ನಾನ್‌ಸೆನ್ಸ್ (ವಿಷಾದದಿಂದ) ಅಯ್ಯೋ ಮಗು, ನಿನ್ನ ಮೇಲೆ ಕೋಪ ಬಂದಿತ್ತು ನನಗೆ ಎಂದುಕೊಂಡಿದ್ದೆಯೇನು ?

ಸ್ಟೀವನ್ : ಹಾಗಾದರೆ ಇನ್ನೇನಮ್ಮ ? ನೀನು ನನ್ನ ಮನಸ್ಸಿನ ನೆಮ್ಮದಿ ಕೆಡಿಸು ತ್ತೀಯೆ.

ಲೇಡಿ ಬ್ರಿಟೊ : (ಅವನೆದುರಿಗೆ ಸೆಟೆದು ಕುಳಿತು) ಸ್ಟೀವನ್, ವಯಸ್ಸಿಗೆ ಬಂದ ತರುಣ ನೀನು. ನಾನು ಬರಿಯ ಒಬ್ಬ ಹೆಂಗಸು ಎಂಬುದನ್ನು ಎಷ್ಟು ಬೇಗ ನಿನ್ನ ಮನಸ್ಸಿಗೆ ತಂದುಕೊಳ್ಳಬಲ್ಲೆ ಎಂಬುದನ್ನು ನಾನು ಕೇಳಬಹುದೆ ?

ಸ್ಟೀವನ್ : (ವಿಸ್ಮಿತನಾಗಿ) ಹೆಂಗಸು ಮಾತ್ರ—

ಲೇಡಿ ಬ್ರಿಟೊ : ನಾನು ಆಡಿದ್ದನ್ನೇ ನೀನೂ ಆಡಬೇಡ, ದಯವಿಟ್ಟು. ಆ ಅಭ್ಯಾಸ ಕಂಡರೆ ನನಗೆ ಚಿಟಿಚಿಟಿ ಎನ್ನಿಸುತ್ತೆ. ಜೀವನವನ್ನು ಗಂಭೀರವಾಗಿ ಎದುರಿಸು ವುದನ್ನು ನೀನು ಕಲಿಯಬೇಕು. ನಮ್ಮ ಗೃಹಕೃತ್ಯದ ಹೊರೆಯನ್ನೆಲ್ಲ ಇನ್ನು ಹೆಚ್ಚು ಕಾಲ ನಾನೇ ಪೂರ್ತಿಯಾಗಿ ಹೊರಲಾರೆ,—ನಿಜವಾಗಿ. ನೀನು ನನಗೆ ಸಲಹೆ ಕೊಡಬೇಕು. ಜವಾಬ್ದಾರಿ ವಹಿಸಿಕೊಳ್ಳಬೇಕು.

ಸ್ಟೀವನ್ : ನಾನು !

ಲೇಡಿ ಬ್ರಿಟೊ : ಹೌದು, ನೀನು. ಇನ್ನೇನು ಎಂದುಕೊಂಡಿದ್ದೀಯೆ? ಕಳೆದ ಜೂನಲ್ಲಿ ನಿನಗೆ ವಯಸ್ಸು 24 ಆಯಿತು. ಹ್ಯಾರೊ ಅಲ್ಲಿ, ಕೇಂಬ್ರಿಜ್ಜಲ್ಲಿ ಇದ್ದಾಯಿತು. ಇಂಡಿಯಕ್ಕೆ, ಜಪಾನಿಗೆ ಹೋಗಿ ಬಂದಿದ್ದೀಯೆ. ಈಗ ನಿನಗೆ ತುಂಬಾ ಸಂಗತಿ ಗಳು ಗೊತ್ತಿರಬೇಕು. ಅಯೋಗ್ಯವಾಗಿ ನೀನು ಕಾಲ ಕಳೆದಿದ್ದರೆ ಏನೂ ಹೇಳ ಲಾರೆ. ಸರಿ, ನನಗೆ ಸಲಹೆಕೊಡು.

ಸ್ಟೀವನ್ : (ಏನೂ ತೋರದೆ ಮನಸ್ಸಿನ ತೊಡಕಿನಲ್ಲಿ) ನಿನಗೇ ಗೊತ್ತಿದೆ, ಅಮ್ಮ, ಮನೆವಾಳ್ತಿಯ ವಿಷಯದಲ್ಲಿ ನಾನು ಎಂದೂ ಕೈ ಹಾಕಿಲ್ಲ—

ಲೇಡಿ ಬ್ರಿಟೊ : ಇಲ್ಲ. ನನಗೂ ಹಾಗೇ ಅನ್ನಿಸುತ್ತೆ. ಈ ಮನೇಲಿ ಊಟಕ್ಕೆ ಏನು ಮಾಡಬೇಕು ಎಂದು ನೀನು ಹೇಳಬೇಕಾಗಿಲ್ಲ.

ಸ್ಟೀವನ್ : ನಾನಂದದ್ದು ನಮ್ಮ ಗೃಹಕೃತ್ಯಗಳಲ್ಲಿ ಅಂತ.

ಲೇಡಿ ಬ್ರಿಟೊ : ಆಯಿತು. ಈಗ ಕೈ ಹಾಕಬೇಕು. ಈಗ ಅವು ಪೂರ್ತಿ ನನ್ನ ಕೈ ಮೀರುತ್ತಿವೆ. ಆದ್ದರಿಂದ—

ಸ್ಟೀವನ್ : (ಚಿಂತಾಕುಲನಾಗಿ) ನನಗೂ ಕೆಲವು ವೇಳೆ ಅನ್ನಿಸಿದೆ, ನಾನು ಹಾಗೆ ಮಾಡುವುದು ನನ್ನ ಕರ್ತವ್ಯವೆಂದು. ಆದರೆ ನಿಜವಾಗಿ ನೋಡಮ್ಮ, ನನಗೆ ಅವುಗಳ ವಿಷಯ ಏನೂ ತಿಳಿಯದು. ನನಗೆ ತಿಳಿದಿರುವುದು ಅಷ್ಟೇನೂ ಸುಖ ಕರವಾದ್ದಲ್ಲ. ಕೆಲವು ಸಂಗತಿಗಳನ್ನು ನಿನಗೆ ಹೇಳುವುದು ಅಸಾಧ್ಯ. (ನಾಚಿಕೆ ಯಿಂದ ನಿಲ್ಲಿಸುತ್ತಾನೆ.)

ಲೇಡಿ ಬ್ರಿಟೊ : ನಿಮ್ಮಪ್ಪ ಅವರ ವಿಷಯದಲ್ಲಿ ತಾನೆ ನೀನು ಹೇಳುವುದು ?

ಸ್ಟೀವನ್ : (ಕೇಳಿಸದಷ್ಟು ತಗ್ಗು ದನಿಯಲ್ಲಿ) ಹೌದು.

ಲೇಡಿ ಬ್ರಿಟೊ : ಮಗು : ಅವರ ಹೆಸರನ್ನೇ ಹೇಳದೆ ನಮ್ಮ ಜೀವಿತಕಾಲವನ್ನು ಕಳೆ ಯುವುದಕ್ಕಾಗುತ್ತದೆಯೆ ! ನಾನು ನಿನ್ನನ್ನು ಕೇಳುವ ತನಕ ನೀನು ಆ ವಿಷಯದ ಪ್ರಸ್ತಾಪ ಎತ್ತದೇ ಇದ್ದದ್ದು ಸರಿಯೇ. ಆದರೆ ಈಗ ನಿನಗೆ ಸಾಕಷ್ಟು ವಯಸ್ಸಾಗಿದೆ ; ಈಗ ಏಕಾಂತಕ್ಕೆ ತೆಗೆದುಕೊಳ್ಳಬಹುದು. ಹೆಣ್ಣು ಮಕ್ಕಳ ವಿಷಯವನ್ನು ತೀರ್ಮಾನಿಸುವ ವಿಷಯದಲ್ಲಿ ಅವರಲ್ಲಿ ಪ್ರಸ್ತಾಪಮಾಡಲು ನಿನ್ನ ಸಹಾಯ ಬೇಕು.

ಸ್ಟೀವನ್ : ಹೆಣ್ಣು ಮಕ್ಕಳ ಸ್ಥಿತಿ ಚೆನ್ನಾಗಿದೆಯಲ್ಲ—ಇಬ್ಬರಿಗೂ ವರಗಳು ಗೊತ್ತಾಗಿವೆ.

ಲೇಡಿ ಬ್ರಿಟೊ : (ಪ್ರಸನ್ನತೆಯಿಂದ) ಹೌದು. ಶಾರಾಗೆ ಒಳ್ಳೆಯ ಸಂಬಂಧಹೊಂದಿ ಸಿದ್ದೇನೆ. ಚಾರ್ಲ್ಸ್ ಲೋಮ್ಯಾಕ್ಸ್ 35ಕ್ಕೆ ಮಿಲಿಯಧೀಶ್ವರನಾಗುತ್ತಾನೆ. ಆದರೆ ಅದು ನೆರವೇರುವುದಕ್ಕೆ ಇನ್ನೂ ಹತ್ತು ವರ್ಷಬೇಕು. ಈ ಅವಧಿಯಲ್ಲಿ ಆತನ ತಂದೆಯ ಮರಣಶಾಸನದಂತೆ ಆಸ್ತಿಯನ್ನು ನೋಡಿಕೊಳ್ಳುತ್ತಿರುವವರು ಅವನಿಗೆ ವರ್ಷಕ್ಕೆ 800 ಪೌಂಡಿಗಿಂತ ಹೆಚ್ಚಾಗಿ ಕೊಡಲಾರರು.

ಸ್ಟೀವನ್ : ವಿಲ್ಲಲ್ಲಿ ಇನ್ನೊಂದು ಮಾತಿದೆ : ಸ್ವಪ್ರಯತ್ನದಿಂದ ತನ್ನ ವರಮಾನವನ್ನು ಹೆಚ್ಚಿಸಿಕೊಂಡರೆ, ಆ ಹೆಚ್ಚಿನ ಎರಡರಷ್ಟನ್ನು ಅವನಿಗೆ ಕೊಡತಕ್ಕದ್ದು ಎಂದು—

ಲೇಡಿ ಬ್ರಿಟೊ : ಚಾರ್ಲ್ಸ್ ಲೋಮ್ಯಾಕ್ಸ್ ಯತ್ನಗಳಿಂದ ಅವನ ವರಮಾನ ಕಡಮೆ ಯಾದೀತೆ ಹೊರತು ಹೆಚ್ಚುವ ಸಂಭವವಿಲ್ಲ. ಮುಂದಿನ ಹತ್ತು ವರ್ಷಗಳಲ್ಲಿ, ಕಡಮೆಯೆಂದರೆ ಇನ್ನೂ 800 ಪೌಂಡು ಶಾರಾಗೆ ಒದಗಿಸಬೇಕಾಗುತ್ತೆ. ಅಲ್ಲಿಗೂ ಅವರು ಬಡಪಾಯಿಗಳಾಗಿಯೇ ಸಂಸಾರ ಮಾಡಬೇಕಾಗುವುದು. ಆಮೇಲೆ, ಬಾರ್ಬರ ಗತಿ ? ನಿಮ್ಮಲ್ಲೆಲ್ಲ ಅವಳ ಭವಿಷ್ಯವೇ ಬಹು ಉಜ್ವಲವಾಗುವುದೆಂದು ನಾನು ಯೋಚಿಸಿದ್ದೆ. ಆದರೆ ಮಾಡುವುದೇನು ? ಅವಳು ಮುಕ್ತಿಚಮೂಗೆ ಸೇರಿಕೊಂಡಿದ್ದಾಳೆ. ಕೆಲಸದವಳನ್ನು ಕೆಲಸದಿಂದ ಬಿಡಿಸಿಬಿಟ್ಟಿದ್ದಾಳೆ. ಅವಳ ಜೀವನಕ್ಕೆ ವಾರಕ್ಕೆ ಒಂದು ಪೌಂಡು ಸಾಕಂತೆ. ಬೀದೀಲಿ ಯಾವನೋ ಗ್ರೀಕ್

ಪ್ರೊಫೆಸರ್ ಸಿಕ್ಕಿದನಂತೆ. ಅವನು ಈ ಮುಕ್ತಿಚಮೂದಲ್ಲಿ ವಿಶ್ವಾಸವಿರುವಂತೆ ನಟಿಸುತ್ತಾನೆ. ತಲೆ ಕಿವಿ ಮುಳುಗಿಹೋಗುವಷ್ಟು ಅವಳಲ್ಲಿ ಅವನಿಗೆ ಪ್ರೀತಿ. ವಾಸ್ತವವಾಗಿ ಬೀದಿಯಲ್ಲಿ ಅವಳ ಸೈನ್ಯದಲ್ಲಿ ದೊಡ್ಡ ಮದ್ದಳೆ ಬಾರಿಸುತ್ತಾನೆ.

ಸ್ಟೀವನ್ : ನಾನೂ ಚಕಿತನಾದೆ ನಿಜವಾಗಿ,—ಅವರಿಬ್ಬರಿಗೂ ನಿಶ್ಚಿತಾರ್ಥ ಆಯಿತು ಎಂದು ಕೇಳಿ. ಕಸಿನ್ಸೇನೊ ಖಂಡಿತ ಬಹು ಒಳ್ಳೆಯ ಮನುಷ್ಯ. ಅವನು ಆಸ್ಟ್ರೇಲಿಯದಲ್ಲಿ ಹುಟ್ಟಿದವನೆಂದು ಯಾರೂ ಊಹಿಸಲೂ ಆಗುವುದಿಲ್ಲ ; ಆದರೆ—

ಲೇಡಿ ಬ್ರಿಟೊ: ಓ ಅಡಾಲ್ಫಸ್ ಕಸಿನ್ಸ್ ಒಳ್ಳೆಯ ಗಂಡ ಆಗ್ತಾನೆ ಬಿಡೊ. ಎಷ್ಟೇ ಹೇಳು: ಗ್ರೀಕಿಗೆ ವಿರುದ್ಧವಾಗಿ ಯಾರೂ ಒಂದು ಮಾತೂ ಹೇಳಲಾರರು. ವಿದ್ಯಾವಂತ, ಸಭ್ಯಎಂಬ ಮುದ್ರೆಯನ್ನು ಒಡನೆಯೇ ಗ್ರೀಕ್ ಹಾಕುತ್ತದೆ. ದೇವರ ದಯದಿಂದ, ನಮ್ಮ ಮನೆತನ ಕೂಡ ಮಡ್ಡಿತಲೆಯ ಟೋರಿ ಮನೆತನ ಅಲ್ಲ. ನಾವು ವ್ಹಿಗ್ ಪಂಥದವರು ; ನಮಗೆ ಸ್ವಾತಂತ್ರ್ಯದಲ್ಲಿ ನಂಬಿಕೆ ಉಂಟು. ಶ್ರೀಮಂತರ ಬಾಲ ಹಿಡಿಯೊ ಜನ ಬೇಕಾದ್ದು ಹೇಳಿಕೊಳ್ಳಲಿ. ಅವರು ಇಷ್ಟಪಡುವ ಮನುಷ್ಯನನ್ನಲ್ಲ ಬಾರ್ಬರ ಮದುವೆ ಮಾಡಿಕೊಳ್ಳುವುದು ; ನಾನು ಇಷ್ಟ ಪಡುವವನನ್ನು.

ಸ್ಟೀವನ್ : ಅದು ಸರಿ, ಅಮ್ಮ. ನಾನು ಅವನ ವರಮಾನವನ್ನು ಕುರಿತು ಮಾತ್ರವೇ ಯೋಚಿಸುತ್ತಿದ್ದದ್ದು. ಹೇಗೇ ಇರಲಿ, ಅವನು ದುಂದುಗಾರನಾಗಲಾರ.

ಲೇಡಿ ಬ್ರಿಟೊ : ಅದನ್ನು ತುಂಬ ನೆಚ್ಚಿಕೊಂಡಿರಬೇಡ, ಸ್ಟೀವನ್. ಮಾತಾಡದೆ ಸರಳರಾದ, ನಯವಂತರಾದ ಅಡಾಲ್ಫಸಂಥ ಕಾವ್ಯಪ್ರಿಯ ಜನರ ವಿಷಯ ನನಗೆ ಗೊತ್ತು. ಎಲ್ಲದರಲ್ಲಿಯೂ ಅತ್ಯುತ್ತಮವಾದ್ದು ಸಿಕ್ಕಿದರೆಯೇ ಅವರಿಗೆ ಪೂರ್ತಿ ತೃಪ್ತಿ. ದಂಡೋಡಿ ಜನಕ್ಕಿಂತ ಅವರನ್ನು ನಡಸಲು ಹೆಚ್ಚು ಹಣ ಬೇಕಾಗುತ್ತೆ. ಈ ದಂಡೋಡಿ ಜನ ಎಷ್ಟು ಎರಡನೆ ದರ್ಜೆಯ ಜನವೊ ಅಷ್ಟೇ ಕ್ಷುದ್ರರು. ಉಹುಂ. ಬಾರ್ಬರಾಗೆ ವರ್ಷಕ್ಕೆ ಕಡಮೆ ಎಂದರೆ : ಎರಡು ಸಾವಿರ ಪೌಂಡು ಬೇಕಾಗುತ್ತೆ. ಎಂದರೆ : ಇದರ ಜೊತೆಗೆ ಎರಡು ಹೆಚ್ಚು ಮನೆಗಳು ನಡೆಯ ಬೇಕಾಗುತ್ತದೆ. ಅಲ್ಲದೆ, ನೋಡು ಮಗು, ನೀನೂ ಬೇಗ ಮದುವೆ ಮಾಡಿಕೊ ಬೇಕು. ಈಗಿನ ವೈಖರಿ ಇದೆಯಲ್ಲ—ಹುಡುಗಿಯರ ಸುತ್ತ ಸುತ್ತಾಡುವ ಬ್ರಹ್ಮಚಾರಿಗಳನ್ನಾಗಲಿ ವಯಸ್ಸು ಮೀರಿ ಮದುವೆಯಾಗುವುದನ್ನಾಗಲಿ ನಾನು ಒಪ್ಪುವುದಿಲ್ಲ. ನಿನಗೆ ಏನಾದರೂ ಏರ್ಪಾಡು ಮಾಡಬೇಕೆಂದು ಯತ್ನಿಸುತ್ತಿದ್ದೇನೆ.

ಸ್ಟೀವನ್ : ನೀನು ತುಂಬಾ ಒಳ್ಳೆಯವಳಮ್ಮ. ಆದರೆ ಆ ಏರ್ಪಾಡು ನಾನೇ ಮಾಡಿಕೊಳ್ಳೋದು ಮೇಲು ಅಂತ ಕಾಣುತ್ತೆ.

ಲೇಡಿ ಬ್ರಿಟೊ : ನಾನ್ಸೆನ್ಸ್. ಇನ್ನೂ ನಿನಗೆ ವಯಸ್ಸು ಚಿಕ್ಕದು. ಸರಿ ಸಾಟಿಯಾದ ಸಂಬಂಧ ಹುಡುಕಲು ನಿನಗೆ ಬರೋದಿಲ್ಲ. ಯಾವಳೊ ಹೆಸರಿಲ್ಲದ, ಸಾಮಾನ್ಯ

ಲಕ್ಷಣದ ಒಬ್ಬಳ ಕೈಗೆ ಸಿಕ್ಕಿ ಬೀಳುತೀಯೆ. ನಿನ್ನ ಅಭಿಪ್ರಾಯ ಕೇಳದೆ, ಒಪ್ಪಿಗೆಯಿಲ್ಲದೆ ಮಾಡುತ್ತೇನೆ ಎಂದುಕೊಳ್ಳಬೇಡ. ಅದು ನಿನಗೂ ಗೊತ್ತು.(ಸ್ಟೀವನ್ ತುಟಿ ಮುಚ್ಚಿಕೊಂಡು ಮೌನವಾಗುತ್ತಾನೆ.) ನೋಡು, ಸ್ಟೀವನ್, ಹಾಗೆ ದುಮ್ಮಾನ ಪಟ್ಟುಕೊಂಡು ಕೂತುಕೊಬೇಡ.

ಸ್ಟೀವನ್ : ದುಮ್ಮಾನ ಇಲ್ಲಮ್ಮ. ಇವೆಲ್ಲಕ್ಕೂ ನಮ್ಮ—ನಮ್ಮ—...ತಂದೆಗೂ ಏನು ಸಂಬಂಧ ?

ಲೇಡಿ ಬ್ರಿಟೊ : ಮಗು, ಸ್ಟೀವನ್, ದುಡ್ಡು ಎಲ್ಲಿಂದ ಬರಬೇಕೊ ಅಪ್ಪ ? ಒಂದೇ ಮನೇಲಿ ನಾವೆಲ್ಲ ಇರುವವರೆಗೂ ನೀನೂ ಇತರ ಮಕ್ಕಳೂ ನನ್ನ ವರಮಾನದ ಮೇಲೆ ಸುಖವಾಗಿ ಇರಬಹುದು. ನಾಲ್ಕು ಬೇರೆ ಬೇರೆ ಮನೆಗಳಲ್ಲಿ ನಾಲ್ಕು ಸಂಸಾರಗಳನ್ನು ನಾನು ನಡಸಲಾರೆ. ನಮ್ಮ ತಂದೆ ಎಷ್ಟು ಬಡವರು ಅಂತ ನಿನಗೆ ಗೊತ್ತು. ಆತನಿಗೆ ಈಗ ಪೂರ್ತಿ 7000 ಪೌಂಡು ಕೂಡ ಸಿಕ್ಕೋದಿಲ್ಲ—ವರ್ಷಕ್ಕೆ. ವಾಸ್ತವವಾಗಿ ಅವರು ಸ್ಟೀವನೇಜ್ ಶ್ರೀಮಂತರಾಗಿಲ್ಲದಿದ್ದರೆ ಸಮಾಜದ ಸಹವಾಸವನ್ನೇ ಬಿಡಬೇಕಾಗುತ್ತಿತ್ತು. ನಮಗೆ ಅವರೇನೂ ಮಾಡುವ ಹಾಗಿಲ್ಲ. ಸಹಜವಾಗಿಯೇ ಅವರು ಹೇಳುತ್ತಾರೆ: 'ಏನು ಅವಿವೇಕ, ನಿಮ್ಮದು ; ದುಡ್ಡಿನಲ್ಲಿ ಹೊರಳಾಡುತ್ತಿರುವ ಮನುಷ್ಯನ ಮಕ್ಕಳಿಗೆ ಹಣ ಒದಗಿಸು ಎಂದು ನನ್ನ ಕೇಳುತ್ತೀರಲ್ಲ' ಎಂದು ? ನೋಡು, ಸ್ಟೀವನ್, ನಿಮ್ಮ ತಂದೆಗೆ ಲೆಕ್ಕವಿಲ್ಲದಷ್ಟು ಐಶ್ವರ್ಯ ಇರಬೇಕು. ಎಲ್ಲೊ ಒಂದು ಕಡೆ ಯಾವಾಗಲೂ ಯುದ್ಧ ಆಗುತಾನೇ ಇರುತ್ತೆ.

ಸ್ಟೀವನ್ : ನೀನು ಅದನ್ನ ನನ್ನ ನೆನಪಿಗೆ ತರಬೇಕಾಗಿಲ್ಲ ಅಮ್ಮ. ಯಾವ ಪೇಪರ್ ತೆಗೆಯಲಿ ಅಲ್ಲಿ ನಮ್ಮ ಹೆಸರಿಲ್ಲದೆ ಒಂದನ್ನನ್ನ ನನ್ನ ಜೀವಿತ ಕಾಲದಲ್ಲೇ ನೋಡಿಲ್ಲ. ಅಂಡರ್‌ಷಾಫ್ಟ್ ಟಾರ್ಪಿಡೊ ! ಅಂಡರ್‌ಷಾಫ್ಟ್ ಶೀಘ್ರ ದಾಹಕಗಳು ! ಅಂಡರ್‌ಷಾಫ್ಟ್ ಹತ್ತಂಗುಲದ ಫಿರಂಗಿ ! ಅಂಡರ್‌ಷಾಫ್ಟ್ ಕೊತ್ತಳದ, ಅದೃಶ್ಯವಾಗುವ ಕೋವಿ ! ಅಂಡರ್‌ಷಾಫ್ಟ್ ಜಲಾಂತರ್ಗಾಮಿ. ಈಗಲೊ ಅಂಡರ್‌ಷಾಫ್ಟ್ ವಿಮಾನ ಯುದ್ಧ ನೌಕೆ. ಹ್ಯಾರೊ ಅಲ್ಲಿ ನನ್ನನ್ನು 'ವುಲಿಚ್ ಕೂಸು' ಎಂದಿದ್ದರು. ಕೇಂಬ್ರಿಜ್ ಅಲ್ಲೂ ಅದೇ. ಕಿಂಗ್ಸ್ ಕಾಲೇಜ್ ಅಲ್ಲಿ ಚಿಕ್ಕ ಪಶು ಒಬ್ಬ ಆ ಉತ್ಸವ ಈ ಉತ್ಸವ ಎಂದು ಮಾಡಿಸುತ್ತಿದ್ದ. ನನ್ನ ಹುಟ್ಟಿದ ಹಬ್ಬದಲ್ಲಿ ನನಗೆ ನೀನೊಂದು ಬೈಬಲ್ ಕೊಡುಗೆ ಕೊಟ್ಟಿದ್ದೆಯಲ್ಲ ; ಆ ಬೈಬಲನ್ನು ಕೆಡಿಸಿದ. ಅದರಲ್ಲಿ ನನ್ನ ಹೆಸರಿನ ಕೆಳಗೆ ಅಂಡರ್‌ಷಾಫ್ಟ್ ಮತ್ತು ಲಾಜರಸ್—ಇವರ ಮಗ ಮತ್ತು ಉತ್ತರಾಧಿಕಾರಿ ;—ಮರಣದ, ನಾಶದ ವ್ಯಾಪಾರಿಗಳು. ವಿಳಾಸ : ಕ್ರಿಸ್ತ ಲೋಕ ಮತ್ತು ಜುಡೇಯ ಎಂದು. ಆದರೆ ಅದೇನು ಅಷ್ಟು ಕೆಟ್ಟದ್ದಲ್ಲ.

ನಮ್ಮ ತಂದೆ ಫಿರಂಗಿಗಳ ಮಾರಾಟದಿಂದ ಮಿಲಿಯಗಟ್ಟಲೆ ಹಣ ಸಂಪಾದಿಸು ತ್ತಿರುವ ಕಾರಣದಿಂದ ಎಲ್ಲೆಲ್ಲಿಯೂ ನನ್ನನ್ನು ಜನ ಅನುಸರಿಸುತ್ತಿದ್ದ ರೀತಿ ಯನ್ನು ತಡೆಯುವುದು ಹೆಚ್ಚು ಕಷ್ಟವಾಯಿತು.

ಲೇಡಿ ಬ್ರಿಟೊ : ಫಿರಂಗಿಗಳು ಮಾತ್ರ ಅಲ್ಲ. ಫಿರಂಗಿಗಳನ್ನು ಕೊಳ್ಳಲು ಸಾಲ ಕೊಡಿಸುವ ಮರೆಯಲ್ಲಿ ಲಾಜರಸ್ ಏರ್ಪಾಡು ಮಾಡುವ ಯುದ್ಧ ಸಾಲದ ವೈಖರಿ ನೋಡು, ಸ್ಟೀವನ್. ಇದು ತುಂಬಾ ಅಪಕೀರ್ತಿಕರ. ಅಂಡರ್ ಷಾಫ್ಟ್ ಮತ್ತು ಲಾಜರಸ್ ಈ ಇಬ್ಬರೂ ಯುರೋಪನ್ನು ತಮ್ಮ ಹೆಬ್ಬೆರಳ ಕೆಳಗೆ ಇಟ್ಟುಕೊಂಡಿದ್ದಾರೆ. ಆದ್ದರಿಂದಲೇ ನಿಮ್ಮಪ್ಪ ಈಗಿನಂತೆ ನಡೆದು ಕೊಳ್ಳಲು ಶಕ್ಯವಾಗಿರುವುದು. ಆತನು ಕಾನೂನು ಮೀರಿ ಅದರ ಮೇಲೆ ನಿಂತಿದ್ದಾರೆ. ನಿಮ್ಮ ತಂದೆ ಮಾಡಿರುವ ಹಾಗೆ, ಆಜೀವಿತವೂ ಪ್ರಕಟವಾಗಿ ಸಮಾಜದ ಮತ್ತು ಧರ್ಮದ ಎಲ್ಲ ಕರ್ತವ್ಯಗಳನ್ನೂ ನಿರ್ಲಕ್ಷಿಸಿ ನಡೆಯುವುದು ಬಿಸ್ಮಾರ್ಕಿಗಾಗಲಿ, ಗ್ಲಾಡ್‌ಸ್ಟನಿಗಾಗಲಿ, ಡಿಸ್ರೇಲಿಗಾಗಲಿ ಶಕ್ಯವಾಗುತ್ತಿದ್ದಿತೆಂದು ಎಣಿಸುವೆಯೇನು ? ಅವರಿಗೆ ಧೈರ್ಯವಾದರೂ ಹೇಗೆ ಬಂದೀತು. ಗ್ಲಾಡ್‌ಸ್ಟನಿಗೆ ಹೇಳಿದೆ, ನೀವು ಇದನ್ನು ಕೈಗೆ ತೆಗೆದುಕೊಳ್ಳಿ—ಎಂದು. ಟೈಮ್ಸಿಗೆ ಕೇಳಿದೆ, ನೀವಿದನ್ನು ಕೈಗೆ ತೆಗೆದುಕೊಳ್ಳಿ—ಎಂದು. ಲಾರ್ಡ್ ಚೇಂಬರ್ಲಿನ್ ಅವರಿಗೆ ಹೇಳಿದೆ, ನೀವು ತೆಗೆದುಕೊಳ್ಳಿ—ಎಂದು. ಸುಲ್ತಾನರ ಮೇಲೆ ಯುದ್ಧ ಪ್ರಕಟಣೆಮಾಡಿ ಎಂಬುದು ಎಷ್ಟು ನಿಷ್ಪ್ರಯೋಜಕವೊ ಇದೂ ಅಷ್ಟೇ ಆಯಿತು. ಒಲ್ಲೆವು ಎಂದರು. ನಿಮ್ಮಪ್ಪನ್ನ ಮುಟ್ಟುವುದಕ್ಕಾಗುವುದಿಲ್ಲ ಎಂದರು. ಅಷ್ಟು ಹೆದರಿಕೆ ಅವರಿಗೆ—ಅನ್ನಿಸುತ್ತೆ.

ಸ್ಟೀವನ್ : ಅವರೇನು ಮಾಡಬಲ್ಲರು ? ಇವರು ವಾಸ್ತವವಾಗಿ ಕಾನೂನನ್ನು ಮುರಿಯುವುದಿಲ್ಲ.

ಲೇಡಿ ಬ್ರಿಟೊ : ಕಾನೂನು ಮುರಿಯುವುದಿಲ್ಲ ? ಸದಾ ಮುರಿಯುತ್ತಿದ್ದಾರೆ. ಕಾನೂನನ್ನು ಮುರಿದೇ ಆತನು ಹುಟ್ಟಿದ್ದು. ಅವನ ತಂದೆ ತಾಯಿಗಳಿಗೆ ಆಗ ಮದುವೆ ಆಗಿರಲಿಲ್ಲ.

ಸ್ಟೀವನ್ : ಅಮ್ಮಾ, ಇದು ನಿಜವೆ ?

ಲೇಡಿ ಬ್ರಿಟೊ : ನಿಜವಲ್ಲದೆ ಏನು ? ಆದ್ದರಿಂದಲೇ ನಾವು ಬೇರೆ ಬೇರೆ ಆದ್ದು.

ಸ್ಟೀವನ್ : ನಿನಗೆ ಈ ಸಂಗತಿಯನ್ನು ತಿಳಿಸದೆ ಅವರು ನಿನ್ನನ್ನು ಮದುವೆ ಆದರೆ ?

ಲೇಡಿ ಬ್ರಿಟೊ : (ಈ ಅನುಮಾನದಿಂದ ಚಕಿತಳಾಗಿ) ಉಹುಂ—ಅಲ್ಲ. ಆಂಡ್ರ್ಯೂಗೂ ಅನ್ಯಾಯ ಮಾಡಬಾರದು. ಹಾಗಲ್ಲ ಆತನು ಮಾಡಿದ್ದು. ಜೊತೆಗೆ ನಿನಗೆ ಅಂಡರ್‌ಷಾಫ್ಟ್ ಮಂತ್ರ ಗೊತ್ತಿದೆಯಲ್ಲ ! ನಿರ್ಲಜ್ಜ ಎಂಬುದು. ಸಂಗತಿ ಎಲ್ಲರಿಗೂ ಗೊತ್ತಿತ್ತು.

ಸ್ಟೀವನ್ : ನೀವು ಬೇರೆಯಾದ್ದು ಆ ಕಾರಣದಿಂದ ಎಂದೆಯಲ್ಲ ?

ಲೇಡಿ ಬ್ರಿಟೊ : ಹೌದು. ತಾನು ಅಜ್ಞಾತ ಮಾತಾಪಿತೃಗಳ ಮಗ ಎಂಬಷ್ಟರಲ್ಲಿ ಆತನು ತೃಪ್ತಿಪಡಲಿಲ್ಲ. ತಮ್ಮ ಆಸ್ತಿಯನ್ನು ನಿನಗೆ ಕೊಡದೆ ಇನ್ನೊಬ್ಬ ತಮ್ಮಂಥ ಅಜ್ಞಾತ ಜನ್ಮನಿಗೆ ಕೊಡಬಯಸಿದರು. ನಾನು ತಾಳುವುದಕ್ಕಾಗದೆ ಇದ್ದದ್ದು ಅದು.

ಸ್ಟೀವನ್ : (ಅಪಮಾನದಿಂದ) ನೀವು ಅನ್ನುವುದೇನು...ಏನು...

ಲೇಡಿ ಬ್ರಿಟೊ : ಉಗ್ಗಬೇಡ, ಸ್ಟೀವನ್, ಸ್ಫುಟವಾಗಿ ಮಾತನಾಡು.

ಸ್ಟೀವನ್ : ಆದರೆ ಇದು—ಇಂಥ ವಿಷಯವನ್ನು ಕುರಿತು ನಿಮ್ಮೊಡನೆ ಮಾತನಾಡ ಬೇಕಾಗುವುದು ! ಬಹು ಭೀಕರವಾಗಿ ಕಾಣುತ್ತಮ್ಮ.

ಲೇಡಿ ಬ್ರಿಟೊ : ನನಗೂ ಪ್ರಿಯವಲ್ಲ. ಅದರಲ್ಲಿಯೂ ವಿಶೇಷವಾಗಿ ಇನ್ನೂ ಸಣ್ಣ ಮಗುವಿನ ಹಾಗೆ, ನೀನು ಸಂಕೋಚ ಪ್ರದರ್ಶಿಸಿದರೆ ಅದು ಇನ್ನಷ್ಟು ಅಪ್ರಿಯ ವಾಗುತ್ತದೆ. ಲೋಕದಲ್ಲಿ ದುಷ್ಟರಿದ್ದಾರೆ ಎಂದು ಕಂಡುಕೊಂಡಾಗ ಬಾಯಿ ಕಟ್ಟಿ ನಿಸ್ಸಹಾಯವಾಗಿ ಮಧ್ಯಮ ವರ್ಗದ ಜನದಲ್ಲಿ ಮಾತ್ರವೇ ಜನ ಭೀತರಾಗುವುದು. ನಮ್ಮ ವರ್ಗದಲ್ಲಿ—ಕೆಟ್ಟ ಜನರಿಗೆ ಏನು ಮಾಡಬೇಕು ಎಂಬುದನ್ನು ನಾವು ತೀರ್ಮಾನಿಸಬೇಕು. ನಮ್ಮ ಸ್ವಾಸ್ಥ್ಯವನ್ನು ಯಾವುದೂ ಕೆಡಿಸಬಾರದು. ಈಗ ಕ್ರಮವಾಗಿ ನಿನ್ನ ಪ್ರಶ್ನೆಯನ್ನು ಕೇಳು.

ಸ್ಟೀವನ್ : ಅಮ್ಮ ನನ್ನ ಮನಸ್ಸನ್ನು ಕುರಿತು, ನಿಮಗೆ ಯಾವ ದಾಕ್ಷಿಣ್ಯವೂ ಇಲ್ಲವೆ ? ದೇವರಾಣೆಗೂ. ಕೇಳಿ : ನೀವು ಯಾವಾಗಲೂ ಮಾಡೊ ಹಾಗೆ, ನನ್ನನ್ನು ಮಗು ಎಂದೇ ಕಾಣಿ, ನನಗೆ ಏನೂ ಹೇಳಲೇಬೇಡಿ. ಅಥವಾ, ಎಲ್ಲವನ್ನೂ ಹೇಳಿಬಿಡಿ. ನನ್ನ ಕೈಯಲ್ಲಿ ಆಗುವಷ್ಟು ಅದರ ಪರಿಣಾಮವನ್ನು ಅನುಭವಿಸುತ್ತೇನೆ.

ಲೇಡಿ ಬ್ರಿಟೊ : ಮಗುವಿನ ಹಾಗೆ ನಿನ್ನನ್ನು ಕಾಣುವುದು ! ಏನು ಹಾಗೆಂದರೆ ! ದಯೆಯಿಲ್ಲದೆ, ಕೃತಜ್ಞತೆ ಸ್ವಲ್ಪವೂ ಇಲ್ಲದೆ ಹಾಗೆ ಹೇಳಬಾರದು. ನಿಮ್ಮಲ್ಲಿ ಯಾರನ್ನೂ ನಾನು ಎಂದಿಗೂ ಮಕ್ಕಳಂತೆ ಕಂಡಿಲ್ಲವೆಂದು ನೀನು ಬಲ್ಲೆ. ಯಾವಾಗಲೂ ನಿಮ್ಮನ್ನು ಸ್ನೇಹಿತರನ್ನಾಗಿ, ಜೊತೆಗಾರರನ್ನಾಗಿ ನಡಸಿಕೊಂಡಿದ್ದೇನೆ. ಬೇಕಾದ್ದು ಮಾಡಿ, ಬೇಕಾದ್ದು ಹೇಳಿ ಎಂದು ಪೂರ್ತಿ ಸ್ವಾತಂತ್ರ್ಯ ಕೊಟ್ಟಿದ್ದೇನೆ,—ನಾನು ಒಪ್ಪುವಂಥದನ್ನು ನೀವು ಇಷ್ಟಪಡುವವರೆಗೆ.

ಸ್ಟೀವನ್ : (ನಿರಾಶೆಯಿಂದ) ನಾವೇನೊ ಪೂರ್ಣ ಗುಣವಂತಳಾದ ತಾಯಿಯ ನ್ಯೂನಗುಣರಾದ ಮಕ್ಕಳು ಎನ್ನಬಹುದು ಅನ್ನಿ ! ಈ ಒಂದು ಸಲ ನನ್ನಷ್ಟಕ್ಕೆ ನನ್ನನ್ನು ಬಿಡಿ ಎಂದು ಕೇಳಿಕೊಳ್ಳುತ್ತೇನೆ. ನಮ್ಮ ಅಪ್ಪ ಬೇರೊಬ್ಬ ಮಗನ

ಪರವಾಗಿ ನನ್ನನ್ನು ಓಸರಿಸುತ್ತಾರೆ ಎಂಬ ಈ ಅಸಹ್ಯಕರ ಸಂಗತಿಯನ್ನು ಕುರಿತು ಹೇಳಿ.

ಲೇಡಿ ಬ್ರಿಟೊ : (ವಿಸ್ಮಿತಳಾಗಿ) ಬೇರೊಬ್ಬ ಮಗ ! ನಾನೆಂದೂ ಹಾಗೆ ಹೇಳಲಿಲ್ಲ ಮಗು. ಅಂಥಾದ್ದನ್ನು ಕನಸಿನಲ್ಲಿಯೂ ಕಾಣೆ. ನಾನು ಮಾತು ಮುಗಿಸುವ ಮುಂಚೆ ಬಾಯಿ ಹಾಕಿದರೆ ಹೀಗೇ ಆಗುವುದು—

ಸ್ಟೀವನ್ : ನೀವು ಹೇಳಿದಿರಿ,—

ಲೇಡಿ ಬ್ರಿಟೊ : (ಅವನನ್ನು ಅಲ್ಲಿಗೇ ತಡೆದು) ಸ್ಟೀವನ್, ಒಳ್ಳೆಯ ಹುಡುಗನಂತೆ, ಸಾವಧಾನವಾಗಿ ಕೇಳು. ಈ ಊರಲ್ಲಿ ಸೆಂಟ್ ಆಂಡ್ರೂ ಅಂಡರ್‌ಷಾಫ್ಟ್ ಎಂಬ ಕೇರಿ ಇದೆ. ಅದಕ್ಕೆ ಸೇರಿದ ಒಬ್ಬ ಅಜ್ಞಾತ ಕುಲಗೋತ್ರದವನು ಈ ಅಂಡರ್‌ಷಾಫ್ಟ್‌ರಿಗೆ ಮೂಲಪುರುಷ. ಅದು ಬಹುಕಾಲದ ಹಿಂದಿನ ಮಾತು ; ಮೊದಲನೆ ಜೇಮ್ಸ್ ಆಳಿಕೆಯಲ್ಲಿ ಶಸ್ತ್ರಾಸ್ತ್ರಗಳನ್ನೂ ಕೋವಿಯನ್ನೂ ಮಾಡುವ ಒಬ್ಬನು ಈ ತಬ್ಬಲಿಯನ್ನು ಮಗನನ್ನಾಗಿ ಸಾಕಿಕೊಂಡ. ಕಾಲಕ್ರಮದಲ್ಲಿ ಅಪ್ಪನ ಉದ್ಯೋಗಕ್ಕೆ ಈ ತಬ್ಬಲಿಯೇ ಉತ್ತರಾಧಿಕಾರಿಯಾದ. ಅದೇನು ಕೃತಜ್ಞತೆಯ ಭಾವವೊ, ಪ್ರತಿಜ್ಞೆಯೊ, ಇನ್ನೇನೊ, ಎಂತೊ ಇವನು ಇನ್ನೊಬ್ಬ ತಬ್ಬಲಿಯನ್ನು ದತ್ತಕ ತೆಗೆದುಕೊಂಡು ಆ ಉದ್ಯೋಗವನ್ನು ಅವನಿಗೆ ಬಿಟ್ಟ ; ಆ ತಬ್ಬಲಿಯೂ ಹಾಗೇ ಮಾಡಿದ. ಆ ಕಾಲದಿಂದ ಈಚೆಗೆ ಸರ್ವದಾ ಫಿರಂಗಿ ಉದ್ಯೋಗ ಆಂಡ್ರೂ ಅಂಡರ್‌ಷಾಫ್ಟ್ ಎಂಬ ಹೆಸರನ್ನು ತಾಳುವ ದತ್ತು ತೆಗೆದುಕೊಂಡ ಒಬ್ಬ ತಬ್ಬಲಿಗೆ ಬರುತ್ತಿದೆ.

ಸ್ಟೀವನ್ : ಆದರೆ ಅವರು ಎಂದೂ ಮದುವೆಯಾಗಲಿಲ್ಲವೆ ? ಅವರಿಗೆ ನ್ಯಾಯವಾದ ಮಕ್ಕಳಿರಲಿಲ್ಲವೆ ?

ಲೇಡಿ ಬ್ರಿಟೊ : ಓ, ಇದ್ದರು, ನಿಮ್ಮ ತಂದೆಯ ಹಾಗೆಯೇ ಅವರೂ ಮದುವೆ ಆದವರು. ಹಣವಂತನಾದ್ದರಿಂದ ತಮ್ಮ ಮಕ್ಕಳಿಗೂ ಭೂಮಿ ಕಾಣಿ ಕೊಂಡು ಕೊಟ್ಟು ಅವರಿಗೆ ಬೇಕಾದಷ್ಟು ಸ್ಥಿತಿ ಉಂಟುಮಾಡಿಕೊಟ್ಟರು. ಆದರೆ ತಮ್ಮ ಉದ್ಯೋಗಕ್ಕೆ ಯಾವಾಗಲೂ ಒಬ್ಬ ತಬ್ಬಲಿಯನ್ನೇ ದತ್ತು ತೆಗೆದುಕೊಂಡು ಅವನಿಗೆ ತರಬೇತು ಕೊಟ್ಟು, ಉದ್ಯೋಗಕ್ಕೆ ಅವನನ್ನು ಉತ್ತರಾಧಿಕಾರಿಯಾಗಿ ಮಾಡುತ್ತಿದ್ದರು. ತಮ್ಮ ಹೆಂಡತಿಯರ ಕೈಯಲ್ಲಿ ಉಗ್ರವಾಗಿ ಜಗಳವಾಡಿದರು ಎಂದೂ ಇಟ್ಟುಕೊ. ಆ ವಿಷಯದಲ್ಲಿ, ನಿಮ್ಮ ತಂದೆಯೂ ಹಾಗೆಯೇ ಉದ್ಯೋಗಕ್ಕೆ ದತ್ತಾದವರು. ಅದೇ ಸಂಪ್ರದಾಯವನ್ನು ನಡೆಸುವುದು ತಮ್ಮ ಕರ್ತವ್ಯವೆಂದು ನಟಿಸುತ್ತಿದ್ದಾರೆ. ಉದ್ಯೋಗಕ್ಕೆ ಇನ್ನಾರನ್ನೊ ದತ್ತು ತೆಗೆದುಕೊಳ್ಳುತ್ತಾರಂತೆ. ನಾನು ಅದಕ್ಕೆ ಜಪ್ಪಯ್ಯ ಎಂದರೂ ಒಪ್ಪುವುದಿಲ್ಲ ಎಂದೆ. ಹಿಂದಿನ ಕಾಲದಲ್ಲಿ ತಮ್ಮ ವರ್ಗದ ಜನರನ್ನು ಮಾತ್ರ ಮದುವೆಯಾಗುತ್ತಿದ್ದಾಗ

ಅದಕ್ಕೆ ಸಾಕಾದಷ್ಟು ಕಾರಣ ಇದ್ದಿರಬಹುದು. ಅವರ ಹೊಟ್ಟೆಯಲ್ಲಿ ಹುಟ್ಟಿದ ಅಂಥ ಮಕ್ಕಳು ದೊಡ್ಡ ಆಸ್ತಿಯನ್ನು ಆಳಲು ಯೋಗ್ಯರಲ್ಲದಿರಬಹುದು. ನನ್ನ ಮಗನ ಹಕ್ಕನ್ನು ಅಪಹರಿಸಲು ಯಾವ ಕಾರಣವೂ ಇರಲಾರದು.

ಸ್ಟೀವನ್ : (ಸಂದೇಹದಿಂದ) ಫಿರಂಗಿ ಎರಕ ಹುಯ್ಯುವ ಕಾರ್ಖಾನೆಯ ಆಡಳಿತವನ್ನು ನಡಸಲು ನನಗೆ ಶಕ್ತಿ ಇರುತ್ತದೆಯೊ ಇಲ್ಲವೊ ಕಾಣೆ.

ಲೇಡಿ ಬ್ರಿಟೊ : ನಾನ್ಸೆನ್ಸ್, ಯಾವನಾದರೂ ಒಬ್ಬ ಮ್ಯಾನೇಜರ್ ಸಿಗುತ್ತಾನೆ. ಸಂಬಳ ಕೊಟ್ಟರೆ ಆ ಕೆಲಸ ಮಾಡುತಾನೆ.

ಸ್ಟೀವನ್ : ನಮ್ಮ ಅಪ್ಪನಿಗೆ ನನ್ನ ಯೋಗ್ಯತೆಯ ವಿಚಾರದಲ್ಲಿ ಯಾವ ಒಳ್ಳೆಯ ಅಭಿಪ್ರಾಯವೂ ಇರಲಿಲ್ಲವೆಂದು ಕಾಣುತ್ತೆ.

ಲೇಡಿ ಬ್ರಿಟೊ : ಬುದ್ಧಿ ಇಲ್ಲದ ಮಾತನಾಡಬೇಡ. ನೀನಿನ್ನೂ ಸಣ್ಣವ. ಅದು ನಿನ್ನ ಶಕ್ತಿ ಸಾಮರ್ಥ್ಯವನ್ನು ಕುರಿತದ್ದೂ ಅಲ್ಲ. ಏನೊ ತತ್ವವಂತೆ ; ತಾವು ಮಾಡಿದ ಪ್ರತಿಯೊಂದು ವಿಪರೀತದಂತೆ, ದುಷ್ಕಾರ್ಯದಂತೆ ಇದನ್ನೂ ಒಂದು ತತ್ವವನ್ನನುಸರಿಸಿಯೇ ಮಾಡಿದ್ದು ಎಂದರು ಆಂಡ್ರೂ. ನಮ್ಮ ತಂದೆ ಅದನ್ನು ವಿರೋಧಿಸಿದರು. ಆಂಡ್ರೂ ನೇರ ಹೇಳಿದರು ಆತನಿಗೆ—ಚರಿತ್ರೆಯಲ್ಲೆಲ್ಲ ಜಯ ಸಾಧಿಸಿದ ಸಂಸ್ಥೆಗಳು ಎರಡು ಮಾತ್ರ. ಒಂದು ಅಂಡರ್‌ಷಾಫ್ಟ್ ಉದ್ಯೋಗ ; ಇನ್ನೊಂದು—ಆಂಟೊನೈನ್ ಚಕ್ರಾಧಿಪತ್ಯ. ಆ ಚಕ್ರಾಧಿಪತ್ಯ ಊರ್ಜಿತವಾದ್ದಕ್ಕೆ ಆ ಚಕ್ರಾಧಿಪತಿಗಳು ತಮ್ಮ ಉತ್ತರಾಧಿಕಾರಿಗಳನ್ನು ದತ್ತು ತೆಗೆದುಕೊಂಡುದು ಕಾರಣವಂತೆ ! ಅಂಥದೇ ಅರ್ಥವಿಲ್ಲದ ಮಾತು. ಸ್ಟೀವನೇಜ್ ಮನೆಯವರು ಆಂಟೊನೈನ್ಸ್ ಅಷ್ಟಾದರೂ ಒಳ್ಳೆಯ ಕುಲ ಎಂದುಕೊಂಡಿದ್ದೇನೆ. ನೀನು ಒಬ್ಬ ಸ್ಟೀವನೇಜ್. ಆದರೆ ಆಂಡ್ರು ಸ್ವಭಾವ ಅವರದೇ. ಆ ಮನುಷ್ಯ ಹಾಗೇ. ಯಾವಾಗಲೂ ಬುದ್ಧಿವಂತಿಕೆ. ಅವಿವೇಕ, ಕೆಟ್ಟತನ ಎನ್ನುವುದರ ಪರವಾಗಿ ವಾದಮಾಡುವುದರಲ್ಲಿ ಅವರಿಗೆ ಉತ್ತರ ಕೊಡುವುದು ಶಕ್ಯವಿಲ್ಲ. ವಿವೇಕದಿಂದ, ಮರ್ಯಾದೆಯಿಂದ ನಡೆಯಬೇಕಾದಾಗ ಯಾವಾಗಲೂ ವಕ್ರವೇ, ದುಮ್ಮಾನವೇ.

ಸ್ಟೀವನ್ : ಹಾಗಿದ್ದರೆ, ನಿಮ್ಮ ಗೃಹಜೀವನ ಒಡೆದುಹೋದದ್ದು ನನ್ನ ಕಾರಣದಿಂದ ಅನ್ನಿ, ಅಮ್ಮ. ನನಗೆ ತುಂಬಾ ವ್ಯಥೆಯಾಗುತ್ತದೆ.

ಲೇಡಿ ಬ್ರಿಟೊ : ಇತರ ಭಿನ್ನಾಭಿಪ್ರಾಯಗಳೂ ಇದ್ದವು ಅನ್ನು. ಅಧರ್ಮಿಯಾದ ಮನುಷ್ಯನನ್ನು ಕಂಡರೆ ನನಗೆ ನಿಜವಾಗಿ ಸಹನೆ ಇಲ್ಲ. ನಾನೇನು ಧರ್ಮ ಜಡಳಲ್ಲ ಎಂದುಕೊಂಡಿದ್ದೇನೆ. ಆತ ಸುಮ್ಮನೆ ತಪ್ಪು ಕೆಲಸಗಳನ್ನು ಮಾಡುತಿದ್ದರೆ ನಾನು ಮನಸ್ಸಿಗೆ ಹಚ್ಚಿಕೊಳ್ಳುತ್ತಿರಲಿಲ್ಲ. ನಾವು ಯಾರೂ ಪೂರ್ಣಗುಣರಲ್ಲ. ನಿಮ್ಮ ಅಪ್ಪ ಖಚಿತವಾಗಿ ತಪ್ಪು ಕೆಲಸಗಳನ್ನು ಮಾಡಲೂ ಇಲ್ಲ. ತಪ್ಪು ನುಡಿಯುತ್ತಿ

ದ್ದರು ; ತಪ್ಪುಯೋಚನೆ ಮಾಡುತ್ತಿದ್ದರು. ಅಷ್ಟು ಭಯಂಕರ ಅದು. ಆತನ ಮತಧರ್ಮವೂ ಒಂದು ಬಗೆಯಲ್ಲಿ ತಪ್ಪೇ. ತಪ್ಪು ಮಾಡುವವರು ತಾವು ಮಾಡುವುದು ಅನೀತಿ ಎಂದು ಒಪ್ಪಿಕೊಂಡರೆ ಮನಸ್ಸಿಗೆ ಅಹಿತವಾಗುವುದಿಲ್ಲ. ಅಂಥವರು ಧರ್ಮ ಪ್ರಚಾರ ಮಾಡಿದರಾಯಿತು. ಆಂಡ್ರ್ಯು ಏನು ಮಾಡಿದರು ಎನ್ನುತೀಯೆ ? ನಡವಳಿಕೆಯಲ್ಲಿ ಧರ್ಮಿಷ್ಠರಾಗಿರುತ್ತ ಅನೀತಿಯನ್ನು ಪ್ರಚಾರ ಮಾಡಿದರು. ಅವರು ಈ ಮನೆಯಲ್ಲಿ ಇದ್ದಿದ್ದರೆ, ನೀವು ಯಾರೂ ಯಾವ ತತ್ತ್ವವನ್ನೂ ನೇಮವನ್ನೂ ಕಲಿತು ಬೆಳೆಯುವುದಕ್ಕಾಗುತ್ತಿರಲಿಲ್ಲ. ಸರಿ, ತಪ್ಪು ಎಂಬ ತಿಳಿವಳಿಕೆ ನಿಮಗೆ ಇರುತ್ತಿರಲಿಲ್ಲ. ನಾನು ಹೇಳುತೇನೆ ಮಗು, ನಿಮ್ಮ ಅಪ್ಪ ಕೆಲವು ವಿಷಯಗಳಲ್ಲಿ ತುಂಬಾ ಮನಸ್ಸಿಗೆ ಬರುವಂಥ ಮನುಷ್ಯರು. ಮಕ್ಕಳಿಗೆ ಅವರನ್ನು ಕಂಡರೆ ಅಪ್ರೀತಿಯಿಲ್ಲ. ಇದನ್ನು ಅವರು ಹೇಗೆ ಬಳಸಿ ಕೊಂಡರು ಅಂತೀಯೆ ? ಮಕ್ಕಳ ತಲೆಯಲ್ಲಿ ದುಷ್ಟ ಅಭಿಪ್ರಾಯಗಳನ್ನು ತುಂಬಿ ದರು, ಮಕ್ಕಳು ಕೈಗೆ ಸಿಕ್ಕದೆ ಹೋಗುವಷ್ಟು. ನನಗೂ ಆತನನ್ನು ಕಂಡರೆ ಮೆಚ್ಚಿಗೆ ಇಲ್ಲ ಅಂತಲ್ಲ ; ಸತ್ಯ ಅದಕ್ಕಿಂತ ತುಂಬಾ ದೂರ. ಆದರೆ ಧಾರ್ಮಿಕ ಭಿನ್ನಾಭಿಪ್ರಾಯವನ್ನು ಯಾವ ಸೇತುವೂ ಕಟ್ಟಲಾರದು.

ಸ್ಟೀವನ್ : ಇದನ್ನೆಲ್ಲ ಕೇಳಿ ನನಗೆ ದಿಗ್ಭ್ರಮೆ ಉಂಟಾಗುತ್ತದಮ್ಮ. ಜನರ ಅಭಿ ಪ್ರಾಯದಲ್ಲಿ ವ್ಯತ್ಯಾಸ ಇರಬಹುದು. ಮತಧರ್ಮದ ವಿಷಯದಲ್ಲಿಯೂ ಇರಬಹುದು. ಆದರೆ ಸರಿ ತಪ್ಪುಗಳ ವಿಷಯದಲ್ಲಿ ಹೇಗಾದೀತು? ಸರಿ ಸರಿಯೇ. ತಪ್ಪು ತಪ್ಪೇ. ಅವುಗಳನ್ನು ವಿವೇಚಿಸಲಾರದ ಮನುಷ್ಯ ಒಂದೇ, ಬುದ್ಧಿ ಇಲ್ಲದವ ; ಇಲ್ಲವೇ, ವಂಚಕ ಅಷ್ಟೇ.

ಲೇಡಿ ಬ್ರಿಟೊ : (ಮನಸ್ಸು ಕರಗಿ) ಅದು ನನ್ನ ಮಗುವಿನ ಮಾತು (ಅವನ ಕೆನ್ನೆ ಯನ್ನು ತಟ್ಟುತ್ತಾಳೆ) ನಿಮ್ಮಪ್ಪ ಯಾವೊತ್ತೂ ಅದಕ್ಕೆ ಉತ್ತರಕೊಡಲಾರದವ ರಾಗಿದ್ದರೂ ನಕ್ಕುಬಿಡುತ್ತಿದ್ದರು. ಪ್ರೀತಿಯ ಅವಿವೇಕದ ಮರೆಯಲ್ಲಿ ಅದರಿಂದ ತಪ್ಪಿಸಿಕೊಳ್ಳುತ್ತಿದ್ದರು. ಸನ್ನಿವೇಶ ಈಗ ನಿನಗೆ ಅರ್ಥವಾಗಿರಬೇಕಲ್ಲ ! ನಾನು ಏನು ಮಾಡಬೇಕು ಎಂದು ನಿನ್ನ ಸಲಹೆ ?

ಸ್ಟೀವನ್ : ಸರಿ... ನೀವು ಏನು ಮಾಡಬಲ್ಲಿರಿ ?

ಲೇಡಿ ಬ್ರಿಟೊ : ಹೇಗೋ ; ಹಣ ಬೇಕು ನನಗೆ.

ಸ್ಟೀವನ್ : ಅವರಿಂದ ಹಣ ತೆಗೆದುಕೊಳ್ಳಬಾರದು. ಇಲ್ಲಿಂದ ಹೋಗಿ ಅಗ್ಗವಾದ ಬೆಡ್‌ಫರ್ಡ್ ಚೌಕದಂಥಲ್ಲಿಯೊ ಹ್ಯಾಮ್ಪ್‌ಸ್ಟೆಡ್ ಅಂಥಲ್ಲಿ ಆದರೂ ಸರಿಯೆ— ಬದುಕಿಯೇನೇ ಹೊರತು ಆತನ ಹಣದಲ್ಲಿ ಒಂದು ಫಾರ್ದಿಂಗ್ ತೆಗೆದುಕೊಳ್ಳ ಬೇಕು ಎನ್ನಿಸುವುದಿಲ್ಲ.

ಲೇಡಿ ಬ್ರಿಟೊ : ಆದರೆ ಸ್ಟೀವನ್, ನಮ್ಮ ಈಗಿನ ವರಮಾನವೆಲ್ಲ ಆಂಡ್ರ್ಯು ಅವರಿಂದಲೇ ಬರುವುದಲ್ಲವೆ ?

ಸ್ಟೀವನ್ : (ಧಕ್ಕೆ ಪಡೆದವನಂತೆ) ನನಗದು ಗೊತ್ತೇ ಇರಲಿಲ್ಲ.

ಲೇಡಿ ಬ್ರಿಟೊ : ನನಗೆ ಕೊಡಲು ನಿಮ್ಮ ಅಜ್ಜನ ಕೈಯಲ್ಲಿ ಏನಾದರೂ ಇತ್ತು ಅಂತ ನೀನು ಖಂಡಿತವಾಗಿ ತಿಳಿದುಕೊಂಡಿರಲಾರೆ. ಸ್ಟೀವನೇಜ್ ಮನೆತನ ನಿಮಗೆ ಎಲ್ಲವನ್ನೂ ಮಾಡುವುದಕ್ಕಾಗುವುದೆ ? ನಾವು ನಿಮಗೆ ಸಮಾಜದಲ್ಲಿ ಸ್ಥಾನ, ಮಾನ ತಂದುಕೊಟ್ಟೆವು. ಆಂಡ್ರ್ಯು ತನ್ನ ಭಾಗವಾಗಿ ಏನಾದರೂ ತೆರಬೇಕೊ ಇಲ್ಲವೊ. ಈ ವ್ಯಾಪಾರದಲ್ಲಿ ಆತನಿಗೆ ಲಾಭವೇ ಆಯಿತು ಎನ್ನಿಸುತ್ತೆ.

ಸ್ಟೀವನ್ : (ಕಹಿಯಾಗಿ) ಆದರೆ ಆತನ ಮೇಲೆ, ಆತನ ಫಿರಂಗಿ ಮೇಲೆ ನಾವು ಪೂರ್ತಿ ಹೊಂದಿಕೊಂಡಿದ್ದೇವೆ ಅನ್ನಿ.

ಲೇಡಿ ಬ್ರಿಟೊ : ಖಂಡಿತ ಅಲ್ಲ. ಹಣ ನನ್ನ ಹೆಸರಿಗೆ ಬರೆದು ಕೊಟ್ಟಿದ್ದಾರೆ. ಹಣ ಒದಗಿಸಿದವರೇನೊ ಅವರು. ಆದ್ದರಿಂದ ಆತನಿಂದ ಹಣ ತೆಗೆದುಕೊಳ್ಳುವುದು, ಬಿಡುವುದು ಅಲ್ಲ ಪ್ರಶ್ನೆ. ಎಷ್ಟು ಎನ್ನುವುದು ಮಾತ್ರ. ಸ್ವಂತಕ್ಕೆ ನನಗೆ ಈಗಿಗಿಂತ ಹೆಚ್ಚೇನೂ ಬೇಕಾಗಿಲ್ಲ.

ಸ್ಟೀವನ್ : ನನಗೂ ಅಷ್ಟೇ.

ಲೇಡಿ ಬ್ರಿಟೊ : ಆದರೆ ಶಾರಾಗೆ ಬೇಕು ; ಬಾರ್ಬರಾಗೆ ಬೇಕು. ಎಂದರೆ, ಚಾರ್ಲ್ಸ್ ಲೋಮ್ಯಾಕ್ಸ್ ಮತ್ತು ಅಡಾಲ್ಫಸ್ ಕಸಿನ್ಸರಿಂದ ಅವರ ವೆಚ್ಚ ಹೆಚ್ಚುತ್ತೆ. ಆದ್ದರಿಂದ ಅಭಿಮಾನವನ್ನು ನುಂಗಿಕೊಂಡು ಆತನನ್ನು ಕೇಳಬೇಕು ಅನ್ನಿಸುತ್ತೆ. ಅದು ನಿನ್ನ ಸಲಹೆಯೂ ಅಲ್ಲವೆ, ಸ್ಟೀವನ್ ?

ಸ್ಟೀವನ್ : ಅಲ್ಲ.

ಲೇಡಿ ಬ್ರಿಟೊ : ಸ್ಟೀವನ್ !

ಸ್ಟೀವನ್ : ನೀವು ನಿರ್ಧಾರ ಮಾಡಿಬಿಟ್ಟಿದ್ದರೆ—

ಲೇಡಿ ಬ್ರಿಟೊ : ನನ್ನ ನಿರ್ಧಾರ ಅಲ್ಲ. ನಾನು ನಿನ್ನ ಸಲಹೆ ಕೇಳುತ್ತಿದ್ದೇನೆ. ಅದಕ್ಕೆ ಕಾದಿದ್ದೇನೆ. ಅದರ ಜವಾಬ್ದಾರಿ ಪೂರ್ತಿ ನನ್ನ ತಲೆಯ ಮೇಲೆ ಬೀಳಬಾರದು.

ಸ್ಟೀವನ್ : (ಮೊಂಡುತನದಿಂದ) ನನಗೇನೊ ಆತನಿಂದ ಇನ್ನೊಂದು ಪೆನ್ನಿ ಹೆಚ್ಚಾಗಿ ಕೇಳೋದಕ್ಕಿಂತ ಸಾಯುವುದು ಮೇಲು ಎನ್ನಿಸುತ್ತದೆ.

ಲೇಡಿ ಬ್ರಿಟೊ : (ವಿರಕ್ತಿಯಿಂದ) ನೀನು ಅನ್ನುವುದು ಏನು ? ನಾನೇ ಕೇಳಬೇಕು ಎಂದು ತಾನೆ ? ಆಗಲಿ ಸ್ಟೀವನ್. ನಿನ್ನಿಷ್ಟದಂತೆ ಆಗಲಿ. ನಿಮ್ಮಜ್ಜನೂ ಇದಕ್ಕೆ ಒಪ್ಪುತ್ತಾರೆ ಎಂದು ಕೇಳಿ ನಿನಗೆ ಸಂತೋಷ ಆಗಬಹುದು. ಆದರೆ ಅವರ ಮನಸ್ಸಿನಲ್ಲಿ ನಾನು ಆಂಡ್ರ್ಯೂನ ಇಲ್ಲಿಗೆ ಕರೆಯಬೇಕು. ಆತನು ಹುಡುಗಿ

ಯರನ್ನು ನೋಡಬೇಕು ಎಂದು. ಎಷ್ಟೇ ಆಗಲಿ ಅವರಿಗೂ ಇವರಲ್ಲಿ ಸಹಜ ವಾದ ಪ್ರೀತಿ ಇರಬೇಕು.

ಸ್ಟೀವನ್ : ಅವರನ್ನು ಇಲ್ಲಿಗೆ ಬರಹೇಳುವುದು ! ! !

ಲೇಡಿ ಬ್ರಿಟೊ : ನನ್ನ ಮಾತನ್ನೇ ಪುನಃ ಪುನಃ ನೀನು ನುಡಿಯಬೇಡ ಸ್ಟೀವನ್. ಅವರನ್ನ ಬೇರೆ ಎಲ್ಲಿಗೆ ಕರೆಯಲಿ ?

ಸ್ಟೀವನ್ : ಅವರನ್ನು ಕರೆಯುತ್ತೀರೆಂದು ನಾನು ನಿರೀಕ್ಷಿಸಲಿಲ್ಲ.

ಲೇಡಿ ಬ್ರಿಟೊ : ಈಗ ನೋಡು, ಸ್ಟೀವನ್—ನನ್ನ ಕಾಡಬೇಡ. ಆತನು ನಮ್ಮನ್ನೆಲ್ಲ ಒಂದು ಸಲ ನೋಡಿಕೊಂಡು ಹೋಗಬೇಕು. ನಿನಗೂ ಅಗತ್ಯ ಅನ್ನಿಸುವುದಿಲ್ಲವೆ?

ಸ್ಟೀವನ್ : (ಇಷ್ಟವಿಲ್ಲದೆ) ಆಗಬೇಕೇನೊ. ಆತನ ದುಡ್ಡನ್ನು ತೆಗೆದುಕೊಳ್ಳದಿರಲು ಹುಡುಗಿಯರಿಗೆ ಶಕ್ಯವಾಗದೆ ಹೋದರೆ.

ಲೇಡಿ ಬ್ರಿಟೊ : ತುಂಬಾ ಉಪಕಾರ ಆಯಿತು, ಸ್ಟೀವನ್. ಸ್ಥಿತಿಯನ್ನು ಸರಿ ಯಾಗಿ ವಿವರಿಸಿದರೆ ನೀನು ಸರಿಯಾದ ಸಲಹೆ ಕೊಡುತ್ತೀ ಎಂದು ನನಗೆ ಗೊತ್ತಿತ್ತು. ಸಂಜೆಗೆ ಬನ್ನಿ ಎಂದು ನಿಮ್ಮಪ್ಪನನ್ನು ಕರೆದಿದ್ದೇನೆ. (ಸ್ಟೀವನ್ ತನ್ನ ಪೀಠದಿಂದ ಎಗರುತ್ತಾನೆ) ಎಗರಬೇಡ ಸ್ಟೀವನ್. ಎಗರದೆ ಇದ್ದರೆ ನನಗೆ ಅದು ನೆಮ್ಮದಿ ಕೊಡುತ್ತದೆ.

ಸ್ಟೀವನ್ : (ಪೂರ್ತಿ ವಿಸ್ಮಿತನಾಗಿ) ನೀವು ಹೇಳುವುದು ಏನು ಅಮ್ಮ ? ನನ್ನ ತಂದೆ ಈ ರಾತ್ರಿ ಇಲ್ಲಿಗೆ ಬರುತ್ತಾರೆ, ಎಂದೆ ? ಇಲ್ಲಿಗೆ ಯಾವ ಕ್ಷಣದಲ್ಲಿಯಾದರೂ ಬರಬಹುದು ಎಂದೆ ?

ಲೇಡಿ ಬ್ರಿಟೊ : (ಗಡಿಯಾರದ ಕಡೆ ನೋಡುತ್ತ) ಒಂಬತ್ತು ಎಂದೆ. (ಸ್ಟೀವನ್ ಮೇಲುಸಿರು ಬಿಡುತ್ತಾನೆ. ಆಕೆ ಏಳುತ್ತಾಳೆ.) ಗಂಟೆ ಶಬ್ದ ಮಾಡಪ್ಪ—

ಸ್ಟೀವನ್ : (ಸಣ್ಣ ಮೇಜಿಗೆ ಹೋಗಿ ಸಣ್ಣ ಗಂಟೆಯ ಗುಂಡಿಯನ್ನು ಅದುಮುತ್ತಾನೆ. ಅದರ ಮೇಲೆ ಮೊಳಕೈ ಊರಿ, ತಲೆಯನ್ನು ತನ್ನ ಕೈಯಲ್ಲಿಟ್ಟು ತನ್ನ ಬುದ್ಧಿಗೆ ಮೀರಿದ ಸ್ಥಿತಿಯಲ್ಲಿ, ಪೂರ್ತಿ ಸೋತು ಇದ್ದಾನೆ) ಇನ್ನೂ ಒಂಬತ್ತಕ್ಕೆ ಹತ್ತು ನಿಮಿಷ ಇದೆ. ಹುಡುಗಿಯರ ಮನಸ್ಸನ್ನ ಸಿದ್ಧಪಡಿಸಬೇಕಾಗಿದೆ. ಅವರಿಲ್ಲಿಗೆ ಬಂದಿರಲಿ ಎಂದು ಚಾರ್ಲ್ಸನ್ನೂ ಅಡಾಲ್ಫಸ್ಸನ್ನೂ ಊಟಕ್ಕೆ ಕರೆದಿದ್ದೇನೆ. ಅವರು ತಮ್ಮ ಹೆಂಡತಿಯರನ್ನು ಸಾಕುವ ಸಾಮರ್ಥ್ಯದ ವಿಷಯದಲ್ಲಿ ಹುಡುಗಿಯರ ತಂದೆಗೆ ಏನಾದರೂ ಭ್ರಾಂತಿಗಳು ಇದ್ದರೆ ಕಣ್ಣಾರ ನೋಡಿ ಕಂಡುಕೊಳ್ಳಲಿ ಎಂದು.

(ಬಟ್ಲರ್ ಪ್ರವೇಶಿಸುತ್ತಾನೆ. ಲೇಡಿ ಬ್ರಿಟೊ ಅವನೊಂದಿಗೆ ಮಾತ ನಾಡಲು ಹಿಂದಕ್ಕೆ ಸರಿಯುತ್ತಾಳೆ.) ಮಾರಿಸನ್, ದಿವಾನಖಾನೆಗೆ ಹೋಗಿ, ಎಲ್ಲರಿಗೂ ಹೇಳು–ಕೂಡಲೇ ಇಲ್ಲಿಗೆ ಬರಬೇಕೆಂದು. (ಮಾರಿಸನ್ ನಿಷ್ಕ್ರಮಣ)

ಲೇಡಿ ಬ್ರಿಟೊ : (ಸ್ಟೀವನ್ ಕಡೆಗೆ ತಿರುಗಿ) ಇದನ್ನು ನೆನಪಿಡು ಸ್ಟೀವನ್, ನಿನ್ನ ಮುಖ ಸಹಾಯವೂ ಅಧಿಕಾರವೂ ನನಗೆ ಪೂರ್ತಿ ಬೇಕು. (ಈ ಲಕ್ಷಣಗಳ ಅಂಶ ವೇನಾದರೂ ತನ್ನಲ್ಲಿದ್ದರೆ ಅದನ್ನು ಪಡೆದುಕೊಳ್ಳಲು ಯತ್ನಿಸುತ್ತ ಏಳುತ್ತಾನೆ.) ನನಗೆ ಒಂದು ಕುರ್ಚಿ ಕೊಡು ಮಗು. (ಗೋಡೆಯ ಹತ್ತಿರದ ಒಂದನ್ನು ಆಕೆ ನಿಂತಿರುವ ಕಡೆಗೆ ನೂಕುತ್ತಾನೆ.) ಬಾರ್ಬರ ಇದನ್ನು ಹೇಗೆ ತೆಗೆದುಕೊಳ್ಳುವಳೊ ಕಾಣೆ. ಅವಳನ್ನು ಮುಕ್ತಿಚಮೂದಲ್ಲಿ ಮೇಜರ್ ಮಾಡಿದಂದಿನಿಂದ ತನ್ನ ದಾರಿ ತಾನು ಹಿಡಿಯುವ ಸ್ವಭಾವವನ್ನು ಬೆಳಸಿದ್ದಾಳೆ. ಜನಗಳಿಗೆ ಅಪ್ಪಣೆ ಕೊಡುತ್ತಾಳೆ. ಕೆಲವೇಳೆ ನನಗೇ ಅದು ಬಾಯಿ ಕಟ್ಟುತ್ತೆ. ಇದು ಶ್ರೀಮಂತ ಮಹಿಳೆಯ ರೀತಿಯಲ್ಲ. ಅವಳಿಗೆ ಎಲ್ಲಿಂದ ಬಂತೊ ಈ ವಿದ್ಯೆ. ಹೇಗೇ ಆಗಲಿ ಬಾರ್ಬರ ನನ್ನ ಮೇಲೆ ಸವಾರಿ ಮಾಡಲು ಬಿಡುವುದಿಲ್ಲ. ಆದರೂ ಆತನನ್ನು ತಾನು ನೋಡುವುದಿಲ್ಲ ಎಂದು ನಿರಾಕರಿಸುವುದಕ್ಕೂ ಸಮಯ ದೊರೆಯುವುದ ರೊಳಗಾಗಿ ನಿಮ್ಮ ತಂದೆ ಇಲ್ಲಿಗೆ ಬಂದಿದ್ದರಾಗಿತ್ತು. ಬುದ್ಧಿಸ್ಥೈರ್ಯ ಕಳೆದು ಕೊಂಡ ಹಾಗೆ ಕಾಣಬೇಡ, ಸ್ಟೀವನ್. ಹಾಗೆ ಮಾಡಿದರೆ ಬಾರ್ಬರ ಹೆಚ್ಚು ತಕರಾರು ಮಾಡಲು ಉತ್ತೇಜನ ಕೊಟ್ಟಂತೆ ಮಾತ್ರ ಆಗುತ್ತದೆ. ದೇವರಿಗೆ ಗೊತ್ತು : ನನಗೂ ಸಾಕಷ್ಟು ಕಸಿವಿಸಿಯಾಗಿದೆ. ನಾನದನ್ನು ತೋರಿಸಿ ಕೊಳ್ಳುತ್ತಿಲ್ಲ.

(ಶಾರ, ಬಾರ್ಬರ, ತಮ್ಮ ಗಂಡುಗಳಾದ ಚಾರ್ಲ್ಸ್ ಲೋಮ್ಯಾಕ್ಸ್ ಮತ್ತು ಅಡಾಲ್ಫಸ್ ಕಸಿನ್ಸರ ಜೊತೆಯಲ್ಲಿ ಬರುತ್ತಾರೆ. ಶಾರ ತೆಳ್ಳಗಿದ್ದಾಳೆ. ಯಾವುದರಲ್ಲಿಯೂ ಹೆಚ್ಚು ಆಸಕ್ತಿ ಇಲ್ಲ ; ಲೌಕಿಕ ದೃಷ್ಟಿಯವಳು. ಫ್ಯಾಷನಬಲ್ ಆಗಿ ಉಡುಪನ್ನು ಹಾಕಿ ದ್ದಾಳೆ. ಬಾರ್ಬರ ಗಟ್ಟಿಮುಟ್ಟಾಗಿದ್ದಾಳೆ. ತನ್ನ ದಳದ ಸಮವಸ್ತ್ರದಲ್ಲಿದ್ದಾಳೆ. ಲೋಮ್ಯಾಕ್ಸ್ – ನಾಗಕರಿಕ ಯುವಕ. ಉಪಹಾಸಶೀಲ ನಡತೆಯುವ. ಸಮಯಾಸಮಯ ಲಕ್ಷಿಸದೆ ವಿನೋದದಿಂದ ನಕ್ಕುಬಿಡುವವನು. ಕಸಿನ್ಸ್ ಕನ್ನಡಕ ಹಾಕಿದ ವಿದ್ಯಾರ್ಥಿ. ಇಂಪಾದ ಧ್ವನಿ. ಬುದ್ಧಿವಂತಿಕೆಯೂ ಸೂಕ್ಷ್ಮವೂ ಅವನ ರಸಿಕತನದಲ್ಲಿವೆ. ಸ್ವಾಸ್ಥ್ಯ ಅಷ್ಟಕ್ಕಷ್ಟೇ. ಏನೇ ಆಗಲಿ ಬಾರ್ಬರಳನ್ನು ಮದುವೆಯಾಗಬೇಕೆಂದಿದ್ದಾನೆ. ಲೋಮ್ಯಾಕ್ಸಿಗೆ ಶಾರ ಮೇಲೆ ಪ್ರೀತಿ, ಅವಳನ್ನು ಕಂಡರೆ ಹರ್ಷ. ಲೇಡಿ ಬ್ರಿಟೊವಿನ ಏರ್ಪಾಡಿಗೆ ಅಡ್ಡಿ ಮಾಡದೆ ಇದ್ದಾನೆ. ದಿವಾನ ಖಾನೆಯಲ್ಲಿ ಎಲ್ಲರೂ ತುಂಬಾ ವಿನೋದಗೊಂಡಿದ್ದಂತೆ ಕಾಣುತ್ತಾರೆ. ಹುಡುಗಿಯರು ಮೊದಲು ಬರುತ್ತಾರೆ, ಗಂಡುಗಳು ಹಿಂದೆ ಬರುತ್ತಾರೆ. ಶಾರ ಮುಂದೆ, ಬಾರ್ಬರ ಹಿಂದೆ.)

ಬಾರ್ಬರ : ಡಾಲ್ಲಿ ಚಾಲ್ಲಿ ಒಳಗೆ ಬರಬಹುದೇನು ?

ಲೇಡಿ ಬ್ರಿಟೊ : (ಬಿಗಿಯಾಗಿ) ಬಾರ್ಬರ, ಚಾರ್ಲ್ಸ್‌ನ್ನು ಚಾಲ್ಲಿ ಎಂದು ಕರೆಯ ಬೇಡಮ್ಮ. ಆ ಗ್ರಾಮ್ಯತೆ ಕಂಡರೆ ನನಗೆ ನಿಜವಾಗಿ ತಲೆ ಬೇಸರವಾಗುತ್ತೆ.

ಬಾರ್ಬರ : ಈಗಿನ ಕಾಲದಲ್ಲಿ ಚಾಲ್ಲಿ ಎನ್ನುವುದು ತಪ್ಪಲ್ಲಮ್ಮ. ಅವರು ಒಳಗೆ ಬರಬೇಕೇನು ?

ಲೇಡಿ ಬ್ರಿಟೊ : ಹುಂ ; ಸರಿಯಾಗಿ ನಡೆದುಕೊಳ್ಳುವ ಹಾಗಿದ್ದರೆ.

ಬಾರ್ಬರ : (ಬಾಗಿಲ ಮೂಲಕ) ಒಳಗೆ ಬಾ, ಡಾಲ್ಲಿ. ಸರಿಯಾಗಿ ನಡಕೊ.

(ತನ್ನ ತಾಯಿಯು ಬರೆಯುವ ಮೇಜಿನ ಬಳಿಗೆ ಬರುತ್ತಾಳೆ. ಕಸಿನ್ಸ್ ಮುಗುಳು ನಗೆಯೊಡನೆ ಪ್ರವೇಶಿಸಿ, ಹಾಗೂ ಹೀಗೂ ಲೇಡಿ ಬ್ರಿಟೊ ಬಳಿಗೆ ಬರುತ್ತಾನೆ.)

ಶಾರ : (ಕರೆಯುತ್ತ) ಒಳಗೆ ಬಾ ಚಾಲ್ಲಿ. (ಲೋಮ್ಯಾಕ್ಸ್ ಪ್ರವೇಶಿಸುತ್ತಾನೆ. ಅರೆ ಗಾಂಭೀರ್ಯದಿಂದ ಪ್ರವೇಶಿಸಲು ಮುಖವನ್ನು ಸಪರಿಕೊಳ್ಳುತ್ತ ಬಂದು, ಶಾರ ಬಾರ್ಬರ ನಡುವೆ ನಿಲ್ಲುತ್ತಾನೆ.)

ಲೇಡಿ ಬ್ರಿಟೊ : (ಅಪ್ಪಣೆ ಮಾಡುವಂತೆ) ಕೂತುಕೊಳ್ಳಿ, ಎಲ್ಲರೂ. (ಕುಳಿತು ಕೊಳ್ಳುತ್ತ. ಕಿಟಕಿಯ ಕಡೆಗೆ ಹೋಗಿ ಕಸಿನ್ಸ್ ಅಲ್ಲಿ ಕುಳಿತುಕೊಳ್ಳುತ್ತಾನೆ. ಶಾರ, ಮೆತ್ತನೆಯ ಮಂಚಿಕೆಯ ಮೇಲೆ ; ಬಾರ್ಬರ ಬರೆಯುವ ಮೇಜಿನ ಹತ್ತಿರ— ಕುಳಿತುಕೊಳ್ಳುತ್ತಾರೆ.) ನೀನು ಏಕೆ ನಗುತಿದ್ದೀಯೊ ನನಗೆ ಅರ್ಥ ಆಗುವುದಿಲ್ಲ ಅಡಾಲ್ಫಸ್. ನಿನ್ನನ್ನು ಕಂಡರೆ ಆಶ್ಚರ್ಯವಾಗುತ್ತೆ. ಚಾರ್ಲ್ಸ್ ಲೋಮ್ಯಾಕ್ಸಿಂದ ಇದಕ್ಕಿಂತ ಒಳ್ಳೆಯ ನಡತೆಯನ್ನು ನಾನು ನಿರೀಕ್ಷಿಸಿರಲಿಲ್ಲವೆನ್ನು—

ಕಸಿನ್ಸ್ : (ಸೌಮ್ಯ ಧ್ವನಿಯಲ್ಲಿ) ಬಾರ್ಬರ ನನಗೆ ವೆಸ್ಟ್‌ಹ್ಯಾಂ ಸ್ಯಾಲ್ವೇಷನ್ ಮಾರ್ಚ್ ಕಲಿಸಲು ಪ್ರಯತ್ನಿಸುತ್ತಿದ್ದಾಳೆ.

ಲೇಡಿ ಬ್ರಿಟೊ : ಅದರಲ್ಲಿ ನಗೋದಕ್ಕೇನಿದೆ ? ನಿನ್ನ ಬುದ್ಧಿ ಪರಿವರ್ತನವಾಗಿ ಇದ್ದಿದ್ದರೆ ನಗಲೂ ಬಾರದು.

ಕಸಿನ್ಸ್ : (ಸವಿಯಾಗಿ) ನೀವು ಅಲ್ಲಿ ಇರಲಿಲ್ಲ. ನಿಜವಾಗಿ ತಮಾಷೆಯಾಗಿತ್ತು ಎಂದುಕೊಂಡಿದ್ದೇನೆ.

ಲೋಮ್ಯಾಕ್ಸ್ : ಅದರ ಮೋಜೇ ಮೋಜು.

ಲೇಡಿ ಬ್ರಿಟೊ : ಸುಮ್ಮನಿರು ಚಾರ್ಲ್ಸ್. ಮಕ್ಕಳಿರ, ನಾನು ಹೇಳುವುದನ್ನು ಕೇಳಿ. ಈ ಸಂಜೆ ನಿಮ್ಮ ತಂದೆ ಇಲ್ಲಿಗೆ ಬರುತ್ತಾರೆ. (ಎಲ್ಲರೂ ವಿಸ್ಮಿತರಾಗುತ್ತಾರೆ. ಲೋಮ್ಯಾಕ್ಸ್, ಬಾರ್ಬರ, ಶಾರ ಏಳುವರು. ಶಾರ ಹೆದರಿದವಳಂತೆ, ಬಾರ್ಬರ ವಿನೋದದಲ್ಲಿ, ನಿರೀಕ್ಷೆಯಲ್ಲಿ—ಇದ್ದಾರೆ.)

ಲೋಮ್ಯಾಕ್ಸ್ : (ಅರ್ಧ ಆಕ್ಷೇಪಣೆಯಲ್ಲಿ) ಓ ಹಾಗೇನು ? ಸರಿಹೋಯಿತು.

ಲೇಡಿ ಬ್ರಿಟೊ : ನಿನ್ನ ವ್ಯಾಖ್ಯಾನವನ್ನು ಯಾರೂ ಕೇಳಲಿಲ್ಲ, ಚಾರ್ಲ್ಸ್.

ಶಾರ : ನಿಜವಾಗಿ ನೀನು ಇದನ್ನು ಹೇಳುತ್ತಿದ್ದೀಯ ಅಮ್ಮ ?

ಲೇಡಿ ಬ್ರಿಟೊ : ನಿಜ ಅಲ್ಲದೆ, ಇನ್ನೇನು ಅಂದುಕೊಂಡಿದ್ದೀಯೆ ? ನಿನಗಾಗಿ ಚಾರ್ಲ್ಸ್‌ಗಾಗಿ. (ನಿಶ್ಶಬ್ದವಾಗಿ ಭುಜ ಅಲುಗಿಸಿ ಶಾರ ಕುಳಿತುಕೊಳ್ಳುತ್ತಾಳೆ.

ಚಾರ್ಲ್ಸ್ ನೊಂದವನಂತೆ ಯೋಗ್ಯನಲ್ಲದಂತೆ ಕಾಣುತ್ತಾನೆ.) ನಿನ್ನದೇನೂ ಆಕ್ಷೇಪಣೆ ಇಲ್ಲವೆ ಬಾರ್ಬರ.

ಬಾರ್ಬರ : ನನ್ನದೆ ? ನಾನೇಕೆ ಆಕ್ಷೇಪಣೆ ಮಾಡಬೇಕು. ಎಲ್ಲರಿಗೂ ಇರೊ ಹಾಗೆಯೇ ನಮ್ಮಪ್ಪನಿಗೂ ಒಂದು ಆತ್ಮ ಇದೆ, ಮುಕ್ತಿಗಳಿಸುವುದಕ್ಕೆ. ಸಂತೋಷ ವಾಗಿ ಬರಲಿ. ನನ್ನದೇನೂ ಅಭ್ಯಂತರ ಇಲ್ಲ. (ಮೇಜಿನ ಮೇಲೆ ಕುಳಿತು 'ಫಾರ್‌ವರ್ಡ್ ಕ್ರಿಶ್ಚಿಯನ್ ಸೋಲ್ಜರ್ಸ್' ಎಂಬುದನ್ನು ಮೃದುವಾಗಿ ಸಿಳ್ಳೆ ಹಾಕುತ್ತಾಳೆ.)

ಲೋಮ್ಯಾಕ್ಸ್ : (ಇನ್ನೂ ತನ್ನ ಹಿಂದಿನ ಧ್ವನಿಯಲ್ಲಿಯೇ) ಆದರೆ...ನಿಮಗೆ... ಇನ್ನೂ ಗೊತ್ತಿಲ್ಲವೆ...ಓ ಹಾಗೇನು,—

ಲೇಡಿ ಬ್ರಿಟೊ : (ಸೆಟೆದಂತೆ) ಏನು ಹೇಳಬೇಕೆಂದಿದೆ ನಿನ್ನ ಮನಸ್ಸಿನಲ್ಲಿ ಚಾರ್ಲ್ಸ್ ?

ಲೋಮ್ಯಾಕ್ಸ್ : ಈ...ಇದು...ಬಹು ಗಡುಸು ಸಂದರ್ಭವೇ ಎಂದು ನೀವು ಒಪ್ಪಬೇಕು.

ಲೇಡಿ ಬ್ರಿಟೊ : (ಭೀಕರ ನಾಗರಿಕ ಧ್ವನಿಯಲ್ಲಿ ಕಸಿನ್ಸನ್ನು ಕುರಿತು) ಅಡಾಲ್ಫಸ್, ನೀನು ಗ್ರೀಕ್ ಸಾಹಿತ್ಯದ ಪ್ರೊಫೆಸರ್. ಚಾರ್ಲ್ಸ್ ಲೋಮ್ಯಾಕ್ಸ್ ಈಗ ಹೇಳಿದ್ದನ್ನು ಯೋಗ್ಯ ಇಂಗ್ಲಿಷಿಗೆ ಭಾಷಾಂತರಿಸಬಲ್ಲೆಯ ?

ಕಸಿನ್ಸ್ : (ಬಹು ಹುಷಾರಿಂದ) ನಾನು ಹೀಗೆ ಹೇಳಬಹುದಾದರೆ, ಲೇಡಿ ಬ್ರಿಟೊ ಅವರೆ, ನಮ್ಮ ಎಲ್ಲರ ಮನಸ್ಸಿಗೂ ತೋರುತ್ತಿರುವುದನ್ನು ಚಾರ್ಲ್ಸ್ ಬಹು ಚೆನ್ನಾಗಿ ವ್ಯಕ್ತಪಡಿಸಿದ್ದಾರೆ ಎನ್ನಿಸುತ್ತದೆ. ಹೋಮರ್ ಕವಿ ಆಟೊಲಿಕಸನ್ನು ಕುರಿತು ಈ ಮಾತು ಹೇಳುತಾನೆ—"ಪ್ಯುಕಿನಾನ್, ಡೋಮಾನ್ ಹೆಗಫೈನ್" ಎಂದರೆ, ತಕ್ಕಮಟ್ಟಿಗೆ ಗಡುಸಾದ್ದು ಎಂದರ್ಥ.

ಲೋಮ್ಯಾಕ್ಸ್ : (ಔದಾರ್ಯದಿಂದ) ನನಗೇನು ಅಭ್ಯಂತರ ಇಲ್ಲ ಅನ್ನಿ—ಶಾರಾಗೆ ಇಲ್ಲದೇ ಇದ್ದರೆ. (ಕುಳಿತುಕೊಳ್ಳುವನು.)

ಲೇಡಿ ಬ್ರಿಟೊ : (ಅವನನ್ನು ಚಚ್ಚಿಬಿಡುವಂತೆ) ತುಂಬಾ ಉಪಕಾರವಾಯಿತು. ನನ್ನ ಗಂಡನನ್ನ ನನ್ನ ಮನೆಗೆ ಬನ್ನಿ ಎಂದು ಕರೆಯುವುದಕ್ಕೆ ನನಗೆ ನಿನ್ನ ಅಪ್ಪಣೆ ಇದೆಯೆ, ಅಡಾಲ್ಫಸ್ ?

ಕಸಿನ್ಸ್ : (ವಿಲಾಸದಿಂದ) ನೀವು ಮಾಡುವುದಕ್ಕೆಲ್ಲ ನಾನು ಹಿಂದು ಮುಂದು ನೋಡದೆ ಬೆಂಬಲ ಕೊಡುತ್ತೇನೆ.

ಲೇಡಿ ಬ್ರಿಟೊ : ಮಾತಾಡು ಶಾರ ! ನೀನು ಹೇಳುವುದು ಏನೂ ಇಲ್ಲವೆ ?

ಶಾರ : ಅಂದರೆ ನೀನು ಹೇಳುವುದು ಏನು ? ಅವರಿಲ್ಲಿಯೇ ಕ್ರಮವಾಗಿ ವಾಸಕ್ಕೆ ಬರುತ್ತಾರೆ ಎಂದೆ ?

ಲೇಡಿ ಬ್ರಿಟೊ : ಖಂಡಿತ ಇಲ್ಲ. ಆ ಬಿಡುವಾದ ರೂಮಿದೆಯಲ್ಲ, ಅದು ಆತನಿಗೆ ಸಿದ್ಧವಾಗಿದೆ. ಒಂದೆರಡು ದಿನ ಇಲ್ಲಿ ಉಳಿದು ನಿಮ್ಮ ವಿಷಯ ಹೆಚ್ಚು ತಿಳಿದುಕೊಳ್ಳಬೇಕು ಎನ್ನಿಸಿದರೆ. ಆದರೆ ಅದಕ್ಕೂ ಮಿತಿಗಳುಂಟು.

ಶಾರ : ಸರಿ ಅನ್ನು. ಅವರೇನು ನಮ್ಮನ್ನು ತಿಂದುಹಾಕಲಾರರು ಅಲ್ಲ? ನನ್ನದೇನೂ ಅಡ್ಡಿಯಿಲ್ಲ.

ಲೋಮ್ಯಾಕ್ಸ್ : (ಸಣ್ಣನಗು ನಗುತ್ತ) ಮುದುಕನಿಗೆ ಹೇಗೆ ಅನ್ನಿಸುವುದೊ ಹೇಳಲಾರೆ.

ಲೇಡಿ ಬ್ರಿಟೊ : ಮುದುಕಿಗೆ ಹೇಗೆ ಅನ್ನಿಸಬಹುದೊ ಹಾಗೆ, ಚಾರ್ಲ್ಸ್, ಸಂದೇಹ ವೇನು ?

ಲೋಮ್ಯಾಕ್ಸ್ : (ಮುಖಭಂಗದಲ್ಲಿ) ಅಪ್ರಿಯವಾಗಿ ಹೇಳಬೇಕು ಎಂದು ಯೋಚಿಸಲಿಲ್ಲ—

ಲೇಡಿ ಬ್ರಿಟೊ : ನೀನು ಯೋಚಿಸುವುದಿಲ್ಲ ಚಾರ್ಲ್ಸ್—ನೀನು ಯೋಚಿಸೋದೇ ಇಲ್ಲ. ಅದರ ಪರಿಣಾಮ ಏನು ? ನಿನ್ನ ಮಾತಿಗೆ ಅರ್ಥವೇ ಇರುವುದಿಲ್ಲ. ಮತ್ತೀಗ ನಾನೀಗ ಹೇಳುವುದಕ್ಕೆ ಗಮನಕೊಡಿ, ಮಕ್ಕಳೆ. ನಿಮ್ಮ ತಂದೆ ನಮಗೆಲ್ಲರಿಗೂ ಈಗ ಪೂರ್ತಿ ಪರಕೀಯರಾಗಿರುತ್ತಾರೆ.

ಲೋಮ್ಯಾಕ್ಸ್ : ಶಾರಾ ಪುಟ್ಟಮರಿಯಾಗಿದ್ದಾಗಿನಿಂದಲೂ ಆತ ಅವಳನ್ನ ನೋಡಿಲ್ಲ ಅಂದುಕೊಂಡಿದ್ದೇನೆ.

ಲೇಡಿ ಬ್ರಿಟೊ : ಅವಳು ಪುಟ್ಟಮರಿ ಆದಾಗಿನಿಂದ ಇಲ್ಲ ಚಾರ್ಲ್ಸ್. ಎಷ್ಟು ನಾಜೂಕಾದ ಮಾತನ್ನು ಉಪಯೋಗಿಸಿ, ನಯವಾದ ಭಾವವನ್ನು ನೀನು ಆ ಮಾತುಗಳಲ್ಲಿ ವ್ಯಕ್ತಪಡಿಸಿದ್ದೀಯೆ. ಅವು ನಿನ್ನನ್ನು ಯಾವಾಗಲೂ ಬಿಡದೆ ಅನುಸರಿಸುತ್ತವೆ, ಎನ್ನಿಸುತ್ತೆ. ಆ ಪ್ರಕಾರ—ಅ...(ತಾಳ್ಮೆಯಿಲ್ಲದೆ) ನಾನು ಈಗ ಏನು ಹೇಳಬೇಕು ಎಂಬುದು ಮರೆತುಹೋಯಿತು. ನೀನು ನನ್ನನ್ನು ರೇಗಿಸಿ ವ್ಯಂಗ್ಯವಾಗಿ ಮಾತನಾಡುವಂತೆ ಮಾಡುವುದರ ಫಲ ಇದು, ಚಾರ್ಲ್ಸ್. ಅಡಾಲ್ಫಸ್, ನಾನು ಏನು ಹೇಳುತಿದ್ದೆ ಅನ್ನೋದನ್ನ ಹೇಳುತೀಯ ?

ಕಸಿನ್ಸ್ : (ಸವಿಯಾಗಿ) ನೀವು ಹೇಳ್ತಾ ಇದ್ದಿರಿ : ಇವರು ಸಣ್ಣ ಮಕ್ಕಳಾದಾಗಿನಿಂದ ಅಂಡರ್‌ಷಾಫ್ಟ್ ಅವರು ಇವರನ್ನು ಕಂಡಿಲ್ಲ. ಆದ್ದರಿಂದ ಈ ರಾತ್ರಿ ಅವರು ನಡೆದುಕೊಳ್ಳುವ ರೀತಿಯಿಂದ, ನೀವು ಅವರನ್ನು ಹೇಗೆ ಬೆಳಸಿದ್ದೀರಿ ಎಂದು ಅಭಿಪ್ರಾಯ ರೂಪಿಸಿಕೊಳ್ಳುತ್ತಾರೆ. ಆದ್ದರಿಂದ ನಾವೆಲ್ಲ ಹೆಚ್ಚು ಎಚ್ಚರಿಕೆಯಿಂದ ಇದ್ದು ಚೆನ್ನಾಗಿ ನಡೆದುಕೊಳ್ಳಬೇಕು, ಅದರಲ್ಲೂ ಚಾರ್ಲ್ಸ್, ಎಂದು—

ಲೇಡಿ ಬ್ರಿಟೊ : (ಪೂರ್ತಿ ಒಪ್ಪುತ್ತ) ಖಂಡಿತ.

ಲೋಮ್ಯಾಕ್ಸ್ : ಇಲ್ಲಿ ನೋಡು, ಡಾಲ್ಲಿ. ಲೇಡಿ ಬ್ರಿಟೊ ಅದನ್ನು ಹೇಳಲಿಲ್ಲ.

ಲೇಡಿ ಬ್ರಿಟೊ : (ತ್ವೇಷದಿಂದ) ಹೇಳಿದೆ ; ಚಾರ್ಲ್ಸ್. ಅಡಾಲ್ಫಸಿನ ನೆನಪು ಪೂರ್ತಿ ಸರಿಯಾಗಿದೆ. ನೀವು ಒಳ್ಳೆಯವರಾಗಿರಬೇಕಾದ್ದು ಅತಿಮುಖ್ಯ. ಈ ಒಂದು ಸಲ ಎಲ್ಲರನ್ನೂ ಬೇಡಿಕೊಳ್ಳುತ್ತೇನೆ : ಇಬ್ಬಿಬ್ಬರು ಒಂದೊಂದು ಮೂಲೆ ಸೇರಿಕೊಂಡು ಕಿಲಕಿಲನೆ ನಗುವುದು, ಪಿಸುಪಿಸು ಮಾತನಾಡುವುದು ಬೇಡ,—ನಾನು ನಿಮ್ಮ ತಂದೆಯೊಡನೆ ಮಾತನಾಡುವಾಗ.

ಬಾರ್ಬರ : ಆಗಲಮ್ಮ. ನಿನಗೆ ಕೀರ್ತಿ ತರುತ್ತೇವೆ. (ಮೇಜಿನ ಬಳಿಯಿಂದ ಬಂದು ಮಾನ್ಯ ಮಹಿಳೆಯಂತೆ ಗಂಭೀರವಾಗಿ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾಳೆ.)

ಲೇಡಿ ಬ್ರಿಟೊ : ಇದನ್ನು ಜ್ಞಾಪಕದಲ್ಲಿಟ್ಟುಕೊ ಚಾರ್ಲ್ಸ್. ಶಾರಾಗೆ ನಿನ್ನನ್ನು ಕಂಡು ಅಪಮಾನವಾಗದೆ, ಅಭಿಮಾನ ಪಡೊ ಹಾಗೆ ಆಗಬೇಕು.

ಲೋಮ್ಯಾಕ್ಸ್ : ಓ, ಹಾಗೇನು ! ನನ್ನಲ್ಲಿ ನಿಜವಾಗಿ ಅಭಿಮಾನಪಡೋಕೆ ಏನೂ ಇಲ್ಲವೇ—ನಿಮಗೆ ಗೊತ್ತಿಲ್ಲವೆ ?

ಲೇಡಿ ಬ್ರಿಟೊ : ಹೇಗೊ...ಪ್ರಯತ್ನಪಟ್ಟು, ಇರೊ ಹಾಗೆ ಕಾಣಿಸಿಕೊ.

(ಮಾರಿಸನ್ ಬಣ್ಣಗೆಟ್ಟು, ವಿಸ್ಮಿತನಾಗಿ, ಅವಸರದಲ್ಲಿ, ಕ್ರಮ ಲಕ್ಷಿಸದೆ ಬರುತ್ತಾನೆ.)

ಮಾರಿಸನ್ : ನಾನು ತಮಗೊಂದು ಮಾತು ಹೇಳಬಹುದೆ, ತಾಯಿ !

ಲೇಡಿ ಬ್ರಿಟೊ : ನಾನ್ಸೆನ್ಸ್, ಅವರನ್ನ ಮೇಲಕ್ಕೆ ಕರಕೊಂಡು ಬಾ.

ಮಾರಿಸನ್ : ಆಗಲಿ ತಾಯಿ (ಹೋಗುತ್ತಾನೆ.)

ಲೋಮ್ಯಾಕ್ಸ್ : ಅದಾರೆಂದು ಮಾರಿಸನ್ನಿಗೆ ಗೊತ್ತೆ ?

ಲೇಡಿ ಬ್ರಿಟೊ : ತಿಳಿಯದೆ ಏನು ? ಮಾರಿಸನ್ ಯಾವಾಗಲೂ ನಮ್ಮೊಡನೆಯೇ ಇದ್ದಿದ್ದಾನೆ.

ಲೋಮ್ಯಾಕ್ಸ್ : ಅವನಿಗೆ ಇಷ್ಟು ದಿನವೂ ಬಾಯಿಗೆ ಬಿರಡೆ ಹಾಕಿದ ಹಾಗೆ ಇರಬೇಕಾಗಿತ್ತು ಅಲ್ಲ ?

ಲೇಡಿ ಬ್ರಿಟೊ : ಇಂಥ ಅಧ್ವಾನ್ನದ ಮಾತುಗಳಾಡಿ ನನ್ನ ಮನಸ್ಸಿನ ಸ್ವಾಸ್ಥ್ಯ ಕೆಡಿಸೋದಕ್ಕೆ ಇದೇನೆ ಸಮಯ, ಚಾರಲ್ಸ್ ?

ಲೋಮ್ಯಾಕ್ಸ್ : ಇದು ಸಾಧಾರಣಕ್ಕೆ ಮೀರಿದ ಸಮಯ. ನಿಜವಾಗಿ,—

ಮಾರಿಸನ್ : (ಬಾಗಿಲಲ್ಲಿ)ಯು...ಯುಜ...ಮಿಸ್ಟರ್ ಅಂಡರ್‌ಷಾಫ್ಟ್ ಅವರು.

(ಮನಸ್ಸಿನ ಗೊಂದಲದಲ್ಲಿ ಹಿಂದಕ್ಕೆ ಹೋಗುವನು)

[ಆಂಡ್ರೂಸ್ ಅಂಡರ್‌ಷಾಫ್ಟ್ ಒಳಗೆ ಬರುತ್ತಾನೆ. ಎಲ್ಲರೂ ಏಳುವರು. ಲೇಡಿ ಬ್ರಿಟೊ ರೂಮಿನ ನಡುವೆ ಎದುರುಗೊಳ್ಳುವಳು.]

[ಆಂಡ್ರ್ಯೂ ಹೊರಮೆಯಲ್ಲಿ ದಪ್ಪನೆಯ ಮನುಷ್ಯ ನಡವಳಿಕೆಯಲ್ಲಿ ದಯೆ, ತಾಳ್ಮೆ ಇವೆ. ಸ್ವಭಾವ ರಮ್ಯ, ಸರಳ. ಪ್ರಬಲನಾದರೂ ಮಾತು, ನಡತೆ ಸೌಮ್ಯವಾಗಿವೆ. ಲೋಕದಲ್ಲಿ ಕೀರ್ತಿ, ಜಯ ಕಂಡವನು. ಈಗಿನ ನವುರಾದ ಸನ್ನಿವೇಶದಲ್ಲಿ ಸ್ವಲ್ಪ ಸಂಕೋಚದಿಂದ ಇದ್ದಾನೆ.]

ಲೇಡಿ ಬ್ರಿಟೊ : ಬನ್ನಿ, ಆಂಡ್ರು.

ಅಂಡರ್‌ಷಾಫ್ಟ್ : ಚೆನ್ನಾಗಿದ್ದೀಯ ?

ಲೇಡಿ ಬ್ರಿಟೊ : ಹೆಚ್ಚು ವಯಸ್ಸಾದಂತೆ ಕಾಣುತ್ತಿದ್ದೀರಿ.

ಅಂಡರ್‌ಷಾಫ್ಟ್ : (ತನ್ನ ಪರವಾಗಿ) ನನಗೆ ಹೆಚ್ಚು ವಯಸ್ಸಾಗಿಯೇ ಇದೆ. (ಪ್ರೀತಿ ಮಾಡುವವನಂತೆ ಆಕೆಯ ಕೈಗಳನ್ನು ತೆಗೆದುಕೊಂಡು) ನಿನ್ನ ವಿಷಯದಲ್ಲಿ ಕಾಲ ಮುಂದುನಡೆಯದೆ ನಿಂತಂತಿದೆ.

ಲೇಡಿ ಬ್ರಿಟೊ : (ಅವನ ಕೈಯನ್ನು ಕೊಡವಿ) ಏನು ಮಾತನಾಡುತಿದ್ದೀರಿ. ಇದು ನಿಮ್ಮ ಸಂಸಾರ.

ಅಂಡರ್‌ಷಾಫ್ಟ್ : (ಆಶ್ಚರ್ಯದಿಂದ) ಇಷ್ಟು ದೊಡ್ಡದೇನು ? ಕೆಲವು ಸಂಗತಿಗಳಲ್ಲಿ ನನ್ನ ನೆನಪು ಪೂರ್ತಿ ಕೆಡುತಿದೆ. (ತಂದೆಯಂತೆ ಕರುಣೆಯಿಂದ ಲೋಮ್ಯಾಕ್ಸ್ ಕಡೆಗೆ ಕೈ ಚಾಚುತ್ತಾನೆ.)

ಲೋಮ್ಯಾಕ್ಸ್ : (ತನ್ನ ಕೈಯಿಂದ ಅವನ ಕೈಯನ್ನು ಕುಲುಕಿಸುತ್ತ) ಚೆನ್ನಾಗಿದ್ದೀರ ?

ಅಂಡರ್‌ಷಾಫ್ಟ್ : ನೀನೇ ನನ್ನ ದೊಡ್ಡ ಮಗ ಎಂದು ತೋರುತ್ತೆ. ಪುನಃ ನಿನ್ನನ್ನು ನೋಡಿ ಸಂತೋಷ ಆಯಿತು, ಮಗು.

ಲೋಮ್ಯಾಕ್ಸ್ : ನೋಡಿ...ನಿಮಗೆ ಗೊತ್ತಿಲ್ಲವೆ ?—ನಾನು ಹೇಳುವುದು ಏನೂಂದರೆ—

ಲೇಡಿ ಬ್ರಿಟೊ : (ಒಂದು ಕ್ಷಣ ಮಾತಿಲ್ಲದವಳಾಗಿದ್ದವಳು ಚೇತರಿಸಿಕೊಂಡು) ಆಂಡ್ರು, ನಿಮಗೆ ಎಷ್ಟು ಮಕ್ಕಳು ಎಂಬುದು ನೆನಪಿಲ್ಲ ಅಂತೀರ ?

ಅಂಡರ್‌ಷಾಫ್ಟ್ : ಹೇಗೊ...ಏನೊ...ಅವರೆಲ್ಲ ತುಂಬಾ ಬೆಳೆದಿದ್ದಾರೆ. ಏನೊ ತುಂಬಾ ಅವಿವೇಕದ ತಪ್ಪು ಮಾಡುತ್ತಿದ್ದೇನೆ ಎಂದು ಕಾಣುತ್ತೆ. ನನ್ನ ನೆನಪಿನಲ್ಲಿ ರೋದು ಒಬ್ಬನೇ ಮಗ ಎಂದು. ಆದರೆ, ಈಚೆಗೆ ಎಷ್ಟೋ ನಡೆದಿದೆ... ಅನ್ನು...ಅಲ್ಲಾ !

ಲೇಡಿ ಬ್ರಿಟೊ : (ನಿರ್ಣಾಯಕವಾಗಿ) ಆಂಡ್ರು, ತಿಳಿಗೇಡಿಯಂತೆ ಮಾತಾಡುತಿದ್ದೀರಿ. ನಿಮಗಿರೋದು ನಿಜವಾಗಿ ಒಬ್ಬನೇ ಮಗ.

ಅಂಡರ್‌ಷಾಫ್ಟ್ : ದಯಮಾಡಿ ನನಗೆ ಇವರ ಪರಿಚಯ ಮಾಡಿಕೊಡುತೀಯ ?

ಲೇಡಿ ಬ್ರಿಟೊ : ಆತ ಚಾರ್ಲ್ಸ್ ಲೋಮ್ಯಾಕ್ಸ್, ಶಾರಾಗೆ ಗೊತ್ತಾದ ವರ.

ಅಂಡರ್‌ಷಾಫ್ಟ್ : ಕ್ಷಮಿಸಬೇಕಪ್ಪ.

ಲೋಮ್ಯಾಕ್ಸ್ : ಕ್ಷಮೆ ಯಾಕೆ ? ನನಗೆ ತುಂಬಾ ಸಂತೋಷ. ನಿಶ್ಚಯವಾಗಿ ಹೇಳ್ತೇನೆ.

ಲೇಡಿ ಬ್ರಿಟೊ : ಇವನು ಸ್ಟೀವನ್.

ಅಂಡರ್‌ಷಾಫ್ಟ್ : (ತಲೆಬಾಗಿ) ನಿಮ್ಮ ಪರಿಚಯ ಮಾಡಿಕೊಳ್ಳೋಕೆ ಬಹು ಸಂತೋಷ, ಸ್ಟೀವನ್ ಅವರೆ, (ಆಮೇಲೆ ಕಸಿನ್ಸ್ ಬಳಿಗೆ ಹೋಗಿ) ನೀನು ನನ್ನ ಮಗ ಇರಬೇಕು. (ಕಸಿನ್ಸನ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು) ಚೆನ್ನಾಗಿದ್ದೀಯ ಮಗು ? (ಲೇಡಿ ಬ್ರಿಟೊಗೆ) ಅವನು ಬಹುವಾಗಿ ನಿನ್ನ ಹಾಗೆಯೇ ಇದ್ದಾನೆ, ಪ್ರಿಯೆ.

ಕಸಿನ್ಸ್ : ಅಂಡರ್‌ಷಾಫ್ಟ್ ಅವರೇ ; ನೀವು ನನ್ನನ್ನು ತುಂಬಾ ಹೊಗಳಿದ ಹಾಗೆ ಆಯಿತು. ನನ್ನ ಹೆಸರು ಕಸಿನ್ಸ್. ಬಾರ್ಬರಾಗೆ ಗೊತ್ತಾದ ವರ ನಾನು. (ತುಂಬಾ ವಿಶದವಾಗಿ) ಈಕೆ ಮೇಜರ್ ಬಾರ್ಬರ ಅಂಡರ್‌ಷಾಫ್ಟ್. ಮುಕ್ತಿ ದಳಕ್ಕೆ ಸೇರಿದವಳು. ಆಕೆ ಶಾರ, ನಿಮ್ಮ ಎರಡನೆ ಮಗಳು. ಇವರು ನಿಮ್ಮ ಮಗ, ಸ್ಟೀವನ್ ಅಂಡರ್‌ಷಾಫ್ಟ್.

ಅಂಡರ್‌ಷಾಫ್ಟ್ : ಮಗು ಸ್ಟೀವನ್, ಕ್ಷಮಿಸಬೇಕಪ್ಪ.

ಸ್ಟೀವನ್ : ಏನೂ ಕಾರಣವಿಲ್ಲ.

ಅಂಡರ್‌ಷಾಫ್ಟ್ : ಮಿ. ಕಸಿನ್ಸ್, ನಿಮಗೆ ತುಂಬಾ ಋಣಿಯಾಗಿದ್ದೇನೆ, ನೀವು ಖಚಿತವಾಗಿ ತಿಳಿಸಿದ್ದಕ್ಕಾಗಿ. (ಶಾರ ಕಡೆಗೆ ತಿರುಗಿ) ಬಾರ್ಬರ, ಮಗು.

ಶಾರ : (ಅವನಿಗೆ ನಿಜವನ್ನು ತಿಳಿಸುತ್ತ) ನಾನು ಶಾರ.

ಅಂಡರ್‌ಷಾಫ್ಟ್ : ಸರಿ ಸರಿ, ಶಾರ, (ಕೈ ಕುಲುಕಿಸುವರು. ಬಾರ್ಬರ ಬಳಿಗೆ ಹೋಗಿ) ಬಾರ್ಬರ, ನಿನ್ನ ಸರಿಯಾಗಿ ಈ ಸಲ ಗುರುತಿಸುತ್ತೇನೆ ಎಂದು ಕಾಣುತ್ತಲ್ಲ ?

ಬಾರ್ಬರ : ಪೂರ್ತಿ ಸರಿಯಾಗಿ.

ಲೇಡಿ ಬ್ರಿಟೊ : (ಅಧಿಕಾರವನ್ನು ಪುನಃ ಕೈಗೆ ತೆಗೆದುಕೊಂಡು) ಎಲ್ಲಾ ಕುಳಿತುಕೊಳ್ಳಿ, ಆಂಡ್ರೂ. (ಮುಂದೆ ಬಂದು ಮೆತ್ತೆಯ ಮಂಚದ ಮೇಲೆ ಕುಳಿತುಕೊಳ್ಳುತ್ತಾಳೆ. ಕಸಿನ್ಸ್ ತನ್ನ ಕುರ್ಚಿಯನ್ನು ಮುಂದೆ ತಂದು ಆಕೆಯ ಎಡಕ್ಕೆ ಕೂಡುವನು. ಬಾರ್ಬರ, ಸ್ಟೀವನ್ ತಮ್ಮ ಪೀಠದಲ್ಲಿಯೇ ಕುಳಿತುಕೊಳ್ಳುವರು. ಲೋಮ್ಯಾಕ್ಸ್ ತನ್ನ ಕುರ್ಚಿಯನ್ನು ಶಾರಾಗೆ ಕೊಟ್ಟು ತನಗೆ ಇನ್ನೊಂದನ್ನು ತರಲು ಹೋಗುತ್ತಾನೆ.)

ಅಂಡರ್‌ಷಾಫ್ಟ್ : ತುಂಬಾ ಸಂತೋಷ.

ಲೋಮ್ಯಾಕ್ಸ್ : (ಸಂಭಾಷಣೆಗೆ ತೊಡಗುವಂತೆ ಒಂದು ಕುರ್ಚಿಯನ್ನು ಆಂಡ್ರೂಗೆ ಕೊಟ್ಟು) ಸ್ವಲ್ಪ ಹೊತ್ತು ಹಿಡಿಯುತ್ತದೆ, ಅಲ್ಲ ! ಈ ಸಂಬಂಧಗಳು ಹೇಗೆ ಎಂದು ಗೊತ್ತು ಮಾಡಿಕೊಳ್ಳುವುದಕ್ಕೆ.

ಅಂಡರ್‌ಷಾಫ್ಟ್ : (ಕುರ್ಚಿಯನ್ನು ಒಪ್ಪಿದರೂ ನಿಂತುಕೊಂಡು) ನನ್ನನ್ನು ಸಂತೋಷ ಪಡಿಸುತ್ತಿರುವುದು ಅದಲ್ಲಾ ಲೋಮ್ಯಾಕ್ಸ್. ನನ್ನ ಕಷ್ಟ ಇದು. ತಂದೆಯ ಪಾತ್ರ ವಹಿಸಿದರೆ ಯಾವನೊ ಪರಕೀಯನು ತಲೆಹಾಕಿದ ಪರಿಣಾಮವುಂಟಾಗುತ್ತದೆ. ವಿವೇಕಶಾಲಿಯಾದ ಪರಕೀಯನಂತೆ ನಡೆದುಕೊಂಡೆನೊ ಹೃದಯವಿಲ್ಲದ ತಂದೆಯ ಹಾಗೆ ಕಾಣಬಹುದು.

ಲೇಡಿ ಬ್ರಿಟೊ : ಯಾವ ಪಾತ್ರವನ್ನೂ ವಹಿಸಬೇಕಾದ ಅಗತ್ಯವಿಲ್ಲ ಆಂಡ್ರ್ಯೂ. ಪ್ರಾಮಾಣಿಕವಾಗಿ, ಸಹಜವಾಗಿ ಇದ್ದರೆ ಆಯಿತು.

ಅಂಡರ್‌ಷಾಫ್ಟ್ : (ತಗ್ಗಿದವನಂತೆ) ಹೌದು, ಪ್ರಿಯೆ. ಅದೇ ಉತ್ತಮ ಎನ್ನಿಸುತ್ತೆ. (ಸುಖಾಸೀನನಾಗುತ್ತಾನೆ) ಸರಿ ನಾನಿಲ್ಲಿಗೆ ಬಂದಿದ್ದೇನೆ. ನಿಮಗೆಲ್ಲ ನನ್ನಿಂದ ಏನಾಗಬೇಕು ?

ಲೇಡಿ ಬ್ರಿಟೊ : ನೀವೇನೂ ಮಾಡಬೇಕಾಗಿಲ್ಲ. ಅಂ. ನೀವು ಸಂಸಾರಕ್ಕೆ ಸೇರಿದವರು. ನಮ್ಮ ಜೊತೆಯಲ್ಲಿ ಕುಳಿತುಕೊಳ್ಳಿ, ಸಂತೋಷವಾಗಿರಿ.

(ಸ್ವಲ್ಪ ಹೊತ್ತು ಯಾರೂ ಮಾತನಾಡದೆ ಇರುವುದು ಎಲ್ಲರ ಮೇಲೂ ಹೊರೆಯಾಗಿದೆ. ಬಾರ್ಬರ ಲೋಮ್ಯಾಕ್ಸ್ ಕಡೆಗೆ ತಿರುಗಿ ಮುಖ ವಿಕಾರ ಮಾಡುತ್ತಾಳೆ. ಈವರೆಗೂ ಹದ್ದಿನಲ್ಲಿ ಅಡಗಿದ್ದ ಅವನ ನಗು ಸಿಡಿದು ಹೊರಬಂದು ನೋವಿನಿಂದ ಕುದುರೆಯು ಕೆನೆತದಂತೆ ಕೇಳುತ್ತದೆ)

ಲೇಡಿ ಬ್ರಿಟೊ : (ಕೆರಳಿ) ಚಾರ್ಲ್ಸ್ ಲೋಮ್ಯಾಕ್ಸ್. ಸರಿಯಾಗಿ ನಡೆದುಕೊಳ್ಳುವ ಹಾಗಿದ್ದರೆ, ನಡೆದುಕೊ. ಇಲ್ಲವಾದರೆ, ಕೋಣೆ ಬಿಟ್ಟು ಹೊರಡು.

ಲೋಮ್ಯಾಕ್ಸ್ : ತುಂಬಾ ತಪ್ಪಾಯಿತು ನಿಜವಾಗಿ, ಲೇಡಿ ಬ್ರಿಟೊ. ನನ್ನ ಆಣೆಗೂ !

(ಲೇಡಿ ಬ್ರಿಟೊ ಮತ್ತು ಅಂಡರ್‌ಷಾಫ್ಟ್ ನಡುವೆ ಬಂದು ಗಂಭೀರವಾಗಿ ಕುಳಿತುಕೊಳ್ಳುತ್ತಾನೆ)

ಬಾರ್ಬರ : ನಗಬೇಕು ಅನ್ನಿಸಿದರೆ ಯಾಕೆ ನಗಬಾರದು ಚಾಲ್ಲಿ. ನಿನ್ನ ಒಳ ನೆಮ್ಮದಿಗೆ ಅದು ಒಳ್ಳೆಯದು.

ಲೇಡಿ ಬ್ರಿಟೊ : ಬಾರ್ಬರ, ಕುಲೀನ ಹೆಂಗಸು ಪಡೆವ ವಿದ್ಯಾಭ್ಯಾಸವನ್ನು ಪಡೆದಿದ್ದೀಯೆ. ನಿಮ್ಮ ತಂದೆ ಅದನ್ನು ಕಾಣಲಿ. ಬೀದಿಯ ಹುಡುಗಿಯಂತೆ ನಡೆದುಕೊಳ್ಳಬೇಡ.

ಅಂಡರ್‌ಷಾಫ್ಟ್ : ನನ್ನ ವಿಚಾರ ಯೋಚನೆ ಮಾಡಬೇಡ. ನಿನಗೇ ತಿಳಿದಿದೆ ನಾನು ಸಭ್ಯ ಗೃಹಸ್ಥನಲ್ಲವೆಂದು. ನನಗೆ ವಿದ್ಯಾಶಿಕ್ಷಣ ಆಗಿಲ್ಲ.

ಲೋಮ್ಯಾಕ್ಸ್ : (ಉತ್ತೇಜನ ಕೊಡುತ್ತ) ಎಲ್ಲಾದರೂ ಉಂಟೆ. ಯಾರಿಗೂ ಅದು ಗೊತ್ತಾಗುತ್ತಿರಲಿಲ್ಲ. ಎಲ್ಲ ಸರಿಯಾಗಿ ಕಾಣುತ್ತಲ್ಲ !

ಕಸಿನ್ಸ್ : ನನ್ನ ಸಲಹೆ, ಮಿ. ಅಂಡರ್‌ಷಾಫ್ಟ್. ತಾವು ಗ್ರೀಕ್ ವ್ಯಾಸಂಗ ಮಾಡಬೇಕು ಎಂದು. ಗ್ರೀಕ್ ವಿದ್ವಾಂಸರು ವಿಶೇಷ ಹಕ್ಕುಗಳನ್ನು ಪಡೆದವರು. ಅವರಲ್ಲಿ ಹೆಚ್ಚು ಜನಕ್ಕೆ ಗ್ರೀಕ್ ತಿಳಿಯದು. ಅವರಲ್ಲಿ ಯಾರಿಗೂ ಬೇರೆ ಏನೂ ತಿಳಿಯದು. ಆದರೆ ಅವರ ಸ್ಥಾನವನ್ನು ಯಾರೂ ಮೂದಲಿಸರು. ಇತರ ಭಾಷೆಗಳು ವೈಟರ್‌ಗಳಿಗೆ, ವ್ಯಾಪಾರಗಾರ ಪ್ರಯಾಣಿಕರಿಗೆ ಯೋಗ್ಯತೆ ಆಗಬಹುದು. ಆ ಒಂದು ಪದವಿಯಲ್ಲಿರುವ ಮನುಷ್ಯನಿಗೆ ಗ್ರೀಕೆಂಬುದು ಬೆಳ್ಳಿಗೆ ಬಣ್ಣದ ಮೆರುಗು ಇದ್ದ ಹಾಗೆ.

ಬಾರ್ಬರ : ಡಾಲ್ಲಿ ಅಪ್ರಾಮಾಣಿಕನಾಗಬೇಡ. ಚಾಲ್ಲಿ, ನಿನ್ನ ರಾಗಮಾಲಿಕೆ ವಾದ್ಯ ತೆಗೆದುಕೊಂಡು ಬಂದು ಏನಾದರೂ ಒಂದನ್ನು ಬಾರಿಸು.

ಲೋಮ್ಯಾಕ್ಸ್ : (ಆತುರದಿಂದ ಮೇಲೆ ಏಳುತ್ತಾನೆ. ಅಂಡರ್‌ಷಾಫ್ಟನ್ನು ಕುರಿತು, ಸಂದೇಹದಿಂದ ತನ್ನನ್ನು ತಾನು ನಡಸಿಕೊಂಡು) ಬಹುಶಃ ಅಂಥದೆಲ್ಲ ತಮ್ಮ ಮನಸ್ಸಿಗೆ ಬರೋದಿಲ್ಲ ಅಂತ ಕಾಣುತ್ತೆ ಅಲ್ಲವೆ ?

ಅಂಡರ್‌ಷಾಫ್ಟ್ : ನನಗೆ ಸಂಗೀತವೆಂದರೆ ತುಂಬಾ ಪ್ರೀತಿ.

ಲೋಮ್ಯಾಕ್ಸ್ : (ಸಂತೋಷದಿಂದ) ನಿಜವೇನು ! ಹಾಗಿದ್ದರೆ ಅದನ್ನ ತರುತೇನೆ.

(ಮಹಡಿಯ ಮೇಲಕ್ಕೆ, ವಾದ್ಯಕ್ಕಾಗಿ ಹೋಗುತ್ತಾನೆ)

ಅಂಡರ್‌ಷಾಫ್ಟ್ : ನೀನು ಯಾವುದಾದರೂ ವಾದ್ಯ ಬಾರಿಸುತ್ತೀಯ ಬಾರ್ಬರ ?

ಬಾರ್ಬರ : ಒಂದು ಬಗೆಯ ಖಂಜರಿ ಮಾತ್ರ. ಆದರೆ ಚಾಲ್ಲಿ ನನಗೆ ರಾಗಮಾಲಿಕೆ ಕಲಿಸುತ್ತಿದ್ದಾನೆ.

ಅಂಡರ್‌ಷಾಫ್ಟ್ : ಚಾಲ್ಲಿ ಕೂಡ ಮುಕ್ತಿದಳಕ್ಕೆ ಸದಸ್ಯನೆ ?

ಬಾರ್ಬರ : ಇಲ್ಲ. ಮತ ವಿರೋಧದ ಪಕ್ಷ ಹಿಡಿಯುವುದು ಮರ್ಯಾದೆ ಅಲ್ಲ ಎನ್ನುತ್ತಾನೆ. ಆದರೆ ನಾನು ಅವನ ವಿಷಯದಲ್ಲಿ ಹತಾಶಳಾಗಿಲ್ಲ. ನಿನ್ನೆ ಹಡಗಿನ ಕಟ್ಟೆ ಬಾಗಿಲಲ್ಲಿ ನಡಸಿದ ಒಂದು ಮೀಟಿಂಗಿಗೆ ಬರುವಂತೆ ಮಾಡಿದೆ. ಜನ ಹಾಕಿದ ದುಡ್ಡನ್ನು ಹ್ಯಾಟಲ್ಲಿ ತೆಗೆದುಕೊಳ್ಳುವ ಹಾಗೆ ಮಾಡಿದೆ.

ಅಂಡರ್‌ಷಾಫ್ಟ್ : (ತನ್ನ ಹೆಂಡತಿಯ ಕಡೆ ವಿಲಕ್ಷಣವಾಗಿ ನೋಡುತ್ತಾನೆ.)

ಲೇಡಿ ಬ್ರಿಟೊ : ಇದು ನಾನು ಮಾಡಿದ್ದಲ್ಲ ಆಂಡ್ರೂ. ಬಾರ್ಬರ ತನ್ನ ದಾರಿ ಹಿಡಿದು ನಡೆಯುವಷ್ಟು ದೊಡ್ಡವಳಾಗಿದ್ದಾಳೆ. ಅವಳಿಗೆ ಸಲಹೆ ಕೊಡಲು ಅವಳ ಬಳಿ ತಂದೆ ಇಲ್ಲ.

ಬಾರ್ಬರ : ಇದ್ದಾನೆ. ಮುಕ್ತಿದಳದಲ್ಲಿ ಯಾರೂ ತಬ್ಬಲಿಗಳಲ್ಲ.

ಅಂಡರ್‌ಷಾಫ್ಟ್ : ಅಲ್ಲಿನ ನಿಮ್ಮ ತಂದೆಗೆ ಅನೇಕ ಮಕ್ಕಳಿದ್ದಾರೆ, ತುಂಬಾ ಅನುಭವ ಇದೆ ಅಲ್ಲವೆ.

ಬಾರ್ಬರ : (ಅವನ ಕಡೆ ತೀವ್ರಾಸಕ್ತಿಯಿಂದ ನೋಡುತ್ತ) ಹೌದು. ನಿಮಗೆ ಅದು ಹೇಗೆ ತಿಳಿಯಿತು !

(ಬಾಗಿಲಲ್ಲಿ ಲೋಮ್ಯಾಕ್ಸ್ ರಾಗಮಾಲಿಕೆಯ ಶಬ್ದ ಮಾಡುತ್ತಿರುವುದು ಕೇಳುತ್ತದೆ.)

ಲೇಡಿ ಬ್ರಿಟೊ : ಒಳಗೆ ಬಾ ಚಾರ್ಲ್ಸ್. ಕೂಡಲೆ ಏನಾದರೂ ಬಾರಿಸು.

ಲೋಮ್ಯಾಕ್ಸ್ : ಸರಿ, ಹಾಗಾದರೆ. (ತನ್ನ ಮೊದಲ ಸ್ಥಳದಲ್ಲಿ ಕುಳಿತು, ಪೀಠಿಕೆ ಹಾಕುತ್ತಾನೆ.)

ಅಂಡರ್‌ಷಾಫ್ಟ್ : ಒಂದು ಕ್ಷಣ ಮಿ. ಲೋಮ್ಯಾಕ್ಸ್. ಮುಕ್ತಿದಳದಲ್ಲಿ ನಾನು ಆಸಕ್ತಿ ಉಳ್ಳವನೇ. ರಕ್ತ, ಬೆಂಕಿ ಎಂಬ ಅದರ ಸೂಕ್ತಿ ನನ್ನದೂ ಆಗ ಬಹುದು.

ಲೋಮ್ಯಾಕ್ಸ್ : (ಪೆಟ್ಟು ಬಿದ್ದಂತೆ) ಆದರೆ ನಿಮ್ಮರ್ಥದ ರಕ್ತ, ಬೆಂಕಿ ಅಲ್ಲ.

ಅಂಡರ್‌ಷಾಫ್ಟ್ : ನನ್ನರ್ಥದ ರಕ್ತ ಶುಚಿಗೊಳ್ಳುತ್ತದೆ ; ನನ್ನರ್ಥದ ಬೆಂಕಿ ಪರಿಶುದ್ಧ ಮಾಡುತ್ತದೆ.

ಬಾರ್ಬರ : ನಮ್ಮದೂ ಹಾಗೇ. ನಮ್ಮ ಆಶ್ರಮಕ್ಕೆ ಬನ್ನಿ, ವೆಸ್ಟ್‌ಹಂ ಷೆಲ್ಟರಿಗೆ ನಾವು ಏನು ಮಾಡುತ್ತಿದ್ದೇವೆಯೊ ನೋಡಿ. ಮೈಲ್-ಎಂಡಲ್ಲಿರುವ ಸಭಾ ಮಂದಿರದಲ್ಲಿ ಒಂದು ದೊಡ್ಡ ಅಧಿವೇಶನ ಸೇರುತ್ತದೆ. ಅಲ್ಲಿಗೆ ನಮ್ಮ ಸೈನ್ಯ ನಡೆದು ಹೋಗುತ್ತದೆ. ಬಂದು ನಮ್ಮ ಆಶ್ರಮ ನೋಡಿ. ಆಮೇಲೆ ನಮ್ಮೊಡನೆ ನಡೆದು ಬನ್ನಿ. ನಿಮಗೆ ತುಂಬಾ ಒಳ್ಳೆಯದಾಗುತ್ತೆ. ನಿಮಗೆ ಯಾವುದಾದರೂ ವಾದ್ಯ ಬಾರಿಸಲು ಬರುತ್ತದೆಯೆ ?

ಅಂಡರ್‌ಷಾಫ್ಟ್ : ನಾನು ಯುವಕನಾಗಿದ್ದಾಗ ಪೆನ್ನಿಗಳನ್ನು, ಆಗಾಗ ಷಿಲಿಂಗು ಗಳನ್ನು ಕೂಡ ಬೀದಿಗಳಲ್ಲಿ, ಊಟದ ಮನೆಯ ಹಜಾರಗಳಲ್ಲಿ, ಸಂಪಾದಿಸುತ್ತ ಇದ್ದೆ—ಹೆಜ್ಜೆ ಕುಣಿತದಲ್ಲಿ ನನಗಿದ್ದ ಸಹಜ ಶಕ್ತಿಯಿಂದ. ಆಮೇಲೆ ನಾನು ಅಂಡರ್‌ಷಾಫ್ಟ್ ವಾದ್ಯವೃಂದ ಸಂಘಕ್ಕೆ ಸದಸ್ಯನಾದೆ. ಮಧ್ಯ ಶ್ರುತಿಯ ಟ್ರಾಂಬೋನ್ ವಾದನ ಮಾಡುತ್ತಿದ್ದೆ.

ಲೊಮ್ಯಾಕ್ಸ್ : (ಹೇಸಿಕೆ ಪಟ್ಟು—ತನ್ನ ರಾಗಮಾಲಿಕೆಯನ್ನು ಕೆಳಗಿಟ್ಟು) ಅಯ್ಯಯ್ಯ.

ಬಾರ್ಬರ : ಎಷ್ಟೋ ಜನ ಪಾಪಿಗಳು ನಮ್ಮ ದಳದ ನೆರವಿನಿಂದ ಟ್ರಾಂಬೋನ್ ಬಾರಿಸುತ್ತ ಸ್ವರ್ಗವನ್ನು ಸೇರಿದ್ದಾರೆ.

ಲೋಮ್ಯಾಕ್ಸ್ : (ಇನ್ನೂ ಧಕ್ಕೆ ಬಡಿದವನಂತೆ, ಬಾರ್ಬರಳನ್ನು ಕುರಿತು) ಹೌದು. ಆದರೆ ಫಿರಂಗಿ ಉದ್ಯೋಗದ ವಿಚಾರ ಹೇಗೆ ಎಂದು ನಿನಗೆ ಗೊತ್ತಿಲ್ಲವೆ ? (ಅಂಡರ್‌ಷಾಫ್ಟ್‌ಗೆ) ಸ್ವರ್ಗಕ್ಕೆ ಹೋಗಬೇಕು ಎನ್ನುವುದು ನೀವು ಖಚಿತವಾಗಿ ತುಳಿಯುವ ದಾರಿ ಅಲ್ಲ, ಅಲ್ಲವೆ ?

ಲೇಡಿ ಬ್ರಿಟೊ : ಚಾರ್ಲ್ಸ್ ! ! !

ಲೋಮ್ಯಾಕ್ಸ್ : ಹೌದು ; ಆದರೆ ನಾ ಹೇಳೋದು ಯುಕ್ತವಾಗಿದೆ ಅಲ್ಲವೆ ? ಫಿರಂಗಿ ಉದ್ಯೋಗ ಅಗತ್ಯ, ಇತ್ಯಾದಿ, ಇರಬಹುದು. ಫಿರಂಗಿ ಇಲ್ಲದೆ ನಾವು ಮುಂದುವರಿಯಲು ಆಗುವುದಿಲ್ಲ. ಆದರೆ ಅದು ಸರಿಯಲ್ಲ, ಅಲ್ಲ ? ಇತ್ತ ನೋಡಿದರೊ : ಮುಕ್ತಿದಳದಲ್ಲಿ ಒಂದಷ್ಟು ಭ್ರಾಂತಿ ಇರಬಲ್ಲದು—ನಾನು ಬ್ರಿಟಿಷ್ ಸಂಪ್ರದಾಯದ ಮತ ಪಂಥಕ್ಕೆ ಸೇರಿದವನು—ಆದರೇನು ಅದು ಮತ ಧರ್ಮ ಅಲ್ಲ ಎನ್ನಲಾಗದು. ಯಾರೂ ಮತಕ್ಕೆ ವಿರುದ್ಧವಾಗಿ ಹೋಗಲು ಆಗುವುದಿಲ್ಲ...ಆಗುತ್ತೆಯೆ ? ಪೂರ್ತಿ ಅಸೀತಿ ನಿರತರಾಗದೆ ಇದ್ದರೆ, ಎನ್ನಿ... ಅಲ್ಲವೆ ?

ಅಂಡರ್‌ಷಾಫ್ಟ್ : ನನ್ನ ಸ್ಥಿತಿಯ ಅರಿವು ನಿಮಗೇನೂ ಇರುವಹಾಗಿಲ್ಲ, ಲೋಮ್ಯಾಕ್ಸ್.

ಲೋಮ್ಯಾಕ್ಸ್ : (ಅವಸರದಿಂದ) ವ್ಯಕ್ತಿಶವಾಗಿ ನಿಮ್ಮನ್ನೇ ಕುರಿತು ಹೇಳುತ್ತಿಲ್ಲ.

ಅಂಡರ್‌ಷಾಫ್ಟ್ : ಹೌದು, ಹೌದು, ಅದು ಸರಿ. ಆದರೆ ಒಂದು ಕ್ಷಣ ಯೋಚಿಸಿ. ಈಗ ನಾನಿದ್ದೇನೆ. ಜನಗಳನ್ನು ಭಿನ್ನಭಿನ್ನಮಾಡಿ ಕೊಲೆಮಾಡಿ ಅದರಿಂದ ಲಾಭಗಳಿಸುವವನು. ಈಗ ವಿಶೇಷವಾಗಿ ನನ್ನ ಮನಸ್ಸು ಪ್ರಸನ್ನವಾಗಿದೆ. ಏಕೆಂದರೆ ನಮ್ಮ ಗಿರಣಿ ಕುಲುಮೆಯಲ್ಲಿ ಈ ಬೆಳಗ್ಗೆ ಮಾಡಿದ ಒಂದು ಕೋವಿಯಿಂದ 27 ಮಂದಿ ಸಿಪಾಯಿ ಬೊಂಬೆಗಳನ್ನು ಕೊಂದೆವು. ಅದು ಹಿಂದೆ 13 ಜನರನ್ನು ಮಾತ್ರ ನಾಶ ಮಾಡುತ್ತಿತ್ತು.

ಲೋಮ್ಯಾಕ್ಸ್ : (ದಾಕ್ಷಿಣ್ಯದಿಂದ) ಯುದ್ಧ ಹೆಚ್ಚು ನಾಶಕರವಾದಷ್ಟೂ ಅದನ್ನು ಅಷ್ಟೂ ಅಷ್ಟು ಬೇಗ ರದ್ದು ಮಾಡಲಾಗುತ್ತದೆ, ಅಲ್ಲವೆ !

ಅಂಡರ್‌ಷಾಫ್ಟ್ : ಖಂಡಿತ ಅಲ್ಲ. ಯುದ್ಧ ಹೆಚ್ಚು ನಾಶಕರವಾದಷ್ಟೂ ನಮಗೆ ಅದು ಹೆಚ್ಚು ಮೋಹಕವಾಗಿ ಕಾಣುತ್ತದೆ. ಇಲ್ಲ ಮಿ. ಲೋಮ್ಯಾಕ್ಸ್. ನನ್ನ ವೃತ್ತಿಯವರ ಪರವಾಗಿ ಸಾಮಾನ್ಯವಾಗಿ ಜನ ಕೊಡುವ ಒಳ್ಳೆಯ ಸಮಾಧಾನದ ಮಾತನ್ನು ಹೇಳಿದ್ದಕ್ಕಾಗಿ ನಾನು ನಿಮಗೆ ಕೃತಜ್ಞನಾಗಿದ್ದೇನೆ. ಆದರೆ ನನಗೆ ಅದಕ್ಕಾಗಿ ಲಜ್ಜೆ ಇಲ್ಲ. ತಮ್ಮ ಉದ್ಯೋಗಕ್ಕೂ ಧರ್ಮಕ್ಕೂ ಸಂಪರ್ಕವಿಲ್ಲದಂತೆ ಅವನ್ನು ಬೇರೆ ಬೇರೆ ಇಡುವ ಜನ ಇದ್ದಾರೆ. ನಾನಂಥವರಲ್ಲಿ ಒಬ್ಬ ಅಲ್ಲ. ನಮ್ಮ ವೃತ್ತಿಯಲ್ಲಿ ನನ್ನೊಡನೆ ಸ್ಪರ್ಧಿಸುವವರು ತಮ್ಮ ಕೈಯಲ್ಲಿನ ಬಿಡಿ ಹಣವನ್ನೆಲ್ಲ ಆಸ್ಪತ್ರೆ, ದೇವಾಲಯ ಮುಂತಾದವುಗಳಿಗೊ ತಮ್ಮ ಅಂತಃಸಾಕ್ಷಿಯ ತೃಪ್ತಿಗಾಗಿ ಪೂರಕವಾಗುವ ಇತರ ಪಾತ್ರಗಳಿಗೊ ವೆಚ್ಚಮಾಡುತ್ತಾರೆ. ನಾನು ಜೀವವನ್ನೂ ಆಸ್ತಿಯನ್ನೂ ನಾಶ ಮಾಡುವ ಹೆಚ್ಚು ಸುಧಾರಿತವಾದ ವಿಧಾನಗಳಿಗೆ ಬೇಕಾದ ಪ್ರಯೋಗಗಳಿಗೂ ಸಂಶೋಧನೆಗಳಿಗೂ ಆ ಹಣವನ್ನು ವಿನಿಯೋಗಿಸುತ್ತೇನೆ. ಯಾವಾಗಲೂ ನಾನು ಮಾಡಿರುವುದು ಹಾಗೆ ! ಮುಂದೆ

ಮಾಡುವುದೂ ಹಾಗೆ ! ಆದ್ದರಿಂದ ನೀವು ಕ್ರಿಸ್‌ಮಸ್ ಕಾರ್ಡಿನಲ್ಲಿ ನುಡಿಯುವ ಧರ್ಮಸೂಕ್ತಿಗಳಿವೆಯಲ್ಲ—ಭೂಮಿಯ ಮೇಲೆ ಶಾಂತಿ ನೆಲಸಲಿ, ಜನಾಂಗ ಗಳಲ್ಲಿ ಸೌಹಾರ್ದ ಉಂಟಾಗಲಿ-ಎಂಬವು—ನನ್ನ ಕೆಲಸಕ್ಕೆ ಬಾರವು. ನಿಮ್ಮ ಕ್ರಿಸ್ಟಿಯನ್ ಮತ ವಿಧಿಸುವುದೇನು ? ಅಧರ್ಮವನ್ನು ವಿರೋಧಿಸಬೇಡ. ಒಂದು ಕೆನ್ನೆಗೆ ಪೆಟ್ಟು ಬಿದ್ದರೆ ಇನ್ನೊಂದು ಕೆನ್ನೆ ತೋರಿಸು, ಎಂಬುದು— ನನ್ನನ್ನು ದಿವಾಳಿ ಮಾಡಿಬಿಡುತ್ತದೆ. **ನನ್ನ ಧರ್ಮ ನನ್ನ ಮತ** ಇವುಗಳಲ್ಲಿ ಫಿರಂಗಿಗಳಿಗೂ ಟಾರ್ಪಿಡೊಗಳಿಗೂ ಸ್ಥಾನ ಇರಬೇಕು.

ಸ್ಟೀವನ್ : (ಉತ್ಸಾಹವಿಲ್ಲದೆ ಸುಮಾರು ಬೇಸರದಿಂದ) ಅರ್ಧ ಡಸನ್ ಮತಧರ್ಮ ಗಳಿವೆ, ಅವುಗಳಲ್ಲಿ ಬೇಕಾದ್ದನ್ನು ಆರಿಸಬಹುದು ಎಂಬಂತೆ ನೀವು ಮಾತನಾಡು ತ್ತಿದ್ದೀರಿ. ನಿಜವಾಗಿ ಇರುವುದು ಒಂದು ಧರ್ಮ. ಸತ್ಯವಾದ ಒಂದು ನೀತಿ ಮಾರ್ಗ.

ಅಂಡರ್‌ಷಾಫ್ಟ್ : ನನಗಿರುವುದು ಒಂದೇ ಸತ್ಯವಾದ ನೀತಿಮಾರ್ಗ. ಅದು ನಿನಗೆ ಹೊಂದದೆ ಇರಬಹುದು,—ನೀನು ವಿಮಾನ ನೌಕೆಗಳನ್ನು ತಯಾರು ಮಾಡುವುದಿಲ್ಲವಾದ್ದರಿಂದ. ಪ್ರತಿಯೊಬ್ಬರಿಗೂ ಸತ್ಯವಾದ ನೀತಿಮಾರ್ಗ ಒಂದೇ.ಆದರೆ ಪ್ರತಿಯೊಬ್ಬನಿಗೂ ಸತ್ಯವಾಗಿರುವ ನೀತಿಮಾರ್ಗ ಒಂದೇ ಅಲ್ಲ.

ಲೋಮ್ಯಾಕ್ಸ್ : (ತಲೆಗೆ ಕಷ್ಟವಾಗಿ) ದಯಮಾಡಿ ಇನ್ನೊಮ್ಮೆ ಹೇಳುತೀರ ? ನನಗೆ ಪೂರ್ತಿ ಅರ್ಥ ಆಗಲಿಲ್ಲ.

ಕಸಿನ್ಸ್ : ತುಂಬಾ ಸರಳವಾದ್ದು. ಯೂರಿಪಿಡೇಸ್ ಹೇಳುವ ಹಾಗೆ : ಒಬ್ಬನ ಅನ್ನ ಇನ್ನೊಬ್ಬನ ವಿಷ. ನೀತಿಯಲ್ಲಿಯೂ ಹಾಗೇ. ಶಾರೀರಕವಾಗಿಯೂ ಹಾಗೇ.

ಅಂಡರ್‌ಷಾಫ್ಟ್ : ಹೌದು. ಖಚಿತವಾಗಿ.

ಲೋಮ್ಯಾಕ್ಸ್ : ಓ ಅದೋ...ಹೌದು ಹೌದು. ನಿಜ...ನಿಜ.

ಸ್ಟೀವನ್ : ಇದನ್ನು ಬೇರೆ ಮಾತಿನಲ್ಲಿ ಹೇಳಬೇಕಾದರೆ: ಕೆಲವು ಜನ ಪ್ರಾಮಾಣಿಕರು ಮತ್ತೆ ಕೆಲವರು ಚಂಡಾಲರು.

ಬಾರ್ಬರ : ಬುದ್ಧಿ ಇಲ್ಲದ ಮಾತು. ಚಂಡಾಲರು ಎನ್ನುವವರೇ ಇಲ್ಲ.

ಅಂಡರ್‌ಷಾಫ್ಟ್ : ನಿಜವಾಗಿ ? ಒಳ್ಳೆಯ ಜನ ಯಾರಾದರೂ ಇದ್ದಾರೆಯೆ ?

ಬಾರ್ಬರ : ಒಬ್ಬರೂ ಇಲ್ಲ. ಒಳ್ಳೆಯ ಜನವೂ ಇಲ್ಲ. ಚಂಡಾಲರೆಂಬವರೂ ಇಲ್ಲ. ಒಬ್ಬ ತಂದೆಯ ಮಕ್ಕಳೇ ಎಲ್ಲ. ಎಷ್ಟು ಬೇಗ ಒಬ್ಬರು ಇನ್ನೊಬ್ಬರನ್ನು ಬೈಯುವುದನ್ನು ನಿಲ್ಲಿಸುತ್ತಾರೆಯೊ ಅಷ್ಟೂ ಅಷ್ಟು ಮೇಲೇ. ನೀವು ಅದನ್ನು ಕುರಿತು ಮಾತನಾಡಬೇಕಾದ್ದಿಲ್ಲ. ನಾನು ಅವರನ್ನು ಬಲ್ಲೆ. ಹತ್ತಾರು ಮಂದಿ ನನ್ನ ಕೈ ದಾಟಿಹೋಗಿದ್ದಾರೆ. ಚಂಡಾಲರು, ಪಾತಕರು, ಪಾಷಂಡಿಗಳು, ಲೋಕ ಹಿತೈಷಿಗಳು, ಮಿಷನರಿಗಳು, ಸ್ಥಳೀಯ ಮಂಡಲಿಯ ಸದಸ್ಯರು,—

ಎಲ್ಲಾ ತೆರದ ಜನ—ಎಲ್ಲರೂ ಒಂದೇ ಬಗೆಯ ಪಾಪಿಗಳು. ಅವರೆಲ್ಲರಿಗೂ ಒಂದೇ ತೆರದ ಮೋಕ್ಷ ಸಿದ್ಧವಾಗಿದೆ.

ಅಂಡರ್‌ಷಾಫ್ಟ್ : ಫಿರಂಗಿಗಳ ತಯಾರಕನೊಬ್ಬನನ್ನು ನೀನು ಎಂದಾದರೂ ಮುಕ್ತಿಗೊಳಿಸಿದ್ದೀಯ ಎಂದು ಕೇಳಬಹುದೆ ?

ಬಾರ್ಬರ : ಇಲ್ಲ. ಯತ್ನಿಸಲು ನನಗೆ ಅವಕಾಶ ಕೊಡುತ್ತೀರ !

ಅಂಡರ್‌ಷಾಫ್ಟ್ : ಹಾಗಾದರೆ ನಿನ್ನ ಜೊತೇಲಿ ಒಂದು ಒಪ್ಪಂದ ಮಾಡಿಕೋತೇನೆ. ನಾನು ನಾಳೆ ನಿನ್ನ ಮುಕ್ತಿನೆಲೆಯನ್ನು ನೋಡಲು ಬಂದರೆ, ನಾಡಿದ್ದು ನೀನು ನನ್ನ ಫಿರಂಗಿ ಕಾರ್ಖಾನೆಯಲ್ಲಿ ನನ್ನನ್ನು ನೋಡಲು ಬರುತೀಯ ?

ಬಾರ್ಬರ : ಎಚ್ಚರದಿಂದಿರಿ. ಕಡೆಗೆ ಫಿರಂಗಿಗಳನ್ನು ಬಿಟ್ಟು ನನ್ನ ಮುಕ್ತಿ ಸೈನ್ಯಕ್ಕೆ ಸೇರಬೇಕಾದೀತು.

ಅಂಡರ್‌ಷಾಫ್ಟ್ : ನಿಶ್ಚಯವಾಗಿದ್ದೀಯೊ : ಮುಕ್ತಿ ಸೈನ್ಯವನ್ನು ಬಿಟ್ಟುಕೊಟ್ಟು ಫಿರಂಗಿ ಉದ್ಯೋಗಕ್ಕೆ ನೀನು ಬರುವುದರಲ್ಲಿ ಅದು ಮುಗಿಯುವುದಿಲ್ಲವೆಂದು ?

ಬಾರ್ಬರ : ಆ ಸಾಹಸವನ್ನು ಮಾಡುತ್ತೇನೆ.

ಅಂಡರ್‌ಷಾಫ್ಟ್ : ನೀನು ಹೇಳುವ ಸಾಹಸ ನಾನು ಮಾಡುತೇನೆ. (ಅವರು ಕೈ ಕುಲುಕುತ್ತಾರೆ) ನಿನ್ನ ನೆಲೆ ಇರುವುದೆಲ್ಲಿ ?

ಬಾರ್ಬರ : ವೆಸ್ಟ್‌ಹಂ ಅಲ್ಲಿ. ಸಿಲುಬೆ ಗುರುತಿರುವ ಕಡೆ. ಕ್ಯಾನಿಂಗ್ ಟೌನಲ್ಲಿ ಯಾರನ್ನಾದರೂ ಕೇಳಿ. ನಿಮ್ಮ ಕಾರ್ಯಾಗಾರ ಎಲ್ಲಿ ?

ಅಂಡರ್‌ಷಾಫ್ಟ್ : ಸೆಂಟ್ ಆಂಡ್ರೂಸಿನ ಪೆರಿವೇಲ್ ಅಲ್ಲಿ. ಖಡ್ಗದ ಗುರುತಿನ ಕಡೆ. ಯೂರೋಪಿನಲ್ಲಿ ಯಾರನ್ನಾದರೂ ಕೇಳು.

ಲೋಮ್ಯಾಕ್ಸ್ : ಏನನ್ನಾದರೂ ಬಾರಿಸಲೆ ?

ಬಾರ್ಬರ : ಬಾರಿಸು Onward Christian Soldiers ('ಮುಂದೆ ನಡೆ, ಕ್ರಿಸ್ತ ಸೈನಿಕ') ಬಾರಿಸು.

ಲೋಮ್ಯಾಕ್ಸ್ : ಮೊದಲು ಬಾರಿಸಲು ಅದು ಕಷ್ಟವಾಗಿರುತ್ತೆ. ನೀನು ಇಲ್ಲಿಂದ ಮುಂದೆ ಹೋಗುತ್ತಿರುವೆ, ತಮ್ಮ—Thou art passing hence, my brother, ಎಂಬುದನ್ನು ಹಾಡಿದರೊ ? ಎರಡರ ಮಟ್ಟೂ ಒಂದೇ.

ಬಾರ್ಬರ : ಅದು ಅಷ್ಟು ಹುಮ್ಮಸ್ಸು ತರುವುದಿಲ್ಲ. ನಿನಗೆ ಮುಕ್ತಿ ಆಗುತ್ತೆ, ಚಾಲ್ಲಿ ; ಇಲ್ಲಿಂದ ಮುಂದೆ ಹೋಗುತ್ತೀಯೆ ಅಣ್ಣ ; ಹೆಚ್ಚು ಅಬ್ಬರ ಮಾಡದೆ.

ಲೇಡಿ ಬ್ರಿಟೊ : ನಿಜವಾಗಿ, ಬಾರ್ಬರ, ಮತ ಬಹು ಸುಖಕರವಾದ್ದು ಎಂಬಂತೆ ನೀನು ಮಾತನಾಡುತ್ತೀಯೆ ! ನಿನಗೆ ಸ್ವಲ್ಪ ಔಚಿತ್ಯದ ಬುದ್ಧಿ ಬರಲಿ.

ಅಂಡರ್‌ಷಾಫ್ಟ್ : ನನಗೆ ಅದು ಅಸುಖಕರ ವಿಷಯವೆನ್ನಿಸುವುದಿಲ್ಲ, ಪ್ರಿಯೆ. ಸಮರ್ಥರಾದ ಜನ ಆ ಒಂದಕ್ಕೆ ಮಾತ್ರವೇ ಲಕ್ಷ್ಯ ಕೊಡುವುದು.

ಲೇಡಿ ಬ್ರಿಟೊ : (ಗಡಿಯಾರ ನೋಡುತ್ತ) ಆಗಬಹುದು. ಅದು ಬೇಕೆಂದು ನಿಮಗೆ ನಿರ್ಧರವಾದರೆ ಕ್ರಮವಾಗಿ ಮರ್ಯಾದೆಯಲ್ಲಿ ಅದನ್ನು ನಡಸೋಣ. ಚಾರ್ಲ್ಸ್, ಪ್ರಾರ್ಥನೆಗಂಟೆ ಬಾರಿಸು.

(ಎಲ್ಲರೂ ವಿಸ್ಮಿತರಾಗುತ್ತಾರೆ. ಸ್ಟೀವನ್ ಆಶ್ಚರ್ಯದಿಂದ ಏಳುತ್ತಾನೆ.)

ಲೋಮ್ಯಾಕ್ಸ್ : ಓ...ಹಾಂಗಂತೀರೇನು ?

ಅಂಡರ್‌ಷಾಫ್ಟ್ : (ಏಳುತ್ತ) ಹಾಗಿದ್ದರೆ, ನಾನಿಲ್ಲಿಂದ ಹೊರಟು ಹೋಗಬೇಕಾಗುತ್ತದೆ.

ಲೇಡಿ ಬ್ರಿಟೊ : ಈಗ ಹೋಗುವುದಕ್ಕೆ ಹೇಗೆ ಆಗುತ್ತೆ, ಆಂಡ್ರ್ಯೂ. ತುಂಬಾ ಅಯುಕ್ತವಾಗುತ್ತೆ. ಕುಳಿತುಕೊಳ್ಳಿ. ಕೆಲಸದೋರು ಏನೆಂದುಕೊಳ್ಳುತ್ತಾರೆ ?

ಅಂಡರ್‌ಷಾಫ್ಟ್ : ಪ್ರಿಯೆ, ಅಂತಃಸಾಕ್ಷಿಗೆ ಸಂಬಂಧಿಸಿದ ಕೆಲವು ನಿರ್ಬಂಧಗಳು ಇವೆ. ನಾನು ಒಂದು ಮಧ್ಯಸ್ಥವನ್ನು ಸೂಚಿಸಲೆ ? ದಿವಾನಖಾನೆಯಲ್ಲಿ ಬಾರ್ಬರ ಒಂದು ಸಣ್ಣ ಪ್ರಾರ್ಥನೆ ನಡಸುವ ಹಾಗಿದ್ದರೆ, ಅವಳ ಜೊತೆಗೆ ವಾದ್ಯಗಾರನಾಗಿ ಲೋಮ್ಯಾಕ್ಸ್ ಆರ್ಗನ್ ಬಾರಿಸಲಿ. ಸಂತೋಷವಾಗಿ ನಾನೂ ಅಲ್ಲಿ ಸೇರಿಕೊಳ್ಳುತ್ತೇನೆ. ಒಂದು ಟ್ರಾಂಬೋನ್ ತಂದು ಕೊಡುವ ಹಾಗಿದ್ದರೆ ನಾನೂ ಸೇರಿಕೊಳ್ಳುತ್ತೇನೆ.

ಲೇಡಿ ಬ್ರಿಟೊ : ಅಣಕಿಸಬೇಡಿ, ಆಂಡ್ರ್ಯೂ.

ಅಂಡರ್‌ಷಾಫ್ಟ್ : (ಪೆಟ್ಟುಬಿದ್ದಂತೆ—ಬಾರ್ಬರಳಿಗೆ) ನಾನು ಅಣಕಿಸುತ್ತೇನೆಂದು ನಿನಗೆ ಅನ್ನಿಸುತ್ತೆಯೆ ? ಇಲ್ಲವಲ್ಲ, ಮಗು.

ಬಾರ್ಬರ : ಖಂಡಿತ ನೀವು ಅಣಕಿಸಿದರೂ ನನಗೇನೂ ಅದರಿಂದ ಅಸಮಾಧಾನವಿಲ್ಲ. ನಮ್ಮ ಸೈನ್ಯದ ಅರ್ಧ ಜನ ಅವರ ಮೊದಲ ಮೀಟಿಂಗುಗಳಿಗೆ ಮೋಜಿಗಾಗಿ ಬಂದವರು. (ಏಳುತ್ತ) ಬನ್ನಿ ಹೋಗೋಣ.

(ತಂದೆಯ ಸುತ್ತಲೂ ತನ್ನ ತೋಳನ್ನು ಸುತ್ತಿ ಅವನನ್ನು ಎಳೆದುಕೊಂಡು ಹೋಗುತ್ತಾಳೆ. ಹೊಸಿಲಿಂದ ಇತರರತ್ತ) ಬಾ, ಡಾಲ್ಲಿ, ಬಾ ಚಾಲ್ಲಿ. (ಕಸಿನ್ಸ್ ಏಳುತ್ತಾನೆ).

ಲೇಡಿ ಬ್ರಿಟೊ : ನನಗೆ ಎಲ್ಲರೂ ಅವಿಧೇಯರಾಗಲು ನಾನು ಬಿಡುವುದಿಲ್ಲ. ಅಡಾಲ್ಫಸ್, ಕುಳಿತುಕೋ. (ಅವನು ಹಾಗೆ ಮಾಡುವುದಿಲ್ಲ.) ಚಾರ್ಲ್ಸ್, ನೀನು ಹೋಗಬಹುದು. ಪ್ರಾರ್ಥನೆಗೆ ನೀನು ತಕ್ಕವನಲ್ಲ. ನಿನ್ನ ಮುಖವನ್ನು ನಿನ್ನ ವಶದಲ್ಲಿಟ್ಟುಕೊಳ್ಳಲಾರೆ ನೀನು.

ಲೋಮ್ಯಾಕ್ಸ್ : ಓ....ಹಾಗೇನು ? (ಹೊರಗೆ ಹೋಗುತ್ತಾನೆ)

ಲೇಡಿ ಬ್ರಿಟೊ : (ಮುಂದುವರಿಯುತ್ತ) ಆದರೆ ನೀನು ಅಡಾಲ್ಫಸ್, ಇಷ್ಟಪಟ್ಟರೆ ಸರಿಯಾಗಿ ನಡೆದುಕೊಳ್ಳಬಲ್ಲೆ. ನೀನು ಇಲ್ಲೇ ಉಳಿಯತಕ್ಕದ್ದು.

ಕಸಿನ್ಸ್ : ಲೇಡಿ ಬ್ರಿಟೊ ಅವರೆ, ಕುಟುಂಬದಲ್ಲಿ ಬಳಸುವ ಪ್ರಾರ್ಥನಾ ಪುಸ್ತಕದಲ್ಲಿ ಕೆಲವು ಸಂಗತಿಗಳುಂಟು. ಅವುಗಳಲ್ಲಿ ಕೆಲವನ್ನು ನಿಮ್ಮ ಬಾಯಿಂದ ನಾನು ಕೇಳಲಾರೆ.

ಲೇಡಿ ಬ್ರಿಟೊ : ಯಾವ ಸಂಗತಿಗಳೆಂದು ಕೇಳಬಹುದೆ ?

ಕಸಿನ್ಸ್ : ಹಾಗಾದರೆ ಕೇಳಿ. ಸೇವಕರೆದುರಿಗೆಲ್ಲ : ನಾವು ಮಾಡಕೂಡದಾಗಿದ್ದನ್ನು ಮಾಡಿದ್ದೇವೆ ; ಮಾಡಬೇಕಾಗಿದ್ದುದನ್ನು ಮಾಡಿಲ್ಲ ; ನಮ್ಮಲ್ಲಿ ಆರೋಗ್ಯವಿಲ್ಲ ಎಂಬುದನ್ನು ನೀವು ಹೇಳಬೇಕಾಗುತ್ತದೆ. ನಿಮಗಾಗಲಿ ಬಾರ್ಬರಗಾಗಲಿ ಅಂಥ ಅನ್ಯಾಯ ಮಾಡಿಕೊಳ್ಳುವ ಸಂಗತಿಗಳನ್ನು ನಿಮ್ಮಿಂದ ನಾನು ಕೇಳಲಾರೆ. ನಾನೇ ಅದನ್ನು ಸುತರಾಂ ಒಪ್ಪುವುದಿಲ್ಲ. ನನ್ನ ಕೈಯಲ್ಲಾದ್ದನ್ನೆಲ್ಲ ನಾನು ಮಾಡಿದ್ದೇನೆ. ಅದು ನಿಜ ಆಗಿದ್ದರೆ ಬಾರ್ಬರಳನ್ನು ಮದುವೆಯಾಗಲು, ನಿಮಗೆ ಮುಖ ತೋರಿಸಲು ನನಗೆ ಧೈರ್ಯವಾಗುವುದಿಲ್ಲ. ಆದ್ದರಿಂದ ನಾನು ದಿವಾನಖಾನೆಗೆ ಹೋಗಬೇಕು.

ಲೇಡಿ ಬ್ರಿಟೊ : (ಕೋಪದಿಂದ) ಹಾಗಾದರೆ ಹೋಗು (ಬಾಗಿಲಿಗೆ ಹೊರಡುತ್ತಾನೆ) ಅಡಾಲ್ಫಸ್, ಇದನ್ನು ನೆನಪಿಡು. (ಕಿವಿಗೊಡಲು ಅವನು ತಿರುಗುತ್ತಾನೆ) ನನಗೆ ಬಹು ಬಲವಾದ ಸಂಶಯವಿದೆ ; ನೀನು ಮುಕ್ತಿ ಸೈನ್ಯಕ್ಕೆ ಹೋದ್ದು ಬಾರ್ಬರ ಆರಾಧನೆಗಾಗಿ, ಇನ್ನೇತಕ್ಕೂ ಅಲ್ಲ ಎಂದು. ನೀನು ಎಷ್ಟು ಕ್ರಮವಾಗಿ, ಜಾಣ ತನದಿಂದ ನನ್ನಲ್ಲಿ ಆಷಾಢಭೂತಿಯಂತೆ ವರ್ತಿಸುವೆ ಎಂದು ನಾನು ಚೆನ್ನಾಗಿ ಮನದಟ್ಟು ಮಾಡಿಕೊಂಡಿದ್ದೇನೆ. ನಿನ್ನ ಗುಟ್ಟು ನನಗೆ ಗೊತ್ತಾಗಿದೆ. ಬಾರ್ಬರ ಕಂಡುಹಿಡಿಯದಂತೆ ಎಚ್ಚರಿಕೆಯಿಂದಿರು. ಅಷ್ಟೇ.

ಕಸಿನ್ಸ್ : (ಕದಡದ ಸವಿಯಿಂದ) ನನ್ನ ಮೇಲೆ ಚಾಡಿ ಹೇಳಬೇಡಿ. (ಕಳ್ಳನಂತೆ ಹೋಗುತ್ತಾನೆ.)

ಲೇಡಿ ಬ್ರಿಟೊ : ಶಾರ, ನಿನಗೆ ಹೋಗಬೇಕೆನ್ನಿಸಿದರೆ, ಹೋಗು. ಅಲ್ಲಿ ಕುಳಿತು ಕೊಂಡು ಇಲ್ಲಿಂದ ಒಂದು ಸಾವಿರ ಮೈಲಿ ದೂರವಿದ್ದರೆ ಚೆನ್ನಾಗಿತ್ತು ಎಂಬಂತೆ ಇರುವುದಕ್ಕಿಂತ ಬೇರೆ ಏನಾದರೂ ಮೇಲೇ.

ಶಾರ : (ನಿರ್ಬಲ) ಆಗಲಿ ಅಮ್ಮ. (ಹೊರಗೆ ಹೋಗುತ್ತಾಳೆ. ಲೇಡಿ ಬ್ರಿಟೊ ಇದ್ದಕ್ಕಿದ್ದಂತೆ ಕಣ್ಣಲ್ಲಿ ನೀರು ಹಾಕಿಕೊಳ್ಳುತ್ತಾಳೆ.)

ಸ್ಟೀವನ್ : (ಅವಳ ಬಳಿ ಹೋಗಿ) ಅಮ್ಮ ಏನು ಸಮಾಚಾರ ?

ಲೇಡಿ ಬ್ರಿಟೊ : (ಕೈವಸ್ತ್ರದಿಂದ ಕಣ್ಣೀರನ್ನು ಒರಸಿಕೊಂಡು) ಏನಿಲ್ಲ. ಅವಿವೇಕ.

ಇಷ್ಟವಾದರೆ ನೀನೂ ಅವರೊಡನೆ ಹೋಗಬಹುದು, ನನ್ನನ್ನು ಸೇವಕರೊಡನೆ ಬಿಟ್ಟು.

ಸ್ಟೀವನ್ : ಹೋ...ನೀನು ಹಾಗೆ ಯೋಚಿಸಬಾರದಮ್ಮ...ನನಗೆ—ನನಗೆ—ಆತನು ಸೇರುವುದಿಲ್ಲ.

ಲೇಡಿ ಬ್ರಿಟೊ : ಇತರರಿಗೆ ಸೇರುತ್ತದೆಯಲ್ಲ. ಹೆಂಗಸಿನ ಪಾಡಿನಲ್ಲಿ ಇದು ಅನ್ಯಾಯ. ಮಕ್ಕಳನ್ನು ಸಾಕಿ ಬೆಳಸಬೇಕು. ಅದಕ್ಕಾಗಿ ಅವರ ಮೇಲೆ ನಿರ್ಬಂಧಗಳನ್ನು ಹಾಕಬೇಕು. ಅವರು ಬಯಸಿದುದನ್ನು ನಿರಾಕರಿಸಬೇಕು. ಅವರಿಗೆ ಅದು ಇದು ಎಂಬ ಕೆಲಸ ಹಚ್ಚಬೇಕು. ತಪ್ಪು ಮಾಡಿದಾಗ ಶಿಕ್ಷಿಸಿ ಎಲ್ಲ ಅಪ್ರಿಯ ಗಳನ್ನೂ ಮಾಡಬೇಕು. ಆಮೇಲೆ ಅಪ್ಪ ಬಂದು ಅವರ ತಲೆ ಸವರಿ, ಅವರನ್ನು ಕೆಡಿಸುವುದು ಬಿಟ್ಟು, ಮಾಡಲು ಬೇರೆ ಏನೂ ಕೆಲಸವಿಲ್ಲದೆ – ಆಕೆಯ ಕೆಲಸವೆಲ್ಲಾ ಮುಗಿದ ಮೇಲೆ ಬಂದು, ಅವರ ಪ್ರೀತಿಯನ್ನು ಅವಳಿಂದ ಕದ್ದುಕೊಂಡು ಹೋಗುತ್ತಾನೆ.

ಸ್ಟೀವನ್ : ನಿಮ್ಮಲ್ಲಿ ನಮಗಿರುವ ಪ್ರೀತಿಯನ್ನು ಆತ ಕದ್ದುಕೊಂಡು ಹೋಗಿಲ್ಲ. ಅದು ಕೌತುಕ ಮಾತ್ರ.

ಲೇಡಿ ಬ್ರಿಟೊ : (ರಭಸದಿಂದ) ನನಗೆ ಸಾಂತ್ವನ ಬೇಕಾಗಿಲ್ಲ ಸ್ಟೀವನ್. ನನಗೇನೂ ಆಗಿಲ್ಲ. (ಎದ್ದು ಬಾಗಿಲ ಕಡೆ ಹೋಗುತ್ತಾಳೆ.)

ಸ್ಟೀವನ್ : ಎಲ್ಲಿಗೆ ಹೋಗುತ್ತಿದ್ದೀರಿ, ಅಮ್ಮ ?

ಲೇಡಿ ಬ್ರಿಟೊ : ಇನ್ನೆಲ್ಲಿಗೆ ? ದಿವಾನಖಾನೆಗೆ (ಹೊರಗೆ ಹೋಗುತ್ತಾಳೆ. ಬಾಗಿಲು ತೆರೆದಾಗ ರಾಗಮಾಲಿಕೆಯಲ್ಲಿ 'Onward Christian Soldiers' ಕೇಳು ತ್ತದೆ. ಜೊತೆಗೆ ಖಂಜರಿಯ ಶ್ರುತಿ ಕೇಳುತ್ತದೆ.) ನೀನೂ ಬರುತೀಯ ಸ್ಟೀವನ್ ?

ಸ್ಟೀವನ್ : ಇಲ್ಲ, ಖಂಡಿತ ಬರುವುದಿಲ್ಲ. (ಹೋಗುತ್ತಾಳೆ. ಅವನು ಮಂಚಿಕೆಯ ಮೇಲೆ ಕುಳಿತುಕೊಳ್ಳುತ್ತಾನೆ. ತುಟಿ ಬಿಗಿದುಕೊಂಡಿದೆ. ಬಲವಾದ ಅಪ್ರೀತಿ ಇದೆ.)

# ಅಂಕ ೧

[ಜನವರಿ ತಿಂಗಳು ಒಂದು ಚಳಿಯ ಬೆಳಿಗ್ಗೆ. ವೆಸ್ಟ್‌ಹಂ ನಿಲಯದ ಅಂಗಳ ; ಒಂದು ಮೇಜು, ಗಾಳಿಯು ಹೊಡೆತ ಬೀಳದಂತೆ ಮರೆಯಾಗಿದೆ. ಅದರ ಮೇಲೆ ಒಬ್ಬ ಗಂಡಸು, ಒಬ್ಬ ಹೆಂಗಸು ಕುಳಿತಿದ್ದಾರೆ. ಗತಿಹೀನರು. ನೀರು, ಹಾಲು, ರೊಟ್ಟಿಯ ಊಟ ಮುಗಿಸುತ್ತಿದ್ದಾರೆ...

ಗಂಡಸು 25 ವಯಸ್ಸಿನವ ; ಉದ್ಯೋಗ ಕಳೆದುಕೊಂಡಿರುವವ : ಹೆಣ್ಣು ನಾಡಾಡಿ. ಒಂಟಿಯಾಗಿ, ಸದ್ಯಃ ಸ್ವಲ್ಪ ಊಟ ಸಿಕ್ಕಿ ಹರ್ಷದಿಂದಿದ್ದಾರೆ. ಗಂಡಸು ಮೇಲೆದ್ದು ನಡೆದಾಡುತ್ತ ಜೇಬುಗಳಲ್ಲಿ ಕೈಗಳನ್ನು ಹಾಕಿ ಆಗಾಗ ಯಾವುದೊ ತಾಳಕ್ಕೆ ಹೆಜ್ಜೆ ಹಾಕುತ್ತ ಇದ್ದಾನೆ.]

ಹೆಂಗಸು : ಊಟ ಆದ ಮೇಲೆ ಸ್ವಲ್ಪ ಮೇಲಾಗಿ ಕಾಣಿಸುತ್ತಿದೆಯೊ ?

ಗಂಡಸು : ಇಲ್ಲ. ಅದನ್ನು ಊಟವೆನ್ನುತ್ತೀಯ ? ಅದು ನಿನಗೆ ಸಾಕಾಗಿರಬಹುದೇನೊ. ಬುದ್ಧಿವಂತನಾದ, ಕೆಲಸ ಮಾಡುವ, ನನಗೆ ಅದು ಎಂಥ ಊಟ ?

ಹೆಂಗಸು : ಕೆಲಸ ಮಾಡುವ ಮನುಷ್ಯ ? ನಿನ್ನ ವೃತ್ತಿ ?

ಗಂಡಸು : ಚಿತ್ರಕಾರ !

ಹೆಂಗಸು : (ನಂಬದವಳಂತೆ) ಹೂ... ಇರಬೇಕು.

ಗಂಡಸು : ಹೌದು...ಇರಬೇಕು. ನಂಗೊತ್ತಿದೆ. ಮಾಡೋಕೆ ಏನೂ ಕೆಲಸ ಇಲ್ಲದೆ ಇರೊ ಪೋಕರಿ ಚಿತ್ರಕಾರನೆಂದು ತನ್ನನ್ನು ಕರೆದುಕೊಳ್ಳುತ್ತಾನೆ. ನಾನು ನಿಜವಾದ ಚಿತ್ರಕಾರ. ಎಳೆಯನ್ನು ಹಿಡಿದು ಬಣ್ಣ ಹಾಕುವವನು ನಾನು. ನಯಗೆಲಸ ಮಾಡಿ ಮುಗಿಸುವವನು ; ಕೆಲಸ ಸಿಕ್ಕಿದಾಗ ವಾರಕ್ಕೆ 38 ಷಿಲಿಂಗ್ ಸಂಪಾದನೆ ಆಗುತ್ತೆ.

ಹೆಂಗಸು : ಹಾಗಾದರೆ...ಹೋಗಿ ಯಾಕೆ ತೆಗೆದುಕೊಳ್ಳಬಾರದು ?

ಗಂಡಸು : ಯಾಕೇ ? ಹೇಳ್ತೀನೆ. ಒಂದು : ನಾನು ಬುದ್ಧಿವಂತ. ಫ್‌ಫ್‌ಫ್‌ಫ್! ...ಎಷ್ಟು ಅಧ್ವಾನ್ನ ಚಳಿ, ಇಲ್ಲಿ ? (ಎರಡು ಹೆಜ್ಜೆ ಕುಣಿಯುತ್ತಾನೆ)—ಹೌದು ಬಂಡವಾಳಗಾರರು ನನ್ನದೆನ್ನುವ ಜೀವನಮಟ್ಟದವರು ಎನ್ನುವವರಿಗಿಂತ ನಾನು ಹೆಚ್ಚು ಬುದ್ಧಿಶಾಲಿ. ಅವರು ಕಟ್ಟುವ ಆಟವನ್ನು ಅರ್ಥಮಾಡಿಕೊಳ್ಳುವ ನನ್ನನ್ನು ಕಂಡರೆ ಅವರಿಗಾಗುವುದಿಲ್ಲ. ಎರಡು : ಬುದ್ಧಿವಂತ ಪ್ರಾಣಿ ಎಂಬುದಕ್ಕೆ ಯುಕ್ತವಾದಷ್ಟು ಸೌಖ್ಯ ಅಗತ್ಯ ಎನ್ನಿಸುತ್ತೆ. ಆದ್ದರಿಂದ ನನಗೆ ಅವಕಾಶ

ದೊರೆತಾಗ ಸ್ವಲ್ಪ ಬಲವಾಗಿ ಕುಡಿಯುತ್ತೇನೆ. ಮೂರು : ನನ್ನ ವರ್ಗದವರ ಜೊತೆಗೆ ನಾನು ನಿಲ್ಲುವವನು. ಎಷ್ಟು ಕಡಮೆ ಕೆಲಸ ಅಂದರೆ ಅಷ್ಟು ಕಡಮೆ ಕೆಲಸ ಮಾಡ್ತೇನೆ. ಜೊತೆ ಕೆಲಸಗಾರರಿಗಷ್ಟು ಉಳಿಯಲಿ ಎಂದು ಅರ್ಧ ಕೆಲಸ ಅವರಿಗೆ ಉಳಿಸುತೇನೆ. ನಾಲ್ಕು : ನಾನು ಜಾಣನಾದ್ದರಿಂದ ಕಾನೂನಿನ ಒಳಗೆ ಏನು ಹೇಳಿದೆ, ಹೊರಗೇನಿದೆ ಎಂದು ನನಗೆ ತಿಳಿಯುತ್ತೆ. ಕಾನೂನಿಗೆ ಒಳಪಟ್ಟು ಬಂಡವಾಳಗಾರರು ಮಾಡುವಂತೆ ನಾನೂ ಮಾಡುತ್ತೇನೆ. ಕೈಗೆ ಸಿಕ್ಕಿದ್ದನ್ನು ನಾನೂ ಹೊಡ್ಕೊಳ್ತೇನೆ. ಯೋಗ್ಯ ಸಮಾಜದಲ್ಲಿ ನಾನು ಅಮಲೇರದಂತೆ ಇರುತ್ತೇನೆ. ಕೆಲಸ ಚೆನ್ನಾಗಿ ಮಾಡಿ; ಪ್ರಾಮಾಣಿಕನಾಗಿ ;–ರೋಮಿನಲ್ಲಿದ್ದಾಗ ರೋಮನರಂತೆ ಇರೋದು ಎಂದು ಹೇಳ್ತಾರಲ್ಲ ಹಾಗೆ—ನಡಕೊತೇನೆ. ಪರಿಣಾಮ ಏನು ? ವ್ಯಾಪಾರ ಚೆನ್ನಿಲ್ಲದಿದ್ದಾಗ—ಈಗ ಪೂರ್ತಿ ಅದು ಹದಗೆಟ್ಟಿದೆ—ಮಾಲಕರು ಅರ್ಧ ಮಂದಿ ಕೆಲಸಗಾರರನ್ನು ತೆಗೆದು ಹಾಕಬೇಕಾಗುತ್ತೆ. ಸಾಧಾರಣವಾಗಿ ನನ್ನಿಂದ ಪ್ರಾರಂಭಿಸುತಾರೆ.

ಹೆಂಗಸು : ನಿನ್ನ ಹೆಸರೇನು ?

ಗಂಡಸು : ಪ್ರೈಸ್. ಬ್ರಾಂಟೀರ್ ಓಬ್ರಿಯೆನ್ ಪ್ರೈಸ್. ವಾಡಿಕೆಯಾಗಿ ಚಿಕ್ಕದಾಗಿ ಸ್ನಾಬಿ ಪ್ರೈಸ್.

ಹೆಂಗಸು : ಸ್ನಾಬಿ…ಬಡಗಿಯಲ್ಲವೆ ? ನೀನು ಚಿತ್ರಕಾರ ಎಂದೆ ?

ಪ್ರೈಸ್ : ಆ ಜಾತಿ ಜಂಬಗಾರ ಅಲ್ಲ. ಸಭ್ಯ ಜಾತಿಯದು ! ನನ್ನ ತಲೆ ಇನ್ನೂ ಮೇಲೆಯೇ ಇದೆ, ನನ್ನ ಬುದ್ಧಿವಂತಿಕೆಯ ಕಾರಣದಿಂದ. ನಮ್ಮ ತಂದೆ ಓದೊ ಮನುಷ್ಯ. ಯೋಚಿಸೊ ಮನುಷ್ಯ. ಕಾಗದ ಲೇಖನಿ ವ್ಯಾಪಾರಿ ಕೂಡ. ನಾಡಾಡಿ ಸೌದೆ ಒಡೆಯುವ, ನೀರು ಸೇದುವ ಮನುಷ್ಯ ಅಲ್ಲ ನಾನು. ಅದೆಲ್ಲ ಮರೆಯಬೇಡ. (ತನ್ನ ಪೀಠಕ್ಕೆ ಹೋಗಿ ಕುಡಿಯುವ ಪಾತ್ರೆಯನ್ನು ಕೈಗೆ ತೆಗೆದುಕೊಂಡು ಕುಳಿತುಕೊಳ್ಳುವನು.) ನಿನ್ನ ಹೆಸರೇನು ?

ಹೆಂಗಸು : ರಮ್ಮಿ ಮಿಚೆನ್ಸ್, ಅಯ್ಯ.

ಪ್ರೈಸ್ : (ಕೈಯಿಂದ ಹಾಲಿನ ಪಾತ್ರೆಯನ್ನೆತ್ತಿ ಅವಳ ಹೆಸರನ್ನು ಹೇಳಿ, ಶುಭ ಹರಸಿ) 'ನಿನಗೆ ಆರೋಗ್ಯವಾಗಲಿ'—ಎಂದು ಹೇಳಿ ಕುಡಿಯುತ್ತೇನೆ, ಮಿಸ್. ಮಿಚೆನ್ಸ್.

ಹೆಂಗಸು : (ಅವನನ್ನು ತಿದ್ದಿ) ಮಿಸೆಸ್ ಮಿಚೆನ್ಸ್.

ಗಂಡಸು : ಏನು….ರಮ್ಮೀ…ರಮ್ಮೀ…ಮರ್ಯಾದಸ್ಥ, ಮದುವೆ ಆದ ಹೆಂಗಸು ನೀನು. ಕೆಟ್ಟ ಹೆಂಗಸಂತೆ ನಟಿಸುತ್ತ ಈ ಮುಕ್ತಿ ಸೈನ್ಯದವರಿಂದ ಉದ್ಧಾರವಾಗಲು ಯತ್ನಿಸುತ್ತಿದ್ದೀಯ ? ಅದೇ ಹಳೆ ಆಟ.

ರಮ್ಮಿ : ನಾನೇನು ಮಾಡಬೇಕು ? ಉಪವಾಸ ಇರಲಾರೆ. ಈ ಮುಕ್ತಿ ಸೈನ್ಯದ ಹುಡುಗಿಯರು—ತುಂಬಾ ಒಳ್ಳೆಯವರು. ನನ್ನನ್ನು ತಾವು ಉದ್ಧಾರ ಮಾಡೊ ಮುಂಚೆ ನಾವೆಷ್ಟು ಹೆಚ್ಚು ಒಳ್ಳೆಯವರಾಗಿದ್ದರೂ ಅಷ್ಟೂ ಅಷ್ಟು ಕೆಟ್ಟವರಾಗಿದ್ದೆವು ಎಂದು ಎಣಿಸಬೇಕು ಎನ್ನಿಸುತ್ತೆ ಅವರಿಗೆ. ಪಾಪ ತುಂಬಾ ಒಳ್ಳೆಯ ಮಕ್ಕಳು. ಅವರಿಗೂ ಒಂದಷ್ಟು ಕೀರ್ತಿ ಬರಲೇಳು. ಅವರು ತಾನೇ ಕೆಲಸ ಮಾಡಿ ಮಾಡಿ ಚಿಂದಿ ಚೂರಾಗಿ ಹೋಗ್ತಾರೆ. ಇತರರಿಗಿಂತ ನಾವೇನು ಕೀಳಲ್ಲ ಎಂದು ತಿಳಿಸಿದರೆ ನಮ್ಮನ್ನು ಉದ್ಧಾರ ಮಾಡಲು ಅವರಿಗೆ ಹಣ ಎಲ್ಲಿ ಬರ್ತಿತ್ತು ! ಸಭ್ಯ ಗೃಹಸ್ಥರೂ ಗೃಹಿಣಿಯರೂ ಎಂಥವರು ಎಂದು ನಿನಗೆ ಗೊತ್ತಿದೆಯಲ್ಲವೆ ?

ಪ್ರೈಸ್ : ಕಳ್ಳಮುಂಡೇವು. ಆದರೂ, ನನಗೆ ಅವರ ಕೆಲಸ ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಅನ್ಸುತ್ತೆ. ರಮ್ಮಿ ಎಂದರೆ ಏನು ? ಮುದ್ದಿನ ಹೆಸರೇನೊ ?

ರಮ್ಮಿ : ರೊಮೋಲ ಎಂಬುದರ ಚಿಕ್ಕ ಹೆಸರು.

ಪ್ರೈಸ್ : ಯಾತಕ್ಕೆ ಎಂದೆ !

ರಮ್ಮಿ : ರೊಮೋಲ. ಒಂದು ಹೊಸ ಪುಸ್ತಕದಲ್ಲಿದ್ದ ಹೆಸರು ಅದು. ನಾನು ಹಾಗೆ ಬೆಳೀಬೇಕು ಎಂದು ನಮ್ಮ ತಾಯಿಗೆ ಇಷ್ಟ ಬಂತು, ಇಟ್ಟರು.

ಪ್ರೈಸ್ : ನಾವು ದೌರ್ಭಾಗ್ಯದಲ್ಲಿ ಜೊತೆಗಾರರು, ರಮ್ಮಿ. ನಮ್ಮಿಬ್ಬರ ಹೆಸರನ್ನೂ ಜನ ಸುಲಭವಾಗಿ ಉಚ್ಚಾರ ಮಾಡೋಕಾಗೋಲ್ಲ. ನಾನು ಸ್ನಾಬಿ, ನೀನು ರಮ್ಮಿ. ಬಿಲ್, ಸ್ಯಾಲಿ ಎಂದಿಟ್ಟರೆ, ನಮ್ಮ ತಾಯಿತಂದೆಗಳಿಗೆ ಸಾಕು ಎನ್ನಿಸಲಿಲ್ಲ. ಬದುಕೇ ಹೀಗೆ.

ರಮ್ಮಿ : ನಿನ್ನನ್ನು ಕಾಪಾಡಿದವರು ಯಾರು ಮಿಸ್ಟರ್. ಪ್ರೈಸ್ ? ಮೇಜರ್ ಬಾರ್ಬರ ಏನು ?

ಪ್ರೈಸ್ : ಅಲ್ಲ. ನಾನೇ ಸ್ವಂತವಾಗಿ ಇಲ್ಲಿಗೆ ಬಂದಿದ್ದೇನೆ. ಪರಿವರ್ತಿತನಾಗಿ ಬ್ರಾಂಟೇರ್ ಓಬ್ರಿಯೆನ್ ಪ್ರೈಸ್ ಆಗುತ್ತೇನೆ. ಅವರು ಯಾವುದನ್ನು ಮೆಚ್ಚುತಾರೆ ಎಂಬುದು ನಂಗೆ ಗೊತ್ತು. ಹೇಗೆ, ದೈವದ್ರೋಹದ ಮಾತಾಡಿದೆ, ಜೂಜಾಡಿದೆ, ನನ್ನ ಬಡ ಅಮ್ಮನನ್ನು ಹೇಗೆ ಹೊಡೆದೆ ಎಂದು ಹೇಳ್ತೇನೆ !

ರಮ್ಮಿ : (ಪೆಟ್ಟುಬಿದ್ದಂತೆ) ನಿಮ್ಮ ಅಮ್ಮನ್ನ ಹೊಡೀತಿದ್ದೆಯ ?

ಪ್ರೈಸ್ : ಶಕ್ಯವಿಲ್ಲ. ಅವಳು ನನ್ನನ್ನು ಹೊಡೆಯುತ್ತಿದ್ದಳು. ಹೋಗಲಿ ಬಿಡು. ಬಾ...ಸುಧಾರಿತನಾದ ಚಿತ್ರಕಾರನು ಹೇಳುವುದನ್ನು ಕೇಳು. ಆಕೆ ಎಷ್ಟು ದೈವಭಕ್ತಳಾದ ಹೆಂಗಸು ಅಂತೀಯೆ : ನನ್ನನ್ನು ತನ್ನ ಮೊಣಕಾಲಿಗೆ ಆನಿಸಿಕೊಂಡು ನನಗೆ ದೇವರ ಪ್ರಾರ್ಥನೆಯನ್ನು ಹೇಳಿಕೊಡುತಿದ್ದಳು ಎಂಬುದನ್ನು ಕೇಳುವೆಯಂತೆ. ನಾನು ಹೇಗೆ ಕುಡಿದು ಮನೇಗೆ ಬರ್ತ ಇದ್ದು, ಬೆಳ್ಳನ್ನ ಅವಳ

ನರಿಕೂದಲನ್ನು ಹಿಡಕೊಂಡು, ಅವಳನ್ನು ಹಾಸಿಗೆಯಿಂದ ಹೊರಕ್ಕೆಳೆದು, ಊದುಗೊಳವಿಯಿಂದ ಹೇಗೆ ಹೊಡೆಯುತ್ತಿದ್ದೆ ಎಂಬುದನ್ನು ಕೇಳುವೆಯಂತೆ.

ರಮ್ಮಿ : ಹೆಂಗಸರಾದ ನಮಗೆ ಇದೇ ಅನ್ಯಾಯ ಆಗುವುದು. ನೀವು ನಿಜವೆಂದು ಹೇಳುವುದು—ನಾವು ಹೇಳುವುದರಷ್ಟೇ ದೊಡ್ಡ ಸುಳ್ಳುಗಳು. ನೀವು ನಿಜವಾಗಿ ಮಾಡಿದ್ದನ್ನು ಹೇಳುವುದೇ ಇಲ್ಲ ; ನಮ್ಮ ಹಾಗೇ. ಆದರೆ... ನೀವು ಗಂಡಸರು. ನೇರವಾಗಿ ಮೀಟಿಂಗುಗಳಲ್ಲಿ ಹೇಳಬಲ್ಲಿರಿ. ನಿಮ್ಮ ಪ್ರಾಮಾಣಿಕತೆಗೆ ಬೆಲೆ ಕೊಡುತಾರೆ. ನಾವು ಹೇಳುವಂಥ ಸುಳ್ಳುಗಳನ್ನು ಒಂದು ಸಲಕ್ಕೆ ಒಬ್ಬಳೇ ಮರ್ಯಾದಸ್ಥ ಹೆಂಗಸಿನ ಕಿವಿಯಲ್ಲಿ, ಪಿಸುಮಾತಿನಲ್ಲಿ ಹೇಳಬೇಕಾಗುತ್ತೆ. ಎಷ್ಟೇ ದೈವಭಕ್ತರಾಗಿರಲಿ, ಇದು ಮರ್ಯಾದೆಯಾಗಿ ಕಾಣುವುದಿಲ್ಲ.

ಪ್ರೈಸ್ : ಸರಿ ! ಅದು ಹೋಗಲಿ. ಸರಿಯಾದ್ದನ್ನು ಮಾಡಿದರೆ, ಈ ಸೈನ್ಯವನ್ನು ಇರಗೊಡಿಸುತ್ತಿದ್ದರೆ ? ಉಹುಂ... ನನ್ನ ತಲೆಬಾಚಿ, ನಮ್ಮನ್ನು ಒಳ್ಳೇ ಮನುಷ್ಯರನ್ನಾಗಿಮಾಡಿ, ಇತರರು ನಮ್ಮನ್ನು ದರೋಡೆ ಮಾಡುವುದಕ್ಕೂ ನಮಗೆ ಇತರರು ಏನು ಮಾಡೋದಕ್ಕೂ ಅವಕಾಶ ಆಗುವಂತೆ ಮಾಡಿಕೊಡುತಾರೆ. ಆದರೆ, ಯಾರು ಎಂಥ ಆಟ ಆಡುತಾರೆಯೊ ಅಂಥ ಆಟ ವನ್ನು ನಾನೂ ಆಡುತ್ತೇನೆ. ಯಾರಿಗೊ ಸಿಡಿಲು ಬಡಿದಂತೆ, ಯಾರದೊ ಒಂದು ವಾಣಿ 'ಸ್ನಾಬಿ ಪ್ರೈಸ್, ಅನಂತಕಾಲವನ್ನು ನೀನು ಎಲ್ಲಿ ಕಳೆಯುವೆ ?' ಎಂದು ಕೇಳುವಂತೆ ನಟಿಸುತ್ತೇನೆ. ಆ ತಮಾಷೆ ನೀನೆ ನೋಡುವೆಯಂತೆ.

ರಮ್ಮಿ : ಆದರೆ, ನಿನಗೆ ಕುಡಿಯಲು ಬಿಡುವುದಿಲ್ಲ.

ಪ್ರೈಸ್ : ಹಾಗಿದ್ದರೆ, ನಮ್ಮ ಧರ್ಮದ ಪುಸ್ತಕದಿಂದ ಏನಾದರೂ ತೆಗೆದುಕೊಳ್ಳು ತ್ತೇನೆ. ಬೇರೆ ಹೇಗಾದರೂ ಸಾಕಷ್ಟು ವಿನೋದ ಸಿಕ್ಕೊ ಹಾಗಿದ್ದರೆ ನನಗೆ ಕುಡಿಯುವುದೇ ಬೇಡ.

('ಜೆನ್ನಿ ಹಿಲ್' ಎಂಬ 18 ವರ್ಷದ ಮುಕ್ತಿ ಸೈನ್ಯದ ಜೆನ್ನಿ ಬರುತ್ತಾಳೆ. ಬಿಳಿಚಿ ಕೊಂಡಿದ್ದಾಳೆ. ಮನಸ್ಸಿನಲ್ಲಿ ಏನೊ ಒತ್ತುತ್ತಿರುವಂತಿದೆ. ಪೀಟರ್ ಷರ್ಲಿಯನ್ನು ನಡಸಿಕೊಂಡು, ಅಂಗಳದ ಬಾಗಿಲ ಮೂಲಕ ಬರುತ್ತಾಳೆ. ಅವನು ಅರ್ಧ ಗಡುಸು ಮನುಷ್ಯ, ಅರ್ಧ ಸವೆದು ಹೋದ, ವಯಸ್ಸಾದ ಮನುಷ್ಯ. ಹಸಿವಿಂದ ಸವೆದಿದ್ದಾನೆ. ಅವನಿಗೆ ಆಸರೆ ಕೊಟ್ಟು ಬಂದು)

ಜೆನ್ನಿ : ಬಾ...ನಿನಗೆ ತಿನ್ನಲು ಏನಾದರೂ ತಂದುಕೊಡುತ್ತೇನೆ. ಪೂರ್ತಿ ಸರಿ ಹೋಗುತ್ತೀಯೆ.

ಪ್ರೈಸ್ : (ಎದ್ದು ಜೆನ್ನಿಯ ಕೈಯಿಂದ ಬಿಡಿಸಿಕೊಂಡು, ಮುದುಕನನ್ನು ತೆಗೆದು ಕೊಳ್ಳಲು ಒತ್ತಾಯಿಸುತ್ತ) ಮುದುಕ ಪಾಪ, ಧೈರ್ಯ ತಂದುಕೊ ಅಣ್ಣ. ಇಲ್ಲಿ ಶಾಂತಿ, ವಿಶ್ರಾಂತಿ, ಸುಖ ಸಿಗುತ್ತವೆ. ಬೇಗ ಆಹಾರ ತೊಗೊಂಬಾ

ತಾಯಿ. ಅಯ್ಯೊ, ತುಂಬಾ ಬಳಲಿ ಹೋಗಿದ್ದಾನೆ ; (ಜೆನ್ನಿ ನೆಲೆಯೊಳಕ್ಕೆ ಬೇಗ ಹೋಗುತ್ತಾಳೆ.) ಮುದುಕಪ್ಪ ನೋಡು, ಧೈರ್ಯ ತಂದುಕೊ. ದಪ್ಪನೆಯ ರೊಟ್ಟಿ ತುಕಡಿಯನ್ನು ತಂದು ಕೊಡ್ತಾಳೆ. ಗಂಜಿ ತಂದು ಕೊಡ್ತಾಳೆ. ಕುಡಿಯುವುದಕ್ಕೆ ಒಂದು ಪಾತ್ರೆ ತುಂಬಾ ಆಕಾಶ ನೀಲಿ ತರ್ತಾಳೆ. (ಮೇಜಿನ ಮೂಲೆಯಲ್ಲಿ ಕೂಡಿಸುತ್ತಾನೆ.)

ರಮ್ಮಿ : (ಹರ್ಷದಿಂದ) ಹೋ...ಧೈರ್ಯ ತಂದುಕೊಳ್ಳಿ. ಎಂಥ ಸ್ಥಿತಿ ಬಂದರೂ ಸತ್ತೆ ಎನ್ನಬಾರದು.

ಪರ್ಲಿ : ನಾನು ಮುದುಕ ಅಲ್ಲ, ಇನ್ನೂ 46 ವರ್ಷ. ಯಾವಾಗಿನ ಹಾಗೇ, ಚೆನ್ನಾಗಿಯೇ ಇದ್ದೇನೆ. ನನ್ನ ತಲೆಗೂದಲಿಗೆ, ನನಗೆ ಮೂವತ್ತಾಗುವ ಮುಂಚೆಯೇ ನರೆ ಚೂರು ಬಂತು. ಅದಕ್ಕೆ ಬೇಕಾದ್ದೆಲ್ಲ ಮೂರು ಪೆನ್ಸ್ ಬೆಲೆಯ ಕೂದಲಕಪ್ಪು. ಇದಕ್ಕಾಗಿ ನನ್ನನ್ನು ಬೀದಿಗೆ ಬೀಳಿಸಿ, ಉಪವಾಸ ಕೆಡವಬಹುದೆ ? ದೇವರೆ ! 13 ವಯಸ್ಸಿಂದಾ ದಿನಾ 10–12 ಗಂಟೆ ಕೆಲಸ ಮಾಡಿದ್ದೇನೆ. ಕೊಂಡದ್ದಕ್ಕೆಲ್ಲ ಹಣ ಕೊಟ್ಟಿದ್ದೇನೆ. ಈಗ ನನ್ನನ್ನು ಗಟಾರಕ್ಕೆ ಬೀಳಿಸುತ್ತಿದ್ದಾರೆ. ನನ್ನ ತಲೆಕೂದಲ ಕಪ್ಪು ಬಿಳುಪಿಗೆ ತಿರುಗುತ್ತಿದೆ ಎನ್ನುವ ಕಾರಣದಿಂದ ನನಗಿಂತ ಏನೂ ಚೆನ್ನಾಗಿ ಕೆಲಸ ಮಾಡಲಾರದ ಒಬ್ಬ ಯುವಕನಿಗೆ ಆ ಕೆಲಸವನ್ನು ಕೊಡುತಿದ್ದಾರೆ.

ಪ್ರೈಸ್ : (ಉಲ್ಲಾಸದಿಂದ) ಅದನ್ನು ಆಡಿಕೊಂಡು ಪ್ರಯೋಜನ ಇಲ್ಲ. ನೀನೊಬ್ಬ ಮುದಿ ಕೆಲಸಗಾರ. ಕೆಲಸದಿಂದ ನಿನ್ನನ್ನು ತೆಗೆದುಹಾಕಿದ್ದಾರೆ : ನಿನ್ನ ಕಾಯಿಲೆ ವಾಸಿಯಾಗುವುದಿಲ್ಲ ಎಂದು ಆಸ್ಪತ್ರೆಯಿಂದಲೂ ಓಡಿಸಿದ್ದಾರೆ. ನೀನು ಯಾರಿಗೆ ಬೇಕು ಅನ್ನುತೀಯೆ, ಅಲ್ಲವೆ ! ಆ ಕಳ್ಳ ಮುಂಡೇವು ನಿನಗೊಂದು ಊಟಕೊಡುವ ಹಾಗೆ ಮಾಡು. ನಿನ್ನಿಂದ ಅವರು ಅನೇಕ ಊಟ ಕಿತ್ತುಕೊಂಡಿದ್ದಾರೆ. ನಿನಗೆ ಬರಬೇಕಾದ್ದರಲ್ಲಿ ನೀನು ಸ್ವಲ್ಪ ತೆಗೆದುಕೊ. (ವಾಡಿಕೆಯ ಊಟವನ್ನು ಜೆನ್ನಿ ತರುತ್ತಾಳೆ.) ನೋಡು, ತೊಗೊ, ತಮ್ಮ ; ಹರಸಿ ಹೊಟ್ಟೆ ಒಳಕ್ಕೆ ಹಾಕಿಕೊ.

ಪರ್ಲಿ : (ಅದನ್ನು ನುಂಗಿಬಿಡುವ ಹಾಗೆ ನೋಡುತ್ತ, ಆದರೂ ಮುಟ್ಟದೆ ಮಗುವಿನಂತೆ ಅಳುತ್ತ) ಹಿಂದೆ ಯಾರಿಂದಲೂ ಏನನ್ನೂ ನಾನು ತಕ್ಕೊಂಡದ್ದಿಲ್ಲ.

ಜೆನ್ನಿ : (ಅವನನ್ನು ಸಂತೈಸುತ್ತ) ತೊಗೊ...ತೊಗೊ. ಇದು ನಿನಗೆ ದೇವರು ಕಳಿಸಿದ್ದು. ಸ್ನೇಹಿತರಿಂದ ಅವನೇ ರೊಟ್ಟಿ ತಕೊಳ್ತ ಇರಲಿಲ್ಲವೆ ? ಅಲ್ಲದೆ ನಿನಗೆ ಒಂದು ಕೆಲಸ ಹುಡುಕಿಕೊಟ್ಟಾಗ ಅದಕ್ಕೆ ನಮಗೆ ನೀನು ಹಣ ಕೊಡಬಹುದು.

ಪರ್ಲಿ : (ಉತ್ಸಾಹದಿಂದ) ಹೌದು, ಹೌದು, ಅದು ನಿಜ. ನಾನು ಅದಕ್ಕೆ ಆಮೇಲೆ ಹಣ ಕೊಡಬಹುದು. ಇದು ಕಡಮಾತ್ರ. (ನಡುಗುತ್ತ) ದೇವರೆ, ದೇವರೆ—(ಮೇಜಿನ ಕಡೆ ತಿರುಗಿ ತುಂಬಾ ಹಸಿವಿಂದ ಊಟಮಾಡುತ್ತಾನೆ.)

ಜೆನ್ನಿ : ಏನು ರಮ್ಮಿ, ಈಗ ಸ್ವಲ್ಪ ನೆಮ್ಮದಿಯಿಂದ ಇದ್ದೀಯ ?

ರಮ್ಮಿ : ದೇವರು ನಿನಗೆ ಒಳ್ಳೇದು ಮಾಡಲಿ. ದೇಹಕ್ಕೆ ಆಹಾರ ಹಾಕಿದೆ, ನನ್ನ ಆತ್ಮ ಉದ್ಧಾರ ಮಾಡಿದೆ. (ಜೆನ್ನಿಗೆ ಇದು ತಟ್ಟಿ, ಅವಳನ್ನು ಮುದ್ದಿಸುವಳು.) ಕುಳಿತುಕೊ, ಸ್ವಲ್ಪ ವಿಶ್ರಾಂತಿ ತೆಗೆದುಕೋಮ್ಮ. ಕುಸಿದುಬೀಳೊ ಹಾಗಿದ್ದೀಯ !

ಜೆನ್ನಿ : ಬೆಳಿಗ್ಗೆಯಿಂದ ಕೆಲಸ ಸ್ವಲ್ಪ ಹೆಚ್ಚಾಗಿದೆ. ಆದರೇನು : ನಾವು ಮಾಡ ಬಲ್ಲದಕ್ಕಿಂತ ಹೆಚ್ಚು ಕೆಲಸ ಇದೆ. ನಾನು ನಿಲ್ಲಬಾರದು.

ರಮ್ಮಿ : ಎರಡೇ ನಿಮಿಷ, ದೇವರಿಗೆ ಪ್ರಾರ್ಥನೆ ಮಾಡಲು ಯತ್ನಿಸು. ಆಮೇಲೆ ನಿನ್ನ ಕೆಲಸ ಇನ್ನೂ ಚೆನ್ನಾಗುತ್ತೆ.

ಜೆನ್ನಿ : (ಕಣ್ಣಲ್ಲಿ ಬೆಳಕು ಕಂಡು) ಕೆಲವೇ ನಿಮಿಷಗಳ ಪ್ರಾರ್ಥನೆ ಎಷ್ಟು ಹೊಸ ಚೈತನ್ಯ ಕೊಡುವುದು—ಇದು ಆಶ್ಚರ್ಯ ಅಲ್ಲವೆ ! 12 ಗಂಟೆ ಹೊತ್ತಿಗೆ ನನಗೆ ತಲೆ ಬೆಂಡಾದ ಹಾಗಿತ್ತು. ಆಯಾಸ ಆಗಿತ್ತು. ಆದರೆ ಮೇಜರ್ ಬಾರ್ಬರ ಐದು ನಿಮಿಷ ಪ್ರಾರ್ಥನೆ ಮಾಡು ಎಂದು ಕಳಿಸಿದಳು. ಆಗತಾನೆ ಕೆಲಸಕ್ಕೆ ಮೊದಲು ಮಾಡಿದ್ದರೆ ಹೇಗೆ ಆಗುತ್ತಿತ್ತೊ ಹಾಗಾಯಿತು. (ಪ್ರೈಸ್‌ಗೆ) ನಿನಗೊಂದು ಚೂರು ರೊಟ್ಟಿ ಕೊಟ್ಟರೆ ?

ಪ್ರೈಸ್ : (ತುಂಬಾ ಕೃತಜ್ಞತಾಭಾವದಿಂದ) ಕೊಟ್ಟರು ಅಮ್ಮ. ಅದಕ್ಕಿಂತ ಹೆಚ್ಚು ಬೆಲೆಯುಳ್ಳದ್ದು ಒಂದು ಚೂರು ಸಿಕ್ಕಿದೆ. ಎಲ್ಲ ಬುದ್ಧಿಗೂ ಮೀರಿದ ಪರ್ಸಾಂತತೆ.

ರಮ್ಮಿ : (ಶ್ರದ್ಧೆಯಿಂದ) ದೇವರ ದಯೆ ದೊಡ್ಡದು.

(25 ವರ್ಷದ ಲಫಂಗ ಬಿಲ್ ವಾಕರ್ ಅಂಗಳದ ಬಾಗಿಲಲ್ಲಿ ಕಂಡು ಜೆನ್ನಿಯ ಕಡೆ ಕೆಡುಕು ಭಾವದಿಂದ ನೋಡುತ್ತಾನೆ.)

ಜೆನ್ನಿ : ನಿನಗೆ ಎಷ್ಟೊ ಸುಖ ಆಗಿದೆ. ಇಲ್ಲಿ ನಿಂತು ಕಾಲ ಕಳೆದದ್ದಕ್ಕೆ, ನಾನೇನೊ ಕೆಟ್ಟ ಕೆಲಸ ಮಾಡಿದ ಹಾಗೆ ಅನಿಸಿದೆ. ನನ್ನ ಕೆಲಸಕ್ಕೆ ಪುನಃ ಹೋಗಬೇಕು.

(ನೆಲೆಗೆ ಅವಸರದಲ್ಲಿ ಹೋಗುತ್ತಿದ್ದಾಗ, ಹೊಸ ಮನುಷ್ಯನು ಬಾಗಿಲ ಬಳಿಗೆ ಹೋಗಿ ಅವಳನ್ನು ತಡೆಯುತ್ತಾನೆ. ಅವನ ರೀತಿಯಲ್ಲಿ ಬೆದರಿಕೆಯಿದೆ. ಮೇಲೆ ಬೀಳುವಂತೆ ಬರುವ ಅವನಿಗೆ ಅವಳು ಹಿಮ್ಮೆಟ್ಟುತ್ತಾಳೆ. ಅಂಗಳದ ಈಚೆಗೆ ಅವಳನ್ನು ಓಡಿಸುತ್ತ)

ಬಿಲ್ : ನೀನಾರು ಎಂಬುದು ನನಗೆ ಗೊತ್ತು. ನನ್ನ ಹೆಣ್ಣನ್ನು ನನ್ನಿಂದ

ತೊಗೊಂಡು ಹೋದವಳು ನೀನು ;—ನನಗೆ ವಿರುದ್ಧವಾಗಿ ಅವಳನ್ನು ತಿರುಗಿಸಿದವಳು. ನೋಡುತ್ತಿರು. ಅವಳನ್ನು ಇಲ್ಲಿಂದ ಹೊರಕ್ಕೆ ಕರೆದು ಕೊಂಡು ಹೋಗ್ತೇನೆ. ನಿನಗಾಗಲಿ ಅವಳಿಗಾಗಲಿ ಒಂದು ಶಾಪ ಹಾಕಬೇಕು ಎನ್ನಿಸುವಷ್ಟು ಬೆಲೆಯಿಲ್ಲ, ಗೊತ್ತೆ ? ಹಾಗೆ ಅವಳಿಗೆ ಮನದಟ್ಟಾಗುವಂತೆ ಮಾಡ್ತೇನೆ ; ಹಾಗೇ ನಿಂಗೂ ತಿಳಿಯುವಂತೆ ಮಾಡುತ್ತೇನೆ ; ನನ್ನಿಂದ ತಪ್ಪಿಸಿಕೊಂಡು ಹೋದರೆ ಏನಾಗುತ್ತೆ ಅಂತ ಅವಳಿಗೆ ತಿಳಿಸಿಕೊಡುತೇನೆ. ಒಳಗೆ ಹೋಗಿ ಹೊರಗೆ ಬರ್ಬೇಕುತೆ ಅಂತ ಅವಳಿಗೆ ಹೇಳು. ಇಲ್ದಿದ್ರೆ ನಾನೇ ಒಳಗೆ ನುಗ್ಗಿ ಒದ್ದು ಕರ್ಕೊಂಡು ಬರ್ತೇನೆ. ಬಿಲ್ ವಾಕರ್ ಕರೀತಿದ್ದಾನೆ ಅಂತ ಹೇಳು. ಅದರ ಅರ್ಥ ಅವಳಿಗೆ ಗೊತ್ತಾಗುತ್ತೆ. ನನ್ನ ಕಾಯಿಸುತ್ತ ಕೂತಿದ್ರೆ ಇನ್ನಷ್ಟು ಕಷ್ಟವಾಗುತ್ತೆ. ನನಗೆ ಎದುರು ಮಾತಾಡಿದ್ರೆ ನಿನ್ನ ಮೇಲೆ ಶುರು ಮಾಡ್ತೀನಿ. ಕೇಳಿಸಿತೆ ? ಅದು ನಿನಗೆ ದಾರಿ—ಹೋಗು ಒಳಗೆ.

(ಅವಳ ತೋಳನ್ನು ಹಿಡಿದು ಎಳೆದು ನೆಲೆಯ ಬಾಗಿಲ ಕಡೆಗೆ ನೂಕುತ್ತಾನೆ. ಅವಳು ನೆಲದ ಮೇಲೆ ಕೈಯೂರಿ ಮೊಳಕಾಲ ಮೇಲೆ ಬೀಳುತ್ತಾಳೆ. ರಮ್ಮಿ ಅವಳು ಪುನಃ ಮೇಲೇಳಲು ಸಹಾಯ ಮಾಡುತ್ತಾಳೆ.)

ಪ್ರೈಸ್ : (ಏಳುತ್ತ, ಅನಿಶ್ಚಯ ಮನಸ್ಸಿನಿಂದ ಬಿಲ್ ಕಡೆಗೆ ಧೈರ್ಯಮಾಡಿ ಬರುತ್ತ), ತಾಳು ಗೆಳೆಯ, ನಿಂಗೆ ಅವಳು ಏನೂ ಕೆಡುಕು ಮಾಡ್ತ ಇಲ್ಲ.

ಬಿಲ್ : ಯಾರನ್ನೊ ನೀನು ಗೆಣೆಯ ಎನ್ನುತ್ತಿರುವುದು ? (ಹೆದರಿಸುವವನಂತೆ ಬಿಗಿಯಾಗಿ ನಿಂತು) ಅವಳ ಪರವಾಗಿ ಮಾತನಾಡಬೇಕೊ ನೀನು ? ಎರಡೂ ಕಡೆ ಮುಚ್ಚಿಕೊ.

ರಮ್ಮಿ : (ಕೋಪದಿಂದ ಅವನ ಕಡೆಗೆ ಓಡಿ ಬಂದು ಬೈಯುತ್ತ) ಎಂಥ ದೊಡ್ಡ ದನ ನೀನು—(ಒಡನೆಯೇ ಆಕೆಯ ಮುಖಕ್ಕೆ ಅವನು ತನ್ನ ಎಡಗೈಯನ್ನು ಬೀಸುತ್ತಾನೆ. ಅವಳು ಕಿರಿಚಿ ತತ್ತರಿಸುತ್ತಾಳೆ ; ಮುಖಕ್ಕೆ ಪೆಟ್ಟುಬಿದ್ದು. ತನ್ನ ಕೈಗಳಿಂದ ಜಜ್ಜಿದ ಮುಖವನ್ನು ಮುಚ್ಚಿಕೊಳ್ಳುತ್ತಾಳೆ. ಕೂತುಕೊಂಡು ಉಯ್ಯಾಲೆಯಂತೆ ತೂಗುತ್ತ ನೋವಿಂದ ಮುಲುಗುತ್ತಾಳೆ.)

ಜೆನ್ನಿ : (ಅವಳ ಬಳಿ ಹೋಗಿ) ದೇವರು ನಿನ್ನನ್ನು ಕ್ಷಮಿಸಲಿ. ಮುದಿ ಹೆಂಗಸನ್ನು ನೀನು ಹಾಗೆ ಹೊಡೆದದ್ದಾದರೂ ಹೇಗೆ ?

ಬಿಲ್ : (ಅವಳ ತಲೆಗೂದಲನ್ನು ಬಲವಾಗಿ ತುಡುಕುತ್ತಾನೆ. ಅವಳೂ ಕಿರಿಚುವಳು. ಮುದುಕಿಯಿಂದ ಅವಳನ್ನು ಎಳೆಯುತ್ತ) ಇನ್ನೊಂದು ಸಲ ದೇವರು ನನ್ನನ್ನು ಕ್ಷಮಿಸಲಿ ಎನ್ನು, ದವಡೆಯ ಮೇಲೆ ಇನ್ನೊಂದು ಸಲ ಕೊಟ್ಟು ದೇವರು

ನಿನ್ನನ್ನು ಕ್ಷಮಿಸಲಿ ಎನ್ನುತ್ತೇನೆ. ಒಂದು ವಾರ ಪ್ರಾರ್ಥನೆ ತಪ್ಪುತ್ತೆ. (ಬಲವಾಗಿ ಅವಳನ್ನು ಹಿಡಿದುಕೊಂಡು, ಉಗ್ರವಾಗಿ ಪ್ರೈಸ್ ಕಡೆಗೆ ತಿರುಗಿ) ಇದಕ್ಕೆ ವಿರುದ್ಧವಾಗಿ ನೀನು ಏನಾದರೂ ಹೇಳುವುದಿದೆಯೇನು ?

ಪ್ರೈಸ್ : (ದಿಗಿಲು ಬಿದ್ದು) ಇಲ್ಲ ಗೆಳೆಯ, ನಂಗೂ ಅವಳಿಗೂ ಯಾವ ಸಂಬಂಧವೂ ಇಲ್ಲ.

ಬಿಲ್ : ನಿಂಗೆ ಒಳ್ಳೆಯದಾಯ್ತು ಎನ್ನು. ನಿನ್ನ ಹೊಟ್ಟೆಗೆ ಎರಡೂಟ ಹಾಕಿ, ಆಮೇಲೆ, ಒಂದು ಬೆರಳಲ್ಲಿ ನಾನಿನ್ನ ಹೊಡೀತೇನೆ, ಹೊಟ್ಟೆಗಿಲ್ಲದೆ ಹಸಿದ ನಾಯಿ ; (ಜೆನ್ನಿಗೆ) ಈಗ ಒಳಗೆ ಹೋಗಿ ಮಾಗ್ ಎಬ್ಬಿಯೆಮ್‌ನನ್ನು ಕರೆದುಕೊಂಡ್ಬರ್ತೀಯಾ ? ಅಥವಾ ನಿನ್ನ ಮುಖ ಒಡಿದು ಕೆಡವಿ, ನಾನೇ ಅವಳನ್ನು ಕರ್ಕೊಂಡು ಬರಲೊ ?

ಜೆನ್ನಿ : (ಅವನ ಹಿಡಿತದಲ್ಲಿ ನುಲಿಯುತ್ತ) ದಯಮಾಡಿ ಯಾರಾದ್ರೂ ಒಳಕ್ಕೆ ಹೋಗಿ ಮೇಜರ್ ಬಾರ್ಬರಾಗೆ ಹೇಳಿ (ಅವಳ ತಲೆಯನ್ನು ಪುನಃ ಅವನು ಬಿಗಿ ಹಿಡಿದಾಗ ನೋವಿಂದ ಕಿರಿಚುವಳು. ಪ್ರೈಸ್, ರಮ್ಮಿ ಇಬ್ಬರೂ ನೆಲೆಯೊಳಗೆ ಓಡುತ್ತಾರೆ.)

ಬಿಲ್ : ನೀನು ಒಳಗೆ ಹೋಗಿ ನನ್ನ ಮೇಲೆ ನಿನ್ನ ಮೇಜರಿಗೆ ಹೇಳ್ಬೇಕೊ.

ಜೆನ್ನಿ : ದಯಮಾಡಿ ನನ್ನ ತಲೇಕೂದಲು ಎಳೀಬೇಡ, ನನ್ನನ್ನು ಹೋಗಲು ಬಿಡು.

ಬಿಲ್ : ನಿನ್ನಿಷ್ಟ ಅದು, (ಇನ್ನೊಮ್ಮೆ ಕಿರಿಚುವುದನ್ನು ತಡೆಯುತ್ತಾಳೆ.) ಹೌದೊ ಅಲ್ಲವೊ ?

ಜೆನ್ನಿ : ದೇವರು ನನಗೆ ಶಕ್ತಿ ಕೊಡಲಿ—

ಬಿಲ್ : (ಮುಷ್ಟಿಹಿಡಿದು ಅವಳ ಮುಖದ ಮೇಲೆ ಹೊಡೆಯುತ್ತಾನೆ.) ಹೋಗಿ ಅವಳಿಗೆ ಅದನ್ನ ತೋರ್ಸು. ಅಂಥಾದ್ದೇ ಅವಳಿಗೆ ಬೇಕಿದ್ರೆ ಇಲ್ಲಿಗೆ ಬಂದು, ನನ್ನ ಕೆಲಸದ ನಡುವೆ ಕೈಹಾಕಲಿ.

(ಜೆನ್ನಿ ನೋವಿಂದ ಅಳುತ್ತ ನೆಲೆಯೊಳಕ್ಕೆ ಹೋಗುತ್ತಾಳೆ.)

ಬಿಲ್ : (ಬೇರೆ ಕಡೆ ಹೋಗಿ, ಮುದುಕನನ್ನು ಕುರಿತು) ಏಯ್, ಕೂಳು ಮುಗಿಸು. ನನ್ನ ದಾರಿ ಬಿಟ್ಟು ಹೋಗು.

ಷರ್ಲಿ : (ಮೇಲಕ್ಕೆ ಜಗ್ಗನೆದ್ದು ಉಗ್ರವಾಗಿ ಅವನನ್ನು ಎದುರಿಸುತ್ತಾನೆ. ಕೈಯಲ್ಲಿ ಕುಡಿಯುವ ಪಾತ್ರೆ ಹಿಡಿದಿದ್ದಾನೆ.) ನನ್ನ ಗೊಡವೆಗೆ ಬರ್ತೀಯಾ ! ಈ ಕೈಲಿರೊ ಪಾತ್ರೆಯಿಂದ ನಿನ್ನ ಮುಖದ ಮೇಲೆ ಹೊಡೆಯುತ್ತೇನೆ. ನಿನ್ನ ಕಣ್ಣನ್ನು ಎಗರಿಸುತ್ತೇನೆ. ನಿಮ್ಮಂಥಾವಗನ್ನು ಸಾಕಿ ನಿನ್ನಂಥವರಿಗೆ ಗುಲಾಮರ್ನಾಗೆ

ದುಡಿದು—ನಿಮ್ಮನ್ನು ಬೆಳಸಿರೊ ಹಿರಿಯರ ಬಾಯಿಂದ ರೊಟ್ಟಿ ಕಿತ್ತುಕೊಳ್ಳುವ ನಿನಗೆ, ನಿನ್ನಂಥ ಕುನ್ನಿಗಳಿಗೆ ಇನ್ನೂ ತೃಪ್ತಿ ಇಲ್ಲವೆ! ಇಂಥ ಕಡೇಗೆ ನುಗ್ಗಿ ಕೊಂಡ್ಬಂದು ಅಧಿಕಪ್ರಸಂಗ ಮಾಡ್ತ, ಜನಗಳ ಮೇಲೆ ಪುಂಡತನ ಮಾಡ್ತೀಯ! ಇವರು ಕೊಡುತ್ತ ಇರೊ ರೊಟ್ಟಿ ನಮ್ಮ ಹೊಟ್ಟೆಯಲ್ಲಿ ನುಲಿಯುತ್ತ ಇರುವಾಗ!

ಬಿಲ್ : (ತಿರಸ್ಕಾರದಿಂದ, ಆದರೆ ಸ್ವಲ್ಪ ಹಿಮ್ಮೆಟ್ಟಿ) ನಿನ್ನಿಂದ ಏನು ಒಳ್ಳೇದಾಗುತ್ತೆ? ಮುದಿಮುಂಡೇದೆ, ನಿನ್ನ ಕೈಯಲ್ಲೇನಾಗುತ್ತೆ?

ಪರ್ಲಿ : ನಿನ್ನ ಕೈಲಾಗೊ ಅಷ್ಟೊ; ಅದಕ್ಕಿಂತ ಇನ್ನಷ್ಟು. ನೀನು ಮಾಡುವಷ್ಟು, ಅಥವಾ ನಿನ್ನ ವಯಸ್ಸಿನ ಯಾವ ಕೊಬ್ಬಿದ ಯುವಕನು ಮಾಡುವಷ್ಟು, ಸ್ಪರ್ಧೆ ಮಾಡಿ ಒಂದು ದಿವಸದ ಕೆಲಸ ಮಾಡುತ್ತೇನೆ. ಹತ್ತು ವರ್ಷ ನಾನು ಕೆಲಸ ಮಾಡಿದ ಹಾರಕ್ಸ್ ಕಂಪೆನಿಗ್ಹೋಗಿ ನನ್ನ ಕೆಲಸ ತೊಕ್ಕೊ. ಅಲ್ಲಿ ಅವರಿಗೆ ಯುವಕರು ಬೇಕಂತೆ. 45ಕ್ಕೆ ಮೀರಿದವರನ್ನು ಕೆಲಸಕ್ಕೆ ಇಟ್ಟುಕೊಳ್ಳಲಾರರಂತೆ. ತಮ್ಮ ವಿಷಾದ ವ್ಯಕ್ತಪಡಿಸಿ, ನಮಗೆ ನಡತೆ ಪ್ರಶಸ್ತಿ ಕೊಡ್ತಾರೆ—ನಮ್ಮ ವಯಸ್ಸಿಗೆ ತಕ್ಕ ಇನ್ನಾವುದಾದರೂ ಕೆಲಸಕ್ಕೆ ನೆರವು ಕೊಡಲು ಅವರಿಗೆ ಸಂತೋಷ ವಾಗುತ್ತಂತೆ. ಸ್ಥಿರವಾಗಿ ಕೆಲಸಮಾಡಬಲ್ಲ ಯಾರಿಗೇ ಆಗಲಿ ಬೇಗ ಕೆಲಸ ಸಿಗುತ್ತೆ ಎನ್ನುತ್ತಾರೆ. ನಿಂಗೆ ಅವಕಾಶ ಕೊಟ್ಟು ಅವರು ಯತ್ನ ಮಾಡಲಿ. ಅವರಿಗೆ ಯತ್ವಾಸ ಗೊತ್ತಾಗುತ್ತೆ. ನಿಂಗೇನು ಗೊತ್ತಿದೆ!? ಹೇಗೆ ನಡ್ಕೋಬೇಕು ಅಂತ ಗೊತ್ತಿಲ್ಲ: ಒಬ್ಬ ಮರ್ಯಾದಸ್ಥ ಹೆಂಗಸಿನ ಬಾಯಮೇಲೆ ನಿನ್ನ ಕೊಳೆ ಕೈಯಿಂದ ಹೊಡೆದಿದ್ದೀಯೆ.

ಬಿಲ್ : ನನ್ನ ರೇಗಿಸಬೇಡ. ನಿನ್ನ ಬಾಯಿಯ ಮೇಲೂ ಇಟ್ಟೇನು, ಕೇಳಿಸಿತೆ?

ಪರ್ಲಿ : (ಅತಿ ತಿರಸ್ಕಾರದಿಂದ) ಹೌದು. ಮುದುಕನ್ನ ಹೊಡೀಬೇಕೂನ್ಸುತ್ತೆ ಅಲ್ಲವೆ, ನಿಂಗೆ, ಹೆಂಗಸರನ್ನು ಹೊಡೆದಾದ ಮೇಲೆ. ಯುವಕನ್ನ ನೀನು ಹೊಡೆದದ್ದನ್ನು ಇನ್ನೂ ನಾನು ಕಾಣೆ.

ಬಿಲ್ : (ಚುಚ್ಚಿದಂತಾಗಿ) ಸುಳ್ಳು, ಹುಳಿಸೊಪ್ಪು ಬೇಯಿಸೊ ಮನುಷ್ಯ ನೀನು. ಇನ್ನೊಬ್ಬ ಚಿಕ್ಕ ವಯಸ್ಸಿನ ಮನುಷ್ಯ ಇದ್ದ. ಅವನ್ನೂ ಹೊಡೀತೇನೆ ಎಂದೆನೊ ಇಲ್ಲವೊ?

ಪರ್ಲಿ : ಅವನು ಹೊಟ್ಟೆಗಿಲ್ದೆ ಇದ್ದನೊ, ಇರ್ಲಿಲ್ವೊ? ಅಥವಾ ಅವನು ಗಂಡ್ಸೆ? ಸೊಟ್ಟೆಕಣ್ಣಿನ ಸೋಮಾರಿ ಮಾತ್ರವೊ! ನನ್ನ ಅಳಿಯನ ತಮ್ಮ ಒಬ್ಬ ಇದ್ದಾನೆ. ಅವನ್ನ ಹೊಡೀತೀಯ ನೀನು?

ಬಿಲ್ : ಯಾರವನು?

ಪರ್ಲಿ : ಟಾಜರ್ ಫೇರ್ಮೈಲ್. ಬಾಲ್ಸ್ ಪಾಂಡಿನವನು. ಮೊನ್ನೆ ಸಂಗೀತಶಾಲೆ ಬಳಿ ಜಪಾನಿ ವಸ್ತಾದಿ ಮೇಲೆ ಕುಸ್ತಿಮಾಡಿ 20 ಪೌಂಡು ಗೆದ್ದೋನು. 17 ನಿಮಿಷ 4 ಸೆಕೆಂಡು ಅವನ್ನ ಎದುರಿಸಿದವನು.

ಬಿಲ್ : (ಒರಟಾಗಿ) ನಾನು ಯಾವ ಸಂಗೀತಶಾಲೆಯ ಕುಸ್ತಿಯೋನೂ ಅಲ್ಲ. ಅವನಿಗೆ ಮುಷ್ಟಿಕಾಳಗ ಬರುತ್ತದೆಯೆ ?

ಪರ್ಲಿ : ಹೌದು ; ನಿನಗೆ ಬರೋಲ್ಲ.

ಬಿಲ್ : ಏನು ? ನಂಗೆ ಬರೋಲ್ಲವೆ ? ಅದು ಗೊತ್ತಿಲ್ಲವೇ ನನಗೆ ! ಏನು ನೀನು ಹೇಳುವುದು ? (ಅವನನ್ನು ಬೆದರಿಸುವನು.)

ಪರ್ಲಿ : (ಒಂದಂಗುಲ ಚಲಿಸದೆ) ನಾನು ನಿನ್ನ ಮೇಲೆ ಅವನ್ನ ಬಿಟ್ಟರೆ, ಟಾಜರ್ ಫೇರ್ಮೈಲ್ ಜೊತೇಲಿ ಮುಷ್ಟಿಕಾಳಗ ಮಾಡುತೀಯ ? ಆಡು ಆ ಮಾತನ್ನ ?

ಬಿಲ್ : (ಸ್ವಲ್ಪ ತಗ್ಗಿ ಕುಗ್ಗುತ್ತ) ಯಾರ ಮೇಲೇ ಆದರೂ ಯಾವಾಗ್ಲೂ ಎದುರು ನಿಲ್ತೇನೆ. ಹತ್ತು ಟಾಜರ್ ಫೇರ್ಮೈಲ್ ಅಷ್ಟು ಇರಲಿ. ಆದರೆ—ನಾನು ಕಸಬುದಾರ ಅಲ್ಲ ಎಂಬುದೇನೊ ನಿಜ.

ಪರ್ಲಿ : (ಅಳೆಯಲಾರದಷ್ಟು ತಿರಸ್ಕಾರದಿಂದ ಅವನನ್ನು ನೋಡುತ್ತ) ಮುಷ್ಟಿ ಕಾಳಗ ಮಾಡುತ್ತೀಯ ನೀನು ? ಕೈ ಹಿಂಬದಿಯಿಂದ ಮುದುಕಿಯರನ್ನು ಹೊಡೆಯುತ್ತೀಯೆ. ಬುದ್ಧಿ ಇಲ್ಲದ ಕುನ್ನಿ. ಸೊಕ್ಕಿನ ಅಜ್ಞಾನದ ಮುದ್ದೆ. ಅದರ ಗುರುತು ಮ್ಯಾಜಿಸ್ಟ್ರೇಟರಿಗೆ ಕಾಣಿಸದೆ ಇರೊ ಹಾಗೆ ಹೊಡೆಯೊ ಅಷ್ಟು ಬುದ್ಧಿ ಕೂಡ ಇರಲಿಲ್ಲ ನಿನಗೆ ? ಹುಡುಗಿ ದವಡೆಗೆ ಹೊಡೆದು ಅವಳು ಅಳುವ ಹಾಗೆ ಮಾಡೋದು. ಟಾಜರ್ ಫೇರ್ಮೈಲ್ ಹಾಗೆ ಮಾಡಿದ್ದಿದ್ರೆ 10 ನಿಮಿಷ ಅವಳಿಗೆ ಏಳೋಕಾಗುತಿರಲಿಲ್ಲ. ಅವನು ನಿಂಗೂ ಅಷ್ಟೇ. ಎರಡು ವಾರದ ಪೋಷಣೆ ನನ್ನೊಳಗೆ ಇದ್ದಿದ್ರೆ, ನಾನೇ ಬಿಡ್ತಿದ್ದೆ ನಿಂಗೆ. ಎರಡು ತಿಂಗಳು ಹೊಟ್ಟೆಗಿಲ್ದೆ ಕಂಗಾಲಾಗಿದ್ದೇನೆ. (ಅವನ ಕಡೆ ಬೆನ್ನು ತಿರುಗಿಸಿ, ಮೇಜಿನ ಹತ್ತಿರ ಚಿಂತಾಕ್ರಾಂತನಾಗಿ ಕುಳಿತುಕೊಳ್ಳುತ್ತಾನೆ.)

ಬಿಲ್ : (ಅವನನ್ನು ಹಿಂಬಾಲಿಸಿ, ಅವನ ಮುಂದಲೆಯನ್ನು ಚುಚ್ಚಿ ತೋರಿಸುವಂತೆ ಅವನ ಮೇಲೆ ಬಾಗಿ) ಸುಳ್ಳುಗಾರ ನೀನು. ಬೇಡುವುದಕ್ಕೆ ಬಂದ ರೊಟ್ಟಿ,ಅಂಬಲಿ ನಿನ್ನ ಹೊಟ್ಟೆಯ ಒಳಗೆ ಇದೆ.

ಪರ್ಲಿ : (ಕಣ್ಣೀರು ಕರೆಯುತ್ತ) ದೇವರೇ, ಅದು ನಿಜ. ಬರಿ ಒಬ್ಬ ಮುದಿ ಪಾಪರು, ಅಪ್ರಯೋಜಕನಾಗಿ ತಿಪ್ಪೆಗೆ ಬಿದ್ದವನು. (ಕೋಪಾವೇಶದಲ್ಲಿ) ನಿನಗೂ ಇದೇ ಗತಿ ಬರುತ್ತೆ ಸುಮ್ಮನಿರು. ಆಗ ನಿನಗೆ ಗೊತ್ತಾಗುತ್ತೆ. ಎಂದೂ ಯಾವ ಮದ್ಯ ವನ್ನೂ ಕುಡಿಯದೆ ಇರುವ ನನಗೆ ಬಂದುದಕ್ಕಿಂತ ಮುಂಚೆ ನಿನಗೆ ಬರುತ್ತೆ. ಈ ಗಂಟೆಯಲ್ಲಿ ಹೊಟ್ಟೆ ತುಂಬ ಜಿನ್ ಹಾಕ್ಕೊಂಡಿದ್ದೀಯೆ.

ಬಿಲ್ : ನಾನು ಜಿನ್ ಕುಡ್ಕ ಅಲ್ಲ, ಮುದಿಯ. ಆದರೆ ನನ್ನ ಹುಡ್ಗೀಗೆ ಚುರುಕು ತೋರಿಸ್ಬೇಕು ಅಂದಾಗ ಒಳಗೆ ಒಂದಷ್ಟು ದೆವ್ವನ್ನ ಕೂಡಿಸ್ಕೊಬೇಕು ಅನ್ನಿಸಿದಾಗ ;—ಗೊತ್ತಾಯಿತೆ ? ಅದಕ್ಕೆ ಬದಲಾಗಿ ಇಲ್ಲಿ ನಿಂತುಕೊಂಡಿದ್ದೇನೆ. ನಿನ್ನಂಥ ಹಳಸಿದ ಶನಿ ಕೈಯಲ್ಲಿ ಮಾತಾಡುತ. ಅವಳಿಗೆ ಬಿಸಿ ತೋರ್ಸೋದು ಬಿಟ್ಟು. (ರೋಷಾವೇಶಗೊಳ್ಳುತ್ತ) ಒಳಕ್ಕೆ ಅಲ್ಲಿ ಹೋಗಿ ಅವಳ್ನ ಹೊರಗೆ ಕರಕೊಂಡು ಬರ್ತೇನೆ.

(ಆಶ್ರಯದ ಬಾಗಿಲ ಕಡೆ ಸೇಡಿನಿಂದ ಹೋಗುತ್ತಾನೆ.)

ಪರ್ಲಿ : ಹೆಚ್ಚು ಸಂಭವ ಏನೂಂತೀಯೊ : ಒಂದು ಚಟ್ಟದಮೇಲೆ ಬಿದ್ಕೊಂಡು ನೀನು ಸ್ಟೇಷನ್ನಿಗೆ ಹೋಗ್ತೀಯ. ಅಲ್ಲಿ ಒಳಕ್ಕೆ ಹೋದಮೇಲೆ ನಿನ್ನಲ್ಲಿರೊ ಜಿನ್ನು, ದೆವ್ವ ಎರಡನ್ನೂ ಹೊರಕ್ಕೆ ತೆಗೀತಾರೆ. ಏನ್ಮಾಡ್ತಾ ಇದ್ದೀ ಅನ್ನೋದನ್ನ ಚೆನ್ನಾಗಿ ಯೋಚಿಸು. ಇಲ್ಲಿರೊ ಮೇಜರ್, ಸ್ಟೀವೆನೇಜ್ ಶ್ರೀಮಂತರ ಮೊಮ್ಮಗಳು.

ಬಿಲ್ : (ಆತಂಕಗೊಂಡು) ಹಾಳಾಯ್ತು.

ಪರ್ಲಿ : ನೋಡುವೆಯಂತೆ.

ಬಿಲ್ : (ಅವನ ನಿರ್ಝರ ಹೊರಗೆ ಸುರಿಯುತ್ತಿರಲು) ಆಗಿದ್ರೇನು. ಆಕೆಗೆ ನಾನೇನೂ ಮಾಡಲಿಲ್ಲ.

ಪರ್ಲಿ : ಮುಸಲ ನೀನು ಮಾಡಿದೆ ಎಂದು ಆಕೆ ಎಂದಳು ಅನ್ನು ; ನಿನ್ನ ಯಾರು ನಂಬತಾರೆ ?

ಬಿಲ್ : (ಬಹಳ ಅಸುಖದಲ್ಲಿ ಮೂಲೆಗೆ ಹಿಂತಿರುಗಿ ಬಂದು) ದೇವರೇ, ಈ ದೇಶದಲ್ಲಿ ನ್ಯಾಯ ಅನ್ನುವುದೇ ಇಲ್ಲ. ಆ ಜನ ಏನು ಮಾಡಬಲ್ಲರು ಎನ್ನುವುದು ಯೋಚನೆಗೆ ಮೀರಿದ್ದು. ಆಕೆಗಿಂತ ನಾನೇನು ಕಡಮೆ ?

ಪರ್ಲಿ : ಆಕೆಗೆ ಹೇಳು ಹಾಗೆ. ನಿನ್ನಂಥ ಬುದ್ಧಿ ಗೇಡಿ ಹಾಗೆ ಹೇಳುವಂಥವನೇ.

(ಬಾರ್ಬರ ಚುರುಕಾಗಿ ಕೆಲಸಗಾರಳಂತೆ ಆಶ್ರಯದಿಂದ ಕೈಯಲ್ಲಿ Note-book ಹಿಡಿದು ಹೊರಕ್ಕೆ ಬರುತ್ತಾಳೆ. ಪರ್ಲಿಯನ್ನು ಕುರಿತು ಮಾತನಾಡುತ್ತಾಳೆ ; ಬಿಲ್ ಮೂಲೆಯಲ್ಲಿ ಕುಗ್ಗಿ ಕುಳಿತು ಅವಳ ಕಡೆಗೆ ಬೆನ್ನು ತಿರುಗಿಸುತ್ತಾನೆ.)

ಬಾರ್ಬರ : Good Morning.

ಪರ್ಲಿ : (ನಿಂತು ಹ್ಯಾಟನ್ನು ತೆಗೆದು) Good Morning ತಂಗಿ.

ಬಾರ್ಬರ : ಕುಳಿತುಕೊ. ನಿನ್ನ ಮನೆಯಲ್ಲೆ ಇರುವಂತೆ ನೆಮ್ಮದಿಯಾಗಿರು. (ಪರ್ಲಿ ಸಂಕೋಚಪಡುತ್ತಾನೆ. ಆದರೆ ಸೌಹಾರ್ದದಿಂದ ಅವನ ಭುಜದ ಮೇಲೆ ಆಕೆ

ಕೈ ಇಡುತ್ತ ಅವನನ್ನು ವಿಧೇಯನನ್ನಾಗಿಸುತ್ತಾಳೆ.) ಇಲ್ಲಿ ನೋಡು ನೀನು, ನಾವು, ಈಗ ಸ್ನೇಹಿತರು. ನಿನ್ನ ವಿಷಯ ಎಲ್ಲ ನನಗೆ ತಿಳಿಸು. ಹೆಸರು, ವಿಳಾಸ, ವೃತ್ತಿ ಎಲ್ಲ.

ಪರ್ಲಿ : ಪೀಟರ್ ಪರ್ಲಿ. Fitter (ಯಂತ್ರ ಜೋಡಿಸುವವನು). ನಂಗೆ ತುಂಬಾ ವಯಸ್ಸಾಯಿತೆಂದು ಎರಡು ತಿಂಗಳ ಹಿಂದೆ ನನ್ನನ್ನು ಓಡಿಸಿದರು.

ಬಾರ್ಬರ : (ಏನೂ ಆಶ್ಚರ್ಯ ಪಡದೆ) ನಿನಗಿನ್ನೂ ಕೆಲಸದ ಅವಕಾಶವಿದೆ. ತಲೆ ಕೂದಲಿಗೇಕೆ ಬಣ್ಣ ಹಾಕ್ಕೊಳ್ಳಲ್ಲ ?

ಪರ್ಲಿ : ಹಾಕಿಕೊಂಡಿದ್ದೆ. ಯಾವುದೊ ಅಪರಾಧದಲ್ಲಿ ನನ್ನ ಮಗಳ ವಿಚಾರಣೆ ಯಾಗುತಿದ್ದಾಗ ನನ್ನ ವಯಸ್ಸು ಹೊರಬಿತ್ತು.

ಬಾರ್ಬರ : ಒಂದೇ ಸಮನಾಗಿರುತ್ತೀಯ ?

ಪರ್ಲಿ : ಯಾವ ಮಾದಕ ದ್ರವ್ಯವನ್ನೂ ಕುಡಿಯುವುದಿಲ್ಲ. ಹಿಂದೆ ಯಾವ ಕೆಲಸ ವನ್ನೂ ಕಳೆದುಕೊಂಡಿಲ್ಲ. ಒಳ್ಳೆ ಕೆಲಸಗಾರ. ಮುದಿ ಕುದುರೆ ಹಾಗೆ ಕಸಾಯಿ ಅಂಗಡಿಗೆ ಕಳಿಸಿದ್ದಾರೆ.

ಬಾರ್ಬರ : ಪರವಾ ಇಲ್ಲ. ನಿನ್ನ ಪಾಲಿನ ಕೆಲಸ ನೀನು ಮಾಡಿದರೆ ತನ್ನದನ್ನು ದೇವರು ಮಾಡುತ್ತಾನೆ.

ಪರ್ಲಿ : (ಹಟಾತ್ತನೆ, ಮೊಂಡುತನದಿಂದ) ನನ್ನ ಮತ ನನಗೆ ಮಾತ್ರ ಸೇರಿದ್ದು. ಇನ್ನೊಬ್ಬರು ಅದರ ಗೋಜಿಗೆ ಬರಬೇಕಾಗಿಲ್ಲ.

ಬಾರ್ಬರ : (ಊಹಿಸುತ್ತ) ನನಗೆ ತಿಳಿಯುತ್ತೆ. ನೀನು ಲೌಕಿಕವಾದಿಯೆ ?

ಪರ್ಲಿ : (ಬಿಸಿಯಾಗಿ) ನಾನು ಅಲ್ಲ ಎನ್ನತೊಡಗಿದೆನೆ ?

ಬಾರ್ಬರ : ಏಕೆ ತೊಡಗಬೇಕು ? ನನ್ನ ಅಭಿಪ್ರಾಯದಲ್ಲಿ, ನನ್ನ ಸ್ವಂತ ಅಪ್ಪ, ಇಹವಾದಿ. ನಮ್ಮ ತಂದೆ—ನಿನ್ನವನು—ನನ್ನವನು—ಹಲವಾರು ರೀತಿಗಳಲ್ಲಿ ತನ್ನ ಕಾರ್ಯಗಳನ್ನು ನೆರವೇರಿಸಿಕೊಳ್ತಾನೆ. ನಿನ್ನನ್ನು ಇಹವಾದಿಯಾಗಿ ಮಾಡಿದಾಗ ತಾನು ಏನು ಮಾಡುತ್ತಿದ್ದೇನೆಂದು ಅವನಿಗೆ ತಿಳಿದಿರಲೇಬೇಕು. ಧೈರ್ಯವಾಗಿರು, ಪೀಟರ್ ; ಸ್ಥಿರವಾದ ನಿನ್ನಂಥವರಿಗೆ ಯಾವಾಗಲೂ ನಾವು ಕೆಲಸ ಕೊಡಿಸಬಲ್ಲೆವು. (ಪರ್ಲಿ ನಿಸ್ತ್ರಾಣನಾಗಿ ಮನಸ್ಸಿನಲ್ಲಿ ಬೆದರುತ್ತಾನೆ. ತನ್ನ ಹ್ಯಾಟನ್ನು ಸ್ವಲ್ಪ ಎತ್ತುವನು. ಆಮೇಲೆ ಅವಳು ಬಿಲ್ ಕಡೆ ತಿರುಗಿ)

ಬಾರ್ಬರ : ನಿನ್ನ ಹೆಸರೇನು ?

ಬಿಲ್ : (ಔದ್ಧತ್ಯದಿಂದ) ಅದನ್ನು ಕಟ್ಕೊಂಡು ನಿಮಗೇನು ?

ಬಾರ್ಬರ : (ಶಾಂತವಾಗಿ Note-book ಅಲ್ಲಿ ಬರೆದುಕೊಳ್ಳುತ್ತ) ಹೆಸರು ಕೊಡಲು ಧೈರ್ಯವಿಲ್ಲ. ಯಾವುದಾದರೂ ವೃತ್ತಿಗೆ ಸೇರಿದವನೊ ?

ಬಿಲ್ : ಹೆಸರು ಕೊಡೋಕೆ ಹೆದರಿಕೊಂಡವರು ಯಾರು ? (ಹಟದಿಂದ ಲಾರ್ಡ್

ಸ್ಟೀಪೆನೇಜ್ ರೂಪದಲ್ಲಿರುವ ಶ್ರೀಮಂತ ಸಭೆಯನ್ನು ವೀರನಂತೆ ಧಿಕ್ಕರಿಸುವ ಮನಸ್ಸಿನಿಂದ) ನನ್ನ ಮೇಲೆ ಏನಾದರೂ ಆಪಾದನೆ ತರುವುದಿದ್ದರೆ ತನ್ನಿ. (ಕ್ಷೋಭೆಗೊಳ್ಳದೆ ಆಕೆ ಕಾದಿದ್ದಾಳೆ) ನನ್ನ ಹೆಸರು ಬಿಲ್ ವಾಕರ್.

ಬಾರ್ಬರ : (ಹೆಸರು ಪರಿಚಿತವಾದಂತೆ ; ಹೇಗೆಂದು ನೆನೆಯಲು ಯತ್ನಿಸುತ್ತ) ಬಿಲ್ ವಾಕರ್—(ನೆನಪಿಗೆ ತಂದುಕೊಂಡು) ಓ...ತಿಳಿಯಿತು. ಈಗ ತಾನೆ ಒಳಗೆ ಜೆನ್ನಿಹಿಲ್ ಪ್ರಾರ್ಥನೆ ಮಾಡುತಿದ್ದದ್ದು ನಿನಗಾಗಿ ಅಲ್ಲವೆ ? (ಅವನ ಹೆಸರನ್ನು Note-book ಅಲ್ಲಿ ಬರೆದುಕೊಳ್ಳುತ್ತಾಳೆ).

ಬಿಲ್ : ಜೆನ್ನಿ ಯಾವೋಳು ? ನನಗಾಗಿ ಅವಳು ಯಾಕೆ ಪ್ರಾರ್ಥನೆ ಮಾಡಬೇಕು ?

ಬಾರ್ಬರ : ನನಗೆ ಗೊತ್ತಿಲ್ಲ. ಬಹುಶಃ ಅವಳ ತುಟಿ ಕೊಚ್ಚಿದವನು ನೀನಿರಬೇಕು.

ಬಿಲ್ : (ಲಕ್ಷ್ಯಮಾಡದೆ) ಹೌದು, ಅವಳ ತುಟಿ ಕೊಚ್ಚಿದವನು ನಾನು. ನಿಮ್ಮನ್ನು ಕಂಡರೆ ನನಗೆ ಹೆದರಿಕೆಯಿಲ್ಲ.

ಬಾರ್ಬರ : ಹೇಗೆ ಹೆದರೀಯೆ ? ನಿನಗೆ ದೇವರನ್ನು ಕಂಡರೆಯೇ ಹೆದರಿಕೆ ಇಲ್ಲ. ನೀನು ಬಹು ಧೈರ್ಯಶಾಲಿ, ವಾಕರ್. ಇಲ್ಲಿ ನಮ್ಮ ಕೆಲಸ ಮಾಡುವುದಕ್ಕೆ ಸ್ವಲ್ಪ ದಾಷ್ಟಿಕ ಬೇಕಾಗುತ್ತದೆ ! ಆದರೆ ಸ್ವರ್ಗದಲ್ಲಿನ ಅವಳ ತಂದೆಯ ಭಯ ನಮಗಿರುವುದರಿಂದ, ಅಂಥ ಹುಡುಗಿಯ ಮೇಲೆ ಕೈ ಎತ್ತಲು ನಮಗಾರಿಗೂ ಸಾಹಸ ಉಂಟಾಗುವುದಿಲ್ಲ.

ಬಿಲ್ : (ದುಮ್ಮಾನದಲ್ಲಿ) ನಿಮ್ಮ ಉಪದೇಶ ನನಗೇನೂ ಬೇಕಾಗಿಲ್ಲ. ನಿಮ್ಮಲ್ಲಿ ಬೇಡೋಕೆ ನಾಬಂದೆ ಎಂದುಕೊಂಡಿರೇನೊ ? ಇಲ್ಲಿ ಕೂತಿದ್ದಾನಲ್ಲ—ಈ ಹರಕು ಮನುಷ್ಯನ ಹಾಗೆ. ನಾನು ಅಂಥವನಲ್ಲ. ನನಗೆ ನಿಮ್ಮ ರೊಟ್ಟಿ, ಗಂಜಿ ಏನೂ ಬೇಡ. ನಿಮ್ಮ ದೇವರಲ್ಲಿ ನನಗೆ ನಂಬಿಕೆ ಇಲ್ಲ. ನಿಮ್ಮ ಹಾಗೇನೆ—

ಬಾರ್ಬರ : (ಪ್ರಸನ್ನಳಾಗಿ ಕ್ಷಮೆ ಬೇಡುತ್ತ, ಶ್ರೀಮಂತಳಂತೆ, ಅವನ ಪರವಾಗಿ ಒಂದು ಹೊಸ ನಿಲವು ಕಂಡಂತೆ) ಓಹ್...ನಿಮ್ಮ ಹೆಸರು ಬರೆದದ್ದಕ್ಕೆ ಕ್ಷಮಾಪಣೆ ಬೇಡ್ತೇನೆ. ಗೊತ್ತಾಗಲಿಲ್ಲ. ಅದನ್ನು ಹೊಡೆದು ಹಾಕುತ್ತೇನೆ.

ಬಿಲ್ : (ತನಗೆ ಅಮರ್ಯಾದೆ ಆದಂತೆ ತೋರಿ, ತುಂಬಾ ನೊಂದವನ ಹಾಗೆ) ನೋಡಿ...ನನ್ನ ಹೆಸರು ಇರೋಕಡೆ ಇರಲಿ. ನಿಮ್ಮ ಪುಸ್ತಕದಲ್ಲಿ ಇರೋಷ್ಟು ಒಳ್ಳೆಯದಲ್ಲವೆ ಅದು !

ಬಾರ್ಬರ : (ಆಲೋಚಿಸುತ್ತ) ನೋಡಪ್ಪ, ನಿನಗೇನಾದ್ರೂ ನಾನು ಒಳ್ಳೆಯದು ಮಾಡಬಹುದಾದರೆ, ನಿನ್ನ ಹೆಸರು ಬರೆದುಕೊಳ್ಳಬಹುದು. ಇಲ್ಲದೆ ಇದ್ದರೆ ಅದನ್ನು ಬರೆದುಕೊಂಡೇನೂ ಪ್ರಯೋಜನ ಇಲ್ಲ. ಇದೆಯೆ ಹೇಳು. ನಿನ್ನ ವೃತ್ತಿ ಯಾವುದು ?

ಬಿಲ್ : (ಇನ್ನೂ ಗಾಯದಿಂದ ನೋಯುತ್ತ) ಅದನ್ನು ಕಟ್ಟಿಕೊಂಡು ನಿಮಗೇನು ?

ಬಾರ್ಬರ : ಹಾಗೇನು? (ಕೆಲಸಗಾರಳಂತೆ) ನಿನ್ನ ಹೆಸರು ಹೀಗೆ ಬರೆದುಕೊಳ್ಳುತ್ತೇನೆ. (ಬರೆಯುತ್ತ) ಬಡ ಜೆನ್ನಿ ಹಿಲ್ ಬಾಯು ಮೇಲೆ ಹೊಡೆದ ಮನುಷ್ಯ ಎಂದು.

ಬಿಲ್ : (ಹೆದರಿಸುವಂತೆ ಏಳುತ್ತ) ಇಲ್ಲಿ ನೋಡಿ, ನಿಮ್ಮ...ಇದು...ಅತಿಯಾಯ್ತು.

ಬಾರ್ಬರ : (ಹರ್ಷದಿಂದಲೂ ನಿರ್ಭೀತಿಯಿಂದಲೂ) ನಮ್ಮ ಬಳಿಗೆ ಯಾತಕ್ಕೆ ಬಂದೆ ಹಾಗಾದರೆ ?

ಬಿಲ್ : ನನ್ನ ಹೆಣ್ಣಿಗೋಸ್ಕರ, ತಿಳೀತೆ ? ಇಲ್ಲಿಂದ ಅವಳನ್ನು ಕರಕೊಂಡ್ಹೋಗಿ ಅವಳ ದವಡೆ ಮುರಿಯಬೇಕು ಅಂತ !

ಬಾರ್ಬರ : (ಸಮಾಧಾನದಿಂದ) ನೋಡಿದೆಯ. ನಿನ್ನ ವೃತ್ತಿ ಸರಿಯಾಗೇ ಬರೆದು ಕೊಂಡಿದ್ದೆ.

(ಬಿಲ್‌ಗೆ ಕೋಪದಿಂದ ಇದಕ್ಕೆ ಉತ್ತರ ಕೊಡಬೇಕು ಎನ್ನಿಸುತ್ತಿರಲು ತನಗೆ ಅಳು ಬರುತ್ತಿರುವುದನ್ನು ಕಂಡು ನಾಚಿ, ಹೆದರುತ್ತಾನೆ. ಹಟಾತ್ತಾಗಿ ಕುಳಿತುಕೊಳ್ಳುತ್ತಾನೆ.)

ಬಾರ್ಬರ : ಅವಳ ಹೆಸರೇನು ?

ಬಿಲ್ : (ಹಟಮಾರಿಯಾಗಿ) ಅವಳ ಹೆಸರು 'ಮಾಗ್ ಹಬ್ಬಿಯಮ್'. ಅದು ಅವಳ ಹೆಸರು.

ಬಾರ್ಬರ : 'ಮಾಗ್ ಹಬ್ಬಿಯಮ್', ಅವಳು ಕ್ಯಾನಿಂಗ್ ಟೌನಿಗೆ ಹೋದಳು. ಅಲ್ಲಿ ರುವ ನಮ್ಮ ಸೈನ್ಯದ ವಸತಿಗೆ(Barracks).

ಬಿಲ್ : (ಮಾಗ್ ವಿಶ್ವಾಸಘಾತಕತೆಗಾಗಿ ಉಂಟಾದ ರೋಷದಿಂದ ಶಕ್ತಿ ಪಡೆದವ ನಾಗಿ) ಹೋಗಿದ್ದಾಳೇನು ? (ಮುಯ್ಯಿಂದ) ಅವಳಿಗಾಗಿ ನಾನು ಕ್ಯಾನಿಂಗ್ ಟೌನಿಗೆ ಹೋಗುತ್ತೇನೆ. (ಗೇಟ್ ಕಡೆಗೆ ದಾಟಿ ಹೋಗುತ್ತಾನೆ. ಅನಿಶ್ಚಯದಲ್ಲಿ ಬಾರ್ಬರ ಬಳಿಗೆ ಹಿಂತಿರುಗಿ) ಅಥವಾ ನನ್ನ ಕಳಿಸಿ ಬಾಗಿಲು ಹಾಕಬೇಕೂಂತ ನಂಗೆ ಸುಳ್ಳು ಹೇಳ್ತಿದ್ದೀರೊ ?

ಬಾರ್ಬರ : ನಿನ್ನ ಹೊರಗೆ ಹಾಕೋದಕ್ಕೆ ನನಗಿಷ್ಟ ಇಲ್ಲ. ಇಲ್ಲೇ ಇಟ್ಕೊಂಡು ನಿನ್ನ ಆತ್ಮವನ್ನು ಉಳಿಸಬೇಕು ಎನ್ನಿಸುತ್ತದೆ. ನೀನು ಇಲ್ಲೇ ಉಳಿಯೋದು ಮೇಲು. ಈ ದಿನ ನೀನು ತುಂಬ ಕಷ್ಟ ಪಡ್ತೀಯ ಬಿಲ್.

ಬಿಲ್ : ಯಾರು ನಂಗೆ ಅಷ್ಟು ಕಷ್ಟ ಕೊಡೋರು ಅಂದ್ಕೊಂಡಿದ್ದೀರ ?

ಬಾರ್ಬರ : ನೀನು ನಂಬದಿರುವ ಒಬ್ಬರು. ಆದರೆ ನಿನಗೆ ಆಮೇಲೆ ಸಂತೋಷ ಆಗುತ್ತೆ.

ಬಿಲ್ : (ಜಾರಿಕೊಳ್ಳುವ ಹಾಗೆ) ನಿಮ್ಮ ನಾಲಿಗೆ ಏಟಿಂದ ದೂರವಾಗಿರಲು ಕ್ಯಾನಿಂಗ್ ಟೌನಿಗೆ ಹೋಗ್ತೇನೆ. (ಇದ್ದಕ್ಕಿದ್ದಂತೆ ಅವಳ ಕಡೆ ಕ್ರೋಧದಿಂದ ತಿರುಗಿ) ಅಲ್ಲಿ

ಮಾಗ್ ಇಲ್ದಿದ್ರೆ ಇಲ್ಲಿಗೆ ಬರ್ತೀನೆ. ನಿಮ್ಮ ಕಾರಣದಿಂದ ಎರಡು ವರ್ಷ ಜೈಲಿಗೆ ಹೋಗ್ತೀನೆ. ಹಾಗ್ಮಾಡ್ದೇ ಹೋದರೆ ದೇವರು ನನ್ನ ಕಾಪಾಡಲಿ.

ಬಾರ್ಬರ : (ಇನ್ನು ಸ್ವಲ್ಪ ದಯೆದಿಂದ ಎಂಬಂತೆ) ವ್ಯರ್ಥ. ಬೇಡ ಅವಳಿಗೆ ಇನ್ನೊಬ್ಬ ಮನುಷ್ಯ ಸಿಕ್ಕಿದ್ದಾನೆ.

ಬಿಲ್ : ಏನು...?

ಬಾರ್ಬರ : ಅವಳೇ ಪರಿವರ್ತನ ಮಾಡಿದವನು. ಅವಳ ಆತ್ಮ ಮುಕ್ತವಾಗಿರುವುದನ್ನು ಕಂಡಾಗ, ಅವಳಲ್ಲಿ ಪ್ರೇಮಗೊಂಡವನು. ಅವಳ ಮುಖ ಶುಚಿಯಾಗಿ, ತಲೆಗೂದಲು ತೊಳಕೊಂಡಾಗ—

ಬಿಲ್ : (ಆಶ್ಚರ್ಯದಿಂದ) ಆ ಅಧ್ವಾನ್ನದ ಮುಲ್ಲಂಗಿ ಹೆಣ್ಣು ಅದನ್ನು ಯಾಕೆ ತೊಳಕೊಂಡಳು ? ಅದರ ಬಣ್ಣ ಕೆಂಪು...

ಬಾರ್ಬರ : ನೋಡಲು ಈಗ ಅದು ತುಂಬಾ ಚೆನ್ನಾಗಿದೆ. ಅವಳ ಕಣ್ಣಲ್ಲಿ ಒಂದು ಹೊಸ ನೋಟ, ಮುಖಕ್ಕೆ ಒಂದು ಹೊಸ ಕಳೆ, ಬಂದಿವೆ ಅದರಿಂದ. ಅಯ್ಯೋ ಪಾಪ. ನೀನು ಬಂದದ್ದು ತುಂಬಾ ತಡ ಆಯ್ತು. ಆ ಹೊಸಬ ನಿನಗೆ ಮೂಗಿಲ್ಲದೆ ಮಾಡಿದ್ದಾನೆ, ಬಿಲ್.

ಬಿಲ್ : ಅವನ ಮೂಗಿಗೆ ಗತಿ ಕಾಣಿಸ್ತೀನೆ. ಈಗ ನಂಗೆ ಅವಳಿಂದ ಏನಾಗಬೇಕಾಗಿದೆ ? ಅದನ್ನು ಯೋಚಿಸಿ, ನನ್ನನ್ನು ಕಸಕ್ಕಿಂತ ಕಡಮೆಮಾಡಿ ದೂಡಿದ್ದಕ್ಕೆ ಅವಳಿಗೆ ಬುದ್ಧಿ ಕಲಿಸ್ತೀನೆ. ನನ್ನ ಹುಡ್ಗಿಗೆ ಕೈಹಾಕಿದ್ದಕ್ಕೆ ಅವನಿಗೆ ಬುದ್ಧಿ ಕಲಿಸ್ತೀನೆ. ಆ ಪಾಪಿಷ್ಠನ ಹೆಸರೇನು ?

ಬಾರ್ಬರ : ಸಾರ್ಜೆಂಟ್ ಟಾಜರ್ ಫೇರ್ಮೈಲ್.

ಷರ್ಲಿ : (ಗಂಭೀರ ಸಂತೋಷದಿಂದ ಎದ್ದು) ನಾನು ಇವನ ಜೊತೇಲಿ ಹೊಗ್ತೀನೆ, ಅಕ್ಕ. ಅವರಿಬ್ಬರು ಇದಿರಾಗೋದನ್ನು ನೋಡಬೇಕು. ಅದು ಮುಗಿದಮೇಲೆ ಇವನನ್ನು ಅಂಗವಿಕಲರ ಆಸ್ಪತ್ರೆಗೆ ತೊಗೊಂಡು ಹೋಗ್ತೀನೆ.

ಬಿಲ್ : ಷರ್ಲಿ, (ತನ್ನ ಮನಸ್ಸಿನ ಸಂದೇಹವನ್ನು ಮರೆಮಾಡಿಕೊಳ್ಳಲಾಗದೆ) ನೀನು ಹೇಳಿದೆಯಲ್ಲ, ಅವನೆ ?

ಷರ್ಲಿ : ಅವನೇ.

ಬಿಲ್ : ಸಂಗೀತಶಾಲೆಯಲ್ಲಿ ಕುಸ್ತಿ ಮಾಡಿದೋನು ?

ಷರ್ಲಿ : ರಾಷ್ಟ್ರೀಯ ಕ್ರೀಡಾಸಂಘದ ಸ್ಪರ್ಧೆಗಳಲ್ಲಿ ಅವನಿಗೆ ವರ್ಷಕ್ಕೆ ಸುಮಾರು 100 ಪೌಂಡು ಸಂಪಾದನೆ ಇರ್ತಿತ್ತು. ಮತಕ್ಕಾಗಿ ಅದನ್ನು ಈಗ ಬಿಟ್ಟಿದ್ದಾನೆ. ವಾಡಿಕೆಯ ವ್ಯಾಯಾಮ ಇಲ್ಲದ್ದರಿಂದ ಸ್ವಲ್ಪ ಹಸಿಯಾಗಿದ್ದಾನೆ. ನಿನ್ನನ್ನು ಕಂಡರೆ ಅವನಿಗೆ ಸಂತೋಷ ಆಗುತ್ತೆ, ಬಾ.

ಬಿಲ್ : ಅವನ ತೂಕ ಎಷ್ಟು ?

ಷರ್ಲಿ : ಹದಿಮೂರು -ನಾಲ್ಕು (13–4)

(ಬಿಲ್‌ನ ಕಡೆಯ ಭರವಸೆ ಆರಿಹೋಗುತ್ತದೆ.)

ಬಾರ್ಬರ : ಹೋಗಿ ಅವನ ಕೈಯಲ್ಲಿ ಮಾತಾಡು ಬಿಲ್. ಅವನು ನಿನ್ನ ಮನಸ್ಸನ್ನು ತಿರುಗಿಸುತ್ತಾನೆ.

ಷರ್ಲಿ : ತಿರುಗಿಸುತ್ತಾನೆ ಅವನು. ಆಲೂಗೆಡ್ಡೆ ಹಾಗೆ ನಿನ್ನ ತಲೆಯನ್ನು ಕುಟ್ಟಿ ಹಿಟ್ಟು ಮಾಡುತಾನೆ.

ಬಿಲ್ : (ದುಮ್ಮಾನದಿಂದ) ಅವನನ್ನು ಕಂಡರೆ ನಂಗೇನು ಹೆದರಿಕೆ ಇಲ್ಲ. ಯಾರನ್ನು ಕಂಡರೂ ಹೆದರಿಕೆ ಇಲ್ಲ. ನೋಡಿದರೆ ಅವನು ಖಂಡಿತ ನನ್ನ ಮೈ ಕೈ ಮುರೀತಾನೆ. ಒಳ್ಳೆ ಕೆಲ್ಸ ಕೊಟ್ಟಳು ಅವಳು ನಂಗೆ. (ಮನಸ್ಸಿನ ಚಿಂತೆಯಲ್ಲಿ ಅಲ್ಲಿದ್ದ ಕುದುರೆ ಮೇವಿನ ಡಬ್ಬದ ಕೊನೆಗೆ ಕುಳಿತುಕೊಳ್ಳುತ್ತಾನೆ.)

ಷರ್ಲಿ : ನೀನು ಹೋಗೋದಿಲ್ಲ. ಹಾಗೆ ಅಂದ್ಕೊಂಡೆ ನಾನು. (ತನ್ನ ಪೀಠಕ್ಕೆ ತಾನು ಹೋಗುತ್ತಾನೆ.)

ಬಾರ್ಬರ : (ಕೂಗುತ್ತ) ಜೆನ್ನಿ !

ಜೆನ್ನಿ : (ನೆಲೆಯ ಬಳಿ ಕಾಣಿಸಿಕೊಳ್ಳುತ್ತಾಳೆ. ಅವಳ ಕಟಬಾಯಿಗೆ Plaster ಹಚ್ಚಿದೆ.) ಏನು ಮೇಜರ್ ?

ಬಾರ್ಬರ : ರಮ್ಮಿ ಮಿಚ್ಚೆನ್ಸನ್ನು ಹೊರಕ್ಕೆ ಕಳಿಸು. ಇಲ್ಲಿನದನ್ನೆಲ್ಲ ತೆಗೀಲಿ.

ಜೆನ್ನಿ : ಅವಳಿಗೆ ಭಯ ಎಂದು ಕಾಣುತ್ತೆ.

ಬಾರ್ಬರ : (ಒಂದು ಕ್ಷಣದಲ್ಲಿ ಅವರಮ್ಮನ ಹೋಲಿಕೆ ಅವಳಲ್ಲಿ ಹೊಳೆಯುತ್ತದೆ) Nonsense, ಹೇಳಿದ ಹಾಗೆ ಮಾಡಬೇಕು ಅವಳು.

ಜೆನ್ನಿ : (ನೆಲೆಯೊಳಕ್ಕೆ ಕೂಗುತ್ತ) ರಮ್ಮಿ, ಮೇಜರ್ ಹೇಳ್ತಾರೆ, ನೀನು ಬರಬೇಕು ಅಂತ.

(ಜೆನ್ನಿ ಬಾರ್ಬರಳ ಬಳಿಗೆ ಬರುತ್ತಾಳೆ. ಉದ್ದೇಶಪೂರ್ವಕವಾಗಿ ಬಿಲ್ ಬಳಿಯೇ ಹಾದುಹೋಗುತ್ತಾಳೆ. ಅವನನ್ನು ಕುರಿತು ತನಗೆ ದುರಾಗ್ರಹವಿದೆಯೆಂದೂ, ಅವನಿಂದ ಸೆಟೆಯುತ್ತಿದ್ದಾಳೆಂದೂ ಅವನು ಭಾವಿಸದಂತೆ)

ಬಾರ್ಬರ : ಅಯ್ಯೋ, ಪಾಪ. ಜೆನ್ನಿ, ನಿಂಗೆ ಆಯಾಸವಾಗಿದೆಯೇನಮ್ಮ ! (ಗಾಯಗೊಂಡ ಕೆನ್ನೆಯನ್ನು ನೋಡುತ್ತ) ನೋಯುತಿದೆಯೆ, ಅಮ್ಮ ?

ಜೆನ್ನಿ : ಇಲ್ಲ. ಈಗೆಲ್ಲ ಸರಿಹೋಯ್ತು ; ಅಂಥಾದ್ದೇನಲ್ಲ, ಬಿಡಿ.

ಬಾರ್ಬರ : (ವಿಮರ್ಶಾತ್ಮಕವಾಗಿ) ಎಷ್ಟು ಗಡುಸಾಗಿ ಹೊಡೆಯಬಹುದೊ ಅಷ್ಟು

ಗಡುಸಾಗಿ ಹೊಡೆದ ಅಲ್ಲವೆ ? ಬಿಲ್ ಏನು ಮಾಡಿಯಾನು ? ನಿಂಗೆ ಅವನ್ನ ಕಂಡ್ರೆ ಕೋಪ ಇಲ್ಲ, ಅಲ್ಲ ?

ಜೆನ್ನಿ : ಓ…ಇಲ್ಲ….ಇಲ್ಲ…ಇಲ್ಲ. ನಿಜವಾಗಿ ನನಗೆ ಕೋಪ ಇಲ್ಲ. ಅವನಿಗೆ ದೇವರು ಒಳ್ಳೇದು ಮಾಡಲಿ.

(ಬಾರ್ಬರ ಅವಳಿಗೆ ಮುತ್ತು ಕೊಡುತ್ತಾಳೆ. ಅವಳು ನೆಲೆಯೊಳಕ್ಕೆ ಉಲ್ಲಾಸದಿಂದ ಓಡಿಹೋಗುತ್ತಾಳೆ. ಬಿಲ್ ಹೊಸದಾಗಿ ತನ್ನೊಳಗೆ ಕಾಣಿಸಿದ ಲಕ್ಷಣಗಳು ಪುನಃ ಕಾಣಿಸಿ ಕೊಳ್ಳಲು ಒಳಗೇ ನರಳುತ್ತಾನೆ. ಆದರೆ ಏನನ್ನೂ ನುಡಿಯುವುದಿಲ್ಲ. ರಮ್ಮಿ ಮಿಚ್ಚೆನ್ಸ್ ನೆಲೆಯಿಂದ ಹೊರಗೆ ಬರುತ್ತಾಳೆ.)

ಬಾರ್ಬರ : (ರಮ್ಮಿಯನ್ನು ಎದುರುಗೊಳ್ಳಲು ಹೋಗುತ್ತ) ನೋಡು ರಮ್ಮಿ, ಬೇಗ ಮಾಡು. ಆ ಪಾತ್ರೆ, ತಟ್ಟೆ ತೊಳೆಯಲು ಒಳಗೆ ತೊಗೊಂಡು ಹೋಗು. ಆ ರೊಟ್ಟಿ ಚೂರುಗಳನ್ನು ಹಕ್ಕಿಗಳಿಗೆ ಹಾಕು.

(ರಮ್ಮಿ ಆ ತಟ್ಟೆ, ಪಾತ್ರೆಗಳನ್ನು ತೆಗೆದುಕೊಳ್ಳುತ್ತಾಳೆ. ಆದರೆ ಷರ್ಲಿ ತನ್ನದರಲ್ಲಿ ಇನ್ನೂ ಸ್ವಲ್ಪ ಹಾಲು ಉಳಿದಿರುವುದರಿಂದ ತನ್ನ ಪಾತ್ರೆಯನ್ನು ಅವಳ ಕೈಯಿಂದ ಹಿಂದಕ್ಕೆ ತೆಗೆದುಕೊಳ್ಳುತ್ತಾನೆ)

ರಮ್ಮಿ : ಅದರಲ್ಲಿ ತಿಂಡಿ ಚೂರು ಏನೂ ಇಲ್ಲ. ಒಳ್ಳೆ ಬ್ರೆಡ್ಡನ್ನು ಹಕ್ಕಿಗಳಿಗೆ ಹಾಕಿ ಪೋಲು ಮಾಡುವ ಕಾಲ ಅಲ್ಲ ಇದು.

ಪ್ರೈಸ್ : (ಆಶ್ರಯದ ಬಾಗಿಲ ಹತ್ತಿರ ಕಾಣಿಸಿಕೊಳ್ಳುತ್ತ) ದೊಡ್ಡ ಮನುಷ್ಯರು ಯಾರೊ ಆಶ್ರಯ ನೋಡಲು ಬಂದಿದ್ದಾರೆ, ಮೇಜರ್. ನಿಮ್ಮ ತಂದೆ ಎಂದು ಹೇಳುತಿದ್ದಾರೆ.

ಬಾರ್ಬರ : ಒಳ್ಳೆಯದು, ಬರುತ್ತೇನೆ.

(ಸ್ನಾಬಿ ಆಶ್ರಯದೊಳಕ್ಕೆ ಹಿಂತಿರುಗುತ್ತಾನೆ. ಬಾರ್ಬರ ಅವನ ಹಿಂದೆ ಹೋಗುತ್ತಾಳೆ)

ರಮ್ಮಿ : (ಕದ್ದು ಬಿಲ್ ಬಳಿಗೆ ಬಂದು, ತಗ್ಗು ದನಿಯಲ್ಲಿ, ಮನಸ್ಸಿನ ತೀವ್ರ ವಿಶ್ವಾಸ ದಿಂದ ಹೇಳುತ್ತಾಳೆ). ಏ, ಚಪ್ಪಟೆ ಕಿವಿಯ, ಹಂದಿ ಮುಸುಡಿಯ ಮಡಕೆ ಒಡೆಯೋನೆ, ಆಕೆ ನನ್ನನ್ನು ಬಿಡೊಹಾಗಿದ್ರೆ, ನಿನಗೊಂದು ಸಲ ದೇವರ ಸೇವೆ ಮಾಡ್ತಿದ್ದೆ. ನೀನು ದೊಡ್ಡ ಮನುಷ್ಯನೇನೊ ? ಹೆಂಗ್ಸಿನ ಮುಖದ ಮೇಲೆ ಹೊಡೆದೆಯಲ್ಲ.

(ತನ್ನ ಮನಸ್ಸನ್ನು ಇದಕ್ಕಿಂತ ದೊಡ್ಡ ಸಂಗತಿಗಳು ಆಕ್ರಮಿಸಿರುವುದರಿಂದ ಬಿಲ್ ಇದಕ್ಕೆ ಲಕ್ಷ್ಯ ಕೊಡುವುದಿಲ್ಲ)

ಪರ್ಲಿ : (ಅವಳನ್ನು ಹಿಂಬಾಲಿಸುತ್ತ) ಇಲ್ಲಿ ನೋಡು, ಒಳಗೆ ಹೋಗು. ಮಾತಾಡಿ ಹೆಚ್ಚು ಸಂಕಟಕ್ಕೆ ಸಿಕ್ಕಿಕೊಳ್ಳಬೇಡ.

ರಮ್ಮಿ : (ನಿರ್ಲಕ್ಷ್ಯದ ಅಹಂಕಾರದಿಂದ) ನಂಗೆ ನೆನಪಿರುವ ಮಟ್ಟಿಗೆ—ನಿನ್ನ ಪರಿಚಯವನ್ನು ಯಾರೂ ನನಗೆ ಮಾಡಿಕೊಟ್ಟ ಹಾಗಿಲ್ಲ. (ಆಶ್ರಯದೊಳಕ್ಕೆ ತಟ್ಟೆಯನ್ನು ತೆಗೆದುಕೊಂಡು ಹೋಗುತ್ತಾಳೆ).

ಪರ್ಲಿ : ಇದನ್ನ ಏನೆಂದು ಹೇಳಲಿ ?

ಬಿಲ್ : (ಕಟು ಉಗ್ರವಾಗಿ) ನನ್ನ ಕೈಲಿ ಮಾತಾಡಬೇಡ, ಕೇಳಿಸ್ತೆ ? ನನ್ನಷ್ಟಕ್ಕೆ ನನ್ನ ಬಿಡು. ಇಲ್ಲದೆ ಹೋದ್ರೆ ನಿಂಗೆ ಸರಿಯಾಗಿ ಮಾಡ್ತೇನೆ. ಹೇಗೇ ಆಗಲಿ—ನಿನ್ನ ಕಾಲ ಕೆಳಗಿನ ಕಸ ಅಲ್ಲ ನಾನು.

ಪರ್ಲಿ : (ಶಾಂತವಾಗಿ) ಭಯಬೇಡ. ನೀನು ಬಹು ಪ್ರಧಾನ ಮನುಷ್ಯ, ನಿನ್ನನ್ನು ಹುಡುಕಿಕೊಂಡು ಜನ ಬರ್ತಾರೆ ಅಂತ ನಿರೀಕ್ಷಿಸಬೇಕಾದ್ದಿಲ್ಲ. (ಆಶ್ರಯದೊಳಕ್ಕೆ ಹೋಗುವುದರಲ್ಲಿದ್ದಾನೆ. ಬಾರ್ಬರ ಹೊರಕ್ಕೆ ಬರುತ್ತಿದ್ದಾಳೆ. ಆಕೆಯ ಬಲಕ್ಕೆ ಅಂಡರ್‌ಷಾಫ್ಟ್).

ಬಾರ್ಬರ : ಇಲ್ಲಿ ನೋಡಿ, ಪರ್ಲಿ, ಇದ್ದೀರ ? (ಅವರ ನಡುವೆ) ಇವರು ನಮ್ಮ ತಂದೆ ! ಅವರು ಇಹವಾದಿಗಳು ಎಂದು ನಾನು ನಿಮಗೆ ಹೇಳಿದ್ದೆ ಅಲ್ಲವೆ ? ಬಹುಶಃ ನೀವು ಒಬ್ಬರಿಗೊಬ್ಬರು ಸಮಾಧಾನದ ಮಾತು ಹೇಳಿಕೊಂಡೀರಿ !

ಅಂ.ಷಾ : (ಬೆಚ್ಚಿ) ಇಹವಾದಿ ! ಒಂದಿಷ್ಟೂ ಅಲ್ಲ : ತದ್ವಿರುದ್ಧ. ನಾನು ಖಚಿತವಾಗಿ ಅನುಭಾವಿ.

ಬಾರ್ಬರ : ತಪ್ಪಾಯ್ತು ; ಕ್ಷಮಿಸಿ. ಅಂದಹಾಗೆ, ಅಪ್ಪ ! ನಿಮ್ಮ, ನಿಜವಾದ ಮತಧರ್ಮ ಯಾವುದು ? ಪುನಃ ಯಾರಿಗಾದರೂ ನಿಮ್ಮ ಪರಿಚಯ ಮಾಡಿಕೊಡಬೇಕಾದರೆ—

ಅಂ.ಷಾ : ನನ್ನ ಮತಧರ್ಮ ? ನಿಜವಾಗಿ ನಾನು, ಮಗು, ಮಿಲಿಯಧೀಶ್ವರ. ಅದು ನನ್ನ ಮತ.

ಬಾರ್ಬರ : ಹಾಗಿದ್ದರೆ, ನೀವು, ಪರ್ಲಿ, ಒಬ್ಬರನ್ನೊಬ್ಬರು ಸಮಾಧಾನ ಪಡಿಸುವ ಹಾಗಿಲ್ಲ. ನೀವು ಮಿಲಿಯಧೀಶ್ವರ ಅಲ್ಲ, ಪೀಟರ್, ಅಲ್ಲವೆ ?

ಪೀಟರ್ : ಅಲ್ಲ ; ಹಾಗೆ ಹೇಳಲು ನನಗೆ ಹೆಮ್ಮೆಯಾಗುತ್ತದೆ !

ಅಂ.ಷಾ : (ಗಂಭೀರವಾಗಿ) ಬಡತನ, ಅಯ್ಯೊ, ಹೆಮ್ಮೆ ಪಡುವಂಥಾದ್ದೇನೂ ಅಲ್ಲ !

ಪರ್ಲಿ : (ಕೋಪದಿಂದ) ನಿಮ್ಮ ಮಿಲಿಯಗಳನ್ನು ನಿಮಗೆ ಮಾಡಿಕೊಟ್ಟವರು ಯಾರು ? ನಾನು, ನಮ್ಮಂಥವರು. ನಮ್ಮನ್ನು ಬಡವರಾಗಿಯೇ ಉಳಿಸಿರುವುದು ಯಾವುದು ! ನಿಮ್ಮನ್ನು ಐಶ್ವರ್ಯವಂತರನ್ನಾಗಿಡುವ ಕೆಲಸ. ನಿಮ್ಮ ವರಮಾನ ಎಲ್ಲ ನನಗೆ ಕೊಟ್ಟರೂ ನಿಮ್ಮ ಅಂತಃಸಾಕ್ಷಿ ನನಗೆ ಬೇಡ.

ಅಂ.ಷಾ : ಎಂಥ ಅಂತಃಸಾಕ್ಷಿ ನಿಮಗಿದ್ದರೂ ನಿಮ್ಮ ವರಮಾನವನ್ನು ನಾನು ಬಯಸುವುದಿಲ್ಲ. (ಹೋಗಿ ಒಪ್ಪಾರದ ಒಂದು ಬೆಂಚಿನ ಮೇಲೆ ಕುಳಿತುಕೊಳ್ಳುತ್ತಾನೆ.)

ಬಾರ್ಬರ : (ಅವನು ಎದುರುತ್ತರ ಕೊಡುವುದನ್ನು ಜಾಣತನದಿಂದ ತಡೆಯುತ್ತ) ಅವರು ನಮ್ಮ ತಂದೆ ಅಂದುಕೊಂಡಿರಲಾರಿರಿ, ಅಲ್ಲವೆ ಪೀಟರ್ ! ನೀವು ಆಶ್ರಯದೊಳಗೆ ಹೋಗಿ ಆ ಹೆಣ್ಣು ಮಕ್ಕಳಿಗೆ ಸ್ವಲ್ಪ ಸಹಾಯಮಾಡಿ ಹೋಗಿ. ಎಲ್ಲರಿಗೂ ತುಂಬಾ ಕೆಲಸ ಇದೆ.

ಪರ್ಲಿ : (ಕಹಿಯಾಗಿ) ಹೌದು, ಒಂದು ಊಟ ಕೊಟ್ಟ ಅವರ ಋಣದಲ್ಲಿದ್ದೇನೆ, ಅಲ್ಲವೆ ?

ಬಾರ್ಬರ : ಅವರ ಋಣದಲ್ಲಿಲ್ಲ. ಅವರ ಮೇಲಿನ ಪ್ರೀತಿಯಿಂದ ಪೀಟರ್ ; ಅವರ ಮೇಲಿನ ಪ್ರೀತಿಗಾಗಿ. (ಅವನಿಗೆ ಅರ್ಥವಾಗುವುದಿಲ್ಲ. ಅವಮಾನಿತನಾದಂತೆ ಇರುತ್ತಾನೆ.) ನೋಡಿ, ನನ್ನ ಕಡೆ ಹಾಗೆ ದುರುಗುಟ್ಟಿ ನೋಡಬೇಡಿ. ಒಳಗೆ ಹೋಗಿ ಆ ನಿಮ್ಮ ಅಂತಃಸಾಕ್ಷಿಗೆ ರಜ ಕೊಡಿ.

(ಆಶ್ರಯದೊಳಕ್ಕೆ ಅವನು ಬೇಗ ಹೋಗುವಂತೆ ಅವಸರಿಸುತ್ತಾಳೆ.)

ಪರ್ಲಿ : (ಒಳಗೆ ಹೋಗುತ್ತ) ನಿನ್ನ ಯುಕ್ತಿಶಕ್ತಿಯನ್ನು ಬೆಳಸಲು ಶಿಕ್ಷಣ ಪಡೆಯದೆ ಹೋದ್ದು ಒಂದು ದೊಡ್ಡ ನಷ್ಟವಮ್ಮ. ಇಹವಾದವನ್ನು ಕುರಿತು ನೀನು ತುಂಬಾ ಆಕರ್ಷಕ ಭಾಷಣಕಾರಳಾಗುತ್ತಿದ್ದೆ !

(ಬಾರ್ಬರ ತನ್ನ ತಂದೆ ಕಡೆಗೆ ತಿರುಗುತ್ತಾಳೆ.)

ಅಂ.ಷಾ : ನನ್ನನ್ನು ಕುರಿತು ಯಾವ ಯೋಚನೆಯನ್ನೂ ಮಾಡಬೇಡ, ಮಗು. ಸ್ವಲ್ಪ ಹೊತ್ತು ನೋಡುತಿರುತೇನೆ.

ಬಾರ್ಬರ : ಸರಿ, ಹಾಗಾದರೆ.

ಅಂ.ಷಾ. : ಒಂದು ಸಂಗತಿ ತಿಳಿಸುತ್ತೀಯ ? ಅಲ್ಲಿ ಹೊರಗಿನವನಂತೆ ನಿಂತು ಚಿಕಿತ್ಸೆಗೆ ಕಾದಿದ್ದಾನಲ್ಲ : ಅವನಿಗೆ ಏನಾಗಿದೆ ?

ಬಾರ್ಬರ : (ಬಿಲ್ ಕಡೆ ನೋಡುತ್ತಾಳೆ. ಅವನ ಸ್ಥಿತಿ ಬದಲಾಯಿಸಿಯೇ ಇಲ್ಲ. ಅವನ ಚಿಂತನೆಯಲ್ಲಿನ ರೋಷ ಮುಖದಲ್ಲಿ ಇನ್ನೂ ಆಳವಾಗಿದೆ.) ಅವನಿಗೆ ವಾಸಿ ಮಾಡೋಕೆ ಹೆಚ್ಚು ಹೊತ್ತು ಹಿಡಿಯೋದಿಲ್ಲ. ನೋಡುತಿರಿ !
(ಬಿಲ್ ಬಳಿಗೆ ಹೋಗಿ ಕಾಯುತ್ತಾಳೆ. ಮುಖ ಎತ್ತಿ ಒಂದು ಸಲ ಅವನು ಅವಳ ಕಡೆ ನೋಡುತ್ತಾನೆ. ಪುನಃ ಕಣ್ಣನ್ನು ಇಳಿಸುತ್ತಾನೆ. ನೆಮ್ಮದಿಯಿಲ್ಲ. ಆದರೆ ಹಿಂದಿಗಿಂತ ಹೆಚ್ಚು ನಿರ್ಧಾರ ಅವನ ಮನಸ್ಸಿನಲ್ಲಿದೆ.) ಪಾಗ್

ಹಾಬ್ಬಿಯಮ್ ಮುಖದ ಮೇಲೆ ಬಾಸುಂಡೆ ಬೀಳುವಂತೆ ಎರಡು ಬಿಗಿಯೋದು ಒಳ್ಳೆಯದಲ್ಲವೆ, ಬಿಲ್ !

ಬಿಲ್ : (ಇದನ್ನು ಕೇಳಿ ಅನಿರೀಕ್ಷಿತ ನಿರಾಸೆಯಿಂದ ಜಗ್ಗನೆದ್ದು) ಸುಳ್ಳು, ನಾನು ಹಾಗೆ ಹೇಳಲೇ ಇಲ್ಲ. [ಅವಳು ತಲೆ ಅಲ್ಲಾಡಿಸುತ್ತಾಳೆ]. ನನ್ನ ತಲೇಲಿರೋದನ್ನ ನಿಮಗೆ ಯಾರು ಹೇಳಿದರು ?

ಬಾರ್ಬರ : ನಿನ್ನ ಹೊಸ ಸ್ನೇಹಿತ.

ಬಿಲ್ : ಯಾವ ಹೊಸ ಸ್ನೇಹಿತ !

ಬಾರ್ಬರ : ಸೈತಾನ, ಬಿಲ್ ! ಜನಗಳನ್ನು ಅವನು ಹಿಡಿದರೆ ಅವರ ಚಿಂತೆ ಹೆಚ್ಚಾಗುತ್ತೆ ; ಈಗ ನೀನು ಇರೊ ಹಾಗೆ.

ಬಿಲ್ : (ತುಂಬಾ ಕಷ್ಟಪಟ್ಟುಕೊಂಡು ಯಾವುದೂ ತನಗೆ ಲಕ್ಷ್ಯವಿಲ್ಲವೆಂಬಂತೆ, ಪ್ರಸನ್ನನಾಗಿರಲು ಯತ್ನಿಸುತ್ತ) ನನಗೆ ಯಾವ ಚಿಂತೆಯೂ ಹಿಡಿದಿಲ್ಲ. (ಪುನಃ ಕುಳಿತುಕೊಳ್ಳುತ್ತಾನೆ. ಉದಾಸೀನನಾಗಿ ನೋಡುವವರಿಗೆ ಕಾಣುವಂತೆ ಕಾಲು ಚಾಚಿ ಕುಳಿತುಕೊಳ್ಳುತ್ತಾನೆ.)

ಬಾರ್ಬರ : ಅದು ಸರಿಯೆ, ನೀನು ಸುಖವಾಗಿದ್ದರೆ,—ನಾವಿರೊ ಹಾಗೆ—ಯಾಕೆ ಸುಖವಾಗಿ ಕಾಣಿಸಬಾರದು ?

ಬಿಲ್ : (ಅವನ ಇಷ್ಟಕ್ಕೆ ವಿರುದ್ಧವಾಗಿ ಅವನ ಕಾಲು ಮಡಿಸಿಕೊಳ್ಳುತ್ತದೆ) ಓ ನಾನು ತಕ್ಕಷ್ಟು ಸುಖವಾಗಿದ್ದೇನೆ. ನನ್ನಷ್ಟಕ್ಕೆ ನನ್ನನ್ನು ಯಾಕೆ ಬಿಡಬಾರದು ? ನಾನು ನಿಮಗೆ ಏನು ಕೆಟ್ಟದನ್ನು ಮಾಡಿದ್ದೇನೆ. ನಾನು ನಿಮ್ಮ ಮುಖದ ಮೇಲೆ ಹೊಡೆದೆನೆ ?

ಬಾರ್ಬರ : (ಮೃದುವಾಗಿ, ಅವನ ಆತ್ಮವನ್ನು ಒಲಿಸಿಕೊಳ್ಳುತ್ತ) ನಾನಲ್ಲ ಬಿಲ್, ನಿನ್ನನ್ನು ಹಿಡಿಯುತ್ತಿರುವುದು.

ಬಿಲ್ : ಇನ್ನ್ಯಾರು ಹಾಗಾದರೆ ?

ಬಾರ್ಬರ : ಯಾರೊ ಒಬ್ಬರು ! ನೀನು ಹೆಂಗಸರ ಮುಖ ಮುರಿಯಬಾರದು ಎಂದು ಇಷ್ಟ ಉಳ್ಳವರಿರಬೇಕು. ಯಾರೊ ಒಬ್ಬರು, ಯಾವುದೊ ಶಕ್ತಿ ನಿನ್ನನ್ನು ಗಂಡಸನ್ನಾಗಿ ಮಾಡಬಯಸುವಂಥಾದ್ದು.

ಬಿಲ್ : (ಗಜಿಬಿಜಿಯಿಂದ ಎದ್ದು) ನಾನು ಗಂಡಸಲ್ಲವೆ ! ಉಂ ? ನನ್ನನ್ನು ಗಂಡಸಲ್ಲ ಎಂದು ಹೇಳೋರಾರು ?

ಬಾರ್ಬರ : ನಿನ್ನಲ್ಲಿ ಎಲ್ಲಿಯೊ ಒಂದು ಗಂಡಸಿನ ಅಂಶ ಇರಬೇಕು ಎಂದು ಕೊಂಡಿದ್ದೇನೆ. ಆದರೆ ಬಡಪಾಯಿ ಜೆನ್ನಿಹಿಲ್ಲನ್ನು ಹೊಡೆಯೋದಕ್ಕೆ ಅದು ಹೇಗೆ ಬಿಟ್ಟಿತೊ ! ಅದು ಅದಕ್ಕೆ ದೊಡ್ಡ ಗಂಡಸುತನ ಅನ್ನಿಸಿತೆ ?

ಬಿಲ್ : (ಕ್ಲೇಶದಲ್ಲಿ) ಆ ಮಾತನ್ನು ಹಾಗೆ ಬಿಡಿ. ನಿಮ್ಮ ಜೆನ್ನಿಹಿಲ್ ಹಾಳಾದಳು. ಅವಳ ಸಣ್ಣ ಮುಖ ಕಟ್ಟಿಕೊಂಡು ನಾನೇನು ಮಾಡ್ಲಿ. ಹೇಸಿಕೆ ಬರುತ್ತೆ.

ಬಾರ್ಬರ : ಆದರೆ ಅದನ್ನು ಕುರಿತು ಯಾಕೆ ಯೋಚನೆ ಮಾಡುತಾ ಇದ್ದೀಯೆ ? ನಿನ್ನ ಮನಸ್ಸಿನಲ್ಲಿ ಅದು ಯಾಕೆ ಏಳುತ್ತಲೇ ಇದೆ, ನಿನಗೆ ವಿರುದ್ಧವಾಗಿ ? ನೀನೇನು ಮತಾಂತರ ಆಗುತಿದ್ದೀಯು ?

ಬಿಲ್ : (ನಿಶ್ಚಯದಿಂದ) ಖಂಡಿತ ನಾನು ಮತಾಂತರ ಆಗುತ್ತ ಇಲ್ಲ ; ಶಕ್ಯ ಇಲ್ಲ.

ಬಾರ್ಬರ : ಅದು ಸರಿ ಬಿಲ್ ! ಅದಕ್ಕೆ ವಿರುದ್ಧವಾಗಿ ಒಡ್ಡಿ ನಿಲ್ಲು, ನಿನ್ನ ಶಕ್ತಿಯನ್ನೆಲ್ಲ ಖರ್ಚುಮಾಡಿ. ನೀನು ಅಗ್ಗವಾಗಿ ನಮಗೆ ಸಿಕ್ಕಬಾರದು. ಟಾಜರ್ ಫೇರ್ಮೈಲ್ ಹೇಳಿದ : ಮುಕ್ತಿಗೆ ವಿರುದ್ಧವಾಗಿ ಮೂರು ರಾತ್ರಿ ಕುಸ್ತಿ ಮಾಡಿದನಂತೆ ಸಂಗೀತ ಶಾಲೆಯಲ್ಲಿ. ಆ ಜಪಾನಿ ಮೇಲೆ ಕುಸ್ತಿ ಮಾಡಿದ್ದಕ್ಕಿಂತ ಬಲವಾಗಿ,—ತನ್ನ ತೋಳು ಮುರಿಯುವಂತಾದಾಗ ಆ ಜಪಾನೀಗೆ ಅವಕಾಶ ಕೊಟ್ಟನಂತೆ. ತನ್ನ ಹೃದಯ ಒಡೆಯುವಂತಾಗುವವರೆಗೂ ತನ್ನ ಮುಕ್ತಿಗೆ ಒಪ್ಪಿಗೆ ಕೊಡಲಿಲ್ಲವಂತೆ. ಬಹುಶಃ ನೀನು ಅದರಿಂದ ತಪ್ಪಿಸಿಕೊಳ್ಳುತ್ತೀಯೆ. ನಿನಗೆ ಹೃದಯ ಇಲ್ಲ, ಅಲ್ಲ ?

ಬಿಲ್ : ಏನು ನಿಮ್ಮರ್ಥ ? ಎಲ್ಲರಿಗೂ ಇರೊ ಹಾಗೇ ಒಂದು ಹೃದಯ ನನಗೂ ಯಾಕಿಲ್ಲ ?

ಬಾರ್ಬರ : ಹೃದಯ ಇದ್ದವನು ಯಾರೇ ಆಗಲಿ, ಆ ಬಡ ಜೆನ್ನಿಯ ಮುಖವನ್ನು ಹೊಡೆಯುತ್ತಿದ್ದನೆ ?

ಬಿಲ್ : (ಅಳುವಂತಾಗಿ) ಔ...ನನ್ನಷ್ಟಕ್ಕೆ ನನ್ನ ಬಿಡಿ. ನಾನು ಎಂದಾದರೂ ನಿಮ್ಮ ತಂಟೆಗೆ ಬಂದೆನೆ ! ಹೀಗೆ ನನ್ನನ್ನ ಯಾಕೆ ಮೂದಲಿಸ್ತ ಇದ್ದೀರಿ, ಹಂಗಿಸ್ತ ಇದ್ದೀರಿ !

(ಕಣ್ಣುಗಳಿಂದ ಹಿಡಿದು ಹೆಬ್ಬೆಟ್ಟಿನವರೆಗೂ ಸೆಳೆತ ಬಂದಂತೆ ನರಳುತ್ತಾನೆ)

ಬಾರ್ಬರ : (ಸ್ಥಿರವಾದ, ಸಂತೈಸುವ ಕೈಗಳನ್ನು ಅವನ ತೋಳಿನ ಮೇಲಿಟ್ಟು, ಅವನನ್ನು ಬಿಡದಂತೆ, ಸೌಮ್ಯಧ್ವನಿಯಲ್ಲಿ) ನಿನ್ನನ್ನು ನೋಯಿಸುತ್ತಿರುವುದು ನಿನ್ನ ಆತ್ಮ ಬಿಲ್, ನಾನಲ್ಲ. ನಮಗೆಲ್ಲರಿಗೂ ಹೀಗೇ ಆಗಿದೆ. ನಮ್ಮ ಜೊತೆಗೆ ಬಾ, ಬಿಲ್. (ಹುಚ್ಚು ಹಿಡಿದಂತೆ ಸುತ್ತಲೂ ನೋಡುತ್ತಾನೆ) ಭೂಮಿಯ ಮೇಲಿರುವವರೆಗೂ ಅದೃಷ್ಟಶಾಲಿಯಾದ ಗಂಡಸಾಗಿರುವೆಯಂತೆ. ಸ್ವರ್ಗದಲ್ಲಿ ಶಾಶ್ವತ ದಿವ್ಯತೆ ಪಡೆಯುವೆಯಂತೆ. (ಪೂರ್ತಿ ಕೈಬಿಡುವುದರಲ್ಲಿದ್ದಾನೆ.)

(ಆಶ್ರಯದಲ್ಲಿ ತಮಟೆಯ ಶಬ್ದ ಕೇಳುತ್ತದೆ. ಬಾರ್ಬರ ತಿರುಗುತ್ತಾಳೆ.

ದೊಡ್ಡ ಉಸಿರು ಬಿಟ್ಟು ಬಿಲ್ ಈ ಮೋಹದಿಂದ ಎಚ್ಚರಗೊಳ್ಳುತ್ತಾನೆ. ಅಡಾಲ್ಫಸ್ ತಮಟೆಯೊಂದಿಗೆ ಆಶ್ರಯದಿಂದ ಪ್ರವೇಶಿಸುತ್ತಾನೆ.) ಓ ಬಂದೆಯ ಡಾಲ್ಲಿ ! ಇವರು ನನ್ನ ಹೊಸ ಸ್ನೇಹಿತರು. Mr. ಬಿಲ್ ವಾಕರ್ ಇವರ ಹೆಸರು. ಬಿಲ್ ಇವರು ನಾನು ಒಲಿದ ಗಂಡು, Mr. ಕಸಿನ್ಸ್. (ಕಸಿನ್ಸ್ ತನ್ನ ತಮಟೆಯ ಕೋಲಿನಿಂದ ಕೈಮುಗಿಯುತ್ತಾನೆ).

ಬಿಲ್ : ಆತನ್ನ ಮದ್ವೆ ಮಾಡಿಕೋತೀರ ?

ಬಾರ್ಬರ : ಹೌದು.

ಬಿಲ್ : (ಶ್ರದ್ಧೆಯಿಂದ) ದೇವರು ಅವರನ್ನು ಕಾಪಾಡಲಿ. ದೇ–ವ–ರು ಕಾಪಾಡಲಿ.

ಬಾರ್ಬರ : ಏಕೆ ? ಆತನು ನನ್ನ ಜೊತೆಯಲ್ಲಿ ಸುಖವಾಗಿರಲಾರ ಎನ್ನಿಸುತ್ತದೆಯೆ ?

ಬಿಲ್ : ಒಂದು ಬೆಳಿಗ್ಗೆ ಹೊತ್ತು ನಾನು ತಡಕೊಳ್ಳಲಾರದೆ ಹೋದೆ. ಒಂದು ಜೀವಿತಕಾಲವೆಲ್ಲ ಅವರು ಅನುಭವಿಸಬೇಕಾಗುತ್ತದೆ !

ಕಸಿನ್ಸ್ : ಬಹು ಭಯಂಕರ ಆಲೋಚನೆ ಅದು ವಾಕರ್ ! ಆದರೆ ಆಕೆಯಿಂದ ಕಿತ್ತುಕೊಂಡು ಹೋಗಲಾರದವನಾಗಿದ್ದೇನೆ.

ಬಿಲ್ : ನನ್ನ ಕೈಯಲ್ಲಾಗುತ್ತೆ. (ಬಾರ್ಬರಳನ್ನು ಕುರಿತು) ನೋಡಿ, ನಾನೆಲ್ಲಿ ಹೋಗುತಿದ್ದೇನೆ ಎಂಬುದು ಗೊತ್ತಿದೆಯೆ ? ಏನು ಮಾಡುತೇನೆ ಗೊತ್ತಿದೆಯೆ ನಿಮಗೆ ?

ಬಾರ್ಬರ : ಹೌದು ನೀನು ಸ್ವರ್ಗಕ್ಕೆ ಹೋಗುತಿದ್ದೀಯೆ ? ನನಗೆ ಅದನ್ನು ಹೇಳುವುದಕ್ಕಾಗಿ ಇನ್ನೊಂದು ವಾರದೊಳಗೆ ಇಲ್ಲಿಗೆ ಹಿಂದಕ್ಕೆ ಬರುತೀಯೆ !

ಬಿಲ್ : ನಿಮ್ಮ ಮಾತು ಸುಳ್ಳು. ನಾನು ಕೆನಿಂಗ್‌ಟೌನಿಗೆ ಹೋಗಿ ಟಾಜರ್‌ಫೇರ್‍ಮೈಲ್ ಕಣ್ಣಿಗೆ ಉಗುಳುತ್ತೇನೆ. ಜೆನ್ನಿಹಿಲ್ ಮುಖದ ಮೇಲೆ ನಾನು ಹೊಡೆದೆ. ಈಗ ಹೋಗಿ ನನ್ನ ಮುಖದ ಮೇಲೆ ಪೆಟ್ಟು ತಿಂದು ಹಿಂದಕ್ಕೆ ಬಂದು ನಿಮಗೆ ಅದನ್ನು ತೋರಿಸ್ತೇನೆ. ನಾನು ಅವಳನ್ನು ಹೊಡೆದದ್ದಕ್ಕಿಂತ ಗಟ್ಟಿಯಾಗಿ ಅವನು ನನಗೆ ಹೊಡೀತಾನೆ ;—ಆಗ ಇದಕ್ಕೆ ಅದು ಸರಿಹೋಗುತ್ತದೆ. (ಅಡಾಲ್ಫಸ್ಸಿಗೆ) ನಾನು ಹೇಳೋದು ನ್ಯಾಯವೊ ಅಲ್ಲವೊ ? ನೀವು ದೊಡ್ಡ ಮನುಷ್ಯರು, ನಿಮಗೆ ಗೊತ್ತಿರಬೇಕು !

ಬಾರ್ಬರ : ಪೆಟ್ಟುಬಿದ್ದು ಎರಡು ಕಣ್ಣು ಕಪ್ಪುಗಟ್ಟಿದರೆ ಒಂದು ಕಣ್ಣು ಬೆಳ್ಳಗಾಗುತ್ತೆಯೆ, ಬಿಲ್ !

ಬಿಲ್ : ನಾನು ಕೇಳಿದ್ದು ನಿಮ್ಮನ್ನಲ್ಲ. ಬಾಯಿ ಮುಚ್ಚಿಕೊಂಡು ಇರೋಕೆ ನಿಮಗೆ ಆಗೋದೆ ಇಲ್ಲವೆ ? ಆ ದೊಡ್ಡ ಮನುಷ್ಯರನ್ನು ನಾನು ಕೇಳಿದ್ದು.

ಕಸಿನ್ಸ್ : (ವಿಚಾರಪರನಾಗಿ) ಹೌದು, ನೀನು ಹೇಳೋದು ಸರಿ ಎನ್ನಿಸುತ್ತೆ, ವಾಕರ್.

ಹೌದು, ನಾನು ಹಾಗೆ ಮಾಡುತಿದ್ದೆ. ಇದು ವಿಚಿತ್ರ. ಪ್ರಾಚೀನಕಾಲದ ಗ್ರೀಕರು ಹೀಗೇ ಮಾಡತಿದ್ರು.

ಬಾರ್ಬರ : ಅದರಿಂದ ಆಗುವ ಒಳ್ಳೆಯದೇನು ?

ಕಸಿನ್ಸ್ : ಒಳ್ಳೇದೆ ! ಫೇರ್ಮೈಲ್‌ಗೆ ಸ್ವಲ್ಪ ವ್ಯಾಯಾಮ ಆಗುತ್ತೆ. ಬಿಲ್‌ವಾಕರ್ ಆತ್ಮಕ್ಕೆ ತೃಪ್ತಿ ಆಗುತ್ತೆ, ಬಿಲ್—

ಬಿಲ್ : ಬುದ್ಧಿ ಇಲ್ಲದೋರು ಹೇಳೊ ಮಾತು. ಆತ್ಮ ಅನ್ನೋದೇ ಇಲ್ಲ. ನನಗೆ ಆತ್ಮ ಇದೆ ಅಥವಾ ಇಲ್ಲಾಂತ ಹೇಗೆ ಹೇಳ್ತೀರಿ. ನೀವು ಅದನ್ನು ಎಂದೂ ಕಂಡಿಲ್ಲ.

ಬಾರ್ಬರ : ಅದಕ್ಕೆ ವಿರುದ್ಧವಾಗಿ ನೀವು ನಡೆದಾಗ ಅದು ನಿಮ್ಮನ್ನು ನೋಯಿಸುವುದನ್ನು ನೋಡಿದ್ದೇನೆ.

ಬಿಲ್ : (ಕೋಪದ ಒತ್ತಡದಲ್ಲಿ) ನೀವು ನನ್ನ ಹೆಣ್ಣಾಗಿದ್ದು, ಹೀಗೆ ನನ್ನ ಬಾಯಿಂದ ಮಾತನ್ನು ತಡೀತಿದ್ರೆ, ನಿಮಗೆ ನೋವು ಉಟಾಗುವಂಥ ಏನೊ ಒಂದು ಕೊಡ್ತಿದ್ದೆ. ಖಂಡಿತ ಕೊಡ್ತಿದ್ದೆ. (ಅಡಾಲ್ಫಸ್ಸನ್ನು ಕುರಿತು) ನನ್ನ ಸಲಹೆ ತೊಗೊಳ್ಳಿ ಸ್ನೇಹಿತರೆ, ಅವರ ಬಾಯಿ ಮುಚ್ಚೊ ಹಾಗೆ ಮಾಡಿ. ಇಲ್ಲದಿದ್ದರೆ, ನಿಮ್ಮ ಕಾಲ ಬರೊ ಮುಂಚೆ ಸಾಯ್ತೀರಿ. (ತೀವ್ರ ಭಾವ ಪ್ರಕಾಶನ ಮಾಡುತ್ತ) ಸವೆದು ಹೋಗುತೀರಿ (ಗೇಟ್ ಮೂಲಕ ಹೊರಗೆ ಹೋಗುತ್ತಾನೆ.)

ಕಸಿನ್ಸ್ : (ಅವನ ಕಡೆ ನೋಡುತ್ತ) ಆಗುತದೆಯೊ ಏನೊ.

ಬಾರ್ಬರ : ಡಾಲ್ಲಿ ; (ಕುಪಿತಳಾಗಿ ತನ್ನ ತಾಯಿಯ ರೀತಿಯಲ್ಲಿ.)

ಕಸಿನ್ಸ್ : ಏನು ಚಿನ್ನ, ನಿನ್ನನ್ನು ಪ್ರೀತಿಸುವುದು ಯಾರನ್ನಾದರೂ ಸವೆಸಿಬಿಡುತ್ತದೆ. ಅದು ನಡೆದರೆ, ನಾನು ಸಣ್ಣ ವಯಸ್ಸಿನಲ್ಲೇ ಸಾಯಿತೇನೆ ಎಂದು ಕಾಣುತ್ತೆ.

ಬಾರ್ಬರ : ನೀನು ಲಕ್ಷ್ಯ ಮಾಡುತೀಯ ?

ಕಸಿನ್ಸ್ : ಖಂಡಿತ ಇಲ್ಲ. (ಹಟಾತ್ತಾಗಿ, ಮೃದುವಾಗುತ್ತಾನೆ. ನಡುವೆ ತಮ್ಮಟೆ ಇರುವ ಹಾಗೆಯೇ ಬಾಗಿ ಅವಳಿಗೆ ಮುತ್ತಿಡುತ್ತಾನೆ. ಇದು ಮೊದಲನೆ ಸಲವಲ್ಲ ವೆಂಬುದೂ ಅಭ್ಯಾಸವಿಲ್ಲದೆ ಹಾಗೆ ಮಾಡುವುದು ಶಕ್ಯವಲ್ಲವೆಂಬುದೂ ಯಾರಿಗೂ ಗೊತ್ತಾಗುತ್ತದೆ. ಅಂಡರ್‌ಷಾಫ್ಟ್ ಕೆಮ್ಮುತ್ತಾನೆ.)

ಬಾರ್ಬರ : ಎಲ್ಲಾ ಸರಿಯಾಗಿದೆ ಅಪ್ಪ, ನಾವು ನಿಮ್ಮನ್ನು ಮರೆತಿಲ್ಲ. ಡಾಲ್ಲಿ, ಈ ಸ್ಥಳವನ್ನೆಲ್ಲ ತಂದೆಗೆ ವಿವರಿಸು. ನನಗೆ ಹೊತ್ತಿಲ್ಲ. (ಕೆಲಸದ ಸಂಭ್ರಮದಲ್ಲಿ ಆಶ್ರಯದೊಳಗೆ ಹೋಗುತ್ತಾಳೆ.)

(ಅಂಗಳಕ್ಕೆಲ್ಲ ಈಗ ಅಂಡರ್‌ಷಾಫ್ಟ್, ಅಡಾಲ್ಫಸ್ ಇಬ್ಬರೇ. ಅಂ.ಷಾ. ಬೆಂಚಿನ ಮೇಲೆ ಕುಳಿತಿದ್ದಾನೆ. ಎಲ್ಲಕ್ಕೂ ಗಮನವಿತ್ತು ನಿರೀಕ್ಷಿಸುತ್ತಿದ್ದಾನೆ. ಅಡಾಲ್ಫಸ್ ಕಡೆಗೆ ಗಡುಸಾಗಿ ನೋಡುತ್ತಾನೆ. ಅಡಾಲ್ಫಸ್ ಕೂಡ ಹಾಗೆಯೇ ನೋಡುತ್ತಾನೆ.)

ಅಂ. ಪಾ : ನನ್ನ ಮನಸ್ಸಿನಲ್ಲಿ ಏನಿದೆ ಎಂಬುದನ್ನು ನೀವು ಊಹಿಸುತೀರಿ ಎನ್ನಿಸುತ್ತದೆ ಕಸಿನ್ಸ್. (ಕಸಿನ್ಸ್ ತನ್ನ ಕೈಯಲ್ಲಿರುವ ತಮಟೆಯ ದಂಡವನ್ನು ಮೇಲೆತ್ತಿ, ದ್ರುತವೇಗದಲ್ಲಿ ಯಾವುದೊ ತಾಳವನ್ನು ಬಡಿಯುವ ಆಕೃತಿಯನ್ನು ತೋರುತ್ತಾನೆ. ಶಬ್ದ ಮಾಡುವುದಿಲ್ಲ.) ಖಚಿತವಾಗಿ ಆದರೆ, ಬಾರ್ಬರ ನಿಮ್ಮ ನಿಜವನ್ನು ಕಂಡುಹಿಡಿದರೆ !

ಕಸಿನ್ಸ್ : ತಿಳಿಯಿತೆ : ನಾನು ಬಾರ್ಬರಳನ್ನು ವಂಚಿಸುತ್ತಿದ್ದೇನೆಂಬುದನ್ನು ಒಪ್ಪುವುದಿಲ್ಲ. ಈ ಮುಕ್ತಿಸೈನ್ಯದ ಅಭಿಪ್ರಾಯಗಳನ್ನು ಕುರಿತು ನನಗೆ ಪ್ರಾಮಾಣಿಕವಾಗಿ ಆಸಕ್ತಿ ಇದೆ. ಸಂಗತಿ ಇದು ;—ನಾನು ಅನೇಕ ಮತಧರ್ಮಗಳನ್ನು ಕೂಡಿಹಾಕಿರುವ ಮನುಷ್ಯ. ಅದರಲ್ಲಿ ವಿಚಿತ್ರ ಏನೆಂದರೆ : ಅವುಗಳನ್ನೆಲ್ಲ ನಂಬಬಹುದೆನಿಸುತ್ತದೆ ನನಗೆ. ಹಾಗೇ ನಾನೂ ನಿಮ್ಮನ್ನು ಕೇಳಲೆ ? ತಮಗೆ ಯಾವುದಾದರೂ ಮತಧರ್ಮ ಎಂಬುದು ಇದೆಯೆ ಎಂದು ?

ಅಂ. ಪಾ : ಇದೆ.

ಕಸಿನ್ಸ್ : ಯಾವುದನ್ನ ಅಸಾಮಾನ್ಯವಾದ್ದೆ ?

ಅಂ.ಪಾ : ಮುಕ್ತಿಗೆ ಎರಡು ಸಂಗತಿಗಳು ಅಗತ್ಯ ಎಂಬುದು ಮಾತ್ರ.

ಕಸಿನ್ಸ್ : (ಭಗ್ನಮನೋರಥನಾಗಿ, ಆದರೆ ಮರ್ಯಾದೆಯಿಂದ) ಆ್ಹ ! ಚರ್ಚಿನ ಪ್ರಶ್ನೋತ್ತರವಲ್ಲವೆ ? ಚಾರ್ಲ್ಸ್ ಲೋಮ್ಯಾಕ್ಸ್ ಕೂಡ ಪ್ರತಿಷ್ಠಿತ ಚರ್ಚಿಗೆ ಸೇರಿದವನು.

ಅಂ.ಪಾ : ಆ ಎರಡು ಯಾವುವೆಂದರೆ—

ಕಸಿನ್ಸ್ : ಪುಣ್ಯಸ್ನಾನ ಮತ್ತು—

ಅಂ. ಪಾ. : ಅಲ್ಲ. ಹಣ ಮತ್ತು ಸಿಡಿಮದ್ದು !

ಕಸಿನ್ಸ್ : (ಆಶ್ಚರ್ಯದಿಂದ, ಆದರೆ ಕುತೂಹಲದಿಂದ) ನಮ್ಮ ಆಳುವ ವರ್ಗದವರ ಸಾಮಾನ್ಯ ಅಭಿಪ್ರಾಯ ಅದು...ಅದನ್ನು ಸ್ಪಷ್ಟವಾಗಿ ಒಪ್ಪಿಕೊಳ್ಳುವ ಯಾರದೇ ನುಡಿಯನ್ನು ಕೇಳುವುದು ಇಲ್ಲಿ ಹೊಸ ಅಂಶ.

ಅಂ. ಪಾ. : ನಿಜ.

ಕಸಿನ್ಸ್ : ಕ್ಷಮಿಸಿ. ನಿಮ್ಮ ಮತದಲ್ಲಿ ನಿಯತ್ತು, ನ್ಯಾಯ, ಸತ್ಯ, ಪ್ರೇಮ, ಕೃಪೆ —ಮುಂತಾದವಕ್ಕೆ ಸ್ಥಾನ ಇದೆಯೆ ?

ಅಂ. ಪಾ. : ಇದೆ. ಸಂಪನ್ನವಾದ, ಬಲವಾದ, ಸುರಕ್ಷಿತ ಬದುಕಿಗೆ ಅವು ಲಾವಣ್ಯ ಭೋಗಗಳು.

ಕಸಿನ್ಸ್ : ಹಣ, ಅಥವಾ ಸಿಡಿಮದ್ದಿಗೆ ಪ್ರತಿಯಾಗಿ ಮಸಲ, ಅವನ್ನು ಆಯ ಬೇಕಾದ ನಿರ್ಬಂಧ ಉಂಟಾದರೆ ?

ಅಂ. ಷಾ. : ಹಣವನ್ನೂ ಸಿಡಿಮದ್ದನ್ನೂ ಎರಡನ್ನೂ ಆಯ್ದುಕೊಳ್ಳಿ. ಅವು ಸಾಕಷ್ಟು ಇಲ್ಲವಾದರೆ ಬೇರೆಯವನ್ನು ಪಡೆದೂ ಪ್ರಯೋಜನವಿಲ್ಲ.

ಕಸಿನ್ಸ್ : ಅದು ನಿಮ್ಮ ಮತಧರ್ಮ, ಅಲ್ಲವೆ ?

ಅಂ. ಷಾ. : ಹೌದು.

(ಉತ್ತರದ ಕಡೆಯ ಈ ಭಾಗ, ಸಂಭಾಷಣೆಯನ್ನು ಪೂರ್ತಿ ಮುಕ್ತಾಯಗೊಳಿಸುತ್ತದೆ. ಕಸಿನ್ಸ್ ಸಂದೇಹಗ್ರಸ್ತನಾದಂತೆ, ಮುಖವನ್ನು ತಿರಿಚಿ, ಅಂಡರ್‌ಷಾಫ್ಟ್ ಅನ್ನು ಒಂದೇ ಸಮನೆ ನೋಡುತ್ತಾನೆ. ಅಂಡರ್‌ಷಾಫ್ಟ್ ಅವನನ್ನು ನೋಡುತ್ತಾನೆ.)

ಕಸಿನ್ಸ್ : ಬಾರ್ಬರ ಇದನ್ನು ಸಹಿಸುವುದಿಲ್ಲ. ನಿಮಗೆ ನಿಮ್ಮ ಮತಧರ್ಮ ಬೇಕೊ ಬಾರ್ಬರ ಬೇಕೊ ಎಂದು ನೀವು ಆಯಬೇಕು.

ಅಂ. ಷಾ. : ನನ್ನ ಸ್ನೇಹಿತರಾದ ನೀವೂ ಹಾಗೆಯೇ ಮಾಡಬೇಕಾಗುತ್ತದೆ. ನಿಮ್ಮ ತಮಟೆ ಒಳಗೆ ಟೊಳ್ಳು ಎಂಬುದನ್ನು ಅವಳೂ ಕಂಡುಕೊಳ್ಳುತ್ತಾಳೆ.

ಕಸಿನ್ಸ್ : ತಂದೆ ಅಂಡರ್‌ಷಾಫ್ಟ್, ನಿಮ್ಮ ಯೋಚನೆ ತಪ್ಪು. ನಾನು ಪ್ರಾಮಾಣಿಕವಾಗಿ ಮುಕ್ತಿಕಾಮಿ. ನಿಮಗೆ ಈ ಮುಕ್ತಿಸೈನ್ಯ ಅರ್ಥ ಆಗುವುದಿಲ್ಲ. ಅದು ಸಂತೋಷ, ಪ್ರೇಮ, ಧೈರ್ಯಗಳ ಸೈನ್ಯ. ಕ್ರಿಸ್ತನ ಆದೇಶವನ್ನು ನಂಬುವ ಪಂಥಗಳಲ್ಲಿ ತುಂಬಿರುವ ನರಕದ ಭೀತಿ, ವಿಷಾದ, ನಿರಾಸೆಗಳನ್ನು ಅದು ಹೊರದೂಡುತ್ತದೆ. ಸ್ವರ್ಗದ ಸುಖೀದಳಗಳವರು ಉತ್ಸವಕ್ಕೆ ಹೊರಡುವಂತೆ ಅವು ದೆವ್ವದೊಡನೆ ಕಾದಲು ತುತ್ತೂರಿ, ತಂಬಟೆ, ಗಾನ, ನೃತ್ಯ, ಧ್ವಜ ಮತ್ತು ಖರ್ಜೂರದ ಗರಿಗಳನ್ನು ಹೊತ್ತು ಮುಂದೆ ನಡೆಯುತ್ತದೆ. ಪಾನಗೃಹಗಳಲ್ಲಿ ವ್ಯರ್ಥವಾಗುತ್ತಿರುವ ಅಯೋಗ್ಯನನ್ನು ಆರಿಸಿ ಎತ್ತಿ ಅವನನ್ನು ಮನುಷ್ಯನನ್ನಾಗಿ ಮಾಡುತ್ತದೆ. ಮನೆಯ ಹಿಂದೆ ಅಡಿಗೆಯ ಮನೆಯಲ್ಲಿ ದುರ್ಬಲವಾಗಿ ಒದ್ದಾಡುತ್ತಿರುವ ಒಂದು ಹುಳುವನ್ನು ಕಂಡಾಗ ಆ ಹುಳು ಹೆಂಗಸಾಗುತ್ತದೆ. ದೊಡ್ಡ ಅಂತಸ್ತಿನ ಜನ ಗಂಡಸರು, ಹೆಂಗಸರು ಅಲ್ಲಿದ್ದಾರೆ. ಅತ್ಯುಚ್ಚರಾದವರ ಹೆಣ್ಣುಮಕ್ಕಳಿದ್ದಾರೆ. ಗ್ರೀಕ್ ಭಾಷೆಯ ಒಬ್ಬ ಬಡ ಉಪಾಧ್ಯಾಯನನ್ನು ಆಯ್ದು ಅದು ಕೊಳ್ಳುತ್ತದೆ. ಅವನಷ್ಟು ಕೃತಕನೂ ಆತ್ಮದಮನ ಮಾಡಿಕೊಂಡ ಪ್ರಾಣಿಯೂ ಇಲ್ಲ. ಧಾತುಗಳ ಊಟದಿಂದ ಅವನನ್ನೆಬ್ಬಿಸಿ ಅವನಲ್ಲಿ ಅಡಗಿರುವ ಉದ್ದಾತ್ತತೆಯನ್ನು ಹೊರತರುತ್ತದೆ. ಡಿಯಾನಿಸಸ್ ಪೂಜೆಯ ನಿಜ ಸ್ವರೂಪವನ್ನು ಅವನಿಗೆ ಪ್ರಕಾಶಪಡಿಸುತ್ತದೆ. ಸಾರ್ವಜನಿಕ ರಸ್ತೆಯಲ್ಲಿ, ದೇವಗೀತಗಳನ್ನು ತಾಳಕ್ಕೆ ತಕ್ಕಂತೆ ಬಾರಿಸಲು ಕಲಿಸುತ್ತದೆ.

(ಗುಡುಗಿನಂಥ ಒಂದು ತಾಳದ ಪಾಠವನ್ನು ತಮಟೆಯ ಮೇಲೆ ಬಾರಿಸುತ್ತಾನೆ).

ಅಂ. ಷಾ. : ನೀವು ಅಶ್ರಯದವರನ್ನು ಹೆದರಿಸುತ್ತೀರಿ.

ಕಸಿನ್ಸ್ : ಇದ್ದಕ್ಕಿದ್ದಂತೆ ಏರುವ ಉತ್ಸಾಹದ ವಿಪರೀತಗಳು ಅವರಿಗೆ ರೂಢಿಯಾಗಿವೆ. ಈ ತಮಟೆ ಹುಯಿಲು ನಿಮಗೆ ಬೇಸರ ಮಾಡುವುದಾದರೆ—

(ಆ ದಂಡಗಳನ್ನು ಜೇಬಿನೊಳಕ್ಕೆ ಹಾಕಿ, ತಮಟೆಯ ಕೊಕ್ಕೆಗಳನ್ನು ಸಡಿಲಿಸಿ ತೆಗೆದು ದ್ವಾರಕ್ಕೆ ಇದಿರಾಗಿ, ನೆಲದ ಮೇಲೆ ನಿಲ್ಲಿಸುತ್ತಾನೆ.)

ಅಂ. ಷಾ. : ಉಪಕಾರವಾಯಿತು.

ಕಸಿನ್ಸ್ : ಹಣವನ್ನೂ ಸಿಡಿಮದ್ದನ್ನೂ ಕುರಿತು ಯೂರಿಪಿಡೇಸ್ ಏನು ಹೇಳುತ್ತಾನೆ ಎಂಬುದು ನಿಮಗೆ ನೆನಪಿದೆಯೆ ?

ಅಂ. ಷಾ. : ಇಲ್ಲ.

ಕಸಿನ್ಸ್ : (ಗಮಕ ರೀತಿಯಲ್ಲಿ)

ಇವನೊ ಅವನೊ

ಹಣದಲ್ಲಿ ಕೋವಿಯಲಿ, ತಮ್ಮ ಸೋದರನ ಮೀರಬಹುದು
ಲಕ್ಷಗಟ್ಟಲೆ ಜನರು ತೇಲಿಯೂ ಹರಿದೂ,
ಹುದುಗಿನಂತಹ ಲಕ್ಷ ಭರವಸೆಗಳಲ್ಲಿ ಕುದಿಯಬಹುದು.
ತಮ್ಮಿಚ್ಛೆಯನು ಗೆಲ್ಲಬಹುದು, ಇಲ್ಲದಿರೆ
ವಿಫಲಗೊಳಬಹುದು ;
ಅವರಾಸೆ ಅಳಿದಿಹವು, ಇಲ್ಲವೇ ಅವಕಾಗಿ
ಇಂದಿಗೂ ನಮೆವರವರು—
ಅರಿಯಬಲ್ಲವಗೆ—
ನಿಡಿದಿನವು ಕಳೆಯುತಿರೆ
ಬದುಕು ಸುಖವೆಂಬದನು
ತಿಳಿಯಬಲ್ಲವಗೆ,
ದೊರಕಿಹುದು ಅವನ ಸ್ವರ್ಧಾಮ.
—ಇದು ನನ್ನ ಭಾಷಾಂತರ: ಹೇಗಿದೆ ಅನ್ನಿಸುತ್ತೆ ?

ಅಂ. ಷಾ. : ಗೆಳೆಯ, ನನಗನ್ನಿಸುತ್ತೆ : ಕಡಿದಾದ ದಿನ ಕಳೆದಂತೆಲ್ಲ ಬದುಕುವುದು ಸುಖವೆಂದು ನಿನಗೆ ತಿಳಿಯಬೇಕೆಂಬ ಇಚ್ಛೆ ಇದ್ದರೆ, ಮೊದಲು ಯೋಗ್ಯ ಜೀವನಕ್ಕೆ ಸಾಕಾಗುವಷ್ಟು ಹಣವನ್ನು ಪಡೆಯಬೇಕು. ನಿನ್ನ ಒಡೆಯನಾಗಿ ನೀನು ಇರಬೇಕಾದರೆ ಅದಕ್ಕೆ ಸಾಕಾಗುವಷ್ಟು ಶಕ್ತಿಯನ್ನು ಸಂಪಾದಿಸಬೇಕು—ಎಂದು.

ಕಸಿನ್ಸ್ : ನಿಮ್ಮ ನಿರುತ್ತೇಜನ ವಿಪರೀತ.

(ಗಮಕವನ್ನು ಮುಂದುವರಿಸುತ್ತ)

ಇದನು ಕಾಣುವುದಷ್ಟು ಗಡುಸೆ ?

ದೈವಶಕ್ತಿಯು—ಅದಾವುದಿರಲಿ—
ಯುಗಗಳುದ್ದಕು—ಮಾರ್ಪಡದೆ ಉಳಿದು ನಿಲ್ಲುವ ನಿಯಮ
ಶಾಶ್ವತ—ಪ್ರಕೃತಿ ಜನ್ಯ ಎಂಬ ಅದು ಬಲಗೊಂಡು ಇರಲುಬೇಕೆಂದು ?
ವಿವೇಕವೆಂಬುದಿನ್ನೇನು ? ಪುರುಷಯತ್ನವೆನಲೇನು ?
ಅಷ್ಟು ಚೆಲು, ಅಷ್ಟು ಹಿರಿಮೆಯು ದೈವದ ಉಚ್ಚ ಕೃಪೆಯೊ.
ಭೀತಿಯಿಂ ಬಿಡುಗೊಂಡು ನಿಲುವುದೆನಲೇನು ? ಉಸಿರಾಡಿ, ಕಾಯ್ವುದೆನಲೆ ?
ಮೀರಿ ವಿಧಿಯನು ಮೇಲೆ ಕೈಯೆತ್ತಿ ಹಿಡಿದು ?
ಚಿರಕಾಲ ಬಾರ್ಬರಳನೊಲಿಯದಿರಬಹುದೆ ?

ಅಂ. ಷಾ. : ಯೂರಿಪಿಡೇಸ್ ಬಾರ್ಬರ ಹೆಸರನ್ನು ಹೇಳುತ್ತಾನೆಯೆ ?

ಕಸಿನ್ಸ್ : ಇದು ನ್ಯಾಯವಾಗಿ ಮಾಡಿದ ಭಾಷಾಂತರ. ಆ ಮಾತಿನ ಅರ್ಥ ಸೌಂದರ್ಯವೆಂದು.

ಅಂ. ಷಾ. : ಬಾರ್ಬರ ತಂದೆಯಾಗಿ ನಾನು ಒಂದು ಮಾತು ಕೇಳಬಹುದೆ ?—ಚಿರಕಾಲ ಅವಳನ್ನು ಪ್ರೀತಿಸಲು ವರ್ಷಾಶನ ಎಷ್ಟು ಬೇಕಾಗುತ್ತದೆ ಎಂಬುದನ್ನು?

ಕಸಿನ್ಸ್ : ಬಾರ್ಬರ ತಂದೆಯಾಗಿ ಅದು ನಿಮ್ಮ ಪಾಲಿನ ಕಾರ್ಯ. ನನ್ನದಲ್ಲ. ಗ್ರೀಕ್ ಪಾಠಗಳ ಬೋಧಕನಾಗಿ ಅವಳಿಗೆ ಅನ್ನ ಹಾಕಬಲ್ಲೆ. ಅಷ್ಟೇ.

ಅಂ. ಷಾ. : ಇದು ಆಕೆಗೆ ಸರಿಯಾದ ಜೊತೆ ಎಂದು ನೀವು ಎಣಿಸುವಿರ ?

ಕಸಿನ್ಸ್ : (ಮರ್ಯಾದೆಯಿಂದ ಕೂಡಿದ ಮೊಂಡುತನದಿಂದ) ಅಂಡರ್‌ಷಾಫ್ಟ್ ಅವರೆ, ನಾನು ಅನೇಕ ಬಗೆಯಲ್ಲಿ ದುರ್ಬಲ, ಭೀತ, ಅಧೈರ್ಯಶಾಲಿ. ಕಾರ್ಯಕಾರಿ ಮನುಷ್ಯನಲ್ಲ. ನನ್ನ ಆರೋಗ್ಯವೂ ಅತಿಸಮರ್ಪಕವಾದ್ದಲ್ಲ. ಆದರೆ, ನನಗೇನಾದರೂ ಅಗತ್ಯ, ಬೇಕು ಎನ್ನಿಸಿದರೆ ನನಗೆ ಅದು ಸಿಕ್ಕುತ್ತದೆ. ಬೇಗಲೊ, ತಡೆದೊ—ಬಾರ್ಬರ ವಿಷಯದಲ್ಲಿ ನನ್ನ ಭಾವನೆ ಹಾಗಿದೆ. ವಿವಾಹ ನನ್ನ ಇಷ್ಟವಲ್ಲ ! ಅದನ್ನು ಕುರಿತು ನನಗೆ ತುಂಬಾ ಭೀತಿ. ಬಾರ್ಬರಳನ್ನು ಕಟ್ಟಿಕೊಂಡು ನಾನೇನು ಮಾಡುತ್ತೇನೆ, ನನ್ನನ್ನು ಕಟ್ಟಿಕೊಂಡು ಅವಳೇನು ಮಾಡುತ್ತಾಳೆ ಎಂಬುದು ನನಗೆ ಗೊತ್ತಿಲ್ಲ. ಆದರೆ ನನಗೆ ಅನ್ನಿಸುವುದು ಹೀಗೆ : ನಾನು ಅವಳನ್ನು ಮದುವೆಯಾಗಬೇಕು,—ಇನ್ನಾರೂ—ಕೂಡದು ಎಂದು. ಅದು ತೀರ್ಮಾನವಾಗಿ ಬಿಟ್ಟಿದೆ ಎಂದು ತಾವು ದಯಮಾಡಿ ತಿಳಿಯಬೇಕು. ನಿರಂಕುಶವಾಗಿ ಇರಬೇಕೆಂಬುದು ನನ್ನಿಷ್ಟವಲ್ಲ. ಆದರೆ ಅನಿವಾರ್ಯವಾದ್ದನ್ನು ಚರ್ಚಿಸುತ್ತ ನಾನೇಕೆ ನಿಮ್ಮ ಕಾಲಹರಣ ಮಾಡಲಿ ?

ಅಂ. ಷಾ. : ಎಂದರೆ ನೀವು ಏನು ಮಾಡುವುದಕ್ಕೂ ಹಿಂಜರಿಯುವುದಿಲ್ಲ ! ಡಿಯಾನಿಸಸ್ ಪೂಜೆಗಾಗಿ ಮುಕ್ತಿ ಸೈನ್ಯವನ್ನು ಕೂಡ ಮತಾಂತರಗೊಳಿಸಲು ಹಿಂಜರಿಯುವುದಿಲ್ಲ ಎಂದು ಅಲ್ಲವೇ ?

ಕಸಿನ್ಸ್ : ಉದ್ಧಾರ ಮಾಡುವುದು ಮುಕ್ತಿ ಸೇನೆಯ ಕೆಲಸ. ಪಥಕಾಣಿಸುವವರ ಹೆಸರನ್ನು ಕುರಿತು ಕಲಹ ಮಾಡುವುದಲ್ಲ. ಡಿಯಾನಿಸಸ್ಸೊ ಇನ್ನಾರೊ ಯಾರಾದರೇನು ?

ಅಂ. ಷಾ. : (ಎದ್ದು ಅವನನ್ನು ಸಮೀಪಿಸಿ) ಪ್ರೊ. ಕಸಿನ್ಸ್, ನನ್ನ ಹೃದಯಕ್ಕೆ ಮೆಚ್ಚಿಕೆಯಾಗುವ ತರುಣರು ನೀವು.

ಕಸಿನ್ಸ್ : ಅಂಡರ್‌ಷಾಫ್ಟ್ ಅವರೆ, ನಾನು ಅರ್ಥಮಾಡಿಕೊಳ್ಳಬಲ್ಲ ಮಟ್ಟಿಗೆ ನೀವು ಪರಮ ಚಂಡಾಲ ಸ್ವಭಾವದವರು. ಆದರೆ ನನ್ನ ಮನಸ್ಸಿನ ವ್ಯಂಗ್ಯವಿಲಾಸಕ್ಕೆ ನೀವು ಬಹುವಾಗಿ ಒಪ್ಪುವಂಥವರು.

ಅಂ. ಷಾ. : (ಮೌನವಾಗಿ ಕೈಚಾಚುವನು ; ಇಬ್ಬರೂ ಕೈಕುಲುಕುವರು. ಹಟಾತ್ತಾಗಿ ಏಕಾಗ್ರತೆಯಿಂದ) ಕೆಲಸವನ್ನು ಕುರಿತು ಯೋಚಿಸೋಣವೆ ?

ಕಸಿನ್ಸ್ : ಕ್ಷಮಿಸಿ, ಮತಧರ್ಮದ ಚರ್ಚೆಯಲ್ಲಿದ್ದೆವು. ಕೆಲಸದಂಥ ನೀರಸವಾದ, ಅಮುಖ್ಯ ವಿಷಯಕ್ಕೆ ಏಕೆ ಹಿಂದಿರುಗಬೇಕು ?

ಅಂ. ಷಾ. : ಸದ್ಯಃ ಮತವೇ ನಮ್ಮ ಕೆಲಸ. ಮತದ ಮೂಲಕ ಮಾತ್ರವೇ ನಾವು ಬಾರ್ಬರಳನ್ನು ಗೆಲ್ಲಬೇಕಿರುವುದರಿಂದ.

ಕಸಿನ್ಸ್ : ವಯಸ್ಕಳಾದ ಮಗಳಲ್ಲಿ ತಂದೆಯ ಪ್ರೀತಿ ಬೆಳೆಯುವುದೆಂದರೆ ಅದು ಬಹು ಅಪಾಯಕರ ವ್ಯಾಮೋಹವಾಗುತ್ತದೆ. ನನ್ನ ಪೇಲವವಾದ, ಸಂಕೋಚದಿಂದ ಕೂಡಿದ, ಯಾವುದನ್ನೂ ಪೂರ್ತಿ ನೆಚ್ಚದ, ಕಲ್ಪನೆಯನ್ನು ಒಂದೇ ಉಸಿರಲ್ಲಿ ಅದರೊಡನೆ ಹೇಳಬೇಕಾದ್ದಕ್ಕಾಗಿ ತಮ್ಮ ಕ್ಷಮೆ ಬೇಡುತ್ತೇನೆ.

ಅಂ. ಷಾ. : ಆ ಸಂಗತಿ ಹಿಡಿದು ನಿಲ್ಲಿ. ಅವಳನ್ನು ಒಲಿಸಿಕೊಳ್ಳಬೇಕು. ನಮ್ಮಿಬ್ಬರಲ್ಲಿ ಒಬ್ಬರೂ Methodist ಪಂಥದವರಲ್ಲ.

ಕಸಿನ್ಸ್ : ಪರವಾ ಇಲ್ಲ. ಇಲ್ಲಿ ಬಾರ್ಬರ ಬಳಸುವ ಶಕ್ತಿ—ಬಾರ್ಬರಳನ್ನು ನಡಸುವ ಶಕ್ತಿ, ಕ್ಯಾಲ್ವಿನ್, ಪ್ರೆಸ್ಬಿಟೇರಿಯನ್ ಅಥವಾ ಮೆಥೊಡಿಸ್ಟ್ ತತ್ತ್ವ ಅಲ್ಲ.

ಅಂ. ಷಾ. : ಯಾವ ಕ್ರಿಶ್ಚಿಯನ್ ದೇವರನ್ನೂ ಆರಾಧಿಸದ ಗ್ರೀಕ್ ಪಂಥವೂ ಅಲ್ಲ, ಅಲ್ಲವೆ ?

ಕಸಿನ್ಸ್ : ಒಪ್ಪಿದೆ. ಬಾರ್ಬರ ಮತಧರ್ಮ ಅವಳಿಗೇ ವಿಶೇಷವಾದ್ದು.

ಅಂ. ಷಾ. : (ಜಯಗೊಂಡು) ಅಹಾ ! ಬಾರ್ಬರ ಅಂಡರ್‌ಷಾಫ್ಟ್ ಇನ್ನು ಹೇಗೆ ಮಾಡಿಯಾಳು ? ಆಕೆಯ ಸ್ಫೂರ್ತಿ ಅವಳ ಒಳಗಿಂದಲೇ ಬರತಕ್ಕದ್ದು.

ಕಸಿನ್ಸ್ : ಅದು ಅಲ್ಲಿ ಹೇಗೆ ಹೋಯಿತೆಂದು ನೀವು ಊಹಿಸುವಿರಿ?

ಅಂ. ಷಾ. : (ಅತಿಶಯ ಉದ್ವೇಗದಲ್ಲಿ) ಅದು ಅಂಡರ್‌ಷಾಫ್ಟ್ ಪೈತೃಕ ಆಸ್ತಿ. ನನ್ನ ಕೈಯಲ್ಲಿನ ಪಂಜನ್ನು ನನ್ನ ಮಗಳ ಕೈಗೆ ಕೊಡುತ್ತೇನೆ. ನನ್ನ ಪರವಾಗಿ ಅವಳು ಮತಾಂತರ ಮಾಡುತ್ತಾಳೆ. ನನ್ನ ಸತ್ಯದೊಸಗೆಯನ್ನು ಅವಳು ಬೋಧಿಸುತ್ತಾಳೆ.

ಕಸಿನ್ಸ್ : ಏನು ! ಹಣದ್ದು, ಸಿಡಿಮದ್ದಿನದೆ ?

ಅಂ. ಷಾ. : ಹೌದು. ಹಣದ್ದು...ಸಿಡಿಮದ್ದಿನದು...ಸ್ವಾತಂತ್ರ್ಯದ್ದು, ಶಕ್ತಿಯದು. ಬದುಕು ಸಾವುಗಳ ಮೇಲೆ ಅಧಿಕಾರ ಉಳ್ಳದ್ದು.

ಕಸಿನ್ಸ್ : (ನಾಗರಿಕವಾಗಿ ಅವನನ್ನು ಭೂಮಟ್ಟಕ್ಕೆ ತರಲು ಯತ್ನಿಸುತ್ತ) ನೀವು ಹೇಳಿದುದು ಬಹು ಸ್ವಾರಸ್ಯವಾಗಿದೆ, ಅಂಡರ್‌ಷಾಫ್ಟ್ ಅವರೆ. ನಿಮಗೆ ಗೊತ್ತಿರಲೇಬೇಕು—ನಿಮಗೆ ಹುಚ್ಚು ಹಿಡಿದಿದೆ ಎಂದು—

ಅಂ. ಷಾ. : (ಇಮ್ಮಡಿ ರಭಸದಿಂದ) ನೀವೊ !

ಕಸಿನ್ಸ್ : ಹುಚ್ಚು—ಟೋಪಿ ಮಾಡುವವನಂಥ ಹುಚ್ಚು.—ನನ್ನ ಗುಟ್ಟು ಯಾವುದೆಂಬುದನ್ನು ನಿಮಗೆ ತಿಳಿಸಬಹುದು, ನಿಮ್ಮದನ್ನು ನಾನೂ ಕಂಡುಕೊಂಡಿರುವುದರಿಂದ. ಆದರೆ ನನಗೆ ವಿಸ್ಮಯವಾಗಿದೆ : ಹುಚ್ಚನು ಫಿರಂಗಿಗಳನ್ನು ಮಾಡಬಲ್ಲನೆ ಎಂದು.

ಅಂ.ಷಾ. : ಹುಚ್ಚನಲ್ಲದವನು ಯಾರಾದರೂ ಅವನ್ನು ಮಾಡಬಯಸುವನೆ ? ಈಗ ಕೇಳುತ್ತೇನೆ (ಉತ್ಸಾಹ ಉಕ್ಕಿ) ಪ್ರಶ್ನೆಗೆ ಪ್ರಶ್ನೆ. ಬುದ್ಧಿ ಹದವಾಗಿರುವವನು ಯೂರಿಪಿಡೇಸ್ ಭಾಷಾಂತರ ಮಾಡಬಲ್ಲನೆ ?

ಕಸಿನ್ಸ್ : ಇಲ್ಲ.

ಅಂ.ಷಾ. : (ಅವನ ಭುಜ ಹಿಡಿದು) ಹದವಾದ ಬುದ್ಧಿ ಉಳ್ಳ ಹೆಂಗಸು ವ್ಯರ್ಥನನ್ನು ಗಂಡಸಾಗಿ ಮಾಡಬಲ್ಲಳೆ, ಒಂದು ಹುಳುವನ್ನು ಹೆಂಗಸನ್ನಾಗಿ ಮಾಡಬಲ್ಲಳೆ ?

ಕಸಿನ್ಸ್ : (ಈ ಬಿರುಗಾಳಿಯ ಎದುರು ತತ್ತರಿಸುತ್ತ) ಮಹಾಮೂರ್ತಿ ತಂದೆ, ದೈತ್ಯ ಮಿಲಿಯಧೀಶ್ವರ.

ಅಂ.ಷಾ. : (ಅವನನ್ನು ಒತ್ತುತ್ತ) ಈ ಮುಕ್ತಿಧಾಮದಲ್ಲಿ ಇಂದು ಹುಚ್ಚರು ಇಬ್ಬರಿದ್ದಾರೊ, ಮೂವರೊ ?

ಕಸಿನ್ಸ್ : ನೀವು ಎನ್ನುವುದೇನು ? ಬಾರ್ಬರ ನಮ್ಮಷ್ಟೇ ಹುಚ್ಚಳು ಎಂದಲ್ಲವೆ ?

ಅಂ.ಷಾ. : (ಅವನನ್ನು ಹಗುರವಾಗಿ ನೂಕಿ) (ಪೂರ್ತಿ ತನ್ನ ಸಮತೆಗೆ ಬಂದು) ಥೂ, ಪ್ರೊಫೆಸರ್. ಅವವುಗಳಿಗೆ ತಕ್ಕ ಹೆಸರುಗಳಿಂದ ಅವನ್ನು ಕರೆಯೋಣ. ನಾನು ಮಿಲಿಯಧೀಶ್ವರ, ನೀವು ಕವಿ, ಬಾರ್ಬರ ಜೀವಗಳಿಗೆ ಮುಕ್ತಿ ದೊರಕಿಸುವವಳು. ಸಾಮಾನ್ಯ ಜನಜಂಗುಳಿ ಗುಲಾಮರದು. ವಿಗ್ರಹಾರಾಧಕರದು. ಅವರನ್ನು ಕಟ್ಟಿಕೊಂಡು ನಾವು ಮೂವರೂ ಏನು ಮಾಡಬೇಕು ? (ಜನಜಂಗುಳಿಯ ವಿಷಯದಲ್ಲಿ ತಿರಸ್ಕಾರವನ್ನು ಸೂಚಿಸುವಂತೆ ಭುಜವನ್ನು ಅಲುಗಿಸುತ್ತ ಪುನಃ ಕುಳಿತುಕೊಳ್ಳುತ್ತಾನೆ.)

ಕಸಿನ್ಸ್ : ಜೋಕೆ, ಬಾರ್ಬರಾಗೆ ಸಾಮಾನ್ಯ ಜನರಲ್ಲಿ ಪ್ರೇಮ ಉಂಟು. ನನಗೂ

ಹಾಗೆಯೇ. ಆ ಪ್ರೀತಿಯ ರೋಮಾಂಚಕಾರಿತೆಯನ್ನು ನೀವು ಎಂದೂ ಅನುಭವಿಸಿಲ್ಲವೆ ?

ಅಂಡರ್‌ಷಾಫ್ಟ್ : (ಉತ್ಸಾಹವಿಲ್ಲದೆ, ವ್ಯಂಗ್ಯವಾಗಿ) ಸಂತ ಫ್ರಾನ್ಸಿಸ್ ಅಂತೆ ನೀವು ಎಂದಾದರೂ ಬಡತನವನ್ನು ಪ್ರೀತಿಸಿದ್ದೀರ ? ಸಂತ ಸಿಮಿಯನ್ನಂತೆ ಕೊಳೆಯಲ್ಲಿ ನಿಮಗೆ ಪ್ರೀತಿಯುಂಟಾಗಿದೆಯೆ ? ನಮ್ಮ ದಾದಿಯರಂತೆ, ಲೋಕೋಪಕಾರಿಗಳಂತೆ, ರೋಗಗಳಲ್ಲಿ, ನೋವಿನಲ್ಲಿ, ನೀವೆಂದಾದರೂ ಪ್ರೀತಿಯುಳ್ಳವರಾಗಿದ್ದೀರ ? ಅಂತಹ ಮನ್ಯುಗಳು ಸದ್ಗುಣಗಳಲ್ಲ. ಅತ್ಯಂತ ಅಸಹಜ ದೋಷಗಳು. ಸಾಮಾನ್ಯರನ್ನು ಕುರಿತ ಈ ಪ್ರೇಮ ಶ್ರೀಮಂತನೊಬ್ಬನ ಮೊಮ್ಮಗಳಿಗೆ, ವಿಶ್ವವಿದ್ಯಾನಿಲಯದ ಪ್ರಾಚಾರ್ಯನಿಗೆ ಮೆಚ್ಚಿಕೆಯಾಗಬಹುದು. ಆದರೆ ನಾನು ಸಾಮಾನ್ಯ ಮನುಷ್ಯನಾಗಿದ್ದವನು ; ಬಡವನಾಗಿದ್ದವನು. ನನಗೆ ಅದರಲ್ಲಿ ರೋಮಾಂಚಕಾರಿಯೇನೂ ಕಾಣದು. ಬಡವರು ಬೇಕಾದರೆ ಬಡತನ ದೈವಾನುಗ್ರಹವೆಂದು ನಟಿಸಿಕೊಳ್ಳಲಿ. ಇತರರಿಗೆ ವಿಷಯವನ್ನು ಬೋಧಿಸುತ್ತ, ತನ್ನ ಹೇಡಿತನವೇ ತನ್ನ ವಿನಯವೆಂದು ಹೇಳಿಕೊಳ್ಳಲಿ. ಅವರಿಗಿಂತ ನಮಗೆ ಹೆಚ್ಚು ತಿಳಿದಿದೆ. ನಾವು ಮೂವರೂ ಸಾಮಾನ್ಯ ಜನಕ್ಕಿಂತ ಮೇಲೇರಿ ನಿಲ್ಲಬೇಕು. ಹಾಗಿಲ್ಲವಾದರೆ, ನಮ್ಮ ಬಳಿಗೆ ಏರುವಂತೆ ಅವರ ಮಕ್ಕಳಿಗೆ ನಾವು ಹೇಗೆ ನೆರವಾಗಬಲ್ಲೆವು ? ಬಾರ್ಬರ ನಮಗೆ ಸೇರಬೇಕು, ಮುಕ್ತಿ ಸೇನೆಗೆ ಅಲ್ಲ.

ಕಸಿನ್ಸ್ : ಅದೇನೊ. ನನ್ನೊಡನೆ ಮಾತಾಡುತ್ತಿರುವಂತೆ ಅವಳೊಡನೆ ಮಾತನಾಡಿದರೆ ಅವಳನ್ನು ಮುಕ್ತಿಸೈನ್ಯದಿಂದ ಹೊರಕ್ಕೆ ತರಬಹುದೆಂದು ನೀವು ಯೋಚಿಸುವುದಾದರೆ, ನಿಮಗೆ ಬಾರ್ಬರ ಸ್ವಭಾವ ಅರ್ಥವಾಗಿಲ್ಲ ಎಂದಾಯಿತು.

ಅಂಡರ್‌ಷಾಫ್ಟ್ : ಯಾವುದನ್ನು ನಾನು ಕಂಡುಕೊಳ್ಳಬಲ್ಲೆನೊ ಅದು ನನಗೆ ಬೇಕೆಂದು ನಾನು ಕೇಳುವುದಿಲ್ಲ, ಗೆಳೆಯ.

ಕಸಿನ್ಸ್ : (ರೋಷದ ಬೆಳ್ಳುರಿಯಲ್ಲಿ) ಎಂದರೆ ನೀವು ಬಾರ್ಬರಳನ್ನು ಕೊಳ್ಳಬಲ್ಲಿರೆಂದು ಅರ್ಥಮಾಡಿಕೊಳ್ಳಲೆ ?

ಅಂಡರ್‌ಷಾಫ್ಟ್ : ಅಲ್ಲ. ಮುಕ್ತಿ ಸೈನ್ಯವನ್ನು ಕೊಂಡುಕೊಳ್ಳಬಲ್ಲೆ.

ಕಸಿನ್ಸ್ : ಖಂಡಿತ ಅಸಾಧ್ಯ.

ಅಂಡರ್‌ಷಾಫ್ಟ್ : ನೋಡುವಿರಂತೆ ! ಎಲ್ಲ ಮತ ಸಂಸ್ಥೆಗಳು ಬದುಕಿರುವುದೇ ಹೀಗೆ—ಐಶ್ವರ್ಯವಂತರಿಗೆ ತಮ್ಮನ್ನು ಮಾರಿಕೊಂಡು.

ಕಸಿನ್ಸ್ : ಈ ಸೈನ್ಯ ಹಾಗಲ್ಲ. ಇದು ಬಡವರ ಚರ್ಚು.

ಅಂಡರ್‌ಷಾಫ್ಟ್ : ಅದನ್ನು ಕೊಳ್ಳಲು ಇನ್ನೂ ಹೆಚ್ಚು ಕಾರಣವಿದ್ದಂತಾಯಿತು.

ಕಸಿನ್ಸ್ : ಬಡವರಿಗೆ ಸೇನೆ ಏನು ಮಾಡುತ್ತದೆ ಎಂಬುದನ್ನು ನೀವು ಪೂರ್ತಿ ತಿಳಿದಂತೆ ನನಗನ್ನಿಸುವುದಿಲ್ಲ.

ಅಂಡರ್‌ಷಾಫ್ಟ್ : ಓಹ್ ! ನನಗೆ ತಿಳಿದಿದೆ : ಅವರ ಹಲ್ಲನ್ನು ಕೀಳುತ್ತದೆ. ವ್ಯಾಪಾರದಲ್ಲಿ ತೊಡಗಿರುವ ನನಗೆ ಅಷ್ಟು ಸಾಕು.

ಕಸಿನ್ಸ್ : ನಾನ್‌ಸೆನ್ಸ್ ! ಅದು ಅವರ ಮನಸ್ಸನ್ನು, ಮದರಹಿತವಾಗಿಸುತ್ತದೆ.

ಅಂಡರ್‌ಷಾಫ್ಟ್ : ಕುಡಿಯದ ನಿರ್ಮದ ಕೆಲಸಗಾರರೇ ನನಗೆ ಹೆಚ್ಚು ಪ್ರಿಯರು. ನನ್ನ ಲಾಭಗಳು ಹೆಚ್ಚಾಗುತ್ತವೆ.

ಕಸಿನ್ಸ್ : ಪ್ರಾಮಾಣಿಕರು.

ಅಂಡರ್‌ಷಾಫ್ಟ್ : ಪ್ರಾಮಾಣಿಕ ಕೆಲಸಗಾರರಿಂದ ವೆಚ್ಚ ಅತಿ ಕಡಮೆ.

ಕಸಿನ್ಸ್ : ತಮ್ಮ ಕುಟುಂಬಗಳಿಗೆ ಅವರ ಮನಸ್ಸು ಅಂಟಿಕೊಂಡಿರುತ್ತದೆ.

ಅಂಡರ್‌ಷಾಫ್ಟ್ : ಅಷ್ಟೊ ಅಷ್ಟು ಮೇಲೇ. ತಮ್ಮ ಅಂಗಡಿಯನ್ನು ಬಿಟ್ಟು ಹೋಗದಿರಲು ಏನನ್ನು ಬೇಕಾದರೂ ಅಂಥವರು ತಾಳಬಲ್ಲರು.

ಕಸಿನ್ಸ್ : ಸುಖಿಗಳು.

ಅಂಡರ್‌ಷಾಫ್ಟ್ : ಕ್ರಾಂತಿಗೆ ವಿರುದ್ಧವಾದ ಇದರಂಥ ಅಮೂಲ್ಯ ರಕ್ಷಣೆ ಬೇರೆ ಯಾವುದೂ ಇಲ್ಲ.

ಕಸಿನ್ಸ್ : ನಿಃಸ್ವಾರ್ಥಿಗಳು.

ಅಂಡರ್‌ಷಾಫ್ಟ್ : ಎಂದರೆ, ಸ್ವಂತ ವಿಷಯಗಳಲ್ಲಿ ಉದಾಸೀನರಾಗಿರುತ್ತಾರೆ. ನನ್ನ ಪ್ರಯೋಜನಕ್ಕೆ ಅದು ಖಚಿತವಾಗಿ ಒಗ್ಗುತ್ತದೆ.

ಕಸಿನ್ಸ್ : ಅವರ ಯೋಚನೆಗಳು, ಸ್ವರ್ಗದ ವಿಷಯಗಳನ್ನೇ ಕುರಿತವು.

ಅಂಡರ್‌ಷಾಫ್ಟ್ : (ಏಳುತ್ತ) ಕಾಮಗಾರ ಸಂಘಗಳನ್ನಲ್ಲ ; ಸಮಾಜ ಸಮತಾ ವಾದವನ್ನಲ್ಲ. ಸರ್ವೋತ್ಕೃಷ್ಟವಾಯಿತು.

ಕಸಿನ್ಸ್ : (ಹೇಸಿಗೆಯಿಂದ) ನೀವು ನಿಜವಾಗಿ ಪರಮ ಚಂಡಾಲರು.

ಅಂಡರ್‌ಷಾಫ್ಟ್ : (ಪೀಟರ್ ಷರ್ಲಿಯನ್ನು ತೋರುತ್ತ. ಅವನು ಈಗ ತಾನೇ ಆಶ್ರಯದಿಂದ ಹೊರಗೆ ಬಂದು ಮನಸ್ಸಿನಲ್ಲಿ ಕುಗ್ಗಿ ಇವರ ನಡುವೆ ಸುತ್ತಾಡು ತ್ತಿರುತ್ತಾನೆ) ಇವನೊಬ್ಬ ಪ್ರಾಮಾಣಿಕ !

ಷರ್ಲಿ : ಹೌದು, ಅದರಿಂದ ನನಗೆ ಬಂದಿರುವುದೇನು ? (ಕಹಿ ಮನಸ್ಸಿನಿಂದ ಇವರನ್ನು ದಾಟಿ ಒಪ್ಪಾರದ ಒಂದು ಮೂಲೆಯಲ್ಲಿ ಬೆಂಚಿನ ಮೇಲೆ ಕುಳಿತು ಕೊಳ್ಳುತ್ತಾನೆ.)

(ಸ್ನಾಬಿ ಪ್ರೈಸ್ ಹಿಗ್ಗುತ್ತಿದ್ದಾನೆ. ಜೆನ್ನಿಹಿಲ್ ಕೈಯಲ್ಲಿರುವ ಖಂಜರಿಯ ತುಂಬ ತಾಮ್ರದ ನಾಣ್ಯಗಳಿವೆ. ಆಶ್ರಯದ ಒಳಗಿಂದ ಇಬ್ಬರೂ ಬಂದು ತಮಟೆಯ ಬಳಿಗೆ ಹೋಗುತ್ತಾರೆ. ಜೆನ್ನಿ ಅದರ ಮೇಲೆ ಹಣವನ್ನು ಎಣಿಸುತ್ತಾಳೆ.)

ಅಂಡರ್‌ಷಾಫ್ಟ್ : (ಷರ್ಲಿಗೆ ಉತ್ತರ ಕೊಡುತ್ತ) ಹೌದಯ್ಯ, ನಿನ್ನ ದಣಿಗಳಿಗೆ ಮೊದಲಿಂದ ಕಡೆಯುವರೆಗೂ ಅದರಿಂದ ಬೇಕಾದಷ್ಟು ಪ್ರಯೋಜನವಾಗಿರಬೇಕು.

(ಪಕ್ಕದ ಬೆಂಚಿನ ಮೇಲೆ ಒಂದು ಕಾಲಿಟ್ಟು, ಮೇಜಿನ ಮೇಲೆ ಕುಳಿತುಕೊಳ್ಳುತ್ತಾನೆ. ಕಸಿನ್ಸ್ ಮುಖದ ಮೇಲೆ ದೊಡ್ಡ ಆಘಾತವಾದಂತಾಗಿ ಆಶ್ರಯಕ್ಕೆ ಹೆಚ್ಚು ಹತ್ತಿರದ, ಅದೇ ಬೆಂಚಿನ ಮೇಲೆ ಕುಳಿತುಕೊಳ್ಳುತ್ತಾನೆ. ಆಶ್ರಯದಿಂದ ಬಾರ್ಬರ ಅಂಗಳದೊಳಗೆ ಬರುವಳು. ಉದ್ರಿಕ್ತಳಾಗಿದ್ದಾಳೆ. ಮನಸ್ಸಿನ ಮೇಲೆ ಹೆಚ್ಚು ಪರಿಣಾಮವಾಗಿದೆ.)

ಬಾರ್ಬರ : ಬೇರೆ ಗೇಟಿನ ಕ್ರಿಪ್ಸ್ ಬೀದಿಯಲ್ಲಿ ನಮ್ಮದೊಂದು ಅಧಿವೇಶನ ನಡೆಯಿತು. ಅತ್ಯುತ್ತಮ ಅನುಭವ ಉಂಟಾಯಿತು. ನಿನ್ನ ಅಪರಾಧಗಳನ್ನು ಒಪ್ಪಿಕೊಂಡದ್ದರಿಂದ ಜನಗಳ ಮೇಲೆ ಆದಂಥ ಪರಿಣಾಮವನ್ನು ನಾನು ಹಿಂದೆ ಎಂದೂ ಕಂಡಿಲ್ಲ, ಮಿ. ಪ್ರೈಸ್.

ಪ್ರೈಸ್ : ಇತರರನ್ನು ನೇರವಾಗಿಡಲು ನೆರವಾಗುವುದೆಂದು ನನಗೆ ನಂಬಿಕೆ ಇರುವ ಹಾಗಿದ್ದಿದ್ದರೆ ಹಿಂದಿನ ನನ್ನ ದುರ್ಜನತೆಗೆ ನಾನು ಸಂತೋಷವೇ ಪಟ್ಟೆನೆನ್ನಿಸುತ್ತದೆ.

ಬಾರ್ಬರ : ಹಾಗಾಗುತ್ತೆ ಸ್ನಾಬಿ. ಜೆನ್ನಿ...ಎಷ್ಟು ?

ಜೆನ್ನಿ : 4 ಷಿ. 10 ಪೆನ್ನಿ ಮೇಜರ್.

ಬಾರ್ಬರ : ಓ ಸ್ನಾಬಿ. ನಿಮ್ಮಮ್ಮನಿಗೆ ಇನ್ನೊಂದು ಹೆಚ್ಚು ಒದೆ ಕೊಟ್ಟಿದ್ದಿದ್ದರೆ ನಮಗೆ ಪೂರ್ತಿ 5 ಷಿ. ಬರುತಿತ್ತಯ್ಯ.

ಪ್ರೈಸ್ : ನೀವು ಹಾಗೆ ಹೇಳುವುದನ್ನು ಅವಳು ಕೇಳಿದ್ದಿದ್ರೆ ನಾವು ಏಕೆ ಒದೆಯಲಿಲ್ಲವೆಂದು ಅವಳು ವಿಷಾದಪಡುತ್ತಿದ್ದಳು. ಆದರೆ ನನಗೆ ಸಂತೋಷ : ನಾನು ಉದ್ಧಾರವಾದೆನೆಂದು ಅವಳು ಕೇಳಿದರೆ ಅವಳಿಗೆ ಸಂತೋಷವಾಗುತ್ತದೆ.

ಅಂಡರ್‌ಷಾಫ್ಟ್ : ಆ ಎರಡು ಪೆನ್ನಿ ಚಂದಾವನ್ನು ನಾನು ಕೊಡಲಿಯು, ಬಾರ್ಬರ? ಮಿಲಿಯಧೀಶ್ವರನ ಸಣ್ಣ ದುಗ್ಗಾಣಿ ಕಾಣಿಕೆ...ಆ...ಆ (ತನ್ನ ಜೇಬಿನಿಂದ ಎರಡು ಪೆನ್ನಿ ತೆಗೆದುಕೊಳ್ಳುತ್ತಾನೆ.)

ಬಾರ್ಬರ : ನೀವು ಆ ಎರಡು ಪೆನ್ನಿಯನ್ನು ಹೇಗೆ ಸಂಪಾದಿಸಿದಿರಿ ?

ಅಂಡರ್‌ಷಾಫ್ಟ್ : ವಾಡಿಕೆಯಂತೆ. ಫಿರಂಗಿ...ಟಾರ್ಪಿಡೊ, ಸಬ್‌ಮರೀನ್ ಮಾರುವುದರಿಂದ. ನಾನು ಹೊಸದಾಗಿ ತಯಾರಿಸುವ Grand Duke ಎಂಬ ಹೆಸರಿನ ಸ್ಫೋಟಕದಿಂದ.

ಬಾರ್ಬರ : ಅದನ್ನು ಪುನಃ ನಿಮ್ಮ ಜೇಬಿಗೆ ಹಾಕಿಕೊಳ್ಳಿ. ಎರಡು ಪೆನ್ನಿ ಕೊಟ್ಟು ಇಲ್ಲಿ ನಿಮ್ಮ ಮುಕ್ತಿಯನ್ನು ಕೊಂಡುಕೊಳ್ಳಲಾರಿರಿ. ಅದನ್ನು ನೀವು ಬೇರೆ ರೀತಿ ಸಾಧಿಸಬೇಕು.

ಅಂಡರ್‌ಷಾಫ್ಟ್ : ಎರಡು ಪೆನ್ನಿ ಸಾಲದೆ ? ಇನ್ನೂ ಹೆಚ್ಚಾಗಿ ಕೊಡಬಲ್ಲೆ ನೀನು ಒತ್ತಾಯ ಮಾಡಿದರೆ.

ಬಾರ್ಬರ : ಎರಡು ಮಿಲಿಯನ್ ಮಿಲಿಯನ್ ಸಾಲುವುದಿಲ್ಲ. ನಿಮ್ಮ ಕೈಯ ಮೇಲೆ ದುಷ್ಟ ರಕ್ತದ ಕರೆಯಿದೆ. ಒಳ್ಳೆಯ ರಕ್ತ ಹೊರತು ಬೇರೆ ಯಾವುದೂ ಅದನ್ನು ಶುಚಿಗೊಳಿಸದು. ಹಣದಿಂದ ಪ್ರಯೋಜನವಿಲ್ಲ. ಅದನ್ನು ಹಿಂದಕ್ಕೆ ತೆಗೆದುಕೊಳ್ಳಿ. (ಕಸಿನ್ಸ್ ಕಡೆ ತಿರುಗುತ್ತಾಳೆ) ಡಾಲ್ಲಿ, ನನಗಾಗಿ ವೃತ್ತಪತ್ರಿಕೆಗಳಿಗೆ ಇನ್ನೊಂದು ಕಾಗದ ಬರೆಯಬೇಕು. (ಕಸಿನ್ಸ್ ಮುಖ ವಿಕಾರ ಮಾಡಿಕೊಳ್ಳುತ್ತಾನೆ). ಹೌದು ನನಗೆ ಗೊತ್ತು, ನಿನಗೆ ಅದು ಇಷ್ಟವಿಲ್ಲವೆಂದು. ಆದರೆ ಅದನ್ನು ಮಾಡಬೇಕು. ಈ ಚಳಿಗಾಲದ ಬಡವರ ಹಸಿವು ನಮ್ಮನ್ನು ಸೋಲಿಸುತ್ತಿದೆ. ಎಲ್ಲ ನಿರುದ್ಯೋಗಿಗಳಾಗಿದ್ದಾರೆ. ಜನರಲ್ ಹೇಳುತ್ತಾರೆ : ನಮಗೆ ಹೆಚ್ಚು ಹಣ ಬಾರದಿದ್ದರೆ ನಾವು ಈ ನೆಲೆಯನ್ನು ಮುಚ್ಚಬೇಕಾಗುತ್ತದೆಯೆಂದು. ನನಗೆ ನಾಚಿಕೆಯಾಗುವಷ್ಟು ಜನರ ಮೇಲೆ ಒತ್ತಾಯ ಹಾಕುತ್ತಿದ್ದೇನೆ. ಅಲ್ಲವೆ ಸ್ನಾಬಿ ?

ಪ್ರೈಸ್ : ನೀವು ಅದನ್ನು ಮಾಡುವುದನ್ನು ನೋಡಲು ಚೆನ್ನಾಗಿರುತ್ತೆ, ತಾಯಿ. ಮೂರು ಷಿಲಿಂಗ್ 6 ಪೆನ್ನಿಯನ್ನು 4 ಷಿ. 10 ಪೆನ್ನಿ ಮಾಡುವುದಕ್ಕಾಗಿ ಅವರ ಮನಸ್ಸನ್ನು ತಿರುಗಿಸಿದ ರೀತಿ ಯಾರಿಗೂ ಎಚ್ಚರ ಕೊಡತಕ್ಕದ್ದು. ದೇವತಾ ಸ್ತೋತ್ರ ಹೇಳಿಸಿ ಹೇಳಿಸಿ ಒಂದೊಂದು ಪದ್ಯಕ್ಕೂ ಹೆಚ್ಚು ಹೆಚ್ಚು ಪೆನ್ನಿಗಳನ್ನು ಸಂಪಾದಿಸಬೇಕಾಯಿತು. ಮೈಲ್ ಎಂಡ್ ವೇಸ್ಟಿನ ಯಾವ ಅಗ್ಗದ ಹರಾಜುಗಾರನೂ ನಿಮ್ಮೊಡನೆ ಸ್ಪರ್ಧಿಸಿ ಗೆಲ್ಲಲಾರನು.

ಬಾರ್ಬರ : ಹೌದು. ಆದರೆ ಹಾಗೆ ಮಾಡುವ ಅಗತ್ಯ ನಮಗಿಲ್ಲವಾಗಿದ್ದಿದ್ದರೆ ಚೆನ್ನಾಗಿತ್ತು. ಜನಗಳ ಆತ್ಮಗಳಿಗಿಂತ ಹೆಚ್ಚಾಗಿ ಹಣ ಕೂಡಿಸುವುದನ್ನು ಕುರಿತು ಹೆಚ್ಚು ಯೋಚನೆ ಮಾಡಬೇಕಾಗಿ ಬಂದಿದೆ. ಆ ಹ್ಯಾಟುಗಳ ತುಂಬ ಬರುವ ಪೆನ್ನಿ, ಅರೆಪೆನ್ನಿಗಳಿಂದ ಏನಾಗುತ್ತದೆ ? ನಮಗೆ ಸಾವಿರಗಟ್ಟಲೆ ಹಣಬೇಕು. ಹತ್ತಾರು ಸಾವಿರ, ನೂರಾರು ಸಾವಿರ ಬೇಕು. ನಾವು ಜನರ ಮನಸ್ಸನ್ನೂ ಹೃದಯವನ್ನೂ ಪರಿವರ್ತಿಸಬೇಕು. ಹೀಗೆ ಸೇನೆಗಾಗಿ ಯಾವಾಗಲೂ ಹಣ ಬೇಡುತ್ತಿರಲಾರೆ. ಸ್ವಂತಕ್ಕಾಗಿ ಬೇಡುವುದಕ್ಕಿಂತ ಹೇಗೆ ಸಾವು ಮೇಲು ಎನ್ನಿಸುತ್ತದೆಯೊ ಸೇನೆಗಾಗಿ ಈ ಭಿಕ್ಷೆ ಬೇಡುವುದೂ ಹಾಗೇ ಎನ್ನಿಸುತ್ತದೆ.

ಅಂಡರ್‌ಷಾಫ್ಟ್ : (ಗಂಭೀರ ವ್ಯಂಗ್ಯದಲ್ಲಿ) ನಿಜವಾದ ನಿಃಸ್ವಾರ್ಥತೆ ಏನನ್ನಾದರೂ ಮಾಡಬಲ್ಲದು, ಮಗು.

ಬಾರ್ಬರ : (ವ್ಯಂಗ್ಯ ತಟ್ಟದೆ, ಬೇರೆ ಕಡೆ ತಿರುಗಿ ತಮಟೆಯ ಮೇಲಿಂದ ಹಣವನ್ನು ತೆಗೆದುಕೊಂಡು ತನ್ನ ನಗದು ಕೈಚೀಲವಲ್ಲಿ ಹಾಕಿಕೊಳ್ಳುತ್ತಾಳೆ.) ಹೌದು ; ಅಲ್ಲವೆ ?

(ಅಂಡರ್‌ಷಾಫ್ಟ್ ಕಸಿನ್ಸ್ ಕಡೆ ವ್ಯಂಗ್ಯವಾಗಿ ನೋಡುತ್ತಾನೆ)

ಕಸಿನ್ಸ್ : (ಅಂಡರ್‌ಷಾಫ್ಟ್‌ಗೆ ಮಾತ್ರ) ಸೈತಾನ್ ! ಮೆಕಿಯವೆಲ್ಲಿ !

ಬಾರ್ಬರ : (ಚೀಲವನ್ನು ಕಟ್ಟುತ್ತ, ಅದನ್ನು ಜೇಬಿನಲ್ಲಿ ಹಾಕಿಕೊಳ್ಳುವಾಗ ಅವಳ ಕಣ್ಣಲ್ಲಿ ನೀರು ಬರುತ್ತದೆ.) ಇವರಿಗೆ ಹೇಗೆ ಊಟ ಹಾಕುವುದು ? ದೇಹದ ಹಸಿವು ಕಣ್ಣಲ್ಲಿ ಕಾಣುತ್ತಿರುವ ಮನುಷ್ಯನಿಗೆ ಮತಧರ್ಮವನ್ನು ಕುರಿತು ಮಾತನಾಡಲಾರೆ. (ತುಂಬಾ ನಿರ್ವಿಣ್ಣಳಾಗಿ) ಭಯಂಕರ ಸ್ಥಿತಿ.

ಜೆನ್ನಿ : (ಅವಳ ಬಳಿಗೆ ಓಡಿಬಂದು) ಮೇಜರ್ ಅಮ್ಮಾ,

ಬಾರ್ಬರ : (ತನ್ನನ್ನು ಸ್ವಾಸ್ಥ್ಯಕ್ಕೆ ತಂದುಕೊಂಡು) ಬೇಡ. ನನ್ನನ್ನು ಸಂತೈಸಬೇಡ. ಎಲ್ಲ ಸರಿಹೋಗುತ್ತೆ. ನಮಗೆ ಹಣ ಸಿಗುತ್ತದೆ.

ಅಂಡರ್‌ಷಾಫ್ಟ್ : ಹೇಗೆ ?

ಜೆನ್ನಿ : ಇನ್ನು ಹೇಗೆ ? ಪ್ರಾರ್ಥನೆ ಮಾಡುವುದರಿಂದ. ಮಿಸೆಸ್. ಬೈನ್ಸ್ ಹೇಳುತ್ತಾರೆ : ನಿನ್ನೆ ರಾತ್ರಿ ಅದಕ್ಕಾಗಿ ಪ್ರಾರ್ಥಿಸಿದರಂತೆ. ಅವರು ವ್ಯರ್ಥವಾಗಿ ಒಮ್ಮೆಯೂ ಪ್ರಾರ್ಥಿಸಿಲ್ಲ. (ಗೇಟಿಗೆ ಹೋಗಿ, ರಸ್ತೆಯ ಕಡೆ ನೋಡುತ್ತ)

ಬಾರ್ಬರ : (ಅವಳ ಕಣ್ಣು ಒಣಗಿದೆ. ಸ್ವಾಸ್ಥ್ಯ ಪುನಃ ಉಂಟಾಗಿದೆ) ಅಂದ ಹಾಗೆ, ಅಪ್ಪ, ಮಿಸೆಸ್. ಬೈನ್ಸ್ ಬಂದಿದ್ದಾರೆ ಈ ಅಪರಾಹ್ನದ ಮೀಟಿಂಗಿಗೆ ನಮ್ಮೊಡನೆ ಮಾರ್ಚ್ ಮಾಡಲು. ನಿಮ್ಮನ್ನು ಕಾಣಬೇಕೆಂದು ತುಂಬಾ ಆತುರವುಳ್ಳವರಾಗಿದ್ದಾರೆ. ಏಕೊ ಏನೊ. ಬಹುಶಃ ನಿಮ್ಮ ಮನಸ್ಸನ್ನು ತಿರುಗಿಸುತ್ತಾರೆ.

ಅಂಡರ್‌ಷಾಫ್ಟ್ : ನನಗೆ ತುಂಬಾ ಸಂತೋಷವಾಗುತ್ತೆ, ಮಗು.

ಜೆನ್ನಿ : (ಗೇಟಲ್ಲಿ, ಉದ್ವೇಗದಿಂದ) ಮೇಜರ್, ಮೇಜರ್, ಆ ಮನುಷ್ಯ ಪುನಃ ಇಲ್ಲಿಗೆ ಬಂದಿದ್ದಾನೆ.

ಬಾರ್ಬರ : ಯಾವ ಮನುಷ್ಯ ?

ಜೆನ್ನಿ : ನನ್ನನ್ನು ಹೊಡೆದವನು. ನಮ್ಮನ್ನು ಸೇರಿಕೊಳ್ಳಲು ಬಂದಿದ್ದಾನೆ ಎಂದುಕೊಳ್ಳಲೆ ?

(ಬಿಲ್‌ವಾಕರ್ ಗೇಟ್ ಮೂಲಕ ಬರುತ್ತಾನೆ. ಅವನ ಜಾಕೆಟ್ ಮಂಜು ಬಿದ್ದು ಜಡವಾಗಿದೆ. ಕೈಗಳು ಜೇಬಿನ ಒಳಗಿವೆ. ಹೆಗಲ ಮಧ್ಯಕ್ಕೆ ಗಲ್ಲ ಇಳಿದಿದೆ. ಪೂರ್ತಿ ಸೋತು ಎಲ್ಲವನ್ನೂ ಕಳೆದುಕೊಂಡ ಜೂಜುಗಾರನಂತೆ. ಬಾರ್ಬರಳಿಗೂ ತಮಟೆಗೂ ನಡುವೆ ನಿಲ್ಲುತ್ತಾನೆ.)

ಬಾರ್ಬರ : ಏನು ಬಿಲ್, ಅಗಲೇ ಹಿಂದಕ್ಕೆ ಬಂದೆಯ ?

ಬಿಲ್ : (ಆಕೆಯನ್ನು ಮೂದಲಿಸುತ್ತ) ಆಗಿಂದ ಈವರೆಗೂ ಮಾತಾಡತಾನೇ ಇದ್ದೀರ ?

ಬಾರ್ಬರ : ಹೆಚ್ಚು ಕಡಮೆ. ಜೆನ್ನಿ ದವಡೆ ಮೇಲೆ ಹೊಡೆದದ್ದಕ್ಕೆ ಟಾಜರ್ ನಿನಗೆ ಬೆಲೆ ಹಿಂದಿರುಗಿ ಕೊಟ್ಟನೆಂದು ಕಾಣುತ್ತೆ.

ಬಿಲ್ : ಇಲ್ಲ......ಕೊಡಲಿಲ್ಲ.

ಬಾರ್ಬರ : ನಿನ್ನ ಜಾಕೆಟ್ಟಿಗೆ ಮಂಜು ಸೋಕಿದೆ ಎನ್ನಿಸಿತು.

ಬಿಲ್ : ಹೌದು, ಮಂಜು ಸೋಕಿದೆ. ಮಂಜು ಎಲ್ಲಿಂದ ಬಂತು ಎಂದು ನಿಮಗೆ ತಿಳಿಯಬೇಕು ಅಲ್ಲವೆ !

ಬಾರ್ಬರ : ಹೌದು.

ಬಿಲ್ : ಅದು ಕ್ಯಾನಿಂಗ್ ಟೌನಿನ ಪಾರ್ಕಿನ್ಸನ್ ಮೂಲೆಯ ನೆಲದ ಮೇಲಿಂದ ! ಭುಜಗಳಿಂದ ಅದನ್ನು ಒರಸಿ ಹಾಕಿದ್ದೇನೆ. ಕಾಣಿಸಿತೆ ?

ಬಾರ್ಬರ : ಪಾಪ, ಮೊಳಕಾಲಿನ ಮೇಲಿಂದಲೂ ಅದನ್ನು ಉಜ್ಜಿ ಹಾಕಿದ್ದರಾಗಿತ್ತು ! ಬಿಲ್ ನಿನಗೆ ಬಹಳ ಒಳ್ಳೆಯದು ಮಾಡ್ತಿತ್ತು.

ಬಿಲ್ : (ಹುಳಿಯಾದ, ಹರ್ಷವಿಲ್ಲದ ವಿನೋದದಿಂದ) ಇನ್ನೊಬ್ಬ ಮನುಷ್ಯನು ಊರಿದ್ದ ಮೊಣಕಾಲನ್ನು ನಾನು ಕಾಪಾಡುತ್ತಿದ್ದೆ. ನನ್ನ ತಲೆಯ ಮೇಲೆ ಮೊಳಕಾಲು ಊರಿದ್ದ ಅವನು.

ಜೆನ್ನಿ : ನಿನ್ನ ತಲೆಯ ಮೇಲೆ ಮೊಳಕಾಲು ಊರಿದ್ದವರು ಯಾರು ?

ಬಿಲ್ : ಟಾಜರ್. ನನಗಾಗಿ ಅವನು ಪ್ರಾರ್ಥನೆ ಮಾಡುತಿದ್ದ. ನನ್ನನ್ನು ಜಮಖಾನ ಮಾಡ್ಕೊಂಡು ನೆಮ್ಮದಿಯಾಗಿ ಪ್ರಾರ್ಥನೆ ಮಾಡುತ್ತಿದ್ದ. ಮಾಗ್ಗೂ ಹಾಗೇ ಮಾಡ್ತಿದ್ದಳು. ಆ ಒಟ್ಟು ಮೀಟಿಂಗಿನಲ್ಲಿದ್ದವರೆಲ್ಲ ಹಾಗೆಯೇ. ಮಾಗ್ ಹೇಳ್ತಾಳೆ; ಓ ! ದೇವರೆ, ಅವನ ಜೀವದ ಮೊಂಡುತನವನ್ನು ಮುರಿ. ಆದರೆ ಪ್ರಿಯವಾದ ಅವನ ಹೃದಯಕ್ಕೆ ಕೆಡುಕು ಮಾಡಬೇಡ—ಎಂದು. ಅವಳು ಹೇಳಿದ್ದು ಅದು, ಅವನ ಹೃದಯಕ್ಕೆ ಕೆಡುಕು ಮಾಡಬೇಡ ಎಂದು. ಅವಳ ಆ ಪ್ರಿಯ ಇದ್ದಾನಲ್ಲ, ತನ್ನ 13 ರಾತ್ಲ 4 ಪೌಂಡು ಶಕ್ತಿಯನ್ನೆಲ್ಲ ಬಿಟ್ಟು ನನ್ನ ಮೇಲೂರಿದ್ದ ; ತಮಾಷೆ ಅಲ್ಲವೆ !

ಜೆನ್ನಿ : ಓಹ್ ! ಇಲ್ಲ. ನಮಗೆ ತುಂಬಾ ವಿಷಾದವಾಗುತ್ತೆ, ಮಿ. ವಾಕರ್.

ಬಾರ್ಬರ : (ಪ್ರಕಟವಾಗಿ, ವಿನೋದಗೊಂಡು) ನಾನ್‌ಸೆನ್ಸ್. ನಿಜವಾಗಿ ತಮಾಷೆಯಾಗಿದೆ. ನಿನಗೆ ಆಗಬೇಕು ಬಿಲ್. ಅವನನ್ನು ನೀನು ಮೊದಲು ಕೀಟಲೆ ಮಾಡಿರಬೇಕಲ್ಲ.

ಬಿಲ್ : (ಹಟಮಾರಿತನದಿಂದ) ನಾನೇನು ಮಾಡ್ತೇನೆ ಎಂದಿದ್ದೆನೊ ಅದನ್ನ ಮಾಡಿದೆ. ಅವನ ಕಣ್ಣಿಗೆ ಉಗಿದೆ. ಆಕಾಶದ ಕಡೆ ನೋಡಿ ಅವನು ಅಂದ: "ಓ, ಬೈಬಲಿನ ಉಪದೇಶಕ್ಕೆ ತಕ್ಕಂತೆ, ನನ್ನನ್ನು ಯೋಗ್ಯನೆಂದು ತಿಳಿದು, ಮೇಲೆ ಉಗುಳು ಪಪ್ಪುದ ತಕ್ಕವನು ನಾನು ಎಂದಾಯಿತಲ್ಲ," ಎಂದ. ಮಾಗ್ ಹೇಳ್ತಾಳೆ :

"ಭಗವಂತನ ಮಹಿಮೆಯೇ ಮಹಿಮೆ—" ಎಂದು. ಆಮೇಲೆ ಆತ ನನ್ನನ್ನು ತಮ್ಮ ಎಂದು ಕರೆದ ; ಆಮೇಲೆ ಸಣ್ಣ ಮಗುವಿನ ನನ್ನನ್ನು ಕೆಳಗೆ ಹಾಕಿಕೊಂಡ. ಶನಿವಾರ ರಾತ್ರಿ, ನಮ್ಮಮ್ಮ ನನ್ನ ಮೈ ಉಜ್ಜೋ ಹಾಗೆ ಉಜ್ಜಿದ. ನಾನೇನೂ ಅವನಿಗೆ ಮಾಡೋಕೆ ಆಗಲಿಲ್ಲ. ಅರ್ಧ ರಸ್ತೆಯೇ ಪ್ರಾರ್ಥನೆ ಮಾಡಿತು. ಇನ್ನರ್ಧ ತಮ್ಮ ಪಕ್ಕೆ ಸಿಡಿಯೊ ಹಾಗೆ ನಗುತಿತ್ತು. (ಬಾರ್ಬರಳನ್ನು ಕುರಿತು) ಆಯಿತೆ? ನಿಮಗೆ ತೃಪ್ತಿ ಆಯ್ತೆ, ಈಗ?

ಬಾರ್ಬರ : (ಅವಳ ಕಣ್ಣು ಕುಣಿಯುತ್ತಿರಲು) ನಾನು ಅಲ್ಲಿದ್ದಿದ್ರೆ ಚೆನ್ನಾಗಿರುತಿತ್ತು, ಬಿಲ್ ?

ಬಿಲ್ : ಹೌದು, ನನ್ನ ಮೇಲೆ ಇನ್ನಷ್ಟು ಮಾತು ಹೆಚ್ಚು ಖರ್ಚು ಮಾಡಬಹುದಾಗಿತ್ತು ಅಲ್ಲವೆ !

ಜೆನ್ನಿ : ಇದನ್ನು ಕೇಳಿ ನಂಗೆ ತುಂಬಾ ವ್ಯಥೆಯಾಗುತ್ತೆ, ಮಿ. ವಾಕರ್.

ಬಿಲ್ : (ರೋಷದಿಂದ) ನನಗಾಗಿ ನೀನು ವ್ಯಥೆಪಡಬೇಕಾಗಿಲ್ಲ. ನಿನ್ನನ್ನು ಕೇಳಿದವರು ಯಾರು ? ನಾನು ಹೇಳೋದು ಕೇಳು. ನಾನು ನಿನ್ನ ದವಡೆಯ ಮೇಲೆ ಹೊಡೆದೆ.

ಜೆನ್ನಿ : ನನಗೇನೂ ನೋವಾಗಲ್ಲ ಬಿಡು. ನಿಜವಾಗಿ ಇಲ್ಲ. ಎಲ್ಲೊ ಒಂದು ಕ್ಷಣ ಮಾತ್ರ ನೋಯಿತು : ಭಯಪಟ್ಟಿದ್ದರಿಂದ ಹಾಗಾಯ್ತು.

ಬಿಲ್ : ನನ್ನನ್ನು ನೀನು ಕ್ಷಮಿಸಬೇಕಾದ್ದಿಲ್ಲ. ಯಾರೂ ಕ್ಷಮಿಸಬೇಕಾದ್ದಿಲ್ಲ. ನಾನು ಮಾಡಿದ್ದಕ್ಕೆ ದಂಡ ತೆರ್‍ತೇನೆ. ನಿನ್ನನ್ನು ತೃಪ್ತಿಪಡಿಸುವುದಕ್ಕಾಗಿ ನನ್ನ ಸ್ವಂತ ದವಡೆ ಮುರಿಸಿಕೊಳ್ಳಲು ಪ್ರಯತ್ನಿಸಿದೆ.

ಜೆನ್ನಿ : (ತುಂಬಾ ನೊಂದು) ಬೇಕಿರಲಿಲ್ಲ.

ಬಿಲ್ : (ತಾಳ್ಮೆಗೆಟ್ಟು) ಹಾಗೆ ಮಾಡಿದೆ ಎಂದು ಹೇಳುತೇನೆ. ಹೇಳಿದ್ದನ್ನು ಕೇಳೋಕೆ ನಿನ್ನಿಂದ ಆಗೋಲ್ಲವೆ ? ಅದರಿಂದ ನಂಗೆ ಸಿಕ್ಕಿದ್ದೇನು ? ನನ್ನ ಶ್ರಮಕ್ಕೆ ಪಬ್ಲಿಕ್ ರಸ್ತೆಯಲ್ಲಿ ಜನರಿಗೆ ವಿನೋದ ಆಯ್ತು. ಒಂದು ವಿಧದಲ್ಲಿ ನಿನ್ನನ್ನು ತೃಪ್ತಿಪಡಿಸಲಾಗದಾದರೆ ಇನ್ನೊಂದು ರೀತಿ ಪಡಿಸುತ್ತೇನೆ. ನಾ ಹೇಳೋದು ಕೇಳು. ಕಷ್ಟಕಾಲಕ್ಕೆ ಎಂದು ಎರಡು ಪೌಂಡು ಕೂಡಿಟ್ಟಿದ್ದೆ. ಅದರಲ್ಲಿ ಒಂದು ಪೌಂಡು ಉಳಿದಿದೆ. ನನ್ನ ಸ್ನೇಹಿತನೊಬ್ಬ ತಾನು ಮದುವೆಯಾಗಲಿರುವ ಹೆಣ್ಣಿನ ಕೈಲಿ ಜಗಳ ಮಾಡಿದ. ಅವಳಿಗೆರಡು ಬಿಟ್ಟ. ಅವನಿಗೆ 15 ಷಿ. ಜುಲ್ಮಾನೆ ಬಿತ್ತು. ಅವಳನ್ನು ಮದುವೆಯಾಗಲಿದ್ದವನಿಗೆ ಅವಳನ್ನು ಹೊಡೆಯುವ ಅಧಿಕಾರವಿತ್ತು. ನಿನ್ನನ್ನು ಹೊಡೆಯಲು ನಂಗೇನೂ ಅಧಿಕಾರವಿರಲಿಲ್ಲ. ಆದ್ದರಿಂದ ಇನ್ನೊಂದು ಷಿಲಿಂಗ್ ಸೇರಿಸಿ, ಒಂದು ಪೌಂಡು ಕೊಡುತೇನೆ. (ಒಂದು ಸವರನ್ ತೆಗೆಯುವನು)

ಹಣ ಇಲ್ಲಿದೆ ತೊಗೊ. ಇನ್ಮೇಲೆ ನೀನು ನನ್ನ ಕ್ಷಮಿಸಬೇಕಾದ್ದಿಲ್ಲ ; ನನಗಾಗಿ ಪ್ರಾರ್ಥಿಸಬೇಕಾದ್ದಿಲ್ಲ. ನಿನ್ನ ಮೇಜರ್ ನನ್ನ ಕುರಿತು ದವಡೆ ಸರ್ಕಸ್ ಮಾಡ ಬೇಕಾದ್ದೂ ಇಲ್ಲ. ನಾನು ಮಾಡಿದ್ದು ಇಲ್ಲಿ ಮಾಡಿಯಾಗಿ ಮುಗಿದುಹೋಗಲಿ. ಅದಕ್ಕೆ ತೆತ್ತದ್ದಾಗಲಿ. ಇದರ ವಿಷಯ ಇನ್ನು ಸಾಕು.

ಜೆನ್ನಿ : ನಾನು ಅದನ್ನು ತೆಗೆದುಕೊಳ್ಳಲಾರೆ ಮಿ. ವಾಕರ್ ! ಕೊಡೊ ಹಾಗಿದ್ರೆ, ಆ ಬಡ ರಮ್ಮಿ ಮಿಚ್ಚೆನ್ಸ್‌ಗೆ, ಒಂದೊ ಎರಡೊ ಷಿಲಿಂಗ್ಸ್ ಕೊಡಿ. ನೀವು ಅವಳಿಗೆ ಹೊಡೆದಿರಿ. ಅವಳು ಮುದುಕಿ.

ಬಿಲ್ : (ತಿರಸ್ಕಾರದಿಂದ) ಸಂಭವ ಇಲ್ಲ. ಇನ್ನೊಂದು ಸಲ ಅವಳನ್ನು ಕಂಡರೆ ಇನ್ನೊಂದು ಸಲ ಅವಳಿಗೆ ಕೊಡ್ತೇನೆ. ನಂಗೇನೊ ಕಾನೂನು ಕಾಣಿಸುತ್ತೇನೆ ಎಂದು ಹೆದರಿಸಿದಳು. ಅವಳೇನು ನನ್ನ ಕ್ಷಮಿಸಲಿಲ್ಲ. ಹೆಚ್ಚಾಗೇನಿಲ್ಲ ಅವಳಿಗೆ ನಾನು ಮಾಡಿದ್ದು. ನನ್ನ ಮನಸ್ಸನ್ನು ಅದು ಒತ್ತುತ್ತ ಇಲ್ಲ—ಇವರು (ಬಾರ್ಬರಾವನ್ನು ತೋರುತ್ತ) ನನ್ನ ಅಂತಃಸಾಕ್ಷಿ ಎನ್ನುವರಲ್ಲ, ಅದಕ್ಕೇನೂ ಅದು ತಟ್ಟಿಲ್ಲ—ಒಂದು ಹಂದಿಯನ್ನು ಕಡಿಯುವಾಗ ಹೇಗೊ ಅದಕ್ಕಿಂತ ಹೆಚ್ಚೇನೂ ಅಲ್ಲ. ನೀವು ಈಗ ಕ್ರಿಸ್ಚಿಯನ್ ಆಟ ಆಡುತೀರಲ್ಲ, ಅದನ್ನು ಪುನಃ ನನ್ನ ಮೇಲೆ ಆಡಲು ನಿಮ್ಮನ್ನು ಬಿಡೋದಿಲ್ಲ. ಈ ಕ್ಷಮಾಪಣೆ, ಈ ಮೂದಲೆ, ಈ ಮಾತಿನ ಮಳೆಸುರಿತ ಕೇಳುತಿದ್ರೆ ಗಂಡ್ಸಿನ ಜನ್ಮ ಹೊರೆಯಾಗಿ ಕಾಣಿಸುತ್ತೆ. ನಾನು ಸುಮ್ಮನೆ ಇರೋದಿಲ್ಲ. ನಾ ಹೇಳುತ್ತೇನೆ, ನಿನ್ನ ಹಣ ತೊಗೊ, ನಿನ್ನ ಹಾಳು ಮುಖ, ಅದರ ಮೇಲೆ ನಾನು ಕೊಟ್ಟ ಏಟು—ನನಗೆ ಪುನಃ ತೋರಿಸ ಬೇಡ.

ಜೆನ್ನಿ : ಮೇಜರ್, ಅದರಲ್ಲಿ ಸ್ವಲ್ಪವನ್ನು ಸೇನೆಗೆ ತೊಗೊಬಹುದೆ?

ಬಾರ್ಬರ : ಬೇಡ, ಸೇನೆಯನ್ನು ದುಡ್ಡುಕೊಟ್ಟು ಕೊಳ್ಳಲು ಆಗುವುದಿಲ್ಲ. ನಿನ್ನ ಜೀವ ಬೇಕು ಬಿಲ್. ಅದಕ್ಕೆ ಕಡಮೆಯ ಯಾವುದೂ ಬೇಡ.

ಬಿಲ್ : (ಕಹಿಯಾಗಿ) ನನಗ್ಗೊತ್ತು, ನಾನು, ನನ್ನ ಕೆಲವು ಷಿಲಿಂಗು ನಿಮಗೆ ಸಾಲದು. ನೀವು ಶ್ರೀಮಂತರ ಮೊಮ್ಮಗಳು. 100 ಪೌಂ. ಕಡಮೆ ನಿಮಗೆ ಎಲ್ಲಿಗೆ ಸಾಕು?

ಅಂಡರ್‌ಷಾಫ್ಟ್ : ನೋಡು ಬಾರ್ಬರ, 100 ಪೌಂ. ಬಂದರೆ ಬೇಕಾದಷ್ಟು ಒಳ್ಳೆಯ ಕೆಲಸ ಮಾಡಬಹುದು. ಈ ದೊಡ್ಡ ಮನುಷ್ಯನ ಕೈಯಿಂದ ಒಂದು ಪೌಂಡು ತೊಗೊ. ಅವನ ಮನಸ್ಸನ್ನು ನಿರಾಳ ಮಾಡು. ಉಳಿದ 99 ಪೌಂಡು ನಾ ಕೊಡುತ್ತೇನೆ.

(ಬಿಲ್ ಇಷ್ಟು ಸಮೃದ್ಧಿಯನ್ನು ನೋಡಿ ಕಣ್ಣುಕೆಟ್ಟು ಸಹಜವಾಗಿ ತನ್ನ ಹ್ಯಾಟನ್ನು ಮುಟ್ಟುತ್ತಾನೆ.)

ಬಾರ್ಬರ : ನೀವು ದಂಡೋಡಿತನ ಮಾಡಬೇಡಿ, ಅಪ್ಪ. ಬಿಲ್ 20 ಬೆಳ್ಳಿ ನಾಣ್ಯ ಕೊಡ್ತೇನೆ ಎನ್ನುತ್ತಾನೆ. ನೀವು ಕೊಡಬೇಕಾದ್ದು ಇನ್ನು 10 ನ್ನು ಮಾತ್ರ. ಮಾರಾಟಕ್ಕಿರುವ ಯಾರಿಗೂ ಕೊಡಬೇಕಾದ ಬೆಲೆಯ ಪ್ರಮಾಣ ಅಷ್ಟೇ. ನಾಣ್ಯ ಮಾರಾಟಕ್ಕಿಲ್ಲ. ಸೇನೆ ಮಾರಾಟಕ್ಕಿಲ್ಲ. (ಬಿಲ್ಲನ್ನು ಕುರಿತು) ನೀನು ಸುತ್ಕೊಂಡು ಪುನಃ ನಮ್ಮ ಬಳಿಗೆ ಬರುವವರೆಗೂ ನಿನಗೆ ಒಂದು ನಿಮಿಷ ನೆಮ್ಮದಿ ಸಿಗುವುದಿಲ್ಲ, ಬಿಲ್. ನೀನು ಮುಕ್ತಿಗೆ ಎದುರು ನಿಂತು ಹೋರಾಡಲಾರೆ.

ಬಿಲ್ : (ಪ್ರಸನ್ನತೆ ಇಲ್ಲದೆ) ಸಂಗೀತಶಾಲೆ ಕುಸ್ತಿಯವರ ಮೇಲಾಗಲಿ ಬಾಯಿಗೆ ಬಂದಂತೆ ಮಾತನಾಡುವ ಹೆಂಗಸರ ಮೇಲೆಯಾಗಲಿ ನಾನೇನೂ ಮಾಡಲಾರೆ. ಹಣದಂಡ ತೆರುತೇನೆ ಎಂದಿದ್ದೇನೆ. ಅದಕ್ಕಿಂತ ಹೆಚ್ಚು ಮಾಡಲಾರೆ. ತೊಗೊಳ್ಳಿ —ಬಿಡಿ. (ಸವರನ್ನನ್ನು ತಮಟೆಯ ಮೇಲೆ ಎಸೆಯುತ್ತಾನೆ. ಕುದುರೆ ತೊಟ್ಟಿಯ ಮೇಲೆ ಕುಳಿತುಕೊಳ್ಳುತ್ತಾನೆ. ಸ್ನಾಬಿ ಪ್ರೈಸ್‌ಗೆ ಸವರನ್ನಿನ ಮೇಲೆ ಮೋಹ ಉಂಟಾಗುತ್ತದೆ, ಬೇಗ ಅವಕಾಶ ಪಡೆದುಕೊಂಡು ತನ್ನ ಟೋಪಿಯನ್ನು ಮೆಲ್ಲಗೆ ಅದರ ಮೇಲೆ ಹಾಕುತ್ತಾನೆ.)

—ಮಿಸೆಸ್ ಬೈನ್ಸ್ ನೆಲೆಯೊಳಗಿಂದ ಬರುತ್ತಾಳೆ. ಮುಕ್ತಿ ಸೇನೆಯ ಕಮಿಷನರಂತೆ ಉಡುಪು ಧರಿಸಿದ್ದಾಳೆ. ಶ್ರದ್ಧಾವಂತಳಾಗಿ ಕಾಣುವ ಹೆಂಗಸು. ವಯಸ್ಸು ಸುಮಾರು 40. ಪ್ರಿಯವಾದ ತ್ವರೆಯುಳ್ಳ ಧ್ವನಿ. ಆಕೆಯ ರೀತಿ ಒಲಿಸುವಂಥದ್ದು.—

ಬಾರ್ಬರ : ಇವರು ನಮ್ಮ ತಂದೆ, ಮಿಸೆಸ್. ಬೈನ್ಸ್.

(ಅಂಡರ್‌ಷಾಫ್ಟ್ ಮೇಜಿನ ಮೇಲೆ ಕುಳಿತಿದ್ದವನು ಬರುತ್ತಾನೆ.ಮರ್ಯಾದೆಯಿಂದ ತನ್ನ ಹ್ಯಾಟನ್ನು ಎತ್ತಿ ತೆಗೆಯುತ್ತಾನೆ). ಏನು ಮಾಡುತೀರೊ ನೋಡಿ. ಅವರು ನನ್ನ ಮಾತು ಕೇಳುವುದಿಲ್ಲ. ನಾನು ಮಗು ಆಗಿದ್ದಾಗ ಬುದ್ಧಿ ಇಲ್ಲದವಳಾಗಿದ್ದೆನಂತೆ. ಅದು ಅವರ ನೆನಪಿನಲ್ಲಿದೆ. ನನಗೆ ಅವರು ಕಿವಿಗೊಡುವುದಿಲ್ಲ. (ಅವರಿಬ್ಬರನ್ನೂ ಮಾತಾಡಲು ಬಿಟ್ಟು ತಾನು ಜೆನ್ನಿಯೊಡನೆ ಹರಟುತ್ತಾಳೆ)

ಮಿಸೆಸ್ ಬೈನ್ಸ್ : ತಮಗೆ ಆಶ್ರಯವನ್ನೆಲ್ಲ ತೋರಿಸಿದರೆ ಅಂಡರ್‌ಷಾಫ್ಟ್ ? ನಾವು ಮಾಡುತ್ತಿರುವ ಕೆಲಸವೆಲ್ಲ ನಿಮಗೆ ಗೊತ್ತೇ ಇದೆ.

ಅಂಡರ್‌ಷಾಫ್ಟ್ : (ಬಹು ಗೌರವದಿಂದ) ಇಡಿಯ ರಾಷ್ಟ್ರಕ್ಕೇ ಅದು ಗೊತ್ತಿದೆ, ಮಿಸೆಸ್ ಬೈನ್ಸ್ !

ಮಿಸೆಸ್ ಬೈನ್ಸ್ : ಇಲ್ಲ ಸ್ವಾಮಿ, ರಾಷ್ಟ್ರಕ್ಕೆಲ್ಲ ಗೊತ್ತಿಲ್ಲ. ಗೊತ್ತಿದ್ದಿದ್ದರೆ, ನಾಡಿನ ಮೇಲೆಲ್ಲ ನಡೆಯಬೇಕಾದ ಕೆಲಸ ನೆರವೇರಲು ಬೇಕಾದಷ್ಟು ಹಣವಿಲ್ಲದೆ ನಾವು ಹೀಗೆ ಕೈಮುಗಿದು ಇರುತ್ತಿರಲಿಲ್ಲ. ನಮ್ಮ ಯತ್ನವಿಲ್ಲದಿದ್ದರೆ ಈ ಸಲದ ಛಳಿಗಾಲದಲ್ಲಿ ಲಂಡನಿನಲ್ಲಿ ದಂಗೆಯಾಗುತ್ತಿತ್ತು.

ಅಂಡರ್‌ಷಾಫ್ಟ್ : ನಿಮಗೆ ನಿಜವಾಗಿ ಹಾಗೆ ತೋರುತ್ತದೆಯೆ ?

ಮಿಸೆಸ್ ಬೈನ್ಸ್ : ನನಗೆ ಗೊತ್ತಿದೆ ; ನನಗೆ 1886ರ ನೆನಪುಂಟು. ಬಡವರ ಕೂಗಿಗೆ ವಿರುದ್ಧವಾಗಿ ಐಶ್ವರ್ಯವಂತರಾದ ಸಭ್ಯರು ನೀವು, ನಿಮ್ಮ ಹೃದಯವನ್ನು ಕಲ್ಲು ಮಾಡಿಕೊಂಡಿರಿ. ಪೆಲ್‌ಮೆಲ್ ಅಲ್ಲಿನ ನಿಮ್ಮ ಕ್ಲಬ್ ಕಿಟಕಿಗಳನ್ನು ಅವರು ಒಡೆದುಹಾಕಿದರು.

ಅಂಡರ್‌ಷಾಫ್ಟ್ : (ಅವರ ಕಾರ್ಯ ರೀತಿಯನ್ನು ಒಪ್ಪುವಂತೆ ಕಳೆಗೊಂಡು) ಮ್ಯಾನ್ಷನ್ ಹೌಸ್ ನಿಧಿ ಮಾರನೆಯ ದಿನ 30,000 ದಿಂದ 79,000 ಪೌಂಡಿಗೆ ಏರಿತು. ಓ, ನನಗೆ ಚೆನ್ನಾಗಿ ನೆನಪಿದೆ.

ಮಿಸೆಸ್ ಬೈನ್ಸ್ : ಹಾಗಾದರೆ ಜನರಲ್ಲಿ ಕೆಲಸಮಾಡಲು ನೀವು ನಮಗೆ ನೆರವು ಕೊಡಬಹುದಲ್ಲವೆ ? ಅವರು ಆಗ ಕಿಟಕಿಗಳನ್ನು ಒಡೆಯುವುದಿಲ್ಲ. ಇಲ್ಲಿ ಬಾ, ಪ್ರೈಸ್. (ಪ್ರೈಸ್ ಬರುತ್ತಾನೆ) ನಿನ್ನನ್ನು ಈ ದೊಡ್ಡ ಮನುಷ್ಯರಿಗೆ ತೋರಿಸುತ್ತೇನೆ— (ಪ್ರೈಸ್ ಪರೀಕ್ಷಣಕ್ಕೆ ಬರುತ್ತಾನೆ) — ಕಿಟಕಿ ಒಡೆದದ್ದು ನಿನಗೆ ನೆನಪಿದೆಯೆ ?

ಪ್ರೈಸ್ : ನನ್ನ ಮುದಿ ತಂದೆ, ಅದನ್ನು ಕ್ರಾಂತಿ ಎಂದುಕೊಡರು ತಾಯಿ !

ಮಿಸೆಸ್ ಬೈನ್ಸ್ : ನಿನಗೆ ಈಗ ಕಿಟಕಿಗಳನ್ನು ಒಡೆಯಬೇಕೆನ್ನಿಸುತ್ತದೆಯೆ ?

ಪ್ರೈಸ್ : ಎಲ್ಲಾದರೂ ಉಂಟೆ, ತಾಯಿ ! ಸ್ವರ್ಗದ ಕಿಟಕಿಗಳು ಈಗ ನನಗೆ ತೆರೆಯಲಾಗಿವೆ. ಈಗ ನನಗೆ ಗೊತ್ತು, ಐಶ್ವರ್ಯವಂತನೂ ನನ್ನ ಹಾಗೆಯೇ ಪಾಪಿ ಎಂದು.

ರಮ್ಮಿ : (ಮೇಲೆ ಬಾಗಿಲಿಂದ ಕಾಣಿಸಿಕೊಳ್ಳುತ್ತ) ಸ್ನಾಬಿ ಪ್ರೈಸ್ !

ಪ್ರೈಸ್ : ಏನದು ?

ರಮ್ಮಿ : ಕ್ರಿಪ್ಸ್ ಬೀದಿಯಲ್ಲಿರುವ ಈ ಗೇಟಲ್ಲಿ ನಿಮ್ಮ ತಾಯಿ ನಿನ್ನನ್ನು ಹುಡುಕುತ್ತಿದ್ದಾಳೆ. ನಿನ್ನ ಪಾಪವನ್ನು ನೀನು ಒಪ್ಪಿಕೊಂಡಿದ್ದನ್ನು ಆಕೆ ಕೇಳಿದಳಂತೆ. (ಪ್ರೈಸ್ ಬಿಳಿಚಿಕೊಳ್ಳುವನು.)

ಮಿಸೆಸ್ ಬೈನ್ಸ್ : ಹೋಗು ಪ್ರೈಸ್. ಅವಳೊಡನೆ ಪ್ರಾರ್ಥಿಸು.

ಜೆನ್ನಿ : ಆಶ್ರಯದ ಒಳಗಿಂದಲೇ ಹೋಗಬಹುದು ಸ್ನಾಬಿ.

ಪ್ರೈಸ್ : (ಮಿಸೆಸ್ ಬೈನ್ಸಿಗೆ) ನನ್ನ ಪಾಪಗಳ ಭಾರವೆಲ್ಲ ಹೊಸದಾಗಿ ನನ್ನ ತಲೆಯ ಮೇಲಿರುವ ಈಗ, ಆಕೆಯ ಮುಖವನ್ನು ನಾನು ಹೇಗೆ ನೋಡಲಿ ತಾಯಿ ! ತನ್ನ ಮಗನು ಮನೆಗೆ ಹೋಗಿ ಆಕೆಗಾಗಿ ಪ್ರಾರ್ಥಿಸುತ್ತ ಕಾಯುತ್ತಿರುವನೆಂದು ಆಕೆಗೆ ತಿಳಿಸಿ.

(ಗೇಟಿನ ಮೂಲಕ ತಪ್ಪಿಸಿಕೊಂಡು ಹೋಗುತ್ತಾನೆ. ಜೊತೆಯಲ್ಲಿ ತಮ್ಮಟೆಯ ಮೇಲಿಂದ ತನ್ನ ಟೋಪಿಯನ್ನು ಎತ್ತಿಕೊಳ್ಳುವಾಗ ಸವರನ್ ಕದಿಯುತ್ತಾನೆ.)

ಮಿಸೆಸ್ ಬೈನ್ಸ್ : (ಕಣ್ಣುಗಳು ಈಜುವಂತಿರಲು) ನಿಮ್ಮಗಳ ಮೇಲಿನ ಕೋಪವನ್ನೂ ಕಹಿಯನ್ನೂ ಅವರ ಹೃದಯಗಳಿಂದ ಹೇಗೆ ತೆಗೆದು ಹಾಕುತ್ತೇವೆ—ನಿಮಗೆ ಕಾಣುವುದಿಲ್ಲವೆ ಅಂಡರ್‌ಷಾಫ್ಟ್ ?

ಅಂಡರ್‌ಷಾಫ್ಟ್ : ಹೆಚ್ಚು ಸಂಖ್ಯೆಯ ಕಾಮಗಾರರನ್ನು ಕೆಲಸಕ್ಕಿಟ್ಟುಕೊಳ್ಳುವ ಎಲ್ಲ ದೊಡ್ಡ ಮಾಲಕರಿಗೂ ಇದರಿಂದ ತುಂಬಾ ಅನುಕೂಲವಾಗುತ್ತದೆ. ನಿಜವಾಗಿ ಸಮಾಧಾನವಾಗುತ್ತದೆ, ಮಿಸೆಸ್ ಬೈನ್ಸ್.

ಮಿಸೆಸ್ ಬೈನ್ಸ್ : ಬಾರ್ಬರ, ಜೆನ್ನಿ, ನಿಮಗೆ ಒಳ್ಳೆ ಸುದ್ದಿ ಹೇಳ್ತೀನೆ. ಬಹು ಅಚ್ಚರಿಯ ಸುದ್ದಿ. (ಜೆನ್ನಿ ಓಡಿಬರುತ್ತಾಳೆ) ನನ್ನ ಪ್ರಾರ್ಥನೆ ನೆರವೇರಿತು. ಹಾಗಾಗುತ್ತೆ ಎಂದು ನಿನಗೆ ಹೇಳಿದ್ದೆ, ಅಲ್ಲವೆ ಜೆನ್ನಿ ?

ಜೆನ್ನಿ : ಹೌದು, ಹೌದು ;

ಬಾರ್ಬರ : (ತಮಟೆಯ ಹೆಚ್ಚು ಹತ್ತಿರಕ್ಕೆ ಬಂದು) ಆಶ್ರಯವನ್ನು ತೆರೆದು ನಡಸುವುದಕ್ಕೆ ಬೇಕಾದ ಹಣ ಸಿಕ್ಕಿತೆ ?

ಮಿಸೆಸ್ ಬೈನ್ಸ್ : ಎಲ್ಲ ಆಶ್ರಯಗಳನ್ನೂ ತೆರೆದಿಡಲು ಸಾಕಾಗುವಷ್ಟು ಹಣ ಸಿಕ್ಕುವುದೆಂದು ನನ್ನ ಭರವಸೆ. ಲಾರ್ಡ್ ಸ್ಯಾಕ್ಸ್‌ಮುಂಡ್‌ಹಂ, 5000 ಪೌಂಡು ಕೊಡುತ್ತೇನೆಂದು ಮಾತು ಕೊಟ್ಟಿದ್ದಾರೆ.

ಬಾರ್ಬರ : ಉಘೇ !

ಜೆನ್ನಿ : ದಿವ್ಯವಾಯಿತು.

ಮಿಸೆಸ್ ಬೈನ್ಸ್ : ಆದರೆ—

ಬಾರ್ಬರ : ರೆ...?...ಏನಾದರೆ ?

ಮಿಸೆಸ್ ಬೈನ್ಸ್ : ಐದು ಮಂದಿ ಇತರ ದೊಡ್ಡ ಮನುಷ್ಯರು ಒಬ್ಬೊಬ್ಬರು ಒಂದೊಂದು ಸಾವಿರ ಕೊಟ್ಟು ಅದನ್ನು 10,000 ಮಾಡುವುದಾದರೆ.

ಬಾರ್ಬರ : ಲಾರ್ಡ್ ಸ್ಯಾಕ್ಸ್‌ಮುಂಡ್‌ಹಂ ಯಾರು ? ಅವರ ಹೆಸರನ್ನೇ ನಾನು ಹಿಂದೆ ಕೇಳಿಲ್ಲ.

ಅಂಡರ್‌ಷಾಫ್ಟ್ : (ಶ್ರೀಮಂತನ ಹೆಸರನ್ನು ಕೇಳಿ ಅವನ ಕಿವಿ ನೆಟ್ಟಗಾಗಿವೆ. ಕುತೂಹಲದಿಂದ ಪ್ರತೀಕ್ಷಿಸುತ್ತ) ಹೊಸದಾಗಿ ಆದ ನಿರ್ಮಾಣ, ಮಗು. ಸರ್ ಹಾರೆಸ್ ಬಾಜ್ಜರ್ ಅವರ ಹೆಸರನ್ನು ಕೇಳಿದ್ದೀಯಲ್ಲವೆ ?

ಬಾರ್ಬರ : ಬಾಜ್ಜರ್ ? ಆ ಸಾರಾಯಿ ಭಟ್ಟಿ ಇಳಿಸುವವನೆ ? ಬಾಜ್ಜರ್ ವ್ಹಿಸ್ಕಿ !

ಅಂಡರ್‌ಷಾಫ್ಟ್ : ಆತನೇ. ನಮ್ಮ ಸಾರ್ವಜನಿಕ ಉಪಕಾರಿಗಳಲ್ಲಿ ಬಹು ದೊಡ್ಡವರಲ್ಲಿ ಆತನೊಬ್ಬ. ಹಾಕಿಂಗ್‌ಟನ್ನಲ್ಲಿನ ದೊಡ್ಡ ಚರ್ಚನ್ನು ಆತನೇ ಸರಿ ಮಾಡಿಸಿದ್ದು. ಆದಕ್ಕಾಗಿ ಅವರಿಗೆ ನೈಟ್ ಪದವಿ ಕೊಟ್ಟರು. ತನ್ನ ಪಕ್ಷದ ನಿಧಿಗೆ

ಐದು ಲಕ್ಷ ಪೌಂಡು ಕೊಟ್ಟರು. ಅದಕ್ಕೆ ಅವರನ್ನು ಈ ಶ್ರೀಮಂತರನ್ನಾಗಿ ಮಾಡಿದರು.

ಪರ್ಲ್ಲಿ : ಈ 5000ಕ್ಕೆ ಅವರಿಗೇನು ಕೊಡ್ತಾರೆ ?

ಅಂಡರ್‌ಷಾಫ್ಟ್ : ಆತನಿಗೆ ಕೊಡೋದಕ್ಕೆ ಇನ್ನೇನೂ ಉಳಿದಿಲ್ಲ. ಈ 5000, ನನ್ನ ಅಭಿಪ್ರಾಯದಲ್ಲಿ, ಆತ್ಮದ ಮುಕ್ತಿಗೆ ಎನ್ನಿಸುತ್ತದೆ.

ಮಿಸೆಸ್ ಬೈನ್ಸ್ : ದೇವರು ಅದನ್ನು ಅನುಗ್ರಹಿಸಲಿ. ನಿಮಗೆ ಕೆಲವರು ಬಹಳ ಹಣವಂತರಾದ ಸ್ನೇಹಿತರಿದ್ದಾರೆ, ಮಿ. ಅಂಡರ್‌ಷಾಫ್ಟ್. ನಮಗೆ ಆ 5000 ಕೊಡುವಂತೆ ನೀವು ಸಹಾಯ ಮಾಡಲಾರಿರ ? ಈ ಅಪರಾಹ್ನ ಮೈಲ್ ಎಂಡ್ ರಸ್ತೆಯ ಸಭಾಮಂದಿರದಲ್ಲಿ ನಾವು ಒಂದು ದೊಡ್ಡ ಸಭೆಯ ಅಧಿವೇಶನವನ್ನು ನಡಸಬೇಕೆಂದಿದ್ದೇವೆ. ಶ್ರೀಮಂತ ಸ್ನ್ಯಾಕ್ಸ್ ಮುಂಡ್‌ಹಂ ಅವರನ್ನು ಅನುಮೋದಿಸಿ ಒಬ್ಬ ದೊಡ್ಡ ಮನುಷ್ಯರು ನೆರವು ಕೊಡುತ್ತಾರೆಂದು ನಾನು ಪ್ರಕಟಿಸಬಲ್ಲೆನಾದರೆ ಇತರರು ಮುಂದೆ ಬರುತ್ತಾರೆ. ನಿಮಗೆ ಯಾರಾದರೂ ಗೊತ್ತಿರಬೇಕಲ್ಲವೆ ? ನೀವು ಕೊಡಲಾರಿರ ? (ಅವಳ ಕಣ್ಣ ತುಂಬಾ ನೀರು ಸುರಿಯುತ್ತದೆ.) ಆ ಬಡವರನ್ನು ಕುರಿತು ಯೋಚಿಸಿ, ಮಿ. ಅಂಡರ್‌ಷಾಫ್ಟ್ ಅವರೆ. ಅವರಿಗೆ ಅದರಿಂದ ಎಷ್ಟು ಪ್ರಯೋಜನವಾಗುತ್ತದೆ ! ನಿಮ್ಮಂಥ ದೊಡ್ಡವರಿಗೆ ಇದೆಷ್ಟು ಅಲ್ಪವಾದ್ದು !

ಅಂಡರ್‌ಷಾಫ್ಟ್ : (ವ್ಯಂಗ್ಯ ಸಾಹಸದಿಂದ) ಮಿಸೆಸ್ ಬೈನ್ಸ್. ನಿಮ್ಮ ಮಾತನ್ನು ಮೀರಬಲ್ಲವರು ಯಾರು ? ನಿಮ್ಮ ನಿರೀಕ್ಷೆಯನ್ನು ಮುರಿಯಲಾರೆ. ಬಾಜ್ಜರ್ ಕೈಯಿಂದ ಹಣ ಕಕ್ಕಿಸುವ ತೃಪ್ತಿಯನ್ನೂ ನಾನು ಕಳೆದುಕೊಳ್ಳಲಾರೆ. ನಿಮಗೆ ಬೇಕಾದ ಐದು ಸಾವಿರ ಪೌಂಡು ಒದಗಿಸಿ ಕೊಡುತೇನಮ್ಮ.

ಮಿಸೆಸ್ ಬೈನ್ಸ್ : ದೇವರು ದೊಡ್ಡವ.

ಅಂಡರ್‌ಷಾಫ್ಟ್ : ನನಗೆ ವಂದನೆ ಬೇಡ.

ಮಿಸೆಸ್ ಬೈನ್ಸ್ : ಸ್ವಾಮಿ. ಅಶ್ರದ್ಧೆಯ ಕೀಟಲೆ ನಿಮಗೆ ತಕ್ಕುದಲ್ಲ. ಒಳ್ಳೆಯ ಸಜ್ಜನರಾಗುವುದಕ್ಕೆ ನಾಚಿಕೆ ಪಡಬೇಡಿ. ದೇವರು ನಿಮ್ಮನ್ನು ಪುಷ್ಕಳವಾಗಿ ಹರಸುತ್ತಾನೆ. ನೀವು ಬದುಕಿರುವಷ್ಟು ಕಾಲವೂ ಒಂದು ಬಲವಾದ ಕೋಟೆಯಂತೆ ನಮ್ಮ ಪ್ರಾರ್ಥನೆ ನಿಮ್ಮನ್ನು ಸುತ್ತಿರುತ್ತದೆ. (ಒಂದು ಎಚ್ಚರಿಕೆಯಿಂದ) ಸಭೆಯ ಮುಂದೆ ತೋರಿಸಲು ನನ್ನ ಕೈಗೆ ಚೆಕ್ಕು ಕೊಡುತೀರಲ್ಲಾ ! ಜೆನ್ನಿ ಒಳಗೆ ಹೋಗು, ಪೇನ, ಮಸಿ ತೊಗೊಂಡು ಬಾ.

(ಜೆನ್ನಿ ಆಶ್ರಯದ ಒಳಕ್ಕೆ ಓಡುವಳು)

ಅಂಡರ್‌ಷಾಫ್ಟ್ : ಹಿಲ್ಲಿಗೆ ತೊಂದರೆ ಕೊಡಬೇಡಿ. ನನ್ನಲ್ಲಿ ಫೌಂಟೆನ್ ಪೆನ್ ಇದೆ. (ಜೆನ್ನಿ ತಡೆದು ನಿಲ್ಲುತ್ತಾಳೆ. ಅವನು ಮೇಜಿನ ಬಳಿ ಕುಳಿತು ಚೆಕ್ಕು ಬರೆಯಲು

ತೊಡಗುತ್ತಾನೆ. ಕಸಿನ್ಸ್ ಎದ್ದು ಅವನಿಗೆ ಸ್ಥಳ ಮಾಡಿಕೊಡುತ್ತಾನೆ. ಎಲ್ಲರೂ ಮೌನ ವಾಗಿ ಅವನನ್ನು ನಿರೀಕ್ಷಿಸುತ್ತಾರೆ.)

ಬಿಲ್ : (ಕುಚೇಷ್ಟೆಯಿಂದ ಬಾರ್ಬರ ಕಡೆ ತಿರುಗಿ, ಧ್ವನಿ, ಸ್ವರಘಾತ, ಅತಿ ವಿರಸ ವಾಗಿರಲು) ಮುಕ್ತಿಯ ಬೆಲೆ ಈಗ ಎಷ್ಟು ?

ಬಾರ್ಬರ : ತಡೆಯಿರಿ. (ಅಂಡರ್‌ಷಾಫ್ಟ್ ಬರೆಯುವುದನ್ನು ನಿಲ್ಲಿಸುತ್ತಾನೆ. ಎಲ್ಲರೂ ಅವಳ ಕಡೆ ತಿರುಗುತ್ತಾರೆ) ಮಿಸೆಸ್. ಬೈನ್ಸ್, ನೀವು ನಿಜವಾಗಿ ಈ ಹಣವನ್ನು ತೆಗೆದುಕೊಳ್ಳುತ್ತೀರ ?

ಮಿಸೆಸ್ ಬೈನ್ಸ್ : (ವಿಸ್ಮಯದಿಂದ) ಯಾಕೆ ಕೂಡದು, ಮಗು ?

ಬಾರ್ಬರ : ಯಾಕೊ ಕೂಡದು ! ನಮ್ಮ ತಂದೆ ಯಾರು ಎಂದು ನಿಮಗೆ ಗೊತ್ತಿದೆಯ ? ಶ್ರೀಮಂತ ಸ್ಯಾಕ್ಸ್ ಮುಂಡ್‌ಹಂ, ವ್ಹಿಸ್ಕಿ ಮಾರುವ ಬಾಜ್ಜರ್ ಎಂಬುದನ್ನು ಮರೆತಿರ ? ಪೌರಸಭೆಯನ್ನು ಬೇಡಿಕೊಂಡು ಆತನು ತನ್ನ ವ್ಹಿಸ್ಕಿ ಪ್ರಕಟಣೆಯನ್ನು ಉರಿಯುವ ಅಕ್ಷರಗಳಲ್ಲಿ ಆಕಾಶದಲ್ಲಿ ಬರೆಯುವುದನ್ನು ತಡೆಯಬೇಕೆಂದು ನಾನು ಕೇಳಿದುದು ನಿಮಗೆ ನೆನಪಿದೆಯೆ ? ಆ ದುಷ್ಟ ಅಕ್ಷರ ಗಳನ್ನು ಆಕಾಶದಲ್ಲಿ ಕಂಡು ಆ ಪಾನದಿಂದ ನಾಶವಾದ ಬಡಪ್ರಾಣಿಗಳು ತಮ್ಮ ಅರೆಬರೆ ನಿದ್ದೆಯಿಂದ ಎಚ್ಚತ್ತಾಗ ನದಿಯ ಕಟ್ಟೆಯಲ್ಲಿ ಮಲಗಿದ್ದವರು ತಮ್ಮ ನಾಶಕರ ದಾಹವನ್ನು ಜ್ಞಾಪಿಸಿಕೊಳ್ಳದಿರಲಿ ಎಂದಲ್ಲವೆ ? ಇಲ್ಲಿ ನಾನು ಹೋರಾಡ ಬೇಕಾದುದರಲ್ಲಿ ಅತಿದುಷ್ಟ ಪ್ರಭಾವ ದೆವ್ವದ್ದಲ್ಲ. ಬಾಜ್ಜರ್,ಬಾಜ್ಜರ್, ಬಾಜ್ಜರ್ —ಅವನ ವ್ಹಿಸ್ಕಿ, ಅವನ ಭಟ್ಟಿಗೃಹಗಳು, ಅವನಿಟ್ಟು ನಡಸುತ್ತಿರುವ ಸುತ್ತಲಿನ ಎಲ್ಲ ಅಂಗಡಿಗಳು— ಎಂಬುದು ನಿಮಗೆ ಗೊತ್ತಿದೆಯೆ ? ನಮ್ಮ ನೆಲೆಯನ್ನು ಅವನಿಟ್ಟ ಇನ್ನೊಂದು ಅಂಗಡಿಯನ್ನಾಗಿ ಮಾಡಿ ಅದನ್ನು ನಡಸಲು ನನ್ನನ್ನು ಕೇಳುವಿರ ?

ಬಿಲ್ : ಆ ವ್ಹಿಸ್ಕಿ ಕೂಡ ಎಂಥ ಅಧ್ವಾನ್ನ ವ್ಹಿಸ್ಕಿ !

ಮಿಸೆಸ್ ಬೈನ್ಸ್ : ಮಗು ಬಾರ್ಬರ, ಶ್ರೀಮಂತ ಸ್ಯಾಕ್ಸ್ ಮುಂಡ್‌ಹಂ ಅವರಿಗೂ ನಮ್ಮ ಯಾರಿಗಿರುವಂತೆಯೇ ಮುಕ್ತಿಗೊಳ್ಳಬೇಕಾದ ಜೀವವಿದೆ. ಆತನ ಹಣ ಒಂದು ಒಳ್ಳೆಯ ಪ್ರಯೋಜನಕ್ಕೆ ದಾರಿಯಾಗಬೇಕೆಂಬುದು ದೇವರ ಇಚ್ಛೆ ಯಾದರೆ ನಮ್ಮ ಪ್ರಾರ್ಥನೆಗೆ ಬಂದ ಉತ್ತರಕ್ಕೆ ನಾವು ಪ್ರತಿನಿಲ್ಲಬಹುದೆ ?

ಬಾರ್ಬರ : ಅವನಿಗೂ ಒಂದು ಆತ್ಮ ಇದೆ. ಅದಕ್ಕೆ ಮುಕ್ತಿಬೇಕು ಎಂಬುದನ್ನು ನಾನು ಬಲ್ಲೆ. ಅವನು ಇಲ್ಲಿಗೆ ಬರಲಿ. ಆತನಿಗೆ ಮುಕ್ತಿ ದೊರೆಯಲು ನೆರವು ಕೊಡಲು ನನ್ನ ಕೈಯಲ್ಲಾದ್ದನ್ನೆಲ್ಲ ಮಾಡುತ್ತೇನೆ. ಆದರೆ ಅವನ ಇಷ್ಟವೇನು ? ತನ್ನ ಚೆಕ್ಕನ್ನು ಕೊಟ್ಟು ನಮ್ಮನ್ನು ಕೊಂಡುಕೊಂಡು ಎಂದಿನಂತೆಯೇ ದುಷ್ಟನಾಗಿ ಇರಲು ಬಯಸುತ್ತಾನೆ.

ಅಂಡರ್‌ಷಾಫ್ಟ್ : (ಯುಕ್ತಿಯುಕ್ತವಾಗಿ—ಕಸಿನ್ಸ್ ಒಬ್ಬನಿಗೆ ಮಾತ್ರ ಒಳಗಿನ ವ್ಯಂಗ್ಯ ಅರ್ಥವಾಗುವಂತೆ) ಬಾರ್ಬರ ಮಗು, ಮದ್ಯಸಾರ ಬಹಳ ಅವಶ್ಯಕವಾದ ಪದಾರ್ಥ—ಕಾಯಿಲೆಯಲ್ಲಿರುವವರ ಗಾಯ ಮಾಯಿಸುತ್ತದೆ.

ಬಾರ್ಬರ : ಅಂಥದೇನನ್ನೂ ಮಾಡುವುದಿಲ್ಲ.

ಅಂಡರ್‌ಷಾಫ್ಟ್ : ಹೋಗಲಿ, ವೈದ್ಯರಿಗೆ ನೆರವಾಗುತ್ತದೆ. ಹಾಗೆ ಹೇಳಿದರೆ ಅದರ ಪ್ರಯೋಜನವನ್ನು ನೀನು ಪ್ರಶ್ನಿಸಲಾರೆ ಎನ್ನಬಹುದೆ !—ಕುಡಿಯದೆ ಅಪ್ರಮತ್ತ ಲಕ್ಷಾಂತರ ಜನಕ್ಕೆ ಬದುಕು ದುರ್ಭರವಾಗುತ್ತಿತ್ತು. ಅಂಥವರಿಗೆ ಅದನ್ನು ತಾಳಿಕೊಳ್ಳುವಂತೆ ಮಾಡುತ್ತದೆ. ಬುದ್ಧಿ ನೆಟ್ಟಗಿರುವ ಯಾವ ಮನುಷ್ಯನೂ ಬೆಳಿಗ್ಗೆ 11 ಗಂಟೆಗೆ ಮಾಡದಿರುವ ಕೆಲಸವನ್ನು ರಾತ್ರಿ 11 ಗಂಟೆಯಲ್ಲಿ ಪಾರ್ಲಿಮೆಂಟ್ ಮಾಡಲು ಸಹಾಯಮಾಡುತ್ತದೆ. ಈ ಅಮೂಲ್ಯ ಪದಾರ್ಥವನ್ನು ಬಡವರಲ್ಲಿ ನೂರಕ್ಕೆ ಒಂದಕ್ಕಿಂತ ಕಡಮೆ ಮಂದಿ ದುಷ್ಪ್ರಯೋಗ ಮಾಡಿದರೆ ಅದು ಬಾಜ್ಜರ್ ತಪ್ಪೆ ? (ಮೇಜಿನ ಕಡೆಗೆ ತಿರುಗಿ ಚೆಕ್ಕಿಗೆ ಸಹಿ ಮಾಡಿ, ಅಡ್ಡಗೀಟು ಎಳೆಯುತ್ತಾನೆ).

ಮಿಸೆಸ್ ಬೈನ್ಸ್ : ಬಾರ್ಬರ, ಯಾರ ಜೀವಗಳನ್ನು ನಾವು ರಕ್ಷಿಸುತ್ತಿದ್ದೆವೊ ಅವರೆಲ್ಲ ನಾಳೆ ಬಂದು, ಅವರ ಕಣ್ಣೆದುರಿಗೆ ನಮ್ಮ ಆಶ್ರಯದ ಎಲ್ಲ ಬಾಗಿಲು ಮುಚ್ಚಿರುವುದನ್ನು ಕಂಡರೆ, ಕುಡಿತ ಕಡಮೆಯಾಗುತ್ತದೆಯೊ ? ಹೆಚ್ಚುತ್ತದೆಯೊ ? ಶ್ರೀಮಂತ ಸ್ಯಾಕ್ಸ್ ಮುಂಡ್‌ಹಂ ಅವರು ಕುಡಿತವನ್ನು ನಿಲ್ಲಿಸುವುದಕ್ಕೆ ಎಂದರೆ, ತಮ್ಮ ವ್ಯಾಪಾರವೇ ಕಡಮೆಯಾಗಿಸುವಂತೆ ನಮಗೆ ಹಣ ಕೊಡುತ್ತಾರೆ.

ಕಸಿನ್ಸ್ : (ಕುಚೇಷ್ಟೆಯಿಂದ) ಶುದ್ಧ ನಿಃಸ್ವಾರ್ಥತೆ ಬಾಜ್ಜರದು. ಸ್ಪಷ್ಟವಾಗಿ, ದೇವರು ಬಾಜ್ಜರಿಗೆ ಒಳ್ಳೆಯದನ್ನು ಮಾಡಲಿ.

(ಅಡಾಲ್ಫಸ್ ಕೂಡ ತನಗೆ ನೆರವಾಗದ್ದನ್ನು ಕಂಡು ಬಾರ್ಬರ ಅಧೀರಳಾಗುತ್ತಾಳೆ.)

ಅಂಡರ್‌ಷಾಫ್ಟ್ : (ಚೆಕ್ಕನ್ನು ಬಿಡಿಸಿ, ಚೆಕ್ ಪುಸ್ತಕವನ್ನು ಜೇಬಿನಲ್ಲಿ ಹಾಕಿಕೊಂಡು ಎದ್ದು, ಕಸಿನ್ಸನ್ನು ದಾಟಿ, ಮಿಸೆಸ್ ಬೈನ್ಸ್ ಕಡೆಗೆ ಹೋಗುತ್ತ) ಮಿಸೆಸ್ ಬೈನ್ಸ್, ನನಗೂ ಸ್ವಲ್ಪ ನಿಃಸ್ವಾರ್ಥತೆ ಇದೆ ಎಂದುಕೊಂಡಿದ್ದೇನೆ. ನನ್ನ ಉದ್ಯೋಗವನ್ನು ಕುರಿತು ಯೋಚಿಸಿ. ವಿಧವೆಯರನ್ನೂ ತಬ್ಬಲಿಯಾಗುವವರನ್ನೂ ನೆನಸಿಕೊಳ್ಳಿ. ಸ್ಫೋಟಕಗಳಲ್ಲಿರುವ ಹರಿತವಾದ ಪದಾರ್ಥಗಳಿಂದ ಚೂರುಚೂರಾಗುವ ಮತ್ತು ಗುಂಡಿನಲ್ಲಿರುವ ಸೀಸಗಳ ವಿಷ ಮುರಿದು ಕೊಲ್ಲುವ ಗಂಡುಗಳನ್ನೂ ಹುಡುಗರನ್ನೂ ಕುರಿತು ಯೋಚಿಸಿ. (ಮಿಸೆಸ್ ಬೈನ್ಸ್ ಸೆಡೆಯುತ್ತಾಳೆ. ಅಂಡರ್‌ಷಾಫ್ಟ್ ಪಶ್ಚಾತ್ತಾಪವಿಲ್ಲದೆ ಮುಂದುವರಿಯುತ್ತಾನೆ.) ಸಾಗರಗಳಾಗಿ ರಕ್ತ ಹರಿಯುತ್ತದೆ. ಅದರಲ್ಲಿ ಒಂದು

ತೊಟ್ಟೂ ನ್ಯಾಯವಾದ ತತ್ವಕ್ಕಾಗಿ ನಿಜವಾಗಿ ಸುರಿಯುವುದಿಲ್ಲ. ಯೋಚಿಸಿ. ಬೆಳೆಗಳು ಎಲ್ಲಾ ನಾಶವೇ. ಶಾಂತರಾದ ರೈತರು ಬಲಾತ್ಕಾರಕ್ಕೆ ಈಡಾಗುತ್ತಾರೆ. ಪರಸ್ಪರ ವಿರುದ್ಧವಾಗಿ ಹೋರಾಡುವ ಸೈನ್ಯಗಳ ಬೆಂಕಿ ಕಾರುತ್ತಿರಲು, ಹೆಂಗಸರೂ ಗಂಡಸರೂ ಉಪವಾಸದ ಹೆದರಿಕೆಯಿಂದ ತಮ್ಮ ಜಮೀನನ್ನು ಬೇಸಾಯ ಮಾಡಬೇಕಾಗುತ್ತದೆ. ಒಳನಾಡಿನಲ್ಲಿರುವ ಉಗ್ರಕ್ಷುದ್ರ ಹೇಡಿಗಳು ತಮ್ಮ ರಾಷ್ಟ್ರೀಯ ಹೆಮ್ಮೆಯ ಸಾಧನೆಗಾಗಿ ಇತರರು ಯುದ್ಧಮಾಡಬೇಕೆಂದು ಉತ್ತೇಜನಗೊಳಿಸುವರಲ್ಲಾ—ಅವರ ಆಕ್ರೋಶವನ್ನು ಯೋಚಿಸಿ. ಈ ಎಲ್ಲದರಿಂದಲೂ ನನಗೆ ಹಣದ ಗಳಿಕೆಯಾಗುತ್ತದೆ. ಪೇಪರುಗಳ ತುಂಬಾ ಈ ಸಂಗತಿಗಳು ಇರುವಾಗಿಗಿಂತ ನಾನು ಎಂದೂ ಹೆಚ್ಚು ಸಿರಿವಂತನಲ್ಲ ; ಹೆಚ್ಚು ಉದ್ಯೋಗಿಯಲ್ಲ. ಹೇಗಾದರಾಗಲಿ, ಭೂಮಿಯ ಮೇಲೆ ಶಾಂತಿ ಬರಲೆಂದು ಬೋಧಿಸುವುದು, ಜನರಲ್ಲಿ ಸೌಮನಸ್ಸಿರಲಿ ಎಂದು ಬೋಧಿಸುವುದು, ನಿಮ್ಮ ಕೆಲಸ. (ಮಿಸೆಸ್ ಬೈನ್ಸ್ ಮುಖ ಕಳೆಗೊಳ್ಳುತ್ತದೆ) ನೀವು ತಿರುಗಿಸುವ ಒಂದೊಂದು ಮನಸ್ಸೂ ಯುದ್ಧಕ್ಕೆ ವಿರುದ್ಧವಾಗಿ ಕೊಟ್ಟ ಅಭಿಮತ. (ಆಕೆಯ ತುಟಿಗಳು ಪ್ರಾರ್ಥನೆಯಲ್ಲಿ ಚಲಿಸುತ್ತವೆ.) ಆದರೂ ನಿಮಗೆ ಈ ಹಣವನ್ನು ಕೊಟ್ಟು ನನ್ನ ವ್ಯಾಪಾರದ ನಾಶ ತ್ವರೆಗೊಳ್ಳುವಂತೆ ನಿಮಗೆ ಸಹಾಯ ಮಾಡುತ್ತಿದ್ದೇನೆ. (ಆಕೆಗೆ ಚೆಕ್ಕನ್ನು ಕೊಡುತ್ತಾನೆ.)

ಮಿಸೆಸ್ ಬೈನ್ಸ್ : (ಚೆಕ್ಕನ್ನು ತೆಗೆದುಕೊಂಡು) ಹೆಚ್ಚು ಕಾಲ ಬದುಕಿದಷ್ಟೂ ಯಾವುದೊ ಒಂದು ಅಪಾರವಾದ ಒಳ್ಳೆಯತನ ಎಲ್ಲವನ್ನೂ ಬೇಗಲೊ ಆಮೇಲೊ ಮುಕ್ತಿಯ ಕೆಲಸಕ್ಕೆ ತಿರುಗಿಸುತ್ತದೆ ಎಂಬುದಕ್ಕೆ ನನಗೆ ಹೆಚ್ಚು ಪ್ರಮಾಣ ದೊರಕುತ್ತಿದೆ. ಯುದ್ಧದಿಂದಲೂ ಕುಡಿತದಿಂದಲೂ ಒಳ್ಳೆಯದುಂಟಾಗುತ್ತದೆಂಬುದನ್ನು ಯಾರು ಯೋಚಿಸಬಹುದಿತ್ತು ? ಆದಾಗ್ಯೂ ಅವುಗಳ ಲಾಭ ಮುಕ್ತಿಯ ಪಾದಕ್ಕೆ ಈಗ ಬಂದಿದೆ. ಅದರ ದಿವ್ಯಕಾರ್ಯ ಮುಂದುವರಿಯಲಿ ಎಂದು— (ಆಕೆಯ ಕಣ್ಣಲ್ಲಿ ನೀರು ತುಂಬುತ್ತದೆ.)

ಜೆನ್ನಿ : (ಮಿಸೆಸ್ ಬೈನ್ಸ್ ಬಳಿಗೆ ಓಡಿಹೋಗಿ ತನ್ನ ತೋಳನ್ನು ಆಕೆಯ ಸುತ್ತಲೂ ಕವಿಯುತ್ತಾಳೆ.) ಏನೆನ್ನೋಣ. ಎಷ್ಟು ಪರಿಶುದ್ಧ. ಎಷ್ಟು ದಿವ್ಯ, ಇವೆಲ್ಲ.

ಕಸಿನ್ಸ್ : (ವ್ಯಂಗ್ಯದ ಸೆಳೆತದಲ್ಲಿ) ಅನಿರ್ವಚನೀಯವಾದ ಈ ಸಮಯವನ್ನು ನಾವು ಬಳಸಿಕೊಳ್ಳೋಣ. ಮಹಾಸಭೆಗೆ ತಕ್ಷಣ ಉತ್ಸವದಿಂದ ಹೋಗೋಣ. ಒಂದು ನಿಮಿಷ ದಯವಿಟ್ಟು ಕ್ಷಮಿಸಿ. (ಆಶ್ರಯದೊಳಕ್ಕೆ ನುಗ್ಗುತ್ತಾನೆ. ಜೆನ್ನಿ ತಮಟೆಯ ಸ್ಥಾನದಿಂದ ತನ್ನ ಖಂಜರಿಯನ್ನು ತೆಗೆದುಕೊಳ್ಳುತ್ತಾಳೆ.)

ಮಿಸೆಸ್ ಬೈನ್ಸ್ : ಮಿ. ಅಂಡರ್‌ಷಾಫ್ಟ್, ಸಾವಿರ ಜನ ಒಂದು ಮನಃಪ್ರವೃತ್ತಿಯಿಂದ ತಮ್ಮ ಮೊಣಕಾಲೂರಿ ಪ್ರಾರ್ಥಿಸುವುದನ್ನು ನೀವು ಎಂದಾದರೂ

ನೋಡಿದ್ದೀರ ? ನಮ್ಮೊಡನೆ ಸಭೆಗೆ ಬನ್ನಿ. ಸೇನೆ ರಕ್ಷಿತವಾಯಿತೆಂದು, ನಿಮ್ಮ ಮೂಲಕ ಅದು ಬದುಕಿತೆಂದು, ಅವರಿಗೆ ಬಾರ್ಬರ ಹೇಳಲಿದ್ದಾಳೆ.

ಕಸಿನ್ಸ್ : (ಆವೇಗದಲ್ಲಿ ಆಶ್ರಯದಿಂದ ಒಂದು ಬಾವುಟವನ್ನು ಒಂದು ಟ್ರಾಂಬೋನನ್ನು ತೆಗೆದುಕೊಂಡು ಹಿಂದಿರುಗುತ್ತಾನೆ. ಮಿಸೆಸ್ ಬೈನ್ಸ್—ಅಂಡರ್‌ಷಾಫ್ಟ್‌ರ ನಡುವೆ ಬಂದು) ಮೊದಲನೆಯ ರಸ್ತೆಯಲ್ಲಿ ನೀವು ಬಾವುಟವನ್ನು ಹಿಡಿದು ನಡೆಯಿರಿ ಮಿಸೆಸ್ ಬೈನ್ಸ್. (ಆಕೆಗೆ ಬಾವುಟವನ್ನು ಕೊಡುತ್ತಾನೆ.) ಅಂಡರ್ ಷಾಫ್ಟ್‌ರು ಟ್ರಾಂಬೋನ್ ಬಾರಿಸುವುದರಲ್ಲಿ ದೈವದತ್ತವಾದ ಶಕ್ತಿ ಉಳ್ಳವರು. ವೆಸ್ಟ್‌ಹಂ ಮುಕ್ತಿಪ್ರದರ್ಶನದಲ್ಲಿ ಅವರು ದಿವ್ಯಗೀತ ಒಂದನ್ನು ನುಡಿಸುತ್ತಾರೆ. (ಅಪವಾರಿತದಲ್ಲಿ ಅಂಡರ್ ಷಾಫ್ಟಿಗೆ ಟ್ರಾಂಬೋನ್ ತೆಗೆದುಕೊಳ್ಳುವಂತೆ ಬಲವಂತಮಾಡಿ) ಬಾರಿಸಿ, ಮೆಕಿಯವೆಲ್ಲಿ, ಬಾರಿಸಿ.

ಅಂಡರ್‌ಷಾಫ್ಟ್ : (ಟ್ರಾಂಬೋನ್ ತೆಗೆದುಕೊಂಡು—ಆತನಿಗೆ ಮಾತ್ರ) ಸಯನ್ ಉದ್ಧಾರದ ತುತ್ತೂರಿ ! (ಕಸಿನ್ಸ್ ತಮಟೆಯ ಬಳಿಗೆ ನುಗ್ಗಿ ಅದನ್ನು ತನ್ನ ಕುತ್ತಿಗೆಗೆ ಹಾಕಿಕೊಳ್ಳುತ್ತಾನೆ. ಅಂಡರ್‌ಷಾಫ್ಟ್ ಮುಂದುವರಿಯುತ್ತ ಸ್ವಲ್ಪ ಗಟ್ಟಿಯಾಗಿ) ನನ್ನ ಕೈಯಲ್ಲಾದ್ದನ್ನೆಲ್ಲ ಮಾಡುತ್ತೇನೆ. ಥಾಟಿ ಗೊತ್ತಿದ್ದರೆ, ಉತ್ತಮವಾಗಿ ಮಂದ್ರ ನುಡಿಸಬಲ್ಲೆ.

ಕಸಿನ್ಸ್ : ಡಾನಿಸೆಟ್ಟಿಯ ಗೀತನಾಟಕಗಳಲ್ಲಿ ಒಂದರಿಂದ ತೆಗೆದ ಒಂದು ವಿವಾಹದ ಮೇಳಗೀತ ಅದು. ನಾವು ಅದನ್ನು ಬದಲಾಯಿಸಿದ್ದೇವೆ. ಇಲ್ಲಿ ನಾವು ಎಲ್ಲವನ್ನೂ ಒಳ್ಳೆಯದಕ್ಕೆ ತಿರುಗಿಸಿಕೊಳ್ಳುತ್ತೇವೆ. ಬಾಜ್ಜರನ್ನು ಕೂಡ—ನಿಮಗೆ ಪಲ್ಲವಿ ನೆನಪಿದೆ ಅಲ್ಲವೆ ? ನಿಮಗಾಗಿ ಅತಿಶಯ ಹರುಷ—ಇಮ್ಮೆನ್ಸೋ ಜ್ಯೂಬಿಲೊ—ಇಮ್ಮೆನ್ಸೋ ಜ್ಯೂಬಿಲೊ (ತಮಟೆಯನ್ನು ಬಡಿಯುತ್ತ) ರಂ ಟಂಟೆ... ಟಂ ಟಂ– ಟಂಟಂಟ ಟ—

ಬಾರ್ಬರ : ಡಾಲ್ಲಿ, ನೀನು ನನ್ನ ಎದೆ ಒಡೆಯುತ್ತಿದ್ದೀಯೆ.

ಕಸಿನ್ಸ್ : ಇಲ್ಲಿ ಒಂದೆದೆ ಹೆಚ್ಚು ಒಂದೆದೆ ಕಡಮೆಯಾಗಿ ಬಿರಿದರೇನಾಯಿತು ? ಡಿಯೊನಿಸಸ್ ಅಂಡರ್‌ಷಾಫ್ಟ್ ಅವತರಿಸಿದ್ದಾರೆ. ನನಗೆ ಮೈಮೇಲೆ ಬಂದಿದೆ.

ಮಿಸೆಸ್ ಬೈನ್ಸ್ : ಬಾರ್ಬರ, ನನ್ನ ಪ್ರೀತಿಯ ಮೇಜರ್. ನನ್ನ ಜೊತೆಯಲ್ಲಿ ಬಾವುಟವನ್ನು ಹೊರಲು ಬರಬೇಕು.

ಜೆನ್ನಿ : ಹೌದು ಹೌದು ಮೇಜರ್.

ಕಸಿನ್ಸ್ : (ಜೆನ್ನಿ ಕೈಯಿಂದ ಖಂಜರಿಯನ್ನು ಕಿತ್ತುಕೊಂಡು ಮೌನವಾಗಿ ಬಾರ್ಬರಳಿಗೆ ಕೊಡುತ್ತಾನೆ.)

ಬಾರ್ಬರ : (ಸ್ವಲ್ಪ ಮುಂದೆ ಬರುತ್ತಾಳೆ. ಹೇಸಿಗೆ ಬಂದಂತಾಗಿ ಅದನ್ನು ಹಿಂದಕ್ಕೆ

ತಳ್ಳುತ್ತಾಳೆ. ಕಸಿನ್ಸ್ ಖಂಜರಿಯನ್ನು ಲಕ್ಷ್ಯವಿಲ್ಲದೆ ಜೆನ್ನಿಗೆ ಕೊಡುತ್ತ ಗೇಟ್ ಬಳಿಗೆ ಹೋಗುತ್ತಾನೆ.) ನಾನು ಬರಲಾರೆ.

ಜೆನ್ನಿ : ಬರೋದಿಲ್ಲ ?

ಮಿಸೆಸ್ ಬೈನ್ಸ್ : (ಕಣ್ಣಲ್ಲಿ ನೀರಿಟ್ಟುಕೊಂಡು.) ಬಾರ್ಬರ, ನಾನು ಹಣವನ್ನು ತೆಗೆದು ಕೊಳ್ಳುವುದು ತಪ್ಪೆಂದು ನಿನ್ನ ಭಾವನೆಯೆ ?

ಬಾರ್ಬರ : (ಸಹಜ ಅಂತಃಕರಣದಿಂದ ಅವಳ ಕಡೆ ಹೋಗಿ, ಆಕೆಯನ್ನು ಮುದ್ದಿಸುತ್ತ) ಇಲ್ಲ, ಇಲ್ಲ, ದೇವರು ನಿಮಗೆ ಸಹಾಯ ಮಾಡಲಿ ಅಮ್ಮ ; ನೀವು ತೆಗೆದುಕೊಳ್ಳಬೇಕು. ನೀವು ಸೇನೆಯನ್ನು ಉದ್ಧಾರಮಾಡುತ್ತೀರಿ. ಹೋಗಿ, ನಿಮ್ಮ ಸಭೆ ಯಶಸ್ವಿಯಾಗಲಿ.

ಜೆನ್ನಿ : ನೀನು ಬರುವುದಿಲ್ಲವೆ ?

ಬಾರ್ಬರ : ಇಲ್ಲ. (ತನ್ನ ಕೊರಳ ಪಟ್ಟಿಯಿಂದ ಐದು ಅಕ್ಷರಗಳ ಬೆಳ್ಳಿಯ ಬ್ಯಾಡ್ಜ ತೆಗೆಯ ತೊಡಗುತ್ತಾಳೆ.)

ಮಿಸೆಸ್ ಬೈನ್ಸ್ : ಬಾರ್ಬರ, ನೀನು ಮಾಡುತ್ತಿದ್ದೀಯಾದರೂ ಏನನ್ನು ?

ಜೆನ್ನಿ : ನಿನ್ನ ಬ್ಯಾಡ್ಜ ಯಾಕೆ ತೆಗೆಯುತ್ತಿದ್ದೀಯೆ ? ನೀನು ನಮ್ಮನ್ನು ಬಿಟ್ಟು ಹೋಗುತಿರಲಾರೆ ಅಲ್ಲವೆ, ಮೇಜರ್ ?

ಬಾರ್ಬರ : (ಶಬ್ದ ಮಾಡದೆ) ಅಪ್ಪ, ಇಲ್ಲಿ ಬನ್ನಿ.

ಅಂಡರ್‌ಷಾಫ್ಟ್ : (ಅವಳ ಬಳಿಗೆ ಬರುತ್ತ) ಏನು ಮಗು ! (ತನ್ನ ಕೊರಳಪಟ್ಟಿಗೆ ಅವಳು ಬ್ಯಾಡ್ಜನ್ನು ಸಿಕ್ಕಿಸುತ್ತಿರುವುದನ್ನು ನೋಡಿ, ಬೆದರಿ ಒಪ್ಪಾರದ ಕಡೆಗೆ ಹಿಂದಿರುಗುತ್ತಾನೆ.)

ಬಾರ್ಬರ : (ಅವನ ಹಿಂದೆ ಹೋಗಿ) ಹೆದರಿಕೊಳ್ಳಬೇಡಿ, (ಬ್ಯಾಡ್ಜನ್ನು ಅವನಿಗೆ ಸಿಕ್ಕಿಸಿ, ಮೇಜಿನ ಕಡೆಗೆ ಹೆಜ್ಜೆಯಿಟ್ಟು ಹಿಂದಿರುಗಿ, ಇತರರಿಗೆ ಅವನನ್ನು ತೋರಿಸುತ್ತ) ನೋಡಿ, 5000 ಪೌಂಡಿಗೆ ಅದೇನು ಹೆಚ್ಚೆ ?

ಮಿಸೆಸ್ ಬೈನ್ಸ್ : ಬಾರ್ಬರ, ನೀನು ಬಂದು ನಮ್ಮೊಡನೆ ಪ್ರಾರ್ಥನೆ ಮಾಡೆಯಾದರೆ, ನಮಗಾಗಿ ಪ್ರಾರ್ಥಿಸುವೆನೆಂದು ನನಗೆ ಮಾತುಕೊಡು.

ಬಾರ್ಬರ : ನಾನಿನ್ನು ಪ್ರಾರ್ಥಿಸಲಾರೆ... ಬಹುಶಃ ಇನ್ನೆಂದಿಗೂ ಪುನಃ ಪ್ರಾರ್ಥಿಸೆನೇನೊ.

ಮಿಸೆಸ್ ಬೈನ್ಸ್ : ಬಾರ್ಬರ !

ಜೆನ್ನಿ : ಮೇಜರ್ !

ಬಾರ್ಬರ : (ತಾಪದ ಉದ್ವೇಗದಲ್ಲಿ) ನಾನಿನ್ನು ಹೆಚ್ಚು ತಡೆಯಲಾರೆ. (ಬೇಗನೆ ಹೋಗಿ) Quick March !

ಕಸಿನ್ಸ್ : (ರಸ್ತೆಯ ಹೊರಗೆ ಮೆರವಣಿಗೆಗೆ ಕೂಗಿ ಹೇಳುತ್ತ) ಈಗ ಮುಂದೆ

ಹೋಗುತ್ತೇವೆ. ವಾದ್ಯಗಳನ್ನು ಬಾಜಿಸಿ. ಇಮ್ಮೆನ್ಸೋ ಜ್ಯೂಬಿಲೋ—(ತನ್ನ ತಮಟೆಯಿಂದ ತಾಳವನ್ನು ಸೂಚಿಸುತ್ತಾನೆ. ಬ್ಯಾಂಡ್ ಅದರ ಹೆಜ್ಜೆಯನ್ನು ಬಾರಿಸತೊಡಗುತ್ತದೆ. ಮೆರವಣಿಗೆ ಮುಂದೆ ನಡೆದು, ಅದರ ಶಬ್ದ ಬೇಗ ಮಂದವಾಗುತ್ತದೆ.)

## ಅಂಕ ೩

[ಮಾರನೆಯ ದಿನ ಮಧ್ಯಾಹ್ನದ ಊಟವಾದ ಮೇಲೆ ಲೇಡಿ ಬ್ರಿಟೊಮಾರ್ಟ್ ವಿಲ್ಟನ್ ಕ್ರೆಸೆಂಟಲ್ಲಿ ಪುಸ್ತಕ ಭಂಡಾರದಲ್ಲಿ ಬರೆಯುತ್ತಿದ್ದಾಳೆ. ಕಿಟಕಿಯ ಬಳಿ, ಕೈ ಇರುವ ಕುರ್ಚಿಯಲ್ಲಿ ಶಾರ ಓದುತ್ತಿದ್ದಾಳೆ. ಬಾರ್ಬರ ಸಾಮಾನ್ಯವಾದ, ವಿಲಾಸದ ಉಡುಪಿನಲ್ಲಿ ಮಂಚಿಕೆಯ ಮೇಲೆ ಕುಳಿತಿದ್ದಾಳೆ. ಬಿಳಿಚಿದ್ದಾಳೆ. ಬಣ್ಣ ಕಂದಿ ಚಿಂತಾಮಗ್ನಳಾಗಿದ್ದಾಳೆ. ಚಾರ್ಲ್ಸ್ ಲೋಮ್ಯಾಕ್ಸ್ ಪ್ರವೇಶಿಸುತ್ತಾನೆ. ಬಾರ್ಬರ ವಿಲಾಸದ ಉಡುಪು ಧರಿಸಿರುವುದನ್ನೂ ಕುಗ್ಗಿರುವುದನ್ನೂ ಕಂಡು ಬೆಚ್ಚುವನು.]

ಲೋಮ್ಯಾಕ್ಸ್ : ಸಮವಸ್ತ್ರ ಬಿಟ್ಟುಬಿಟ್ಟಿದ್ದೀಯೆ.

(ಬಾರ್ಬರ ಏನನ್ನೂ ಹೇಳುವುದಿಲ್ಲ. ನೋವಿನ ಮುಖಭಾವ ಅವಳ ಮೇಲಾಡುತ್ತದೆ.)

ಲೇಡಿ ಬ್ರಿಟೊ : (ಸಣ್ಣದನಿಯಲ್ಲಿ ಅವನಿಗೆ ಎಚ್ಚರಕೊಡುತ್ತ.) ಚಾರ್ಲ್ಸ್ !

ಲೋಮ್ಯಾಕ್ಸ್ : (ತುಂಬಾ ಮನಸ್ಸಿಗೆ ತಟ್ಟಿ ಮಂಚಿಕೆಯ ಹಿಂದೆ ಬಂದು, ಸೌಹಾರ್ದದಿಂದ ಬಾರ್ಬರ ಬಳಿ ಬಾಗಿ) ನನಗೆ ತುಂಬಾ ವ್ಯಥೆಯಾಗುತ್ತಿದೆ ಬಾರ್ಬರ. ನಿನಗೂ ಗೊತ್ತಿದೆ—ನನ್ನ ಕೈಯಲ್ಲಾದ ಮಟ್ಟಿಗೂ ನನ್ನ ಸಹಾಯ ಕೊಟ್ಟೆ. ರಾಗಮಾಲಿಕೆ ಬಾರಿಸಿದೆ ; ಇನ್ನೂ ಅದೂ ಇದೂ ಮಾಡಿದೆ. (ಸಂಭ್ರಮದಿಂದ) ಆದರೂ, ಮೋಕ್ಷ ಸೇನೆಯ ವಿಷಯದಲ್ಲಿ ಏನೊ ಸ್ವಲ್ಪ ಎಳಸಿದೆ ಎಂಬುದು ನನ್ನ ಕಣ್ಣಿಗೆ ಮರೆಯಾಗಿಲ್ಲ. ಈಗ ನೋಡು, ನಮ್ಮ ಚರ್ಚ್ ಆಫ್ ಇಂಗ್ಲಂಡ್ ಇದೆಯಲ್ಲ...

ಲೇಡಿ ಬ್ರಿಟೊ : ಸಾಕು ನಿಲ್ಲಿಸು ಚಾರ್ಲ್ಸ್, ನಿನ್ನ ಬುದ್ಧಿಶಕ್ತಿಯ ಮಿತಿಗೆ ತಕ್ಕ ಯಾವುದನ್ನಾದರೂ ಕುರಿತು ಮಾತಾಡು.

ಲೋಮ್ಯಾಕ್ಸ್ : ಚರ್ಚ್ ಆಫ್ ಇಂಗ್ಲಂಡ್ ವಿಷಯ ನಮ್ಮೆಲ್ಲರ ಶಕ್ತಿಗೂ ತಕ್ಕುದೇ ಅಲ್ಲವೆ ? ನಿಜವಾಗಿ—?

ಬಾರ್ಬರ : (ಅವನ ಕೈಯನ್ನು ಒತ್ತುತ್ತ) ನಿನ್ನ ಸೌಹಾರ್ದಕ್ಕೆ ತುಂಬ ವಂದನೆ, ಚಾರ್ಲಿ. ಹೋಗು, ಶಾರ ಬಳಿ ಆಡಿಕೊ ಹೋಗು.

ಲೋಮ್ಯಾಕ್ಸ್ : (ಬರೆವ ಕುರ್ಚಿಯ ಬಳಿಯಿಂದ ಒಂದು ಕುರ್ಚಿ ಎಳೆದುಕೊಂಡು

ಶಾರ ಬಳಿ ಠೀವಿಯಿಂದ ಕೂಡುವನು) ಇವೊತ್ತು ನನ್ನ ಪ್ರಿಯತಮೆ ಹೇಗಿದ್ದಾಳೆ?

ಶಾರ : ಬಾರ್ಬರ, ನೀನು ಚಾಲ್ಲಿಗೆ ಏನಾದರೂ ಮಾಡು ಎಂದು ಹೇಳದಿದ್ದರೆ ಚೆನ್ನಾಗಿರುತ್ತೆ, ನೇರ ಬಂದು ಅವನು ಅದನ್ನು ಮಾಡುತ್ತಾನೆ. ಚಾಲ್ಲಿ, ಇವೊತ್ತು ಮಧ್ಯಾಹ್ನ ಕಾರ್ಖಾನೆಗೆ ಹೋಗಲಿದ್ದೇವೆ.

ಲೋಮ್ಯಾಕ್ಸ್ : ಯಾವ ಕಾರ್ಖಾನೆಗೆ ?

ಶಾರ : ಫಿರಂಗಿ ಕಾರ್ಖಾನೆಗೆ ?

ಲೋಮ್ಯಾಕ್ಸ್ : ಏನು ನಿಮ್ಮಪ್ಪನ ಕಾರ್ಖಾನೆಗೇ ?

ಶಾರ : ಹೌದು.

ಲೋಮ್ಯಾಕ್ಸ್ : ಎಲಾ !

(ಕಸಿನ್ಸ್ ಕಳೆಯಿಲ್ಲದೆ ಪ್ರವೇಶಿಸುತ್ತಾನೆ. ಸಮವಸ್ತ್ರ ಧರಿಸದ ಬಾರ್ಬರಳನ್ನು ನೋಡಿ ಅವನು ಕಾಣದಂತೆ ಬೆಚ್ಚಿ ಬೀಳುತ್ತಾನೆ.)

ಬಾರ್ಬರ : ಈ ಬೆಳಗ್ಗೆ ಬರುತ್ತೀಯೆಂದು ನಿರೀಕ್ಷಿಸಿದ್ದೆ ಡಾಲ್ಲಿ. ನೀನು ಊಹಿಸಲಿಲ್ಲವೆ ?

ಕಸಿನ್ಸ್ : (ಅವಳ ಬಳಿ ಕುಳಿತು) ಕ್ಷಮಿಸು. ಈಗತಾನೇ ನನಗೆ ನಾಷ್ಟ ಆಯಿತು.

ಶಾರ : ನಾವು ಈಗತಾನೆ ಮಧ್ಯಾಹ್ನದ ಊಟ ಮುಗಿಸಿದ್ದೇವೆ.

ಬಾರ್ಬರ : ನಿನ್ನೆ ರಾತ್ರಿ ಏನಾದರೂ ತೊಂದರೆ ಆಯಿತೆ ?

ಕಸಿನ್ಸ್ : ಇಲ್ಲ. ರಾತ್ರಿಯನ್ನು ಚೆನ್ನಾಗಿಯೇ ಕಳೆದೆ. ನಿಜವಾಗಿ ನೋಡಿದರೆ ನಾನು ಕಳೆದಿರುವ ದಿನಗಳಲ್ಲೆಲ್ಲ ಬಹು ವಿಶೇಷವಾದವುಗಳಲ್ಲಿ ಒಂದನ್ನು.

ಬಾರ್ಬರ : ಮೀಟಿಂಗೊ ?

ಕಸಿನ್ಸ್ : ಮೀಟಿಂಗ್ ಆದಮೇಲೆ.

ಲೇಡಿ ಬ್ರಿಟೊ : ಮೀಟಿಂಗ್ ಆದಮೇಲೆ ಮಲಗಿ ನಿದ್ರೆಮಾಡಬೇಕಿತ್ತು. ಏನು ಮಾಡುತ್ತಿದ್ದೆ ?

ಕಸಿನ್ಸ್ : ಕುಡಿಯುತ್ತಿದ್ದೆ.

ಲೇಡಿ ಬ್ರಿಟೊ : ಅಡಾಲ್ಫಸ್ !

ಶಾರ : ಡಾಲ್ಲಿ !

ಲೋಮ್ಯಾಕ್ಸ್ : ಎಲಾ !—

ಲೇಡಿ ಬ್ರಿಟೊ : ಏನು ಕುಡೀತ ಇದ್ದೆ ಎಂದು ಕೇಳಬಹುದೆ ?

ಕಸಿನ್ಸ್ : ಯಾವುದೊ ಒಂದು ದೆವ್ವದಂಥ ಸ್ಪಾನಿಷ್ ಬರ್ಗಂಡಿ ! ಮಾದಕಗಳೇನೂ ಸೇರಿಸಿಲ್ಲ ಎಂದು ಖಾತರಿಕೊಟ್ಟಿತ್ತು ;—ಪಾನವಿರೋಧಿಗಳು ಕುಡಿಯುವ ಬರ್ಗಂಡಿ, ವಾಸ್ತವವಾಗಿ. ಅದರಲ್ಲಿನ ಸಹಜ ಮಾದಕತೆಯ ಪುಷ್ಟಿಗೆ ಹೊಸ ಏನನ್ನು ಸೇರಿಸುವುದೂ ಬೇಡವಾಗಿತ್ತು.

ಬಾರ್ಬರ : ತಮಾಷೆ ಮಾಡ್ತಿದ್ದೀಯ, ಡಾಲ್ಲಿ ?

ಕಸಿನ್ಸ್ : (ತಾಳ್ಮೆಯಿಂದ) ಇಲ್ಲ...ಹೆಸರಿಗೆ ಮಾತ್ರ ಈ ಮನೆಯ ಯಜಮಾನರಾಗಿರುವವರ ಜೊತೆಯಲ್ಲಿ ರಾತ್ರಿಯನ್ನು ಸಂತೋಷವಾಗಿ ಕಳೆದೆ !

ಲೇಡಿ ಬ್ರಿಟೊ : ಆ್ಯಂಡ್ರೂ ನಿನಗೆ ಕುಡಿಸಿದರೆ ?

ಕಸಿನ್ಸ್ : ಇಲ್ಲ, ದ್ರಾಕ್ಷಾರಸವನ್ನು ಅವರು ದೊರಕಿಸಿದರು. ನನ್ನನ್ನು ಕುಡಿಯುವಂತೆ ಮಾಡಿದವನು—ಡಿಯೊನಿಸಸ್. (ಬಾರ್ಬರಾಗೆ) ನಾ ನಿನಗೆ ಹೇಳಿದೆ, ನನಗೆ ಮೈಮೇಲೆ ಬಂದಿತ್ತು ಎಂದು.

ಲೇಡಿ ಬ್ರಿಟೊ : ನಿನಗಿನ್ನೂ ಅಮಲಿಳಿದಿಲ್ಲ. ಈಗಲೇ ಮನೆಗೆ ಹೋಗಿ ಮಲಗಿಕೊ.

ಕಸಿನ್ಸ್ : ನಾನು ಈ ಮುಂಚೆ ನಿಮ್ಮನ್ನು ಎಂದೂ ಆಕ್ಷೇಪಿಸುವ ಸಾಹಸ ಮಾಡಿಲ್ಲ. ಆದರೆ, ಲೇಡಿ ಬ್ರಿಟ್, ಈ ಅಂಧಕಾರದ ಅರಸನ್ನು ನೀವು ಹೇಗೆ ಮದುವೆ ಆದಿರೊ ?

ಲೇಡಿ ಬ್ರಿಟೊ : ಆತನ ಜೊತೆಯಲ್ಲಿ ಕುಡಿದು ಬುದ್ಧಿ ಕಳಕೊಳ್ಳುವುದಕ್ಕಿಂತ ಆತನನ್ನು ಮದುವೆ ಆಗುವುದು ಹೆಚ್ಚು ಕ್ಷಮಾರ್ಹವಾಗಿತ್ತು. ಆ್ಯಂಡ್ರೂ ಸಂಪಾದಿಸಿದ ಒಂದು ಹೊಸ ಯೋಗ್ಯತೆ ಅದು ಎಂದು ಕಾಣುತ್ತೆ. ಅವರು ಹಿಂದೆ ಕುಡಿಯುತ್ತಿರಲಿಲ್ಲ.

ಕಸಿನ್ಸ್ : ಈಗಲೂ ಆತ ಕುಡಿಯುವುದಿಲ್ಲ. ಅವರು ಸುಮ್ಮನೆ ಅಲ್ಲಿ ಕುಳಿತಿದ್ದರು ಮಾತ್ರ. ನನ್ನ ನೀತಿಯ ಆಧಾರವನ್ನು ಕೊನೆಮುಟ್ಟಿಸಿದರು. ನನ್ನ ಮನಸ್ಸಿನ ನಿಶ್ಚಯಗಳು ಸೋತು ಪಲಾಯನ ಮಾಡುವಂತೆ ಮಾಡಿದರು. ನನ್ನಾತ್ಮ ಮಾರಾಟವಾಗುವಂತೆ ಮಾಡಿದರು. ನಿನ್ನ ಮೇಲೆ ಅವರಿಗೆ ತುಂಬಾ ಪ್ರೀತಿ, ಬಾರ್ಬರ. ಆತನು ನನಗೆ ಅಪಾಯಕರನಾಗಿರುವುದಕ್ಕೆ ಅದು ಕಾರಣ.

ಬಾರ್ಬರ : ಅದಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ, ಡಾಲ್ಲಿ. ಮನೆಯಲ್ಲಿ ಬೆಚ್ಚಗೆ ಕುಳಿತು ಅನುಭವಿಸುವ ಪ್ರೀತಿಗಿಂತ, ದೊಡ್ಡದಾಗಿ ಕಾಣುವ ಸ್ವಪ್ನಗಳಿಗಿಂತ ದಿವ್ಯವಾದ ಸ್ವಪ್ನಗಳಿವೆ. ನಿನಗದು ಗೊತ್ತಿದೆ, ಅಲ್ಲವೆ !

ಕಸಿನ್ಸ್ : ಹೌದು. ಅದು ನಮ್ಮ ತಿಳಿವಳಿಕೆ. ನನಗೆ ಗೊತ್ತಿದೆ. ಅದೇ ನನ್ನ ವಿಶ್ವಾಸವೂ ಹೌದು. ಪವಿತ್ರತಮವಾದ ಆ ನಿಟ್ಟಿನಲ್ಲಿ ಆತನು ನನ್ನನ್ನು ಗೆಲ್ಲಲಾರರಾದರೆ ಕ್ಷಣ ಕಾಲ ನನ್ನನ್ನು ಆತನು ವಿನೋದಗೊಳಿಸಬಹುದು. ಇಲ್ಲವಾದರೆ, ಆತನು ಶಕ್ತನೇ ಆಗಿದ್ದರೂ ನನ್ನ ಮೇಲೆ ಹೆಚ್ಚು ಗಟ್ಟಿ ಹಿಡಿತ ಆತನಿಗೆ ಸಿಕ್ಕಲಾರದು.

ಬಾರ್ಬರ : ಗಟ್ಟಿಯಾಗಿ ನಿಲ್ಲು. ಕಡೆಗೆ ಸರಿಯಾಗುತ್ತದೆ. ಈಗ ಹೇಳು, ಮೀಟಿಂಗಲ್ಲಿ ಏನಾಯ್ತು ಎಂದು.

ಕಸಿನ್ಸ್ : ಮೀಟಿಂಗ್ ವಿಸ್ಮಯಕರವಾಗಿತ್ತು. ಮಿಸೆಸ್ ಬೈನ್ಸ್ ಭಾವೋದ್ರೇಕದಿಂದ ಎಲ್ಲಿ ಜೀವ ಬಿಡುತ್ತಾಳೊ ಎನ್ನುವಂತಿತ್ತು. ಜೆನ್ನಿಹಿಲ್ ತಿಕ್ಕಲು ಹಿಡಿದ ಹಾಗೆ

ಅರ್ಥವಿಲ್ಲದ ಮಾತನಾಡುತ್ತಿದ್ದಳು. ಈ ಅಂಧಕಾರದ ಅರಸು ಹುಚ್ಚರಂತೆ ಟ್ರಾಂಬೋನ್ ಬಾರಿಸಿದರು. ಅದರ ಲೋಹ ಗರ್ಜನೆಗಳು ನಿತ್ಯ ನಾರಕಿಗಳ ನಗುವಿನಂತಿತ್ತು. ಅಲ್ಲೆ, ಆಗಲೆ, 11 ಮಂದಿಯ ಮನಸ್ಸು ಮತಾಂತರಗೊಂಡವು. ಪ್ರಾಮಾಣಿಕತೆಯಿಂದ ಅವರು ಮಾಡಿದ ಪ್ರಾರ್ಥನೆ ಮನಸ್ಸನ್ನು ಮುಟ್ಟುತ್ತಿತ್ತು. ಬಾಜ್ಜರಿಗೂ ಹೆಸರು ತಿಳಿಸದೆ 5000 ಪೌಂಡು ಕೊಟ್ಟವರಿಗೂ ಕೃತಜ್ಞತೆಯಿಂದ. ನಿಮ್ಮ ತಂದೆ ತಮ್ಮ ಹೆಸರು ಪ್ರಕಟಿಸಲು ಒಪ್ಪಲಿಲ್ಲ.

ಲೋಮ್ಯಾಕ್ಸ್ : ಈ ಮುದುಕರು ಬಹಳ ಒಳ್ಳೇ ಕೆಲಸ ಮಾಡಿದರು, ಅಲ್ಲವೆ ! ಅನೇಕರಿಗೆ ಅದರಿಂದಾಗುವ ಪ್ರಕಟನೆ ಬೇಕಾಗುತ್ತಿತ್ತು.

ಕಸಿನ್ಸ್ : ತನ್ನ ಹೆಸರನ್ನು ಕೊಟ್ಟರೆ, ದಾನ ಧರ್ಮಗಳಿಂದ ನಡೆಯುವ ಸಂಸ್ಥೆಗಳೆಲ್ಲ, ಯುದ್ಧರಂಗದಲ್ಲಿ ಎರಗುವ ಹದ್ದುಗಳ ಹಾಗೆ ತನ್ನ ಮೇಲೆ ಇನ್ನು ಎರಗುತ್ತಾರೆ ಎಂದು.

ಲೇಡಿ ಬ್ರಿಟೊ : ಆ್ಯಂಡ್ರೂ ಸ್ವಭಾವವೇ ಅದು, ಎಷ್ಟೇ ಯೋಗ್ಯವಾದ ಕೆಲಸ ಮಾಡಿದರೂ ಅದಕ್ಕೆ ಅಯೋಗ್ಯವಾದ ಕಾರಣ ಕೊಡದೆ ಮಾಡುವುದೇ ಇಲ್ಲ.

ಕಸಿನ್ಸ್ : ನನ್ನ ಜೀವಿತ ಕಾಲದಲ್ಲೆಲ್ಲ ಅಯುಕ್ತ ಕಾರ್ಯಗಳನ್ನು ಮಾಡುತ್ತ ಅದಕ್ಕೆ ಯೋಗ್ಯಕಾರಣ ಕೊಡುತ್ತಿದ್ದೇನೆಂದು ಅವರು ದೃಢಪಡಿಸಿದರು.

ಲೇಡಿ ಬ್ರಿಟೊ : ಬಾರ್ಬರ ಮುಕ್ತಿ ಸೇನೆ ಬಿಟ್ಟಿದ್ದಾಳೆ. ನೀನೂ ಅದನ್ನು ಬಿಡು. ನೀನು ಬೀದಿಯಲ್ಲಿ ತಮಟೆ ಬಾರಿಸುವುದು ನನಗೆ ಇಷ್ಟವಿಲ್ಲ.

ಕಸಿನ್ಸ್ : ನಿಮ್ಮ ಅಪ್ಪಣೆ ಆಗಲೇ ನಡೆದು ಹೋಗಿದೆ, ಲೇಡಿ ಬ್ರಿಟೊ.

ಬಾರ್ಬರ : ಡಾಲ್ಲಿ, ನಿನಗೆ ನಿಜವಾಗಿ ಆ ಬಗೆಗೆ ಯಾವಾಗಲಾದರೂ ಶ್ರದ್ಧೆ ಇದ್ದದ್ದು ಉಂಟೆ ? ನನ್ನನ್ನು ನೋಡದೆ ಇದ್ದಿದ್ದರೆ ನೀನು ಅದಕ್ಕೆ ಸೇರುತ್ತಿದ್ದೆಯ ?

ಕಸಿನ್ಸ್ : (ಕಪಟವಿಲ್ಲದೆ) ಆ...ಆ... ಬಹುಶಃ, ಹಲವು ಮತಗಳ ವಿಚಾರ ತಿಳಿಯಬೇಕು ಅಂತ—

ಲೋಮ್ಯಾಕ್ಸ್ : ಆದರೆ ತಮಟೆ ಹೊಡೆಯುವವನ ಹಾಗೆ ಸೇರುತ್ತಿರಲಿಲ್ಲ ಅಲ್ಲವೆ ? ನೀನು ತುಂಬಾ ಬುದ್ಧಿವಂತ ; ನಿನ್ನ ತಿಳಿವಳಿಕೆ ತಿಳಿಯಾದ್ದು ಡಾಲ್ಲಿ. ಮೊದಲಿಂದಲೂ ನಿನಗೆ ತಿಳಿದಿತ್ತು, ಅದರಲ್ಲಿ ಸ್ವಲ್ಪ ತೋರಿಕೆ ಹೆಚ್ಚಾಗಿತ್ತು ಎಂದು—

ಲೇಡಿ ಬ್ರಿಟೊ : ಚಾರ್ಲ್ಸ್, ನೀನು ಪೆಚ್ಚು ಪೆಚ್ಚಾಗಿ ಮಾತಾಡಬೇಕಾದರೆ, ಬೆಳೆದ ಮನುಷ್ಯನಂತೆ ಆಡು. ಸ್ಕೂಲ್ ವಿದ್ಯಾರ್ಥಿಯಂತೆ ಆಡಬೇಡ.

ಲೋಮ್ಯಾಕ್ಸ್ : (ಮುಖದಲ್ಲಿ ಪೆಚ್ಚಾಗಿ) ಹಾಗೆಂದರೇನು, ಪೆಚ್ಚು ಪೆಚ್ಚೇ ಅಲ್ಲವೆ ? ಮನುಷ್ಯನಿಗೆ ವಯಸ್ಸು ಎಷ್ಟಾದರೇನು ?

ಲೇಡಿ ಬ್ರಿಟೊ : ಇಂಗ್ಲಂಡಿನ ಸಭ್ಯ ಸಮಾಜದಲ್ಲಿ ಎಲ್ಲ ವಯಸ್ಸಿನವರೂ ಪೆಚ್ಚಾಗಿ ಮಾತಾಡ್ತಾರೆ ಚಾರ್ಲ್ಸ್. ತಿಳಿಗೇಡಿ ಸೂತ್ರಗಳನ್ನು ಬಹು ವಿವೇಕವೆಂಬಂತೆ

ತೋರಿಸುತ್ತ ಹೇಳಿದ್ದೇ ಹೇಳುತಿರುತ್ತಾರೆ. ಶಾಲೆ ಹುಡುಗರು ನಿನ್ನ ಹಾಗೆ ತಮ್ಮ ಸೂತ್ರಗಳನ್ನು ಅಸಂಸ್ಕಾರದ ಭಾಷೆಯಿಂದ ಮಾಡಿಕೊಳ್ಳುತ್ತಾರೆ. ನಿನ್ನ ವಯಸ್ಸು ಅವರಿಗೆ ಬಂದು ರಾಜಕೀಯ ಖಾಸಗಿ ಕಾರ್ಯದರ್ಶಿತ್ವವೊ ಅಂಥದು ಇನ್ನಾವುದೊ ಸಿಕ್ಕಿದಾಗ, ಈ ಅಸಂಸ್ಕಾರದ ಮಾತನ್ನು ಬಿಡುತಾರೆ. ಸ್ಪೆಕ್ಟೇಟ ರಿಂದಲೊ ಟೈಮ್ಸ್ ಇಂದಲೊ ಅವನ್ನು ಆಯುತ್ತಾರೆ. ನೀನು ಟೈಮ್ಸ್ ಇಂದ ಮಾತ್ರ ತೊಗೊಳ್ಳೋದು ಮೇಲು. ಟೈಮ್ಸ್‌ಲ್ಲಿ ತಕ್ಕ ಮಟ್ಟಿಗೆ ನೀನು ಟಾಪ್ ಅಂತೀಯಲ್ಲ ಅದು ಸಿಕ್ಕುತ್ತೆ. ಅದರ ಭಾಷೆಯಾದರೂ ಮರ್ಯಾದಸ್ಥರದು.

ಲೋಮ್ಯಾಕ್ಸ್ : (ಮಾತಿನ ಪೆಟ್ಟಿಗೆ ಕುಸಿದು) ನಿಮ್ಮ ಮನಸ್ಸು ತುಂಬಾ ಬಲವಾದ್ದು ಲೇಡಿ ಬ್ರಿಟೊ.

ಲೇಡಿ ಬ್ರಿಟೊ : Rubbish ! (ಮಾರಿಸನ್ ಬಳಿಗೆ ಬರುತ್ತಾನೆ) ಏನದು ?

ಮಾರಿಸನ್ : ತಮಗೆ ತಿಳಿಸಬೇಕು ಎಂದು ಬಂದೆ ತಾಯಿ. ಅಂಡರ್‌ಷಾಫ್ಟ್ ಅವರು ಕಾರಲ್ಲಿ ಬಾಗಿಲ ಬಳಿಗೆ ಬಂದಿದ್ದಾರೆ.

ಲೇಡಿ ಬ್ರಿಟೊ : ಸರಿ, ಒಳಗೆ ಬರಲಿ. ಮಾರಿಸನ್, (ಹಿಂದೆ ಮುಂದೆ ನೋಡುತ್ತಾನೆ) ನಿನಗೆ ಏನಾಗಿದೆ ?

ಮಾರಿಸನ್ : ಹೆಸರು ಹೇಳಿ ಅವರನ್ನು ಒಳಗೆ ಬರಮಾಡಲೊ ? ಇಲ್ಲಿ ಅವರು ತಮ್ಮ ಮನೆಯಲ್ಲಿಯೇ ಇದ್ದ ಹಾಗೆಯೊ ತಾಯಿ ?

ಲೇಡಿ ಬ್ರಿಟೊ : ಹೆಸರು ಹೇಳಿ ಕರಕೊಂಡು ಬಾ.

ಮಾರಿಸನ್ : ಆಯಿತು ತಾಯಿ. ಆದರೆ ನಾನು ಕೇಳಿದ್ದು ತಪ್ಪಲ್ಲ ತಾನೆ ? ಇಂಥ ಸನ್ನಿವೇಶ ನನಗೆ ಹೊಸದು ಅನ್ನಬಹುದು.

ಲೇಡಿ ಬ್ರಿಟೊ : ತುಂಬಾ ಸರಿ. ಹೋಗಿ ಅವರನ್ನು ಒಳಗೆ ಬರಮಾಡು.

ಮಾರಿಸನ್ : ಒಳ್ಳೆಯದು ತಾಯಿ. (ಹಿಂದಕ್ಕೆ ಹೋಗುತ್ತಾನೆ.)

ಲೇಡಿ ಬ್ರಿಟೊ : ಮಕ್ಕಳ, ಹೋಗಿ ಸಿದ್ಧವಾಗಿ (ಶಾರ, ಬಾರ್ಬರ ಹೊರಗೆ ಹೋಗುವ ಬಟ್ಟೆಗಳನ್ನು ಧರಿಸಲು ಮಹಡಿಯ ಮೇಲೆ ಹೋಗುತ್ತಾರೆ). ಚಾರ್ಲ್ಸ್, ಹೋಗಿ ಇನ್ನು ಐದು ನಿಮಿಷಗಳಲ್ಲಿ ಕೆಳಗೆ ಇಳಿದು ಬಾ ಎಂದು ಸ್ಟೀವನ್ನಿಗೆ ಹೇಳು. ದಿವಾನಖಾನೆಯಲ್ಲಿರುತ್ತಾನೆ. (ಚಾರ್ಲ್ಸ್ ಹೋಗುತ್ತಾನೆ.) ಅಡಾಲ್ಫಸ್, ಇನ್ನು 15 ನಿಮಿಷದಲ್ಲಿ ಗಾಡಿ ತೊಗೊಂಡು ಬಾ ಎಂದು ಹೇಳು. (ಅಡಾಲ್ಫಸ್ ಹೋಗುತ್ತಾನೆ).

ಮಾರಿಸನ್ : (ಬಾಗಿಲಲ್ಲಿ) ಅಂಡರ್‌ಷಾಫ್ಟ್ ಅವರು.

(ಅಂಡರ್‌ಷಾಫ್ಟ್ ಒಳಗೆ ಬರುತ್ತಾನೆ. ಮಾರಿಸನ್ ಹೊರಗೆ ಹೋಗುತ್ತಾನೆ.)

ಅಂಡರ್‌ಷಾಫ್ಟ್ : ಒಬ್ಬಳೇ, ತುಂಬ ಅದೃಷ್ಟ.

ಲೇಡಿ ಬ್ರಿಟೊ : (ಏಳುತ್ತ) ಈ ಭಾವದ ಮಾತುಗಳೇಕೆ ಆ್ಯಂಡ್ರ್ಯೂ, ಕೂತುಕೊಳ್ಳಿ.

(ಅಂಡರ್‌ಷಾಫ್ಟ್ ಮಂಚಿಕೆಯ ಮೇಲೆ ಅವಳ ಎಡಭಾಗದ ಪಕ್ಕದಲ್ಲಿ ಕುಳಿತುಕೊಳ್ಳು ತ್ತಾನೆ. ಉಸಿರಾಡಿಸುವ ಹೊತ್ತಿಗೆ ಅವಳು ವಿಷಯಕ್ಕೆ ಬರುತ್ತಾಳೆ.)

ಲೇಡಿ ಬ್ರಿಟೊ : ಚಾರ್ಲ್ಸ್ ಲೋಮ್ಯಾಕ್ಸ್ ಕೈಗೆ ಅವನ ಆಸ್ತಿ ಬರುವವರೆಗೂ ಶಾರಾಗೆ 800 ಪೌಂಡು ವರ್ಷಾಶನ ಬೇಕು. ಬಾರ್ಬರಗೆ ಇನ್ನೂ ಹೆಚ್ಚು ಬೇಕಾಗುತ್ತೆ. ಸದಾ ಬೇಕಾಗುತ್ತೆ. ಏಕೆಂದರೆ ಅಡಾಲ್ಫಸ್‌ಗೆ ಯಾವ ಆಸ್ತಿಯೂ ಇಲ್ಲ.

ಅಂಡರ್‌ಷಾಫ್ಟ್ : (ವಿರಕ್ತಿಯಿಂದ) ಆಗಲಿ ಪ್ರಿಯೆ, ನೋಡಿಕೋತೇನೆ. ಇನ್ನೇನಾದರೂ ಇದೆಯೆ ? ಉದಾಹರಣೆಗೆ, ನಿನಗೆ ?

ಲೇಡಿ ಬ್ರಿಟೊ : ನಿಮ್ಮೊಡನೆ ಸ್ಟೀವನ್ ವಿಷಯ ಮಾತಾಡಬೇಕು.

ಅಂಡರ್‌ಷಾಫ್ಟ್ : (ಬೇಸರದಲ್ಲೆಂಬಂತೆ) ಬೇಡ, ಇವಳೆ...ಸ್ಟೀವನ್ನಲ್ಲಿ ನನಗೆ ಆಸಕ್ತಿ ಇಲ್ಲ.

ಲೇಡಿ ಬ್ರಿಟೊ : ನನಗೆ ಅವನಲ್ಲಿ ಆಸಕ್ತಿ ಇದೆ. ನಮಗವನು ಮಗ...

ಅಂಡರ್‌ಷಾಫ್ಟ್ : ನಿನಗೆ ನಿಜವಾಗಿ ಹಾಗೆ ಎನ್ನಿಸುತ್ತದೆಯೆ ! ತನ್ನನ್ನು ಪ್ರಪಂಚಕ್ಕೆ ತರಬೇಕು ಎಂದು ಅವನು ನಮ್ಮನ್ನು ಪ್ರಚೋದಿಸಿದ್ದಾನೆ. ಆದರೆ ತನ್ನ ತಾಯಿ ತಂದೆಗಳನ್ನು ಅವನು ಅಸಂಗತವಾಗಿ ಆರಿಸಿದ ಎಂದು ಕಾಣುತ್ತೆ. ಅವನಲ್ಲಿ ನನ್ನ ಒಂದಂಶವೂ ಕಾಣುವುದಿಲ್ಲ. ನಿನ್ನ ಅಂಶ ಇನ್ನೂ ಕಡಮೆ.

ಲೇಡಿ ಬ್ರಿಟೊ : ಆ್ಯಂಡ್ರೂ, ಸ್ಟೀವನ್ ಬಹಳ ಒಳ್ಳೆಯ ಮಗ. ಸ್ಥಿರಸ್ವಭಾವದವನು. ಕೆಲಸದಲ್ಲಿ ಗಟ್ಟಿಗ; ಮನಸ್ಸಿನಲ್ಲಿ ಉದಾತ್ತ ಗುಣದವ. ನಿಮ್ಮ ಆಸ್ತಿಯಿಂದ ಅವನನ್ನು ಹೊರಗಿಡುವುದಕ್ಕಾಗಿ ಒಂದು ನೆವ ಕಾಣಲು ಯತ್ನಿಸುತ್ತಿದ್ದೀರಿ.

ಅಂಡರ್‌ಷಾಫ್ಟ್ : ಬಿಡ್ಡಿ, ಈ ಅಂಡರ್‌ಷಾಫ್ಟ್ ಸಂಪ್ರದಾಯ ಅವನನ್ನು ಆಸ್ತಿಯಿಂದ ಹೊರಗೆ ಹಾಕುತ್ತದೆ. ಫಿರಂಗಿ ಕಾರ್ಖಾನೆಯನ್ನು ನನ್ನ ಮಗನಿಗೆ ಬಿಟ್ಟುಕೊಡುವುದು ನನ್ನನ್ನು ಅಪ್ರಾಮಾಣಿಕನನ್ನಾಗಿ ಮಾಡುತ್ತದೆ.

ಲೇಡಿ ಬ್ರಿಟೊ : ಇನ್ನಾರಿಗಾದರೂ ಅದನ್ನು ಬಿಡುವುದು—ಅತಿ ಅಸಹಜ— ಅತಿ ಅಯುಕ್ತವಾಗುತ್ತದೆ ಆ್ಯಂಡ್ರೂ. ದುಷ್ಟವಾದ, ಅನೀತಿಯುತವಾದ ಇಂಥ ಸಂಪ್ರದಾಯವನ್ನು ಎಂದೆಂದಿಗೂ ನಡಸಲು ಆಗುತ್ತದೆ ಎನ್ನುತ್ತೀರ ? ದೊಡ್ಡ ಉದ್ಯೋಗಗಳ ಯಜಮಾನರು ಇತರರ ಮಕ್ಕಳು ನಡಸುವಂತೆ ಸ್ಟೀವನ್ ನಿಮ್ಮ ಕಾರ್ಖಾನೆ ನಡಸಲಾರನೆಂದು ನಟಿಸುತ್ತೀರ ?

ಅಂಡರ್‌ಷಾಫ್ಟ್ : ಹೌದು. ಉದ್ಯೋಗವನ್ನು ಅರ್ಥಮಾಡಿಕೊಳ್ಳದೆ, ದಿನಚರಿ ವ್ಯವಸ್ಥೆಯಷ್ಟು ಅವನು ಕಲಿಯಬಲ್ಲ;—ಇತರ ಎಲ್ಲ ಮಕ್ಕಳಂತೆ. ಉದ್ಯೋಗ ತನ್ನ ಸ್ವಂತ ವೇಗದಲ್ಲಿ ನಡೆಯುತ್ತ ಹೋಗುತ್ತದೆ. ನಿಜವಾದ ಅಂಡರ್‌ಷಾಫ್ಟ್

ಒಬ್ಬ—ಇಟಾಲಿಯನ್ನೊ ಜರ್ಮನ್ನೋ ಬಹುಶಃ—ಒಂದು ಹೊಸ ಮಾರ್ಗ ಕಂಡು ಹಿಡಿದು ಅವನನ್ನು ಅಲ್ಲಿಂದ ಓಡಿಸುವವರೆಗೂ.

ಲೇಡಿ ಬ್ರಿಟೊ : ಸ್ಟೀವನ್ ಮಾಡಲಾರದ್ದು, ಇಟಾಲಿಯನ್ನೊ ಜರ್ಮನ್ನೊ ಮಾಡ ಬಲ್ಲದ್ದು ಯಾವುದೂ ಇಲ್ಲ. ಸ್ಟೀವನ್ ಕಡೆಯು ಪಕ್ಷ ಮರ್ಯಾದಸ್ಥನಾಗಿ ಬೆಳೆದಿದ್ದಾನೆ.

ಅಂಡರ್‌ಷಾಫ್ಟ್ : ಅಗೋತ್ರಜನ ಮಗ. Nonsense.

ಲೇಡಿ ಬ್ರಿಟೊ : ನನ್ನ ಮಗ ಆ್ಯಂಡ್ರೂ. ನಿಮಗೇ ತಿಳಿಯದೆ ನಿಮ್ಮ ನಾಡಿಯಲ್ಲಿಯೂ ಉತ್ತಮ ರಕ್ತ ಇರಬಹುದು.

ಅಂಡರ್‌ಷಾಫ್ಟ್ : ನಿಜ, ಬಹುಶಃ ಇದೆ. ಆದರೆ ಅಗೋತ್ರಜನ ಪರವಾಗಿ ಅದು ಇನ್ನೊಂದು ವಾದವಾಗುತ್ತದೆ.

ಲೇಡಿ ಬ್ರಿಟೊ : ಆ್ಯಂಡ್ರೂ, ಕೆರಳಿಸುವಂತೆ ಮಾತನಾಡಬೇಡಿ. ಕೆಟ್ಟ ಮನುಷ್ಯರಂತೆ ಆಡಬೇಡಿ. ಈಗ ಎರಡೂ ರೀತಿ ಮಾಡುತ್ತಿದ್ದೀರಿ.

ಅಂಡರ್‌ಷಾಫ್ಟ್ : ಈ ಸಂಭಾಷಣೆ, ಅಂಡರ್‌ಷಾಫ್ಟ್ ಸಂಪ್ರದಾಯದ ಒಂದು ಅಂಗ, ಬಿಡ್ಡಿ. ಈ ಉದ್ಯೋಗ ಸ್ಥಾಪಿತವಾದಾಗಿನಿಂದ ಪ್ರತಿಯೊಬ್ಬ ಅಂಡರ್‌ ಷಾಫ್ಟ್ ಹೆಂಡತಿಯೂ ಆತನೊಡನೆ ಹೀಗೇ ಮಾತಾಡಿರ್ತಾಳೆ. ವೃಥಾ ಏಕೆ ಉಸಿರು ಕಳೆದುಕೊಳ್ಳುತ್ತೀಯೆ. ಈ ಸಂಪ್ರದಾಯ ಎಂದಾದರೂ ಮುರಿವು ದಾದರೆ ಸ್ಟೀವನ್ನಿಗಿಂತ ಶಕ್ತನಾದವನಿಗಾದೀತು.

ಲೇಡಿ ಬ್ರಿಟೊ : (ತುಟಿಗಳನ್ನು ಮುಂದೆ ಚಾಚುತ್ತ) ಹಾಗಿದ್ದರೆ, ಹೊರಟುಹೋಗಿ.

ಅಂಡರ್‌ಷಾಫ್ಟ್ : (ಆಕ್ಷೇಪಣೆಯಿಂದ) ಹೊರಟುಹೋಗಿ !

ಲೇಡಿ ಬ್ರಿಟೊ : ಹೌದು. ಹೊರಟುಹೋಗಿ. ಸ್ಟೀವನ್ನಿಗೆ ನೀವು ಏನೂ ಮಾಡ ಲಾಗದಿದ್ದರೆ, ನಿಮ್ಮ ಅಗತ್ಯ ಇಲ್ಲ ಇಲ್ಲಿ. ನಿಮ್ಮ ಅಗೋತ್ರಜನು ಯಾರೊ ಅವನನ್ನು ಹೋಗಿ ನೋಡಿಕೊಳ್ಳಿ.

ಅಂಡರ್‌ಷಾಫ್ಟ್ : ವಿಷಯ ಇದು, ಬಿಡ್ಡಿ.

ಲೇಡಿ ಬ್ರಿಟೊ : ನನ್ನ ಬಿಡ್ಡಿ ಎಂದು ಕರೆಯಬೇಡಿ, ನಾನು ನಿಮ್ಮನ್ನು ಆ್ಯಂಡಿ ಎಂದು ಕರೆಯುವುದಿಲ್ಲ.

ಅಂಡರ್‌ಷಾಫ್ಟ್ : ನನ್ನ ಹೆಂಡತಿಯನ್ನು ಬ್ರಿಟೊಮಾರ್ಟ್ ಎಂದು ಕರೆಯುವುದಿಲ್ಲ. ಅದು ವಿವೇಕವಲ್ಲ. ನಾನು ಹೇಳೋದನ್ನು ಕೇಳು ಪ್ರಿಯೆ ! ಅಂಡರ್‌ಷಾಫ್ಟ್ ಸಂಪ್ರದಾಯ ನನ್ನನ್ನು ಕಷ್ಟಕ್ಕೆ ಈಡುಮಾಡಿದೆ. ನನಗೆ ವಯಸ್ಸು ಆಗುತ ಇದೆ. ನನ್ನ ಪಾಲುಗಾರ ಲಾಜರಸ್ ಕಡೆಗೊಂದು ನಿಲವು ತೆಗೆದುಕೊಂಡಿದ್ದಾನೆ. ಹೀಗೊ ಹಾಗೊ ಉತ್ತರಾಧಿಕಾರಿಯನ್ನು ನಿರ್ಣಯಿಸಬೇಕೆಂದು ಒತ್ತಾಯ

ಮಾಡುತಿದ್ದಾನೆ. ಅವನು ಹೇಳುವುದೂ ಸರಿ, ನೋಡು. ತಕ್ಕ ಉತ್ತರಾಧಿಕಾರಿ ನನಗೆ ಇನ್ನೂ ಸಿಕ್ಕಿಲ್ಲ.

ಲೇಡಿ ಬ್ರಿಟೊ : (ಮೊಂಡುತನದಿಂದ) ಸ್ಟೀವನ್ ಇದ್ದಾನೆ.

ಅಂಡರ್‌ಷಾಫ್ಟ್ : ಅದೇ ನೋಡು. ನನಗೆ ಸಿಕ್ಕಿರುವ ಅಗೋತ್ರಜರೆಲ್ಲ ಸ್ಟೀವನ್ನರಂತಿದ್ದಾರೆ.

ಲೇಡಿ ಬ್ರಿಟೊ : ಆ್ಯಂಡ್ರೂ !!

ಅಂಡರ್‌ಷಾಫ್ಟ್ : ನನಗೊಬ್ಬ ಮನುಷ್ಯ ಬೇಕು. ಶಾಲೆಯ ವಿದ್ಯಾಭ್ಯಾಸ, ಬಂಧುಗಳು, ಇಲ್ಲದವನು. ಎಂದರೆ, ಬಲಿಷ್ಠನಾದ ಮನುಷ್ಯನಾಗದೆ ಹೋದರೆ ಎಲ್ಲಿಯೂ ಸ್ಥಾನ ಸಿಕ್ಕದಂಥವನಾಗಿರಬೇಕು ಅವನು. ಅಂಥವನು ಸಿಕ್ಕಿಲ್ಲ. ಈಗ ಸಿಕ್ಕುವ ಎಲ್ಲ ಅಗೋತ್ರಜರನ್ನೂ ಹಸುಳೆತನದಲ್ಲಿಯೇ ಬರ್ನಾರ್ಡೊ ಸಂಸ್ಥೆಯವರೊ ಶಾಲಾ ಸಂಸ್ಥೆಗಳವರೊ ರಕ್ಷಕ ಸಂಸ್ಥೆಯವರೊ ತೆಗೆದುಕೊಂಡು ಬಿಡುತಾರೆ. ಅವನಲ್ಲಿ ಸ್ವಲ್ಪ ಸಾಮರ್ಥ್ಯ ಕಂಡರೆ ಶಾಲಾ ಉಪಾಧ್ಯಾಯರು ಹಿಡಿಯುತ್ತಾರೆ. ಜೂಜಿನ ಕುದುರೆಯಂತೆ ಸ್ಕಾಲರ್‌ಷಿಪ್ಪುಗಳನ್ನು ಗಳಿಸಲಾಗುವಂತೆ ಶಿಕ್ಷಣ ಕೊಡುತ್ತಾರೆ. ಅವನ ತಲೆ ತುಂಬಾ ಎರಡನೆಯ ದರ್ಜೆಯ ಭಾವಗಳನ್ನು ತುಂಬುತ್ತಾರೆ. ವ್ಯಾಯಾಮ ಮಾಡಿಸಿ ಶಿಸ್ತು ಕೊಟ್ಟು ಸಾಧು ಮಾಡುತ್ತಾರೆ. ಸದಭಿರುಚಿ ಎಂಬುದನ್ನು ಕಲಿಸುತ್ತಾರೆ. ಜೀವ ಇರುವವರೆಗೂ ಅವನು ಅಂಗವಿಕಲನಾಗಿ, ಓದು ಕಲಿಸುವುದು ಬಿಟ್ಟು ಇನ್ನಾವುದಕ್ಕೂ ಯೋಗ್ಯನಾಗದೆ ಇರುವಂತೆ ಮಾಡುತ್ತಾರೆ. ಈ ಕುಟುಂಬದಲ್ಲಿ ಕಾರ್ಖಾನೆ ಉಳಿಸಬೇಕು ಎಂದು ನಿನಗೆ ಇಷ್ಟವಿದ್ದರೆ ತಕ್ಕ ಅಗೋತ್ರಜ ವರನನ್ನು ಕಂಡು ಹಿಡಿದು ಅವನಿಗೆ ಬಾರ್ಬರಳನ್ನು ಕೊಟ್ಟು ಮದುವೆ ಮಾಡು.

ಲೇಡಿ ಬ್ರಿಟೊ : ಆ...ಬಾರ್ಬರ ನಿಮ್ಮ ಮೋಹದ ಹುಡುಗಿ. ಬಾರ್ಬರಗೋಸ್ಕರ ಸ್ಟೀವನ್ನನ್ನು ನೀವು ತ್ಯಾಗಮಾಡಲುಳ್ಳವರು.

ಅಂಡರ್‌ಷಾಫ್ಟ್ : ಸಂತೋಷವಾಗಿ. ನೀನು ಪ್ರಿಯೆ, ಬಾರ್ಬರಳನ್ನು ಬೇಯಿಸಿ ಸ್ಟೀವನ್ನಿಗೆ ಹುಳಿ ಮಾಡಿ ಬಡಿಸುತೀಯೆ.

ಲೇಡಿ ಬ್ರಿಟೊ : ಇದು ನಮ್ಮ ಇಷ್ಟ ಅನಿಷ್ಟದ ಪ್ರಶ್ನೆ ಅಲ್ಲ ; ಕರ್ತವ್ಯದ ಪ್ರಶ್ನೆ. ಸ್ಟೀವನ್ನನ್ನು ಉತ್ತರಾಧಿಕಾರಿಯನ್ನಾಗಿ ಮಾಡುವುದು ನಿಮ್ಮ ಕರ್ತವ್ಯ.

ಅಂಡರ್‌ಷಾಫ್ಟ್ : ನಿನ್ನ ಗಂಡನ ಮನಸ್ಸಿಗೆ ನೀನು ತಗ್ಗಿ ನಡೆಯುವುದು ಎಷ್ಟು ಕರ್ತವ್ಯವೊ ಅಷ್ಟು ಮಟ್ಟಿಗೆ. ಬಿಡು ಬಿಡ್ಡಿ ! ಆಳುವ ವರ್ಗಗಳವರ ತಂತ್ರಗಳು ನನ್ನಲ್ಲಿ ನಡೆಯುವುದಿಲ್ಲ. ನಾನೂ ಅಂಥ ಆಳುವ ವರ್ಗಕ್ಕೆ ಸೇರಿದವನು. ಉಪದೇಶಕನೊಬ್ಬನಿಗೆ ಬೋಧನೆ ಮಾಡುವುದು ಕಾಲಹರಣ ಮಾಡಿದಂತೆ. ಈ

ಸಂಬಂಧದಲ್ಲಿ ನನಗೆ ಸಾಮರ್ಥ್ಯ ಇದೆ. ಆದರೆ ನಿನ್ನ ಕಾರ್ಯಸಿದ್ಧಿಗಾಗಿ ಅದನ್ನು ಉಪಯೋಗಿಸಲು ನನ್ನನ್ನು ಯಾರೂ ಭ್ರಾಂತಿಗೊಳಿಸಲಾರರು.

ಲೇಡಿ ಬ್ರಿಟೊ : ಆ್ಯಂಡ್ರ್ಯೂ, ನನ್ನ ತಲೆ ಏಗರಿಹೋಗುವ ಹಾಗೆ ನೀವು ಮಾತನಾಡಬಲ್ಲಿರಿ. ಆದರೆ ತಪ್ಪನ್ನು ಸರಿ ಎಂದು ಬದಲಾಯಿಸಲಾಗುವುದಿಲ್ಲ. ನಿಮ್ಮ ಕೊರಳ ಪಟ್ಟಿ ಒಂದೇ ಕಡೆಗೆ ಇದೆ. ಸರಿ ಮಾಡಿಕೊಳ್ಳಿ.

ಅಂಡರ್‌ಷಾಫ್ಟ್ : (ತಬ್ಬಿಬ್ಬಾಗಿ) ಕ್ಲಿಪ್ ಹಾಕಿದ ಹೊರತು ಅದು ಸರಿಯಾಗಿ ನಿಲ್ಲುವುದಿಲ್ಲ.

(ಮಗುವಿನಂತೆ ಮುಖಮಾಡುತ್ತ ಎಲ್ಲಿದೆಯೊ ಹುಡುಕುತ್ತಾನೆ.)

(ಸ್ಟೀವನ್ ಪ್ರವೇಶ)

ಸ್ಟೀವನ್ : (ಬಾಗಿಲಲ್ಲಿ) ಕ್ಷಮಿಸಿ, (ಹೊರಟುಹೋಗಲಿರುವನು)

ಲೇಡಿ ಬ್ರಿಟೊ : ಇಲ್ಲ, ಒಳಗೆ ಬಾ, ಸ್ಟೀವನ್.

(ಸ್ಟೀವನ್ ತಾಯಿಯು ಬರೆಯುವ ಮೇಜಿನ ಬಳಿ ಬರುತ್ತಾನೆ)

ಅಂಡರ್‌ಷಾಫ್ಟ್ : (ಹೆಚ್ಚು ಆದರವಿಲ್ಲದೆ) Good afternoon.

ಸ್ಟೀವನ್ : (ವಿಶ್ವಾಸವಿಲ್ಲದೆ) Good afternoon .

ಅಂಡರ್‌ಷಾಫ್ಟ್ : (ಲೇಡಿ ಬ್ರಿಟೊಗೆ) ಸಂಪ್ರದಾಯವೆಲ್ಲ ಅವನಿಗೆ ಗೊತ್ತಿದೆ ಎಂದು ಕೊಂಡಿದ್ದೇನೆ ?

ಲೇಡಿ ಬ್ರಿಟೊ : ಹೌದು. (ಸ್ಟೀವನ್ನನ್ನು ಕುರಿತು) ನಾನು ನಿನ್ನೆ ರಾತ್ರಿ ಹೇಳಿದ ವಿಷಯ ಸ್ಟೀವನ್.

ಅಂಡರ್‌ಷಾಫ್ಟ್ : (ವ್ಯಗ್ರನಾಗಿ, ಮುನಿಸಿಂದ ಬಿಗಿಯಾಗಿ) ಈ ಫಿರಂಗಿ ವ್ಯಾಪಾರದ ಒಳಕ್ಕೆ ಬರಬೇಕೆಂಬುದು ನಿನ್ನ ಇಷ್ಟವಿದ್ದಂತಿದೆ.

ಸ್ಟೀವನ್ : ವ್ಯಾಪಾರಕ್ಕೆ ನಾನು ಹೋಗುವುದೆ ! ಖಂಡಿತ ಇಲ್ಲ.

ಅಂಡರ್‌ಷಾಫ್ಟ್ : (ಕಣ್ಣುಗಳನ್ನು ತೆರೆದು, ಮನಸ್ಸಿನ ಹೊರೆ ಇಳಿದಂತೆ ನಡತೆ ಹಗುರವಾಗಿ) ಓ, ಹಾಗಿದ್ದರೆ—

ಲೇಡಿ ಬ್ರಿಟೊ : ಫಿರಂಗಿಗಳದು ವ್ಯಾಪಾರ ಅಲ್ಲ, ಸ್ಟೀವನ್, ಅದು ಸಾಹಸೋದ್ಯಮ.

ಸ್ಟೀವನ್ : ಯಾವ ರೀತಿಯಲ್ಲಿಯೂ ಯಾವ ಅರ್ಥದಲ್ಲಿಯೂ ನನಗೆ ವ್ಯಾಪಾರಿಯೊ ಉದ್ಯಮಿಯೊ ಆಗುವ ಇಷ್ಟ ಇಲ್ಲ, ಅಮ್ಮ. ಆ ಸಾಮರ್ಥ್ಯವೂ ಇಲ್ಲ. ನನಗೆ ಅಭಿರುಚಿಯೂ ಇಲ್ಲ. ನನ್ನ ಗಮನವನ್ನೆಲ್ಲ ನಾನು ರಾಜಕೀಯಕ್ಕೆ ಕೊಡಬೇಕೆಂದಿದ್ದೇನೆ.

ಅಂಡರ್‌ಷಾಫ್ಟ್ : (ಏಳುತ್ತ) ನನ್ನ ಮನಸ್ಸನ್ನು ಇದು ತುಂಬಾ ಹಗುರ ಮಾಡಿತು.

ಮಗು. ಅದರಿಂದ ದೇಶಕ್ಕೂ ಅಷ್ಟೇ ಸಮವಾಗಿ ಒಳ್ಳೆಯದಾಗುವುದೆಂದು ನಾನು ನಂಬಿದ್ದೇನೆ. ನನಗೆ ಭಯ ಇತ್ತು—ನಿನ್ನನ್ನು ನಿರುತ್ತೇಜನಗೊಳಿಸಿದ್ದೇನೆ ತಾತ್ಸಾರ ಮಾಡುತ್ತಿದ್ದೇನೆ ಎಂದುಕೊಳ್ಳುವಿಯೇನೊ ಎಂದು—

(ಸ್ಟೀವನ್ ಬಳಿಗೆ, ಅವನ ಕೈ ಕುಲುಕಲೆಂಬಂತೆ ನಡುವೆ ಸರಿಯುತ್ತಾನೆ.)

ಲೇಡಿ ಬ್ರಿಟೊ : (ಎದ್ದು ನಡುವೆ ಬಂದು) ಸ್ಟೀವನ್ ನೀನು ಹೀಗೆ ದೊಡ್ಡ ಆಸ್ತಿಯನ್ನು ಬಿಟ್ಟು ಬಿಡಲು ನಾನು ಅವಕಾಶ ಕೊಡುವುದಿಲ್ಲ.

ಸ್ಟೀವನ್ : (ಬಿಗಿಯಾಗಿ) ಅಮ್ಮ...ನನ್ನನ್ನು ಮಗುವಿನ ಹಾಗೆ ನೀನು ಕಾಣುವುದು ಕೊನೆಗೊಳ್ಳಬೇಕು. ನೀನು ಅದಕ್ಕೆ ಮನಸ್ಸು ಮಾಡಬೇಕು. (ಅವನ ಧ್ವನಿಯಿಂದ ಗಾಯಗೊಂಡವಳಂತೆ ಹಿಮ್ಮೆಟ್ಟುತ್ತಾಳೆ.) ನಿನ್ನೆ ರಾತ್ರಿಯವರೆಗೂ ನಿನ್ನ ನಿಲವನ್ನು ನಾನು ವಾಸ್ತವವೆಂದುಕೊಳ್ಳಲಿಲ್ಲ. ಏಕೆಂದರೆ—ನಿನ್ನ ಮನಸ್ಸಿನ ಅರ್ಥ ಅದು ಎಂದು, ನಾನು ಭಾವಿಸಿರಲಿಲ್ಲ. ಈಗ ಗೊತ್ತಾಗುತ್ತದೆ : ಎಷ್ಟೋ ವರ್ಷಗಳ ಹಿಂದೆ, ನನಗೆ ವಿವರಿಸಬೇಕಾದ್ದನ್ನು ನನಗೆ ತಿಳಿಸದೆ ಮರೆಯಲ್ಲಿ ಇಟ್ಟು ಬಿಟ್ಟೆ. ನನಗದು ನೋವನ್ನು ಉಂಟುಮಾಡಿದೆ; ನನಗೆ ಕೋಪ ಉಂಟಾಗಿದೆ. ಮುಂದಿನ ನನ್ನ ಉದ್ದೇಶಗಳನ್ನು ಕುರಿತ ಚರ್ಚೆಗಳನ್ನು ಗಂಡಸರಾದ ನಾನು, ನಮ್ಮ ತಂದೆ ಮಾಡುವುದು ಒಳ್ಳೆಯದು.

ಲೇಡಿ ಬ್ರಿಟೊ : ಸ್ಟೀವನ್ ! (ಕೆಳಗೆ ಕುಳಿತುಕೊಳ್ಳುತ್ತಾಳೆ. ಕಣ್ಣಲ್ಲಿ ನೀರು ತುಂಬುತ್ತದೆ.)

ಅಂಡರ್‌ಷಾಫ್ಟ್ : (ತೀವ್ರ ಸೌಹಾರ್ದದಿಂದ) ಇಲ್ಲಿ ನೋಡಿದೆಯ, ದೊಡ್ಡ ಗಂಡುಗಳು ಮಾತ್ರವೇ ತಮ್ಮನ್ನು ಮಕ್ಕಳಂತೆ ಇತರರು ಕಂಡರೆ ತಾಳಿಕೊಳ್ಳಬಲ್ಲವರು.

ಸ್ಟೀವನ್ : ಕ್ಷಮಿಸಮ್ಮ. ನನ್ನನ್ನು ನೀನು ಬಲಾತ್ಕರಿಸಿದೆ—

ಅಂಡರ್‌ಷಾಫ್ಟ್ : (ಅವನನ್ನು ತಡೆಯುತ್ತ) ಹೌದು, ಹೌದು, ಹೌದು, ಹೌದು ಸ್ಟೀವನ್, ಅದೆಲ್ಲ ಸರಿ ಸ್ಟೀವನ್, ಪುನಃ ನಿನ್ನ ಮಾತಿಗೆ ಆಕೆ ಬರುವುದಿಲ್ಲ. ನಿನ್ನ ಸ್ವಾಧೀನತೆಯನ್ನು ಸಂಪಾದಿಸಿಯಾಯಿತು. ಮನೆಯ ಹೊರಬಾಗಿಲ ಬೀಗದ ಕೈ ಒಂದನ್ನು ಸಂಪಾದಿಸಿದ ಹಾಗಾಯಿತು. ಅದನ್ನು ಒತ್ತಬೇಡ. ನೀನು ಯಾವ ಕ್ಷಮೆಯನ್ನೂ ಕೇಳಬೇಕಾದ್ದಿಲ್ಲ.

(ತನ್ನ ಆಸನದಲ್ಲಿ ಕುಳಿತುಕೊಳ್ಳುತ್ತಾನೆ.)

ಗಂಡಸರು ಗಂಡಸರಂತೆ ಮಾತನಾಡೋಣ ! ಈಗ ಹೇಳು : ನಿನ್ನ ಭವಿಷ್ಯ ಹೇಗೆ? ಕ್ಷಮಿಸು, ಬಿಡ್ಡಿ. ಇಬ್ಬರು ಗಂಡಸರಿಗೂ ಒಬ್ಬ ಹೆಂಗಸಿಗೂ ನಡುವೆಯದು ಈ ಮಾತು.

ಲೇಡಿ ಬ್ರಿಟೊ : (ಪೂರ್ತಿ ತನ್ನ ಸ್ವಾಸ್ಥ್ಯವನ್ನು ಪಡೆದುಕೊಂಡಿದ್ದಾಳೆ.) ನನಗರ್ಥವಾಯಿತು ಸ್ಟೀವನ್. ನಿನಗೆ ಸಾಕಷ್ಟು ಶಕ್ತಿ ಬಂದಿದ್ದರೆ ನಿನ್ನ ದಾರಿ ನೀನು ಹಿಡಿಯು

ಬಹುದು, ಇನ್ನು. (ಸ್ಟೀವನ್ ನಿರ್ಣಾಯಕವಾಗಿ ಬರೆಯುವ ಮೇಜಿನ ಪಕ್ಕದ ಕುರ್ಚಿಯಲ್ಲಿ ಕೂಡುವನು, ತನಗೆ ವಯಸ್ಸು ಬಂದುದನ್ನು ಸ್ಥಾಪಿಸುವಂತೆ)

ಅಂಡರ್‌ಷಾಫ್ಟ್ : ನೀನು ಫಿರಂಗಿ ಕೆಲಸಕ್ಕೆ ಉತ್ತರಾಧಿಕಾರ ಕೇಳುವುದಿಲ್ಲವೆಂದು ನಿರ್ಣಯವಾದಂತೆಯೇ, ಅಲ್ಲವೆ !

ಸ್ಟೀವನ್ : ಫಿರಂಗಿ ಕೆಲಸಕ್ಕೆ ನನ್ನ ಧಿಕ್ಕಾರವಿದೆಯೆಂಬುದು ನಿರ್ಣಯವಾಯಿತೆಂದು ನನ್ನ ನಂಬಿಕೆ.

ಅಂಡರ್‌ಷಾಫ್ಟ್ : ಅದು ಹಾಗಿರಲಿ, ನೋಡು. ಅಷ್ಟು ಕೆಟ್ಟ ಅಪ್ರಸನ್ನತೆ ಬೇಡ. ಅದು ಹುಡುಗುತನ. ಬಿಡುಗಡೆ ಹೊಂದಿದವರು ಉದಾರಿಗಳಾಗಿರಬೇಕು. ಪಿತ್ರಾರ್ಜಿತವನ್ನು ನಿನಗೆ ಕೊಡುವುದಕ್ಕೆ ಬದಲಾಗಿ ನಿನ್ನ ಜೀವನದಲ್ಲಿ ಮೇಲ್ತರದ ಆರಂಭವಾಗುವಂತೆ ನಾನು ಅನುಕೂಲ ಕಲ್ಪಿಸಬೇಕಾಗಿದೆ. ...ಒಮ್ಮೆಗೇ ನೀನು ನಾಡಿನ ಪ್ರಧಾನಮಂತ್ರಿಯಾಗಲಾರೆ. ನಿನಗೆ ಯಾವುದರಲ್ಲಾದರೂ ಒಲು ಇಲ್ಲವೆ ? ಸಾಹಿತ್ಯ, ಕಲೆ, ಇತ್ಯಾದಿ, ಯಾವುದಾದರೂ ನಿನ್ನ ಮನಸ್ಸಿಗೆ ಬರುತ್ತದೆಯೆ !

ಸ್ಟೀವನ್ : ಶಕ್ತಿಯಲ್ಲಾಗಲಿ, ಶೀಲದಲ್ಲಾಗಲಿ, ದೇವರ ದಯದಿಂದ, ನನ್ನಲ್ಲಿ ಕಲೆಗಾರನ ಅಂಶ ಏನೂ ಇಲ್ಲ.

ಅಂಡರ್‌ಷಾಫ್ಟ್ : ದಾರ್ಶನಿಕನೇನೊ ? ಆ !

ಸ್ಟೀವನ್ : ಅಂಥ ಹಾಸ್ಯಾಸ್ಪದ ಆಡಂಬರಗಳೂ ನನ್ನಲ್ಲಿಲ್ಲ.

ಅಂಡರ್‌ಷಾಫ್ಟ್ : ಹಾಗೇ ಸರಿ...ಹಾಗಾದರೆ, ಸೈನ್ಯ ಇದೆ. ನೌಕಾದಳ ಇದೆ. ಚರ್ಚಿದೆ. ನ್ಯಾಯವಾದಿ ಮಂಡಲವಿದೆ. ನ್ಯಾಯವಾದಿತ್ವಕ್ಕೆ ಸ್ವಲ್ಪ ಯೋಗ್ಯತೆ ಬೇಕು. ಬಾರ್ ವಿಷಯ ಏನೆನ್ನುತ್ತೀಯ ?

ಸ್ಟೀವನ್ : ನಾನು ಕಾನೂನನ್ನು ಓದಿಲ್ಲ. ಅದಕ್ಕೆ ಅಗತ್ಯವಾದ ನುಗ್ಗು ನನ್ನಲ್ಲಿಲ್ಲ. ಬ್ಯಾರಿಸ್ಟರು ತಮ್ಮ ಗ್ರಾಮ್ಯತೆಗೆ ಆ ಹೆಸರು ಕೊಡುತ್ತಾರೆಂದು ಕಾಣುತ್ತದೆ— ಕೋರ್ಟುಗಳಲ್ಲಿ ವಾದಮಾಡಿ ಜಯಿಸುವುದಕ್ಕೆ.

ಅಂಡರ್‌ಷಾಫ್ಟ್ : ನಿನ್ನದು ಸ್ವಲ್ಪ ಕ್ಲಿಷ್ಟ ಸ್ಥಿತಿ, ಸ್ಟೀವನ್. ನಾಟ್ಯರಂಗ ಬಿಟ್ಟು ಇನ್ನೇನೂ ಉಳಿದಿರುವಂತಿಲ್ಲ. (ಸ್ಟೀವನ್ ಸಹನೆ ತಪ್ಪಿದ ಚಲನೆ ಮಾಡುತ್ತಾನೆ.) ಸರಿ ! ಆಯಿತು, ಬೇರೆ ಏನಾದರೂ ಇದೆಯೊ ? ನೀನು ತಿಳಿದದ್ದು, ಒಲಿಯುವುದು ಇನ್ನು ಯಾವುದಾದರೂ ಇದೆಯೇನು ?

ಸ್ಟೀವನ್ : (ಎದ್ದು ಸ್ಥಿರವಾಗಿ ಅವನ ಕಡೆ ನೋಡುತ್ತ) ಸರಿ, ತಪ್ಪು ಎಂಬುದರ ನಡುವೆ ಇರುವ ವ್ಯತ್ಯಾಸ ನನಗೆ ಗೊತ್ತು.

ಅಂಡರ್‌ಷಾಫ್ಟ್ : (ತುಂಬಾ ವಿನೋದ ಉಂಟಾಗಿ) ನಿಜವಾಗಿ ಹಾಗಂತೀಯೇನು ! ಏನು ; ಉದ್ಯೋಗಕ್ಕೆ ಸಾಮರ್ಥ್ಯವಿಲ್ಲ ; ಕಾನೂನಿನ ಜ್ಞಾನ ಇಲ್ಲ ; ಕಲೆಗೆ

ಸಹಾನುಭೂತಿ ಇಲ್ಲ, ತತ್ತ್ವಶಾಸ್ತ್ರದ ವಿಚಾರದಲ್ಲಿ ಯಾವ ಭ್ರಾಂತಿಯೂ ಇಲ್ಲ; ಆದರೆ, ಯಾವ ರಹಸ್ಯ ಎಲ್ಲ ತತ್ತ್ವಜ್ಞರನ್ನೂ ದಿಗ್ಭ್ರಮೆ ಹಿಡಿಸಿದೆಯೊ, ಎಲ್ಲ ನ್ಯಾಯವಾದಿಗಳ ಮನಸ್ಸಿಗೆ ಮೀರಿದೆಯೊ, ಎಲ್ಲ ಉದ್ಯಮಿಗಳ ಬುದ್ಧಿಯನ್ನು ಕದಡಿದೆಯೊ, ಕಲೆಗಾರರಲ್ಲಿ ಬಹುಮಂದಿಯನ್ನು ನಾಶಮಾಡಿದೆಯೊ—ಆ ಸರಿ ತಪ್ಪುಗಳ ರಹಸ್ಯ, ಸರಳವಾದ ಅದರ ಜ್ಞಾನ, ನಿನಗಿದೆಯೆ ? ಏನಯ್ಯ, ನೀನು ಪ್ರತಿಭಾವಂತ ; ಗುರುಗಳಿಗೆ ಗುರು ; ಒಬ್ಬ ದೇವತೆ, ಇಪ್ಪತ್ತನಾಲ್ಕು ವಯಸ್ಸಿಗಾಗಲೇ—

ಸ್ಟೀವನ್ : (ತನ್ನ ತಾಳ್ಮೆಯನ್ನು ಕಷ್ಟದಿಂದ ತಡೆದುಕೊಂಡು) ನಿಮಗೆ ಹಾಸ್ಯ ಮಾಡಬೇಕು ಎನಿಸುತ್ತಿದೆ ! ಸಾಮಾನ್ಯವಾಗಿ ಎಲ್ಲ ಮರ್ಯಾದಸ್ಥ ಇಂಗ್ಲಿಷ್ ಸಭ್ಯರೂ ತಮ್ಮ ಆಜನ್ಮ ಹಕ್ಕೆನ್ನುವುದಕ್ಕಿಂತ ಹೆಚ್ಚಿನ ಇನ್ನಾವುದನ್ನೂ ನಾನು ಕೇಳುವುದಿಲ್ಲ.

(ಕೋಪದಿಂದ ಕುಳಿತುಕೊಳ್ಳುತ್ತಾನೆ.)

ಅಂಡರ್‌ಷಾಫ್ಟ್ : ಓ, ಅದು ಸರ್ವರ ಆಜನ್ಮ ಹಕ್ಕು ! ಆ ಬಡಪಾಯಿ ಜೆನ್ನಿ ಹಿಲ್ಲನ್ನು ನೋಡು : ಮುಕ್ತಿಸೈನ್ಯದ ಹುಡುಗಿ. ನೀನು ಅವಳನ್ನು ಕೇಳು : ಬೀದಿಯಲ್ಲಿ ನಿಂತು—ವ್ಯಾಕರಣ, ಭೂಗೋಳ, ಗಣಿತ, ಕಡೆಗೆ ದಿವಾನಖಾನೆಯ ನೃತ್ಯ ಹೇಳಿಕೊಡು ಎಂದರೆ ತನ್ನನ್ನು ನೋಡಿ ನೀವು ನಗುತಿದ್ದೀರಿ ಎಂದು ಕೊಳ್ಳುತ್ತಾಳೆ. ಆದರೆ ನೀತಿಯನ್ನೂ ಮತ ಧರ್ಮವನ್ನೂ ತಾನು ಬೋಧಿಸ ಬಲ್ಲಳೆಂಬುದರಲ್ಲಿ ಅವಳಿಗೆ ಎಂದಿಗೂ ಸಂದೇಹ ಬರುವುದಿಲ್ಲ. ನೀವೆಲ್ಲ ಒಂದೇ ರೀತಿಯ ಮರ್ಯಾದಸ್ಥ ಜನ. ಹತ್ತಂಗುಲದ ಒಂದು ಕೋವಿ ಸಿಡಿಯುವ ಒತ್ತಡ ಎಷ್ಟು ಎಂಬುದನ್ನು ನೀವು ಹೇಳಲಾರಿರಿ. ಅದು ಬಹು ಸರಳ ಸಂಗತಿ. ಆದರೆ ಆಸೆ ಇಡಿಸುತ್ತ, ಪ್ರಪಂಚ ಮೋಹಗೊಳಿಸುತ್ತಿರುವಾಗ ಒಬ್ಬ ಮನುಷ್ಯನು ಯಾವ ಒತ್ತಡದಲ್ಲಿ ಸಿಡಿಯುತ್ತಾನೆ ಎಂದು ಹೇಳಲು ನಿಮ್ಮ ಕೈಯಲ್ಲಾಗುತ್ತದೆ ಎಂಬುದು ನಿಮ್ಮೆಲ್ಲರ ಭಾವನೆ ! ದೊಡ್ಡ ಸಿಡಿಮದ್ದುಗಳಿಗೆ ಕೈಹಚ್ಚಲು ನಿಮಗೆ ಧೈರ್ಯವಿಲ್ಲ. ಪ್ರಾಮಾಣಿಕತೆ, ಸತ್ಯ, ನ್ಯಾಯ, ಮಾನವರ ಸಮಸ್ತ ಕರ್ತವ್ಯ— ಇವುಗಳ ಪ್ರಯೋಗದಲ್ಲಿ ನೀವೆಲ್ಲರೂ ಸಿದ್ಧರೇ. ಆ ಆಟದಲ್ಲಿ ಒಬ್ಬರನ್ನು ಒಬ್ಬರು ಕೊಲ್ಲುತ್ತೀರಿ. ಎಂಥ ದೇಶ ! ಎಂಥ ಲೋಕ !

ಲೇಡಿ ಬ್ರಿಟೊ : (ನೆಮ್ಮದಿ ಇಲ್ಲದೆ) ಅವನು ಬೇರೆ ಏನನ್ನು ಮಾಡಬಹುದು ಅನ್ನಿಸುತ್ತೆ ನಿಮಗೆ ಆ್ಯಂಡ್ರ್ಯೂ...

ಅಂಡರ್‌ಷಾಫ್ಟ್ : ಓ, ಅವನು ಏನು ಮಾಡಬೇಕು ಎನ್ನುತ್ತಾನೆಯೊ ಅದನ್ನು. ಅವನಿಗೆ ಏನೂ ಗೊತ್ತಿಲ್ಲ, ಎಲ್ಲವೂ ಗೊತ್ತಿದೆ ಎಂದುಕೊಂಡಿದ್ದಾನೆ. ರಾಜಕೀಯ ವೃತ್ತಿಯ ಕಡೆಗೆ ಅದು ಖಚಿತ ಸೂಚನೆ. ಯಾವನಿಗಾದರೂ ಖಾಸಗಿ

ಕಾರ್ಯದರ್ಶಿಯಾಗಲು ಏರ್ಪಡಿಸಿದರೆ ಅವನು ಇವನಿಗೆ ಸರಕಾರದಲ್ಲಿ ಉಪಕಾರ್ಯದರ್ಶಿತ್ವವನ್ನು ಕೊಡಿಸುತ್ತಾನೆ. ಆಮೇಲೆ ಅವನಷ್ಟಕ್ಕೆ ಅವನನ್ನು ಬಿಡು. ತನಗೆ ಸಹಜವಾದ ಯೋಗ್ಯ ಸ್ಥಳವನ್ನು ಕಂಡುಕೊಳ್ಳುತ್ತಾನೆ. ಕೊನೆಗೆ ಮಂತ್ರಿಮಂಡಲದಲ್ಲಿ ಸ್ಥಾನಪಡೆಯುತ್ತಾನೆ.

ಸ್ಟೀವನ್ : ಕ್ಷಮಿಸಬೇಕು. ತಂದೆಯಾದ ನಿಮಗೆ ತಕ್ಕುದಾದ ಮರ್ಯಾದೆಯನ್ನು ತೋರಿಸಲು ಮರೆಯುವಂತೆ ನನ್ನನ್ನು ಬಲಾತ್ಕರಿಸುತ್ತಿದ್ದೀರಿ. ನಾನು ಇಂಗ್ಲಿಷ್‌ಮನ್. ನನ್ನ ದೇಶದ ಸರ್ಕಾರದ ಅವಹೇಳನವನ್ನು ನಾನು ಕೇಳುವವನಲ್ಲ.

(ಕೈಗಳನ್ನು ಜೇಬಿನಲ್ಲಿ ತುರುಕಿಕೊಂಡು ಕೋಪದಲ್ಲಿ ಕಿಟಕಿಯ ಕಡೆಗೆ ದಾಟಿ ನಡೆದು ಹೋಗುತ್ತಾನೆ.)

ಅಂಡರ್‌ಷಾಫ್ಟ್ : (ಸ್ವಲ್ಪ ಒರಟುತನದಲ್ಲಿ) ನಿನ್ನ ದೇಶದ ಸರ್ಕಾರ ! ನಿನ್ನ ದೇಶದ ಸರ್ಕಾರ ನಾನು : ನಾನು, ಲಾಜರಸ್. ನೀನೂ ನಿನ್ನಂಥ ಇನ್ನರ್ಧ ಡಜನ್ ವಿಲಾಸಿಗಳೂ ಒಂದು ಸಾಲಲ್ಲಿ ಆ ತಿಳಿಗೇಡಿ ಮಾತಿನ ಅಂಗಡಿಯಲ್ಲಿ ಕುಳಿತು ಅಂಡರ್‌ಷಾಫ್ಟ್ ಮತ್ತು ಲಾಜರಸನ್ನು ಆಳಬಲ್ಲಿರೆಂದು ತಿಳಿದಿದ್ದೀರ ? ಇಲ್ಲ, ಗೆಳೆಯ. ನಮಗೆ ಲಾಭ ತರುವುದನ್ನು ನೀವು ಮಾಡುತ್ತೀರಿ ; ನಮ್ಮ ಅನುಕೂಲಕ್ಕೆಂದಾಗ ಯುದ್ಧ ಮಾಡುತ್ತೀರಿ. ಅನುಕೂಲವಾಗದಿದ್ದರೆ ಶಾಂತಿಯನ್ನು ನಡಸಿಕೊಡುತ್ತೀರಿ. ನಿಮಗೆ ಗೊತ್ತಾಗುತ್ತದೆ ವ್ಯಾಪಾರಕ್ಕೆ ಕೆಲವು ಕಾಯಿದೆಗಳು ಬೇಕು ಎಂದು ;—ಅಂಥ ಕಾಯಿದೆಗಳು ಬೇಕು ಎಂದು ನಾವು ನಿರ್ಣಯಿಸಿದಾಗ. ನಮಗೆ ಡಿವಿಡೆಂಡು ಹೆಚ್ಚಲು ಏನಾದರೂ ಬೇಕೆನ್ನಿಸಿದಾಗ ನಿಮಗೆ ಗೊತ್ತಾಗುತ್ತದೆ ನನ್ನ ಇಷ್ಟವೇ ರಾಷ್ಟ್ರದ ಅಗತ್ಯವೆಂದು. ನನ್ನ ಡಿವಿಡೆಂಡುಗಳನ್ನು ಕುಗ್ಗಿಸಲು ಇತರರು ಏನನ್ನಾದರೂ ಬಯಸಿದಾಗ ನೀವು ಪೊಲೀಸರನ್ನೂ ಸೈನ್ಯದವರನ್ನೂ ಕರೆಯುತ್ತೀರಿ. ಅದಕ್ಕೆ ಪ್ರತಿಯಾಗಿ ನನ್ನ ವೃತ್ತಪತ್ರಿಕೆಗಳ ನೆರವೂ ಪ್ರಶಂಸೆಯೂ ನಿಮಗೆ ದೊರೆಯುತ್ತದೆ. ನೀನು ಬಹು ದೊಡ್ಡ ರಾಜಧರ್ಮಜ್ಞನೆಂದು ಭಾವಿಸಿಕೊಳ್ಳಬಲ್ಲ ಸಂತೋಷ ನಿನಗೆ ಉಂಟಾಗುತ್ತದೆ. ನಿನ್ನ ದೇಶದ ಸರ್ಕಾರವಂತೆ ! ಹೋಗು, ಮಗು, ನಿಮ್ಮ ಪಕ್ಷಗಳ ಅಭಿಮತದಾರ ಸಂಸ್ಥೆಗಳೊಡನೆ ಆಡಿಕೊ ಹೋಗು. ವೃತ್ತ ಪತ್ರಿಕೆಗಳ ಪ್ರಧಾನ ಲೇಖನಗಳು, ಇತಿಹಾಸ ಪ್ರಸಿದ್ಧ ಪಕ್ಷಗಳು, ಮಹಾ ನಾಯಕರು, ತೀವ್ರ ಚರ್ಚಾ ವಿಷಯಗಳು ಮುಂತಾದ ಆಟದ ಸಾಮಾನುಗಳೊಡನೆ ಆಡಿಕೊ ಹೋಗು. ನನ್ನ ಹಣದೆಣಿಕೆಯ ಮನೆಗೆ ನಾನು ಹಿಂದಕ್ಕೆ ಹೋಗುತ್ತೇನೆ... ಓಲಗದವರಿಗೆ ಹಣ ಕೊಟ್ಟು ಇಂಥ ಹಾಡನ್ನು ಬಾರಿಸಿ ಎಂದು ಹೇಳಲು.

ಸ್ಟೀವನ್ : (ನಿಜವಾಗಿ ಮುಗುಳುನಗೆ ನಕ್ಕು, ಆತನನ್ನು ಪ್ರೋತ್ಸಾಹಿಸುವಂತೆ,

ಪ್ರಸನ್ನನಾಗಿ ತನ್ನ ಕೈಯನ್ನು ತಂದೆಯ ಭುಜದ ಮೇಲಿಟ್ಟು) ನಿಜವಾಗಿ, ಅಪ್ಪ, ನಿಮ್ಮ ಮೇಲೆ ಕೋಪಿಸಿಕೊಳ್ಳುವುದು ಅಶಕ್ಯ. ನನಗೆ ಇವೆಲ್ಲ ಎಷ್ಟು ಅವಿವೇಕವಾಗಿ ಕೇಳಿಸುತ್ತದೆಯೆಂಬುದು ನಿಮಗೆ ಗೊತ್ತಿಲ್ಲ. ನೀವು ತುಂಬಾ ಕೆಲಸಮಾಡಿ, ಬೇಕಾದಷ್ಟು ಹಣ ಗಳಿಸಿದ್ದೀರಿ. ಅದಕ್ಕಾಗಿ ನ್ಯಾಯವಾಗಿ ನಿಮಗೆ ತುಂಬಾ ಹೆಮ್ಮೆ. ಅಷ್ಟು ಹಣ ಮಾಡಿರುವುದು ನಿಮ್ಮ ಕೀರ್ತಿ ಹೆಚ್ಚಿಸುತ್ತದೆ. ನಿಮ್ಮ ಹಣಕ್ಕೆ ಬೆಲೆ ಕೊಡುವ, ಅದಕ್ಕಾಗಿ ಗೌರವ ತೋರುವ ಮಂಡಲಿಗಳಲ್ಲಿ ಅದು ನಿಮ್ಮನ್ನು ಇರಿಸಿದೆ. ಹಳೆಯ ವೈಖರಿಯ ಕಾಲಮರ್ಯಾದೆಗೆ ಎನ್ನಿ, ಈ ಕಾಲಕ್ಕಿಂತ ಹಿಂದಿರುವಂತೆ ಕಾಣಬಹುದಾದ ಸಾರ್ವಜನಿಕ ಶಾಲೆಗಳಲ್ಲಿ, ವಿಶ್ವವಿದ್ಯಾನಿಲಯದಲ್ಲಿ—ಎಂದರೆ, ನನ್ನ ಮನಸ್ಸಿನ ಅಭ್ಯಾಸಗಳು ರೂಪಿತವಾದ ಸ್ಥಾನಗಳಲ್ಲಲ್ಲ. ಇಂಗ್ಲಂಡನ್ನು ಆಳುವುದು ಹಣ ಎಂದು ಯೋಚಿಸುವುದು ನಿಮಗೆ ಸಹಜ. ನನ್ನ ತಿಳಿವಳಿಕೆ ಅದಕ್ಕಿಂತ ಮೇಲೆಂಬುದನ್ನು ಯೋಚಿಸಲು ನೀವು ನನಗೆ ಅವಕಾಶ ಕೊಡಬೇಕು.

ಅಂಡರ್‌ಷಾಫ್ಟ್ : ಹೇಳಪ್ಪ, ಆದರೆ, ಇಂಗ್ಲಂಡನ್ನು ಆಳುವುದು ಯಾವುದು ಎಂದು.

ಸ್ಟೀವನ್ : ಶೀಲ, ಅಪ್ಪ...ಶೀಲ...

ಅಂಡರ್‌ಷಾಫ್ಟ್ : ಯಾರ ಶೀಲ ?...ನಿನ್ನದೊ ನನ್ನದೊ ?

ಸ್ಟೀವನ್ : ನಿಮ್ಮದೂ ಅಲ್ಲ, ನನ್ನದೂ ಅಲ್ಲ. ಇಂಗ್ಲಿಷ್ ರಾಷ್ಟ್ರದಲ್ಲಿನ ಶ್ರೇಷ್ಠ ವರ್ಗಗಳಲ್ಲಿರುವ ಶೀಲ.

ಅಂಡರ್‌ಷಾಫ್ಟ್ : ಸ್ಟೀವನ್ ! ನಿನ್ನ ವೃತ್ತಿ ಇಂಥದೆಂದು ಕಂಡುಕೊಂಡೆನಯ್ಯ ; ನೀನು ಹುಟ್ಟಾ ವೃತ್ತಪತ್ರಿಕಾಕಾರ. ಉನ್ನತ ಧ್ವನಿ, ಆವೇಶ ಉಳ್ಳ ವಾರಪತ್ರಿಕೆಯಲ್ಲಿ ನಿನ್ನ ಜೀವನವನ್ನು ಆರಂಭಿಸುವಂತೆ ಮಾಡುತ್ತೇನೆ. ಆಯಿತೊ !

(ಸ್ಟೀವನ್ ಉತ್ತರ ಕೊಡುವ ಮುಂಚೆ, ಶಾರ, ಬಾರ್ಬರ, ಕಸಿನ್ಸ್, ಲೋಮ್ಯಾಕ್ಸ್ ತಿರುಗಾಟಕ್ಕೆ ಸಿದ್ಧವಾಗಿ ಬರುತ್ತಾರೆ. ಬಾರ್ಬರ ಕೋಣೆಯನ್ನು ದಾಟಿಕೊಂಡು ಕಿಟಕಿಗೆ ಹೋಗಿ ಹೊರಗೆ ನೋಡುತ್ತಾಳೆ. ಕಸಿನ್ಸ್ ಕೈ ಕುರ್ಚಿಯತ್ತ ಆದರದಿಂದ ಹೋಗುತ್ತಾನೆ. ಲೋಮ್ಯಾಕ್ಸ್ ಬಾಗಿಲ ಬಳಿ ಉಳಿಯುತ್ತಾನೆ. ಶಾರ ತಾಯಿಯ ಬಳಿಗೆ ಬರುತ್ತಾಳೆ. ಸ್ಟೀವನ್ ಬರೆಯುವ ಒಂದು ಮೇಜಿನ ಬಳಿಗೆ ಹೋಗಿ ತನ್ನ ಕಾಗದಗಳಲ್ಲಿ ಮಗ್ನನಾಗುತ್ತಾನೆ.)

ಶಾರ : ಹೋಗಿ ಸಿದ್ಧ ಆಗಮ್ಮ ; ಗಾಡಿ ಕಾದಿದೆ.

(ಲೇಡಿ ಬ್ರಿಟೊ ಕೊಠಡಿಯಿಂದ ಹೋಗುತ್ತಾಳೆ.)

ಅಂಡರ್‌ಷಾಫ್ಟ್ : (ಶಾರಾಗೆ) Good day ಮಗು, Good afternoon ಲೋಮ್ಯಾಕ್ಸ್.

ಲೊಮ್ಯಾಕ್ಸ್ : (ಏನೊ ಯೋಚಿಸುವಂತೆ) ಆರೋಗ್ಯವೆ ?

ಅಂಡರ್‌ಷಾಫ್ಟ್ : (ಕಸಿನ್ಸ್‌ಗೆ) ನಿನ್ನೆ, ರಾತ್ರಿಯಾದ ಮೇಲೆ ಸುಖವಾಗಿದ್ದೀಯ, ಯೂರಿಪಿಡೇಸ್ ?

ಕಸಿನ್ಸ್ : ನಿರೀಕ್ಷಿಸಬಲ್ಲಷ್ಟು ಚೆನ್ನಾಗಿ.

ಅಂಡರ್‌ಷಾಫ್ಟ್ : ಸರಿ. (ಬಾರ್ಬರಾಗೆ) ಹಾಗಾದರೆ ನನ್ನ ಮೃತ್ಯುವಿನ ಕಾರ್ಖಾನೆಗೆ —ವಿನಾಶದ ಕಾರ್ಖಾನೆ ನೋಡಲು ನೀನು ಬರುತ್ತೀಯೆನ್ನು ?

ಬಾರ್ಬರ : (ಕಿಟಕಿಯಲ್ಲಿ) ನಿನ್ನೆ ನನ್ನ ಮೋಕ್ಷದ ಕಾರ್ಖಾನೆಯನ್ನು ನೋಡಲು ನೀವು ಬಂದಿರಿ. ಪ್ರತಿಭೇಟಿ ಕೊಡುತ್ತೇನೆಂದು ನಾನು ಮಾತುಕೊಟ್ಟೆ.

ಲೋಮ್ಯಾಕ್ಸ್ : (ಶಾರಾಗೂ ಅಂಡರ್‌ಷಾಫ್ಟ್‌ಗೂ ನಡುವೆ) ನೋಡುವುದಕ್ಕೆ ಅಲ್ಲಿ ತುಂಬಾ ತಮಾಷೆ ಕಾಣಿಸುತ್ತದೆ. ನನಗೆ ವುಲಿಚ್ ಶಸ್ತ್ರಶಾಲೆಯ ಶಿಕ್ಷಣ ಪರಿಚಯ ಉಂಟು. ಕದನ ಮಾಡುವ ಸಮಯ ಬಂದು ಎಷ್ಟು ಜನ ನಾಡಾಡಿಗಳನ್ನು ನಾವು ಕೊಲ್ಲಬಹುದು ಎಂದು ಗೊತ್ತಾಗಿ ತುಂಬಾ ಹೆಚ್ಚಾದ ಸುರಕ್ಷಿತತೆಯ ಭಾವ ಬರುತ್ತದೆ.

(ಅಂಡರ್‌ಷಾಫ್ಟ್‌ಗೆ, ತಟಕ್ಕನೆ ಗಂಭೀರವಾಗಿ) ಆದಾಗ್ಯೂ—ಮತಧರ್ಮದ ದೃಷ್ಟಿಯಿಂದ ಎನ್ನುವ ಹಾಗೆ—ನಿಮಗೆ ತುಂಬಾ ಗಂಭೀರ ಯೋಚನೆ ತರಬಹುದು. ನಿಮ್ಮ ಸಂಪಾದನೆ ಅಭಿವೃದ್ಧಿಗೊಳ್ಳುತ್ತಿದೆ, ಹಾಗೇ...ಇನ್ನೂ ಏನೇನೋ...

ಶಾರ : ಚಾರ್ಲ್ಲಿಯ ಐಲುತನವನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡಿ, ಅಪ್ಪ.

ಲೋಮ್ಯಾಕ್ಸ್ : (ಅಪ್ರತಿಭನಾಗಿ) ಆ ? ಏನೆಂದೆ ? ಚೆನ್ನಾಯ್ತು.

ಅಂಡರ್‌ಷಾಫ್ಟ್ : ಲೋಮ್ಯಾಕ್ಸ್ ವಿಷಯವನ್ನು ತುಂಬಾ ಯುಕ್ತರೀತಿಯಲ್ಲಿ ನೋಡುತಾನೆ, ಮಗು.

ಲೋಮ್ಯಾಕ್ಸ್ : ಹೌದು, ಹಾಗೇ. ನನ್ನ ಮನಸ್ಸಿನಲ್ಲಿದ್ದದ್ದು ಅದೇ. ನಿಮಗೆ ಖಾತರಿ ಕೊಡುತೇನೆ.

ಶಾರ : ನೀನು ಬರುತೀಯ, ಸ್ಟೀವನ್.

ಸ್ಟೀವನ್ : ಆ...ನನಗೆ ತುಂಬಾ ಕೆಲಸ ಇದೆ...(ಔದಾರ್ಯದಿಂದ) ಓ, ಹೌದು, ಬರುತೇನೆ—ನನಗೂ ಜಾಗ ಇದ್ದರೆ.

ಅಂಡರ್‌ಷಾಫ್ಟ್ : ನನ್ನಲ್ಲೊಂದು ಸಣ್ಣ ಮೋಟರಿದೆ. ಯುದ್ಧದ ಕಾಲಗಳಲ್ಲಿ ಬಳಸಲು ಅದನ್ನು ಪ್ರಯೋಗಪರೀಕ್ಷೆ ಮಾಡುತ್ತಿದ್ದೇನೆ. ಅದರಲ್ಲಿ ನನ್ನೊಡನೆ ಇಬ್ಬರನ್ನು ಕರೆದುಕೊಂಡು ಹೋಗಬಲ್ಲೆ. ಅದು ಫ್ಯಾಷನ್ನಿಗೆ ತಕ್ಕ ಹಾಗಿಲ್ಲ. ನೀನು ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲ, ಅಲ್ಲವೆ ? ಅದಕ್ಕೆ ಇನ್ನೂ ಬಣ್ಣ ಹಾಕಿಲ್ಲ. ಆದರೆ, ಅದಕ್ಕೆ ಗುಂಡು ತಾಕುವುದಿಲ್ಲ.

ಲೋಮ್ಯಾಕ್ಸ್ : (ಬಣ್ಣ ಹಾಕದ ಮೋಟರಲ್ಲಿ ಮಿಲ್ಟನ್ ಕ್ರೆಸೆಂಟ್ ಎದುರಿಗೆ ಹೋಗಬೇಕಾದ ನಿರೀಕ್ಷೆಯಿಂದ ಎದೆಗುಂದಿ) ಓ ಹಾಗೇನು !—

ಶಾರ : ನನಗೆ ಗಾಡಿಯೇ ಇರಲಿ. ಎಂತಹ ಗಾಡಿಯಲ್ಲಿ ಜನ ತನ್ನನ್ನು ಕಾಣಬಹುದು ಎಂಬ ವಿಷಯದಲ್ಲಿ ಬಾರ್ಬರಾಗೇನೂ ಚಿಂತೆಯಿಲ್ಲ.

ಲೋಮ್ಯಾಕ್ಸ್ : ಡಾಲ್ಲಿ, ಇಲ್ಲಿ ನೋಡು. ಕಾರು ವಿಚಿತ್ರವಾಗಿದ್ದರೆ ನಿಜವಾಗಿ ನಿನಗೆ ಅಭ್ಯಂತರವೇನು ? ನಿನಗೆ ಅಂಥ ಅಭ್ಯಂತರವೇನಾದರೂ ಇದ್ದರೆ ನಾನು ಅದರಲ್ಲಿ ಹೋಗುತ್ತೇನೆ. ಆದರೂ—

ಕಸಿನ್ಸ್ : ನನಗದೇ ಮೇಲು.

ಲೋಮ್ಯಾಕ್ಸ್ : ತುಂಬಾ ಉಪಕಾರವಾಯಿತಯ್ಯ. ಬಾ, ಪ್ರಿಯತಮೆ. (ಗಾಡಿಯಲ್ಲಿ ತನ್ನ ಸ್ಥಳವನ್ನು ಗಟ್ಟಿ ಮಾಡಲು ಅವಸರದಿಂದ ಹೋಗುತ್ತಾನೆ. ಶಾರಾ ಅವನನ್ನು ಹಿಂಬಾಲಿಸುತ್ತಾಳೆ.)

ಕಸಿನ್ಸ್ : (ಚಿಂತಾಗ್ರಸ್ತನಾಗಿ ಲೇಡಿ ಬ್ರಿಟೊಮಾರ್ಟ್‌ನ ಬರವಣಿಗೆ ಮೇಜಿನ ಕಡೆ ನಡೆದುಹೋಗುತ್ತಾನೆ.) ನಾವಿಬ್ಬರೂ ನರಕದ ಈ ಕಾರ್ಯಶಾಖೆಗೆ ಏಕೆ ಬರುತ್ತಿದ್ದೇವೆ ? ನನ್ನನ್ನು ಕೇಳಿಕೊಳ್ಳುವ ಪ್ರಶ್ನೆ ಅದು.

ಬಾರ್ಬರ : ಅದೊಂದು ತರಹದ ಕುಳಿ. ಪತಿತರಾದ ಪ್ರಾಣಿಗಳು ಮುಖ ಕಪ್ಪು ಮಾಡಿಕೊಂಡು ಹೊಗೆಯಾಡುವ ಬೆಂಕಿಯನ್ನು ಕೆದರಿ ತರಲು ನಮ್ಮಪ್ಪ ಅವರನ್ನು ದುಡಿಸಿ ಗೋಳು ಹುಯ್ದುಕೊಳ್ಳುತ್ತಾರೆಂದು ನಾನು ಸದಾ ಅಂದುಕೊಂಡಿದ್ದೇನೆ. ಅದು ಹಾಗಿದೆಯೆ ಅಪ್ಪ ?

ಅಂಡರ್‌ಷಾಫ್ಟ್ : (ಈ ಅನ್ಯಾಯಕ್ಕೆ ಉದ್ರೇಕಗೊಂಡು) ಏನು ಮಗು ! ಎಲ್ಲಿಯೂ ಒಂದು ಕರೆಯಿಲ್ಲ. ಚೊಕ್ಕವಾಗಿದೆ ; ಚೆಲುವಾದ ಬೆಟ್ಟದ ತಪ್ಪಲಿನ ನಗರ ಅದು.

ಕಸಿನ್ಸ್ : ಒಂದು ಮೆಥೊಡಿಸ್ಟ್ ಪ್ರಾರ್ಥನಾ ಮಂದಿರ ಇರಬೇಕಲ್ಲವೆ ? ಓ, ಮೆಥೊಡಿಸ್ಟ್ ಪ್ರಾರ್ಥನಾ ಮಂದಿರ ಒಂದು ಇದೆ ಎಂದು ಹೇಳಿ.

ಅಂಡರ್‌ಷಾಫ್ಟ್ : ಎರಡಿವೆ : ಪ್ರಾಕೃತರದೊಂದು, ಜಾಣರದೊಂದು. ಅಲ್ಲೊಂದು ಧರ್ಮ ಸಮಾಜವೂ ಇದೆ. ನನ್ನ ಕೆಲಸದ ಜನರೆಲ್ಲ ಬಲವಾಗಿ ಮತನಿಷ್ಠರಾದ್ದರಿಂದ ಅದಕ್ಕೆ ಹೆಚ್ಚು ಪ್ರೋತ್ಸಾಹವಿಲ್ಲ. ಸಿಡಿಮದ್ದಿನ ಷೆಡ್ಡುಗಳಲ್ಲಿ ಸಂದೇಹವಾದಿಗಳಿರುವುದು ಸುರಕ್ಷಿತವಲ್ಲವೆಂದು ಆಕ್ಷೇಪಣೆ ಮಾಡುತ್ತಾರೆ.

ಕಸಿನ್ಸ್ : ಹಾಗಿದ್ದರೂ ನಿಮ್ಮನ್ನು ಕಂಡರೆ ಅವರಿಗೆ ಆಕ್ಷೇಪಣೆ ಇಲ್ಲವಲ್ಲವೆ ?

ಬಾರ್ಬರ : ನಿಮ್ಮ ಅಪ್ಪಣೆಗಳಿಗೆಲ್ಲ ಅವರು ವಿಧೇಯರಾಗಿರುತ್ತಾರೆಯೆ ?

ಅಂಡರ್‌ಷಾಫ್ಟ್ : ನಾನು ಅವರಿಗೆ ಯಾವ ಅಪ್ಪಣೆಗಳನ್ನೂ ಕೊಡುವುದಿಲ್ಲ. ನಾನು ಅವರು ಯಾರ ಕೈಯಲ್ಲಾದರೂ ಮಾತಾಡಿದರೆ,—"ಏನು ಜೋನ್ಸ್, ನಿನ್ನ

ಮಗು ನೆಮ್ಮದಿಯೆ ? ನಿನ್ನ ಹೆಂಡತಿಗೆ ಪೂರ್ತಿ ವಾಸಿಯಾಯಿತೆ ?" ಎಂದು ಕೇಳುತ್ತೇನೆ. ಅವನು "ಚೆನ್ನಾಗಿದಾರೆ ಸ್ವಾಮಿ, ತುಂಬಾ ಉಪಕಾರವಾಯಿತು" ಎನ್ನುತ್ತಾನೆ. ಅಷ್ಟೇ.

ಕಸಿನ್ಸ್ : ಆದರೆ ಜೋನ್ಸನ್ನು ಶಿಸ್ತಿನಲ್ಲಿಟ್ಟಿರಬೇಕು ; ನಿಮ್ಮ ಕೆಲಸದ ಜನರಲ್ಲಿ ಶಿಸ್ತನ್ನು ಹೇಗೆ ನಡಸುತ್ತೀರಿ ?

ಅಂಡರ್‌ಷಾಫ್ಟ್ : ನಾನು ನಡಸುವುದಿಲ್ಲ, ಅವರು ನಡಸುತಾರೆ. ನೋಡು :— ತನ್ನ ಕೈಕೆಳಗಿನ ಮನುಷ್ಯನಿಂದ ಯಾವ ಬಗೆಯ ದಂಗೆಯನ್ನೂ ಜೋನ್ಸ್ ಸಹಿಸುವುದಿಲ್ಲ ; ತನಗಿಂತ ವಾರಕ್ಕೆ ನಾಲ್ಕು ಷಿಲಿಂಗ್ ಕಡಮೆ ಸಂಪಾದಿಸುವವನ ಹೆಂಡತಿಗೂ ಸಾಮಾಜಿಕ ಸಮಾನತೆ ಸ್ಥಾಪಿಸುವುದನ್ನು ಅವನು ಸಹಿಸನು. ತಾತ್ತ್ವಿಕವಾಗಿ, ಎಲ್ಲರೂ ನನ್ನ ಮೇಲೆ ಬಂಡಾಯಗಾರರೇ. ವಾಸ್ತವವಾಗಿ ಅವರಲ್ಲಿ ಪ್ರತಿಯೊಬ್ಬನೂ ನೇರ ತನ್ನ ಕೈಕೆಳಗಿನವನನ್ನು ಅವನವನ ಸ್ಥಾನದಲ್ಲಿಟ್ಟಿರುತ್ತಾನೆ. ಅವರ ಬದುಕಿನಲ್ಲಿ ನಾನು ಕೈಹಾಕುವುದಿಲ್ಲ. ಯಾರನ್ನೂ ಬೆದರಿಸುವುದಿಲ್ಲ. ಲಾಜರಸನ್ನು ಕೂಡ ಒತ್ತಾಯಪಡಿಸುವುದಿಲ್ಲ. ಮಾಡಬೇಕಾದ ಕೆಲಸಗಳು ಕೆಲವು ಇವೆ ಎನ್ನುತ್ತೇನೆ. ಅವನ್ನು ಮಾಡಲು ಯಾರಿಗೂ ಅಪ್ಪಣೆ ಕೊಡುವುದಿಲ್ಲ. ನಾನು ಹೇಳುವುದನ್ನು ಗಮನಿಸು, ಅದು ಮಾಡು, ಇದು ಮಾಡು, ಎಂದು ಮುಖ ಮುರಿಯುವುದು, ಬೆದರಿಸುವುದು, ಇಲ್ಲವೆಂದಿಲ್ಲ. ವಯಸ್ಸಾದ ಗಂಡಸರು ಹುಡುಗರ ಮುಖ ಮುರಿಯುತ್ತಾರೆ. ಅವರಿಗೆ ಅಪ್ಪಣೆ ಕೊಡುತ್ತಾರೆ. ಗಾಡಿಯವರು ಗುಡಿಸುವವರ ಮುಖ ಮುರಿಯುತ್ತಾರೆ. ಕಲ್ಪಿಗಳು ಅಕುಶಲ ಕೆಲಸಗಾರರ ಮುಖ ಮುರಿಯುತ್ತಾರೆ. ಮೇಸ್ತ್ರಿಗಳು ಕೆಲಸಗಾರರನ್ನೂ ಕಲ್ಪಿಗಳನ್ನೂ ಇಬ್ಬರನ್ನೂ ದುಡಿಸುತ್ತಾರೆ. ಅಸಿಸ್ಟೆಂಟ್ ಎಂಜಿನಿಯರುಗಳು ಮೇಸ್ತ್ರಿಗಳಲ್ಲಿ ತಪ್ಪು ಕಂಡು ಹಿಡಿಯುತ್ತಾರೆ. ಮುಖ್ಯ ಎಂಜಿನಿಯರುಗಳು ಅಸಿಸ್ಟೆಂಟ್ ಎಂಜಿನಿಯರುಗಳ ಮೇಲೆ ಬೀಳುತ್ತಾರೆ. ಇಲಾಖೆಯ ಮ್ಯಾನೇಜರುಗಳು ಈ ಮುಖ್ಯರನ್ನು ಪೀಡಿಸುತ್ತಾರೆ. ಗುಮಾಸ್ತೆಗಳ ತಲೆಯ ಮೇಲೆ ಎತ್ತರದ ಹ್ಯಾಟುಗಳಿರುತ್ತವೆ ; ಕೈಗಳಲ್ಲಿ ಸ್ತೋತ್ರದ ಪುಸ್ತಕಗಳಿರುತ್ತವೆ. ಯಾರೊಡನೆಯೂ ಸಮಾನರಂತೆ ಬೆರೆಯಲು ಇಷ್ಟಪಡದಿರುವುದು ಸಾಮಾಜಿಕ ಹದವನ್ನು ಅವರು ಕಾಪಾಡುವ ರೀತಿ. ಇದರ ಫಲ : ಅದ್ಭುತ ಪ್ರಮಾಣದ ಲಾಭ. ಅದು ನನಗೆ ಬರುತ್ತದೆ.

ಕಸಿನ್ಸ್ : (ಹೇಸಿಗೆಪಟ್ಟು) ನೀವು ನಿಜವಾಗಿ—ಎಂಥವರು ಅಂದ್ರೆ—ನಾನು ನಿನ್ನೆ ಹೇಳುತಿದ್ದೆನಲ್ಲ—

ಬಾರ್ಬರ : ನಿನ್ನೆ ಇವರು ಏನು ಹೇಳುತ್ತಿದ್ದರು ?

ಅಂಡರ್‌ಷಾಫ್ಟ್ : ಏನಾದರೂ ಹೇಳಲಿ, ಮಗು. ನಿನ್ನನ್ನು ನಾನು ಅಸುಖಿಯನ್ನಾಗಿ ಮಾಡಿದ್ದೇನೆಯೆ ?

ಬಾರ್ಬರ : ಗ್ರಾಮ್ಯವಾದ, ಅವಿವೇಕದ ಈ ಉಡುಪಿನಲ್ಲಿ ನಾನು ಸುಖವಾಗಿರಬಲ್ಲೆನೆಂದು ನೀವು ಯೋಚಿಸುವಿರ ? ನಾನು ಸಮವಸ್ತ್ರವನ್ನು ಧರಿಸುತ್ತಿದ್ದವಳು ! ನನಗೆ ನೀವೇನು ಮಾಡಿದ್ದೀರೆಂದು ನಿಮಗರ್ಥವಾಗುತ್ತದೆಯೆ ? ನಿನ್ನೆ ನನ್ನ ಕೈಯಲ್ಲಿ ಒಬ್ಬ ಮನುಷ್ಯನ ಆತ್ಮ ಇತ್ತು. ಹಿರಿಬದುಕಿನ ದಾರಿಯಲ್ಲಿ ಅದನ್ನು ನಿಲ್ಲಿಸಿದೆ. ಅವನ ಮುಖ ಮುಕ್ತಿಯ ಕಡೆ ತಿರುಗಿತ್ತು. ಆದರೆ ನಾವು ನಿಮ್ಮ ಹಣ ತೆಗೆದುಕೊಂಡಾಗ ಅವನು ಕುಡಿತಕ್ಕೆ ಹಿಂದಿರುಗಿದ ; ಪರಿಹಾಸ್ಯಕ್ಕೆ ತಿರುಗಿದ. (ತೀವ್ರ ಮನೋ ನಿಶ್ಚಯದಲ್ಲಿ) ಅದಕ್ಕಾಗಿ ನಿಮ್ಮನ್ನು ಕ್ಷಮಿಸುವುದಿಲ್ಲ—ಎಂದಿಗೂ ಕ್ಷಮಿಸಲಾರೆ. ನನಗೊಂದು ಮಗು ಇದ್ದಿದ್ದರೆ, ನಿಮ್ಮ ಸಿಡಿಗುಂಡುಗಳಿಂದ ಅದರ ದೇಹವನ್ನು ನೀವು ನಾಶಮಾಡಿದ್ದಿದ್ದರೆ, ನಿಮ್ಮ ಭೀಕರ ಕೋವಿಗಳಿಂದ ನೀವು ಡಾಲ್ಲಿಯ ಕೊಲೆಮಾಡಿದರೆ, ನಾನು ನಿಮ್ಮನ್ನು ಕ್ಷಮಿಸಬಲ್ಲವಳು—ನನ್ನ ಕ್ಷಮೆಯಿಂದ ನಿಮಗೆ ಸ್ವರ್ಗದ ಹೆಬ್ಬಾಗಿಲು ತೆರೆಯುವ ಪಕ್ಷಕ್ಕೆ. ಆದರೆ ನನ್ನ ಕೈಯಿಂದ ಒಬ್ಬ ಮನುಷ್ಯನ ಆತ್ಮವನ್ನು ತೆಗೆದುಕೊಂಡು ಅದನ್ನು ತೋಳಗಳ ಆತ್ಮವಾಗುವಂತೆ ತಿರುಗಿಸುವುದಿದೆಯಲ್ಲಾ : ಅದು ಯಾವ ಕೊಲೆಗೂ ಕೀಳು.

ಅಂಡರ್‌ಷಾಫ್ಟ್ : ನನ್ನ ಮಗಳಾದವಳು ಇಷ್ಟು ಸುಲಭವಾಗಿ ನಿರಾಶೆಗೊಳ್ಳುವಳೆ ? ಒಬ್ಬ ಮನುಷ್ಯನ ಹೃದಯವನ್ನು ಬಡಿದು ತಟ್ಟಿ ಅದರ ಮೇಲೆ ಯಾವ ಗುರುತನ್ನೂ ಉಳಿಸದೆ ಇರಬಹುದೆ ?

ಬಾರ್ಬರ : (ಆಕೆಯ ಮುಖ ದೀಪ್ತವಾಗುತ್ತದೆ) ಓ, ನೀವು ಹೇಳುವುದು ಸರಿ. ಈಗ ಅವನು ಎಂದಿಗೂ ನಾಶವಾಗಲಾರ. ಅಯ್ಯೋ—ನನ್ನ ನಂಬಿಕೆ ಎಲ್ಲಿ ಹೋಗಿತ್ತು?

ಕಸಿನ್ಸ್ : ಅಹಾ ! ಜಾಣ, ಜಾಣ ಪಿಶಾಚಿ !

ಬಾರ್ಬರ : ನೀವು ಪಿಶಾಚಿಯಾಗಿರಬಹುದು. ಆದರೆ ಕೆಲವು ವೇಳೆ ನಿಮ್ಮ ಬಾಯಿಂದ ದೇವರು ಮಾತಾಡುತ್ತಾನೆ. (ತನ್ನ ತಂದೆಯ ಕೈಗಳನ್ನು ತೆಗೆದುಕೊಂಡು ಅವನ್ನು ಮುದ್ದಿಸುತ್ತಾಳೆ.) ನೀವು ನನ್ನ ಸೌಖ್ಯವನ್ನು ನನಗೆ ಹಿಂದಕ್ಕೆ ಕೊಟ್ಟಿದ್ದೀರಿ. ನನ್ನ ಆತ್ಮದಲ್ಲಿ ಸ್ವಲ್ಪ ಕಳವಳವಿದೆ. ಆದರೂ ಆ ಸುಖ ಈಗ ಆಳವಾಗಿದೆ.

ಅಂಡರ್‌ಷಾಫ್ಟ್ : ನಿನಗೆ ಸ್ವಲ್ಪ ತಿಳಿವಳಿಕೆ ಬಂದಿದೆ. ಅದರ ಅನುಭವ ಯಾವಾಗಲೂ ಮೊದಲು ಬರುವುದು ಹೀಗೇ.—ಏನನ್ನೋ ನೀನು ಕಳೆದುಕೊಂಡಂತೆ ಆಗುತ್ತದೆ.

ಬಾರ್ಬರ : ಸರಿ ಹಾಗಾದರೆ. ನನ್ನನ್ನು ಸಾವಿನ ಕಾರ್ಖಾನೆಗೆ ಕರೆದುಕೊಂಡು ಹೋಗಿ. ಇನ್ನು ಸ್ವಲ್ಪವನ್ನು ಹೆಚ್ಚಾಗಿ ಕಲಿಯೋಣ. ಈ ಎಲ್ಲ ಭಯಂಕರ ವ್ಯಂಗ್ಯದ ಹಿಂದೆ ಯಾವುದೊ ಸತ್ಯವಿರಬೇಕು. ಬಾ, ಡಾಲ್ಲಿ (ಹೊರಗೆ ಹೋಗುತ್ತಾಳೆ)

ಕಸಿನ್ಸ್ : ನನ್ನ ರಕ್ಷಕ ದೇವತೆ ! (ಅಂಡರ್‌ಷಾಫ್ಟ್‌ಗೆ) ತೊಲಗಿ ! (ಬಾರ್ಬರ ಹಿಂದೆ ಹೋಗುತ್ತಾನೆ.)

ಸ್ಟೀವನ್ : (ಮೃದುವಾಗಿ, ಬರೆಯುವ ಮೇಜಿನ ಹತ್ತಿರ) ಕಸಿನ್ಸನ್ನ ಮನಸ್ಸಿಗೆ ಹಚ್ಚಿಕೊಳ್ಳಬೇಡಿ, ಅಪ್ಪ ! ಅವನು ಒಳ್ಳೆಯ ಹುಡುಗ. ತುಂಬಾ ಒಳ್ಳೆಯವನು. ಆದರೆ ಗ್ರೀಕ್ ವಿದ್ವಾಂಸ, ಸಹಜವಾಗಿ ಸ್ವಲ್ಪ ವಿಲಕ್ಷಣ.

ಅಂಡರ್‌ಷಾಫ್ಟ್ : ಹೌದು, ಹಾಗೇ ? ತುಂಬಾ ಉಪಕಾರವಾಯಿತು ಸ್ಟೀವನ್.

(ಹೊರಗೆ ಹೋಗುತ್ತಾನೆ)

(ಸ್ಟೀವನ್ ಪ್ರೋತ್ಸಾಹಿಸುವವನಂತೆ ಮುಗುಳ್ನಗೆ ನಗುತ್ತಾನೆ. ಜವಾಬ್ದಾರಿಯುಳ್ಳವನಂತೆ ಕೋಟಿಗೆ ಗುಂಡಿ ಹಾಕುತ್ತಾನೆ. ಕೊಠಡಿ ದಾಟಿ ಬಾಗಿಲಿಗೆ ಹೋಗುತ್ತಾನೆ. ಹೊರಗೆ ತಿರುಗಾಡಲು ಹೊರಟಿರುವವಳಂತೆ ಉಡುಪು ಧರಿಸಿದ ಲೇಡಿ ಬ್ರಿಟೊಮಾರ್ಟ್ ಅವನು ಅದನ್ನು ಮುಟ್ಟುವ ಮುಂಚೆ ಬಾಗಿಲನ್ನು ತೆಗೆಯುತ್ತಾಳೆ. ಇತರರಿಗಾಗಿ ಸುತ್ತಲೂ ನೋಡುತ್ತಾಳೆ. ಸ್ಟೀವನ್ ಕಡೆ ನೋಡಿ ಒಂದು ಮಾತಿಲ್ಲದೆ ಹೋಗಲು ತಿರುಗುತ್ತಾಳೆ.)

ಸ್ಟೀವನ್ : (ಸಂಕೋಚದಿಂದ) ಅಮ್ಮ—

ಲೇಡಿ ಬ್ರಿಟೊ : ನೀನು ಕ್ಷಮೆ ಯಾಚನೆ ಮಾಡಬೇಕಾಗಿಲ್ಲ, ಸ್ಟೀವನ್. ನಿನ್ನ ತಾಯಿಯ ಮಿತಿ ಮೀರಿದ್ದಿಯೆ ಎಂಬುದನ್ನು ಮರೆಯಬೇಡ—

(ಹೊರಗೆ ಹೋಗುತ್ತಾಳೆ.)

(ಪೆರಿವೇಲ್, ಸೆಂಟ್ ಆಂಡ್ರ್ಯೂಸ್, ಎರಡು ಮಿಡ್ಲ್‌ಸೆಕ್ಸ್ ಬೆಟ್ಟಗಳ ನಡುವೆ ಇದೆ. ಉತ್ತರದ ಬೆಟ್ಟವನ್ನು ಅರ್ಧ ಹತ್ತುವಂತೆ ನೆಲಸಿದ್ದ, ಸುಮಾರು ಹೊಗೆಯೇ ಇಲ್ಲದ ಬಿಳಿ ಗೋಡೆಗಳ ಪಟ್ಟಣ ಅದು. ಇಕ್ಕಟ್ಟಾದ ಹಸಿರು ಸ್ಲೇಟು ಕಲ್ಲಿನ ಅಥವಾ ಕೆಂಪು ಹೆಂಚಿನ ಮಾಳಿಗೆಗಳುಳ್ಳದ್ದು. ಎತ್ತರವಾದ ಮರ, ಗೋಪುರ, ಗಂಟೆಗೋಪುರ, ತೆಳ್ಳಗಿನ ಹೊಗೆ ಚಿಮಣಿದಂಡಗಳು. ಸನ್ನಿವೇಶ ಬಹು ಚೆಲುವಾಗಿದೆ ; ಸ್ವತಃ ಚೆನ್ನಾಗಿದೆ. ಅದರ ಉತ್ತಮ ಚಂದವನ್ನು ಕಾಣಬೇಕಾದರೆ ಪೂರ್ವಕ್ಕೆ ಸುಮಾರು ಅರ್ಧ ಮೈಲಿ ಹೋಗಿ ಒಂದು ಇಳಿಜಾರಿನ ತುದಿಯಿಂದ ನೋಡಬೇಕು. ಅಲ್ಲಿಯೇ ತೀವ್ರ ಸಿಡಿಗುಂಡುಗಳ ಕೆಲಸ ನಡೆಯುವುದು. ಎರಕ ಹುಯ್ಯುವ ಸ್ಥಳ, ನಡುವೆ ಆಳದಲ್ಲಿ ಕಣ್ಣಿಗೆ ಕಾಣದಂತೆ ಇದೆ. ಅದರ ಚಿಮಣಿಗಳ ಕುಡಿಗಳು ದೊಡ್ಡ ಆಟದ ಗೂಟಗಳಂತೆ ಮಧ್ಯಪ್ರದೇಶದಲ್ಲಿ ಮುಸುಡಿಯೆತ್ತಿ ನಿಂತಿವೆ. ಶಿಖರಕ್ಕೆ ಅಡ್ಡಲಾಗಿ ಕಾಂಕ್ರೀಟಲ್ಲಿ ಮಾಡಿದ ಒಂದು ಜಗುಲಿ. ಅದಕ್ಕೆ ಗುಂಡು ಹಾರಿಸುವ ಮೆಟ್ಟಿಲಿದೆ. ಕೊತ್ತಳವನ್ನು ಸೂಚಿಸುವ ಒಂದು ತೆನೆಗೋಡೆ. ಊರಿನ ಕಡೆ ಅಡ್ಡಲಾಗಿ ಇಣಿಕಿ ನೋಡುತ್ತಿರುವ, ಈಗ ಕೆಲಸಕ್ಕೆ ಬಾರದ ವೂಲಿಚ್ ಇನ್‌ಫಂಟ್ ಮಾದರಿಯ ಒಂದು ದೊಡ್ಡ ಫಿರಂಗಿ. ಫಿರಂಗಿಯನ್ನು ಒಂದು ಪರೀಕ್ಷಾ ಪ್ರಯೋಗದ ಕೋವಿಯ ಗಾಡಿಯ ಮೇಲೆ ಸ್ಥಾಪಿಸಿದೆ. ಸ್ಟೀವನ್ ಹಿಂದೆ ಹೇಳಿದ್ದ ಅದೃಶ್ಯವಾಗುವ ಅಂಡರ್‌ಷಾಫ್ಟ್ ಬುರುಜು ಕೋವಿಯ ಮೂಲಮಾದರಿಯಾಗಿರಬಲ್ಲದು. ಗುಂಡುಹಾರಿಸುವ ಮೆಟ್ಟಿಲು ಕೂಡಲು ಅನುಕೂಲವಾದ ಸ್ಥಳ ; ಆದ್ದರಿಂದ ಇಲ್ಲಿ ಅಲ್ಲಿ ಚಕ್ರಾಕಾರದ ಹುಲ್ಲಿನ ಮೆತ್ತೆಗಳನ್ನು ಅಳವಡಿಸಿದ್ದಾರೆ. ಒಂದು ಸ್ಥಳದಲ್ಲಿ ಹೆಚ್ಚು ಭೋಗ ಸಾಮಗ್ರಿಯಾಗಿ ಒಂದು ತುಪ್ಪಟದ ಹಾಸು ಕಂಬಳಿ ಇದೆ.

ಬಾರ್ಬರ ಗುಂಡು ಹಾರಿಸುವ ಮೆಟ್ಟಿಲ ಮೇಲೆ ನಿಂತಿದ್ದಾಳೆ. ಕೈ ಗೋಡೆಯ ಮೇಲಿಂದ ಪಟ್ಟಣದ ಕಡೆ ನೋಡುತ್ತಿದ್ದಾಳೆ. ಆಕೆಯ ಬಲಗಡೆ ಫಿರಂಗಿ, ಎಡಕ್ಕೆ ಮರದ ಕೂಚೆಗಳ ಮೇಲೆ ನಿಲ್ಲಿಸಿದ ಷೆಡ್ಡೊಂದರ ಕೊನೆ.ಬಾಗಿಲವರೆಗೂ ಮೂರು ನಾಲ್ಕು ಮೆಟ್ಟಿಲು ಏಣಿ. ಬಾಗಿಲು ಹೊರಕ್ಕೆ ತೆಗೆಯುತ್ತದೆ. ಹೊಸಿಲಲ್ಲಿ ಇಳಿದು ನಿಲ್ಲಲು ಒಂದು ಮಣೆ. ಮೂಲೆಯಲ್ಲಿ ಬೆಂಕಿ ಆರಿಸಲು ಬಳಸುವ ಬಕೆಟ್. ಹಲವಾರು ಬೊಂಬೆ ಸಿಪಾಯಿಗಳು ಸ್ವಲ್ಪ ಹೆಚ್ಚು ಕಡಮೆ ಭಿನ್ನ ಭಿನ್ನರಾದವರು. ಅವರ ಗಾಯಗಳಿಂದ ಒಣಹುಲ್ಲು ಹೊರಗೆ ಕಾಣುತ್ತಿರಲು ಇಳಿಯುವ ಜಾಗದಲ್ಲಿ ಬೊಂಬೆ ಸಿಪಾಯಿಗಳ ಆಕೃತಿಗಳು ಇಳಿಮಣೆಯ ದಾರಿಯಿಂದ ಹೊರಗೆ ನೂಕಿವೆ. ಷೆಡ್ಡಿಗಾತು ಇನ್ನು ಕೆಲವು, ಸುಮಾರು ನೇರವಾಗಿ ನಿಂತಿವೆ. ಒಂದು ಮುಂದಕ್ಕೆ ಬಿದ್ದು ವಿಕಾರಗೊಂಡು ಹೆಣದಂತೆ ಕೋವಿಯ ಜಗುಲಿಯ ಮೇಲೆ ಬಿದ್ದಿದೆ. ಕೈಗೋಡೆ—ಷೆಡ್ಡಿಗೆ ಸ್ವಲ್ಪ ದೂರದಲ್ಲಿ ಮುಗಿಯುತ್ತದೆ. ಅಲ್ಲಿ ತೆರೆದಿರುವ ಜಾಗದಲ್ಲಿ ಒಂದು ಕಾಲುದಾರಿ ತೊಡಗಿ ಗುಡ್ಡದಿಂದ ಕೆಳಕ್ಕೆ ಎರಕ ಹುಯ್ಯುವ ಸ್ಥಳದ ಮೂಲಕ ಪಟ್ಟಣಕ್ಕೆ ಒಯ್ಯುತ್ತದೆ. ಈ ತೆರೆದ ಸ್ಥಳದ ಹತ್ತಿರ ಗುಂಡು ಹಾರಿಸುವ ಮೆಟ್ಟಿಲ ಮೇಲೆ ಒಂದು ಹಾಸುಗಂಬಳಿ. ಜಗುಲಿಯ ಕೆಳಗೆ ಫಿರಂಗಿಯ ಹಿಂದೆ ಚೂಪು ಮೂತಿಯ ಒಂದು ಸಿಡಿಗುಂಡನ್ನು ಎತ್ತಿಕೊಂಡು ಹೋಗುವ ದೊಡ್ಡ ಟ್ರಾಲಿ ಜಾತಿಯ ಗಾಡಿ. ಅದರ ಮೇಲೆ ಒಂದು ಕೆಂಪು ಪಟ್ಟೆ ಬಳಿದಿದ್ದಾರೆ. ಬಲಕ್ಕೆ ಇನ್ನು ಸ್ವಲ್ಪ ಮುಂದೆ ಒಂದು ಕಚೇರಿ ಬಾಗಿಲು. ಷೆಡ್ಡುಗಳ ಹಾಗೇ ಅದರ ಕಟ್ಟಡವೂ ಅತಿ ಹಗುರ.

ಪಟ್ಟಣದಿಂದ ಬರುವ ಕಾಲುದಾರಿಯ ಮೂಲಕ ಕಸಿನ್ಸ್ ಬರುತ್ತಾನೆ.)

ಬಾರ್ಬರ : ಹೇಗಿದೆ ?

ಕಸಿನ್ಸ್ : ಭರವಸೆಯ ಒಂದು ಕಿರಣ ಇಲ್ಲ. ಎಲ್ಲ ಪರಿಪೂರ್ಣ, ಆಶ್ಚರ್ಯಕರ, ವಾಸ್ತವ, ನರಕದ ಒಂದು ಪಟ್ಟಣವಾಗುವ ಬದಲು ಸ್ವರ್ಗದ ನಗರವಾಗಲು ಅದಕ್ಕೆ ಒಂದು ದೊಡ್ಡ ದೇವಮಂದಿರ ಮಾತ್ರ ಬೇಕು.

ಬಾರ್ಬರ : ಮುದಿ ಪೀಟರ್ ಷರ್ಲಿಗೆ ಏನಾದರೂ ಮಾಡಿದ್ದಾರೆಯೊ ತಿಳಿದು ಕೊಂಡೆಯ ?

ಕಸಿನ್ಸ್ : ಬಾಗಿಲು ಕಾವಲಾಗಿ ಗಡಿಯಾರ ನೋಡಿಕೊಳ್ಳುವವನಾಗಿ ಅವನಿಗೊಂದು ಕೆಲಸ ಕೊಟ್ಟಿದ್ದಾರೆ. ಅವನು ಭಯಂಕರ ಅಸುಖಿ. ಗಡಿಯಾರ ನೋಡಿ ಕೊಳ್ಳುವುದು ಮೆದುಳಿನ ಕೆಲಸವಂತೆ ; ಅಂಥ ಕೆಲಸ ಅವನಿಗೆ ಅಭ್ಯಾಸವಿಲ್ಲವಂತೆ. ಬಾಗಿಲಲ್ಲಿರುವ ಅವನ ವಾಸದ ಮನೆ ತುಂಬಾ ಚೆನ್ನಾಗಿದೆ. ಕೊಠಡಿಗಳನ್ನು ಬಳಸಲು ಅವನಿಗೆ ನಾಚಿಕೆಯಂತೆ. ಆದ್ದರಿಂದ ತಲೆತಪ್ಪಿಸಿಕೊಂಡು ಅಡಿಗೆ ಮನೆಯಲ್ಲಿ ತಿರುಗಾಡುತ್ತಾನೆ.

ಬಾರ್ಬರ : ಪಾಪದ ಪೀಟರ್ !

(ಸ್ಟೀವನ್ ಪಟ್ಟಣದಿಂದ ಬರುತ್ತಾನೆ. ಬಯಲು ದುರ್ಬೀನನ್ನು ಹಿಡಿದುಕೊಂಡಿದ್ದಾನೆ.)

ಸ್ಟೀವನ್ : (ಉತ್ಸಾಹದಿಂದ) ಇಬ್ಬರೂ ಸ್ಥಳ ನೋಡಿದಿರ ? ನಮ್ಮನ್ನೇಕೆ ಬಿಟ್ಟು ಬಂಧಿರಿ ?

ಕಸಿನ್ಸ್ : ನೋಡಕೂಡದಾಗಿದ್ದ ಎಲ್ಲವನ್ನೂ ನನಗೆ ನೋಡಬೇಕೆನ್ನಿಸಿತು. ಬಾರ್ಬರ ಜನಗಳನ್ನು ಮಾತನಾಡಿಸಬೇಕೆಂದು ಇಷ್ಟಪಟ್ಟಳು.

ಸ್ಟೀವನ್ : ಅಪಖ್ಯಾತಿ ತರುವ ಏನನ್ನಾದರೂ ಕಂಡಿರ ?

ಕಸಿನ್ಸ್ : ಇಲ್ಲ. ಆತನನ್ನು ಅವರು ಡ್ಯಾಡಿ ಆ್ಯಂಡಿ ಎಂದು ಕರೆಯುತ್ತಾರೆ. ಅವನು ಒಬ್ಬ ಹಳೆಯ ಜಾಣ ತಂತ್ರಿಯಾಗಿರುವುದು ಅವರಿಗೆ ಹೆಮ್ಮೆ. ಎಲ್ಲವೂ ಘೋರವಾಗಿ, ಭಯಂಕರವಾಗಿ, ಅನೀತಿಯುತವಾಗಿ, ಉತ್ತರ ಕೊಡಲಾರದಷ್ಟು ಉತ್ಕೃಷ್ಟವಾಗಿದೆ.

(ಶಾರಾ ಬಂದು ಸೇರುತ್ತಾಳೆ.)

ಶಾರಾ : ದೇವರಾಣೆಗೂ—ಎಂಥ ಸ್ಥಳ ! (ಟ್ರಾಲಿ ಕಡೆಗೆ ದಾಟಿ ಹೋಗುತ್ತಾಳೆ.) ಅಲ್ಲಿ ನರ್ಸಿಂಗ್ ಹೋಮ್ ನೋಡಿದಿರ ? (ಷೆಲ್ ಮೇಲೆ ಕುಳಿತು ಕೊಳ್ಳುತ್ತಾಳೆ.)

ಸ್ಟೀವನ್ : ಪುಸ್ತಕ ಭಂಡಾರಗಳನ್ನೂ ಪಾಠಶಾಲೆಗಳನ್ನೂ ನೋಡಿದಿರ ?

ಶಾರಾ : ನಾಟ್ಯ ಮಂದಿರವನ್ನು ನೋಡಿದಿರ ? ಪುರಭವನದಲ್ಲಿ ಔತಣ ಶಾಲೆಯನ್ನು ನೋಡಿದಿರ ?

ಸ್ಟೀವನ್ : ವಿಮೆ ನಿಧಿ, ವಿಶ್ರಾಂತಿ ವೇತನ ನಿಧಿ, ಕಟ್ಟಡ ಕಟ್ಟುವ ಸಂಸ್ಥೆ ; ಸಹಕಾರದ ಬಗೆ ಬಗೆಯ ವಿಧಾನಗಳನ್ನು ನೋಡಿದಿರ ?

(ಅಂಡರ್‌ಷಾಫ್ಟ್ ಕಚೇರಿಯಿಂದ ಬರುತ್ತಾನೆ, ಅವನ ಕೈಯಲ್ಲಿ ಟೆಲಿಗ್ರಾಮುಗಳ ಒಂದು ಹೊರೆಯಿದೆ.)

ಅಂಡರ್‌ಷಾಫ್ಟ್ : ಎಲ್ಲವನ್ನೂ ನೋಡಿದಿರ ? ಕ್ಷಮಿಸಬೇಕು, ನನ್ನನ್ನು ಬೇರೆ ಕೆಲಸಕ್ಕೆ ಕರೆದರು, ಹೋಗಬೇಕಾಯಿತು. (ಟೆಲಿಗ್ರಾಮುಗಳನ್ನು ನಿರ್ದೇಶಿಸಿ) ಮಂಚೂರಿಯದಿಂದ ಒಳ್ಳೆಸುದ್ದಿ.

ಸ್ಟೀವನ್ : ಇನ್ನೊಂದು ಜಪಾನಿ ವಿಜಯವೆ ?

ಅಂಡರ್‌ಷಾಫ್ಟ್ : ನನಗೆ ಗೊತ್ತಿಲ್ಲ. ಯಾವ ಪಕ್ಷ ಗೆಲ್ಲುತ್ತದೆ ಎಂಬುದು ಇಲ್ಲಿ ನಮಗೆ ಸಂಬಂಧಪಟ್ಟ ಸಂಗತಿ ಅಲ್ಲ ! ಒಳ್ಳೆ ಸುದ್ದಿ ಎಂದರೆ ನಮ್ಮ ವಿಮಾನ ಯುದ್ಧ ನೌಕೆ ಅತ್ಯುತ್ತಮವಾಗಿ ಕೆಲಸ ಮಾಡುತ್ತಿದೆ ಎಂಬುದು. ಮುನ್ನೂರು ಸಿಪಾಯಿಗಳಿದ್ದ ಒಂದು ಕೋಟೆಯನ್ನು ಮೊದಲ ಪ್ರಯೋಗದಲ್ಲಿಯೇ ತೊಡೆದು ಹಾಕಿದೆ.

ಕಸಿನ್ಸ್: (ಜಗುಲಿಯಿಂದ) ಗೊಂಬೆ ಸಿಪಾಯಿಗಳೇನೊ ?

ಅಂಡರ್‌ಷಾಫ್ಟ್ : (ಸ್ಟೀವನ್ ಕಡೆ ದಾಟಿಹೋಗುತ್ತಾನೆ. ನೆಲದ ಮೇಲೆ ನಿಡಿದಾಗಿ ಬಿದ್ದಿರುವ ಬೊಂಬೆಯನ್ನು ತನ್ನ ದಾರಿಯಿಂದ ಒರಟಾಗಿ ಒದೆಯುತ್ತಾನೆ.) ಅಲ್ಲ, ನಿಜವಾದವರೇ.

(ಕಸಿನ್ಸ್ ಬಾರ್ಬರ ಒಬ್ಬರ ಕಡೆ ಒಬ್ಬರು ನೋಡುತ್ತಾರೆ. ಆಮೇಲೆ ಕಸಿನ್ಸ್ ಮೆಟ್ಟಿಲ ಮೇಲೆ ಕುಳಿತು ಕೈಯಲ್ಲಿ ಮುಖ ಮುಳುಗಿಸಿಕೊಳ್ಳುತ್ತಾನೆ. ಬಾರ್ಬರ ಮನಸ್ಸಿನ ಭಾರದಲ್ಲಿ ಅವನ ಭುಜದ ಮೇಲೆ ತನ್ನ ಕೈ ಇಡುತ್ತಾಳೆ. ಒಂದು ಶಿಕ್ಕಲು ನಿರಾಶೆಯ ಸ್ಥಿತಿಯಲ್ಲಿ ಕಸಿನ್ಸ್ ಅವಳ ಕಡೆ ನೋಡುತ್ತಾನೆ.)

ಅಂಡರ್‌ಷಾಫ್ಟ್ : ಸರಿ, ಸ್ಟೀವನ್. ಸ್ಥಳ ನಿನಗೆ ಹೇಗೆ ಅನ್ನಿಸುತ್ತದೆ ?

ಸ್ಟೀವನ್ : ಓ, ಭೇಷಾಗಿದೆ. ನವೀನ ಕೈಗಾರಿಕೆಯ ಅತ್ಯುತ್ಕೃಷ್ಟ ವಿಜಯದಂತೆ ಇದೆ. ನಿಷ್ಕಪಟವಾಗಿ ಹೇಳಬೇಕಾದರೆ ನಾನು ಅವಿವೇಕಿಯಾಗಿದ್ದೆ, ಅಪ್ಪ. ಇದರ ಅರ್ಥವೆಲ್ಲ ಏನು ಎಂಬುದು ಸ್ವಲ್ಪವೂ ನನಗೆ ತಿಳಿದಿರಲಿಲ್ಲ. ಎಷ್ಟು ಆಶ್ಚರ್ಯಕರವಾದ ಮುಂದಾಲೋಚನೆ ! ವ್ಯವಸ್ಥಾಪಕ ಶಕ್ತಿ ; ಆಡಳಿತ ಸಾಮರ್ಥ್ಯ ; ಹಣಕಾಸಿನ ಮುತ್ಸದ್ದಿತನ ; ಎಷ್ಟು ಅದ್ಭುತ ಪ್ರಮಾಣದ ಬಂಡವಾಳಕ್ಕೆ ಇದು ಪ್ರತಿನಿಧಿ ಎಂದು ನನಗೆ ತಿಳಿದಿರಲಿಲ್ಲ. ನಿಮ್ಮ ರಸ್ತೆಗಳಲ್ಲಿ ಬರುತ್ತಿದ್ದ ಹಾಗೆ, ಪುನಃ ಪುನಃ ನಾನು ಅಂದುಕೊಳ್ಳುತ್ತಿದ್ದೇನೆ. ಯುದ್ಧ ಕೀರ್ತಿಗೆ ಕಡಮೆ ಅಲ್ಲದ ವಿಜಯ ಶಾಂತಿಗೆ ಉಂಟು ಎಂಬುದನ್ನು ಕುರಿತು. ಒಂದು ಆಶಂಕೆ ಮಾತ್ರ ನನಗೆ ಈ ಎಲ್ಲವನ್ನೂ ಕುರಿತು ಉಂಟು.

ಅಂಡರ್‌ಷಾಫ್ಟ್ : ಸ್ಪಷ್ಟವಾಗಿ ಹೇಳು.

ಸ್ಟೀವನ್ : ಅಂದರೆ, ನಿಮ್ಮ ಕೆಲಸಗಾರರ ಪ್ರತಿಯೊಂದು ಬಯಕೆಯನ್ನು ಪೂರೈಸಲು ಮಾಡಿರುವ ಈ ಎಲ್ಲ ಏರ್ಪಾಡು ಅವರ ಸ್ವಾಧೀನತೆಯನ್ನು ಹೀರಬಹುದು ; ಅವರ ಹೊಣೆಗಾರಿಕೆ ಬುದ್ಧಿಯನ್ನು ದುರ್ಬಲಗೊಳಿಸಬಹುದು—ಎಂದು ಚಿಂತಿಸದೇ ಇರಲಾರೆ. ಆ ಉತ್ತಮ ಹೊಟೇಲಲ್ಲಿ ಟೀ ತೆಗೆದುಕೊಳ್ಳುತ್ತ ನನಗೆ ತುಂಬಾ ಖುಷಿಯಾಯಿತು : 3 ಪೆನ್ನಿಗೆ ಅಷ್ಟೆಲ್ಲ ಭೋಗ—ಕೇಕ್, ಜ್ಯಾಂ, ಕೆನೆ ಎಲ್ಲವನ್ನೂ ಹೇಗೆ ಕೊಟ್ಟರೊ—ವಾಸ್ತವವಾಗಿ ನಾನು ಕಲ್ಪಿಸಿ ಕೊಳ್ಳಲಾರೆ. ನೀವು ಮರೆಯಬಾರದು—ಹೊಟೇಲುಗಳು ಮನೆಯ ಬದುಕನ್ನು ಮುರಿಯುತ್ತವೆ ಎಂದು. ಉದಾಹರಣೆಗೆ—ಯೂರೋಪ್ ಖಂಡದಲ್ಲಿ ನೋಡಿ ;—ಇಷ್ಟು ಹೆಚ್ಚಿನ ಲಾಲಸೆ ಜನದ ಶೀಲಕ್ಕೆ ನಿಜವಾಗಿ ಒಳ್ಳೆಯದೆಂದು ನೀವು ಖಾತರಿಯಾಗಿ ಹೇಳಬಲ್ಲಿರ ?

ಅಂಡರ್‌ಷಾಫ್ಟ್ : ನೋಡು, ಮಗು, ನಾಗರಿಕತೆಯನ್ನು ವ್ಯವಸ್ಥೆಗೊಳಿಸುವಾಗ ನಮ್ಮ ಮನಸ್ಸಿನಲ್ಲಿ ಒಂದು ನಿರ್ಣಯಕ್ಕೆ ಬರಬೇಕು. ತೊಂದರೆ, ಚಿಂತೆ ಒಳ್ಳೆಯ ಸಂಗತಿಗಳೆ ಅಲ್ಲವೆ?—ಎಂಬುದು ಅದು. ಅವು ಒಳ್ಳೆಯವೆಂದು ನೀನು ತೀರ್ಮಾನಿಸಿದರೆ ನೀನು ನಾಗರಿಕತೆಯನ್ನು ವ್ಯವಸ್ಥಾಪನೆಗೊಳಿಸುವುದಿಲ್ಲ ಎಂದು ನನಗೆ ಖಚಿತವಾಗಿ ಅನ್ನಿಸುತ್ತೆ. ನಾವು ಅಲ್ಲೇ ನಿಲ್ಲುತ್ತೇವೆ—ನಮ್ಮನ್ನೆಲ್ಲ ದೇವತೆಗಳನ್ನಾಗಿ ಮಾಡಲು ಸಾಕಾದಷ್ಟು ತೊಂದರೆ, ಚಿಂತೆ ಇರುತ್ತವೆ. ಬೇರೆ

ರೀತಿ ನೀನು ನಿರ್ಣಯಿಸುವೆಯಾದರೆ ಹಾಗೇ ಮುಂದುವರಿಯುವುದು ಮೇಲು. ಅದು ಹೇಗಾದರೂ ಇರಲಿ, ಸ್ಟೀವನ್, ನಮ್ಮ ಶೀಲಗಳು ಇಲ್ಲಿ ಸುರಕ್ಷಿತವಾಗಿವೆ. ಯಾವ ಕ್ಷಣದಲ್ಲಿ ಆಗಲಿ ಸ್ಫೋಟನೆ ನಡೆದು, ನಾವು ಒಂದು ಲಕ್ಷ ಚೂರಾಗಿ ಹೋಗಬಹುದು ಎಂಬ ಸಂಗತಿ ಸಾಕಷ್ಟು ಪರಿಮಾಣದ ಕಳವಳವನ್ನು ಯಾವಾಗಲೂ ಒದಗಿಸುತ್ತದೆ.

ಶಾರಾ : ಅಂದ ಹಾಗೆಯೇ, ಅಪ್ಪ, ನೀವು ಸ್ಫೋಟಕಗಳನ್ನು ಮಾಡುವುದೆಲ್ಲಿ ?

ಅಂಡರ್‌ಷಾಫ್ಟ್ : ಅಲ್ಲಿ... ಒಂದು ಕಾಣುತ್ತೆ ನೋಡು, ಅಂಥ ಬೇರೆ ಬೇರೆ ಸಣ್ಣ ಷೆಡ್ಡುಗಳಲ್ಲಿ. ಅವುಗಳಲ್ಲಿ ಒಂದು ಸಿಡಿದು ಹೋದರೆ ನಷ್ಟ ಹೆಚ್ಚಿಲ್ಲ. ತುಂಬಾ ಹತ್ತಿರವಿರುವ ಜನ ಮಾತ್ರ ಸಾಯುತ್ತಾರೆ.

[ಅದಕ್ಕೆ ತುಂಬಾ ಹತ್ತಿರವಿರುವ ಸ್ಟೀವನ್ ಭಯಗೊಂಡಂತೆ ಅದರ ಕಡೆಗೆ ನೋಡುತ್ತಾನೆ. ಬೇಗ ಫಿರಂಗಿ ಕಡೆಗೆ ಸರಿದು ಹೋಗುತ್ತಾನೆ. ಅದೇ ಸಮಯದಲ್ಲಿ ಇದ್ದಕ್ಕಿದ್ದಂತೆ ಷೆಡ್ಡಿನ ಬಾಗಿಲು ತೆರೆಯುತ್ತದೆ. ಮೇಲೆ ಕವಿದು ಹೊದ್ದಿರುವ ಮತ್ತು ಅಂಚು ಬಟ್ಟೆ ಸೇರಿಸಿ ಮಾಡಿದ ಪಾದರಕ್ಷೆ ಹಾಕಿಕೊಂಡು ಒಬ್ಬ ಮೇಸ್ತ್ರಿ ಹೊರ ಅಂಗಳಕ್ಕೆ ಬರುತ್ತಾನೆ. ಬಾಗಿಲಲ್ಲಿ ಕಾಣಿಸುವ ಲೋಮ್ಯಾಕ್ಸಿಗೆ ಬಾಗಿಲು ತೆರೆದಿದ್ದಾನೆ.]

ಲೋಮ್ಯಾಕ್ಸ್ : (ಬೇಕೆಂದು ತಂಪಾಗಿರುವಂತೆ ತೋರಿಸುತ್ತ) ನೋಡಯ್ಯ, ಏನೊ ಪ್ರಮಾದವಾಯಿತು ಎಂದು ನೀನು ಹೆದರಬೇಕಿಲ್ಲ. ನಿಮಗೇನೂ ಆಗುವುದಿಲ್ಲ. ಏನಾದರೂ ಆದರೆ ಪ್ರಪಂಚ ಕೊನೆಗೊಳ್ಳುತ್ತೆ ಎಂದು ನಾನು ಎಣಿಸುವುದಿಲ್ಲ. ಒಂದು ಚೂರು ಬ್ರಿಟಿಷ್ ಸಾಹಸ ನಿನ್ನಲ್ಲಿದ್ದರೆ ಚೆನ್ನಾಗಿತ್ತು ಕಣಯ್ಯ. (ಕೆಳಗಿಳಿದು ಶಾರಾ ಕಡೆಗೆ ದಾಟಿಕೊಂಡು ಬರುತ್ತಾನೆ.)

ಅಂಡರ್‌ಷಾಫ್ಟ್ : (ಮೇಸ್ತ್ರಿಗೆ) ಏನಾದರೂ ತಪ್ಪಾಯಿತೆ, ಬಿಲ್ಟನ್ ?

ಬಿಲ್ಟನ್ : (ವ್ಯಂಗ್ಯ ಸಮಾಧಾನದಲ್ಲಿ) ಈ ದೊಡ್ಡ ಮನುಷ್ಯರು ಸ್ಫೋಟಕದ ಷೆಡ್ಡಿನೊಳಗೆ ತಿರುಗಾಡುತ್ತ ಬಂದು ಸಿಗರೆಟ್ ಹಚ್ಚಿದರು ; ಅಷ್ಟೇ.

ಅಂಡರ್‌ಷಾಫ್ಟ್ : ಆ, ಹಾಗೇಯೇ ಇರಬೇಕು. (ಲೋಮ್ಯಾಕ್ಸ್ ಬಳಿಗೆ ಹೋಗಿ) ಬೆಂಕಿಕಡ್ಡಿಯನ್ನು ಏನು ಮಾಡಿದೆ ನೆನಪಿದೆಯೆ ?

ಲೋಮ್ಯಾಕ್ಸ್ : ಓ...ಬಿಡಿ ಎಂದರೆ. ನನಗಷ್ಟೂ ಬುದ್ಧಿ ಇಲ್ಲವೆ ? ಅದನ್ನು ಹೊರಗೆ ಬೀಸಾಡುವಾಗ ಸಾಕಷ್ಟು ಎಚ್ಚರಿಕೆಯಿಂದ ಆರಿಸಿ ಹಾಕಿದೆ.

ಬಿಲ್ಟನ್ : ಅದರ ತುದಿಯು ಒಳಭಾಗದಲ್ಲಿ ಇನ್ನೂ ಕೆಂಡ ಉರಿಯುತ್ತಿತ್ತು, ಸ್ವಾಮಿ.

ಲೋಮ್ಯಾಕ್ಸ್ : ಇತ್ತು ಎಂದುಕೊಳ್ಳಿ. ಆ ನಿಮ್ಮ ಅಧ್ವಾನ್ನ ಗೊಂದಲವಾವುದರಲ್ಲೂ ಅದನ್ನು ಎಸೆಯಲಿಲ್ಲ.

ಅಂಡರ್‌ಷಾಫ್ಟ್ : ಅದರ ವಿಷಯ ಇನ್ನು ಹೆಚ್ಚು ಯೋಚನೆ ಮಾಡಬೇಡ,

ಲೋಮ್ಯಾಕ್ಸ್. ನಿನ್ನ ಬೆಂಕಿಪೆಟ್ಟಿಗೆ ಎಲ್ಲಿ? ಸ್ವಲ್ಪ ಎರವಲು ಕೊಡುತೀಯ. ಆಕ್ಷೇಪಣೆ ಇಲ್ಲವಲ್ಲ?

ಲೋಮ್ಯಾಕ್ಸ್ : (ಬೆಂಕಿಪೆಟ್ಟಿಗೆ ನೀಡುತ್ತ) ಬೇಷಕ್.

ಅಂಡರ್‌ಷಾಫ್ಟ್ : ಉಪಕಾರವಾಯಿತು. (ಅದನ್ನು ತನ್ನ ಜೇಬಿನೊಳಕ್ಕೆ ಹಾಕಿಕೊಳ್ಳುವನು.)

ಲೋಮ್ಯಾಕ್ಸ್ : ಗೋಷ್ಠಿಗೆ ಸಾಮಾನ್ಯವಾಗಿ ಉಪದೇಶ ಮಾಡುತ್ತ) ಈ ದೊಡ್ಡ ಸ್ಫೋಟಕಗಳು ನೋಡಿ, ಕೋವಿಯಲ್ಲಿರುವಾಗ ಬಿಟ್ಟು ಮದ್ದಿನಂತೆ ಸಿಡಿಯುವುದಿಲ್ಲ. ಸಡಿಲವಾಗಿ ಹರಡಿದ್ದರೆ ಅದಕ್ಕೆ ಬೆಂಕಿಕಡ್ಡಿ ಗೀಚಿಟ್ಟರೂ ಸ್ವಲ್ಪವೂ ಅಪಾಯವಿಲ್ಲ. ಒಂದು ಚೂರು ಕಾಗದ ಸುಡುವಂತೆ ಸದ್ದಿಲ್ಲದೆ ಸುಡುತ್ತವೆ. (ಆ ವಿಷಯದ ವೈಜ್ಞಾನಿಕ ಅಂಶಗಳಲ್ಲಿ ಮುಳುಗಿ ಹೋಗಿ) ಅದು ನಿಮಗೆ ಗೊತ್ತಿತ್ತೆ ಅಂಡರ್‌ಷಾಫ್ಟ್? ನೀವು ಯಾವಾಗಲಾದರೂ ಪ್ರಯತ್ನಿಸಿದ್ದೀರ?

ಅಂಡರ್‌ಷಾಫ್ಟ್ : ದೊಡ್ಡ ಪ್ರಮಾಣದಲ್ಲಿಲ್ಲ, ಲೋಮ್ಯಾಕ್ಸ್. ಇಲ್ಲಿಂದ ಹೊರಡುವಾಗ ಕೇಳು; ಮಾದರಿಗೆ ಒಂದಿಷ್ಟು ಮದ್ದನ್ನು ಬಿಲ್ಟನ್ ಕೊಡ್ತಾನೆ. ಮನೆಯಲ್ಲಿ ಪರೀಕ್ಷಾ ಪ್ರಯೋಗ ಮಾಡಬಹುದು.

(ಬಿಲ್ಟನ್ ಮನಸ್ಸಿನಲ್ಲಿ ಸಿಕ್ಕುಗೊಂಡವನ ಹಾಗೆ ಕಾಣುತ್ತಾನೆ.)

ಶಾರ : ಅಂಥಾದ್ದನ್ನೇನೂ ಬಿಲ್ಟನ್ ಮಾಡಬೇಕಾದ್ದಿಲ್ಲ, ಅಪ್ಪ. ನಿಮ್ಮ ಉದ್ಯೋಗ ರಷ್ಯನ್ನರ, ಜಪಾನರ ಮೇಲೆ ಗುಂಡು ಹಾರಿಸುವುದು ಅಲ್ಲವೆ? ಬಡ ಚಾಲ್ಲಿಯನ್ನು ಎಗರಿಸುವುದರವರೆಗೆ ಬರಬೇಕಾದ್ದಿಲ್ಲ. (ಬಿಲ್ಟನ್ ಯೋಚನೆಯನ್ನು ಅಲ್ಲಿಗೆ ಬಿಟ್ಟು ಪೆಡ್ಡಿನೊಳಕ್ಕೆ ನಿಷ್ಕ್ರಮಿಸುತ್ತಾನೆ.)

ಲೋಮ್ಯಾಕ್ಸ್ : ನನ್ನ ಮುದ್ದು ಚಿನ್ನ, ಅಪಾಯವೇನೂ ಇಲ್ಲ, (ಅವಳ ಬಳಿಯಲ್ಲಿ ಷೆಲ್ ಮೇಲೆ ಕುಳಿತುಕೊಳ್ಳುತ್ತಾನೆ.)

(ಲೇಡಿ ಬ್ರಿಟೊಮಾರ್ಟ್ ಕೈಯಲ್ಲಿ ತುರಾಯಿ ಹಿಡಿದು ಪಟ್ಟಣದಿಂದ ಬರುತ್ತಾಳೆ).

ಲೇಡಿ ಬ್ರಿಟೊ : (ಆವೇಗದಿಂದ) ಆ್ಯಂಡ್ರೂ, ಈ ಸ್ಥಳಕ್ಕೆ ನನ್ನನ್ನು ಕರತಂದು ಇದನ್ನು ತೋರಿಸಬಾರದಾಗಿತ್ತು.

ಅಂಡರ್‌ಷಾಫ್ಟ್ : ಯಾಕೆ, ಪ್ರಿಯೆ?

ಲೇಡಿ ಬ್ರಿಟೊ : ಯಾಕೆ ಎಂಬುದು ಬೇಡ. ಕರದುತರಬಾರದಿತ್ತು ಅಷ್ಟೇ. (ಪಟ್ಟಣವನ್ನು ತೋರಿಸುತ್ತ) ಅದೆಲ್ಲ ನಿಮಗೆ ಸೇರಿದ್ದು ಎಂದು ಯೋಚಿಸಿದಾಗ! ಇಷ್ಟು ವರ್ಷ ಕಾಲವೂ ನಿಮ್ಮದಾಗಿ ಮಾಡಿ ಇಟ್ಟುಕೊಂಡಿದ್ದಿರಿ ಎಂದು ಯೋಚಿಸಿದಾಗ!

ಅಂಡರ್‌ಷಾಫ್ಟ್ : ಅದು ನನಗೆ ಸೇರಿದ್ದಲ್ಲ. ನಾನು ಅದಕ್ಕೆ ಸೇರಿದವನು. ಅದು ಅಂಡರ್‌ಷಾಫ್ಟ್ ಪಿತ್ರಾರ್ಜಿತ.

ಲೇಡಿ ಬ್ರಿಟೊ : ಅಲ್ಲ. ನಿಮ್ಮ ಫಿರಂಗಿಗಳೂ ಆ ದೊಡ್ಡ ಶಬ್ದ ಮಾಡುವ ಕುಲುಮೆ ಕಾರ್ಖಾನೆ ಅಂಡರ್‌ಷಾಫ್ಟ್ ಪೂರ್ವಾರ್ಜಿತ ಸ್ವತ್ತಾಗಿರಬಹುದು. ಆದರೆ ಆ ಎಲ್ಲ ಚಿನ್ನ, ಬೆಳ್ಳಿ ತಟ್ಟೆ, ಸಾಮಾನು, ಆ ಲಿನನ್ ವಸ್ತ್ರ, ಅಲ್ಲಿನ ಕುರ್ಚಿ, ಮೇಜು, ಸೋಫಾ, ಮನೆ, ಸಜ್ಜು, ಹಣ್ಣಿನ ತೋಟಗಳು, ಉಪವನಗಳು ನನಗೆ ಸೇರಿದವು. ಅವು ಗಂಡಸಿನ ಕೆಲಸವಲ್ಲ. ಅವನ್ನು ನಾನು ಬಿಟ್ಟುಕೊಡುವುದಿಲ್ಲ. ಅವುಗಳನ್ನೆಲ್ಲ ಯಾರಿಗೊ ಬಿಟ್ಟುಕೊಡಲು ನಿಮಗೆ ಬುದ್ಧಿ ಕೆಟ್ಟಿರಬೇಕು. ಅಂಥ ಅವಿವೇಕಕ್ಕೆ ನೀವು ಹಟಮಾಡಿದಿರಿ ಎಂದರೆ ನಾನು ವೈದ್ಯರನ್ನು ಕರಸುತ್ತೇನೆ.

ಅಂಡರ್‌ಷಾಫ್ಟ್ : (ತುರಾಯಿ ಪರಿಮಳವನ್ನು ಸವಿಯಲು ಬಾಗಿ) ಹೂಗಳನ್ನು ಎಲ್ಲಿ ಕೊಟ್ಟರು—ಇವಳೆ ?

ಲೇಡಿ ಬ್ರಿಟೊ : ನಿಮ್ಮ ವಿಲಿಯಂ ಮಾರಿಸ್ ಕಾಮಗಾರ ಚರ್ಚಿನಲ್ಲಿ ನಿಮ್ಮ ಕೆಲಸದವರು ನನಗೆ ಮರ್ಯಾದೆಯಾಗಿ ಕೊಟ್ಟರು.

ಕಸಿನ್ಸ್ : ಹಾ : ಅದೊಂದು ಮಾತ್ರ ಸಾಲದೆ ಇತ್ತು. ಕಾಮಗಾರರ ಚರ್ಚು ಒಂದು.

(ಗುಂಡು ಹಾರಿಸುವ ಪೀಠವನ್ನು ಹುಚ್ಚು ಹಿಡಿದಂತೆ ಏರುತ್ತಾನೆ. ಕೈಪಿಡಿ ಗೋಡೆಯ ಮೇಲೆ ಮೊಳಕೈ ಊರಿ ಅವರ ಕಡೆ ಬೆನ್ನು ತಿರುಗಿಸುತ್ತಾನೆ.)

ಲೇಡಿ ಬ್ರಿಟೊ : ಹೌದು. ಗೋಪುರದ ಸುತ್ತ ಹತ್ತು ಹತ್ತು ಅಡಿ ಎತ್ತರದ ನೆಯ್ದ ಚಿತ್ರಾಕ್ಷರಗಳಲ್ಲಿ ಮಾರಿಸ್ಸನ ಮಾತುಗಳನ್ನು ಬರೆದಿದ್ದಾರೆ. "ಇನ್ನೊಬ್ಬರ ಒಡೆಯನಾಗಿರಲು ಯಾರೂ ಯೋಗ್ಯರಲ್ಲ" ಎಂದು. ಮನುಷ್ಯನ ಸತ್‌ಸ್ವಭಾವವನ್ನು ಎಷ್ಟು ಹಳಿಯುತ್ತವೆ, ಆ ಮಾತುಗಳು !

ಅಂಡರ್‌ಷಾಫ್ಟ್ : ಮೊದಲು ಜನರಿಗೆ ಅದು ಧಕ್ಕೆ ಬಡಿದಂತಾಗಿತ್ತು, ಎನ್ನಿಸುತ್ತದೆ. ಚರ್ಚಿನಲ್ಲಿ ದೈವವಾಣಿಯ ದಶವಿಧಿಗಳನ್ನು ಜನ ಎಷ್ಟು ಲಕ್ಷಿಸುವುದಿಲ್ಲವೊ ಇದರ ಕಡೆಗೂ ಹಾಗೇ ಲಕ್ಷಿಸುವುದಿಲ್ಲ, ಇವರು.

ಲೇಡಿ ಬ್ರಿಟೊ : ಅಪವಿತ್ರವಾದ ಇಂಥ ತಮಾಷೆ ಮಾತನ್ನಾಡಿ ಆಸ್ತಿ ವಿಷಯವನ್ನು ಕುರಿತ ಸಂಗತಿಯಿಂದ ನನ್ನ ಮನಸ್ಸನ್ನು ಬೇರೆ ಕಡೆ ತಿರುಗಿಸಲು ಯತ್ನಿಸುತ್ತಿದ್ದೀರಿ. ನಿಮ್ಮ ಕೈಯಲ್ಲಿ ಆಗುವುದಿಲ್ಲ. ಸ್ಟೀವನ್ನಿಗೆ ಬೇಕು ಎಂದು ನಾನು ಇನ್ನು ಮುಂದೆ ಕೇಳುವುದಿಲ್ಲ. ಅವನಲ್ಲಿ, ನಿಮ್ಮ ವಕ್ರ ಸ್ವಭಾವವೇ ತುಂಬಾ ಇಳಿದು ಬಂದಿದೆಯಾದ್ದರಿಂದ ಅವನು ಅದಕ್ಕೆ ತಕ್ಕವನಲ್ಲ. ಆದರೆ ಸ್ಟೀವನ್ನಿಗೆ ಇರುವಷ್ಟು ಹಕ್ಕು ಬಾರ್ಬರಾಗೂ ಇದೆ. ಅಡಾಲ್ಫಸ್ ಏಕೆ ಆಸ್ತಿಗೆ ಉತ್ತರಾಧಿಕಾರಿಯಾಗಬಾರದು? ಅವನ ಪರವಾಗಿ ನಾನು ಪಟ್ಟಣವನ್ನು ನೋಡಿಕೊಳ್ಳಬಲ್ಲೆ. ಅವನು ಫಿರಂಗಿಗಳ ಕೆಲಸವನ್ನು ನೋಡಿಕೊಳ್ಳುತ್ತಾನೆ. ಅವು ನಿಜವಾಗಿ ಅಗತ್ಯವಾಗಿದ್ದರೆ.

ಅಂಡರ್‌ಷಾಫ್ಟ್ : ಅಡಾಲ್ಫಸ್ ತಬ್ಬಲಿ ಮಗುವಾಗಿದ್ದರೆ ಅದಕ್ಕಿಂತ ಮೇಲಾದ್ದನ್ನು ನಾನು ಕೇಳುತ್ತಿರಲಿಲ್ಲ. ಇಂಗ್ಲಿಷ್ ವಾಣಿಜ್ಯ ಪ್ರಪಂಚದಲ್ಲಿ ಅವನಂಥವರ ಹೊಸ ರಕ್ತ ಬೇಕಾಗಿದೆ. ಆದರೆ ಅವನು ತಬ್ಬಲಿ ಮಗುವಲ್ಲ. ಆ ಮಾತು ಅಲ್ಲಿಗೆ ಮುಗಿಯಿತು.

(ಕಚೇರಿ ಬಾಗಿಲ ಕಡೆಗೆ ಹೋಗುತ್ತಾನೆ.)

ಕಸಿನ್ಸ್ : (ಅವರ ಕಡೆ ತಿರುಗಿ) ಆ ಮಾತು ಪೂರ್ತಿ ನಿಜವಲ್ಲ. (ಎಲ್ಲರೂ ಅವನ ಕಡೆ ತಿರುಗಿ ದಿಟ್ಟಿಸುತ್ತಾರೆ.) ನನಗೆ ಅನ್ನಿಸುತ್ತದೆ—ನೋಡಿ : ಮುಂದೆ ನಾನು ಏನು ಮಾಡುತ್ತೇನೆಂಬುದನ್ನು ನಾನು ಯಾವ ರೀತಿಯಲ್ಲಿಯೂ ನನ್ನನ್ನು ನಿರ್ಬಂಧಿಸದಂತೆ ಮಾತನಾಡುತ್ತಿದ್ದೇನೆ—ಆದರೆ ತಬ್ಬಲಿ ಎಂಬ ತೊಂದರೆಯನ್ನು ದಾಟಬಹುದು ಎನ್ನಿಸುತ್ತೆ.

(ಎತ್ತರದ ಸ್ಥಳದಿಂದ ಕೆಳಕ್ಕೆ ದುಮುಕಿ ಬರುತ್ತಾನೆ.)

ಅಂಡರ್‌ಷಾಫ್ಟ್ : (ಹಿಂದಕ್ಕೆ ಅವನಿರುವಲ್ಲಿಗೆ ಬಂದು) ಏನು, ನಿನ್ನ ಅರ್ಥ ?

ಕಸಿನ್ಸ್ : ನೋಡಿ, ನನ್ನ ಗುಟ್ಟಿನ ಒಂದು ಸಂಗತಿಯನ್ನು ಪ್ರಕಟಿಸಬೇಕೆನ್ನಿಸುತ್ತದೆ.

ಶಾರ.<br>ಲೇಡಿ ಬ್ರಿಟೊ.<br>ಬಾರ್ಬರ.<br>ಸ್ಟೀವನ್. } ಗುಟ್ಟಿನ ಪ್ರಕಟನೆ...

ಲೋಮ್ಯಾಕ್ಸ್ : ಓ, ಹಾಗೇ ಅಂತೀಯ !

ಕಸಿನ್ಸ್ : ಹೌದು ; ಒಂದು ಆತ್ಮ ನಿವೇದನೆ. ಎಲ್ಲರೂ ಕೇಳಿ. ಬಾರ್ಬರಳನ್ನು ನಾನು ಕಾಣುವವರೆಗೂ ಪ್ರಧಾನವಾಗಿ, ನಾನು ಮರ್ಯಾದಸ್ಥ, ಸತ್ಯವಂತ ಅಂದುಕೊಂಡಿದ್ದೆ. ಬೇರೆ ಎಲ್ಲಕ್ಕಿಂತ ಹೆಚ್ಚಾಗಿ ನನ್ನ ಅಂತಃಸಾಕ್ಷಿ ನನಗೆ ಒಪ್ಪಿಗೆ ಕೊಡಬೇಕು ಎನ್ನಿಸುತ್ತಿತ್ತು. ಆದರೆ, ಅವಳನ್ನು ಕಂಡ ಕ್ಷಣದಲ್ಲಿಯೇ ನನ್ನ ಆತ್ಮಸಾಕ್ಷಿಯ ಒಪ್ಪಿಗೆಗಿಂತ ಹೆಚ್ಚಾಗಿ ನನಗೆ ಅವಳು ಬೇಕು ಎನ್ನಿಸಿತು.

ಲೇಡಿ ಬ್ರಿಟೊ : ಅಡಾಲ್ಫಸ್ !

ಕಸಿನ್ಸ್ : ನಾನು ಹೇಳುವುದು ನಿಜ, ಲೇಡಿ ಬ್ರಿಟ್. ನೀವೇ ನನ್ನನ್ನು ಆಕ್ಷೇಪಣೆ ಮಾಡಿದಿರಿ. ಬಾರ್ಬರ ಆರಾಧನೆಗಾಗಿ ನಾನು ಮುಕ್ತಿ ಸೈನ್ಯ ಸೇರಿದೆ ಎಂದು. ಹೌದು, ನಾನು ಮಾಡಿದ್ದು ಹಾಗೆ. ಕೇರಿಯ ಮೂಲೆಯಲ್ಲಿ ಒಂದು ಹೂವನ್ನು ಕೊಳ್ಳುವ ಹಾಗೆ ಅವಳು ನನ್ನ ಆತ್ಮವನ್ನು ಕೊಂಡಳು. ಆದರೆ ತನಗಾಗಿ ಅದನ್ನು ಕೊಂಡುಕೊಂಡಳು.

ಅಂಡರ್‌ಷಾಫ್ಟ್ : ಏನು ? ಡಯೋನಿಸಸಿಗಾಗಲ್ಲ ! ಬೇರೆ ಇನ್ನೊಂದಕ್ಕಾಗಿಯೂ ಅಲ್ಲ !

ಕಸಿನ್ಸ್ : ಡಯೋನಿಸಸ್ಸೂ, ಇತರ ಎಲ್ಲರೂ ಅವಳಲ್ಲಿಯೇ ಇದ್ದಾರೆ. ಅವಳಲ್ಲಿದ್ದ ದಿವ್ಯತೆಯನ್ನು ನಾನು ಮೆಚ್ಚಿಕೊಂಡೆ. ಆದ್ದರಿಂದ ನಿಜವಾದ ಭಕ್ತನೂ ಆರಾಧಕನೂ ಆದೆ. ಆದರೆ ಅವಳ ವಿಷಯದಲ್ಲಿ ನನ್ನ ಮನಸ್ಸು ರಮಿಸಿಯೂ ರಮಿಸಿತು. ಆಕೆ ಸಾಮಾನ್ಯ ಜನವರ್ಗಕ್ಕೆ ಸೇರಿದ ಹೆಂಗಸು ; ಗ್ರೀಕ್ ಅಧ್ಯಾಪಕನೊಬ್ಬನನ್ನು ಮದುವೆಯಾಗುವಷ್ಟು ಎತ್ತರಕ್ಕೆ ಅವಳ ಸ್ಥಾನದಲ್ಲಿರುವವರ ಸಾಮಾಜಿಕ ಆಕಾಂಕ್ಷೆ—ಎಷ್ಟು ಉಲ್ಬಣಗೊಂಡರೂ—ಏರುವುದಿಲ್ಲ ಎಂದುಕೊಂಡೆ !

ಲೇಡಿ ಬ್ರಿಟೊ : ಅಡಾಲ್ಫಸ್ ! !

ಲೋಮ್ಯಾಕ್ಸ್ : ಸರಿಹೋಯ್ತು ! ! !

ಕಸಿನ್ಸ್ : ಭೀಕರ ಸತ್ಯವನ್ನು ನಾನು ಅರಿತಾಗ—

ಲೇಡಿ ಬ್ರಿಟೊ : ಯಾವುದಪ್ಪ, ನಿನ್ನ ಭೀಕರ ಸತ್ಯವೆನ್ನುವುದು ?

ಕಸಿನ್ಸ್ : ಅವಳು ಅತ್ಯಂತ ಹಣವಂತಳು, ಅವಳ ಅಜ್ಜ ಶ್ರೀಮಂತರೊಬ್ಬರು, ಅವಳ ತಂದೆ ಅಂಥಂತಮದ ಅರಸು ಎಂದು ತಿಳಿದಾಗ—

ಅಂಡರ್‌ಷಾಫ್ಟ್ : ಚಟ್.

ಕಸಿನ್ಸ್ : ಹಣವುಳ್ಳ ಹೆಂಡತಿಯನ್ನು ಹಿಡಿಯಲು ಯತ್ನಿಸುವ ಒಬ್ಬ ಸಾಹಸಿಗನಾದೆನೆಂದರಿತಾಗ, ನನ್ನ ಹುಟ್ಟನ್ನು ಕುರಿತು ಆಕೆಗೆ ಮೋಸ ಮಾಡುವಷ್ಟು ತಗ್ಗಿನ ಕೆಲಸಮಾಡಿದೆ.

ಬಾರ್ಬರ : (ಏಳುತ್ತ) ಡಾಲ್ಲಿ.

ಲೇಡಿ ಬ್ರಿಟೊ : ನಿನ್ನ ಹುಟ್ಟು !...ನೋಡು ಅಡಾಲ್ಫಸ್, ಈ ಬಡ ಫಿರಂಗಿಗಳಿಗೋಸ್ಕರ ಒಂದು ಕೆಟ್ಟ ಕತೆಕಟ್ಟಿ ಹೇಳಬೇಡ. ನೆನಪಿರಲಿ, ನಿಮ್ಮ ತಂದೆತಾಯಿಗಳ ಫೋಟೊ ನಾನು ನೋಡಿದ್ದೇನೆ. ನೈಋತ್ಯ ಆಸ್ಟ್ರೇಲಿಯದ ಮುಖ್ಯ ನಿಯೋಗಿಗೆ ಅವರ ಖುದ್ದು ಪರಿಚಯ ಇದೆ. ಅವರು ಅತಿ ಮರ್ಯಾದಸ್ಥ ದಂಪತಿಗಳೆಂದು ಆತನು ನನಗೆ ಖಾತರಿ ಕೊಟ್ಟಿದ್ದಾರೆ.

ಕಸಿನ್ಸ್ : ಆಸ್ಟ್ರೇಲಿಯದಲ್ಲೇನೊ ಅವರು ಹಾಗೇ ಸರಿ. ಇಲ್ಲಿ, ಅವರು ಕುಲಬಾಹಿರರು. ಅವರ ಮದುವೆ ಆಸ್ಟ್ರೇಲಿಯದಲ್ಲಿ ಕಾನೂನಿಗೆ ಸಮ್ಮತ, ಇಂಗ್ಲಂಡಲ್ಲಲ್ಲ. ನಮ್ಮ ತಾಯಿ–ನಮ್ಮ ತಂದೆಗೆ ತೀರಿಕೊಂಡ ಮೊದಲ ಹೆಂಡತಿಯ ತಂಗಿ. ಆದ್ದರಿಂದ ಈ ದ್ವೀಪದಲ್ಲಿ ನಾನು ಅಕ್ರಮವಾಗಿ ಹುಟ್ಟಿದವನೇ ಆಗುತ್ತೇನೆ.(ಕೋಲಾಹಲ.)

ಬಾರ್ಬರ : ಬುದ್ಧಿ ಇಲ್ಲದ ಮಾತು ! (ಫಿರಂಗಿಯ ಮೇಲೆ ಹತ್ತಿ ಕೈಪಿಡಿ ಗೋಡೆಯೊಡನೆ ಸೇರುವ ಅದರ ಮೂಲೆಯಲ್ಲಿ ಆತು ಕೇಳುತ್ತಿದ್ದಾಳೆ.)

ಕಸಿನ್ಸ್ : ಈ ಒಳನೆವ ಸಾಕಾದೀತೆ ಮೆಕ್ಕಿಯವೆಲ್ಲಿ ? ... ...

ಅಂಡರ್‌ಷಾಫ್ಟ್ : (ಯೋಚನೆ ಮಾಡುತ್ತ) ಬಿಡ್ಡಿ, ತೊಂದರೆಯಿಂದ ಹೊರಬರಲು ಇದೊಂದು ದಾರಿಯಾಗಬಹುದು.

ಲೇಡಿ ಬ್ರಿಟೊ : ಬುದ್ಧಿ ಇಲ್ಲದ ಮಾತು, ಸ್ವಂತ ತಾನು ತಾನಲ್ಲ, ತನ್ನ ಜ್ಞಾತಿ ಎಂದರೆ ಫಿರಂಗಿಗಳನ್ನು ಯಾರೂ ಹೆಚ್ಚು ಚೆನ್ನಾಗಿ ಮಾಡಲಾರರು.

(ಹಾಸುಗಂಬಳಿಯ ಮೇಲೆ ಏರಿ ಕುಳಿತುಕೊಳ್ಳುತ್ತಾಳೆ. ಈ ವಿತಂಡವಾದಕ್ಕೆ ತನ್ನ ತಿರಸ್ಕಾರವನ್ನು ಸೂಚಿಸುವಂತೆ.)

ಅಂಡರ್‌ಷಾಫ್ಟ್ : (ಕಸಿನ್ಸ್‌ಗೆ) ನೀವು ಓದುಕಲಿತ ಮನುಷ್ಯರು. ಸಂಪ್ರದಾಯಕ್ಕೆ ಅದು ವಿರುದ್ಧ.

ಕಸಿನ್ಸ್ : ಹತ್ತು ಸಾವಿರಕ್ಕೆ ಒಮ್ಮೆ ತನಗೆ ಕಲಿಸಲು ಪ್ರಯತ್ನಿಸುವವರಿಗಿಂತ—ಶಾಲೆಯ ವಿದ್ಯಾರ್ಥಿ ಹುಟ್ಟಾ ಹೆಚ್ಚು ಪಂಡಿತನಾಗಿರುತ್ತಾನೆ. ನನ್ನ ಬುದ್ಧಿಯನ್ನು ಗ್ರೀಕ್ ನಾಶಮಾಡಿಲ್ಲ. ಅದನ್ನು ಪೋಷಿಸಿದೆ. ಅಲ್ಲದೆ ಇಂಗ್ಲಿಷ್ ಪಬ್ಲಿಕ್ ಸ್ಕೂಲಲ್ಲಿ ನಾನು ಅದನ್ನು ಕಲಿಯಲಿಲ್ಲ.

ಅಂಡರ್‌ಷಾಫ್ಟ್ : ಹುಂ ! ಆಗಲಿ. ಅತಿವಿಚಕ್ಷಣೆ ಮಾಡಲಾರದವನಾಗಿದ್ದೇನೆ. ನೀನು ತಬ್ಬಲಿಪೇಟೆಯನ್ನು ಪೂರ್ತಿ ಕೊಂಡುಕೊಂಡಿದ್ದೀಯೆ. ಅದು ನಿನ್ನನ್ನು ತೇರಿಸುತ್ತದೆ. ನೀನು ಚುನಾವಣೆಗೆ ಯೋಗ್ಯ, ಯೂರಿಪಿಡೇಸ್, ನೀನು ಚುನಾಯಿತನಾಗಬಲ್ಲೆ.

ಬಾರ್ಬರ : ಡಾಲ್ಲಿ, ನಿನ್ನೆ ಬೆಳಿಗ್ಗೆ ಸಂಪ್ರದಾಯವನ್ನು ಕುರಿತು ಸ್ಟೀವನ್ ನಮಗೆ ಹೇಳಿದಾಗ ನೀನು ತುಂಬಾ ಮೌನವಾದೆ. ಆಗಿಂದ ಹಿಡಿದು ವಿಚಿತ್ರವಾಗಿದ್ದೀಯೆ. ನಿನ್ನ ಹುಟ್ಟನ್ನು ಕುರಿತು ಯೋಚನೆ ಮಾಡುತ್ತಿದ್ದೆಯ ?

ಕಸಿನ್ಸ್ : ತನ್ನ ನಾಷ್ಟದ ನಡುವೆ ಇದ್ದಕ್ಕಿದ್ದಂತೆ ಯಾರ ಕಡೆಗಾದರೂ ವಿಧಿ ಬೆರಳು ತೋರಿಸಿದರೆ ಅದು ಆತನನ್ನು ಯೋಚನೆಗೆ ಈಡುಮಾಡದೆ ?

ಅಂಡರ್‌ಷಾಫ್ಟ್ : ಅಹ್ಹಾ ! ಈ ಉದ್ಯಮದ ಮೇಲೆ ನಿನ್ನ ಕಣ್ಣು ಬಿದ್ದಿದೆ ಮಗು, ಅಲ್ಲವೆ !

ಕಸಿನ್ಸ್ : ಹುಷಾರ್, ನನಗೂ ನಿಮ್ಮ ಹಾಳಾದ ಯುದ್ಧದ ವಾಯು ವಿಮಾನಕ್ಕೂ ನಡುವೆ ಧರ್ಮದ ಒಂದು ಭೀಕರ ಕಂದಕ ತೆರೆದಿದೆ.

ಅಂಡರ್‌ಷಾಫ್ಟ್ : ಸದ್ಯಕ್ಕೆ ಕಂದಕದ ಯೋಚನೆ ಬೇಡ. ಕಾರ್ಯಕ್ಕೆ ಸಂಬಂಧಪಟ್ಟ ವಿವರಗಳನ್ನು ನಿರ್ಣಯಿಸಿ ನಿನ್ನ ಕಡೆಯ ತೀರ್ಮಾನವನ್ನು ತೆರೆದಿರಲು ಬಿಡೋಣ. ನಿನ್ನ ಹೆಸರು ಬದಲಾಯಿಸ ಬೇಕಾಗುತ್ತದೆಯೆಂಬುದು ನಿನಗೆ ಗೊತ್ತಿರಬಹುದು. ಅದಕ್ಕೆ ನಿನ್ನ ಆಕ್ಷೇಪಣೆಯುಂಟೊ ?

ಕಸಿನ್ಸ್ : ಅಡಾಲ್ಫಸ್ ಎಂದು ಹೆಸರಿರುವವನು—ಡಾಲ್ಲಿ ಎಂದು ಕರಸಿಕೊಳ್ಳುವವನು—ಇನ್ನೇನಾದರೂ ಹೆಸರಿಂದ ಕರಸಿಕೊಳ್ಳಲು ಆಕ್ಷೇಪಿಸುತ್ತಾನೆಯೆ ?

ಅಂಡರ್‌ಷಾಫ್ಟ್ : ಸರಿ. ಈಗ ಹಣದ ವಿಚಾರ ಮಾತನಾಡೋಣ, ಮೊದಲಿಂದಲೂ ನಿನ್ನ ಪರವಾಗಿ ಉದಾರವಾಗಿ ನಡೆದುಕೊಳ್ಳಬೇಕೆಂದಿದ್ದೇನೆ. ವರ್ಷಕ್ಕೆ ೧೦೦೦ ಪೌಂಡಿನಂತೆ ನಿನಗೆ ಸಂಬಳ ತೊಡಗುತ್ತದೆ.

ಕಸಿನ್ಸ್ : (ಇದ್ದಕ್ಕಿದ್ದಂತೆ ಆವೇಗದಿಂದ—ಚೇಷ್ಟೆಯಿಂದ ಅವನ ಕನ್ನಡಕ ಮಿನುಗುತ್ತಿರಲು) ಒಂದು ಸಾವಿರ ! ಕೋಟ್ಯಧೀಶ್ವರರ ಅಳಿಯನೊಬ್ಬನಿಗೆ ಜುಜುಬಿ ಒಂದು ಸಾವಿರ ನೀಡಲು ನಿಮ್ಮ ಧೈರ್ಯವೆಷ್ಟು ? ಆಗದು—ದೇವರಾಣೆಗೂ—ಮೆಕ್ಕಿಯವೆಲ್ಲಿ. ನನ್ನನ್ನು ನೀವು ವಂಚಿಸಲಾರಿರಿ. ನಾನಿಲ್ಲದೆ ನಿಮ್ಮ ಕೆಲಸ ನಡೆಯದು. ನಿಮ್ಮನ್ನು ಬಿಟ್ಟು ನಾನು ಇರಬಲ್ಲೆ. ಎರಡು ವರ್ಷಕಾಲ ವರ್ಷಕ್ಕೆ $2\frac{1}{2}$ ಸಾವಿರದಂತೆ ಕೊಡಬೇಕು. ಆ ಕಾಲ ಮುಗಿದ ಮೇಲೆ ನಾನು ಕೆಲಸಕ್ಕೆ ಅಯೋಗ್ಯನಾದರೆ ಹೊರಟು ಹೋಗುತ್ತೇನೆ. ಯಶಸ್ವಿಯಾದರೆ, —ಕೆಲಸದಲ್ಲೇ ಉಳಿಯುವಂತಾದರೆ ನನಗೆ ಉಳಿದ ೫೦೦೦ ಪೌಂಡು ಕೊಡಬೇಕು.

ಅಂಡರ್‌ಷಾಫ್ಟ್ : ಉಳಿದ ಯಾವ ಐದು ಸಾವಿರ ?

ಕಸಿನ್ಸ್ : ಈ ಎರಡು ವರ್ಷಗಳಲ್ಲಿ ವರ್ಷಕ್ಕೆ ಐದು ಸಾವಿರದಂತೆ ಸಂಬಳ ತುಂಬುವುದಕ್ಕೆ. ನಾನು ಕೆಲಸದಲ್ಲಿ ನೆರವೇರದೆ ಇದ್ದರೆ, ೨,೫೦೦ ಅರ್ಧ ಸಂಬಳ ಮಾತ್ರ. ಮೂರನೆಯ ವರ್ಷ ಲಾಭದಲ್ಲಿ ಶೇಕಡ ೧೦ ಭಾಗ ನನಗೆ ಬರಬೇಕು.

ಅಂಡರ್‌ಷಾಫ್ಟ್ : (ಬೆಚ್ಚಿ ಬೆರಗಾಗಿ) 10%! ನನ್ನ ಲಾಭ ಎಷ್ಟೆಂದು ನಿನಗೆ ಗೊತ್ತಿದೆಯೆ ?

ಕಸಿನ್ಸ್ : ಅದ್ಭುತವಾಗಿರಬೇಕು. ಇಲ್ಲದಿದ್ದರೆ ನನಗೆ 25% ಕೊಡಬೇಕಾಗುತ್ತದೆ.

ಅಂಡರ್‌ಷಾಫ್ಟ್ : ಆದರೆ, ಕಸಿನ್ಸ್ ಅವರೆ, ಇದು ಉದ್ಯೋಗದ ಗಂಭೀರ ಸಂಗತಿ. ವ್ಯಾಪಾರಕ್ಕೆ ನೀವು ಯಾವ ಬಂಡವಾಳವನ್ನೂ ತರುತ್ತ ಇಲ್ಲ.

ಕಸಿನ್ಸ್ : ಏನು ! ಬಂಡವಾಳ ಇಲ್ಲವೆ ? ನನ್ನ ಗ್ರೀಕ್‌ಪಾಂಡಿತ್ಯ ಬಂಡವಾಳ ಅಲ್ಲವೆ? ಮಾನವವರ್ಗ ಈವರೆಗೆ ಸಾಧಿಸಿರುವ ಅತಿಸೂಕ್ಷ್ಮ ಚಿಂತನೆಗೆ, ಅತ್ಯುದಾತ್ತ ಕವಿತೆಗೆ ಪ್ರವೇಶ ಬಂಡವಾಳವಲ್ಲವೆ ? ನನ್ನ ಶೀಲ, ನನ್ನ ಬುದ್ಧಿಶಕ್ತಿ, ನನ್ನ ಬದುಕು, ನನ್ನ ವೃತ್ತಿಜೀವನ, ನನ್ನ ಆತ್ಮವೆಂದು ಬಾರ್ಬರ ಕರೆಯುತ್ತಾಳಲ್ಲ ಅವು ನನ್ನ ಬಂಡವಾಳವಲ್ಲವೆ ? ಇನ್ನೊಂದು ಮಾತು ಹೆಚ್ಚಾಗಿ ಆಡಿದರೆ ಸಂಬಳವನ್ನು ಎರಡರಷ್ಟು ಏರಿಸುತ್ತೇನೆ.

ಅಂಡರ್‌ಷಾಫ್ಟ್ : ಯುಕ್ತವಾಗಿ ಮಾತನಾಡಿ—

ಕಸಿನ್ಸ್ : (ಆಖೈರಾಗಿ) ಅಂಡರ್‌ಷಾಫ್ಟ್ ಅವರೆ,ನನ್ನ ಸಮಯುಗಳನ್ನು ತಿಳಿಸಿದ್ದೇನೆ. ಕೊಳ್ಳಿ ; ಬಿಡಿ.

ಅಂಡರ್‌ಷಾಫ್ಟ್ : (ಸ್ವಾಸ್ಥ್ಯ ಪಡೆದುಕೊಂಡು) ಒಳ್ಳೆಯದು. ನಿಮ್ಮ ಪರತ್ತುಗಳನ್ನು ಗುರುತುಮಾಡಿಕೊಂಡಿದ್ದೇನೆ. ನಿಮಗೆ ಅರ್ಧ ಸಿಗುತ್ತೆ.

ಕಸಿನ್ಸ್ : (ಜುಗುಪ್ಸೆಯಿಂದ) ಅರ್ಧ !

ಅಂಡರ್‌ಷಾಫ್ಟ್ : (ಸ್ಥಿರವಾಗಿ) ಅರ್ಧ.

ಕಸಿನ್ಸ್ : ನೀವು ದೊಡ್ಡ ಮನುಷ್ಯರು ಎಂದು ಕರೆದುಕೊಳ್ಳುತ್ತೀರಿ. ಅರ್ಧ ಕೊಡುತ್ತೇನೆ, ಎನ್ನುತ್ತೀರ ?

ಅಂಡರ್‌ಷಾಫ್ಟ್ : ನಾನು ನನ್ನನ್ನು ದೊಡ್ಡ ಮನುಷ್ಯನೆಂದು ಕರೆದುಕೊಳ್ಳುವುದಿಲ್ಲ. ಆದರೆ ನಿಮಗೆ ಅರ್ಧ ಕೊಡುತ್ತೇನೆ, ಎನ್ನುತ್ತೇನೆ ?

ಕಸಿನ್ಸ್ : ನಿಮ್ಮ ಭಾವೀಪಾಲುದಾರನಿಗೆ, ನಿಮ್ಮ ಉತ್ತರಾಧಿಕಾರಿಗೆ, ನಿಮ್ಮ ಅಳಿಯನಿಗೆ—ಹೇಳುವ ಮಾತೆ ಇದು ?

ಬಾರ್ಬರ : ನಿನ್ನ ಸ್ವಂತ ಆತ್ಮವನ್ನು ಮಾರಿಕೊಳ್ಳುತ್ತಿದ್ದೀಯೆ, ನನ್ನದನ್ನಲ್ಲ. ಈ ವ್ಯಾಪಾರದಿಂದ ದಯಮಾಡಿ ನನ್ನನ್ನು ಬಿಟ್ಟುಕೊಡು.

ಅಂಡರ್‌ಷಾಫ್ಟ್ : ಹೋಗಲಿ ಅಯ್ಯ. ಬಾರ್ಬರಗಾಗಿ ಇನ್ನೊಂದು ಹೆಜ್ಜೆ ಮುಂದೆ ಹೋಗುತ್ತೇನೆ. 5 ರಲ್ಲಿ 3 ಭಾಗ ನಿನಗೆ ಕೊಡುತ್ತೇನೆ. ನನ್ನ ಕಡೆಯ ಮಾತು.

ಕಸಿನ್ಸ್ : ಆಯಿತು.

ಲೋಮ್ಯಾಕ್ಸ್ : ಏಟು ತಿಂದದ್ದಾಯಿತು. ನನಗೆ ಸಿಕ್ಕುವುದು ಕೇವಲ 800 ಪೌಂಡು ಎಂಬುದು ನಿಮಗೆಲ್ಲ ಗೊತ್ತಿದೆ.

ಕಸಿನ್ಸ್ : ಅಂದ ಹಾಗೆಯೇ, ಮ್ಯಾಕ್, ನಾನು ಪ್ರಾಚೀನ ಕಾವ್ಯ ಪಂಡಿತ ; ಅಂಕಗಣಿತದ ಪಂಡಿತನಲ್ಲ ; 5 ರಲ್ಲಿ 3 ಭಾಗ ಎಂದರೆ ಅರ್ಧಕ್ಕಿಂತ ಹೆಚ್ಚೊ ಕಡಮೆಯೊ ?

ಅಂಡರ್‌ಷಾಫ್ಟ್ : ಸಹಜವಾಗಿ.—ಹೆಚ್ಚು.

ಕಸಿನ್ಸ್ : 250 ತೆಗೆದುಕೊಳ್ಳಲು ನಾನು ಸಿದ್ಧವಿದ್ದೆ. ವ್ಯಾಪಾರದಲ್ಲಿ ಎಷ್ಟು ಚೆನ್ನಾಗಿ ಮುಂದುವರಿಯಬಹುದು, ವಿಶ್ವವಿದ್ಯಾನಿಲಯದ ಉಪಾಧ್ಯಾಯನಿಗೆ ಎಂದರೆ, ಕಂಡ ಹಾಗೆ ಕೀಳ್ದರ್ಜೆಯ ಒಬ್ಬ ಗುಮಾಸ್ತನ ಸಂಬಳಪಡೆಯಲು ಯೋಗ್ಯನಲ್ಲದವನಿಗೆ ಇಷ್ಟು ಹಣ ತೆರಲು ಇಷ್ಟ ಪಡುತಾರಲ್ಲ. ಸರಿ, ಸರಿ, ಲಾಜರಸ್ ಏನು ಹೇಳ್ತಾನೊ.

ಅಂಡರ್‌ಷಾಫ್ಟ್ : ಆ ಲಾಜರಸ್ ಸಾಧುವಾದ ಒಬ್ಬ ಯೆಹೂದಿ; ಲಲಿತ. ಅವನಿಗೆ ಇನ್ನೇನೂ ಬೇಕಿಲ್ಲ, ನಾಲ್ಕು ತಂತ್ರೀವಾದ್ಯಗಳ ಸಂಗೀತಬೇಕು. ಶ್ರೀಮಂತ ನಾಟಕ ಶಾಲೆಗಳಲ್ಲಿ ದೊಡ್ಡ ಟಿಕೆಟಿನ ಸ್ಥಾನ ಬೇಕು. ಹಣದ ವಿಷಯದಲ್ಲಿ ನಿನಗಿರುವ ದುರಾಶೆಗೆ ಜನ ಬಡಪಾಯಿ ಅವನನ್ನು ತೆಗಳುತ್ತಾರೆ, ಈವರೆಗೂ ನನ್ನ ದುರಾಸೆಗೆ ಅವನನ್ನು ತೆಗಳುತ್ತಿದ್ದಂತೆ. ನೀನು ಪಕ್ಕಾ ಮೊಸಳೆಯಂಥ ಮನುಷ್ಯ, ಯೂರಿಪಿಡೇಸ್. ಆದರೆ ನಮ್ಮ ಉದ್ಯಮಕ್ಕೆ ಅಷ್ಟೊ ಅಷ್ಟು ಮೇಲು.

ಬಾರ್ಬರ : ವ್ಯಾಪಾರ ಮುಗಿಯಿತೆ ಡಾಲ್ಲಿ ? ಈಗ ನಿನ್ನ ಆತ್ಮ ಅವರಿಗೆ ಸೇರಿದ್ದೊ ?

ಕಸಿನ್ಸ್ : ಇಲ್ಲ. ಬೆಲೆ ನಿಶ್ಚಯವಾಗಿದೆ, ಅಷ್ಟೇ. ವಾಸ್ತವವಾದ ಎಳೆದಾಟ ಇನ್ನು ಮುಂದೆ ನಡೆಯಲಿದೆ. ಧರ್ಮದ ಪ್ರಶ್ನೆಯನ್ನೇನಂತೀರಿ ?

ಲೇಡಿ ಬ್ರಿಟೊ : ಧರ್ಮದ ಪ್ರಶ್ನೆಯೇ ಇಲ್ಲ, ಇಲ್ಲಿ ಅಡಾಲ್ಫಸ್. ಫಿರಂಗಿಗಳನ್ನೂ ಆಯುಧಗಳನ್ನೂ ಸುಮ್ಮನೆ ಮಾರಬೇಕು. ಯಾರ ಪಕ್ಷ ಸರಿಯಾದ್ದೊ ನ್ಯಾಯ ವಾದ್ದೊ ಆ ಜನಕ್ಕೆ. ವಿದೇಶಗಳವರಿಗೆ, ಪಾತಕರಿಗೆ ಮಾರುವುದಿಲ್ಲ ಎನ್ನಬೇಕು.

ಅಂಡರ್‌ಷಾಫ್ಟ್ : (ನಿರ್ಧಾರದಿಂದ) ಉಹುಂ...ಅದೆಲ್ಲ ಆಗದು. ಶಸ್ತ್ರನಿರ್ಮಾಣ ಕಾರನ ನಿಜವಾದ ವ್ರತವನ್ನು ನಡಸಬೇಕು. ಇಲ್ಲವಾದರೆ ನಿನಗೆ ಇಲ್ಲಿ ಸ್ಥಳವಿಲ್ಲ.

ಕಸಿನ್ಸ್ : ಯಾವುದು ಅದು, ಶಸ್ತ್ರನಿರ್ಮಾಣಕಾರನ, ನಿಜವಾದ ವ್ರತವೆಂಬುದು ?

ಅಂಡರ್‌ಷಾಫ್ಟ್ : ಜನ ಯಾರೇ ಆಗಲಿ, ತತ್ತ್ವ ಯಾವುದೇ ಆಗಲಿ, ಶ್ರೀಮಂತವರ್ಗ ದವರೇ ಆಗಲಿ, ಗಣರಾಷ್ಟ್ರದವರೇ ಆಗಲಿ ; ಶೂನ್ಯವಾದಿಗಳೇ ಆಗಲಿ ; ಸಾರ್ ಆಗಲಿ ; ಬಂಡವಾಳಗಾರ, ಸಮಾಜವಾದಿ ; ಪ್ರೊಟೆಸ್ಟಾಂಟ್, ಕ್ಯಾಥೊಲಿಕ್ ; ಮನೆಮುರುಕ, ದರೋಡೆಯವ, ಪೊಲೀಸ್‌ಮನ್; ಕಪ್ಪುಮನುಷ್ಯ, ಬಿಳಿಯವ, ಹಳದಿಯವ, ಯಾವ ಬಗೆಯವರಾಗಲಿ, ಯಾವ ಸ್ಥಿತಿಯವರಾಗಲಿ, ಎಲ್ಲ ರಾಷ್ಟ್ರ ಗಳಿಗೂ ಎಲ್ಲ ಅವಿವೇಕಿಗಳಿಗೂ ಪಂಥಗಳಿಗೂ ವಿವೇಕಿಗಳಿಗೂ ಅಪರಾಧಿಗಳಿಗೂ —ಯೋಗ್ಯ ಬೆಲೆ ನೀಡುವೆನೆನ್ನುವ ಎಲ್ಲರಿಗೂ ಶಸ್ತ್ರಗಳನ್ನು ಕೊಡುವುದು. ಮೊದಲ ಅಂಡರ್‌ಷಾಫ್ಟ್ ಅಂಗಡಿಯ ಹಲಗೆ ಮೇಲೆ ಹೀಗೆ ಬರೆದ: 'ಕೈಯನ್ನು ದೇವರು ಕೊಟ್ಟರೆ ಮನುಷ್ಯನು ಖಡ್ಗವನ್ನು ಕೊಡೆನೆನ್ನದಿರಲಿ' ಎಂದು. ಎರಡ ನೆಯವನು ಬರೆದ : 'ಕಾದಾಡಲು ಎಲ್ಲರಿಗೂ ಹಕ್ಕಿದೆ. ನ್ಯಾಯ ನಿರ್ಣಯ ಮಾಡುವ ಹಕ್ಕು ಯಾರಿಗೂ ಇಲ್ಲ !' ಮೂರನೆಯವನು ಬರೆದ : 'ಮನುಷ್ಯನ ಕೈಯದು ಆಯುಧ, ದೇವರ ಕೈಯದು ಜಯ !' ನಾಲ್ಕನೆಯವನಿಗೆ ಸಾಹಿತ್ಯಕ ವಾದ ಓಲು ಇರಲಿಲ್ಲ. ಆದ್ದರಿಂದ ಅವನೇನನ್ನೂ ಬರೆಯಲಿಲ್ಲ. ಆದರೆ ಮೂರನೆ ಜಾರ್ಜ್ ಕಣ್ಣೆದುರಿಗೇ ನಪೋಲಿಯನಿಗೆ ಫಿರಂಗಿಗಳನ್ನು ಮಾರಿದ. ಐದನೆಯವನು ಬರೆದಿಟ್ಟ : ಶಾಂತಿಯ ಕೈಯಲ್ಲಿ ಖಡ್ಗವಿಲ್ಲದೆ ಶಾಂತಿಸ್ಥಾಪನೆ ಯಾಗದು—ಎಂದು. ನನ್ನ ಗುರುವಾದ ಆರನೆಯವನು ಬರೆದದ್ದು ಉಳಿದೆಲ್ಲ ಕ್ಕಿಂತ ಉತ್ತಮ : ಕೆಲಸ ನೆರವೇರುವುದಕ್ಕಾಗಿ ಒಬ್ಬರನ್ನೊಬ್ಬರು ಕೊಲ್ಲಲು ಜನ ಸಿದ್ಧರಾಗದಿರುವವರೆಗೂ ಈ ಲೋಕದಲ್ಲಿ ಏನನ್ನೂ ಎಂದೂ ಮಾಡಲಾಗು ವುದಿಲ್ಲ—ಎಂದು. ಆ ತರುವಾಯ ಏಳನೆಯವನಿಗೆ ಹೇಳಲು ಏನೂ ಉಳಿಯ ಲಿಲ್ಲ. ಆದ್ದರಿಂದ ಸುಮ್ಮನೆ ಹೀಗೆ ಬರೆದ : 'ಸಿಗ್ಗಿಲ್ಲ' ಎಂದು.

ಕಸಿನ್ಸ್ : ಮೆಕ್ಕಿಯವೆಲ್ಲಿ, ಗೋಡೆಯ ಮೇಲೆ ಖಂಡಿತವಾಗಿ ನಾನು ಏನನ್ನಾದರೂ ಬರೆಯುತ್ತೇನೆ. ಆದರೆ ನಾನು ಗ್ರೀಕಲ್ಲಿ ಬರೆಯುವುದರಿಂದ ನಿಮಗೆ ಅದನ್ನು ಓದಲು ಆಗುವುದಿಲ್ಲ. ಶಸ್ತ್ರಕಾರನ ವಿಶ್ವಾಸವೂ ವ್ರತವೂ ಎಂದರೆ : ಸ್ವಂತ

ಧರ್ಮದ ಉರುಲಿಂದ ನನ್ನ ಕುತ್ತಿಗೆಯನ್ನು ಎಳೆದುಕೊಂಡವನು ನಾನು ; ನಿಮ್ಮ ಕುಣಿಕೆಗೆ ಅದನ್ನು ಒಳಪಡಿಸುವುದಿಲ್ಲ. ಇಷ್ಟಬಂದವರಿಗೆ ಫಿರಂಗಿಗಳನ್ನು ಮಾರುತ್ತೇನೆ. ಇಚ್ಛೆ ಬಂದವರಿಗೆ ಇಲ್ಲವೆನ್ನುತ್ತೇನೆ. ನನ್ನ ಮಾತು ಅದು.

ಅಂಡರ್‌ಷಾಫ್ಟ್ : ಆ್ಯಂಡ್ರೂ ಅಂಡರ್‌ಷಾಫ್ಟ್ ಆದ ಕ್ಷಣದಿಂದ ಪುನಃ ಇನ್ನೊಂದು ಸಲ ನಿನ್ನಿಷ್ಟದಂತೆ ನೀನು ಏನನ್ನೂ ಮಾಡುವುದಿಲ್ಲ. ಬಲದ ಮದಕ್ಕಾಗಿ ಇಲ್ಲಿಗೆ ಬರಬೇಡ, ಮಗು.

ಕಸಿನ್ಸ್ : ಬಲ ನನ್ನ ಗುರಿಯಾಗಿದ್ದಿದ್ದರೆ ಅದಕ್ಕಾಗಿ ಇಲ್ಲಿಗೆ ನಾನು ಬರಬೇಕಾಗಿರಲಿಲ್ಲ. ನಿಮಗೆ ಬಲ ಏನೂ ಇಲ್ಲ.

ಅಂಡರ್‌ಷಾಫ್ಟ್ : ಸ್ವಂತವಾಗಿ ನನ್ನದೆಂಬುದೇನೂ ಇಲ್ಲ, ಅದು ಖಂಡಿತ.

ಕಸಿನ್ಸ್ : ನಿಮಗಿಂತ ನನಗೆ ಹೆಚ್ಚು ಬಲವಿದೆ. ಹೆಚ್ಚು ಇಚ್ಛಾಶಕ್ತಿ ಇದೆ. ಈ ಸ್ಥಳವನ್ನು ನೀವು ನಡಸುವುದಿಲ್ಲ. ಅದು ನಿಮ್ಮನ್ನು ನಡಸುತ್ತದೆ. ಸ್ಥಳವನ್ನು ನಡಸುವುದು ಯಾವುದು ?

ಅಂಡರ್‌ಷಾಫ್ಟ್ : (ಒಗಟಿನಲ್ಲಿನಂತೆ) ಬೇರೊಂದು ಇಚ್ಛೆ, ನಾನು ಅದರ ಅಂಗ.

ಬಾರ್ಬರ : (ಬೆಚ್ಚಿ) ಅಪ್ಪ, ನೀವು ಏನು ಹೇಳುತ್ತಿದ್ದೀರಿ ಎನ್ನುವುದು ನಿಮಗೆ ಗೊತ್ತಿದೆಯೆ ? ಅಥವಾ ನನ್ನ ಆತ್ಮಕ್ಕೆ ಬಲೆ ಒಡ್ಡುತ್ತಿದ್ದೀರ ?

ಕಸಿನ್ಸ್ : ಅವರ ಆಧ್ಯಾತ್ಮ ತತ್ವಕ್ಕೆ ಕಿವಿಕೊಡಬೇಡ ಬಾರ್ಬರ. ಸಮಾಜದ ಅತಿಧೂರ್ತರು : ಹಣದ ಬೇಟೆಯವರು, ಭೋಗದ ಬೇಡರು, ಸೈನ್ಯಶಕ್ತಿಯ ಏಳಿಗೆ ಬೇಟೆಯವರು, ಈ ಸ್ಥಳವನ್ನು ನಡಸುತ್ತಿದ್ದಾರೆ. ಇವರು ಅವರ ಗುಲಾಮರು—

ಅಂಡರ್‌ಷಾಫ್ಟ್ : ಅಗತ್ಯವಾಗಿ ಅಲ್ಲ, ಶಸ್ತ್ರಕಾರನ ವಿಶ್ವಾಸವನ್ನು ನೆನಪಿನಲ್ಲಿಡು. ಕೆಟ್ಟವನು ಬೇಡಿದ್ದನ್ನು ತಯಾರಿಸಲು ಒಪ್ಪಿಕೊಳ್ಳುವಂತೆ ಒಳ್ಳೆಯವನೊಬ್ಬನು ಬೇಡಿದ್ದನ್ನು ಒದಗಿಸಲು ಸಂತೋಷವಾಗಿ ಒಪ್ಪಿಕೊಳ್ಳುತ್ತೇನೆ. ನನ್ನ ಆಯುಧಗಳನ್ನು ಕೊಂಡು ದುಷ್ಟರೊಡನೆ ಯುದ್ಧ ಮಾಡುವುದಕ್ಕಿಂತ ಸಜ್ಜನರಾದ ನೀವು ಉಪದೇಶ ಮಾಡುವುದೂ ಕೆಲಸ ತಪ್ಪಿಸಿಕೊಳ್ಳುವುದೂ ಲೇಸೆಂದು ಭಾವಿಸಿದರೆ ನನ್ನನ್ನು ಆಕ್ಷೇಪಿಸಬೇಡಿ. ನಾನು ಫಿರಂಗಿಗಳನ್ನು ಮಾಡಬಲ್ಲೆ. ಧೈರ್ಯವನ್ನೂ ಧರ್ಮ ನಿಶ್ಚಯವನ್ನೂ ಮಾಡಲಾರೆ. ಬಾಹ್ ! ನಿನ್ನ ನೀತಿಯ ವಿಕ್ರಯ ನನಗೆ ಆಯಾಸ ತರುತ್ತದೆ. ಯೂರಿಪಿಡೇಸ್ ! ಬಾರ್ಬರಳನ್ನು ಕೇಳು, ಅವಳಿಗೆ ಅರ್ಥವಾಗುತ್ತದೆ.

(ಇದ್ದಕ್ಕಿದ್ದಂತೆ ಬಾರ್ಬರ ಕಡೆ ಕೈಚಾಚಿ ಅವಳ ಕೈಗಳನ್ನು ಹಿಡಿದುಕೊಳ್ಳುತ್ತಾನೆ. ಬಲವಾಗಿ ಆಕೆಯ ಕಣ್ಣುಗಳೊಳಕ್ಕೆ ನೋಡುತ್ತಾನೆ.)

ಅವನಿಗೆ ಹೇಳು ತಾಯಿ, ಬಲದ ಅರ್ಥ ಏನು ಎಂದು.

ಬಾರ್ಬರ : (ಮಂತ್ರಮುಗ್ಧಳಾಗಿ) ನಾನು ಮುಕ್ತಿ ಸೈನ್ಯವನ್ನು ಸೇರುವ ಮುಂಚೆ ನನ್ನ ವಶದಲ್ಲಿದ್ದೆ. ಅದರ ಪರಿಣಾಮವಾಗಿ ನನ್ನನ್ನು ಏನು ಮಾಡಿಕೊಳ್ಳಬೇಕು ಎಂದು ನನಗೆಂದಿಗೂ ಗೊತ್ತಾಗುತ್ತಿರಲಿಲ್ಲ. ಅದನ್ನು ಸೇರಿದಾಗ, ನಾನು ಮಾಡಬೇಕಾಗಿದ್ದ ಕೆಲಸಗಳಿಗೆಲ್ಲ ಸಾಕಷ್ಟು ಕಾಲ ಇರಲಿಲ್ಲ.

ಅಂಡರ್‌ಷಾಫ್ಟ್ : (ಒಪ್ಪುತ್ತ) ಅಷ್ಟೇ. ಅದೇಕಾಯಿತು ಎಂದುಕೊಂಡಿದ್ದೀಯೆ ?

ಬಾರ್ಬರ : ನಿನ್ನೆ ಅದನ್ನು ಹೇಳಬಲ್ಲವಳಾಗಿದ್ದೆ. ಏಕೆಂದರೆ ನಾನು ದೇವರ ವಶದಲ್ಲಿದ್ದೆ. (ಸ್ವಾಸ್ಥ್ಯವನ್ನು ಪುನಃ ಪಡೆದುಕೊಂಡು ಅವನ ಶಕ್ತಿಗೆ ಸಮವಾದ ಶಕ್ತಿಯಿಂದ ತನ್ನ ಕೈಗಳನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಾಳೆ.) ನೀವು ಬಂದಿರಿ. ನಾನು ಬಾಜ್ಜರ್ ಮತ್ತು ಅಂಡರ್‌ಷಾಫ್ಟ್ ಅವರ ವಶದಲ್ಲಿದ್ದೇನೆಂದು ನನಗೆ ತೋರಿಸಿದ್ದೀರಿ. ಇಂದು ನನಗೆ ಅನ್ನಿಸುತ್ತಿದೆ : ಓ ಇದನ್ನು ಮಾತುಗಳಲ್ಲಿ ಹೇಗೆ ತಿಳಿಸಲಿ ? ಶಾರಾ ! ನಾವು ಚಿಕ್ಕ ಮಕ್ಕಳಾಗಿದ್ದಾಗ ಕ್ಯಾನಸ್‌ನಲ್ಲಿ ಭೂಕಂಪವಾಯಿತು, ನೆನಪಿದೆಯೆ ? ಮೊದಲು ಉಂಟಾದ ಧಕ್ಕೆಯಿಂದ ಹುಟ್ಟಿದ ಆಶ್ಚರ್ಯ ಅಷ್ಟಾಗಿರಲಿಲ್ಲ. ಎರಡನೆಯದಕ್ಕೆ ಕಾಯುವಾಗ ಆಗುತ್ತಿದ್ದ ಶಂಕೆ ಭೀತಿಗಳಿಗೆ ಅದು ಸಾಟಿಯಲ್ಲವೆಂದು. ಈ ಸ್ಥಳದಲ್ಲಿ ಇಂದು ನನಗೆ ಹಾಗನ್ನಿಸುತ್ತದೆ. ನಾನು ಶಾಶ್ವತವಾದ ಕಲ್ಲರೆಯ ಮೇಲೆ ನಿಂತಿದ್ದೆನೆಂದು ಕೊಂಡಿದ್ದೆ. ಒಂದು ಮಾತಿನ ಎಚ್ಚರಿಕೆ ಕೊಡದೆ ಅದು ತತ್ತರಿಸಿತು ; ನನ್ನ ಕಾಲ ಕೆಳಗೆ ಮುರಿದುಬಿದ್ದಿತು. ಅನಂತವಾದ ವಿವೇಕವೊಂದು ನನ್ನನ್ನು ಕಾಯುತ್ತಿರಲು ನಾನು ಸುರಕ್ಷಿತಳಾಗಿದ್ದೆ. ಮುಕ್ತಿಯ ಕಡೆ ನನ್ನೊಡನೆ ಒಂದು ಸೈನ್ಯ ನಡೆಯುತ್ತಿತ್ತು. ಒಂದು ಕ್ಷಣದಲ್ಲಿ, ಒಂದು ಚೆಕ್ ಬುಕ್ಕಿನಲ್ಲಿ ನಿಮ್ಮ ಲೇಖನಿಯ ಒಂದು ಗುರುತು ಹಾಕಲು ನಾನು ಒಂಟಿಯಾಗಿ ನಿಂತೆ. ಸ್ವರ್ಗ ಶೂನ್ಯವಾಯಿತು. ಭೂಕಂಪದ ಮೊದಲ ಪೆಟ್ಟು ಅದು. ಎರಡನೆಯದಕ್ಕೆ ಕಾಯುತ್ತಿದ್ದೇನೆ.

ಅಂಡರ್‌ಷಾಫ್ಟ್ : ಬಿಡು, ಬಿಡು, ಮಗು. ಡಬ್ಬದ ಶಬ್ದ ಮಾಡುವ ನಿನ್ನ ಈ ಪುಟಾಣಿ ದುರಂತವನ್ನು ಅತಿ ಮಾಡಬೇಡ. ಅನೇಕ ವರ್ಷಗಳ ಕೆಲಸ ಮಾಡಿ, ಯೋಚನೆ ಹೂಡಿ, ಸಾವಿರಾರು ಪೌಂಡುಗಳ ಗಟ್ಟಿ ನಗದನ್ನು ಒಂದು ಹೊಸ ಬಂದೂಕಿಗಾಗಿಯೊ ಒಂದು ಯುದ್ಧವಿಮಾನಕ್ಕಾಗಿಯೊ ವೆಚ್ಚಮಾಡಿ, ಅಷ್ಟಾದರೂ ಒಂದು ಕೂದಲೆಳೆಯಷ್ಟು ಮಾತ್ರ ಅದು ಕೆಟ್ಟರೆ ಇಲ್ಲೇನು ಮಾಡುತ್ತೇವೆ ಗೊತ್ತೆ?—ತಿಪ್ಪೆಗೆಸೆಯುತ್ತೇವೆ. ಅದರ ಮೇಲೆ ಇನ್ನೊಂದು ಗಂಟೆ ಸಮಯ, ಒಂದೇ ಒಂದು ಪೌಂಡು ಹಣ ಪೋಲು ಮಾಡದೆ ಅದನ್ನು ಎಸೆದು ಬಿಡುತ್ತೇವೆ. ಸರಿ, ನೀತಿಯೆಂದೊ ಮತವೆಂದೊ ಇನ್ನಾವುದೆಂದೊ ನೀನು ಕರೆಯುವ ಒಂದನ್ನು ನಿನಗಾಗಿ ಮಾಡಿಕೊಂಡಿದ್ದೀಯೆ. ಲೋಕಸ್ಥಿತಿಗೆ ಅದು

ಹೊಂದದು. ಮಾಡುವುದೇನು ? ತಿಪ್ಪೆಗೆಸೆ. ಅದನ್ನು ತಿಪ್ಪೆಗೆಸೆದು ಹೊಂದುವ ಒಂದನ್ನು ಮಾಡಿಕೊ. ಈಗ ಪ್ರಪಂಚದಲ್ಲಿರುವ ದೋಷ ಅದು. ಕೆಲಸಕ್ಕೆ ಬಾರದ ಹಳೆಯ ಎಂಜಿನುಗಳನ್ನೂ ಡೈನಮೊಗಳನ್ನೂ ಅದು ತಿಪ್ಪೆಗೆಸೆಯುತ್ತದೆ. ತನ್ನ ಹಳೆಯ ಪೂರ್ವಗ್ರಹಗಳನ್ನೂ ಹಳೆಯ ನೀತಿಧರ್ಮಗಳನ್ನೂ ಹಳೆಯ ರಾಜ್ಯಾಂಗ ರಚನೆಯನ್ನೂ ತಿಪ್ಪೆಗೆಸೆಯಲು ಇಷ್ಟಪಡದು. ಪರಿಣಾಮವೇನು ? ಅದರ ಯಂತ್ರಗಳೆಲ್ಲ ಸರಿಯಾಗಿ ನಡೆಯುತ್ತವೆ. ನೀತಿಗಳಲ್ಲಿ ಮತಧರ್ಮದಲ್ಲಿ ರಾಜಕೀಯದಲ್ಲಿ ಅದು ನಷ್ಟಕ್ಕೆ ಕೆಲಸ ಮಾಡುತ್ತದೆ. ಪ್ರತಿವರ್ಷವೂ ಈ ಸಂಗತಿ ಅದನ್ನು ದಿವಾಳಿಗೆ ಹತ್ತಿರ ತರುತ್ತಿದೆ. ಆ ಅವಿವೇಕದಲ್ಲಿ ಹಟ ಹಿಡಿದು ಕೂಡಬೇಡ. ನಿನ್ನ ಹಳೆಯ ಮತ ನಿನ್ನೆ ಮುರಿದುಬಿದ್ದರೆ ಏನಾಯಿತು? ನಾಳೆಯ ಬಳಕೆಗಾಗಿ, ಹೆಚ್ಚು ಹೊಸದಾದ, ಹೆಚ್ಚು ಮೇಲಾದ ಒಂದನ್ನು ಸ್ವೀಕರಿಸು.

ಬಾರ್ಬರ : ಹೆಚ್ಚು ಒಳ್ಳೆಯದನ್ನು, ಎಷ್ಟು ಸಂತೋಷದಿಂದ ನನ್ನ ಆತ್ಮಕ್ಕೆ ತೆಗೆದುಕೊಂಡೇನೊ ! ಆದರೆ ನೀವು ನನಗೆ ನೀಡುತ್ತಿರುವುದು ಅದಕ್ಕಿಂತ ಕೀಳಾದ್ದನ್ನು. (ಅನಿರೀಕ್ಷಿತ ಆವೇಶದಲ್ಲಿ ಅವನ ಮೇಲೆ ತಿರುಗಿಬಿದ್ದು) ನೀವು ಹೇಳುವುದು ಸರಿ ಎಂದು ಸ್ಥಾಪಿಸಿಕೊಡಿ ; ಚೆಲುವಾದ, ಸ್ವಚ್ಛವಾದ ಕೆಲಸದ ಅಂಗಡಿಗಳೂ ಈ ಮರ್ಯಾದಸ್ಥ ಕೆಲಸದವರ ಮಾದರಿ ಮನೆಗಳೂ ಉಳ್ಳ ಈ ಭಯಂಕರ ಸ್ಥಳದ ಕತ್ತಲಿಂದ ತಿರುಗಿಸಲು ನನಗೆ ಯಾವುದಾದರೂ ಬೆಳಕನ್ನು ತೋರಿಸಿ.

ಅಂಡರ್‌ಷಾಫ್ಟ್ : ಸ್ವಚ್ಛತೆ, ಮರ್ಯಾದೆಗಳಿಗೆ ಸ್ಥಾಪನೆಯ ಅಗತ್ಯವಿಲ್ಲ, ಬಾರ್ಬರ. ಅವಕ್ಕೆ ಅವೇ ಸ್ಥಾಪಕಗಳು. ಇಲ್ಲಿ ನನಗೆ ಕತ್ತಲೆ ಕಾಣಿಸದು. ಯಾವ ಭಯಂಕರತೆಯೂ ಇಲ್ಲ. ನಿನ್ನ ಆ ಮುಕ್ತಿಸೇನೆಯ ಆಶ್ರಯದಲ್ಲಿ ನಾನು ಬಡತನವನ್ನು ಕಂಡೆ ; ದುಃಖ, ಚಳಿ, ಹಸಿವು ಕಂಡೆ. ನೀನು ಅವರಿಗೆ ರೊಟ್ಟಿ, ಗಂಜಿ ಕೊಟ್ಟೆ. ನಾನಿಲ್ಲಿ ಇವರಿಗೆ ವಾರಕ್ಕೆ 30 ಷಿಲಿಂಗಿಂದ ಹಿಡಿದು ವರ್ಷಕ್ಕೆ 12,000 ಪೌಂಡುವರೆಗೆ ಸಂಬಳ ಕೊಡುತ್ತೇನೆ. ತಮ್ಮ ಕನಸುಗಳನ್ನು ಅವರು ಕಾಣುತ್ತಾರೆ. ಅವರ ಬಚ್ಚಲು ಚರಂಡಿಗಳ ಚೊಕ್ಕಟವನ್ನು ನಾನು ನೋಡಿಕೊಳ್ಳುತ್ತೇನೆ.

ಬಾರ್ಬರ : ಅವರ ಆತ್ಮಗಳನ್ನು ?

ಅಂಡರ್‌ಷಾಫ್ಟ್ : ನಿನ್ನದನ್ನು ಉದ್ಧಾರಮಾಡಿದ ಹಾಗೆ ಅವರದನ್ನೂ ಉದ್ಧಾರ ಮಾಡುತ್ತೇನೆ.

ಬಾರ್ಬರ : (ಹೇಸಿ) ನೀವು ನನ್ನ ಆತ್ಮವನ್ನು ಉದ್ಧರಿಸಿದಿರಿ ? ಏನು ನಿಮ್ಮ ಅರ್ಥ ?

ಅಂಡರ್‌ಷಾಫ್ಟ್ : ನಾನು ನಿನಗೆ ಅನ್ನ ಹಾಕಿದೆ ; ಬಟ್ಟೆ ಕೊಟ್ಟೆ ; ಮನೆಕೊಟ್ಟೆ ; ನೆಮ್ಮದಿಯಾಗಿ ಬದುಕಿರಲು ಸಾಕಷ್ಟು ಹಣ ಇರಬೇಕೆಂದು ಎಚ್ಚರ ತೆಗೆದುಕೊಂಡೆ. ಸಾಕಾದ್ದಕ್ಕಿಂತ ಹೆಚ್ಚು ಕೊಟ್ಟೆ : ನೀನು ಪೋಲು ಮಾಡಲಿ ಎಂದು ; ಎಚ್ಚರಿಕೆ

ತಪ್ಪುಬಲ್ಲಷ್ಟನ್ನು ; ಬೇಕಾದಂತೆ ಧಾರಾಳವಾಗಿರಲಿ ಎಂದು. ಅದು ನಿನ್ನ ಆತ್ಮವನ್ನು ಸಪ್ತಮಹಾಪಾತಕಗಳಿಂದ ಉದ್ಧಾರ ಮಾಡಿತು.

ಬಾರ್ಬರ : (ದಿಕ್ಕುತೋರದಾಗಿ) ಸಪ್ತಮಹಾಪಾತಕಗಳು ?

ಅಂಡರ್‌ಷಾಫ್ಟ್ : ಹೌದು ! ಪಾಪ ಮಹಾಸಪ್ತಕ. (ಬೆರಳುಗಳ ಮೇಲೆ ಎಣಿಸುತ್ತ) ಅನ್ನ, ಬಟ್ಟೆ, ಕಾವು, ಬಾಡಿಗೆ, ತೆರಿಗೆ, ಲೋಕಮರ್ಯಾದೆ, ಮಕ್ಕಳು. ಈ ಏಳು ಗುಂಡುಕಲ್ಲುಗಳನ್ನು ಹಣವಲ್ಲದೆ ಬೇರೆ ಯಾವುದೂ ಮನುಷ್ಯನ ಕುತ್ತಿಗೆಯ ಸುತ್ತಲಿಂದ ಬಿಡಿಸಲಾರವು. ಈ ಬೀಸುವ ಕಲ್ಲುಗಳನ್ನು ಮೇಲೆತ್ತಿದ ಹೊರತು ಮನುಷ್ಯನ ಆತ್ಮ ಸ್ವರ್ಗಕ್ಕೇರಲಾರದು. ನಿನ್ನ ಆತ್ಮದಿಂದ ಆ ಭಾರವನ್ನು ನಾನು ಮೇಲೆ ಎತ್ತಿದೆ. ಬಾರ್ಬರ ಮೇಜರ್ ಬಾರ್ಬರ ಆಗುವಂತೆ ನೆರವಾದೆ ; ಬಡತನವೆಂಬ ಪಾತಕದಿಂದ ಅವಳನ್ನು ಉದ್ಧಾರ ಮಾಡಿದೆ.

ಕಸಿನ್ಸ್ : ಬಡತನವನ್ನು ಪಾತಕವೆಂದು ಕರೆಯುತ್ತೀರ ?

ಅಂಡರ್‌ಷಾಫ್ಟ್ : ಅತಿದೊಡ್ಡ ಪಾತಕ ಅದು. ಅದಕ್ಕೆ ಹೋಲಿಸಿದರೆ ಇತರ ಪಾತಕಗಳೆಲ್ಲ ಸದ್ಗುಣಗಳು ; ಅದಕ್ಕೆ ಹೋಲಿಸಿದರೆ ಇತರ ಅಗೌರವಗಳೆಲ್ಲ ಧರ್ಮಸಾಹಸಗಳು. ಬಡತನ ಒಟ್ಟು ಪಟ್ಟಣಗಳನ್ನು ನಾಶಮಾಡುತ್ತದೆ ; ಭಯಂಕರ ಪೀಡೆಗಳನ್ನು ಹರಡುತ್ತದೆ ; ಅದರ ಕಣ್ಣಿಗೆ ಬಿದ್ದ, ಅದರ ಶಬ್ದ ಕೇಳಿದ, ಅದರ ವಾಸನೆಯ ಹತ್ತಿರದ ಎಲ್ಲದರ ಆತ್ಮಗಳನ್ನು ಬಡಿದು ಕೊಲ್ಲುತ್ತದೆ. ನೀನು ಪಾತಕವೆಂದು ಕರೆಯುವುದು ದೊಡ್ಡದಲ್ಲ. ಇಲ್ಲೊಂದು ಕೊಲೆ, ಅಲ್ಲೊಂದು ಕಳ್ಳತನ ; ಈಗೊಂದು ಪೆಟ್ಟು, ಆಗೊಂದು ಶಾಪ—ಅವುಗಳಿಂದಾಗುವುದೇನು ? ಬಾಳಿನ ಆಕಸ್ಮಿಕಗಳು ಅವು. ರೋಗರುಜಿನಗಳು ಮಾತ್ರ. ಲಂಡನಿನಲ್ಲಿ ಅವನ್ನೇ ನಿಜವಾದ ವೃತ್ತಿ ಮಾಡಿಕೊಂಡಿರುವ 50 ಜನ ಪಾತಕಿಗಳಿಲ್ಲ, ಆದರೆ ಹತ್ತಾರು ಲಕ್ಷ ಮಂದಿ ಬಡವರಿದ್ದಾರೆ ; ಆರ್ತರಿದ್ದಾರೆ ; ಕೊಳಕರಿದ್ದಾರೆ ; ಪೋಷಣೆ ಸಾಲದವರು, ಬಟ್ಟೆ ಸಾಲದವರು ಇದ್ದಾರೆ. ಧಾರ್ಮಿಕವಾಗಿಯೂ ದೈಹಿಕವಾಗಿಯೂ ಅವರು ನಮಗೆ ವಿಷವೂಡುತ್ತಾರೆ. ಸಮಾಜದ ಸುಖದ ಕೊಲೆಗಾರರು ಅವರು. ಸ್ವಂತ ಸ್ವಾತಂತ್ರ್ಯಗಳನ್ನು ನಾವು ಕಳೆದುಕೊಳ್ಳುವಂತೆ, ಅಸಹಜ ಕ್ರೌರ್ಯಗಳನ್ನು ನಾವು ಏರ್ಪಡಿಸುವಂತೆ ಅವರು ನಮ್ಮನ್ನು ಬಲಾತ್ಕರಿಸುತ್ತಾರೆ. ನಮ್ಮ ಮೇಲೆ ಅವರು ತಿರುಗಿ ಬಿದ್ದಾರು, ತಮ್ಮ ಅಧಃಪಾತಾಳಕ್ಕೆ ನಮ್ಮನ್ನೂ ಎಳೆದಾರು—ಎಂಬ ಭಯ ನಮಗೆ. ಪಾತಕಕ್ಕೆ ಹೆದರುವವರು ತಿಳಿಗೇಡಿಗಳು ಮಾತ್ರ. ನಾವೆಲ್ಲ ಭಯಪಡುವುದು ಬಡತನಕ್ಕೆ. ಪಾಹ್ ! (ಬಾರ್ಬರ ಮೇಲೆ ಕವಿದು) ವೆಸ್ಟ್‌ಹವ್‌ನಲ್ಲಿ ನೀನು ಅರ್ಧ ರಕ್ಷಿಸಿದ ಆ ಒರಟನನ್ನು ಕುರಿತು ಮಾತನಾಡುತ್ತೀಯೆ. ಅವನ ಆತ್ಮವನ್ನು ಪುನಃ ನಾಶಕ್ಕೆ ಎಳೆದೆನೆಂದು ನನ್ನ ಮೇಲೆ ಅಪವಾದ ಹೊರಿಸುತ್ತೀಯೆ. ಆಗಲಿ, ಅವನನ್ನು ಇಲ್ಲಿಗೆ ಕರೆದುಕೊಂಡು

ಬಾ. ನಿನಗಾಗಿ ಅವನ ಆತ್ಮವು ಪುನಃ ಮುಕ್ತಿಗೆ ತಿರುಗುವಂತೆ ನಾನು ಎಳೆಯುತ್ತೇನೆ. ಮಾತುಗಳಿಂದಲ್ಲ ; ಕನಸುಗಳಿಂದಲ್ಲ. ವಾರಕ್ಕೆ 30 ಷಿಲಿಂಗ್ ಕೊಟ್ಟು, ನೋಡಲು ಚೆನ್ನಾಗಿರುವ ಬೀದಿಯೊಂದರಲ್ಲಿ ಒಂದು ಒಳ್ಳೆಯ ಮನೆ ಕೊಟ್ಟು, ಮಾಡಲು ಖಾಯಂ ಕೆಲಸ ಒಂದನ್ನು ಕೊಡುತ್ತೇನೆ. 3 ವಾರಗಳಲ್ಲಿ ತನಗೆ ಖುಷಿತರುವ ಒಂದು ಕುಡತ ಹೊಲಿಸಿಕೊಳ್ಳುತ್ತಾನೆ. ಮೂರು ತಿಂಗಳಲ್ಲಿ ಅವನು ಒಂದು ಎತ್ತರದ ಹ್ಯಾಟ್ ಕೊಳ್ಳುತ್ತಾನೆ ; ಚರ್ಚಿನಲ್ಲಿ ಹೋಗಿ ಕುಳಿತು ಕೊಳ್ಳುತ್ತಾನೆ. ವರ್ಷ ಮುಗಿವುದರೊಳಗಾಗಿ ಪ್ರಿಮ್‌ರೋಸ್ ಲೀಗ್ ಸಭೆಯಲ್ಲಿ ಒಬ್ಬ ಶ್ರೀಮಂತಳ ಕೈಕುಲುಕುತ್ತಾನೆ. ಕನ್ಸರ್ವೇಟಿವ್ ಪಕ್ಷಕ್ಕೆ ಸೇರಿಕೊಳ್ಳುತ್ತಾನೆ.

ಬಾರ್ಬರ : ಹಾಗೆ ಮಾಡಿದರೆ ಅವನು ಮೊದಲಿಗಿಂತಲೂ ಉತ್ತಮನಾಗುತ್ತಾನೆಯೆ ?

ಅಂಡರ್‌ಷಾಫ್ಟ್ : ಆಗುತ್ತಾನೆ ಎಂಬುದನ್ನು ನೀನು ಬಲ್ಲೆ. ಆಷಾಢಭೂತಿಯಾಗ ಬೇಡ, ಬಾರ್ಬರ. ಮೇಲಾದ ಆಹಾರ, ಉತ್ತಮ ವಸತಿ, ಉತ್ತಮ ವಸ್ತ್ರ ಅವನಿಗೆ ಸಿಗುತ್ತದೆ. ಅವನ ನಡವಳಿಕೆ ಬೇರೆಯಾಗುತ್ತದೆ ; ಅವನ ಮಕ್ಕಳು ಹೆಚ್ಚು ದೊಡ್ಡವಾಗಿ ಬೆಳೆಯುತ್ತವೆ ; ಹೆಚ್ಚು ಪೌಂಡು ತೂಕ ಉಳ್ಳವಾಗುತ್ತವೆ. ನಿಮ್ಮ ನೆಲೆಯ ಆಶ್ರಯದಲ್ಲಿ, ಅಮೇರಿಕನ್ ಬಟ್ಟೆ ಚಾಪೆಯ ಮೇಲೆ ಮಲಗುವುದಕ್ಕಿಂತ, ಸೌದೆ ಸೀಳುತ್ತ, ರೊಟ್ಟಿ, ಗಂಜಿ ತಿನ್ನುತ್ತ, ಮೇಲಿಂದ ಮೇಲೆ ಮೊಳಕಾಲೂರಿ ಅದಕ್ಕಾಗಿ ಸ್ವರ್ಗವನ್ನು ವಂದಿಸುವ ಕಡ್ಡಾಯಕ್ಕೆ ಸಿಕ್ಕುವುದಕ್ಕಿಂತ ಅದು ಮೇಲು. ಮೊಳಕಾಲು ಕವಾಯತು ಎಂದು ನೀನು ಕರೆಯುತ್ತೀಯೆ ಅಲ್ಲವೆ ನೀನದನ್ನು ! ಹೊಟ್ಟೆಗಿಲ್ಲದೆ ಹಸಿದಿರುವ ಜನರನ್ನು ಒಂದು ಕೈಯಲ್ಲಿ ಬೈಬಲ್ಲು ಹಿಡಿದು ಇನ್ನೊಂದು ಕೈಯಲ್ಲಿ ರೊಟ್ಟಿ ಹಿಡಿದು ಆತ್ಮ ಪರಿವರ್ತನೆ ಮಾಡುವುದು ಅಗ್ಗದ ಕೆಲಸ. ಆ ಷರತ್ತುಗಳ ಮೇಲೆ ವೆಸ್ಟ್‌ಹಮ್ ಪ್ರದೇಶವನ್ನು ನಾನು ಮಹಮದ್ದೀಯ ಮತಕ್ಕೆ ಪರಿವರ್ತಿಸಲು ಕೈಕೊಳ್ಳುತ್ತೇನೆ. ನನ್ನ ಜನರ ಮೇಲೆ ನಿನ್ನ ಕೈ ಪ್ರಯೋಗ ಮಾಡಿ ತೋರಿಸು. ಅವರ ದೇಹಗಳು ತುಂಬಿವೆಯಾದ್ದರಿಂದ ಅವರ ಆತ್ಮಗಳು ಹಸಿದಿವೆ.

ಬಾರ್ಬರ : ಲಂಡನಿನ ಮೂಡಲ ಭಾಗವನ್ನೆ ಹೊಟ್ಟೆಗಿಲ್ಲದೆ ಸಾಯಲು ಬಿಡಬೇಕೆನ್ನುತ್ತೀಯು ?

ಅಂಡರ್‌ಷಾಫ್ಟ್ : (ಚೈತನ್ಯ ಪೂರ್ಣವಾದ ಅವನ ದನಿಯೆಲ್ಲ ಕಹಿಸೆನಪಿನಲ್ಲಿ ಮುಳುಗಿದಂತೆ, ತಗ್ಗಿ) ನಾನೊಬ್ಬ ಮೂಡಲಭಾಗದ ಮನುಷ್ಯ. ತುಂಬಾ ನೀತಿ ಹೇಳಿಕೊಂಡು ಉಪವಾಸ ಮಾಡುತ್ತಿದ್ದೆ. ಕಡೆಗೆ ಒಂದು ದಿನ ಅದಕ್ಕಾಗಿ ಏನೇ ಹಿಡಿಯಲಿ, ಏನೇ ತೆರಬೇಕಾಗಲಿ, ಹೊಟ್ಟೆ ತುಂಬಿದ ಸ್ವತಂತ್ರ ಮನುಷ್ಯನಾಗು ತ್ತೇನೆಂದು ಶಪಥ ಮಾಡಿದೆ. ಯುಕ್ತಿಯಾಗಲಿ—ಧರ್ಮವಾಗಲಿ, ಇತರರ ಜೀವಗಳಾಗಲಿ, ಗುಂಡೊಂದು ಹೊರತು ಇನ್ನಾವುದೂ ನನ್ನನ್ನು—

ತಡೆಯದೆಂದು ನಿಶ್ಚಯಿಸಿದೆ. ನಾನು ಉಪವಾಸ ಬೀಳುವ ಮುಂಚೆ ನೀನು ಬೀಳುತ್ತೀಯೆ—ಎಂದೆ. ಆ ಮಾತಿನೊಡನೆ ನನಗೆ ಬಿಡುಗಡೆ, ಹಿರಿತನ ಬಂದವು. ನನ್ನ ಇಚ್ಛೆ ನೆರವೇರುವ ತನಕ ನಾನು ಅಪಾಯಕರ ಮನುಷ್ಯನಾಗಿದ್ದೆ. ಈಗ ನನ್ನಿಂದ ಉಪಕಾರ ಉಂಟು. ಒಳ್ಳೆಯ ಕೆಲಸವಾಗುತ್ತದೆ ; ನಾನು ದಯಾಪರನಾಗಿದ್ದೇನೆ. ನನಗನಿಸುತ್ತದೆ : ತಮ್ಮನ್ನು ಲಕ್ಷಾಧೀಶ್ವರರನ್ನಾಗಿ ಮಾಡಿಕೊಂಡ ಬಹುಮಂದಿಯ ಕತೆ ಇದು ಎಂದು. ಅದು ಪ್ರತಿಯೊಬ್ಬ ಇಂಗ್ಲಿಷನ ಚರಿತ್ರೆಯಾದಾಗ ಬದುಕಲು ಯೋಗ್ಯವಾದ ಇಂಗ್ಲಂಡ್ ನಮಗೆ ದೊರೆಯುತ್ತದೆ.

ಲೇಡಿ ಬ್ರಿಟೊ : ಭಾಷಣಗಳು ಮಾಡುವುದನ್ನು ನಿಲ್ಲಿಸಿ, ಆ್ಯಂಡ್ರೂ. ಇದು ಸ್ಥಳವಲ್ಲ ಅದಕ್ಕೆ.

ಅಂಡರ್‌ಷಾಫ್ಟ್ : (ಚುಚ್ಚಿದ ಗುಳ್ಳೆಯಂತೆ) ಪ್ರಿಯೆ, ನನ್ನ ಅಭಿಪ್ರಾಯಗಳನ್ನು ತಿಳಿಸಲು ನನಗೆ ಬೇರೆ ಸಾಧನಗಳಿಲ್ಲ.

ಲೇಡಿ ಬ್ರಿಟೊ : ನಿಮ್ಮ ಅಭಿಪ್ರಾಯಗಳಿಗೆ ತಲೆಯಿಲ್ಲ. ಸ್ವಾರ್ಥಿಗಳಾಗಿ, ನೀತಿನಿಷ್ಠೆಗಳಿಲ್ಲದವರಾದ್ದರಿಂದ ನೀವು ಏಳಿಗೆ ಹೊಂದಿದಿರಿ.

ಅಂಡರ್‌ಷಾಫ್ಟ್ : ಖಂಡಿತ, ಅಲ್ಲ ; ಬಡತನ ಉಪವಾಸಗಳ ವಿಷಯದಲ್ಲಿ ನನಗೆ ಅತಿಪ್ರಬಲ ನೀತಿ—ನಿಷ್ಠೆಗಳಿದ್ದವು. ನೀನು ನೀತಿಜ್ಞರೆನ್ನುವರು ಆ ಎರಡರ ವಿಷಯದಲ್ಲಿಯೂ ಹೇಸಿಗೆ ಇಲ್ಲದೆ ನಡೆದುಕೊಳ್ಳುತ್ತಾರೆ. ಅವು ಸದ್ಗುಣಗಳೆಂಬಂತೆ ವರ್ಣಿಸುತ್ತಾರೆ. ಪಾಪರಾಗುವುದಕ್ಕಿಂತ ಕಳ್ಳನಾಗುವುದು ಲೇಸು ! ಗುಲಾಮನಾಗುವುದಕ್ಕಿಂತ ಕೊಲೆಗಡುಕನಾದೇನು ! ಆ ಎರಡರಲ್ಲಿ ಯಾವುದಾಗಲೂ ನನಗೆ ಇಷ್ಟವಿಲ್ಲ. ಆದರೆ ಅವೆರಡರಲ್ಲಿ ಒಂದನ್ನು ಆರಿಸಿಕೊಳ್ಳಲೇಬೇಕೆಂದು ನನ್ನನ್ನು ಒತ್ತಾಯಿಸಿದರೆ ದೇವರಾಣೆಗೂ ಹೇಳುತ್ತೇನೆ : ಅವುಗಳಿಗೂ ಹೆಚ್ಚು ವೀರವಾದ್ದನ್ನು, ಹೆಚ್ಚು ನೀತಿಯುಕ್ತವಾದ್ದನ್ನು ನಾನು ಆಯುತ್ತೇನೆ. ಇತರ ಯಾವುದೇ ಪಾಪಗಳಿಗಿಂತಲೂ ಬಡತನ, ಗುಲಾಮಿ, ನನಗೆ ಹೆಚ್ಚು ದ್ವೇಷಯೋಗ್ಯವಾಗಿ ಕಾಣುತ್ತವೆ ! ನಾನು ನಿನಗೆ ಇದನ್ನು ಹೇಳಬಯಸುತ್ತೇನೆ. ಶತಮಾನಗಳಿಂದ ನಿಮ್ಮ ಉಪದೇಶವಾಕ್ಯಗಳಿಗೂ ವೃತ್ತಪತ್ರಿಕೆಯ ಅಗ್ರಲೇಖನಗಳಿಗೂ ಸಗ್ಗದೆ, ಬಡತನ, ಗುಲಾಮಗಿರಿ ಉಳಿದು ನಿಂತಿವೆ. ನನ್ನ ಯಂತ್ರದ ಕೋವಿಗಳೆದುರಿಗೆ ಅವು ನಿಲ್ಲಲಾರವು. ಅವುಗಳ ವಿರುದ್ಧ ಉಪದೇಶಮಾಡಿ ಪ್ರಯೋಜನವಿಲ್ಲ. ಅವುಗಳೊಡನೆ ವಾದ ಪ್ರಯೋಜನ ಇಲ್ಲ. ಅವನ್ನು ಕೊಲ್ಲಬೇಕು.

ಬಾರ್ಬರ : ಕೊಲೆ, ಎಲ್ಲಕ್ಕೂ ಅದೇಯೊ ನಿಮ್ಮ ಚಿಕಿತ್ಸೆ ?

ಅಂಡರ್‌ಷಾಫ್ಟ್ : ಮನಸ್ಸಿನ ಧರ್ಮನಿಶ್ಚಯಕ್ಕೆ ಅದೇ ಕಡೆಯ ಪರೀಕ್ಷೆ. ಒಂದು ಸಮಾಜ ಪದ್ಧತಿಯನ್ನು ತಲೆಕೆಳಗುಮಾಡಿ ಉರುಳಿಸಲು ಸಾಕಷ್ಟು ಬಲವುಳ್ಳ

ಕೀಲು ಅದೊಂದೇ. ಮಾಡತಕ್ಕದ್ದು ಎಂದು ವಿಧಿಸುದ ಒಂದೇ ಮಾರ್ಗ. 670 ಮಂದಿ ಬುದ್ಧಿ ಇಲ್ಲದ ಜನರನ್ನು ಬೀದಿಗಳಲ್ಲಿ ಅವರಿಷ್ಟದಂತೆ ಬಿಡು,— ಮೂವರು ಪೊಲೀಸರು ಅವರನ್ನು ಚೆದರಿಸಬಲ್ಲರು. ಅವರನ್ನು ವೆಸ್ಟ್‌ಮಿನಿಸ್ಟರ್ ಒಂದು ಮಂದಿರದೊಳಗೆ ಒಟ್ಟಿಗೆ ಸೇರಿಸಿ, ಕೆಲವು ಕಲಾಪಗಳನ್ನು ಅವರಿಗೆ ಒದಗಿಸು ; ಕೆಲವು ಹೆಸರುಗಳಿಂದ ತಮ್ಮನ್ನು ಕರೆದುಕೊಳ್ಳಲು ಅವರನ್ನು ಬಿಡು. ಕಡೆಗೆ ಅವರಿಗೆ ಕೊಲ್ಲಲು ಧೈರ್ಯ ಬರುತ್ತದೆ. ನಿನ್ನ 670 ಮಂದಿ ತಿಳಿಗೇಡಿಗಳು ಒಂದು ಸರ್ಕಾರವಾಗುತ್ತಾರೆ. ಮಡಿವಂತರಾದ ನಿನ್ನ ಜನ ಜಂಗುಳಿ ರಹಸ್ಯ ಚುನಾವಣೆ ಪತ್ರಗಳನ್ನು ತುಂಬಿ ತನ್ನ ಒಡೆಯರನ್ನು ತಾನು ಆಳುತ್ತಿದೆಯೆಂದು ಕಲ್ಪಿಸಿಕೊಳ್ಳುತ್ತದೆ. ನಿಜವಾಗಿ ಆಳುವ ಚುನಾವಣೆ ಪತ್ರವಾವುದು ! ತೋಟೆ ಸುತ್ತಿರುವ ಕಾಗದ.

ಕಸಿನ್ಸ್ : ಅದರಿಂದಲೇ ಏನೊ ಬಹುಶಃ ಬಹು ಜನ ಬುದ್ಧಿವಂತರಂತೆ ನಾನು ವೋಟು ಹಾಕುವುದೇ ಇಲ್ಲ.

ಅಂಡರ್‌ಷಾಫ್ಟ್ : ವೋಟಂತೆ, ಬಾಹ್ ! ವೋಟ್ ಹಾಕಿದರೆ ಮಂತ್ರಿ ಸಂಪುಟದ ಹೆಸರುಗಳನ್ನು ಮಾತ್ರ ಬದಲಾಯಿಸುತ್ತೀಯೆ. ಗುರಿಯಿಟ್ಟು ಗುಂಡು ಹಾರಿಸಿದರೆ, ಸರ್ಕಾರಗಳನ್ನು ಕೆಳಗಿಳಿಸುತ್ತೀಯೆ. ಹೊಸ ಯುಗಗಳನ್ನು ಆರಂಭಿಸುತ್ತೀಯೆ. ಚಾರಿತ್ರಿಕವಾಗಿ ಅದು ನಿಜವೊ ಅಲ್ಲವೊ, ಪಂಡಿತರೆ ?

ಕಸಿನ್ಸ್ : ಚಾರಿತ್ರಿಕವಾಗಿ ಅದು ನಿಜ. ಅದನ್ನು ಒಪ್ಪಿಕೊಳ್ಳಲು ನನಗೆ ಹೇಸಿಗೆ ಯುಂಟಾಗುತ್ತದೆ. ಆದರೆ ನಿಮ್ಮ ಭಾವನೆಗಳನ್ನು ಪೂರ್ತಿ ನಿರಾಕರಿಸುತ್ತೇನೆ. ನಿಮ್ಮ ಸ್ವಭಾವ ನನಗೆ ಅಸಹ್ಯ. ಎಲ್ಲ ಶಕ್ಯ ರೀತಿಯಲ್ಲಿಯೂ ನಿಮ್ಮನ್ನು ಪ್ರತಿಭಟಿಸುತ್ತೇನೆ. ಆದಾಗ್ಯೂ ನೀವು ಹೇಳುವುದು ನಿಜ. ಅದು ನಿಜವಾಗ ಬಾರದು.

ಅಂಡರ್‌ಷಾಫ್ಟ್ : ಬಾರದು ! ಬಾರದು !—ಬಾರದು !—ಬಾರದು !—ಬಾರದು ! ಉಳಿದ ನಿಮ್ಮ ನೀತಿಜ್ಞರಂತೆ ಬಾರದು, ಬಾರದು ಎಂದು ಹೇಳುತ್ತ ನಿನ್ನ ಜೀವಿತ ಕಾಲವನ್ನೆಲ್ಲ ಕಳೆಯುತ್ತೀಯೇನು ? ನಿನ್ನ ಬಾರದುಗಳನ್ನು ತಕ್ಕದ್ದು ಗಳನ್ನಾಗಿ ತಿರುಗಿಸುವೆ ಬಾ ನನ್ನೊಡನೆ. ಈ ಸಿಡಿಗುಂಡುಗಳನ್ನು ತಯಾರಿಸು. ಯಾವುದು ಮನುಷ್ಯರನ್ನು ಹಾರಿಸುವುದೊ ಅದು ಸಮಾಜವನ್ನೂ ಹಾರಿಸ ಬಲ್ಲದು. ಈ ಸತ್ಯವನ್ನು ತಬ್ಬಿಕೊಳ್ಳಲು ಧೈರ್ಯವಿದ್ದವರದೇ ಲೋಕದ ಚರಿತ್ರೆ. ಅದನ್ನು ತಬ್ಬಲು ನಿನಗೆ ಧೈರ್ಯವಿದೆಯೆ, ಬಾರ್ಬರ ?

ಲೇಡಿ ಬ್ರಿಟೊ : (ಬಾರ್ಬರಾಗೆ) ನಿಮ್ಮ ತಂದೆಯ ಈ ಅಸಹ್ಯಕರ, ದುಷ್ಟ ಮಾತು ಗಳಿಗೆ ಕಿವಿಕೊಡಬಾರದೆಂದು ನಾನು ನಿಷೇಧಿಸುತ್ತೇನೆ. ಅಡಾಲ್ಫಸ್, ನೀನೂ ಅಷ್ಟೇ. ತಪ್ಪು ಸಂಗತಿಗಳನ್ನು ನಿಜವೆಂದು ಹೇಳುತ್ತ ಮುಂದುವರಿಯುವುದು

ಸರಿಯಲ್ಲವೆಂದು ನಿನಗೂ ಗೊತ್ತಿರಬೇಕು. ಅವು ನಿಜವಾಗಿದ್ದರೆ ಇರಬಹುದು. ತಪ್ಪಾಗಿದ್ದರೆ ಆ ನಿಜದಿಂದ ಏನು ಪ್ರಯೋಜನ ?

ಅಂಡರ್‌ಷಾಫ್ಟ್ : ಅವು ನಿಜವಾಗಿರುವಾಗ ತಪ್ಪಾಗಿದ್ದರೆ ತಾನೆ ಏನಾಯಿತು ?

ಲೇಡಿ ಬ್ರಿಟೊ : (ಏಳುತ್ತ) ಮಕ್ಕಳೆ, ಈಗ ಮನೆಗೆ ಹೋಗೋಣ. ಆ್ಯಂಡ್ರೂ ನೀವು ಮನೆಗೆ ಬರಬೇಕೆಂದು ಹೇಳಿ ನಿಮ್ಮನ್ನು ಬರಗೊಟ್ಟದ್ದಕ್ಕೆ ನನಗೆ ತುಂಬಾ ವ್ಯಸನವಾಗಿದೆ. ಎಂದಿಗಿಂತ ಹೆಚ್ಚು ದುಷ್ಟರಾಗಿದ್ದೀರಿ. ಈಗಲೇ ಬನ್ನಿ.

ಬಾರ್ಬರ : (ತಲೆ ಅಲ್ಲಾಡಿಸುತ್ತ) ದುಷ್ಟಜನರಿಂದ ಓಡಿಹೋಗಿ ಪ್ರಯೋಜನ ಇಲ್ಲ, ಅಮ್ಮ.

ಲೇಡಿ ಬ್ರಿಟೊ : ಎಲ್ಲ ಪ್ರಯೋಜನವೂ ಉಂಟು. ಅವುಗಳನ್ನು ನೀವು ಒಪ್ಪುವುದಿಲ್ಲವೆಂದು ಅದು ತೋರಿಸುತ್ತದೆ.

ಬಾರ್ಬರ : ಅದು ಅವರನ್ನು ಉದ್ಧಾರಮಾಡುವುದಿಲ್ಲ.

ಲೇಡಿ ಬ್ರಿಟೊ : ನೀನು ನನಗೆ ಅವಿಧೇಯಳಾಗುವೆ ಎಂಬುದು ನನಗೆ ಕಾಣುತ್ತದೆ. ಶಾರ, ನೀನು ಮನೆಗೆ ಬರುತ್ತೀಯೊ ಇಲ್ಲವೊ ?

ಶಾರ : ಅಪ್ಪ ಅವರು ಫಿರಂಗಿಗಳನ್ನು ಮಾಡುವುದು ತುಂಬಾ ದುಷ್ಕಾರ್ಯವೆಂದು ನಾನು ಹೇಳಬಲ್ಲೆ. ಆದರೆ ಆ ಕಾರಣದಿಂದ ಅವರನ್ನು ನಾನು ತೊರೆಯುವೆನೆನ್ನಿಸುವುದಿಲ್ಲ.

ಲೋಮ್ಯಾಕ್ಸ್ : (ಸಮಾಧಾನದ ನುಣುಪನ್ನು ಬೆಳಸುತ್ತ) ವಾಸ್ತವವಾಗಿ ನೋಡಿ, ಹೇಗಿದೆ. ದುಷ್ಟತನ ಎನ್ನುವ ಈ ಕಲ್ಪನೆಯಲ್ಲೇ ಒಂದು ಸ್ವಲ್ಪ ಅವಿವೇಕ ಇದೆ. ಅದು ಕಾರ್ಯಕಾರಿಯಲ್ಲ. ವಾಸ್ತವ ಸಂಗತಿಗಳನ್ನು ನಾವು ನೋಡಬೇಕು. ತಪ್ಪಾದ ಯಾವುದರ ಪರವಾಗಿಯೂ ನಾನು ಒಂದೇ ಒಂದು ಮಾತನ್ನು ಕೇಳುವೆನೆಂದಲ್ಲ. ಆದರೆ ನೋಡಿ, ಎಂಥೆಂಥವರೊ ಎಂಥೆಂಥವೊ ಕೆಲಸಗಳನ್ನು ಯಾವಾಗಲೂ ಮಾಡುತ್ತಿದ್ದಾರೆ. ಹೇಗಾದರೂ ಅದನ್ನು ನಾವು ಹೊಂದಿಸಬೇಕು, ನೋಡಿ ; ನನ್ನ ಅರ್ಥ ಇದು : ಎಲ್ಲರನ್ನೂ ಬಿಟ್ಟು ದೂರವಿರಿಸಲಾಗುವುದಿಲ್ಲ. ಈ ಮಾತು ಸುಮಾರು ಅಲ್ಲಿಗೆ ಬರುತ್ತೆ. (ಆತನ ವಾಗ್ಮಿತೆಗೆ ಎಲ್ಲರೂ ಪರವಶರಾಗಿ ಗಮನ ಕೊಡುತ್ತಿರುವುದು ಅವನನ್ನು ಅಸ್ಥಿರಮಾಡುತ್ತದೆ).ಬಹುಶಃ ನನ್ನ ಮನಸ್ಸಿನಲ್ಲಿರುವುದನ್ನು ವಿಶದವಾಗಿ ಹೇಳುತ್ತಿಲ್ಲವೆಂದು ಕಾಣುತ್ತದೆ.

ಲೇಡಿ ಬ್ರಿಟೊ : ಚಾರ್ಲ್ಸ್, ನೀನು ವಿಶದತೆಯ ಮೂರ್ತಿಯಾಗಿದ್ದೀಯೆ. ಆ್ಯಂಡ್ರೂ ಲೋಕದಲ್ಲಿ ಗೆದ್ದು ಏಳಿಗೆಗೊಂಡವರು. ಶಾರಾಗೆ ಕೊಡಲು ಅವರಲ್ಲಿ ಪುಷ್ಕಳ

ಹಣವುಂಟು. ಆದ್ದರಿಂದ ಅವರ ಮುಖಸ್ತುತಿಮಾಡಿ ಅವರ ದೌರ್ಜನ್ಯಕ್ಕೆ ಪ್ರೋತ್ಸಾಹ ಕೊಡುತ್ತಿದ್ದೀಯೆ.

ಲೋಮ್ಯಾಕ್ಸ್ : (ಅವಿಚಲಿತನಾಗಿ) ಏನು ಹೇಳಲಿ ? ಹಣ ಇರುವ ಕಡೆ ಹದ್ದುಗಳು ಬಂದು ಕೂಡುತ್ತವೆ, ಗೊತ್ತಿಲ್ಲವೆ ? (ಅಂಡರ್‌ಷಾಫ್ಟ್‌ಗೆ) ಅಲ್ಲವೆ ? ಏನಂತೀರಿ?

ಅಂಡರ್‌ಷಾಫ್ಟ್ : ನಿಖರವಾಗಿ. ನಾನು ನಿನ್ನನ್ನು ಚಾರ್ಲ್ಸ್ ಎಂದು ಕರೆಯಬಹುದೆ ?

ಲೋಮ್ಯಾಕ್ಸ್ : ತುಂಬಾ ಸಂತೋಷ. ನನಗೆ ಬಳಸುವ ಟಿಕೆಟ್ ಚಾಲ್ಲಿ ಎಂದು.

ಅಂಡರ್‌ಷಾಫ್ಟ್ : (ಲೇಡಿ ಬ್ರಿಟೊಗೆ) ಬಿಡ್ಡಿ —

ಲೇಡಿ ಬ್ರಿಟೊ : (ರಭಸದಿಂದ) ನನ್ನ ಬಿಡ್ಡಿ ಎಂದು ಕರೆವ ಸಾಹಸ ಮಾಡಬೇಡಿ. ಚಾರ್ಲ್ಸ್ ಲೋಮ್ಯಾಕ್ಸ್, ನೀನು ಬುದ್ಧಿ ಇಲ್ಲದವ ; ಅಡಾಲ್ಫಸ್ ಕಸಿನ್ಸ್, ನೀನು ಠಕ್ಕ ; ಸ್ಟೀವನ್, ನೀನು ಸ್ವಪ್ರತಿಷ್ಠೆಯ ಮಡ್ಡಿ ; ಬಾರ್ಬರ, ನಿನಗೆ ಹುಚ್ಚು ಹಿಡಿದಿದೆ. ಆ್ಯಂಡ್ರೂ, ನೀವು ನಾಡಾಡಿ ಅಂಗಡಿಕಾರರು. ನಿಮ್ಮೆಲ್ಲರ ವಿಷಯದಲ್ಲಿ ನನ್ನ ಅಭಿಪ್ರಾಯವೇನು ಎಂಬುದು ಈಗ ನಿಮಗೆ ತಿಳಿಯಿತಲ್ಲವೆ? ಹೇಗಾದರೂ ಆಗಲಿ, ನನ್ನ ಆತ್ಮಸಾಕ್ಷಿಯಂತೂ ತಿಳಿಯಾಯಿತು. (ತುಂಬಾ ರಭಸದಿಂದ ಕುಳಿತುಕೊಳ್ಳುತ್ತಾಳೆ. ಹಾಸುಗಂಬಳಿ, ಅದೃಷ್ಟದಿಂದ ಅದನ್ನು ಮೃದು ಮಾಡುತ್ತದೆ.)

ಅಂಡರ್‌ಷಾಫ್ಟ್ : ಪ್ರಿಯೆ, ನೀನು ನೀತಿಯ ಸಾಕ್ಷಾತ್ ಅಪರಾವತಾರ. (ಆಕೆ ಹೂಂಕರಿಸುತ್ತಾಳೆ) ಎಲ್ಲರಿಗೂ ಒಂದೊಂದು ಹೆಸರಿಟ್ಟು ಅವರನ್ನು ಬೈದರೆ ನಿನ್ನ ಆತ್ಮಸಾಕ್ಷಿ ತಿಳಿಯಾಯಿತು. ನಿನ್ನ ಕರ್ತವ್ಯ ನೆರವೇರಿಸಿದಂತಾಯಿತು. ಬಾ, ಯೂರಿಪಿಡೇಸ್, ತಡವಾಗುತ್ತದೆ. ನಾವೆಲ್ಲ ಮನೆಗೆ ಹೋಗಬೇಕಲ್ಲವೆ. ನಿನ್ನ ಮನಸ್ಸಿನಲ್ಲಿ ನಿರ್ಣಯಮಾಡು.

ಕಸಿನ್ಸ್ : ಇದನ್ನು ತಿಳಿದುಕೊಳ್ಳಿ. ದೊಡ್ಡ ರಾಕ್ಷಸರಂತಹವರು ನೀವು—

ಲೇಡಿ ಬ್ರಿಟೊ : ಅಡಾಲ್ಫಸ್ !

ಅಂಡರ್‌ಷಾಫ್ಟ್ : ಅವನಷ್ಟಕ್ಕೆ ಅವನನ್ನು ಬಿಡು, ಬಿಡ್ಡಿ. ಮುಂದುವರಿಸು, ಯೂರಿಪಿಡೇಸ್.

ಕಸಿನ್ಸ್ : ನನ್ನನ್ನು ಭಯಂಕರ ಧರ್ಮಸಂಕಟದಲ್ಲಿ ಸಿಕ್ಕಿಸಿದ್ದೀರಿ. ನನಗೆ ಬಾರ್ಬರ ಬೇಕು.

ಅಂಡರ್‌ಷಾಫ್ಟ್ : ಎಲ್ಲ ಹುಡುಗರಂತೆಯೇ ನೀನು ಒಬ್ಬ ಹುಡುಗಿಗೂ ಇನ್ನೊಬ್ಬ ಹುಡುಗಿಗೂ ಇರುವ ವ್ಯತ್ಯಾಸವನ್ನು ಅತಿಮಾಡಿ ಕಾಣುತ್ತೀಯೆ ?

ಬಾರ್ಬರ : ಪೂರ್ತಿ ನಿಜವಾದ ಮಾತು, ಡಾಲ್ಲಿ.

ಕಸಿನ್ಸ್ : ನಾನು ಬದ್ಮಾಷ್ ಆಗುವುದನ್ನು ನಿವಾರಿಸಿಕೊಳ್ಳಬೇಕೆಂದಿದ್ದೇನೆ.

ಅಂಡರ್‌ಷಾಫ್ಟ್ : (ಕೊರೆಯುವ ತಿರಸ್ಕಾರದಿಂದ) ನೀನು ಹಾತೊರೆಯುತ್ತಿರುವುದು ವ್ಯಕ್ತಿಶವಾದ ಧರ್ಮವಂತಿಕೆಗೆ. ನಿನ್ನ ಮನಸ್ಸು ನಿನ್ನನ್ನು ಒಪ್ಪಲೆಂದು. ಒಳ್ಳೆಯ ಆತ್ಮಸಾಕ್ಷಿಯೆಂದು ನೀನು ಕರೆವುದಕ್ಕೆ. ಯಾವುದನ್ನು ಬಾರ್ಬರ ಮುಕ್ತಿ ಎಂದು ಕರೆಯುತ್ತಾಳೊ ಅದಕ್ಕೆ. ಆದರೆ ನಿನ್ನಷ್ಟೇ ಅದೃಷ್ಟವಂತರಲ್ಲದ ಜನರ ಪ್ರೋತ್ಸಾಹನ ಎಂಬುದು ನಾನು ಅದಕ್ಕೆ ಕೊಡುವ ಹೆಸರು.

ಕಸಿನ್ಸ್ : ಅಲ್ಲ, ನನ್ನಲ್ಲಿರುವ ಎಲ್ಲ ಕವಿಶಕ್ತಿಯೂ ಸಜ್ಜನನಾಗುವುದೆಂಬುದರಿಂದ ಹಿಮ್ಮೆಟ್ಟುತ್ತದೆ. ಆದರೆ ನನ್ನಲ್ಲಿರುವ ಕೆಲವು ಅಂಶಗಳನ್ನು ನಾನು ಲಕ್ಷ್ಯಕ್ಕೆ ತಂದುಕೊಳ್ಳಬೇಕು. ಕನಿಕರ—

ಅಂಡರ್‌ಷಾಫ್ಟ್ : ಕನಿಕರ ! ಸಂಕಟದ ಜಾಡಮಾಲಿ ಅದು.

ಕಸಿನ್ಸ್ : ಹಾಗಾದರೆ, ಪ್ರೀತಿ ?

ಅಂಡರ್‌ಷಾಫ್ಟ್ : ನನಗೆ ಗೊತ್ತಿದೆ. ನೆರವಿನ ಅಗತ್ಯವಿರುವವರನ್ನು, ಪತಿತರನ್ನು ನೀನು ಪ್ರೀತಿಸುತ್ತೀಯೆ. ದಬ್ಬಾಳಿಕೆಗೆ ಸಿಕ್ಕಿದ ಬಣಗಳವರನ್ನು, ನೀಗ್ರೊ, ಇಂಡಿಯದ ರೈತ, ಎಲ್ಲೆಲ್ಲಿಯೂ ಒಡೆಯನ ಕೈಗೆ ಸಿಕ್ಕಿ ದುಡಿವವರು ಇವರನ್ನು ಕಂಡರೆ ನಿನಗೆ ಪ್ರೀತಿ. ಆದರೆ ಜಪಾನಿಯನನ್ನು ಪ್ರೀತಿಸುತ್ತೀಯೊ ? ಫ್ರೆಂಚ ರನ್ನು ಪ್ರೀತಿಸುವೆಯೊ ? ಇಂಗ್ಲಿಷರನ್ನು—ಪ್ರೀತಿಸುತ್ತೀಯ ?

ಕಸಿನ್ಸ್ : ಇಲ್ಲ. ಸಾಚಾ ಇಂಗ್ಲಿಷ್‌ಮನ್ ಯಾರಿಗೂ ಇಂಗ್ಲಿಷರನ್ನು ಕಂಡರೆ ದ್ವೇಷವೇ : ಭೂಮಿಯ ಮೇಲೆಲ್ಲ ನಮ್ಮದು ಅತ್ಯಂತ ದುಷ್ಟ ರಾಷ್ಟ್ರ; ನಮ್ಮ ವಿಜಯ ಧಾರ್ಮಿಕವಾಗಿ ಹೇಸಿಗೆ ತರತಕ್ಕದ್ದು.

ಅಂಡರ್‌ಷಾಫ್ಟ್ : ನಿನ್ನ ಪ್ರೀತಿಯ ಒಸಗೆಯಿಂದ ಇದು ತಾನೇ ಬಂದಿರುವುದು.

ಕಸಿನ್ಸ್ : ನನ್ನ ಮಾವಂದಿರನ್ನು ಕೂಡ ನಾನು ಪ್ರೀತಿಸಬಾರದೆ ?

ಅಂಡರ್‌ಷಾಫ್ಟ್ : ನಿನ್ನ ಪ್ರೀತಿ ಯಾರಿಗೆ ಬೇಕಯ್ಯ ? ಯಾವ ಅಧಿಕಾರದಿಂದ ನನಗೆ ಅದನ್ನು ನೀಡಲು ಸ್ವಾತಂತ್ರ್ಯ ವಹಿಸುತ್ತಿದ್ದೀಯೆ? ತಕ್ಕಷ್ಟು ನಿನ್ನ ಲಕ್ಷ್ಯ ಬೇಕು; ಗೌರವ ಬೇಕು. ಇಲ್ಲವಾದರೆ ನಿನ್ನನ್ನು ನಾನು ಕೊಲ್ಲುತ್ತೇನೆ. ನಿನ್ನ ಪ್ರೀತಿ ಅಂತೆ ! ನಿನ್ನ ಅಧಿಕ ಪ್ರಸಂಗ ಹಾಳಾಯಿತು !

ಕಸಿನ್ಸ್ : (ಹಲ್ಲುಕಿರಿಯುತ್ತ) ನನ್ನ ಒಲವನ್ನು ನನ್ನ ವಶದಲ್ಲಿಟ್ಟುಕೊಳ್ಳಲಾಗದೆ ಹೋಗಬಹುದು, ಮೆಕ್ಕಿಯವೆಲ್ಲಿ—

ಅಂಡರ್‌ಷಾಫ್ಟ್ : ಕತ್ತಿವರಸೆ ತೋರಿಸುತ್ತಿದ್ದೀಯೆ, ಯೂರಿಪಿಡೇಸ್. ದುರ್ಬಲ ನಾಗುತ್ತಿದ್ದೀಯೆ. ನಿನ್ನ ಹಿಡಿತದ ಬಿಗಿ ಬಿಡುತ್ತಿದೆ. ಎಲ್ಲಿ ನೋಡೋಣ ! ನಿನ್ನ ಕಡೆಯ ಆಯುಧ ಪ್ರಯೋಗಿಸು, ಕನಿಕರ, ಪ್ರೀತಿ—ನಿನ್ನ ಕೈಯಿಂದ ಮುರಿದು ಬಿದ್ದಿತು. ಕ್ಷಮೆ ಇನ್ನೂ ಉಳಿದಿದೆ.

ಕಸಿನ್ಸ್ : ಇಲ್ಲ ! ಕ್ಷಮೆ ಭಿಕಾರಿಯ ಕಡೆಯ ಆಸರೆ. ಆ ಬಗ್ಗೆ ನಾನು ನಿಮ್ಮೊಡನೆಯೇ ಇದ್ದೇನೆ. ನಮ್ಮ ಋಣಗಳನ್ನು ನಾವು ತೀರಿಸಲೇಬೇಕು.

ಅಂಡರ್‌ಷಾಫ್ಟ್ : ಚೆನ್ನಾಗಿ ಹೇಳಿದೆ. ಬಾ, ನೀನು ನನಗೆ ಒಪ್ಪಿಗೆಯಾಯಿತು. ಪ್ಲೇಟೊ ಮಾತುಗಳನ್ನು ನೆನಸಿಕೊ.

ಕಸಿನ್ಸ್ : (ಬೆಚ್ಚಿ) ಪ್ಲೇಟೊ ಮಾತುಗಳನ್ನು ಉದ್ಧರಿಸಿ ನೀವು ನನಗೆ ಹೇಳುತ್ತೀರ ?

ಅಂಡರ್‌ಷಾಫ್ಟ್ : ಪ್ಲೇಟೊ ಹೇಳುತ್ತಾನೆ, ಅಲ್ವೇನಯ್ಯ ? ಗ್ರೀಕ್ ಅಧ್ಯಾಪಕರು ಮದ್ದು ಗುಂಡು ಮಾಡುವವರೆಗಾಗಲಿ—ಮದ್ದು ಗುಂಡು ಮಾಡುವವರು ಗ್ರೀಕ್ ಅಧ್ಯಾಪಕರಾಗುವವರೆಗಾಗಲಿ ಸಮಾಜ ಏನನ್ನೂ ಉದ್ಧಾರ ಮಾಡಲಾರದು ಎಂದು.

ಕಸಿನ್ಸ್ : ಎಂಥ ಪ್ರಲೋಭಕರು ನೀವು ! ಎಂಥ ಕುಶಲ ಪ್ರಲೋಭನೆ ! ಮಾಯಗಾರರು.

ಅಂಡರ್‌ಷಾಫ್ಟ್ : ಅದೆಲ್ಲ ಇರಲಿ. ಈಗ ಆಯ್ಕೆ ಮಾಡಬೇಕಪ್ಪ.

ಕಸಿನ್ಸ್ : ತಪ್ಪು ಆಯ್ಕೆ ಮಾಡಿದರೆ ಬಾರ್ಬರ ಬಹುಶಃ ನನ್ನನ್ನು ಮದುವೆಯಾಗುವುದಿಲ್ಲ.

ಬಾರ್ಬರ : ಬಹುಶಃ ಇಲ್ಲ.

ಕಸಿನ್ಸ್ : (ಹತಾಶನಾಗಿ, ದಿಗ್ಭ್ರಾಂತಿಯಿಂದ) ಕೇಳಿದಿರ ?

ಬಾರ್ಬರ : ಅಪ್ಪ, ನಿಮಗೆ ಯಾರಲ್ಲೂ ಪ್ರೀತಿ ಇಲ್ಲವೆ ?

ಅಂಡರ್‌ಷಾಫ್ಟ್ : ನನಗೆ ಅತ್ಯಂತ ಸ್ನೇಹಿತನಾದವನಲ್ಲಿ ನನಗೆ ಪ್ರೀತಿ ಉಂಟು.

ಲೇಡಿ ಬ್ರಿಟೊ : ಅದು ಯಾರೊ ಕೇಳಬಹುದೆ ?

ಅಂಡರ್‌ಷಾಫ್ಟ್ : ನನ್ನ ಅತಿ ಧೀರ ಶತ್ರು. ದಕ್ಷತೆಯ ಮಟ್ಟದಲ್ಲಿ ನನ್ನನ್ನು ಸರ್ವದಾ ಇಡುವ ಮನುಷ್ಯ.

ಕಸಿನ್ಸ್ : ಹಾಗೇ ಯೋಚನೆ ಮಾಡಿದರೆ ಈ ಪ್ರಾಣಿ, ತನ್ನ ರೀತಿಯಲ್ಲಿ ವಾಸ್ತವವಾಗಿ, ಒಂದು ಬಗೆಯ ಕವಿ ಎನ್ನಿಸುತ್ತದೆ. ಅಂತೂ ಈತನು ಮಹಾಪುರುಷನೇ ಇರಬೇಕು ?

ಅಂಡರ್‌ಷಾಫ್ಟ್ : ಮಾತಾಡುವುದನ್ನು ನಿಲ್ಲಿಸಿ, ಪುನಸ್ಸಿನಲ್ಲಿ ತೀರ್ಮಾನ ಮಾಡಯ್ಯ.

ಕಸಿನ್ಸ್ : ನನ್ನ ಸ್ವಭಾವಕ್ಕೆ ವಿರುದ್ಧವಾಗಿ ನೀವು ನನ್ನನ್ನು ಎಳೆಯುತ್ತ ಇದ್ದೀರಿ. ಯುದ್ಧವೆಂದರೆ ನನಗೆ ದ್ವೇಷ.

ಅಂಡರ್‌ಷಾಫ್ಟ್ : ದ್ವೇಷವೆಂಬುದು, ಹೇಡಿಯಾದವನು ತನ್ನನ್ನು ಹೆದರಿಸುವವನ ಮೇಲೆ ಪ್ರಯೋಗಿಸುವ ಸೇಡು. ಯುದ್ಧದ ಮೇಲೆ ಯುದ್ಧ ಮಾಡಲು ನಿನಗೆ ಧೈರ್ಯವಿದೆಯೆ ? ಸಾಧನಗಳು ಇಲ್ಲಿವೆ. ನಮ್ಮ ಸ್ನೇಹಿತ ಲೋಮ್ಯಾಕ್ಸ್ ಅವುಗಳ ಮೇಲೆ ಕೂತಿದ್ದಾನೆ.

ಲೋಮ್ಯಾಕ್ಸ್ : (ಜಿಗಿದೆದ್ದು) ಓಹೊ, ಹೌದೇನು ! ಇದರಲ್ಲಿ ಮದ್ದು ಗುಂಡು ತುಂಬಿದೆ ಎನ್ನುತ್ತೀರ ? (ಶಾರಾಗೆ) ಓ, ನನ್ನ ಚಿನ್ನ, ಅಲ್ಲಿಂದ ಎದ್ದು ಬಾ.

ಶಾರ : (ಶಾಂತವಾಗಿ ಆ ಷೆಲ್ಲಿನ ಮೇಲೆ ಕುಳಿತು) ನಾನು ಹಾರಿ ಹೋಗಬೇಕಾಗಿದ್ದರೆ ಅದನ್ನು ಎಷ್ಟು ಪರಿಷ್ಕಾರವಾಗಿ ಮಾಡಿದರೆ ಅಷ್ಟು ಮೇಲು. ತುಂಬಾ ಅಬ್ಬರ ಮಾಡಬೇಡ ಚಾಲ್ಲಿ.

ಲೋಮ್ಯಾಕ್ಸ್ : (ಅಂಡರ್‌ಷಾಫ್ಟ್‌ಗೆ, ಬಲವಾಗಿ ಆಕ್ಷೇಪಿಸುತ್ತ) ನಿಮ್ಮ ಸ್ವಂತ ಮಗಳು ; ನೋಡಿ, ಅಲ್ಲವೆ ?

ಅಂಡರ್‌ಷಾಫ್ಟ್ : ನೋಡುತ್ತ ಇದ್ದೇನೆ. (ಕಸಿನ್ಸ್‌ಗೆ) ಏನಪ್ಪ, ನಿನ್ನನ್ನು ನಾಳೆ ಬೆಳಿಗ್ಗೆ ಆರು ಗಂಟೆಗೆ ಇಲ್ಲಿ ನಾವು ನಿರೀಕ್ಷಿಸಬಹುದೆ ?

ಕಸಿನ್ಸ್ : (ಬಿಗಿಯಾಗಿ) ಸುತರಾಂ ಆಗುವುದಿಲ್ಲ. ನಾನು ಐದು ಗಂಟೆಗೆ ಏಳುವ ಮುಂಚೆ ಅದರ ಸ್ವಂತ ಸಿಡಿಮದ್ದಿಂದ ಈ ಒಟ್ಟು ಸಂಸ್ಥೆ ಸಿಡಿದು ಹಾರಿಹೋಗಬೇಕಷ್ಟೆ. ನನ್ನ ಕೆಲಸದ ಕಾಲ ಆರೋಗ್ಯಕರ. ಯುಕ್ತಿ ಯುಕ್ತ. 11 ರಿಂದ 5 ಗಂಟೆ ಯವರೆಗೆ.

ಅಂಡರ್‌ಷಾಫ್ಟ್ : ನಿನಗೆ ಇಷ್ಟ ಬಂದಾಗ ಬಾ ; ಒಂದು ವಾರ ಮುಗಿಯುವುದ ರೊಳಗೆ ನೀನೇ ಆರು ಗಂಟೆಗೆ ಬರುತ್ತೀಯೆ. ನೀನು ಇಲ್ಲಿಯೇ ಉಳಿದಿರುತ್ತೀಯೆ; ನಿನ್ನ ಆರೋಗ್ಯಕ್ಕಾಗಿ ನಿನ್ನನ್ನು ನಾನು ಇಲ್ಲಿಂದ ಓಡಿಸುವವರೆಗೂ. (ಕರೆ ಯುತ್ತ) ಬಿಲ್ಟನ್... (ಲೇಡಿ ಬ್ರಿಟೊ ಕಡೆಗೆ ತಿರುಗುತ್ತಾನೆ. ಆಕೆ ಏಳುತ್ತಾಳೆ). ಕ್ಷಣಕಾಲ ಈ ಇಬ್ಬರು ಹುಡುಗರನ್ನೂ ಏಕಾಂತಕ್ಕೆ ಬಿಡೋಣ.
(ಬಿಲ್ಟನ್ ಆಶ್ರಯದಿಂದ ಬರುತ್ತಾನೆ). ನಿನ್ನನ್ನು ಈಗ ಸಿಡಿಮದ್ದು ತಯಾರು ಮಾಡುವ ಕಡೆಗೆ ಕರೆದು ಹೋಗುತ್ತೇನೆ.

ಬಿಲ್ಟನ್ : (ದಾರಿಗಡ್ಡ ಹಾಕುತ್ತ) ಇಲ್ಲಿ ಸಿಡಿವ ಯಾವ ವಸ್ತುವನ್ನೂ ತೆಗೆದುಕೊಂಡು ಹೋಗಬಾರದು, ಸ್ವಾಮಿ.

ಲೇಡಿ ಬ್ರಿಟೊ : ಏನು ನಿನ್ನರ್ಥ. ನನ್ನನ್ನು ಕುರಿತು ಆಡಿದ್ದೆ ಈ ಮಾತು ?

ಬಿಲ್ಟನ್ : (ಅಚಲಿತನಾಗಿ) ಇಲ್ಲ ತಾಯಿ, ಅಂಡರ್‌ಷಾಫ್ಟ್ ಅವರ ಕಿಸೆಯಲ್ಲಿ ಆ ಇನ್ನೊಬ್ಬ ದೊಡ್ಡ ಮನುಷ್ಯರ ಬೆಂಕಿ ಪೆಟ್ಟಿಗೆ ಇದೆ.

ಲೇಡಿ ಬ್ರಿಟೊ : (ಇದಕ್ಕಿದ್ದಂತೆ) ಕ್ಷಮಿಸಪ್ಪ (ಆಶ್ರಯದೊಳಕ್ಕೆ ಹೋಗುತ್ತಾಳೆ)

ಅಂಡರ್‌ಷಾಫ್ಟ್ : ತುಂಬಾ ಸರಿ ಬಿಲ್ಟನ್. ತುಂಬಾ ಸರಿ. ಇಗೊ, ಇಲ್ಲಿದೆ. (ಬಿಲ್ಟನ್ನಿಗೆ ಬೆಂಕಿ ಪೆಟ್ಟಿಗೆಯನ್ನು ಕೊಡುತ್ತಾನೆ.) ಬಾ, ಸ್ಟೀವನ್, ಬಾ, ಚಾರ್ಲ್ಸ್, ಶಾರಾನ ಕರೆದುಕೊಂಡು, ಬಾ.

(ಗುಡಿಸಿಲಿನೊಳಕ್ಕೆ ಹೋಗುತ್ತಾನೆ. ಬಿಲ್ಟನ್ ಪೊಟ್ಟಣಬಿಚ್ಚಿ ಬೆಂಕಿ ಬಕೆಟ್ಟಿನಲ್ಲಿ ಕಡ್ಡಿಗಳನ್ನೆಲ್ಲ ಉದ್ದೇಶಪೂರ್ವಕವಾಗಿ ಹಾಕುತ್ತಾನೆ.)

ಲೋಮ್ಯಾಕ್ಸ್ : ಓ, ಸರಿಹೋಯಿತು !

(ಬಿಲ್ಟನ್ ಶಾಂತನಾಗಿ, ಆ ಖಾಲಿ ಬೆಂಕಿಪೆಟ್ಟಿಗೆಯನ್ನು ಆತನ ಕೈಗೆ ಕೊಡುತ್ತಾನೆ.) ಹಾಳಾದ ಅವಿವೇಕ. ವಿಜ್ಞಾನ ವಿಷಯವಾಗಿ ಶುದ್ಧ ಅಜ್ಞಾನ.

(ಒಳಕ್ಕೆ ಹೋಗುತ್ತಾನೆ.)

ಶಾರ : ನಾನೆಲ್ಲ ಸರಿಯಾಗಿದ್ದೇನೆಯೆ, ಬಿಲ್ಟನ್ ?

ಬಿಲ್ಟನ್ : ಬಟ್ಟೆ ಅಂಚಿನ ಜೋಡುಗಳನ್ನು ಹಾಕಿಕೊಳ್ಳಬೇಕು ಅಮ್ಮ, ಅವನ್ನು ಒಳಗಿಟ್ಟಿದ್ದೇನೆ (ಒಳಗೆ ಹೋಗುತ್ತಾನೆ.)

ಸ್ಟೀವನ್ : (ತುಂಬಾ ಗಂಭೀರವಾಗಿ ಕಸಿನ್ಸ್‌ಗೆ) ಡಾಲ್ಲಿ, ತೀರ್ಮಾನ ಮಾಡುವ ಮುಂಚೆ ಯೋಚನೆ ಮಾಡು. ನೀನು ಕೆಲಸಕ್ಕೆ ಸಾಕಾದಷ್ಟು ಒಗ್ಗುವ ಮನುಷ್ಯನೆಂದು ನಿನಗೆ ಅನ್ನಿಸುತ್ತದೆಯೆ ? ಇದು ಬಹು ದೊಡ್ಡ ಸಂಸ್ಥೆ. ಅದ್ಭುತ ಹೊಣೆಗಾರಿಕೆಯದು. ಇಷ್ಟು ದೊಡ್ಡ ವ್ಯವಹಾರ ನಿನಗೆ ಗ್ರೀಕ್ ಆದೀತು.

ಕಸಿನ್ಸ್ : ಓಹ್ ! ಗ್ರೀಕ್‌ಗಿಂತ ಕಡಮೆ ಕಷ್ಟದ್ದು ಇದು ಎನಿಸುತ್ತದೆ.

ಸ್ಟೀವನ್ : ಆಯಿತು. ನಿಮ್ಮಷ್ಟಕ್ಕೆ ನಿಮ್ಮನ್ನು ಬಿಡುವ ಮುಂಚೆ ಇಷ್ಟನ್ನು ಮಾತ್ರ ಹೇಳಬೇಕು ಎನಿಸುತ್ತದೆ. ಸರಿ ತಪ್ಪು ಎಂಬುದನ್ನು ಕುರಿತು ನಾನಾಡಿದ ಯಾವ ಮಾತೂ ನಿನಗೆ ಬಂದಿರುವ ಈ ದೊಡ್ಡ ಅವಕಾಶಕ್ಕೆ ವಿರುದ್ಧವಾಗಿ ಯಾವ ಪೂರ್ವಗ್ರಹವನ್ನೂ ಉಂಟು ಮಾಡದೆ ಇರಲಿ. ಈ ಉದ್ಯಮ ಅತ್ಯಂತ ಯೋಗ್ಯವಾದ್ದು. ನಮ್ಮ ದೇಶಕ್ಕೆ ಕೀರ್ತಿ ತರುವಂಥದು ಎಂದು ನನಗೆ ಸಮರ್ಪಕವಾಗಿದೆ.

(ಭಾವ ಭರದಲ್ಲಿ) ನನಗೆ ನನ್ನ ತಂದೆಯನ್ನು ಕಂಡರೆ ತುಂಬಾ ಹೆಮ್ಮೆಯಾಗುತ್ತದೆ. ನಾನು—(ಮುಂದೆ ಮಾತನಾಡಲಾರದೆ ಕಸಿನ್ಸ್ ಕೈ ಒತ್ತಿ ಗುಡಿಸಲು ಬಳಿಗೆ ಹೋಗುತ್ತಾನೆ. ಬಿಲ್ಟನ್ ಹಿಂಬಾಲಿಸುತ್ತಾನೆ.)

(ಬಾರ್ಬರ, ಕಸಿನ್ಸ್ ಇಬ್ಬರೇ ಒಟ್ಟಿಗೆ ಉಳಿಯುತ್ತಾರೆ. ಒಬ್ಬರ ಕಡೆಗೆ ಒಬ್ಬರು ಮೌನದಿಂದ ನೋಡುತ್ತಾರೆ.)

ಕಸಿನ್ಸ್ : ಬಾರ್ಬರ, ನಾನು ಈ ಕೆಲಸವನ್ನು ಒಪ್ಪಿಕೊಳ್ಳುತ್ತೇನೆ.

ಬಾರ್ಬರ : ಒಪ್ಪಿಕೊಳ್ಳುತ್ತೀ ಎನಿಸಿತ್ತು.

ಕಸಿನ್ಸ್ : ನಿನ್ನ ಸಲಹೆ ಕೇಳದೆ ನಾನು ತೀರ್ಮಾನಿಸಬೇಕಾಯಿತು—ಎಂಬುದು ನಿನಗೆ ಗೊತ್ತಾಯಿತಲ್ಲ ! ಆಯ್ಕೆಯ ಹೊಣೆಯನ್ನು ನಿನ್ನ ಮೇಲೆ ಹಾಕಿದ್ದರೆ ಮುಂಚೆಯೊ ಆಮೇಲೊ ನೀನು ಅದಕ್ಕಾಗಿ ನನ್ನನ್ನು ಕಂಡು ಹೇಸುತ್ತಿದ್ದೆ.

ಬಾರ್ಬರ : ಹೌದು. ಈ ಆಸ್ತಿಗಾಗಿಯಾಗಲಿ ಅದಕ್ಕಿಂತ ಹೆಚ್ಚಿನದಕ್ಕಾಗಲಿ ನೀನು ನಿನ್ನ ಆತ್ಮವನ್ನು ಮಾರಿಕೊಳ್ಳಬೇಕೆಂಬುದು ನನ್ನ ಇಷ್ಟವಲ್ಲ.

ಕಸಿನ್ಸ್ : ನನ್ನನ್ನು ಬಾಧಿಸುವುದು ನನ್ನ ಆತ್ಮದ ವಿಕ್ರಯವಲ್ಲ. ತುಂಬಾ ಸಲ ಅದನ್ನು ಮಾರಿದ್ದೇನೆ. ಆದ್ದರಿಂದ ನನಗೆ ಆ ಲಕ್ಷ್ಯವಿಲ್ಲ. ಒಂದು ಅಧ್ಯಾಪಕತನಕ್ಕಾಗಿ ಅದನ್ನು ಮಾರಿದ್ದೇನೆ ; ಒಂದು ಪರಮಾನಕ್ಕಾಗಿ ಮಾರಿದ್ದೇನೆ. ಫಾಸಿ ಶಿಕ್ಷೆ, ಅನ್ಯಾಯದ ಯುದ್ಧಗಳು ನನಗೆ ಜುಗುಪ್ಸೆ ತರುವ ಸಂಗತಿಗಳು. ಇವಕ್ಕಾಗಿ ಸರ್ಕಾರಕ್ಕೆ ತೆರಿಗೆ ತೆರಲು ನಿರಾಕರಿಸಿದರೆ ನನಗೆ ವಿಧಿಸುವ ಸೆರೆಯಿಂದ ತಪ್ಪಿಸಿ ಕೊಳ್ಳಲು ಅದನ್ನು ಮಾರಿದ್ದೇನೆ. ಮನುಷ್ಯನ ದಿನಚರಿಯೆಲ್ಲ ಅದೇ ಅಲ್ಲವೆ ? ಪ್ರತಿದಿನ, ಪ್ರತಿಗಂಟೆ ಸಣ್ಣಪುಟ್ಟ ವಿಷಯಗಳಿಗಾಗಿ ನಮ್ಮ ಆತ್ಮಗಳನ್ನು ಮಾರಿಕೊಳ್ಳುವುದಲ್ಲವೆ ಎಲ್ಲ ಮಾನವನ ನಡತೆ ? ನಾನು ಈಗ ಮಾರುತ್ತಿರುವುದು ಹಣಕ್ಕಾಗಿ ಅಲ್ಲ ; ಸ್ಥಾನಕ್ಕಾಗಿ ಅಲ್ಲ ; ಸುಖ ಸೌಕರ್ಯಗಳಿಗಾಗಿ ಅಲ್ಲ. ವಾಸ್ತವತೆಗಾಗಿ ; ಶಕ್ತಿಗಾಗಿ.

ಬಾರ್ಬರ : ಶಕ್ತಿ ನಿನಗೆ ಇರುವುದಿಲ್ಲವೆಂದು ನಿನಗೆ ಗೊತ್ತಿದೆ. ಆತನಿಗೂ ಏನೂ ಇಲ್ಲ ಎಂಬುದೂ ನಿನಗೆ ಗೊತ್ತಿದೆ.

ಕಸಿನ್ಸ್ : ಗೊತ್ತಿದೆ. ನನಗೊಬ್ಬನಿಗೆ ಮಾತ್ರವಲ್ಲ, ಲೋಕಕ್ಕೆ ಶಕ್ತಿಯನ್ನು ಉಂಟು ಮಾಡಿಕೊಡಬೇಕು ಎನ್ನಿಸುತ್ತದೆ.

ಬಾರ್ಬರ : ನಾನು ಕೂಡ ಲೋಕಕ್ಕಾಗಿಯೇ ಶಕ್ತಿಯನ್ನು ಉಂಟುಮಾಡಬೇಕೆನ್ನುತ್ತೇನೆ. ಆದರೆ ಅದು ಆಧ್ಯಾತ್ಮಿಕ ಶಕ್ತಿಯಾಗಬೇಕು.

ಕಸಿನ್ಸ್ : ಎಲ್ಲ ಶಕ್ತಿಯೂ ಆಧ್ಯಾತ್ಮಿಕವೇ ಎನಿಸುತ್ತದೆ ನನಗೆ. ಈ ಫಿರಂಗಿಗಳು ತಮ್ಮಷ್ಟಕ್ಕೆ ತಾವೇ ಹಾರುವುದಿಲ್ಲ. ಗ್ರೀಕ್ ಪಾಠಹೇಳಿ ಆಧ್ಯಾತ್ಮಿಕ ಶಕ್ತಿಯನ್ನು ಉಂಟುಮಾಡಲು ಯತ್ನಿಸಿದ್ದೆ. ಆದರೆ ಖಿಲಭಾಷೆಯಿಂದ, ಮೃತನಾಗರಿಕತೆಯೊಂದರಿಂದ ವಾಸ್ತವವಾಗಿ ಲೋಕದ ಮನಸ್ಸು ಪ್ರಭಾವಿತವಾಗದು. ಜನರಿಗೆ ಶಕ್ತಿ ಬೇಕು. ಅವರಿಗೆ ಗ್ರೀಕ್ ಸಿಕ್ಕದು. ಈಗ ಇಲ್ಲಿ ತಯಾರಿಸುವ ಶಕ್ತಿಯನ್ನು ಎಲ್ಲರೂ ಪ್ರಯೋಗಿಸಬಹುದು.

ಬಾರ್ಬರ : ಸ್ತ್ರೀಯರ ಮನೆಗಳನ್ನು ಸುಟ್ಟುಹಾಕುವ ಶಕ್ತಿ, ಅವರ ಮಕ್ಕಳನ್ನು ಕೊಲ್ಲುವ ಶಕ್ತಿ, ಅವರ ಗಂಡಂದಿರನ್ನು ಚೂರುಚೂರಾಗಿ ಸೀಳುವ ಶಕ್ತಿ.

ಕಸಿನ್ಸ್ : ಕೆಡುಕನ್ನು ಮಾಡಲು ಶಕ್ತಿ ಪಡೆಯದೆ ಒಳ್ಳೆಯದಕ್ಕೆ ಶಕ್ತಿ ಪಡೆಯಲಾಗುವುದಿಲ್ಲ. ತಾಯಿ ಹಾಲುಕೂಡ ವೀರನನ್ನು ಪೋಷಿಸುವಂತೆಯೇ ಕೊಲೆ ಪಾತಕರನ್ನೂ ಪೋಷಿಸುತ್ತಲ್ಲವೆ ? ಈ ಶಕ್ತಿ ಜನರ ದೇಹಗಳನ್ನು ಮಾತ್ರ ಚೂರು ಚೂರಾಗಿ ಸೀಳುತ್ತದೆ ; ಬುದ್ಧಿ ಶಕ್ತಿಯ ಹಾಗೆ, ಕಲ್ಪನಾಶಕ್ತಿಯ ಹಾಗೆ, ಕವಿತಾ ಶಕ್ತಿ, ಮತಧರ್ಮಗಳ ಶಕ್ತಿಯ ಹಾಗೆ ಜನದ ಆತ್ಮಗಳನ್ನು

ಗುಲಾಮರನ್ನಾಗಿ ಮಾಡಬಲ್ಲಂತೆ ಅಷ್ಟು ಭೀಕರವಾಗಿ ಎಂದೂ ಅಪಪ್ರಯೋಗವಾಗಿಲ್ಲ. ಗ್ರೀಕ್ ಬೋಧಕನಾಗಿ, ಸಾಮಾನ್ಯರ ಮೇಲೆ ಬಳಸಲು ಮೇಧಾವಿ ಮನುಷ್ಯನಿಗೆ ಆಯುಧಗಳನ್ನು ಒದಗಿಸಿಕೊಟ್ಟೆ. ಈಗ ಮೇಧಾವಿಗೆ ವಿರುದ್ಧವಾಗಿ ಸಾಮಾನ್ಯ ಮನುಷ್ಯನು ಬಳಸುವಂಥ ಆಯುಧಗಳನ್ನು ಕೊಡಬೇಕೆನ್ನಿಸುತ್ತದೆ. ಸಾಮಾನ್ಯ ಜನರನ್ನು ಕಂಡರೆ ನನಗೆ ಪ್ರೀತಿ. ನ್ಯಾಯವಾದಿಗಳ ಮೇಲೆ, ವೈದ್ಯರ ಮೇಲೆ, ಮತವಳರ ಮೇಲೆ, ಸಾಹಿತಿ, ಅಧ್ಯಾಪಕರ ಮೇಲೆ, ಕಲೆಗಾರರ ಮೇಲೆ, ರಾಜಕೀಯದವರ ಮೇಲೆ. ಅವರು ಸಜ್ಜುಗೊಳ್ಳುವಂತಾಗಬೇಕು. ಅಂಥವರಿಗೆ ಒಮ್ಮೆ ಅಧಿಕಾರ ಬಂದರೆ ಎಲ್ಲ ತಿಳಿಗೇಡಿಗಳಿಗಿಂತಲೂ ದುಷ್ಟರಿಗಿಂತಲೂ ವಿಪತ್ಕಾರಕರಾಗುತ್ತಾರೆ; ಹೆಚ್ಚು ನಿರಂಕುಶರಾಗುತ್ತಾರೆ. ನನಗೆ ಬೇಕಾದ ಶಕ್ತಿ ಸಾಮಾನ್ಯ ಜನ ಬಳಸುವಷ್ಟು ಸರಳವಾಗಿರಬೇಕು. ಆದರೆ ಆಳುವ ಅಲ್ಪ ಸಂಖ್ಯಾತ ಮೇಧಾವಿ ವರ್ಗದವರು ತಮ್ಮ ಪ್ರತಿಭೆಯನ್ನು ಲೋಕಸಮಸ್ತರ ಒಳ್ಳೆಯದಕ್ಕಾಗಿ ಬಳಕೆಯಾಗುವಂತೆ ಅವರನ್ನು ಬಲಾತ್ಕರಿಸುವಷ್ಟು ಬಲಿಷ್ಠವಾಗಬೇಕು.

ಬಾರ್ಬರ : (ಷೆಲ್ಲಿನ ಕಡೆಗೆ ಕೈ ಬೆರಳು ತೋರಿಸುತ್ತ) ಅದಕ್ಕಿಂತ ಉತ್ತಮವಾದ ಯಾವ ಶಕ್ತಿಯೂ ಇಲ್ಲವೆ ?

ಕಸಿನ್ಸ್ : ಇದೆ. ಹುಲಿ ಮನುಷ್ಯನನ್ನು ನಾಶಮಾಡಬಲ್ಲಂತೆ ತನಗಿಂತ ಉನ್ನತ ಶಕ್ತಿಗಳನ್ನು ಆ ಶಕ್ತಿ ನಾಶಮಾಡಬಲ್ಲದು. ಆದ್ದರಿಂದ ಮನುಷ್ಯನು ಆ ಶಕ್ತಿಯನ್ನು ಮೊದಲು ವಶಕ್ಕೆ ತಂದುಕೊಳ್ಳಬೇಕು. ಕಳೆದ ಬಾರಿ ತುರ್ಕರೂ ಗ್ರೀಕರೂ ಯುದ್ಧ ಮಾಡಿದಾಗ ನಾನು ಇದನ್ನು ಒಪ್ಪಿಕೊಂಡೆ. ನನ್ನ ಶಿಷ್ಯರಲ್ಲಿ ಶ್ರೇಷ್ಠನಾದವನು ಹೆಲ್ಲಾಸಿಗಾಗಿ ಯುದ್ಧ ಮಾಡಲು ಹೋದ. ಅವನನ್ನು ಬೀಳ್ಕೊಡುವಾಗ ಅವನಿಗೆ ನಾನು ಕೊಟ್ಟ ಕೊಡುಗೆ : ಪ್ಲೇಟೊ ಬರೆದ 'ರಿಪಬ್ಲಿಕ್'ನ ಪ್ರತಿಯಲ್ಲ. ಒಂದು ಕೈ ಕೋವಿ, ೧೦೦ ಅಂಡರ್‌ಷಾಫ್ಟ್ ತೋಟೆಗಳು. ಯಾರನ್ನಾದರೂ ಅವನು ಕೊಂದಿದ್ದರೆ—ಅವನು ಗುಂಡಿಟ್ಟು ಕೊಂದ ಪ್ರತಿ ತುರ್ಕನ ರಕ್ತವೂ ಅಂಡರ್‌ಷಾಫ್ಟ್‌ನ ಮೇಲೆ ಎಷ್ಟಿದೆಯೊ ನನ್ನ ತಲೆಯ ಮೇಲೂ ಅಷ್ಟೇ ಇದೆ. ಆ ಕಾರ್ಯ ನನ್ನನ್ನು ಈ ಸ್ಥಳಕ್ಕೆ ಶಾಶ್ವತವಾಗಿ ಗಟ್ಟಿಸುವಂತೆ ಮಾಡಿತು. ನಿಮ್ಮ ತಂದೆಯ ಮೂದಲೆ ನನ್ನನ್ನು ಸೋಲಿಸಿದೆ. ಯುದ್ಧದ ಮೇಲೆ ಯುದ್ಧ ಮಾಡಲು ನನಗೆ ಧೈರ್ಯವಿದೆಯೆ ? ಇದೆ. ಧೈರ್ಯ ಮಾಡಬೇಕು. ಮಾಡುತ್ತೇನೆ. ಈಗ ಹೇಳು. ನನಗೂ ನಿನಗೂ ನಡುವೆ ಸಂಬಂಧ ಮುಗಿದು ಹೋಯಿತೆ ?

ಬಾರ್ಬರ : (ಅವಳ ಉತ್ತರವನ್ನು ಕುರಿತು ಅವನ ಮನಸ್ಸಿನಲ್ಲಿ ಸ್ಪಷ್ಟವಾಗಿ ಕಾಣುವ

ಭೀತಿಗೆ ಕರಗಿ) ಡಾಲ್ಲಿ, ನೀನು ವಿವೇಕವಿಲ್ಲದ ಹಸುಳೆ. ಅದು ಹೇಗೆ ಮುಗಿದೀತು ?

ಕಸಿನ್ಸ್ : (ಆನಂದಭರಿತನಾಗಿ) ಆದರೆ, ನೀನು—ನೀನು—ನೀನು ಓಹ್ ! ಈಗ ನನ್ನ ತಮ್ಮಟೆ ಇಲ್ಲಿದ್ದಿದ್ದರೆ, (ಕಲ್ಪನೆಯ ವಾದನ ದಂಡಗಳನ್ನು ಎಗರಿ ತಾಕುತ್ತಾನೆ.)

ಬಾರ್ಬರ : (ಲಘು ಬುದ್ಧಿಗೆ ಕೋಪಗೊಂಡು) ಹುಷಾರು, ಡಾಲ್ಲಿ ಹುಷಾರಾಗಿರು. ಅಯ್ಯೋ ನಿನ್ನಿಂದ, ಅಪ್ಪನಿಂದ, ಇದರಿಂದೆಲ್ಲ ಹೊರಟು ಹೋಗಲು ನನಗೆ ಶಕ್ಯ ಮಾತ್ರ ಇದ್ದಿದ್ದರೆ ! ಪಾರಿವಾಳದಂತೆ ರೆಕ್ಕೆ ಇದ್ದು, ನಾನು ಸ್ವರ್ಗಕ್ಕೆ ಹಾರಿ ಹೋಗಬಲ್ಲವಳಾಗಿದ್ದಿದ್ದರೆ—

ಕಸಿನ್ಸ್ : ನನ್ನನ್ನು ಬಿಟ್ಟು !

ಬಾರ್ಬರ : ಹೌದು ನಿನ್ನನ್ನು, ತುಂಟರಾದ, ಚೇಷ್ಟೆಮಾಡುವ, ಉಳಿದ ಎಲ್ಲ ಪುರುಷರ ಮಕ್ಕಳನ್ನೂ, ಬಿಟ್ಟು. ಆದರೆ ಹೋಗಲಾರೆ. ಒಂದು ಕ್ಷಣಕಾಲ ಮುಕ್ತಿ ಸೈನ್ಯದಲ್ಲಿ ನಾನು ಸುಖವಾಗಿದ್ದೆ. ಉತ್ಸಾಹ, ಪ್ರಾರ್ಥನೆ, ಆತ್ಮೋದ್ಧಾರಗಳ ಸ್ವರ್ಗದೊಳಗೆ. ಪ್ರಪಂಚದಿಂದ ತಪ್ಪಿಸಿ ಕೊಂಡು ಹೋದೆ. ಆದರೆ ನಮ್ಮ ಹಣ ಮುಗಿದುಹೋದ ಕ್ಷಣ ಬಾಜ್ಜರ್ರಿಗೆ. ಎಲ್ಲ ಪುನಃ ಹಿಂದಕ್ಕೆ ಬಂತು. ನನ್ನ ಜನರನ್ನು ಉದ್ಧಾರ ಮಾಡಿದವನು ಅವನು. ಅವನು, ಅಂಧಂತಮಸ್ಸಿನ ಈ ರಾಜ, ನಮ್ಮಪ್ಪ. ಎಲ್ಲೆಲ್ಲಿಯೂ ಅವರ ಕೈಚಾಚಿವೆ. ಹೊಟ್ಟೆಗಿಲ್ಲದೆ ಹಸಿದಿರುವ ಒಬ್ಬ ಜೊತೆಮಾನವನಿಗೆ ನಾವು ಆಹಾರ ಕೊಡುವಾಗ ಆ ರೊಟ್ಟಿ ಅವರು ಕೊಟ್ಟಿದ್ದು ; ಬೇರೆ ಯಾವ ರೊಟ್ಟಿಯೂ ಇಲ್ಲವಾದ್ದರಿಂದ. ಕಾಯಿಲೆಯಾದವರನ್ನು ನಾವು ಲಾಲಿಸುವುದು ಅವರು ಹಣಕೊಟ್ಟು ನಡಸುವ ಆಸ್ಪತ್ರೆಗಳಲ್ಲಿ. ಅವರು ಕಟ್ಟಿಸಿರುವ ದೇವಮಂದಿರಗಳಿಂದ ನಾವು ಬೇರೆ ಕಡೆಗೆ ತಿರುಗಿದೆವೆಂದರೆ ರಸ್ತೆಗಳ ಮೇಲೆ ನಾವು ಮೊಳಕಾಲೂರಬೇಕು. ಆ ರಸ್ತೆಗಳ ಮೇಲೆ ಹಾಸಿರುವ ಕಲ್ಲು ಅವರದು. ಅದು ನಡೆಯುವವರೆಗೂ ಅವರಿಂದ ತಪ್ಪಿಸಿಕೊಳ್ಳುವುದೆಂಬುದಿಲ್ಲ. ಬಾಜ್ಜರ್ ಮತ್ತು ಅಂಡರ್‌ಷಾಫ್ಟ್ ಅವರಿಗೆ ನಮ್ಮ ಬೆನ್ನುಗಳನ್ನು ತಿರುಗಿಸಿದೆವೆಂದರೆ ಬದುಕಿಂದಲೇ ನಮ್ಮ ಬೆನ್ನು ತಿರುಗಿಸಿದಂತಾಗುತ್ತದೆ.

ಕಸಿನ್ಸ್ : ಬದುಕಿನ ದುಷ್ಟ ಮುಖದ ಕಡೆಗೆ ಬೆನ್ನು ತಿರುಗಿಸಲು ನೀನು ನಿರ್ಧರಿಸಿದ್ದೀಯೆಂದುಕೊಂಡಿದ್ದೆ.

ಬಾರ್ಬರ : ದುಷ್ಟ ಮುಖವೆಂಬುದು ಇಲ್ಲ. ಜೀವನವೆಲ್ಲ ಒಂದು. ಯಾವೆಲ್ಲ ಕೇಡನ್ನು ಸಹಿಸಬೇಕಾಗಿದೆಯೊ, ಅದು ಪಾಪವಾಗಿರಲಿ ಸಂಕಟವಾಗಿರಲಿ, ಅದರಲ್ಲಿ ನನಗೆ ಪಾಲನ್ನು ಬೇಡವೆಂದು ತಪ್ಪಿಸಿಕೊಳ್ಳಲು ನಾನು ಎಂದೂ ಬಯಸಲಿಲ್ಲ.

ಡಾಲ್ಲಿ, ಮಧ್ಯಮವರ್ಗದ ಜನರ ಅಭಿಪ್ರಾಯಗಳನ್ನು ನಿನ್ನ ತಲೆಯಿಂದ ತೆಗೆದು ಹಾಕಲು ನಾನು ಶಕ್ತಳಾಗಿದ್ದಿದ್ದರೆ, ಚೆನ್ನಾಗಿತ್ತು.

ಕಸಿನ್ಸ್ : (ಉಸಿರು ಕಟ್ಟಿ ಏದುತ್ತ) ಮಧ್ಯಮ ವರ್—! ಕೊಟ್ಟೆ. ಚೆನ್ನಾಗಿ. ಅಜ್ಞಾತನ ಮಗುವಾಗಿ ಹುಟ್ಟಿದವನ ಮಗಳಿಂದ ಸಾಮಾಜಿಕವಾದ ಪೆಟ್ಟು ನನಗೆ.

ಬಾರ್ಬರ : ಆದ್ದರಿಂದಲೇ ಡಾಲ್ಲಿ, ನನಗೆ ವರ್ಗವೆಂಬುದಿಲ್ಲ. ಇಡಿಯ ಜನತೆಯ ಹೃದಯದಿಂದ ನಾನು ನೇರ ಬಂದಿದ್ದೇನೆ. ನಾನು ಮಧ್ಯಮ ವರ್ಗದವಳಾಗಿದ್ದರೆ ನನ್ನ ತಂದೆಯ ಉದ್ಯೋಗದಿಂದ ನನ್ನ ಬೆನ್ನು ತಿರುಗಿಸುತ್ತಿದ್ದೆ. ನಾವಿಬ್ಬರೂ ಒಂದು ಕಲಾಮಯವಾದ ಬೈಠಕ್ ಖಾನೆಯಲ್ಲಿ ಜೀವನ ನಡಸುತ್ತಿದ್ದೆವು. ಅದರ ಒಂದು ಮೂಲೆಯಲ್ಲಿ ನೀನು ಕಾವ್ಯಾವಲೋಕನವನ್ನು ಓದುತ್ತಿರುತ್ತಿದ್ದೆ. ಇನ್ನೊಂದರಲ್ಲಿ ನಾನು ಪಿಯಾನೊ ಬಳಿ ಕುಳಿತು ಷುಮಾನ್ ಸಂಗೀತ ಕೃತಿಯನ್ನು ಬಾರಿಸುತ್ತಿರುತ್ತಿದ್ದೆ. ಇಬ್ಬರದೂ ಉತ್ತಮ ತೆರದ ವೃತ್ತಿಗಳೇ ; ಒಬ್ಬರಿಂದಲೂ ಒಂದು ಚೂರು ಪ್ರಯೋಜನವಿರುತ್ತಿರಲಿಲ್ಲ. ಹಾಗೆ ಮಾಡುವ ಮುಂಚೆ ಈ ಮುದ್ದು ತಯಾರಿಸುವ ಷೆಡ್ಡಿನ ಕಸ ಗುಡಿಸಿಯೇನು! ಬಾಜ್ಜರ್ ಅಂಗಡಿಯಲ್ಲಿ ಪಾನಮಾರುವ ಕೆಲಸಗಾರ್ತಿಯೇ ಆದೇನು. ನಮ್ಮ ತಂದೆಯ ನೀಡಿಕೆಯನ್ನು ನೀನು ನಿರಾಕರಿಸಿದ್ದರೆ ಏನಾಗುತ್ತಿತ್ತು, ಬಲ್ಲೆಯ ?

ಕಸಿನ್ಸ್ : ನಾನು ಹೇಗೆ ಊಹಿಸಲಿ ?

ಬಾರ್ಬರ : ನಿನ್ನನ್ನು ಬಿಟ್ಟುಕೊಟ್ಟು ಅದನ್ನು ಒಪ್ಪಿಕೊಳ್ಳುವ ಮನುಷ್ಯನನ್ನು ಮದುವೆಯಾಗುತ್ತಿದ್ದೆ. ಎಷ್ಟೇ ಹೇಳು : ನನ್ನ ಮುದಿತಾಯಿಗೆ ನಿಮ್ಮಲ್ಲಿ ಯಾರಿಗಿರುವುದಕ್ಕಿಂತಲೂ ಹೆಚ್ಚು ವಿವೇಕ ಇದೆ. ಈ ಸ್ಥಳವನ್ನು ನೋಡಿದಾಗ ಅವಳಿಗನ್ನಿಸಿದ ಹಾಗೆ ನನಗೂ ಅನ್ನಿಸಿತು—ನನಗದು ಬೇಕು ಎನ್ನಿಸಿತು—ಎಂದಿಗೆ, ಎಂದಿಗೇ, ಎಂದಿಗೇ ಆಗಲಿ, ಅದು ಕೈಬಿಟ್ಟು ಹೋಗಗೊಡದೆನ್ನಿಸಿತು. ಇಷ್ಟು ಮಾತ್ರ ನನ್ನಲ್ಲಿ ವ್ಯತ್ಯಾಸ. ಆಕೆಯ ಗಮನಕ್ಕೆ ಬಂದದ್ದು, ಅಲ್ಲಿನ ಮನೆಗಳು, ಪಾಕ ಶಾಲೆಯ ವ್ಯಾಪ್ತಿ, ಹಾಸುವ ಬಟ್ಟೆಗಳು ; ಲಿನನ್, ಪಾತ್ರೆ, ತಟ್ಟೆ ಬಟ್ಟಲು. ಆದರೆ ಯೋಚಿಸಬೇಕಾದದ್ದು ವಾಸ್ತವವಾಗಿ ಉದ್ಧಾರಗೊಳಿಸಬೇಕಾದ ಎಲ್ಲ ಮನುಷ್ಯರ ಆತ್ಮಗಳು. ಒಂದು ಚೂರು ರೊಟ್ಟಿ, ಒಂದು ಸ್ವಲ್ಪ ಗಂಜಿ ಕೊಟ್ಟರೆ ಕೃತಜ್ಞತೆಯಿಂದ ಗದ್ಗದಿಸಿ ಬಿಕ್ಕುವ, ಹಸಿದ, ದೇಹಗಳಲ್ಲಿನ ದುರ್ಬಲ ಆತ್ಮಗಳಲ್ಲ. ಚೆನ್ನಾಗಿ ತಿಂದು, ದಷ್ಟಪುಷ್ಟರಾದ,—ಜಗಳ ಗಂಟಿಗರಾದ, ಅಹಂಭಾವದಿಂದ, ಅಭಿಮಾನದಿಂದ ಬೀಗುವ ಪ್ರಾಣಿಗಳವು. ಎಲ್ಲರಿಗೂ ತಮ್ಮ ಸಣ್ಣ ಹಕ್ಕುಗಳು, ಗೌರವ ಎಂಬ ಭಾವನೆ ; ಅವರೆಲ್ಲ ಸೇರಿ ಆತನಿಗೆ ಮಾಡಿಕೊಡುತ್ತಿದ್ದ ಅಷ್ಟು ಧನಲಾಭಕ್ಕೆ ನಮ್ಮ ತಂದೆ ಅವರಿಗೆ ಕೃತಜ್ಞನಾಗಿರಬೇಕು ಎಂಬಂತೆ

ಯೋಚಿಸುತ್ತಿರುವವರು—ಅವನೂ ಹಾಗೆಯೇ ಇರಬೇಕು ಎನ್ನು. ವಾಸ್ತವವಾಗಿ ಉದ್ಧಾರಕಾರ್ಯವಾಗಬೇಕಾಗಿರುವುದು ಅಲ್ಲಿ. ರೊಟ್ಟಿಯ ಲಂಚ ಕೊಟ್ಟು ನಾನು ಪರಿವರ್ತನೆ ಮಾಡಿದವರು ಎಂದು ನನ್ನ ತಂದೆ ಇನ್ನೂ ಮುಂದೆಂದೂ ನನ್ನನ್ನು ಹೀಯಾಳಿಸುವಂತಾಗಬಾರದು. (ಆಕೆಯ ಆಕೃತಿ ಪ್ರಭೆಗೊಳ್ಳುತ್ತದೆ.) ರೊಟ್ಟಿಯ ಲಂಚ ಕೊಡುವುದೆಂಬುದನ್ನು ನಾನು ನಿರಸನ ಮಾಡಿದ್ದೇನೆ. ಸ್ವರ್ಗದ ಲಂಚವೆಂಬುದನ್ನೂ ಹೊರ ಹಾಕಿದ್ದೇನೆ. ದೇವರ ಕೆಲಸ ಕೇವಲ ಅದಕ್ಕಾಗಿಯೇ ಆಗುವಂತಾಗಲಿ. ಯಾವ ಕೆಲಸವನ್ನು ಮಾಡಲು ನನ್ನನ್ನು ಅವನು ನಿರ್ಮಾಣ ಮಾಡಬೇಕಾಯಿತೊ ಅದು ಜೀವಂತ ಸ್ತ್ರೀಪುರುಷರಿಂದಲ್ಲದೆ ಬೇರೆಯವರಿಂದಾಗದು. ನಾನು ಸತ್ತಾಗ ಅವನು ನನಗೆ ಸಾಲಗಾರನಾಗಿರಲಿ. ನಾನು ಅವನ ಸಾಲದಲ್ಲಿರಲು ಒಲ್ಲೆ. ನನ್ನ ಪದವಿಯಲ್ಲಿರುವ ಹೆಂಗಸಿಗೆ ತಕ್ಕಂತೆ ನಾನು ಅವನನ್ನು ಕ್ಷಮಿಸುವಂತಾಗಲಿ.

ಕಸಿನ್ಸ್ : ಎಂದರೆ ? ಬಾಳಿನ ದಾರಿ ಸಾವಿನ ಗಿರಣಿ ಮೂಲಕ ಹಾಯುತ್ತದೆಯೇ ?

ಬಾರ್ಬರ : ಹೌದು. ನರಕವನ್ನು ಸ್ವರ್ಗಕ್ಕೆ ಎತ್ತುವುದರ ಮೂಲಕ ; ಮಾನವನನ್ನು ದೇವತ್ವಕ್ಕೆ ಎತ್ತುವುದರ ಮೂಲಕ. ನೆರಳ ಕಣಿವೆಯಲ್ಲಿ ಶಾಶ್ವತವಾದ ಬೆಳಕನ್ನು ತೆರೆದು ತೋರಿಸುವುದರ ಮೂಲಕ (ಎರಡೂ ಕೈಗಳಿಂದಲೂ ಅವನನ್ನು ಹಿಡಿದು) ನನ್ನ ಧೈರ್ಯ ಎಂದಿಗೂ ಪುನಃ ನನಗೆ ಬರುವುದಿಲ್ಲ ಎಂದು ಕೊಂಡಿದ್ದೆಯ ? ನಾನು ಕರ್ತವ್ಯವನ್ನು ಬಿಟ್ಟುಕೊಟ್ಟು ಓಡಿಹೋಗುವವಳೆಂದು ನಂಬಿದ್ದೆಯ ? ಬೀದಿಗಳಲ್ಲಿ ನಿಂತು ಮಾನವ ಬಂಧುಗಳನ್ನು ಹೃದಯದ ಪ್ರೀತಿಗೆ ತೆಗೆದುಕೊಂಡ ಅತಿಪವಿತ್ರ, ಅತಿಶ್ರೇಷ್ಠ ವಿಷಯಗಳನ್ನು ಕುರಿತು ಮಾತನಾಡಿದವಳು ಹಿಂದಿರುಗಬಲ್ಲೆ, ಸಮಾಜದಲ್ಲಿ ಮುಂದುವರೆದಿರುವರೆಂಬ ಜನರೊಡನೆ ಬೈಠಕ್ ಖಾನೆಯಲ್ಲಿ ಕುಳಿತು ವಿಷಯವೇ ಇಲ್ಲದ ಮಾತಿನಲ್ಲಿ ತಿಳಿಗೇಡಿಯಾಗಿ ಹರಟಲು ಒಪ್ಪುತ್ತಿದ್ದೆ ಎಂದುಕೊಂಡೆಯ ? ಇಲ್ಲ—ಇಲ್ಲ—ಇಲ್ಲ—ಇಲ್ಲ—ಎಂದಿಗೂ ಇಲ್ಲ. ಮೇಜರ್ ಬಾರ್ಬರ ತನ್ನ ಧ್ವಜ ಹಿಡಿದೇ ಸಾಯುತ್ತಾಳೆ. ಓ—ನನ್ನ ಪ್ರೀತಿಯ ಚಿಕ್ಕ ಪುಟ್ಟ ಡಾಲ್ಲಿ ಹುಡುಗ, ಇನ್ನೂ ನನ್ನವನಾಗಿದ್ದಾನೆ. ನನ್ನ ಸ್ಥಳವನ್ನೂ ನನ್ನ ಕೆಲಸವನ್ನೂ ನನಗೆ ಕಂಡುಕೊಟ್ಟಿದ್ದಾನೆ. ದೇವರ ಕೀರ್ತಿ ಹೊಮ್ಮಿ ಹರಿಯಲಿ.

(ಅವಳು ಅವನನ್ನು ಮುದ್ದಿಸುತ್ತಾಳೆ.)

ಕಸಿನ್ಸ್ : ಪ್ರಿಯೆ—ಪ್ರಿಯೆ, ನನ್ನ ಆರೋಗ್ಯ ನಾಜೂಕಿನದೆಂಬುದನ್ನು ಯೋಚಿಸು. ಸುಖವನ್ನು ನಾನು ನಿನ್ನಷ್ಟು ತಡೆಯಲಾರೆ.

ಬಾರ್ಬರ : ಹೌದು, ಹೌದು. ನನ್ನನ್ನು ಪ್ರೀತಿಸುವುದು ಸುಲಭದ ಕೆಲಸವಲ್ಲ. ಆದರೆ ಅದರಿಂದ ನಿನಗೆ ಒಳ್ಳೆಯದಾಗುತ್ತದೆ. (ಷೆಡ್ಡಿನೊಳಕ್ಕೆ ಓಡಿ ಮಗುವಿನಂತೆ

ಕೂಗುತ್ತ) ಅಮ್ಮಾ...ಅಮ್ಮಾ...(ಬಿಲ್ಬನ್ ಹೊರಗೆ ಬರುತ್ತಾನೆ. ಅಂಡರ್‌ಷಾಫ್ಟ್ ಹಿಂಬಾಲಿಸುತ್ತಾನೆ.) ನನ್ನ ಅಮ್ಮ ಎಲ್ಲಿ? ನನ್ನ ಅಮ್ಮ ಬೇಕು.

ಅಂಡರ್‌ಷಾಫ್ಟ್ : ಅವಳು ಬಟ್ಟೆಯ ಜೋಡು ತೆಗೆದುಹಾಕುತ್ತಿದ್ದಾಳೆ, ಮಗು. (ಕಸಿನ್ಸ್ ಬಳಿಗೆ ಹೋಗಿ) ಏನಾಯಿತು ? ಏನು ಹೇಳುತ್ತಾಳೆ ?

ಕಸಿನ್ಸ್ : ನೇರ ಸ್ವರ್ಗಕ್ಕೆ ಏರಿಹೋಗಿ ಬಿಟ್ಟಿದ್ದಾಳೆ.

ಲೇಡಿ ಬ್ರಿಟೊ : (ಷೆಡ್ಡಿನಿಂದ ಬಂದು ಮೆಟ್ಟಿಲುಗಳ ಮೇಲೆ ನಿಂತು, ಲೋಮ್ಯಾಕ್ಸನ್ನು ಹಿಂಬಾಲಿಸಲು ಬಂದ ಶಾರಾಗೆ ಅಡ್ಡಿಯಾಗಿ, ಮಗುವಿನ ಹಾಗೆ ತಾಯಿಯ ಸೆರಗನ್ನು ಹಿಡಿದುಕೊಳ್ಳುತ್ತಾಳೆ ಬಾರ್ಬರ.) ಬಾರ್ಬರ, ಸ್ವತಂತ್ರವಾಗಿರಲು ನೀನು ಯಾವಾಗ ಕಲಿತೀಯಮ್ಮ ? ಸ್ವತಂತ್ರವಾಗಿ ನಡೆಯಲು—ಸ್ವಂತವಾಗಿ ಯೋಚನೆ ಮಾಡಲು—ಅಮ್ಮಾ—ಅಮ್ಮಾ ಎಂಬ ಆ ಕೂಗಿಗೆ ಅರ್ಥವೇನು ಎಂಬುದು ನನಗೆ ಚೆನ್ನಾಗಿ ಗೊತ್ತು. ಯಾವಾಗಲೂ ನನ್ನ ಹತ್ತಿರ ಓಡಿ ಬರುವುದೇ.

ಶಾರ : (ಲೇಡಿ ಬ್ರಿಟೊಳ ಪಕ್ಕೆಲುಬುಗಳನ್ನು ತನ್ನ ಕೊನೆ ಬೆರಳುಗಳಿಂದ ಮುಟ್ಟಿ, ಬೈಸಿಕಲ್ ಹಾರನ್ ಅನ್ನು ಅನುಕರಿಸುತ್ತ) ಪಿಪ್—ಪಿಪ್ !

ಲೇಡಿ ಬ್ರಿಟೊ : (ತುಂಬ ಕುಪಿತಳಾಗಿ) ಪಿಪ್-ಪಿಪ್ ಎಂದು ನನಗೆ ಅನ್ನುವುದಕ್ಕೆ ನಿನಗೆ ಎಷ್ಟು ಧೈರ್ಯ ಶಾರ ? ನೀವಿಬ್ಬರೂ ತುಂಬ ತುಂಟ ಮಕ್ಕಳು. ನಿನಗೇನು ಬೇಕು ಬಾರ್ಬರ ?

ಬಾರ್ಬರ : ಡಾಲ್ಲಿ ಒಡನೆ ಸಂಸಾರ ಮಾಡಲು, ಹಳ್ಳಿಯಲ್ಲಿ ನನಗೊಂದು ಮನೆ ಬೇಕು. (ಅವಳ ಸೆರಗನ್ನು ಎಳೆಯುತ್ತ) ಬಾ, ಹೇಳು, ಯಾವುದನ್ನು ತೆಗೆದುಕೊಳ್ಳಬೇಕೆಂದು.

ಅಂಡರ್‌ಷಾಫ್ಟ್ : (ಕಸಿನ್ಸ್‌ಗೆ) ನಾಳೆ ಬೆಳಿಗ್ಗೆ, ಆರು ಗಂಟೆಗೆ ಸರಿಯಾಗಿ, ಯೂರಿಪಿಡೇಸ್.

——

## ಅನುಬಂಧ 1

# ಮುನ್ನುಡಿಗಳು

# ಆಗ್ರಹ

## I

ಗದಾಯುದ್ಧದಲ್ಲಿ ತೊಡೆ ಮುರಿದು ಬಿದ್ದ ದುರ್ಯೋಧನನ ಸ್ಥಿತಿಯನ್ನು ಕಂಡು ಕೆರಳಿದ ಅಶ್ವತ್ಥಾಮನ ಕ್ರೋಧ ಆ ರಾತ್ರಿ ಪಾಂಡವ ಪಾಂಚಾಲ ಪಾಳೆಯದಲ್ಲಿನ ಎಲ್ಲರನ್ನೂ ಕೊಚ್ಚಿ ಕೊಲೆ ಮಾಡಿ ಕೋಡಿವರಿಯಿತು. ಮರುದಿನ ಭೀಮನೂ ಅವನನ್ನು ಹಿಂಬಾಲಿಸಿ ಕೃಷ್ಣ ಪಾಂಡವರೂ ಅಶ್ವತ್ಥಾಮನನ್ನು ಹುಡುಕಿಕೊಂಡು ವ್ಯಾಸರ ಆಶ್ರಮಕ್ಕೆ ಹೋಗುವರು. ಅವನ ದುರ್ಮದ ಯಾವ ನಯಕ್ಕೂ ಸಗ್ಗದಿರಲು ಕೃಷ್ಣನು ಆಗ್ರಹಗೊಂಡು ಅವನಿಂದ ಪಾಂಡವರಿಗಾಗಲಿ ಲೋಕಕ್ಕಾಗಲಿ ಕೇಡು ತಟ್ಟದಂತೆ ಅವನಿಗೆ ಶಾಪವನ್ನು ಕೊಟ್ಟ ಕಥೆ ಈ ನಾಟಕದ ವಸ್ತು. ಗದಾ ಸೌಪ್ತಿಕ ಪರ್ವಗಳಲ್ಲಿ ಅಡಕವಾಗಿರುವ ಕಥೆಯ ಒಂದು ಭಾಗವನ್ನು ನಾನು ಈ ರೂಪಕ್ಕೆ ತಿರುಗಿಸಿಕೊಂಡಿದ್ದೇನೆ. ಕಥೆ ಮಹಾಭಾರತವನ್ನು ಬಹಳ ಹತ್ತಿರದಲ್ಲಿ ಹಿಂಬಾಲಿಸುತ್ತದೆ. ಅಲ್ಲಿನ ಮಾತುಗಳನ್ನೇ ಸಾಧ್ಯವಾದಲ್ಲೆಲ್ಲ ನಾನು ಕನ್ನಡಕ್ಕೆ ಇಳಿಸಿಕೊಂಡಿದ್ದೇನೆ. ಮಹಾಭಾರತದಲ್ಲಿರುವಂತೆ ಈ ಪರ್ವಗಳ ಕಥೆಯನ್ನು ತಿಳಿದ ಹೊರತು ಜನರಿಗೆ ಗದಾಯುದ್ಧ ಕಾಲದಲ್ಲಿಯೂ ಸೌಪ್ತಿಕದ ಕೊಲೆಯಲ್ಲಿಯೂ ಅಶ್ವತ್ಥಾಮಶಾಸನದ ಸಂಬಂಧದಲ್ಲಿಯೂ ಕೃಷ್ಣನ ಸ್ಥಾನವೇನೆಂಬುದರ ಅರಿವಾಗದು. ಕೃಷ್ಣನ ಕೋಪವನ್ನು ಹೊತ್ತಿಸಿ ಮೂರು ಸಾವಿರ ವರ್ಷಗಳ ಕಾಲ ಅನುಭವಿಸಬೇಕಾದ ಶಾಪವನ್ನು ಹೊತ್ತ ಅಶ್ವತ್ಥಾಮನ ಗತಿಯನ್ನು ಕಂಡು ಕನಿಕರಪಟ್ಟು ನಾನಂತೂ ಭಯದಿಂದ ನಡುಗಿದ್ದೇನೆ. ಹಾಗೆಯೇ ಅದನ್ನು ನೋಡುನೋಡುತ್ತ ಯಾವ ದೇವರ ದಯದಿಂದಲಾದರೂ ಮಾನವನ ಮನೋದೌರ್ಬಲ್ಯಗಳು ಅವನನ್ನು ಮುಳುಗಿಸದಂತೆ ಅವನ ಬದುಕು ನೇರವಾಗಿ ಮಂಗಳಕ್ಕೆ ತಿರುಗಲಿ ಎಂದು ಬಯಸಿದ್ದೇನೆ. ಯಾರು ಎಷ್ಟು ಬಯಸಿದರೆ ಏನು ? ಸಾತ್ವಿಕಕ್ಕೆ ತಿರುಗಬೇಕಾದ ಪ್ರವೃತ್ತಿಗಳೆಲ್ಲ ರಾಗದ್ವೇಷಗಳ ದಾಳಿಯಲ್ಲಿ, ತಾಮಸಕ್ಕೆ ಸೆಳೆಯುವುವು ; ಬುದ್ಧಿಯು ಹದ ಕೆಡುವುದು ; ದುರ್ಬಲ ಮನುಷ್ಯನ ಆತ್ಮನಾಶ ಆಗುತ್ತಲೇ ಇರುವುದು. ಅಂತಹ ದೃಶ್ಯವೊಂದು ಈ ನಾಟಕದಲ್ಲಿ ಕಣ್ಣಿಗೆ ಕಾಣಿಸಬಹುದೆಂದು ನನ್ನ ನಂಬಿಕೆ.

ಪುಸ್ತಕದ ಕವಚದ ಮೇಲೆ ಅಚ್ಚಾಗಿರುವ ಚಿತ್ರವನ್ನು ಕಥೆಗೆ ಹೊಂದಿಕೆಯಾಗುವಂತೆ ಇಷ್ಟು ಚೆನ್ನಾಗಿ ಮಾಡಿಕೊಟ್ಟುದಕ್ಕಾಗಿ ನನ್ನ ಮಿತ್ರರಾದ ಶ್ರೀಮಾನ್ ಬಿ. ವೆಂಕೋಬರಾಯರಿಗೆ ನಾನು ಬಹಳ ಋಣಿಯಾಗಿದ್ದೇನೆ. ಎಂದಿನಂತೆಯೇ ನನ್ನ

ಮೇಲಿನ ಪ್ರೀತಿಯಿಂದ ಅಚ್ಚಿನ ಒರಟು ಪತ್ರಿಕೆಗಳನ್ನು ಓದಿ ತಿದ್ದಿಕೊಟ್ಟ ಮಿತ್ರರಿಗೂ ಇತರ ವಿಧವಾದ ಸಲಹೆಗಳನ್ನೂ ಉತ್ತೇಜನವನ್ನೂ ಕೊಟ್ಟಿರುವ ಹಿರಿಯರಿಗೂ ನನ್ನ ವಂದನೆಗಳನ್ನು ಸಮರ್ಪಿಸುತ್ತಿದ್ದೇನೆ.

ವಿ.ಸೀ.

## II

ಇಪ್ಪತ್ತು ವರ್ಷಗಳ ತರುವಾಯ ಈ ನಾಟಕ ಪುನಃ ಅಚ್ಚಾಗುತ್ತಿದೆ. ಈ ಅವಕಾಶವನ್ನು ದೊರಕಿಸಿಕೊಟ್ಟದ್ದಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ನಾನು ಋಣಿ.

ನಾಟಕವನ್ನು ಓದಿ ಮೆಚ್ಚಿದ ಕೆಲವು ಮಿತ್ರರು ನಾನು ಅಶ್ವತ್ಥಾಮನನ್ನು ಕೊಲ್ಲದೆ ಚಿರಂಜೀವಿಯಾಗಿಯೇ ಉಳಿಸಿದೆನೆಂಬಂತೆ ಮಾತನಾಡಿದ್ದುಂಟು. ನನ್ನ ಪೂಜ್ಯ ಗುರುಗಳಾದ ಶ್ರೀಯುವರ ಅಶ್ವತ್ಥಾಮನ್ ನಿಜವಾಗಿ ಚಿರಂಜೀವಿಯೊ ಮೂರು ಸಾವಿರ ವರ್ಷದ ಶಾಪವನ್ನು ಹೊತ್ತು ದುಃಸ್ಥಿತಿಯಲ್ಲಿ ಉಳಿಯಬೇಕಾಗಿ ಬಂದ ಈತನು ಚಿರಂಜೀವಿಯೊ ಕನ್ನಡ ಬಾಂಧವರು ತಾವೇ ನಿರ್ಣಯ ಮಾಡಿಕೊಳ್ಳಬೇಕು. ಮೂಲ ಕಥೆಯಲ್ಲಿ ಆತನ ಗುಣ ಕರ್ಮ ಹೇಗೆ ರೂಪುಗೊಂಡಿದೆ ಎಂಬುದನ್ನು ಕಾಣಿಸುವುದು ಮಾತ್ರ ಇಲ್ಲಿನ ಕ್ರಿಯೆ. ಬೇರೆ ಪುರಾಣ ಐತಿಹ್ಯ ಹೇಗೇ ಇರಲಿ ಆತನು ಹತನಾದನೆಂದು ಕೇಳಿ ದ್ರೋಣಾಚಾರ್ಯರು ಶಸ್ತ್ರಸಂನ್ಯಾಸ ಮಾಡಿ ತೀರಿಕೊಂಡರು. ಮಹಾಭಾರತದ ಗದಾಸೌಪ್ತಿಕಗಳಲ್ಲಿ ಅಶ್ವತ್ಥಾಮನ ಗತಿ ಹೀಗಾಯಿತು. ಉಳಿದುದು ಸದ್ಯಕ್ಕೆ ನನ್ನ ಭಾಗ. ವಿಮರ್ಶೆಗೆ ಬಂದುದು. ಚಿರ ಅಚಿರಗಳ ಚರ್ಚೆ ಇಲ್ಲಿ ಬೇಡ.

ಈ ನಾಟಕವನ್ನು ಒಂದು ಸಲ ಬೆಂಗಳೂರಲ್ಲಿ—ಸುಮಾರು ೧೯೩೩ ರಲ್ಲೆಂದು ಕಾಣುತ್ತದೆ—ಗೆಳೆಯರು ಆಡಿದರು. ಬೆಂಗಳೂರು ಸೆಂಟ್ರಲ್ ಕಾಲೇಜ್ ಯೂನಿಯನ್ನಿನ ಉತ್ಸವ ಸಮಾರಂಭ ನಡೆದಿತ್ತು. ಅದರ ಅಂಗವಾಗಿ ನಡೆಯಿತು ಪ್ರಯೋಗ. ವಿಶ್ವಾಸದಿಂದ ಅದರ ಸೂತ್ರಧಾರಿಕೆಯನ್ನು ಹೊತ್ತು ಎಲ್ಲ ನಿರ್ದೇಶನವನ್ನು ಮಾಡಿದವರು ಒಬ್ಬ ಮಾನ್ಯ ಮಿತ್ರರು. ಆ ಹೊತ್ತಿಗೆ ನನ್ನ ಭಾಗ್ಯ—ಬೆಂಗಳೂರಿಗೆ ಅಮೇರಿಕದ ಒಬ್ಬ ಮಹಿಳೆಯನ್ನು ತಂದಿತ್ತು. ಆಕೆ ವಿಶೇಷ ವಿಚಕ್ಷಣೆಯಿಂದ ಇದಕ್ಕೆ ಬೇಕಾದ ರಂಗ ವ್ಯವಸ್ಥೆ, ದೃಶ್ಯವಿಶೇಷಗಳನ್ನು ಒದಗಿಸಿದರು. ಆಕೆ ಇದಕ್ಕಾಗಿ ಪಟ್ಟಶ್ರಮ, ಇದು ಚೆನ್ನಾಗಬೇಕು, ಇದರಿಂದ ಹೊಸ ಮಾದರಿಯ ಪ್ರಯೋಗವೊಂದು ನಮ್ಮ ಜನಕ್ಕೆ ಅನುಭವವಾಗಬೇಕು ಎಂದು ಮಾಡಿದ ಪ್ರಯತ್ನ ನೆರವೇರಲಿಲ್ಲ. ಒಂದು,—ಸಮಯಕ್ಕೆ ಸರಿಯಾಗಿ ಬೇಕಾದಷ್ಟು ದೀಪಗಳು ಒದಗಲಿಲ್ಲ. ಎರಡು,—ಒದಗಿದ ಒಂದೆರಡು ಸ್ಪಾಟ್ ಲೈಟ್ಸ್ ಎಂಬ ಬಗೆಯ ದೀವಿಗೆಯ ಬೆಳಕನ್ನು ಉದ್ದಿಷ್ಟ ರೀತಿ ಬಳಸಲು

ಸಾಕಷ್ಟು ಅಭ್ಯಾಸ, ಅನುಭವ ಇಲ್ಲವಾಯಿತು. ನಾಟಕ ಕೆಟ್ಟುಹೋಯಿತು. ಶ್ರೀ ವೀರಣ್ಣನವರ ನಾಟಕಶಾಲೆಯಲ್ಲಿ ಬೇಕಾದಷ್ಟು ದೀಪಗಳೂ ಫರದೆಗಳೂ ಇದ್ದುವು. ಅವನ್ನೆಲ್ಲ ಬಳಸದೆ ಬೇರೆ ರೀತಿ ಬೆಳಕಿನ ಪ್ರಯೋಗ ಮಾಡಬೇಕೆಂಬುದಾಗಿತ್ತು ಪೂರ್ವ ನಿರ್ಣಯ. ವಿಸ್ತಾರವಾದ ರಂಗಸ್ಥಳ ಬೇಕೆಂದು ಆ ಫರದೆಗಳನ್ನು ತೆಗೆದು ಹಾಕಿ ಸ್ಥಳವನ್ನು ಬರಿದು ಮಾಡಲಾಗಿತ್ತು. ಇದ್ದುದರಲ್ಲಿ ಬೆಡಗು ತೋರಿಸಬಹುದೆಂದು ಮಾಡಿದ ಪ್ರಯತ್ನ ಪ್ರೇಕ್ಷಕರ ಸಹಜವಾದ ಅಸಹನೆಯಿಂದಾಗಿ ಮುರಿದು ಬಿತ್ತು. ನಿರ್ದೇಶಕರ ಮತ್ತು ಅವರ ಗೆಳೆಯರ ಉತ್ಸಾಹ ಭಂಗವೂ ಆ ಪರದೇಶದ ಸೋದರಿಯ ಪರಿಭವವೂ ಹೇಗೆ ದುರ್ಭರವಾದವು ಎಂಬುದನ್ನು ನಾನು ಕಂಡಿದ್ದೇನೆ. ಅದರ ಪರಿಣಾಮ ಯಾರಾರ ಮೇಲೆ ಹೇಗೆ ಹೇಗೊ ಆಯಿತು. ಎಂದಿಗೇ ಆಗಲಿ ಅವೊತ್ತು ನಾವು ಮಾಡಿದ ಪರೀಕ್ಷಾ ಪ್ರಯೋಗವನ್ನು ನೆರವೇರಿಸಿ ಅಲ್ಲಿಂದ ಇನ್ನು ಮುಂದುವರಿದರೆಯೇ ನಮ್ಮ ರಂಗಪ್ರಯೋಗ ನಾಲ್ಕು ಹೆಜ್ಜೆ ಮುಂದೆ ನಡೆದೀತೆಂದು ಇಂದಿಗೂ ನನ್ನ ಭಾವನೆ. ಆ ಕಾಲ ಬೇಗ ಬರಲಿ.

ಈ ನಡುವೆ ತನ್ನ ತಾಳ್ಮೆ, ಜಾಣತನ, ಸಹೃದಯತೆ, ಕಾರ್ಯಕೌಶಲ, ಕಲಾಕೌಶಲಗಳನ್ನು ನನ್ನ ನಾಟಕಕ್ಕೆ ನೆರವಾಗಿತ್ತ ಸೋದರಿ ನೀಲ ನಾಗಿಣೀದೇವಿಯವರಿಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ. ಆಕೆಯ ಕಥೆ ಇಲ್ಲಿ ವಿಚಿತ್ರವಾಗಿ ಬೆಳೆದು, ಅಪಖ್ಯಾತಿ ಪಟ್ಟು ಆಕೆ ತನ್ನ ನಾಡಿಗೆ ದುಃಖದಲ್ಲಿ ಹಿಂತಿರುಗಬೇಕಾಯಿತು. ಆ ಸಂಬಂಧದಲ್ಲಿ ನಮ್ಮವರು ನಡಸಿದ ಅನ್ಯಾಯ, ಅಧರ್ಮದ ಭಾಗಗಳು ಸಾಧಾರಣವಲ್ಲ. ಹಲವರಿಗೆ ಮರ್ಯಾದೆ ತರುವಂಥವಲ್ಲ. ಬಹು ಕಷ್ಟ, ನಿಷ್ಠುರ ಕೇಳಿ, ಕಂಡು, ಉಂಡು ಆಕೆ ಹಿಂತಿರುಗಿದಳು. ಆಕೆಯ ಗುಣದ ಮತ್ತು ಯೋಗ್ಯತೆಯ ಪರಿಚಯವು ನನ್ನ ನಾಟಕದ ಸಂಬಂಧದಲ್ಲಿ ನನಗೆ ದೊರೆತದ್ದರಿಂದ ಆಕೆಗೆ ಇಷ್ಟು ಕಾಲವಾದಮೇಲೆ, ಇಷ್ಟು ದೂರದಿಂದ ಕೈಮುಗಿಯುತ್ತಿದ್ದೇನೆ.

ಎರಡನೆಯ ಅಚ್ಚಿನ ನೆರವನ್ನು ಕೊಟ್ಟಿರುವ ಗೆಳೆಯ ನಿಟ್ಟೂರರವರಿಗೂ ಹಬ್ಬು ಅವರಿಗೂ ವಂದನೆಗಳು.

ಬೆಂಗಳೂರು
ಜುಲೈ ೨, ೧೯೫೧

ವಿ.ಸೀ.

# III

ಈ ನಾಟಕಕ್ಕೆ ಇದು ಮೂರನೆಯ ಆವೃತ್ತಿ. ಪುಸ್ತಕದ ಪ್ರತಿಗಳು ಮುಗಿದು ಹೋಗಿರಲು ಅಚ್ಚು ಮಾಡಿಸುವ ಯೋಗ ದೊರೆಯಿತು. ಸಂತೋಷ. ಪ್ರಕಾಶನದ ಭಾರವನ್ನು ಗೆಳೆಯರಾದ ಮೈಸೂರಿನ ಗೀತಾ ಬುಕ್‌ಹೌಸಿನ ಶ್ರೀ ಎಂ. ಸತ್ಯನಾರಾಯಣ ರಾಯರು ಹೊತ್ತಿರುತ್ತಾರೆ. ಅವರಿಗೆ ವಂದನೆಗಳು.

ಅಶ್ವತ್ಥಾಮನ ಚಾರಿತ್ರದಲ್ಲಿ ಯಾವುದೊ ಏನೊ ಅಸ್ಪಷ್ಟಾಂಶವಿರುವಂತಿದೆ. ತಾಯಿಲ್ಲದ ಮಗನನ್ನು ತಂದೆ ದ್ರೋಣನು ಸಾಕಿ ದೊಡ್ಡವನನ್ನಾಗಿ ಮಾಡಿದನು ; ತನಗೆ ತಿಳಿದಿದ್ದ ಶಸ್ತ್ರಾಸ್ತ್ರಗಳ ವಿದ್ಯೆಯನ್ನೆಲ್ಲ ಕಲಿಸಿದನು. ತಾನು ಸೇವೆ ಸಲ್ಲಿಸಿದ ಕುರುರಾಜನಿಗೇ ಅವನೂ ಸೇವೆ ಸಲ್ಲಿಸುವಂತೆಯೂ ಅವನ ಜೊತೆಯಲ್ಲಿ ಬೆಳೆವಂತೆಯೂ ಆಯಿತು. ಪಾಂಡವರಲ್ಲಿ ನ್ಯಾಯವಾಗಿ ಇವನಿಗೆ ಚಲವಿರಬೇಕಿರಲಿಲ್ಲ. ಅವರ ಧಾರ್ಮಿಕ ನಿಲವು ಇವನಿಗೆ ಅರ್ಥವಾಗಿದ್ದಿತು ;—ತಂದೆ, ಭೀಷ್ಮರಿಗೆ ಆಗಿದ್ದಂತೆಯೇ. ಆದರೆ ದುರ್ಯೋಧನನಲ್ಲಿ ಅವನಿಗಿದ್ದ ಪ್ರಭುಭಕ್ತಿ ಅತಿಶಯವಾದ್ದು. ಎಷ್ಟು ಅವನ ವಿಷಯದಲ್ಲಿ ಅಸಮಾಧಾನವಿರಲಿ, ಎಷ್ಟು ಸಲ ಅವನಿಂದ ಉಪೇಕ್ಷಿತನಾಗಿರಲಿ, ದುರ್ಯೋಧನನ ಯಾವುದೊ ಮಿತ್ರಗುಣ, ಪ್ರಭುಗುಣ ಅವನನ್ನು ಆತನಿಗೆ ಕಟ್ಟಿದ್ದವು. ಯುದ್ಧದ ಕಡೆಕಡೆಯ ಭಾಗದಲ್ಲಿ ನಡೆದ ಅನ್ಯಾಯಗಳನ್ನು ಅವನು ಕಂಡಿದ್ದ ; ತನಗೆ ಸೇನಾಧಿಪತಿಪಟ್ಟ ಕಟ್ಟಬೇಕೆಂದು ದುರ್ಯೋಧನನನ್ನು ಕೇಳಿ ಭಂಗಿತನಾಗಿದ್ದ ; ಕರ್ಣನ ಪಕ್ಷಪಾತದಿಂದಾಗಿ ದುರ್ಯೋಧನನು ತನ್ನನ್ನು ಹೀನಾಯಗೊಳಿಸಿದ್ದನೆಂದು ಅರಿತು ಮರುಗಿದ್ದ. ಕೌರವನು ಸರೋವರದಲ್ಲಿ ಮುಳುಗಿದುದಾಗಲಿ ಪಾಂಡವರು ಅವನನ್ನು ಕೆರಳಿಸಿ ಮೇಲಕ್ಕೆಬ್ಬಿಸಲು ಗದಾಯುದ್ಧದಲ್ಲಿ ತೊಡೆಮುರಿದು ಬಿದ್ದುದಾಗಲಿ—ಅವನ ಕಣ್ಣೆದುರಿಗೆ ನಡೆದವಲ್ಲ.

ಮೊದಲೇ ತಂದೆಯ ಸಾವಿಂದ ಕ್ರೋಧಗೊಂಡಿದ್ದವನು ಅವನು. ಈಗ ಗದಾ ಯುದ್ಧದಲ್ಲಿ, ಅನ್ಯಾಯ ವಿಧಾನದಲ್ಲಿ ತೊಡೆ ಮುರಿದು ಬಿದ್ದ ಚಕ್ರವರ್ತಿಗೆ ಕಿರೀಟ ಭಂಗವಾಯಿತೆಂದು ಕೇಳಿ ಭೀಮನ ಮೇಲಿನ ಅವನ ಆಕ್ರೋಶ ಅತೀವವಾಯಿತು. ಸೇಡು ತೀರಿಸಲು ದುರ್ಯೋಧನನಿಂದ ಕಡೆಯ ಅವಕಾಶ ಬೇಡಿದ ; ಅವನೂ ಕೊಟ್ಟ. ಇದು ಸೇನಾಪತ್ಯದಂತೆಯೇ ಆಯಿತು. ಈ ಅಧಿಕಾರ ಕಡೆಗಾದರೂ ತನ್ನ ಪ್ರಭುವಿಂದ ದೊರೆಯಿತೆಂದು ರಾತ್ರಿಯಲ್ಲಿ, ಅಧರ್ಮವೆಂದು ಬಗೆಯದೆ—ಪಾಂಡವ ಪಾಳೆಯಕ್ಕೆ ನುಗ್ಗಿ ಎಲ್ಲರನ್ನೂ ಕೊಂದು ಬರುತ್ತಾನೆ. ಮೊದಲು ಧೃಷ್ಟದ್ಯುಮ್ನ ; ಆಮೇಲೆ ಉಪಪಾಂಡವರು. ಆ ಕುಲದ ನಾಶವಾಗಲಿ ಎಂಬಂತೆ ಕೊಲೆ ನಡೆಯುತ್ತದೆ. ಅಂದು ಪಾಂಡವರು ಅಲ್ಲಿದ್ದಿದ್ದರೆ ಏನಾಗುತ್ತಿತ್ತೊ : ಯಾರ ಊಹೆಗೂ ಬಿಟ್ಟ ಸಂಗತಿ.

ಇದು ನೆರವೇರದಂತೆ ಕೃಷ್ಣ ಅವರನ್ನು ಕಾಪಾಡಿದ. ಅಶ್ವತ್ಥಾಮನ ಚಿರಂಜೀವಿತ್ವ

ಏಕೆ, ಹೇಗೆ ಬಂತೊ ? ಆ ಮಹಾಪ್ರಸಾದ ಅವನಿಗೆ ದೊರೆತ ಸಂದರ್ಭ ಯಾವುದೊ ಸ್ಪಷ್ಟವಿಲ್ಲ. 'ಅಶ್ವತ್ಥಾಮೋಹತಃ ಕುಂಜರಃ' ಎಂದು ಕೂಗು ಕೇಳಿಸಿದಾಗ 'ಕುಂಜರಃ' ಎಂಬ ಮಾತು ಕೇಳದಾದರೂ 'ಅಶ್ವತ್ಥಾಮೋಹತಃ' ಎಂದು ಕೇಳಿಸಿದಾಗ ತಂದೆಗೆ ತಿಳಿದಿರಲಿಲ್ಲವೆ—ತನ್ನ ಮಗ ಚಿರಂಜೀವಿ ಎಂದು ? ಅಥವಾ ಅದು ಈ ಪ್ರಸಂಗದಲ್ಲಿನಂತೆ ಬಂದ ಕೃಷ್ಣನ ಶಾಪರೂಪವಾದ್ದು ಮಾತ್ರವೇಯೊ !

ಐಷೀಕ ಬ್ರಹ್ಮಾಸ್ತ್ರಗಳು ಇಂದಿನ ಅಣ್ವಸ್ತ್ರ, ಜಲಜನಕ ಸ್ಫೋಟಕಗಳಂತೆ. ಅವು ಎದುರಾಳಿಯನ್ನು ಮಾತ್ರವಲ್ಲ ದೊಡ್ಡ ಪ್ರದೇಶವನ್ನೂ ನಾಶಮಾಡುವಂಥವು. ವಿಜ್ಞಾನದ ಪರಿಣಾಮದಿಂದಾಗಿ ಇಂಥವು ನಿಜವೆಂದು ಎರಡನೆಯ ಮಹಾಯುದ್ಧ ಕಾಲದಲ್ಲಿ ಹಿರೋಷಿಮಾ ಮುಂತಾದಲ್ಲಿ ತಿಳಿಯಿತು. ಇದು ಶಕ್ಯವೆಂದು ನಾವು ಕಾಲೆಜಲ್ಲಿ ಓದಿದ ಎಚ್. ಜಿ. ವೆಲ್ಸರ ಕಾದಂಬರಿ "World Set Free" ಕಲ್ಪಿಸಿತ್ತು. ಇಂದು ಅದಮ್ಯ ಭೀಕರವಾದ, ಹತ್ತಾರು ಲಕ್ಷ ಪಟ್ಟು ಹೆಚ್ಚು ನಾಶಕರ ವಿಜ್ಞಾನತಂತ್ರವನ್ನು ಬಳಸಬಹುದಾಗಿದೆ. ನಾಡು ನಾಡುಗಳನ್ನೇ ಉರಿಸಿ ನಾಶಮಾಡಬಲ್ಲ, ಬಹುಕಾಲ ಭೂಮಿಯನ್ನು ಕೆಡಿಸಬಲ್ಲ ಈ ಶಕ್ತಿಗಳು ಕೆಲವು ರಾಷ್ಟ್ರಗಳ,—ಮುಖ್ಯವಾಗಿ ಇಬ್ಬರ ಕೈಯಲ್ಲಿ ಈಗ ಸಿದ್ಧವಿವೆ. ಬಳಸಿದರೆ ಇಬ್ಬರೂ—ಲೋಕದ ಬಹುಭಾಗ—ನಾಶ ವಾಗುವ ಭೀತಿ ಇವರ ಕೈಯನ್ನು ತಡೆದು ಶಾಂತಿಗೆ ಪ್ರೇರೇಪಿಸಿದೆ. ರಾಸಾಯನಿಕ ಪದಾರ್ಥಗಳ, ವಿಷಕ್ರಿಮಿಗಳ ಪ್ರಯೋಗ ಸಲ್ಲದು ; ಡಂಡಂ ತೋಟೆ, ನಾಪಾಮ್ ಸ್ಫೋಟಕಗಳನ್ನು ಬಳಸತಕ್ಕದ್ದಲ್ಲ-ಎಂದು ಮುಂತಾಗಿ ಅಂತರರಾಷ್ಟ್ರೀಯ ಸಮಯಗಳು ಏರ್ಪಟ್ಟಿವೆ. ಅವನ್ನು ಬಳಸುವುದು ಅಧರ್ಮ, ಸಾರ್ವಮಾನವ ನಿಷಿದ್ಧ ಎಂದು ಗೊತ್ತಾಗಿವೆ. ಹಿಂದೆಯೂ ಹೀಗೇ : ಶಸ್ತ್ರವಿದ್ದವನು ಇಲ್ಲದಿರುವವನ ಮೇಲೆ ಶಸ್ತ್ರ ಪ್ರಯೋಗ ಮಾಡಬಾರದು ; ಅವಿಲ್ಲದವನ ಮೇಲೆ ಅಸ್ತ್ರಪ್ರಯೋಗ ಸಲ್ಲದು ; ರಥ, ಅಶ್ವ ಇಲ್ಲದವರ ಮೇಲೆ ಇರುವವರು ಯುದ್ಧ ಮಾಡಬಾರದು—ಎಂಬ ಸಮಯ ಗಳಿದ್ದವು. ಇಂಥ ಸಮಯಗಳು ನಾಶಕಾಂಡಗಳನ್ನು ಒಂದು ಹದದಲ್ಲಿಡುವ ಧರ್ಮ ಸಂಕೇತಗಳಾಗುತ್ತವೆ ;—ಎಂದಿಗೂ.

ಆ ಬಲಗಳಿರುವವರಿಗೆ ಚಪಲ, ಮದ ಉಂಟಾಗುವುದು ಮೆಂಡು. ಅವನ್ನು ತಡೆದುಕೊಂಡಲ್ಲದೆ ಅವರ ನಾಶಕ ಶಕ್ತಿ ಮುರಿಯದು. ಮನಸ್ಸಿನಲ್ಲಿ ಮದ, ಕ್ರೋಧ, ಆವೇಶಗಳಿರುವಾಗ ಅವು ಮುರಿಯದೆ ಕೈಯಲ್ಲಿನ ಸಾಧನಗಳನ್ನು ಉಪಯೋಗಿಸುವ ಪ್ರವೃತ್ತಿ ಹೋಗದು. ಕ್ಷತ್ರಿಯಾಣಾಂ ಚ ಹಿ ಧನುರ್ಹುತಾಶಸ್ಯ ಇಂಧನಾನಿ ಚ । ಸಮೀಪತಃ ಸ್ಥಿತಂ ತೇಜೋ ಬಲಮುಚ್ಛ್ರಯತೇ ಭೃಶಂ ॥—ಎಂದು ಸೀತೆ ರಾಮನಿಗೆ ಹೇಳಿದ ಮಾತುಂಟು. ಅವುಗಳ ಪ್ರಯೋಗ ಮಾಡದಿರಲು ತಾಳ್ಮೆ ಬೇಕು, ಸಹನೆಬೇಕು. ಅಂಥ ತಾಳ್ಮೆ, ಸೈರಣೆ ಅಶ್ವತ್ಥಾಮನಿಗಿರಲಿಲ್ಲ ; ಅರ್ಜುನನಿಗಿತ್ತು. ಎಂದೂ ಹೀಗೇ. ದುಷ್ಟ ಪ್ರವೃತ್ತಿಗಳನ್ನು ದಮನ ಮಾಡಿದ ಹೊರತು ಧರ್ಮಕ್ಕೂ ಲೋಕಹಿತಕ್ಕೂ

ಉಳಿಗಾಲವಿಲ್ಲ. ಶಸ್ತ್ರಸಜ್ಜು, ಯಂತ್ರತಂತ್ರ ಸಾವಿರವಿದ್ದಾವು. ಲೋಕಪೀಡೆಗೆ ಅವನ್ನು ಉಪಯೋಗಿಸದಿರುವ ಮನಃಪ್ರವೃತ್ತಿ ಇಲ್ಲವಾದರೆ ಅಂಥ ಶಕ್ತಿ ರಾಕ್ಷಸವಾಗುತ್ತದೆ. ಆ ಪ್ರವೃತ್ತಿ ನಾಶವಾಗಬೇಕು. ಇಲ್ಲವಾದರೆ ಲೋಕಹಿತವನ್ನು ಕಾಯಬಲ್ಲ ಕೃಷ್ಣನಂಥವರ ಸತ್ಯಾಗ್ರಹ ಒದಗಬೇಕು. ಸಮಯದಲ್ಲಿ ತಿಳಿವಳಿಕೆ ಕೊಟ್ಟು ಸೈರಣೆ ಬೋಧಿಸುವ ವ್ಯಾಸ ನಾರದರ ಧರ್ಮೋಪದೇಶ ದೊರಕಬೇಕು.

ನಿಜವಾಗಿ ಇದು ಸಂಸ್ಕಾರ ಕ್ರಿಯೆ. ಕಾರ್ಯಪ್ರವೃತ್ತಿಯ ಹಿಂದೆ ಮನೋವೃತ್ತಿ, ರಾಗದ್ವೇಷಗಳಿರುತ್ತವೆ ; ಇವನ್ನು ಶುಚಿಗೊಳಿಸಿ ಹಿತದಲ್ಲಿ, ಮಿತದಲ್ಲಿ ಇಟ್ಟುಕೊಳ್ಳುವಾದರೆ ಬೇರೆ ಯಾವುದೂ ದುಷ್ಟಶಕ್ತಿಗಳನ್ನು ಉಪಶಮನಗೊಳಿಸಲಾರದು. ಇವನ್ನು ಶುಚಿಗೊಳಿಸುವುದು, ಶೋಧಿಸುವುದು, ಹದಗೊಳಿಸುವುದು ಸಮಸ್ತ ವಿದ್ಯಾ ಶಿಕ್ಷಣದ, ಸಮಸ್ತ ಸಂಸ್ಕಾರಕ್ರಿಯೆಯ ಮೊದಲ ಯತ್ನ. ಐಷೀಕ, ಬ್ರಹ್ಮಶಿರಸ್ ಮುಂತಾದವು ಹಿಂದಿನ ಕಾಲದ ಮಾತುಗಳು. ಅವನ್ನು ನಂಬಿದವರಿಗೆ ಇಂದಿನ ಶಸ್ತ್ರಾಸ್ತ್ರಗಳ ರಹಸ್ಯ ಗೊತ್ತಾಗಬಲ್ಲದು.

ಇದು ಪೂರ್ವಕಥೆ. ಕ್ರೋಧಪ್ರಸಂಗದಲ್ಲಿ ಒಂದು ಕಡೆ, ದುರ್ದಮ್ಯ ಆವೇಶ, ಇನ್ನೊಂದು ಕಡೆ ಸಂಯಮ ಹೇಗೆ ಕಾರ್ಯಮಾಡಿದವೆಂಬುದನ್ನು ಅಶ್ವತ್ಥಾಮ ಅರ್ಜುನರ ಕಾರ್ಯಗಳು ತೋರಿಸಿಯಾವು.

ಕೃಷ್ಣನ ಪಾತ್ರ ಕೃಷ್ಣನಿಗೆ ತಕ್ಕುದು.

ಈಚೆಗೆ ಒಬ್ಬ ಹಿರಿಯರು ಹೇಳಿದರು : ಅಶ್ವತ್ಥಾಮನು ಇನ್ನೂ ಇದ್ದಾನೆ, ಅವನನ್ನು ಕಂಡವರುಂಟು ಎಂದು. ಅದಕ್ಕೆ ಎರಡರ್ಥವಿರಬಲ್ಲದು. ಅವನು ಚಿರಂಜೀವಿ ಎಂಬ ಸಾಮಾನ್ಯ ಅರ್ಥದ ಪ್ರತೀಕ ಅದು. ಯಾರ ಕಣ್ಣಿಗೆ ಬಿದ್ದನೊ ಅವರಿಗೆ ವಿಶೇಷ ದೃಷ್ಟಿಯಿದೆಯೆಂದಾಯಿತು—ಋಷಿಗಳನ್ನು ದೆವ್ವಗಳನ್ನು ಕಾಣುವವರಿಗೆ, ಯಕ್ಷಿಣಿ ಮುಂತಾದ ಶಕ್ತಿಗಳನ್ನು ಕಾಣುವವರಿಗೆ ಇರುವಂತೆ ಎನ್ನಬಹುದು. ಅಥವಾ ಆ hallucinationಒ ಅವುಗಳ ಆವಾಹನ ಶಕ್ತಿಯೊ ಇರಬಲ್ಲದೇನೊ. ಇನ್ನೊಂದರ್ಥ : ಕೃಷ್ಣನು ಕೊಟ್ಟ ಮೂರು ಸಾವಿರ ವರ್ಷಗಳ ಶಾಪದ ಕಾಲ ಇನ್ನೂ ಮುಗಿದಿಲ್ಲವೆಂದು. ಎಂದರೆ ಮಹಾಭಾರತದ ಕಥೆ ಮುಗಿದು ಇನ್ನೂ ಮೂರು ಸಾವಿರ ವರ್ಷ ಕಾಲ ಆಗಿಲ್ಲವೆಂದು !

ಅಥವಾ, ಚಿರಂಜೀವಿತಕ್ಕೆ ಆ ಮೂರು ಸಾವಿರ ವರ್ಷಗಳೆಂಬ ಅರ್ಥವೊ !

ಇನ್ನೊಂದು ಸಂಗತಿ : ದುರ್ಯೋಧನನ ಕಥೆಯನ್ನು ಕೇಳಿ ಯಾರ ಕಣ್ಣು ಕೆರಳಿ, ಅವರ ಕಣ್ಣಿಂದ ಅವಾರ್ಯವಾಗಿ ನೀರಧಾರೆ ಸುರಿಯುವುದೊ ಅಲ್ಲಿ ಅಶ್ವತ್ಥಾಮ ಬದುಕಿದ್ದಾನೆ ಎಂಬುದುಂಟೆನ್ನುವರು. ಆ ಅಂಶ ಕ್ರೋಧೋದ್ಭೂತವಾದ್ದೊ ಕರುಣೆಯ, ಪ್ರೀತಿಯ ಧಾರೆಯೊ ತಿಳಿಯಬೇಕು. ಇಲ್ಲವೆ, ಸ್ನೇಹದ ಒಂದು ಭಾವಾತಿಶಯ ಅವರಲ್ಲಿ ಅಂಥ ಪರಿಣಾಮವನ್ನುಂಟು ಮಾಡುತ್ತದೆ ಎನ್ನಬಹುದೆ ? ಆ ಮಾತು ಬೇಡ,

ಈ ನಾಟಕದಲ್ಲಿನ ದೃಶ್ಯಗಳು ಮನುಷ್ಯನ ಬೇರೆ ಬೇರೆ ಮನಸ್ಸಿನ ನೆಲೆಗಳನ್ನು ಕಾಣಿಸಿದರೆ ನನ್ನ ಪಾಲಿಗೆ ಅಷ್ಟು ಸಾಕು. ಬೆಲೆಗಳು ಕಣ್ಣಿಗೆ ಕಟ್ಟಲಿ ಎಂದು ಮಹಾಭಾರತದಲ್ಲಿ ನಾಲ್ಕೈದು ಕಡೆ ಉದ್ಧೃತವಾಗಿರುವ ಒಂದು ಪದ್ಯವನ್ನು ಮೂಲಾರ್ಥ ಸಂಕೇತದಂತೆ ಇಲ್ಲಿ ಅಚ್ಚು ಮಾಡಿದ್ದೇನೆ. ಕೃಷ್ಣನ ಬದುಕಿನಲ್ಲಿ ಈ ಎಣಿಕೆ ಜಾಗ್ರತವಾಗಿತ್ತೆಂಬುದು ನನ್ನ ಭಾವನೆ. ಅದು ಧರ್ಮದ ಒಂದು ಮಾನ; ಅದರ ಸೂಕ್ಷ್ಮ ಪರೀಕ್ಷಣಕ್ಕೆ ಹೋಗದೆ ಸ್ಥೂಲವಾಗಿಯಾದರೂ ತರತಮ ಭಾವ ಏರ್ಪಡುವ ಹಾಗೆ ಸಂಸ್ಕಾರ ಬೆಳೆದರೆ ಲೋಕ ಇನ್ನೊಂದು ಹೆಜ್ಜೆ ಮುಂದೆ ಹೋದೀತು ಎಂದು ಭಾವಿಸಿದ್ದೇನೆ.

ಹಿಂದೆ ಈ ನಾಟಕವನ್ನಾಡಿದಾಗ ಗೆಳೆಯರಾದ ಶ್ರೀ ಪಿ. ಶ್ರೀನಿವಾಸರಾಯರು ಅಶ್ವತ್ಥಾಮನ ಪಾತ್ರ ವಹಿಸಿದ್ದರು. ಟಿ. ದ್ವಾರಕಾನಾಥ್ ಕೃಷ್ಣ; ಅಜೀಜ್ ಎಂದೊ ಏನೊ ಒಬ್ಬ ಮುಸ್ಲಿಂ ವಿದ್ಯಾರ್ಥಿ ಕೃಪನ ಪಾತ್ರವನ್ನು ನಿರ್ವಹಿಸಿದ್ದರು. ಬಿ. ವಿ. ರಾಮರಾಯರು ದುರ್ಯೋಧನನ ಪಾತ್ರವನ್ನು ವಹಿಸಿದ್ದರು. ಸಾಗರದಲ್ಲಿದ್ದ ಬಾಲ ಗಂಗಾಧರ್ ಎಂಬುವರೂ ಇವರ ಮಿತ್ರರೂ ತುಂಬಾ ಪ್ರೀತಿಯಿಂದ ನೀಲ ನಾಗಿಣೀ ದೇವಿಯವರ ನೆರವಿಗೆ ನಿಂತು, ವೇಷ, ಸಜ್ಜು, ರಂಗಮಂಟಪಗಳ ಅಲಂಕರಣೆಗೆ ದುಡಿದರು. ಎಲ್ಲರ ಹೆಸರೂ ನೆನಪಿಗೆ ಬಾರವು. ಅಂದು ಇದಕ್ಕೆ ನೆರವಾದ ಎಲ್ಲರಿಗೂ ನನ್ನ ಕೃತಜ್ಞತೆಯನ್ನು ಈ ಮೂಲಕ ಸಮರ್ಪಿಸುತ್ತಿದ್ದೇನೆ.

ಮತ್ತೊಂದು ಸಲ ಈ ಸಣ್ಣ ನಾಟಕ ಅಚ್ಚಾಗಿ ಹೊರಗೆ ಬರುವ ಸಂದರ್ಭ ಒದಗಿದುದಕ್ಕಾಗಿ ನಾನು ಹೃಷ್ಟನಾಗಿದ್ದೇನೆ. ಹೊಸಕಾಲದ ನಾಟಕ ರಚನಾ ತಂತ್ರ, ಪ್ರಯೋಗತಂತ್ರ ಅದ್ಭುತವಾಗಿ ಮುಂದುವರಿಯುತ್ತಿದೆ. ಪ್ರಾಚೀನ ಕಾವ್ಯ ವಿಷಯ ಗಳನ್ನೆತ್ತಿಕೊಂಡು ನವ್ಯ ಪಂಥದವರು ಹೊಸಕಾಲದ ನಾಟಕಗಳನ್ನು ರಚಿಸಿದ್ದಾರೆ. ಯೂರೋಪಿನಲ್ಲಿ ಸೇಂಟ್ ಜೋನ್, ಹೆನ್ರಿ IV, ಬೆಕೆಟ್, ಕ್ಯಾಲಿಗುಲ, ಎಲೆಕ್ಟ್ರಾ, ಯೂಲಿಸಿಸ್ ಮುಂತಾದ ವಿಷಯಗಳನ್ನು ಈ ಕಾಲಕ್ಕೆ ದುಡಿಸಿಕೊಳ್ಳುತ್ತಿದ್ದಾರೆ. ಇಲ್ಲಿನ ಒಂದು ನಾಟಕೀಯತೆಗೆ—ಅದು ಇದೆಯೊ ಇಲ್ಲವೊ ನಾ ಕಾಣೆ—ಹಾಗೆ ಒಂದು ಬೆಲೆ ಕಟ್ಟುವುದರ ಮೂಲಕ ಇಲ್ಲಿನ ವಿಷಯವನ್ನು ಒಪ್ಪುವುದಾದರೆ ಸಂತೋಷ. ಇಲ್ಲವಾದರೆ Drama, ದೃಶ್ಯರೂಪಕ ಎಂಬ ವಿಧಾನವನ್ನು ಬಳಸಿ ಇದೊಂದು ಬಗೆಯ ರೂಪಣ ಕ್ರಿಯೆ ಎಂದಾದರೂ ಎಣಿಸಲಿ. ನನಗೆನ್ನಿಸುವುದು Drama, Play ಇವೆರಡಕ್ಕೂ ಇರುವ ವ್ಯತ್ಯಾಸವನ್ನು ವಿಮರ್ಶಕರು ಪರಿಗಣಿಸಬೇಕೆಂದು: ಈ ಸಂಬಂಧದಲ್ಲಿ ವಿಚಾರ ಸಂಕಿರಣವೊಂದು ನಡೆದು ಇವುಗಳ ವ್ಯತ್ಯಾಸಕ್ಕೆ ಸ್ಥಾನನಿರ್ದೇಶನ ಮಾಡಬೇಕೆಂದು. ಇಂದು ಅಮೇರಿಕಾದಲ್ಲಿ ನಾಟಕಕಾರ ನಿರ್ದೇಶಕನ ಜೊತೆ ಕುಳಿತು ನಾಟಕವನ್ನು ರೂಪಿಸ ಬೇಕಂತೆ. ನಾಟಕರಂಗದಲ್ಲಿ ಹೆಚ್ಚಿನ ಪ್ರದರ್ಶನ ಪಡೆದದ್ದೇ ಉತ್ತಮ ನಾಟಕ, ಅಲ್ಲದ್ದು

ನಾಟಕವಲ್ಲ ಎಂಬ ತೀರ್ಮಾನ ಪ್ರಬಲಿಸುತ್ತಿರುವಾಗ ಈ ಅಂಶ ಚರ್ಚೆಗೆ ಬರುವುದು ಮೇಲೇನೊ. Drama as Literary Form ಎಂಬುದೊಂದು ಉಂಟು.

ಸತ್ಯಾಂಶ ಯಾವುದೇ ಇರಲಿ, ಈ ನಾಟಕಕ್ಕೆ ಅವನ್ನು, ನನ್ನ ನಾಟಕದ ಯೋಗ್ಯತೆಯನ್ನು ಹಾಗೆ ಅಳೆಯಬೇಕೆಂದು ನಾನು ಕೇಳುತ್ತಿಲ್ಲ. ಇದು ನನ್ನ ಯಾವುದೊ ಒಂದು ಮನಃಸ್ಥಿತಿಯಲ್ಲಿನ ಒಂದು ಸನ್ನಿವೇಶವನ್ನು ನಿವೇದಿಸುವ ದೃಷ್ಟಿಯಿಂದ ಬರೆದದ್ದು. ಮೂಲ ಕಥೆಯಲ್ಲಿ ಅಶ್ವತ್ಥಾಮನ ಗತಿಯ ಸ್ವರೂಪವನ್ನು ಪ್ರತಿಪಾದಿಸಲು, ವಿಶದಪಡಿಸಲು ; ಅಷ್ಟೇ—ಈ ದುರ್ಗತಿ 'ಅಶ್ವತ್ಥಾಮನ್' ಹಿರಿಮೆಗೆ ಎಂದಿಗೂ ಸರಿತೂಗಲಾರದು ಎಂದು ತೋರಿಸುವುದು. ಅದು ನೆರವೇರಿದಂತಾದರೆ ನಾನು ತೃಪ್ತ. ಉಳಿದುದು ವಿಮರ್ಶಕರ, ಓದುಗರ ಪಾಲಿನ ಭಾಗ ; ಅವರ ಸಂತೋಷಕ್ಕೂ ಬೆಲೆ ನಿರ್ಣಯಕ್ಕೂ ಬಿಟ್ಟುದು. ಅದಕ್ಕೆ ಸರ್ವದಾ ಸ್ವಾಗತ.

ಬೆಂಗಳೂರು
ಆಗಸ್ಟ್ ೧೭, ೧೯೭೧

ವಿ.ಸೀ.

# ಸೊಹ್ರಾಬ್–ರುಸ್ತುಂ

## I

ಇಂಗ್ಲಿಷಿನಲ್ಲಿ ಮ್ಯಾಥ್ಯೂ ಆರ್ನಾಲ್ಡ್ ಅವರ ಸೊಹ್ರಾಬ್ ಅನ್ಡ್ ರುಸ್ತುಂ ಎಂಬ ಕವನವನ್ನು ಓದಿದಂದಿನಿಂದ ನನಗೆ ಅದರಲ್ಲಿ ಪ್ರೀತಿ ಹುಟ್ಟಿತು. ಆ ಕಥೆಯನ್ನು ನಾಟಕರೂಪದಲ್ಲಿ ಕನ್ನಡಿಗರಿಗೆ ಅರ್ಪಿಸಬೇಕೆಂಬ ಕುತೂಹಲವು ಈಗ್ಗೆ ಎರಡು ವರ್ಷಗಳ ಕೆಳಗೆ ಉಂಟಾಯಿತು. ಆದರೂ ಹೋದ ವರ್ಷ ಜೂನ್ ತಿಂಗಳವರೆಗೂ ಏನೂ ಕೆಲಸವಾಗಲಿಲ್ಲ. ಇಂಗ್ಲಿಷ್ ಕವನದಲ್ಲಿರುವ ಕಥಾಭಾಗಕ್ಕೆ ಅದರಲ್ಲಿ ಅಲ್ಲಲ್ಲಿ ಸೂಚಿತ ವಾಗಿರುವ ಹಿಂದಿನ ವೃತ್ತಾಂತವನ್ನೂ ಸೇರಿಸಿ, ಕೊನೆಗೆ ಸೊಹ್ರಾಬನ ತಾಯಿಯನ್ನು ಯುದ್ಧರಂಗಕ್ಕೆ ಕರೆತರಬೇಕೆನ್ನಿಸಿತು. ತಮ್ಮ ಪ್ರೀತಿ ಅಜ್ಞಾನಗಳ ಫಲವಾಗಿ ವಿಧಿ ನಿಯಮದಂತೆ ಮಗನನ್ನು ಕೊಂದ—ಅಹುದು, ಕೊಂದ—ತಾಯಿತಂದೆಯರು ಕೈಮೀರಿ ಹೋದಮೇಲೆ ಮೃತನಾದ ಮಗನ ಇರ್ಕೆಡೆಗಳಲ್ಲಿಯೂ ನಿಂತು ನೋಡುತ್ತಿರುವಂತೆ ಚಿತ್ರವೊಂದು ಕಣ್ಣೆದುರಿಗೆ ನಿಂತು ಒಂದು ದಿನ ಕಾಣಿಸಲು ಆ ದಿನವೇ ಕೆಲಸಕ್ಕೆ ಆರಂಭ ಮಾಡಿ ಕೆಲದಿನಗಳಲ್ಲಿಯೇ ಇದನ್ನು ಮುಗಿಸಿದೆನು. ಹೀಗೆ ಯಾವ ಮೂಲದಲ್ಲಿಯೂ ಇಲ್ಲದಿದ್ದರೂ ತಾಯಿ ತಾಹಮಿನೆಯನ್ನು ಸೊಹ್ರಾಬನ ಮರಣ ಕಾಲದ ಸಮಯಕ್ಕೆ ರಂಗಕ್ಕೆ ಕರೆತಂದಿದ್ದೇನೆ. ಅದರ ಔಚಿತ್ಯ ಸರಿತಪ್ಪುಗಳ ವಿಚಾರವನ್ನು ನಾನು ಮಾಡುವ

ಹಾಗಿಲ್ಲ. ಸುಲೇಮಾನನು ಕೇವಲ ಕಾಲ್ಪನಿಕ ವ್ಯಕ್ತಿ; ಇವನಿಂದ ಕಥೆಯ ಬೆಳವಣಿಗೆಗೂ, ಒಂದು ಬಗೆಯಾಗಿ ರಸಕ್ಕೂ ಪೋಷಣೆಯಾಗಬಹುದೆಂದು ಈ ಪಾತ್ರವನ್ನು ರಚಿಸಿದೆ. ಮೂರು ತಿಂಗಳ ಅವಧಿಯೊಳಗಾಗಿ ತಂದೆಯನ್ನು ಕರೆತರುತ್ತೇನೆಂದು ಸೊಹ್ರಾಬನು ತಾಯಿಗೆ ಮಾಡಿದ ವಾಗ್ದಾನವು ಕಥೆಗೆ ಒಂದು ಕಾಲದ ಕಟ್ಟನಂತಿರುವುದು. ಮೊದಲಿನಿಂದ ಕೊನೆಯವರೆಗೂ ತಾಯಿ ತಂದೆ ಮಗ ಈ ಮೂವರ ವ್ಯಾಪಾರಗಳ ಮೇಲೂ, ವಿಧಿಯು ಗಿಡುಗನಂತೆ ಹಾರಾಡಿ ಅವರ ಕಾರ್ಯಗಳನ್ನು ನಿರ್ಧರಿಸುತ್ತಿದ್ದಿತೆಂಬುದೂ ಇಲ್ಲಿ ಸ್ವಲ್ಪ ಮಟ್ಟಿಗೆ ಹೊರಪಡಬಹುದು.

ಫರ್‌ದೂಸಿಯ ಷಾಹನಾಮಾ ಎಂಬ ಮಹಾಕಾವ್ಯದಲ್ಲಿ ಸೊಹ್ರಾಬ್-ರುಸ್ತುಮರ ಕಥೆಯು ಒಂದು ಉಪಾಖ್ಯಾನ ರೂಪದಲ್ಲಿದೆ. ಅದೇ ಆರ್ನಾಲ್ಡರ ಕವಿತೆಗೂ ಈ ರೂಪಕಕ್ಕೂ ಮೂಲ.

ಸರಳರಗಳೆ ಪದ್ಯಗಳಲ್ಲಿಯೂ, ಗದ್ಯಪದ್ಯ ಸಮ್ಮಿಶ್ರವಾದ ಸಾಂಪ್ರದಾಯಿಕ ರೀತಿಯಲ್ಲಿಯೂ ಬರೆಯದೆ, ನಮ್ಮ ನಾಡಿನ ದಿನಚರಿಯ ಬಳಕೆಯ ಭಾಷೆಯಲ್ಲಿಯೇ ಇದನ್ನು ಬರೆಯುವ ಯತ್ನಮಾಡಿದ್ದೇನೆ. ಕೃತಕತೆಗೆ ಸ್ವಲ್ಪವೂ ಅವಕಾಶಕೊಡದೆ ಸಂಪೂರ್ಣವಾಗಿ ರೂಢಿಯ ಮಾತುಗಳಲ್ಲಿಯೇ ಬರೆಯುವುದು ಆಗಿಲ್ಲವಾದರೂ ಬಹು ಮಟ್ಟಿಗೆ ಹಾಗೆ ಮಾಡಲು ಪ್ರಯತ್ನ ನಡೆದಿದೆ. ಕೇವಲ ಈ ಬಳಕೆಯ ಭಾಷೆಯಲ್ಲಿಯೇ ಭಾವದ ಓಟ, ಮನಸ್ಸಿನ ಉದ್ವೇಗ, ಕಾರ್ಯಗಳ ತೀವ್ರತೆ ಮುಂತಾದುವನ್ನು ತರಲು ಸಾಧ್ಯವೇ ಎಂಬ ಪ್ರಶ್ನೆಯು ಈ ಪರೀಕ್ಷಾ ಪ್ರಯತ್ನಕ್ಕೆ ಪ್ರೇರಕವಾಯಿತು. ಆರ್ನಾಲ್ಡರ ಕವಿತೆಯ ಮೇಲಿನ ಪ್ರೀತಿಯು ಹೇಗೆಯೋ ಈ ಚಪಲದ ಬಾಧೆಯೂ ಹಾಗೆಯೇ ಈ ರೂಪಕದ ರಚನೆಯಲ್ಲಿ ಕಾರ್ಯಮಾಡಿದೆ.

ಇದನ್ನು ಬರೆಯುತ್ತಿರುವಾಗಲೂ ಬರೆದಮೇಲೂ ನನಗೆ ಪ್ರೋತ್ಸಾಹವನ್ನು ಕೊಟ್ಟು, ನಾನು ಓದಿದುದನ್ನು ಪ್ರೀತಿಯಿಂದ, ಸಹನೆಯಿಂದ ಕೇಳಿದ-ಅದು ಬಹು ದೊಡ್ಡ ಉಪಕಾರ-ಎಲ್ಲ ಮಿತ್ರರಿಗೂ ; ಅಚ್ಚಾಗುವ ಸಮಯದಲ್ಲಿಯೂ ಇದನ್ನು ನೋಡಿ ತಿದ್ದಿ ಸಹಾಯ ಮಾಡಿರುವ ಇನ್ನೊಬ್ಬ ಪೂಜ್ಯ ಮಿತ್ರರಿಗೂ ; ತಮ್ಮ ಕೈಯಲ್ಲಾಗುವ ಮಟ್ಟಿಗೂ ಈ ಪುಸ್ತಕವನ್ನು ಅಂದವಾಗಿ ಅಚ್ಚುಹಾಕಿಕೊಟ್ಟಿರುವ ಬೆಂಗಳೂರು ಪ್ರೆಸ್ಸಿನವರಿಗೂ ; ಇದರ ಪ್ರಕಾಶನ ಕಾರ್ಯವನ್ನು ಕೈಕೊಂಡು ಈ ಸಂಬಂಧದಲ್ಲಾಗುವ ಎಲ್ಲ ಖರ್ಚು ವೆಚ್ಚಗಳನ್ನೂ ಸಂತೋಷದಿಂದ ಹೊತ್ತಿರುವ ಸ್ನೇಹಿತರಾದ ರಾಮಮೋಹನ ಕಂಪನಿಯ ಅಧಿಕಾರಿಗಳಿಗೂ ಈ ಮೂಲಕವಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

ಬಿ. ಸೀ.

ಬೆಂಗಳೂರು
೧೦-೧-೧೯೩೦

## II

ಮೈಸೂರು ವಿಶ್ವವಿದ್ಯಾನಿಲಯದವರೂ ಮದರಾಸಿನವರೂ ದಯಮಾಡಿ ಈ ಪುಸ್ತಕವನ್ನು ಪಠ್ಯಪುಸ್ತಕವಾಗಿ ಗೊತ್ತು ಮಾಡಿದುದರಿಂದ ಇದಕ್ಕೆ ಎರಡನೆಯ ಆವೃತ್ತಿ ಅಚ್ಚಾಗಲು ಅವಕಾಶ ದೊರೆಯಿತು. ಇಂಥ ಅವಕಾಶವನ್ನು ಕಲ್ಪಿಸಿಕೊಟ್ಟುದಕ್ಕಾಗಿ ನಾನು ಅವರಿಗೆ ಋಣಿಯಾಗಿದ್ದೇನೆ.

ಸ್ನೇಹಿತರಲ್ಲಿ ಒಬ್ಬಿಬ್ಬರು ಇಲ್ಲಿನ ಒಂದೆರಡು ತಪ್ಪುಗಳನ್ನು ಕೃಪೆಮಾಡಿ ತೋರಿಸಿ ಕೊಟ್ಟಿರುವುದರಿಂದ ಅವನ್ನು ತಿದ್ದಿರುವುದಲ್ಲದೆ, ಅಲ್ಲಲ್ಲಿ ಇತರ ಸಣ್ಣ ಮಾರ್ಪಾಟು ಗಳನ್ನೂ ಮಾಡಿದ್ದೇನೆ. ಸುಲೇಮಾನ್, ಮೋತಿ ಎಂಬ ಹೆಸರುಗಳು ಮುಸಲ್ಮಾನೀ, ಇರಾನಿಯಲ್ಲ ; ರುಸ್ತುಮರ ಕಥೆ ಪೂರ್ತಿ ಇರಾನಿ—ಎಂಬುದು ನಿಜ. ಸಾಮಂಗಾನಿನ ರಾಜಕುವರಿಯಾದ ತಾಹಮೈನಾ ಎಂಬಾಕೆಯೂ ಆಕೆಯ ಊರಿನವರೂ ತುರ್ಕೊಮಾನ್ ಅಥವಾ ತುರಾಸಿಯನ್ನರಲ್ಲದೆ ಹೋಗಿರುವುದು ಸಾಧ್ಯವಾದರೂ ಅವರ ಕುಲವೂ ರುಸ್ತುಮನ ಕುಲವೂ ಬೇರೆಯಾಗಿರುವುದು ಸಂಭವ ಎಂಬುದು ನನ್ನ ಎಣಿಕೆಯಾಗಿತ್ತು. ಇರಾನಿನ ಹಲವು ಪ್ರಸಿದ್ಧ ವೀರರು ಸುಲಭವಾಗಿ ಬೆರೆಯದ ಕುಲಗಳ ಸಂಯೋಗದಿಂದ ಹುಟ್ಟಿದವರು. ಆ ರೀತಿ ಸೊಹ್ರಾಬನೂ ಹುಟ್ಟಿದನೆಂದು ತಿಳಿಯುವುದಾದರೆ ನನಗೆ ಒಪ್ಪಿತವೇ. ಅದನ್ನು ಒಪ್ಪದವರು ಆಕೆಯನ್ನು ಶಿರೀನ್ ಎಂದೊ, ಆತನನ್ನು ನಾಸಿರ್ವಾನ್ ಎಂದೊ ಖುಸ್ರೂ ಎಂದೊ ಕರೆಯಬಹುದು. ಕೇವಲ ಚಾರಿತ್ರಿಕ ದೃಷ್ಟಿ ಯಿಂದ ನಾನು ಸಾಂಗತ್ಯವನ್ನು ಪರೀಕ್ಷಿಸಿರಲಿಲ್ಲ.

ಇಲ್ಲಿ ಅಚ್ಚು ಮಾಡಿರುವ ಎರಡು ಛಾಯಾಚಿತ್ರಗಳನ್ನು ಬರೆದುಕೊಟ್ಟ ನನ್ನ ಗೆಳೆಯರಾದ ಶ್ರೀ ಶಿವರಾಮ ಕಾರಂತರವರಿಗೆ ನಾನು ಬಹಳ ಕೃತಜ್ಞನಾಗಿದ್ದೇನೆ.

ಜುಲೈ ೧೯೩೨ ವಿ.ಸೀ.

## III

ಮೂವತ್ತೆರಡು ವರ್ಷಗಳ ತರುವಾಯ ಈ ಪುಸ್ತಕ ಮೂರನೆಯ ಸಲ ಬೆಳಕಿಗೆ ಬರುತ್ತಿದೆ. ಗೆಳೆಯ ಶ್ರೀ ರಾಜರತ್ನಂ ಅವರು ಇದನ್ನು ಸೆಂಟ್ರಲ್ ಕಾಲೆಜ್ ಕರ್ಣಾಟಕ ಸಂಘದ ಪ್ರಕಟನೆಯಾಗಿ ಸೇರಿಸಿಕೊಂಡುದಕ್ಕಾಗಿ ನಾನು ಅವರಿಗೂ ಸಂಘಕ್ಕೂ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಮೈಸೂರು ವಿಶ್ವವಿದ್ಯಾನಿಲಯದವರು ಈ ಪುಸ್ತಕವನ್ನು ಪಠ್ಯಪುಸ್ತಕವಾಗಿ ಗೊತ್ತುಮಾಡಿದ್ದಾರೆ. ಈ ಉಪಕಾರಕ್ಕಾಗಿ ನಾನು ಅವರಿಗೆ ಋಣಿಯಾಗಿದ್ದೇನೆ. ಬಹುಬೇಗ ಈ ಪುಸ್ತಕವನ್ನು ಮುದ್ದಾಗಿ ಅಚ್ಚು

ಮಾಡಿಕೊಟ್ಟ ಬಿ. ಬಿ. ಡಿ. ಪವರ್ ಪ್ರೆಸ್ಸಿನ ಒಡೆಯರಾದ ನರಸಿಂಹ ಮಲ್ಯರಿಗೂ ಅವರ ಮಕ್ಕಳಿಗೂ ನನ್ನ ವಂದನೆಗಳು.

ಜುಲೈ ೧೯೬೪ ವಿ. ಸೀ.

# ಶ್ರೀಶೈಲ ಶಿಖರ

ಮಿತ್ರರಾದ ಶ್ರೀ ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿಗಳು ನನಗೆ ಅನೇಕ ಕತೆಗಳನ್ನು ಹೇಳಿದ್ದಾರೆ. 'ಲೊಡ್ಡು' ಎಂಬ ಕೆಲವು ಪುರಾಣ ಕಥೆಗಳು ಕೂಡ ಅವರು ನನಗೆ ಹೇಳಿರುವ ರೀತಿಯಲ್ಲಿ ತುಂಬಾ ಸೊಗಸಾಗಿವೆ. ನೆನಪು ಪೂಜ್ಯವಾಗಿರುವ ನನಗೆ ಒಂದೇ ಕತೆಯನ್ನು ಅವರು ನಾಲ್ಕಾರು ಬಾರಿ ಹೇಳಿರುವುದೂ ಉಂಟು. ಬೇಸರವಾಗದಂತೆ ಹೊಸ ಮೆರುಗನ್ನೂ ಮಾನವ ವಿಲಾಸವನ್ನೂ ಕೊಡಬಲ್ಲ ಅವರ ಕಥನ ಚಾತುರಿ ಅತಿಶಯವಾದ್ದು. ಕಳೆದ ವರ್ಷ ಒಂದು ಸಂಜೆ ಸುತ್ತಾಡಲು ಹೋದಾಗ ಶ್ರೀ ಶೈಲಕ್ಕೆ ಸಂಬಂಧಿಸಿದ ಒಂದು ಕತೆಯನ್ನು ಹೇಳಿದರು. ಸ್ಥಳ ಪುರಾಣಗಳಲ್ಲಿ, ಉದ್ಧಾರದ ಕತೆಗಳಲ್ಲಿ, ನೀತಿ ಭಕ್ತಿ ಕತೆಗಳಲ್ಲಿ ಇಂಥವು ಸಾವಿರಾರು ಇವೆ. ನಾನೂ ಎಷ್ಟನ್ನೋ ಕೇಳಿದ್ದೇನೆ. ಆದರೆ ಆ ರಾತ್ರಿಯೆಲ್ಲಾ ಇಲ್ಲಿ ಉದ್ಧಾರವಾಗುವ ಒಂದು ಹೆಣ್ಣಿನ ಬಾಳು ದೊಡ್ಡದಾಗಿ ಕಂಡಿತು. ಅದಕ್ಕೆ ಒಂದು ರೂಪ ಕೊಟ್ಟು ಉಳಿಸಬೇಕೆಂದು ಮುಂದಿನ ಮೂರು ಮಧ್ಯಾಹ್ನ ಇದನ್ನು ಹೇಳಿ ಬರಸಿದೆ. ಕತೆ ಸಾಮಾನ್ಯ. ಒಳಗೇ ಹದವಾಗುತ್ತಿರುವ ಮನಸ್ಸು ಒಂದು ಸಂದರ್ಭದಲ್ಲಿ ತನ್ನ ಬಾಳ ಸಿದ್ಧಿಯನ್ನು ಪಡೆಯುತ್ತದೆ. ಶಿವ, ಗೌರಿ, ಮುಕ್ತಿ, ಚಂದನ ಮುಂತಾದವು ನಮ್ಮ ನಾಡಿಗೆ ಪರಿಚಿತವಾದ ಸಂಗತಿಗಳು. ಹೊಸ ಕಾಲದ ನಾವು ಇಂಥ ಕತೆಯನ್ನು ಎತ್ತಿ ಹೇಳುವಾಗ ಸ್ವಲ್ಪ ಮಟ್ಟಿಗಾದರೂ ನಮ್ಮ ರೀತಿ ನೋಡಬೇಕೆನ್ನಿಸುತ್ತದೆ. ಚೌಕಟ್ಟು ಪೌರಾಣಿಕವಾದರೂ ಇಲ್ಲಿ ಕ್ರಿಯಾವಿಧಾನವನ್ನು ರೂಪಿಸುವುದರಲ್ಲಿ ಒಂದೆರಡು ಈ ಕಾಲದ ಪ್ರಕರಣಗಳನ್ನು ಸೇರಿಸಿದ್ದೇನೆ. ಶಿವ ಗೌರಿಯರು ಲೋಕದ ತಂದೆ ತಾಯಿಗಳಾದರೆ ಅವರು ಇಂದಿನ ಮಕ್ಕಳ ಬದುಕನ್ನೂ ವಾತ್ಸಲ್ಯದಿಂದ ನೋಡುತ್ತಾರೆ ತಾನೆ ? ಈ ಕಾಲದ ಯೋಗ್ಯತೆ ಅಯೋಗ್ಯತೆಗಳ ಅನುಭವವೂ ಎಲ್ಲಿದ್ದರೂ ಅವರಿಗೆ ಕಂಡೇ ಕಾಣುವುವು. ಆಯಾ ಸ್ಥಳಗಳಿಗೇ ಹೋಗಿ ಅವರು ಕಾಣಬೇಕೆಂದಲ್ಲ. ಕಂಡಂತೆ ನಾವು ಚಿತ್ರಿಸಿಕೊಳ್ಳುತ್ತೇವೆ, ನಮ್ಮ ಕೃತಿಗಳಲ್ಲಿ. ಇಂಥ ಒಂದು ಚಿತ್ರ ಈ ಸಣ್ಣ ನಾಟಕದಲ್ಲಿದೆ.

ನಮ್ಮ ಸಾಹಿತ್ಯದಲ್ಲಿ ಕತೆಯ ಪ್ರಕಾರ ವಿಚಿತ್ರವಾದ್ದು. ನೇರವಾಗಿ ಆರಂಭ, ಬೆಳವಣಿಗೆ, ಮುಕ್ತಾಯ ಹೇಳಿ, ಸಂಬಂಧಿಸದ್ದನ್ನು ಬಿಟ್ಟು, ಸಂಬಂಧಿಸಿರುವುದನ್ನು

ಮಾತ್ರ ಸೇರಿಸಿ ಎಷ್ಟು ಖಚಿತವಾಗಿ ಬೇಕೊ ಅಷ್ಟನ್ನು ಹೇಳಿ ಮುಗಿಸುವ ಸಂಪ್ರದಾಯ ಅಪರೂಪ. ಕತೆ—ಅದರಲ್ಲಿಯೂ ನೀತಿಯ ಕತೆ, ಪುರಾಣ ಕತೆ, ಕಟ್ಟುಕತೆ, ಸರಪಳಿ ಇದ್ದ ಹಾಗೆ, ಬಿದಿರು ಸೀಗೆಗಳ ಮೆಳೆ ಇದ್ದಹಾಗೆ—ಇರುತ್ತವೆ. ಅನೇಕ ವೇಳೆ ಅದರ ತೊಳಲಲ್ಲಿ ಸಿಕ್ಕಿಕೊಂಡರೆ ದಿಕ್ಕೆಡುತ್ತದೆ ; ಉಸಿರು ಕಟ್ಟುತ್ತದೆ ; ಹೊರಗೆ ಬರಲು ದುಸ್ಸಾಧ್ಯವಾಗುತ್ತದೆ. ಸಂಬಂಧಗ್ರಹಣ ತುಂಬಾ ಗಾಸಿ. ಎಲ್ಲಿದ್ದೇವೆ, ಆರಂಭಿಸಿದ್ದಕ್ಕೂ ಈಗಿಗೂ ಏನು ಸಂಬಂಧ ಎಂದು ತಿಳಿಯುವುದು ಕಷ್ಟವಾಗುವುದು. ಕತೆಯೊಳಗೆ ಕತೆ. ಅದರಿಂದ ಸೂಚಿತವಾದುದು ಒಂದು ಕತೆ. ಅದರೆ ಉಪಕತೆ ಮತ್ತೊಂದು—ಅದರಂಥದೊ, ನಿದರ್ಶನವೊ ಮಗದೊಂದು—ಹೀಗೆ ಕತೆಯ ವಿಸ್ತಾರ ; ನೆಲಸು. ಪಂಚತಂತ್ರ, ಕಥಾಸರಿತ್ಸಾಗರ, ದಶಕುಮಾರ ಚರಿತೆ, ಕಾದಂಬರಿ, ಕೇವಲ ಅದ್ಭುತ ರಮ್ಯ ಕಥಾನಕಗಳಾದ ಯವನ ಯಾಮಿನೀ ಕತೆ, ಭಟ್ಟಿ ವಿಕ್ರಮಾದಿತ್ಯನ ಕತೆ, ಶುಕಸಪ್ತತಿ ಮುಂತಾದ ರೋಮಾಂಚಕಾರಿ ಕತೆಗಳಲ್ಲಿ, ಕತೆಯೊಳಗಿನ ಕತೆಯ ಈ ಲಕ್ಷಣ ಕಾಣುತ್ತದೆ.

ಇತಿಹಾಸ ಕಾವ್ಯಗಳಾದ ರಾಮಾಯಣ ಮಹಾಭಾರತಗಳಲ್ಲಿ, ಭಾಗವತದಲ್ಲಿಯೂ ಇಂಥ ಸಂದರ್ಭಗಳು ಎಷ್ಟೋ. ಪ್ರಧಾನ ಕಥೆ ಮುಂದುವರಿಯುವ ಮುಂಚೆ ಆಖ್ಯಾನ ಉಪಾಖ್ಯಾನಗಳ ಒಡ್ಡನ್ನು ದಾಟಬೇಕು. ಅವೂ ಚೆನ್ನಾಗಿಯೇ ಇರಬಲ್ಲವಾದರೂ ತತ್‌ಕ್ಷಣಕ್ಕೆ ಸೂತ್ರ ಕತ್ತರಿಸಿದ ಭಂಗ ಕಾಣುತ್ತದೆ. ಅವು ಕೇವಲ ಏಕದೃಷ್ಟಿಯಿಂದ ಬರೆದ ಅಡಕವಾದ ಕಾವ್ಯಗಳಲ್ಲ. ಒಂದು ಸಂಸ್ಕೃತಿಯನ್ನೇ, ಒಂದು ಜನತೆಯ ಜೀವನವನ್ನೇ ಪ್ರತಿಬಿಂಬಿಸುವ ಸಾರ್ವಕಾಲಿಕ ಭರತಖಂಡ ಎಂಬಂತಿವೆ. ಇನ್ನು ಪುರಾಣ ಕಾವ್ಯಗಳು, ಹೇಳಿಕೇಳಿ, ಮತಧರ್ಮ, ಲೋಕವೃತ್ತಾಂತ, ಲೋಕದ ಹುಟ್ಟು ಸಾವು, ಋಷಿ ದೇವತೆಗಳ ವರ, ಶಾಪ, ಸ್ವರ್ಗ ನರಕ, ಕಲ್ಪ ಮನ್ವಂತರಗಳು, ವಂಶ ಚರಿತೆ, ಮಾಹಾತ್ಮ್ಯಗಳು ವ್ರತಗಳು, ಸಂತರ ದುಷ್ಟರ ಚರಿತ ಎಲ್ಲಸೇರಿದ ಕೋಸಂಬರಿಗಳಂಥವು. ಅವುಗಳ ಯಾವ ಭಾಗದಲ್ಲಿ ಯಾವ ರಸಖಂಡ—ಯಾವ ಜೀವಗುಣದ ವಿಲಾಸ ಸಿಕ್ಕಿಕೊಂಡಿರುತ್ತದೆಯೋ ಅವುಗಳ ಪರಿಚಯವಿಲ್ಲದವರಿಗೆ ಅರ್ಥವಾಗಲಾರದು. ನಾಡಿನ ಪ್ರಾಚೀನ ಜೀವನದ ರೀತಿಯೇ ತಿಳಿಯದಾಗಿರುವಾಗ, ಬೇಡವಾಗಿರುವಾಗ—ಈ ತಲೆಮಾರಿನವರು ಈ ಮೂಲ ಶಿಕ್ಷಣವಿಲ್ಲದೆ ಬೆಳೆಯುತ್ತಿದ್ದಾರೆ—ಅವಕ್ಕೆ ಬೆಲೆ, ಪುರಸ್ಕಾರ ಇಲ್ಲವಾಗಿರುವುದು ಸಹಜವೇ. ಆದರೆ ಮೂವತ್ತು ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನ ಎಲ್ಲ ಜನರಿಗೂ ಇನ್ನೂ ಸ್ವಲ್ಪಮಟ್ಟಿಗಾದರೂ ಅವುಗಳ ಪರಿಚಯ ಉಂಟು. ಹಳ್ಳಿಗಳಲ್ಲಿಯಂತೂ ಬೇರೆ ಕಥಾಸಂಪ್ರದಾಯದ ಸುಳಿವು ಹೆಚ್ಚಾಗಿಲ್ಲ. ಹೊಸ ಕಾಲದ ಒಂದು ಮಡಿವಂತ ವರ್ಗ ಎಲ್ಲಿನ ಹಳತನ್ನೆಲ್ಲ ಮುದುಕಿಯಂತೆ ಜಪಮಾಡುತ್ತಿರಬೇಕೆನ್ನುತ್ತಿದೆ. ಆ ಗರುಡಿಯ ಬುದ್ಧಿವಂತರು ಯಾವುದಕ್ಕೂ ಸಂಕೇತಾರ್ಥಗಳನ್ನು ಕಲ್ಪನೆ ಮಾಡಿ ಅರ್ಥ ಕೌತುಕಗಳನ್ನು ಕಲ್ಪಿಸುತ್ತಿರುತ್ತಾರೆ. ಆದ್ದರಿಂದ ಈ ಕತೆಗಳು ನಾಡಿನ ರಕ್ತದ ನಾಡಿಯಲ್ಲಿ ಹೇಗೆಹೇಗೊ ಇನ್ನೂ ಸಂಚರಿಸುತ್ತಾ ಇವೆ. ಕತೆ ಚೆನ್ನಾಗಿ ಹೇಳು

ವವರಿದ್ದರೆ ಸುಲಭವಾಗಿ ಜನದ ಮನಸ್ಸನ್ನು ಸೆರೆ ಹಿಡಿಯುತ್ತದೆ. ಇಂಥ ಕತೆಗಳನ್ನು ಬಳಸಿಕೊಂಡೂ ಈ ಕಾಲದ ಸಾಹಿತ್ಯ, ನಿರ್ಮಾಣ ಮಾಡಬಹುದು. ಸಾಹಿತ್ಯ, ನಿರ್ಮಾಣ ಎಂಬ ಮಾತುಗಳು ಈ ನನ್ನ ನಾಟಕಕ್ಕೆ ಹೊಂದುತ್ತವೆಯೊ ಇಲ್ಲವೊ ನಾನರಿಯೆ. ನಾಟಕದ ಪ್ರಕಾರವನ್ನು ಬಳಸಿಕೊಂಡು ಒಂದು ಕಥಾವಿಧಾನವನ್ನು ಈ ರೀತಿ ಪ್ರಕಟಿಸಿದ್ದೇನೆ—ಹಳೆಯ ಮನಸ್ಸಿನವರಿಗೂ ಈ ಶತಮಾನದವರಿಗೂ ಇಬ್ಬರಿಗೂ ರುಚಿಸಲೆಂದು. ಹೊಸ ಅರ್ಥಗಳನ್ನು ರೂಢಿಸುವುದಕ್ಕೂ ಇವು ದುಡಿಯಬಲ್ಲವು.

ಪುರಾಣಗಳ ಕತೆ ಎಂದಾಗ ಶೈವ, ವೈಷ್ಣವ, ಶಾಕ್ತ ಕತೆಗಳಿಗೆ ಮಾತ್ರ ನಾನು ಮಿತಿಮಾಡುತ್ತಿಲ್ಲ. ಜೈನ ಬೌದ್ಧ ಕತೆಗಳಲ್ಲಿಯೂ ಹೀಗೆಯೇ. ನಮ್ಮ ನಾಡಿನಲ್ಲಿ ಒಂದು ಮತತತ್ತ್ವ ಕರ್ಮಕ್ಕೂ ಅದರ ಪರಿಣಾಮವಾಗಿ ಜನ್ಮಾಂತರ ಕತೆಗೂ ಪ್ರಾಧಾನ್ಯ ಕೊಟ್ಟಿದೆ. ನಮ್ಮ ಸಂಸ್ಕೃತಿ ತತ್ತ್ವದರ್ಶನಗಳಲ್ಲಿನ, ನಮ್ಮ ಆಹಾರ, ವ್ಯವಸ್ಥೆ, ಸಂಸ್ಥೆ, ಸನ್ನಿವೇಶಗಳಲ್ಲಿನ ಇತರ ಎಲ್ಲವೂ ಬೇರೆ ಬೇರೆ ದೇಶಗಳಲ್ಲಿ ಕಾಲಗಳಲ್ಲಿ, ಈಗ ಕೂಡ ಎಲ್ಲೆಲ್ಲಿಯೂ ದೊರಕುತ್ತವೆ. ಆದರೆ ಕರ್ಮವಾದವೂ ಜನನಾಂತರವಾದವೂ ಕೇವಲ ನಮ್ಮವು. ಬಹುತರ ಅದೊಂದೇ ಸರ್ವ ಪ್ರಾಧಾನ್ಯದಿಂದ ಲೋಕಕ್ಕೆ ನಮ್ಮ ಕೊಡುಗೆ, ಮತಧರ್ಮಕ್ಕೆ. ಈ ಕರ್ಮತತ್ತ್ವ ವೇದದ ಕಾಲದಿಂದ ಹಿಡಿದು ಬೆಳೆದು ಬಂದು, ಒಂದೊಂದು ಮತಪಂಥದಲ್ಲಿಯೂ ಅದರದರ ವಾದಕ್ಕೆ ಹೊಂದುವ ಒಂದು ಅಂಗ ವಾಗಿದೆ. ಮುಕ್ತಿ, ಸಿದ್ಧಿ, ಎಂಬವಕ್ಕೆ ಆ ಮತ ಯಾವ ಅರ್ಥವನ್ನು ವಿವರಿಸುವುದೋ ಅದಕ್ಕೆ ತಕ್ಕಂತೆ ಈ ಕರ್ಮದ ವ್ಯಾಪ್ತಿ, ಪರಿಪಾಕ ವರ್ಣಿತವಾಗುತ್ತವೆ. ಲೋಕದ ಜನರನ್ನು ನೋಡಿದರೆ—ಮಾನಸಿಕವಾಗಿ, ಧಾರ್ಮಿಕವಾಗಿ, ಸಂಸ್ಕೃತಿಯಲ್ಲಿ— ಒಬ್ಬೊಬ್ಬರೂ ಬೆಳವಣಿಗೆಯ ಒಂದೊಂದು ಮಟ್ಟದಲ್ಲಿರುವಂತೆ ಕಾಣುತ್ತದೆ. ಅವರವರ ಸಂಸ್ಕಾರ ಕರ್ಮ ಕಾರಣವಾಗಿ ಅವರ ಬಾಳನ್ನು ನಡಸುತ್ತದೆ. ಹಿಂದಿನ ದನ್ನು ಅನುಭವಿಸಿಯೇ ತೀರಬೇಕು, ಹೊಸ ಕರ್ಮದಿಂದ ಬಾಳು ಉತ್ತಮಗೊಳ್ಳ ಬಲ್ಲದು ಎಂಬುದು ನಂಬಿಕೆ. ಒಳ್ಳೆಯವರ ಮನಸ್ಸು ಸತ್ಸಹವಾಸದಿಂದ, ಒಳ್ಳೆಯ ಸನ್ನಿವೇಶದಲ್ಲಿ ಮೇಲ್ಪಡುತ್ತದೆ. ರೂಕ್ಷರ ರೂಕ್ಷತೆ ಅಷ್ಟು ಸುಲಭವಾಗಿ, ಅಷ್ಟು ಬೇಗ ಪರಿಣಾಮಗೊಳ್ಳದು. ಅನೇಕ ಜನ್ಮಗಳನ್ನು ತಾಳಿ ಪ್ರತಿಯೊಂದು ಜೀವಿಯೂ ತನ್ನ ಸಿದ್ಧಿಯನ್ನು ಪಡೆಯುವುದು ಎಂಬುದೂ ಈ ವಾದದ ಅಂಗ. ಜನ್ಮಾಂತರ ಎಂಬು ದನ್ನು ಪುಣ್ಯವಿದ್ದವರು—ಇದೂ ಒಂದು ಸಂಪ್ರದಾಯದ ಮಾತೇ—ಈ ಒಂದು ಬದುಕಿನಲ್ಲಿಯೇ ಎಲ್ಲ ಜನ್ಮಾಂತರ ಮುಗಿಸಬಹುದೆಂಬಂತೆ ನುಡಿಯುವವರನ್ನು ಕಾಣ ಬಹುದು. ಹಲವು ಮತಗಳಲ್ಲಿ ಮಾನವ ಜನ್ಮವೇ ಚರಮ ಜನ್ಮ. ಮುಕ್ತಿಗೆ ಮುಂಚಿನದು. ಕಡೆಯ ಸ್ಥಿತಿಯಲ್ಲಿ.

ಇದೆಲ್ಲದರ ತಥ್ಯ ಹೇಗಾದರೂ ಇರಲಿ. ಈ ಬಗೆಯ ವರ್ಣನೆ, ಕಥನವಿಧಾನ, ಅರ್ಥಕಲ್ಪನೆ, ವ್ಯಾಖ್ಯಾನ ನಮ್ಮಲ್ಲಿವೆ. ಜೈನ ತೀರ್ಥಂಕರರ ಅಥವಾ

ಉಪಸರ್ಗ ಕೇವಲಿಗಳ ಕತೆಗಳನ್ನೊ ಬುದ್ಧನ ಜಾತಕ ಕಥೆಗಳನ್ನೊ ನೆನಸಿ ಕೊಂಡಾಗಲೂ ಇದಕ್ಕೆ ನಿದರ್ಶನ ದೊರೆಯುವುದು. ಜೈನ ಕತೆಗಳಲ್ಲಿ—ಇಂದಿನ 'ಥಿಯೊಸೊಫಿಸ್ಟ್ಸ್' ಪಂಥಗಳಲ್ಲಿ ಕೆಲವರು ಒಪ್ಪುವಂತೆ—ಅದಕ್ಕೆ ತಿಬೆಟ್ಟಿನ ಬೌದ್ಧಾಂಗ ಒಂದಷ್ಟು ಸೇರಿದೆ—ನಮ್ಮಲ್ಲಿಯೂ ನಾರದಾದಿಗಳಂತೆ ಕೆಲವು ಮುಕ್ತ ಜೀವರ ಕಾರ್ಯ ಲೋಕನಾಟಕ ನಡೆಯುವವರೆಗೂ ಮುಗಿಯದೆ ನಡೆಯುವುದು. ಅವರು ಕಷ್ಟ ಸಮಯಗಳಲ್ಲಿ, ನೈರಾಶ್ಯ ಸಮಯದಲ್ಲಿ, ನೆರವಿನ ಪರಮಾಗತ್ಯ ತೋರುವಾಗ, ಕಲ್ಯಾಣ ಮಿತ್ರರಾಗಿ ಬಂದು ಜೀವಕ್ಕೆ ನೆರವನ್ನೂ ಧೈರ್ಯವನ್ನೂ ಕೊಡುತ್ತಾರೆ. ಅಜ್ಞಾನ ಹರಿಸಿ ಹೋಗುತ್ತಾರೆ. ಆಯಾ ಜೀವಕ್ಕೆ ಸಂಬಂಧಿಸಿದ ಪೂರ್ವ ಕಥೆಯನ್ನೂ ನಾಳೆಗೆ ಆಗಲಿ ರುವುದನ್ನೂ ತಿಳಿಸಿಕೊಟ್ಟು ಮನಸ್ಸಿಗೆ ನೆಮ್ಮದಿ, ಉಲ್ಲಾಸ ತರುತ್ತಾರೆ. ಬಾಳು ಕುದುರಿ ಫಲಿಸುವಂತೆ ಸಹಾಯ ಕೊಡುತ್ತಾರೆ. ಅವರಿಗೆ ತ್ರಿಕಾಲಾಬಾಧಿತವಾದ ತಿಳಿವಳಿಕೆ ಇರುತ್ತದೆ. ಲೋಕಕಾರುಣ್ಯವಿರುತ್ತದೆ. 'ಸರ್ವಹಿತೇರತರು' ಅವರು. ಯಾವ ಮೋಹವೂ ಕಾರ್ಪಣ್ಯವೂ ಇಲ್ಲದವರು. ಒಂದು ಬಗೆಯ ಪರಮ ಋಷಿತ್ವ,ದೇವರ್ಷಿತ್ವ ಅವರದು. ಅಷ್ಟೇ ಏನು ? ಅವರು ಪರದೈವದ ಬಳಕೆಯವರು ಎನ್ನುವುದುಂಟು.

ಮತಪಂಥಗಳವರು ಇದನ್ನು ಒಂದು ರೀತಿ ಹೇಳಿದರೆ ಇಂದಿನ ಮನಶ್ಶಾಸ್ತ್ರಜ್ಞರಲ್ಲಿ, ವಿಜ್ಞಾನಿಗಳಲ್ಲಿ ಯುಂಗ್, ಡನ್ ಮುಂತಾದವರೂ ಔಸ್ಪೆನ್‌ಸ್ಕಿ ಮುಂತಾದ ತತ್ತ್ವಜ್ಞರೂ Collective or Cosmic Unconscious ಎಂಬ ಪ್ರಜ್ಞಾ ಸಂಬಂಧದಲ್ಲಿಯೂ ಕಾಲ ತತ್ತ್ವ ಎಂಬ ಅಭಿಧಾನಗಳಲ್ಲಿಯೂ ಭೂತ, ವರ್ತಮಾನ, ಭವಿಷ್ಯತ್ತುಗಳ ತಿಳಿವಳಿಕೆಯನ್ನು ಒಂದೊಂದು ರೀತಿ ವರ್ಣಿಸುತ್ತಾರೆ. ಪ್ರೂಸ್ಟ್, ಜಾಯ್ಸ್ ಮುಂತಾದ ಕಾದಂಬರಿಕಾರರು, ಎಲಿಯಟ್ ಮುಂತಾದ ಕವಿಗಳು ಕಾಲವನ್ನು ತಮ್ಮ ಸಾಹಿತ್ಯ ಕೃತಿಗಳಲ್ಲಿ ಒಂದು ವಿಶೇಷ ರೀತಿಯಲ್ಲಿ ದುಡಿಸಿಕೊಂಡಿದ್ದರೆ, ಗಯಟೆ ಅವರು ಫೌಸ್ಟಿನ ಎರಡನೆ ಭಾಗದಲ್ಲಿಯೂ ವಾಂಡರಿಂಗ್ ಜ್ಯೂ ಕಥೆಯನ್ನು ಬರೆದವರು ಇನ್ನೊಂದು ರೀತಿಯಲ್ಲಿಯೂ, ಈಚೆಗೆ 'ಟೈಂ-ಪ್ಲೇಸ್' ಎಂಬ ನಾಟಕಗಳನ್ನು ಬರೆದ ಜೆ. ಬಿ. ಪ್ರೀಸ್ಟ್ಲೆ ಅವರು ಮತ್ತೊಂದು ರೀತಿಯಲ್ಲಿಯೂ ಬಳಸಿಕೊಂಡಿದ್ದಾರೆ.

ಅಲ್ಲದೆ ಸದ್ಯದ ಮನಃಸ್ಥಿತಿ ಯಾವಾಗಲೂ ಏಕವಾಗಿಯೇ ಅಖಂಡವಾಗಿಯೇ ಇರುವುದಿಲ್ಲ. ಎಚ್ಚರವಾಗಿರುವ ಮನಸ್ಸಿನಲ್ಲಿಯೇ ಯೋಚನೆಗೂ ಮಾತಿಗೂ ವ್ಯತ್ಯಾಸ ವಿರುತ್ತದೆ. ಅದಕ್ಕೂ ಭಾವಕ್ಕೂ ಅಂತರವಿರುತ್ತದೆ. ಅವಕ್ಕೂ ನಡವಳಿಕೆಗೂ ಭಿನ್ನತೆ ಉಂಟು. ಮನಸ್ಸಿನ ಒಳಗೆ ಮಟ್ಟಗಳೂ ಪದರಗಳೂ ಅಡಗಿಸಿದ, ಹೊಮ್ಮಿಸಿದ ಆಸೆ, ಅಧೈರ್ಯ, ಅಸೂಯೆ, ಸಂಚು, ಬೇಜವಾಬ್ದಾರಿ, ಉಗ್ರತೆ, ಕಪಟ—ಇರುತ್ತವೆ. ಯಾವುದನ್ನು ಗೊತ್ತಾದ ಖಚಿತವಾದ ಶೀಲ (Character) ಎನ್ನುತ್ತೇವೆಯೋ ಅದರ ತುಳಿತದಲ್ಲಿ, ಬಿಕ್ಕಟ್ಟಿನಲ್ಲಿ ಸಾವಿರ ಅಸಂಯಮಗಳು ನೊರೆಯುತ್ತ, ಮೊರೆಯುತ್ತ ಇರುತ್ತವೆ. ಮರೆತವು, ಅರಿಯದವು ಎಷ್ಟೋ. ಸುಪ್ತವಾಗಿ ಇನ್ನೆಷ್ಟೋ ಆಸೆ

ಕಾಮನಗಳು–ಉಪಪ್ರಜ್ಞೆಯಲ್ಲಿ–ಅಪ್ರಜ್ಞೆಯಲ್ಲಿ ಚೈತನ್ಯಗರ್ಭವುಳ್ಳವಾಗಿ ಇರುವುವು. ಇದೊಂದು ಕತ್ತಲೆಯ ಲೋಕ. ಆದರೆ ಸಾಗರದಂತೆ ಆಳ, ಗಂಭೀರ. ಎಚ್ಚರ ತಪ್ಪಿದಾಗ, ನೋವಿನಲ್ಲಿ, ಅತಿ ಸಂತೋಷದ ಉಕ್ಕಿನಲ್ಲಿ, ಕನಸಿನಲ್ಲಿ, ಕುಡಿದು ಮೈಮರೆತಾಗ, ಸ್ವಪ್ನಾದಿಗಳಲ್ಲಿ, ಏಕಾಂತದ ಸ್ವಂತ ವಿಶ್ಲೇಷಣಗಳಲ್ಲಿ, ಮನೋವಿಕಲತೆಯಲ್ಲಿ ಕೋಪದ ಉದ್ರೇಕದಲ್ಲಿ ಹೊರಗೆ ಬರುವುವು ಎಂಬುದೂ ಮನೋವಿಜ್ಞಾನ ಈಚೆಗೆ ವಿಶೇಷವಾಗಿ ನಮಗೆ ತಿಳಿಸಿರುವ ಸಂಗತಿ. ಹಿಂದೆ ತಿಳಿದಿರಲಿಲ್ಲವೆಂದಲ್ಲ. ಒಂದು ಕ್ರಮದಲ್ಲಿ ರೂಢಿಸಿದ ಮಾನವ ಜೀವವಿಜ್ಞಾನದಲ್ಲಿ ಅದೊಂದು ಗೊತ್ತಾದ ಭಾಗವಾಗಿ ಪರಿಶೀಲನೆಗೂ, ವ್ಯಾಸಂಗಕ್ಕೂ ಈಗ ವಿಷಯವಾಗಿದೆ.

ಈ ಮಾತನ್ನು ಇಷ್ಟು ಬೆಳಸಬೇಕಾಗಿ ಬಂದುದು ಒಂದು ಕಾರಣದಿಂದ. ಈ ನಾಟಕದಲ್ಲಿ ಮುಖ್ಯಕಥೆಗೆ ಆರು ಒಳದೃಶ್ಯಗಳನ್ನು ಒಂದು ಹಿಂಗಣ್ಣ ಬೆಳಕು ನೋಟ (Flash Back) ಎಂಬ ರೀತಿ ಸೇರಿಸಿದೆ. ಗ್ರೀಕ್ ದುರಂತ ನಾಟಕಗಳಲ್ಲಿಯೂ ಇಬ್ಸೆನನ ನಾಟಕಗಳಲ್ಲಿಯೂ ಐದಂಕಗಳ ನಾಟಕದ ಕಥೆ ಐದನೆಯದರಲ್ಲೆಂಬಂತೆ ಆರಂಭವಾಗಿ ಹಿಂದಿನ ಸಂಗತಿಗಳೆಲ್ಲವನ್ನೂ ನಾನಾ ಕ್ರಮಗಳಲ್ಲಿ, ನಾನಾ ಸನ್ನಿವೇಶಗಳಲ್ಲಿ ಪುನರಾವೃತ್ತಿ ಮಾಡಿಸುವ ವಿಧಾನ ರಚಿತವಾಗುತ್ತದೆ. ಪರಿಣಾಮಗೊಳ್ಳುತ್ತಿರುವ ಸಮಯದಲ್ಲಿ ಆರಂಭದಿಂದ ನಡೆದು ಬೆಳೆದ ಆಯಾ ವಿಧಾನದ ದರ್ಶನವನ್ನು ಕೊಡುವ ರೀತಿ ಅದು. ಪ್ರೂಸ್ಟ್, ಜಾಯ್ಸ್ ಒಂದು ಸಮಯದ ವಿಶೇಷವನ್ನೊ ನಾಲ್ಕಾರು ಪದರ, ಮಟ್ಟಗಳನ್ನೊ ಪ್ರದರ್ಶಿಸಲು ಬಯಸಿದರೆ ಒಂದೇ 'ಸತ್ಯ'ದ ಹಲವು ಮುಖಗಳಲ್ಲಿ ಸತ್ಯವೆಂಬ ಪದದ ಅರ್ಥವನ್ನು ಎಷ್ಟು ಜಟಿಲ, ಎಷ್ಟು ಅನಿಶ್ಚಯ ಎಂಬಂತೆ ಲೂಜಿ ಪಿರಂಡೆಲ್ಲೊ ಬರೆದ ಕೆಲವು ನಾಟಕಗಳು ಕಾಣಿಸುತ್ತವೆ. ಹಿಂದಿನ ಅಂಕದ ಒಂದು ಸನ್ನಿವೇಶ ಹೇಗೆ ಬೆಳೆಯಬಹುದು ಮುಂದಿನ 20 ವರ್ಷಗಳಲ್ಲಿ ಎಂಬುದನ್ನು ಕೇ ಕಾನ್‌ವೆ ಕುಳಿತಲ್ಲೇ ಮನಸ್ಸಿನಲ್ಲಿ ವಿಸ್ತರಿಸಿ ಕಲ್ಪಿಸಿಕೊಂಡು ಅದು ಎರಡನೆಯ ಅಂಕವಾಗಿ ರಚಿತವಾದಮೇಲೆ ಉಳಿದವರಾರಿಗೂ ಈ ಅನುಭವದ ಪರಿವೆ ಇಲ್ಲದೆಯೇ ಸದ್ಯದ ಸ್ಥಿತಿಯು ಮುಂದುವರಿಕೆ ಮೂರನೆಯ ಅಂಕದ ಕತೆಯ ಸಂತಸದ ಲಹರಿಯಲ್ಲಿ ಪ್ರೀಸ್ಟ್ಲೆ ನಾಟಕವೊಂದರಲ್ಲಿ ಹಬ್ಬುತ್ತದೆ. ಮ್ಯೂಸಿಕ್ ಅಟ್ ನೈಟ್ ಎಂಬ ನಾಟಕದಲ್ಲಿನಂತೆ ಮೂರು ಕಾಲಗಳ ಹಸರ, ಸಿಕ್ಕು, ನಿಲುಕು ದೊರಕುವಂತೆ ನಾಟಕದ ಕ್ರಿಯಾವ್ಯಾಪಾರ ಕಟ್ಟಿ ಬೆಳೆಯಬಹುದು. ಇವೆಲ್ಲ ಸಾಹಸದ ಕೆಲಸಗಳು.

ಹಿಂದಕ್ಕೆ ಹಾಯ್ದ ಬೆಳಕು (Flash Back) ಎನ್ನುವಾಗ ಹಿಂದೆ ನಡೆದು ಹೋಗುವುದರ ಕತೆ ನೆನಪಿಗೆ ಬರುತ್ತದೆ. ಆಯಾ ಕತೆಗೆ ಸಂಬಂಧಿಸಿದ ಜನ ಏಕಾಂತದಲ್ಲಿ ಸೇರಿದ ಅನಿವಾರ್ಯ ಸಂದರ್ಭದಲ್ಲಿ ರೂಪಿಸುತ್ತಾರೆ. ಜನ್ಮಾಂತರದ ಕತೆಯನ್ನು ಇನ್ನಾರೋ–ಋಷಿ ಸದೃಶರು–ಕಲ್ಯಾಣ ಮಿತ್ರರು–ಹೇಳಿ, ತಿಳಿಸಿಕೊಡುವರು. ಕರ್ಮದ ಬೆಳಕು ಇಲ್ಲಿ ಬೇರೆ ಬೇರೆ ಬಗೆಯಲ್ಲಿ ಹಾಯುವುದು. ಫಲ ಎರಡರಲ್ಲಿಯೂ ಒಂದೇ

ಆಗಬಹುದು.* ತಾಳ್ಮೆಯಿಂದ ಉನ್ನತಿಗೆ, ಅಶುಚಿಯಿಂದ ಶುಚಿಗೆ, ಅಸತ್ಯದಿಂದ ದೃಢವಾಗಿ ಸತ್ಯಕ್ಕೆ ರೂಪಾಂತರಗೊಳ್ಳುವ ಸುಧಾರಣೆಯ ಅವಕಾಶ ಅದು. ಹಳೆಯ ನಡತೆಗೆ ಹೇಸಿ ವಿರಕ್ತಿ ಬರಬಹುದು. ಮತನೀತಿಗಳ ಕತೆಯಲ್ಲಿ ಶುಚಿಯಾಗಿ ಬಾಳ ಬೇಕೆನ್ನುವವರ ಮನಸ್ಸಿಗೆ ಪಶ್ಚಾತ್ತಾಪವುಂಟಾಗಿ ಜೀವನದ ರೀತಿ ಉತ್ತಮಕ್ಕೆ ಬದಲಾಗಬಹುದು. ದುರ್ಧರ್ಷವಾದ ಸತ್ಯದ ಬೆಳಕಲ್ಲಿ ದುರ್ಬಲರಿಗೆ ಬುದ್ಧಿವಿಕಲತೆಯೊ ಮರಣವೊ ಉಂಟಾಗಬಹುದು. ಇನ್ನು ಕೆಲವರಿಗೆ ಭೀತಿ, ಅಶಾಂತಿ ಉಂಟಾಗಿ ಅವರ ಜೀವ ತಲ್ಲಣಿಸಬಹುದು. ನಿತ್ಯ ನಾರಕಿಗಳಂಥ ಕೆಲವರಿಗೆ ಈ ತಿಳಿವಳಿಕೆ ಯಾವ ಪ್ರಯೋಜನವನ್ನೂ ಉಂಟು ಮಾಡದೆಯೇ, ಎಂದರೆ ಅವರ ಮುಂದಿನ ಕರ್ಮ ಪ್ರವೃತ್ತಿ ಪರಿಣಾಮಗೊಳ್ಳದೆಯೇ, ಹೋಗಬಹುದು.

ಈ ನಾಟಕದಲ್ಲಿ ಒಳದೃಶ್ಯಗಳಲ್ಲಿ ಬೆಳೆದ ಮೂರು ಪ್ರಸಂಗಗಳಲ್ಲಿ ರೆಡ್ಡಿ, ರಾವ್, ಶಾಸ್ತ್ರಿ ಮೂವರು ಮೂರು ಬಗೆಗಳಲ್ಲಿ ಸನ್ನಿವೇಶಕ್ಕೆ ಮಿಡಿಯುತ್ತಾರೆ. ಎಲ್ಲರಿಗೂ ಮುದುಕ ಮುದುಕಿಯರ ಮಾತೂ ಕಣ್ಣೂ ರೀತಿಯೂ ಅಲೌಕಿಕವಾಗಿ, ದೊಡ್ಡ ಪ್ರಭಾವದ್ದಾಗಿ ಭಾಸವಾದರೂ ಒಬ್ಬೊಬ್ಬರ ಜೀವ ಒಂದೊಂದು ರೀತಿ ಪ್ರತಿಕ್ರಿಯೆ ತೋರಿಸುವುದು. ಪರೀಕ್ಷೆಯಲ್ಲಿ ಮೂವರೂ ಸೋತರೂ ರೆಡ್ಡಿಗಿಂತ ರಾವ್, ರಾವ್‌ಗಿಂತ ಶಾಸ್ತ್ರಿ ಮೃದು ಪರಿಣಾಮವುಳ್ಳವರಂತೆ ಕಾಣಿಸಿಯಾರು. ರೆಡ್ಡಿಗೆ ಮಾನವತೆ ಶೂನ್ಯ. ರಾವಿನ ಸ್ವಾರ್ಥದಲ್ಲಿ ಕಷ್ಟ ಕಾರ್ಪಣ್ಯ ಭೂಯಿಷ್ಠವಾದ ಮಾನವ ಸಂಪರ್ಕ ಸ್ವಲ್ಪವಾದರೂ ಇದೆ. ಶಾಸ್ತ್ರಿಯ ಮನಸ್ಸು ಈ ಮುಂಚೆಯೇ ವಿಷಾದ ಪಟ್ಟದ್ದೇ. ಅಲ್ಲಿಂದ ಪಶ್ಚಾತ್ತಾಪಕ್ಕೆ ನಡೆದು ಭರವಸೆಯ ಹಾರೈಕೆಗೆ ನಾಳೆ ದಾಟೀತೇನೊ. ಈವರೆಗಾಗಲೇ ಮನಸ್ಸಿನ ಆಳದಲ್ಲಿ ತನ್ನ ದಿನದ ಬದುಕಿಗೆ ಅಸಹ್ಯಪಟ್ಟಿದ್ದ ಕಮಲಾಸಾನಿಗೆ ಹೆಚ್ಚು ಹೊತ್ತು ಬೇಕಾಗಲಿಲ್ಲ. ಯೋಚಿಸಿ ಲಾಭ ನಷ್ಟ ತಾಳೆಹಾಕಿ ತೀರ್ಮಾನಮಾಡುವ ವಿಷಯವಲ್ಲ ಇದು. ಬೆಂಕಿಯುರಿ ತಗುಲಿದ ಕರ್ಪೂರದಂತೆ ಆಕೆ ಉರಿದಳು— ಕರಗಿದಳು—ಮಾಯವಾದಳು. ಆ ಮೂವರ ಸಂಬಂಧದ ಕೆಲವು ಒಳದೃಶ್ಯಗಳು ಕಮಲಾಸಾನಿಯ ಪ್ರಧಾನ ಘಟನೆಗೆ ವಿದೃಶ ತೋರ್ಕೆಯವು.

ನಾಟಕದಲ್ಲಿ ನಾಟಕವನ್ನು ಸೇರಿಸುವ ಸಂಪ್ರದಾಯವೂ ಹೊಸತಲ್ಲ. ಪ್ರಿಯದರ್ಶಿಕಾ, ಉತ್ತರ ರಾಮಚರಿತೆಗಳಲ್ಲಿಯೂ A Midsummer Night's Dream, Hamlet ಮುಂತಾದವುಗಳಲ್ಲಿ, ಷಾ ಅವರ Man and Superman ಇತ್ಯಾದಿಗಳಲ್ಲಿಯೂ ಗರ್ಭಾಂಕಗಳನ್ನು ಸೇರಿಸಿ ಕಥಾಂಶ ಭಾವಾಂಶಗಳ ಪ್ರಯೋಜನ ವಿಶೇಷಗಳ ಸಂಯೋಗ ಮಾಡಿದ್ದಾರೆ ನಾಟಕಕಾರರು. ಆದರೆ ಒಬ್ಬನ ಈ ಜೀವನಕ್ಕೆ

---

*ಆಡೇ ಕನ್ವರ್ಷನ್ ಅಥವಾ ಮತಾಂತರ ಎಂಬುದಕ್ಕೆ ಬಾಗಿಲು. ಧಾರ್ಮಿಕ ಬಾಳ ಬಗೆ ಬೇರೆಯಾಗುವುದು ಅಷ್ಟೇ, ಮತದಿಂದ ಮತಕ್ಕೆ ಎಂಬಂತೆ ಆಗಬೇಕಿಲ್ಲ.

ಸಂಬಂಧಿಸಿದ, ಅವನು ಅಡಗಿಸಿ ಮರೆಯಲು ಪ್ರಯತ್ನಿಸಿದ ಸಂಗತಿಗಳನ್ನು ಹೊರಗೆ ತರುವ ಪ್ರಯತ್ನವಾಗಿ ರಚಿತವಾಗುವುದು ಈ Flash Back ತಂತ್ರ. ಸ್ವಗತ ಭಾಷಣದಲ್ಲಿ ಅದರ ಅಡಕವಿದೆ. ಚಲನಚಿತ್ರಗಳವರೂ ಆಕಾಶವಾಣಿಯ ತಂತ್ರಕ್ಕೆ ಶ್ರವ್ಯನಾಟಕದ ವಿಧಾನವನ್ನು ಬಗೆಬಗೆಯಾಗಿ ಅಳವಡಿಸುವ ಕಲೆಗಾರರೂ ಇದರ ಅನೇಕ ಸಾಧ್ಯತೆಗಳನ್ನು ಈಚಿಗೆ ದುಡಿಸಿಕೊಂಡಿದ್ದಾರೆ. ಪುರಾಣಕಥೆಯ ದರ್ಶನವನ್ನು ಸಾಂಪ್ರದಾಯಿಕ ರೀತಿಯಲ್ಲಿಯೇ ಶಕ್ಯವಾದರೆ ಮಾಡೋಣವೆನ್ನಿಸಿ ವಿದ್ಯಾವಂತರಿಗೇ ಅಲ್ಲದೆ ಜನ ಸಾಮಾನ್ಯರಿಗೂ ರುಚಿಸಲಿ ಎಂದು ಈ ನಾಟಕದಲ್ಲಿ ಚಂದನ ಕುಂಕುಮಗಳ ಪ್ರಸಂಗವನ್ನು ತಂದಿದೆ : ನಮ್ಮ ಜನಕ್ಕೆ ಅಂಜನ, ಚಂದನ, ವಿಭೂತಿ, ಕುಂಕುಮ, ಕಂಕಣ, ತಾಯಿತಿ ಪರಿಚಿತವಾದ ಅರ್ಥಸ್ಪಷ್ಟತೆಯುಳ್ಳ ಅಂಶಗಳು ಎಂದು. ಶಿವ ಗೌರಿಯರ ಕಣ್ಣನೋಟವೊ, ಮುಖಭಾವವೊ, ನುಡಿಯೊ ಈ ಕೆಲಸ ಮಾಡಬಹುದಿತ್ತು. ಸತ್ಕ್ರಿಯೆಯನ್ನು ಮಾಡಬಲ್ಲವರು ಅದನ್ನು ಮಾಡಲಿಲ್ಲ. ಆ ಪ್ರವೃತ್ತಿ ಅವರಲ್ಲಿ ಉಂಟಾಗಲಿಲ್ಲ. ಭೀತಿ ಅವರಿಗೆ. ಪಾಪದ ಭಾರದಿಂದ ಬಿಡುಗಡೆ ಹೊಂದಲು ಅವರಿಗೆ ಶಕ್ತಿಯೊ ಇಷ್ಟವೊ ಇಲ್ಲವಾಯಿತು. ತಮ್ಮಲ್ಲಿಯೇ ಬಹುಶಃ ವಿಶ್ವಾಸವಿಲ್ಲ. ಅಥವಾ ಆ ಸ್ಥಿತಿಯಲ್ಲಿಯೇ ರುಚಿ. "ಜಾನಾಮಿ ಧರ್ಮಂ, ನ ಚ ಮೇ ಪ್ರವೃತ್ತಿಃ ; ಜಾನಾಮ್ಯ ಧರ್ಮಂ, ನ ಚ ಮೇ ನಿವೃತ್ತಿಃ" ಎಂಬಂತೆ ಕೆಲವರ ಬಾಳು. ಕಮಲಾಸಾನಿಗೆ ತಾನು ಪಾಪಿಷ್ಠಳೆಂಬುದು ಗೊತ್ತು. ಆದರೂ ಸನ್ನಿವೇಶದ ತೂಕಕ್ಕೆ ತೂಗಿ, ಸತ್ಕಾರ್ಯದ ಅವಕಾಶವನ್ನು ಹಿಂದುಮುಂದು ನೋಡದೆ ಉಪಯೋಗಿಸಿಕೊಳ್ಳುತ್ತಾಳೆ. ಸತ್ವೋದ್ರೇಕ ಆಗುವುದೇ ಹಾಗೆ. ಅದು ಆತ್ಮದ ಸಾಹಸ. ಅವಳಿಗೆ ಸಾವಿನ ಭಯವಿಲ್ಲ. ಆ ಆವೇಶ ಬಂದವರಿಗೆ ಯಾವ ಭಯದ ತಡೆಯೂ ಸಲ್ಲದು. ಜೀವದ ಆಸೆ, ಮೃತಿಯ ಭೀತಿ ಇಲ್ಲದೆ ಮನಸ್ಸು ಯಾವಾಗ ಇಂತಹ ಸಾಹಸ ಮಾಡುವುದೋ ಅದೇ ಲಗ್ನ ; ಅದೇ ತಾರಾಬಲ ; ಅದೇ ಚಂದ್ರಬಲ ; ದೈವಬಲಂ ತದೇವ.

ಪ್ರೀಸ್ಟ್ಲೆ ಅವರ 'ಮ್ಯೂಸಿಕ್ ಅಟ್ ನೈಟ್' ಎಂಬ ಹೆಸರನ್ನು ಈ ಮುಂಚೆ ಹೇಳಿದೆ. ಅದನ್ನು ನಾನು ಮೊದಲು ಓದಿದಾಗ ಒಟ್ಟು ನಾಟಕದ ಗೊಂದಲವನ್ನು ನಮ್ಮ ಜನಕ್ಕೂ ತಿಳಿಯುವಂತೆ ಮಾಡಿಕೊಡಬೇಕೆನ್ನಿಸಿತು. ಹಾಗಾಗಲು ಅದನ್ನು ಕನ್ನಡಿಸಬೇಕು. ಅದು ಕಾಪಿರೈಟ್ ನಾಟಕ. ಭಾಷಾಂತರಕ್ಕೆ ಅವರೊ ಪ್ರಕಾಶಕರೊ ಕೇಳಿದಷ್ಟು ಹಣ ಕೊಟ್ಟು ಕಾಲ ಕೂಡಿಬಂದರೆ ಅದನ್ನು ಹೊರಗೆ ತರಬಹುದು. ಅದು ಬರಿಯ ಬರವಣಿಗೆಯ ಕೆಲಸವಲ್ಲ. ಹಣದ ಕೆಲಸ. ಆದರೆ ಅದರ ಮುಖ್ಯ ತಂತ್ರ ವೊಂದನ್ನಾದರೂ ನಮ್ಮ ನಾಟಕಕ್ಕೆ ತೆಗೆದುಕೊಳ್ಳೋಣವೆನಿಸಿತು. ಹೀಗೆ ಪುರಾಣದಂತಹ ಕಥೆ, Flash Back ವಿಧಾನ, ಪ್ರೀಸ್ಟ್ಲೆ ನಾಟಕದಲ್ಲಿನ ಒಂದು ವಿಶೇಷ ರೂಪಣಾಕ್ರಮ ಮೂರರ ಸಂಯೋಗವನ್ನು ಶಕ್ಯವಾದರೆ ಸೇರಿಸಬೇಕೆನ್ನಿಸಿತು. ಅದು ಪೂರ್ತಿ

ನೆರವೇರಿಲ್ಲ : ಅಲ್ಲಿನ ಆವರಣ ಪೂರ್ತಿ ಲೌಕಿಕವಾದ್ದು, ಕೇವಲ ಇಂದಿನ ಈಗಿನ ಬಾಳಲ್ಲಿ ನಟ್ಟದ್ದು ; ಆದ್ದರಿಂದ.

ಆ ನಾಟಕದಲ್ಲಿ ಡೇವಿಡ್ ಪೀಲ್ ಒಂದು ಸಂಗೀತ ಕೃತಿಯನ್ನು ನಿರ್ಮಾಣ ಮಾಡಿದ್ದಾನೆ. ಅನೇಕ ವಾದ್ಯಗಳ ಮೇಳಕ್ಕೆ ತಯಾರಿಸಿದ ಗಾನ ಮೇಳವನ್ನು ಸದ್ಯಕ್ಕೆ ಪಿಯಾನೊ ನುಡಿಸಿ ತನ್ನ ಸ್ನೇಹಿತ 'ಲೆಂಗೆಲ್' ಪಿಟೀಲಿನ ನೆರವಿಂದ ಕೆಲವು ಆಯ್ದ ಆಹ್ವಾನಿತರಿಗೆ ಪ್ರಯೋಗ ಮಾಡಿ ತೋರಿಸುತ್ತಾನೆ. ಅವನಿಗೆ ಉಪಕಾರವಾಗಬಹು ದೆಂದೆಣಿಸಿ ಶ್ರೀಮತಿ ಏವ್ಸ್‌ಬರಿ ತನ್ನ ಮನೆಯಲ್ಲಿ ಈ ಸಭೆಯನ್ನು ಏರ್ಪಡಿಸುತ್ತಾಳೆ. ಆಯ್ದವರಲ್ಲಿ ಮೂರು ನಾಲ್ಕು ಗಣ್ಯ ಮಂದಿ ಇದ್ದಾರೆ. ಇಬ್ಬರದು ಜೊತೆ. ಗಂಡನ ಈ ಕೃತಿಗೆ ಕೀರ್ತಿ, ಪ್ರಯೋಜನ ದೊರಕಿ ಅವನಿಗೆ ಸ್ಥಾನಮಾನ ದೊರೆಯುವಂತಾಗಲಿ ಎಂದೂ ಶಕ್ಯವಾದರೆ ಕುಟುಂಬಕ್ಕೆ ಪ್ರಯೋಜನವಾಗಲಿ ಎಂದೂ ಪೀಲಿನ ಪ್ರೀತಿಯ ಮಡದಿ ಕ್ಯಾಥರೀನ್ ಬಂದಿದ್ದಾಳೆ. ಪೀಟರ್ ಹಾರ್ಲೆಟ್ ಎಂಬ ಸೋಷಿಯಲಿಸ್ಟ್–ಕಾಮ್ಯುನಿಸ್ಟ್ ಕವಿಯೂ ಅವನ ಪ್ರೀತಿಗಾಗಿ ಕಂಗಾಲಾಗಿರುವ ಆ್ಯನ್‌ವಿಂಟರೂ ಬಂದಿದ್ದಾರೆ. ಪ್ರೀತಿ ಎಂದರೆ ಕೇವಲ ಒಂದು ಲೈಂಗಿಕ ವಿಕಾರ, ಅದನ್ನು ಕವಿಲೋಕವೂ ಕಲೆಗಾರರೂ ಅತಿ ಮಾಡಿದ್ದಾರೆ ಎಂಬುದು ಹಾರ್ಲೆಟ್‌ನ ಶಾಶ್ವತ ನಿರ್ಧಾರ. ವೃತ್ತಪತ್ರಿಕಾ ಪ್ರಪಂಚದಲ್ಲಿ ಪ್ರತಿಷ್ಠಿತನಾದ ಫಿಲಿಪ್ ಚಿಲಂ ಬಂದಿದ್ದಾನೆ. ಅವನ ಪ್ರಶಂಸಾ ಲೇಖನದಿಂದ ಈ ಕಚೇರಿಗೂ ಕೃತಿಕಾರನಿಗೂ ಪ್ರಚಾರ ಬಂದೀತೆಂಬುದು ಏವ್ಸ್‌ಬರಿ ಆಸೆ. ದೊಡ್ಡ ಕಂಪನಿ ಉದ್ಯೋಗಗಳ ನಿರ್ದೇಶಕನೂ ಹಣಗಾರನೂ ಆದ ಸರ್ ಜೇಮ್ಸ್ ಡರ್ನಿ ಎಂಬಾತನ ಜೊತೆಯಲ್ಲಿ ಸದ್ಯಕ್ಕೆ ಅವನೊಲವಿನ ಹೆಣ್ಣು ಲೇಡಿ ಸಿಬಿಲ್ ಲಿಂಚೆಸ್ಟರ್ ಬರುತ್ತಾಳೆ. ದೇಶದ ಕ್ಯಾಬಿನೆಟ್ ಮಂಡಲದ ವೃದ್ಧ ಮಂತ್ರಿ ಚಾರ್ಲ್ಸ್ ಬೆಂಡ್ರಿಕ್ಸ್ ಎಂಬಾತನನ್ನು ಕರೆದಿದ್ದಾರೆ.

ಇವರಿಗೆ ಸಂಬಂಧಿಸಿದಂತೆ ವ್ಯಕ್ತಿಗತವಾದ ಪರಸ್ಪರವಾದ ಪೂರ್ವಕಥೆಗಳಿವೆ. ಪೀಲ್, ಲೇಡಿ ಸಿಬಿಲ್ ಒಂದು ಕಾಲದಲ್ಲಿ ಪ್ರಿಯರು. ಲೆಂಗೆಲ್ ಕ್ಯಾಥರಿನ್ನಲ್ಲಿ ಆಸೆ ಇಟ್ಟುಕೊಂಡು ವಿಫಲನಾಗಿದ್ದವನು. ಚಿಲಂ ಇಂದು ತುಂಬಾ ಪ್ರತಿಷ್ಠಾವಂತನೆನ್ನಿ ತ್ತಿದ್ದರೂ ಎಷ್ಟು ಹೆಮ್ಮೆಯವನೋ ಅಷ್ಟೇ ಮಟ್ಟಿನ ಪೂರ್ವಕಥೆಯ ನೆಳಲಾಳ ವುಳ್ಳವನು—ಬಡ ತಾಯ ಮಗ : ಇಬ್ಸೆನನ ಪೇಹ್ರ್ ಘೈಂಟ್ ಮತ್ತು ಅವನ ತಾಯಿಯ ನೆನಪು ತರುತ್ತದೆ ಅದು. ಲೇಡಿ ಸಿಬಿಲ್ ಶ್ರೀಮಂತ ಮನೆತನದಲ್ಲಿ ಹುಟ್ಟಿದ್ದರೂ ಅವಳ ಚಾರಿತ್ರ್ಯವೂ, ಹೆಣ್ತನದ ಅವಿವೇಕಗಳೂ ಅನೇಕ. ತನ್ನ ಮಾನವುಳಿಸಿದ್ದ ಹುಡುಗಿಯನ್ನು ಉಪೇಕ್ಷಿಸಿದ್ದವಳು ಅವಳು. ಡರ್ನಿ ಕಥೆ ಮಿತ್ರದ್ರೋಹದ್ದು. ಎದುರಿಗೆ ಕಾಣುವ ಕ್ಯಾಥರೀನ್ ವಿಷಯದಲ್ಲಿಯೂ ಚೆಲುವೆ ಯುವತಿ ಆ್ಯನ್ ವಿಷಯದಲ್ಲಿಯೂ ಚಪಲವನ್ನು ಅಡಗಿಸಲಾರದವನು. ಬೆಂಡ್ರಿಕ್ಸ್ ಸಂಗೀತವನ್ನು ಕೇಳಿ ಪೀಲಿಗೆ ಸರಕಾರದಿಂದ ಏನಾದರೂ ಪ್ರಯೋಜನ ಮಾಡಿಕೊಡಿಸಬಹುದು ಎಂಬುದು ಏವ್ಸ್‌ಬರಿ

ಉದ್ದೇಶವಾದರೆ ಈ ಮುದುಕ ವಾಸ್ತವವಾಗಿ ಈ ಲೋಕದ ಪಾಲಿಗೆ ಸತ್ತೇ 20 ವರ್ಷಗಳಾಗಿವೆ. ಅಷ್ಟೇ ಏನು ? ನಾಟಕ ಮುಗಿಯುವ ಹೊತ್ತಿಗೆ ಹೃದ್ರೋಗಪೀಡಿತನಾದ ಅವನು ಸಾಯುತ್ತಾನೆ.

ಇವರ ಜೊತೆಗೆ ಸತ್ತುಹೋಗಿದ್ದ ಬೆಂಡ್ರಿಕ್ಸನ ಸೇವಕ ಪಾರ್ಕ್ಸ್, ಶ್ರೀಮತಿ ಏವನ್ಸ್‌ಬರಿಯ ಮಗ ವಿಮಾನದ ಚಾಲಕ ರೂಪರ್ಟ್ ; ಚಿಲಂ ತಾಯಿ ಮಿಸೆಸ್ ಚಿಲಂ, ಡರ್ಬ್ನಿಯ ಘಾತಕತನದಿಂದ ನೀರಲ್ಲಿ ಬಿದ್ದು ಸತ್ತಿದ್ದ ಸ್ನೇಹಿತ ಟಾಮ್, ಹಿಂದೆ ತೀರಿಕೊಂಡಿದ್ದ ಲೇಡಿ ಸಿಬಿಲ್ ಅಕ್ಕ ಡೆಬೊರ, ಡೇವಿಡ್ ಷೀಲಿಗೆ ಹಿಂದೆ ಗುರುಸ್ಥಾನದಲ್ಲಿದ್ದ ಡಾ॥ ಎಬೆನ್‌ಥಾಲ್—ಈ ಪ್ರೇತಪಾತ್ರಗಳು ಬೇರೆ ಬರುತ್ತವೆ. ಎಂದರೆ, ಈ ಕತೆಯಲ್ಲಿ ಇವೊತ್ತಿನ ಸನ್ನಿವೇಶ, ಇವೊತ್ತು ಏರ್ಪಡುವ ಸಂಬಂಧಗಳು, ಇಲ್ಲಿನ ಇತರ ಈಗಿನ ಇಷ್ಟ ಅನಿಷ್ಟ, ಆಶೋತ್ತರ, ಹಾರೈಕೆ, ಅಸೂಯೆ ಮುಂತಾದವುಗಳ ಜೊತೆಗೆ ಈ ಪ್ರತಿಯೊಬ್ಬರಿಗೂ ಸಂಬಂಧಿಸಿದಂತೆ ಮರೆತಿರುವ, ಮರೆತಿಲ್ಲದ, ಜ್ಞಾಪಕಕ್ಕೆ ಬರುವ ಅಥವಾ ದುರ್ದಮ್ಯವಾದ ಪೂರ್ವ ಕಥಾ ಸಂಬಂಧಗಳೂ ಸತ್ತುಹೋಗಿರುವವರ ಉತ್ಥಾಪನೆಯೂ ಪ್ರದರ್ಶನಕ್ಕೆ ಬರುತ್ತವೆ. ಎಚ್ಚರವಾಗಿರುವ ಸಮಯದಲ್ಲಿ ಸಭ್ಯ ನಡವಳಿಕೆ ಮುಂತಾದ ಕಾರಣಗಳಿಂದ ಬಾಯಲ್ಲಿ ಆಡದ ಮಾತುಗಳನ್ನು ಅವರಿಂದ ಆಡಿಸಿ, ಅವರ ಮನಸ್ಸಿನ ಪ್ರಕಾಶನ ಮಾಡಬೇಕಾಗುತ್ತದೆ. ಗತಕಾಲದ ಸ್ಮೃತಿಯನ್ನು ಒಬ್ಬೊಬ್ಬರ ಬಾಳ ಆಳದಿಂದಲೂ ಎತ್ತಿ ತರಬೇಕಾಗುತ್ತದೆ. ತಂದು ಅವರಲ್ಲಿ ಒಂದು ಬಗೆಯ ಪಶ್ಚಾತ್ತಾಪವನ್ನೂ, ಮನಃಪರಿಣಾಮವನ್ನೂ, ಕಾರ್ಯ ಪ್ರವೃತ್ತಿಯನ್ನೂ ಉಂಟುಮಾಡಬೇಕಾಗುತ್ತದೆ. ಅದನ್ನು ಪ್ರೀಸ್ಟ್ಲೆ ಸಾಧಿಸಿರುವುದು ಈ ಸಂಗೀತಕೃತಿಯ ಪ್ರಭಾವ ಪ್ರಕಾಶನ ಸಂವಿಧಾನದಿಂದ.

ಸಂಗೀತ ಕವಿಯಲು, ಅದರ ಅನುಭವದಿಂದ ಇವರ ಮನಸ್ಸು ಕಲಕಿ, ಗತಕಾಲದ ಸ್ಮೃತಿ ಮೇಲೆ ಬರುವಂತಾಗುವುದೆಂಬುದು ನಾಟಕೀಯ ವಿಧಾನ, ಕಲ್ಪನೆ. ಆಹ್ವಾನಿತರು ಒಂದು ದೊಡ್ಡ ಹಾಲಲ್ಲಿ ಕುಳಿತಿರುತ್ತಾರೆ. ಪಕ್ಕದ ಒಂದು ಪಡಸಾಲೆ ಓಣಿ (Passage)ಯಲ್ಲಿ ಸಂಗೀತಪ್ರಯೋಗ ನಡೆಯುತ್ತದೆ. ಅದರ ಮೂರು ಗತಿಗಳಲ್ಲಿ (Movements) (1) ಮೊದಲ ಎರಡು ಕಲ್ಪನೆಗಳ ಪ್ರಸ್ತಾಪನೆ, (2) ವಿಳಂಬ ಕಾಲ, (3) ದ್ರುತ ಮತ್ತು ಉದ್ದಂಡ ಪರಿಣಾಮ ಭಾಗಗಳಾಗಿ—ಸಂಗೀತ ಪ್ರಬಂಧ ಬೆಳೆಯುತ್ತಿರುವಾಗ ಅದು ಕೇಳುವ ಪ್ರತಿಯೊಬ್ಬರ ಮನಸ್ಸಿನ ಮೇಲೆಯೂ ಪರಿಣಾಮವನ್ನು ಉಂಟುಮಾಡುತ್ತದೆ. ಶಬ್ದ ಮಾಡದೆ ಸಂಗೀತದ ರಸವನ್ನು ಅನುಭವಿಸಬೇಕಾಗಿರುವಾಗ, ಹೊರಗೆ ಆ ನಾದಪರಂಪರೆಯೂ-ಅದರ ಲಯವಿನ್ಯಾಸವೂ ಹೊಮ್ಮಿ ಬೆಳೆದಂತೆಲ್ಲ ಇವರಲ್ಲಿ ಪ್ರತಿಯೊಬ್ಬರ (ಸದ್ಯಕ್ಕೆ ಆ್ಯನ್ ಕ್ಯಾಥರೀನ್ ಬಿಟ್ಟು) ಸಭ್ಯ ವರ್ತನೆಗೆ ನೆರವಾಗುವ ಹೊರ ಚಾರಿತ್ರ್ಯದ ಅಡಿಯಲ್ಲಿನ ಅವರ ವ್ಯಕ್ತಿ ವಿಲಾಸಗಳು

(Personality) ಅದರ ಹಿಂದೆ ಅಡಗಿರುವ ಜೀವನ ಕಥಾಸಂದರ್ಭಗಳಾಗಿ ಕರಗಿ (Dissolution of Personality) ಅವರ ಸ್ಮೃತಿಯಿಂದ ಮೇಲೆದ್ದು ಬರುವಂತೆ ಘಟನೆಗಳ ಪುನರಾವೃತ್ತಿಯಾಗುವುದು. ಸಂಗೀತದ ಫಲ ಹೀಗೆ ಒಬ್ಬೊಬ್ಬರ ಜೀವದ ಆಳವನ್ನು ಕಲಕಿ, ಮಿಡಿಸಿ ಅಲ್ಲಿ ಹುದಗಿರುವ ಗುಪ್ತ ಘಟನೆಗಳನ್ನು ಎತ್ತಿ ಹಾಕುತ್ತದೆ. ಹೊರ ಎಣಿಕೆಯಲ್ಲಿ ಶಕ್ತರು, ಚೆಲುವರು, ಅದೃಷ್ಟವಂತರು, ಪುಣ್ಯವಂತರು, ಉದಾರಿಗಳು ಎಂಬವರ ಜೀವನಕತೆಯು ಹಿಂದೆ ಕೂಡ ಏನೆಲ್ಲ ಅಡಗಿ ಅವರ ನಡತೆಯನ್ನೂ ಶೀಲವನ್ನೂ ನಿರಂತರವಾಗಿ ಮಾರ್ಪಡಿಸುತ್ತಿರುತ್ತದೆ ಎಂಬುದರ ಕ್ರಿಯಾ ವಿಧಾನವನ್ನು ಇಲ್ಲಿ ಕಾಣಬಹುದು. ಒಂದು ಘಟ್ಟದಲ್ಲಿ ಕೆಲವರ ಈ ಪ್ರತ್ಯೇಕ ವ್ಯಕ್ತಿತ್ವಗಳೂ ಕರಗಿಹೋಗಿ ಇವರೆಲ್ಲರಿಗೂ ಒಂದೇ ಬಗೆಯ ಲೋಕಜೀವನದ ನೆನಪು ಉಂಟಾಗುವಂತೆ ಸಾಧಾರಣ್ಯದ ವರ್ಣನೆ ಬರುತ್ತದೆ.

ಇದನ್ನೆಲ್ಲ ಅವರು ನಾಟಕ ರಂಗದಲ್ಲಿ ಹೇಗೆ ಪ್ರದರ್ಶಿಸುತ್ತಾರೊ ನೋಡಬೇಕು. ಟೆನೆಸ್ಸಿ ವಿಲಿಯಮ್ಸ್, ಥಾರ್ನ್‌ಟನ್ ವೈಲ್ಡರ್ ಬರೆದ ನಾಟಕಗಳ ಒಂದೊಂದು ದೃಶ್ಯವನ್ನು ಈಚೆಗೆ ಬೆಂಗಳೂರಲ್ಲಿ ವೆಯ್ನ್ ಯೂನಿವರ್ಸಿಟಿ ಪಂಗಡದವರು ಸರಳವಾಗಿ ತೋರಿಸಿದರು. ಎರಡು ಮೂರು ಮಟ್ಟಗಳಲ್ಲಿನ ಪ್ರಜ್ಞೆ ನಡವಳಿಕೆಗಳ ಕತೆಯನ್ನು ಒಂದು ವಾಸ್ತವ ಸಂಗೀತ ಕಚೇರಿ ನಡೆಯುವಾಗ ಸಂಗೀತಗಾರರನ್ನು ಕೂಡ ಪಾತ್ರಗಳನ್ನಾಗಿ ಮಾಡಿ ತೋರಿಸುವುದು ಕಷ್ಟವೇ. ಅದಕ್ಕೆ ಪಾಶ್ಚಿಮಾತ್ಯರ ರಂಗವ್ಯವಸ್ಥೆ ಪರಿಕರಗಳೂ, ರಂಗಮಂಚದ ಆಳ ವೈಶಾಲ್ಯಗಳೂ, ಹಣ ಸಂಪುಷ್ಟಿಯೂ, ಪ್ರದರ್ಶನ ತಂತ್ರಗಳೂ ಬೇಕು. ಎಲ್ಲಕ್ಕಿಂತ ಹೆಚ್ಚಾಗಿ, ಬಹುಶಃ ಬೆಳಕುಗಳ ಏರ್ಪಾಡು ಹಾಯಿಗೆಗಳಿಂದ ತೋರಿಸಿ ಮಟ್ಟಗಳ ಈ ಸಂಕೀರ್ಣವನ್ನೂ ಕಾಲಮಾನದ ವ್ಯತ್ಯಾಸವನ್ನೂ ತೋರಿಸ ಬೇಕಾದೀತು. ಬಹು ಸಂಪನ್ನ ಪ್ರಯೋಗದ ಅನುಭವವಾಗಬಲ್ಲದು ಇದು, ರಂಗ ತಂತ್ರವನ್ನು ಕಾಣಬೇಕೆನ್ನುವವರಿಗೆ.

ಅಂಥ ಪ್ರದರ್ಶನಗಳನ್ನು ತೋರಿಸಲು ನಮ್ಮಲ್ಲಿ ಸದ್ಯಕ್ಕೆ ಅನುಕೂಲ ಸಾಲವು. ಆದುದರಿಂದ ಒಂದೇ ಮಟ್ಟದ ವ್ಯತ್ಯಾಸ ಕಾಣಿಸುವಂತೆ—ಎಂದರೆ ಮೂವರ ಜೀವನದಲ್ಲಿನ ಒಂದೊಂದು ಪ್ರಕರಣವನ್ನು ಮಾತ್ರ ತೋರಿಸುವಂತೆ—ಇಲ್ಲಿನ ದೃಶ್ಯಗಳನ್ನು ಸರಳಮಾಡಿಕೊಂಡಿದ್ದೇನೆ. ಮೂರೇಕೆ, ಒಂದೇ ಸಾಲದೆ ಎಂಬವರು ಮುದುಕನನ್ನು ಉಳಿಸಲು ಹಲವರು ಶಕ್ತರು ಯತ್ನಿಸಿ ಬಯಸಿದರೆಂಬುದನ್ನೂ ಇವರೆಲ್ಲರೂ ಕಮಲಾ ಸಾನಿಯ ಬಾಳಿಗೆ ಕವಿದಿದ್ದವರೆಂಬುದನ್ನೂ ನೆನಪಿನಲ್ಲಿಡಬೇಕು. ಇದನ್ನು ಪ್ರದರ್ಶಿಸುವಾಗಲೂ ಒಂದು ನೆಲೆಯಲ್ಲಿ ಗೌರಿ ಪುಷ್ಕರಿಣಿಗಳ ದೃಶ್ಯ ಕಾಣುತ್ತಿರಬೇಕು. ಚಂದನ ವಿಟ್ಟುಕೊಂಡು ಪುಷ್ಕರಿಣಿಗೆ ಇಳಿಯುವ ವ್ಯಕ್ತಿಗಳು ಸ್ವಲ್ಪ ಈಚೆ ಆಚೆ ಬಂದು ಹೋಗಿ ತಮಗೆ ಸಂಬಂಧಿಸಿದ ಈ ನೆನಪಿನ ದೃಶ್ಯಗಳಲ್ಲಿ ಭಾಗವಹಿಸಬೇಕು. ಅವರ ಅಲ್ಲಿನ ಆಕೃತಿ ತತ್‌ಕ್ಷಣಕ್ಕೆ ಕಲ್ಪಿತವಾದರೂ ವಾಸ್ತವ. ಹಾಗೆಯೇ ಇಲ್ಲಿನದು ಲೇಡಿ ಮ್ಯಾಕ್‌ಬೆತಳ

ನಿದ್ರೆಯು ಸಂಚಾರದಂತಾಗಲಿ, ನಾನು ಕಾಣುತ್ತಿರುವ ಇದು ಕಠಾರಿಯೇನು? —ಎಂಬಂತೆ ಮಾತನಾಡುವ ವ್ಯಾಕ್ಬೆತನ ಸ್ಥಿತಿಯಂತಹ Fantasy, Hallucination ಬಗೆಯಾಗಲಿ ಅಲ್ಲ. ಹಾಗೆಯೇ ತುಂಬಾ ಜನಸಂದಣಿಯುಳ್ಳ ಪುಷ್ಕರಿಣಿಯು ರಥೋತ್ಸವದ ದೃಶ್ಯವನ್ನು ನಿಜದ ಭ್ರಮೆಯುಂಟಾಗುವಂತೆ ಕಾಣಿಸಲು ಶಕ್ಯವಾದರೆ ಸ್ಥಿತಿಯ ವರ್ಣ ರಂಜನೆ ಚೆನ್ನಾಗುವುದು. ಇದಕ್ಕೆ ಜನ, ಸಜ್ಜು, ಶಿಸ್ತು, ದಕ್ಷ ನಿರ್ದೇಶನ, ಸ್ಥಳಾವಕಾಶ ಎಲ್ಲ ಅಗತ್ಯ. ಇವುಗಳನ್ನು ಒದಗಿಸುವುದು ಸಾಧಾರಣ ನಾಟಕ ವಿಲಾಸಿತಂಡಗಳಿಗೆ ಕಷ್ಟ. ಹೀಗೆಂದು ಇದು ಪ್ರದರ್ಶನಕ್ಕೆ ಯೋಗ್ಯವಲ್ಲವೆಂದು ತೀರ್ಮಾನ ಮಾಡುವುದಾದರೆ ನನ್ನ ಮಾತುಕಟ್ಟಿತು. ಆರಂಭದ ಕೈಲಾಸ ಸಭೆಯ ತುಂಬನ್ನು ಹಾಗೂ ಹೀಗೂ ಸಾಧಿಸಬಹುದು. ಅಲ್ಪ ಮಾರ್ಪಾಡುಗಳನ್ನು ಮಾಡಿಕೊಂಡು ಬಾನುಲಿಯ ನಿರ್ದೇಶಕರೂ ಈ ಆವರಣವನ್ನು ಪೂರ್ತಿಯಾಗಿ ನಿರ್ಮಾಣಮಾಡಬಲ್ಲರು. ಆದರೆ ಅವರು ದೃಶ್ಯ ಸಂಪತ್ತಿಯನ್ನು ತುಂಬುವುದು ಶಕ್ಯವಿಲ್ಲ ; ಅವರದು ಕಿವಿಯ ನೋಟ ; ಉತ್ಸವ. ಚಲನ ಚಿತ್ರಗಳಲ್ಲಿನ ಅವಕಾಶವಾದರೊ ಅಪಾರ. ಅವರು ಏನನ್ನು ಮಾಡಲೂ ಶಕ್ಯ. ಅವರೆಲ್ಲ ಇದನ್ನು ಪ್ರದರ್ಶನಕ್ಕೆ ತೆಗೆದುಕೊಂಡು ಈ ನಾಟಕಕ್ಕೆ ಪ್ರೋತ್ಸಾಹ ಕೊಡಬೇಕೆಂದಲ್ಲ ಈ ಮಾತನ್ನಾಡುತ್ತಿರುವುದು. ಕಾಲ್ಪನಿಕವಾದ ಯಾವ ತಂತ್ರವನ್ನು ಬಳಸಿದಾಗಲೂ ಜನದ ಕಷ್ಟವೊ ಹಣದ ಕಷ್ಟವೊ ಸಜ್ಜು ಪರಿಕರಗಳ ಕಷ್ಟವೊ ಕಾರಣವಾಗಿ ಇಂಥವು ಪ್ರದರ್ಶನಯೋಗ್ಯವಲ್ಲ ಎಂದು ಓಸರಿಸಿಬಿಡುವುದು ಸಾಮಾನ್ಯವಾದ್ದರಿಂದ ಹೇಳಿತು.

B. R. V, Opera House ಮುಂತಾದವು ನಾಟ್ಯ ನಾಟಕ ಪ್ರಯೋಗಗಳಿಗಾಗಿಯೇ ಕಟ್ಟಿದ ಮಂದಿರಗಳಾದರೂ ಬೆಂಗಳೂರಂಥ ಊರಲ್ಲಿ ನಾಟಕದ ಪ್ರದರ್ಶನಕ್ಕೆ ಆಧುನಿಕ ಅನುಕೂಲಗಳುಳ್ಳ ಒಂದು ರಂಗಮಂದಿರ ಇನ್ನೂ ಕಟ್ಟಿ ಸಜ್ಜಿತವಾಗಿಲ್ಲ. ಪಟ್ಟಣದ ಪುರಭವನದ ನಾಟ್ಯರಂಗವೂ ಕೆಲವು ಅಗತ್ಯಗಳಿಗೆ ಒದಗುತ್ತದೆ. ಸಾಂಪ್ರದಾಯಿಕ ನಾಟಕಗಳನ್ನು ಆಡಲು ಒಂದೆರಡು ನಾಟಕ ಶಾಲೆಗಳಿವೆ. ಆದರೂ ಹೊಸ ಬಗೆಯ ನಾಟಕಗಳ ಪ್ರಯೋಗಕ್ಕೆ ತಕ್ಕ ಆವರಣ ಹಿನ್ನೆಲೆಗಳನ್ನು ರಚಿಸಿಕೊಂಡು ನಾಲ್ಕಾರು ಬಗೆಯ Spot Light, ಅಥವಾ Arc Light, Flash Light, ಚಲಿಸುವ ಬೆಳಕುಗಳನ್ನು ಬೇರೆ ಬೇರೆ ಮಟ್ಟಗಳಲ್ಲಿ ನಿಲ್ಲಿಸುವ, ಹಾಯಿಸುವ, ನಡಸುವ ಬೆಳಕಿನ ನಿರ್ದೇಶನ ನಮ್ಮಲ್ಲಿ ಇನ್ನೂ ಉಂಟಾಗಬೇಕಾಗಿದೆ. ವರ್ತುಲವಾದ ಚಲಿಸುವ ದೃಶ್ಯ ಸೂಚಿಕೆಯ ಏರ್ಪಾಡುಗಳು (Cyclorama) ಕೂಡ ಇಲ್ಲ. ಸಭಾಮಂದಿರದೊಳಕ್ಕೆ ಚಾಚಿ ವೇದಿಕೆಯ ಹಲವು ಕಡೆ ಜನ ಕುಳಿತು ಪ್ರೇಕ್ಷಕ ವರ್ಗದಲ್ಲಿನ ಜನರೇ ವೇದಿಕೆಯ ಮೇಲೆ ಬಂದು ನಾಟಕ ತಂತ್ರ ಬೆಳಸುವಂತೆ ಏರ್ಪಾಡುಗಳು ಇನ್ನೂ ಹುಟ್ಟಬೇಕು. ಹೊಸ ಬಗೆಯ ನಾಟಕಗಳನ್ನು ಓದಿ, ನೋಡಿ ದಕ್ಷವಾಗಿ ಪ್ರಯೋಗಕ್ಕೆ ತಂದು ಹೊಸ ನಾಟಕ ನಿರ್ಮಾಣವಾಗಬೇಕು. ಹೊಸ ನಾಟಕದ ಅಗತ್ಯಕ್ಕೆ ತಕ್ಕಂತೆ ವೇದಿಕೆ, ಪ್ರೇಕ್ಷಾಗಾರ

ರಚಿತವಾಗಬೇಕು. ನಾಟ್ಯರಂಗದ ಯಾವ ಮೂಲೆಯಿಂದ ಯಾರು ಯಾವ ಮಟ್ಟದಲ್ಲಿ ಮಾತಾಡಲಿ—ಪಿಸುಮಾತಾಡಿದರೆ ಕೂಡ—ಸ್ಪಷ್ಟವಾಗಿ ಸಭಾಂಗಣದ ಎಲ್ಲ ದೂರದ ಜನರಿಗೂ ಸುಲಭವಾಗಿ ಕೇಳುವಂತೆ ಸ್ವನವಿಕಿರಣ ಸ್ಫುಟವಾಗಿ ಆಗುವಂತೆ ರಂಗಮಂದಿರವನ್ನು ಕಟ್ಟಬೇಕು. ರಬೀಂದ್ರನಾಥ ಠಾಕೂರರ ಸ್ಮಾರಕವಾಗಿ ಹೊಸದಾಗಿ ಒಂದು ರಂಗಮಂಟಪ ನಿರ್ಮಾಣವಾಗುವುದಿದೆ. ಒಂದೊಂದು ರಾಜ್ಯದಲ್ಲಾಗುವ ಇಂಥ ಮಂದಿರದಲ್ಲಿಯೂ ಒಂದು ವಿಶೇಷ ಬಗೆಯ ಪ್ರಯೋಗಾವಕಾಶ ಶಕ್ಯವಾಗುವಂತೆ ರಂಗಮಂದಿರಗಳು ರಚಿತವಾದರೆ ಎಷ್ಟೋ ಪ್ರಯೋಗ ಪರೀಕ್ಷೆಗಳಿಗೆ ದೊಡ್ಡ ಸೌಕರ್ಯ ದೊರಕೀತು. ಇದಕ್ಕೆ ಎಂಜಿನಿಯರುಗಳ, ಮಂದಿರ ಶಿಲ್ಪಿಗಳ, ನಾಟಕಕಾರರ, ನಿರ್ದೇಶಕರ ಸಮಾವೇಶ ಆಗಿ ಅವರೆಲ್ಲರ ಸಲಹೆಗಳಿಂದ ಮಂದಿರ ರೂಪಗೊಳ್ಳಬೇಕಾಗುವುದು. ಇಷ್ಟೆಲ್ಲ ಬೇಗ ಶಕ್ಯವಾಗುವುದೆಂಬ ನಿರೀಕ್ಷೆ ದುರಾಸೆ. ಭಾಗ್ಯಾಯತ್ತಂ ಅತಃಪರಂ !

ಅದು ಹೇಗೋ : ಇಲ್ಲಿ ಈ ಅಧಿಕಪ್ರಸಂಗ, ಆ ಆರ್ಭಟಗಳೆಲ್ಲ ಏಕೆ ?—ಸನ್ನಿವೇಶ ಪೋಷಣೆ ಮಾಡುವಂತೆ ಸ್ವಲ್ಪ ವಿಶಾಲವಾದ ನಾಟಕರಂಗದ ಮೇಲೆ ಬೆಳಕುಗಳ ಆಟದ ವ್ಯತ್ಯಾಸ ಮಾಡಿಕೊಂಡು ಈ ನಾಟಕವನ್ನು ಪ್ರದರ್ಶಿಸಬಹುದು. ಅಲ್ಲದೆ ನಾಟಕದ ವಸ್ತುವಿನಲ್ಲಿಯೊ ಧಾತುವಿನಲ್ಲಿಯೊ ಗಮ್ಯದಲ್ಲಿಯೊ ಸಾರ ಇಲ್ಲದಿದ್ದಲ್ಲಿ ಎಂಥಾ ರಚನಾ ತಂತ್ರವೂ ಪ್ರಯೋಗ ನಿರ್ದೇಶನ ತಂತ್ರಗಳೂ ತಲೆಭಾರವಾದಾವು. ರಚನೆಯಲ್ಲಿ ಬರಿಯ ತಂತ್ರಕ್ಕೇ ಗಮನ ಕೊಡುವುದು ಗಟ್ಟಿಯಾದ ಸೃಷ್ಟಿಕ್ರಿಯೆ ನಿಂತುಹೋಗುವುದರ ಲಕ್ಷಣ.

ಇದನ್ನು ಅಚ್ಚಿಗೆ ತೆಗೆದುಕೊಂಡು ಹೋಗಿ ನುಣುಪಾದ ಸಮನಾದ ಮುದ್ರಣ ದೊರೆಯುವಂತೆ ಏರ್ಪಡಿಸಿ ಮೇಲ್ವಿಚಾರಣೆ ವಹಿಸಿದ ಕಿರಿಯ ಮಿತ್ರ ಎಸ್. ಆರ್. ರಾಮಸ್ವಾಮಿಯವರಿಗೆ ನಾನು ಕೃತಜ್ಞನಾಗಿದ್ದೇನೆ. ಒಂದೆರಡು ದಿವಸದಲ್ಲಿಯೇ ನಾಟಕದ ಮೂರುನಾಲ್ಕು ಫಾರಂಗಳನ್ನು ಒಟ್ಟಿಗೆ ಅಚ್ಚಿಗೆ ಕಟ್ಟಿ ಕರಡನ್ನು ಕೊಟ್ಟ ಡಬ್ಲ್ಯು. ಕ್ಯು. ಜಡ್ಜ್ ಅಚ್ಚುಕೂಟದವರ ನೆರವು ದೊಡ್ಡದು. ಇದರ ಪ್ರಕಟನೆಯ ಹೊಣೆಗಾರಿಕೆಯನ್ನು ಒಪ್ಪಿದ ಜಿ.ಕೆ. ಅಂಡ್ ಬ್ರದರ್ಸ್ ಯಜಮಾನರಾದ ಶ್ರೀ ಕಲ್ಲಯ್ಯನವರಿಗೆ ನಾನು ಋಣಿ. ಮೊದಲ ದೃಶ್ಯದಲ್ಲಿಯೇ ಬರುವ 'ತಾಯುಮಾನವರ್' ಪದ್ಯಗಳನ್ನು ನಾನು ಕೇಳಿದ ಕೂಡಲೆ ಬರೆದು ಕಳಿಸಿ ಉಪಕಾರ ಮಾಡಿರುವ ಮಾನ್ಯಗೆಳೆಯರಾದ—ನಮ್ಮಲ್ಲಿನ ನಿವೃತ್ತ ವಿದ್ಯಾಧಿಕಾರಿಗಳೂ, ಈಗ ತಮಿಳು ವಿಶ್ವಕೋಶದ ವಿದ್ವಾಂಸರೂ ಆದ—ಶ್ರೀ ಪಿ. ಎಂ. ಸೋಮಸುಂದರಂ ಪಿಳ್ಳೆಯವರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಇದರ ಕನ್ನಡ ಅಕ್ಷರ ಪರಿಣಾಮಕ್ಕೆ ನೆರವಾದ ಗೆಳೆಯ ಶ್ರೀ ಮತ್ತೂರು ಕೃಷ್ಣಮೂರ್ತಿಯವರಿಗೂ, ಕನ್ನಡ ಭಾಷಾಂತರದ ದಾನಮಾಡಿದ ಶ್ರೀ ಎಲ್. ಗುಂಡಪ್ಪನವರಿಗೂ ನನ್ನ ವಂದನೆಗಳು. ಎಂಥ ಚಿಕ್ಕ ಕೆಲಸಕ್ಕೂ ಎಷ್ಟು ಜನದ ನೆರವು ದುಡಿಯು

ಬೇಕು ಎಂದು ಅರಿತಾಗ ಜೀವ ಸಹಜವಾಗಿ ನಮ್ರವಾಗಿ ವಿನೀತವಾಗುತ್ತದೆ. ನೆರವಾದವರೆಲ್ಲರಿಗೂ ನಮಃ.

ವಿ.ಸೀ.

ಬೆಂಗಳೂರು
10-11-1960

# ಚ್ಯವನ

## I

ನನ್ನ ಸಾಹಿತ್ಯ ಗುರುಗಳಾದ 'ಶ್ರೀ'ಯವರು ಚ್ಯವನ, ಮಾರ್ಕಂಡೇಯ, ಹಿರಣ್ಯಕಶಿಪು, ಬಲಿ, ವಿಶ್ವಾಮಿತ್ರ ಮುಂತಾದವರನ್ನು ವಿಷಯ ಮಾಡಿಕೊಂಡು ನಾಟಕಗಳನ್ನು ರಚಿಸಬೇಕೆಂದಿದ್ದರು. ಬೆಂಕಿಯನ್ನು ಮಾನವರಿಗೆ ತಂದುಕೊಟ್ಟು ಲೋಕೋಪಕಾರ ಮಾಡಿದ್ದರಿಂದ ಪರಮದೇವನಾದ ಜ್ಯೂಸ್ ಆಗ್ರಹಕ್ಕೆ ಪ್ರೊಮೆಥಿಯಸ್ ಒಳಗಾದ. ಅವನನ್ನು ಕುರಿತು ಬರೆಯಬೇಕೆಂದಿದ್ದರು. 'ಅಶ್ವತ್ಥಾಮನ್' ಕೃತಿಯನ್ನು ರಚಿಸಿದ ಅವರ ಕಲ್ಪನಾ ಸಾಹಸ ಈ ಪುರಾಣ ಪುರುಷರ ಹಿರಿಮೆಯನ್ನು ಅದ್ಭುತವಾಗಿ ನಿರ್ವಹಿಸಬಲ್ಲದಿತ್ತು. ಅವರ ಲೇಖನಿಯಿಂದ ಅವ್ಯಾವುವೂ ಬರಲಿಲ್ಲ. ಕನ್ನಡದ ನಷ್ಟ ಆ ಮಟ್ಟಿಗೆ ಅಸಾಮಾನ್ಯ : ಎರಡು ಮೂರು ಅನ್ಯದೇಶೀಯ ಮಹಾಸಾಹಿತ್ಯಗಳ ಆಪ್ತ ಪರಿಚಯವುಳ್ಳವರು ಇಂಥ ಕಾರ್ಯಗಳಲ್ಲಿ ತೊಡಗಿದರೆ ಅವರಲ್ಲಿ ಉತ್ಪನ್ನವಾಗುವ ಕಲಾವೇಶ ಅತಿಶಯ ಸತ್ವವುಳ್ಳದ್ದಾಗುತ್ತದೆ.

ಮಹಾಭಾರತದ ಕಥೆಗಳನ್ನು ಓದುತ್ತ ನನಗೆ ಇತರ ಕೆಲವು ಉಪಾಖ್ಯಾನಗಳ ಜೊತೆಗೆ ಚ್ಯವನ –ಸುಕನ್ಯೆಯರ ಕಥೆ ಸೊಗಸಿತು. 'ಭಾರತದ ಐವರು ಮಹನೀಯರು' ಎಂಬ ಕಥಾನಕಗಳ ಲಘು ಪರಿಚಯ ಮಾಡಿಕೊಡುತ್ತ ಇದನ್ನೂ ಕೆಲವು ಪುಟಗಳಲ್ಲಿ ೧೫–೨೦ ವರ್ಷಗಳ ಹಿಂದೆ ಬರೆದೆ. ನಾಟಕವಾಗಿ ಪರಿವರ್ತಿಸಿದರೆ ಇದು ಹೇಗೆ ರೂಪಗೊಂಡೀತೆಂಬ ಚಪಲವುಂಟಾಗಿ ಈ ನಾಲ್ಕು ದೃಶ್ಯಗಳನ್ನು ಬರೆದೆ. ಇದರಲ್ಲಿ ಯಾವ ಗುಣವಿದೆಯೊ ಯಾವುದು ಇಲ್ಲವೊ. ನಾನು ಹಳೆಯ ತಲೆಮಾರಿನವನು. ಈಚಿನ ರೂಪಣ ತಂತ್ರಗಳವರಿಗೆ ಇದು ವಿನೋದವಾಗಿ ಕೂಡ ಕಾಣಿಸಬಹುದು. ಅವರವರ ಹುಚ್ಚು ಅವರವರಿಗೆ ಆನಂದ. ನನ್ನದು ನನಗೆ.

ಇಲ್ಲಿ ಎರಡು ಭಾವಾಂಗಗಳು ಕಂಡಾವು : ಒಂದು ಕಾಮಕ್ಕೆ–ಪ್ರೇಮಕ್ಕೆ, ಇನ್ನೊಂದು ಅಧಿಕಾರ ಸಂಪಾದನೆಗೆ ಸಂಬಂಧಿಸಿದ್ದು. ಸುಕನ್ಯೆ ಋಷಿಯ ಬಯಕೆಗೆ

ಬೀಳುತ್ತಾಳೆ. ಒಂದು ವಿಚಿತ್ರ ಸಿಕ್ಕಿಗೆ ಸಿಕ್ಕಿಸಿಕೊಂಡು ಆಕೆಯನ್ನು ಋಷಿ ತನಗೆ ಮಾಡಿಕೊಳ್ಳುತ್ತಾನೆ. ಋಷಿಪತ್ನಿಯಾಗಬೇಕಾಗಿ ಬರಲು ರಾಜಕುಮಾರಿ ತುಂಬಾ ಶ್ರದ್ಧೆಯಿಂದ ಆತನಿಗೆ ಪತಿಸೇವೆಯನ್ನು ಸಲ್ಲಿಸಿ ಆತನ ಪ್ರೀತಿಯನ್ನೂ ವಿಶ್ವಾಸವನ್ನೂ ಸಂಪಾದಿಸಿಕೊಳ್ಳುತ್ತಾಳೆ. ಆಕೆಯನ್ನು ಬಲಾತ್ಕಾರದಿಂದ ಪಡೆದೆನೆಂಬ ಚಿಂತೆ ಒಳಗೇ ಚ್ಯವನನನ್ನು ಪೀಡಿಸುತ್ತಿದ್ದಿರಬೇಕು. ಅಶ್ವಿನಿಯರ ಕಣ್ಣಿಗೆ ಆಕೆ ಬಿದ್ದು ಅವರು ಅವಳನ್ನು ಬಯಸಿ ತೆರೆದ ಇಲ್ಲಿನ ಸನ್ನಿವೇಶ ಎಡೆಮಾಡಿಕೊಟ್ಟದ್ದು ಆ ಚಿಂತೆಗೆ ಪರಿಹಾರದ ಒಂದು ಮಾರ್ಗ ತೋರಿದಂತಾಯಿತು. ಸುಕನ್ಯೆಯ ಪ್ರೀತಿ ನಿಷ್ಠೆಗಳನ್ನು ಈವರೆಗೆ ಅರಿತವನು ಚ್ಯವನ. ಅಶ್ವಿನಿಯರ ಸಮಯವನ್ನು ಒಪ್ಪಿಕೊಂಡು ಅವರ ಭೇಷಜದಿಂದ ಯೌವನವನ್ನೂ ಸುಕನ್ಯೆಯನ್ನೂ ಪಡೆದುಕೊಳ್ಳುತ್ತಾನೆ. ಪರೀಕ್ಷೆ ಒಂದು ಕ್ಷಣ ಜೂಜೇ ಆಯಿತು. ಆ ಕಾಲ ಪೂರ್ತ ಸುಕನ್ಯೆಗೆ ಕ್ಲೇಶವಾಯಿತು.

ದೇವತೆಗಳದು ಪರೀಕ್ಷೆಯೇ. ಇಂಥಾ ಪರೀಕ್ಷೆಗಳ ಮೂಲಕವೇ ತಪಸ್ಸು, ಧರ್ಮ ಸತ್ವ, ಪ್ರೇಮಗಳ ಸತ್ತು ಅಸತ್ತು ಅಳೆಯುಬರುವುದು. ಅಲ್ಲಿ ತೇರ್ಗಡೆ ಹೊಂದಿದಾಗಲೇ ಸತ್ಯ ದೃಢವಾಗುವುದು. ದೃಢಪಡಿಸುವುದೇ ಅವರ ಉದ್ದೇಶ ; ಉದ್ಯೋಗ ಅಧಿಕಾರಕ್ರಿಯೆ ಕೂಡ. ಇವರ ಕಣ್ಣು ಆಕೆಯ ಮೇಲೆ ಬಿದ್ದುದು ಈ ಕ್ರಿಯಾ ವಿಧಾನಕ್ಕೆ ಸಾಧನವಾಗುತ್ತದೆ ಎನ್ನೋಣ.

ಇವರ ಸೌಹಾರ್ದ, ಸೌಮನಸ್ಯ, 'ಸ್ಪೋರ್ಟ್ಸ್ ಮನ್‌ಷಿಪ್' (ಆಟದ ಸಮಯಗಳನ್ನು ನಡಸಿ ಆಡುವ ಮನಸ್ಸು) ಋಷಿಚಿತ್ತಕ್ಕೆ ಬಂದು ಋಷಿ ಅವರಿಗೆ ಕೃತಜ್ಞತೆ ಸಲ್ಲಿಸಬೇಕೆಂದುಕೊಳ್ಳುತ್ತಾನೆ.

ದೇವತೆಗಳಲ್ಲಿ ಉಚ್ಚ ನೀಚ ತಾರತಮ್ಯವಿರುವುದು, ಅಸಮಾನತೆ ಇರುವುದು ಅವನಿಗೆ ಗೊತ್ತು. ಇದನ್ನು ನಿವಾರಿಸಿ ಯಜ್ಞಗಳಲ್ಲಿ, ಸೋಮಪಾನದಲ್ಲಿ ಇಂದ್ರನ ಸಹಪಂಕ್ತಿ ಗೌರವವನ್ನು ಅವರಿಗೆ ದೊರಕಿಸಲು ಮಾವನಿಂದ ಋಷಿ ಯಾಗ ಮಾಡಿಸುತ್ತಾನೆ. ಗುಣಕ್ಕೆ ಪುರಸ್ಕಾರ, ಕೃತಜ್ಞತಾ ಸಮರ್ಪಣೆ, ಲೋಕಕ್ಕೆ ಪದವಿಯ ಏರುಗಡೆ ಹೇಗೆ ಬರುತ್ತದೆ ಎಂಬ ಸಂಗತಿಗಳ ಅರಿವು ಈ ಸಂಬಂಧದಲ್ಲಿ ಪ್ರಕಾಶಗೊಳ್ಳುತ್ತದೆ. ಕಡಮೆ ಮಟ್ಟದ ಜನಕ್ಕೆ ಮೇಲಿನವರ ದಬ್ಬಾಳಿಕೆಯಿಂದ ಮಾನ್ಯತೆ ದೊರೆಯದಿರುವಾಗ ಇವರು ದಂಗೆ ಎದ್ದು ಗೆದ್ದು ಅದನ್ನು ಸಾಧಿಸಿಕೊಳ್ಳುವ ಮಾರ್ಗವೊಂದು ; ಪ್ರಭಾವ ಶಾಲಿಗಳಾದ ಋಷಿವರ್ಗದಂಥವರು ಅವರಿಗೆ ದೊರಕಿಸಿ—ಗುಣ, ಗೌರವ ಕಾಣಿಸಿಯಾದ ಮೇಲೆ,—ಪುರಸ್ಕಾರಭಾಗವಾಗಿ ಪದವಿ ಏರಿಸುವ ಕಾರ್ಯ ಇದು. ಇಂದ್ರನಿಗೆ ಇರುವುದು ದರ್ಪ, ವಜ್ರಾಯುಧದ ಮದ. ಆದರೆ ಶಕ್ತಿಗೆ ಕೂಡ ಅವನ ಧಾರ್ಮಿಕ ಬುದ್ಧಿ ಆಧಾರವಾಗಬೇಕೇ ವಿನಾ ದರ್ಪವಲ್ಲ, ಅಧಿಕಾರ ಮದ, ದಂಭಗಳಲ್ಲ. ಇಂದ್ರನ ಮದವೇ ಅಸುರವಾಗಿ ಅವನನ್ನು ಕಿತ್ತು ತಿನ್ನುತ್ತದೆ. ಋಷಿಯರ ತಪಸ್ಸು, ರಾಜರ ಯಜ್ಞಯಾಗಾದಿಗಳು ದೊರಕಿಸುವ ಬಲವೇ ಅವನಿಗೂ ಬಲ ; ಇಲ್ಲವಾದರೆ ಅವನ

ಕೈಯೂ ಮೋಘವೇ ದುರ್ಬಲವೇ ಎಂಬ ತತ್ವಗಳನ್ನು ಇಂದ್ರನಂಥ ಪದವಿಯಲ್ಲಿರುವವರು ಮರೆಯುತ್ತಾರೆ. ನಿಜವನ್ನು ಅವರಿಗೆ ತೋರಿಸಿಕೊಡಬೇಕಾಗುತ್ತದೆ. ವೈದ್ಯರ ಸ್ಥಾನ ಅವರದು. ಇಂದು ವಿಜ್ಞಾನ ಪ್ರಪಂಚದಲ್ಲಿಯೂ ಗಣಿತದವರಿಗೆ ಭೌತವಿಜ್ಞಾನಿಗಳಿಗೆ ಇರುವ ವಿಜ್ಞಾನಮಾನ ಎಂಜಿನಿಯರಿಗೂ (ತಂತ್ರಶಿಲ್ಪ) ವೈದ್ಯರಿಗೂ ಇಲ್ಲವೆಂದು ಕೇಳಿದ್ದೇನೆ.

ಲೋಕದಲ್ಲಿ ಯಾವಾಗಲೂ ಹೀಗೇ. ಸಮಾನತೆ ಬೇಡುವ ವ್ಯಕ್ತಿವರ್ಗ ಅಧಿಕಾರ ಮಂಡಲಗಳು, ಜನವರ್ಗಗಳು ಕೊಡದವರ ಮೇಲೆ ಹೇಗೆ ಎದುರು ಬೀಳುತ್ತವೆ ಎಂಬುದನ್ನು ಲೋಕ ಕಂಡಿದೆ ; ದಿನಾ ಕಾಣುತ್ತಿದೆ. ಈ ಗಳಿಕೆಯು ಅಂಥ ಒಂದು ಚಿತ್ರ ಇಲ್ಲಿ ದೊರೆಯಬಹುದೆಂದಿದ್ದೇನೆ. ನನಗಿಂತ ಮೇಲ್ತರದ ಕಲ್ಪನಾಶಕ್ತಿ, ರೂಪಣ ಸಂಪತ್ತಿ ಮೆರಸಬಲ್ಲವರು ಇದನ್ನು ಬೇರೆ ಹಿರಿಮೆಯಲ್ಲಿ ಸಾಧಿಸಬಹುದು. ಇಂದ್ರಾದಿಗಳಿಗೆ ಈ ದರ್ಪ, ಅಧಿಕಾರ ಏಕೆ ? ಬೇಕೆ ? ಎಂಬ ಪ್ರಶ್ನೆಯನ್ನು ಕೇಳಿ ನಿರ್ವಹಿಸಬಹುದು.

ರುರು–ಪ್ರಮದ್ವರೆ ಎಂಬ ನೀಳ್ಗವನದಲ್ಲಿ ಮಾಸ್ತಿಯವರು ಕಾಣಿಸಿದ ಒಂದು ವಿವರಾಂಶವನ್ನೂ ನಳದಮಯಂತಿಯರ ಪ್ರಸಂಗದಲ್ಲಿ ಆಕೆ ಅನುಸರಿಸಿದ ಮಾರ್ಗವನ್ನೂ ನೆನೆದು ಬಳಸಿಕೊಂಡು ಒಂದು ಕಡೆ ನನ್ನ ಪ್ರಯೋಜನಕ್ಕೆ ದುಡಿಸಿದ್ದೇನೆ.

ಇಂದ್ರನನ್ನೂ ಅಶ್ವಿನಿ ಮುಂತಾದವರನ್ನೂ ಯಜ್ಞಶಾಲೆಗೆ ಆಹ್ವಾನಮಾಡುವಾಗ ಬಳಸುವ ಮಂತ್ರಭಾಗವನ್ನು ನನಗೆ ಧಾರವಾಡದಲ್ಲಿರುವ ಮಹಾ ವಿದ್ವಾಂಸರಾದ ಶ್ರೀ ಬಾಲಚಂದ್ರ ಶಾಸ್ತ್ರಿಗಳವರು ದೊರಕಿಸಿಕೊಟ್ಟು ಉಪಕಾರ ಮಾಡಿದ್ದಾರೆ. ಬೆಂಗಳೂರಿನಲ್ಲಿರುವ ವಿದ್ವಾನ್ ಶ್ರೀ ರಂಗನಾಥಶರ್ಮರವರು ವ್ಯಾಕರಣ ಪ್ರಕ್ರಿಯೆಯಲ್ಲಿ ಅತಂತ್ರನಾದವನಿಗೆ ಸಂಸ್ಕೃತದ ಕೆಲವು ವಾಕ್ಯಗಳನ್ನೂ ನುಡಿಗಟ್ಟನ್ನೂ ಖಚಿತ ಮಾಡಿಕೊಳ್ಳಲು ನೆರವು ಕೊಟ್ಟಿದ್ದಾರೆ. ಇದಕ್ಕಾಗಿ ಈ ಮಾನ್ಯರಿಗೆ ನಾನು ಋಣಿ. ಮಂತ್ರಗಳನ್ನು ಅನುಬಂಧವಾಗಿ ಅಚ್ಚುಮಾಡಿದೆ.

ಈಚೆಗೆ ನನ್ನ ಕೆಲವು ಕೃತಿಗಳನ್ನು ಪ್ರಕಟಿಸಿ ಈ ಎರಡು ವರ್ಷಗಳಲ್ಲಿ ನನಗೆ ಅನೇಕ ಬಗೆಯಲ್ಲಿ ಪ್ರೋತ್ಸಾಹ ಕೊಟ್ಟಿರುವ ಮೈಸೂರು ಗೀತಾ ಬುಕ್ ಹೌಸಿನ ಎಂ. ಸತ್ಯನಾರಾಯಣರಾವ್ ಸಹೋದರರ ಪ್ರಕಾಶನ ಸಹಾಯ ಅತಿಶಯವಾದ್ದು. ಏಳೆಂಟು ವರ್ಷಗಳಿಂದ ಕೊಳೆಯುತ್ತಿದ್ದ ಇದಕ್ಕೆ ಅವರು ಗತಿ ಕಾಣಿಸಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ವಂದನೆಗಳು. ವಯಸ್ಸಾಗುತ್ತಿರುವವರಿಗೆ ತಾವು ಮಾಡಿದ ಕೆಲಸ ಕಣ್ಣಿಗೆ ಬೇಗ ಬೀಳಲಿ ಎಂಬ ಆಶೆ ಕೆಲವೇಳೆ ಆತುರವಾಗುತ್ತದೆ. ಆತುರ ಎಂದರೆ ರೋಗಿ. ಮುಪ್ಪು ಒಂದು ಬಗೆಯಲ್ಲಿ ರೋಗವೇ ಅಲ್ಲವೆ ? ಇದನ್ನು ಬಹುಬೇಗ ಅಚ್ಚುಮಾಡಿರುವ ಜಿ. ಎಚ್. ರಾಮರಾಯರಿಗೆ ನನ್ನ ವಂದನೆಗಳು.

ಬೆಂಗಳೂರು
ಮೇ ೧೫, ೧೯೭೦

ವಿ. ಸೀತಾರಾಮಯ್ಯ

## II

ನನ್ನ ಎರಡು ನಾಟಕಗಳನ್ನು (ಆಗ್ರಹ-ಚ್ಯವನ) ೧೯೭೨-೭೩ರಲ್ಲಿ ಪ್ರಿ-ಯೂನಿವರ್ಸಿಟಿ ಎರಡನೆಯ ವರ್ಷದ ವ್ಯಾಸಂಗಕ್ಕಾಗಿ ಗೊತ್ತುಮಾಡಿದ ಪಠ್ಯಪುಸ್ತಕ ಸಮಿತಿಗೂ ಅದರ ಮಾನ್ಯ ಡೈರೆಕ್ಟರ್ ಅವರಿಗೂ ನಾನು ಋಣಿ.

ನಮ್ಮ ಇತಿಹಾಸ, ಕಾವ್ಯಗಳಲ್ಲಿನ ಎಷ್ಟೋ ಖಂಡಗಳು ಇಂದಿಗೂ ಸ್ಫೂರ್ತಿದಾಯಕವೇ. ಆಗ್ರಹದಲ್ಲಿ ಕೃಷ್ಣನ ಪಾತ್ರ ಗಂಭೀರವಾದ್ದು ; ಅವನ ಮಾತು ನಡತೆಗಳಲ್ಲಿ ಅವನ ಜೀವದ ನಿಲವೂ ಗುಣವೂ ಸ್ವಲ್ಪವಾದರೂ ಕಾಣುವಂತಾದರೆ ನಾನು ಕೃತಾರ್ಥ.

ಚ್ಯವನನ ಕಥೆ ಹೆಚ್ಚು ಮಂದಿಗೆ ಗೊತ್ತಿಲ್ಲ. ಅದೂ ಮಹಾಭಾರತದಲ್ಲಿನದೇ. ಮುದುಕರಂಥವರಿಗೆ ಯೌವನ ತರುವ ಶಕ್ತಿ ಚ್ಯವನಪ್ರಾಶವೆಂಬ ಲೇಹ್ಯದಲ್ಲಿದೆ ಎನ್ನುತ್ತಾರೆ ಆಯುರ್ವೇದ ಬಲ್ಲವರು. ಅಶ್ವಿನಿಯರು ಏನು ಮಾಡಿದರೋ ಅದರ ರಹಸ್ಯವನ್ನು ಅವರೇ ಬಲ್ಲರು. ಚ್ಯವನಋಷಿ ಯುವಕನಾದ ; ಸುಕನ್ಯೆ ಚ್ಯವನರ ದಾಂಪತ್ಯ ಬೆಳಗಿತು. ಉಪಕಾರಸ್ಮರಣೆಗಾಗಿ ಋಷಿ ಈ ವೈದ್ಯದೇವತೆಗಳಿಗೆ ಇಂದ್ರನೊಡನೆ ಸಮಾನರಂತೆ ಸೋಮಪಾನದ ಮೇಲ್ತರದ ಹೊಸ ಪದವಿಯನ್ನು ದೊರಕಿಸಿದ. ಕೀಳಾಗಿದ್ದ ಒಂದು status (ಪದವಿ) ಮೇಲ್ಪಟ್ಟ ಪ್ರಸಂಗ ರಾಜಕೀಯ, ಸಾಮಾಜಿಕ ಸಂಕೇತವೂ ಆಗುತ್ತದೆ.

ವಿದ್ಯಾರ್ಥಿಗಳಿಗೆ ಇದು ಸಂತೋಷ ತಂದರೆ ನನಗೂ ಸಂತೋಷ.

ಪಠ್ಯಪುಸ್ತಕ ಸಮಿತಿಯವರ ಉಪಕಾರಕ್ಕೆ ವಂದನೆಗಳು. ಇದನ್ನು ಪುನಃ ಪ್ರಕಟಿಸುತ್ತಿರುವ ಶ್ರೀ ಸತ್ಯನಾರಾಯಣರಾವ್ ಸೋದರರಿಗೂ ವಂದನೆಗಳು.

ಬೆಂಗಳೂರು **ವಿ.ಸೀ.**
ಏಪ್ರಿಲ್ ೨೪, ೧೯೭೨

# ಪಟ್ಟಬಂಧ

ಪಾದುಕಾ ಪಟ್ಟಾಭಿಷೇಕ ಅಯೋಧ್ಯಾ ಕಾಂಡದಲ್ಲಿ, ಎಂದರೆ ವಾಲ್ಮೀಕಿ ರಾಮಾಯಣದಲ್ಲಿ, ಬಹಳ ಪ್ರಖ್ಯಾತವಾದ ಪ್ರಸಂಗ. ಇದು ನನ್ನ ಮನಸ್ಸಿಗೆ ತಟ್ಟಿರುವ ಹಾಗೆ ಬೇರಾವುದೂ ತಟ್ಟಿಲ್ಲ. ಭರತನು ಅಯೋಧ್ಯೆಗೆ ಬಂದು ತಂದೆ ತೀರಿಕೊಂಡುದನ್ನು ಕೇಳಿ ರಾಜ್ಯವನ್ನು ಸ್ವೀಕರಿಸದೆ ರಾಮನನ್ನು ಹುಡುಕಿಕೊಂಡು-ತಾಯಿಯೂ ತನ್ನನ್ನು

ಹಿಂಬಾಲಿಸುತ್ತಿರಲು–ಚಿತ್ರಕೂಟದವರೆಗೂ ಹೋದ. ಇಂಥ ಒಂದು ಸನ್ನಿವೇಶ ನಮ್ಮ ಇತಿಹಾಸ ಕಾವ್ಯದಲ್ಲಿ ಹೆಚ್ಚಿಲ್ಲ. ಭರತ ದೊಡ್ಡವನು ; ಲಕ್ಷ್ಮಣ ದೊಡ್ಡವನು. ಲಕ್ಷ್ಮಣನ ಸಮಕ್ಕೆ ಭರತನೂ ಸ್ವಾರ್ಥವನ್ನು ಬಿಟ್ಟುಕೊಟ್ಟು ಒಂದು ತಪಶ್ಚರ್ಯೆಯೆಂಬಂತೆ ಕೈಕೊಂಡು ಕೃತಾರ್ಥನಾದವನು.

ಈ ನಾಟಕವನ್ನು ಮೊದಲು ಲಂಡನ್ನಿನ ಭಾರತೀಯ ವಿದ್ಯಾಭವನದವರು ಆಡಿಸುವುದಕ್ಕಾಗಿ ಇಂಗ್ಲಿಷಲ್ಲಿ ತಕ್ಷಣದಲ್ಲಿ ಬೇಕೆಂದು ಬರಸಿದರು. ಆದರೆ ಅದು ನಡೆಯಲಿಲ್ಲ. ಯಾವುದಕ್ಕೂ ಪ್ರಯೋಜನವಿಲ್ಲದಂತಾಗಬಾರದೆಂದು ಕನ್ನಡಿಸಿದೆ. ಅದನ್ನು ಗೆಳೆಯರು ಪ್ರಕಟಿಸುತ್ತಿದ್ದಾರೆ. ಸಂತೋಷ.

ಯುಗಾದಿ : 29-3-79 **ವಿ. ಸೀತಾರಾಮಯ್ಯ**
ಬೆಂಗಳೂರು

# ಪಿಗ್‌ಮೇಲಿಯನ್

ಜಾರ್ಜ್ ಬರ್ನಾಡ್ ಷಾ (1856—1950) ಬಹು ಪ್ರಖ್ಯಾತರಾದ ಆಂಗ್ಲ ನಾಟಕಕಾರರು. ಅವರ ಸುತ್ತ ಪುರಾಣಗಳೇ ಹೆಣೆದುಕೊಂಡಿವೆ. ವಾದ ವಿವಾದಗಳ ಮೆಳೆ ಹಬ್ಬಿದೆ. ವ್ಯಕ್ತಿಯಾಗಿ, ನಾಟಕಕಾರರಾಗಿ, ವಾಗ್ಮಿ ಸುಧಾರಕರಾಗಿ, ಚಿತ್ರ, ಸಂಗೀತ, ನಾಟಕಗಳ ಸಾರವಿಮರ್ಶಕರಾಗಿ ಅವರ ಹೆಸರು ದೊಡ್ಡದು. ಲೋಕದ ಬಾಳು ಹೆಚ್ಚು ಸತ್ಯನಿಷ್ಠವಾಗಿ ನಗೆ ಸಂತೋಷಗಳಿಂದ ತುಂಬಬೇಕೆಂದು 50-60 ವರ್ಷ ಕಾಲ ಶ್ರಮಿಸಿದ ಜೀವ ಅವರದು. ಒಂದು ಸಾರ್ವಜನಿಕ ಶಿಕ್ಷಣಕಾರ್ಯ ಅವರೊಬ್ಬರಿಂದಲೇ ನಡೆದು ನಾಲ್ಕಾರು ತಲೆಮಾರುಗಳು ಬೆಳೆದವು. ಆ ಕಾಲದಲ್ಲಿ ಚೆಸ್ಟರ್‌ಟನ್, ವೆಲ್ಸ್, ಷಾ, ಮಾರ್ಲೆ ಇವರ ಲೋಕಶಿಕ್ಷಣ ಕಾರ್ಯ ಬಹು ಉಪಕಾರಕವಾಯಿತು. ನಾಟಕ ನಿರ್ಮಾಣದಲ್ಲಿಯೂ ಪ್ರಯೋಗದಲ್ಲಿಯೂ ಒಂದು ಹೊಸ ಸಂಪ್ರದಾಯವನ್ನು ನಿರ್ಮಾಣ ಮಾಡಿದವರು ಅವರು. ಅವರ ನಾಟಕಗಳು ನಾಟಕಗಳೇ ಅಲ್ಲ, ಅವರು ಆ ಮಾಧ್ಯಮವನ್ನು ಬಳಸಿಕೊಂಡು ಬುದ್ಧಿಯ ಜಾಣ್ಮೆಯನ್ನೂ ಕುಶಲತೆಗಳನ್ನೂ ಪ್ರದರ್ಶನ ಮಾಡಿದರು ಮಾತ್ರ ಎಂಬವರು ಹಲವರಿದ್ದಾರೆ. ಒಂದು ರೀತಿ ಇದ್ದರೆ ಮಾತ್ರ ಕವಿತೆ, ನಾಟಕ ಎಂದು ಸ್ವರೂಪ ಲಕ್ಷಣವನ್ನು ಕುರಿತ ತೀರ್ಮಾನ ಮಾಡಿ ಆ ರೀತಿ ಇಲ್ಲದಿದ್ದರೆ ಕವಿತೆ ಅಲ್ಲ, ನಾಟಕ ಅಲ್ಲ ಎಂಬವರಿಂದ ಸಾಹಿತ್ಯಕ್ಕೆ ಆಗಿರುವ ಅಪಕಾರವೂ ಬುದ್ಧಿ ವಿಕೃತಿಯೂ ಬೇರೆ ಏತರಿಂದಲೂ ಆಗಿಲ್ಲ. ಆರ್ಥಿಕ, ಸಾಮಾಜಿಕ,

ವ್ಯಾವಹಾರಿಕ ಜೀವನವನ್ನು ಕುರಿತು ತಮ್ಮ ಕಲ್ಪನೆಗಳನ್ನೂ ಬೇರೆ ವಿಮರ್ಶೆಗಳನ್ನೂ ವಿಶದಗೊಳಿಸಲು ಸಂಭಾಷಣೆಯ ಮಾರ್ಗವನ್ನೂ ರೂಪಕ ಸನ್ನಿವೇಶಗಳನ್ನೂ ಕಲ್ಪಿಸಿ ಕೊಂಡು ಸರ್ಕಸ್ ಮಾಡಿದವರು ಅವರು ; ಅವರ ವ್ಯಕ್ತಿಗಳು ರಕ್ತ ರಸಪುಷ್ಟರಾದ ಜೀವಂತ ವ್ಯಕ್ತಿಗಳಲ್ಲ ; ಅವರವೇ ಧ್ವನಿಗಳು ; ಅವರವೇ ವಾದದ, ದೃಷ್ಟಿಯ ಪ್ರತೀಕ ಗಳು—ಎನ್ನುವವರುಂಟು. ಷೇಕ್ಸ್‌ಪಿಯರ್, ಮೋಲಿಯೇ, ಕಾಲಿದಾಸರು ಆಯಾ ದೇಶದ ಜನದ, ಮಾನವರ ಮಾದರಿ, ಅಂಥವರಲ್ಲದವರು ಮನುಷ್ಯರೇ ಆಗಲಾರರು ಎಂಬಂಥ ನಿಲವು ಸೃಷ್ಟಿಕರ್ತನ ಮೇಲೆಯೇ ಅಪವಾದ. ಅದೆಲ್ಲ ಹಾಗಿರಲಿ ; ಐದು ಕಾದಂಬರಿಗಳನ್ನು ಬರೆದು ಅವು ಅಚ್ಚಾಗದೆ, ಪುರಸ್ಕಾರಗೊಳ್ಳದೆ ಇರುವಾಗ Widowers' Houses ಎಂಬ ಒಂದು ನಾಟಕವನ್ನು ಬರೆದು (1885) ಗೆಳೆಯ ರೊಬ್ಬರ ವಿಶ್ವಾಸದಿಂದ ರಂಗ ಪ್ರವೇಶ ಮಾಡಿದ (1892) ಕಾಲದಿಂದ ಹಿಡಿದು ಅವರ ಆಜೀವ ಕಾಲ 40ಕ್ಕೂ ಹೆಚ್ಚಿನ ನಾಟಕಗಳನ್ನು ಬರೆದು ಕೀರ್ತಿ ಪಡೆದವರು ಷಾ. ಅವನ್ನು ಆಡುವುದು ಅಶಕ್ಯ, ಅಷ್ಟು ಮಾತನಾಡಬೇಕಾದರೆ ನಟರು ಸತ್ತುಹೋಗುತ್ತಾರೆ, ಶ್ರೋತೃಗಳೂ, ಪ್ರೇಕ್ಷಕ ವರ್ಗವೂ ಬೇಸತ್ತು ಹೋಗುತ್ತವೆ ಖಂಡಿತ—ಎಂದು ಪ್ರತಿಜ್ಞೆ ಮಾಡುತ್ತಿದ್ದ ವಿಮರ್ಶಕರ ನಿರೀಕ್ಷೆ ಪ್ರತಿಸಲವೂ ಮುರಿದು ಬಿದ್ದು, ಆ ನಾಟಕಗಳು ಎಲ್ಲೆಲ್ಲೂ ಜನಪ್ರಿಯವಾದವು. ಷಾ ನಾಟಕದಲ್ಲಿ ಕಾಣಿಸುವ ಮನೋವಿಲಾಸದ ಜೊತೆಗೆ ಅಲ್ಲಿನ ಹಾಸ್ಯಗರ್ಭ ಅದ್ಭುತವಾದ್ದು. ಅವರ ನಗೆಯ ಬಗೆ ಅವರಿಗೇ ವಿಶಿಷ್ಟ. ಆ ಬಗೆಯ ಹಾಸ್ಯ ಐರಿಷ್. ಇಂಗ್ಲಿಷಿನಲ್ಲಿ ವಾಗ್ಮಿಗಳಾಗಿ, ನಾಟಕಕಾರರಾಗಿ, ನಾಟಕ ಸಂಗೀತಗಳ ವಿಮರ್ಶಕರಾಗಿ ಇಂಗ್ಲಿಷ್ ಸಾಹಿತ್ಯಕ್ಕೂ ವಿಮರ್ಶೆಗೂ ಷಾ ಮಾಡಿರುವ ಸೇವೆ ಅತಿಶಯವಾದ್ದು.

ನಮ್ಮಲ್ಲಿ ಈಗ ಎಲ್ಲೆಲ್ಲಿಯೂ ಇಂಥವರು ನಮ್ಮ ಷೆಲ್ಲಿ, ನಮ್ಮ ಇಬ್ಸೆನ್, ನಮ್ಮ ಷಾ ಎಂಬಂತೆ ಬೆಲೆ ಎಣಿಕೆ ಮಾಡುವುದುಂಟು. ಇಂಗ್ಲಿಷ್ ನಾಟಕ ಪರಿಚಯ ವಿರುವವರು ಸಮಾಜ ವಿಮರ್ಶೆ, ಹಾಸ್ಯಗಳನ್ನು ಬೆಳಸಿ ರೀತಿ, ನೀತಿ, ಅಭಿಪ್ರಾಯ ವಿಮರ್ಶೆ ಮಾಡುವ ನಾಟಕ ಕರ್ತೃಗಳನ್ನು ಕನ್ನಡದ ಷಾ, ಬಂಗಾಳಿ ಷಾ ಎಂದು ನಿರ್ದೇಶಿಸುವುದುಂಟು. ಇದು ಇಬ್ಬರಿಗೂ ಕೀರ್ತಿತರುವ ಪ್ರಸಂಗವಲ್ಲ. ಆದರೂ ಅಷ್ಟು ಕೀರ್ತಿ ಇರುವ ನಾಟಕಕಾರನ ಒಂದು ನಾಟಕವೂ ಕನ್ನಡಕ್ಕೆ ಬಂದಿಲ್ಲ. ಬೇರೆ ಭಾಷೆಗಳಲ್ಲಿ ಬಂದಿವೆಯೊ ಇಲ್ಲವೊ ನಾನರಿಯೆ. ಬಹುಶಃ ಇಲ್ಲ. ಆತನನ್ನು ಮುಟ್ಟುವ ಧಾರ್ಷ್ಟ್ಯ ಅವಿವೇಕಿಯ ಸಾಹಸ. ಅಂಥ ಅವಿವೇಕಸಾಹಸವೊಂದನ್ನು ನಾನು ಈ ಭಾಷಾಂತರದಲ್ಲಿ ಮಾಡಿದ್ದೇನೆ. ಮೂಲದ ಜೀವ ಗುಣವನ್ನೂ ಅರ್ಥವನ್ನೂ ಕನ್ನಡಕ್ಕೆ ಪೂರ್ತಿ ತರುವುದು ಶಕ್ಯವಾಗಿಲ್ಲ. ಆನೆ ನಡೆದು ಹೋದ ಜಾಡು ಇದು—ಎಂದು ಕಾಣಿಸಲು ಅದು ನೆರವಾಗುವುದಾದರೆ ನಾನು ಕೃತಾರ್ಥ. ನನಗಿಂತ ಶಕ್ತರಾದವರು ನಾಳೆ ಅದನ್ನು ಮಾಡಲಿ ; ಇದು ಆರಂಭ.

ಷಾ ಅವರ ವಸ್ತು, ರೀತಿ, ಸಂಭಾಷಣೆ, ಸನ್ನಿವೇಶ ಕಲ್ಪನೆ, ಕ್ರಿಯಾ ಸಾಧನೆ, ವಿನೋದ—ಇವುಗಳ ಸ್ವರೂಪ ಸುಮಾರು ಎಂಥದು ಎಂಬುದರ ಸ್ಥೂಲ ಪರಿಚಯವನ್ನು ಮಾಡಿಕೊಟ್ಟರೆ ಒಂದು ಹೊಸ ಪ್ರಕಾರದ ಅರಿವನ್ನು ಮಾಡಿಕೊಟ್ಟ ಹಾಗಾಗುತ್ತದೆ. ಅದನ್ನು ನಮ್ಮ ಆವರಣಕ್ಕೆ ಹೋದಿಸಿಕೊಂಡು, ನಮ್ಮ ಹೆಸರು, ವೇಷ ಕೊಟ್ಟು, ವಿದೇಶಿ ಹೆಣ್ಣಿಗೆ ನಮ್ಮ ಸೀರೆ ಉಡಿಸಿ ಚೆನ್ನ ತೋರಿಸುವುದು ಒಂದು ಮಾರ್ಗ ; ನಾನು ಮೂಲದ ಹೆಸರುಗಳನ್ನೇ ಉಳಿಸಿಕೊಂಡಿದ್ದೇನೆ. ಅನಿವಾರ್ಯವಾದಾಗ—ಮಾತಿನ ಉಚ್ಚಾರ, ನಮ್ಮ ಮಾತುಗಳ ಉಚ್ಚಾರಗಳಿಗೆ ಹತ್ತಿರವಿರುವಂತೆ—ಮಾತ್ರ ಮಾರ್ಪಡಿಸಲು ಯತ್ನಿಸಿದ್ದೇನೆ. ಅಲ್ಲಿನ ಡಚ್ಚೆಸ್, ಶ್ರೀಮಂತರ ಸಂತೋಷ ಕೂಟ ಎಂಬವನ್ನು ವರ್ಣಿಸುವುದು ಶಕ್ಯವಿಲ್ಲ. ಪಾಶ್ಚಿಮಾತ್ಯ ಕಾದಂಬರಿಗಳನ್ನು ಓದಿದವರಿಗೂ ಅವರ ಸಿನೆಮಗಳನ್ನು ನೋಡಿದವರಿಗೂ ಇದು ಸ್ವಲ್ಪಮಟ್ಟಿಗೆ ವೇದ್ಯವಾದೀತು. ಅದಕ್ಕೆ ಪ್ರತ್ಯಾಮ್ನಾಯ ಇಲ್ಲಿಲ್ಲ. ಅದನ್ನು ಕಲ್ಪಿಸಿಕೊಳ್ಳಬೇಕು. ಇಲ್ಲಿನ ಪಾಕ್ಸರಣಿ ಬರವಣಿಗೆಯ ಪ್ರಕಾರದ್ದಾದರೂ ಇದನ್ನು ಆಡುವ ಯೋಗ ಉಂಟಾದರೆ ಅದನ್ನು ಆಡುವವರ ಉಚ್ಚಾರಗಟ್ಟಿನಂತೆ ಚಾಳಿಸಿ ನುಣುಪು ಮಾಡಿಕೊಳ್ಳಬಹುದು. ಉದಾ : ಮಾಡುವಹಾಗೆ ಎಂದು ಬರೆದಿರುವಾಗ, ಮಾಡೊ ಹಾಗೆ, ಮಾಡು ಹಾಗೆ, ಮಾಡೋ ಹಾಂಗೆ ಹಾಂಗ ಮುಂತಾಗಿ ಮಾರ್ಪಡಿಸಿಕೊಳ್ಳುವ ಅವಕಾಶವುಂಟು. ಇಂಗ್ಲಿಷಿನಲ್ಲಿ—ಏಕೆ ಎಲ್ಲಿಯೇ ಆಗಲಿ—ಈ ಕಷ್ಟ, ನ್ಯೂನತೆ ಉಂಟು. ಬರವಣಿಗೆಯ ಭಾಷೆಯನ್ನು ಕುರಿತು ಷಾ ಅವರೇ ಒಂದು ಮುನ್ನುಡಿಯಲ್ಲಿ ಹೇಳಿದಂತೆ yes ಎನ್ನುವ 50 ದಾರಿಗಳುಂಟು, no ಎಂಬ 500 ಬಗೆಗಳುಂಟು ; ಆದರೆ ಅವನ್ನು ಬರೆಯಲು ಇರುವುದು ಒಂದೇ ಬಗೆ ಎಂದು. ಎಲ್ಲ ಭಾಷೆಯಲ್ಲಿಯೂ ಹಾಗೆಯೇ. ಓದುವವರೂ ನಟರೂ ಇದನ್ನು ಹೊಂದಿಸಿಕೊಳ್ಳಬೇಕು. ಇಷ್ಟರ ಮೇಲೆ ಉಚ್ಚಾರಣೆಮಾಡಿದಂತೆಯೇ ಅಚ್ಚಾದ ಪುಸ್ತಕಗಳಲ್ಲಿ ಬರೆಯುವ ಯತ್ನ ಸರ್ವಥಾ ವಿಫಲ. ನಗೆ ಪಾಡಾಗಬಲ್ಲದು. ಅದೆಲ್ಲಿ, ಇದೆಲ್ಲಿ ? ಒಂದೇ ಭಾಷೆಯ ಬರವಣಿಗೆಯನ್ನು ಓದುವಾಗ ಕೂಡ ಪ್ರಾದೇಶಿಕವಾದ ಹಲವಾರು ವ್ಯತ್ಯಾಸಗಳಿರುತ್ತವೆ.

ಕನ್ನಡದಲ್ಲಿ ಹೊಸ ಕಾಲದವರೆಗೂ ನಾಟಕಗಳಿರಲಿಲ್ಲ. ಭಾರತದ ಬಹುತರ ಎಲ್ಲ ಭಾಷೆಗಳಲ್ಲಿಯೂ ಹಾಗೇ ಎಂದು ಕೇಳಿದ್ದೇನೆ. ಸ್ವಲ್ಪ ಹೆಚ್ಚು, ಸ್ವಲ್ಪ ಕಡಮೆ. ಸಾವಿರ ವರ್ಷಗಳ ಸಾಹಿತ್ಯ ಚರಿತ್ರೆ ಉಳ್ಳ ಸಂಸ್ಕೃತದಲ್ಲಿಯೇ ಸುಮಾರು 650 ಹೆಸರಿನ ನಾಟಕಗಳನ್ನು ಪಟ್ಟಿ ಮಾಡಿದ್ದರೂ ಅಖಿಲ ಪ್ರಪಂಚದ ತೂಕ ಅಳತೆಗಳಲ್ಲಿ ಬೆಲೆ ನಿಲ್ಲುವ ಒಂದು ಡಜನ್ ಅಥವಾ 20 ನಾಟಕಗಳಿವೆಯೆ ?—ಎನ್ನಿಸುತ್ತದೆ. ಎಲ್ಲ ಜನತೆಗಳಿಗೂ ಎಲ್ಲ ಬಗೆಯ ಶಕ್ತಿಯೂ ಇರಲೇಬೇಕೆಂಬ ನಿರ್ಬಂಧವೇನಿದೆ ? ನಮ್ಮ ಶಕ್ತಿಸ್ಥಾನ, ಗುಣಸ್ಥಾನ ಬೇರೆ ಬೇರೆ ಇರಲಾರವೆ ? ಈ ನಾಡಿಗೆ ರೂಪಕ ನಿರ್ಮಾಣ ಶಕ್ತಿ ಅಷ್ಟಾಗಿ ಇಲ್ಲವೆಂದರೆ ರೋಷವೇನು ? ರೋಷವೇತಕ್ಕೆ ? ಹೀಗೆನ್ನುವುದು

ಸ್ವದೇಶಾಭಿಮಾನ, ಸ್ವಸಂಸ್ಕೃತಿ ಸ್ವಾಭಿಮಾನ ರಹಿತತೆ, ಅವಹೇಳನ, ತನ್ನ ಮನೆಯನ್ನೇ ಕೊಳೆಮಾಡಿಕೊಳ್ಳುವ ವ್ಯಾಪಾರ ಎಂದು ತೆಗಳ ಬಹುದೇನೊ. ಆದರೆ ಅದಕ್ಕಿಂತ ದೊಡ್ಡದು ಸತ್ಯಕ್ಕೆ ಸಲ್ಲಿಸಬೇಕಾದ ಕಾಣಿಕೆ. ಅದನ್ನು ಕುರಿತು ನಾನು ಇಲ್ಲಿ ಈಗ ಏನನ್ನೂ ಹೇಳಬಯಸುವುದಿಲ್ಲ. ಮತ್ತು ನಾವು ಷೇಕ್ಸ್‌ಪಿಯರನ್ನೊ ಮೋಲಿಯೇ, ಷಾ, ಗಯ್ಟೆ, ಟಾಲ್‌ಸ್ಟಾಯ್‌ರನ್ನೊ ಒಪ್ಪಿದರೆ ನಮ್ಮ ಹಿರಿಮೆಗೆ ಕುಂದೆಂಬಂತೆ ನಮ್ಮ ಸಣ್ಣದನ್ನು ದೊಡ್ಡದಾಗಿ ಎಣಿಸಿ ಹಿಗ್ಗುವುದು ಸ್ವಾಭಿಮಾನವೇನೊ ಸರಿ. ಆದರೆ ಸತ್ಯದೂರ. ಹೆಚ್ಚು ಜನ ಸಂಖ್ಯೆ ಹೆಚ್ಚು ದೀರ್ಘ ಸಂಸ್ಕೃತಿ ಇರುವ ಕಡೆ ಹೆಚ್ಚು ಗುಣದ ಸಾಹಿತ್ಯ ನಿರ್ಮಾಣವಾಗಬೇಕೆಂಬ ನಿಯಮವೇನೂ ಇಲ್ಲ. ವಯೋಮಾನಕ್ಕೆ ಪ್ರಾಶಸ್ತ್ಯ ಕೊಡುವುದಾದರೆ ಮನುಷ್ಯರಿಗಿಂತಲೂ ಪ್ರಾಚೀನವಲ್ಲವೆ ಶಿಲೆ ? ಕಪಿ? ಪೆರಿಕ್ಲೀಸ್ ಕಾಲದ ಅಥೆನ್ಸ್ ಎಷ್ಟು ದೊಡ್ಡದು ? 20 ವರ್ಷ ಸುಮಾರಲ್ಲಿ ಎಷ್ಟು ಸಾಹಿತ್ಯ ಹುಟ್ಟಲಿಲ್ಲ ಅಲ್ಲಿ ! ಎಲಿಜಬೆತ್–I ಕಾಲದ ಲಂಡನ್ನೊ? ವಿಕ್ಟೋರಿಯ ಕಾಲ, ಲೂಯಿ XIV ಕಾಲ, ಸ್ವಲ್ಪ ದೀರ್ಘವೆನ್ನಬಹುದು—ಸುಮಾರು 50 ವರ್ಷಗಳು. ವಿದೇಶಗಳ ಪ್ರಾಚೀನ ಮಹಾ ನಾಟಕಗಳನ್ನು ಭಾಷಾಂತರ ಮಾಡಿಕೊಂಡು ಅವುಗಳ ಜೊತೆಗೆ ಮಧ್ಯಕಾಲದ ಎಲಿಜಬೀತನ್ ಮತ್ತು ಸ್ಪ್ಯಾನಿಷ್ ನಾಟಕಗಳನ್ನೂ 17ನೆಯ ಶತಮಾನದಲ್ಲಿ ಲೂಯಿ XIV ಕಾಲದ ದುರಂತ, ವಿನೋದ ನಾಟಕಗಳನ್ನೂ ಕನ್ನಡಕ್ಕೆ ತಂದುಕೊಳ್ಳಬೇಕು. ಇಬ್ಸೆನ್ ಕಾಲದಿಂದೀಚೆಗೆ ಯೂರೋಪಿನಲ್ಲಿ ಪ್ರಬಲಿಸಿರುವ ರೀತಿ ಪ್ರಕಾರಗಳು ಕಾಣುವಂತೆ ಆಧುನಿಕ ಕಾಲದ ನಿಷ್ಣಾತ ನಾಟಕಕಾರರೊಬ್ಬೊಬ್ಬರ 2–3 ನಾಟಕಗಳನ್ನಾದರೂ ನಮ್ಮ ಭಾಷೆಗಳಿಗೆ ತಂದುಕೊಂಡರೆ, ಇಂದು ಎಂಥೆಂಥ ವಿಷಯಗಳನ್ನು ಆರಿಸಿಕೊಳ್ಳುತ್ತಾರೆ ; ಸಂಭಾಷಣೆ ಎಷ್ಟು ಚುರುಕಾಗಿ, ಅರ್ಥವತ್ತಾಗಿ, ಧ್ವನಿ ವಿಲಾಸವುಳ್ಳದ್ದಾಗಿ ನಡೆಯುತ್ತದೆ ; ದೃಷ್ಟಿ, ಸಿದ್ಧಿ ಯಾವ ಬಗೆಯವು ಎಂಬುದೂ ರಚನಾ ತಂತ್ರವೂ ನಮ್ಮವರಿಗೆ ಗೊತ್ತಾಗುತ್ತವೆ. ಅವೆಲ್ಲ ರಂಗ ಪ್ರದರ್ಶನಕ್ಕೆ ಒಪ್ಪುವಂಥವು. ಆ ರಂಗ ಚರಿತ್ರೆಯೂ, ನಾಟಕ ವಿಮರ್ಶೆಯ ಪ್ರಪಂಚವೂ ನಮ್ಮವರಿಗೆ ತಿಳಿಯಬೇಕು. ಕೃತಿ ನಿರ್ಮಾಣ, ಪ್ರಯೋಗ ತಂತ್ರ, ಅಭಿನಯ, ನಾಟಕ ವಿಮರ್ಶೆಗಳು ಜೊತೆ ಜೊತೆಗೆ ಬಹುಮುಖವಾಗಿ ಬೆಳೆಯುವಂತಾದರೆ ಸಾವಿರಾರು ಜನ ಒಟ್ಟಿಗೆ ಕುಳಿತು ಎಲ್ಲ ಮಟ್ಟಗಳಲ್ಲಿಯೂ ರೂಪಣಕ್ರಿಯೆಯ ಸೌಭಾಗ್ಯವನ್ನು ಕಾಣುವ ಅವಕಾಶ ದೊರೆಯುವ ಜೊತೆಗೆ ಅಷ್ಟು ಬಗೆ ಬೆಲೆಯ ವಿವೇಚನೆಯಾಗುತ್ತದೆ. ಷಾ ತನ್ನ ಪ್ರಯೋಗವನ್ನು ಕುರಿತು ತೇಲಿಬಂದ ವಿಮರ್ಶೆಗಳ 'ಹೆಣ ಹಾಕು'ತ್ತಾರೆ. Widowers' Housesನ್ನು ಕುರಿತು ಷಾ ಟೀಕಾಕಾರರ ಮೇಲೆ ತನ್ನ ಯೋಧತನವನ್ನು ಪ್ರಕಾಶಿಸುತ್ತಾರೆ. ಆದರೆ ಅಲ್ಲಿನ ಪತ್ರಿಕೆಗಳವರು ಎಷ್ಟು ಜನ, ಎಷ್ಟು ಬಗೆಯಾಗಿ ನಾಟಕ ವಿಮರ್ಶೆ ಮಾಡುತ್ತಿದ್ದರೆಂದು ಓದಿ ಕೇಳಿ ಹೊಟ್ಟೆ ತುಂಬುತ್ತದೆ. ಈ ನಮ್ಮ ಜನಕ್ಕೆ ಏನೂ ಬೇಡ. ನಮ್ಮಲ್ಲಿಯೂ ಅಂಥ ವಿಮರ್ಶನ ಸ್ವತಂತ್ರವಾಗಿ ಕೃತಿ ನಿರ್ಮಾಣ

ಮಾಡುವವರಿಗೆ ಸ್ಫೂರ್ತಿ, ನಾಟಕಕಾರರಿಗೆ ಮಾರ್ಗದರ್ಶನ ಆಗುತ್ತವೆ. ಇದನ್ನು ಆಗ ಮಾಡಿಕೊಡ ಬೇಕಾದವರು, ಆವರಣ, ಅವಕಾಶ, ಅನುಕೂಲ್ಯ ಕಲ್ಪನೆ ಮಾಡಬಲ್ಲವರು ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್‌ಟ್ರಸ್ಟ್, ವಿಶ್ವವಿದ್ಯಾನಿಲಯಗಳು, ಸಾಹಿತ್ಯ ಪರಿಷತ್ತುಗಳು, ಸಾಹಿತ್ಯ ಸಂಘಗಳು ಇತ್ಯಾದಿ. ಈ ಕೆಲಸ ಬೇಕಾದಷ್ಟಿದೆ. ಮಾಡುವವರೂ ಮಾಡುವ ಉತ್ಸಾಹವೂ ಮಾತ್ರ ಬೇಕು. ಅಚ್ಚಾದ ಪುಟಕ್ಕೆ ಐದು ರೂಪಾಯಿ ಕೊಡು ತ್ತೇನೆಂದರೆ 500 ಪುಸ್ತಕಗಳನ್ನು ಬರೆವ ಯೋಗ್ಯರು ಇದ್ದಾರೆ. ಇಲ್ಲವೇ, ಹುಟ್ಟಿ ಕೊಂಡಾರು. ಅವರು ಇರುವುದೂ ಹುಟ್ಟುವುದೂ ಯಾರಿಗೆ ಬೇಕು ? ಇದು ಕೃತಿಶಾಲಿ ಜನಾಂಗದ ಲಕ್ಷಣವೆ ?

ಪಿಗ್‌ಮೇಲಿಯನ್ ಚಲಚ್ಚಿತ್ರಕ್ಕೂ ಬಂದಿದೆ. ಬರ್ನಾರ್ಡ್ ಷಾ ಬರೆದ 8–10 ನಾಟಕಗಳಾದರೂ ಕನ್ನಡಕ್ಕೆ ಬಂದರೆ ನಮ್ಮ ನಾಟಕ ಪ್ರಪಂಚಕ್ಕೆ ಉಪಕಾರ ವಾಗುವುದರಲ್ಲಿ ಸಂದೇಹವಿಲ್ಲ. Candida, Arms and the Man, The Devil's Disciple, Fanny's First play, Doctor's Dilemma, Major Barbara, Apple Cart, ಮುಂತಾದವಾದರೂ ಬಂದೇಬರಬೇಕು. Man and Superman, Back to Methuselah, Heart-break House, The Simpleton of the Unexpected Isles—ಇವು ಬರುವುದು ಕಷ್ಟ. ಆದರೆ ಅವುಗಳ ಸಾರವನ್ನು ಹೀರಿಕೊಳ್ಳುವುದು ಅಶಕ್ಯವಾಗಬಾರದು. ಇವುಗಳ ಸ್ವಾಮ್ಯ ಷಾ ಅವರ ನಾಟಕಗಳ ವರಮಾನವನ್ನು ರೂಢಿಸುವ ಲಂಡನಿನ Society of Authors ಕೈಯಲ್ಲಿದೆ. ಅವರು ಕೇಳುವ ಪರಿವರ್ತನ ಶುಲ್ಕವನ್ನು ತೆತ್ತು ಆ ಕೆಲಸ ಮಾಡಬೇಕಾಗುತ್ತದೆ. ಆ ಹಣದಿಂದ ಯಾವುದೊ ಲೋಕಹಿತ ಕಾರ್ಯ ನಡೆಯುವುದಿದೆ. ನನಗೆ ಇದನ್ನೂ ಮೇಜರ್ ಬಾರ್ಬರವನ್ನೂ ಅನುವಾದಿಸಿ ಪ್ರಕಟಿಸಲು ಅಪ್ಪಣೆ ಕೊಟ್ಟು ಉಪಕಾರ ಮಾಡಿದ ಆ ಸಂಸ್ಥೆಯ ಅಧಿಕಾರಿಗಳಿಗೆ ನಾನು ತುಂಬಾ ಋಣಿ.

* * * *

ಪಿಗ್‌ಮೇಲಿಯನ್ ಗ್ರೀಕ್ ಪುರಾಣ ಪುರುಷ. ಪಿಗ್‌ಮೇಲಿಯನ್–ಗೆಲೇತಿಯಾ ಕಥೆ ಅವರಲ್ಲಿ ಪ್ರಸಿದ್ಧವಾದ್ದು. ಎರಡು ಸಂಪ್ರದಾಯಗಳು ವಿವರಿಸುವಂತೆ ಕಥೆ ಹೀಗಿದೆ :—

1. ಪಿಗ್‌ಮೇಲಿಯನ್ ಬೇಲಸ್ ಎಂಬವನ ಮಗ. ಅಫ್ರೊದಿತೆಯಲ್ಲಿ ಅನುರಕ್ತನಾದ. ಆ ದೇವತೆ ತನ್ನೊಡನೆ ಬಾಳಲು ಇಷ್ಟಪಡಲಿಲ್ಲವಾದುದರಿಂದ ದಂತದಲ್ಲಿ ಅವಳ ಪ್ರತಿಮೆಯನ್ನು ಮಾಡಿ ತನ್ನ ಹಾಸಿಗೆಯಲ್ಲಿ ಅದನ್ನು ಬಚ್ಚಿಟ್ಟುಕೊಂಡಿರುತ್ತಿದ್ದ. ಆಕೆಯ ಕರುಣೆ ತನ್ನ ಮೇಲೆ ಹಾಯಲು ಪ್ರಾರ್ಥಿಸುತ್ತಿದ್ದ. ಆ ವಿಗ್ರಹದೊಳಕ್ಕೆ ಅಫ್ರೊದಿತೆ ಪ್ರವೇಶಿಸಿ ಗೆಲೇತಿಯ ಎಂದು ಅದನ್ನು ಕರೆದು ಅದಕ್ಕೆ ಜೀವದಾನೆ

ಮಾಡಿದಳು. ಅವಳು ಇವನಿಗೆ ಪಾಫುಸ್, ಮೆಥ್ರಾನೆ ಎಂಬ ಇಬ್ಬರು ಮಕ್ಕಳನ್ನು ಹೆತ್ತಳು. ಪಾಫುಸ್ ಸಿಪ್ರಿಯನ್ ನಗರವಾದ ಪಾಫೊಸನ್ನು ಕಟ್ಟಿದವನು. ಅಲ್ಲಿ ಅಫ್ರೊದಿತೆ ದೇವಾಲಯುವನ್ನು ಕಟ್ಟಿಸಿದವನು ಅವನೇ.

ಪಿಗ್‌ಮೇಲಿಯನ್ ಅಫ್ರೊದಿತೆಯ ಪೂಜಾರಿಣಿಯನ್ನು ಮದುವೆಯಾದ. ಶ್ವೇತ ತಂತ್ರದ ದೇವತೆಯ ಪ್ರತಿಮೆಯನ್ನು ತನ್ನ ಹಾಸಿಗೆಯಲ್ಲಿ ಇಟ್ಟುಕೊಂಡಿದ್ದ ಹಾಗೆ ಕಾಣುತ್ತದೆ. ಸೈಪ್ರಸಿನ ಅರಸುತನವನ್ನು ಉಳಿಸಿಕೊಳ್ಳಲು ಅವನು ಕೈಗೊಂಡ ಕಾರ್ಯ ಇದು. ಈ ಪೂಜಾರಿಣಿ ಇವನಿಗೆ ಹೆತ್ತ ಮಗನೇ ಮುಂದಿನ ಅರಸಾಗಿದ್ದರೆ ಆ ನಾಡಿಗೆಲ್ಲ ವ್ಯಾಪಕವಾದ ಪಿತೃಪಾರಂಪರ್ಯದ ಒಂದು ಸಿಸ್ತನ್ನು ನಿರ್ಮಿಸಿದವನು ಆತನೇ ಆಗುತ್ತಾನೆ. ಬಹುತರ ಅವನ ಮೊಮ್ಮಗನಂತೆಯೇ ಅವನೂ ಎಂಟು ವರ್ಷಗಳಾದ ಮೇಲೆಯೂ ದೇವತೆಯ ವಿಗ್ರಹವನ್ನು ಬಿಟ್ಟುಕೊಡಲು ಒಪ್ಪಲಿಲ್ಲ.

ಹಾಗೆಯೇ ಅಫ್ರೊದಿತೆಯ ಇನ್ನೊಬ್ಬ ಪೂಜಾರಿಣಿಯನ್ನು ಮದುವೆಯಾಗಿ ತನ್ನ ಅರಸುತನವನ್ನು ಮುಂದುವರಿಸಿದನು. ಅರಸೊತ್ತಿಗೆಗೆ ಹಕ್ಕಿದ್ದವಳು ಪೂಜಾರಿಣಿ. ಆದುದರಿಂದ ತತ್ವತಃ ಆಕೆ ಅವನಿಗೆ ಮಗಳಂತೆಯೇ ಅಲ್ಲವೆ ? ಆಕೆಯ ಹೆಸರು ಮೆಥರ್ಮೆ (ಮಾರ್ಪಾಡು)— ಈ ಮಾರ್ಪಾಡಿನ ಸಂಕೇತ.

(—ಗ್ರೀಕ್ ಮಿತ್ಸ್ : ರಾಬರ್ಟ್ ಗ್ರೇವ್ಸ್.)

2. ಪಿಗ್‌ಮೇಲಿಯನ್ ಸೈಪ್ರಸಿನ ರಾಜ. ಯೋಧಕೀರ್ತಿಗಿಂತಲೂ ಹೆಚ್ಚಾಗಿ ಅವನ ಕೀರ್ತಿ ಶಿಲ್ಪಿಯದು. ಕಲೆಗೆ ಮೀಸಲಾದ ಬದುಕು ಅವನದಾದ್ದರಿಂದ ಮದುವೆಯಾಗಲು ಅವನು ಇಷ್ಟಪಡಲಿಲ್ಲ. ತನ್ನ ಕೈಯಲ್ಲಿ ಸಮೆದ ಪ್ರತಿಮೆಗಳಷ್ಟು ಲೋಕದ ಯಾವ ಹೆಣ್ಣೂ ಚೆಲುವೆಯಲ್ಲ—ಆಗಲಾರಳು ಎನ್ನುತ್ತಿದ್ದನು. ಬಹುಕಾಲ ವಿನಿಯೋಗಿಸಿ ತುಂಬಾ ಪ್ರೀತಿಯಿಂದ ಒಂದು ದಂತದ ವಿಗ್ರಹವನ್ನು ಕೆತ್ತಿದ. ಅದು ಅವನ ಹೃದಯೇಶ್ವರಿಯಾಯಿತು. ಅದಕ್ಕೆ ಉಸಿರೂ ಮಾನವ ಸೌಂದರ್ಯವೂ ಲಾವಣ್ಯವೂ ಬರುವುದಾದರೆ ಲೋಕದಲ್ಲಿ ತನ್ನ ಸಮಸ್ತವನ್ನೂ ಬಿಟ್ಟುಕೊಟ್ಟೇನೆಂದು ಹಾತೊರೆದ. ಅದಕ್ಕೆ ಉತ್ತಮ ಮೂರ್ತತೆ ಬರುವಂತೆ ಹಗಲೆಲ್ಲ ಕೆಲಸಮಾಡುತ್ತಿದ್ದ. ರಕ್ತ, ಮಾಂಸ ಬರಲಿ, ಬಾರದೆ ?—ಎಂದು ಇರುಳೆಲ್ಲ ಬಿಸುಸುಯ್ಯುತ್ತಿದ್ದ.

ಈ ಪ್ರತಿಮೆಗೆ ಅವನು ಕೊಟ್ಟ ಹೆಸರು ಗೆಲೇತಿಯ. ಅದಕ್ಕೆ ಜೀವ ಬರಲೆಂದು ಬಯಸಿ ನಿರಾಶಾಸ್ಥಿತಿಗೆ ಮುಟ್ಟಿದ. ಅದರ ಮೈಗೆ ಕಾವು ಬರಲೆಂದು, ಸುರೂಪದ ಅದರ ಅಂಗಾಂಗಕ್ಕೆ ಚಲನೆ ಬರಲೆಂದು ಅದನ್ನು ಮುದ್ದಿಸಿದ. ಬಹು ಬೆಲೆಯ ನವುರು ವಸ್ತ್ರಗಳನ್ನು ಉಡಿಸಿದ. ಬಹು ಅನರ್ಘ್ಯವಾದ ಆಭರಣಗಳಿಂದ ಅದರ ಕೊರಲು, ತೋಳು ಹೊಳಪುಗೊಳ್ಳುವಂತೆ ಅಲಂಕರಿಸಿದ. ಎಲ್ಲ ಬಗೆಯ ಚೆಲು ಹೂಗಳನ್ನು ತಂದು ಅದರ ತಣ್ಣನೆಯ ಶಿರಸ್ಸಿಗೆ ಬಾಸಿಗವನ್ನು ಮಾಡಿದ. ಯತ್ನ ಫಲಕಾರಿಯಾಗಲಿಲ್ಲ. ವಿಗ್ರಹ

ವಿಗ್ರಹವಾಗಿಯೇ ಉಳಿಯಿತು. ಬೆಳ್ಳನೆಯ ಅದರ ಆಕೃತಿಯನ್ನು ಚಿನ್ನ ಪೀತಾಂಬರ ಗಳಿಂದ ಮುಚ್ಚಿದಷ್ಟೂ ಅದರ ಸೌಂದರ್ಯ ಕಡಮೆಯಾಯಿತು.

ಹೀಗಿರಲು ಅಫ್ರೊದಿತೆಯ ಉತ್ಸವದ ದಿನ ಬಂದಿತು. ಅಫ್ರೊದಿತೆ ಆ ದ್ವೀಪದ ಅಧಿದೇವತೆ. ಆಕೆಯ ದೇವಾಲಯಕ್ಕೆ ಹೋಗಿ ಬೆಲೆಯುಳ್ಳ ಹಲವು ಕಾಣಿಕೆಗಳನ್ನು ಅರ್ಪಿಸಿ ಪ್ರಾರ್ಥಿಸಿದ : ವೇದಿಕೆಯಿಂದ ಅಗರು ಧೂಪಗಳ ಹೊಗೆಯೊಡನೆ ಅವನ ಹೃದಯದ ಪರಮ ಕಾಮನದ ಪ್ರಾರ್ಥನೆ ಮೇಲೆದ್ದಿತು.

'ಪ್ರೇಮರಾಜ್ಞಿ, ಬಹುಕಾಲ ನಿನ್ನ ಶಕ್ತಿಯನ್ನು ತಿರಸ್ಕರಿಸಿದವನೊಬ್ಬನ ಮೇಲೆ ಮರುಕಗೊಳ್ಳು. ನನ್ನ ಕೈಯಿಂದ ನಿರ್ಮಿಸಿದ ಇದನ್ನು ನನಗೆ ವಧುವಾಗಿ ದಾನಮಾಡು. ಇಲ್ಲವಾದರೆ ಗೆಲೇತಿಯಳಷ್ಟು ಚೆಲುವೆಯಾದ ಒಬ್ಬ ಮರ್ತ್ಯಕುವರಿಯನ್ನು ದಾನ ಮಾಡು'—ಎಂದ.

ಇವನ ಪ್ರಾರ್ಥನೆಗೆ ದೇವತೆ ಪ್ರೀತಳಾಗಿ ಒಲಿದಳೆಂಬಂತೆ ವೇದಿಕೆಯ ಮೇಲಿನ ದೀಪ ಮೂರು ಬಾರಿ ಗಾಳಿಯಲ್ಲಿ ಚಿಮ್ಮಿ ಹಿಗ್ಗಿತು. ಸಂತೋಷದ ಆಸೆ ಭರವಸೆಗಳಿಂದ ಅವನ ಹೃದಯ ಕಂಪಿಸಿತು. ಹಿಂದಕ್ಕೆ ಮನೆಗೆ ಧಾವಿಸಿದ. ಇವನ ಕಣ್ಣನ್ನು ಮೋಸ ಗೊಳಿಸಿ ಈವರೆಗೆ ಸಾವಿರ ಬಾರಿ ಆಶಾಭಂಗ ಮಾಡಿದ್ದ ಆ ವಿಗ್ರಹದೆದುರಿಗೆ ನಿಂತ :— ಅದಕ್ಕೆ ಜೀವ ಬಂದಿರಬಹುದೆಂಬ ವಿಶ್ವಾಸದಲ್ಲಿ.

'ಗೆಲೇತಿಯ' ಎಂದು ಸಾವಿರ ಬಾರಿ ಕೂಗಿದ, ಕರೆದ. ತೋಳು ಚಾಚಿದ. ತಾನು ಇಷ್ಟು ಕಾಲ ಬಯಸಿದ ಬಯಕೆ ನನಸಾದೀತೆನ್ನುವಾಗ ಭೀತಿಗೊಂಡಂತೆ ಇನ್ನೇನು ಹಿಂದೆ ಸರಿಯಬೇಕೆಂದಿದ್ದ.

ನೋಡು ನೋಡುತ್ತ ದಂತದ ಆ ಪ್ರತಿಮೆಯಲ್ಲಿ ಮಾರ್ಪಾಡುಂಟಾಯಿತು. ಅದರ ಎದೆ ಉಬ್ಬಿ ಇಳಿಯಿತು. ಅದರ ಧಮನಿಯಲ್ಲಿ ರಕ್ತವಾಡಿತು. ಅದರ ಕಣ್ಣು ಈಗ ಹಿಂದೆ ಕಲ್ಲಿನದೆಂಬಂತೆ ತನ್ನ ಕಡೆ ದಿಟ್ಟಿಸಲಿಲ್ಲ. ಇದು ಮೋಸವಲ್ಲವೆಂಬಂತಾ ಯಿತು. ಅದರ ಕೈಗಳನ್ನೆತ್ತಿದ. ಅದರಲ್ಲಿ ಕಾವೇರಿತು. ಅದರ ಸ್ಪರ್ಶ ಮೃದುವಾಯಿತು. ತನ್ನ ಸೋಂಕಿನಲ್ಲಿ ನಾಡಿಗಳು ಮಿಡಿಯುತ್ತಿದ್ದವು. ಮಾತನಾಡಿಸಿದ. ಅವನ ನುಡಿಗೆ ಉತ್ತರ ಕೊಡಲು ಅವನ ಗೆಲೇತಿಯ ತುಟಿಗೆ ಉಸಿರುಬಂತು : 'ಅಫ್ರೊದಿತೆ ತನ್ನ ಪವಾಡ ಮಾಡಿದ್ದಾಳೆ'—ಎಂದು. ಇದನ್ನು ವಿಲಿಯಂ ಮಾರಿಸ್ ಹೀಗೆ ವರ್ಣಿಸುತ್ತಾನೆ :

ಮಾತಿಲ್ಲದೆ ನಿಂತ. ಸಾರಿದಳವಳೇ ಬಳಿಗೆ ;  
ಸವಿ, ಸರಳ ಎಂದಿನಂತೆ.  
ಮರಳಿ ನುಡಿಯಿತು ಅವಳ ಬೆಳ್ಳಿದನಿ ಗಂಟೆ ಬಡಿದಂತೆ  
ಹಿರಿಯ ಆನಂದದಲಿ ಅವನಾತ್ಮವನು ತುಂಬಿ.

ನುಡಿದಳಿದನಾ ಬಳಿಕ ; "ನನ್ನ ಬಳಿ ಬಾರೆಯು,
ಹೊಸಕಂಡ ನನ್ನ ಬಾಳ ಗೆಳೆಯು,
ಪ್ರಿಯೆ ನಿನಗೆ ನಾನು. ನಿನ್ನ ಮಡದಿ"—ಎನುತೆ.

(—ಕ್ಲಾಸಿಕಲ್ ಮಿತ್ಸ್ ಅಂಡ್ ಲೆಜೆಂಡ್ : ಎ. ಆರ್. ಹೋಪ್ ಮಾಂಕ್ರೀಫ್.)

* * * *

ಷಾರ 'ಪಿಗ್‌ಮೇಲಿಯನ್' ನಾಟಕದಲ್ಲಿ ಎಲಿಜಬೆತ್ ಡೂಲಿಟ್ಲ್ ಮಾನವ ಕುಲದ ಹೆಣ್ಣು ; ದಂತದ ವಿಗ್ರಹವಲ್ಲ. ದೇವತೆಯ ಪ್ರತೀಕವೊ ಪ್ರತಿ ಮೂರ್ತಿಯೊ ಅಲ್ಲ. ಇಲ್ಲಿ ಚೆಲುವೆಯ ಚೆಲುವಿನ ಆರಾಧನೆಯಿಲ್ಲ. ಅವಳಲ್ಲಿ ಹಿಗ್ಗಿನ್ಸ್ ಹೊಸ ಸಂಸ್ಕಾರವನ್ನು ತುಂಬುತ್ತಾನೆ. (ಪಿಕರಿಂಗ್ ಈ ಕಾರ್ಯದಲ್ಲಿ ನೆರವಾಗುತ್ತಾನೆ ; ನಯ ನಡತೆ ತಂದುಕೊಟ್ಟು). ಅವಳಲ್ಲಿ ಅನುರಕ್ತಿಯುಂಟಾಗಿ ತಾನು ನಿರ್ಮಿಸಿದ ಆ ಚೆಲುವಿಗೆ ಸೋತು ಅದನ್ನು ತನ್ನದಾಗಿ ಮಾಡಿಕೊಳ್ಳಲಿಲ್ಲ. ಅವನ ವೃತ್ತಿಯ ಉತ್ಸಾಹ—ಪಾತ್ರವಾವುದಾದರೇನು ಎಂಬ ಶಿಕ್ಷಕನ ಆತ್ಮವಿಶ್ವಾಸವಿದೆ ಅವನಲ್ಲಿ—ಅವನನ್ನು ನಡೆಸಿತು. ಇದ್ದಿಲನ್ನು ವಜ್ರಮಾಡುತ್ತೇನೆಂಬಷ್ಟಿದೆ ಆ ವಿಶ್ವಾಸ. ಎಲುಬಿಲ್ಲದ ಪ್ರಾಣಿ ಎಂದುಕೊಂಡಿದ್ದುದ್ದು ಮಾನವಂತ ಮಾನವಿ ಎಂದು ಕಂಡಾಗ ಅವನಿಗೆ ಪ್ರೀತಿಯುಂಟಾಯಿತು. ಅವನು ಆಟಗಾರ ; ಅದರ ಧರ್ಮಗಳನ್ನು ನಡಸುವ ಔದಾರ್ಯ ಅವನಲ್ಲಿದೆ. ಮಾಡಿದ ಕೆಲಸದಲ್ಲಿ ಎಷ್ಟು ಶ್ರದ್ಧೆ, ಅಭಿಮಾನ, ತದೇಕ ಧ್ಯಾನ ! ಎಲ್ಲ ಶಿಕ್ಷಕರೂ ಶಿಷ್ಯರಲ್ಲಿ ಈ ಪ್ರೀತಿ, ವಾತ್ಸಲ್ಯ ತೋರಿಸುವಂತಾಗಬಾರದೆ, ಎಲ್ಲ ಕಲಿವವರೂ ಎಲಿಜಳಂತೆ ಮಾರ್ಮಿಡಿಯಬಾರದೆ ಎನ್ನಿಸುತ್ತದೆ. ಅದಾದಾಗ ನಮ್ಮ ವಿದ್ಯಾಯತ್ನ ಅಮೃತ ಫಲಗಳನ್ನು ಕೊಟ್ಟೀತು. 4–5ನೆಯ ಅಂಕಗಳಲ್ಲಿನ ಶೀಲ ಪೋಷಣೆಯೂ ಅರ್ಥರಚನೆಯೂ ಮಾನಾಭಿಮಾನಗಳ ಹೊಮ್ಮುಗೆಯೂ ನಿಜವಾಗಿ ಯಾರಿಗೂ ಹೆಮ್ಮೆ ತರುವಂಥವು.

ಶಿಲ್ಪಿಯಾದ ತಾನು ನಿರ್ಮಿಸಿದ ಸ್ತ್ರೀ ಮೂರ್ತಿಯಲ್ಲಿ ಮೋಹಗೊಂಡು ಅದಕ್ಕೆ ಜೀವದಾನ ಮಾಡಿಸಿಕೊಂಡು, ಆ ಕಲಾಸುಂದರಿಯನ್ನು ಮದುವೆಯಾದವನು ಪಿಗ್‌ಮೇಲಿಯನ್. ಸೈಪ್ರಸ್ ರಾಜ ಮನೆತನದಲ್ಲಿ ಹೆಸರಾದವನು. ನಿರ್ಜೀವ ವಸ್ತುವಿನಿಂದ ಮೂರ್ತಿಶಿಲ್ಪ ಕಡೆದು ಶಿಲ್ಪಕ್ಕೆ ಉಸಿರು, ಮಾನವ ಜೀವ ತುಂಬಿದುದು ಅವನ ಕೃತಿ, ಕೃತಿಶಾಲಿತೆ. ಇಲ್ಲಿ ಪ್ರೊಫೆಸರ್ ಹಿಗ್ಗಿನ್ಸ್. ಇವರಿಗೆ Dr. Sweet ಸ್ವಲ್ಪ, Gilbert Murray ಸ್ವಲ್ಪ ಮಾದರಿಯಾದರೆಂದು ಷಾ ಹೇಳುತ್ತಾರೆ. ಹೂಮಾರುವ ಹುಡುಗಿಯನ್ನು ಶ್ರೀಮಂತ ಯೋಗ್ಯವಾದ ನುಡಿ, ನಡೆ, ಶೀಲ, ಸಂಸ್ಕೃತಿಯ ಮಟ್ಟಕ್ಕೆ ಹಿಗ್ಗಿನ್ಸ್ ತರುತ್ತಾನೆ. ಆ ಸಂದರ್ಭ ಬಹು ಚೆನ್ನಾಗಿ ರೂಪಗೊಳ್ಳುತ್ತದೆ. ಹುಟ್ಟಿಗಿಂತ ಶಿಕ್ಷಣ ದೊಡ್ಡದೆಂಬ ತತ್ವ ಎಲ್ಲ ವಿದ್ಯಾತಂತ್ರಕ್ಕೂ ಮೂಲ ಬಲ ; ಲೋಕ ಉನ್ನತಿಗೇರುವ ಒಂದೇ ಆಶಾ ಸಾಧನ. ಹೂಮಾರುವ ಹುಡುಗಿ ಹಿಗ್ಗಿನ್ಸಿಗೆ ಸಿಕ್ಕಿದ ಸನ್ನಿವೇಶ ವಿಚಿತ್ರವಾದ್ದು. ಅವಳಲ್ಲಿ ಮಹತ್ವಾಕಾಂಕ್ಷೆ ಹುಟ್ಟಿದ ಬಗೆ, ಅವಳ ಹುಟ್ಟು, ತಂದೆ

ತಾಯಿ, ಉದ್ಯೋಗ ಇವು ಅವಳ ಸ್ವಭಾವದ ಚುರುಕನ್ನು ಒಂದು ಮಟ್ಟದಲ್ಲಿ ಕಾಣಿಸಿದರೆ, ಅವಳು ಹಿಗ್ಗಿನ್ಸಿನ ಮನೆಯಲ್ಲಿ ಶಿಕ್ಷಣ ಪಡೆಯುತ್ತಿರುವಾಗ ಅದು ಹೇಗೆ ಬೇಗ ಬೇಗ ಆಕೃತಿಗೊಂಡಿತು–ತುಂಬಿತು–ಗುರುವರ್ಗಕ್ಕೇ ಅಚ್ಚರಿ, ಉತ್ಸಾಹ ತರುವಂತೆ–ಎಂಬುದರ ಮತ್ತು ಪರೀಕ್ಷೆಯಲ್ಲಿ ಉತ್ತೀರ್ಣಳಾದ ಮೇಲೆ ಅವಳ ಶೀಲ, ಸ್ವಾಭಿಮಾನ ಹೇಗೆ ಪುಷ್ಟಿಗೊಂಡು ದೃಢಪಟ್ಟವು ಎಂಬುದರ ಚಿತ್ರಣ ಅತಿಶಯವಾಗಿವೆ. ಅದು ನಾಟಕದ ಒಟ್ಟು ಕ್ರಿಯೆ.

ಇಲ್ಲಿನ ಪುರುಷ ವ್ಯಕ್ತಿಗಳಿಗಿಂತ ಸ್ತ್ರೀ ವ್ಯಕ್ತಿಗಳಲ್ಲಿ ಹೆಚ್ಚು ರಂಜನಾ ವಿಲಾಸ, ಶಕ್ತಿ ಇರುವಂತಿದೆ. ಶ್ರೀಮತಿ ಹಿಗ್ಗಿನ್ಸ್, ಮನೆವಾಳ್ತಿಯ ಹೆಂಗಸು ಮಿಸೆಸ್ ಪಿಯರ್ಸ್ ಇವರಿಬ್ಬರೂ ಇಲ್ಲಿನ ಹಿಗ್ಗಿನ್ಸ್, ಪಿಕರಿಂಗ್, ಡೂಲಿಟ್ಲ್ ಎಲ್ಲರಿಗೂ ಮೇಲ್ಗಯ್ ಎನಿಸುತ್ತದೆ. ಮಧ್ಯಮ ವರ್ಗಕ್ಕೆ ಸೇರಿದ ಐನ್ಸ್‌ಫರ್ಡ್‌ಹಿಲ್ ಕುಟುಂಬದ ತಾಯಿ, ಮಗಳು, ಮಗ ಮೂರು ಬಗೆಯ ಸ್ಥಿತಿ ಚಿತ್ರಗಳು. ಸಂಸ್ಕಾರ ನಯ ಪಡೆದರೂ ಹುಡುಗಿಯಂತೆ ಹುಸಿಗಾಯಾದರೆ ಏನು ಬಂತು ? ಹುಡುಗ ಹುಡುಗನೇ. ಎಲಿಜಾ ಮೋಹಕ್ಕೆ ಸಿಕ್ಕಿಕೊಂಡು ಅವಳನ್ನು ಪಡೆಯಲು ಬೆನ್ನುಹತ್ತುವ ಹುಡುಗ. ಸ್ವಂತವಾಗಿ ಅಂಥ ಕರ್ತೃತ್ವ ಶಕ್ತಿಯಾಗಲಿ ವಿದ್ಯೆಯಾಗಲಿ ಇಲ್ಲವಾದರೂ ಸಾಮಾನ್ಯವಾಗಿ ಎಲಿಜಬೆತ್ ಅಂಥವಳ ಕೈಹಿಡಿಯಬಲ್ಲನಾದರೆ ಉತ್ತಮಗೊಳ್ಳಬಲ್ಲನೆಂಬ ಸೂಚನೆಯೂ ಓಲೂ ಕಾಣುತ್ತವೆ ನಾಟಕದಲ್ಲಿ. ತಾಯಿ, ಪಾಪ, ತುಂಬ ಮೃದು ಹೃದಯದವಳು. ಸಂಪ್ರದಾಯಸ್ಥಳು ಎಂಬರ್ಥದಲ್ಲಿಯೂ ಆಕೆಯ ಸ್ಥಿತಿ ಒಂದು ಬಗೆಯಲ್ಲಿ ಕರುಣಾಜನಕವಾದ್ದು. ಆದರೆ ಆದರಲ್ಲಿ ಸವಿ, ಮೃದು, ನಯ ಇವೆ. ನಡೆನುಡಿ ನಯಗಳನ್ನು ಸಾಧಿಸಿಕೊಳ್ಳಬೇಕೇನೊ ಸರಿಯೆ. ಅವನ್ನು ಉಳಿಸಿಕೊಳ್ಳಲು ಸಂಪತ್ತು ಬೇಡವೆ ? ಆರ್ಥಿಕ ಆಧಾರ ಬೇಡವೆ ? ಇಲ್ಲವಾದರೆ ಈ ಕುಟುಂಬಕ್ಕೆ ದುಃಸ್ಥಿತಿ ಬರುವುದಲ್ಲವೆ ? ಎಲಿಜಳಂಥ ಹುಡುಗಿಯ ಸ್ವಾಯತ್ತತೆಯನ್ನು ಕೆಡಿಸಿ ಅವಳನ್ನು ಈ ತಾಯಿಯಂಥ ನಿಸ್ಸಹಾಯತೆಗೆ ಈಡುಮಾಡಿದರೇನು ಫಲ, ಏನು ಸಾಧಿಸುವಂತಾಯಿತು ? —ಎಂದು ಕೇಳುವ ತಾಯಿ ಹಿಗ್ಗಿನ್ಸ್ ಮಾತು ಸರ್ವಥಾ ಸರಿ. ಪ್ರಯೋಗ ಮುಗಿದ ಮೇಲೇನು ಎಂಬುದನ್ನು ಮೊದಲೇ ಯೋಚಿಸಿಕೊಳ್ಳುವ ಪಿಯರ್ಸ್ ಸಲಹೆಯೂ ಹೆಂಗಸಿಗೆ ಹೊಳೆವಷ್ಟು ಬೇಗ ಸುಲಭವಾಗಿ ಗಂಡಸಿಗೆ ಈ ಸತ್ಯಮುಖ ಹೊಳೆಯದೇನೊ ಎನ್ನಿಸುತ್ತದೆ. ಶ್ರೀಮತಿ ಹಿಗ್ಗಿನ್ಸಿನ ಯೋಗ್ಯತೆ, ದರ್ಪ, ಮಾನವತೆ, ಅನುಭವ ಎಲ್ಲ ತುಂಬ ದೊಡ್ಡ ಜಾತಿಯವು. ಅಂಥ ಮಗನ ಗೌರವ ಪ್ರೀತಿಗಳನ್ನು ಸಹಜ ಕಾಣಿಕೆಯಾಗಿ ಪಡೆದಿರುವುದು ಅದು. ಮನೆವಾಳ್ತಿಯ ಹೆಂಗಸಾದರೂ ಮಿಸೆಸ್ ಪಿಯರ್ಸಿನ ಲೋಕಾನುಭವ, ನಿರ್ಭೀತಿ, ಶೀಲ, ಧೈರ್ಯಗಳು ಕೆಲಸಗಾರ ವರ್ಗಕ್ಕೇ ಮಾನ ತರುವಂಥವು.

ಕೆಲಸದವರನ್ನು ಹೀನವಾಗಿ ರೂಪಿಸಿ ಅದನ್ನು ಶಿಲಾಶೀಲವಾಗಿ, ಏಕರೂಪವಾಗಿ, ಜಡವಾಗಿ ಮಾಡುವ ವಿಕಾರ ನಮ್ಮ ಸಾಮಾಜಿಕ ನಾಟಕಗಳಿಗೆ ಒಂದು ಶಾಪ.

ಎಲ್ಲೆಲ್ಲಿಯೂ ಹಾಸ್ಯದ ಪ್ರಭಾವ ತಾಂಡವವಾಡುತ್ತಿದ್ದರೂ ಆಲ್‌ಫ್ರೆಡ್ ಡೂಲಿಟ್ಲ್ ಪರಿಸ್ಥಿತಿಯೂ ಧಾರಾಳವೂ ಅವನ ಜೀವನ ದರ್ಶನ, ವಾದಸರಣಿ, ನಡತೆಗಳೂ ಸ್ವಲ್ಪಮಟ್ಟಿಗೆ ಲೇವಡಿಯಂತೆ ಕಂಡರೂ ಅಲ್ಲಿನ ಸತ್ಯಾಂಶ ಅದನ್ನು ಹದದಲ್ಲಿಡುತ್ತದೆ. ಮಧ್ಯಮವರ್ಗದ ಅವಹೇಳನ ಮಾಡುವ ಅವನು ಆ ವರ್ಗಕ್ಕೇ ಸೇರಬೇಕಾಗಿ ಬಂದ ಸನ್ನಿವೇಶ ನಾಟಕಕ್ಕೆ ವಿನೋದವನ್ನು ದಾನಮಾಡಿ ಇಲ್ಲಿನ ಹಾಸ್ಯಸಂಮಿತಕ್ಕೆ ಪೋಷಕವಾಗುತ್ತದೆ.

ಸಂತೋಷ ಕೂಟ ಮುಗಿದು ಗಂಡಸಿನ ಉಪೇಕ್ಷೆಗೆ ಕುಪಿತಳಾಗಿ ಅಭಿಮಾನ ಕೆರಳಿದ ಫಣಿನಿ ಎಲಿಜಾ ಚಿತ್ರ ಉತ್ಕೃಷ್ಟವಾದ್ದು. ದುರ್ದಮ್ಯವಾದ ಅವಳ ಸ್ವಭಾವ ಎಂಥ ಸಂದರ್ಭದಲ್ಲಿಯೂ ತನ್ನ ಶೀಲವನ್ನೂ ಆತ್ಮಗೌರವವನ್ನೂ—ನಾನು ಒಳ್ಳೆ ಹುಡುಗಿ ಎಂಬುದು ಅವಳ ಅಭಿಮಾನ ಉಳಿಸಿಕೊಳ್ಳ ಬಯಸುವ ಬಗೆಯನ್ನೂ—ರೂಪಿಸುತ್ತದೆ. ಎರಡು ಸಂದರ್ಭಗಳು ಮಾತ್ರ ಸ್ಥಿತಿಯನ್ನು ಆರ್ದ್ರವಾಗಿ, ಗಂಭೀರವಾಗಿ, ಮಾನವವಾಗಿ ಮಾಡುತ್ತವೆ. (1) 'ನನ್ನ ಗತಿಯೇನು ? ಇನ್ನೇನು ನನ್ನ ಗತಿ' ಎಂದು ಎಲಿಜ ಕುರರಿಯಂತೆ ಕೂಗಿದಾಗ ರಂಗದ ಆಟ (Play) ಮಾನವ ಜೀವನದ ನಾಟಕ (Drama) ವಾಗುತ್ತದೆ. ಆ ಕೂಗಿನ ವೇದನೆ ಹೃದಯವನ್ನಿರಿಯುತ್ತದೆ. ನಾಟಕದ ಮಟ್ಟವನ್ನು ಮೇಲೆತ್ತುತ್ತದೆ. ಪ್ರೊಫೆಸರನ್ನು ಕೆರಳಿಸಿ, ಅವನು ಕೆರಳಿದಷ್ಟೂ ತನ್ನ ಮುಯ್ಯಿ ತೀರಿತೆಂಬಂತೆ ಅವನ ಹೃದಯಸ್ಪರ್ಶ ಮಾಡಿದೆನೆಂಬಂತೆ ನಡೆವ ಎಲಿಜಾಗೆ ಹಿಗ್ಗಿನ್ಸಲ್ಲಿ ನಿಜವಾಗಿ ಪ್ರೀತಿ, ಗೌರವ ಇವೆ. ಉಂಗುರವನ್ನು ಅವನು ಒಲೆಯತ್ತ ಬೀಸಾಡಿ ಹೋದಾಗ ಅವಳಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಅಮೃತಪಾನಮಾಡಿದಂತೆ ಅದನ್ನು ಹುಡುಕುತ್ತಾಳೆ. ಮುಂದೆ ಅವಳು ಇವರನ್ನು ಬಿಟ್ಟು ಹೋದಾಳೆಂಬ ಭೀತಿ ಅಷ್ಟಾಗಿ ಇಲ್ಲ. ವಿಂಪೋಲ್ ಸ್ಟ್ರೀಟಲ್ಲಿ ಮೂವರು ಕೆಳೆಯರು ಸ್ನೇಹದ ಒಂದು ಬಂಧನದಲ್ಲಿ ಬೆಸೆದಿದ್ದಾರೆ.

ವಿಷಯದಲ್ಲಿ, ರೀತಿಯಲ್ಲಿ, ತಂತ್ರದಲ್ಲಿ, ಹಾಸ್ಯದಲ್ಲಿ ನಮ್ಮಲ್ಲಿ ಕಾಣದ ಒಂದು ಪ್ರಕಾರ ಈ ನಾಟಕ. ಈ ಲಕ್ಷಣ, ಗುಣ ಸ್ವಲ್ಪಮಟ್ಟಿಗಾದರೂ ನನ್ನ 'ಕನ್ನಡಿಯಲ್ಲಿ' ಪ್ರತಿಬಿಂಬಿಸಿದ್ದರೆ ನನಗೆ ಸಂತೋಷ. ಷಾ ಅವರ ಗದ್ಯ ಯಂತ್ರ-ಕತ್ತರಿಯಂತೆ ದಕ್ಷವಾಗಿ ಕೆಲಸಮಾಡುತ್ತದೆ. ಅಲ್ಲಿನ ವೈಖರಿ ಅವರಿಗೆ ಮಾತ್ರ ಶಕ್ಯ. ನನ್ನ ಸಪ್ಪೆಕನ್ನಡ ಅದರ ಶಕ್ತಿಯನ್ನಾಗಲಿ, ಬನಿಯನ್ನಾಗಲಿ, ರಂಗನ್ನಾಗಲಿ ಕಾಣಿಸದಿದ್ದರೆ ಅಷ್ಟುದೊಡ್ಡ ಬರಹಗಾರರಾದ ತಪ್ಪು ಷಾ ಅವರದು. ಮ್ಯಾನ್ ಅಂಡ್ ಸೂಪರ್‌ಮ್ಯಾನ್‌ನಲ್ಲಿ, ಜಾನ್ ಬುಲ್ ಅಂಡ್ ಹಿಸ್ ಅದರ್ ಐರ್ಲಂಡಲ್ಲಿ, ದಿ ಡೆವಿಲ್ಸ್ ಡಿಸೈಪಲ್ ಅಲ್ಲಿ, ಬ್ಯಾಕ್ ಟು ಮೆತುಸೇಲಾದ ಕಡೆಯ ಲಿಲಿತಿನ ತೋಟದಲ್ಲಿ, ಇನ್ನೂ ಎಷ್ಟೋಕಡೆ ಬಲಿತ ಅವರ

ಗದ್ಯದ ಅರ್ಥಶಕ್ತಿ, ಲಯವಿಲಾಸ ಅತೀವ ಸುಂದರವಾದ್ದು. ಇಂಗ್ಲಿಷಿನ ಅಭಿಮಾನವೂ ಪರಿಚಯವೂ ನಾಡಿನಲ್ಲಿ ಅಳಿಸಿಹೋಗುವ ಭಯವಿದೆ. ಅದರ ಪ್ರಮಾಣ, ತಾರತಮ್ಯ ಕಲ್ಪನಾವಕಾಶ ದೇಶಕ್ಕಿಲ್ಲವಾದಾಗ ನಮ್ಮ ಬಾತು ನಮಗೆ ಹಂಸವಾಗಿ ಕಾಣಬಲ್ಲದ್ದಾಗುತ್ತದೆ. ಆ ಭಾಷೆಯಿಂದ ಪೋಷಿತನಾಗಿ ಬೆಳೆದ ಒಬ್ಬನ ಅಲ್ಪಸೇವೆ ಮಾತ್ರ ಇದು.

ಷಾ ತುಂಬಾ ಬಡತನದಲ್ಲಿ ಬೆಳೆದವರು. ಬಡತನ ನಿರ್ಮೂಲವಾದ ಹೊರತು ಮಾನವನ ವ್ಯಕ್ತಿತ್ವ ಬೆಳೆಯದೆಂಬುದು ಅವರ ದೃಢ ನಂಬಿಕೆ. ಹಿಂದೆ ನಮ್ಮ ಅರವಟ್ಟಿಗೆಗಳಲ್ಲಿ ನೀರು, ಬೆಲ್ಲ, ಇವು ಸಿಗುತ್ತಿದ್ದು ಬೇಕಾದವರು ಬೇಕಾದಷ್ಟು ಕುಡಿಯುವಂತೆ ಮಾಡುತ್ತಿದ್ದರು. ಇಂದು ಹಸಿದ ಮಕ್ಕಳಿಗೆಲ್ಲ ಸಿಕ್ಕುವಂತೆ ಸಾಕಾದಷ್ಟು ಬ್ರೆಡ್, ಅನ್ನ ಏಕೆ ಇಡಬಾರದು ?—ಎನ್ನುತ್ತಾರೆ ಅವರು. ಕೇನ್ಸ್ ಅವರು ಒಂದು ಕಡೆ ಹೇಳಿರುವಂತೆ ಇವೊತ್ತಿನ ವಿಜ್ಞಾನ, ಉತ್ಪತ್ತಿತಂತ್ರ, ಬಂಡವಾಳದ ಹೂಟಕ್ಕೆ ಸಿಕ್ಕುವ ಚಕ್ರಬಡ್ಡಿ ದುಡಿದರೆ ಲೋಕದ ಎಲ್ಲರ ದಿನ ಜೀವನದ ಎಲ್ಲ ಸೌಕರ್ಯವೂ ಆಡುತ್ತಾಡುತ್ತ ದೊರಕಬಲ್ಲದು. ಆದರೆ ಮನುಷ್ಯನ ಸ್ವಾರ್ಥ, ಕೃಪಣತೆ ಅಳಿದು ಜನರೇ ಸರ್ವಭೂತ ಹಿತೇರತರಾಗಬೇಕು—ಆ ಪರಿಣಾಮ ಸಾಧನೆಗೆ. ತಿಂಗಳಿಗೆ 18 ಷಿಲಿಂಗ್ ಕೆಲಸದಲ್ಲಿ ಆರಂಭ ಮಾಡಿ, ಕೆಲಸದಿಂದ ಕೆಲಸಕ್ಕೆ ಹೋಗಿ, ಕಡೆಗೆ ಅದನ್ನು ಬಿಟ್ಟು ಲೇಖಕರಾಗಿ ನಾಟಕಕಾರರಾಗಿ, ಬರೆದ ಒಂದೊಂದು ಮಾತಿಗೆ 5 ಷಿಲಿಂಗ್ 7 $\frac{1}{2}$ ಷಿಲಿಂಗ್ ಪ್ರತಿಫಲವನ್ನು ಸಂಪಾದಿಸಿದ ಧೀಮಂತರು ಅವರು. ಕಿಪ್ಲಿಂಗ್, ಬ್ಯಾರಿ ಅವರಿಗೆ ಮಾತಿಗೆ 10–15 ಷಿಲಿಂಗ್ ತೆರುತ್ತಿದ್ದರಂತೆ. ಅಕ್ಷರ ಲಕ್ಷ ಪುರಸ್ಕಾರದ ಕಥೆ ಇರುವ ನಮ್ಮ ದೇಶದಲ್ಲಿ ಈ ಪುರಸ್ಕಾರ ದೊಡ್ಡದೇನಲ್ಲವಾದರೂ ದೊಡ್ಡ ಪ್ರಮಾಣದಲ್ಲಿ ಇಂಥ ಸಂಪಾದನೆ ಪಡೆದ ಅನುಕೂಲ ಇಂದಿಗೂ ವಿದೇಶಗಳಲ್ಲಿರುವುದು–ವ್ಯವಹಾರವೇಕೆ ?–ವ್ಯಾಪಾರ ಸತ್ಯ.

ಎಷ್ಟೋ ಯೂರೋಪಿಯನ್ ಭಾಷೆಗಳಿಗೆ, ಜಪಾನಿ ಭಾಷೆಗೆ ಷಾ ನಾಟಕಗಳು ಭಾಷಾಂತರಗೊಂಡಿವೆ. ಯೂರೋಪ್, ಅಮೇರಿಕದ ದೊಡ್ಡ ನಾಟಕ ಮಂದಿರಗಳಲ್ಲಿ ಶ್ರೇಷ್ಠ ನಟನಟಿಯರು ಅವರ ನಾಟಕಗಳನ್ನು ಅಭಿನಯಿಸಿದ್ದಾರೆ. ಗಂಡು ಹೆಣ್ಣಿನ ಸಂಬಂಧ, ಮದುವೆ, ದಾಂಪತ್ಯ ವಿಚ್ಛೇದ, ಯೇಸು ಹೃದಯ, ಚರ್ಚ್, ಮತ, ಬಡತನ ವೈದ್ಯ ವೃತ್ತಿ, ಚುಚ್ಚು ಷಧಗಳು, ಬಂಡವಾಳ ಪದ್ಧತಿ, ಪ್ರಜಾರಾಜಕೀಯ, ಇಂಗ್ಲಿಷ್ ಉಚ್ಚಾರಣೆ, ಸ್ಪೆಲ್ಲಿಂಗ್, ಯುದ್ಧ, ವೀರ, ಆಸ್ತಿ ಸಂಪಾದನೆಯ ರೀತಿ, ಮಡಿ ಮೈಲಿಗೆ, ಆಚಾರ, ರೋಮ್ಯಾಂಟಿಕ್ ಭಾವನೆಗಳು, ಬಗೆಬಗೆಯ ಕೃತಿಗಳು, ಸಮಾಜದಲ್ಲಿ ಅನ್ಯಾಯ, ಅಸಮತೆ, ತೋರಿಕೆ–ನಿಜ, ಕೊಳಕು ವಸತಿಗಳು, ಅತಿಮಾನವನ ಆವಿರ್ಭಾವ ಸುಖ ಸ್ವಾತಂತ್ರ್ಯ, ಸಹನೆ ಸೋದರತೆ, ನ್ಯಾಯ ವಿವೇಕ, ಕಾವ್ಯಾವಲೋಕನ, ವಿಮರ್ಶೆ —ಇಂಥವುಗಳನ್ನೆಲ್ಲ ಎತ್ತಿಕೊಂಡು ತಮ್ಮ ನಾಟಕಗಳಲ್ಲಿ ಸತ್ಯಾಸತ್ಯಗಳನ್ನು ಕಾಣಿಸಲು ತೊಡಗುತ್ತಾರೆ ಷಾ. ನಾಟಕಗಳಿಗಿಂತ ಉದ್ದವಾದ ಮುನ್ನುಡಿಗಳನ್ನು ಅವರು ಬರೆ

ಯುತ್ತಾರೆಂಬ ಅಪವಾದವುಂಟು. ನನಗೆ ಅಂಥವನ್ನು ಬರೆಯಲು ಬರುತ್ತದೆ, ಬರೆಯುತ್ತೇನೆ ಎಂದರು ಒಂದು ಸಲ. ಮುನ್ನುಡಿಯನ್ನು ಪುಸ್ತಕಗಳಾಗಿ ಅಚ್ಚಾಗುವಾಗ ಮಾತ್ರ ಪ್ರಕಟಿಸಿದರು ; ಆಡುವ ಮುಂಚೆಯಲ್ಲ. ಆಯಾ ನಾಟಕದ ಪ್ರಸಂಗವನ್ನು ನೆಪಮಾಡಿಕೊಂಡು—ಆ ಸಂಬಂಧದಲ್ಲಿ ವ್ಯವಹಾರ ಜೀವನದ ವಿಮರ್ಶೆ, ಬೆಲೆ ಪರಿಶೀಲನ, ಪ್ರಕಾಶನ ಮಾಡುತ್ತಾರೆ. ಒಂದು ಇನ್ನೊಂದರ ಸಾರ್ಥಕತೆಗೆ ಅಡ್ಡಿಯಲ್ಲ : ಪೋಷಕ, ಪೂರಕ. ಒಂದನ್ನು ಓದದೆ ಇನ್ನೊಂದನ್ನು ಓದಿ ಸಂತೋಷಪಡಬಹುದು. ಜೀಸಸನ ಉಪದೇಶಸಾರ, ಮಕ್ಕಳ ವಿದ್ಯಾಭ್ಯಾಸ, ದಾಂಪತ್ಯ ವಿಚ್ಛೇದ ಮುಂತಾದವನ್ನು ಕುರಿತು ಅವರಾಡುವ ಸಂಗ್ರಹದ ಮಾತನ್ನು ಜನ ಕೇಳಬೇಕು. ನಿರ್ಭೀತಿಯಿಂದ, ಪ್ರಾಮಾಣಿಕತೆಯಿಂದ ಅವರು ಮಾಡುವ ಟೀಕೆ ಸಮುದ್ರಸ್ನಾನದಂತೆ ಉತ್ಸಾಹಕರ. ಮುನ್ನುಡಿಗಳ ಅಲ್ಲಲ್ಲಿಂದಲೊ, ಮ್ಯಾನ್ ಅಂಡ್ ಸೂಪರ್‌ಮ್ಯಾನ್ ಕೊನೆಗೆ ಅಚ್ಚು ಮಾಡಿರುವ A Revolutionist's Hand-book ಎಂಬುದರಿಂದಲೊ 50–60 ಜಾಣ್ನುಡಿಗಳನ್ನು ಎತ್ತಿ ಪ್ರಕಟಿಸಿದರೆ ಜನರ ಬುದ್ಧಿಗೆ ತೀವ್ರ ಪ್ರಚೋದನೆ ಉಂಟಾದೀತು. ವಿಕಟವಾಗಿ ಎಂಬಂತೆ, ತಲೆ ಕೆಳಗಾಗಿ ನಿಂತು ನೋಡುವಂತೆ ಮಾರ್ಮಿಕವಾಗಿ ನುಡಿವ ಅವರ ರೀತಿ ಕ್ರಾಂತಿಕಾರಕವಾಗಬಲ್ಲದು. ಬ್ರಿಲಿಯನ್ಸ್–ಕಾಂತಿ–ಸತ್ಯವನ್ನು ಒಂದು ಉರಿ ಬೆಳಕಿನಲ್ಲಿ–ಕಾರ್ಯಗಳನ್ನು ಬೆಳಗುವ ಮಿಂಚಿನ ಅಚಿರ ಚಂಚಲ ಪ್ರಕಾಶದಲ್ಲಿ ಇರುವಂತೆ ಕಾಣಿಸುತ್ತದೆ. ಅದೇ ಸಮಗ್ರ ಸತ್ಯವಲ್ಲದಿದ್ದರೆ ಸತ್ಯಕ್ಕೆ ಅಂಥ ಒಂದು ರೂಪವೂ ಇರಬಲ್ಲದೆಂಬುದಾದರೂ ಕಂಡೀತು. ಮ್ಯಾಕ್ಸ್ ಬೀರ್‌ಭಾಂ (Max Beerbohm ) ಎಂಬ ವ್ಯಂಗ್ಯ ಚಿತ್ರಲೇಖಕರೂ ನಾಟಕ ವಿಮರ್ಶಕರಾಗಿ ಇವರ ತರುವಾಯ Saturday Review ಪತ್ರಿಕೆಯ ವಿಮರ್ಶಕರೂ ಆದವರು ಒಂದು ಚಿತ್ರವನ್ನು ಬಿಡಿಸಿದ್ದಾರೆ : ಶೀರ್ಷಾಸನ ಹಾಕಿದಂತೆ ಷಾ ಚಿತ್ರವನ್ನು ರೇಖಿಸಿ 'ಆಶ್ಚರ್ಯ, ಎಷ್ಟೋ ಹಿಂದೆ ಈ ಆಸನದಲ್ಲಿದ್ದ ಇವನು ಇಂದೂ ಹಾಗೆಯೇ ಇದ್ದಾನೆ' (Amazing: This fellow has not changed his position since last I saw him.) ಎಂಬ ಅಡಿಲೇಖನ ಬರೆದಿದ್ದಾರೆ. ತಲೆಕೆಳಗಾಗಿ ಲೋಕವನ್ನು ನೋಡುವುದು ಸುಲಭವಲ್ಲ. ಅಂಥ ದೃಷ್ಟಿ ದೇವತೆಗಳಿಗೆ, ರಾಕ್ಷಸರಿಗೆ, ವ್ಯಂಗ್ಯ ವಿನೋದಿಗಳಿಗೆ ಶಕ್ಯ. ಅವರ ದರ್ಶನ ಅಸತ್ಯವೆಂದು ಯಾರು ಹೇಳಬಲ್ಲರು ?

ಹಾಗೆಯೇ ಅವರ ನಾಟಕಗಳಲ್ಲಿ ದೃಶ್ಯಗಳ ಆರಂಭ ವಿವರಣೆ, ರಂಗನಿರ್ದೇಶನ ದೀರ್ಘವಾಗುತ್ತವೆ. ಇಬ್ಸೆನ್ ಕಾಲದಿಂದೀಚೆಗೆ ಈ ವಾಡಿಕೆ ಉಂಟಾಗಿದೆ. ಅಚ್ಚಾದ ನಾಟಕವನ್ನು ಏಕಾಂತದಲ್ಲಿ ಓದುವವರಿಗೆ ಆವರಣ ಕಲ್ಪನೆ ಮಾಡಿಕೊಡುವಂತೆ ನಾಟಕಕಾರರು ದೊರಕಿಸುವ ನೆರವು ಇದು. ಕಾದಂಬರಿಕಾರರು ನೇರವಾಗಿ ಇದನ್ನು ಮಾಡುತ್ತಾರೆ. ನಾಟಕ ಪ್ರದರ್ಶನದಲ್ಲಿ ನಿಜವಾದ ಆವರಣವನ್ನು ಕಲ್ಪಿಸಲು ನೆರವಾಗುವಂತೆಯೂ ಸಂಪೂರ್ಣವಾಗಿ ಅದರದರ ಸಹಜ ಚೌಕಟ್ಟಿನಲ್ಲಿ ಆಯಾ ಸನ್ನಿವೇಶವನ್ನು

ಅನುಭವಿಸಲು ನೆರವಾಗುವಂತೆಯೂ ಈ ಯತ್ನ ಒದಗುತ್ತದೆ. ಬೇಡವಾದವರು ಅದನ್ನು ಲಕ್ಷಿಸಬೇಕಿಲ್ಲ. ದಾನ ಹೆಚ್ಚು ಕೊಟ್ಟಾಗ ಕೊಕ್ಕರಿಸುವ ಮನೋವಿಕಾರ ವಿಚಿತ್ರವಾದ್ದು.

ಷಾ ನಿರಂತರವಾಗಿ ತಮ್ಮ ಅಭಿಪ್ರಾಯಗಳಿಗೂ ನಿಲವಿಗೂ ಕಾದಾಡಿದ ವೀರರು, ಯೋಧರು. ಅವರಿಗೆ ವಿರುದ್ಧ ಪ್ರದರ್ಶನವಾದರೆ ಅವರ ಸತ್ತ್ವವೂ ಉಕ್ಕಿ ಕೆರಳುತ್ತದೆ. ರೋಮಿನ ಮೇಲೆ ದಾಳಿ ಬಂದ ಒಬ್ಬ ಬರ್ಬರ ವೀರ ಊರನ್ನು ಕಾಯಲು ಅಸಂಖ್ಯಾತ ರಕ್ಷಕ ದಳ ನಿಂತಿದೆ ಎಂದು ಸುದ್ದಿ ಕೇಳಿ—'The thicker the hay the easier mown' ಎಂದನಂತೆ. ಕುಡುಗೋಲಿಗೆ ಸಿಕ್ಕುವ ಹುಲ್ಲು ಎಷ್ಟು ದಟ್ಟವಾದರೆ ಅಷ್ಟು ಅಷ್ಟೂ ಕುಯಿಲಿಗೆ ಖುಷಿ ಉಂಟಲ್ಲವೆ-ಎನ್ನಬಲ್ಲವರು ಷಾ. Widowers' Houses ಎಂಬ ನಾಟಕವನ್ನು ಕುರಿತು Plays Unpleasantಗೆ ಮುನ್ನುಡಿ ಬರೆವಾಗ ವಿಮರ್ಶಕರನ್ನು ಅವರು ಎದುರಿಸಿದ ರೀತಿ ಜಯತಂತ್ರ. ಅಷ್ಟು ಮಂದಿ ವಿಮರ್ಶಕರೂ ಅಷ್ಟು ಸಂಖ್ಯೆಯ ಪತ್ರಿಕೆಗಳೂ ಒಂದು ನಾಟಕವನ್ನು ವಿಮರ್ಶೆ ಮಾಡುವುದೂ ಅವರೆಲ್ಲರನ್ನೂ ಹೆಣ ಹಾಕಿ ತಮ್ಮ ದೃಷ್ಟಿಯನ್ನು ವಿಜೃಂಭಿಸುವುದೂ ಒಂದು ನಾಡಿನ ಪುಣ್ಯ. ಜೀವಂತ ಸಮಾಜದಲ್ಲಿ ಈ ಮಲೆತ ಮಾರ್ಮಲೆತ, ಇಂಥ ಮಿಡುಕು ವಿಪುಲವಾಗಿ ಇರುತ್ತವೆ. ಸಾಹಿತ್ಯಕ್ಕೂ ಕಲೆಗೂ ಹೀಗೆ ನಾವೆಂದು ಮಿಡಿದೇವು ? G. B. S. ಎಂಬ ಕಿರುಸಂಜ್ಞೆಯಲ್ಲಿ ಇತರರ ನಾಟಕಗಳ ವಿಮರ್ಶೆ ಮಾಡಿ George Bernard Shaw ನಾಟಕಕ್ಕೆ ಪ್ರವೇಶ ಮಾಡಿದೆ ಎಂದ ಅವರ ಮಾತು ಅವರ ಉದ್ದೇಶ ಸಾಧನೆಯ ಮಹಾತಂತ್ರ, ನಿರ್ಮಾಣ ಸಿದ್ಧತೆ. ದೊಡ್ಡ ಕವಿ ತನ್ನ ಕವಿತೆಯ ಸ್ವೀಕಾರಕ್ಕೆ ಆವರಣ ಸಿದ್ಧ ಮಾಡಿ ಕೊಡಬೇಕೆಂಬುದೂ ರುಚಿ ರಚನೆ, ರುಚಿ ಶುದ್ಧಿ ಕಲ್ಪನೆಗಳಿಗೆ ನೆರವನ್ನು ಒದಗಿಸಬೇಕೆಂಬುದೂ ಸತ್ಯ.

ಷೇಕ್ಸ್‌ಪಿಯರ್, ಸಾಫೋಕ್ಲಿಸ್, ಮೋಲಿಯೇ ಉತ್ತಮ ಕೃತಿ ನಿರ್ಮಾಣ ಮಾಡಿರಲಿ. ಆದರೆ ದೈವ ಸೃಷ್ಟಿ ಅವರೊಂದಿಗೆ ಮುಗಿಯಲಿಲ್ಲವಲ್ಲ ! ಅವರೊಂದಿಗೆ ಸಾಹಿತ್ಯ ಸೃಷ್ಟಿ ನಿಲ್ಲಬೇಕಿಲ್ಲ. ಅವುಗಳಂತೆ ಇಬ್ಸೆನ್, ಪಿರಾಂಡೆಲ್ಲೊ, ಚೆಕೊವ್, ಷಾ, ಸಾರ್ತ್ರೆ, ಕ್ಯಾಸೆ, ಟೆನ್ನೆಸ್ಸಿ ವಿಲಿಯಂಸ್, ಪ್ರೀಸ್ಟ್ಲೆ ಇಲ್ಲವಾದರೆ ಅವರದೇನು ತಪ್ಪು ? ಅವರು ಬೇರೆ ವ್ಯಕ್ತಿಗಳು. ಅವರ ಲೋಕಾನುಭವ, ರೀತಿ ಬೇರೆ. ಹಿಂದಿನವರಂತೆ ಈಚಿನವರು ಇಲ್ಲವೆಂದರೆ ಅದು ವಿಮರ್ಶೆಯಲ್ಲ. ಆ ಕಾಲದ ಬೇರೆಯವರ ಕೃತಿಗಳಂತೆ ಈಗಿನವು ಏಕೆ ಇರಬೇಕು ? ಅವರವುಗಳಂತೆಯೇ ಇದ್ದರೆ ಇವು ಬೇಕು ತಾನೆ ಏಕೆ ? ಆಯಾ ಕಾಲದ ಜೀವನ ಚಿತ್ರಣಕ್ಕೂ ವ್ಯಾಖ್ಯಾನಕ್ಕೂ ಆಯಾ ಕಾಲದ ಸಾಹಿತ್ಯವೂ ಕಲೆಯೂ ತೊಡಗುತ್ತವೆ. ತೊಡಗಬೇಕು. ಅದೊಂದೇ ಆರೋಗ್ಯದ, ಸ್ವತಂತ್ರ ಜೀವಂತಿಕೆಯ ಲಕ್ಷಣ. ತನ್ನ ಬೆಲೆಗಳನ್ನು ಹಾಸ್ಯವಿಡಂಬನೆಗಳ ಮೂಲಕ ಎತ್ತಿ ತೋರಿಸಿ ರೂಪಕ ನಿರ್ಮಾಣ ಮಾಡಿದ ಒಂದು ಬಗೆಯ ವಿಶಾಲ ಕೀರ್ತಿ ಷಾ ಅವರದು.

ವಿಮರ್ಶಕರನ್ನೇ ಲೇವಡಿ ಮಾಡುವ Fanny's First Playಯು ಚಮತ್ಕಾರ ಮೋಜಿನದು. ಅವರ ಮಾತುಕತೆ, ಜೀವನಕಥೆ, ಕಾಗದ ಪತ್ರಗಳು, ಪ್ರಬಂಧಗಳು ಬೇಕಾದಷ್ಟಿವೆ. ಅವರನ್ನು ಕುರಿತು ಹಿರಿಕಿರಿಯರ ವ್ಯಾಖ್ಯಾನಗಳೂ ನೆನಪುಗಳೂ ಹಾಗೆಯೇ. ಅವರ ಅಭಿಪ್ರಾಯ ಅಲ್ಲಿ ಇಲ್ಲಿ ನಮಗೆ ಒಪ್ಪಬಹುದು, ಬಿಡಬಹುದು. ಯಾರದೆಲ್ಲ ಎಲ್ಲರಿಗೂ ಒಪ್ಪುತ್ತದೆ ? ಅಲ್ಲಿ ಇಲ್ಲಿ, ಅತಿಯೊ ಜಾಳೊ ಇರಬಹುದು. ಆದರೆ ತಮ್ಮ ಕಾಲದಲ್ಲಿ ಪ್ರಗತಿ ಸತ್ವವಾಗಿ ಪ್ರಚಾರಕ್ಕೆ ಬಂದ ಎಲ್ಲದರ ಪ್ರಭಾವವೂ ಅವರ ಮೇಲೆ ಬಿದ್ದು ಅಂಥ ಚೈತನ್ಯಗಳ ಪ್ರಕಾಶಕರೂ ಪ್ರಚಾರಕರೂ ಆದರು ಅಂದು. Wagner, Mozart, Beethoven ಅವರ ಸಂಗೀತ ದಂತೆಯೇ ಹೊಸ ಗೇಯಕಾರರ ಕೃತಿಗಳಿಗೆ ಬೆಲೆ ಕಟ್ಟಿದರು. ಷೇಕ್ಸ್ಪಿಯರ್, ಸ್ಕ್ರೈಬ್, ಡೂಮಾ, ಷೆರಿಡನ್ ಅವರನ್ನು ಕುರಿತು ನುಡಿದಂತೆ ತನ್ನ ಕಾಲದ ಜೋನ್ಸ್,ಪಿನೆರೊ, ಆಸ್ಕರ್ ವೈಲ್ಡ್ ಅವರ ನಾಟಕಗಳ ವಿಮರ್ಶೆಮಾಡಿದರು. ಪ್ರಸಿದ್ಧ ನಟನಟಿಯರ ಭೂಮಿಕೆಗಳನ್ನು ಟೀಕೆಮಾಡಿದರು. Mrs. Patrick Campbell ,Jane Achurch ಅವರಿಗೆ ದಾರಿ ತೋರಿಸಿದರು. ಸಿಬಿಲ್ ಥಾರನ್‌ಡೈಕಿಗಾಗಿ ಸೇಂಟ್‌ಜೋನ್ ಬರೆದರು ; Ellen Terryಗಾಗಿ ಲೇಡಿ ಸಿಸೆಲಿ ಪಾತ್ರವನ್ನು ರಚಿಸಿದರು. ಯಾರೊ ಇನ್ನೊಬ್ಬ ಪ್ರಸಿದ್ಧ ನಟನಿಗಾಗಿ—'ಸೆಡ್ರಿಕ್ ಹಾರ್ಡ್‌ವಿಕ್'?—The Apple Cart ಅಲ್ಲಿನ King Magnus ಪಾತ್ರವನ್ನು ಸೃಷ್ಟಿಸಿದರಂತೆ. ಇದು ಸೃಷ್ಟಿಸಿದ್ದಿಯದೇ ಒಂದು ರೂಪ. ಅವರ ನಾಟಕ ಪ್ರಪಂಚದ ಜೀವಂತಿಕೆ, ಹರ್ಷೋತ್ಸಾಹ, ಸನ್ನಿವೇಶದ ರಸದ ಕಲ್ಪನೆ, ಸುಗ್ಗು ಅವರ ಕೃತಿಗಳನ್ನು ಜನಪ್ರಿಯವಾಗಿ ಉದ್ಧರಿಸುತ್ತವೆ. ಭಾವಗಳಿಗೆ ರೆಕ್ಕೆಗಳನ್ನೂ ಜೀವನವನ್ನೂ ಊಡಿ ಅವಕ್ಕೆ ಚೈತನ್ಯವನ್ನು ತುಂಬುವ ಅವರ ಸಾಮರ್ಥ್ಯ ಅದ್ವಿತೀಯವಾದ್ದು. ಒಣಸೂತ್ರಗಳನ್ನು ಸುಡಿ ; ಯಾವುದರಲ್ಲಿ ಜೀವಗುಣ ಹೊಮ್ಮಿ ಮನಸ್ಸನ್ನು ಹಿಡಿಯುತ್ತದೆಯೊ ಒಲಿಸುತ್ತದೆಯೊ ಅದು ಅಮೃತ ಸತ್ವ. ಸೂತ್ರದಿಂದ ಸತ್ಯವಲ್ಲ ; ಸತ್ಯದಿಂದ ಸೂತ್ರ. ನಿರಂತರ ಮಾರ್ಪಾಡು ಜಗದ್ವ್ಯಾಪಾರದ ಮಹಾಲಕ್ಷಣ.

"ಮಹತ್ತಾದ್ದೆಂದು ನೀವೇ ಎಣಿಸಿ ಕೈಕೊಂಡ ವ್ರತಕ್ಕಾಗಿ ನಿಮ್ಮನ್ನು ವಿನಿಯೋಗಿಸಿ ಕೊಳ್ಳುವುದು ; ತಿಪ್ಪೆಯ ಮೇಲೆ ನಿಮ್ಮನ್ನು ಎಸೆಯುವ ಮುಂಚೆ ಪೂರ್ತಿಯಾಗಿ ಸವೆದು, ಹಿಂಡಿ ಹಿಪ್ಪೆಯಾಗುವುದು ; ಲೋಕವು ನಿಮ್ಮ ಸೌಖ್ಯಕ್ಕಾಗಿ ತನ್ನನ್ನು ವಿನಿಯೋಗ ಮಾಡಿಕೊಳ್ಳುವುದಿಲ್ಲವಲ್ಲ ಎಂದು ಮೂದಲಿಸುತ್ತ ರುಜಿ ಆಕ್ಷೇಪಣೆಗಳಿಂದ ಕೂಡಿದ ಜ್ವರಗ್ರಸ್ತ, ಸ್ವಾರ್ಥ ಮೃತ್ಪಿಂಡಿಕೆಯಂತಾಗುವದರ ಬದಲಾಗಿ ಪ್ರಕೃತಿಯ ಒಂದು ಸಾರ ಶಕ್ತಿಯಾಗುವುದು. ನಿಜವಾದ ಜೀವನದ ಸಂತೋಷ ಇದು"— ಎಂದರು ಷಾ.

* * * *

ಕೈಕೊಂಡ ಎರಡರಲ್ಲಿ ಷಾ ಅವರ ಒಂದು ನಾಟಕವನ್ನಾದರೂ ಪ್ರಕಟಿಸಲು ನೆರವಾದುದಕ್ಕೆ ಗೆಳೆಯ ಆರ್. ಎನ್. ಹಬ್ಬು ಅವರಿಗೆ ಕೃತಜ್ಞನಾಗಿದ್ದೇನೆ. 1960ರಲ್ಲಿ ಸಿದ್ಧವಾದ ಇದು 1963ರಲ್ಲಿ ಯಾದರೂ ಬೆಳಕುಕಾಣಲಾದ್ದು ಭಾಗ್ಯವೇ. ಷಾ 1885 ರಿಂದ 1892ರ ವರೆಗೆ ತಮ್ಮ ನಾಟಕ ಪ್ರದರ್ಶನಕ್ಕೆ ಕಾಯಲಿಲ್ಲವೆ ? ಹುಲು ಮನುಷ್ಯರ ಮಾತೇನು ?

ಕೊಟ್ಟ ಕಾಲಾವಧಿಗಳನ್ನು ವಿಸ್ತರಿಸಿ ಬೇಸರಗೊಂಡಿರಬಹುದಾದ ಲಂಡನಿನ ಸೊಸೈಟಿ ಆಫ್ ಆಥರ್ಸ್ ಅವರು ತಾಳ್ಮೆಯಿಂದ ಇದನ್ನು ಸ್ವೀಕರಿಸುವರೆಂದು ನಂಬಿದ್ದೇನೆ.

ಬೆಂಗಳೂರು
25-4-1963

ವಿ. ಸೀ.

## ಮೇಜರ್ ಬಾರ್ಬರ

ಈಗ್ಗೆ 6–8 ವರ್ಷಗಳಿಗೆ ಹಿಂದೆ ಬರ್ನಾರ್ಡ್ ಷಾ ಬರೆದ ಎರಡು ನಾಟಕಗಳನ್ನು ಕನ್ನಡಿಸಿ ಪ್ರಕಟಿಸಲು ಯತ್ನಿಸಿದೆ. 4–5 ವರ್ಷಗಳ ಹಿಂದೆ ಪಿಗ್‌ಮೇಲಿಯನ್ ಪ್ರಕಟವಾಯಿತು. ಈಗ ಮೇಜರ್ ಬಾರ್ಬರ ಹೊರಬೀಳುತ್ತಿದೆ. ನಮ್ಮಲ್ಲಿ ಕವಿತೆ ನಾಟಕಗಳಿಗೆ ಪ್ರಕಟನೆ ಕಷ್ಟ ; ನನ್ನವಕ್ಕಂತೂ ಮತ್ತೂ ಕಷ್ಟವೆಂಬುದು ಈ 40 ವರ್ಷಗಳ ಅನುಭವ. ಬಹುಶಃ ನನ್ನ ಹಾಗೆಯೇ ಅವೂ ಬಡಕಲಾಗಿರುತ್ತವೆಯಾದೀತು. ಜೊತೆಗೆ ಈ ಹೆಸರುಗಳು ಅಡ್ಡಿ ಕೂಡ. ಮಾಡುವುದೇನು ? ಸೊಹ್ರಾಬ್ ರುಸ್ತುಂ ನಿಜವಾದ ಹೆಸರುಗಳು. ಕಥೆ, ರಚನೆ, ರೀತಿಗಳನ್ನು ಮೂಲದಲ್ಲಿನಂತೆಯೇ ಉಳಿಸಿರುವಾಗ, ಯಾವ ರೂಪಾಂತರವನ್ನೂ ಮಾಡದಿರುವಾಗ—ಇಂಥವರ ಈ ನಾಟಕ ಎನ್ನುವಾಗ—ಆ ಹೆಸರನ್ನೇ ಉಳಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ಕನ್ನಡಿಗರು ಸಹನೆಯನ್ನು ತೋರಿಸಬೇಕು. ಇಂಥ ಕೃತಿಗೆ ಅಗತ್ಯವಿದೆಯೊ ಇಲ್ಲವೊ ನಮ್ಮ ನಾಡಿನಲ್ಲಿ. ನನಗಂತೂ ಅಗತ್ಯ ತೋರಿದೆ. ಪ್ರಸಿದ್ಧರಾದ 20–25 ಮಂದಿ, ಇಬ್ಸೆನ್ ತರುವಾಯದ ನಾಟಕ ಕರ್ತೃಗಳ ಕೃತಿಗಳನ್ನು ನಮ್ಮ ಭಾಷೆಗಳಿಗೆಲ್ಲ ಪರಿವರ್ತಿಸಿಕೊಂಡರೆ ಆಧುನಿಕ ವಸ್ತು, ದೃಷ್ಟಿ, ರಚನೆ ಕ್ರಿಯಾವಿಧಾನಗಳ ಪರಿಚಯ ನಮ್ಮ ಜನಕ್ಕೆ—ಸಾಹಿತಿಗಳಿಗಾದರೂ—ಆದೀತು. ಎಂಥ ವಿಷಯಗಳನ್ನು ಅವರು ಆಯುತ್ತಾರೆ, ರಂಗರಚನೆಗೆ ಅಳವಡಿಸಿಕೊಳ್ಳುತ್ತಾರೆ, ಅವಕ್ಕೆ ಕೀರ್ತಿ, ಶಕ್ತಿ ಹೇಗೆ ಬಂದಿವೆ ಎಂಬುದು ಗೊತ್ತಾಗುತ್ತದೆ. ನಮ್ಮ ಲೇಖಕರಿಗೆ ದಿಗ್ದರ್ಶನವಾಗಬಲ್ಲದು ಕೂಡ. ನಾಟಕ ನಮ್ಮಲ್ಲಿ ಹುಲುಸಾಗಿ ಬೆಳೆದ ಪ್ರಕಾರವಲ್ಲ. ಸೂತ್ರಕ್ಕೆ ಅಪವಾದವೆನ್ನಬಹುದಾದ ಒಬ್ಬಿಬ್ಬರ ಕೃತಿಗಳು ಈಗಿನ ಕಾಲಕ್ಕೆ ಬಂದಿವೆಯಾದರೂ

ಏಕೊ ಏನೊ ಭಾರತದಲ್ಲಿಯೇ ನಾಟಕ ಕೃತಿಗಳ ನಿರ್ಮಾಣ ಸಾಕಷ್ಟು ಆಗಿಲ್ಲ. ನಮ್ಮ ಜನಕ್ಕೆ ಆ ಪ್ರಕಾರ ಏಕೆ ಒಲಿಯಲಿಲ್ಲವೊ ಕಾಣೆ. ಈ ಜನದ ಮೂಲಸ್ವಭಾವಕ್ಕೆ ಅದು ಅಸಂಬದ್ಧವೆನ್ನುವುದಕ್ಕಂತೂ ಮನಸ್ಸು ಬಾರದು. ಆದರೆ ಸಹಜವಾದ ನಾಟಕ ಕೃತಿ ನಿರ್ಮಾಣಕ್ಕೆ ಏಕೋ ಈ ಬರ ?[1]

ಸಾಹಿತ್ಯ ವಿಮರ್ಶೆಯಲ್ಲಿ ನಾಟಕವನ್ನು ಕುರಿತು ಮಾತು ಬಂದಾಗ ಇಬ್ಸೆನ್, ಷಾ, ಪಿರಂಡೆಲ್ಲೊ, ಸಾತ್ರ್ರ್, ಇವೊನೆಸ್ಕೊ, ಬೆಕೆಟ್, ಬ್ರೆಕ್ಟ್, ಚೆಕೊಫ್, ಚಾಪೆಕ್, ಮಿಲರ್ ಮುಂತಾದ ಹೆಸರನ್ನು ಎತ್ತಿ ಹೇಳುವುದು ವಾಡಿಕೆ. ಇಬ್ಸೆನ್, ಚೆಕೊಫರ ನಾಟಕಗಳು ಕೆಲವು ಕನ್ನಡಕ್ಕೆ ಬಂದಿವೆ. ಚೆಕೊಫರ ಇನ್ನೂ ಮೂರು ನಾಟಕಗಳನ್ನು ಬರೆದ ಗೆಳೆಯ ಪಡುಕೋಣೆ ರಮಾನಂದರಾಯರು ಅವಕ್ಕೆ ಪ್ರಕಟನೆ ಸಿಕ್ಕದೆ 5–6 ವರ್ಷಗಳಿಂದ ನನ್ನ ಹಾಗೆಯೇ ತೊಳಲಿ ಬೇಸತ್ತಿದ್ದಾರೆ. ಷಾ ಕನ್ನಡಕ್ಕೆ ಬಂದಿರಲಿಲ್ಲವಾಗಿ ನನ್ನ ಪ್ರಯತ್ನ ನಡೆಯಿತು. ಕುರುಡೊ ಕುಂಟೊ ಆಗಿ ಷಾ ನನ್ನ ಈ ಎರಡು ನಾಟಕಗಳಲ್ಲಿ ಕನ್ನಡಕ್ಕೆ ಇಳಿದಿದ್ದಾರೆ. ಆತನ ಸಹಜ ಜೀವಕಳೆ, ಹರ್ಷ, ಹಾಸ್ಯದ ಚುರುಕು, ವಾಕ್ತಾಂಡವ, ಸನ್ನಿವೇಶಗಳ ರಭಸ, ಹುರುಪು ನನ್ನ ಪ್ರತಿಫಲನದಲ್ಲಿ ಬರುತ್ತವೆಯೆಂದು ಹೇಳುವ ಧಾರ್ಷ್ಟ್ಯ ನನಗಿಲ್ಲ. ಒಟ್ಟು ನಾಟಕ ಸುಮಾರಾಗಿ ಕನ್ನಡಗೊಂಡಿದೆಯೆಂದು ಹೇಳಬಲ್ಲೆ. 100ಕ್ಕೆ ನೂರು ಪೈಸೆ ದಕ್ಕಿದೆ ಎಂದು ಭಾಷಾಂತರದಲ್ಲಿ ಯಾರು ಹೇಳಬಲ್ಲರು? ಪರೀಕ್ಷೆಯಲ್ಲಿ ಹುಡುಗರು ಯಾವುದೊ ಕ್ಲಾಸಲ್ಲಿ ತೇರ್ಗಡೆ ಹೊಂದುವಂತೆ ಈ ಭಾಷಾಂತರ ತೇರ್ಗಡೆಯಾದರೆ ಸಂತೋಷ. ವಿಮರ್ಶೆಗೆ ಲಕ್ಷ್ಯಗಳು ಅಗತ್ಯವಾಗಿರುವುದರಿಂದ ಯಾವುದಾದರೂ ವ್ಯವಸ್ಥೆ ಮಾಡಿ ಈ ಶತಮಾನದ 25–50 ಉತ್ತಮ ನಾಟಕಗಳು ಕನ್ನಡಕ್ಕೆ ಬೇಗ ಬರುವಂತಾದರೆ ದೊಡ್ಡ ಕೆಲಸ ನಡೆದಂತಾಗುತ್ತದೆಂಬುದು ನನ್ನ ನಂಬಿಕೆ.

ಷಾ 90 ಕ್ಕೆ ಮೇಲ್ಪಟ್ಟು ವಯಸ್ಸು ಯಶಸ್ವಿಗಳಾಗಿ ಬಾಳಿ ಸುಮಾರು 60–70 ವರ್ಷಗಳ ಕಾಲ ಸಾಹಿತ್ಯಸೇವೆ ಮಾಡಿದರು. ಕಾದಂಬರಿ, ನಾಟಕದ, ಚಿತ್ರಕಲೆಯ ಮತ್ತು ಸಂಗೀತದ ವಿಮರ್ಶೆ, ಇಬ್ಸೆನ್ ನಾಟಕದ ಪರಿಚಯಗ್ರಂಥ ಮುಂತಾದುವನ್ನು ತಮ್ಮ ನಾಟಕಗಳ ಜೊತೆಗೆ ಬರೆದರು. ಯಾವುದನ್ನು ಮಾಡಿದರೂ ಅವರ ಅಂಕಿತಕ್ಕೆ ತಕ್ಕ ಚುರುಕು, ಧೀಮಂತಿಕೆ, ಸಾಹಿತ್ಯಕ ಸಾಮಾಜಿಕ ಬೆಲೆ ಅವರ ಕೃತಿಗಳಿಗೆ ಇದ್ದೇ ಇತ್ತು. ತಮ್ಮ ಕಾಲದ ಜನ ವರ್ಗಕ್ಕೆ ತಿಳಿವಳಿಕೆ ಕೊಡುವ ವ್ರತ ಹೊತ್ತಂತೆ ಜನಜೀವನದ ಎಲ್ಲ ಶಾಖೆಗಳ ವಿಷಯಗಳನ್ನೂ ಕುರಿತು ಸತ್ಯಾಸತ್ಯ ವಿವೇಚನೆ ಮಾಡಿದರು. ಅವರ ಹರಿತವಾದ, ತಲಸ್ಪರ್ಶಿಯಾದ ದೃಷ್ಟಿಗೆ—ಅದು ಶ್ರಾವಣದ ಮಿಂಚು–ಬೀಳದ ವಿಷಯವಿರ

1. ಸಂಸ್ಕೃತದಲ್ಲಿ 600—700 ನಾಟಕಗಳಿವೆ ; ಅವುಗಳಲ್ಲಿ ಕೃತಾರ್ಥವಾಗಿ ಅಂತರ್‌ರಾಷ್ಟ್ರೀಯ ಬೆಲೆಗಣನೆಯಲ್ಲಿ ಎಷ್ಟಕ್ಕೆ—12ಕ್ಕೆ ? 20ಕ್ಕೆ?—ಕೀರ್ತಿ ಬಂದೀತು? ಈಗಿನ 14–15 ಭಾಷೆಗಳಲ್ಲಿ ಸಾವಿರ ನಾಟಕಗಳು ಬಂದಿರಬೇಕು. ಅವುಗಳಲ್ಲಿನ ಸಾಹಿತ್ಯ ಮೌಲಿಕತೆ ಭಾರತದ ನಿರ್ಮಾಣಶಕ್ತಿಗೆ ಪ್ರಮಾಣವಾಗಬಲ್ಲದ್ದು ಎಷ್ಟು ?

ಲಿಲ್ಲ. ಅವರ ಚಿಂತನಕ್ಕೆ ಹರಿಯದ ವಸ್ತುವಿರಲಿಲ್ಲ. ಮತ, ಧರ್ಮ, ರಾಜಕೀಯ, ಆರ್ಥಿಕ ವಿಷಯಗಳನ್ನು ತಮ್ಮ ತೀವ್ರ ವಿವೇಚನೆಗೆ ತಂದುಕೊಂಡರು. ಸೈನ್ಯ, ವೈದ್ಯ, ಶಿಕ್ಷಣ, ಕಾನೂನು, ವ್ಯವಹಾರ, ಪ್ರೇಮ, ವೀರ, ತ್ಯಾಗ, ಸಂಸ್ಥೆ, ನಾಯಕತ್ವ, ಸ್ವದೇಶಾಭಿಮಾನ, ಆವಟ, ಆಷಾಢಭೂತಿತನ, ಆರ್ಥಿಕ ಅನ್ಯಾಯ ಅಸಮಾನತೆ, ಮತಧರ್ಮ ಯಾವುವೂ ಅವರ ಲೇಖನ ಕಾರ್ಯಕ್ಕೆ ಅವಕಾಶ ಕೊಟ್ಟವೇ. ಜನಜೀವನದಲ್ಲಿ ನಿಜ ಸುಳ್ಳು, ಟೊಳ್ಳು ಗಟ್ಟಿ ಯಾವುದು ಎಂಬುದರ ಪರಿಶೀಲನೆಯೇ ಬಹುತರ ಸಾಹಿತಿಗಳ ಪ್ರಜ್ಞಾಪ್ರಪಂಚವನ್ನು ವಿಶೇಷವಾಗಿ ಜಾಗ್ರತಗೊಳಿಸಿರುವ ಸಂಗತಿ. ಅವನ್ನು ಕುರಿತು ಅಭಿಪ್ರಾಯ, ನಡತೆ, ಪ್ರವೃತ್ತಿ, ಆಕಾಂಕ್ಷೆ ಹೇಗೆ ಬೆಳೆಯುತ್ತವೆ, ಅವುಗಳ ಹಿಂದೆ, ಆಳದಲ್ಲಿ, ಕಾರ್ಯಮಾಡುವ ವೃತ್ತಿಗಳಾವುವು ಎಂಬುದು ಸಾಹಿತಿಯ ವಿಶಿಷ್ಟ ಗಮನಕ್ಕೆ ಸದಾ ಸಂದಿದೆ. ಜನದ ನಿಲವು, ನುಡಿ, ನಡೆ, ಕ್ರಿಯೆ, ಭ್ರಾಂತಿ ಹೇಗೆ ರೂಪಗೊಳ್ಳುತ್ತವೆ, ಪರಿಣಾಮಗೊಳ್ಳುತ್ತವೆ ಎಂಬುದರ ಸ್ಥಿತಿಚಿತ್ರವನ್ನೊ ವಮೌಲ್ಯಗಳನ್ನೊ ನಿರ್ದೇಶಿಸುವುದು ಅವನ ಪಾಲಿನ ಕಾರ್ಯ. ಪ್ರತಿಯೊಬ್ಬನೂ ತನ್ನ ಚಾರಿತ್ರ, ಶೀಲ, ಯೋಗ್ಯತೆ, ಅನುಭವಗಳಂತೆ ಅವನ್ನು ರೂಪಿಸುತ್ತಾನೆ. ತುಂಬಾ ಗಂಭೀರವಾಗಿ ರಂಗುರಂಜನೆ ಬರುವಂತೆ ಮಾಡಬಹುದು. ತಿಳಿಹಾಸ್ಯದಲ್ಲಿ ಕಾಣಿಸಬಹುದು. ಚುಚ್ಚಿ ಅಣಕವಾಡಿ, ತೆಗಳಿ ತೋರಿಸಬಹುದು. ಇಂಥವು ಎಲ್ಲವನ್ನೂ ಒಬ್ಬನ ಕೃತಿಗಳಲ್ಲಿಯೇ ಕಾಣುವುದೂ ಅಷ್ಟೇನು ಅಪರೂಪವಲ್ಲ.[2]

ಒಂದು ಬಗೆಯ ಹಾಸ್ಯ ಸಂಮಿತವನ್ನು ಅನುಸರಿಸಿ ಈ ಕಾರ್ಯವನ್ನು ಮಾಡಿದವರು ಷಾ. G.B.S. ಎಂಬ ಅಂಕಿತದಲ್ಲಿ World, Saturday Review ಗಳಲ್ಲಿ ನಾಟಕ ಸಮೀಕ್ಷೆ ಮಾಡುತ್ತಿದ್ದವರು George[3] Bernard Shaw ಎಂಬ ಪೂರ್ಣ ಹೆಸರಲ್ಲಿ ನಾಟಕಕಾರರಾಗಿ ಪ್ರಸಿದ್ಧಿಗೆ ಬಂದರು. ಅವರ ನಾಟಕಗಳೆಲ್ಲವೂ ರಂಗ ಪ್ರದರ್ಶನಕ್ಕೆ ಬಂದವೇ : ಕೆಲವು ಬರೆದಕೂಡಲೆ, ಕೆಲವು ಆಮೇಲೆ. ಕೆಲವಕ್ಕೆ ಸರ್ಕಾರದ ಅಧಿಕಾರಿ Censor ಮುಟ್ಟುಗೋಲು ಹಾಕಿದರು. ಹತ್ತಿಪ್ಪತ್ತು ವರ್ಷಗಳ ತರುವಾಯ ಅಂಥವೂ ಪ್ರಯೋಗಗೊಂಡವು, ಅಥವಾ ಖಾಸಗಿಯಾಗಿ ಪ್ರದರ್ಶಿತವಾದವು. ಅವರ ಪಿಗ್‌ಮೇಲಿಯನ್, ಮೇಜರ್ ಬಾರ್ಬರ, ಸೀಸರ್ ಮತ್ತು ಕ್ಲಿಯೊಪ್ಯಾಟ್ರ ನಾಟಕಗಳು ಚಲನಚಿತ್ರರೂಪದಲ್ಲಿಯೂ ಪ್ರದರ್ಶನಗೊಂಡವು. ಸಂಗೀತ ನಾಟಕವಾಗಿ

---

2. ಷಾ ಅವರ Heart-break House ಒಂದರಲ್ಲಿ ಎಷ್ಟು ಬಗೆ ಮಟ್ಟದ ತಮಾಷೆಯ ನಡುವೆ ಎಷ್ಟು ಗಂಭೀರ ಅರ್ಥಗರ್ಭವಿದೆ ? ಅದನ್ನು ಸಮರ್ಪಕವಾಗಿ ಆಡಬಲ್ಲ ನಟವರ್ಗ ಬಹುಶಃ ನಮ್ಮಲ್ಲಿ ಇನ್ನೂ ಹುಟ್ಟಿಲ್ಲವೇನೊ. ಷೇಕ್ಸ್‌ಪಿಯರನ ಕ್ಲಿಯೊಪ್ಯಾಟ್ರಾಳನ್ನು ಅಭಿನಯಿಸುವ ನಟಿಯನ್ನು ಇನ್ನೂ ಕಾಣಬೇಕಾಗಿದೆ.

3. ಜಾರ್ಜ್ ಎಂಬ ಹೆಸರು ಅವರಿಗೆ ಅಷ್ಟು ಪ್ರಿಯವಾಗಲಿಲ್ಲವಂತೆ. ಅದನ್ನು ಹಲವೇಳೆ ಬಿಟ್ಟು ಬರಿಯ ಬರ್ನಾರ್ಡ್ ಷಾ ಎಂಬ ವ್ಯವಹಾರ ನಾಮವೇ ಕುದುರಿಕೊಂಡಿತು.

My Fair Lady ಎಂಬ ಹೆಸರಿಂದ ಪಿಗ್‌ಮೇಲಿಯನ್ ಇನ್ನೊಂದು ರೀತಿ ಈಚೆಗೆ ಖ್ಯಾತಿಪಡೆದಿದೆ.

ಮೊದಲಿಂದಲೂ ಅವರ ಮೇಲೆ ಒಂದು ಅಪಕೀರ್ತಿ ಇದೆ : ಅವರು ನಿಜವಾದ ನಾಟಕಕಾರರೇ ಅಲ್ಲ ; ನಾಟಕ ನೋಡಲು ಬರುವ ಜನದ ಜೀವತೆಗೆಯಲು ಭಾಷಣ ಗಳನ್ನೂ ಸಂವಾದಗಳನ್ನೂ ಬಿಗಿವವರು ; ತಮ್ಮ ಚಮತ್ಕಾರದಿಂದ, ಹಾಸ್ಯೋಕ್ತಿ ವಿಡಂಬನಗಳ ಚಾತುರಿಯಿಂದ, ಬುದ್ಧಿಯ ಚಳಕದಿಂದ ಪಾತ್ರಗಳನ್ನೂ ಸಂಭಾಷಣೆ ಯನ್ನೂ ಕಟ್ಟುವವರು ಎಂದು. ಹಾಗೆಯೇ : ಎಂಥ ಬೆಲೆಯುಳ್ಳ ಅನುಭವವನ್ನೂ ಹಗುರವಾದ ಹಾಸ್ಯ ವಿನೋದಗಳಿಂದ ತುಂಬಿ ಅವುಗಳ ಹಿರಿಮೆಯನ್ನು ಹಗುರಗೊಳಿ ಸುವವರು ಎಂದು. He carves his grave with his tongue[4] ಎಂದವ ರುಂಟು ; ಅವರ ಭಾಷಣಗಳನ್ನು ಕೇಳಿ ಉತ್ತಮ ವಾಗ್ಮಿಗಳಾಗಿ ಲಂಡನಿನ ಹೈಡ್ ಪಾರ್ಕ್‌ನಲ್ಲಿ ಜನಗಮನವನ್ನು ಎಳೆಯಲು ಭಾಷಣ ಮಾಡಿದಾಗ ಹೇಗೊ Fabian Society ಯ, Economic Section of the British Academy ಯ ಭಾಷಣಗಳಲ್ಲಿಯೂ ಹಾಗೆಯೇ. ಅಲ್ಲಿನ ಸರಸ, ಚುರುಕು, ಲಹರಿ ವಿಷಯವನ್ನು ಹೆಚ್ಚು ಅಲಂಕೃತವಾಗಿ ಮಾಡಿ ಅವುಗಳ ಅಡಿಯಲ್ಲಿನ ಸತ್ಯವನ್ನು ತೆಳುಮಾಡಿತು ಎನ್ನು ತ್ತಾರೆ : ಆದರೆ ನಗೆಯ ಹಿಂದೆ, ಲೇವಡಿಯ ಆಳದಲ್ಲಿ ಇರುವ ಚುರುಕು ಎಂಥವರನ್ನೂ ಮುಟ್ಟುವಂಥದೇ ಆಗಿ, ಅವರ ಮಾತನ್ನು ಮೆಲುಕಿ ಯೋಚನೆಗೆ ತಂದುಕೊಂಡವರಿಗೆ ಖಂಡಿತ ಮುಂದಟ್ಟಾಗುತ್ತಿತ್ತು. ನಾಟಕಗಳನ್ನು ಜನಜೀವನದಲ್ಲಿ—ಸಮಾಜದಲ್ಲಿ— ಸುಧಾರಣೆ ಮಾಡುವ ಉದ್ದೇಶದಿಂದಲೇ ಅವರು ಬರೆದುದು. ಕಲೆಗಾಗಿ ಕಲೆ ಎಂಬ ವಾದ ಅವರಿಗೆ ಹಿಡಿಸದು. ಲೇಖನಿಯನ್ನು ಹಿಡಿದು ರೂಪಕ ಪ್ರಯೋಗಗಳ ಮೂಲಕ ಸಮಾಜ ಜೀವನದ ಸುಧಾರಣೆ, ಕ್ರಾಂತಿ ಸಾಧಿಸಬೇಕೆಂದು ಅವರು ದುಡಿದರು. ಆ ದೃಷ್ಟಿ ಅಚ್ಚ ಸಾಹಿತ್ಯ ದೃಷ್ಟಿಯಲ್ಲ ; ಇಂಥ ಕ್ರಿಯೆ ಎರಡನೆಯ ದರ್ಜೆ ಸಾಹಿತ್ಯ. ಷೇಕ್ಸ್‌ಪಿಯರ್, ಸಾಫೋಕ್ಲೆಸ್, ಮೋಲಿಯೇ ಮುಂತಾದವರಲ್ಲಿನಂತಲ್ಲ ಎಂದು ಹೀನಾಯ ಮಾಡುವವರು ಎಂದಿಗೂ ಇದ್ದಿರುವವರೇ. ಈ ಹೊಸನಾಟಕ ಪೂರ್ತಿ ಉಜಾಡಾಗುತ್ತದೆ ಎಂದು ಕಣಿ ನುಡಿದು—ಪ್ರತಿನಾಟಕ ಬಂದಾಗಲೂ ಸುಮಾರು ಹೀಗೇ ಆಯಿತು—ಜನದ ಮನಸ್ಸಿಗೆ ಹಿಡಿಸಿ, ಅವು ಯಶಸ್ವಿಯಾಗಲು, ನಾಟಕಕಾರ ನನ್ನೂ ಪ್ರೇಕ್ಷಕರನ್ನೂ ಇಬ್ಬರನ್ನೂ ಆಕ್ಷೇಪಿಸಿದ ಮಹನೀಯರುಂಟು. ಒಮ್ಮೆ ಇಂಥ ಪ್ರಸಂಗದಲ್ಲಿ ಸಭಿಕರಲ್ಲಿ ಒಬ್ಬಾತ ಜನದ ಕೈ ಚಪ್ಪಾಳೆಗೆ ಸಂತೋಷಕ್ಕೆ ಅಸಮಾಧಾನ ಸೂಚಿಸಿ ಎಗರಾಡಿದಾಗ, ಷಾ ರಂಗದ ಮೇಲಕ್ಕೆ ಹೋಗಿ 'ಹೌದು ಸ್ವಾಮಿ, ನಿಮ್ಮಂತೆಯೇ ನನ್ನ ಅಭಿಪ್ರಾಯ ಕೂಡ ; ಆದರೆ ಈ ಬ್ರಿಟಿಷ್ ಪ್ರೇಕ್ಷಕ ವರ್ಗದ ಅವಿವೇಕವನ್ನೇನೆ

4. ತಮ್ಮ ಕುಳಿಯನ್ನು ತಮ್ಮ ನಾಲಿಗೆಯಿಂದ ಕೊರೆದುಕೊಳ್ಳುವವರು.

ನ್ನಲಿ ; ಅವರು ಪ್ರಶಂಸೆ ಮಾಡಿಯೇ ಮಾಡುತ್ತಿದ್ದಾರೆ, ಅವರೆದುರಿಗೆ ನಾವು ದುರ್ಬಲರು,' ಎಂದರಂತೆ. ಬಗೆಬಗೆಯ ವಿಮರ್ಶಕರನ್ನು ಟೀಕೆ ಮಾಡುವ ಲೇವಡಿಗೆ ಈಡು ಮಾಡುವ ಉದ್ದೇಶದಿಂದಲೇ Fanny's First Play ಎಂಬುದನ್ನು ಬರೆದುದು. ನಾಟಕಕಾರನ ಹೆಸರನ್ನು ತಿಳಿಸದೆ ಒಂದು ಪ್ರಯೋಗಮಾಡಿ ನಾಟಕದ ವಿಮರ್ಶನಕಾರರನ್ನೆಲ್ಲ ಬರಮಾಡಿಕೊಂಡಂತೆ ಒಂದು ವಿಮರ್ಶನ ವೈಖರಿಯನ್ನು ಪ್ರದರ್ಶಿಸುತ್ತಾರೆ. ಅಲ್ಲಿ ಒಬ್ಬ ಕೌಂಟ್‌ನ ಮಗಳು ನಾಟಕಕರ್ತ್ರಿ. ಮಗಳಿಗೆ ಇಂಗ್ಲಂಡಲ್ಲಿ ವಿದ್ಯಾಭ್ಯಾಸವಾಗುತ್ತಿರುತ್ತದೆ. ತನ್ನ ಸರ್ವಸ್ವವೂ ಆಗಿದ್ದ ಮಗಳನ್ನು ನೋಡಿಕೊಂಡು ಹೋಗಲು ತಂದೆ ವೆನಿಸ್ ಇಂದ ಬಂದಿರುತ್ತಾನೆ. ಮಗಳ ನಾಟಕ ಪ್ರಯೋಗಕ್ಕೋಸ್ಕರವಾಗಿ ಈ ಏರ್ಪಾಡಾಗಿರುತ್ತದೆ. ಆಹ್ವಾನಿತರಾದ ಪ್ರಖ್ಯಾತ ವಿಮರ್ಶಕರೆಲ್ಲರಿಗೂ ನಾಟಕ ನೋಡಿ ಅಸಮಾಧಾನವಾಗಿರುತ್ತದೆ. ನಡೆದಷ್ಟು ಕಾಲ ನಾಟಕವೇನೊ ಚೆನ್ನಾಗಿಯೇ ನಡೆದಿರುತ್ತದೆ. ಆದರೆ ಅದರ ಬಗೆಗೆ ನಿಮ್ಮ ತೀರ್ಮಾನವೇನು ಎಂದು ಕೇಳಿದರೆ ವಿಮರ್ಶಕ ಜಾತಿಯ ಕಾರ್ಪಣ್ಯ ವಿಕಾರಗಳೆಲ್ಲ ಹೊರಬೀಳುತ್ತವೆ. ನಾಟಕ ಯಾರದೆಂದರೆ ತೀರ್ಮಾನ ಕೊಡಬಹುದು ಎಂದವರು ಒಬ್ಬರು ; ಇದು ದುರಂತವೆ ಶುಭಾಂತವೆ ವಿನೋದವೆ ಎಂದು ತಿಳಿದರೆ ಅಭಿಪ್ರಾಯ ಕೊಡಬಹುದು ಎಂದವರು ಕೆಲವರು; ಇದು ಬ್ಯಾರೀದು, ಪಿನೆರೊದು, ಜೋನ್ಸ್‌ರದು, ಗ್ರಾನ್‌ವಿಲ್ ಬಾರ್ಕರದು, ಷಾ ಅವರ ಬರವಣಿಗೆ ಇದ್ದ ಹಾಗಿದೆ, ಆದರೆ ಅಲ್ಲ...ಇತ್ಯಾದಿ ವಾದಿಸಿದವರು ಕೆಲವರು. ಕಡೆಗೆ ಮಿಸ್ ಓಡೌಡ, ಷಾ ಶಿಷ್ಯೆ ಬರೆದದ್ದು ಎಂದು ಗೊತ್ತಾದಾಗ ಎಲ್ಲರೂ ಅಪ್ರತಿಭರಾಗಿ, ತಮಗೆ ಆಹ್ವಾನ ಕೊಟ್ಟಿದ್ದ ಗೃಹಸ್ಥರ ಮಗಳು ಎಂಬ ಪಕ್ಷಪಾತದಿಂದ ಉಪಚಾರದ ಮಾತನ್ನಾಡಿದವರೇ ಬಹುಮಂದಿ. ಅರೆಕೊರೆ ಟೀಕೆ ಮಾಡಿದವರೂ ಇದ್ದರು. ಆಡಿಸಿದ ತಂದೆಗೆ ಮಗಳ ನಾಟಕದಲ್ಲಿಯೇ ಶಿಕ್ಷಣದಲ್ಲಿಯೇ ಸಹಿಸಲಾಗದ ಆಧುನಿಕತೆ ಕಂಡು ಇದು ಇಂಗ್ಲಂಡಿನ ಸುಧಾರಿತ ಕಲೆಯ ರೂಪಣವಾದರೆ ತನಗೆ ಹಿಂದಿನ ಕಾಲದ ಕಲಾರಾಧನೆಯೇ ಸಾಕು, ತಾನು ವೆನಿಸಿಗೆ ಹಿಂದಕ್ಕೆ ಹೋಗುವುದು ಮೇಲೆಂದು ಹೇಳುತ್ತಾರೆ.

ಈ ನಡುವೆ ಇದು ಷಾದಿದ್ದ ಹಾಗಿದೆ ಎಂದಾಗ ವಾಹನ್ ಎಂಬ ವಿಮರ್ಶಕ ಹೇಳುವ ಮಾತಿದು : 'ಆಯಿತು : ಈ ನಾಟಕದಲ್ಲಿನ ಪಾತ್ರಗಳು ಬೇರೆ ಬೇರೆ. ಒಬ್ಬರಿಂದ ಒಬ್ಬರನ್ನು ಬೇರೆಯಾಗಿ ಗುರುತಿಸಬಹುದು. ಆದ್ದರಿಂದ ಇದು ಷಾ ಬರೆದುದಲ್ಲ. ಷಾ ಪಾತ್ರಗಳೆಲ್ಲ ಅವರೇ. ಕೇವಲ ಬೊಂಬೆಗಳ ಮೂಲಕ ಷಾ ತಮ್ಮ ಮಾತನ್ನು ಹೊರಹಾಕುತ್ತಾರೆ. ಅಭಿನಯಿಸುವ ನಟರು ಮಾತ್ರ ಅವು ಬೇರೆ ಬೇರೆ ಎಂಬಂತೆ ಕಾಣುವಂತೆ ಮಾಡುತ್ತಾರೆ, ಅಷ್ಟೇ'. ಬ್ಯಾನ್ನಾಲ್ ಎಂಬ ವಿಮರ್ಶಕ : 'ಆ ವಿಷಯದಲ್ಲಿ ಸಂದೇಹವಿಲ್ಲ, ಅದು ಎಲ್ಲರಿಗೂ ಗೊತ್ತು. ಆದರೆ ಷಾ ತನ್ನ ನಾಟಕಗಳಲ್ಲಿ ಎಲ್ಲರನ್ನೂ ಅಪಮಾನಗೊಳಿಸುತ್ತಾರೆ. ತನ್ನನ್ನು ಕುರಿತು ಎಲ್ಲರೂ ಷಾ, ಷಾ, ಷಾ—ಎಂದು ಮುಂತಾಗಿ ಮಾತಾಡುವಂತೆ ಮಾಡಿ

ಕೊಳ್ಳಬೇಕೆಂಬುದು ಅವರ ಉದ್ದೇಶ' ಎಂದು ಆತನ ಕೃತಿಗಳ ದುರ್ಗುಣಗಳನ್ನೆಲ್ಲ ಎತ್ತಿಹಾಕುವುದು ವಾಡಿಕೆಯಾಗಿತ್ತು. ಕಡೆಯವರೆಗೂ ಹೀಗೇ. ಈ ನಾಟಕವನ್ನು ಆಡುವುದು ಅಶಕ್ಯ, ಇಷ್ಟು ನಿಡಿಯ ಭಾಷಣಗಳನ್ನು ಯಾರು ಮಾಡಿಯಾರು, ಯಾವ ಪ್ರೇಕ್ಷಕವರ್ಗ ಕೇಳೀತು, ಸಹಿಸೀತು ಎಂದುದನ್ನೆಲ್ಲ ಹುಸಿಯಾಗಿಸುವಂತೆ ನಾಟಕರಂಗದಿಂದ ನಟರು ಆಡಿಯೇ ತೀರಿದರು, ಸಭಿಕರು ಕೇಳಿಯೇ ಕೇಳಿದರು.

ಇದರಲ್ಲಿ ಪರಾಕಾಷ್ಠೆಯನ್ನು ಪಡೆದದ್ದು Man and Superman ನಾಟಕದ ಮೂರನೆಯ ಅಂಕದಲ್ಲಿನ ಒಂದು ಗರ್ಭಾಂಕ. ಆ ನಾಟಕದ ಪಾತ್ರಗಳಾದ ಜಾನ್‌ಟ್ಯಾನರ್, ಆ್ಯನ್, ರಾಮ್ಸ್‌ಡೆನ್ ಮುಂತಾದವರೆಲ್ಲ ನರಕದಲ್ಲಿ ಸೇರಿದ ಹಾಗೆ ಒಂದು ಕನಸಿನ ವರ್ಣನೆ ಬರುತ್ತದೆ. ನರಕದ ಅಧಿಪತಿ ಸೇಟನ್ ಅಲ್ಲವೆ ! ದೇವರ ಆಧಿಪತ್ಯವಿರುವ ಸ್ವರ್ಗದ ನೀರಸ, ಒಡಕಲು ಜೀವನಕ್ಕೂ ತನ್ನ ಲೋಕದ ಸಕಲಾಕರ್ಷಣೆಗಳಿಗೂ (The most fashionable and popular) ಇರುವ ವ್ಯತ್ಯಾಸಗಳನ್ನು ತುಂಬಾ ಮೋಹಕವಾಗಿ ತಿಳಿಸಿ ಇವರನ್ನೆಲ್ಲ ಅಲ್ಲಿಯೇ ಉಳಿಯಲು ಆಹ್ವಾನಿಸುವ ದೃಶ್ಯ ಬಲು ಮೋಜಿನದು. ಡಾನ್ ಯುವಾನಿಗೂ—ಸೇಟನಿಗೂ (The Devil) ನಡೆವ ಸಂಭಾಷಣೆಯ ವಾದವೂ ವಾಗ್ವಿಲಾಸವೂ ಚರ್ಚಾಮಂದಿರಗಳ ಧೋರಣೆಗಳನ್ನೆಲ್ಲ ಮೀರುತ್ತವೆ. ಚೆಲುವು, ಪರಿಶುದ್ಧಿ, ಗೌರವವಂತಿಕೆ, ಮತಧರ್ಮ, ನೀತಿ, ಕಲೆ, ಸ್ವದೇಶಾಭಿಮಾನ, ವೀರ, ಪ್ರೇಮ—ಮುಂತಾದ ಇನ್ನೂ ಎಷ್ಟೆಷ್ಟೋ ಸಂಗತಿಗಳ ಚರ್ಚೆಯಾಗಿ ವಾದದಲ್ಲಿ ಸೈತಾನ್ ಸೋತು, ಡಾನ್ ಯುವಾನ್ ಸ್ವರ್ಗಕ್ಕೆ ಹೋಗಲು ಅಪ್ಪಣೆ ಪಡೆಯುತ್ತಾನೆ. ಸಾಮಾನ್ಯ ನಾಟಕದಲ್ಲಿ ಇಂಥ ನಿಡಿದಾದ ಭಾಷಣಗಳನ್ನು ಯಶಸ್ವಿಯಾಗಿ ನಿರ್ವಹಿಸುವುದು ಕಷ್ಟ. ಈ ಭಾಗವನ್ನಷ್ಟೇ ವಿಶೇಷವಾಗಿ ಪ್ರದರ್ಶಿಸಲು ಇಂಗ್ಲಂಡ್ ಇಂದ ಅಮೇರಿಕಕ್ಕೆ ಸುಪ್ರಸಿದ್ಧ ನಟರಾದ ಚಾರ್ಲ್ಸ್ ಬೋಯರ್, ಚಾರ್ಲ್ಸ್ ಲಾಫ್‌ಟನ್, ಸೆಡ್ರಿಕ್ ಹಾರ್ಡ್‌ವಿಕ್, ಆಗ್ನಿಸ್ ಮೂರ್‌ಹೆಡ್ ಮುಂತಾದವರು ತೆಗೆದುಕೊಂಡು ಹೋಗಿ ಮೂರು ತಿಂಗಳು—ಆರು ತಿಂಗಳಕಾಲ ಅಲ್ಲಿನ ಜನಕ್ಕೆ ಮೆಚ್ಚಿಕೆಯ ಹುಚ್ಚು ಹಿಡಿಸಿದರಂತೆ. ಷಾ ಮಾತಿನ ವಿಲಾಸ, ಜೀವಗುಣ ಅಷ್ಟು ವಿಶಿಷ್ಟ. ಧ್ವನಿ ಎತ್ತಿನುಡಿದಂತಿರುತ್ತದೆ. ಅಲ್ಲಿ ಅತಿ ಇರುತ್ತದೆ, ನಿಜ. ವಾದ ಎಲ್ಲೆಲ್ಲಿಗೊ ಹೋಗಿ ಏನೇನನ್ನೊ ಹಿಡಿದು, ಹಿಡಿದುದನ್ನು ಸ್ಥಾಪಿಸುವ ಜಾಣ್ಮೆ ಉಳ್ಳದ್ದಾಗಿರುತ್ತದೆ. ಓದುವುದಕ್ಕೇ ಬೇಸರ ಬರುವಷ್ಟು ದೊಡ್ಡದಾಗಿ[5] ಕಾಣುವ ಭಾಗಗಳನ್ನು ನಟರು ನಿರ್ವಹಿಸಬಲ್ಲರೆಂಬುದಕ್ಕೆ ಈ ಪ್ರಸಂಗ ನಿದರ್ಶನವಾದೀತು. ನಡುವೆ ಎಷ್ಟು ನಗೆ ? ಬುದ್ಧಿ ಕಲ್ಪನೆಗಳಿಗೆ ಜೀವಕೊಟ್ಟು ಅವು

5. ಸ್ವಶಕ್ತಿ ವಿಲಾಸದಿಂದ ಅಂಥದನ್ನು ನೋಡಲು ಕೇಳಲು ಅವಕಾಶವಿಲ್ಲದವರು BBC ಯಿಂದ ಅಲಿಸ್ಟೇರ್ ಕುಕ್ ಅವರೂ ಜೆ. ಬಿ. ಪ್ರೀಸ್ಟ್ಲಿ ಅವರೂ ಮಾಡುವ ಭಾಷಣಗಳನ್ನು ಕೇಳಬಹುದು.

ಪ್ರತಿಯೊಂದೂ ಒಂದೊಂದು ಜೀವವೆಂಬಂತೆ ಮಾಡಬಲ್ಲ ಚಾಣ್ಮೆ ಷಾ ಅವರದು. ಆದರೆ ಪಾತ್ರವಹಿಸಿ ರೂಪಿಸಿದಾಗ ಅವು ವ್ಯಕ್ತಿಗಳಲ್ಲವೆಂದು ಕಾಣುವುದಿಲ್ಲ. ಪ್ರತಿಯೊಂದೂ ಸನ್ನಿವೇಶವನ್ನು ತೂಗುತ್ತವೆ. ನಾಟಕದ ಪ್ರಪಂಚವೆಲ್ಲ ತೋರಿಕೆಯೋ, ಮಾಯೆ(Illusion)ಯೋ. ಮಾಯೆ ಕವಿದರಾಯಿತು, ಭ್ರಮೆ ಮುರಿಯದು, ನಾಟಕ ಮುಗಿಯುವವರೆಗೂ.

ಇದೇ ಹೀಗಾದರೆ Back to Methuselah ಐದು ನಾಟಕಗಳ ಒಟ್ಟು ಸಂಪುಟ : ಕ್ರಿಸ್ಚಿಯನ್ ಧರ್ಮದ ಪ್ರಕಾರ ಹಳೆಯ ಒಡಂಬಡಿಕೆಗೆ ಸಂಬಂಧಿಸಿದ ಸಂಗತಿಗಳಿಂದ ತೊಡಗಿ 'ಯೋಚನೆ ಎಷ್ಟು ದೂರ ಓಡುವುದೊ ಅಷ್ಟು ದೂರದ ವರೆಗೂ' (As Far As Thought Can Reach)—ಎಂಬ ಶೀರ್ಷಿಕೆಯ ದೃಶ್ಯದ ವರೆಗೂ—ಸೃಷ್ಟಿ ಹೇಗೆ ತೊಡಗಿತು, ಮಾನವ ಜೀವನ ಹೇಗೆ ನಡೆದಿದೆ, ಜೀವವಿಕಾಸದ ಮಜಲುಗಳಲ್ಲಿ ಮನುಷ್ಯವರ್ಗದ ನಿರ್ಮಾಣ, ಕ್ರಿಯೆ, ಹೇಗೆ ಅತೃಪ್ತಿಕರವಾಗಿದೆ, 300 ವರ್ಷವಾದರೂ ಆಯುಸ್ಸಿಲ್ಲವಾದರೆ ಮನುಷ್ಯ ಯಾವ ಕಾರ್ಯವನ್ನೂ ಸಮರ್ಪಕವಾಗಿ ಮಾಡಿ ಹೇಗೆ ಸಫಲಗೊಳ್ಳಲಾಗುವುದಿಲ್ಲ ; ಅದಕ್ಕೆ ಹೊಸಬಗೆಯ ಮಾನವವರ್ಗವೇ ಏಕೆ ನಿರ್ಮಾಣವಾಗಬೇಕು ಎಂದು—ಎಲ್ಡರ್ಸ್, ಏನ್‌ಷಂಟ್ಸ್ ಎಂಬ ಜೀವಿಗಳನ್ನು ಕಾಣಿಸಿ ಅಂಥ ಒಂದಕ್ಕೆ ಅವಕಾಶ ಮುಂದಕ್ಕೆ ಇದೆ, ಅಷ್ಟು ಸಾಕು—ಎಂದು ಅಂಥ ಒಂದು ದೃಶ್ಯ ಪರಂಪರೆಯನ್ನು ನಿರ್ಮಾಣ ಮಾಡಿ, ಅದಿತಿಗೆ ಸಮಾನಳಾದ Lilith ಭಾಷಣದಿಂದ ಮುಗಿಸುತ್ತಾರೆ. ಮಾನವ ಹೊಸ ಪ್ರಯೋಗವೊಂದನ್ನು ಮಾಡಿ ಇನ್ನೂ ಉತ್ತಮ ಮನುಷ್ಯರ ಸೃಷ್ಟಿಯನ್ನು ಸಾಧಿಸಬೇಕು, ಸೃಷ್ಟಿ ಕ್ರಿಯೆ ಸಫಲ ವಾಗಲು—ಎಂಬಂತೆ ನಾಟಕ ಮುಗಿಯುತ್ತದೆ. ಸೃಷ್ಟ್ಯಾತ್ಮಕ ಪರಿಣಾಮವಾದ ಎಂಬ ಬರ್ಗ್‌ಸಾನ್ ವಾದದ ಅರ್ಥಗರ್ಭವನ್ನು ಮುಂದುವರಿಸಿದವರು ಷಾ. ಅದರ ನಿದರ್ಶನ ಈ ನಾಟಕದಲ್ಲಾಗುತ್ತದೆ. ಬೈಬಲ್, ಸಮಸಾಮಯಿಕ ಇಂಗ್ಲಿಷ್ ರಾಜಕೀಯ ಜೀವನ, ಯೂಜೆನಿಕ್ಸ್ (ತಳಿಯನ್ನು ಉತ್ತಮಪಡಿಸುವ ಶಾಸ್ತ್ರ), ಬುದ್ಧಿಯ ಮತ್ತು ಧರ್ಮದ ಪ್ರಗತಿ, ವಿಕಾಸ ಚೈತನ್ಯದ ಪರಿಪೂರ್ಣತೆ, ಸಿದ್ಧಿ ಮುಂತಾದವು ಈ ದೊಡ್ಡ ನಾಟಕದಲ್ಲಿ ವಸ್ತ್ವಂಗವಾಗುತ್ತವೆ.

ಇದನ್ನು ಆಡುವದಂತೂ ದುರೂಹ್ಯ. ಹೇಳಿ ಕೇಳಿ ನಾಟಕ ದೃಶ್ಯಕಾವ್ಯ. ಉಳಿದುದರಲ್ಲಿ ಏನೇನು ಸೃಷ್ಟಿಕ್ರಿಯೆಯ ಚಿತ್ರಣವನ್ನು ಮಾಡಬಹುದೊ ಅದನ್ನು ದೃಶ್ಯಪರಂಪರೆಯಾಗಿ ತೋರಿಸುವ ಹಕ್ಕು ಸಾಹಿತಿಗುಂಟು ;—ಆಡುವುದಕ್ಕೆ ಶಕ್ಯವಾದರೆ ಆಗಲಿ, ಇಲ್ಲವಾದರೆ ಆ ಶಕ್ತಿಯನ್ನು ಪ್ರಯೋಗ ತಂತ್ರವಾಗಿ ಉಂಟುಮಾಡಿಕೊಳ್ಳಲಿ. ಪ್ರಯೋಗಕಾರರ ಅಯೋಗ್ಯತೆಗಾಗಿ ನಿರ್ಮಾಣದ ಒಂದು ಪ್ರಕಾರವನ್ನೇ ಅಲ್ಲ ಗಳೆಯುವುದು ಅವಿವೇಕ ಎಂದರು. ಇದನ್ನು ಆಡಿಸಿದ್ದುಂಟು. ಹಾರ್ಡಿಯವರ The Dynasts, ಇಬ್ಸೆನ್‌ನ ಪೇಹ್ರ್ ಘ್ಯೆಂಟ್ (Peer Gynt) ಮತ್ತು The

Emperor and the Galilean ಮುಂತಾದ ಮಹಾನಾಟಕಗಳನ್ನು ಸಾಧಾರಣ ರಂಗಸ್ಥಳದಲ್ಲಿ ಪ್ರದರ್ಶಿಸುವುದು ಕಷ್ಟ. ಹಾಗೆ ಮಾಡಬಹುದಾದರೆ ನಿಜವಾಗಿ ಲೋಕೋತ್ತರವಾದ ದರ್ಶನಕ್ರಿಯೆ, ರೂಪಣಕ್ರಿಯೆ ಅನುಭವಕ್ಕೆ ಬಂದೀತು. ಏಳು ಅಂಕಗಳ ಶಾಕುಂತಲ, ಹತ್ತು ಅಂಕಗಳ ಮೃಚ್ಛಕಟಿಕದಂಥ ನಾಟಕಗಳನ್ನೇ ಪೂರ್ತಿಯಾಗಿ ಆಡುವವರಿಲ್ಲ. ಷೇಕ್ಸ್‌ಪಿಯರ್ ಬರೆದ Hamlet, Lear ನಾಟಕಗಳನ್ನು ಅವನು ಬರೆದಂತೆ ಪೂರ್ತಿ ಆಡಲು ಮನಸ್ಸು ಮಾಡುವವರಿಲ್ಲ. ಹೀಗಿರುವಾಗ ಪ್ರಯೋಗದ ಲೋಪ ದೌರ್ಬಲ್ಯದಿಂದಾಗಿ ರೂಪಕ ಸೃಷ್ಟಿಯನ್ನು ಆಕ್ಷೇಪಣೆ ಮಾಡುವುದು ಸರಿಯಾಗದು. ಇಷ್ಟರ ಮೇಲೆ ಅಂಥ ಕೃತಿಗಳು ಬರಲಿ, ಮಾನಸಿಕ ಪ್ರಯೋಗವಾಗಿ (Mental Performance) ಓದುವವರಿಗಾದರೂ ದೊರೆಯುತ್ತದೆ...ಅದಕ್ಕೆ ಅನುಕೂಲವಾಗುವಂಥ ರಂಗನಿರ್ದೇಶನ, ಆವರಣ ವರ್ಣನೆ, ಖಚಿತವಾಗುವಂತೆ ದೃಶ್ಯಗಳ ಆರಂಭದಲ್ಲಿ ಈ ಶತಮಾನದ ನಾಟಕಕಾರರು ನಿರ್ದೇಶನ ಕೊಡುತ್ತಾರೆ. ಸಾಮಾನ್ಯ ರಂಗಸ್ಥಳದಲ್ಲಿ ಇಂಥ ನಾಟಕಗಳನ್ನು ಆಡುವುದಕ್ಕೆ ಪರಿಕರಗಳಿಲ್ಲ. ಅವಕ್ಕಾಗಿಯೇ ಮಾಡಿದ ರಂಗಸಜ್ಜು, ಬೆಳಕು, ಯವನಿಕೆ, ಪಕ್ಕಹಲಗೆ, ಮೇಲಟ್ಟಗಳ ವ್ಯವಸ್ಥೆ ಮಾಡಲು ಇಷ್ಟವಿಲ್ಲ, ಯೋಗ್ಯತೆಯಿಲ್ಲ, ಉಪಪತ್ತಿಯಿಲ್ಲ. ಕೃತಿಕಾರರನ್ನು ತೆಗಳಿದರೆ ಏನು ಬಂತು ? ಸಾಹಿತ್ಯವೆಲ್ಲ ಮಾನಸ ಕ್ರಿಯೆ. ಒಂದು ಮಾಯಾಜಾಲ. ಬಣ್ಣ ತೊಡೆದ ಗೋಡೆಯ ಮೇಲೆ ಎರಡು ಗಂಟೆಯ ಕಾಲ ಕಟ್ಟಿಬೆಳಗಿ ಮಾಯವಾಗುವ ಸಿನೆಮಾ ರಂಜನೆಯಂತೆ. ಆ ಮಾಯೆ ಕಣ್ಣು ಮನಸ್ಸುಗಳನ್ನು ಹಿಡಿದು ರಸಾಭಿವ್ಯಂಜನೆ ಮಾಡುವಂತೆ. ನಾಟಕಪ್ರಯೋಗ ನಡೆಯಬೇಕಾದರೆ ಪ್ರತಿಯೊಂದು ನಾಟಕಕ್ಕೂ ಅದಕ್ಕೇ ಹೊಂದುವ ಹಿನ್ನೆಲೆ ಸಜ್ಜನ್ನು, ಬೆಳಕನ್ನು, ಉಡುಪನ್ನು ತಯಾರಿಸಿ, ಎಲ್ಲ ಕಡೆಗೂ ಗಮನಕೊಟ್ಟು ರೂಪಕಕ್ಕೆ ನಿರ್ದೇಶಕನು ಪ್ರಯೋಗಸಿದ್ಧಿ ದೊರಕಿಸಬಹುದು. ಬೇರೆ ದೇಶಗಳಲ್ಲಿ ಹತ್ತಾರುಸಾವಿರ ವೆಚ್ಚ ಮಾಡಿ ಇದನ್ನು ಸಾಧಿಸುತ್ತಾರೆ. ಯಾವುದೊ ಬಗೆಗೆ ಸಿದ್ಧವಾದ ನಾಟಕ ರಂಗದಲ್ಲಿ ಇನ್ನೊಂದು ಆವರಣವೂ ಸಮಯವೂ ಉಳ್ಳ ನಾಟಕವನ್ನು ಪ್ರದರ್ಶಿಸಿದರೆ ಆಗುವ ರಸಾಭಾಸ ನಿಲ್ಲುತ್ತದೆ.

ಆದುದರಿಂದಲೇ ಹೊಸ ಸಮಯ ಸಂಕೇತಗಳುಳ್ಳ ನಾಟಕವನ್ನು ಬರೆಯುವವರು ದೃಶ್ಯಗಳ ಆರಂಭದಲ್ಲಿ ಸಜ್ಜು ಆವರಣ ಎಲ್ಲವನ್ನೂ ವಿವರಿಸುವ ನಿಡು ಮುನ್ನುಡಿ ಬರೆಯುತ್ತಾರೆ. ಪಾತ್ರಗಳ ಸ್ವಭಾವ ಲಕ್ಷಣ ಸೂಚಿತವಾಗುವಂತೆ ಅವರ ನಿಲವು, ಉಡುಗೆ ತೊಡುಗೆ, ಮಾತಿನ ರೀತಿ ಇತ್ಯಾದಿಗಳನ್ನು ವಿವರಿಸುವ ಪರಿಪಾಠಿಯನ್ನೂ ಇಟ್ಟುಕೊಳ್ಳುತ್ತಾರೆ. ಪ್ರಾಚೀನ ಕಾಲದ ನಾಟಕಗಳನ್ನು ಓದಿದವರಿಗೆ ಇಂಥ ಪೀಠಿಕೆಗಳ ಪರಿಚಯ ಇಲ್ಲ. ಆದುದರಿಂದ ಹೊಸ ಬಗೆಯ ನಾಟಕಗಳನ್ನು ಕುರಿತು ಅವರಿಗೆ ಮೂಗು ಮುರಿಯುವಂತಾಗುತ್ತದೆ. ಇಲ್ಲಿನ ವಿಷಯ ಸಮಕಾಲೀನವೂ ಹೊಸ ಬಗೆಯ

ಲಕ್ಷಣಗಳುಳ್ಳದ್ದೂ ಆದುದರಿಂದಲೇ ಪ್ರಖ್ಯಾತ ಸನ್ನಿವೇಶಗಳಲ್ಲಿ ಅವುಗಳ ವ್ಯಕ್ತಿತ್ವವನ್ನು ಸುಲಭವಾಗಿ ಗ್ರಹಿಸುವಂತೆಯೂ ಅವುಗಳ ಹದ ರಂಗು ಕೆಡಿಸದಂತೆಯೂ ಮಾಡಬೇಕಾದರೆ ಯಾವ ರೀತಿ ಚೆನ್ನ ಎಂಬುದರ ತಿಳಿವಳಿಕೆ ಕೊಡುತ್ತದೆ. ಇಲ್ಲವಾದರೆ ಕಾಮೆಡಿಯನ್ನು ಟ್ರಾಜೆಡಿಯ ಹಾಗೆ, ದುರಂತವನ್ನು ವಿನೋದಾಂತದಂತೆ ರೂಪಿಸುವಷ್ಟು ವಿಪರ್ಯಾಸಗಳು ನಡೆದಾವು. ಸ್ಟಾನಿಸ್ಲಾವ್‌ಸ್ಕಿ ಆಡಿಸಿದ ಚೆಕೊಫರ ಚೆರ್ರಿತೋಟ ಎಂಬ ನಾಟಕವನ್ನು ಕುರಿತೇ ಚೆಕೊಫ್ ಹೀಗೆ ಹೇಳಿದ್ದುಂಟು. ಇಬ್ಸೆನ್ ತನ್ನ ಒಂದೆರಡು ನಾಟಕಗಳ ಅಭಿನಯಕ್ಕೆ ಹೀಗೆ ಬೇಸರಪಟ್ಟರು...ಮನೆಯಲ್ಲಿ ಕುಳಿತು ಓದುವವರಿಗೆ ಸ್ವಸಂಪೂರ್ಣವಾದ ಒಂದು ಅಖಂಡ ಅನುಭವ ದೊರಕಲು ಇಂಥ ವಿವರಗಳು ನೆರವಾಗುತ್ತವೆ. ಯಾವ ಹೆಚ್ಚು ಸೂಚನೆಯ ನೆರವೂ ಇಲ್ಲದೆ ಅಚ್ಚಾಗುವ ನಾಟಕ ಒಂದು ಅತಿಯಾದರೆ ದೀರ್ಘವಿವರಗಳನ್ನು ಕೊಡುವ ಈ ನಾಟಕಗಳದು ಹಿತಮಿತವನ್ನು ಈ ಕಡೆ ಮೀರಬಹುದು. ಎಲ್ಲಿಯೂ ಹಾಳತ ದೊಡ್ಡ ಲಕ್ಷಣವೇ. ಕೆಲವರ ಅಭಿಪ್ರಾಯದಲ್ಲಿ ನಾಟಕವನ್ನು ಏಕಾಂತದಲ್ಲಿ ಓದಿ ಮುಗಿಸುವುದು ಕೊಡುವಷ್ಟು ಸಂತೋಷ ನಾಟಕರಂಗದ ಮೇಲೆ ಆಡಿದ ಆಟ ದೊರಕಿಸುವುದಿಲ್ಲ ಎಂಬುದು. ಉತ್ತಮ ನಟರು ರಂಗದಲ್ಲಿ ಪ್ರದರ್ಶಿಸಿದ ನಾಟಕದ ಜೀವಸಂಪತ್ತಿ ಓದು ನಾಟಕದಲ್ಲಿ ಬಾರದಿರುವುದು ಶಕ್ಯ. ಒಂದೊಂದರ ಗುಣಾವಗುಣ ಒಂದೊಂದು ಬಗೆಯದು. ಷಾ ಬರೆವ ರಂಗ ನಿರ್ದೇಶನದಲ್ಲಿ ಕೆಲವೇಳೆ—ಉದಾ. ಈ ನಾಟಕದಲ್ಲಿ ಫಿರಂಗಿ ಕಾರ್ಖಾನೆಯ ಚಿತ್ರಣ—ನಿಡಿದಾದ ವರ್ಣನೆಗಳಿರುತ್ತವೆ. ಅವೇ ಒಂದು ಸಾಹಿತ್ಯಕ ಚಿತ್ರವಾಗುವಷ್ಟು ಮಟ್ಟಿಗೆ ಆಕರ್ಷಕವಾಗಿರುವುದುಂಟು. ಬೇಡದವರು ಅವನ್ನು ಬಿಟ್ಟು ನಾಟಕವನ್ನು ಓದಬಹುದು.

ಹಾಗೆಯೇ ಪ್ರತಿನಾಟಕಕ್ಕೂ ಉದ್ದವಾದ ಒಂದೊಂದು ಪೀಠಿಕೆ—Preface—ಬರೆದು ಅಚ್ಚು ಮಾಡುವುದು ಷಾ ಪದ್ಧತಿ. ಆ ಪ್ರತಿಯೊಂದೂ ನಾಟಕದಷ್ಟೇ ಉದ್ದವಾಗಿರಬಲ್ಲದು. ನಾಟಕವನ್ನು ಅಚ್ಚುಮಾಡುವಾಗ ಅದನ್ನು ಓದಿಕೊಳ್ಳುವಂತೆ ರಚಿಸಿದರು. ನಾಟಕಕ್ಕೆ ಸಂಬಂಧಿಸಿದಂತೆ ಯಾವ ತತ್ತ್ವ, ದರ್ಶನ ಮುಖ್ಯವಾಗಿ ತಿಳಿಸಬೇಕೆಂದು ಆತನಿಗೆ ಇತ್ತೊ ಆ ವಿಷಯವನ್ನು ಕುರಿತ ಒಂದು ಧೀಮಂತ ಪ್ರತಿಪಾದನೆ ಅಲ್ಲಿರುತ್ತದೆ. ಅದನ್ನು ಓದಬೇಕೆಂಬುದಿಲ್ಲ.[6] ಷಾ ಗದ್ಯರಚನೆಯೂ ಅತ್ಯಂತ ಮೋಹಕವಾದ್ದು. ಸಂಭಾಷಣೆಯ ರಚನೆಯಲ್ಲಿ ಹೇಗೊ ಪಾತ್ರಗಳ ಬಾಯಲ್ಲಿ ಆಡಿಸುವ ನಿಡಿದಾದ ಭಾಷಣಗಳಲ್ಲಿಯೂ ಹಾಗೇ. ಲಿಲಿತ್ ಭಾಷಣದಲ್ಲಿನ ಗದ್ಯ ವೈಭವವನ್ನು ಓದಿ ನುಡಿದು ಕೇಳಿ ಸಂತೋಷಪಡಬೇಕು. ಹಾಗೆಯೇ, ಆದರೆ, ಇನ್ನಷ್ಟು ಲೋಕ

---

6. ಅದು ಹಿನ್ನೆಲೆ, ಹೊರನೆಲೆ ಮಾತ್ರ. ನಾಟಕದ ಕ್ರಿಯೆಗೆ, ನಾಟಕದ ಆಸ್ವಾದನೆಗೆ ನೇರ ಅವನ್ನು ಓದುವುದರಿಂದ ಯಾವ ಲಾಭನಷ್ಟಗಳೂ ಇಲ್ಲ.

ಚಿತ್ರವನ್ನೂ ರೀತಿನೀತಿಗಳನ್ನೂ ಶಾಸ್ತ್ರ, ಕಲೆ ಮುಂತಾದ ಸಂಗತಿಗಳನ್ನೂ ಕುರಿತ ಬರವಣಿಗೆ ಈ ಪೀಠಿಕೆಗಳಲ್ಲಿರುತ್ತದೆ. ರುಚಿ ಅಭ್ಯಾಸಜನ್ಯವಾದ್ದು ; ಅನುಭವಿಸಿ ಪುಷ್ಟವಾದ್ದು. ಷಾ ಬೇಕೆಂದರೆ ಆತನ ಬರವಣಿಗೆಯನ್ನು ಓದುವ ತಾಳ್ಮೆ ಅಗತ್ಯ. ಪ್ರೀತಿ, ವಿಶ್ವಾಸಗಳಿಂದ ಓದಿದವರಿಗೆ—ಇದು ಎಲ್ಲ ಕಲೆಗೂ ಅಗತ್ಯವಲ್ಲವೇ ?—ಅಲ್ಲಿ ಸ್ವತಂತ್ರ ಆಲೋಚನೆ ಕಾಣುತ್ತದೆ. ಹಿಂದೆ ಗಮನಕ್ಕೆ ಬಾರದಿದ್ದ ಸತ್ಯದ ಮುಖಗಳು ಕಾಣಿಸುತ್ತವೆ. ಷಾ ಬರವಣಿಗೆಯಲ್ಲಿ ಮಾತು ಹೆಚ್ಚು ; ಹೌದು. ತುಂಬಾ ಅಡಕ ಮಾಡಿದರೆ ಷಾ ಗುಣವನ್ನೇನು ಕಾಣಬಲ್ಲೆವಾದೀತು ? ಆತನ ಬರವಣಿಗೆಯನ್ನು ಓದುತ್ತ ಜನಕ್ಕೆ ಜೀವನದ ಎಷ್ಟೋ ಅವಿವೇಕಗಳ ಪರಿಚಯ, ಅನ್ಯಾಯಗಳ ಕಾಣ್ಕೆ ಮಂದಟ್ಟಾಗುತ್ತದೆ. ಬಹುಶ್ರುತವಾದ, ಹರಿತವಾದ ಆತನ ಬುದ್ಧಿಶಕ್ತಿಗೆ ಸಾಧಾರಣರಿಗೆ ಕಾಣದಂಥ ಅನೇಕ ಸಂಗತಿಗಳು ಹೊಸ ಬೆಳಕಿನಲ್ಲಿ ಕಾಣುತ್ತವೆ.7 ಷಾ ತಾನು ಬೋಧಕ (Educator) ಎನ್ನುತ್ತಿದ್ದರು. 30–40 ವರ್ಷಗಳಕಾಲ ಷಾ, ವೆಲ್ಸ್, ಚೆಸ್ಟರ್‌ಟನ್, ರಸ್ಸೆಲ್ ಮುಂತಾದವರು ಇಂಗ್ಲಿಷ್ ಪ್ರಪಂಚದಲ್ಲಿ ವಿಶಾಲ ಅರ್ಥದಲ್ಲಿ, ತಮ್ಮ ಜನತೆಗೆ ವಿಶದವಾದ ಲೋಕಬೋಧೆ ಮಾಡಿದ್ದಾರೆ.

ಮೇಧಾವಿಗಳಲ್ಲಿ ಷಾ ಒಂದು ರೀತಿ, ಚೆಸ್ಟರ್‌ಟನ್ ಮತ್ತೊಂದು ರೀತಿ ಹಾಸ್ಯ ವಿನೋದಗಳನ್ನು ತುಂಬಿದರು. ಅವನ್ನು ಪ್ರತ್ಯೇಕವಾಗಿ ಅನುಭವಿಸಬೇಕು. ಅವು ಬೇರೆ ಬೇರೆ ರುಚಿಯವು. ಷಾ ವಿನೋದದ ಲಹರಿ ಹೆಚ್ಚು ಹಾರ್ದ ; ಚೆಸ್ಟರ್‌ಟನ್ನರದು ಬುದ್ಧಿಚಮತ್ಕಾರದ ಜಾಣ್ನುಡಿ ; ಸಮುದ್ರ ಸ್ನಾನದಂತೆ. ಷಾ ನಗೆಯಲ್ಲಿ ತಿಳಿ ಉಂಟು, ಬಿರುಸು ಉಂಟು; ನೀರ ಅಪ್ಪಳಿಕೆ ಉಂಟು ; ಚುರುಕುಂಟು, ಭಯವುಂಟು. ಎದುರು ನಿಂತವರಿಗೆ ಆ ಸಮಯಕ್ಕೆ ಸ್ವಾಸ್ಥ್ಯ ತಪ್ಪಿಹೋಗುತ್ತದೆ. ಅದರ ಪ್ರಭಾವಕ್ಕೆ ಮನಸ್ಸು ಬಂದಿಯಾಗುತ್ತದೆ. ಆದರೆ ಯಾವ ದೌರ್ಜನ್ಯ, ದ್ವೇಷ ಕ್ರೋಧಗಳೂ ಇಲ್ಲದೆ ಕೆಡುಕನ್ನು ನಾಶ ಮಾಡಲು ಬಯಸುವಿರಾದರೆ ನಗೆಯಷ್ಟು ಸಮರ್ಥವಾದುದು ಬೇರೊಂದಿಲ್ಲ ; ಹಾಗೆಯೇ ಆ ಮೂಲಕ ಸ್ನೇಹ ಸೌಹಾರ್ದವನ್ನು ಸ್ಥಾಪಿಸಲು ದೊರೆ

7. ಡಾಕ್ಟರ್ ಜಾನ್‌ಸನ್ ನಿಘಂಟನ್ನು ಓದುವವರಿಗೂ ಆ್ಯಂಬ್ರೋಸ್ ಬಿಯರ್ಸ್‌ರ The Devil's Dictionary ಓದುವವರಿಗೂ ಶಬ್ದಾರ್ಥಗಳ ಖಚಿತ, ಅರ್ಥವಲ್ಲ ಸಿಕ್ಕುವುದು; ಸಿಗುವುದು ಆ ಅರ್ಥದ ಯಾವುದೋ ಒಂದು ವಿಚಿತ್ರಮುಖ. ಉದಾ. ಡಾ. ಜಾನ್‌ಸನ್:Patriotism —(N) The last resort of a Scoundrel (ಇದನ್ನು ಬಿಯರ್ಸ್ first ಎಂದು ಬದಲಾಯಿಸುತ್ತಾರೆ). ಬಿಯರ್ಸ್ : Pray-(verb ) : To ask that the laws of the Universe be annulled in behalf of a single Petitioner confessedly unworthy. ಷಾ : Home is the girl's Prison and the woman's Workhouse. Man and Superman ನಾಟಕದ ಅನುಬಂಧ–The Revolutionist's Handbook ಎಂಬುದನ್ನು ನೋಡಿದರೆ ಈ ವಿಚಿತ್ರ ರೀತಿಗೆ ಕ್ರಾಂತಿಕರವಾದ ಅರ್ಥ ದರ್ಶನದ ಉದಾಹರಣೆಗಳು ಸಿಕ್ಕುತ್ತವೆ.

ಯುವಷ್ಟು ಸೌಕರ್ಯ ಬೇರೆ ಮಾರ್ಗಗಳಲ್ಲಿ ದೊರಕದು ಎನ್ನುತ್ತಾರೆ. ಪ್ರಾಧಾನ್ಯ ದಿಂದ ಷಾ ಮಾಡಿದಷ್ಟು ಆಕ್ಷೇಪಣೆ, ತೀವ್ರ ಅವಹೇಳನ, ನೇರವಾದ ಇರಿತ, ಲೇವಡಿ ಇನ್ನೊಬ್ಬರಲ್ಲಿ ಸಿಕ್ಕವು. ಆದರೆ ಅವರು ಹೇಳುವ ರೀತಿ, ಬಳಸುವ ಮಾತು, ಕಟ್ಟುವ ವಾಕ್ಯಗಳ ಚಿತ್ರಶ್ರೇಣಿ, ನಿಂತಂತೆ ನಮ್ಮನ್ನು ಆಕ್ರಮಿಸುತ್ತವೆ ; ಮುಳುಗಿಸುತ್ತವೆ. ಅವರ ಜೊತೆಯಲ್ಲಿ ನಾವೂ ನಕ್ಕು ಆಮೇಲೆ ನಮ್ಮ ಅವಿವೇಕ ಎಷ್ಟು ಎಂದು ನಾವೇ ಅಚ್ಚರಿಪಡುವಂತಾಗುತ್ತದೆ. ಇದೇ ಆತನ ಕೃತಿಗಳನ್ನು ಹಸಿರಾಗಿ ಉಳಿಸುವ ಜೀವ ಗುಣ. ಹಿಂದಿನ ಕಾಲದ ಅರಿಸ್ಟೊಫೆನಿಸ್, ಸ್ವಿಫ್ಟ್, ಸರ್ವಾಂಟಿಸ್, ಮೋಲಿಯೇ ಮುಂತಾದವರ ರೀತಿಯುದಲ್ಲ ಈ ಹಾಸ್ಯ. ಅಲ್ಲಲ್ಲಿ ನಾಟಕಗಳಲ್ಲಿಯೇ ಬರುವ— ಉದಾ : Man and Superman ಅಲ್ಲಿ ಡೆವಿಲ್ಲಿಗೂ ಡಾನ್ ಯುವಾನ್‌ಗೂ ನಡೆವ ಸಂಭಾಷಣೆ, ಅಥವಾ Man of Destiny ಯಲ್ಲಿ ನಪೋಲಿಯನ್ ಇಂಗ್ಲಿಷ್‌ಮನ್ ಅನ್ನು ಕುರಿತು ನುಡಿವ ಉಕ್ತಿಗಳಲ್ಲಿ, Heart-break House ಎಂಬ ಇಂಗ್ಲಂಡಿನ ಪರಿಸ್ಥಿತಿಯನ್ನು ಕುರಿತು ಮಾರ್ಮಿಕವಾಗಿ ರಚಿಸಿದ ನಾಟಕದಲ್ಲಿ, John Bull's Other Island ಅಲ್ಲಿ. ಐರ್ಲಂಡ್‌ನವನಾದ ಈತನೇ ಐರಿಷ್ ಜೀವನವನ್ನು ಕುರಿತು ನೋಡುವ ರೀತಿಯಲ್ಲಿಯೂ ಅತಿರೇಕಗಳಿವೆ ; ಚೇಷ್ಟೆ ಲೇವಡಿ ಇವೆ ; ಆದರೆ, ಅವುಗಳ ಹೊಮ್ಮುಗೆ ತುಂಬಾ ಚಿತ್ತಾಕರ್ಷಕವಾದುದು. ಷಾ ಅವರ ಗದ್ಯ ಕವಿತಾ ವಿಲಾಸವುಳ್ಳದ್ದು. ಉದಾ : ಜಾನ್‌ಬುಲ್ಸ್ ಅದರ್ ಐಲಂಡಲ್ಲಿ ಕೀಗನ್ ಮಾತು ; ಸೇಂಟ್ ಜೋನಲ್ಲಿ ಚಾಪ್ಲೆಯ್ನ್ ಮಾತು ; ಮೆತುಸೇಲಾದಲ್ಲಿ ಲಿಲಿತ್ ಮಾತು.

ಮುಖ್ಯವಾಗಿ ಷಾ ತನ್ನ ಸುತ್ತಲ ಪ್ರಪಂಚದ ಆಭಾಸಗಳನ್ನೂ ದೊಡ್ಡದು, ಮರ್ಯಾದಸ್ಥ, ಮಡಿ ಎಂಬುದರ ಆಳದಲ್ಲಿರುವ ಟೊಳ್ಳುತನವನ್ನೂ ತೋರಿಸುವುದರಲ್ಲಿ ನಿಪುಣರು. ನಿಜವಾದ ತಿಳಿವಳಿಕೆ ಈ ಸಂಬಂಧದಲ್ಲಿ ಬರುವಂತೆ ಮಾಡಿ ಅವರವರ ಸತ್ಯವನ್ನು ಅವರೇ ಕಾಣುವಂತೆ ಬೆಲೆಗಾಣ್ಕೆಮಾಡಿ ವ್ಯಕ್ತಿ ಜೀವನವನ್ನೂ ಜನಜೀವನ ವನ್ನೂ ಶುಚಿಗೊಳಿಸಬೇಕು, ಬಲಗೊಳಿಸಬೇಕು ಎಂಬುದು ಅವರ ಉದ್ದೇಶ. ಅವರ ನಾಟಕಗಳು ಈ ಕಾರ್ಯಕ್ಕೇ ಮೀಸಲು. ನಾಟಕ ಎಷ್ಟು ಸಣ್ಣದಾದರೂ ಅದರಲ್ಲಿ Comedy ಎನ್ನುವ ಒಟ್ಟು ಹೆಸರಲ್ಲಿ ಹುಟ್ಟಿ ಬರುವ ಹಸಿಬಿಸಿ, ಪಾಕ, ಚುಚ್ಚು, ಮೊನೆ ವಿಡಂಬನೆ ತಿರಸ್ಕಾರ ವ್ಯಂಗ್ಯ ಅಣಕ ಪರಿಹಾಸ್ಯ ಮುತ್ತಿಗೆ ಆಕ್ರಮಣ ತಾವೇ ತಾವು. ಕೇವಲ ನಕಲಿ ಮಾಡುತ್ತಿದ್ದಾರೆ, ಚಾಟೂಕ್ತಿಗಳನ್ನು ಪೋಣಿಸುವುದಕ್ಕಾಗಿಯೇ ನಾಟಕ ಗಳನ್ನು ಬರೆದಿದ್ದಾರೆ ಎಂದು ಆಕ್ಷೇಪಣೆ ಹೊರುವಮಟ್ಟಿಗೂ ಈ ನೆಲಸು ನೆಲಸುತ್ತದೆ. ತುಂಬ ಗಂಭೀರವಾದ ಸನ್ನಿವೇಶವನ್ನು ಚಿತ್ರಿಸುವಾಗಲೂ ಕ್ರಿಯಾಸಿದ್ಧಿಗೆ ಬರುವ ಸಮಯದಲ್ಲಿಯೂ ಹೊಮ್ಮಬಹುದಾದ ಯಾವುದೊ ಒಂದು ವಿನೋದ ಅವರೆಗೂ ಕಟ್ಟಿದ ತತ್ವದ ಮೊನೆಯನ್ನು ಮೊಂಡು ಮಾಡಿಬಿಡುತ್ತದೆ ಎನ್ನುವುದುಂಟು. ಷಾಗೆ

ಕ್ರೌರ್ಯ ಹಿಡಿಸದು. ಆದುದರಿಂದ ಈ ಹಾಸ್ಯ ಒಂದು ಕಡೆ ನಾಟಕಸನ್ನಿವೇಶವನ್ನು ದುರ್ಬಲಗೊಳಿಸಿದರೆ ಇನ್ನೊಂದು ಕಡೆ ಕ್ರೌರ್ಯದ ಮೊನೆಯನ್ನು ಮೊಂಡುಮಾಡಿ ಹರ್ಷದಲ್ಲಿ ನಾಟಕವನ್ನು ನಡಸುತ್ತದೆ, ಬೆಳಸುತ್ತದೆ, ಮುಗಿಸುತ್ತದೆ.[8] ಷಾ ನಾಟಕ ರಚನೆಯಲ್ಲಿ ಅತಿಶಯವಾದ ಹೊಸ ತಂತ್ರ ಯಾವುದನ್ನೂ ಸಾಧಿಸಲಿಲ್ಲವೇನೋ. ಅವರ ನಗೆಯ ವ್ಯಾಪಾರವಾದರೊ ಇತರರು ಸಾಧಿಸದ್ದನ್ನು ಸಾಧಿಸುತ್ತದೆ. ಈ ನಗೆಬಗೆ ಷಾ ನಾಟಕಗಳ ಮಹಾದಾನ.

ಪುರ್ಡೋಮ್ (Purdom) ಎಂಬುವರು ಒಂದು ವಿಶ್ಲೇಷಣೆಯನ್ನು ಮಾಡುತ್ತ ಇಂಥಿಂಥ ನಾಟಕಗಳು ಇಂತಿಂತಹ ಸಾಮಾನ್ಯ ವಿಷಯ ಪ್ರಪಂಚಗಳಿಗೆ ಮೀಸಲಾದವು ಎಂದು ಪಟ್ಟಿಹಾಕಿದ್ದಾರೆ. ಸ್ಥೂಲವಾಗಿ ಅದನ್ನು ಒಪ್ಪಬಹುದು. ಅವುಗಳ ಜೊತೆಗೆ ಇನ್ನೂ ಏನೇನೋ ಮಾನವ ಜೀವನಕ್ಕೆ ಸಂಬಂಧಿಸಿದುದು ಅಲ್ಲಲ್ಲಿ ಸೇರಿಕೊಂಡಿರುತ್ತದೆ. ಪಾತ್ರಗಳು ಬರಿಯ ಷಾ ಮನಸ್ಸನ್ನು ಕಾಣಿಸುವ, ಷಾ ಅಭಿಪ್ರಾಯಗಳ ಬಾಯಾಗುವ ಯಂತ್ರಗಳು ಮಾತ್ರವೇ ಅಲ್ಲ. ಕ್ಯಾಂಡಿಡಾ, ಸೇಂಟ್ ಜೋನ್, ರಿಚರ್ಡ್ ಡಡ್ಜನ್, ಕೀಗನ್, ಎಲಿಸ ಡೂಲಿಟಲ್, ಹೆಸಿಯೊನೆ, ಹುಷಬಯ್, ಎಲ್ಲೀ, ಷಾಟೋವರ್, ಜೆನ್ನಿಫರ್ ಡುಬೆಡಾಟ್, ಮ್ಯಾಗ್ನಸ್, ಆಂಡ್ರೋಕ್ಲಿಸ್—ಮುಂತಾದವರು ಬರಿಯ ಯಂತ್ರಗಳಲ್ಲ. ಅನಿರೀಕ್ಷಿತ ದ್ವೀಪಗಳ ಐಲ ಎಂಬ ಕೇವಲ ಕಲ್ಪನೆಯ ಪರಾಕಾಷ್ಠೆ ಕೂಡ Pra, Prola, Priest ಮುಂತಾದವರೂ ಜಿನಿವಾದಲ್ಲಿನ ತಂತಿವಾರ್ತೆ ಕಳಿಸುವ ಕಾರ್ಯದರ್ಶಿನಿಯೂ ಕೋಟ್ಯಧಿಕಾರಿಣಿಯೂ (Millionairess) ಬರಿಯ ಬೊಂಬೆಗಳಲ್ಲ. ಇಷ್ಟೂ ಷಾ ರಚಿಸಿದ ವಿಶಾಲಪ್ರಪಂಚದಲ್ಲಿ ವ್ಯಕ್ತಿಶವಾಗಿ ನಿಂತು ನುಡಿವ ಪಾತ್ರಗಳು. ಅವರಲ್ಲಿ ಹೋಲಿಕೆ, ವ್ಯತ್ಯಾಸಗಳ ವರ್ಗೀಕರಣ ಮಾಡಬಹುದು. ಆದರೆ ಒಬ್ಬರನ್ನು ಇನ್ನೊಬ್ಬರ ಸ್ಥಾನದಲ್ಲಿ ಬಳಸುವುದು ಶಕ್ಯವಿಲ್ಲ.

ಎಲ್ಲಕ್ಕೂ ಮೀರಿ ಇಷ್ಟು ನಾಟಕಗಳಲ್ಲಿ ನಿಂತು ನುಡಿಯುವ, ಮಿಡಿಯುವ ಪ್ರಭಾವಶಾಲಿಯಾಗುವ ಷಾ ವ್ಯಕ್ತಿತ್ವ, ಮೂರ್ತಿತ್ವವೇ ಒಂದು ಮಹಾಪಾತ್ರ. ಇದನ್ನು ನಿರ್ಮಾಣ ಮಾಡುವುದೂ ಸುಲಭ ಸಾಧ್ಯವಲ್ಲ. ತನ್ನ ಅಂಶದಲ್ಲಿ 4ನೆಯ ಭಾಗವನ್ನು ಬ್ರಹ್ಮಾಂಡವಾಗಿ ನಿರ್ಮಾಣಮಾಡಿದ ಬ್ರಹ್ಮ ಅದರ ಮೇಲೆ ಹತ್ತಂಗುಲ ಮೀರಿ ನಿಂತಿದ್ದಾನಂತೆ ಅತೀತನಾಗಿ ! ಷಾ ವ್ಯಕ್ತಿತ್ವ ಅಂಥದು. Sophocles, Shakespeare,

---

8. ಮೇಜರ್ ಬಾರ್ಬರ ನಾಟಕದಲ್ಲಿ ಸರ್ವಥಾ ಧೀರಳಾದ ಮಗಳು ತಾಯಿಯನ್ನು "ಅಮ್ಮಾ ನಾನೂ ಡಾಲ್ಲಿ ಸಂಸಾರಮಾಡಲು ಒಂದು ಸಣ್ಣ ಮನೆಯನ್ನು ಆರಿಸಿಕೊಡು'' ಎನ್ನಲು ತಾಯಿ, ''ಈ ಹುಡುಗಿಯದು ಯಾವಾಗಲೂ ಇಷ್ಟೇ. ಎಲ್ಲಕ್ಕೂ ಅಮ್ಮ, ಅಮ್ಮ; ಅಮ್ಮನ ನೆರವೇ ಬೇಕು'' ಎಂದು ಆಡಿ ಮುಗಿಸುವ ನಿದರ್ಶನ ನಾಲ್ಕಾರು ಬಗೆಯಲ್ಲಿ ಪಾತ್ರಪೋಷಣೆ, ಸನ್ನಿವೇಶ ಪೋಷಣೆ ಮಾಡುತ್ತದೆ.

Shaw ಎಂದುದುಂಟು ಆತನೇ. ಅನೇಕರು ತಮ್ಮ ಹೆಸರ ಮೊದಲಕ್ಷರಗಳನ್ನು ಹೀಗೆ ಬಳಸಿಕೊಂಡುದುಂಟು.9 ಅದೊಂದು ಮೋಡಿ. ಷಾ ನಾಟಕಗಳನ್ನೂ ಮುನ್ನುಡಿಗಳನ್ನೂ ಓದಿದವರಿಗೆ ಅದು ಒಂದು ವಿದ್ಯಾಮಂಡಲವೆಂಬ ಅನುಭವ ಬರುತ್ತದೆ... Sophocles ಅಂತೆಯೊ Shakespeare ಅಂತೆಯೊ Ibsen ಅಂತೆಯೊ ಷಾ ಏಕಿರಬೇಕು ? ಒಬ್ಬರ ಹಾಗೆ ಇನ್ನೊಬ್ಬರು ಇದ್ದರೆ ಇಬ್ಬರು ಯಾಕೆ ? ಈ ಕಾಲದಲ್ಲಿ ಷೇಕ್ಸ್‌ಪಿಯರ್ ಬದುಕಿದ್ದು ಹಾಸ್ಯ ಸಂಮಿತವನ್ನು ಅವನು ಬಳಸಿದ್ದರೆ ತನ್ನ ಹಾಗೆಯೇ ಬರೆಯುತ್ತಿದ್ದ, ಷೇಕ್ಸ್‌ಪಿಯರಿಗೆ ತೋರಿಸುವ ಗೌರವದ ಅತಿರೇಕದಲ್ಲಿ ಇತರ ಕಾಲದ ನಾಟಕಕಾರರಿಗೆ ಆಸ್ವಾದನೆ ಸ್ವೀಕಾರ ದೊರೆಯದ ಹಾಗಾಗದಿರಲಿ, ತಾನು ಹೇಗೆ ಷೇಕ್ಸ್‌ಪಿಯರಿಗಿಂತ ದೊಡ್ಡವನು ಎಂದರು ; ಅದಕ್ಕಾಗಿ ಷಾ ಗರ್ವಿ, ಬಡಾಯಿಯವರು ಎಂದುದುಂಟು. ಅದಕ್ಕೆ ಆತನು ಉತ್ತರ ಕೊಡುತ್ತ ಆ ಮಹಾಕವಿಯ ಆರಾಧನೆ (Bardolatry) ಬೇಡ ಎಂದು ಹೇಳಿದೆನೇ ಹೊರತು ಷೇಕ್ಸ್‌ಪಿಯರಿಗೆ ಅಮರ್ಯಾದೆ ತೋರಿಸಿಲ್ಲ, ಬೇಕಾದರೆ ನಾನು ಬಳಸಿರುವ ವಿರಾಮ ಚಿಹ್ನೆಯನ್ನು ನೋಡಿ— Greater than Shakespeare ?—ಎಂದು ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕಿದ್ದೇನೆ, ಅಲ್ಲವೆ?— ಎಂದರು.

ಇಷ್ಟು ಬೊಗಳೆಯಂತೆ ಬರೆದರೂ ಕಂಡರೂ ನುಡಿದರೂ ಅಂತರ್ಯದಲ್ಲಿ, ನಿಜ ಜೀವನದಲ್ಲಿ ಷಾ ತುಂಬಾ ಸಜ್ಜನರು, ಉಪಕಾರಿ. ತುಂಬಾ ಸಂಕೋಚದ, ನಾಚಿಕೆಯ ಸ್ವಭಾವದವರು. ಎಷ್ಟೋ ಜನ ಹೆಣ್ಣು ಮೈಮೇಲೆ ಬಿದ್ದಾಗಲೂ ಬಹುಮಟ್ಟಿಗೆ ನುಸುಳಿಕೊಳ್ಳಲು ಯತ್ನಿಸಿದವರು. ತನಗೆ ಒಲಿದ ಸಂಪನ್ನೆಗೆ ಗೌರವ ತೋರಿಸಿ ಬದುಕಿದವರು. ತನಗಾಗಿ ಕಷ್ಟಪಡುವ ನಟನಟಿಯರಿಗೆ ತುಂಬಾ ಪ್ರೀತಿ, ಸಹನೆ, ಔದಾರ್ಯ ತೋರಿಸಿದವರು...ಅವರ ಅಭಿನಯವನ್ನು ಟೀಕಿಸುವಾಗ ಒಮ್ಮೆ ಹೀಗೆ ನಡೆಯಿತಂತೆ : ನಟರು ಬಂದು ಈ ಭಾಗ ಸ್ವಲ್ಪ ಹೆಚ್ಚು ಮಾರ್ಪಡಿಸಿಕೊಡಿ ; ಆ ಭಾಗ ಸ್ವಲ್ಪ ಮೊಟಕಾದರೆ ಮೇಲಲ್ಲವೆ ? ಇದು ಸ್ವಲ್ಪ ಮಾರ್ಪಟ್ಟರಾದೀತು ಎಂದು ಒಂದು ಸಲ ಕೇಳಿದರಂತೆ. A Rehearsal for Cuts ಎಂದು ಒಂದು ದಿನ ನಿರ್ಣಯಮಾಡಿದರು. ನಟರೆಲ್ಲ ಸೇರಿದಾಗ The whole play is cut : you may all go home ಎಂದರಂತೆ. ಅವರು ಆಡಿದ ಹಾಗೆ, ಬರೆದ ಹಾಗೆ ಬಹುದೊಡ್ಡ ನಟರು ಅವುಗಳನ್ನು ಆಡಿ ತಮಗೂ ಅವಕ್ಕೂ ಕೀರ್ತಿಯನ್ನು ತಂದುದು ಇಬ್ಬರ ಹಿರಿಮೆಗೂ ಸಾಕ್ಷಿ.

ಅವರ ಸಂಬಂಧದಲ್ಲಿ ಕಿರುಗತೆಗಳ ಒಂದು ಮಹಾ ಪ್ರಪಂಚವೇ ಹುಟ್ಟಿಕೊಂಡಿದೆ.

---

9. ಉದಾ: ಕಾಳಿದಾಸ, ಕರಿಬಸವಶಾಸ್ತ್ರಿ, ಕೈಲಾಸಂ ಎಂದು ಕಕಾರಪ್ರಾಸಕ್ಕಾಗಿ ನಾಟಕಕಾರ ಬಸವಪ್ಪಶಾಸ್ತ್ರಿಗಳಿಗೆ ಬದಲಾಗಿ ವಿದ್ವಾಂಸ ಕರಿಬಸವಶಾಸ್ತ್ರಿಗಳನ್ನು ಸೇರಿಸಿ ಕೈಲಾಸಂ ಲೇವಡಿ ಮಾಡಿದ್ದುಂಟು.

ಅಂಥ ಪುರಾಣಕ್ಕೆಲ್ಲ ಅಧಿಷ್ಠಾತೃ, ಆಧಾರವಾಗಿ ಬದುಕಿದ ವ್ಯಕ್ತಿ ಸಾಮಾನ್ಯನಲ್ಲ. ಅಮೃತ ಕಲ್ಪ.

* * * *

"ಮೇಜರ್ ಬಾರ್ಬರ" ನಾಟಕದಲ್ಲಿ ಮೋಕ್ಷಚಮೂ—Salvation Army—ಗೆ ಸಂಬಂಧಿಸಿದ ಅಧಿಕಾರಿ ನಾಯಕಿ. ಕುಡುಕರ, ಪತಿತರ, ದುಷ್ಟರ ಉದ್ಧಾರಕ್ಕಾಗಿ ಏರ್ಪಟ್ಟದ್ದು ಆ ಸಂಸ್ಥೆ. ಸ್ವರ್ಗದ ಕಡೆ, ದೇವರ ಕಡೆ ಅಂಥವರ ಮನಸ್ಸನ್ನು ತಿರುಗಿಸಲು ಶ್ರಮಿಸುವದು. ಸೈನ್ಯದಳದಂತೆ ಮೋಕ್ಷಚಮೂ ವ್ಯವಸ್ಥೆ. ಈ ಕಾರ್ಯಕ್ಕೆ ಹಣಬೇಕು. ಅಷ್ಟಿಷ್ಟಲ್ಲ; ಹತ್ತಾರು ಲಕ್ಷ ಪೌಂಡುಗಳಷ್ಟು ದೊರಕಿದ ಹೊರತು ಸಾಲದು. ಜನರನ್ನು ಬೇಡಿ, ಬೀದಿಯಲ್ಲಿ ದೊರಕುವ ಷಿಲಿಂಗ್‌ಗಟ್ಟಲೆ ಹಣ ಏತಕ್ಕಾದೀತು ? ಅದಕ್ಕಾಗಿ ಜನರ ಕರುಣೆಯನ್ನೂ ಮಾನವೀಯತೆಯನ್ನೂ ತೆರೆಯಲು ಅವರು ಪಡುವ ಪಾಡು ಕರುಣಾಜನಕವಾದ್ದು, ನಿಟ್ಟುಸಿರು ತರಿಸುವಂಥಾದ್ದು— ಎಂಬುದರ ಚಿತ್ರ ಇಲ್ಲಿ ಬರುತ್ತದೆ. ಹಾಗೆಯೇ ಇವರು ಕೊಡುವ ಗಂಜಿ ರೊಟ್ಟಿಗಾಗಿ ಎಷ್ಟು ಸುಳ್ಳು, ಠಕ್ಕು, ಆತ್ಮವಂಚನೆ ನಡೆಯುತ್ತದೆ ! ಇವರ ಕಾರ್ಯದ ಪರಿಣಾಮವೂ ಎಷ್ಟು ಕ್ಷಣಿಕ ; ಮಾನವ ಸ್ವಭಾವ, ಸಂಸ್ಕಾರ, ಓ, ಎಷ್ಟು ಕಷ್ಟದ, ಸಾವಕಾಶದ ಕೆಲಸ—ಎಂಬುದರ ಅರಿವಾಗುತ್ತದೆ.

ಹಣ ಒದಗಿಸಬೇಕಾದವರು ದೊಡ್ಡ ಮೊತ್ತಗಳಲ್ಲಿ ಅದನ್ನು ಒದಗಿಸಬಲ್ಲವರು ಮಾತ್ರ. ದೊಡ್ಡ ಪ್ರಮಾಣದ ಉತ್ಪಾದಕರು—ವ್ಯಾಪಾರಿಗಳು—ಇತರ ಧನಿಕರು ಕೊಟ್ಟರೆ ಮಾತ್ರ ದೊಡ್ಡ ಪ್ರಮಾಣದ ಹಣ ದೊರಕೀತು. ಅವರಿಗೆ ಹಣ ಹೇಗೆ ಸಂಪಾದನೆಯಾಗುತ್ತದೆಯೊ ಅವರು ಯಾವ ಸದುದ್ದೇಶ-ದುರುದ್ದೇಶ-ಗಳಿಂದ ದಾನ ಮಾಡುತ್ತಾರೆಯೊ ಅವನ್ನು ಯೋಚಿಸುತ್ತ ಕುಳಿತರೆ ಆದೀತೆ ? ಅಂಥ ಹಣವನ್ನು ಸ್ವೀಕರಿಸುವುದು ದೂಷ್ಯ, ಪಾಪ ಆಗುತ್ತದೆ ಎನ್ನುವುದುಂಟು. ಧನಿಕನ ಮಗಳಾಗಿ, ಶ್ರೀಮಂತನ ಮೊಮ್ಮಗಳಾಗಿ ಹುಟ್ಟಿದ ಬಾರ್ಬರ ಪತಿತರಿಂದ, ಪಾಪಿಷ್ಠ ಧನಿಕರಿಂದ ಹಣವನ್ನು ಸ್ವೀಕರಿಸಲು ಕೊಕ್ಕರಿಸುತ್ತಾಳೆ. ಪಾಪಿಯಿಂದ ಹಣದ ದಾನ ಸ್ವೀಕರಿಸಬಾರದು ಎನ್ನುತ್ತಾಳೆ...ನಾನು ಯಾವುದನ್ನು ಕೊಳ್ಳಬಲ್ಲೆನೊ ಅದಕ್ಕಾಗಿ ಬೇಡಬೇಕೇಕೆ ಎಂದು ಅಂಡರ್‌ಷಾಫ್ಟ್ ಹೇಳಲು, You can't buy the Army ಎನ್ನುತ್ತಾನೆ ಕಸಿನ್ಸ್. ಅಂಡರ್‌ಷಾಫ್ಟ್ ಲೋಕ ಸ್ವರೂಪವರಿತವನು. ಅಷ್ಟು ಅರಿಯದವರು ಬಾರ್ಬರ, ಕಸಿನ್ಸ್, ಸ್ಟೀವನ್ :—ಬೇರೆ ಬೇರೆ ಕಾರಣಗಳಿಂದ. ಅರಿಯಲು ಶಕ್ತಿಯಿಲ್ಲವೆಂದಲ್ಲ ; ಅವರ ಮೋಹ, ಯೋಚನೆಯ ರೀತಿ ಭ್ರಾಂತಿಗಳಿಂದ ಕೂಡಿದವಾದ್ದರಿಂದ. ಅವರ ಅರೆತಿಳಿವಳಿಕೆ ಮುರಿದು ಸತ್ಯದರ್ಶನವಾಗುತ್ತದೆ ಈ ನಾಟಕದಲ್ಲಿ. ತನ್ನ ಚಮೂ ಎಲ್ಲರಿಂದಲೂ ಹಣ ಸ್ವೀಕರಿಸುವುದು ಪಾಪದಲ್ಲಿ ಭಾಗವಹಿಸಿದಂತೆ—ಎಂಬುದು ಆಕೆಯ ಭಾವನೆ.

ಇಂಥ ಭಾವನೆ ಹಲವು ಜನ ಶುದ್ಧರೆಂಬವರಲ್ಲಿ ರೂಢಮೂಲವಾದ್ದು. ಈ ವಿಷಯವನ್ನು ಕುರಿತೇ ಮೊದಲು ಷಾ Widowers' Houses ಬರೆದಿದ್ದರು. ಬಡವರಿಗೆ ಶಿಥಿಲವಾದ ಕೊಳಕು ಮನೆಗಳನ್ನು ಕಟ್ಟಿಕೊಟ್ಟು, ಅವರಿಂದ ಅತಿಹೆಚ್ಚಿನ ಬಾಡಿಗೆ ವಸೂಲುಮಾಡಿ, ಧನವಂತನಾದವನೊಬ್ಬನ ಮಗಳನ್ನು ಮದುವೆಯಾಗತಕ್ಕದಲ್ಲವೆಂದು ಅವಳಿಗೆ ಒಲಿದಿದ್ದ ವರ ಮೊದಲು ಹೇಸಿಗೆ ತೋರಿಸಿದ್ದ. Mrs. Warren's Profession ನಾಟಕದಲ್ಲಿ ಹೆಣ್ಣುಗಳನ್ನು ಆಕರ್ಷಿಸಿ, ಅವರ ಹೆಣ್ಣುತನವನ್ನು ಬಳಸಿ, ವರಮಾನ, ಜೀವಿಕೆ ಕಲ್ಪಿಸಿಕೊಟ್ಟು ಆ ವ್ಯಾಪಾರದಿಂದ ಶ್ರೀಮಂತಳಾಗಿದ್ದ ಮಿಸೆಸ್ ವಾರೆನ್ ತನ್ನ ಮಗಳಿಗೆ ಉತ್ತಮ ಶಿಕ್ಷಣ ದೊರಕಿಸಿದ್ದಾಳೆ. ತನ್ನ ಬಗೆಯ ಜೀವನ ಅವಳಿಗೆ ಒಪ್ಪದೆ ತನ್ನಿಂದ ಮಗಳು ಮುಂದೆ ಯಾವ ನೆರವನ್ನೂ ಸ್ವೀಕರಿಸಲು ಒಪ್ಪದಾದಾಗ ಮಗಳು ತಾಯಿ ಬೇರೆಯಾದ ಪ್ರಸಂಗ ಅದು. ಅಲ್ಲಿ ಮನಸ್ಸು ಬಿಗಿವ ರೀತಿ ಯಂತ್ರಮುಷ್ಟಿಯಂಥದು. Widowers' Houses ಅಲ್ಲಿ ವರನ ವರಮಾನ ಕೂಡ ಸ್ವಲ್ಪ ಹೆಚ್ಚು ಕಡಮೆ ಅದೇ ರೀತಿ ಬರುವುದೆಂದು ತಿಳಿಯಲು ಕಡೆಗೆ ಮದುವೆ ಘಟಿಸುತ್ತದೆ. ಮಿಸೆಸ್ ವಾರೆನ್ಸ್ ನಾಟಕದಲ್ಲಿ ಮಗಳು ವೈವಿ ತಾನು ಮೆಚ್ಚಿದ ಫ್ರಾಂಕನ್ನು ಮದುವೆಯಾಗಲು ಶಕ್ಯವಿಲ್ಲ, ಅವನೊಂದು ರೀತಿಯ ಸೋದರನೆಂಬ ನಿಜ ತೇಲಿ ಅಗಲಿಕೆ ಉಂಟಾಗುತ್ತದೆ. ತಾಯ ಜೀವನ ಮಗಳಿಗೆ ಹೇಸಿಕೆಯಾದುದಕ್ಕಿಂತ ಹೆಚ್ಚಾಗಿ ಇಂಥದಕ್ಕೆ ಅವಳನ್ನು ಈಡುಮಾಡಿತು ಎಂಬ ಯೋಚನೆ ಸೇರಿಕೊಂಡಿದೆ. ನಿಮ್ಮ ಒಂದು ಕಾಸೂ ಬೇಡ ಎಂದು ತನ್ನ ಮಾಸಾಶನವನ್ನು ಹಿಂದಕ್ಕೆ ಕಳಿಸಿದವಳು ಅವಳು. ಬೇರೆ ಸ್ವತಂತ್ರವಾಗಿ ತಾನು ಮುಂದೆ ಜೀವನ ಮಾಡಿಕೊಳ್ಳಲುಳ್ಳವಳು ಎಂದು ನಿರ್ಧರಿಸಿದ ವೈವಿಯ ಪ್ರಸಂಗ ಬೇರೆ ಹದದ್ದು. ತಾಯ ಮಮತೆ, ತಾಯಿಗೆ ತೋರಿಸಬೇಕಾದ ಕೃತಜ್ಞತೆ ಇಲ್ಲಿ ಇಲ್ಲವಾಗುತ್ತದೆ. 'ನಾನು ಬೆಳಸುವ ಇತರ ಹೆಣ್ಣುಮಕ್ಕಳಂತೆ ನಿನ್ನನ್ನು ನನ್ನ ಉದ್ಯೋಗಕ್ಕೆ ಬೆಳಸದೆ ಮರ್ಯಾದಸ್ಥಳನ್ನಾಗಿ ಮಾಡಿದ ತಪ್ಪು ನನ್ನದು. ನಿನಗೆ ಉಂಟು ಮಾಡಿಕೊಟ್ಟ ವಿದ್ಯಾ ಸಂಸ್ಕೃತಿಗಳಿಂದ ತಾನೆ ನೀನು ಹೀಗೆ ಸೊಕ್ಕಿದುದು, ಅವಿಧೇಯಳಾದುದು ; ನಾನು ಕುಷ್ಠಳೆಂಬಂತೆ ನನ್ನನ್ನು ದೂಡುತ್ತಿರುವೆ', ಎಂದು ತಾಯ ಬಾಯಿಂದ ಮಾತು ಬರುತ್ತದೆ. ಒಂದು ರೀತಿ ಈ ಮಾತು ನಿಜ ; ಇಲ್ಲಿ ಪರಿಣಾಮ ಬಿರುಸಿನದು. ಮಗಳು ತಾಯಿಗೆ ಸರ್ವಥಾ ವಿರುದ್ಧವಾದದ್ದನ್ನು ಕಂಡು ತಾಯಿ ಬಿಡಿಸಿಕೊಂಡು ಹೋಗುವಾಗಿನ ಆಕೆಯ ಮನಸ್ಸು ರೋಸಿ ಕಹಿಯಾದುದನ್ನು ನಾಟಕಕಾರ ಹೀಗೆ ಚಿತ್ರಿಸುತ್ತಾನೆ—"Oh, the injustice of it" ಇತ್ಯಾದಿ ಎನ್ನುವವರೆಗಿನ ಪ್ರಪಂಚ ಅದು. ಆಕೆಯ ಪರವಾಗಿ ಆಡಬಹುದಾದ್ದನ್ನು ನಾಟಕಕಾರ ಆಡುತ್ತಾನೆ. ಅದಕ್ಕೆ ಕಾರಣ ಬಡತನದಲ್ಲಿದೆ ; ಸಮಾಜದ ದುರ್ವ್ಯಾಪಾರ, ವಿಲಾಸ ಭೋಗಗಳ ಆಕಾಂಕ್ಷೆಯಲ್ಲಿದೆ ಎಂದು ಸಮಾಜಕ್ಕೆ ತೋರಿಸಿದ್ದಾರೆ. ಇಂಥ ಸ್ಥಿತಿಗೆ ಅವಕಾಶ ಮಾಡಿಕೊಟ್ಟ ಸಮಾಜದ ರೀತಿನೀತಿಗಳನ್ನು ಷಾ ತೋರಿಸುತ್ತಾರೆ.

'ಬಾರ್ಬರ' ನಾಟಕದಲ್ಲಿ ತಂದೆ ಮಗಳಿಗೆ ಆಡುವ ಮಾತಿನಲ್ಲಿಯೂ ಈ ಸಂಗತಿ ಇದೆ. 'ನನ್ನ ಹಣ ನಿನಗೆ ಶಿಕ್ಷಣ, ಧರ್ಮಬುದ್ಧಿ ಬರುವಂತೆ ಮಾಡಿದೆ. ಬಡತನದಿಂದ ನಿನ್ನನ್ನು ಉದ್ಧಾರ ಮಾಡಿದೆ. "I fed you and clothed you and housed you. I took care that you had money enough to live handsomely-more than enough ; so that you could be wasteful, careless, generous. That saved you from the seven deadly sins...I enabled Barbara to become Major Barbara and I saved her from the crime of poverty. It is cheap work converting starving men with a Bible in one hand and a slice of bread in the other...Try your hand on my men ; their souls are hungry because their bodies are full." ಇದು ಬಾರ್ಬರ ಬುದ್ಧಿಗೆ ಹೊಸ ಬೆಳಕು ಹಾಯಿಸಿ ಅವಳ ಹೃದಯವನ್ನು ಸಾಹಸಕ್ಕೆ ತೆರೆಯುತ್ತದೆ. ಹೆಜ್ಜೆ ಮುಂದಿಟ್ಟ ಹಾಗಾಯಿತು. ಮೂರು ನಾಟಕಗಳಲ್ಲಿಯೂ. 'Ghosts' ನಾಟಕದಲ್ಲಿ ಇಬ್ಸೆನ್ ಕಾಣಿಸಿದ ವಿರಸತೆಯು ಸಮಸ್ಯೆ ಒಂದು ರೀತಿಯದಾದರೆ ಅದರ ಇನ್ನೊಂದು ಪ್ರಕಾರ, ಪರಿಣಾಮ ವಿಧಾನ Mrs Warren's Profession ಅಲ್ಲಿನದು.[10] ಅದಕ್ಕೆ ಹೇಗೆ ಮುಟ್ಟುಗೋಲು ಹಾಕಿದರೊ ಇದಕ್ಕೂ ಹಾಗೇ ಹಾಕಿದರು. 'ನಾವು ಸ್ನೇಹಿತರಾಗಿಯಾದರೂ ಆಗಲುವಂತೆ ನನ್ನ ಕೈ ಕುಲುಕಿಸಿ ಬೀಳ್ಕೊಡಬಲ್ಲೆಯ' ಎಂದು ಮಗಳು ಕೇಳಿದರೆ ತಾಯಿ 'ಇಲ್ಲ' ಎನ್ನುತ್ತಾಳೆ.

ಇಂಥುದೇ ದಾನದ ಹಣ ಪಾಪ ಕರ್ಮದಿಂದ ಬಂದದ್ದು ಎಂಬ ವಿಷಯ 'ಮೇಜರ್ ಬಾರ್ಬರ'ದ್ದು. 'ಚಮು'ವಿನ ವೆಚ್ಚಕ್ಕೆ ಹಣದ ಅಗತ್ಯ ಅತೀವವಾಗಿರುವಾಗ ಹಣವನ್ನು ಒದಗಿಸುವವರು ಜನಗಳಿಗೆ ವ್ಹಿಸ್ಕಿ ಮಾರಿ ಕುಡಿಸಿ ಅವರನ್ನು ಹಾಳುಮಾಡುವ ಬಾಜ್ಜರ್ ಅಂಥವರು. ಅವನೂ ಅದನ್ನು ತೆರಬೇಕಾದರೆ ಇನ್ನೈದು ಮಂದಿ ಸಾವಿರ ಸಾವಿರದಂತೆ ಕೊಡಬೇಕಂತೆ. ಒಟ್ಟಿಗೆ ಉಳಿದ ಐದು ಸಾವಿರ ಪೌಂಡ್ ಕೊಡುವವನು ಬಾರ್ಬರ ತಂದೆ,—ಆ್ಯಂಡ್ರೂ ಅಂಡರ್‌ಷಾಫ್ಟ್ : ಮದ್ದು ಗುಂಡು ಫಿರಂಗಿ ತಯಾರಿಸಿ ಮಾರಿ ಲೋಕ ನಾಶಕವಾಗುವ ಕೊಲೆ, ಪಾತಕ, ಯುದ್ಧಗಳಿಗೆ ಮಾರಕ ಯಂತ್ರಗಳ[11]

---

10. ಇದರ ಇನ್ನೊಂದು ಬಗೆಯ ದುರಂತ Brieuxo ಅವರ ಡ್ಯಾಮೇಜ್ಡ್ ಗುಡ್ಸ್ (Damaged goods) ನಾಟಕದಲ್ಲಿದೆ. ಮೊಮ್ಮಗಳ ಮುಯ್ಯಿ ಎಂಬಲ್ಲಿ ನಮ್ಮ ಕೈಲಾಸಂ ಅದನ್ನು ಕಾಣಿಸುತ್ತಾರೆ.

11. ಆದರೆ ಇದಕ್ಕೆ ಇದಿರಾಗಿ ಕ್ಯಾಪ್ಟನ್ ಪಾಟೋವರ್ ಆಡುವ You are going to let the fear of poverty govern your life ; and your reward will be that you will eat ; but you will not live ಎಂದುದು ಬೇರೆ ಮಾತು. ಅವರಿಗೆಲ್ಲ ತಿನ್ನುವುದಕ್ಕೆ ಬೇಕಾದಷ್ಟಿದೆ, 'ಎಲ್ಲಿ'ಗೆ ಹೊರತು.

ಉತ್ಪಾದಕನಾದವನದು. ಮೋಕ್ಷ ಚಮೂ ಶುಚಿಯಾಗಿ ಶುದ್ಧವಾಗಿ ಇದ್ದಿದ್ದರೆ, ಇಂಥವರಿಂದ ಹಣ ತೆಗೆದುಕೊಳ್ಳದಿದ್ದರೆ ಬಾರ್ಬರಾಗೆ ಅದರಲ್ಲಿ ಭಕ್ತಿ, ಶ್ರದ್ಧೆ. ಅದರ ಮೇಲಧಿಕಾರಿ ಬೈನ್ಸ್ ಇಂಥವರಿಂದ ಸಹಾಯ ದ್ರವ್ಯವನ್ನು ಸ್ವೀಕರಿಸುತ್ತೇನೆಂದು ನಿರ್ಣಯಿಸಿದಾಗ ಬಾರ್ಬರಾ ಮೋಹ ಮುರಿಯಿತು ; ಆದರ್ಶ ಭಂಗವಾಯಿತು ; ಅಭಿಮಾನ ಕತ್ತರಿಸಿ ಬಿತ್ತು. ತನ್ನ ಸದಸ್ಯತ್ವದ ಚಿಹ್ನೆಯನ್ನು ತನ್ನ ತಂದೆಯ ಅಂಗಿಗೆ ಸಿಕ್ಕಿಸಿ ಅವನನ್ನು ಮೆರವಣಿಗೆಗೆ ಕಳಿಸಿದಳು. ಆಗ ಆಕೆಗಾದ ನೋವು ಗಹನವಾದ್ದು. 'ದೇವರೆ, ದೇವರೆ ನೀನು ನನ್ನ ಕೈಯನ್ನೇಕೆ ಬಿಟ್ಟೆ' ಎಂದು ಯೇಸುವಿನಂತೆ ಗಾಸಿ ಪಟ್ಟಳು. ಚಮೂವನ್ನು ಬಿಟ್ಟಳು.

ಆದರೆ ಅಂಥ ಕೆಲಸದಲ್ಲಿ ಲಗ್ನವಾದ ಮನಸ್ಸು ಆಕೆಗೆ ಬಂದಿದ್ದ ಸಂಸ್ಕಾರದಿಂದ, ದೊರಕಿದ್ದ ಶಿಕ್ಷಣದಿಂದ, ಅಭ್ಯಾಸ ಮಾಡಿದ ಸ್ವಾರ್ಥತ್ಯಾಗದಿಂದ ಇನ್ನೂ ಉತ್ತಮ ತರದ ಮಾರ್ಗವನ್ನು ಕಂಡುಕೊಳ್ಳುವುದಕ್ಕಾಗಿ ಹಾತೊರೆಯಿತೇ ಹೊರತು ನಿಷ್ಕ್ರಿಯ ವಾಗಬಯಸಲಿಲ್ಲ. 'ನ ಮೇ ಭಕ್ತಃ ಪ್ರಣಶ್ಯತಿ' ಎಂಬ ಮಾತು ಇಂಥಲ್ಲಿಯೂ ಎಷ್ಟು ಅರ್ಥವತ್ತಾದ್ದು ಎಂಬುದು ಇಂಥ ಸಂದರ್ಭದಲ್ಲಿ ಬೆಳಗುತ್ತದೆ. ಮಾನವಹಿತ ಕಾರ್ಯದ ಅವಕಾಶಕ್ಕಾಗಿ ಹಂಬಲಿಸಿತ್ತು ಬಾರ್ಬರ ಮನಸ್ಸು. ಹಣ ಎಲ್ಲಿಂದ ಬಂದರೇನು ಅದು ಒಳ್ಳೆಯ ಕೆಲಸ ಮಾಡಿದರೆ, ಅದರಿಂದ ಒಳ್ಳೆಯದಾಗುವುದಾದರೆ ಸಾಧನವಾಗಿ ಅದನ್ನು ಸ್ವೀಕರಿಸೋಣ ಎಂಬುದು ತಪ್ಪಾಗಬೇಕಿಲ್ಲ. ದಾನಿ ಯಾವ ಉದ್ದೇಶದಿಂದ ದಾನ ಮಾಡಿದನೊ ಆ ಉದ್ದೇಶ ಮಾಡುವವನ ಆತ್ಮಸಾಕ್ಷಿಗೆ ಸಂಬಂಧಿಸಿದ್ದು. ಅವನಿಗೂ ಅವನ ದೇವರಿಗೂ ಸಂಬಂಧಿಸಿದ ವ್ಯವಹಾರ. ಲೋಕೋಪಕಾರಕ್ಕಾಗಿ ಅದು ವಿನಿಯೋಗವಾಗಬಲ್ಲದಾದರೆ ಆ ಕಾರಣ ಈ ಉಪಕಾರಕಾರ್ಯಕ್ಕೆ ಏಕೆ ಅಡ್ಡಿಯಾಗ ಬೇಕು ? ಸ್ವೀಕಾರ್ಯವಾಗಬಾರದು ?—ಎಂಬ ಈ ಮಾತು ತಥ್ಯ, ಸತ್ಯ, ಸರಿ. ಪಾಪ ಕಲುಷಿತವಾದ ಹಣ, ದಾನದಾನಿಗಳ ಗುಣಾವಗುಣ ಗೊಡವೆಯೇಕೆ ನಮಗೆ ?—ಎಂಬ ಪ್ರಶ್ನೆಯನ್ನು ಇಲ್ಲಿ ಷಾ ಎತ್ತುತ್ತಾರೆ.

ಇದರ ಜೊತೆಗೆ : ಮದ್ದುಗುಂಡು ತಯಾರು ಮಾಡಿ ಇಂಗ್ಲಂಡಿನ ರಾಜ ಕೀಯವನ್ನೇ ತನ್ನ ಪ್ರಭಾವಕ್ಕೆ ಒಳಪಡಿಸಿಕೊಳ್ಳುವಷ್ಟು ಸಾಮರ್ಥ್ಯವುಳ್ಳ ಅಂಡರ್‌ಷಾಫ್ಟ್ ತಾನು ಹೇಗೆ ನಿರ್ಗತಿಕತನದಿಂದ ಮೇಲೆದ್ದು ಶ್ರೀಮಂತಿಕೆಯನ್ನು ಸಂಪಾದಿಸಿಕೊಂಡನೆಂಬ ಚಿತ್ರ ಚರಿತ್ರೆ ಬರುತ್ತದೆ. ತನ್ನ ಮಕ್ಕಳಿಗೆ ಬಡತನದ ಕಷ್ಟ ಕಾರ್ಪಣ್ಯ ತೋರದಂತೆ ವರ್ಷಾಶನ, ಮಾಸಾಶನ ಕೊಡುತ್ತಿದ್ದಾನೆ. ವಿದ್ಯೆ ಬುದ್ಧಿ ಕಲಿಸಿದ್ದಾನೆ. ಧರ್ಮಾಧರ್ಮ ವಿವೇಚನೆ ಉಂಟಾಗುವಂತೆ ಮಾಡಿದ್ದಾನೆ. ಅದಕ್ಕೆ ಅವನಿಗೆ ತನ್ನ ಮನೆಯಲ್ಲಿ ಯಾವ ಸ್ಥಾನಮಾನ ದೊರೆಯಿತು–ನಾಟಕ ಕಾಣಿಸಿದೆ. ಯುಕ್ತಿಯೇ ಆ ಯುಕ್ತಿ. ಆಲೋಚನೆಯ ಧಾರಾಳ ಸ್ವಾತಂತ್ರ್ಯ ಅವರಿಗೆ ಉಂಟಾಗಿದೆ. ಇದು ಅವರಿಗೆ ಶಕ್ಯವಾದುದು ಇವರ ತಾಯಿಗೂ ತಮಗೂ ತಂದೆ ಒದಗಿಸಿದ ಹಣದಿಂದ ;

ಅನುಕೂಲಗಳಿಂದ ಎಂಬುದನ್ನು ಅವರು ಅರಿಯರು, ಲೆಕ್ಕಿಸರು. ಇಂಥ ಅಜ್ಞಾನದಲ್ಲಿ ಬೆಳೆಯುತ್ತದೆ ಅವರ ಧರ್ಮಕರ್ಮ ವಿವೇಚನೆ. ಕಿಂ ಕರ್ಮ ಕಿಂ ಅಕರ್ಮೇತಿ ಕವಿಯೋಪ್ಯತ್ರ ಮೋಹಿತಾಃ ಎಂಬ ಗೀತಾವಾಕ್ಯವೊಂದಿದೆ. ಕರ್ಮದ ಮೂಲ, ಕರ್ಮದ ಸ್ವರೂಪ, ಕರ್ಮದ ವಿಧಾನ, ಪರಿಪಾಕ ಎಂದಿಗೂ ನಿಹಿತಂ ಗುಹಾಯಾಂ ಏನೊ! ತಾನೆಷ್ಟು ಕಷ್ಟಪಟ್ಟೆ, ಬಡತನದಿಂದ ತನ್ನನ್ನು ಉದ್ಧಾರಮಾಡಿಕೊಳ್ಳಲು. ಏನೇ ಆಗಲಿ ಇನ್ನು ಬಡವನಾಗಿರುವುದಿಲ್ಲ. ಆದರಿಂದ ಇನ್ನೊಬ್ಬರಿಗೆ ಎಷ್ಟೇ ಅನ್ಯಾಯವಾಗಲಿ, ಕಷ್ಟವಾಗಲಿ, ನಷ್ಟವಾಗಲಿ—ಅದು ತಪ್ಪು—ಎಂದು ಹಟದಿಂದ ಮೇಲೆ ಬಂದಿದ್ದವನು ಅಂಡರ್‌ಷಾಫ್ಟ್.[12] ಇಂಥ ಸನ್ನಿವೇಶಗಳಲ್ಲಿ ಬಡತನದ ಕಷ್ಟಗಳನ್ನು ನೀವು ಅರಿಯದಂತೆ ನಿಮಗೆ ವಿದ್ಯೆಗಾಗಿ ವ್ಯಾಸಂಗಕ್ಕಾಗಿ ಸೌಲಭ್ಯ ಕಲ್ಪಿಸಿದುದರಿಂದ ತಾನೆ ಈಗ ನಿಮ್ಮ ಪೆಗ್ಗಿಯ ಮಾತು ಅರೆತಿಳಿವಿನ ಧರ್ಮವಾದಗಳನ್ನೆತ್ತುವುದು?—ಎಂದ ಅಂಡರ್‌ಷಾಫ್ಟ್.

ಈವರೆಗೆ ಅವನ ಹೆಂಡತಿ ಬ್ರಿಟೊಮಾರ್ಟ್ ಮನಸ್ಸಿನ ಸ್ವರೂಪವನ್ನು ನಾಟಕಕಾರ ತೋರಿಸಿರುತ್ತಾನೆ. ಅವರ ಇಬ್ಬರು ಹೆಣ್ಣುಮಕ್ಕಳು ಬಾರ್ಬರಾ, ಶಾರಾ ಇವರ ಚಿತ್ತವೃತ್ತಿಯನ್ನು ತೋರಿಸಿರುತ್ತಾನೆ. ಅವರಿಗೆ ಗೊತ್ತಾಗಿರುವ ವರರ ಸ್ವರೂಪವನ್ನು ವರ್ಣಿಸಿದ್ದಾನೆ. ಮಗ ಸ್ಟೀವನ್ ಮಡಿಬುದ್ಧಿಯಲ್ಲಿ ಯಾವ ಪರಾಕಾಷ್ಠೆಗೆ ಮುಟ್ಟಿದ್ದಾನೆಂಬುದು ವರ್ಣಿತವಾಗಿರುತ್ತದೆ. ಬಡತನದಷ್ಟು ದೊಡ್ಡ ಕೇಡು ಲೋಕದಲ್ಲಿ ಇನ್ನಾವುದೂ ಇಲ್ಲ, ಅದರಿಂದ ನಡೆಯದ ಅನ್ಯಾಯವಿಲ್ಲ, ಅದರಿಂದ ಸಮಾಜಕ್ಕೆ ಆಗುವಷ್ಟು ಹಾನಿ ಬೇರೊಂದರಿಂದಿಲ್ಲ, ಸಮಾಜ ಮಾಡುವ ಮಹಾಪರಾಧ ಎಂದರೆ ಬಡತನವನ್ನು ಉಳಿಸಿಕೊಂಡಿರುವುದು; ಬಡವರನ್ನು ದುಡಿಸುವುದು. ಬಡತನದ ಗುಣಗಳನ್ನು ಶ್ಲಾಘಿಸುವುದು, ಅದಕ್ಕೆ ತೃಪ್ತಿಯನ್ನೂ ತ್ಯಾಗವನ್ನೂ ಬೋಧಿಸುವುದು, ಅದೇನೊ ಮಹದ್ಗುಣವೆಂಬಂತೆ ಹೊಗಳುವುದು. ಇದರಷ್ಟು ಅಧರ್ಮ ಬೇರೊಂದಿಲ್ಲ. ಇದನ್ನು ನಾಶಮಾಡಿದಲ್ಲದೆ ಸಮಾಜಕ್ಕೂ ಲೋಕಜೀವನಕ್ಕೂ ಶುಚಿಯಿಲ್ಲ, ಗತಿಯಿಲ್ಲ.[13]

---

12. ಇಂಥದೇ ಇನ್ನೊಂದು ಸನ್ನಿವೇಶದಲ್ಲಿ Gone With the Wind ಕಾದಂಬರಿಯಲ್ಲಿ ತೀರ್ಮಾನಿಸುವ ವ್ಯಕ್ತಿ ಅಲ್ಲಿನ Rebecca. ಎಷ್ಟು ಕಠಿನಳಾದಳು ಆಕೆ!

13. ಇದನ್ನು ಕಂಡೇ 1880ರಲ್ಲಿ ಬಾತ್ ಪಟ್ಟಣದಲ್ಲಿ ನಡೆದ ಬ್ರಿಟಿಷ್ ಅಸೋಸಿಯೇಷನಿನ ಅರ್ಥಶಾಸ್ತ್ರಜ್ಞ ಸಮ್ಮೇಳನ ಭಾಷಣದಲ್ಲಿ ಷಾ ನುಡಿದಿದ್ದರು.

ಷಾ ತಮ್ಮನ್ನು ಸಾಹಸಿ, ಕಲೆಗಾರ, ವಿಮರ್ಶಕ, ಸುಧಾರಕ ಎನ್ನುವುದಕ್ಕಿಂತ ನಾನು ಅರ್ಥಶಾಸ್ತ್ರಿ ಎಂದು ಹೇಳಿಕೊಳ್ಳುತ್ತಿದ್ದರು.

ಅರ್ಥಶಾಸ್ತ್ರ ಪ್ರಪಂಚದಲ್ಲಿ ಮಹರ್ಷಿಯಂತಿರುವ ಡಾ. ಮಾರ್ಷಲ್ Principles (1890) ಬರೆದರು. ಅಲ್ಲಿನ ಮೊದಲ ಪ್ರಕರಣದಲ್ಲಿಯೇ ಹೀಗೆ ಹೇಳಿದರು. ''May we not outgrow the belief that poverty is necessary?'' ಈ ಶಾಸ್ತ್ರದ ವ್ಯಾಸಂಗ ಜನದ ಬದುಕಿಗೆ ಜನಾಂಗಗಳ, ಮಾನವವರ್ಗದ ಬಡತನ ಸಿರಿತನಗಳಿಗೆ ಸಂಬಂಧಿಸಿದ್ದು. ಬಡತನ

ಅದರಿಂದ ಹುಟ್ಟುವ ಸುಳ್ಳು ಕಾರ್ಪಣ್ಯಗಳನ್ನು ಮೋಕ್ಷಚಮೂವಿನಂತಹವರ ಕಾರ್ಯದ ಸಮಾರಂಭಗಳಲ್ಲಿಯೇ ಕಾಣಬಹುದಲ್ಲವೆ ? ಇದನ್ನು ಮೊದಲು ನಿವಾರಿಸಿ : ಜನಕ್ಕೆ ಕೆಲಸ ಒದಗಿಸಿ ; ಸಂಪಾದನೆ ತಂದುಕೊಡಿ ; ಹೊಟ್ಟೆಗೆ, ಬಟ್ಟೆಗೆ, ವಿದ್ಯೆಗೆ, ರೋಗ ಚಿಕಿತ್ಸೆಗೆ, ಇರುವ ವಾಸಕಲ್ಪನೆಗೆ, ವಿನೋದ ವಿಹಾರಕ್ಕೆ, ಜೀವನದ ನೆಮ್ಮದಿಗೆ ಅವಕಾಶ ಮಾಡಿಕೊಡಿ. ಮನೆಕಟ್ಟಿಕೊಟ್ಟು ಚರಂಡಿಯ ವ್ಯವಸ್ಥೆ ಮಾಡಿಕೊಡಿ, ಬದುಕಿನಲ್ಲಿ ಅಭಿಮಾನ ತಂದುಕೊಡಿ, ಸ್ವಾಧೀನತೆ ತಂದುಕೊಡಿ, ಸರ್ವಪ್ರಕಾರದ ಆಲೋಚನೆಯ ಸ್ವಾತಂತ್ರ್ಯ ಬರುವಂತೆ ಮಾಡಿಕೊಡಿ. ಹಸಿದ ಹೊಟ್ಟೆಯ ಮೇಲೆ ಧರ್ಮ ಹೊರಲೂ ಪ್ರಚಾರಮಾಡಲೂ ಹೋಗಬೇಡಿ ; ಲೌಕಿಕ ಸುಖಕ್ಕೆ ಆಧಾರ ಮಾಡಿಕೊಟ್ಟು, ಧರ್ಮಬುದ್ಧಿ ಬರುವಂತೆ ಮಾಡಿದರೆ ತಾನೆ ಧರ್ಮ, ಭಕ್ತಿ, ತ್ಯಾಗಗಳಿಗೆ ಬೆಲೆ ಎಂದು ನುಡಿವವನು ಅಂಡರ್‌ಷಾಫ್ಟ್. ತನ್ನ ಕಾರ್ಖಾನೆಯಲ್ಲಿ ಇದಕ್ಕೆಲ್ಲ ಅವಕಾಶ ಮಾಡಿಕೊಟ್ಟಿದ್ದಾನೆ. ಅಲ್ಲಿ ಕೆಲಸ ಮಾಡುವವರ ಹಸಿವು, ದಾಹ ಅಡಗಿವೆ. ಅಂಥವರು ಧರ್ಮದ ಕಡೆಗೆ, ದೇವರ ಕಡೆಗೆ, ಮೋಕ್ಷಾಪೇಕ್ಷೆಯ ಕಡೆಗೆ ತಿರುಗುವಂತಾದರೆ ಅದನ್ನು ರೂಪಿಸುವುದು ನಿಜವಾದ ದೇವಕಾರ್ಯ. ಆ ಕಾರ್ಯವನ್ನು ಬಾರ್ಬರ ಕೈಕೊಳ್ಳಬೇಕಿದೆ. ಅವಳಿಗಾಗಿ ಅದು ಕಾದಿದೆ. ಕೈಕೊಂಡಾಗಲೇ ಅವಳ ಬದುಕು ಪೂರ್ಣ. ಅಂಥ ಅವಕಾಶವನ್ನು ನಿನಗೆ ತೆರೆದುಕೊಟ್ಟಿದ್ದೇನೆಂದು ತಂದೆ ಬಾರ್ಬರಾಗೆ ತೋರಿಸುತ್ತಾನೆ. ಈ ಸಂಗತಿ ಆಕೆಯ ಅರಿವಿಗೆ ಶ್ರದ್ಧೆಗೆ ಹಾಯುತ್ತದೆ. ಈ ದರ್ಶನ ಮೇಜರ್ ಬಾರ್ಬರ ನಾಟಕದ ಪ್ರಧಾನಾಂಗ.14 ಬೇರೆ ಕಾರಣಗಳಿಂದಾಗಿ ಮಡಿ ಮನಸ್ಸಿನ ಸ್ಟೀವನ್‌ಗೇ ತನ್ನ ತಂದೆಯ ಕಾರ್ಯವ್ಯವಸ್ಥೆಯಲ್ಲಿ ಗೌರವವುಂಟಾಗಿದೆ.

---

ಅಗತ್ಯವೆ ? ನಿವಾರ್ಯವಲ್ಲವೆ ? ಜನ ಜನವರ್ಗಗಳು ಏಕೆ ಬಡವರಾಗಿರಬೇಕು ? ಅವರನ್ನು ಸಿರಿವಂತರಾಗಿ ಮಾಡಲಾಗದೆ ? ಆಗುವುದಾದರೆ ಹೇಗೆ ಮಾಡಬೇಕು ?–ಎಂಬುದು ಅರ್ಥಶಾಸ್ತ್ರದ ಮೂಲಪ್ರಶ್ನೆ. ಮೊದಲು ಗಣಿತಜ್ಞರೂ ಭೌತಶಾಸ್ತ್ರಾಭ್ಯಾಸಿಗಳೂ ಆಗಿದ್ದು–Ethics–ನೀತಿಶಾಸ್ತ್ರ ವ್ಯಾಸಂಗಕ್ಕೆ ಬಂದು, ಸಮಸ್ತ ನೀತಿಬೋಧನೆಗಳಿಗೂ ತುಂಬಿದ ಹೊಟ್ಟೆಯ ಮಾನವ ವರ್ಗವೇ ನೆಲಗಟ್ಟು, ಆದ್ದರಿಂದ ಜನಕ್ಕೆ ಹಸಿವು ಹೋಗಲಾಡಿಸುವುದು ಮೊದಲ ಕೆಲಸ—ಎಂದು ಅರ್ಥಶಾಸ್ತ್ರದ ತತ್ವಗಳನ್ನು ಮಾರ್ಷಲ್ ಅಭ್ಯಾಸಮಾಡತೊಡಗಿದರು. ಇವರ ಹೃದಯ ಮರ್ಮವನ್ನು ಅರಿಯದವರು ಆ ಶಾಸ್ತ್ರವನ್ನು ಹೇಗೆಹೇಗೊ ಎತ್ತೆತ್ತಕ್ಕೊ ಒಯ್ಯುತ್ತಿದ್ದಾರೆ. ಈ ಮಾನವ ದೃಷ್ಟಿಯನ್ನು ಮರೆತು ಅದನ್ನು ಕೇವಲ ಗಣಿತ ಪ್ರಕ್ರಿಯೆಗಳ ಸಾಧನ ಶಾಸ್ತ್ರವನ್ನಾಗಿ ಮಾಡಿದ್ದಾರೆ : ಎಲ್ಲ ಶಾಸ್ತ್ರಗಳಿಗೆ ಬಂದ ಗತಿಯೂ ಇದೇ. ಅವುಗಳ ಮಾನವತೆ ಮಾಯವಾಗುತ್ತಿದೆ.

14. ಜೆ. ಬಿ. ಪ್ರೀಸ್ಟ್ಲೆ ಇಂಥ ಒಂದು ದರ್ಶನವನ್ನು ಇಬ್ಬರು ಕೆಲಸಗಾರರಿಗೆ ಕಾಣಿಸಿ ಅವರ ಜೀವನ ಮಾರ್ಪಡುವಂತೆ Then They Came to a City ಎಂಬ ನಾಟಕದಲ್ಲಿ ಮಾಡಿಕೊಡುತ್ತಾರೆ. ಆದರ್ಶ ಪಟ್ಟಣವೊಂದು ಅವರ ಕಣ್ಣಿಗೆ ಬೀಳುವಂತೆ ಮಾಡಿ, ವಾಸ್ತವ ಪ್ರಪಂಚಕ್ಕೆ ಅವರು ಹಿಂತಿರುಗಿ, ಇತರರ ಕಣ್ಣು ಮನಸ್ಸುಗಳನ್ನು ಅಂಥದರ ಸಾಧನೆಯ ಕಡೆಗೆ

ನಾಟಕದ ಮೊದಲ ಅಂಕದಲ್ಲಿ ಬಾರ್ಬರ ತಂದೆಗೆ ಆಹ್ವಾನ ಕೊಡುತ್ತಾಳೆ : ತಮ್ಮ ಚಮೂ ನೆಲೆಗೆ ಭೇಟಿಕೊಡಿರೆಂದು : ನೀನು ನನ್ನ ಕಾರ್ಖಾನೆಯನ್ನು ನೋಡಲು ಮಾರನೆಯ ದಿನ ಬರುವೆಯಾದರೆ ಆಗಬಹುದು ಎನ್ನುತ್ತಾನೆ ತಂದೆ. ನೆಲೆಗೆ ಬಂದರೆ ನಿಮ್ಮ ಮನಸ್ಸು ನಮ್ಮ ಕಡೆಗೆ ಬಂದೀತು ಎಂದು ಆಕೆಯೆಂದರೆ, ನನ್ನ ಕಾರ್ಖಾನೆಗೆ ಬಂದರೆ ನಿನ್ನ ಮನಸ್ಸು ನನ್ನ ಪ್ರಪಂಚಕ್ಕೆ ತಿರುಗೀತು ಎನ್ನುತ್ತಾನೆ ಅತ. ಇದು ಪರಸ್ಪರ ಮೊದಲೆಯ ಮಾತು—Challenge.

ಬಾರ್ಬರ ಮೊದಲಿಂದಲೂ ತಂದೆಗೆ ಪ್ರೀತಿಯ ಮಗಳು. ಅವಳ ಸತ್ವ ಈ ನಾಟಕಕ್ಕೆ ಆಶ್ರಯ. ಎರಡೂ ಅವಕಾಶಗಳೇ ; ಯಾವುದು ಹೆಚ್ಚು ಲೋಕ ಹಿತಸಾಧಕ ಎಂದಾಗ ಬಾರ್ಬರ ಮನಸ್ಸು ಒಂದರಲ್ಲಿ ಹುಟ್ಟಿದ ವ್ಯಥೆಗೆ ಕುಗ್ಗಿ ಇನ್ನೊಂದರ ಅವಕಾಶಕ್ಕೆ ಎದೆ ತೆರೆಯುವ ರೀತಿ ಬೆಡಗಿನದು, ಗಂಭೀರವಾದ್ದು. ಅವಳ ವರ ಕಸಿನ್ಸಿನ ಬುದ್ಧಿ, ಧೈರ್ಯ, ಸತ್ಯಸ್ಥಿತಿ ಪಕ್ಷಪಾತ ಇದಕ್ಕೆ ನೆರವಾಗುತ್ತದೆ. ಶಾರ, ಲೋಮ್ಯಾಕ್ಸ್ ಸಾಧಾರಣ ಬೊಂಬೆಗಳು. ಲೋಮ್ಯಾಕ್ಸ್‌ನ ಐಲುತನ ಹೇಗೆ ವ್ಯಕ್ತಿಲಕ್ಷಣವೊ ಹಾಗೆಯೇ ಒಂದು ವರ್ಗದವರ ಲಕ್ಷಣ. ಅವನಿಗೆ ನಿಗದಿಯಾಗಿರುವ ವರ್ಷಾಶನದಲ್ಲಿ ಅವನ ಹಿರಿಯರು ಮಾಡಿಟ್ಟ ನಿರ್ಬಂಧ ತುಂಬಾ ಅರ್ಥವತ್ತಾದುದು. ಅವನಿಗೆ ಒಂದು ವಯಸ್ಸು ಬರುವವರೆಗೂ ವರ್ಷಕ್ಕೆ 800 ಪೌಂಡ್ ಸಂದಾಯ; ಜೊತೆಗೆ ತನ್ನ ಸಂಪಾದನೆ ಯಿಂದ ಅದಕ್ಕೆ ಅವನು ಎಷ್ಟು ಕೂಡಿಸುತ್ತಾನೆಯೊ ಅದರ ಎರಡರಷ್ಟು ಹಣ ಅವನಿಗೆ ಕೊಡಬಹುದು ಎಂಬ ನಿಯಮ, ಸಮಯ ಎಲ್ಲ ಶ್ರೀಮಂತಪುತ್ರರಿಗೂ ಹೊರಿಸಬಲ್ಲ ನಿರ್ಬಂಧವಾದರೆ ಒಳಿತಾದೀತು. ಕ್ರಿಯಾಶೀಲತೆಗೆ ತುಂಬಾ ದೊಡ್ಡ ಸ್ಫೂರ್ತಿ ಮಾರ್ಗ ವಾಗುತ್ತದೆ.

ಮೋಕ್ಷ ಚಮೂಗೆ ಸೇರಿದ ಶ್ರದ್ಧಾವಂತ ಹೆಣ್ಣೊಂದನ್ನು ದುಡಿಸಿಕೊಂಡು ಒಂದು ದುಃಖಕ್ಕೆ ಈಡುಮಾಡುವ ವಸ್ತುವುಳ್ಳ ಇನ್ನೊಂದು ಈಚಿನ ನಾಟಕ Bertolt Brecht ಬರೆದ St. Joan of the Stockyards ಎಂಬುದು.[15] ದುಷ್ಟ ಶ್ರೀಮಂತರು ನೆರವು ಕೊಡುವ ನೆಪದಲ್ಲಿ ಹೇಗೆ ಬಡವರಾದ ಶ್ರದ್ಧಾಳುಗಳನ್ನು ಶೋಷಿಸುತ್ತಾರೆ, ಧರ್ಮವೆಂಬುದರ ಹಿರಿಮೆಗಳಿಗೂ ಬಂಡವಾಳಸ್ಥರ ದಾನ ಶಕ್ತಿಗೂ ಇರುವ ಸಂಬಂಧವನ್ನು ಇನ್ನೊಂದು ಚಿತ್ರವಾಗಿ ಅದು ಕಾಣಿಸುತ್ತದೆ. ಲಾಭಾಳಿತನಕ್ಕೂ

ತಿರುಗಿಸಿ, ಅವರ ಕರ್ಮ ಉತ್ಸಾಹ ಅತ್ತಕಡೆ ಹರಿಯುವಂತೆ ಪ್ರಚಾರ ಕೈಕೊಳ್ಳಲು ಪ್ರಚೋದನೆ ಬರುವಂತೆ ಮಾಡುತ್ತಾರೆ. ಷಾ ಅವರ ಮೇಜರ್ ಬಾರ್ಬರದಲ್ಲಿನ ಪೆರಿವೇಲ್ ದರ್ಶನ ಇದಕ್ಕೆ ಹಿನ್ನಲೆಯಾಗುತ್ತದೆಂದು ನನ್ನ ನಂಬಿಕೆ.

15. Stockyards ಎಂದರೆ ದನಗಳ ಕೊಟ್ಟಿಗೆ, ಅಮೆರಿಕದ ಷಿಕಾಗೋದಲ್ಲಿ ಅವುಗಳ ಕಸಾಬ ಖಾನೆ ಇರುವ ಸ್ಥಳಕ್ಕೆ ಆ ಹೆಸರು ಬಂದಿದೆ. ದಿನವೊಂದಕ್ಕೆ ಕೊಬ್ಬಿದ ಮಾಂಸಕ್ಕಾಗಿ ಬೆಳೆಸಿದ ಲಕ್ಷ ದನಗಳನ್ನು ಕಡಿದು ಅದನ್ನು ಪ್ಯಾಕ್ ಮಾಡುವ ಕಾರ್ಖಾನೆ ಸ್ಥಳಕ್ಕೆ Stockyard ಎಂದೇ ಹೆಸರು.

ದಾನಧರ್ಮಗಳಿಗೂ ಇರುವ ಸಂಬಂಧದ ಇನ್ನೊಂದು ಮುಖ ಅಲ್ಲಿ ಕಾಣುತ್ತದೆ. ಸ್ಥೂಲವಾಗಿ ಅದರ ವಸ್ತು ಇದು : ಪಿಯರ್‌ಪಾಂಟ್ ಮಾಲರ್ ಷಿಕಾಗೊ ಪಟ್ಟಣದ ಮಾಂಸ ವಿಕ್ರಯಕಾರರಲ್ಲಿ ಅತಿ ದೊಡ್ಡ ಶ್ರೀಮಂತ. ಆತನಿಗೂ ಮೋಕ್ಷ ಚಮೂಗೆ ಸೇರಿದ ಜೋನ್ ಡಾರ್ಕ್ ಎಂಬ ಹುಡುಗಿಗೂ ಸ್ನೇಹ ಬೆಳೆಯುತ್ತದೆ. ಬಹು ಒಳ್ಳೆಯವ, ಉದಾರ ಹೃದಯಿ ಎನ್ನುತ್ತ ಮೊದಮೊದಲು ಆಕೆಗೆ ಮಾಲರಲ್ಲಿ ಪ್ರಣಯ ಬೆಳೆಯುತ್ತದೆ. ಕ್ರಮವಾಗಿ ಆಕೆಯ ತಿಳಿವಳಿಕೆಗೆ ಬರುವ ಸಂಗತಿ ಇದು : ಆರ್ಥಿಕವಾಗಿ ಅವನಿಗೆ ಕೈಕಚ್ಚುವಂತಾದರೆ ಅವನು ತನ್ನ ಲಾಭವನ್ನು ಕಾಪಾಡಿಕೊಳ್ಳಲು ಎಲ್ಲಿನವರೆಗಾದರೂ ಹೋಗಬಲ್ಲನೆಂದು.

ಜೊತೆಗೆ ಇನ್ನೊಂದು ಸಂಗತಿ ಅವಳಿಗೆ ತಿಳಿಯುತ್ತದೆ: ಬಡವರಿಗೆ ಗಂಜಿ, ರೊಟ್ಟಿ ಕೊಟ್ಟು ಅವರನ್ನು ನೀತಿಮಾರ್ಗದಲ್ಲಿ ಉಳಿಸುತ್ತೇನೆಂಬ ಆಕೆಯ ಪ್ರಯತ್ನ—ಈ ಕಷ್ಟವನ್ನು ತಾನು ನಿವಾರಿಸುತ್ತಿಲ್ಲ, ಜೀವನದಲ್ಲಿ ಇಂಥ ಕಷ್ಟವೂ ಬಡತನವೂ ಸ್ಥಿರವಾಗಿ ಉಳಿಯುವಂತೆ ಮಾಡುತ್ತದೆ ಮಾತ್ರ, ಇದರಿಂದ ಅವು ಊರ್ಜಿತವಾಗುವುವೇ ಹೊರತು ನಿವಾರಿತವಾಗುವುದಿಲ್ಲ—ಎಂದು. ಈ ಸಂದೇಶವನ್ನು ಪ್ರಸಾರ ಮಾಡಬೇಕೆಂದು ಆಕೆ ಚಮೂ ಸಂಸ್ಥೆಯ ಸಭಾಮಂದಿರಕ್ಕೆ ಬರುತ್ತಿದ್ದಾಳೆ. ಮಾಲರೂ ಅವನ ಸ್ನೇಹಿತರೂ ಕಟ್ಟಿಸಿಕೊಟ್ಟದ್ದು ಆ ಮಂದಿರ. ಅದರಲ್ಲಿ ಒಳ್ಳೆಯ ವಾದ್ಯಮೇಳ ವಿಶೇಷಕ್ಕೆ ಏರ್ಪಾಡು ಇರುತ್ತದೆ. ಅವಳು ಹಾಡತೊಡಗಿದರೆ ಅವುಗಳ ಸಮ್ಮಿಳಿತ ಸ್ವರ ಆಕೆಯ ಧ್ವನಿಯನ್ನು ಮುಳುಗಿಸುತ್ತದೆ. ಚಳಿಯಲ್ಲಿ ಶ್ರಮಪಟ್ಟು ಹಾದಿಬೀದಿ ತುಳಿದು ಸುಸ್ತಾಗಿ ಬಂದ ಆಕೆ ನೆಲದ ಮೇಲೆ ಬಿದ್ದು ಪ್ರಾಣಬಿಡುತ್ತಾಳೆ. ಮಾಂಸವಿಕ್ರಯಿ ಶ್ರೀಮಂತರ ಪ್ರತಿನಿಧಿಗಳು ಉದ್ಗಾರಗಳನ್ನು ತೆಗೆದು ವೀರಯೋಧಳು ಆಕೆ ; ದೇವರ ಸೇವೆಯಲ್ಲಿ ಪರಮ ತ್ಯಾಗವನ್ನು ಮಾಡಿದವಳು ಎಂದು ಪ್ರಶಂಸೆ ಮಾಡುತ್ತಾರೆ. ಷಿಕಾಗೊ ಪಟ್ಟಣದ ಚಿತ್ರಣವಾಗಿ ಇಲ್ಲಿನ ಚಿತ್ರ, ಕಲ್ಪನೆ ಅಸಮರ್ಪಕ ; ಆದರೆ ದಾನಿಗಳಿಗೂ ದಾನವನ್ನು ಸ್ವೀಕರಿಸುವವರಿಗೂ ನಡುವೆ ಬೆಳೆವ ಸಂಬಂಧವನ್ನು ಕುರಿತ ಬಹುದೊಡ್ಡ ವ್ಯಂಗ್ಯ ವಿಡಂಬನೆ ಈ ನಾಟಕ ಎನ್ನುತ್ತಾರೆ ಕೆನ್ನೆತ್ ಟೈನನ್. ಮೇಜರ್ ಬಾರ್ಬರದಲ್ಲಿ ರಮ್ಮಿ, ಸ್ನಾಬಿ ಪ್ರೈಸ್, ಬಿಲ್ ವಾಕರ್ ಮುಂತಾದವರ ಪ್ರಸಂಗದಲ್ಲಿ ಕಾಣಿಸುವ ಕಾಣ್ಕೆಯ ಜ್ಞಾತಿ ಚಿತ್ರ ಇಲ್ಲಿಯದೂ ಒಂದು ರೀತಿ. ಷಾ ನಾಟಕದಲ್ಲಿ ಸಾಧಿತವಾಗುವ ಪರಿಣಾಮ ದೊಡ್ಡ ಹಿತ, ಮಂಗಳ. ಬಾರ್ಬರ ಮನಸ್ಸು ಭಂಗದಿಂದ, ನಿರಾಸೆ ನಿರುತ್ಸಾಹಗಳಿಂದ ಚೇತರಿಸಿಕೊಂಡು ಉತ್ತಮ ಲೋಕಹಿತಕಾರ್ಯದ ಕಡೆ ತಿರುಗಲು ಅವಕಾಶ ಮಾಡಿಕೊಡುವ ಉತ್ಸಾಹ ಕ್ರಿಯೆ, ಕಾಣ್ಕೆ ಆಗುತ್ತದೆ. ಬ್ರೆಕ್ಟ್ ನಾಟಕದ ನೋವು ನಿರಾಸೆ ನೋವುಗಳಿಗೆ ಬದಲು ಹೆಚ್ಚು ಮೃದುವಾಗಿ ಇಲ್ಲಿ ಸಕ್ರಿಯಾತ್ಮಕವಾಗುತ್ತದೆ. ಹೀಗೆ ಒಂದು ವಿಧಾನ ಚಿತ್ರಣದಿಂದ ಲೋಕಹಿತದ ಕಡೆಗೆ ಒಲವು ಪ್ರವೃತ್ತಿ ರೀತಿ ನೀತಿ ಹರಿವಂತೆ ಮಾಡುವ ಕ್ರಿಯಾಪ್ರಸರ ಈ ನಾಟಕ.

ಇಲ್ಲಿನ ಮುಖ್ಯಪಾತ್ರಗಳು ಬಾರ್ಬರ, ಅಂಡರ್‌ಷಾಫ್ಟ್. ಮಗಳು ತಂದೆ ಇಬ್ಬರೂ ಒಂದೊಂದು ರೀತಿ, ಧೀರರು. ಬಾರ್ಬರಾನ ಕಂಡರೆ ಮೊದಲಿಂದಲೂ ತಂದೆಗೆ ಪ್ರೀತಿ, ಪಕ್ಷಪಾತ. ಸ್ಟೀವನ್ ಕಂಡರೆ ಅವನು ತನ್ನ ಮಗನೇ ಅಲ್ಲ, ಹೇಗೊ ತಾಯಿ ತಂದೆಯರನ್ನು ಪುಸಲಾಯಿಸಿಕೊಂಡು ಹುಟ್ಟಿಬಂದಿರಬೇಕು, ನನಗೆ ಆತನಲ್ಲಿ ವಿಶ್ವಾಸವಿಲ್ಲ ಎಂದು ತಂದೆ ನುಡಿಯುತ್ತಾನೆ. ಮಗನಿಗೆ ವಿದ್ಯೆ ಇದೆ; ಲೋಕ ಸಂಚಾರ ಮಾಡಿದ್ದಾನೆ; ಆದರೆ ಅಂಡರ್‌ಷಾಫ್ಟ್ ಸಂಪ್ರದಾಯಕ್ಕೆ ಚ್ಯುತಿಬಾರದಂತೆ ಕಾನೂನು ಬಾಹಿರನಾಗಿ ಹುಟ್ಟಿದ ಅಜ್ಞಾತನಿಗೆ ಆ ಉದ್ಯೋಗವನ್ನು ಒಪ್ಪಿಸತಕ್ಕದ್ದು—ಎಂಬ ಸಂಪ್ರದಾಯದ ವಿಧಿಯನ್ನು ಆ್ಯಂಡ್ರೂ ಪಾಲಿಸಬೇಕಾದ್ದಿದೆ. ಮಗನನ್ನು ಹೊರಗಿರಿಸುತ್ತಾನೆ. ಬ್ರಿಟಿಷ್ ಜನತೆಯ ಮೇಲ್ಪಟ್ಟ ವರ್ಗಗಳವರ ಸಮಸ್ತ ಪೂರ್ವಗ್ರಹಗಳೂ ಅಭಿಮಾನಗಳೂ ಎಲ್ಲ ಸಾಂಪ್ರದಾಯಿಕ ನಂಬಿಕೆಗಳೂ ಆತ್ಮಗೌರವಗಳೂ ಸ್ಟೀವನ್ನಲ್ಲಿ ಇವೆ. ಅವನು ವ್ಯಾಪಾರಿಯಾಗಲಿ, ಫಿರಂಗಿ ಕಾರ್ಖಾನೆಯ ಒಡೆಯನಾಗಲಿ ಆಗಲು ಇಷ್ಟಪಡುವವನಲ್ಲ. ತಾಯಿಗೆ ಅವನಲ್ಲಿ ಮೋಹ, ಅಭಿಮಾನ ಇದ್ದರೂ ಅವಳಿಗೂ ಗೊತ್ತಿದೆ ಅವನ ಲೋಪದೋಷಗಳು ಯಾವುವು ಎಂಬುದು. ಈ ನಾಟಕದ ಕ್ರಿಯೆ ರೂಪಗೊಳ್ಳುತ್ತಿರುವಾಗ ಅವನ ಮನೋಲಕ್ಷಣಗಳು ಎಂಥವು ಎಂಬುದು ಆಕೆಗೆ ಮನವರಿಕೆಯಾಗುತ್ತದೆ. ಅಷ್ಟು ದೊಡ್ಡ ಐಶ್ವರ್ಯ ಮಗನಿಗಲ್ಲದೆ ಯಾವನೊ ಯಃಕಶ್ಚಿತ್ ತಬ್ಬಲಿಗೆ—ಬೀದಿಯ ಭಿಕಾರಿಯನ್ನು ದತ್ತಕ ತೆಗೆದುಕೊಂಡು ಆ್ಯಂಡ್ರೂ ಅಂಡರ್‌ಷಾಫ್ಟ್ ಎಂಬ ಹೆಸರುಕೊಟ್ಟು ತಂದೆ ಅವನಿಗೆ ವಹಿಸುವುದು—ಎಂಬುದು ಆಕೆಗೆ ರುಚಿಸದು. ಯಾವಾಗ ಸ್ಟೀವನ್ ಬಯಕೆ ಅಂಡರ್‌ಷಾಫ್ಟ್ ಉದ್ಯಮಕ್ಕೆ ವಿರುದ್ಧವೆಂದು ತಿಳಿಯುತ್ತದೆಯೊ ತಂದೆಯ ಮನಸ್ಸು ಹಗುರಾಗಿ ಅವನಿಗೆ ಬೇಕಾದಂಥ ಜೀವನವೃತ್ತಿಯ ಏರ್ಪಾಡು ಮಾಡಿಕೊಡಲು ಒಪ್ಪುತ್ತಾನೆ. ಮಗನ ಪುರೋಭಿವೃದ್ಧಿ ಸಾಧಿಸುವಂತೆ ಅವನನ್ನು ಸ್ಥಾಪಿಸುವ ಇಚ್ಛೆ, ಹೊಣೆ ತಂದೆಗೆ ಉಂಟು. ಈ ಸಂಬಂಧದಲ್ಲಿ ಷಾ ವಿನೋದವನ್ನು ನೋಡಬೇಕು. ಚರ್ಚ್, ಕಲೆ, ನಟವೃತ್ತಿ, ರಾಜಕೀಯ, ಸರ್ಕಾರಿ ಅಧಿಕಾರ ಮಂಡಲ, ವೃತ್ತಪತ್ರಿಕಾ ಪ್ರಪಂಚ ಮುಂತಾದವೆಲ್ಲದರ ಮೇಲೂ ಧಾರಾಳವಾಗಿ ಟೀಕೆ ಎತ್ತಿ ನುಡಿಯುವ ಅವಕಾಶ ಬರುತ್ತದೆ. ಸ್ಟೀವನಿಗೆ ಕೋಪ ಬರುವಂತಹದು ಅದೆಲ್ಲ. ವಸ್ತುಸ್ಥಿತಿಯನ್ನರಿತ ತಂದೆಯ ಮಾತಿನ ಮೇಲೆ ಇವನ ಮಾತಿಗೆ ಬೆಲೆಯಿಲ್ಲವಾಗುತ್ತದೆ. ಇಷ್ಟಾದರೂ ಬರಿಯ ಪುಕ್ಕಲು ಅಥವಾ ಗುಬ್ಬಿಯಂಥ ಜೀವ ಅವನದಲ್ಲ. ಮೂರನೆಯ ಅಂಕದಲ್ಲಿ ಫಿರಂಗಿ ಕಾರ್ಖಾನೆಗೆ ಭೇಟಿ ಕೊಟ್ಟಾದ ಮೇಲೆ ಸ್ಟೀವನಿಗೂ ಗೊತ್ತಾಗುತ್ತದೆ—ತಂದೆಯ ದಕ್ಷತೆ, ಸಾಹಸ, ವ್ಯವಸ್ಥಾಪಕ ಶಕ್ತಿ, ಶಿಸ್ತು ಎಂಥವು ಎಂಬುದು. ಸ್ಟೀವನ್ ಮನಸ್ಸು ಹೇಗೆ ವಿರೋಧದಿಂದ ಮೆಚ್ಚಿಕೆ ಸೌಹಾರ್ದಗಳಿಗೆ ತಿರುಗುತ್ತದೆ ಎಂಬುದರ ರೂಪಣವೂ ಈ ನಾಟಕ ಸಾಧಿಸುವ ಇನ್ನೊಂದು ವಿಶೇಷ.

ತಾಯಿ ಬ್ರಿಟೊಮಾರ್ಟ್ ಮೊದಲಿಂದಲೂ ಒಂದೇ ತರದವಳು, ಆಕೆಯದು ಹೆಣ್ಣು ಸ್ವಾರ್ಥ. ತನ್ನ, ತನ್ನ ಕುಟುಂಬದ, ತನ್ನ ತಂದೆಯ ಮನೆತನದ ಮೇಲೆ ಅತ್ಯಭಿಮಾನ ; ತನ್ನ ಮಕ್ಕಳು, ಅವರಿಗೆ ಗೊತ್ತಾದ ವರಗಳು, ಯಾರೂ ಅವಳನ್ನು ಮೀರ ತಕ್ಕದ್ದಲ್ಲ. ಮೀರದಂತೆ ನೋಡಿಕೊಳ್ಳುತ್ತಾಳೆ. ಗಂಡನಲ್ಲಿಯೂ ವಿಶ್ವಾಸ, ಪ್ರೀತಿ, ಗೌರವ ಇಲ್ಲದಿಲ್ಲ. ಆದರೆ ಮನಸ್ಸು ರೀತಿ, ಆಡುವ ಮಾತು ಇವುಗಳಲ್ಲಿನ ವ್ಯತಿರೇಕಗಳಿಂದಾಗಿ ಈ ಸಂಸಾರದಲ್ಲಿ ತಂದೆಗೆ ನೆಲೆಯಿಲ್ಲದಂತೆ ಆಗಿ ತಾಯ ಪ್ರಾಧಾನ್ಯಕ್ಕೆ ಅದು ಒಳಪಟ್ಟಿದೆ. ಇಂಥ ಹೆಣ್ಣೊಡನೆ ಸಂಸಾರ ನಿಜವಾಗಿ ಕಷ್ಟವೇ. ತನಗೂ ಮಕ್ಕಳಿಗೂ ವರ್ಷಾಶನ ಗಂಡನಿಂದಲೇ ದೊರೆಯುತ್ತಿದೆ. ಇನ್ನಷ್ಟು ಅದು ಹೆಚ್ಚಬೇಕಾಗಿರುವ ಪ್ರಸಂಗದಿಂದ ಇಲ್ಲಿನ ಕಾರ್ಯ ಆರಂಭವಾಗುತ್ತದೆ. ಪರಿಣಾಮ ಕ್ರಾಂತಿಕಾರಿಯಾಯಿತು.

ಕುಲೀನರೆಂಬವರ ಮನಸ್ಸಿನ ಕಾರ್ಪಣ್ಯಗಳೆಲ್ಲ, ದರ್ಪ ಅಹಂಕಾರಗಳೆಲ್ಲ ಆಕೆಯಲ್ಲಿವೆ. ಮನೆಯಲ್ಲಿ ಉಳಿಯಬೇಕಾದ ಸಂಪತ್ತು ಬೇರೆಯವರ ಕೈಗೆ ಹೋಗುವುದು ಆಕೆಗೆ ಇಷ್ಟವಿಲ್ಲವಾಗಿ ಸ್ಟೀವನ್ನಿಗೆ ತಪ್ಪಿ ಬಾರ್ಬರಾಗೆ, ಬಾರ್ಬರಾ ಕಾರಣದಿಂದ ಕಸಿನ್ಸಿಗೆ ಬರುವುದಾದರೂ ಒಪ್ಪಿತವೇ. ಆಕೆಗೆ ಬೇಕಾದ್ದು ಕಾರ್ಖಾನೆಯ ವಸತಿಗಳಲ್ಲಿ ಪ್ರತಿಷ್ಠೆ ; ಅಲ್ಲಿನ ಸಮಸ್ತ ಸುಖಗಳ ಅಧಿಕಾರದ ಭೋಗ...ಶಾರಾ ಲೋಮ್ಯಾಕ್ಸ್ ಹೆಚ್ಚು ಬೆಲೆಯುಳ್ಳ ರಂಜನೆಯ ವ್ಯಕ್ತಿಗಳಲ್ಲ. ಆದರೆ ಲೋಮ್ಯಾಕ್ಸಿನ ನಿಷ್ಪ್ರಯೋಜಕತೆಯಲ್ಲೂ ಒಂದೊಂದು ವೇಳೆ ಪರಿಸ್ಥಿತಿಯ ಒಂದು ಮಿಣುಕು ದರ್ಶನ ಕಾಣುತ್ತದೆ. ಕಸಿನ್ಸ್ ಹೇಳಿ ಕೇಳಿ ಸ್ವಪ್ರಯೋಜನಕ್ಕಾಗಿ, ಬಾರ್ಬರ ಮೇಲಿನ ಪ್ರೀತಿಯಿಂದ ಹೇಗೊ ಅವಳನ್ನು ಗೆದ್ದುಕೊಳ್ಳಬೇಕೆಂದು ಈ ಮನೆಗೆ ಸೇರುತ್ತಾನೆ. ಅವನು ಆಳದಲ್ಲಿ ತುಂಬಾ ಜಾಣ, ಪ್ರಯೋಜನ ಬಲ್ಲವನು. ಅವಳನ್ನು ಬಯಸಿಯೇ ಚಮೂಗೆ ಸೇರಿ ಅಲ್ಲಿ ತಮಟೆ ಬಾರಿಸಲು ಒಪ್ಪಿದ್ದುದು. ಗ್ರೀಕ್ ಶಿಕ್ಷಣ ದೊರಕಿಸಬಲ್ಲ ಎಲ್ಲ ತಿಳಿವಳಿಕೆಯೂ ಅವನಿಗಿದೆ. ತೀಕ್ಷ್ಣವಾದ ಬುದ್ಧಿ ಶಕ್ತಿಯಿದೆ ; ಹಟವಿದೆ ; ಕಾರ್ಯಸಾಧನೆಗೆ ಬೇಕಾಗುವ ಹಟ—ಅದಕ್ಕಾಗಿ ಏನನ್ನು ಬೇಕಾದರೂ ಸಂಕೋಚ ಪಡದೆ ಮಾಡಬಹುದೆನ್ನುವ, ಮಾಡಬಲ್ಲೆನೆನ್ನುವ ಇಚ್ಛೆಯಿದೆ. ಅವನನ್ನು ಗಿಲ್ಬರ್ಟ್ ಮರ್ರೆಯವರ ಹೋಲಿಕೆಯಿಂದಲೂ ಲೇಡಿ ಬ್ರಿಟೊಮಾರ್ಟನ್ನು ಆತನ ಅತ್ತೆಯ ಮಾದರಿಯಿಂದಲೂ ರೂಪಿಸಿದುದೆನ್ನುತ್ತಾರೆ. ನಾಟಕದಲ್ಲಿ ಕಸಿನ್ಸ್ ಹೇಳುವ ಯೂರಿಪಿಡೇಸ್ ಕೃತಿಯ ಭಾಷಾಂತರ ಮರ್ರೆಯದು...ಕಸಿನ್ಸ್ ಹುಟ್ಟು ಇಂಗ್ಲಿಷ್ ಕಾನೂನಿನ ದೃಷ್ಟಿಯಲ್ಲಿ ಕ್ರಮಬಾಹಿರ ; ತಂದೆಗೆ ಮೊದಲ ಹೆಂಡತಿ ಸತ್ತಮೇಲೆ ನಾದಿನಿಯನ್ನು ಅವನು ಮದುವೆಯಾಗಿ ಹುಟ್ಟಿದ್ದನೆಂಬುದೂ ಅವನಲ್ಲಿ ಅಂಡರ್‌ಷಾಫ್ಟ್‌ಗೆ ವಿಶ್ವಾಸ ಉಂಟಾದುದೂ ಉತ್ತರಾಧಿಕಾರಿಯನ್ನಾಗಿ ಮಾಡಿಕೊಳ್ಳುವ ತಂತ್ರದಂತೆ ಅಭಿಲಾಷೆಗೆ ಇಂಬು ಕೊಡುತ್ತದೆ. ಆ್ಯಂಡ್ರೂ ತನ್ನನ್ನು ಮೆಚ್ಚಿಕೊಳ್ಳುವಷ್ಟು ಚುರುಕನ್ನು ತೋರಿಸುತ್ತಾ

ನಾಗಿ ಕಸಿನ್ಸನಂಥವನಿಗೆ ಕಾರ್ಖಾನೆಯನ್ನು ವಹಿಸಲು ಆ್ಯಂಡ್ರೂಗೆ ಸುಲಭವಾಗುತ್ತದೆ. ಬಾರ್ಬರಾ—ಕಸಿನ್ಸ್ ಅಚ್ಚಳಿಯದ ಪ್ರೀತಿ ಇದಕ್ಕೆ ಪರಮಸಾಧಕ. ಏನೇ ಆಗಲಿ ಬಾರ್ಬರಳನ್ನು ಪಡೆಯುತ್ತೇನೆ ಎಂಬುದು ಅವನ ನಿರ್ಧರವಾದರೆ—ಕಾರ್ಖಾನೆಯ ಶ್ರಮಜೀವಿಗಳ ದಿನಜೀವನದ ವ್ಯವಸ್ಥೆಗಳನ್ನು ಕಂಡು ಅಲ್ಲಿ ತನ್ನ ಕಾರ್ಯದ ವಿಸ್ತರಣವನ್ನು ಬೆಳಸಬೇಕೆಂಬ ಪ್ರವೃತ್ತಿ ಆಕೆಗೆ. ಕಸಿನ್ಸನ ಅದೃಷ್ಟದ ಹೊಸಮುಖವೊಂದು ಗೊತ್ತಾಗಿ ಆತನು ಅಂಡರ್‌ಷಾಫ್ಟ್ ಕಾರ್ಖಾನೆಯ ಉತ್ತರಾಧಿಕಾರಿಯಾಗಲು ಒಪ್ಪಿದುದು ಅವಳಿಗೆ ಸಮಾಧಾನ. ಅವಳ ಅಭಿಪ್ರಾಯವನ್ನು ಕೇಳದೆ ಈ ಕೆಲಸವನ್ನು ಒಪ್ಪಿಕೊಂಡುದು ಕಸಿನ್ಸ್ ಕೈಕೊಂಡ ಸಾಹಸ. ಅವನು ಒಪ್ಪಿಯಾನೆಂಬ ನಂಬಿಕೆ ಒಳಗೆ ಇದ್ದರೂ ಅವನೊಪ್ಪದಿದ್ದರೆ ಒಪ್ಪುವವನನ್ನು ತಾನು ಮದುವೆಯಾಗಲಿದ್ದೆನೆಂಬುದು ಅವಳ ಮನಸ್ಸು ; ಮಾತು. ಇದು ಮೂರಿಚ್ಛೆಗಳು ಹೊಂದುವ, ಫಲಿಸುವ ಸಂದರ್ಭ. ಪರಿಣಾಮದಲ್ಲಿ ಅಂಡರ್‌ಷಾಫ್ಟ್ ಉದ್ಯಮ ಪರ್ಯಾಯವಾಗಿಯಾದರೂ ಮಗನಿಗಲ್ಲದಿದ್ದರೆ ಮಗಳು–ಅಳಿಯನಿಗೆ ಉಳಿಯುವಂತಾಗುತ್ತದೆ. ಇದು ಲೇಡಿ ಬ್ರಿಟೊಮಾರ್ಟಿಗೆ ಸಂತೋಷ ತರುವ ಸಂಗತಿ.

ಇಲ್ಲಿನ ತರ್ಕಗಳ ವಿಚಿತ್ರವನ್ನೂ ಸುಸಂಬದ್ಧತೆಯನ್ನೂ ಒಪ್ಪುವವರು ಒಪ್ಪಬಹುದು, ಒಲ್ಲದವರು ಬಿಡಬಹುದು. ಅವುಗಳ ಜೊತೆಗೆ ಇಲ್ಲಿ ಒಲವು, ಪಕ್ಷಪಾತಗಳೂ ಬಲವಾಗಿ ಕಾರ್ಯಮಾಡುತ್ತವೆ. ಲೋಕವನ್ನು ಅರಿತವನು ಅಂಡರ್‌ಷಾಫ್ಟ್. ಧನಿಕ, ಪ್ರಭಾವಶಾಲಿ, ತನ್ನ ಭಾಗಸ್ಥನನ್ನು ಕೈಯಲ್ಲಿಟ್ಟುಕೊಂಡಿದ್ದಾನೆ. ಇಂಗ್ಲಂಡಿನ ರಾಜ್ಯಶಕ್ತಿಯ ಬೆಂಬಲವಾಗಿ ಇಂಥ ಫಿರಂಗಿ ತಯಾರಕನ ಶಕ್ತಿ ಹೇಗೆ ನಡೆಯುತ್ತದೆ ಎಂಬುದನ್ನು ಅಂಡರ್‌ಷಾಫ್ಟನ ಅಹಂತೆಯ ಉದ್ರೇಕದ ಮಾತು ನುಡಿಯುತ್ತದೆ.[16] ತನ್ನನ್ನು ದೂರವಿಟ್ಟಿರುವ ಹೆಂಡತಿ, ಮಕ್ಕಳ ಲಾಲನೆಪಾಲನೆಯಲ್ಲಿ ವಿಮನಸ್ಕನಾಗದಿರುವವನು ಅವನು. ಯಾರ ಯಾರ ಯೋಗ್ಯತೆ ಎಂಥೆಂಥದೆಂಬುದು ಗೊತ್ತಿದ್ದರೂ ಆ ಎಲ್ಲರ ಸುಖಸಂತೋಷಗಳಿಗೂ ತನ್ನ ಕೈಯಲ್ಲಾದುದನ್ನು ಮಾಡಲುಳ್ಳವನು. ತನ್ನ ಕಾರ್ಖಾನೆಯ ಹಿತವನ್ನು ಸಾಧಿಸುವುದರಲ್ಲಿ ವಜ್ರನಿಷ್ಠೆ, ಕುಶಲತೆ, ಮಾನವ ಸ್ವಭಾವಜ್ಞತೆ ಅವನವು. ಸಮಸ್ತ ನಾಶಕಶಕ್ತಿಯೂ ತನ್ನ ಕೈಯಲ್ಲಿರುವಾಗ, ಲೋಕದ ಜನ ಅದನ್ನು ಅಧರ್ಮಕ್ಕೆ ದುಡಿಸುತ್ತಿರುವಾಗ, ಬಳಸುವವರು ಲೋಕದ ಕೆಡುಕನ್ನು ನಾಶಮಾಡಿ ಒಳ್ಳಿಯದಕ್ಕೆ ಅದನ್ನು ಬಳಸುವರಾದರೆ ತನಗೂ ಸಂತೋಷವೇ ಎಂದು ನುಡಿಯುತ್ತಾನೆ. ಬಡತನವನ್ನು ಸ್ವಂತ ಬಾಳಲ್ಲಿ ಅನುಭವಿಸಿ ಅದರ ನಿರ್ಮೂಲನಕ್ಕಾಗಿ

16. ಮೊದಲ ಮಹಾಯುದ್ಧದಲ್ಲಿ ಈ ಫಿರಂಗಿ ತಯಾರಕರ ಪ್ರಭಾವ ಇಂಗ್ಲಂಡಲ್ಲಿ ಜರ್ಮನಿಯಲ್ಲಿ ಕ್ರುಪ್ಸ್, ಸ್ಟೈನ್ಸ್ ಅವರ ಪ್ರಭಾವ, ಅಮೇರಿಕಾದಲ್ಲಿ ಪೆಂಟಗನ್ ಎಂಬ ಸೈನ್ಯ ಶಾಖೆಯ ಪ್ರಭಾವ ಎಷ್ಟು ಎಂಬುದೂ ಹಾಗೆಯೇ. ಎಷ್ಟೆಂಬುದನ್ನು ಉದಾ. ನಾರ್ಮನ್ ಏಂಜೆಲ್ ಅವರು ತಮ್ಮ The Great Illusion ಅಲ್ಲಿ ವಿವರಿಸಿರುವುದು ಆಮೇಲೆ ವ್ಯಕ್ತಪಟ್ಟ ಸಂಗತಿ.

ಶ್ರಮಿಸುವವನು. ಬಾರ್ಬರ ದೃಷ್ಟಿಯಿಂದ ಈ ಎಲ್ಲವನ್ನೂ ನೋಡಬೇಕೆಂಬುದು ಷಾ ಮನಸ್ಸು. ಸುಖಭೋಗಗಳನ್ನು ತ್ಯಾಗಮಾಡಿ ಬಡವರ ನೆರವಿಗಾಗಿ ಮುಕ್ತಿಚಮೂ ಸೇರಿ ಶಿಸ್ತು ಕಲಿತು ಧರ್ಮನಿಷ್ಠೆಗಳಲ್ಲಿ ಸ್ವಲ್ಪಮಾತ್ರವೂ ಎಚ್ಚರತಪ್ಪದೆ ಇದ್ದವಳು ಅವಳು. ಹಣಕ್ಕಾಗಿ ಚಮೂ ದಾರಿತಪ್ಪುತ್ತಿದೆ, ಅಯೋಗ್ಯ ದಾನವನ್ನು ಸ್ವೀಕರಿಸುತ್ತಿದೆ ಎಂದು ಕಂಡಾಗ ಅದನ್ನು ಬಿಟ್ಟು ಹೊಸತೊಂದು ಅವಕಾಶ ಇನ್ನಷ್ಟು ಉತ್ತಮವಾಗಿ ಕಣ್ಣಿಗೆ ಬಿದ್ದಾಗ ಆ ಅವಕಾಶವನ್ನು ಉಪಯೋಗಿಸಿಕೊಂಡು ತನ್ನ ಲೋಕ ಹಿತನಿಷ್ಠೆಯನ್ನು ಮುಂದುವರಿಸಬೇಕೆಂದು ನಿಂತ ಅಭಿಮಾನಶಾಲಿ. ತಾಯಿಗೆ ಬೇಕಾದದ್ದು ಸುವ್ಯವಸ್ಥಿತ ವಸತಿಗೃಹಗಳ ಸಂಪತ್ತು, ಭೋಗಗಳ ಮೇಲೆ ಅಧಿಕಾರ ; ಇವಳಿಗೆ ಬೇಕಾದುದು ಆ ಜನರ ಹೃದಯಗಳ, ಆತ್ಮಗಳ ಪರಿಷ್ಕಾರ, ಮುಕ್ತಿ ; ಆ ಬಗೆಗೆ ಸೇವೆ.

* * * *

ಷಾ ಬರಿ ವಾದಲೋಲುಪ, ಮೇಧಾವಿ, ಇವನು ನಾಟಕಕಾರನೇ ಅಲ್ಲ ಎಂದು ವಾದಿಸುವವರಿಗೂ ಗೊತ್ತು, ಆತನನ್ನು ತೆಗೆದುಹಾಕಲಾಗದು—ಆತನ ಸಂಭಾಷಣೆಗಳಾಗಲಿ, ಸನ್ನಿವೇಶಗಳಾಗಲಿ, ವ್ಯಕ್ತಿಗಳಾಗಲಿ ಪೂರ್ತಿ ಮಾನವ ಸ್ವಭಾವವನ್ನು ಕಾಣಿಸದಿದ್ದರೂ ಹಲವಾರು ಬಗೆಯ ಭಕ್ತಿ, ವಿಶ್ವಾಸ, ರೀತಿಗಳ ಪ್ರತಿನಿಧಿಗಳು ; ಆತನ ಪಾತ್ರಗಳು ಆಯಾ ಮಟ್ಟದಲ್ಲಿ, ಜೀವಂತ ; ಜ್ವಲಂತ ಎಂದು. ಏಕೆಂದರೆ ಇವು ಜೀವಕಳೆ ಕೊಟ್ಟು ನಾಟಕದ ಕ್ರಿಯಾ ವಿಧಾನವನ್ನು ರೂಪಿಸುತ್ತವೆ. ಪಾತ್ರಗಳು ಸನ್ನಿವೇಶಗಳನ್ನು ಬೆಳಗುತ್ತವೆ.

ನಾಟಕಗಳನ್ನು ಬರೆಯುವುದು ತನಗೆ ಸಹಜ ಪ್ರವೃತ್ತಿ ; ಇಷ್ಟ ; ಜೀವಿತದ ಯಾವ ಕಾಲದಲ್ಲಿಯೇ ಆಗಲಿ, ಜನರನ್ನೂ ದೃಶ್ಯಗಳನ್ನೂ ನಿರ್ಮಾಣ ಮಾಡದಿದ್ದ ಕಾಲವೇ ತನ್ನ ನೆನಪಿನಲ್ಲಿ ಇಲ್ಲ ಎನ್ನುತ್ತಾರೆ ಷಾ. ವಿಮರ್ಶಕರಿಗೆ ಬೇಕಿಲ್ಲ, ಕೈಹಿಡಿದ ಹೆಂಡತಿಗೆ ಈತನು ನಾಟಕಗಳನ್ನು ಬರೆಯುವುದೂ ನಟರೊಡನೆ ಸೇರುವುದೂ ಇಷ್ಟವಿಲ್ಲ. ಆದರೂ ಅವನ್ನು ಬರೆಯದಿದ್ದರೆ I should bust—ಸಿಡಿದು ಬೀಳಬೇಕಷ್ಟೇ—ಎಂದು ನಾಟಕ ನಿರ್ಮಾಣದಲ್ಲಿ ತೊಡಗಿದವರು ಷಾ. ತನಗೆ ಕಥೆಗಾರಿಕೆಯ ಶಕ್ತಿ ಇಲ್ಲ ಎನ್ನುತ್ತಾರೆ.17 ಘಟನೆಗಳು ತನಗೆ ಮೊದಲು ದೃಶ್ಯಗಳಂತೆ ಕಲ್ಪನೆಯಲ್ಲಿ ಹುಟ್ಟುತ್ತವೆ ; ಅವು ಕ್ರಿಯಾವಂತವಾಗಿರುತ್ತವೆ. ಆ ವ್ಯಕ್ತಿಗಳ ಸಂಭಾಷಣೆ ತನ್ನ ಮನಸ್ಸಿಗೆ ಕಟ್ಟಿರುತ್ತದೆ ; ಅವು ಅಂಥ ಕ್ಷಣಗಳಲ್ಲಿ ಸ್ವಂತ ಜೀವಗುಣ ಶಕ್ತಿಗಳಿಂದಲೇ ಬೆಳೆದು ತಮ್ಮ ಇಷ್ಟಾರ್ಥಗಳನ್ನು ನೆರವೇರಿಸಿಕೊಳ್ಳುತ್ತವೆ ಎಂದಿದ್ದಾರೆ. ಆದುದರಿಂದಲೇ ನಾಟಕಕಾರ

17. The Irrational Knot, The Unsocial Socialist ಮುಂತಾದ 3-4 ಕಾದಂಬರಿಗಳನ್ನು ಮೊದಮೊದಲೇ ಬರೆದು ಅವರು ಪ್ರಕಟಿಸಿದರು. ತನ್ನ ಕೀರ್ತಿಸ್ಥಾನ, ಬಲ ಸಾ ನ ಅಲ್ಲಿಲ್ಲವೆಂಬುದು ಅವರಿಗೆ ಮನವರಿಕೆಯಾಗಿರಬೇಕು.

ರಾಗಿಯೇ ವೃತ್ತಿ, ಪ್ರವೃತ್ತಿ ಅವರದು. ಸಂಭಾಷಣೆಯಲ್ಲಿನ ಆಟ, ಪೆಟ್ಟು, ರಂಜನೆಗಳನ್ನು ಕಂಡರೆ ಇದೆಷ್ಟು ನಿಜವೆಂಬುದು ಗೊತ್ತಾಗುತ್ತದೆ. ಅಲ್ಲಿಲ್ಲ ನುಡಿತದಿಂದ ಮಾತಿನಿಂದ ಮಾತಿಗೆ ಕಿಡಿಹಾರುತ್ತದೆ. ಮಾತಿನ ಶಬ್ದ ಇನ್ನೊಂದಕ್ಕೆ ದನಿ ಹಾಯಿಸುತ್ತದೆ. ಇಂಥದೇ ನಾಟಕಕ್ಕೆ ವಸ್ತುವಾಗಬೇಕು, ಇಂಥ ಪಾತ್ರಗಳು, ಅಭಿಪ್ರಾಯಗಳೇ ಸರಿ ಅಥವಾ ಅಲ್ಲ ಎಂಬ ಚರ್ಚೆ ವಿಮರ್ಶೆಯ ಸೂಕ್ಷ್ಮಗಳಿಗೂ ಸಂಬಂಧಿಸಿದ್ದು. ರೂಪಕ ವಿಧಾನವನ್ನು ತಮ್ಮ ಮಾರ್ಗವಾಗಿ, ಪ್ರಕಾರವಾಗಿ, ಪ್ರಯೋಗವಾಗಿ, ಮಾಡಿಕೊಂಡು ಇಷ್ಟು ಸನ್ನಿವೇಶಗಳಲ್ಲಿ ಇಷ್ಟು ತೆರನಾದ ಜೀವನ ವಿಮರ್ಶೆ ಮಾಡಿದ ನಾಟಕಕಾರರು ವಿರಳ. ದೀರ್ಘವಾದ ಅವರ ನಾಟಕಗಳಿಗೆ ಪ್ರಥಮ ವರ್ಗದ ಪ್ರಧಾನ ಮಾನ್ಯತೆ ಸಾಹಿತ್ಯಚರಿತ್ರೆಯಲ್ಲಿ ದೊರಕಲಿ, ದೊರಕದೆ ಹೋಗಲಿ—ನಾಟಕದ ಒಂದು ಪ್ರಕಾರದಲ್ಲಿ ಅವರ ನಿರ್ಮಾಣ ಪರಾಕಾಷ್ಠೆಯನ್ನು ಪಡೆಯುತ್ತದೆ.

ಪಿಗ್‌ಮೇಲಿಯನ್, ಮೇಜರ್ ಬಾರ್ಬರ—ಎರಡು ಬಗೆಯ ವಿಷಯಗಳನ್ನುಳ್ಳವು. ಪ್ರಾಕೃತವಾದ ಒಂದು ಜೀವವನ್ನು ಆರಿಸಿಕೊಂಡು ಶಿಕ್ಷಣವೇತ್ತನೂ ತಜ್ಞನೂ ಆಗಿರುವ ಒಬ್ಬ ಮೇಧಾವಿ ಹೇಗೆ ಅದನ್ನು ಸಂಸ್ಕಾರಗೊಳಿಸಬಲ್ಲ ಎಂದು ಮೆರಸುವ ನಾಟಕ ಪಿಗ್‌ಮೇಲಿಯನ್. ಹುಟ್ಟಲ್ಲ ಮುಖ್ಯ ; ಬಡತನ ಪರಿಸ್ಥಿತಿ ಅಲ್ಲ ಪ್ರಧಾನ ; ತಿದ್ದಿದರೆ ಎಂಥದೂ ಉತ್ತಮ ರೂಪಗೊಳ್ಳಬಲ್ಲದು ; ಬುದ್ಧಿ ಇದ್ದರೆ ಅದನ್ನು ಕುದುರಿಸಬಹುದು. ಅನಂತಾವಕಾಶವುಂಟು ಎಂಬುದನ್ನು ಸ್ಥಾಪಿಸುತ್ತದೆ. ಮಣ್ಣಿಂದ ಶಿಲ್ಪವಾಗುತ್ತದೆ. ರೂಕ್ಷದಿಂದ, ಎಲ್ಲರನ್ನೂ ಮೆಚ್ಚಿಸಬಲ್ಲ ಸಂಸ್ಕಾರಗೊಂಡ ಜೀವಿ ಒಂದು ಹೇಗಾಗುತ್ತದೆ ಎಂಬ ರೂಪಣ ಅಲ್ಲಿನದು. ಅಲ್ಲಿನ ಅದರ ವ್ಯಕ್ತಿತ್ವ ಕಲೆಗಾರನ ಕೈಯಲ್ಲಿ ಬೆಳೆಯುತ್ತದೆ. ಮೇಜರ್ ಬಾರ್ಬರದಲ್ಲಿ ಸಾಮೂಹಿಕವಾಗಿ ದೇಶ ವಿದೇಶಗಳ ಬಹುಮಂದಿಯ ಜೀವನವನ್ನು ಬಡತನದಿಂದ, ಕೊಳೆಯಿಂದ, ಪಾಪಕೃತ್ಯಗಳಿಂದ ವ್ಯಸನಗಳಿಂದ ಮರ್ಯಾದಸ್ಥ ಜೀವನಕ್ಕೂ ಧರ್ಮ ದೃಷ್ಟಿಗೂ ಹೇಗೆ ತಿರುಗಿಸಬಹುದು ಎಂಬ ಶ್ರದ್ಧೆ, ಪ್ರವೃತ್ತಿ, ಕಾರ್ಯೋತ್ಸಾಹ ರೂಪಗೊಳ್ಳುತ್ತವೆ. ಇಂಗ್ಲಂಡಿನ ಶ್ರೀಮಂತ ಸಭೆ ನಿಷ್ಪ್ರಯೋಜಕ, ಅಪಾಯಕರ; ಅದನ್ನು ತೆಗೆದುಹಾಕಬೇಕು ಎಂದು ಕ್ರಾಮ್‌ವೆಲ್ ಹೇಳಿದನಂತೆ. ಅದರಂತೆಯೇ ಬಡತನವೂ ನಿಷ್ಪ್ರಯೋಜಕ, ಅಪಾಯಕರ ; ಸರ್ವಥಾ ನಿವಾರಿತವಾಗಬೇಕಾದುದು, ಬಡವರನ್ನು ಕಂಡರೆ ನನಗೆ ದ್ವೇಷ ಎಂದು ಷಾ ಹೇಳುತ್ತಾರೆ. ಅದರ ಸಂಕಟಗಳನ್ನು ಅನ್ಯಾಯಗಳನ್ನು ಕುರಿತೇ ಅವರು ಬ್ರಿಟಿಷ್ ಅಸೋಸಿಯೇಷನಲ್ಲಿ 1880ರಲ್ಲಿ ಬಾತ್‌ನಗರದಲ್ಲಿ ಮಾತನಾಡಿದ್ದುದು. ನಮ್ಮಂತಿರುವ ಕೋಟ್ಯಂತರ ಜನರನ್ನು ಆಯಾಸಕ್ಕೂ ಸೇದೆಗೂ ಈಡುಮಾಡಿ ನಿರಾಶೆಯಲ್ಲಿ ಅವರು ದುಃಖಪಡುವಂತೆ ಮಾಡಿ ಅಲ್ಲಿನ ಎಲ್ಲ ಕೀಳ್ಮೆ, ಅಪಮಾನಗಳಿಗೂ ಅವರನ್ನು ನೂಕುವ ಮನಸ್ಸು ಲೋಕದಿಂದ ಹೋಗಬೇಕು. ಪಾರ್ಲಿಮೆಂಟುಗಳಿವೆ, ಧಾನ್ಯ ಭಾಂಡಾಗಾರಗಳಿವೆ. ಅವು ಆಗೀಗ ಇಷ್ಟವಿಲ್ಲದ ಮನಸ್ಸಿನಲ್ಲಿ ಇವರ ಉತ್ತಮಿ

ಕೆಗೆ ಅಲ್ಪ ಸ್ವಲ್ಪ ನೆರವು ಕೊಡುತ್ತಾರಾದೀತು. ಆದರೆ ಇಲ್ಲಿ ಧರ್ಮ ನ್ಯಾಯ ವಿಶದ ; ಸ್ಫುಟ. ಇಲ್ಲಿನ ತಪ್ಪು, ಕೇಡು ಅಸಹ್ಯ. ಬಡತನ ನಿವಾರಣೆಯ ಸಂದೇಶವನ್ನು ಸಾರಿ ಅಗತ್ಯವಾದ ನಿರ್ಧಾರಗಳನ್ನು ಮಾಡಲೇಬೇಕು. ಅದರ ನಿವಾರಣೆಗೆ ಏನೇನನ್ನು ಮಾಡಬಹುದೊ ಅದನ್ನು ಮಾಡಲೆಂದೇ ಲೋಕದಲ್ಲಿ ಶ್ರಮಿಸುವ ಎಲ್ಲ ಜನವರ್ಗವನ್ನೂ—ಸೈನ್ಯಗಳವರು, ಪೊಲೀಸಿನವರು ಎಲ್ಲರನ್ನೂ ಕೂಡಿಸಬೇಕು. ಸೋದರಿಕೆಗೆ ಸಮಾನತ್ವಕ್ಕೆ ಅವರ ಮನಸ್ಸು ಪ್ರಿಯವಾಗುವಂತೆ ತಿರುಗಿಸಬೇಕು. ಒಂದೇಟಿಗೆ ಲೋಕದಲ್ಲಿ ಬಡತನವಿಲ್ಲದಂತೆ ಮಾಡಿ, ನ್ಯಾಯವೂ ಧರ್ಮವೂ ಯುಕ್ತಪ್ರತಿಷ್ಠೆಯ ಸ್ಥಾನದಲ್ಲಿ ಪೀಠಸ್ಥವಾಗುವಂತೆ ಮಾಡಬೇಕು ಎಂದರು ಅಲ್ಲಿ. ಷಾ ಮನಸ್ಸಿನಲ್ಲಿ ಈ ಕರುಣೆ, ಈ ಮಾನವತೆ,[18] ಈ ಸೋದರಿಕೆ ಇವೆ. ಅನ್ಯಾಯವನ್ನು ಕಂಡು ಅಸಹನೆ ಇದೆ; ಸತ್ಯವನ್ನು ಅರಿಯುವ ಕಣ್ಣಿದೆ ; ಅದನ್ನು ಸಾಧಿಸಬೇಕೆಂಬ ಹಟವಿದೆ ; ಅದರ ಒಲವು ಪಕ್ಷಪಾತ ಅವರ ಹೃದಯವನ್ನು ವಿಸ್ತಾರವಾಡಿದೆ. ಅನ್ಯಾಯ, ಅರೆತಿಳಿವು, ಅಪ್ರಬುದ್ಧರ ಅಟ್ಟಹಾಸ ಇವನ್ನು ಕಂಡು ಅವರಿಗೆ ಕೋಪ. ಇವನ್ನು ನಿವಾರಿಸಬೇಕೆಂಬುದು ಅವರ ಜೀವನದ ಮುಖ್ಯ ಉದ್ದೇಶ. ಇದಕ್ಕಾಗಿ ಅವರು ಬಳಸಿದುದು ತಮ್ಮ ನಾಟಕಗಳನ್ನು. ಅಲ್ಲಿ ಅವರ ಆಯುಧ ನಗೆ. ಆ ನಗೆಯ ತೀವ್ರ ಮೊನೆ, ನಿಷ್ಕಪಟ ಲೋಕಪ್ರೇಮ, ಯಾವುದನ್ನು ಹೇಳುವುದಕ್ಕೂ ಹಿಂಜರಿಯದ, ಭಯಪಡದ, ಯಾವ ಆಕ್ಷೇಪಣೆಗೂ ಸಗ್ಗದ, ಬಗ್ಗದ ಧೈರ್ಯ—ಲೋಕದಲ್ಲಿ ಸಾಹಿತ್ಯಕ್ಕೆ ಬೆಲೆ ಇರುವವರೆಗೂ ಬೆಲೆ ತಂದುಕೊಡುತ್ತವೆ.

* * * *

ಅಕ್ಷರಶಃ ಷಾ ನಾಟಕಗಳನ್ನು ಕನ್ನಡಿಸುವುದು ಕಷ್ಟ. ಆ ಭಾಷಾರೂಢಿ ನುಡಿಗಟ್ಟುಗಳ ಹತ್ತಿರದಲ್ಲಿ ನಡೆದು ಕನ್ನಡ ಜನಕ್ಕೆ ಪರಿಚಯ ಮಾಡಿಕೊಡಲು ಯತ್ನಿಸಿದ್ದೇನೆ. ಎಷ್ಟು ಯಶಸ್ವಿಯಾಗಿದ್ದೇನೆಯೊ ಕಾಣೆ. ಷಾ ಬರೆದ ಎರಡು ನಾಟಕಗಳನ್ನು ಕನ್ನಡಿಸಲು ಅವಕಾಶ ಮಾಡಿಕೊಟ್ಟ ಷಾ ನಾಟಕದ ನ್ಯಾಸ ರಕ್ಷಣಾಧಿಕಾರಿಗಳಿಗೆ–Society of Authorsಗೆ ನಾನು ಕೃತಜ್ಞನಾಗಿದ್ದೇನೆ. ನನ್ನ ಬೇಡಿಕೆಯನ್ನು ಮನ್ನಿಸಿ ಷಾ ಅವರ ಅತ್ಯುತ್ತಮವಾದ ಆಕೃತಿ ಚಿತ್ರವನ್ನು ಪುಕ್ಕಟೆಯಾಗಿ ಒದಗಿಸಿದ ಮದರಾಸಿನ ಬ್ರಿಟಿಷ್

---

18. ಷಾ ಹೊಗೆಬತ್ತಿ ಸೇದುತ್ತಿರಲಿಲ್ಲ, ಮದ್ಯಪಾನ ಮಾಡುತ್ತಿರಲಿಲ್ಲ, ಮಾಂಸ ತಿನ್ನುತ್ತಿರಲಿಲ್ಲ. ತಮಾಷೆಗಾಗಿ ಒಮ್ಮೆ ಅವರು 'ನನ್ನ ಅಂತ್ಯಯಾತ್ರೆಯ ಸಮಯದಲ್ಲಿ ಲಕ್ಷಾಂತರ ಜೀವಿಗಳು ಹಸು, ಗೂಳಿ, ಹಂದಿ, ಮೇಕೆ, ಕುರಿ, ಕೋಳಿ, ಮೀನು, ಬಾತು ಬಿಳಿಯ ಸಮವಸ್ತ್ರ ಧರಿಸಿ ಹಿಂದೆ ಮೆರವಣಿಗೆ ಬರುತ್ತವೆ : ಇವನು ನಮ್ಮ ಜೀವ ತೆಗೆದು ನಮ್ಮನ್ನು ತಿಂದು ಬೆಳೆದವನಲ್ಲ ಎಂದು ಕೃತಜ್ಞವಾಗಿ !—ಎಂದು ಹೇಳಿದ್ದುಂಟು.

ಕೌನ್ಸಿಲ್ ಅವರ ಉಪಕಾರ ತುಂಬಾ ಸ್ಮರಣೀಯ. ಅವರು ಕಳಿಸಿದ ಇನ್ನು ಒಂದನ್ನು ಬಳಸಿಕೊಳ್ಳುವ ಅನುಕೂಲ ದೊರೆಯದುದಕ್ಕಾಗಿ ವಿಷಾದಿಸುತ್ತೇನೆ.

ಗೆಳೆಯರಾದ ಪ್ರೊ. ಎಚ್. ಎಂ. ಶಂಕರನಾರಾಯಣರಾಯರು ಇದಕ್ಕೆ ತೆರಬೇಕಾದ ಭಾಷಾಂತರ ಶುಲ್ಕವನ್ನು ತೆತ್ತು ಇದನ್ನು ಪ್ರಕಟಿಸಲು ಒಪ್ಪಿದುದಕ್ಕಾಗಿ ಅವರಿಗೂ ವಂದನೆಗಳು. ಇದರ ಹಸ್ತಪ್ರತಿಯನ್ನು ತಯಾರಿಸುವಲ್ಲಿ ನನ್ನ ಮಕ್ಕಳು ಕೃಷ್ಣಮೂರ್ತಿ, ಮುರಳೀಧರರೂ ಅಮೇಲೆ ನನ್ನ ಕಿರಿಯ ಮಿತ್ರರಾದ ಎಂ. ವಿ. ಪ್ರೇಮಕುಮಾರರೂ ಕೊಟ್ಟ ನೆರವಿಗೆ ತುಂಬಾ ಉಪಕೃತ.

ದೃಶ್ಯಗಳ ಆರಂಭದಲ್ಲಿಯೂ ನಡುನಡುವೆಯ ಪ್ರವೇಶಗಳಲ್ಲಿಯೂ ಸ್ಥಾನ ವ್ಯವಸ್ಥೆ, ಸಜ್ಜು ಪರಿಕರಗಳ ವರ್ಣನೆಯಲ್ಲಿಯೂ ಅಲ್ಲಲ್ಲಿ ಭಾಗಗಳನ್ನು ಹ್ರಸ್ವ ಮಾಡಿರುವುದನ್ನು ಓದುಗರು ಮನ್ನಿಸಬೇಕು.

ವೆಸ್ಲಿ ಪ್ರೆಸ್ಸಿನ ಅಧಿಕಾರಿಗಳು ಎಂದಿನಂತೆ ಇದನ್ನು ಚೆನ್ನಾಗಿ ಅಚ್ಚುಮಾಡಿಕೊಟ್ಟಿರುವುದಕ್ಕಾಗಿ ಅವರಿಗೆ ವಂದನೆಗಳು.

ಬೆಂಗಳೂರು
ಅಕ್ಟೋಬರ್ ೧೯೬೮

**ವಿ. ಸೀತಾರಾಮಯ್ಯ**

# ಅನುಬಂಧ-೨

## ಅ. 'ಶ್ರೀ ಶೈಲಶಿಖರ' ನಾಟಕಕ್ಕೆ

### ಎರಡು ತಾಯುಮಾನವರ್ ಪದ್ಯಗಳು

ಅರುಮ್ಬೊನೇ ಮಣಿಯೇ ಎನ್ ಅನ್ಬೇ ಎನ್ ಅನ್ಬಾನ
ಅಱಿವೇ ಎನ್ ಅಱಿವಿಲ್ ಊಱುಮ್
ಆನನ್ದವೆಳ್ಳಮೇ ಎನ್ರೆನ್ರು ಪಾಡಿನೇನ್
ಆಡಿನೇನ್ ನಾಡಿ ನಾಡಿ.

ವಿರುಮ್ಬಿಯೇ ಕೂವಿನೇನ್ ಉಲಱಿನೇನ್ ಅಲಱಿನೇನ್
ಮೆಯ್ ಶಿಲಿರ್ತು ಇರುಗೈ ಕೂಪ್ಪಿ
ವಿಣ್ಮಾರಿ ಎನ ಎನ್ ಇರು ಕಣ್ಮಾರಿ ಪೆಯ್ಯವೇ
ವೇಶಱ್ರಯರ್ನ್ದೇ ನಿಯಾನ್

ಇರುಮ್ಬು ನೇರ್ ನೆಞ್ಜಗಕ್ಕಳ್ವನಾನಾಲುಮ್ ಉನ್ನೈ
ಇಡೈವಿಟ್ಟು ನಿನ್ರದುಣ್ಡೋ
ಎನ್ರು ನೀ ಅನ್ರು ನಾನ್ ಉನ್ನಡಿಮೈ ಅಲ್ಲವೋ
ಯಾದೇನುಮ್ ಅಱಿಯಾ ವೆಱುಮ್

ತುರುಮ್ಬನೇನ್ ಎನ್ನಿನುಮ್ ಕೈವಿಡುದಲ್ ನೀದಿಯೋ
ತೊಣ್ಡರೊಡು ಕೂಟ್ಟು ಕಣ್ಡಾಯ್
ಶುದ್ಧ ನಿರ್ಗುಣಮಾನ ಪರದೆಯ್ವಮೇ ಪರ
ಞಾಶ್ಜೋದಿಯೇ ಶುಗವಾರಿಯೇ [1]

(ಅರಿದಾದ ಹೊನ್ನೇ, ಮಣಿಯೇ, ನನ್ನ ಒಲವೇ, ನನ್ನ ಒಲವಾದ
ಅರಿವೇ, ನನ್ನ ಅರಿವಿನಲ್ಲಿ ಉಕ್ಕುವ
ಆನಂದ ಪ್ರವಾಹವೇ, ಎಂದೆಂದು ಹಾಡಿದೆ ;
ಕುಣಿದಾಡಿದೆ, ಹುಡುಕಿ ಹುಡುಕಿ.

ಬಯಸಿ ಬಯಸಿ ಕೂಗಿದೆ ; ತೊದಲಿದೆ ; ಕಿರಿಚಿದೆ ;
ಮೈ ಪುಳಕಗೊಂಡು ಎರಡು ಕೈಗಳನ್ನು ಮುಗಿದು
ಬಾನ ಮಳೆಯೆಂಬಂತೆ ಎರಡು ಕಣ್ಣ ಮಳೆ ಸುರಿಯುತ್ತಿರಲು
ಮನನೊಂದು ಮೈಮರೆತೆ, ನಾನು.

ಕಬ್ಬಿಣದಂಥ ಮನವುಳ್ಳ ಕಳ್ಳನಾದರೂ ನಿನ್ನ
ಎಡೆಬಿಟ್ಟು ನಿಂದದ್ದುಂಟೋ ?
ಎಂದು ನೀನು, ಅಂದು ನಾನು ನಿನ್ನ ಆಳಲ್ಲವೊ ?
ಏನೊಂದನ್ನೂ ಅರಿಯದೆಯೆ ಬರಿಯ

ತೃಣ ನಾನು ಎಂದರೂ ನನ್ನ ಕೈ ಬಿಡುವುದು ನೀತಿಯೋ ?
ಭಕ್ತರೊಡನೆ ಕೂಡಿಸು, ಕಂಡೆಯಾ !
ಶುದ್ಧ ನಿರ್ಗುಣವಾದ ಪರದೈವವೇ ! ಪರಂ
ಜ್ಯೋತಿಯೇ ! ಸುಖಸಾಗರವೇ) (1)

ಕಲ್ಲೇನು ಮೈಯು, ಒರು ಕಾಲತ್ತಿಲುರುಗುಮೆನ್
ಕನ್ನೆಞ್ಜಮ್ ಉರುಗವಿಲ್ಲೈಯೇ
ಕರುಣೈಕ್ಕಿಣಙ್ಗಾದ ವನ್ಮೈಯ್ಯೈಯುಮ್ ನಾನ್ಮಗನ್
ಕಟ್ಪಿಕ್ಕ ಒರು ಕಡವುಳೋ

ವಲ್ಲಾನ್ ವಗುತ್ತದೇ ವಾಯ್ಕ್ಕಾಲೆನುಮ್ ಪೆರು
ವಟಿಕ್ಕು ಕ್ಕಿಟುಕ್ಕುಮ್ ಉಣ್ಡೋ
ವಾನಮಾಯ್ ನಿನ್ರಿನ್ಬ ಮಟ್ಟೈಯಾಯ್ ಇರಙ್ಗಿ ಎನ್ನೈ
ವಾಟ್ಟಿಪ್ಪದುನ್ ಪರಙ್ಗಣ್

ಪೊಲ್ಲಾದ ಶೇಯ್ ಎನಿಙ್ರಾಯ್ ತಳ್ಳಲ್ ನೀದವೋ
ಪುಗಲಿಡಮ್ ಪಿಱಿದುಮ್ ಉಣ್ಡೋ
ಪೊಯ್ ಪಾರ್ತೈ ಶೊಲ್ಲಿಲೋ ತಿರುವರುಟ್ಕಯಲು ಮಾಯ್
ಪ್ಪನ್ಮೈಯೇನ್ ಆವನ್ ಅನ್ದೋ

ಶೊಲ್ಲಾನ್ಮಟಿಕ್ಕಿಲೋ ಶುಗಮಿಲ್ಲೈ ಮೌನಿಯಾಯ್
ಚ್ಚುಮ್ಮಾ ವಿರುಕ್ಕ ವರುಳಾಯ್
ಶುದ್ದ ನಿರ್ಗುಣಮಾನ ಪರದೆಯ್ವಮೇ ಪರ
ಞ್ಜೋದಿಯೇ ಶುಗವಾರಿಯೇ [2]

(ಕಲ್ಲಾದರೂ, ಅಯ್ಯ, ಒಂದು ಕಾಲದಲ್ಲಿ ಕರಗುವುದು. ನನ್ನ
ಕಲ್ಮನಸು ಕರಗಲಿಲ್ಲವಲ್ಲ !
ಕರುಣೆಗೆ ಬಾಗದ ಕಠಿನತೆಯನ್ನೂ ನಾಲ್ಮೊಗನು
ಕಲ್ಪಿಸಲು ಅವನೊಬ್ಬ ದೇವರೋ ?

ಬಲ್ಲವನು ಮಾಡಿದುದೆ ದಾರಿಯೆಂಬಾ ಹಿರಿಯ
ಬಳಕೆಮಾತಿಗೆ ಕೊರತೆಯೂ ಉಂಟೋ ?
ಮೇಘವಾಗಿ ನಿಂತು ಸುಖದ ಮಳೆಯಾಗಿ ಮೇಲಿಳಿದು ನನ್ನನ್ನು
ಬಾಳಿಸುವುದು ನಿನ್ನ ಭಾರ ಕಾಣಯ್ಯ !

ಹೊಲ್ಲದ ಮಗುವೆನಲು ತಾಯಿ ತಳ್ಳುವುದು ನೀತಿಯೋ ?
ಹೋಗಲು ಎಡೆ ಬೇರೊಂದು ಉಂಟೋ ?
ಹುಸಿ ನುಡಿಯನ್ನು ಆಡಿದರೋ ನಿನ್ನ ಕೃಪೆಗೂ ಹೊರಗಾಗಿ
ಅಲ್ಪನೂ ಆಗುವೆನು, ಅಯ್ಯೋ !

ಮಾತಿನಲಿ ಮೊಳಗಿದರೋ ಸುಖವಿಲ್ಲ. ಮೌನಿಯಾಗಿ
ಸುಮ್ಮನಿರುವಂತೆ ಕರುಣಿಸಯ್ಯ :
ಶುದ್ಧ ನಿರ್ಗುಣವಾದ ಪರದೈವವೇ ! ಪರಂ
ಜ್ಯೋತಿಯೇ ! ಸುಖಸಾಗರವೇ !) (2)

—ಎಲ್. ಗುಂಡಪ್ಪ.

## ಆ. 'ಚ್ಯವನ' ನಾಟಕಕ್ಕೆ

**ಇಂದ್ರನನ್ನು ಆಹ್ವಾನಿಸುವಾಗ :**

ಇಂದ್ರ ಮರುತ್ವ ಇಹ ಪಾಹಿಸೋಮಂ ಯಥೋಶಾರ್ಯಾತೇ
ಅಪಿಬಃ ಸುತಸ್ಯ
ತವ ಪ್ರಣೀತೀ ತವಶೂರ ಶರ್ಮನ್ನಾ ವಿವಾಸಂತಿ ಕವಯಂ ಸುಯಜ್ಞಾಃ
(ಋಗ್ವೇದ–ಮಂಡಲ ೩ ; ಸೂಕ್ತ ೫೧ ; ಮಂತ್ರ ೭)

**ಸೋಮಪಾನ ಮಾಡೆನ್ನುವಾಗ :**

ಸಜೋಷಾ ಇಂದ್ರ ಸಗಣೋಮರುದ್ಭಿಃ ಸೋಮಂ
ಪಿಬ ವೃತ್ರಹಾ ಶೂರ ವಿದ್ವಾನ್
ಜಹಿ ಶತ್ರೂಂರಪಮೃಧೋನುದಸ್ವಾಥಾ ಭಯಂ
ಕೃಣುಹಿ ವಿಶ್ವತೋ ನಃ
ಹೋಮ ಮಾಡುವಾಗ—"ವಿಶ್ವತೋನೊ" ವೌಷಟ್
(ಋಗ್ವೇದ–ಮಂಡಲ ೨ ; ಸೂಕ್ತ ೪೨ ; ಮಂತ್ರ ೨)

**ಅಶ್ವಿನಿ ದೇವತೆಗಳನ್ನು ಆಹ್ವಾನಿಸುವಾಗ :**

ಪ್ರಾತ್ರಯುರ್ಜಾ ವಿ ಬೋಧಯಾಶ್ವಿನಾವೇಹ ಗಚ್ಛತಾಮ್
ಅಸ್ಯ ಸೋಮಸ್ಯ ಪೀತಯೇ ॥೧॥
ಯಾಸುರಥಾ ರಥೀತಮೋ ಭಾ ದೇವಾ ದಿವಿಸ್ಪೃಶಾ ।
ಅಶ್ವಿನಾ ತಾ ಹವಾಮಹೇ ॥೨॥
ಯಾವಾಂ ಕಾಶಾ ಮಧುಮತ್ಯಶ್ವಿನಾ ಸೂನೃತಾವತೀ ।
ತಯಾ ಯಜ್ಞಂ ಮಿಮಿಕ್ಷಿತಮ್ ॥೩॥
ನಹಿ ವಾಂಮಸ್ತಿ ದೂರಕೇ ಯತ್ರಾರಥೇನ ಗಚ್ಛಥಃ
ಅಶ್ವಿನಾ ಸೋಮಿನೋ ಗೃಹಮ್ ।
(ಋಗ್ವೇದ–ಮಂಡಲ ೧ ; ಸೂಕ್ತ ೨೨ ; ಮಂತ್ರ ೧)

**ಸೋಮಪಾನ ಮಾಡಿರೆಂದು ಹೇಳುವಾಗ :**

ವಾವೃಧಾನಾ ಶುಭಸ್ಪತೀ ದಸ್ರಾ ಹಿರಣ್ಯ ವರ್ತನೀ
ಪಿಬತಂ ಸೋಮ್ಯಂ ಮಧು ।
—ವಷಟ್ ಮಾಡುವಾಗ ಸೋಮ್ಯಂ ಮಧು"
(ಋಗ್ವೇದ–ಮಂಡಲ ೮ ; ಸೂಕ್ತ ೫ ; ಮಂತ್ರ ೧೧)

ಅಥವಾ

ಆ ನೂನಂ ಯಾತಮಶ್ವಿನಾ ರಥೇನ ಸೂರ್ಯತ್ವಚಾ
ಭುಜೀ ಹಿರಣ್ಯಪೇಶಸಾ ಕವೀ ಗಂಭೀರ ಚೇತಸಾ
ಆ ನೋ ಯಾತಮು ಪಸ್ರುತ್ಯಶ್ವಿನಾ ಸೋಮಪೀತಯೇ
ಸ್ವಾಹಾ ಸ್ತೋಮಸ್ಯ ವರ್ಧನಾ ಪ್ರಕವೀ ಧೀತಿ ಭಿರ್ನರಾ
(ಮಂಡಲ ೮ ; ಸೂಕ್ತ ೮ ; ಮಂತ್ರ ೧ ಮತ್ತು ೫)

## 'ಸಂಪದ'ದ ಪ್ರಕಟಣೆಗಳು

1. "ಸ್ನೇಹ-ವಿಶ್ವಾಸ" (1990)-ವಿ.ಸೀ. ಸಮಗ್ರ ಕಾವ್ಯ ಸಂಪುಟ (ಅರವತ್ತು ಅಪ್ರಕಟಿತ ಕವನಗಳೂ ಸೇರಿವೆ). ಡೆಮಿ 704 ಪುಟ. ಪ್ರೊ. ಎಲ್. ಎಸ್. ಶೇಷಗಿರಿ ರಾವ್ ಅವರ ವಿಶೇಷ ಪ್ರಸ್ತಾವನೆಯೊಡನೆ. ಬೆಲೆ : ಸಾಧಾರಣ ಪ್ರತಿ : ರೂ. 85/- ಅರೆಕ್ಯಾಲಿಕೊ (ಮ್ಯಾಪ್‌ಲಿಥೊ ಕಾಗದ) ಪ್ರತಿ : ರೂ. 120/-

2. "ವಿ.ಸೀ. ವ್ಯಕ್ತಿತ್ವ, ಕಾವ್ಯ ವೈಶಿಷ್ಟ್ಯ" (1991) - ಶ್ರೀ ಪಿ. ವಿ. ಜೋಶಿ, ಪ್ರೊ. ಎಲ್. ಎಸ್. ಶೇಷಗಿರಿ ರಾವ್, ಡಾ. ಜಿ. ಎಸ್. ಶಿವರುದ್ರಪ್ಪ ಮತ್ತು ಡಾ. ಶಿವರಾಮ ಕಾರಂತ ಇವರ ಲೇಖನಗಳ ಸಂಕಲನ. ಕ್ರೌನ್ 48 ಪುಟ ಬೆಲೆ : ರೂ. 5/-

3. "ಪ್ರತಿಭೆಯೆಂದರೇನು ?" (1991)-ವಿದ್ಯಾಲಂಕಾರ, ಶಾಸ್ತ್ರ ಚೂಡಾಮಣಿ, ಸಂಗೀತ ಕಲಾರತ್ನ ಪ್ರೊ. ಎಸ್. ಕೆ. ರಾಮಚಂದ್ರರಾವ್ (ವಿ. ಸೀ. ಸಂಸ್ಮರಣೋಪನ್ಯಾಸಮಾಲೆಯ ಪ್ರಥಮೋಪನ್ಯಾಸ ಪ್ರಬಂಧ) ಕ್ರೌನ್ : 48 ಪುಟ ; ಬೆಲೆ : ರೂ. 6/-

4. "ಗಮಕ ಸಮಾಸ" (1991)-ವಿದ್ವಾನ್ ಸೇಡಿಯಾಪು ಕೃಷ್ಣಭಟ್ಟ (ವಿ. ಸೀ. ಸಂಸ್ಮರಣೋಪನ್ಯಾಸ ಮಾಲೆಯ ತೃತೀಯೋಪನ್ಯಾಸ ಪ್ರಬಂಧ). ಕ್ರೌನ್ 55 ಪುಟ ; ಬೆಲೆ : ರೂ. 6/-

5. "ಸಮಗ್ರ ಲಲಿತ ಪ್ರಬಂಧ ಸಂಪುಟ" (1992)-ವಿ. ಸೀ. ಸಮಗ್ರ ಲಲಿತ ಪ್ರಬಂಧಗಳು, ಡೆಮಿ 375 ಪುಟ ; ಪ್ರೊ. ಕೀರ್ತಿನಾಥ ಕುರ್ತಕೋಟಿ ಅವರ ವಿಶೇಷ ಪ್ರಸ್ತಾವನೆಯೊಡನೆ. ಬೆಲೆ : ಸಾಧಾರಣ ಪ್ರತಿ : ರೂ. 60/- ಅರೆಕ್ಯಾಲಿಕೊ ಪ್ರತಿ : ರೂ. 80/-



ಆಧುನಿಕ ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದ ಕನ್ನಡ ಲೇಖಕರಲ್ಲಿ **ವಿ. ಸೀ.** ಒಬ್ಬರು. ಸುಮಾರು ಅರವತ್ತು ವರ್ಷಗಳ ತಮ್ಮ ಸಾಹಿತ್ಯಕ ಜೀವನದಲ್ಲಿ ಅವರು ಏವತ್ತಕ್ಕೂ ಹೆಚ್ಚಿನ ಕೃತಿ ರಚನೆ ಮಾಡಿದರು. ವಿಶಾಲ ವಿದ್ವತ್ತು, ತೀಕ್ಷ್ಣ ಚಿಂತನ, ಬಹುಶ್ರುತತತ್ವಗಳಿಗೆ ಹೆಸರಾದ ಅವರ ಸೃಜನಶೀಲತೆ, ಸಾರಸ್ವತ ವೈವಿಧ್ಯ ಎರಡೂ ಬೆರಗುಗೊಳಿಸುವಂಥದು.

ಪ್ರಥಮತಃ ವಿ.ಸೀ. ಕವಿ. ಅವರ ಸಮಗ್ರ ಕಾವ್ಯ **'ಸ್ನೇಹ - ವಿಶ್ವಾಸ'** ಶೀರ್ಷಿಕೆಯಲ್ಲಿ ಪ್ರಕಟವಾಗಿದೆ (1991). ಆದರೆ ವಿ.ಸೀ. ಕವಿಯಷ್ಟೇ ಅಲ್ಲ, ಆಧುನಿಕ ಗದ್ಯಶಿಲ್ಪಿಗಳಲ್ಲಿಯೂ ಒಬ್ಬರು. ಅವರ ಗದ್ಯ ಬರಹ ಪ್ರವಾಸ ಕಥನ, ಲಲಿತ ಪ್ರಬಂಧ, ವ್ಯಕ್ತಿಚಿತ್ರ ಮತ್ತು ವಿಮರ್ಶೆಯ ಪ್ರಕಾರಗಳಲ್ಲಿದ್ದು, ವಿ.ಸೀ. ಸಮಗ್ರ ಗದ್ಯದ ಮೊದಲ ಭಾಗವಾಗಿ **'ಲಲಿತ ಪ್ರಬಂಧ ಸಂಪುಟ'** ಪ್ರಕಟಗೊಂಡಿದೆ (1992).

ವಿ.ಸೀ. ನಾಟಕಕಾರರೂ ಹೌದು. ಅವರು ರಚಿಸಿದ ಐದು ಸ್ವತಂತ್ರ ಮತ್ತು ಎರಡು ಅನುವಾದಿತ ನಾಟಕ ರಂಗ ಹಾಗೂ ರೇಡಿಯೊ ಸಾಧ್ಯತೆಗಳಿಗೆ ಸವಾಲು ಹಾಕಿದಂಥವು. ಮಹಾಭಾರತದ ಕೃಷ್ಣನ ಆಗ್ರಹಕ್ಕೆ ತುತ್ತಾಗಿ ಘೋರ ಶಾಪವನ್ನು ಅನುಭವಿಸಿದ ಅಶ್ವತ್ಥಾಮನ ರೌರವವನ್ನು **ಆಗ್ರಹ** ಚಿತ್ರಿಸಿದರೆ, ಒದಗಿದ ಭೀಕರ ದುರಂತಕ್ಕೆ ಪುನರ್ಮಿಲನದ ಚಿನ್ನದ ಚೌಕಟ್ಟನ್ನು ಹಾಕುತ್ತದೆ **ಸೊಹ್ರಾಬ್-ರುಸ್ತುಂ**. ದಂತಕತೆಗೆ ಫ್ಲ್ಯಾಷ್‌ಬ್ಯಾಕ್ ತಂತ್ರವನ್ನು ಅಳವಡಿಸಿ ಪ್ರೀಸ್ಟ್ಲಿ ನಾಟಕ ರೂಪಣ ಕ್ರಿಯೆಯ ಸಮ್ಮಿಳಿತಸೌಭಾಗ್ಯವೆಂಬಂತೆ **ಶ್ರೀ ಶೈಲ ಶಿಖರ** ಹೊಮ್ಮಿದ್ದರೆ, ಪ್ರೇಮದ ಸತ್ವಪರೀಕ್ಷೆಯ ಜೊತೆಗೆ ವರ್ಗವ್ಯತ್ಯಾಸವನ್ನು ತೊಡೆದುಹಾಕಿ ಸಮಾನತೆಯನ್ನು ಸ್ಥಾಪಿಸುವ ಸಾಮಾಜಿಕ ಕ್ರಾಂತಿಗರ್ಭವುಳ್ಳದ್ದು **ಚ್ಯವನ**. **ಪಟ್ಟಬಂಧ** ದಲ್ಲಿ ಭರತನ ಭ್ರಾತೃಪ್ರೇಮ, ಸ್ವಾರ್ಥ-ತ್ಯಾಗಗಳ ಮಹೋನ್ನತ ಚಿತ್ರಣವಿದ್ದರೆ, **ಪಿಗ್‌ಮೇಲಿಯನ್** ಮತ್ತು **ಮೇಜರ್ ಬಾರ್ಬರ** ವಿಖ್ಯಾತ ಇಂಗ್ಲಿಷ್ ನಾಟಕಕಾರ ಬರ್ನಾರ್ಡ್ ಷಾರ ಅವೇ ಹೆಸರಿನ ಪ್ರಖ್ಯಾತ ನಾಟಕಗಳ ಸುಲಲಿತ ರೂಪಾಂತರವಾಗಿವೆ.

ಹೀಗೆ ವಿ.ಸೀ. ನಾಟಕಸಪ್ತಶೃಂಗದ ಒಂದೊಂದೂ ನಾಟಕ ಗಾಢವಾದ ಅನುಭವವನ್ನು ಒದಗಿಸಿಕೊಟ್ಟು ರಂಜನೆಯೊಂದಿಗೆ ವಿಚಾರಕ್ಕೆ ಹಚ್ಚುವಂಥ ಅರ್ಥಪೂರ್ಣ ಮತ್ತು ಸಾರ್ಥಕ ಸಾಹಿತ್ಯ ಕೃತಿಯಾಗಿದೆ.

ವಿ.ಸೀ. **ಸಮಗ್ರ ನಾಟಕ** ಏಳೂ ನಾಟಕಗಳನ್ನು ಸಂಕಲಿಸಿದ ಸಂಗ್ರಾಹ್ಯ ಸಂಪುಟ.

**ವಿ. ಸೀ. ಸಂಪದ** (ಡಾ॥ ವಿ. ಸೀತಾರಾಮಯ್ಯ ಸಂಸ್ಮರಣ ವೇದಿಕೆ)
ಅಶೋಕನಗರ, ಬೆಂಗಳೂರು - 560 050.